START

START

MICRO FILMED
BY
KARNATAKA STATE
ARCHIVES
1991

MICRO FILMED
BY
KARNATAKA STATE
ARCHIVES
1991

"ಶರಣ ಸಂದೇಶ" ಪತ್ರಿಕೆಯ
ಸಂಪುಟ 4, ಸಂಚಿಕೆ 48.
ತಾ. 5-8-1935 ನ್ನು
ಮುಂದು ವರಿಸಲಾಗಿದೆ.

"ಶರಣ ಸಂದೇಶ" ಪತ್ರಿಕೆಯ
ಸಂಪುಟ 4, ಸಂಚಿಕೆ 48.
ತಾ. 5-8-1935 ರಲ್ಲಿ
ಮುಂದುವರಿಸಲಾಗಿದೆ.

REGISTERED No. B. 2891.

ಶರಣ ಸಂದೇಶ

ತೇರದಾಳ
ಬೆಳಗಾಂವ

The
Sharana Sandesh.

ನ್ಯಾಯನಿಷ್ಠುರಿ। ದಾಕ್ಷಿಣ್ಯಪರನಾನಲ್ಲ। ಲೋಕವಿರೋಧಿ। ಶರಣನಾರಾರಿಗೂ ಅಂಜುವವನಲ್ಲ।
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೮ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೀಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೪. | ಆಲಮಟ್ಟಿ- ಸೋಮವಾರ ತಾರೀಖು ೫ ನೆಯ ಅಗಸ್ಟ ೧೯೩೫. | ಸಂಚಿಕೆ ೪೮

ಜನಸೇವೆಯೇ ದೇವರ ಸೇವೆ.

ಇಂಡಿಯಾ ಬಿಲ್ ಒಪ್ಪಿಗೆಯಾಯಿತು.

ರಾಜಕೀಯ ಪಕ್ಷಗಳು ಜಾಗೃತವಾದವು.

ಇಂಡಿಯಾ ಬಿಲ್ ತಾ. ೧-೮-೩೫ ನೆಯ ದಿನ
ಲಾರ್ಡ ಸಭೆಯಲ್ಲಿ ಕೊನೆಯ ಒಪ್ಪಿಗೆಯನ್ನು ಹೊಂದಿತು.
ಇಷ್ಟರಲ್ಲೇ ಚಕ್ರವರ್ತಿಗಳ ಅನುಮತಿ ಪಡೆದು ಹಿಂದುಸ್ಥಾನದ
ರಾಜಶಾಸನವಾಗಿ ಪರಿಣಮಿಸುವುದು.

ಈ ಹೊಸ ರಾಜಕೀಯ ಪದ್ಧತಿಯ ಕಾರ್ಯಕಲಾಪಗಳನ್ನು ನಡೆಯಿಸಲು
ರಾಷ್ಟ್ರೀಯ ಸಭೆಯು ಬೇರೆ ಪಂಗಡಗಳ ಸಂಗಡ ವಿಚಾರ ವಿನಿಮಯ
ಮಾಡಬೇಕೆಂದು ಯೋಚಿಸಿದೆ.
ಲೋಕಶಾಹಿ ಸ್ವರಾಜ್ಯ ಪಂಗಡವೆಂಬುದು
ಮಾಲವೀಜಿ ಪಂಗಡವನ್ನು ಸೇರಲು ಪ್ರಯತ್ನಿಸುತ್ತಿದೆ.
ಬ್ರಾಹ್ಮಣೇತರ ಪಕ್ಷವು
ತನ್ನಲ್ಲಿ ಸಂಘಟನೆಯನ್ನು ಹೊಂದಿ ಬಲಪಡಲು
ಪ್ರಯತ್ನಿಸಿದೆ.

ದೇಹವೇ ದೇವಾಲಯ

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur. (Karnataka)

ಪ್ಲೇಗ ಸಂಜೀವಿನಿ.

ಅತ್ಯಾಶ್ಚರ್ಯಕರವಾದ ಗುಣ! **ಕೇವಲ ೬ ತಾಸುಗಳಲ್ಲಿಯೇ ಗುಣ!**

ಇದನ್ನು ಸೇವನೆ ಮಾಡುವದರಿಂದ ಪ್ಲೇಗಿನ ಭಯವೇ ಇಲ್ಲ!

೧೦೦ ಕ್ಕೆ ೧೦೦ ರಂತೆ ಗುಣ!!

ಶ್ರೀ ಮನ್ನಿರಂಜನ ಶಾಂತವೀರ ಸ್ವಾಮಿಗಳು **ಗುರುಮಠಕಲ್** ಇವರು ಲೋಕ ಕಲ್ಯಾಣಾರ್ಥವಾಗಿ **ಪ್ಲೇಗ ಸಂಜೀವಿನಿ** ಎಂಬ ದಿವ್ಯ ಔಷಧಿಯನ್ನು ಶೋಧಮಾಡಿರುವರು. ಪ್ಲೇಗ ರೋಗವು ಎಷ್ಟು ಘಾತುಕವದೆಯೆಂಬುದನ್ನು ಹೇಳುವ ಆವಶ್ಯವಿಲ್ಲ. ಈ ಪ್ಲೇಗಿನಿಂದ ಸಾವಿರಾರು ಜನರು ಸಾಯುತ್ತಿರುತ್ತಾರೆ. ಇದನ್ನು ತಡೆಯುವದಕ್ಕಾಗಿ ಎಷ್ಟೋ ಔಷಧಗಳನ್ನು ತಯಾರ ಮಾಡಿರುವರು. ಅವುಗಳಿಂದೇನೂ ಗುಣವಾದದ್ದು ಕಂಡು ಬರುವದಿಲ್ಲ. ಈ ಪ್ಲೇಗ ಸಂಜೀವಿನಿಯಿಂದ ಆರೇ ತಾಸುಗಳಲ್ಲಿಯೇ ಗುಣವಾಗುತ್ತದೆ. ಇದರ ಒಂದು ಬಾಟ್ಲಿಯ ಕಿಮ್ಮತ್ತು ೧ ರೂ. ೫ ಆಣೆ.

ವಿಶೇಷ ಮಾಹಿತಿಯನ್ನು ಅನುಪಾನ ಪತ್ರಿಕೆಯಲ್ಲಿ ನೋಡಿರಿ

ವಿಶೇಷ ಸೂಚನೆ— ಅನುಪಾನ ಪತ್ರಿಕೆಯ ಸೂಚನೆಯ ಮೇರೆಗೆ ಔಷಧವನ್ನು ತೆಗೆದುಕೊಂಡಲ್ಲಿ ಖಾತ್ರಿಯಿಂದ ಗುಣವಾಗುವದು. ಎಲ್ಲ ಕಡೆಗೂ ಏಜಂಟರು ಬೇಕು.

ಏಜಂಟ್
ಬಶೆಟ್ಟೆಪ್ಪ ಬಸಪ್ಪ ಹಲಕುರ್ಕಿ,
ಬಾಗಲಕೋಟೆ

ವಿಳಾಸ—
ಪ್ಲೇಗ ಸಂಜೀವಿನಿ ಆಫೀಸ್
ಗುಲಬರ್ಗಾ.

ಮಹಾರೋಗ ಸಂಜೀವಿನಿ.

ಶ್ರೀಮನ್ನಿರಂಜನ ಗುರುಮಠಕಲ್ಲ ಶಾಂತವೀರ ಸ್ವಾಮಿಗಳವರು ಜನಹಿತಾರ್ಥವಾಗಿ

ಮಹಾರೋಗ ಸಂಜೀವಿನಿ,

ಎಂಬ ದಿವ್ಯ ಔಷಧಿಯನ್ನು ಹೊಸದಾಗಿ ಶೋಧ ಮಾಡಿರುವರು.

ಇತ್ತೀಚೆಗೆ ದೇಶದಲ್ಲಿ ಮಹಾರೋಗವು (ದೊಡ್ಡ ಬೇನೆಯು) ಮಿತಿಮೀರಿ ಬೆಳೆದು ಬಹುಜನರು ಭಯಂಕರ ಕಷ್ಟಪಡುತ್ತಿರುವರು. ಈ ಕೆಟ್ಟಬೇನೆಯು (ಪ್ಲೇಗ ಮಾರಿಕಾ,) ಖಜ್ಜಿಗಳಂತೆ ಒಬ್ಬರಿಂದ ಮತ್ತೊಬ್ಬರಿಗೆ **ತಗಲತಕ್ಕ** ಕ್ರೂರ ರೋಗವಿದ್ದ ಕಾರಣ ಮಹಾರೋಗಿಗಳನ್ನು ಯಾರೂ ಮುಟ್ಟಿಸಿಕೊಳ್ಳುವದಿಲ್ಲ. ಅಲ್ಲದೆ ಅವರ ಜನ್ಮವು ಕೇವಲ ಅಪಮಾನ ದುಃಖಗಳಲ್ಲಿ ಮುಳುಗಿ ಕಡೆಗೆ ಅಕಾಲ ಮೃತ್ಯುವಿನ ತುತ್ತಾಗುವರು ಈ ಭಯಂಕರ ರೋಗಕ್ಕೆ ಈ ವರೆಗೂ ಯಾರೂ ಖಾತ್ರಿಯಾದ ಔಷಧಿಯನ್ನು ತಯಾರಿಸಿದ್ದಿಲ್ಲ. ಆದರೆ ಮಾನವ ಜಾತಿಯ ಸುದೈವದಿಂದ **ಪ್ಲೇಗ, ಮಾರಿಕಾ, ನಾರಸಂಹಾರಿ, ಕೂಸುಗಳ ಹೊಟ್ಟೆಯೊಳಗಿನ ಬೇನೆ** ಪಗೈರೆ ರೋಗಗಳ ಮೇಲೆ ಆಶ್ಚರ್ಯಕಾರಕ ಔಷಧಿಗಳನ್ನು ಕಂಡು ಹಿಡಿದ ಸದರಿ ಪೂಜ್ಯಪಾದರೇ ಮಹಾರೋಗ ಸಂಜೀವಿನಿಯೆಂಬ ಶೀಘ್ರ ಗುಣಕಾರಿಯಾದ **ಔಷಧಿಯನ್ನು** ಶೋಧಮಾಡಿ ಪ್ರಸಿದ್ಧಿಸಿರುತ್ತಾರೆ. ಆದ್ದರಿಂದ ಇಚ್ಛೆಯುಳ್ಳವರು ಮುದ್ದಾಂ ಬಂದು ತಮ್ಮ ರೋಗ ಲಕ್ಷಣಗಳನ್ನೆಲ್ಲ ತೋರಿಸಿದರೆ ಅದಕ್ಕೆ ತಕ್ಕ ಔಷಧದ ಕಿಮ್ಮತ್ತನ್ನು ತಿಳಿಸುತ್ತೇವೆ ಮೊದಲು ಔಷಧದ ಅರ್ಧ ಕಿಮ್ಮತ್ತು ಕೊಟ್ಟು ಔಷಧ ತಕ್ಕೊಳ್ಳಲು ಪ್ರಾರಂಭಿಸಿದ ೧೫ ದಿವಸಕ್ಕೆ ಪುನಃ ಅರ್ಧ ಕಿಮ್ಮತ್ತನ್ನು ಕೊಡಬೇಕಾಗುವದು.

ಅಗ್ಗೆ ನಾವು ಹೇಳುವ ರೀತಿಯಲ್ಲಿ ಔಷಧೋಪಚಾರ ಹೊಂದಬೇಕಾಗುವದು. ಮಹಾರೋಗಿಗಳು ಇಲ್ಲಿಗೆ ಬರಬೇಕಾದರೆ ಆದಿತ್ಯವಾರ ಮತ್ತು ಬುಧವಾರಗಳಲ್ಲಿಯೇ ಬಂದು ಭೆಟ್ಟಿಯಾಗಬೇಕೇ ಹೊರ್ತು **ಬೇರೆ ದಿವಸಗಳಲ್ಲಿ ಬರಬಾರದು.**

ಇಲ್ಲಿಗೆ ಬಂದವರು ತಮ್ಮ ಊಟೋಪಚಾರಗಳ ವ್ಯವಸ್ಥೆಯನ್ನು ತಾವೇ **ಮಾಡಿಕೊಳ್ಳತಕ್ಕದ್ದು.** ವಿಶೇಷ ಸಂಗತಿಗಳ ಬಗ್ಗೆ ಕೆಳಗಿನ ವಿಳಾಸಿಗೆ ಬರೆದು ಕೇಳಿಕೊಳ್ಳಬಹುದು.

ಮ್ಯಾನೇಜರ ಆರೋಗ್ಯ ಮಂದಿರ, ಕಿಂಟಪೂತ ಕಸಬಾ ಕ್ಯಾಂಪ **ಸೊಲ್ಲಾಪುರ ಸಿಟಿ.**

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೪. | ಆಲಮಟ್ಟಿ ಅಗಸ್ಟ ತಾರೀಖು ೫ ನೆಯ ಸೋಮವಾರ | ಸಂಚಿಕೆ ೪೮.

ಮುಂಬಯಿ ಹತ್ತರ ಮೊಸಳೆಗಳು!

ಮುಂಬಯಿಯ ಉತ್ತರ ಭಾಗದಲ್ಲಿ ಮಾಹಿಮ ಆಖಾತದ ದಂಡೆಯ ಮೇಲೆ ಕರೀ ಉಸುಬಿನ ಮೇಲೆ ಎರಡು ಮೊಸಳೆಗಳು ಬಿದ್ದಿರುವವದನ್ನು ಇಬ್ಬರು ಹುಡುಗರು ನೋಡಿದರು. ಕೂಡಲೆ ಜನರು ತಂಡೋಪತಂಡವಾಗಿ ಅದನ್ನು ನೋಡಲು ಕೂಡಿದರು. ಒಬ್ಬನೂ ಅವುಗಳ ಸಮೀಪಕ್ಕೆ ಹೋಗುವ ಧೈರ್ಯವುಳ್ಳವನಾಗ ಲಿಲ್ಲ. ಒಬ್ಬನು ಧೈರ್ಯದಿಂದ ಕಲ್ಲು ಒಗೆದನು. ಮೊಸಳೆಗಳು ಮಿಸುಕಾಡಲಿಲ್ಲ. ಅಷ್ಟರಲ್ಲಿ ಒಬ್ಬನು ಒಂದು ಪ್ರಶ್ನೆಯನ್ನು ತೆಗೆದನು-"ಇಷ್ಟು ಜನರು ಗದ್ದಲ ಮಾಡಿದರೂ ಮತ್ತು ಕಲ್ಲನ್ನು ಒಗೆದರೂ" ಅವು ಮಿಸುಕಾಡದಿರಲಿಕ್ಕೆ ಕಾರಣವೇನು?

ಅದಕ್ಕೆ ಒಬ್ಬ ವೃದ್ಧ ಅನುಭವಿಕ ಜಾಲಗಾರನು ಅಂದನು- 'ಈ ಮೊಸಳೆಗಳು ಸೀ ನೀರಿನಲ್ಲಿದ್ದಂಥವು. ಈ ಉಪ್ಪು ನೀರಿನಲ್ಲಿ ಬಂದಿರುವುದರಿಂದ ಅವು ಸತ್ತು ಹೋಗಿವೆ. ಎಂದು ತಿಳಿಸಿ ಹೇಳಿದನು. ಆಗ ಅದು ಎಲ್ಲರಿಗೂ ಒಪ್ಪಿಗೆಯಾಗಿ ಒಬ್ಬಿಬ್ಬರು ಅವುಗಳ ಹತ್ತರ ಹೋದರು. ಒಬ್ಬನು ಅವುಗಳ ಮೈಮೇಲೆ ಕೈಯಾಡಿಸುತ್ತ ಪ್ರಾಣಿ ಶಾಸ್ತ್ರಜ್ಞನಂತೆ ಅವುಗಳ ಹುರಬರಕ ಮೈಯನ್ನು ಹೊಗಳಹತ್ತಿದನು. ಇನ್ನೊಬ್ಬ ಮಾಂಸ ಭಕ್ಷಕನು—'ಇವುಗಳ ಮಾಂಸವು ರುಚಿಯಾಗಿರುತ್ತದೇನು' ಎಂದು ಕೇಳಲಿಕ್ಕೂ ಹಿಂದು ಮುಂದು ನೋಡಲಿಲ್ಲ. ಅಷ್ಟರಲ್ಲಿ ಒಬ್ಬನು ಅವುಗಳಲ್ಲೊಂದನ್ನು ಹಾಗೆಯೇ ಎತ್ತಲು ಅದು ತೀರ ಹಗುರು ಇರುವುದು ಕಂಡು ಬಂತು. ಮೊಸಳೆಗಳು ಮಾಂಸದವಾಗಿರದೆ ಕಟ್ಟಿಗೆಯವಾಗಿದ್ದವು. ಆಗ ಕೂಡಿದ ಸಮೂಹದಿಂದ ಹೊರಟ ಹಾಸ್ಯವನ್ನು ವರ್ಣಿಸಲಳವಲ್ಲ.

ಒಂದು ಸಿನೇಮಾ ಕಂಪನಿಯವರು ಆಖಾತದ ದಂಡೆಯ ಮೇಲೆ ಫಿಲ್ಮ ತೆಗೆದುಕೊಂಡು ಕೃತಕ ಮೊಸಳೆಗಳನ್ನು ಮರೆತು ಹೋಗಿದ್ದರೆಂದು ತಿಳಿದು ಬಂದಿತು.

ಶರಣ ಸಂದೇಶ

ಪತ್ರಿಕೆಯು ಪದ್ಧತಿಯು ಪ್ರಕಾರ ಮುಂದಣ ವಾರ ಪ್ರಕಟವಾಗದೆ ತಾ. ೧೯-೮-೩೫ ನೆಯ ದಿವಸ ಪ್ರಕಟವಾಗುವದು.

ಮ್ಯಾನೇಜರ.

ನಿಜ ಸಂಗತಿ.

[ಸಂಯುಕ್ತ ಕರ್ನಾಟಕದ ಸಂಪಾದಕರಿಗೆ ಕೆಳಗೆ ಕಾಣಿಸಿದಂತೆ ತಾವು ಪತ್ರ ಬರೆದಿರುವದಾಗಿ ಶ್ರೀಮಾನ್ ಬಳ್ಳಾರಿ ವೀರಭದ್ರಪ್ಪನವರು ನಮಗೆ ತಿಳಿಸಿದ್ದಾರೆ. —ಸಂಪಾದಕ.]

ಶ್ರೀ 'ಸಂಯುಕ್ತ ಕರ್ನಾಟಕ'ದ ಸಂಪಾದಕರಿಗೆ—

ತಮ್ಮ ೩-೮-೩೫ ನೇ ತಾರೀಖಿನ ಸಂಚಿಕೆಯೊಳಗಿನ ಧಾರವಾಡದ ಪತ್ರದಲ್ಲಿ 'ಕರ್ನಾಟಕ ಚೇಂಬರಿನ ಕಾರ್ಯದರ್ಶಿಗಳಿಗೆ ನೋಟೀಸು' ಎಂಬ ಉದ್ರೇಕಕರವಾದ ತಲೆಕಟ್ಟಿನ ಕೆಳಗೆ ಪ್ರಕಟವಾದ ಸುದ್ದಿಯಲ್ಲಿ ಅನೇಕ ನಿಜವಿರದ ಸಂಗತಿಗಳು ಪ್ರಸಿದ್ಧವಾಗಿವೆ. ಕಾರಣ ಈ ನಿಜ ಸಂಗತಿಯನ್ನು ತಾವು ಸಂಪೂರ್ಣವಾಗಿ ಪ್ರಸಿದ್ಧಿಸುವದು ತಮ್ಮ ಕರ್ತವ್ಯ.

ತಮ್ಮ ಪತ್ರಿಕೆಯಲ್ಲಿ ಪ್ರಕಟವಾದಂತೆ 'ಕರ್ನಾಟಕ ಬಂಧು' ಕಾರರ ಪರವಾಗಿ ಶ್ರೀ ಶಿರೂರ ವಕೀಲರಿಂದಾಗಲಿ ಅಥವಾ ಮತ್ತಾವ ವಕೀಲರಿಂದಾಗಲಿ ನನಗೆ ಯಾವ ನೋಟೀಸೂ ಬಂದಿಲ್ಲ. ಮತ್ತು ಒಪ್ಪಂದದ ಬಗ್ಗೆ ಪ್ರಯತ್ನ ನಡೆದಿದೆಯೆಂದು ಬರೆದಿರುವ ಸಂಗತಿಯಲ್ಲಿಯೂ ಸತ್ಯಾಂಶವಿರುವದಿಲ್ಲ. ಇಂಥ ವಿಪರ್ಯಸ್ತ ಸುದ್ದಿಗಳನ್ನು ಹುಟ್ಟಿಸುವವರು ಅವುಗಳ ಪ್ರಕಟನೆ ಮಾತ್ರದಿಂದಲೇ ತಾತ್ಕಾಲಿಕವಾಗಿಯಾದರೂ ಸಮಾಧಾನ ಪಡುವಂತಿದ್ದರೆ ಪಡಲಿ.

'ಕರ್ನಾಟಕ ಬಂಧು' ಕಾರರಿಗೆ ನನ್ನ ಪರವಾಗಿ ವಕೀಲರು ಕೊಟ್ಟ ನೋಟೀಸು ನನ್ನ ವೈಯಕ್ತಿಕ ಹೊಣೆಗಾರಿಕೆಯಿಂದಲೇ ಕೊಡಲ್ಪಟ್ಟದ್ದು ಕರ್ನಾಟಕ ಚೇಂಬರದ ನನ್ನ ಗೌರವ ಕಾರ್ಯದರ್ಶಿತ್ವದ ಪತಿಯಿಂದಲ್ಲ. ಮತ್ತು ಈ ವಿಷಯದಲ್ಲಿ ಇನ್ನು ಮುಂದೆ ಕೈಕೊಳ್ಳಲಾಗುವ ಕಾರ್ಯಗಳೆಲ್ಲವೂ ನನ್ನ ಸ್ವಂತ ಹೊಣೆಗಾರಿಕೆಯಿಂದ ನಡೆಯುತ್ತವೆಯೇ ವಿನಹ ಕರ್ನಾಟಕ ಚೇಂಬರಕ್ಕೂ ಆ ಕಾರ್ಯಗಳಿಗೂ ಯಾವ ಸಂಬಂಧವೂ ಇರುವದಿಲ್ಲ.

ಇಂಥ ನಿರಾಧಾರ ಸುದ್ದಿಗಳನ್ನು ಪ್ರಕಟಿಸುವದರಲ್ಲಿ ಇನ್ನು ಮುಂದೆ ತುಸು ಹೆಚ್ಚು ಜಾಗರೂಕತೆ ವಹಿಸುವಿರೆಂದು ಕೋರುತ್ತೇನೆ.

ಗದಗ
ತಾ. ೩-೮-೩೫

ತಮ್ಮ ವಿಶ್ವಾಸಕ
ವೀರಭದ್ರಪ್ಪ ಬಳ್ಳಾರಿ

ಬಸವಣ್ಣನವರ ವಚನಗಳ ಅನುವಾದ.

SAYINGS OF BASAVANNA.

(ಅನುವಾದಕರು— ಶ್ರೀ. ಎಂ. ವೆಂಕಟೇಶ ಅಯ್ಯಂಗಾರ್ಯರು ಎಮ್. ಎ.)

—:ಕಳೆದ ಸಂಚಿಕೆಯಿಂದ ಬಂದುದು:—

೭೫ ಒಳಗೆ ಕುಟಿಲ, ಹೊರಗೆ ವಿನಯವಾಗಿ, ಭಕ್ತರೆನಿಸಿಕೊಂಬವರ ಒಲ್ಲ ನೊಲ್ಲನಯ್ಯ ಲಿಂಗವು. ಅವರು ಪಥಕ್ಕೆ ಸಲ್ಲರು, ಸಲ್ಲರಯ್ಯ. ಒಳಹೊರಗೊಂದಾಗದವರಿಗೆ, ಆಳಿಯಾಸೆ ದೋರಿ, ಬೀಸಾಡುವನವರ ಕೂಡಲ ಸಂಗಮದೇವ.

"Those who are evil within but goodness without and appear as devotees, our God does not want. They are no good in the path of God; none. Those whose inner and outer selves are not one, our God Kudala Sangama will seem to accept at first but will reject in the end."

೭೬ ಎನಿಸು ಕಾಲ ಕಲ್ಲು ನೀರೊಳಗಿದ್ದರೇನು? ನೆನೆದು ಮೃದುವಾಗಬಲ್ಲದೆ? ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ, ಮನದಲ್ಲಿ ದೃಢವಿಲ್ಲದನ್ನಕ್ಕ? (ನಿಧಾನವ ಕಾಯಿದಿದ್ದ ಬೆಂತರನಂತೆ, ಅದರ ವಿಧಿ ಎನಗಾಯಿತ್ತು) ಕೂಡಲ ಸಂಗಮದೇವಾ.

"How long should you keep a stone in water to make it soft? What is the use of keeping it there? If the mind is not firmly fixed in you, God Kudala Sangama, how long shall I worship you and for what good?"

೭೭ ಭಕ್ತಿಯೆಂಬುದ ಮಾಡಬಾರದು ಕರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು. ಘಟ ಸರ್ಪನಲ್ಲಿ ಕೈದುಡುಕಿವರೆ, ಹಿಡಿವುದು ಮಾಬುದೆ ಕೂಡಲ ಸಂಗಮದೇವಾ?

"Difficult is the path of devotion. It is like the saw. It cuts going forward. It cuts returning. God Kudala Sangama, if we play with the serpent, will it leave us easily?"

೭೮ ನೆಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆ ಮಾರುವೋದೆನೆಂದರೆ, ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ, ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು. ಇವಕ್ಕೆಲ್ಲ ಅಂಜದಿದ್ದರೆ, ಭಕ್ತಿಕಂಪಿತ ನಮ್ಮ ಕೂಡಲ ಸಂಗಮದೇವ.

"If I should say I believe, I have faith, I have given myself to you, you shake the body and see; you shake the mind and see; you shake possessions and see. If with all this, I remain firm, our God Kudala Sangama rejoices at the faith."

೭೯ ಹಸಿದು ಬಂದ ಗಂಡಂಗೆ ಉಣಲಿಕ್ಕದೆ, ಬಡವಾದನೆಂದು ಮರಗುವ ಸತಿಯ ಸ್ನೇಹದಂತೆ, ಬಂದುದನರಿಯಳು. ಇದ್ದುದ ಸವಿಸಳು, ದುಃಖವಿಲ್ಲದ ಅಕ್ಕೆ ಹಗರಣಿಗನ ತೆರನಂತೆ, ಕೂಡಲ ಸಂಗಮದೇವಾ.

"Like the wife who is sorry that her husband is growing lean, but does not give him food when hungry, she knows not of his coming, she does not use her opportunity." — This is devotion which does not express itself in service of God.

೮೦ ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟರೆ ಕೊಳೆವುದಲ್ಲದೆ ಬಲ ಹಾಗ ಬಲ್ಲುದೆ? ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ. ಭಕ್ತಿ ಎಂತಹುದೋ? ಮುನ್ನಿನಂತೆ. ಕೂಡಲ ಸಂಗಯ್ಯ ಮನಹೀನನ ವಿಾಸಲ ಕಯ್ದುರಿಸಿದಂತೆ.

"You may put an iron ring round a pumpkin. It gets no strength from it. It rots all the same. God Kudala Sangama, if a man whose mind is not reformed is given the baptism of your servants, how will he get devotion? He will remain as he was."

೮೧ ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ, ರಂಜನೆಯಲ್ಲದೆ, ಅದರ ಗಂಜಳ ಬಿಡದಣ್ಣ. ಮಣ್ಣ ಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ ನಿಚ್ಚ ಕೆಸರಲ್ಲದೆ, ಅದರಚ್ಚುಗ ಬಿಡದಣ್ಣ. ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ ಕೆಟ್ಟವನೆಂಕೆ ಸದ್ಭಕ್ತನಹನು ಕೂಡಲ ಸಂಗಮದೇವಾ?

"You may make a Vinayaka out of cow's dung and throw champaka flowers on him. He will look pretty but will smell of cow's urine. If you wash a doll made of mud again and again in water it does not change its nature; it only becomes more and more muddy. If you administer the vows of God's servants to a worldly man, he does not cease from his wickedness and become a saint, O God Kudala Sangama."

೮೨ ಅಂಗದಿಚ್ಛೆಗೆ ಮದ್ಯಮಾಂಸವ ತಿಂಬರು. ಕಂಗಳಿಚ್ಛೆಗೆ ಪರವಧುವ ನೆರೆವರು. ಲಿಂಗ ಲಾಂಛನ ಧಾರಿಯಾದಲ್ಲಿ ಫಲವೇನು? ಕೂಡಲ ಸಂಗಮದೇವಾ.

"The body has desires. They eat meat and drink liquor. The eye lusts and they foregather with strange women. What is the use of wearing your symbol, O God Kudala Sangama?"

—(ಮುಂದುವರಿಯುವದು.)—

೮೩ ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ, ಲಿಂಗದ ಮೇಲೆ ನಿಷ್ಠೆ ಇಲ್ಲದ ಭಕ್ತ ಇದ್ದರೇನೋ ಶಿವಶಿವಾ? ಹೋದರೇನೋ ಶಿವ ಶಿವಾ? ಕೂಡಲ ಸಂಗಮದೇವಯ್ಯಾ. ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ.

"The wife who does not love the husband, the devotee who is not devoted to his God, what matters it, O God, my God, if these live or die? O Lord Kudala Sangama, their life is like letting the calf to suck when the udder has run dry."

೮೪ ಕೊಲ್ಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ. ಕುಲವೇನೋ, ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು.

"He who kills is the Madiga; he who eats forbidden food is the Holeya. What is caste? What is their caste? The servants of our God Kudala Sangama who wish good to all beings; these are high born."

೮೫ ಸೆಟ್ಟಿ ಎಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಡೋಹರನೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ ಚನ್ನಯ್ಯನ? ಆನು ಹಾರುವನೆಂದಡೆ, ಕೂಡಲ ಸಂಗಯ್ಯ ನಗುವನಯ್ಯ.

"Shall I call Siriyala a tradesman? or Machayya a washerman? or Kakkayya a Dohera or Channayya an outcaste? and if after this I call myself a Brahmin, my God will laugh at me."

೮೬ ಅಪ್ಪನು ನಮ್ಮ ಮಾದಾರ ಚನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ. ಚಿಕ್ಕಯ್ಯ ನಮ್ಮಯ್ಯ ಕಾಣಿರಯ್ಯ. ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ! ಎನ್ನನೇತಕ್ಕೆ ಅರಿಯಿರಿ ಕೂಡಲ ಸಂಗಮದೇವ?

"My father is Channayya the outcaste; my grandfather is Kakkayya the Dohera and know you Chikkayya is my uncle. Kinnari Bommayya is my brother and yet why do you treat me as a stranger my God?

೮೭ ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ. ಜಲಬಿಂದುವಿನ ವ್ಯವಹಾರ ಒಂದೇ. ಆಶೆಯಾಮಿಷ ಹರುಷ ವಿಷಯಾದಿಗಳೆಲ್ಲ ಒಂದೇ. ಏನನೋದಿ ಏನ ಕೇಳಿ ಏನು ಫಲ? ಕುಲಜನೆಂಬುದಕ್ಕೆ ಆವುದು ದೃಷ್ಟ? ಕಾಸಿ ಕಮ್ಮಾರನಾದ, ಬೀಸಿ ಮಡಿವಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ, ಕರ್ಣದಲಿ ಜನಿಸಿದವರುಂಟೇ ಜಗದೊಳಗೆ? ಇದು ಕಾರಣ ಕೂಡಲ ಸಂಗಮದೇವ ಲಿಂಗಸ್ಥಲವನರಿದವನೇ ಕುಲಜನು.

"There is no refuge for the embryo till there has been uncleanness. The manner of birth is the same. Desire, food, pleasure and perception are all the same. What is the use of much reading and hearing? What is the sign of good birth? This man heats metal and is a smith, that man does clothe is a washerman, one spreads the thread and is a weaver, another reads the book and is a Brahmin. Is there any one who is born in the ear? Therefore, my God, he only is of good birth who knows the worship of God."

೮೮ ಅಂದು, ಇಂದು, ಮತ್ತೊಂದೆನಬೇಡ. ದಿನ ಒಂದೇ ಶಿವ ಶರಣೆಂಬುವಂಗೆ. ದಿನ ಒಂದೇ ಹರ ಶರಣೆಂಬುವಂಗೆ. ದಿನ ಒಂದೇ ನಮ್ಮ ಕೂಡಲ ಸಂಗನ ಮಾಣದೆ ನೆನೆವಂಗೆ.

"Say not 'that day' 'this day" and so on and so forth. To him who says 'God is my refuge,' all days are one. To the man who relies on God, all days are the same. To him who remembers our Lord Kudala Sangama without remission, every day is like every other day."

೮೯ ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ? ತನಗಾದಡೆಗೇನು? ಅವರಿಗಾದಡೆಗೇನು? ತನುವಿನ ಕೋಪ ತನ್ನ ಹಿರಿಯತನದ ಕೇಡು. ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆಯ ಸುಡದು ಕೂಡಲ ಸಂಗಮದೇವಾ.

"What is the use of being angry with those who are angry with us? How does it matter whether anger is against others or one's self? A man's anger is injurious to his own goodness. It is a fall from wisdom. God Kudala Sangama, does the fire in one house burn the neighbouring house without first burning the house where it rose?

೯೦ ಎಂದೋ ಸಂಸಾರದ ದಂದುಗ ಹಿಂಗುವದು. ಎಂದೋ ಮನದಲ್ಲಿ ಪರಿಣಾಮವಹುದೆನಗೆಂದೋ; ಎಂದೋ, ಕೂಡಲ ಸಂಗಮದೇವಾ ಇನ್ನೆಂದೋ, ಪರಮ ಸಂತೋಷದಲ್ಲಿಹುದೆನಗೆಂದೋ.

"When will this travail of SANSARA cease? When will my mind be converted? O God Kudala Sangama, when, ah when will that time of real bliss come?

೯೧ ಲೇಸ ಕಂಡು, ಮನ ಬಯಸಿ ಬಯಸಿ, ಆಸೆ ಮಾಡಿದಡಿಲ್ಲ, ಕಂಡಯ್ಯಾ. ತಾಳ ಮರಕ್ಕೆ ಕೈಯನೀಡಿ, ಮೇಲೆ ನೋಡಿ ಗೋಣು ನೊಂದುದಯ್ಯ. ಕೂಡಲ ಸಂಗಮದೇವ ಕೇಳಯ್ಯಾ, ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ.

-"It is no use, O soul, seeing the good and longing for it lustfully; stretching your arm for the fruit of the palm and looking up only hurts the neck. My God Kudala Sangama, man gets nothing till such time as it pleases you to give."

೯೨ ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ! ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ! ಮತ್ತೊಂದು ಕೇಳದಂತೆ, ಕಿವುಡನ ಮಾಡಯ್ಯಾ ತಂದೆ! ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು ಕೂಡಲ ಸಂಗಮದೇವಾ.

(೧೩ ನೇ ಪುಟವನ್ನು ನೋಡಿರಿ.)

ಬಸವಣ್ಣನವರ ವಚನಗಳ ಅನುವಾದ.

SAYINGS OF BASAVANNA.

(ಅನುವಾದಕರು— ಶ್ರೀ. ಎಂ. ವೆಂಕಟೇಶ ಅಯ್ಯಂಗಾರ್ಯರು ಎಮ್. ಎ.)

—:ಕಳೆದ ಸಂಚಿಕೆಯಿಂದ ಬಂದುದ.:—

೭೫ ಒಳಗೆ ಕುಟಿಲ, ಹೊರಗೆ ವಿನಯವಾಗಿ, ಭಕ್ತರೆನಿಸಿಕೊಂಬವರ ಒಲ್ಲ ನೊಲ್ಲನಯ್ಯ ಲಿಂಗವು. ಅವರು ಪಥಕ್ಕೆ ಸಲ್ಲರು, ಸಲ್ಲರಯ್ಯಾ. ಒಳಹೊರಗೊಂದಾಗದವರಿಗೆ, ಅಳಿಯಾಸೆ ದೋರಿ, ಬೀಸಾಡುವನವರ ಕೂಡಲ ಸಂಗಮದೇವ.

"Those who are evil within but goodness without and appear as devotees, our God does not want. They are no good in the path of God; none. Those whose inner and outer selves are not one, our God Kudala Sangama will seem to accept at first but will reject in the end."

೭೬ ಎನಿಸು ಕಾಲ ಕಲ್ಲು ನೀರೊಳಗಿದ್ದರೇನು? ನೆನೆದು ಮೃದುವಾಗಬಲ್ಲದೆ? ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ, ಮನದಲ್ಲಿ ದೃಢವಿಲ್ಲದನ್ನಕ್ಕ? (ನಿಧಾನವ ಕಾಯಿದಿದ್ದ ಬೆಂತರನಂತೆ, ಅದರ ವಿಧಿ ಎನಗಾಯಿತ್ತು) ಕೂಡಲ ಸಂಗಮದೇವಾ.

"How long should you keep a stone in water to make it soft? What is the use of keeping it there? If the mind is not firmly fixed in you, God Kudala Sangama, how long shall I worship you and for what good?"

೭೭ ಭಕ್ತಿಯೆಂಬುದ ಮಾಡಬಾರದು ಕರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು. ಘಟ ಸರ್ಪನಲ್ಲಿ ಕೈದುಡುಕಿದರೆ, ಹಿಡಿವುದು ಮಾಬುದೆ ಕೂಡಲ ಸಂಗಮದೇವಾ?

"Difficult is the path of devotion. It is like the saw. It cuts going forward. It cuts returning. God Kudala Sangama, if we play with the serpent, will it leave us easily?"

೭೮ ನೆಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆ ಮಾರುವೋದೆನೆಂದರೆ, ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ, ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು. ಇವಕ್ಕೆಲ್ಲ ಅಂಜದಿದ್ದರೆ, ಭಕ್ತಿಕಂಪಿತ ನಮ್ಮ ಕೂಡಲ ಸಂಗಮದೇವ.

"If I should say I believe, I have faith, I have given myself to you, you shake the body and see; you shake the mind and see; you shake possessions and see. If with all this, I remain firm, our God Kudala Sangama rejoices at the faith."

೭೯ ಹಸಿದು ಬಂದ ಗಂಡಂಗೆ ಉಣಲಿಕ್ಕದೆ, ಬಡವಾದನೆಂದು ಮರಗುವ ಸತಿಯ ಸ್ನೇಹದಂತೆ, ಬಂದುದನರಿಯಳು. ಇದ್ದುದ ಸವಿಸಳು. ದುಃಖವಿಲ್ಲದ ಅಕ್ಕೆ ಹಗರಣಿಗನ ತೆರನಂತೆ, ಕೂಡಲ ಸಂಗಮದೇವಾ.

"Like the wife who is sorry that her husband is growing lean, but does not give him food when hungry, she knows not of his coming, she does not use her opportunity." —This is devotion which does not express itself in service of God.

೮೦ ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟರೆ ಕೊಳೆವುದಲ್ಲದೆ ಬಲ ಹಾಗ ಬಲ್ಲುದೆ? ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ. ಬಕ್ತಿ ಎಂತಹುದೋ? ಮುನ್ನಿನಂತೆ. ಕೂಡಲ ಸಂಗಯ್ಯ ಮನಹೀನನ ಬೀಸಲ ಕಾಯ್ದಿರಿಸಿದಂತೆ.

"You may put an iron ring round a pumpkin. It gets no strength from it. It rots all the same. God Kudala Sangama, if a man whose mind is not reformed is given the baptism of your servants, how, will he get devotion? He will remain as he was."

೮೧ ಸಗಣಿಯ ಬೆನಕಂಗೆ ಸಂಪಿಗೆಯರಳನಲ್ಲಿ ಪೂಜಿಸಿದರೆ, ರಂಜನೆಯಲ್ಲದೆ, ಅದರ ಗಂಜಳ ಬಿಡದಣ್ಣ. ಮಣ್ಣಪುತ್ಥಳಿಯ ಮಾಣದೆ ಜಲದಲ್ಲಿ ತೊಳೆದರೆ ನಿಚ್ಚ ಕೆಸರಲ್ಲದೆ, ಅದರಚ್ಚುಗ ಬಿಡದಣ್ಣ. ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ ಕೆಟ್ಟನೆಂಕೆ ಸದ್ಭಕ್ತನಹನು ಕೂಡಲ ಸಂಗಮದೇವಾ?

"You may make a Vinayaka out of cow's dung and throw champaka flowers on him. He will look pretty but will smell of cow's urine. If you wash a doll made of mud again and again in water it does not change its nature; it only becomes more and more muddy. If you administer the vows of God's servants to a worldly man, he does not cease from his wickedness and become a saint, O God Kudala Sangama."

೮೨ ಅಂಗದಿಚ್ಛೆಗೆ ಮದ್ಯಮಾಂಸವ ತಿಂಬರು. ಕಂಗಳಿಚ್ಛೆಗೆ ಪರವಧುವ ನೆರೆವರು. ಲಿಂಗ ಲಾಂಛನ ಧಾರಿಯಾದಲ್ಲಿ ಫಲವೇನು? ಕೂಡಲ ಸಂಗಮದೇವಾ.

"The body has desires. They eat meat and drink liquor. The eye lusts and they foregather with strange women. What is the use of wearing your symbol, O God Kudala Sangama?"

—(ಮುಂದುವರಿಯುವದು.)—

೮೩ ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ, ಲಿಂಗದ ಮೇಲೆ ನಿಷ್ಠೆ ಇಲ್ಲದ ಭಕ್ತ ಇದ್ದರೇನೋ ಶಿವಶಿವಾ? ಹೋದರೇನೋ ಶಿವ ಶಿವಾ? ಕೂಡಲ ಸಂಗಮದೇವಯ್ಯ. ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ.

"The wife who does not love the husband, the devotee who is not devoted to his God, what matters it, O God, my God, if these live or die? O Lord Kudala Sangama, their life is like letting the calf to suck when the udder has run dry."

೮೪ ಕೊಲ್ಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ. ಕುಲವೇನೋ, ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಕುಲಜರು.

"He who kills is the Madiga; he who eats forbidden food is the Holeya. What is caste? What is their caste? The servants of our God Kudala Sangama who wish good to all beings; these are high born."

೮೫ ಸೆಟ್ಟಿ ಎಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಡೋಹರನೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ ಚನ್ನಯ್ಯನ? ಆನು ಹಾರುವನೆಂದಡೆ, ಕೂಡಲ ಸಂಗಯ್ಯ ನಗುವನಯ್ಯ.

"Shall I call Siriyala a tradesman? or Machayya a washerman? or Kakkayya a Dohera or Channayya an outcaste? and if after this I call myself a Brahmin, my God will laugh at me."

೮೬ ಅಪ್ಪನು ನಮ್ಮ ಮಾದಾರ ಚನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ. ಚಿಕ್ಕಯ್ಯ ನಮ್ಮಯ್ಯ ಕಾಣಿರಯ್ಯ. ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ! ಎನ್ನನೇತಕ್ಕೆ ಅರಿಯಿರಿ ಕೂಡಲ ಸಂಗಮದೇವ?

"My father is Channayya the outcaste; my grandfather is Kakkayya the Dohera and know you Chikkayya is my uncle. Kinnari Bommayya is my brother and yet why do you treat me as a stranger my God?

೮೭ ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ. ಜಲಬಿಂದುವಿನ ವ್ಯವಹಾರ ಒಂದೇ. ಆಶೆಯಾಮಿಷ ಹರುಷ ವಿಷಯಾದಿಗಳೆಲ್ಲ ಒಂದೇ. ಏನನೋದಿ ಏನ ಕೇಳಿ ಏನು ಫಲ? ಕುಲಜನೆಂಬುದಕ್ಕೆ ಆವುದು ದೃಷ್ಟ? ಕಾಸಿ ಕಮ್ಮಾರನಾದ, ಬೀಸಿ ಮಡಿವಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ, ಕರ್ಣದಲಿ ಜನಿಸಿದವರುಂಟೇ ಜಗದೊಳಗೆ? ಇದು ಕಾರಣ ಕೂಡಲ ಸಂಗಮದೇವ ಲಿಂಗಸ್ಥಲವನರಿದವನೇ ಕುಲಜನು.

"There is no refuge for the embryo till there has been uncleanness. The manner of birth is the same. Desire, food, pleasure and perception are all the same. What is the use of much reading and hearing? What is the sign of good birth? This man heats metal and is a smith, that man does clothe is a washerman, one spreads the thread and is a weaver, another reads the book and is a Brahmin. Is there any one who is born in the ear? Therefore, my God, he only is of good birth who knows the worship of God."

೮೮ ಅಂದು, ಇಂದು, ಮತ್ತೊಂದೆನಬೇಡ. ದಿನ ಒಂದೇ ಶಿವ ಶರಣೆಂಬುವಂಗೆ. ದಿನ ಒಂದೇ ಹರ ಶರಣೆಂಬುವಂಗೆ. ದಿನ ಒಂದೇ ನಮ್ಮ ಕೂಡಲ ಸಂಗನ ಮಾಣದೆ ನೆನೆವಂಗೆ.

"Say not 'that day' 'this day" and so on and so forth. To him who says 'God is my refuge,' all days are one. To the man who relies on God, all days are the same. To him who remembers our Lord Kudala Sangama without remission, every day is like every other day."

೮೯ ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ? ತನಗಾದಡೆಗೇನು? ಅವರಿಗಾದಡೆಗೇನು? ತನುವಿನ ಕೋಪ ತನ್ನ ಹಿರಿಯತನದ ಕೇಡು. ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆಯ ಸುಡದು ಕೂಡಲ ಸಂಗಮದೇವಾ.

"What is the use of being angry with those who are angry with us? How does it matter whether anger is against others or one's self? A man's anger is injurious to his own goodness. It is a fall from wisdom. God Kudala Sangama, does the fire in one house burn the neighbouring house without first burning the house where it rose?

೯೦ ಎಂದೋ ಸಂಸಾರದ ದಂದುಗ ಹಿಂಗುವದು. ಎಂದೋ ಮನದಲ್ಲಿ ಪರಿಣಾಮವಹುದೆನಗೆಂದೋ; ಎಂದೋ, ಕೂಡಲ ಸಂಗಮದೇವಾ ಇನ್ನೆಂದೋ, ಪರಮ ಸಂತೋಷದಲ್ಲಿಹುದೆನಗೆಂದೋ.

"When will this travail of SANSARA cease? When will my mind be converted? O God Kudala Sangama, when, ah when will that time of real bliss come?

೯೧ ಲೇಸ ಕಂಡು, ಮನ ಬಯಸಿ ಬಯಸಿ, ಆಸೆ ಮಾಡಿದಡಿಲ್ಲ, ಕಂಡಯ್ಯಾ. ತಾಳ ಮರಕ್ಕೆ ಕೈಯನೀಡಿ, ಮೇಲೆ ನೋಡಿ ಗೋಣು ನೊಂದುದಯ್ಯ. ಕೂಡಲ ಸಂಗಮದೇವ ಕೇಳಯ್ಯಾ, ನೀನೀವ ಕಾಲಕ್ಕಲ್ಲದಿಲ್ಲ ಕಂಡಯ್ಯಾ.

"It is no use, O soul, seeing the good and longing for it lustfully; stretching your arm for the fruit of the palm and looking up only hurts the neck. My God Kudala Sangama, man gets nothing till such time as it pleases you to give."

೯೨ ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ! ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ! ಮತ್ತೊಂದು ಕೇಳದಂತೆ, ಕಿವುಡನ ಮಾಡಯ್ಯಾ ತಂದೆ! ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು ಕೂಡಲ ಸಂಗಮದೇವಾ.

(೧೩ ನೇ ಪುಟವನ್ನು ನೋಡಿರಿ.)

ವರ್ಹಾಡದಲ್ಲಿಯ ವೀರಶೈವ ಸಮಾಜ.

ಕಾರಂಜಾ ಪಟ್ಟಣದಿಂದ ೨೦-೨೨ ಮೈಲು ಅಂತರದ ಮೇಲೆ ದಾರವ್ಹಾ ಎಂಬ ರೇಲ್ವೆ ಜಂಕ್ಶನ್ ಇರುತ್ತದೆ. ಇಲ್ಲಿ ಸ್ವಲ್ಪ ವೀರಶೈವ ವಸತಿ ಅದೆ. ಇಲ್ಲಿಂದ ಪೂಸದ ಎಂಬಲ್ಲಿಗೆ ಒಂದು ರೇಲ್ವೆ ಶಾಖೆಯು ಹೋಗಿದೆ. ಪೂಸದ ಗ್ರಾಮದಲ್ಲಿಯೂ ಕೆಲವು ಜನ ವೀರಶೈವರು ವಾಸವಾಗಿದ್ದಾರೆ. ಅಲ್ಲಿಯ ಶ್ರೀ ಗೋದಾಜಿರಾವ ಸಖಾರಾಮಪ್ಪ ಮುಕರೆ ಎಂಬವರು ದೊಡ್ಡ ಜಮೀನದಾರರು. ಇಲ್ಲಿಯೇ ಶ್ರೀ ಎಲ್. ಎಸ್. ಏಕಲಾರೆ ಬಿ. ಎ. ಎಲ್ ಎಲ್. ಬಿ. ಇವರು ವಕೀಲರಿದ್ದಾರೆ. ಇವರು ಮೂಲತಃ ಉಮರಾವತಿಯ ನಿವಾಸಿಗಳು. ಇಲ್ಲಿ ವಕೀಲಿ ಕೆಲಸ ಮಾಡುತ್ತಿದ್ದಾರೆ. ವರ್ಹಾಡದಲ್ಲಿಯ ವೀರಶೈವ ಪದವೀಧರರಲ್ಲಿ ಇವರು ಮೊದಲನೆಯವರು.

ಯುವತಮಾಳ.

ಈ ಪಟ್ಟಣವು ಜಿಲ್ಹೆಯ ಮುಖ್ಯ ಸ್ಥಳವಾಗಿದ್ದು ಲಿಂಗಾಯತರ ವಸತಿಯೂ ವಿಶೇಷವಾಗಿದೆ. ಈ ಜಿಲ್ಹೆಯಲ್ಲಿ ಪಾರವಾ ಎಂಬ ಸಣ್ಣ ಜಹಗೀರು ಅದೆ. ಅಲ್ಲಿ ಶ್ರೀಮಂತ ಬಾಬಾಸಾಹೇಬ ಉರ್ಫ ದತ್ತಾಜಿರಾವ ಕೃಷ್ಣರಾವ ದೇಶಮುಖ ಎಂಬ ಜಹಾಗೀರದಾರರು ಒಳ್ಳೇ ಸಮಾಜ ಪ್ರೇಮಿಗಳಿದ್ದಾರೆ. ಇವರು ತಮ್ಮ ಜಹಗೀರಿನ ಕಾರ್ಯಗಳನ್ನು ನೋಡಿಕೊಳ್ಳುವದಲ್ಲದೆ ಸಮಾಜ ಕಾರ್ಯಗಳನ್ನೂ ಮಾಡುತ್ತಿರುತ್ತಾರೆ. ಇವರ ಮನೆತನದವರೇ ಆದ ಶ್ರೀಮಂತ ಬಾಜೀರಾವ ಚಂಪತರಾವ ದೇಶಮುಖ ಎಂಬವರು ಯುವತಮಾಳದಲ್ಲಿರುತ್ತಾರೆ. ಮೂರನೆಯವರಾದ ಶ್ರೀಮಂತ ರಾವಸಾಹೇಬ ಮಾಧವರಾವ ದೇವರಾವ ದೇಶಮುಖ ಎಂಬವರು ಒಳ್ಳೇ ಸಮಾಜ ಪ್ರೇಮಿಗಳು; ಯುವತಮಾಳ ವೀರಶೈವ ಸಂಸ್ಥೆಯ ಅಧ್ಯಕ್ಷರು. ಫತ್ತೆಖೇರ್ಡಾದಲ್ಲಿಯ ವೀರಶೈವ ಮಠದ ಬಗ್ಗೆ ಇವರಿಗೆ ಒಳ್ಳೇ ಅಭಿಮಾನ. ೮-೧೦ ವರ್ಷಗಳ ಪೂರ್ವದಲ್ಲಿ ಸ್ವಾಮಿ ವಿರೂಪಾಕ್ಷ ಒಡೆಯರ ಇವರ ಅಧ್ಯಕ್ಷತೆಯಲ್ಲಿ ಕೂಡಿದ ವಿದರ್ಭ ವೀರಶೈವ ಪರಿಷತ್ತಿನಲ್ಲಿ ಇವರು ಪ್ರಾಮುಖ್ಯವಾದ ಭಾಗ ವಹಿಸಿದ್ದರು. ಇವರು ಬೇಟೆಯಾಡುವದರಲ್ಲಿ ಪ್ರವೀಣರಿದ್ದು ಹುಲಿಯ ಬೇಟೆಗಾಗಿ ಸುಪ್ರಸಿದ್ಧರಾಗಿದ್ದಾರೆ. ಈ ಮನೆತನದವರಲ್ಲಿ ಪಹಾಪಳ ಎಂಬಲ್ಲಿಯೂ ಶ್ರೀಮಂತ ನರಸಿಂಗರಾವ ಭಗವಂತರಾವ ದೇಶಮುಖ ಎಂಬ ಜಹಾಗೀರದಾರರಿದ್ದಾರೆ. ಶ್ರೀಮಂತರ ಈ ಮನೆತನವು ಈ ಭಾಗದಲ್ಲೆಲ್ಲಾ ಪ್ರಸಿದ್ಧವಾದದ್ದು. ಯುವತಮಾಳದಲ್ಲಿಯ ವೀರಶೈವರು ಮುಖ್ಯವಾಗಿ ಕಿರಾಣಿ, ಜವಳಿ ವ್ಯಾಪಾರ, ಚಿನಿವಾರಿಕೆ ಮೊದಲಾದ ವ್ಯವಹಾರಗಳನ್ನು ಮಾಡುತ್ತಾರೆ.

ಉಮರಾವತಿ.

ಉಮರಾವತಿ ಪಟ್ಟಣವು ಪೂರ್ವಕಾಲದಿಂದಲೂ ವೀರಶೈವರ ಮುಖ್ಯ ಸ್ಥಳವು. ಒಂದಾನೊಂದು ಕಾಲಕ್ಕೆ ಇಲ್ಲಿಯ ಸರ್ವ ವ್ಯಾಪಾರವು ವೀರಶೈವರ ಕೈಯಲ್ಲಿದ್ದಿತು. ಆದರೆ ಪ್ಲೇಗ, ಕಾಲರಾ, ಇನ್‌ಫ್ಲುಯೆಂಝಾ ಮೊದಲಾದ ಪಿಡುಗುಗಳ ಹಾವಳಿಯಿಂದ ಇಲ್ಲಿಯ ವೀರಶೈವರ ಬಹು ಭಾಗವು ಲುಪ್ತವಾಯಿತು. ಕೇವಲ ೨೫-೩೦ ವರ್ಷಗಳ ಹಿಂದೆ ಯಾವ ಉಮರಾವತಿಯಲ್ಲಿ ಸಹಸ್ರಾರು ವೀರಶೈವರ ಮನೆಗಳಿದ್ದವೋ ಅವು ಈಗ ನೂರಾರು ಮಾತ್ರ ಉಳಿದಿವೆ. ಆದರೂ ಇಲ್ಲಿ ವೀರಶೈವರ ವಸತಿಯು ಸಾಕಷ್ಟಿದೆ. ಪ್ರಖ್ಯಾತ ಲೇಖಕರಾದ ದೇ. ಭ. ಸಾ. ರಾ. ಬಾಮಣಗಾಂವಕರ ಇವರು ಇಲ್ಲಿಯೇ ಇದ್ದಾರೆ. ಇವರ ಹೆಸರು ಅರಿಯದವರು ಅಪೂರ್ವ. ೧೯೧೦ ನೆಯ ಇಸ್ವಿಯಲ್ಲಿಯೇ ಇವರು "ವೀರಶೈವ ಸಂಜೀವಿನಿ" ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ್ದರು. ಇದು ಮರಾಠಿ ಮತ್ತು ಇಂಗ್ಲೀಷ ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದಿತು. ೧೯೧೦ ನೆಯ ಇಸ್ವಿಯಲ್ಲಿ ನಾಗಪೂರ ಮತ್ತು ವರ್ಹಾಡ ಪ್ರಾಂತದ ವೀರಶೈವ ಪರಿಷತ್ತನ್ನು ನೆರೆಯಿಸಿದವರು ಇವರೇ. ಮರುವರ್ಷವೇ ಎರಡನೆಯ ಪರಿಷತ್ತನ್ನೂ ಮತ್ತು ವೀರಶೈವ ಶಿಕ್ಷಣ ಪರಿಷತ್ತನ್ನೂ ಉಮರಾವತಿಯಲ್ಲಿ ಕೂಡಿಸಿದರು. ೧೯೨೯ ನೆಯ ಇಸ್ವಿಯಲ್ಲಿ ಇವರ ನೇತೃತ್ವದ ಕೆಳಗೆ ಪುಣೆಯಲ್ಲಿ "ವೀರಶೈವ ಕೇಸರಿ" ಎಂಬ ಪತ್ರಿಕೆಯು ಪ್ರಾರಂಭಿಸಲ್ಪಟ್ಟಿತು. ಆದರೆ ಇವರು ಸ್ವಲ್ಪ ದಿವಸಗಳಲ್ಲಿಯೇ ರಾಷ್ಟ್ರೀಯ ಸತ್ಯಾಗ್ರಹದಲ್ಲಿ ಸೇರಿ ಶಾಸನ ಭಂಗಮಾಡಿ ಸರಕಾರದ ಆತಿಥ್ಯವನ್ನು ಸ್ವೀಕರಿಸಿದ್ದರಿಂದ 'ವೀರಶೈವ ಕೇಸರಿಯು' ಮೆಲ್ಲಗೆ ಮಾಯವಾಯಿತು. ಈಗ ಇವರ ಸಂಪಾದಕತ್ವದಲ್ಲಿ 'ಉದಯ'ವೆಂಬ ದ್ವಿಸಾಪ್ತಾಹಿಕ ಪತ್ರಿಕೆಯು ಹೊರಡುತ್ತಿದೆ.

ಬಸವೇಶ್ವರ, ಪ್ರಭುದೇವ, ಮೊದಲಾದ ಶಿವಶರಣರ ಚರಿತ್ರೆಗಳಲ್ಲಿ ಇವರಿಗೆ ಅಭಿರುಚಿಯು ಹೆಚ್ಚು. ೧೯೧೦ ನೆಯ ಇಸ್ವಿಯಲ್ಲಿ ಇವರು ಮರಾಠಿಯಲ್ಲಿ ಶ್ರೀ ಬಸವೇಶ್ವರ ನಾಟಕವನ್ನು ಬರೆದು ಪ್ರಯೋಗಿಸಿದರು. ಸದ್ಯಕ್ಕೆ ದೇಶದಲ್ಲೆಲ್ಲಾ ದೊರೆಯುತ್ತಿರುವ ಕುರ್ಚಿಯ ಮೇಲೆ ಕುಳಿತ ಶ್ರೀ ಬಸವೇಶ್ವರನ ಭಾವಚಿತ್ರದ ಕಲ್ಪನೆಯ ಉತ್ಪಾದಕರು ಇವರೇ. ಇವರು ತೆಗೆದ ಆ ಭಾವಚಿತ್ರದ ಮೂಲ ಪ್ರತಿಯು ಈಗಲೂ ಉಮರಾವತಿಯಲ್ಲಿ ನೋಡಲು ದೊರೆಯುತ್ತದೆ. ಆದೇ ವರ್ಷವೇ ಅವರು ಬಸವ ಜಯಂತಿಯ ಉತ್ಸವವನ್ನು ಪ್ರಾರಂಭಿಸಿ ಉಮರಾವತಿಯ ಒಂದು ಬೀದಿಯ ಕೂಟಕ್ಕೆ "ಶ್ರೀ ಬಸವೇಶ್ವರ ಚೌಕ" ಎಂದು ನಾಮಕರಣ ಮಾಡಿದರು. ಆ ಹೆಸರು ಈಗಲೂ ಪ್ರಚಾರದಲ್ಲಿದೆ. ಈಗ ೨೦-೨೫ ವರ್ಷಗಳ ಪೂರ್ವದಲ್ಲಿಯೇ ಇವರು ಸಮಾಜದ ಶಿಕ್ಷಣಾಭಿವೃದ್ಧಿಗಾಗಿ 'ವೀರಶೈವ ಶಿಕ್ಷಣ ಪ್ರಸಾರಕ ಮಂಡಲ' ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಇಲ್ಲಿ ವೀರಶೈವರು ಇಬ್ಬರು ಪದವೀಧರರಿದ್ದು ಇನ್ನೊಬ್ಬರು ಬಿ. ಎ. ಎಲ್. ಎಲ್. ಬಿ. ಪದವಿಯುತರಿದ್ದಾರೆ. ಇಲ್ಲಿ ಸಾಧಾರಣ ೨೫-೩೦ ಮನೆತನಗಳು ಇನ್ನೂ ಸುಸ್ಥಿತಿಯಲ್ಲಿವೆ.

ಇಲ್ಲಿ ಮೊದಲು ವೀರಶೈವರದೊಂದು ಪ್ರತ್ಯೇಕವಾದ ಪೇಟೆಯೇ ಇದ್ದಿತು. ಆದರೆ ಈಗ ಗುಜ್ಜರು ಮಾರವಾಡಿಗಳು ವ್ಯಾಪಾರವನ್ನು ಆಕ್ರಮಿಸಿ ಬಿಟ್ಟಿದ್ದಾರೆ. ಇಲ್ಲಿ ವೀರಶೈವರ ೮-೯ ಮಠಗಳಿದ್ದು ಅವುಗಳಲ್ಲಿ ಮೂರು ವಿರಕ್ತ ಮಠಗಳು. ವಿರಕ್ತ ಮಠಗಳಲ್ಲಿಯ ಒಂದು ವಿಸ್ತೀರ್ಣವಾದ ಮಠವನ್ನು ಮಠದ ಕಾರಭಾರಿಯು ಕೇವಲ ೭೦೦ ರೂ. ಗಳಿಗೆ ಒಬ್ಬ ಮಾರವಾಡಿಗೆ ಮಾರಿಬಿಟ್ಟಿದ್ದಾನೆ. ಇನ್ನೊಂದು ಮಠದಲ್ಲಿಯೂ ಸ್ವಾಮಿಗಳಿಲ್ಲ. ಮರಿಸ್ವಾಮಿ ಎಂಬ ಕಾರಭಾರಿಗಳು ಮಾತ್ರ ಒಬ್ಬರಿದ್ದಾರೆ.

ಮೂರನೆಯ ಮಠವು ಶ್ರೀ ಮಲ್ಲಪ್ಪ ಅಣ್ಣಾ ಕುರ್ಹೆ ಬಿ. ಎ. ಇವರ ವ್ಯವಸ್ಥಾಪಕತ್ವದ ಕೆಳಗೆ ಇರುತ್ತದೆ. ಗುರುಸ್ಥಲ ಮಠಗಳ ಸ್ಥಿತಿಯೂ ಹೀಗೆಯೇ. ಇವುಗಳಲ್ಲಿ ಲಾಸಿನ ಮಠವೆಂಬದೊಂದು ಗ್ರಾಮದ ಮಧ್ಯ ವಸತಿಯಲ್ಲಿದ್ದು ಸಭಾ ಸಮ್ಮೇಲನಗಳು ನಡೆಯುವದಾದರೆ ಅಲ್ಲಿಯೇ ನಡೆಯುತ್ತಲಿವೆ. ಯಾವ ಮಠದಲ್ಲಿಯೂ ಒಬ್ಬರಾದರೂ ಶಿಕ್ಷಣಸಂಪನ್ನ ಸ್ವಾಮಿಗಳಿಲ್ಲ.

ರಾಷ್ಟ್ರೀಯ ಕಾರ್ಯಕಾರಿ ಮಂಡಲದ ಅಧಿವೇಶನ.

ಕಳೆದ ತಿಂಗಳ ತಾ. ೨೯ ನೆಯ ದಿವಸ ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಲವು ಕೂಡಿದ್ದಿತು. ಕಾರ್ಯಕಾರಿ ಮಂಡಲದ ಸದಸ್ಯರಲ್ಲದೆ ಶ್ರೀ. ಭುಲಾಭಾಯಿ ದೇಸಾಯಿ ಮತ್ತು ಶ್ರೀ ಸತ್ಯಮೂರ್ತಿಯವರು ಆಮಂತ್ರಣದ ಮೇರೆಗೆ ಸಭೆಗೆ ಆಗಮಿಸಿದ್ದರು. ಮುಂಬೈ ನಗರದಂತೆ ಮದ್ರಾಸ ನಗರಕ್ಕೂ ಪ್ರಾಂತಿಕ ಅಧಿಕಾರವನ್ನು ಕೊಡಬೇಕೆಂದು ಶ್ರೀ ಸತ್ಯಮೂರ್ತಿಯವರು ಗೊತ್ತುವಳಿಯನ್ನು ತಂದರು. ಆಗ್ಗೆ ಶ್ರೀ ಸಾಂಬಮೂರ್ತಿಯವರು ವಿರೋಧಿಸುತ್ತ— ಮದ್ರಾಸವನ್ನು ಸ್ವತಂತ್ರ ಪ್ರಾಂತವನ್ನಾಗಿ ಮಾಡಿದರೆ ಅಲ್ಲಿಯ ತಮಿಳು ಜನರಿಗೆ ವಿಶೇಷವಾದ ಸೌಕರ್ಯವನ್ನು ಕೊಟ್ಟಂತಾಗುವದು, ಎಂದು ಹೇಳಿದರು. ಅದಕ್ಕೆ ಶ್ರೀ ಸತ್ಯಮೂರ್ತಿಯವರು— ಮದ್ರಾಸವು ತಮಿಳ ಪ್ರಾಂತವಾಗಿದೆ. ಅಲ್ಲಿ ಆಂಧ್ರರು ತಮ್ಮ ಆಕ್ರಮಣವನ್ನು ನಡೆಯಿಸಿದ್ದಾರೆ ಎಂದು ಆಕ್ಷೇಪಿಸಿದರು. ಅನಂತರ ಇದರ ನಿರ್ಣಯವನ್ನು ಅಧ್ಯಕ್ಷರು ಕೊಡಬೇಕಾಗಿದ್ದಿತು. ಆದರೆ ಅದನ್ನು ಸದ್ಯಕ್ಕೆ ಹಾಗೆಯೇ ಬಿಡಲಾಯಿತು.

ಕೂಲಿಕಾರರು ಮತ್ತು ರಾಷ್ಟ್ರೀಯ ಸಭೆ ಇವರಲ್ಲಿ ಸಹಕಾರವನ್ನುಂಟುಮಾಡುವದಕ್ಕಾಗಿ ಉಭಯ ಪಕ್ಷಕ್ಕೂ ಹಿತವಾಗುವಂಥ ಯೋಜನೆಯನ್ನು ಶ್ರೀ ರುಯಿಕರರು ಅಧ್ಯಕ್ಷರಿಗೆ ಸಾದರಪಡಿಸಿದರು. ಇದಕ್ಕೆ ಶ್ರೀ ಭುಲಾಭಾಯಿಯವರು ವಿರೋಧಿಸಿದರು. ಅನಂತರ ಆ ಯೋಜನೆಯಲ್ಲಿಯ ಶರ್ತುಗಳನ್ನು ವಿಚಾರಿಸುವದಕ್ಕಾಗಿ ಶ್ರೀ ಜಯರಾಮದಾಸ ದೌಲತರಾಮ ಮತ್ತು ಶ್ರೀ ಶಂಕರಲಾಲ ಬ್ಯಾಂಕರ ಇವರುಳ್ಳ ಒಂದು ಉಪ ಮಂಡಲವನ್ನು ನಿಯಮಿಸಲಾಯಿತು.

ಅಧಿಕಾರ ಸ್ವೀಕಾರ

ಬರಲಿರುವ ರಾಜಕೀಯ ಸುಧಾರಣೆಗಳಲ್ಲಿ ರಾಷ್ಟ್ರೀಯ ಸಭೆಯು ಅಧಿಕಾರಗಳನ್ನು ಸ್ವೀಕರಿಸಬೇಕೋ ಹೇಗೆಂಬ ಬಗ್ಗೆ ಚರ್ಚೆಯು ನಡೆಯಲು ಶ್ರೀ ಸತ್ಯಮೂರ್ತಿಯವರು ಸ್ವೀಕರಿಸುವದರ ಪರವಾಗಿ ಬಳ್ಳೇ ಆವೇಶದಿಂದ ಮಾತನಾಡಿದರು. ಯಾವ ಪ್ರಾಂತದಲ್ಲಿ ಕಾಂಗ್ರೆಸ್ ಜನರು ಬಹುಮತವುಳ್ಳವರಾಗಿರುತ್ತಾರೋ ಅಲ್ಲಿ ಮಂತ್ರಿಪದವನ್ನು ಸ್ವೀಕರಿಸುವದಕ್ಕೆ ಅಪ್ಪಣೆ ಕೊಟ್ಟರೆ ಬಳ್ಳೇ ಅನುಕೂಲವಾದ ಪರಿಣಾಮವನ್ನುಂಟುಮಾಡುವದೆಂದು ಅವರು ಪ್ರತಿಪಾದಿಸಿದರು. ಇದಕ್ಕೆ ಸರದಾರ ಶಾರ್ದೂಲಸಿಂಗ ಮತ್ತು ಬಾಬು ಪುರುಷೋತ್ತಮದಾಸ ತಂಡನ್‌ರು ವಿರೋಧಪರವಾಗಿ ಮಾತನಾಡಿದರು. ಚರ್ಚೆಯು ೩ ಗಂಟೆಗಳವರೆಗೆ ಬಳ್ಳೇ ಗುಪ್ತ ರೀತಿಯಿಂದ ನಡೆಯಿತು. ಕೊನೆಗೆ ಕಾರ್ಯಕಾರಿ ಮಂಡಲದವರು ಈ ಪ್ರಶ್ನೆಯನ್ನು ಬಿಡಿಸುವ ಕಾಲವು ಇನ್ನೂ ಬಂದಿಲ್ಲವೆಂದು ನಿರ್ಣಯ ಮಾಡಿದರು. ಈ ಬಗ್ಗೆ ಶ್ರೀ ಸಾಂಬಮೂರ್ತಿಯವರು— "ಸುಧಾರಣೆಯ ಪ್ರಸವ ವೇದನೆಯು ಪ್ರಾರಂಭವಾಗಿದೆ. ಇನ್ನೂ ಪ್ರಸವಿಸುವ ಪೂರ್ವದಲ್ಲಿಯೇ ಶಿಶುವಿಗೆ ಹೆಸರೇನಿಡಬೇಕೆಂದು ಚರ್ಚಿಸುವಂತೆ ಈ ಅಧಿಕಾರ ಸ್ವೀಕಾರದ ಚರ್ಚೆಯು ವ್ಯವಹಾರ ಶೂನ್ಯತೆಯನ್ನು ತೋರಿಸುತ್ತದೆ" ಎಂದರು.

ಸಂಸ್ಥಾನಗಳ ಪ್ರಶ್ನೆ.

ಕೆಲ ದಿನಗಳ ಪೂರ್ವದಲ್ಲಿ ಶ್ರೀ. ಭುಲಾಭಾಯಿಯವರು ಮೈಸೂರಿನಲ್ಲಿ ಸಂಸ್ಥಾನೀ ಪ್ರಜೆಗಳ ಬಗ್ಗೆ ಮಾಡಿದ ಭಾಷಣವನ್ನು ಕುರಿತು ಅನೇಕ ಪ್ರತಿಕೂಲ ಟೀಕೆಗಳು ಕಾರ್ಯಕಾರಿ ಮಂಡಲದ ಕಡೆಗೆ ಕಳಿಸಲ್ಪಟ್ಟಿದ್ದವು. ಶ್ರೀ ಭುಲಾಭಾಯಿಯವರು ತಮ್ಮ ಹೇಳಿಕೆಯ ಸಮರ್ಥನೆಗಾಗಿ ಒಂದು ವಿಸ್ತಾರವಾದ ಪತ್ರವನ್ನು ಕಾರ್ಯಕಾರಿ ಮಂಡಲಕ್ಕೆ ಸಾದರಪಡಿಸಿದರು. ಸಂಸ್ಥಾನದ ಪ್ರಶ್ನೆಯನ್ನೂ ಮತ್ತು ಸಮಾಜಸತ್ತಾವಾದಿಗಳ ಪ್ರಶ್ನೆಯನ್ನೂ ಕಾರ್ಯಕಾರಿ ಮಂಡಲದವರು ಪಂ ಜವಾಹರಲಾಲರು ಬಿಡುಗಡೆ ಹೊಂದಿದಮೇಲೆ ಅವರೊಡನೆ ವಿಚಾರ ವಿನಿಮಯಮಾಡಿ ನಿರ್ಣಯಿಸುವಂತೆ ಕಾಣುತ್ತದೆ.

ಡಿಶೆಂಬರ ೨೬ ನೆಯ ತಾರೀಖಿಗೆ ರಾಷ್ಟ್ರಿಯ ಸಭೆಯ ಸುವರ್ಣ ಮಹೋತ್ಸವವನ್ನು ನೆರವೇರಿಸಬೇಕೆಂದು ಗೊತ್ತಾಯಿತು.

ಶ್ರೀಮಚ್ಛಾಂತವೀರ ಸ್ತುತಿ ರತ್ನತ್ರಯ

ಬಬಲೇಶ್ವರ

|| ಶಾರ್ದೂಲ ||

ಶ್ರೀಮಚ್ಛಂಕರಯೋಗತತ್ವವಿದನಂ ಕಾರುಣ್ಯಸಂಪೂರ್ಣನಂ|
ಕಾಮಾರಾತಿ ಮತಾಬ್ಧಿ ಚೇತಸಿಭನಂ ಜ್ಞಾನಾಂಗನಾಸಂಗನಂ ||
ಧೀಮಂತಾಕರಸಾರಸೌಖ್ಯಕರನಂ ಹೃತ್ತಾಪವಿಧ್ವಸ್ತನಂ |
ಪ್ರೇಮಾಧಿಕ್ಯದಿಧ್ಯಾನಿಪೆಂ ಮಮಸುಧಾಶ್ರೀಶಾಂತವೀರೇಶನಂ ||೧||

ಮ|| ವಿ|| ವೃ||

ಮತವೈರಾಗ್ಯನಿಧಾನನಂ ವರಮಹೀಭೃದ್ಧೈರ್ಯನಂ ಶೌರ್ಯನಂ |
ನತದೀನೋತ್ಕರಪಾಲನಂ ಸುಕವಿತಾ ನಿಷ್ಣಾತನಂ ಖ್ಯಾತನಂ ||
ವಿತತಾಚಾರ ಧುರೀಣನಂ ಸುಜನತೀತೋತ್ತಂಸನಂ ಹಂಸನಂ|
ಸತತಂವಂದಿಪೆನೆನ್ನ ಭಾಗ್ಯನಿಧಿಯಂ ಶ್ರೀಶಾಂತವೀರೇಶನಂ ||೨||

ಮ|| ವಿ|| ವೃ||

ವಿಲಸದ್ಭಸ್ಮಶರೀರನಂ ಪರಹಿತಾರ್ಥಾಸಕ್ತನಂ ಶಕ್ತನಂ|
ಮಲಮಾಯಾಂಬುಧಿ ಬಾಡಬಂ ರುಚಿರಪಟ್ಟಾಧ್ಯಕ್ಷನಂ ದಕ್ಷನಂ||
ಖಲದಂಭಾಪಹಶೀಲನಂ ಶಿವನಮೂಲಾದಾತನಂ ಪೂತನಂ||
ನಲಮಿಂ ವಂದಿಪೆನೆನ್ನ ಭಾಗ್ಯನಿಧಿಯಂ ಶ್ರೀಶಾಂತವೀರೇಶನಂ||೩||

ಗುರು ಸೇವಾಸಕ್ತ

ಚನ್ನಕವಿ ಸೂರಕೋಡ.

ಖೋಜಾ ಜನರು ಎಚ್ಚತ್ತರು!

ಮುಸಲ್ಮಾನ ಧರ್ಮದಲ್ಲಿ ಖೋಜಾ ಮತೀಯರ ಧರ್ಮಗುರುಗಳಾದ ನಾ. ಆಗಾಖಾನರ ವಿರುದ್ಧವಾಗಿ ತರುಣ ಖೋಜಾ ಜನರು ಟೀಕೆಗಳನ್ನಾರಂಭಿಸಿದ್ದಾರೆ. ಹಿಂದು ಧರ್ಮ ಗುರುಗಳಿಗಿಂತಲೂ ಮುಸಲ್ಮಾನ ಧರ್ಮ ಗುರುಗಳು ತಮ್ಮ ಶಿಷ್ಯರ ಮೇಲೆ ಹೆಚ್ಚು ಪ್ರಭಾವಶಾಲಿಗಳಾಗಿರುತ್ತಾರೆಂದು ಹೇಳಬಹುದು. ಏಕೆಂದರೆ ಹಿಂದು ಗುರುಗಳು ಧಾರ್ಮಿಕ ಕ್ಷೇತ್ರದಲ್ಲಿಯಷ್ಟೇ ಗುರುಗಳು. ಆದರೆ ಮುಸಲ್ಮಾನ ಗುರುಗಳು ಧಾರ್ಮಿಕ, ಸಾಮಾಜಿಕ ಗುರುಗಳಾಗಿರುವರಲ್ಲದೆ ರಾಜಕೀಯ ಮುಂದಾಳುಗಳೂ ಆಗಬಲ್ಲರು. ಹೀಗಾಗಿ ಅವರು ತಮ್ಮ ಶಿಷ್ಯರ ಮೇಲೆ ಅಖಂಡ ಶಕ್ತಿಯನ್ನು ನಡೆಯಿಸುತ್ತಾರೆ. ನಾ. ಆಗಾಖಾನರೂ ಖೋಜಾ ಜನರ ಅದ್ವಿತೀಯ ನಾಯಕರು. ಇಂಥವರ ಧಾರ್ಮಿಕ ಒತ್ತಾಯದ ಬಗ್ಗೆ ಅವರ ತರುಣ ಶಿಷ್ಯರು ಟೀಕೆಗೆ ಆರಂಭಿಸಿದ್ದಾರೆ. ಕರಾಚಿಯ ಖೋಜಾ ಸುಧಾರಕ ಸಂಸ್ಥೆಯವರು ಈ ಕಾರ್ಯಕ್ಕೆ ಉದ್ಯುಕ್ತರಾಗಿದ್ದು ಮುಂಬಯಿಯ 'ಪೀಪಲ್' ಎಂಬ ವಾರ ಪತ್ರಿಕೆಯಲ್ಲಿಯೂ ಇವರ ವಿಷಯವಾಗಿ ಖೋಜಾ ಜನರಿಗೆ ಎಚ್ಚರ ಕೊಡುವ ಬಗ್ಗೆ ಲೇಖಗಳೂ ಅನಾವೃತ ಪತ್ರಗಳೂ ಪ್ರಕಟವಾಗುತ್ತಲಿವೆ.

ಮುಂಬಯಿ ಲಿಂಗಾಯತ ಫಂಡಿನ ಸ್ಥಾಪನೆ.

ಮತ್ತು

ಅವರ ವ್ಯವಸ್ಥೆ ಹಾಗೂ ಲಿಂಗಾಯತರ ಕರ್ತವ್ಯ.

(ಲೇಖಕರು:—ಶ್ರೀ. ಮಲ್ಲಿಕಾರ್ಜುನ ಅಪ್ಪಾರಾವ ಪಾಟೀಲ ಸೊಲ್ಲಾಪುರ—ಬಾಗಲಕೋಟೆ)

ಸನ್ ೧೯೦೧ ನೇ ಇಸ್ವಿಯಲ್ಲಿ ಕೈ. ಶ್ರೀಮಂತ ರಾವಬಹಾದ್ದೂರ ಅಪ್ಪಾಸಾಹೇಬ ವಾರದ ಸೊಲ್ಲಾಪುರ ಇವರು ಮುಂಬೈಯಲ್ಲಿಯ ಕರ್ನಾಟಕ ವ್ಯಾಪಾರಸ್ಥರ ಸಮ್ಮತಿಯಿಂದ ಲಿಂಗಾಯತ ಫಂಡಿನ ಸ್ಥಾಪನೆಯನ್ನು ಮಾಡಿದರು. ಈ ಫಂಡಿನ ಸಲುವಾಗಿ ಪ್ರತಿಯೊಬ್ಬ ವ್ಯಾಪಾರಸ್ಥನು ಖರೀದಿ ವಿಕ್ರಿ ಮಾಲಿನ ಮೇಲೆ ಲಿಂಗಾಯತ ಫಂಡ ಅಂತಾ ಒಂದು ನಿಯಮದ ಪ್ರಕಾರ ಲೆಕ್ಕವನ್ನು ಮಾಡಿ ಆ ಹಣವನ್ನು ತೆಗೆದಿಡಬೇಕೆಂದು ಗೊತ್ತುವಳಿಯಾಯಿತು. ಈ ರೀತಿಯಿಂದ ಕೂಡಿದ ಹಣದ ವಿನಿಯೋಗವನ್ನು ಉಚ್ಚ ಶಿಕ್ಷಣವನ್ನು ದೊರಕಿಸುವ ಲಿಂಗಾಯತ ಬಡ ವಿದ್ಯಾರ್ಥಿಗಳ ಶಿಷ್ಯವೃತ್ತಿಗೂ, ಇತರ ಸಹಾಯವನ್ನು ಕೊಡಲಿಕ್ಕೂ ಉಪಯೋಗಿಸಬೇಕು. ಮತ್ತು ಇಂಥ ವಿದ್ಯಾರ್ಥಿಗಳ ಸಲುವಾಗಿ ಹಾಗು ಪರ ಊರುಗಳಿಂದ ಬರತಕ್ಕ ವ್ಯಾಪಾರಿ ಮತ್ತು ಬೇರೆ ಸಭ್ಯ ಗೃಹಸ್ಥರ ಸಲುವಾಗಿ, ಅವರ ಭೋಜನ ಮತ್ತು ಇಳಿದುಕೊಳ್ಳುವದಕ್ಕಾಗಿ ಆಗುವ ತೊಂದರೆಯನ್ನು ದೂರಮಾಡುವದರ ಸಲುವಾಗಿ ಒಂದು ಭೋಜನ ಮತ್ತು ವಸತಿಗೃಹವನ್ನು ನಡಿಸಬೇಕೆಂದೂ ಗೊತ್ತುವಳಿಯಾಯಿತು. ಮೇಲೆ ಬರೆದ ಫಂಡಿನ ಬಗ್ಗೆ ಕಾರ್ಯಕಾರಿ ಮಂಡಳದ ಸ್ಥಾಪನೆಯಾಗಿ ಸರ್ವ ಜನರ ಆಗ್ರಹದ ಸಲುವಾಗಿ ಆ ಕಾರ್ಯಕಾರಿ ಮಂಡಳಕ್ಕೆ ಶ್ರೀ. ರಾವಬಹಾದ್ದೂರ ವಾರದ ಇವರು ಅಧ್ಯಕ್ಷರಾದರು. ಈ ಮೇರೆಗೆ ಈ ಫಂಡಿನ ವ್ಯವಸ್ಥೆಯು ಸನ್ ೧೯೧೦ ನೇ ಇಸ್ವಿಯ ವರೆಗೆ ಚನ್ನಾಗಿ ನಡೆಯಿತು. ಪ್ರತಿ ವರ್ಷ ಫಂಡಿನ ಹಣವನ್ನು ವಸೂಲ ಮಾಡುತ್ತಿದ್ದುದರಿಂದ ಆ ಹಣವೂ ಹೆಚ್ಚಾಗಿ ಬೆಳೆಯಿತು. ಮತ್ತು ಆ ಹಣದಲ್ಲಿ ಈ ಫಂಡಿನ ಸಲುವಾಗಿ ಒಂದು ಸ್ಥಿರವಾದ ಕಟ್ಟಡವನ್ನು ಕಟ್ಟುವದರ ಸಲುವಾಗಿ ಸ್ಥಳವನ್ನು ಕೊಳ್ಳುವದು ಗೊತ್ತಾಗಿ ಆ ಪ್ರಕಾರ ಸ್ಥಳವನ್ನು ನೋಡಿಯೂ ಇಟ್ಟಿತು. ಮತ್ತು ಕಟ್ಟಡದ ಬಗ್ಗೆ ಬೇರೆ ಹಣವನ್ನು ಕೂಡಿಸಬೇಕೆಂದು ಗೊತ್ತಾಗಿ, ಅದರ ಸಲುವಾಗಿ ಶ್ರೀ. ಅಪ್ಪಾಸಾಹೇಬ ಇವರು ಬೇರೆ ಹಣವನ್ನೂ ಕೊಟ್ಟರು. ಆದರೆ ಇದೇ ವೇಳೆಯಲ್ಲಿ ಅವರು ಮುಂಬೈ ವಸತಿಯಲ್ಲಿ ಬೇನೆಬಿದ್ದು ೧೯೧೧ನೇ ಜನವರಿ ತಿಂಗಳಲ್ಲಿ ಶಿವೈಕ್ಯರಾದರು. ಆಗಿನಿಂದ ಈ ಫಂಡಿಗೆ ಇಳಿತರದ ಕಳೆಯು ಹತ್ತಿತು.

ಅನಂತರ ಈ ಫಂಡಿನ ಹಣವು ಆಯಾ ವ್ಯಾಪಾರಸ್ಥರಿಂದ ವಸೂಲಾಗಿ ಅವರಲ್ಲಿಯೇ ಬಡ್ಡಿಗಿಡುತ್ತ ಬಂದಿದೆ, ಇತ್ತೀಚೆಗಂತೂ ವ್ಯಾಪಾರದ ಮಂದಿಯ ಕಾಲದಲ್ಲಿ ಹೀಗೆ ಜಮಾಯಿದ್ದ ಹಣವು ಫಂಡಿನಲ್ಲಿ ಜಮೆಯಾಗುವದಿಲ್ಲ. ಆದ್ದರಿಂದ ಫಂಡಿಗೆ ಇಳಿತರದ ಕಳೆಯು ಹತ್ತಿದ್ದು ಬಹಳ ದುಃಖದ ಮಾತಾಗಿದೆ. ಹೆಸರಿಗೆ ಮಾತ್ರ ಅಧ್ಯಕ್ಷ, ಉಪಾಧ್ಯಕ್ಷ, ಸೆಕ್ರೆಟರಿ ಮೊದಲಾದ ಅಧಿಕಾರಿಗಳು ಉಳಿದಿರುವರು. ಅವರು ತಮ್ಮ ಕರ್ತವ್ಯವನ್ನು ಯೋಗ್ಯ ರೀತಿಯಿಂದ ಮಾಡುವದಿಲ್ಲ.

ಐದಾರು ವರ್ಷದ ಪೂರ್ವದಲ್ಲಿ ಕೆಲವು ವ್ಯಾಪಾರಿಗಳೂ ಮತ್ತು ಶ್ರೀ. ಬಾಳಾಸಾಹೇಬ ಡಾಂಗೆ ಪ್ರಭೃತಿಗಳೂ ವ್ಯಾಪಾರಸ್ಥರ ವ ಸವ್ರೊಲಿಸಿ ಅವರ ಕಡೆಗಿದ್ದ ಫಂಡಿನ ಹಣವನ್ನು ಅವರ ಇಚ್ಛೆಗನುಸಾರವಾಗಿಯೇ ಅವರೆಷ್ಟು ಕೊಟ್ಟರೋ ಅಷ್ಟೇ ಹಣವನ್ನು ವಸೂಲಮಾಡಿ ಈ ಸಂಸ್ಥೆಯನ್ನು "ಚಾರಿಟೆಬಲ್ ಅಕ್ಟ" ದಂತೆ ರಜಿಸ್ಟರ ಮಾಡಿಸಿದ್ದು ಮಹತ್ವದ ಮಾತಾಗಿದೆ. ವಸೂಲ ಮಾಡಿದ ಸುಮಾರು ೨೫೦೦೦ ರೂಪಾಯಿಗಳನ್ನು ಬ್ಯಾಂಕಿನಲ್ಲಿ "ಇಡುಗಂಟೆಂದು" ಇಡಲಾಗಿದೆ. ಯಾರ ಕಡೆಯಿಂದ ಫಂಡಿನ ಹಣವು ವಸೂಲಾಗದೆ ಉಳಿದಿರುವದೋ ಅಂಥ ಹಣವನ್ನು ವಸೂಲ ಮಾಡುವ ಬಗ್ಗೆ ಇವತ್ತಿಗೂ ವ್ಯವಸ್ಥೆಯಾಗಿಲ್ಲ.

ಪ್ರಮುಖ ವ್ಯಾಪಾರಸ್ಥರಿಂದ ಬರತಕ್ಕ ಹಣವು ಇವತ್ತಿಗೂ ವಸೂಲಾಗದೆ ಹಾಗೇ ಉಳಿದಿರುತ್ತದೆ. ಅದು ೪೦-೫೦ ಸಾವಿರ ರೂಪಾಯಿ ಆಗಬಹುದು. ಬೇರೆ ಸಣ್ಣ ಸಣ್ಣ ರಕಮುಗಳು ಸಹ ನಡೆಯುವ ವರ್ಷದ ವರೆಗೆ ವಸೂಲಾದರೆ ಒಟ್ಟು ಒಂದು ಲಕ್ಷ ರೂಪಾಯಿಗಳ ಮೇಲೆ ಆಗಬಹುದು. ಇಂಥ ಎಲ್ಲ ಹಣವನ್ನು ವಸೂಲ ಮಾಡುವದು ಸಮಾಜದ ಹಾಗು ಶಿಕ್ಷಣದ ಏಳ್ಗೆಯನ್ನು ಮಾಡುವ ದೃಷ್ಟಿಯಿಂದ ಅಲ್ಲಿಯ ವ್ಯಾಪಾರಿಗಳ ಹಾಗು ಕಾರ್ಯಕಾರಿ ಮಂಡಳದ ಪವಿತ್ರ ಕರ್ತವ್ಯವಿರುವದು. ಆದರೆ ಇತ್ತೀಚೆಗೆ ವಸೂಲಿ ಕೆಲಸವು ನಿರ್ಭಿಡೆಯಿಂದ ಸಾಗುವದಿಲ್ಲ. ಮತ್ತು ಕಾರ್ಯಕಾರಿ ಮಂಡಳದ ಪೈಕಿ ಎಷ್ಟೋ ಹಣವು ಯೋಗ್ಯ ರೀತಿಯಿಂದ ಲೆಕ್ಕದಲ್ಲಿ ತೋರಿಸಿ ಫಂಡಿನಲ್ಲಿ ಜಮೆಯಾಗದಿದ್ದುದರಿಂದ ಕೆಲವು ವ್ಯಾಪಾರಸ್ಥರು ತಮ್ಮ ಕಡೆಗಿದ್ದ ಹಣವನ್ನು ಹಿಡಿದಿಟ್ಟಿರುತ್ತಾರೆ. ಲೆಕ್ಕ ಪತ್ರವನ್ನು ನೋಡದೆ ಅವರವರು ತಮ್ಮ ಇಚ್ಛೆಯಂತೆ ಕೊಟ್ಟ ಹಣವನ್ನು ತೆಗೆದುಕೊಂಡು ಅವರಿಂದ ಬರುವದೇನೂ ಇಲ್ಲವೆಂದು ಅವರನ್ನುವದು ಅಯೋಗ್ಯವದೆ. ಲೆಕ್ಕದ ಪ್ರಕಾರ ಅವರವರ ಕಡೆಯಿಂದ ಹಣ ವಸೂಲ ಮಾಡಿಕೊಳ್ಳಬೇಕೆಂದು ಕೆಲವರನ್ನುವದು ಯೋಗ್ಯ ತೋರುವದು. ಆದರೆ ಇಂಥ ಒಂದಕ್ಕೊಂದು ವಿರೋಧದಿಂದ ಹಣ ವಸೂಲಾಗುವದೂ ಇಲ್ಲ. ಮತ್ತು ಯಾವ ಕಾರ್ಯವಾಗುವ ಸಂಭವವೂ ಇಲ್ಲ.

ಎಲ್ಲ ಜನರ ಆದರಕ್ಕೆ ಪಾತ್ರರಾದ ಶ್ರೀಮನ್ನಿರಂಜನ ಬೀಳೂರು ಮಹಾಸ್ವಾಮಿಗಳು ಒಂದುವೇಳೆ ಈ ಕಾರ್ಯದಲ್ಲಿ ಲಕ್ಷ ಕೊಟ್ಟದ್ದಾದರೆ, ಆಗಿಂದಾಗ್ಗೆ ಆ ಹಣವು ವಸೂಲಾಗುವದು. ಆದರೆ ಅವರ ಪ್ರಕೃತಿಯು ಕಡೆಗೆ ಹಾಗೂ ವಯೋಮಾನದ ಕಡೆಗೆ ನೋಡಿದರೆ ಈ ಮಾತು ಶಕ್ಯ ತೋರುವದಿಲ್ಲ. ಆದ್ದರಿಂದ ಯಾರಾದರೂ ದೊಡ್ಡ ಮನುಷ್ಯರು ಈ ಕಾರ್ಯದ ಕಡೆಗೆ ಲಕ್ಷಕೊಟ್ಟು ಹಣ ವಸೂಲ ಮಾಡಿ ಫಂಡಿನ ಸುವ್ಯವಸ್ಥೆಯನ್ನು ಮಾಡುವ ಅಗತ್ಯವಿರುತ್ತದೆ. ವೇಳೆಗೆ ಸರಿಯಾಗಿ ಈ ಕೆಲಸವಾಗದಿದ್ದರೆ, ಆರ್ಥಿಕ ದುಃಸ್ಥಿತಿಯಿಂದ ಫಂಡಿನ ಸಲುವಾಗಿ ವಸೂಲಾಗತಕ್ಕ ಹಣವು, ಅವರವರ ಕಡೆಗೇ ಉಳಿದು ಹೋಗಬಹುದು. ಹಾಗೂ ಹಣವು ಬೆಳೆದಹಾಗೆ ಅದನ್ನು ಕೊಡುವ ಇಚ್ಛೆಯೂ ಆಗಲಿಕ್ಕಿಲ್ಲ. ಮತ್ತು ಅನೇಕ ತೊಂದರೆಗಳನ್ನು ಹೇಳಿ ಹಣ ಕೊಡುವದನ್ನು ನಿಲ್ಲಿಸಲಿಕ್ಕೂ ಯತ್ನಿಸಬಹುದು. ಇಂಥ ರೀತಿಯಿಂದ ಎಷ್ಟೋ

ಸ್ಥಳಗಳಲ್ಲಿ ಎಷ್ಟೋ ಫಂಡುಗಳು ಹೆಸರಿಲ್ಲದೇ ಹೋದ ಎಷ್ಟೋ ಉದಾಹರಣೆಗಳುಂಟು.

ಕಡೆಗೆ ಲಿಂಗಾಯತ ಜನತೆಗೆ ಆಗ್ರಹದ ವಿನಂತಿಯೇನಂದರೆ- ಯಾವ ಸದಸದ್ವಿವೇಕ ಬುದ್ಧಿಯಿಂದ ಈ ಫಂಡು ಕೂಡಿಸುವದರಲ್ಲಿ ಬಂದಿತೋ ಅಂಥ ಈ ಫಂಡಿನ ವಿನಿಯೋಗವು ಮೂಲ ಉದ್ದೇಶಕ್ಕನುಸರಿಸಿ ಮಾಡುವದು ತಮ್ಮೆಲ್ಲರ ಕರ್ತವ್ಯವಿರುತ್ತದೆ. ಒಬ್ಬರ ಮೇಲೊಬ್ಬರು ಹಾಕಿ ಕೆಲಸವನ್ನು ಮುಂದೂಡುತ್ತ ಹೋಗದೆ, ತಮ್ಮ ತಮ್ಮ ಕಡೆಗಿದ್ದ ಫಂಡಿನ ಹಣವನ್ನು ಫಂಡಿನ್ಲಿ ಜಮೆ ಮಾಡಿ ಅನ್ಯರಿಂದ ವಸೂಲ ಮಾಡುವ ಯತ್ನಮಾಡಿದಲ್ಲಿ ಸುಲಭವಾಗಿ ಹಣ ವಸೂಲಾಗುವದು. ಸ್ಪಷ್ಟವಾಗಿ ಹೇಳಬೇಕೆಂದರೆ ತಮ್ಮ ಕಡೆಗಿದ್ದ ಫಂಡಿನ ಹಣವು ತಮ್ಮ ಸ್ವಂತ ಉತ್ಪನ್ನದೊಳಗಿಂದ ತೆಗೆದಿಟ್ಟದ್ದಿರದೆ, ಇನ್ನಿತರ ವ್ಯಾಪಾರಸ್ಥರಿಂದ ತೆಗೆದುಕೊಂಡ ಧರ್ಮಾದಾಯದ ಹಣವಿದ್ದು, ಅದನ್ನು ಕೊಟ್ಟು ಫಂಡಿನ ಋಣದೊಳದಿಂದ ಮುಕ್ತರಾಗುವದು ಅಗತ್ಯವಿರುವದು. ಇಂಥ ಧರ್ಮಾದಾಯದ ಹಣವನ್ನು ಇಟ್ಟುಕೊಂಡು ತಮ್ಮ ಇಚ್ಛೆಯಂತೆ ಅನೇಕ ಕೆಲಸಗಳಿಗೆ ಖರ್ಚು ಮಾಡುವದು ಅಥವಾ ಅದಕ್ಕೆ ಆಶೆಪಡುವದು, ಇದರಿಂದ ಯಾರದೂ ಹಿತವಾಗಿಲ್ಲ. ಅಹಿತವಾದ ನೂರಾರು ಉದಾಹರಣೆಗಳು ತಮ್ಮೆಲ್ಲರಿಗೆ ಗೊತ್ತುಂಟು. ಆದ್ದರಿಂದ ಇನ್ನು ಮುಂದೆ ಯಾವ ಕಾರಣದಿಂದಲೂ ಫಂಡಿನ ಹಣವನ್ನು ಇಟ್ಟುಕೊಳ್ಳಬಾರದು. ಈ ನಿಧಿಯು "ಚಾರಿಟೇಬಲ್ ಆಕ್ಟ" ದಂತೆ ರಜಿಸ್ಟರ ಆಗಿದ್ದು ಯಾವ ಹಿತ ಸಂಬಂಧವುಳ್ಳ ಮನುಷ್ಯನಿಗಾದರೂ ಕಾಯುದೆಯಿಂದ ಹಣವನ್ನು ವಸೂಲ ಮಾಡಿಕೊಳ್ಳುವದಕ್ಕೆ ಅಧಿಕಾರ ಪ್ರಾಪ್ತವಾಗುವದು. ಅಥವಾ ಮೆ "ಎಡ್ವೋಕೇಟ್ ಜನರಲ್" (ಹಾಯ ಕೋರ್ಟದ ಸರಕಾರಿ ವಕೀಲ) ಇವರ ಕಡೆಗೆ ಯಾರೇ ಮಾಹಿತಿ ಕೊಟ್ಟರೂ ಅವರಿಗೆ ಕಾಯುದೆಯಿಂದ ಎಲ್ಲರಿಂದಲೂ ಪ್ರಾರಂಭದಿಂದ ಲೆಕ್ಕ ತೆಗೆದುಕೊಂಡು ಹಣ ವಸೂಲ ಮಾಡಿಕೊಳ್ಳುವ ಪೂರ್ಣ ಅಧಿಕಾರವು ಪ್ರಾಪ್ತವಾಗುತ್ತದೆ. ಆದ್ದರಿಂದ ಅಷ್ಟರ ವರೆಗೆ ಈ ಮಾತು ಹೋಗಗೊಡದೆ, ತಾವೇ ತಮ್ಮ ಕರ್ತವ್ಯವನ್ನು ಮಾಡಿ ಶ್ರೇಯಸ್ಸಂಪಾದನೆ ಮಾಡಿಕೊಳ್ಳಬೇಕು. ತಮ್ಮ ಫಂಡಿನ ಹಣವು ದುರುಪಯೋಗವಾಗುತ್ತದೆಂಬ ಮಾತು ಎಲ್ಲರಿಗೂ ಹಾಸ್ಯಾಸ್ಪದವಾದ ಮಾತಾಗಿದೆ.

ಬಹು ಹಿಂದುಳಿದ ಅನೇಕ ಜಾತಿಯವರು ಕೂಡಾ ತಮ್ಮ ತಮ್ಮ ಧರ್ಮದ ಸಲುವಾಗಿ ಸ್ವತಂತ್ರವಾಗಿ ಸ್ಥಳ ತೆಗೆದುಕೊಂಡು ಭೋಜನಗೃಹವನ್ನೇರ್ಪಡಿಸಿ ವಿದ್ಯಾರ್ಥಿಗಳಿಗೆ ಶಿಷ್ಯವೃತ್ತಿಯನ್ನಿಟ್ಟು ತಮ್ಮ ತಮ್ಮ ಧರ್ಮದ ಏಳ್ಗೆಯನ್ನು ಮಾಡುತ್ತಲಿರುವರು. ಆದರೆ ತಾವು ಮುಂದಾಳುಗಳೂ, ವ್ಯವಹಾರ ಕುಶಲರೂ, ಅನೇಕ ವರ್ಷಗಳ ವರೆಗೆ ಮುಂಬೈಯಲ್ಲಿದ್ದವರೂ ಆಗಿ ತಮ್ಮಿಂದ ಸಮಾಜೋನ್ನತಿಯ ಬಗ್ಗೆ ಯಾವ ಕಾರ್ಯವೂ ಆಗದಿರುವದು ದುಃಖದ ಮಾತಾಗಿದೆ.

ಇವತ್ತಿಗೆ ೨೫ ವರ್ಷಗಳಾಗಿ ಹೋದವು. ಸಮಾಜದ ಸಲುವಾಗಿ ಒಂದು ಕಟ್ಟಡವನ್ನು ಕಟ್ಟಿಸುವದಕ್ಕಾಗಿ ನೌರೋಜ ರಸ್ತೆಯಲ್ಲಿ ತೆಗೆದುಕೊಂಡ ಸ್ಥಳವು ಹಾಗೇ ಉಳಿದಿರುತ್ತದೆ. ಇಷ್ಟೇ ಅಲ್ಲದೆ ಆ ಸ್ಥಳಕ್ಕೆ ಪ್ರತಿ ವರ್ಷ ಮ್ಯು. ಪಟ್ಟಿಯನ್ನು ತುಂಬುತ್ತ ಬಂದಿರುವಿರಿ. ಆದರೂ ಆ ಸ್ಥಳದ ಮೇಲೆ ಕಟ್ಟುವ ಕೆಲಸವನ್ನು ಮಾಡುವ ಮನಸ್ಸು ಕೂಡ ಆಗದಿರುವದು ತಮ್ಮೆಲ್ಲರಿಗೆ ಎಷ್ಟು ಹಾಸ್ಯಾಸ್ಪದವಾದ ಮಾತಾಗಿದೆ? ಇಂಥ ಸ್ವತಂತ್ರ ಸ್ಥಳವಿಲ್ಲದ್ದರಿಂದ ಯಾರಾದರೂ ಬರ ಹೋಗುವವರ ಆದರ ಸತ್ಕಾರ ಮಾಡುವದಾದರೆ ಎರಡನೆ ಸಮಾಜದ ವ್ಯವಸ್ಥಾಪಕರ ಕಡೆಗೆ ಹೋಗುವ ಪ್ರಸಂಗ ಬರುತ್ತದೆ ಆದ್ದರಿಂದ ವಿನಯಪೂರ್ವಕವಾಗಿ ಬೇಡಿಕೊಳ್ಳುವದೇನಂದರೆ, ಮೇಲೆ ಬರೆದ ಸಂಗತಿಯನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ನಿಮ್ಮ ಕರ್ತವ್ಯಕ್ಕೆ ಎಚ್ಚರರಾಗಿರಿ. ಈ ನಿಧಿಯು ಸ್ಥಾಪನೆಯ ಕಾಲಕ್ಕೆ ನಾನು ಅಲ್ಲಿಯೇ ಇದ್ದೆನಾದ್ದರಿಂದ ಆ ನಿಧಿಯ ಸಲುವಾಗಿ ನನಗೆ ಹೆಚ್ಚು ನನ್ನದೆಂಬ ಭಾವನೆಯಾಗಿ, ಆ ನಿಧಿಯು ಹೆಚ್ಚು ಶ್ರೇಯಾಭಿವೃದ್ಧಿಯನ್ನು ಹೊಂದಲೆಂಬ ಸದಿಚ್ಛೆಯಿಂದ ಮೇಲಿನ ಸಂಗತಿಯನ್ನು ಬರೆದಿರುವೆನು. ಇದರಲ್ಲಿ ಯಾರಿಗೂ ದುಃಖ ಕೊಡುವ ಉದ್ದೇಶವಿಲ್ಲ. ನಮ್ಮ ಸಮಾಜವು ಸರ್ವಭಾಗದಿಂದ ಉನ್ನತಿಯಾಗಲೆಂಬ ಭಾವನೆಯಿಂದ ಈ ಯತ್ನವನ್ನು ಮಾಡಿದ್ದೇನೆ.

ಶ್ರೀ. ಶಂಕ್ರಪ್ಪ ಸಕ್ರಿ ವ ಮುಚಖಂಡೆಪ್ಪ ಕುಪಸ್ತ ಇವರು ಮಾತ್ರ ತಮ್ಮ ಕಡೆಗೆ ಇದ್ದ ಜಮಾ ಹಣವನ್ನು ತುಂಬಿರುತ್ತಾರೆ. ಇದೇ ಪ್ರಕಾರ ಇತರ ಜನರಾದರು ತುಂಬಿ ತಮ್ಮ ಕರ್ತವ್ಯವನ್ನು ಮಾಡಬೇಕಾಗಿ ವಿನಂತಿ ಇದೆ.

ಆರ್ಯ ಸಮಾಜದ ಮುಂದಾಳುವಿನ ಕೊಲೆ.

ಕಲಕತ್ತೆಯ ಶ್ರೀ ಪನ್ನಾಲಾಲ ಲಾಲಾ ಎಂಬ ಆರ್ಯ ಸಮಾಜದ ಪ್ರಮುಖರನ್ನು ಕೊಲೆ ಮಾಡಿದ್ದರಿಂದ ಜನರಲ್ಲಿ ಬಹಳೇ ಗದ್ದಲವುಂಟಾಗಿದೆ. ಶ್ರೀ ಪನ್ನಾಲಾಲರು ತಮ್ಮ ಮನೆಯಲ್ಲಿ ಮಲಗಿಕೊಂಡಿರವಾಗ ಕೊಲೆಗಡಕನು ಚೂರಿಯಿಂದ ಇರಿದು ಕೊಂದನು. ಆಗ ಅವರ ಪತ್ನಿಯು ಎದುರಿಸಹೋಗಲು ಕೊಲೆಗಡಕನು ಕತ್ತಿಯಿಂದ ಅವಳ ಒಂದು ಕೈಯನ್ನು ಕಡಿದು ಹಾಕಿ ಪಾರಾದನು. ಶ್ರೀಮತಿ ಲಾಲಾರವರು ಈಗ ಆಸ್ಪತ್ರಿಯಲ್ಲಿದ್ದು ಅವರ ಪ್ರಕೃತಿಯು ಸುಧಾರಿಸಹತ್ತಿದೆ.

ಜಾತಕ ಪತ್ರಿಕೆ.

ತಮ್ಮ ಅಥವಾ ತಮ್ಮ ಮಕ್ಕಳ ಜನನ ಕಾಲ, ತಾರೀಖು ತಿಂಗಳು ಇಸವಿಯನ್ನು ಕಳುಹಿಸಿದರೆ ಎಲ್ಲಾ ಗಣಿತಗಳನ್ನು ಮಾಡಿಕೊಂಡು, ಬಾಲಾರಿಷ್ಟ, ಮಾತಾ ಪಿತ್ರಾರಿಷ್ಟ ದೋಷಗಳನ್ನು ಶೋಧಿಸಿ, ದೋಷವಿದ್ದರೆ ಶಾಂತಿ ಕ್ರಮವನ್ನು ತಿಳಿಸಿ ಆಯುಷ್ಯಾಂತ್ಯವವರೆಗೆ ದಶಾ ಫಲಗಳನ್ನು ಕಂಟಕ ಕಾಲದಲ್ಲಿ ಮಾಡತಕ್ಕ ಶಾಂತಿ ಕ್ರಮಗಳನ್ನು ಬರೆದು ಕಳುಹಿಸುತ್ತೇವೆ. ಮುಂಗಡ ಹಣ ಕಳುಹಿಸಬೇಕು.

ಜಾತಕ ಪತ್ರಿಕೆ ಚಾರ್ಜ ರೂ. ೧ ಆ. ೪ ಮಾತ್ರ.

"ಶ್ರೀ ಸೂರ್ಯ ಜೀವ ರಕ್ಷ" ತಾಯಿತ.

ಗ್ರಹಣ ಕಾಲದಲ್ಲ ಅಮೂಲ್ಯವಾದ ಮೂಲಿಕೆಗಳಿಂದ ತಯಾರಿಸಿದೆ. ಹುಟ್ಟಿದ ಮಕ್ಕಳು ಸಾಯುವುದು ಗರ್ಭಸ್ರಾವವಾಗುವುದು ಇಂತಹ ಸ್ತ್ರೀಯರು ಇದನ್ನು ಧರಿಸಿದರೆ ಹುಟ್ಟಿದ ಮಕ್ಕಳು ಸಾಯುವದು ಗರ್ಭ ಸ್ರಾವವಾಗುವುದು, ನಿವಾರಣೆಯಾಗುವುದು. ಬಾಲಾರಿಷ್ಟ ದೋಷವಿರುವ ಮಕ್ಕಳು ಧರಿಸಿದರೆ ಖಂಡಿತ ಗುಣಬರುವುದು. ೧ ತಾಯಿತ ಚಾರ್ಜು ರೂ. ೧ (ಹಣ ಮುಂಗಡ)

ವಿಳಾಸ:— ಮ್ಯಾನೇಜರ್ ಶ್ರೀ ಸೂರ್ಯ ಜ್ಯೋತಿಷ್ಯ ಮಂದಿರ ಸರಗೂರು, ಪೋಸ್ಟು. ಡಿಸ್ಟ್ರಿಕ್ಟ ಮೈಸೂರು.



ಶಾ. ಶ. ೧೮೫೭ ನೆಯ ಶ್ರಾವಣ ಶು|| ೬ ಸೋಮವಾರ.

ಹಿಂದಿನ ಹದಿನೈದು ವರುಷ.

ಹಿಂದುಸ್ಥಾನದ ಈ ಹಿಂದಿನ ಹದಿನೈದು ವರುಷಗಳ ಕಡೆಗೆ ನಾವು ತಿರುಗಿ ನೋಡಬೇಕಾದುದು ಅತ್ಯಗತ್ಯ. ಏಕೆಂದರೆ, ಈ ಹದಿನೈದು ವರುಷಗಳ ಅನುಭವವು ನಮ್ಮ ಮುಂದಣ ಕಾರ್ಯಕಲಾಪಗಳಿಗೆ ಬಹು ಸಹಾಯ ಮಾಡುವುದು.

ಹಿಂದುಸ್ಥಾನದ ರಾಜಕಾರಣದಲ್ಲಿ ಅತ್ಯಂತ ಪ್ರಕಾಶಮಯರಾಗಿದ್ದ ಲೋಕಮಾನ್ಯ ಬಾಲ ಗಂಗಾಧರ ಟಿಳಕರು ಕ್ರಿ. ಶ. ೧೯೨೦ ನೆಯ ಅಗಸ್ತ ೧ ನೆಯ ತಾರೀಖಿನ ದಿನ ಪರಲೋಕವಾಸಿಗಳಾದರು. ಆ ಮಹಾ ರಾಷ್ಟ್ರವೀರರು ನಮ್ಮನ್ನಗಲಿ ಹದಿನೈದು ವರ್ಷಗಳಾದವು. ಹಿಂದುಸ್ಥಾನದ ರಾಜಕಾರಣಕ್ಕಿದ್ದ ತೀವ್ರತರವಾದ ಒಂದು ದಿವ್ಯ ಶಕ್ತಿಯು ಲೋಪವಾಗಿ ಹದಿನೈದು ವರುಷಗಳಾದವು.

ಮಹಾತ್ಮಾ ಗಾಂಧಿಯವರು ಹಿಂದುಸ್ಥಾನದ ರಾಜಕಾರಣದಲ್ಲಿ ಮುಂದಾಳುಗಳಾಗಿ ನಿಂತುದೂ ಅಂದೇ. ಕ್ರಿ. ಶ: ೧೯೨೦ ನೆಯ ಅಗಸ್ಟ ೧ ನೆಯ ತಾರೀಖಿನ ದಿನವೇ ಮಹಾತ್ಮಾ ಗಾಂಧಿಯವರು ಅಸಹಕಾರದ ಆಂದೋಲನವನ್ನು ಪ್ರಾರಂಭಿಸಿದರು. ಈ ದೇಶದ ರಾಜಕಾರಣದಲ್ಲಿ ಅಸಹಕಾರದ ಹೊಸ ರೀತಿಯು ಪ್ರಾರಂಭವಾಗಿ ಹದಿನೈದು ವರುಷಗಳಾದವು. ಹಿಂದುಸ್ಥಾನದ ರಾಜಕಾರಣವು ಲೋಕಮಾನ್ಯರನ್ನು ಬಿಟ್ಟು ಮಹಾತ್ಮರನ್ನು ಹಿಂಬಾಲಿಸಿ ಹದಿನೈದು ವರುಷಗಳಾದವು.

ಈ ಅವಧಿಯಲ್ಲಿ ಸಂಭವಿಸಿದ ಮುಖ್ಯ ಸಂಗತಿಗಳಾವುವು? ಅವುಗಳಿಂದ ರಾಷ್ಟ್ರಕ್ಕೆ ಬಂದ ಅನುಭವವಾವುದು ? ಈಗ ಹಿಂದುಸ್ಥಾನದ ರಾಜಕಾರಣವು ಯಾವ ಮಾರ್ಗವನ್ನನುಸರಿಸಲು ಯೋಗ್ಯವಾದುದಾಗಿದೆ ? ಇನ್ನು ಮುಂದೆ ಹೇಗೆ ಹೆಜ್ಜೆಯನ್ನಿಡಬೇಕು ? ಎಂಬಂಶಗಳನ್ನು ಯೋಚಿಸಬೇಕಾದುದು ಯುಕ್ತವಲ್ಲವೆ ?

ಕ್ರಿ. ಶ. ೧೯೦೫ ರಲ್ಲಿ ವಂಗ ವಿಭಜನೆಯಿಂದ ನಿಜವಾದ ರಾಜಕೀಯ ಆಂದೋಲನವು ಪ್ರಾರಂಭವಾಯಿತು. ಹಿಂದುಸ್ಥಾನದಲ್ಲೆಲ್ಲಾ ವ್ಯಾಪಿಸಿದ ರಾಜಕೀಯ ಆಂದೋಲನಗಳಲ್ಲಿ ಇದೇ ಮೊದಲನೆಯದು ಅಂದಿನಿಂದಲೇ ರಾಷ್ಟ್ರೀಯ ಭಾವನೆಯು ಭಾರತೀಯರಲ್ಲಿ ಬೆಳೆಯಲಾರಂಭಿಸಿತು. ಆ ಭಾವನೆಯಿಂದ ರಾಜಕೀಯ ಚಟುವಟಿಕೆಗಳೂ ಹೆಚ್ಚುತ್ತ ಬಂದವು. ಆದರೆ ಅವೆಲ್ಲ ಮುಖ್ಯವಾಗಿ ಪಾಶ್ಚಾತ್ಯ ರಾಜಕಾರಣದ ರೀತಿ ನೀತಿಗಳನ್ನೇ ಅವಲಂಬಿಸಿದ್ದವು.

ಕೀರ್ತಿಶೇಷರಾದ ಗೋಖಲೆಯವರು ಮತ್ತು ಲೋಕಮಾನ್ಯ ಟಿಳಕರು ಬೇರೆ ಬೇರೆ ಪಂಗಡದವರಾಗಿ ಹೋರಾಡಿದರೂ ಅವರ ರೀತಿ ನೀತಿಗಳೆಲ್ಲಾ ಒಂದೇ. ಅವು ಪಾಶ್ಚಾತ್ಯ ಪದ್ಧತಿಯನ್ನೇ ಅನುಸರಿಸಿದ್ದವು. ಗೋಖಲೆಯವರು ಸೌಮ್ಯ ಮಾರ್ಗಾವಲಂಬಿಗಳಾಗಿದ್ದರು ಟಿಳಕರಾದರೋ ಉಗ್ರಗಾಮಿಗಳಾಗಿದ್ದರು. ಈ ಉಭಯ ರೀತಿಯ ಚಟುವಟಿಕೆಗಳೂ ಹದಿನೈದು ವರುಷ ಪ್ರಬಲವಾಗಿಯೇ ಜರುಗಿ ೧೯೨೦ ರಲ್ಲಿ ಲುಪ್ತವಾದವು.

ಗಾಂಧೀಜಿಯವರ ಅಸಹಕಾರ ಮಾರ್ಗವು ರಾಜಕಾರಣದಲ್ಲಿ ಹೊಸದು. ಇದು ದಯೆ ಮತ್ತು ಶಾಂತಿಗಳಿಂದ ಕೂಡಿದುದು. ಇದಕ್ಕೆ ರಾಜಕಾರಣದ ಸಾತ್ವಿಕ ಮಾರ್ಗವೆನ್ನಬಹುದು. ಗಾಂಧೀಜಿಯವರು ಅದ್ಭುತವಾದ ಆತ್ಮವೀರರು. ಇವರು ತಮ್ಮ ದಿವ್ಯ ತೇಜದಿಂದ ಭಾರತೀಯರಲ್ಲಿ ಅಭೂತಪೂರ್ವವಾದ ರಾಷ್ಟ್ರಾಭಿಮಾನವುಂಟಾಗುವಂತೆ ಮಾಡಿದರು. ಆದ್ದರಿಂದ ರಾಷ್ಟ್ರಕ್ಕಾಗಿ ಅಸಂಖ್ಯ ಭಾರತೀಯರು ಚಿರಸ್ಮರಣೀಯವಾದ ಸ್ವಾರ್ಥತ್ಯಾಗವನ್ನು ಮಾಡಿದರು. ಈ ಹದಿನೈದು ವರುಷಗಳ ಅಸಹಕಾರದ ಆಂದೋಲನದಿಂದ ಭಾರತೀಯರಲ್ಲಿದ್ದ ಅನೇಕ ದೋಷಗಳು ಎಷ್ಟೋ ಮಟ್ಟಿಗೆ ನಿವಾರಣೆಯಾದವು. ರಾಷ್ಟ್ರದ ರಾಜಕೀಯ, ಸಾಮಾಜಿಕ, ಸಾಂಪತ್ತಿಕ ವಿಷಯಗಳಲ್ಲಿ ಮಹತ್ತರವಾದ ವಿಚಾರ ಕ್ರಾಂತಿಯುಂಟಾಯಿತು. ಇದರಿಂದ ಗಾಂಧೀಜಿಯವರು ಭಾರತೀಯರಿಗೆ ಯುಗಪುರುಷರಾಗಿಯೇ ಪರಿಣಮಿಸಿದರು.

...ವರೆ ರಾಜಕೀಯ ಸೌಲಭ್ಯಗಳೇನೂ ಭಾರತೀಯರಿಗೆ ದೊರೆಯಲಿಲ್ಲ. ಬ್ರಿಟಿಶ್ ಸರಕಾರದಿಂದ ರಾಜಕೀಯ ಸೌಲಭ್ಯವನ್ನು ಪಡೆದುಕೊಳ್ಳಲು ಗಾಂಧೀಜಿಯವರ ಅಸಹಕಾರ ಮಾರ್ಗವು ಅನುಕೂಲವಲ್ಲವೆಂದೇ ಬಹು ಜನರಿಗೆ ಮನವರಿಕೆಯಾಯಿತು. ಅದರಿಂದಲೇ ಅಸಹಕಾರ ಸಂಸ್ಥಾಪಕರಾದ ಗಾಂಧೀಜಿಯವರೇ ಕೌನ್ಸಿಲ್ಲುಗಳಲ್ಲಿ ಪ್ರವೇಶಿಸಲು ಒಪ್ಪಿಗೆಯನ್ನು ಕೊಟ್ಟು ತಾವು ರಾಜಕಾರಣದಿಂದ ನಿವೃತ್ತರಾದರು.

ಹದಿನೈದು ವರುಷಗಳ ಹಿಂದೆ ಅಸಹಕಾರವನ್ನು ಸ್ವೀಕರಿಸಿದ ರಾಷ್ಟ್ರೀಯ ಸಭೆಯು ಈ ವರೆಗಿನ ಅನುಭವದಿಂದ ಅದು ಅನುಕೂಲವಲ್ಲವೆಂದೇ ಈಗ ಪರಿತ್ಯಜಿಸಿದ್ದಾಗಿದೆ. ವಂಗ ವಿಭಜನೆಯ ಕಾಲಕ್ಕೆ ಮೊಳೆತು ಅಸಹಕಾರದ ಯುಗದಲ್ಲಿ ಬೆಳೆದಿದ್ದ ಕ್ರಾಂತಿಕಾರಕರ ತಾಮಸ ಕೃತ್ಯವಂತೂ ನಿಂದ್ಯವಾದುದೇ ಸರಿ. ಅದು ಇತ್ತೀಚೆಗೆ ಲೋಪವಾಗುತ್ತಿದ್ದುದು ಶ್ರೇಯಸ್ಕರವೇ ಸರಿ.

ಈ ಪ್ರಕಾರ ಹಿಂದುಸ್ಥಾನದ ರಾಜಕಾರಣದಲ್ಲಿ ಉದ್ಭವಿಸಿದ್ದ ಸಾತ್ವಿಕ ಮತ್ತು ತಾಮಸ ರೀತಿಗಳೆರಡೂ ಲುಪ್ತವಾದವು. ಪಾಶ್ಚಾತ್ಯ ಪದ್ಧತಿಯ ಆ ರಾಜಸ ಹೋರಾಟವನ್ನೇ ರಾಷ್ಟ್ರವು ಪುನಃ ಪ್ರಾರಂಭಿಸಿತು. ಕಳೆದ ಹದಿನೈದು ವರುಷಗಳ ಪರಿಶ್ರಮದಿಂದ ಪ್ರಾಪ್ತವಾದ ಪವಿತ್ರತೆ, ಧೈರ್ಯೋತ್ಸಾಹ, ಸ್ವಾರ್ಥತ್ಯಾಗಗಳಿಂದ ಪಾಶ್ಚಾತ್ಯ ರಾಜಕಾರಣದ ಪದ್ಧತಿಯನ್ನೇ ಅನುಸರಿಸಿ ಏಕಾಭಿಪ್ರಾಯದಿಂದ ಹೋರಾಡುವುದೇ ಸ್ವರಾಜ್ಯ ಪ್ರಾಪ್ತಿಗೆ ಅನುಕೂಲ. ಈ ಹಿಂದಿನ ಹದಿನೈದು ವರುಷಗಳ ರಾಜಕೀಯ ಹೋರಾಟದಿಂದ ಬಂದ ಅನುಭವವೇ ಇದು.

ಈ ದೇಶದ ರಾಜಕಾರಣಕ್ಕೆ ಹಿಂದು ಮುಸಲ್ಮಾನರ ಐಕಮತ್ಯವೂ ನಿಕಟ ಸಂಬಂಧವುಳ್ಳದ್ದಾಗಿದೆ. ಹಿಂದಿನ ಹದಿನೈದು ವರ್ಷಗಳಲ್ಲಿ ಈ ಐಕಮತ್ಯವೇನೂ ಹೆಚ್ಚಲಿಲ್ಲ. ಆದರೆ ಅನೈಕ

ಮತ್ಯವೇ ಬೆಳೆಯಿತೆಂದು ಹೇಳಬಹುದು. ಇದಕ್ಕೆ ಹಿಂದುಗಳಲ್ಲಿ ಸಂಘಟನೆ ಇಲ್ಲದಿದ್ದುದೇ ಮುಖ್ಯ ಕಾರಣ. ಹಿಂದುಗಳಲ್ಲಿ ಸಂಘಟನೆಯುಂಟಾದ ವಿನಾ ಹಿಂದು ಮುಸಲ್ಮಾನರಲ್ಲಿ ನಿಜವಾದ ಐಕಮತ್ಯವುಂಟಾಗುವುದು ಶಕ್ಯವಿಲ್ಲ. ಹಿಂದು ಮುಸಲ್ಮಾನರ ಐಕಮತ್ಯದ ಹೊರತು ಸ್ವರಾಜ್ಯ ಪ್ರಾಪ್ತಿಯು ಸುಲಭಸಾಧ್ಯವಲ್ಲ. ಇದೂ ಹಿಂದಿನ ಹದಿನೈದು ವರ್ಷಗಳ ಹೋರಾಟದಿಂದ ಬಂದ ಅನುಭವ.

ಆದಕಾರಣ ಹಿಂದು ಮಹಾಸಭೆಯವರು ಹಿಂದು ಸಂಘಟನೆಗಾಗಿ ಪ್ರಚಂಡ ಚಟುವಟಿಕೆಯನ್ನು ನಡೆಯಿಸಬೇಕು. ಈಗಿನ ರಾಜಕಾರಣ ಬೇಕಿಲ್ಲದವರು ಗಾಂಧೀಜಿಯವರ ಗ್ರಾಮೋದ್ಧಾರದ ಕಾರ್ಯದಲ್ಲಿ ಆಸಕ್ತರಾಗಬೇಕು. ಪಾಶ್ಚಾತ್ಯ ರಾಜಕಾರಣ ಪಟುಗಳು ಕೌನ್ಸಿಲ್ ಮೊದಲಾದ ರಾಜಕೀಯ ಸಂಸ್ಥೆಗಳಲ್ಲಿ ಸೇರಿ ಏಕಾಭಿಪ್ರಾಯದಿಂದ ಸರಕಾರದ ಸಂಗಡ ಹೋರಾಡಬೇಕು. ಹೀಗೆ ಧಾರ್ಮಿಕ, ಆರ್ಥಿಕ, ಮತ್ತು ರಾಜಕೀಯ ಚಟುವಟಿಕೆಗಳು ತೀವ್ರತರವಾಗಿ ಅವ್ಯಾಹತ ಜರಗುವುದೇ ಹಿಂದುಸ್ಥಾನಕ್ಕೆ ಶ್ರೇಯಸ್ಕರವು. ಇದೇ ಹಿಂದಿನ ಹದಿನೈದು ವರುಷಗಳ ಅನುಭವ.

ಸ್ಫುಟ ವಿಚಾರ.

ನಮ್ಮ ನಾಲ್ಕನೆಯ ವರುಷ.

ಶರಣ ಸಂದೇಶ ಪತ್ರಿಕೆಯ ನಾಲ್ಕನೆಯ ವರುಷವು ಇಂದಿಗೆ ಮುಗಿಯಿತು. ಮೂರನೆಯ ವರುಷದ ಕೊನೆಯಲ್ಲಿ ನಾವು ತಿಳಿಸಿದಂತೆ ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳ ವಿಚಾರಕ್ರಾಂತಿಗಾಗಿ ಈ ವರುಷ ಮಾಡಿದ ಪತ್ರಿಕೆಯ ಸೇವೆಯು ಜನಾಂಗದ ಮುಂದೆ ಇದ್ದೇ ಇದೆ.

ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳೇ ಈ ಪತ್ರಿಕೆಯ ಮುಖ್ಯೋದ್ದೇಶಗಳಾಗಿದ್ದರೂ ರಾಜಕೀಯ ಸುಧಾರಣೆಗಾಗಿ ಹೋರಾಡುವ ಯಾವ ಪತ್ರಿಕೆಗಿಂತಲೂ **ಶರಣ ಸಂದೇಶ**ವು ರಾಜಕೀಯ ವಿಷಯದಲ್ಲಿ ಕಡಿಮೆ ಪ್ರಯತ್ನಿಸಿಲ್ಲವೆಂಬುದು ಈ ವರುಷ ಪ್ರಕಟವಾದ ರಾಜಕೀಯ ಲೇಖನಗಳಿಂದ ವಾಚಕರಿಗೆ ಗೊತ್ತಾಗಿರಬಹುದು.

ಶರಣ ಸಂದೇಶವು ಯಾವುದೊಂದು ರಾಜಕೀಯ ಪಕ್ಷಕ್ಕೆ ಸೇರಿದುದಲ್ಲ. ಆದುದರಿಂದ ರಾಷ್ಟ್ರೀಯ ಸಭೆಯ ತೀರ್ಮಾನ ಮತ್ತು ಕಾರ್ಯ ಪದ್ಧತಿಗಳಲ್ಲಿ ತೋರಿದ ಕುಂದು ಕೊರತೆಗಳನ್ನು ಕೂಡಾ ಇದು ಆಗಾಗ್ಗೆ ತೋರಿಸುತ್ತಾ ಬಂದಿತು. ಇನ್ನು ಮುಂದಾದರೂ ರಾಜಕೀಯ ವಿಷಯದಲ್ಲಿ ಇದೇ ಪ್ರಕಾರ ಪ್ರಯತ್ನಿಸತಕ್ಕದಾಗಿದೆ.

ಹಿಂದುಸ್ಥಾನದ ರಾಜಕೀಯ ಮತ್ತು ಆರ್ಥಿಕ ಸುಧಾರಣೆಗಳಿಂದ ಈ ದೇಶದಲ್ಲಿ ನಿಜವಾದ ಸುಖ ಶಾಂತಿಗಳುಂಟಾಗಬೇಕಾದರೆ ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಮಹತ್ತರವಾದ ತಿದ್ದುಪಾಟುಗಳಾಗತಕ್ಕದು ಅತ್ಯಾವಶ್ಯಕವೆಂದೇ ನಮ್ಮ ದೃಢವಾದ ನಂಬಿಕೆ. ಆದುದರಿಂದ ಹಿಂದುಗಳ ವೇದಾಗಮ ಪುರಾಣಾದಿ ಧರ್ಮ ಗ್ರಂಥಗಳ ವಿಷಯದಲ್ಲಿರುವ ಬಹು ಜನಗಳ ತಪ್ಪು ತಿಳುವಳಿಕೆಗಳನ್ನು ನಿವಾರಣೆ ಮಾಡುವದು ಅತ್ಯಾವಶ್ಯಕ. ಹಿಂದು ಜನಸಾಮಾನ್ಯರಲ್ಲಿರುವ ಅನೇಕ ಧಾರ್ಮಿಕ ಮತ್ತು ಸಾಮಾಜಿಕ ದೋಷಗಳು ನಿವಾರಣೆಯಾದ ವಿನಾ ಹಿಂದುಗಳಲ್ಲಿ ಸಂಘಟನೆಯುಂಟಾಗುವದಿಲ್ಲ. ಹಿಂದು ಸಂಘಟನೆಯ ವಿನಾ ಹಿಂದುಸ್ಥಾನದಲ್ಲಿ ನಿಜವಾದ ಸುಖ ಶಾಂತಿಗಳಿಲ್ಲ. ಆದಕಾರಣ ಹಿಂದು ಧರ್ಮ ಮತ್ತು ಸಮಾಜಗಳ ಸಂಬಂಧವಾಗಿ ಮುಂದಣ ವರುಷ ಹೆಚ್ಚು ಲೇಖನಗಳನ್ನು ಪ್ರಕಟಿಸಬೇಕೆಂದು ಯೋಚಿಸಿದ್ದೇವೆ.

ಕರ್ನಾಟಕದಲ್ಲಿ ವೀರಶೈವ ಸಮಾಜವು ಒಂದು ಪ್ರಾಮುಖ್ಯವಾದುದಾಗಿರುವುದರಿಂದ ಮೊದಲು ಇದರಲ್ಲಿ ಸಂಘಟನೆಯುಂಟಾಗುವುದು ಹೆಚ್ಚು ಪ್ರಯೋಜನ. ಆದರೆ ಇದರಲ್ಲಿ ಇತ್ತೀಚೆಗೆ ಪಂಚಾಚಾರ್ಯರ ಪಂಗಡವೆಂಬುದೊಂದು ಪಂಗಡವು ಹುಟ್ಟಿ ದಿನೇ ದಿನೇ ಬೆಳೆಯುತ್ತಿರುವುದರಿಂದ ಇದೊಂದು ಪಂಥವಾಗಿಯೇ ಪರಿಣಮಿಸಿ ಸಂಘಟನೆಗೆ ಪ್ರತಿಯಾಗಿ ವಿಘಟನೆಯೇ ಹೆಚ್ಚುವ ಲಕ್ಷಣಗಳು ತೋರುತ್ತವೆ. ಆದಕಾರಣ ಶ್ರೀ ಬಸವಾದಿ ಪ್ರಮಥರ ತತ್ವಗಳನ್ನು ಮುಂದಣ ವರುಷ ತುಲನಾತ್ಮಕ ದೃಷ್ಟಿಯಿಂದ ವಿಶೇಷವಾಗಿ ವಿವೇಚಿಸಿ ನಿಜವಾದ ಲಿಂಗಾಂಗಿಯು ಹೊಸದಾಗಿ ಹುಟ್ಟಿದ ಈ ಪಕ್ಷದ ಬಲೆಯಲ್ಲಿ ಬೀಳದೆ ತನ್ನಲ್ಲಿ ಸಂಘಟನೆಯನ್ನು ಹೇಗೆ ಮಾಡಿಕೊಳ್ಳಬೇಕೆಂಬುದನ್ನು ವಿವರಿಸುವ ಯೋಚನೆಯೂ ಇದೆ.

ಹಿಂದು ಸಂಘಟನೆಗೆ ಹಿಂದುಗಳಲ್ಲಿರುವ ಅನೇಕ ಧಾರ್ಮಿಕ ಮೂಢ ಕಲ್ಪನೆಗಳು ನಿವಾರಣೆಯಾಗುವುದು ಹೇಗೆ ಅಗತ್ಯವಾಗಿದೆಯೋ ಹಾಗೆಯೇ ಹಿಂದು ಮುಸಲ್ಮಾನ್ ಐಕಮತ್ಯಕ್ಕೆ ಮುಸಲ್ಮಾನ ಜನಸಾಮಾನ್ಯರಲ್ಲಿರತಕ್ಕ ಧಾರ್ಮಿಕ ತಪ್ಪುತಿಳುವಳಿಕೆಗಳೂ ಅಳಿಯಬೇಕಾದುದು ಅಗತ್ಯವಾಗಿದೆ. ಆದಕಾರಣ ಮುಸ್ಲಿಮ್ ರೀತಿನೀತಿಗಳನ್ನೂ ಮುಂದಣ ವರುಷದಲ್ಲಿ ವಿವೇಚಿಸುವ ಯೋಚನೆಯಿದೆ. ಈಗಾಗಲೇ ಕರ್ನಾಟಕದಲ್ಲಿಯೂ ಮುಸ್ಲೀಮ್ ಧರ್ಮ ಪ್ರಸಾರದ ಬೇರೆ ಬೇರೆ ಪ್ರಯತ್ನಗಳು ಪ್ರಾರಂಭವಾಗಿವೆ. ಆದುದರಿಂದ ಹಿಂದುಗಳು ಅತ್ತ ಲಕ್ಷಿಸಬೇಕಾದುದೂ ವಿಹಿತವು.

ಈ ಪ್ರಕಾರ ಮುಂದಣ ವರುಷದಲ್ಲಿ ಜನಸೇವೆಯನ್ನು ಮಾಡಲು ಪರಮಾತ್ಮನು ಶಕ್ತಿಯನ್ನು ದಯಪಾಲಿಸಲೆಂತಲೂ ವಾಚಕವೃಂದವು ನಮಗೆ ಈ ವರುಷಕ್ಕಿಂತಲೂ ಹೆಚ್ಚಾದ ಸಹಾಯ ಪ್ರೋತ್ಸಾಹಗಳನ್ನೀಯಲೆಂತಲೂ ಹಾರೈಸುತ್ತೇವೆ.

ಭಾರತೀಯ ರಾಜ್ಯ ಘಟನೆಯ

ಹೊಸ ಶಾಸನ.

'ಇಂಡಿಯಾ ಬಿಲ್' ಪಾರ್ಲಮೆಂಟಿನ ಸಂಪೂರ್ಣ ಸಂಸ್ಕಾರಗಳನ್ನು ಹೊಂದಿ ತಾ. ೨-೮-೩೫ ನೆಯ ಪ್ರಾತಃಕಾಲ ೧೧ ಗಂಟೆ ೪೦ ನಿಮಿಷಕ್ಕೆ ಚಕ್ರವರ್ತಿಗಳ ಸಮ್ಮತಿಯನ್ನು ಹೊಂದಿ ಭಾರತೀಯ ರಾಜ್ಯ ಘಟನೆಯ ಹೊಸ ಶಾಸನವಾಗಿ ಪರಿಣಮಿಸಿತು.

ಕ್ರಿ. ಶ. ೧೯೨೭ ರಿಂದ ಸಾಯಮನ್ ಕಮಿಶನ್ ಮೂಲಕ ಪ್ರಾರಂಭವಾದ ಈ ಹೊಸ ಶಾಸನವು ಎಂಟು ವರುಷಗಳ ವರೆಗೆ ನಾನಾ ಸಂಸ್ಕಾರಗಳನ್ನು ಹೊಂದಿ ಕೊನೆಗೆ ಈ ಸ್ಥಿತಿಗೆ ಬಂದಿತು. ಈ ದೇಶದ ಪ್ರಭುತ್ವವು ಸಂಪೂರ್ಣವಾಗಿ ಇಂಗ್ಲಿಷ್ ಸರಕಾರಕ್ಕೆ ಒಳಪಟ್ಟು ೭೭ ವರುಷಗಳಾದವು. ಈ ಅವಧಿಯಲ್ಲಿ ಹಿಂದುಸ್ಥಾನದ ಪ್ರಭುತ್ವದ ಸಂಬಂಧವಾಗಿ ಐದುಸಾರೆ ಹೊಸ ಶಾಸನಗಳು ಮಾಡಲ್ಪಟ್ಟವು. ಅವುಗಳಲ್ಲಿ ಇದೇ ಕೊನೆಯದು ಮತ್ತು ಹೆಚ್ಚು ವ್ಯಾಪಕವಾದುದು.

ರಾಷ್ಟ್ರಕ್ಕೆ ಅಪ್ರಿಯವಾದ ಈ ಸುಧಾರಣೆಯನ್ನು ಸರಕಾರವು ಒತ್ತಾಯದಿಂದ ಹೇರಿದ ಮೇಲೆ ಅದು ರಾಷ್ಟ್ರಕ್ಕೆ ಹೇಗೆ ಅಪೂರ್ಣವಾದುದಾಗಿದೆಯೆಂಬುದನ್ನು ಇನ್ನು ಮೇಲೆ ಪ್ರಯೋಗದಿಂದಲೇ ಎಲ್ಲ ಪಂಗಡಗಳೂ ಏಕಮುಖವಾಗಿ ಕಾರ್ಯ ಮಾಡಿ ತೋರಿಸಬೇಕಾಯಿತಷ್ಟೆ. ಆದಕಾರಣ ಬಂದುದನ್ನು ನಿರ್ವಹಿಸಿ ಮುಂದಿನದನ್ನು ಸಂಪಾದಿಸಲು ರಾಷ್ಟ್ರವು ಸಿದ್ಧವಾಗಲಿ.

ವಿವಿಧ ವಿಷಯ.

ಕರಾಚಿ ವ್ಯಾಪಾರಿಗಳ ಸಾಹಸ.

ಕರಾಚಿ ಬಂದರದಿಂದ ಪರದೇಶಕ್ಕೆ ಕಳಿಸಲ್ಪಡುವ ಗೋದಿಯ ಮೇಲೆ ಬ್ರಿಟಿಶ್ ಇಂಡಿಯಾ ಮತ್ತು ಸಿಂದ್ಯ ಸ್ಟೀಮ ನೇವ್ಹಿಗೇಶನ್ ಕಂಪನಿಯವರು ಹೆಚ್ಚಾದ ಸುಂಕವನ್ನು ಹೇರಿದ್ದರಿಂದ ೧೧ ಲಕ್ಷ ಗೋದಿ ಚೀಲಗಳು ಬಂದರದಲ್ಲಿ ಹಾಗೇ ಉಳಿದಿವೆ. ಹೋದ ವರಷ ಕಲಕತ್ತೆಯ ಕಡೆಗೆ ೩ ಲಕ್ಷ ಚೀಲಗಳು ಕಳಿಸಲ್ಪಟ್ಟಿದ್ದವು. ಈ ವರ್ಷ ಈ ಹೆಚ್ಚಾದ ಸುಂಕದಿಂದ ಕೇವಲ ೪೯ ಸಾವಿರ ಚೀಲಗಳು ಕಳಿಸಲ್ಪಟ್ಟಿವೆ. ಈ ತೊಂದರೆಯನ್ನು ನಿವಾರಣೆ ಮಾಡಿಕೊಳ್ಳುವದಕ್ಕಾಗಿ ಕರಾಚಿ ವ್ಯಾಪಾರಸ್ಥರು ಹಿಂದೀ ನೌಕಾ ಕಂಪನಿಗಳಿಗೆ ಅನೇಕ ಸಾರೆ ಬರೆದು ವಿಜ್ಞಾಪಿಸಿಕೊಂಡರು. ಆದರೆ ಅದರಿಂದ ಉಪಯೋಗವಾಗಲಿಲ್ಲ. ಈಗ ಅವರು ಸೋರವಾರ್ಡ ಎಂಬ ನಾರ್ವೆ ದೇಶನ ಕಂಪನಿಯ ಹಡಗವನ್ನು ಭಾಡಿಗೆ ಕೊಟ್ಟು ತೆಗೆದುಕೊಂಡಿದ್ದಾರೆ. ಅವಶ್ಯ ಕಂಡಲ್ಲಿ ಇನ್ನೂ ಕೆಲ ಹಡಗುಗಳನ್ನು ಹೀಗೆ ತೆಗೆದುಕೊಳ್ಳುವದು ಅವರ ಇಚ್ಛೆ ಇದೆ. ಇದರಿಂದ ಆ ಹಡಗಗಳನ್ನು ಸ್ವತಂತ್ರವಾಗಿ ಉಪಯೋಗಿಸಿಕೊಳ್ಳಲು ಅವರಿಗೆ ಅನುಕೂಲವಾಗುತ್ತದೆ.

ಹಿಂದೀ ನೌಕೆಗಳನ್ನು ಬಿಟ್ಟು ಪರದೇಶಿ ನೌಕೆಗಳನ್ನವಲಂಬಿಸಿ ಕರಾಚಿ ವ್ಯಾಪಾರಸ್ಥರು ಅಷ್ಟು ಧನವನ್ನು ಪರದೇಶಕ್ಕೆ ಕಳಿಸಿದುದು ಖೇದದ ಸಂಗತಿಯು. ಆದರೆ ಹಿಂದೀ ಜನರಲ್ಲಿ ಇದೊಂದು ಹುಟ್ಟು ಸ್ವಭಾವವಾಗಿದೆ. ಯಾರಾದರು ಹಿಂದೀಯರೆಂಬ ಅಭಿಮಾನದಿಂದ ವ್ಯವಹಾರ ಮಾಡಹತ್ತಿದರೆ ಅದೇ ಅಭಿಮಾನದಿಂದ ಅವರಿಗೆ ಅನುಕೂಲವಾಗುವಂತೆ ಮಾಡುವಂತಿಲ್ಲ. ಆದರೆ ಸಮಯಸಾಧಿಸಿ ಹೆಚ್ಚು ಲಾಭದಾಸೆಗಾಗಿ ಪ್ರತಿಕೂಲರಾಗಲೂ ಸಿದ್ಧರಾಗುತ್ತಾರೆ. ಇದರಿಂದ ಮೂರನೆಯವರು ಬಂದು ಲಾಭ ಹೊಂದುವದು ಸಹಜವಾದುದೇ ಆಗಿದೆ

ಭೋಪಾಳ ಸಂಸ್ಥಾನದಲ್ಲಿ ಗಣಪತಿ ಮೂರ್ತಿಯನ್ನು ಒಡೆದನು!

ಭೋಪಾಳ ಸಂಸ್ಥಾನದ ಆಶಾಪುರಿ ಎಂಬಲ್ಲಿ ಗಣೇಶನ ಮೂರ್ತಿಯನ್ನು ಒಬ್ಬ ಮುಸಲ್ಮಾನನು ಒಡೆದು ಹಾಕಿರುವನು. ಇದನ್ನು ವಿಚಾರಿಸುವದಕ್ಕಾಗಿ ಹೋದ ಹಿಂದುಸಭಾ ಶಾಖೆಯವರು ಈ ಪ್ರಕಾರವಾಗಿ ತಿಳಿಸಿದ್ದಾರೆ—

“ನಾವು ಆಶಾಪುರಿಗೆ ಹೋಗಿ ಅಲ್ಲಿಯ ಊರ ಪ್ರಮುಖರನ್ನೆಲ್ಲಾ ಕೂಡಿಸಿ ಈ ಬಗ್ಗೆ ವಿಚಾರಿಸಿದೆವು. ಅವರು ಹೇಳಿದ್ದೇನಂದರೆ, ಪಂಜಾಬದ ಕಡೆಯ ಹಾಜಿ ಎಂಬ ಒಬ್ಬ ಮುಸಲ್ಮಾನ ಮೌಲವಿಯು ಈಗ ಕೆಲ ತಿಂಗಳುಗಳಿಂದಲೂ ಒಬ್ಬ ಗುರ್ಜರ ಗೃಹಸ್ಥನ ಮನೆಯಲ್ಲಿದ್ದನು. ಅವನ ಮನೆಯ ಮುಂದೆಯೇ ಗಣೇಶ ಮೂರ್ತಿಯ ಕಟ್ಟೆಯದೆ. ಹಾಜಿಯು ಆ ಕಟ್ಟೆಯ ಮೇಲೆ ನಿತ್ಯವೂ ನಮಾಜು ಮಾಡುತ್ತಿದ್ದನು. ಇದಕ್ಕೆ ಎಷ್ಟೋ ಜನರು ವಿರೋಧಿಸಿದರೂ ಹಾಜಿಯ ಪ್ರಭಾವವು ಊರಲ್ಲಿ ವಿಶೇಷವಾಗಿದ್ದರಿಂದ ಧಾರ್ಮಿಕ ಸಂಗತಿಯೆಂದು ಜನರು ಸುಮ್ಮನಿದ್ದರು. ಒಂದು ದಿನ ಅವನು ನಮಾಜ ಮಾಡುತ್ತಿರುವಾಗ್ಗೆ ಭೂತ ಬಂತು ಎಂದು ಚೀರಿ ಕೂಡಲೇ ಗಣೇಶ ಮೂರ್ತಿಯನ್ನು ಕಿತ್ತು ಒಂದು ದೊಡ್ಡ ಕಲ್ಲಿನಿಂದ ಒಡೆದು ಹಾಕಿ ೧೮ ಚೂರು ಮಾಡಿದನು. ಜನರೆಲ್ಲ ಸಂತಪ್ತರಾಗಿ ಬಂದು ವಿಚಾರಿಸಲು “ಅದು ಭೂತ; ನಮಾಜು ಮಾಡುವಾಗ್ಗೆ ಬಂದಿತು’ ಎಂದು ತಾನೇ ಗದ್ದರಿಸಿ ಒಬ್ಬಿಬ್ಬರನ್ನು ಹೊಡೆದು ಊರು ಬಿಟ್ಟು ಹೋದನು. ಈ ಸಂಗತಿಯನ್ನು ಪೋಲೀಸ ಅಧಿಕಾರಿಗಳಿಗೆ ತಿಳಿಸಿ ಅವನ ವಿಚಾರಣೆ ಮಾಡಿರೆನ್ನಲು ಅವರು ನಮಗೇ ಆ ಹಾಜಿ ಸಾಹೇಬನನ್ನು ಹೊಡೆದು ಏಕೆ ಓಡಿಸಿದರೆಂದು ಗದ್ದರಿಸಹತ್ತಿದ್ದಾರೆ. ಎಂದು ಹೇಳಿದರು”

ಆಶಾಪುರಿಯು ಸಣ್ಣ ಗ್ರಾಮವಾಗಿದ್ದರೂ ಇಲ್ಲಿ ದೇವಾಲಯಗಳು, ಜೈನಬಸ್ತಿಗಳು, ಬೌದ್ಧ ವಿಹಾರಗಳು, ವಿಶೇಷವಾಗಿವೆ. ಇದೊಂದು ಪವಿತ ಕ್ಷೇತ್ರವೆಂದು ತಿಳಿಯಲ್ಪಡುತ್ತದೆಂದು ಅವರು ಹಿಂದು ಮಧ್ಯವರ್ತಿ ಸಭೆಗೆ ಅರಿಕೆ ಮಾಡಿಕೊಂಡಿದ್ದಾರೆ.

ರಾಷ್ಟ್ರ ಧ್ವಜಕ್ಕೆ ಅಡ್ಡಿ.

ಮೈಸೂರಿನ ಜಿಲ್ಲಾ ನ್ಯಾಯಾಧೀಶರು ಪೋಲೀಸ ಕಟ್ಟಳೆಯ ಮೇರೆಗೆ ಆರು ತಿಂಗಳುಗಳ ವರೆಗೆ ರಾಷ್ಟ್ರ ಧ್ವಜವನ್ನು ಹಾರಿಸಕೂಡದೆಂದು ಪ್ರತಿಬಂಧ ಮಾಡಿದ್ದಾರೆಂದು ತಿಳಿಯುತ್ತದೆ.

ನೈಜಾಮು ವೀರಶೈವ ಬಡ ವಿದ್ಯಾರ್ಥಿಗಳಿಗೆ ಸೂಚನೆ.

ನೈಜಾಮು ವೀರಶೈವ ವಿದ್ಯಾವರ್ಧಕ ಫಂಡಿನಿಂದ ಸಹಾಯ ಹೊಂದಲಪೇಕ್ಷೆಯುಳ್ಳ ಕಾಲೇಜ ಶಿಕ್ಷಣ ಹೊಂದುವ ವೀರಶೈವ ಬಡ ವಿದ್ಯಾರ್ಥಿಗಳು ಫಸಲಿ ೧೩೪೪ ನೆಯ ಮೆಹರ ತಿಂಗಳ ೨೦ನೆಯ ತಾರೀಖಿನ ಒಳಗಾಗಿ ಫಂಡಿನ ಸೆಕ್ರೆಟರಿಗಳ ಕಡೆಗೆ ಪ್ರಿಂಟಾದ ಫಾರಂವಿನಲ್ಲಿ ಅರ್ಜಿಯನ್ನು ಕಳುಹಿಸತಕ್ಕದ್ದು. ಒಂದಾಣೆ ಟಿಕೀಟನ್ನು ಪ್ಲೀಗ ಸಂಜೀವಿನಿ ಆಫೀಸ ಗುಲಬರ್ಗಾ, ಈ ವಿಳಾಸಕ್ಕೆ ಕಳುಹಿಸಿ ಪ್ರಿಂಟಾದ ಫಾರ್ಮನ್ನು ತರಿಸಿಕೊಳ್ಳಬೇಕು.

ಸೆಕ್ರೆಟರಿ

ನೈಜಾಮು ವೀರಶೈವ ವಿದ್ಯಾವರ್ಧಕ ಫಂಡ ಸೇಡಂ.

ಗ್ಯಾರಂಟಿಯಾದ



ಬೀಜಗಳು ಮತ್ತು ಸಸಿಗಳು.

	ರೂ.	ಆ.	ಪೈ
೧೨ ಪೊಟ್ಣ ರಖಂವಾರಿ ಹೂವ್ವಿನ ಬೀಜಗಳು	೧	೮	೦
೧೨ ,, ,, ನಾಟಿ ತರಕಾರಿ ಬೀಜಗಳು	೧	೪	೦
೧೨ ,, — ,, ಇಂಗ್ಲೀಷು — ,,	೨	೦	೦
೧೨ ಜಾತಿ ಗುಲಾಬಿ ಸೊಸಿಗಳು—	೪	೦	೦
೧೨ ,,—ಕಲಮಿ ಮಾವಿನ ಸೊಸಿಗಳು— ೬ ರಿಂದ	೯	೦	೦
೧೨ ,,—ಕಿತ್ತಳೆ. ನಿಂಬೆ, ಪೇರಲ, ಸೇಬು, ಪನ್ನೇರಳ, ದಾಳಿಂಬೆ, ಚಕ್ಕೋತ, ಪೀಚಸ್, ಮರಸೇಬು ಮೊದಲಾದವು	೫	೦	೦
೧೨ ,, ದ್ರಾಕ್ಷಿ, ಲಕ್ಕೋಟ, ರಾಜಪುರಿ, ಪೊಪಾಯ, ಅಂಜೂರ, ಸೀತಾಫಲ	೩	೦	೦
೧೨ ,, ಇತರ ಪುಷ್ಪ ಗಿಡಗಳು—	೩	೦	೦

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ದೇವಪ್ಪ ಅಂಡ್ ಸನ್

ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ.

ಬಸವಣ್ಣನವರ ವಚನಗಳ ಅನುವಾದ.

(೫ ನೆಯ ಪುಟದಿಂದ ಬಂದುದು.)

"Make me lame so that I shall not waste time gadding about. Make me blind so that my eyes shall not wander looking on things. Make the ears deaf to aught but what concerns you. Let not my mind desire anything but the service of your saints."

೯೩ ಅಂಕ ಓಡಿದರೆ, ತೆತ್ತಿಗಂಗೆ ಭಂಗವಯ್ಯ. ಕಾದಿ ಗೆಲಿಸಯ್ಯ ಎನ್ನನು, ಕಾದಿ ಗೆಲಿಸಯ್ಯ! ಕೂಡಲ ಸಂಗಮದೇವಯ್ಯ.(ಎನ್ನ ತನು ಮನ ಧನದಲ್ಲಿ ವಂಚನೆ ಇಲ್ಲದೆ.)

"If the servant is beaten, the disgrace is the master's. God Kudala Sangama, teach me and let me win in the fight. Let me win !"

೯೪ ಎನಿಸೆನಿಸೆಂದರೆ ನಾ ಧೃತಿಗೆಡೆನಯ್ಯ. ಎಲುದೋರಿದರೆ, ನರಹರಿದರೆ, ಕರಳು ಕುಪ್ಪಳಿಸಿದರೆ, ನಾ ಧೃತಿಗೆಡೆನಯ್ಯ. ಸಿರಹರಿದು ಅಟ್ಟೆ ನೆಲಕ್ಕೆಬಿದ್ದರೆ, ನಾಲಿಗೆ ಕೂಡಲ ಸಂಗ ಶರಣೆನುತಿರ್ದಿತಯ್ಯ.

"Happen what may I shall not lose heart. My bones may show, my muscles may tear, my stomach may turn, I shall not lose heart. If my head is severed and this frame falls to the ground, my tongue will still say, my God is my refuge."

೯೫ ಅಂಜಿದರಾಗದು, ಅಳುಕಿದರಾಗದು, ವಜ್ರಪಂಜರದೊಳಗಿದ್ದರೆ ಆಗದು. ತಪ್ಪದೆಲವೋ ಲಲಾಟ ಲಿಖಿತ. ಕಕ್ಕುಲತೆ ಬಟ್ಟರೆ ಆಗದು ನೋಡಾ. ಧೃತಿಗೆಟ್ಟು ಮನ ಧಾತುಗೆಟ್ಟರೆ, ಬಪ್ಪುದು ತಪ್ಪದು ಕೂಡಲ ಸಂಗಮದೇವಾ.

"Fearing does not mend it; shrinking does not mend it. You do not evade what is destined, by God, by setting into a cage of diamond bars. You do not escape it by being anxious. If you lose heart and are shaken in the mind that which should come will not fail. My God."

೯೬ ನಾಳೆ ಬಪ್ಪುದು ನಮಗಿಂದೇ ಬರಲಿ. ಇಂದು ಬಪ್ಪುದು ನಮಗೀಗಲೆ ಬರಲಿ. ಇದಕಾರಂಜುವರು? ಇದಕಾರಳುಕುವರು? "ಜಾತಸ್ಯ ಮರಣಂ ಧ್ರುವಂ" ಎಂದುದಾಗಿ ನಮ್ಮ ಕೂಡಲ ಸಂಗಮದೇವ ಬರೆದ ಬರಹ ತಪ್ಪಿಸುವರೆ, ಹರಿಬ್ರಹ್ಮಾದಿಗಳವಲ್ಲ.

"What should come tomorrow may come to me today. What should come today may come this moment. Who is afraid of it? Who shrinks from it? Death is certain for that which is born as it is said. To alter what our God has willed is not in the power of Hari and Brahma and the others."

೯೭ ಅರ್ಥವನರ್ಥವ ಮಾಡಿ ಕೋಳಾಹಳಂ ಗೈವುತ್ತಿರಲಿ, ಹುಟ್ಟಿದ ಮಕ್ಕಳ ನವಖಂಡವ ಮಾಡಿ ಕಡಿಯುತ್ತಿರಲಿ, ಮುಟ್ಟುವ ಸ್ತ್ರೀಯ ಕಣ್ಣಮುಂದೆ ಅಭಿಮಾನಂಗೊಂಡು, ನೆರೆವುತ್ತಿರಲಿ, ಇಂತೀ ತ್ರಿವಿಧವು ಹೊರಗಣವು, ಇನ್ನೆನ್ನಂಗದ ಮೇಲೆ ಬರಲಿ, ಹಿಡಿಖಂಡವ ಕೊಯ್ಯಲಿ, ಇಕ್ಕುವ ಶೂಲ ಪ್ರಾಪ್ತಿಸಲಿ, ಹಾಕೊಂದೆಸೆ ಹನ್ನೊಂದೆಸೆಯಾಗಿ ಮಾಡುತ್ತಿರಲಿ. ಮತ್ತೆಯೂ ಲಿಂಗಾರಾಧನೆಯ ಮಾಡುವೆ, ಜಂಗಮಾರಾಧನೆಯ ಮಾಡುವೆ, ಪ್ರಸಾದಕ್ಕೆ ತಪ್ಪೆ. ಇಂತಪ್ಪ ಭಾಷೆ ಕಿಂಚಿತು ಹುಸಿಯಾದರೆ ನೀನಂದೇ ಮೂಗ ಕೊಯ್ಯಿ ಕೂಡಲಸಂಗಮದೇವ.

"Let them make waste of my wealth and raise a turmoil, let them take the children of my loins and cut them to pieces, let them take the wife whom I have known and dishonour her in my presence. If these three are outside of me let them attack my person, slice flesh from off me, place me on stakes and cut pieces of me all round. I shall still worship my God. I shall serve his servants and shall not act unworthily of the blessing of God. If this which I promise should fail by a little, my God, cut thou my nose and punish me."

೯೮ ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಯ್ಯ ಎರಡಾಳಿನ ಭಾಷೆಯ. ಕೊಲುವೆನೆಂಬ ಭಾಷೆ ದೇವನದು. ಗೆಲುವೆನೆಂಬ ಭಾಷೆ ಭಕ್ತನದು. ಸತ್ಯವೆಂಬ ಕೂರಲಗನೆ ಕಳೆದುಕೊಂಡು ಸದ್ಭಕ್ತರು ಗೆದ್ದರು ಕಾಣಾ ಕೂಡಲಸಂಗಮದೇವ.

"Listen to me. There are two words throughout all the worlds. I shall slay you, says God. I shall conquer you says the Devotee. The devotees of God drew the sharp sword of truth and ended victorious, my God.

೯೯ ಆರು ಮುನಿದು ಎಮ್ಮನೇನ ಮಾಡುವರು? ಊರು ಮುನಿದು ಎಮ್ಮನೆಂತು ಮಾಡುವರು? ನಮ್ಮ ಕುನ್ನಿಗೆ ಕೂಸ ಕೊಡಬೇಡ. ನಮ್ಮ ಸೊಣಗಂಗೆ ತಳಿಗೆಯಲ್ಲಿಕ್ಕಬೇಡ. ಆನೆಯ ಮೇಲೆ ಹೋಹವನ ಶ್ವಾನ ಕಚ್ಚ ಬಲ್ಲುದೆ, ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ?

"What will any one getting angry do to me? If the whole town should rage what will it do with me? Let them not give a daughter to my son nor give food to my dog. Can the dog bite him who is riding on an elephant? When I have my God Kudala Sangama what can any one do to me?

೧೦೦ ತನು ನಿಮ್ಮದೆಂದ ಬಳಿಕ, ಎನಗೆ ಬೇರೆ ತನುವಿಲ್ಲ. ಮನ ನಿಮ್ಮದೆಂದ ಬಳಿಕ, ಎನಗೆ ಬೇರೆ ಮನವಿಲ್ಲ. ಧನ ನಿಮ್ಮದೆಂದ ಬಳಿಕ, ಎನಗೆ ಬೇರೆ ಧನವಿಲ್ಲ. ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ, ಎನಗೆ ಬೇರೆ ವಿಚಾರವುಂಟೇ ಕೂಡಲಸಂಗಮದೇವ?

When I have said that this body is yours, I have no other body; when I have said that this mind is yours, I have no other mind; when I have said that my weath is yours, there is no other wealth for me. If I have known that all these three possessions of mine are yours, what further thought need I take, O God Kudala Sangama?

೧೦೧ ತನ್ನ ತಾನರಿದಡೆ ತನ್ನರಿವೇ ಗುರು.

"Let a man but know himself that knowledge will be his teacher." (ಸಂಪೂರ್ಣ.)

ಪತ್ರಗಳ ಸಾರಾಂಶ.

ವೀರಶೈವ ಮಹಾಸಭೆಯು

೧೨ ನೇ ಅಧಿವೇಶನವು.

ರಾಯಚೂರಿನಲ್ಲಿ ೧೨ ನೇ ವೀರಶೈವ ಮಹಾಸಭೆಯನ್ನು ಸೇರಿಸುವ ಇಚ್ಛೆಯಿಂದ ಮಹಾಸಭೆಯ ನಿಯಮಗಳ ಮೇರೆಗೆ ಒಂದು ವರ್ಕಿಂಗ ಕಮೀಟಿಯು ಅಲ್ಲಿ ಈಗ ಸ್ಥಾಪಿಸಲ್ಪಟ್ಟಿರುತ್ತದೆ. ಈ ಕಮೀಟಿಯವರು ರಾಯಚೂರಿನಲ್ಲಿ ಮಹಾಸಭೆಯನ್ನು ನೆರಿಸಲು ಅನುಮೋದನವನ್ನು ಕೊಡಲು ಮಧ್ಯವರ್ತೀ ಕಮೀಟಿಗೆ ತಮ್ಮ ೨೬-೭-೩೫ ನೇ ತಾರೀಖಿನ ಪತ್ರ ಮುಖಾಂತರವಾಗಿ ನಮ್ಮ ಕಡೆಗೆ ಬರೆದುಕೊಂಡಿದ್ದಾರೆ. ಈ ಪತ್ರವನ್ನು ಮಧ್ಯವರ್ತಿ ಕಮೀಟಿ ಸಭಾಸದರಲ್ಲಿ ಸರ್ಕ್ಯುಲೇಟ ಮಾಡಿ ಅವರ ಅಭಿಪ್ರಾಯಗಳನ್ನು ದೊರಕಿಸಿಕೊಳ್ಳಬೇಕೆಂದು ಗೊತ್ತಾಗಿರುತ್ತದೆ. ಆದ್ದರಿಂದ ಬೇರೆ ಪಟ್ಟಣದವರು ಅಥವಾ ಬೇರೆ ಪ್ರಾಂತದವರು ತಮ್ಮಲ್ಲಿ ಮಹಾಸಭೆಯನ್ನು ನೆರಿಸಬೇಕೆಂದು ಅಪೇಕ್ಷಿಸಿದಲ್ಲಿ ಅವರು ಮಹಾಸಭೆಯ ನಿಯಮಗಳ ಪ್ರಕಾರ ನಮ್ಮ ಕಡೆಗೆ ತಾ. ೧೫ ೮-೩೫ ರ ಒಳಗಾಗಿ ಅರ್ಜಿಮಾಡಿಕೊಳ್ಳತಕ್ಕದ್ದು. ಈ ತಾರೀಖಿನ ತರುವಾಯ ಬಂದ ಅರ್ಜಿಗಳು ಮಧ್ಯವರ್ತಿ ಸಂಘದ ಸಭಾಸದರ ಕಡೆಗೆ ಅಭಿಪ್ರಾಯಕ್ಕೋಸ್ಕರ ಕಳಿಸಿಕೊಡಲ್ಪಡುವದಿಲ್ಲ.

ವಿಜಾಪುರ — ಪಿ. ಜಿ. ಹಳಕಟ್ಟಿ

ತಾ. ೩೦-೭-೩೫ — ಚೇರಮನ್ನ

ವೀರಶೈವ ಮಹಾಸಭೆಯ ಮಧ್ಯವರ್ತೀ ಕಮೀಟಿ.

ತುಮ್ಮಿನಕಟ್ಟೆಯಲ್ಲಿ

ಶಿವಾನುಭವ ಸಂಘ ಸ್ಥಾಪನೆ.

ಧಾರವಾಡ ಜಿಲ್ಹಾ ಹರಿಜನ ಸೇವಕ ಸಂಘದ ಪ್ರಚಾರಕರಾದ ಶ್ರೀ ಅನ್ನದಾನೀಶ್ವರ ವಿರಕ್ತಮಠ ಇವರು ತುಮ್ಮಿನಕಟ್ಟೆಯಲ್ಲಿ ಶ್ರೀಮನ್ನಿರಂಜನ ಷಡಕ್ಷರಿ ಮಹಾಸ್ವಾಮಿಗಳೊಡನೆ ಬಂದು ವೀರಶೈವರಲ್ಲಿ ಒಳ್ಳೇ ಜಾಗ್ರತೆಯುತ್ಪನ್ನವಾಗುವಂತೆ ಉಪನ್ಯಾಸಗಳನ್ನು ಮಾಡಿದರು. ಹರಿಜನರ ಕೇರಿಯಲ್ಲಿ ಶ್ರೀಯುತ ಶರಭಣ್ಣ ಹಾದೀಮನಿಯವರನ್ನು ಕರೆದುಕೊಂಡು ಹೋಗಿ ಮಾಂಸ ಮದ್ಯಗಳನ್ನು ಆ ಜನರು ಬಿಡುವಂತೆ ಯತ್ನಮಾಡಿದ್ದಾರೆ. ಹರಿಜನ ಬಾಲಕರು ಸಾಲೆಗೆ ಹೋಗುವಂತೆ ಚನ್ನಾಗಿ ಬೋಧಿಸಿದ್ದಾರೆ. ಶ್ರೀಮನ್ನಿರಂಜನ ಷಡಕ್ಷರಿ ಸ್ವಾಮಿಗಳು ಮುದೇನೂರು ಇವರು ನಮ್ಮ ತುಮ್ಮಿನಕಟ್ಟೆಯಲ್ಲಿ ಭಕ್ತರ ಆದರಕ್ಕೆ ಪಾತ್ರರಾಗಿದ್ದಾರೆ.

ಅವರನ್ನೇ ಚಾಲಕರನ್ನಾಗಿ ಯೋಚಿಸಿ ಒಂದು 'ಶಿವಾನುಭವ ಸಂಘ' ವು ಶ್ರೀ ವಿರಕ್ತಮಠರ ಸೂಚನೆಯ ಮೇರೆಗೆ ಮತ್ತು ಸಕಲ ವೀರಶೈವ ಬಂಧುಗಳ ಅನುಮತಿಯ ಪ್ರಕಾರ ತಾ||೨೩-೭-೩೫ ನೆಯ ದಿವಸ ಬಹು ವಿಜೃಂಭಣೆಯಿಂದ ಸ್ಥಾಪಿತವಾಯಿತು.

ಅದರ ಉದ್ದೇಶ—ವೀರಶೈವೋದ್ಧಾರ ಮತ್ತು ಪತಿತೋದ್ಧಾರ. ಬಳ್ಳಾರ ಬಸವನಗೌಡ್ರು ಹೆಡ್‌ಮಾಸ್ತರ ತುಮ್ಮಿನಕಟ್ಟೆ ಇವರು ಈ ಸಂಘಕ್ಕೆ ಕಾಲಕಾಲಕ್ಕೆ ಬೋಧೆಯನ್ನೀಯಲು ಒಪ್ಪಿದ್ದಾರೆ. ಶ್ರೀಯುತ ಶರಭಣ್ಣನವರು ಹಾದೀಮನಿ ಇವರು ತಮ್ಮಲ್ಲಿಯ ೫೦ ಶಿವಾನುಭವ ಗ್ರಂಥಗಳನ್ನು ಈ ಸಂಘಕ್ಕೆ ಕೊಟ್ಟಿದ್ದಾರೆ ಇನ್ನುಳಿದ ಜನರು ಬೇರೆ ಸಣ್ಣ ಸಾಮಾನುಗಳನ್ನು ಕೊಟ್ಟಿದ್ದಾರೆ. ಶ್ರೀಯುತ ರುದ್ರಪ್ಪನವರು ಪುರ್ತಗೇರಿ ಇವರು ಸಂಘಕ್ಕೆ ಒಂದು ಮನೆಯನ್ನು ಬಿನ್ ಬಾಡಿಗೆಯಿಂದ ಕೊಟ್ಟಿದ್ದಾರೆ. ಮಾಳನಾಯಕನ ಹಳ್ಳಿಯ ಜನರು ಈ ಸಂಘದಲ್ಲಿ ಸೇರುವಂತೆ ಯೋಚನೆಯಾಗಿದೆ. ಇನ್ನು ಕೆಲವು ಮಹಾಶಯರು ಶರಣರ ಫೋಟೋಗಳನ್ನು ಮತ್ತು ಭಜನಾ ಸಾಮಗ್ರಿಗಳನ್ನು ಒಳ್ಳೇ ಹುರುಪಿನಿಂದ ಕೊಟ್ಟಿರುತ್ತಾರೆ. ಅಂತೂ ಶ್ರೀ ವಿರಕ್ತಮಠರಿಂದ ನಮ್ಮ ಊರಿಗೆ ಒಂದು ದೊಡ್ಡ ಲಾಭವಾಯಿತು. ತಾ||೨೩-೭-೧೯೩೫

ಭಜನಾ ಮೇಳದ ಕಾರ್ಯದರ್ಶಿಗಳು:
೧ ಓಂಕಾರೆಪ್ಪ ಗೌಡನಕಟ್ಟೆ
೨ ನೀಲಕಂಠಪ್ಪ ಉಳಸಾಂದ್ರ

ಮಾನಪತ್ರ ಸಮಾರಂಭ.

ಗೋಕಾಕದ ಪುರನಿವಾಸಿಗಳಾದ ಶ್ರೀ. ಎಸ್. ಸಿ. ಹಿರೇಮಠ ಮತ್ತು ಶ್ರೀ. ಎಮ್. ಬಿ. ಬಾಗಿ ಇವರು ಬರೆದ 'ಸಂಪೂರ್ಣ ಹೇಮರಡ್ಡಿ ಮಲ್ಲಮ್ಮ' ಮತ್ತು 'ಶಿವಜನ್ಮ' ಎಂಬ ನಾಟಕಗಳನ್ನು ಗೋಕಾಕದವರೇ ಆದ 'ಗಾಯನ ಚತುರ' ಶ್ರೀ. ತುಕಾರಾಮ ಬುವಾ ಇವರು ಅದ್ವಿತೀಯವಾಗಿ ಆಡಿ ತೋರಿಸಿದ್ದರಿಂದ ಗೋಕಾಕದ ಪುರ ಪ್ರಮುಖರು ಅವರಿಗೆ ಕಳೆದ ತಿಂಗಳ ೨೫ ನೆಯ ತಾರೀಖಿನ ದಿವಸ ಮಾನಪತ್ರವನ್ನರ್ಪಿಸಿದರು.

ಓರ್ವ ಪುರವಾಸಿ.

ಸಮಾಜ ಬಾಂಧವರಲ್ಲಿ ವಿಜ್ಞಾಪನೆ:—

ಜೇವರಗಿ ತಾಲೂಕಿಗೆ ಸೇರಿದ ಆಲೂರು ಹಿರೇಮಠದಲ್ಲಿ ಸಂಸ್ಕೃತ ಪಾಠಶಾಲೆಯು ಸ್ಥಾಪನೆಯಾಗಿರುತ್ತದೆ. ಈ ಪಾಠಶಾಲೆಯಲ್ಲಿ ಸಂಸ್ಕೃತ ವಿದ್ಯೆಯ ಜೊತೆಗೆ ವೀರಶೈವರಿಗೆ ಬೇಕಾದ ಶಿವಪೂಜಾದಿ ನಿತ್ಯ ಕರ್ಮಗಳನ್ನೂ ದೀಕ್ಷಾದಿ ಸಂಸ್ಕಾರವಿಧಿಗಳನ್ನೂ ಅಭ್ಯಾಸ ಮಾಡಿಸಲಾಗುತ್ತದೆ. ಕನ್ನಡ ನಾಲ್ಕನೇ ಪುಸ್ತಕದವರೆಗೂ ಅಭ್ಯಾಸಮಾಡಿದ ವೀರಮಾಹೇಶ್ವರ ವಟುಗಳನ್ನು ಪಾಠಶಾಲೆಯಲ್ಲಿ ಅಭ್ಯಾಸಕ್ಕಾಗಿ ತೆಗೆದುಕೊಳ್ಳಲಾಗುತ್ತದೆ. ಈ ಪಾಠಶಾಲೆಯ ವಿಶಿಷ್ಟ ಚಾಲಕತ್ವವನ್ನು ಮಠದ ಪಟ್ಟಾಧಿಕಾರಿಗಳಾದ ಶ್ರೀಗಳವರೇ ವಹಿಸಿಕೊಂಡಿರುತ್ತಾರೆ. ಕಾರಣ ತಮ್ಮಿಂದ ಧರ್ಮಕಾರ್ಯಕ್ಕೆ ಸಹಾಯವಾಗುವಂತಾಗಲಿ ಎಂದು ಸಮಾಜ ಬಾಂಧವರಾದ ತಮ್ಮಲ್ಲಿ ವಿಜ್ಞಾಪನೆಯು.

ತಮ್ಮ

ಆಲೂರು ಗ್ರಾಮದ ಸಮಸ್ತ ದೈವದವರು.



ವಿವಿಧ ವರ್ತಮಾನ.

ಹುಲಿಯ ಸಿಟ್ಟು.

ಆಸಾಮ ಪ್ರಾಂತದ ಕಚರ ಎಂಬ ಗ್ರಾಮದಲ್ಲಿ ಒಬ್ಬ ಪ್ರಸಿದ್ಧ ಬೇಟೆಗಾರನು ಒಂದು ಹುಲಿಯನ್ನು ಬೆನ್ನಟ್ಟಿ ಗುಂಡು ಹಾಕಿದನು. ಅದು ಗಾಯ ಹೊಂದಿ ತಪ್ಪಿಸಿಕೊಂಡು ಹೋಯಿತು. ಮರುದಿನ ಆ ಬೇಟೆಗಾರನು ಕೆಲವು ಜನರೊಡನೆ ಶೋಧಿಸಹತ್ತಿ ಮಧ್ಯಾಹ್ನದಲ್ಲಿ ಅವರೆಲ್ಲ ವಿಶ್ರಾಂತಿಗಾಗಿ ಕುಳಿತಿರಲು ಆ ಗಾಯ ಪಟ್ಟ ಹುಲಿಯು ಅಕಸ್ಮಾತ್ತಾಗಿ ಆ ಬೇಟೆಗಾರನ ಮೇಲೆ ಹಾರಿಬಿದ್ದಿತು. ಉಳಿದವರು ಕೈಯಲ್ಲಿ ಬಂದೂಕಗಳಿದ್ದರೂ ತಪ್ಪಿ ಆ ಬೇಟೆಗಾರನಿಗೆ ಗುಂಡು ಬಿದ್ದೀತೆಂದು ಹೊಡೆಯದೆ ಚಿಂತಿಸಹತ್ತಿದರು. ಅಷ್ಟರಲ್ಲಿ ಒಬ್ಬನು ಚತುರತನದಿಂದ ಗುಂಡುಗಳನ್ನು ಹವೆಯಲ್ಲಿ ಹಾರಿಸಹತ್ತಲು ಹುಲಿಯು ಅಂಜಿ ಬಿಟ್ಟು ಹೋಯಿತು. ಆದರೆ ಅಷ್ಟರಲ್ಲಿಯೇ ಅದು ಆ ಮನುಷ್ಯನ ತಲೆಯ ಪರಟೆಯನ್ನು ಕಿತ್ತುದರಿಂದ ಅವನು ಮನೆಗೆ ಹೋದ ಕೂಡಲೆ ಮರಣ ಹೊಂದಿದನು. ಪಾಪ! ಇದು ಅವನ ೧೩ ನೆಯ ಹುಲಿಯ ಬೇಟೆಯಂತೆ.

ವಂಗ ವೀರನ ಸ್ಮಾರಕ.

ಕಲಕತ್ತೆಯ ಕೆಲ ಪ್ರಸಿದ್ಧ ಮುಂದಾಳುಗಳು ಬಂಗಾಲದ ಪ್ರಸಿದ್ಧ ಮುಂದಾಳುವಾದ ಶ್ರೀ ಸುರೇಂದ್ರನಾಥ ಬ್ಯಾನರ್ಜಿ ಇವರ ಸ್ಮಾರಕವನ್ನು ಮಾಡುವದಕ್ಕಾಗಿ ನಿಧಿಯನ್ನು ಕೂಡಿಸಹತ್ತಿದ್ದಾರೆ. ಈ ನಿಧಿಗೆ ಸರ ತೇಜ ಬಹಾದ್ದೂರ ಸಪ್ರು ಇವರು ೫೦೦ ರೂ. ಗಳನ್ನು ಕಾಣಿಕೆಯಾಗಿ ಅರ್ಪಿಸಿದ್ದಾರೆ.

ಪುಣೆಯಲ್ಲಿ ಬ್ರಾಹ್ಮಣೇತರ ಪಕ್ಷ.

ಬರಲಿರುವ ಹೊಸ ರಾಜ್ಯ ಪದ್ಧತಿಯಲ್ಲಿ ಬ್ರಾಹ್ಮಣೇತರರು ಬೇರೆಯಾಗಿದ್ದುಕೊಂಡು ಪ್ರಾಂತಿಕ ಶಾಸನಸಭೆಗಳ ಚುನಾವಣೆಗೆ ನಿಲ್ಲಬೇಕೆಂದೂ, ಹೀಗಾದರೆ ೪೦-೫೦ ಸ್ಥಾನಗಳನ್ನಾದರೂ ಸಹಜವಾಗಿ ಆಕ್ರಮಿಸಬಹುದೆಂದೂ ಪುಣೆಯಲ್ಲಿ ಡಿ. ಬ. ಕಂಬಳಿಯವರ ಬಂಗ್ಲೆಯಲ್ಲಿ ಕೂಡಿದ ಬ್ರಾಹ್ಮಣೇತರರ ಸಭೆಯಲ್ಲಿ ನಿರ್ಣಯಿಸಲಾಯಿತು. ತಮ್ಮ ಪಕ್ಷದ ಸಂಘಟನೆಗಾಗಿ ಪುಣೆಯಲ್ಲಿ ಒಂದು ಸಾಪ್ತಾಹಿಕ ಪತ್ರಿಕೆಯನ್ನು ಪ್ರಾರಂಭಿಸಬೇಕೆಂದೂ ಗೊತ್ತಾಯಿತು.

ಮಧ್ಯಾಹ್ನದಲ್ಲಿ ಚಿಕ್ಕೆ ಕಂಡಿತು!

ಕಳೆದ ತಿಂಗಳ ೨೭ ನೆಯ ತಾರೀಖಿನ ದಿವಸ ಆರಾ ಎಂಬ ಗ್ರಾಮದಲ್ಲಿ ಮಧ್ಯಾಹ್ನದಲ್ಲಿಯೇ ತೇಜಃಪುಂಜವಾದ ನಕ್ಷತ್ರವು ಕಾಣಿಸಿತು. ಊರ ಜನರೆಲ್ಲ ಎಷ್ಟೋ ಹೊತ್ತಿನವರೆಗೆ ಅದನ್ನು ನೋಡಿದರು.

ಸುಧಾರಿಸಿದ ಜನಾಂಗದ ಕೃತ್ಯವಿದು!

ಅಮೇರಿಕಾದಲ್ಲಿ ಇಬ್ಬರು ನಿಗ್ರೋಜನರು ಒಬ್ಬ ಶ್ವೇತ ವನಿತೆಯ ಮೇಲೆ ಏರಿ ಹೋಗಿ ಗಾಯಪಡಿಸಿದರಂತೆ. ಆದ್ದರಿಂದ ಶಿರಿಫರು ಅವರನ್ನು ಹಿಡಿದುಕೊಂಡು ನ್ಯಾಯಸ್ಥಾನಕ್ಕೆ ಒಯ್ಯುತ್ತಿರುವಾಗ ಬಿಳಿಯ ಜನರು ಅವರನ್ನು ಜಗ್ಗಿಕೊಂಡು ಹೋಗಿ ಮನಬಲ್ಲಂತೆ ಹೊಡೆದರು. ಅನಂತರ ಯಾವ ಕ್ರಿಸ್ತೀ ದೇವಾಲಯದಲ್ಲಿ ಆ ನಿಗ್ರೋಗಳು ಆ ಶ್ವೇತ ಸ್ತ್ರೀಯನ್ನು ಅಪಾಯಗೊಳಿಸಿದ್ದರೋ ಅಲ್ಲಿಯವರೆಗೆ ನಾಲ್ಕು ಮೈಲಿನ ತನಕ ಅವರನ್ನು ಹೊಡೆದೋಡಿಸಿಕೊಂಡು ಹೋಗಿ ಅಲ್ಲಿ ಒಂದು ಗಿಡಕ್ಕೆ ಅವರಿಗೆ ಉರ್ಲು ಹಾಕಿ ಕೊಂದರು. ಕೂಡಿದ ಜನರೆಲ್ಲ ಕುಸ್ತೀ ನೋಡುವವರಂತೆ ಇದನ್ನು ನೋಡಿ ಚಪ್ಪಾಳೆಯನ್ನಿಕ್ಕಿದರು. ಇದೂ ಒಂದು ಬಿಳಿದು ಕರಿದೆಂಬ ವರ್ಣಭೇದದ ಪರಿಣಾಮ.

ಪರಲೋಕದಲ್ಲಿಯಾದರೂ ಲಗ್ನವಾದೀತು!

ಕಲಕತ್ತೆಯ ಕುಮಾರಿ ಅಂಬಾ ಎಂಬವಳು ಸುಶೀಲಚಂದ್ರ ಎಂಬವನನ್ನು ಪ್ರೀತಿಸುತ್ತಿದ್ದಳು. ಆದರೆ ಅವಳ ವಿವಾಹವು ಪಾಟಣಾದಲ್ಲಿಯ ಒಬ್ಬ ಡಾಕ್ಟರನ ಮಗನೊಡನೆ ಮೊದಲೇ ಆಗಿದ್ದರಿಂದ ಅವಳ ಮನೋದಯವು ಪೂರ್ಣವಾಗಲಿಲ್ಲ. ಕಾರಣ ಆ ಪ್ರಣಯಿಗಳಿಬ್ಬರೂ ಪರಲೋಕದಲ್ಲಿಯಾದರೂ ತಮ್ಮ ವಿವಾಹವು ತಪ್ಪದೆ ಆಗಲೆಂದು ನೆನಿಸಿ ಇಬ್ಬರೂ ಕೂಡಿಯೇ ಒಂದು ಹೊಂಡದಲ್ಲಿ ಧುಮುಕಿ ಪ್ರಾಣತ್ಯಾಗಮಾಡಿದರು.

ಅಬಸೀನಿಯಾ ಪಕ್ಷಕ್ಕೆ ಬಿಳಿಯ ಸೈನಿಕರು.

ದಕ್ಷಿಣಾಫ್ರಿಕೆಯ ಮುಖ್ಯ ಬಂದರವಾದ ಕೇಪಟೌನಿನಲ್ಲಿ ಬಿಳಿಯ ಸೈನಿಕರನ್ನು ಕೆಲಸಕ್ಕೆ ನೇಮಿಸಿಕೊಂಡು ಅಬಸೀನಿಯಾದ ಪಕ್ಷದಿಂದ ಹೋರಾಡಲು ಕಳಿಸಲಾಗಿದೆ. ಅವರನ್ನು ಕೂಡಲೆ ಕಳಿಸಬೇಕೆಂದು ಅಬಸೀನಿಯಾ ಬಾದಶಹರ ಕಡೆಯಿಂದ ತಂತಿ ಬಂದದ್ದರಿಂದ ಅವರನ್ನು ವಿಮಾನ ಮಾರ್ಗವಾಗಿ ಕಳಿಸುವ ಏರ್ಪಾಟು ಮಾಡಲಾಗಿದೆ.

ಹಬಸೀ ಜನರ ನಿಷೇಧ.

ಲಂಡನದಲ್ಲಿಯ ಹಬಸೀ ಜನರು ಸಭೆ ನೆರೆಯಿಸಿ ಅಬಸೀನಿಯಾದ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಲಾಯಿತು. ಹಿಂದೀ ಮತ್ತು ಚೀನೀ ಜನರು ಸೀ. ಮುಸೋಲಿನಿಯ ವಿಚಾರವನ್ನು ನಿಷೇಧಿಸಬೇಕೆಂಬ ಸೂಚನೆಯೂ ಸಭೆಯಲ್ಲಿ ಅಂಗೀಕೃತವಾಯಿತು.

ಹಿಂದೀ ಹಡಗವು ಮುಳುಗಿತು.

'ಸಿಂದ್ಯ ಸ್ಟೀಮ ನೇವ್ಹಿಗೇಶನ್ ಕಂಪನಿ' ಯ "ಬರ್ಮಿಸ್ಥಾನ" ಎಂಬ ಹೆಸರಿನ ಉಗಿಹಡಗವು ಕ್ಯಾಕವು ಬಂದರದಲ್ಲಿ ಪ್ರವೇಶಿಸುತ್ತಿರುವಾಗ ಆಖಾತದ ಮಧ್ಯ ಭಾಗದಲ್ಲಿದ್ದ ಒಂದು ಕಠಿಣವಾದ ವಸ್ತುವಿಗೆ ಬಡಿದದ್ದರಿಂದ ತಳದಲ್ಲಿ ಒಂದು ದೊಡ್ಡ ತೂತು ಬಿದ್ದು ಹಡಗದಲ್ಲಿ ನೀರು ಏರಹತ್ತಿತು. ಸಲ್ಪ ಹೊತ್ತಿನಲ್ಲಿಯೇ ನೀರು ಬಾಯುಲರನ್ನು ತಣ್ಣಗೆ ಮಾಡಿ ಬಿಟ್ಟಿತು. ಅಷ್ಟರಲ್ಲಿ ಮತ್ತೊಂದು ಹಡಗವು ಧಾವಿಸಿಬಂದು ಹಡಗದ ಮೇಲಿದ್ದ ೨೯೯ ಜನ ಪ್ರವಾಸಿಗಳನ್ನು ರಕ್ಷಿಸಿತು. ರಂಗೂನಕ್ಕೆ ಹೋಗುವ ಅಂಚೆಯೂ ಇದರಲ್ಲಿಯೇ ಇದ್ದಿತಂತೆ. ಅವನ್ನೆಲ್ಲ ಸುರಕ್ಷಿತವಾಗಿ ಮತ್ತೊಂದು ಹಡಗವು ಬಂದರಕ್ಕೆ ಮುಟ್ಟಿಸಿತು. ಇತ್ತ ಈ ಹಡಗವು ಕೂಡಲೆ ಮುಳುಗಿ ಹೋಯಿತು. ಕಂಪನಿಯವರು ಇದನ್ನು ಎರಡು ವರ್ಷಗಳ ಪೂರ್ವದಲ್ಲಿ ಕೊಂಡುಕೊಂಡಿದ್ದರಂತೆ.

ಮೂರ್ತಿಯನ್ನು ಎತ್ತಿದ್ದಕ್ಕಾಗಿ ನಿಷೇಧ.

ರಂಗೂನದಲ್ಲಿಯ ಕಾಲೀಮಾತೆಯ ಮೂರ್ತಿಯನ್ನು ಅಲ್ಲಿಯ 'ಇಂಪ್ರೂವ್ಹಮೆಂಟ ಟ್ರಸ್ಟ' ನವರು ಎತ್ತಿ ತೆಗೆದು ಮತ್ತೊಂದು ಸ್ಥಾನದಲ್ಲಿ ಸ್ಥಾಪನ ಮಾಡಿ ಮೊದಲಿನ ದೇವಾಲಯವನ್ನು ಕೆಡವಿಸಿದ್ದರಿಂದ ಹಿಂದು ಮಹಾಸಭೆಯ ಮಧ್ಯವರ್ತಿ ಸಂಘದವರು ಬ್ರಹ್ಮದೇಶದ ಗವ್ಹರ್ನರರ ಕಡೆಗೆ ನಿಷೇಧವರ ತಂತಿಯನ್ನು ಕಳಿಸಿದ್ದಾರೆ.

ಉಗಿಬಂಡಿಯಲ್ಲಿಯೇ ಹೆತ್ತಳು!

ಕಳೆದ ತಿಂಗಳ ೩೦ ನೆಯ ತಾರೀಖಿನ ದಿವಸ ಕೊಲ್ಹಾಪುರದಿಂದ ೬|| ಗಂಟೆಗೆ ಹೊರಡುವ ಉಗಿಬಂಡಿಯಲ್ಲಿ ೧೯ ವರ್ಷದ ಒಬ್ಬ ಮುಸಲ್ಮಾನ ಸ್ತ್ರೀಯು ಪ್ರಸೂತಳಾದಳು. ಡಬ್ಬಿಯೊಳಗಿನ ಸ್ತ್ರೀಯರೆಲ್ಲ ಅವಳಿಗೆ ಸಹಾಯ ಮಾಡಿದರು. ಅವಳ ಸ್ಥಾನವು ಮಿರಜೆಯಾದುದರಿಂದ ಅಲ್ಲಿಗೆ ಅವಳನ್ನು ಕಳಿಸಲಾಯಿತು.

೫೦೦ ರೂ. ಗಳ ೩ ನೇ ಕ್ಲೇಮು ಸಿಕ್ಕಿತು!!

ಸ್ವ ರಾ ಜ್ಯ

ಬ್ಯಾಂಕಿಂಗ ಮತ್ತು ಇನ್ಶುಅರನ್ಸ
ಕಂಪನಿ, ಲಿಮಿಟೆಡ್; ಧಾರವಾಡ.

ಇವರಿಗೆ—

ಮಹಾಶಯರೇ,

ಶಂಕರೆಪ್ಪ ಮಲ್ಲಪ್ಪ ಕೂಡ್ಲಂಣನವರ, ಸಾ|| ಧಾರವಾಡ ಇವರು ಮಾಡುವ ಶರಣಾರ್ಥಿಗಳು—

ನಾನು ನಿಮ್ಮ ಕಂಪನಿಯ ಪಾಲಿಸಿದಾರನಿದ್ದೆ. ನನಗೆ ಕೂಸು ಜನನವಾದ ಕೂಡಲೇ ಅದರ ಜನನ ಉತಾರವನ್ನು ನಿಮಗೆ ಕಳಿಸಿಕೊಟ್ಟೆ. ನೀವು ಯಾವ ತೊಂದರೆಯೂ ಇಲ್ಲದೆ ನನಗೆ ೫೦೦ ರೂಪಾಯಿಗಳನ್ನು ಕೊಟ್ಟಿರುತ್ತೀರಿ. ಯಾವತ್ತೂ ನನ್ನ ದೇಶಬಾಂಧವರು ಈ ಕಂಪನಿಯಲ್ಲಿ ವಿಮಾ ಇಳಿಸಿ ಲಾಭಹೊಂದುವರೆಂದು ಆಸಿಸುತ್ತೇನೆ.

ಧಾರವಾಡ
ತಾ|| ೬-೬-೩೫. (ಸಹಿ) ಶಂಕರಪ್ಪ ಮಲ್ಲಪ್ಪ ಕೂಡ್ಲಂಣನವರ

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

ವೀರಶೈವರ

ಹೊಸ ಮುದ್ರಣಾಲಯ! ಮುದ್ದಾದ ಮುದ್ರಣ!!

ನಿಜಾಮು ಕರ್ನಾಟಕ ಮಹಾಜನಗಳ
ಅನುಕೂಲಕ್ಕಾಗಿ
ಹೊಸದಾಗಿ ಪ್ರಾರಂಭಿಸಲ್ಪಟ್ಟ

ಕಲ್ಯಾಣ ಕರ್ನಾಟಕ
ಪ್ರಿಂಟಿಂಗ್ ಪ್ರೆಸ್, ಗುಲಬರ್ಗಾ.

ಕಳೆದ ಜಾನೇವಾರಿ ತಿಂಗಳಿನಲ್ಲಿಯೇ ಕಲ್ಲಬುರ್ಗಿಯಲ್ಲಿ ಮೇಲಿನ ಹೆಸರಿನ ಒಂದು ಮುದ್ರಣಾಲಯವು ಹೊಸದಾಗಿ ಪ್ರಾರಂಭಿಸಲ್ಪಟ್ಟಿದೆ. ಕನ್ನಡ, ಇಂಗ್ಲೀಷ, ಉರ್ದು ಮತ್ತು ಮರಾಠಿ ಭಾಷೆಗಳಲ್ಲಿ

ಕಾರ್ಡು, ಪಾಕೀಟು, ಹುಂಡೀ ಬುಕ್, ಪ್ರಾಮಿಸರೀ ನೋಟಬುಕ್,
ಚಿಟ್ಟಿ ಬುಕ್, ಲೆಟರ್ ಹೆಡ್, ಪೇಟ ಭಾವ, ವಿಜಿಟಿಂಗ್
ಕಾರ್ಡ್ಸ; ಲಗ್ನ ಮೊದಲಾದ ಶುಭಕಾರ್ಯಗಳ ಪತ್ರಿಕೆ;
ಜಾತ್ರೆಯ ಪತ್ರಿಕೆ; ನಾಟಕದ ಹ್ಯಾಂಡ್‌ಬಿಲ್
ಮತ್ತು ವ್ಯಾಪಾರಿಗಳಿಗೂ; ಇತರರಿಗೂ
ಉಪಯೋಗಬೀಳುವ ಇತರ
ಯಾವ

ಮುದ್ರಣ ಕೆಲಸಗಳನ್ನಾದರೂ ಸಕಾಲಕ್ಕೆ ಉತ್ತಮವಾಗಿಯೂ, ಮನೋಹರವಾಗಿಯೂ ಯೋಗ್ಯ ಬೆಲೆಯಿಂದ ಮಾಡಿಕೊಡುವೆವು. ನಮ್ಮಲ್ಲಿ ಎಲ್ಲ ಜಾತಿ ಮತ ಪಂಥದವರಿಗೆ ಉಪಯೋಗಬೀಳುವ ಪಡಿಯಚ್ಚು (ಬ್ಲಾಕು) ಗಳೂ ಇವೆ.

ಕನ್ನಡ ಮರಾಠಿ ಭಾಷೆಗಳಲ್ಲಿ ಪುಸ್ತಕಗಳನ್ನು ಕೂಡಾ ಮುದ್ರಿಸಿಕೊಡುವೆವು.

ಪರಸ್ಥಳದವರು ಟಪಾಲ ಮೂಲಕ ತಮಗೆ ಬೇಕಾದ ಯಾವದೇ ಕೆಲಸಗಳನ್ನು ಮಾಡಿಸಿ ತರಿಸಿಕೊಳ್ಳಬಹುದು.

ನೂತನವಾಗಿ ಪ್ರಾರಂಭವಾದ ಈ ಕಾರ್ಯಕ್ಕೆ
ನಿಜಾಮು ಕರ್ನಾಟಕಸ್ಥರು ಹೆಚ್ಚಾಗಿ ವೀರಶೈವರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಬಾಲಕರಾದಿಯಾಗಿ ಸಕಲರಿಗೂ ಬಹು ಉಪಯುಕ್ತವಾದ ಧಾರ್ಮಿಕ, ಸಾಮಾಜಿಕ, ನೈತಿಕ ಮೊದಲಾದ ವಿಷಯಗಳ ಒಳ್ಳೆಯ ಕನ್ನಡ ಪುಸ್ತಕಗಳೂ ನಮ್ಮಲ್ಲಿ ವಿಕ್ರಯಕ್ಕೆ ದೊರೆಯುತ್ತವೆ.

ಎಸ್. ಸಿ. ಶಿವಲಿಂಗಣ್ಣ
ಮ್ಯಾನೇಜರ್
ಕಲ್ಯಾಣ ಕರ್ನಾಟಕ ಪ್ರೆಸ್, ಗುಲಬರ್ಗಾ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಧಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

B. V. Bhumraddi.
ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ**

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ.

ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್‌ಪ್ರಚುರ ಲೇಖಗಳಿವೆ.
ತ್ವರೆಮಾಡಿರಿ—ಬೆಲೆ ೧ ರೂ.—ತೀರುತ್ತಿವೆ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಷ್ಪ] ವಾ. ಚಂ. ೩-೪-೦ [ಮೇಲೊಂದು ಉಚಿತಪುಷ್ಪ

ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ನಾಲ್ಕನೆಯ ಪುಷ್ಪವಾದ

ಶ್ರೀ. ಹ. ಪಿ. ಜೋಶಿಯವರ

ಇದೀಗ ಹೊರಟಿದೆ] **ರಾಜವಲ್ಲಭ** [ಬೆಲೆ ಹತ್ತು ಆಣೆ.

ಕೀಚಕ ವಧೆ ಕಥೆಯನ್ನು ಆಧರಿಸಿ ಬರೆದ ಹೊಸ ಸಂಗೀತ ನಾಟಕ. ಉಚಿತ ಸಂಭಾಷಣೆ, ಮಿತವಿನೋದ, ಸುರಮ್ಯ ಪದ್ಯ ಮಾಲಿಕೆ.

ಜಯಕರ್ನಾಟಕ ಕಾರ್ಯಾಲಯ
ಧಾರವಾಡ.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಸೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಆರಳೇ ಪೇಟೆ, ತುಮಕೂರು.
(ಮೈಸೂರು ಸ್ಟೇಟ್)

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!



೧ ಎ. ಎಂ. ದಿನಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟಿ.
ರವಿವಾರಪೇಟಿ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿ?? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯುಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿ[illegible]ಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿವಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಆದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಪಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುನಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ವರನು ಬೇಕು.

P. 18 ಹದಿನಾರು ವರ್ಷ ಪ್ರಾಯದ ಸುರೂಪಿಯೂ, ಗೃಹಕೃತ್ಯದಲ್ಲಿ ನಿಪುಣೆಯೂ, ಕನ್ನಡ ಓದುಬರಹ ಬಲ್ಲವಳೂ ಆದ ಗೌಡ ಸಾರಸ್ವತ ಬ್ರಾಹ್ಮಣ ಕನ್ಯಾ ವಧುವಿಗೆ ೨೨ ವರ್ಷಕ್ಕೆ ಮೀರದ ಸರಕಾರಿ ಉದ್ಯೋಗವಿರುವ ಸ್ವಪ್ನಂದದ ವರನು ಬೇಕು.

ವಧುವು ಬೇಕು.

W. 17 ಸರಕಾರಿ ಕೆಲಸದಲ್ಲಿ ತಿಂಗಳಿಗೆ ೩೦ ರೂ ಸಂಬಳವಿರುವ ೨೫ ವರ್ಷ ಪ್ರಾಯದ ಆರೋಗ್ಯವಂತರಾದ ಓರ್ವ ಗೌಡ ಸಾರಸ್ವತ ಬ್ರಾಹ್ಮಣ ಯುವಕರಿಗೆ ೨೮ ವರ್ಷಕ್ಕೆ ಮೀರದ ಸುಂದರಿಯೂ, ಗೃಹಕೃತ್ಯಗಳನ್ನು ನಿರ್ವಹಿಸಬಲ್ಲವಳೂ ಆದ ವಿದ್ಯಾವಂತ ವಿಧವೆಯು ಬೇಕು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ಪೈ
ಶಿವಪೇಟೆ ಪುತ್ತೂರು.ದ. ಕ.

ಅಂದವಾದ ಮುದ್ರಣ! ಅಚ್ಚುಕಟ್ಟಾದ ಬೈಂಡು!

ಸಂಕ್ಷಿಪ್ತ

ಮಹಾದೇವಿಯಕ್ಕನ ಜೀವನ ಚರಿತ್ರೆ.

ವಚನವಾಙ್ಮಯದಲ್ಲಿ ಉಚ್ಚಸ್ಥಾನವನ್ನು ಪಡೆದು ಪ್ರಸಿದ್ಧಿ ಪಡೆದ ಉಡುತಡಿಯ ಮಹಾದೇವಿಯಕ್ಕನ ಜೀವನ ಕಥೆ. ವಚನಗಳಿಂದ ಕೂಡಿ ಭಾವ ಪೂರ್ಣವಾಗಿ ಬರೆಯಲ್ಪಟ್ಟಿದೆ.

ಬೆಲೆ ಎರಡಾಣೆ ಮಾತ್ರ.

ಲೇಖಕರು:— ಶ್ರೀಮಾನ್ ಟಿ. ಎನ. ಮಹಾದೇವಯ್ಯನವರು

ಪುಸ್ತಕ ದೊರೆಯುವ ವಿಳಾಸ— ಶ್ರೀ ಸರ್ಪಭೂಷಣ ಮಠ
ಬಳೇಪೇಟೆ.
ಬೆಂಗಳೂರು ಸಿಟಿ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!



೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, **ಹುಬ್ಬಳ್ಳಿ.**
ಬ್ರ್ಯಾಂಚ್ ಆಫೀಸ್:-
ಅಬಿಡ್ಸ ಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!

ಸಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರು, ನೀವು ನಾಲ್ಕು ಮಂದಿಗೆ ಕೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿವಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನ ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ ಈಗ ಹತ್ತ ಹನ್ನೆರಡ ವರ್ಷದಾಗ ನಮ್ಮ **ಧಾರವಾಡದಾಗ, ಗದಗಿನಾಗ, ಹುಬ್ಬಳ್ಳ್ಯಾಗ** ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕು ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯು** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಪಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು. ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ವರನು ಬೇಕು.

P. 18 ಹದಿನಾರು ವರ್ಷ ಪ್ರಾಯದ ಸುರೂಪಿಯೂ, ಗೃಹ ಕೃತ್ಯದಲ್ಲಿ ನಿಪುಣೆಯೂ, ಕನ್ನಡ ಓದುಬರಹ ಬಲ್ಲವಳೂ ಆದ ಗೌಡ ಸಾರಸ್ವತ ಬ್ರಾಹ್ಮಣ ಕನ್ಯಾ ವಧುವಿಗೆ ೨೨ ವರ್ಷಕ್ಕೆ ಮೀರದ ಸರಕಾರಿ ಉದ್ಯೋಗವಿರುವ ಸ್ವವೃಂದದ ವರನು ಬೇಕು.

ವಧುವು ಬೇಕು.

W. 17 ಸರಕಾರಿ ಕೆಲಸದಲ್ಲಿ ತಿಂಗಳಿಗೆ ೩೦ ರೂ ಸಂಬಳವಿರುವ ೩೫ ವರ್ಷ ಪ್ರಾಯದ ಆರೋಗ್ಯವಂತರಾದ ಓರ್ವ ಗೌಡ ಸಾರಸ್ವತ ಬ್ರಾಹ್ಮಣ ಯುವಕರಿಗೆ ೨೪ ವರ್ಷಕ್ಕೆ ಮೀರದ ಸುಂದರಿಯೂ, ಗೃಹಕೃತ್ಯಗಳನ್ನು ನಿರ್ವಹಿಸಬಲ್ಲವಳೂ ಆದ ವಿದ್ಯಾವಂತ ವಿಧವೆಯು ಬೇಕು.

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಕೆ. ಎಸ್. ಪೈ
ಶಿವಪೇಟೆ ಪುತ್ತೂರು.ದ. ಕ.

ಅಂದವಾದ ಮುದ್ರಣ! ಅಚ್ಚುಕಟ್ಟಾದ ಬೈಂಡು!

ಸಂಕ್ಷಿಪ್ತ

ಮಹಾದೇವಿಯಕ್ಕನ ಜೀವನ ಚರಿತ್ರೆ.

ವಚನವಾಙ್ಮಯದಲ್ಲಿ ಉಚ್ಚಸ್ಥಾನವನ್ನು ಪಡೆದು ಪ್ರಸಿದ್ಧಿ ಪಡೆದ ಉಡುತಡಿಯ ಮಹಾದೇವಿಯಕ್ಕನ ಜೀವನ ಕಥೆ. ವಚನಗಳಿಂದ ಕೂಡಿ ಭಾವ ಪೂರ್ಣವಾಗಿ ಬರೆಯಲ್ಪಟ್ಟಿದೆ.

ಬೆಲೆ ಎರಡಾಣೆ ಮಾತ್ರ.

ಲೇಖಕರು:— **ಶ್ರೀಮಾನ್ ಟಿ. ಎನ್. ಮಹಾದೇವಯ್ಯನವರು**

ಪುಸ್ತಕ ದೊರೆಯುವ ವಿಳಾಸ— **ಶ್ರೀ ಸರ್ಪಭೂಷಣ ಮಠ**
ಬಳೇಪೇಟೆ.
ಬೆಂಗಳೂರು ಸಿಟಿ.

ಹೊಸ ವರುಷ ಬಂದಿತು ! ಜಾಗ್ರತೆ ಚಂದಾದಾರರಾಗಿರಿ ! !

ಧಾರ್ಮಿಕ ಉಜ್ವಲ ಲೇಖನಗಳ ಪತ್ರಿಕೆ.

ಸಂಪಾದಕರು:— ಶ್ರೀ. ಹರ್ಡೇಕರ್ ಮಂಜಪ್ಪನವರು

ಶರಣ ಸಂದೇಶ.

ವಾರ್ಷಿಕ ಚಂದಾ:- ಮೂರು ರೂಪಾಯಿಗಳುಮಾತ್ರ

ಹೊಸ ವರುಷದಿಂದ ಹೊಸ ಲೇಖನಗಳ ಏರ್ಪಾಟು.

(ಹೊಸ ವರುಷ ಅಗಸ್ಟ ೧೫ ನೆಯ ತಾರೀಖಿಗೆ ಪ್ರಾರಂಭ.)

ಈಗಿನಂತೆಯೇ

ರಾಜಕೀಯ, ಸಾಂಪತ್ತಿಕ, ಮತ್ತು ವಿವಿಧವಿಷಯಗಳನ್ನು ಪ್ರಕಟಿಸುವುದಲ್ಲದೆ

ಕೈ. ವೀರಬಸವಪ್ಪ ಶ್ರೇಷ್ಠಿಯವರು ಭಗವದ್ಗೀತೆಯಲ್ಲಿ ವೀರಶೈವ ತತ್ವಗಳನ್ನು ಸಂಶೋಧನಾತ್ಮಕ ದೃಷ್ಟಿಯಿಂದ ವಿವೇಚಿಸಿದ್ದರ ಕೆಲವು ಮಹತ್ವದ ವಿಚಾರಗಳು, ಕನ್ನಡ ಭಾಷೆಯಲ್ಲಿಯೇ ಇಲ್ಲದಿರುವ ವೇದಗಳಲ್ಲಿಯ ವಿವಿಧ ಸಂಗತಿಗಳು ಮತ್ತು ವೇದಗಳ ಸಂಬಂಧವಾದ ವಿದ್ವಾಂಸರ ವಿಚಾರ ಪರಿಪ್ಲುತ ಶ್ರೇಷ್ಠ ಲೇಖನಗಳು ಈ ಹೊಸ ವರುಷದಿಂದ ಪ್ರಕಟವಾಗುವವು.

ಮ್ಯಾನೇಜರ್— " ಶರಣ ಸಂದೇಶ "
೨೮ ಪೋ. ಆಲಮಟ್ಟಿ ಜಿ. ವಿಜಾಪುರ

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.

ನಾರಿನ ಮೇಲೆ ರಾಮ ಬಾಣ ಔಷಧ.

'ಗಿನೋನಾಲ್'

ನಾರಿನಿಂದ ಬಳಲುವವರು ಈ ನಮ್ಮ ದಿವ್ಯ ಔಷಧವನ್ನು ಎರಡಾವರ್ತಿ ಉಪಯೋಗಿಸಿದರೆ ಖಂಡಿತ ಗುಣಬರುತ್ತದೆ. ಒಮ್ಮೆ ಉಪಯೋಗಿಸಿ ಅನುಭವ ಪಡೆಯಿರಿ. ಒಂದು ಬಾಟ್ಲಯ ಕಿಂ. ೧ ರೂ. ಟಪಾಲವೆಚ್ಚ ಬೇರೆ. ಅನುಪಾನ ಪತ್ರಿಕೆ ಔಷಧದ ಜೊತೆಗೆ.

ಮ್ಯಾನೇಜರ—'ಗಿನೋನಾಲ್' ಡಿಪೋ
ಗುಲಬರ್ಗಾ.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರ| ದಾಕ್ಷಿಣ್ಯಪರನಾನಲ್ಲ| ಲೋಕವಿರೋಧಿ| ಶರಣನಾರಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ. ೨೨೮ || ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವಂದಾ:- ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ೫.	ಆಲಮಟ್ಟಿ- ಸೋಮವಾರ ತಾರೀಖು ೧೯ ನೆಯ ಅಗಸ್ಟ ೧೯೩೫.	ಸಂಚಿಕೆ ೧

ಜನಸೇವೆಯೇ ದೇವರ ಸೇವೆ.

ಅಬಸೀನಿಯಾ ಬಾದಶಹರನ್ನು ಕೊಲ್ಲುವ ಪ್ರಯತ್ನ?

ಇಟಲಿ-ಅಬಸೀನಿಯಾದ ಯುದ್ಧ ಸಿದ್ಧತೆ.

ಫ್ರಾನ್ಸದಲ್ಲಿ ಸಂಧಾನದ ಚರ್ಚೆ.

ಅಬಸೀನಿಯಾ ದೇಶವನ್ನು ಗುಪ್ತ ರೀತಿಯಿಂದ ಪ್ರವೇಶಿಸಿ ಅಬಸೀನಿಯಾ ಬಾದಶಹರನ್ನು ಕೊಲೆ ಮಾಡಬೇಕೆಂದಿದ್ದ ನಾಲ್ಕು ಜನ ಇಟಾಲಿಯನ್ನರನ್ನು ಅಬಸೀನಿಯಾದ ಗಡಿಸೀಮೆಯಲ್ಲಿ ಬಂಧಿಸಲಾಗಿದೆ. ಹಾಗೂ ಅವರಲ್ಲಿ ಮಹತ್ವದ ಕಾಗದ ಪತ್ರಗಳು ದೊರೆತಿವೆ.

ಇನ್ನು ಸ್ವಲ್ಪೇ ದಿವಸಗಳಲ್ಲಿ ಯುದ್ಧವು ಪ್ರಾರಂಭವಾಗಬಹುದಾದುದರಿಂದ ಸೂಚನೆ ಕೊಟ್ಟ ಕೂಡಲೆ ದೇಶ ಬಿಟ್ಟು ಹೊರಟುಹೋಗಬೇಕೆಂದು ಅಬಸೀನಿಯಾದ ಬಾದಶಹರು ಅಲ್ಲಿ ವಾಸಿಸುವ ಬ್ರಿಟಿಶ ಪ್ರಜೆಗಳಿಗೆ ಎಚ್ಚರಿಕೆ ಕೊಟ್ಟಿದ್ದಾರೆ.

ಫ್ರಾನ್ಸದ ಪರರಾಷ್ಟ್ರ ಖಾತೆಯ ಮಂತ್ರಿ ಎಂ. ಲಾವಲ್‌ರವರು ಇಟಲಿಯ ಮಂತ್ರಿಯೊಡನೆ ಗುಪ್ತವಾಗಿ ಒಂದೂಕಾಲು ಗಂಟೆಯವರೆಗೆ ಚರ್ಚೆ ನಡೆಯಿಸಿದರು. ಪ್ರಯೋಜನವೇನೂ ಆದಂತೆ ಕಂಡುಬಂದಿಲ್ಲ.

ದೇಹವೇ ದೇವಾಲಯ

SANGAM CLOTH STORES
Prop: M. S. Hundekar & Sons.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!

೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ ಬೆಳಗಾಂವ.

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, ಹುಬ್ಬಳ್ಳಿ.
ಬ್ರ್ಯಾಂಚ್ ಆಫೀಸ್:-
ಅಬಿಡ್ಸಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ!

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು. ಕಳ್ಳರಿಂದ ಗಂಟೆಲ್ಲಾ ಹೋಗಿದೆ ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ಪಾಪ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರೆ, ನೀವು ನಾಲ್ಕು ಮಂದಿಗೆ ಹೇಳುವರ ಕೇಳುವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನು ಕೇಳಬೇಕೆನ್ನೂದು ನನಗೆ ಗೊತ್ತಿದ್ದ ಈಗ ಹತ್[illegible] ವರ್ಷದಾಗ ನಮ್ಮ **ಧಾರವಾಡದಾ**[illegible]ಗ[illegible]ತ್ಯಾಗ ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ ನಮ್ಮ ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ** ತಿಜೋರಿ ಕೊಂಡಾರ ಸುಖದಿಂದ ಅದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು ಸಾಕುನಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರನ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೩

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ.** ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೫. | ಆಲಮಟ್ಟಿ ಅಗಸ್ಟ ತಾರೀಖು ೧೯ ನೆಯ ಸೋಮವಾರ | ಸಂಚಿಕೆ ೧.

ಬೇಡ ಬೇಡವೆಂದವರಿಗೆ ಮನೆತುಂಬ ನೀರು!
ಬೇಕು ಬೇಕೆಂದವರಿಗೆ ಕಣ್ಣುತುಂಬ ನೀರು!!

ಈ ವರ್ಷದ ಮಳೆಯು ಇಂಥ ವಿಚಿತ್ರವನ್ನುಂಟುಮಾಡಿದೆ. ಉತ್ತರ ಹಿಂದುಸ್ಥಾನದಲ್ಲೆಲ್ಲ ಭಯಂಕರ ಮಳೆಯಾಗಿ ಎಲ್ಲ ನದಿಗಳೂ ಮೇರೆದಪ್ಪಿ ಹರಿಯುತ್ತಲಿವೆ. ಬಿಹಾರ, ಬಂಗಾಲ ಪ್ರಾಂತಗಳಂತೂ ಜಲಮಯವಾಗಿವೆ. ಲಾಹೋರ ಪಾಟ್ನಾ ನಗರಗಳಲ್ಲಿ ನೀರು ಒಳಸೇರಿ ಅನೇಕ ಮನೆಗಳು ಬಿದ್ದಿವೆ. ಪಟ್ಟಣಗಳೇ ಬಿದ್ದು ಹೋಗುವವೋ ಹೇಗೆ ಎಂದೆನಿಸಿದೆ. ಗಯಾದ ಸುತ್ತಲಿನ ೧೦೦ ಮೈಲು ಚೌರಸ ಕ್ಷೇತ್ರವೆಲ್ಲ ಜಲಮಯವಾಗಿದೆ. ಅದರಲ್ಲಿ ೫೦ ಹಳ್ಳಿಗಳು ಸುತ್ತುಗಟ್ಟಲ್ಪಟ್ಟಿರುವವೆಂದು ತಂತಿ ಬಂದಿದೆ. ಗುಲ್ಝಾರ ಭಾಗದ ಆಣೆಕಟ್ಟು ಬಿಚ್ಚಿ ಹೋದದ್ದರಿಂದ ಅದನ್ನು ಸರಿಪಡಿಸಲು ೪೦೦ ಜನ ಕೂಲಿಕಾರರೂ ಎಂಜನಿಯರರೂ, ಓವ್ಹರಸೀಯರರೂ ಕೆಲಸ ನಡೆಸಿದ್ದಾರೆ. ಮುಜಫರಪುರ ಜಿಲ್ಹೆಯಲ್ಲಿ ನೂರಾರು ಮನೆಗಳು ಬಿದ್ದಿವೆ.

ಬಂಗಾಲದ ಸ್ಥಿತಿಯಂತೂ ಹಾಹಾಕಾರವಾಗಿದೆ. ಮನೆಗಳೆಲ್ಲ ಬಿದ್ದುದರಿಂದ ನಿರಾಶ್ರಿತ ಜನರು ರೇಲ್ವೆ ಡಬ್ಬಿಗಳಲ್ಲಿ ವಾಸವಾಗಿದ್ದಾರೆ. ಸಾಕಷ್ಟು ದೋಣಿಗಳಿಲ್ಲದ್ದರಿಂದ ರಾಜ ಮಹಾರಾಜರು ತಮ್ಮ ಆನೆಗಳ ಮೇಲಿಂದ ನೀರಿನಲ್ಲಿದ್ದ ಜನರನ್ನು ಸಂರಕ್ಷಿಸುತ್ತಿದ್ದಾರೆ. ಪದ್ಮಾ ನದಿಗೆ ಮಹಪೂರ ಬಂದದ್ದರಿಂದ ಬಹಾರ ಮಾರ್ಕೆಟ್ ಎಂಬ ವ್ಯಾಪಾರಿ ಕೇಂದ್ರವು ಹರಿದುಹೋಗಿದೆ. ದೇಶಬಂಧು ಚಿತ್ತರಂಜನದಾಸರ ಪಿತ್ರಾರ್ಜಿತ ಮನೆಯೂ ಈ ಮಹಾಪೂರದಲ್ಲಿ ಎಲ್ಲಿ ಹರಿದು ಹೋಗುವದೋ ಎಂಬ ಭೀತಿಯಿದೆ.

ಅತ್ತ ಆ ಸ್ಥಿತಿ; ಇತ್ತ ಅನೇಕ ಕಡೆಗಳಲ್ಲಿ ಕುಡಿಯಲಿಕ್ಕೆ ಸಹ ನೀರಿಲ್ಲ. ದಕ್ಷಿಣದ ವಿಪುಲ ಮಳೆಯಾಗುವ ಪ್ರದೇಶದಲ್ಲಿಯೂ ಎಷ್ಟೋ ಮಳೆಯಿಲ್ಲವೆಂಬ ಹಾಹಾಕಾರವೆದ್ದಿದೆ. ಸಾಂಗಲಿಯಲ್ಲಿ ನಡೆದ ಈ ಒಂದು ಉದಾಹರಣೆಯಿಂದ ಮಳೆಯಿಲ್ಲದ್ದರಿಂದ ಜನರು ಎಷ್ಟು ಹತಾಶರಾಗಿರುವರೆಂಬುದು ಕಂಡು ಬರುವದು. ನದಿಯ ಆಚೆಗಿರುವ ಸಾಂಗ್ಲಿವಾಡಿಯ ಜನರೆಲ್ಲ ಹತಾಶರಾಗಿ ಊರ ಹೊರಗೆ ನೆರೆದು ಮಳೆರಾಯನನ್ನು ತಮ್ಮ ಪದ್ಧತಿಯಂತೆ ಪೂಜೆ ಮಾಡಿ ಆಕಾಶದ ಕಡೆಗೆ ಮುಖ ಮಾಡಿ ಕಣ್ಣೀರು ತಂದರು.

ಆದಿಜನರ ಮೇಲೆ ಆಕ್ರಮಣ.

ಅಹಮದಾಬಾದ ಜಿಲ್ಹೆಯ ಕವಿಠಾ ಎಂಬ ಗ್ರಾಮದಲ್ಲಿ ಆದಿಜನ ಬಾಲಕರು ಶಾಲೆಯಲ್ಲಿ ಉಳಿದ ಬಾಲಕರೊಡನೆ ಕೂಡಿಯೇ ಕೂಡ್ರಿಸಲ್ಪಡುತ್ತಿದ್ದುದರಿಂದ ಸನಾತನಿಗಳು ರೇಗಿ ಆದಿಜನರ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹಾಕಿದ್ದಾರೆ. ಆಗ್ಗೆ ಗಾಂಧೀ ಆಶ್ರಮದ ಕೆಲ ಜನರು ಹೋಗಿ ಅವರ ಮನವೊಲಿಸಲು ಪ್ರಯತ್ನಿಸಲು ಅವರು ವಿಪರೀತವಾಗಿ ಆಶ್ರಮವಾಸಿಗಳ ಮೇಲೆ ಕಲ್ಲೆಸೆದರು; ಪ್ರಾಣ ತೆಗೆದುಕೊಳ್ಳುವೆನೆಂದು ಹೆದರಿಸಿದರು. ಯಾರಾದರು ಸನಾತನಿಗಳು ಈ ಬಗ್ಗೆ ಆದಿಜನರ ಮೇಲೆ ಸಹಾನುಭೂತಿ ತೋರಿಸಿದರೆ ಅವರ ಮೇಲೂ ಬಹಿಷ್ಕಾರ ಹಾಕುವದಕ್ಕಾಗಿ ಹೆದರಿಸಿದ್ದಾರೆ.

ಇಷ್ಟಕ್ಕೇ ಈ ಮಹಾಶಯರು ತಡೆಯದೆ ೨೦೦ ಜನರು ಸೇರಿ ಮರುದಿವಸ ಆದಿಜನರನ್ನು ಓಡಿಸಿ ಅವರ ಗುಡಿಸಲುಗಳಿಗೆ ಬೆಂಕೀ ಹಚ್ಚಿದರು. ಆದಿಜನರು ಈಗ ಪೋಲೀಸರ ಕಡೆಗೆ ಸಂರಕ್ಷಣೆಗಾಗಿ ಧಾವಿಸಿದ್ದಾರೆ.

೭ ಜಾಗೆಗೆ ೩೦೦೦ ಅರ್ಜಿ.

ಪಾಟಣಾದಲ್ಲಿ ಪೋಲೀಸರ ಏಳು ಜಾಗೆಗಳನ್ನು ತುಂಬತಕ್ಕದ್ದಿದ್ದು ಅದಕ್ಕಾಗಿ ೩೦೦೦ ಅರ್ಜಿಗಳು ಬಂದಿರುತ್ತವೆ. ಉಮೇದವಾರರನ್ನು ಆರಿಸುವಾಗ ನಡೆದ ಗದ್ದಲವನ್ನು ತಡೆಯುವದಕ್ಕಾಗಿ ಪೋಲೀಸರು ಮಧ್ಯ ಬಂದು ಶಾಂತಪಡಿಸಬೇಕಾಯಿತಂತೆ. ಇದರಿಂದ ನಿರುದ್ಯೋಗತನವು ಎಷ್ಟು ಬೆಳೆದಿದೆಂಬುದು ಸ್ಪಷ್ಟವಾಗುವುದಿಲ್ಲವೆ.

ಹಸಿ ಅಕ್ಕಿಯನ್ನು ತಿಂದರು!

ಹೊಟ್ಟೆಗಿಲ್ಲದೆ, ರಾಯತಾಣದ ೧೫೦ ಮಂದಿ ಹೆಂಗಸರು, ಗಂಡಸರು, ಮಕ್ಕಳು, ೧೭ ಮೈಲು ದೂರದ ಬರ್ದವಾನ್ ಕೋರ್ಟಿಗೆ ನಡೆದು ಬಂದು ಮುತ್ತಿಗೆ ಹಾಕಿದಲ್ಲ, ಅಲ್ಲಿಯ ಸಬ್॥ ಡಿ॥ ಆಫೀಸರರು ಕನಿಕರಪಟ್ಟು ಮೇತಿಗೆಯೆತ್ತಿ ೨॥ ಮಣ ಅಕ್ಕಿಯನ್ನು ಹಂಚಿದರು. ಆದರೆ ಹಸಿವಿನಿಂದ ಕಂಗೆಟ್ಟ ಆ ನಿರ್ಭಾಗ್ಯರು ಆ ಹಸಿ ಅಕ್ಕಿಯನ್ನೇ ತಿಂದರು! ಇವರ ಕಷ್ಟನಿವಾರಣೆಗಾಗಿ ಅಲ್ಲಿ ಫಂಡು ಸಂಗ್ರಹವಾಗುತ್ತಿದೆ.

ಕಳಕೊಳ್ಳುವ ಮೊದಲು.

ಎಚ್ಚರಾಗಿರಿ!



೧ ಎ. ಎಂ. ದಿವಾಕರ
ಸರಾಫ ಶಹಾಪೂರ ಬೆಳಗಾಂವ
ಬಿ. ಎಸ್. ಕುರವತ್ತಿ
ಬ್ರದರ್ಸ, ದಾವಣಗೇರಿ.
೩ ಚೆನಬಸವಪ್ಪಾ
ಶ್ರೀಶೈಲಪ್ಪಾ ಗೋಟೆ.
ರವಿವಾರಪೇಟೆ **ಬೆಳಗಾಂವ.**

ಸಿದ್ಧೇಶ್ವರ ಮತ್ತು ಕಂಪನಿ.
ತಿಜೋರಿ ಮೇಕರ್ಸ
ಬಮ್ಮಾಪೂರಗಲ್ಲಿ, **ಹುಬ್ಬಳ್ಳಿ.**
ಬ್ರ್ಯಾಂಚ್ ಆಫೀಸ್:-
ಅಬಿಡ್ಸಬಿಲ್ಡಿಂಗ್
ಹೈದ್ರಾಬಾದ (ಡೆಕ್ಕನ)

ಗಂಡಾಂತರಕ್ಕೊಳಗಾಗಬೇಡಿರಿ !

ಶಿದ್ಧೇಶ್ವರ ತಿಜುರಿಯನ್ನೇ ಕೊಂಡುಕೊಳ್ಳಿರಿ.

ರಾಮುಜಿ— ಯಾಕರೀ ಶೆಟ್ಟರೇ? ಹಣೆಗೆ ಕೈಹಚ್ಚಿಕೊಂಡು ಕೂತಿರುವಿರಿ? ಅಂಗಡಿ ಹಚ್ಚುವದಿಲ್ಲೇನು?

ಶೆಟ್ಟರು— ಬಾರಪ್ಪಾ ರಾಮುಜಿ, ಏನು ಹೇಳಲಿ, ಈ ತಿಜೋರಿಯ ಹಣೆಯಬರಹ ನೋಡು, ಕಳ್ಳರಿಂದ ಗಂಟೆಲ್ಲಾ ಹೋಗಿದೆ. ಈ ಸುಡಗಾಡ ತಿಜೋರಿಯನ್ನು ಕೊಂಡು ನನ್ನ ಮನೆ ಹಾಳುಮಾಡಿಕೊಂಡಂತಾಯಿತು

ರಾಮುಜಿ—ಏನರೀ ಶೆಟ್ಟರೇ? ಕಳ್ಳರು ಕಳವು ಮಾಡಾಕ ಮುರಿದರೆ ನಾವ ಆ ತಿಜೋರಿ ಏನುಮಾಡೀತು?

ಶೆಟ್ಟರು—ರಾಮುಜಿ, ಎಂಥಾ ಹುಚ್ಚನೋ ನೀನು ಕಳ್ಳರ ಕಾಟಕ್ಕಾಗಿ ತಿಜೋರಿ ಕೊಳ್ಳುವದಲ್ಲವೇ?

ರಾಮುಜಿ—ಹಾಗಾದರೆ ಹೀಗ್ಯಾಕಾಯಿತು?

ಶೆಟ್ಟರು—ಏನು ಹೇಳಲೆಪ್ಪಾ ರಾಮುಜಿ, ಇತ್ತೀಚೆಗೆ ದೇಶದಾಗ ತಿಜೋರಿ ಮಾಡುವರು ಮಾರುವರು ಬಾಳ ಆಗಿ ಅಗ್ಗ ಮಾರಾಕ ಹತ್ತಿ ಸಿಕ್ಕಾಂಗ ತಿಜೋರಿ ಮಾಡಿಸಿ ಬೇಕಾದಷ್ಟು ಖಾತ್ರಿ ಹೇಳಿಕೊಡತಾರ ಇಂಥಾದಕ್ಕೆ ಮೋಸ ಹೋಗಿ ಹೀಗಾತಪ್ಪಾ.

ರಾಮುಜಿ—ಏನರೀ ಶೆಟ್ರ, ನೀವು ನಾಲ್ಕು ಮಂದಿಗೆ ಹೇಳಾವರ ಕೇಳಾವರ ಕುಂತಕೊಂಡ ಹೀಂಗ ಹೇಳತೀರಿ ಇದು ಆಗಾದರಿಪಾ, ಇದಕ ನೋಡ್ರಿ ನೀವು ಎಂಥಾ ಶಹಾಣ್ಯಾರ ಆದರೂ ಬಲ್ಲಾವರನ್ನು ಕೇಳಬೇಕೆನ್ನೂದೂ ನನಗೆ ಗೊತ್ತಿದ್ದ **ಈಗ** ಹ[illegible] ವರ್ಷದಾಗ ನಮ್ಮ **ಧಾರವಾಡದ**[illegible]ಗ[illegible]ಳ್ಯಾಗ ಒಟ್ಟು ನಮ್ಮ **ಕರ್ನಾಟಕ**ದಾಗ ಬ್ಯಾಂಕಿನವರ ಅನ್ರಿ ಸರಾಫರ ಅನ್ರಿ ಶ್ರೀಮಂತ ಜನರ ಅನ್ರಿ ನಾಲ್ಕ ದುಡ್ಡಿನ ಮಾರಿ ನೋಡಿದ **ನಮ್ಮ** ಹುಬ್ಬಳ್ಳಿ **ಸಿದ್ಧೇಶ್ವರ ಕಂಪನಿಯ** ತಿಜೋರಿ **ಕೊಂ**ಡಾರ ಸುಖದಿಂದ ಆದಾರ, ಇದನ್ನು ಕಣ್ಣಾರೇ ನೋಡೀ ನೋಡೀ ನೀವು ರಾತ್ರಿ ಕಂಡಭಾವಿ ಹಗಲ ಬಿದ್ರು ಯಾರ ಏನ ಮಾಡೂದು.

ಶೆಟ್ಟರು—ಆತಪ್ಪಾ ರಾಮುಜಿ, ಗಂಟು ಕಳೆದುಕೊಂಡು ಬುದ್ಧಿಗಲಿತೆನು ಸಾಕುಸಾಕು, ಇನ್ನು ಮುಂದೆ ನಿಜವಾದ ಸಿದ್ಧೇಶ್ವರ ತಿಜೋರಿಯನ್ನೇ ಕೊಳ್ಳುವೆನು. ಮತ್ತು ಇದರಂತೆ ಎಲ್ಲರಿಗೂ ಉಪದೇಶಿಸುವೆನು.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಉದ್ಯೋಗಪತ್ರಿಕೆ ೧೨ ಪುಸ್ತಕಗಳು	೨-೦-೦	ಸುಕಲಾದೇವಿಯ ಕಥೆ	೦-೧-೬
ಕಾಯಕವೆ ಕೈಲಾಸ	೦-೩-೦	ಬಸವಣ್ಣನವರ ಚರಿತ್ರೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಶರಣಬಸವೇಶ್ವರರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದೇವದಾಸಿಯ ಕಥೆ	೦-೧-೬
ಏಕಲವ್ಯನ ಕಥೆ	೦-೧-೬	ವಿಜಯವಾಣಿ	೦-೨-೦
ಲಜಪತರಾಯರ ಚರಿತ್ರೆ	೦-೧-೬	ಬಸವಾವತಾರ	೦-೦-೬
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತ	೦-೦-೩

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ.** ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೫. | ಆಲಮಟ್ಟಿ ಅಗಸ್ಟ ತಾರೀಖು ೧೯ ನೆಯ ಸೋಮವಾರ | ಸಂಚಿಕೆ ೧.

ಬೇಡ ಬೇಡವೆಂದವರಿಗೆ ಮನೆತುಂಬ ನೀರು!
ಬೇಕು ಬೇಕೆಂದವರಿಗೆ ಕಣ್ಣುತುಂಬ ನೀರು!!

ಈ ವರ್ಷದ ಮಳೆಯು ಇಂಥ ವಿಚಿತ್ರವನ್ನುಂಟುಮಾಡಿದೆ. ಉತ್ತರ ಹಿಂದುಸ್ಥಾನದಲ್ಲೆಲ್ಲ ಭಯಂಕರ ಮಳೆಯಾಗಿ ಎಲ್ಲ ನದಿಗಳೂ ಮೇರೆದಪ್ಪಿ ಹರಿಯುತ್ತಲಿವೆ. ಬಿಹಾರ, ಬಂಗಾಲ ಪ್ರಾಂತಗಳಂತೂ ಜಲಮಯವಾಗಿವೆ. [illegible]ರ ಪಾಟ್ನಾ ನಗರಗಳಲ್ಲಿ ನೀರು ಒಳಸೇರಿ ಅನೇಕ ಮನೆಗಳು ಬಿದ್ದಿವೆ. ಪಟ್ಟಣಗಳೇ ಬಿದ್ದು ಹೋಗುವವೋ ಹೇಗೆ ಎಂದೆನಿಸಿದೆ. ಗಯಾದ ಸುತ್ತಲಿನ ೧೦೦ ಮೈಲು ಚೌರಸ ಕ್ಷೇತ್ರವೆಲ್ಲ ಜಲಮಯವಾಗಿದೆ. ಅದರಲ್ಲಿ ೫೦ ಹಳ್ಳಿಗಳು ಸುತ್ತುಗಟ್ಟಲ್ಪಟ್ಟಿರುವವೆಂದು ತಂತಿ ಬಂದಿದೆ. ಗುಲ್ಝರ ಭಾಗದ ಆಣೆಕಟ್ಟು ಬಿಚ್ಚಿ ಹೋದದ್ದರಿಂದ ಅದನ್ನು ಸರಿಪಡಿಸಲು ೪೦೦ ಜನ ಕೂಲಿಕಾರರೂ ಎಂಜನಿಯರರೂ, ಓವ್ಹರಸೀಯರರೂ ಕೆಲಸ ನಡೆಸಿದ್ದಾರೆ. ಮುಜಫರಪುರ ಜಿಲ್ಹೆಯಲ್ಲಿ ನೂರಾರು ಮನೆಗಳು ಬಿದ್ದಿವೆ.

ಬಂಗಾಲದ ಸ್ಥಿತಿಯಂತೂ ಹಾಹಾಕಾರವಾಗಿದೆ. ಮನೆಗಳೆಲ್ಲ ಬಿದ್ದುದರಿಂದ ನಿರಾಶ್ರಿತ ಜನರು ರೇಲ್ವೆ ಡಬ್ಬಿಗಳಲ್ಲಿ ವಾಸವಾಗಿದ್ದಾರೆ. ಸಾಕಷ್ಟು ಡೋಣಿಗಳಿಲ್ಲದ್ದರಿಂದ ರಾಜ ಮಹಾರಾಜರು ತಮ್ಮ ಆನೆಗಳ ಮೇಲಿಂದ ನೀರಿನಲ್ಲಿದ್ದ ಜನರನ್ನು ಸಂರಕ್ಷಿಸುತ್ತಿದ್ದಾರೆ. ಪದ್ಮಾ ನದಿಗೆ ಮಹಪೂರ ಬಂದದ್ದರಿಂದ ಬಹಾರ ಮಾರ್ಕೆಟ್ ಎಂಬ ವ್ಯಾಪಾರಿ ಕೇಂದ್ರವು ಹರಿದುಹೋಗಿದೆ. ದೇಶಬಂಧು ಚಿತ್ತರಂಜನದಾಸರ ಪಿತ್ರಾರ್ಜಿತ ಮನೆಯೂ ಈ ಮಹಾಪೂರದಲ್ಲಿ ಎಲ್ಲಿ ಹರಿದು ಹೋಗುವದೋ ಎಂಬ ಭೀತಿಯಿದೆ.

ಅತ್ತ ಆ ಸ್ಥಿತಿ; ಇತ್ತ ಅನೇಕ ಕಡೆಗಳಲ್ಲಿ ಕುಡಿಯಲಿಕ್ಕೆ ಸಹ ನೀರಿಲ್ಲ. ದಕ್ಷಿಣದ ವಿಪುಲ ಮಳೆಯಾಗುವ ಪ್ರದೇಶದಲ್ಲಿಯೂ ಎಷ್ಟೋ ಮಳೆಯಿಲ್ಲವೆಂಬ ಹಾಹಾಕಾರವೆದ್ದಿದೆ. ಸಾಂಗಲಿಯಲ್ಲಿ ನಡೆದ ಈ ಒಂದು ಉದಾಹರಣೆಯಿಂದ ಮಳೆಯಿಲ್ಲದ್ದರಿಂದ ಜನರು ಎಷ್ಟು ಹತಾಶರಾಗಿರುವರೆಂಬುದು ಕಂಡು ಬರುವದು. ನದಿಯ ಆಚೆಗಿರುವ ಸಾಂಗ್ಲಿವಾಡಿಯ ಜನರೆಲ್ಲ ಹತಾಶರಾಗಿ ಊರ ಹೊರಗೆ ನೆರೆದು ಮಳೆರಾಯನನ್ನು ತಮ್ಮ ಪದ್ಧತಿಯಂತೆ ಪೂಜೆ ಮಾಡಿ ಆಕಾಶದ ಕಡೆಗೆ ಮುಖ ಮಾಡಿ ಕಣ್ಣೀರು ತಂದರು.

ಆದಿಜನರ ಮೇಲೆ ಆಕ್ರಮಣ.

ಅಹಮದಾಬಾದ ಜಿಲ್ಹೆಯ ಕವಿತಾ ಎಂಬ ಗ್ರಾಮದಲ್ಲಿ ಆದಿ ಜನ ಬಾಲಕರು ಶಾಲೆಯಲ್ಲಿ ಉಳಿದ ಬಾಲಕರೊಡನೆ ಕೂಡಿಯೇ ಕೂಡ್ರಿಸಲ್ಪಡುತ್ತಿದ್ದುದರಿಂದ ಸನಾತನಿಗಳು ರೇಗಿ ಆದಿಜನರ ಮೇಲೆ ಸಾಮಾಜಿಕ ಬಹಿಷ್ಕಾರವನ್ನು ಹಾಕಿದ್ದಾರೆ. ಅಗ್ಗೆ ಗಾಂಧೀ ಆಶ್ರಮದ ಕೆಲ ಜನರು ಹೋಗಿ ಅವರ ಮನವೊಲಿಸಲು ಪ್ರಯತ್ನಿಸಲು ಅವರು ವಿಪರೀತವಾಗಿ ಆಶ್ರಮವಾಸಿಗಳ ಮೇಲೆ ಕಲ್ಲೆಸೆದರು; ಪ್ರಾಣ ತೆಗೆದುಕೊಳ್ಳುವೆವೆಂದು [illegible] ಹೆದರಿಸಿದರು. ಯಾರಾದರು ಸನಾತನಿಗಳು ಈ ಬಗ್ಗೆ ಆದಿಜನರ ಮೇಲೆ ಸಹಾನುಭೂತಿ ತೋರಿಸಿದರೆ ಅವರ ಮೇಲೂ ಬಹಿಷ್ಕಾರ ಹಾಕುವದಕ್ಕಾಗಿ ಹೆದರಿಸಿದ್ದಾರೆ.

ಇಷ್ಟಕ್ಕೇ ಈ ಮಹಾಶಯರು ತಡೆಯದೆ ೨೦೦ ಜನರು ಸೇರಿ ಮರುದಿವಸ ಆದಿಜನರನ್ನು ಓಡಿಸಿ ಅವರ ಗುಡಿಸಲುಗಳಿಗೆ ಬೆಂಕೀ ಹಚ್ಚಿದರು. ಆದಿಜನರು ಈಗ ಪೋಲೀಸರ ಕಡೆಗೆ ಸಂರಕ್ಷಣೆಗಾಗಿ ಧಾವಿಸಿದ್ದಾರೆ.

೭ ಜಾಗೆಗೆ ೩೦೦೦ ಅರ್ಜಿ.

ಪಾಟಣಾದಲ್ಲಿ ಪೋಲೀಸರ ಏಳು ಜಾಗೆಗಳನ್ನು ತುಂಬತಕ್ಕದ್ದಿದ್ದು ಅದಕ್ಕಾಗಿ ೩,೦೦೦ ಅರ್ಜಿಗಳು ಬಂದಿರುತ್ತವೆ. ಉಮೇದವಾರರನ್ನು ಆರಿಸುವಾಗ ನಡೆದ ಗದ್ದಲವನ್ನು ತಡೆಯುವದಕ್ಕಾಗಿ ಪೋಲೀಸರು ಮಧ್ಯ ಬಂದು ಶಾಂತಪಡಿಸಬೇಕಾಯಿತಂತೆ. ಇದರಿಂದ ನಿರುದ್ಯೋಗತನವು ಎಷ್ಟು ಬೆಳೆದಿದೆಂಬುದು ಸ್ಪಷ್ಟವಾಗುವುದಿಲ್ಲವೆ.

ಹಸಿ ಅಕ್ಕಿಯನ್ನು ತಿಂದರು!

ಹೊಟ್ಟೆಗಿಲ್ಲದೆ, ರಾಯತಾಣದ ೧೫೦ ಮಂದಿ ಹೆಂಗಸರು, ಗಂಡಸರು, ಮಕ್ಕಳು, ೧೬ ಮೈಲು ದೂರದ ಬರ್ದವಾನ್ ಕೋರ್ಟಿಗೆ ನಡೆದು ಬಂದು ಮುತ್ತಿಗೆ ಹಾಕಿದಲ್ಲಿ, ಅಲ್ಲಿಯ ಸಬ್|| ಡಿ|| ಆಫೀಸರರು ಕನಿಕರಪಟ್ಟು ವಂತಿಗೆಯೆತ್ತಿ ೨|| ಮಣ ಅಕ್ಕಿಯನ್ನು ಹಂಚಿದರು. ಆದರೆ ಹಸಿವಿನಿಂದ ಕಂಗೆಟ್ಟ ಆ ನಿರ್ಭಾಗ್ಯರು ಆ ಹಸಿ ಅಕ್ಕಿಯನ್ನೇ ತಿಂದರು! ಇವರ ಕಷ್ಟನಿವಾರಣೆಗಾಗಿ ಅಲ್ಲಿ ಫಂಡು ಸಂಗ್ರಹವಾಗುತ್ತಿದೆ.

ವೇದಗಳ ವಿಷಯದಲ್ಲಿ ಕೆಲವು ವಿಚಾರ.

ವೇದಗಳು ಹಿಂದು ಜನರಿಗೆ ಬಹು ಪವಿತ್ರವಾದ ಗ್ರಂಥಗಳು. ಇವು ದೇವರಿಂದ ಜಗದಾದಿಯಲ್ಲಿಯೇ ಹುಟ್ಟಿದವೆಂದು ಹಿಂದುಗಳ ತಿಳುವಳಿಕೆ. ವೇದಗಳಲ್ಲಿಲ್ಲದ ಸಂಗತಿಗಳು ಬೇರಾವ ಗ್ರಂಥಗಳಲ್ಲಿಯೂ ಇಲ್ಲವೇ ಇಲ್ಲವೆಂದು ಹಿಂದುಗಳ ಭಾವನೆ. ವೇದಗಳಲ್ಲಿರದ ಸಂಗತಿಗಳು ಅಪ್ರಮಾಣಗಳೆಂದೇ ಅವರ ಹೇಳಿಕೆ.

ವೇದದಲ್ಲಿರತಕ್ಕ ಸಂಗತಿಗಳೆಲ್ಲಾ ಸತ್ಯವಾದವುಗಳೆಂದೇ ತಿಳಿದಿದ್ದಾರೆ. ಆದುದರಿಂದ ಸತ್ಯವೆಂದು ಹೇಳುವಾಗ 'ವೇದವಾಕ್ಯ' ಎಂದು ಹೇಳುವ ರೂಢಿಯೂ ಉಂಟು. ವೇದಗಳ ವಿಷಯದಲ್ಲಿ ಹಿಂದುಗಳಿಗೆ ಅಪಾರವಾದ ಭಕ್ತಿ ವಿಶ್ವಾಸಗಳಿವೆ.

ವೇದಗಳನ್ನು ಓದಿ, ಅವುಗಳಲ್ಲಿಯ ಸಂಗತಿಗಳನ್ನು ತಿಳಿದುಕೊಂಡು, ಅವುಗಳ ಸತ್ಯಾಸತ್ಯತೆಗಳನ್ನು ವಿಮರ್ಶಿಸಿ ಹೀಗೆ ಅಭಿಪ್ರಾಯ ಪಟ್ಟಿರುವರೇ? ಇಲ್ಲವೇ ಇಲ್ಲ. ವೇದಗಳನ್ನು ಓದಿದವರು ಲಕ್ಷಕ್ಕೊಬ್ಬರು ದೊರೆಯುವುದು ದುರ್ಲಭ. ಎಂದ ಮೇಲೆ ಅವುಗಳ ಅರ್ಥವನ್ನು ತಿಳಿದುಕೊಂಡು ಅವುಗಳ ಸತ್ಯಾಸತ್ಯತೆಗಳನ್ನು ವಿಮರ್ಶಿಸಿದವರು ಅತ್ಯಂತ ವಿರಲವಲ್ಲವೇ?

ಬಹುಕಾಲದಿಂದ ಕೋಟ್ಯಾಂತರ ಜನರು ವೇದಗಳ ವಿಷಯದಲ್ಲಿ ಹೇಳುತ್ತ ಬಂದುದನ್ನೇ ಈಗಲೂ ಹೇಳುತ್ತಿದ್ದಾರೆ. ಅವುಗಳನ್ನು ನೋಡಿದವರು ಕೂಡಾ ವಿರಳ. ಇಂತಹ ವಿಚಾರ ಯುಗದಲ್ಲಿ ಈ ಪ್ರಕಾರ ಅಂಧಪ[illegible]ದ ಹೇಳಿಕೊಳ್ಳುತ್ತ ಬಂದುದನ್ನೇ ನಂಬಿಕೊಂಡಿರುವುದು ಅನುಚಿತವಲ್ಲವೇ? ಅಜ್ಞಾನವು ಅನರ್ಥದ ಮೂಲ. ಧಾರ್ಮಿಕ ವಿಷಯದಲ್ಲಂತೂ ತಪ್ಪುತಿಳುವಳಿಕೆಗಳಿರುವುದು ಬಹು ಅನರ್ಥಕರ.

ಪ್ರಾಚೀನ ಕಾಲದಲ್ಲಿ ಬ್ರಾಹ್ಮಣರೇ ವೇದಗಳನ್ನು ಓದಿ ಕ್ಷತ್ರಿಯ ಮತ್ತು ವೈಶ್ಯರಿಗೆ ಕಲಿಸುತ್ತಿದ್ದರು. ಅನಂತರ ಬ್ರಾಹ್ಮಣರ ವಿನಾ ಇನ್ನಾರೂ ವೇದಗಳನ್ನು ಓದಬಾರದೆಂಬ ಕಟ್ಟಪ್ಪಣೆಯಾಯಿತು. ವೇದವಾಕ್ಯಗಳನ್ನು ಕೇಳುವ ಶೂದ್ರರ ಕಿವಿಯಲ್ಲಿ ಕಾಸಿದ ಸೀಸವನ್ನು ಹಾಕಬೇಕೆಂತಲೂ ಕೊನೆಗೆ ಗೊತ್ತಾಯಿತು. ಇತ್ತೀಚಿಗೆ ವೇದಾಧ್ಯಯನವು ಬ್ರಾಹ್ಮಣರಲ್ಲಿಯೂ ಕಡಿಮೆಯಾಯಿತು.

ಎಂದ ಮೇಲೆ ವೇದಗಳ ತಿಳುವಳಿಕೆಯು ಜನಸಾಮಾನ್ಯರಿಗುಂಟಾಗುವುದು ಶಕ್ಯವೇ? ವೇದಗಳಲ್ಲಿ ಹಾಗಿದೆ, ಹೀಗಿದೆಯೆಂದು ಹೇಳುವವರೇ ಹೆಚ್ಚಿದರು. ಸಂಸ್ಕೃತದಲ್ಲಿರುವುದೆಲ್ಲಾ ವೇದವಾಕ್ಯವೆಂದು ನಂಬುವ ಕಾಲ ಬಂದಿತು. ಹೀಗಾಗಿ ವೇದಗಳ ವಿಷಯದಲ್ಲಿ ಎಲ್ಲೆಲ್ಲಿಯೂ ಕತ್ತಲೇ ಕತ್ತಲು.

ಇಂಗ್ಲಿಷರು ಈ ದೇಶದಲ್ಲಿ ಪ್ರಭುತ್ವವನ್ನು ಸ್ಥಾಪಿಸಿ ಇಂಗ್ಲಿಷ್ ವಿದ್ಯೆಯನ್ನು ಪ್ರಸಾರಗೊಳಿಸುವ ವರೆಗೂ ವೇದವಿಷಯಕವಾದ ಕತ್ತಲೆಯು ಹರಿದಿರಲಿಲ್ಲ. ಪ್ರೊ. ಮ್ಯಾಕ್ಸ್ ಮುಲ್ಲರ, ಎಫ್, ರೋಜನ್, ಆಲ್‌ಫ್ರೆಡ್ ಲುಡ್‌ವಿಕ್, ಎಚ್. ಗ್ರಾಸಮನ್ ಮೊದಲಾದ ಹತ್ತು ಹದಿನೈದು ಪಾಶ್ಚಾತ್ಯ ಮಹಾ ಪಂಡಿತರು ವೇದಗಳನ್ನು ಓದಿ ಇಂಗ್ಲಿಷ, ಜರ್ಮನ್, ಫ್ರೆಂಚ್ ಭಾಷೆಗಳಲ್ಲಿ ಬರೆದು ಪ್ರಪಂಚದ ಮುಂದಿಟ್ಟರು.

ವೇದಗಳನ್ನು ಬ್ರಾಹ್ಮಣರ ವಿನಾ ಯಾರೂ ಓದಬಾರದೆಂಬ ಆ ಕಟ್ಟು ಸುಟ್ಟು ಹೋಯಿತು. ಜಗತ್ತಿನ ಮುಂದೆಯೇ ವೇದಗಳು ಪ್ರಕಾಶಿಸಿದವು. ಮ್ಯಾಕ್ಸ್ ಮುಲ್ಲರ್‌ರವರು ಬರೆದ ವೇದಗ್ರಂಥಗಳಿಗೆ ಮೂರು ನೂರು ರೂಪಾಯಿಗಳ ಕ್ರಯ! ಮಿ. ರಾಥ್ ಕೃತ ಪೀಟರ್ಸಬರ್ಗ ಸಂಸ್ಕೃತ ಜರ್ಮನ್ ಮಹಾಕೋಶ ಹತ್ತು ಸಾವಿರ ಪುಟಗಳುಳ್ಳದು. ಇದರ ಕ್ರಯ ಒಂದು ಸಾವಿರ ರೂಪಾಯಿ !

ವೇದಜ್ಞಾನ ಪ್ರಸಾರವಾಗಲು ಪಾಶ್ಚಾತ್ಯ ಪಂಡಿತರು ಎಂತಹ ಪ್ರಚಂಡ ಪ್ರಯತ್ನಗಳನ್ನು ಮಾಡಿದ್ದಾರೆಂಬುದು ಮೇಲಣ ಸಂಗತಿಗಳಿಂದ ಗೊತ್ತಾಗಬಹುದು. ಕಳೆದ ೫೦-೬೦ ವರುಷಗಳಲ್ಲಿ ಹಿಂದೆ ೫-೬ ಸಾವಿರ ವರುಷಗಳಲ್ಲಾಗದಿದ್ದಷ್ಟು ವೇದಜ್ಞಾನ ಪ್ರಸಾರವಾಯಿತು. ಕಳೆದ ಅರ್ಧ ಶತಮಾನದಲ್ಲಿಯೇ ವೇದಗಳ ಸಂಬಂಧವಾಗಿ ೫೧ ಟೀಕೆ‌ಟಿಪ್ಪಣಿಗಳ ಗ್ರಂಥಗಳು ರಚಿಸಲ್ಪಟ್ಟವು.

ರಮೇಶ ಚಂದ್ರ ದತ್ತ, ಟಿಳಕ, ಅವಿನಾಶ ಚಂದ್ರ ದಾಸ, ಮೊದಲಾದ ಆಧುನಿಕ ಶಿಕ್ಷಣ ಹೊಂದಿದ ಅನೇಕ ಸುಪ್ರಸಿದ್ಧ ಭಾರತೀಯ ವೇದಜ್ಞರು ವೇದಗಳ ಸಂಬಂಧವಾಗಿ ಅನೇಕ ಹೊಸ ವಿಚಾರಗಳನ್ನು ಪ್ರಕಾಶಗೊಳಿಸಿದರು. ಬಂಗಾಲಿ, ಹಿಂದಿ, ಮರಾಠಿ ಮೊದಲಾದ ದೇಶ ಭಾಷೆಗಳಲ್ಲಿಯೂ ವೇದಗಳು ಬರೆಯಲ್ಪಟ್ಟವು. ದೇಶ ಭಾಷೆಯ ಓದುಬರಹ ಬಲ್ಲವರಲ್ಲಿ ಯಾವ ಧರ್ಮ ಮತ ಪಂಥ ಕಸಬಿನವರಾದ್ದರೂ ಈಗ ವೇದಗಳನ್ನು ಓದಲು ಸಮರ್ಥರಾಗಿದ್ದಾರೆ. [illegible] ವೇದಗಳ ವಿಷಯದಲ್ಲಿ ಮೊದಲಿದ್ದ ಕತ್ತಲೆ ಎಷ್ಟೋ ಹರಿದುಹೋಗಿ ಅಲ್ಲಲ್ಲಿ ಬೆಳಕು ತೋರಲಾರಂಭಿಸಿದೆ.

ಆದರೆ ಕನ್ನಡದಲ್ಲಿ ಮಾತ್ರ ಈ ಸಂಬಂಧವಾದ ವಿವೇಚನೆಗಳಿಲ್ಲ. ಕೇವಲ ಕನ್ನಡವೊಂದನ್ನೇ ಅರಿತ ಜನರು ಇನ್ನೂ ಆ ಕತ್ತಲಲ್ಲೇ ಇದ್ದಾರೆ. ಅಂಥವರಿಗೆ ಸ್ವಲ್ಪ ಬೆಳಕನ್ನು ತೋರಿಸುವುದೇ ವೇದವಿಷಯಕವಾದ ಈ ಲೇಖಮಾಲೆಯ ಉದ್ದೇಶ.

ಆದಕಾರಣ ವೇದಗಳ ಬಾಹ್ಯಾಂಗವನ್ನು ಕುರಿತು ಮೊದಲು ವಿವೇಚಿಸಿ ಅನಂತರ ಅವುಗಳಲ್ಲಿರತಕ್ಕ ಸಂಗತಿಗಳ ಸಂಬಂಧವಾಗಿ ವಿವರಿಸುವೆವು. ಈ ಸಂಬಂಧವಾಗಿ ಆಗಾಗ್ಗೆ ಪ್ರಕಟವಾಗುವ ಲೇಖನಗಳನ್ನು ವಾಚಕರು ಚಿಕಿತ್ಸಕ ಬುದ್ಧಿಯಿಂದಲೇ ಓದಿ ನಿಜಾಂಶಗಳನ್ನು ತಿಳಕೊಳ್ಳಲು ಪ್ರಯತ್ನಿಸುವರೆಂದು ನಂಬಿದ್ದೇವೆ. ಸಂದೇಹ ತೋರಿದ ಸಂಗತಿಗಳನ್ನು ಕುರಿತು ವಾಚಕರು ಈ ಪತ್ರಿಕೆಯಲ್ಲಿ ಪ್ರಸ್ತಾಪಿಸಲು ಅಡ್ಡಿಯಿಲ್ಲ. ವೇದಗಳ ಸಂಬಂಧವಾದ ನಿಜಜ್ಞಾನವುಂಟಾಗಿ ಹಿಂದುಗಳ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳಿಗೆ ಅನುಕೂಲವಾದ ವಿವೇಕೋದವಾಗಲೆಂಬುದೇ ಈ ಲೇಖಮಾಲೆಯ ಮುಖ್ಯೋದ್ದೇಶವು.

ಅಬಸೀನಿಯಾ ಸೈನ್ಯಕ್ಕೆ ತುರ್ಕಸ್ಥಾನದ ಸೇನಾಪತಿಗಳು!

ಮಹಾ ಯುದ್ಧದ ಕಾಲಕ್ಕೆ ಪ್ರಸಿದ್ಧವಾದ ಗಾಲಿಪೋಲಿ ಯುದ್ಧದಲ್ಲಿ ಪರಾಕ್ರಮವನ್ನು ತೋರಿಸಿದ ತುರ್ಕಿ ಸೇನಾಧಿಪತಿ ವಹೀಬಪಾಶಾ ಇವರೇ ಅಬಸೀನಿಯಾ ಇಟಲಿ ಯುದ್ಧದಲ್ಲಿ ಅಬಸೀನಿಯಾ ಸೇನಾನಾಯಕರಾಗುವರೆಂದು ಲಂಡನ್ನಿನ "ಪೀಪಲ್" ಎಂಬ ಪತ್ರಿಕೆಯು ಪ್ರಕಟಿಸಿದೆ.

ಗೀತಾ ಧರ್ಮ ವಿಚಾರ.

[ಕೈ. ವೀರಬಸವಪ್ಪ ಶ್ರೇಷ್ಠಿ ಇವರ ಕೆಲವು ವಿಚಾರಗಳು.]

ಕೈ. ವೀರಬಸವಪ್ಪ ಶ್ರೇಷ್ಠಿಯವರು ಮಹಾ ವಿದ್ವಾಂಸರಾಗಿದ್ದರು. ಧಾರ್ಮಿಕ ವಿಷಯದಲ್ಲಿ ಘನ ಪಂಡಿತರು. ಪಾಶ್ಚಾತ್ಯ ಮತ್ತು ಪೌರ್ವಾತ್ಯ ತತ್ವಜ್ಞಾನಗಳನ್ನು ಅರಿತಿದ್ದರು. ಭಾರತೀಯ ಬೇರೆ ಬೇರೆ ಮತ ಗ್ರಂಥಗಳನ್ನು ತುಲನಾತ್ಮಕ ದೃಷ್ಟಿಯಿಂದ ಅಧ್ಯಯನ ಮಾಡಿದ್ದರು. ವೀರಶೈವ ಮತ ವಿಷಯಕವಾದ ಇವರ ಪಾಂಡಿತ್ಯವಂತೂ ಅಸಾಧಾರಣವಾದುದು. ವೀರಶೈವರ ವಿವೇಕಾನಂದರೆಂತಲೂ ಇವರಿಗೆ ಬಹು ಜನರು ಹೇಳುತ್ತಿದ್ದರು.

ಇಂತಹ ಮಹನೀಯರು ಅಕಾಲದಲ್ಲಿ ಶಿವೈಕ್ಯರಾದುದು ಭಾರತೀಯ ತತ್ವಜ್ಞಾನ ಪ್ರಸಾರಣೆಗೆ ಒಂದು ಕೊರತೆಯೇ ಸರಿ. ವೀರಶೈವ ಸಮಾಜಕ್ಕಂತೂ ಬಹು ನಷ್ಟ. ಈ ತತ್ವಜ್ಞಾನಿಗಳು ಭಗವದ್ಗೀತೆಯನ್ನು ಬಹು ಚೆನ್ನಾಗಿ ಅಧ್ಯಯನ ಮಾಡಿದ್ದರು. ವೀರಶೈವ ಮತತತ್ವಗಳು ಭಗವದ್ಗೀತೆಯಲ್ಲಿ ಹೇಗೆ ವಿವೇಚಿಸಲ್ಪಟ್ಟಿವೆಯೆಂಬುದನ್ನು ಇವರು ಜಗತ್ತಿನ ಮುಂದಿಡುವವರಿದ್ದರು.

ಭಗವದ್ಗೀತೆಗೆ ವೀರಶೈವಪರವಾದ ಭಾಷ್ಯವನ್ನು ಬರೆಯುವ ಇವರ ಮಹತ್ಕಾರ್ಯವು ನಾಲ್ಕಾರು ವರುಷ ಸಾಗಿದ್ದರೂ ಕೊನೆಗೂ ಅದು ಪೂರೈಸಲಿಲ್ಲ. ಈ ಮಹತ್ತರವಾದ ಕಾರ್ಯವನ್ನು ಮಧ್ಯದಲ್ಲಿಯೇ ಬಿಟ್ಟು ಇವರು ಪರಲೋಕವಾಸಿಗಳಾದುದು ಅತ್ಯಂತ ವಿಷಾದಕರವು.

ಪೂರ್ವ ಸಿದ್ಧತೆ.

ಈ ಅಪೂರ್ವ ಗ್ರಂಥವನ್ನು ರಚಿಸಲು ಕೈ. ಶ್ರೇಷ್ಠಿಯವರು ಮಾಡಿಕೊಂಡ ಪೂರ್ವ ಸಿದ್ಧತೆಗಳನ್ನು ನೋಡಿದರೆ ಆ ಗ್ರಂಥವು ಎಷ್ಟು ಮಹತ್ವದ್ದಾಗುತ್ತಿದ್ದಿತೆಂಬುದು ತೋರುತ್ತದೆ. ಭಗವದ್ಗೀತೆಯ ೧೮ ಅಧ್ಯಾಯಗಳಲ್ಲಿಯ ಪ್ರತಿಯೊಂದು ಅಧ್ಯಾಯದಲ್ಲಿಯೂ ಇರತಕ್ಕ ವೀರಶೈವ ಮತತತ್ವದ್ಯೋತಕ ಶ್ಲೋಕಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿ ಬರೆದಿಟ್ಟಿದ್ದಾರೆ. ಗ್ರಂಥ ರಚನೆಗೆ ಇವರು ಮಾಡಿಟ್ಟ ಕಾರ್ಯಗಳಲ್ಲಿ ಇದೇ ಸ್ವಲ್ಪಾದರೂ ತಿಳಿಯತಕ್ಕದಾಗಿರುವುದರಿಂದ ಇವರು ಪ್ರತಿಪಾದಿಸುತ್ತಿದ್ದ ರೀತಿನೀತಿಗಳನ್ನು ಊಹಿಸಬಹುದಾಗಿದೆ

ವೀರಶೈವ ಮತದ ಅಷ್ಟಾವರಣ, ಪಂಚಾಚಾರ ಷಟ್ಸ್ಥಳಗಳಲ್ಲಿ ಯಾವ ವಿಷಯವು ಯಾವ ಶ್ಲೋಕದಲ್ಲಿ ಸೂಚಿತವಾಗಿದೆಯೆಂಬುದು ಗೊತ್ತಾಗುವುದಕ್ಕೋಸ್ಕರ ಆಯಾಯ ಶ್ಲೋಕಗಳ ಹಿಂದೆ ವೀರಶೈವ ಮತದ ಆಯಾಯ ತತ್ವಗಳನ್ನು ನಿರ್ದೇಶಿಸಿದ್ದಾರೆ. ಆದರೆ ಆ ಶ್ಲೋಕಕ್ಕೆ ಆ ಪ್ರಕಾರ ಹೇಗೆ ಅರ್ಥ ಮಾಡುತ್ತಿದ್ದರೆಂಬುದನ್ನು ಮಾತ್ರ ಬರೆದಿಟ್ಟಿಲ್ಲ. ಆದುದರಿಂದ ಈ ಕಾರ್ಯವು ಅಪೂರ್ಣವಾಗಿಯೇ ಉಳಿದಿದೆ.

ರಾಮದಾಸ, ತುಕಾರಾಮ, ಜ್ಞಾನದೇವ, ಏಕನಾಥ ಮೊದಲಾದ ಮಹಾರಾಷ್ಟ್ರ ದೇಶದ ಸಾಧುಸಂತರ ಅಭಂಗಗಳಲ್ಲಿಯ ಸಂಖ್ಯೆಗಳನ್ನು ಬೇರೆ ಬೇರೆ ಪುಸ್ತಕಗಳಲ್ಲಿ ಬರೆದಿಟ್ಟಿದ್ದಾರೆ. ಅವುಗಳಲ್ಲಿ ವೀರಶೈವ ಮತದ ಯಾವ ಯಾವ ತತ್ವಗಳು ಅಡಕವಾಗಿವೆಯೆಂಬುದನ್ನೇನೂ ನಿರ್ದೇಶಿಸಿಲ್ಲ. ಆದುದರಿಂದ ಆ ಸಂಗತಿಗಳನ್ನು ಕಂಡುಹಿಡಿಯುವುದು ಅಸಾಧ್ಯವೇ ಸರಿ.

ಇದೇ ಪ್ರಕಾರ ಬೈಬಲ್ಲಿನ ಅನೇಕ ವಿಚಾರಗಳನ್ನು ಒಂದು ಪುಸ್ತಕದಲ್ಲಿ ಅಕ್ಷರಾನುಕ್ರಮಣಿಕೆಯಿಂದ ಸಂಕ್ಷಿಪ್ತವಾಗಿ ನಿರ್ದೇಶಿಸಿಟ್ಟಿದ್ದಾರೆ. ಈ ಸಂಗತಿಗಳನ್ನು ಏಕೆ ಮತ್ತು ಹೇಗೆ ಆ ಪುಸ್ತಕದಲ್ಲಿ ವಿವೇಚಿಸುತ್ತಿದ್ದರೋ ತಿಳಿಯದಾಗಿದೆ. ಈ ಪ್ರಕಾರ ಪೂರ್ವಸಿದ್ಧತೆಯನ್ನೇನೋ ಬಹು ಘನವಾಗಿಯೇ ಮಾಡಿಟ್ಟಿದ್ದರು. ಆದರೆ ಅವುಗಳಲ್ಲಿ ಒಂದು ಪುಸ್ತಕದ ಸಂಗತಿಗಳನ್ನಾದರೂ ಸಂಪೂರ್ಣವಾಗಿ ವಿವೇಚಿಸಿಲ್ಲವಾದುದರಿಂದ ಅವರ ವಿಚಾರ ಸರಣಿಯು ಸ್ಪಷ್ಟವಾಗಿ ತಿಳಿಯಲು ಅವಕಾಶವಿಲ್ಲದಾಗಿದೆ.

ಸ್ವಲ್ಪ ಬೆಳಕು.

ಭಗವದ್ಗೀತೆಯಲ್ಲಿಯ ನೂರಾರು ಶ್ಲೋಕಗಳನ್ನು ಪ್ರತ್ಯೇಕವಾಗಿ ಬರೆದಿಟ್ಟು ಅವುಗಳ ಹಿಂದೆ ವೀರಶೈವ ಮತತತ್ವಗಳ ನಾಮ ನಿರ್ದೇಶ ಮಾಡಿರುವುದರಿಂದ ಮಾತ್ರ ಅವರ ವಿಚಾರ ಸರಣಿಯ ಮೇಲೆ ಆ ಟಿಪ್ಪಣಿಗಳು ಸ್ವಲ್ಪ ಬೆಳಕನ್ನು ಕೆಡವುತ್ತವೆ. ಆ ಬೆಳಕಿನಿಂದಲೇ ಶ್ರೇಷ್ಠಿಯವರ ಅದ್ವಿತೀಯ ಪಾಂಡಿತ್ಯವನ್ನೂ ಅವರು ಪ್ರತಿಪಾದಿಸುತ್ತಿದ್ದ ರೀತಿನೀತಿಗಳನ್ನೂ ಸ್ವಲ್ಪ ತಿಳಿದುಕೊಳ್ಳಬಹುದು.

ಆದಕಾರಣ ಮುಂದಣ ವಾರದಿಂದ ಆಗಾಗ್ಗೆ ಆಯಾಯ ಶ್ಲೋಕಗಳನ್ನೂ ಅವುಗಳ ಪ್ರಚಲಿತ ಅರ್ಥವನ್ನೂ ವಿವರಿಸಿ ಅವು ವೀರಶೈವರ ಯಾವ ತತ್ವಗಳಿಗೆ ಅನ್ವಯಿಸುತ್ತವೆಂದು ಶ್ರೇಷ್ಠಿಯವರು ಸೂಚಿಸಿದ್ದಾರೆಯೋ ಆ ತತ್ವಗಳನ್ನೂ ನಿರ್ದೇಶಿಸುವೆವು. ಅವುಗಳಿಂದ ವಾಚಕರಿಗೆ ಶ್ರೇಷ್ಠಿಯವರ ವಿಚಾರ ಸರಣಿಯು ಸ್ವಲ್ಪವರೂ ಗೊತ್ತಾಗಬಹುದು. ಭಗವದ್ಗೀತೆಯ ಸಂಬಂಧವಾಗಿ ಅವರು ಬರೆದಿಟ್ಟ ನಮಗೆ ದೊರೆತಿರುವ ಟಿಪ್ಪಣಿಗಳಲ್ಲಿ ಇವುಗಳ ವಿನಾ ಇನ್ನಾವ ಟಿಪ್ಪಣಿಗಳಿಂದಲೂ ಅವರ ವಿಚಾರಸರಣಿಯು ಸ್ವಲ್ಪವರೂ ತಿಳಿಯಲು ಅವಕಾಶವಿಲ್ಲದುದು ಅತ್ಯಂತ ವಿಷಾದದ ಸಂಗತಿಯು.

ನಾಮನಿರ್ದೇಶ.

ತಾವು ಬರೆಯಬಯಸಿದ ಪುಸ್ತಕಕ್ಕೆ **ಗೀತಾ ಧರ್ಮ ವಿಚಾರ** ಎಂಬ ಹೆಸರನ್ನಿಡುವವರಿದ್ದರೆಂದು ಒಂದು ಟಿಪ್ಪಣಿಯಲ್ಲಿ ಬರೆದಿಟ್ಟಿದ್ದರಿಂದ ಗೊತ್ತಾಗುತ್ತದೆ. ಮತ್ತು **ವಿಷಯ ಪ್ರವೇಶ** ಎಂಬ ಶೀರ್ಷಿಕೆಯನ್ನು ಬರೆಯುವಾಗ ಮೊದಲು ಭಗವದ್ಗೀತೆಯ ಈ ಕೆಳಗಿನ ಶ್ಲೋಕವನ್ನು ಶಿರೋಭಾಗದಲ್ಲಿ ಹಾಕುತ್ತಿದ್ದರೆಂದು ಆ ಟಿಪ್ಪಣಿಯಿಂದ ತಿಳಿಯುತ್ತದೆ.

ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ| ಜ್ಞಾನ ಯಜ್ಞೇನ ತೇನಾಹಮಿಷ್ಟಃ ಸ್ಯಾಮಿತಿ ಮೇ ಮತಿಃ||

ಅಧ್ಯಾಯ ೧೮ ಶ್ಲೋಕ ೭೦

ಅರ್ಥ:— ನಮ್ಮೀರ್ವರಲ್ಲಿ—ಎಂದರೆ ಕೃಷ್ಣಾರ್ಜುನರಲ್ಲಿ—ನಡೆದ ಈ ಧರ್ಮ ಸಂಬಂಧವಾದ ಸಂವಾದವನ್ನು ಯಾರು ಅಧ್ಯಯನ ಮಾಡುವರೋ ಅವರು ಜ್ಞಾನ ಯಜ್ಞದಿಂದ ನನ್ನನ್ನು-ಎಂದರೆ ಪರಮಾತ್ಮನನ್ನು ಪೂಜಿಸಿದಂತಾಗುವದೆಂದು ನಾನು ತಿಳಿಯುತ್ತೇನೆ.

ಅಭಿನಂದನ.

ಕೈ. ಶ್ರೇಷ್ಠಿಯವರು ಬರೆದಿಟ್ಟಿದ್ದ ಟಿಪ್ಪಣಿಗಳನ್ನು ಅವರ ಚಿ|| ಗಳಾದ ಕೊಲ್ಲಾಪುರದಲ್ಲಿರುವ **ಶ್ರೀಯುತ ಶ್ರೇಷ್ಠಿ ವಕೀಲರು** ನಮ್ಮ ಕಡೆಗೆ ಕೊಟ್ಟು ಇಷ್ಟರಮಟ್ಟಿಗಾದರೂ ಆ ಮಹಾ ಪಂಡಿತರ ವಿಚಾರಸರಣಿಯು ಗೊತ್ತಾಗುವಂತೆ ಮಾಡಿದ್ದರಿಂದ ನಾವು ಶ್ರೀ. ಶ್ರೇಷ್ಠಿ ವಕೀಲರನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇವೆ.

ವೇದಗಳ ವಿಷಯದಲ್ಲಿ ಕೆಲವು ವಿಚಾರ.

ವೇದಗಳು ಹಿಂದು ಜನರಿಗೆ ಬಹು ಪವಿತ್ರವಾದ ಗ್ರಂಥಗಳು. ಇವು ದೇವರಿಂದ ಜಗದಾದಿಯಲ್ಲಿಯೇ ಹುಟ್ಟಿದವೆಂದು ಹಿಂದುಗಳ ತಿಳುವಳಿಕೆ. ವೇದಗಳಲ್ಲಿಲ್ಲದ ಸಂಗತಿಗಳು ಬೇರಾವ ಗ್ರಂಥಗಳಲ್ಲಿಯೂ ಇಲ್ಲನೇ ಇಲ್ಲವೆಂದು ಹಿಂದುಗಳ ಭಾವನೆ. ವೇದಗಳಲ್ಲಿರದ ಸಂಗತಿಗಳು ಅಪ್ರಮಾಣಗಳೆಂದೇ ಅವರ ಹೇಳಿಕೆ.

ವೇದದಲ್ಲಿರತಕ್ಕ ಸಂಗತಿಗಳೆಲ್ಲಾ ಸತ್ಯವಾದವುಗಳೆಂದೇ ತಿಳಿದಿದ್ದಾರೆ. ಆದುದರಿಂದ ಸತ್ಯವೆಂದು ಹೇಳುವಾಗ 'ವೇದವಾಕ್ಯ' ಎಂದು ಹೇಳುವ ರೂಢಿಯೂ ಉಂಟು. ವೇದಗಳ ವಿಷಯದಲ್ಲಿ ಹಿಂದುಗಳಿಗೆ ಅಪಾರವಾದ ಭಕ್ತಿ ವಿಶ್ವಾಸಗಳಿವೆ.

ವೇದಗಳನ್ನು ಓದಿ, ಅವುಗಳಲ್ಲಿಯ ಸಂಗತಿಗಳನ್ನು ತಿಳಿದುಕೊಂಡು, ಅವುಗಳ ಸತ್ಯಾಸತ್ಯತೆಗಳನ್ನು ವಿಮರ್ಶಿಸಿ ಹೀಗೆ ಅಭಿಪ್ರಾಯ ಪಟ್ಟಿರುವರೇ? ಇಲ್ಲವೇ ಇಲ್ಲ. ವೇದಗಳನ್ನು ಓದಿದವರು ಲಕ್ಷಕ್ಕೊಬ್ಬರು ದೊರೆಯುವುದು ದುರ್ಲಭ. ಎಂದ ಮೇಲೆ ಅವುಗಳ ಅರ್ಥವನ್ನು ತಿಳಿದುಕೊಂಡು ಅವುಗಳ ಸತ್ಯಾಸತ್ಯತೆಗಳನ್ನು ವಿಮರ್ಶಿಸಿದವರು ಅತ್ಯಂತ ವಿರಲವಲ್ಲವೇ?

ಬಹುಕಾಲದಿಂದ ಕೋಟ್ಯಾಂತರ ಜನರು ವೇದಗಳ ವಿಷಯದಲ್ಲಿ ಹೇಳುತ್ತ ಬಂದುದನ್ನೇ ಈಗಲೂ ಹೇಳುತ್ತಿದ್ದಾರೆ. ಅವುಗಳನ್ನು ನೋಡಿದವರು ಕೂಡಾ ವಿರಳ, ಇಂತಹ ವಿಚಾರ ಯುಗದಲ್ಲಿ ಈ ಪ್ರಕಾರ ಅಂಧಪ[illegible]ವಾದ ಹೇಳಿಕೊಳ್ಳುತ್ತ ಬಂದುದನ್ನೇ ನಂಬಿಕೊಂಡಿರುವುದು ಅನುಚಿತವಲ್ಲವೇ? ಅಜ್ಞಾನವು ಅನರ್ಥದ ಮೂಲ. ಧಾರ್ಮಿಕ ವಿಷಯದಲ್ಲಂತೂ ತಪ್ಪು ತಿಳುವಳಿಕೆಗಳಿರುವುದು ಬಹು ಅನರ್ಥಕರ.

ಪ್ರಾಚೀನ ಕಾಲದಲ್ಲಿ ಬ್ರಾಹ್ಮಣರೇ ವೇದಗಳನ್ನು ಓದಿ ಕ್ಷತ್ರಿಯ ಮತ್ತು ವೈಶ್ಯರಿಗೆ ಕಲಿಸುತ್ತಿದ್ದರು. ಅನಂತರ ಬ್ರಾಹ್ಮಣರ ವಿನಾ ಇನ್ನಾರೂ ವೇದಗಳನ್ನು ಓದಬಾರದೆಂಬ ಕಟ್ಟಪ್ಪಣೆಯಾಯಿತು. ವೇದವಾಕ್ಯಗಳನ್ನು ಕೇಳುವ ಶೂದ್ರರ ಕಿವಿಯಲ್ಲಿ ಕಾಸಿದ ಶೀಸವನ್ನು ಹಾಕಬೇಕೆಂತಲೂ ಕೊನೆಗೆ ಗೊತ್ತಾಯಿತು. ಇತ್ತೀಚಿಗೆ ವೇದಾಧ್ಯಯನವು ಬ್ರಾಹ್ಮಣರಲ್ಲಿಯೂ ಕಡಿಮೆಯಾಯಿತು.

ಎಂದ ಮೇಲೆ ವೇದಗಳ ತಿಳುವಳಿಕೆಯು ಜನಸಾಮಾನ್ಯರಿಗುಂಟಾಗುವುದು ಶಕ್ಯವೇ? ವೇದಗಳಲ್ಲಿ ಹಾಗಿದೆ, ಹೀಗಿದೆಯೆಂದು ಹೇಳುವವರೇ ಹೆಚ್ಚಿದರು. ಸಂಸ್ಕೃತದಲ್ಲಿರುವುದೆಲ್ಲಾ ವೇದವಾಕ್ಯವೆಂದು ನಂಬುವ ಕಾಲ ಬಂದಿತು. ಹೀಗಾಗಿ ವೇದಗಳ ವಿಷಯದಲ್ಲಿ ಎಲ್ಲೆಲ್ಲಿಯೂ ಕತ್ತಲೇ ಕತ್ತಲು.

ಇಂಗ್ಲಿಷರು ಈ ದೇಶದಲ್ಲಿ ಪ್ರಭುತ್ವವನ್ನು ಸ್ಥಾಪಿಸಿ ಇಂಗ್ಲಿಷ್ ವಿದ್ಯೆಯನ್ನು ಪ್ರಸಾರಗೊಳಿಸುವ ವರೆಗೂ ವೇದವಿಷಯಕವಾದ ಕತ್ತಲೆಯು ಹರಿದಿರಲಿಲ್ಲ. ಪ್ರೊ. ಮ್ಯಾಕ್ಸ ಮುಲ್ಲರ, ಎಫ್, ರೋಜನ್, ಆಲ್‌ಫ್ರೆಡ್ ಲುಡ್‌ವಿಕ್, ಎಚ್. ಗ್ರಾಸಮನ್ ಮೊದಲಾದ ಹತ್ತು ಹದಿನೈದು ಪಾಶ್ಚಾತ್ಯ ಮಹಾ ಪಂಡಿತರು ವೇದಗಳನ್ನು ಓದಿ ಇಂಗ್ಲಿಷ, ಜರ್ಮನ್, ಫ್ರೆಂಚ್ ಭಾಷೆಗಳಲ್ಲಿ ಬರೆದು ಪ್ರಪಂಚದ ಮುಂದಿಟ್ಟರು.

ವೇದಗಳನ್ನು ಬ್ರಾಹ್ಮಣರ ವಿನಾ ಯಾರೂ ಓದಬಾರದೆಂಬ ಆ ಕಟ್ಟು ಸುಟ್ಟು ಹೋಯಿತು. ಜಗತ್ತಿನ ಮುಂದೆಯೇ ವೇದಗಳು ಪ್ರಕಾಶಿಸಿದವು. ಮ್ಯಾಕ್ಸ ಮುಲ್ಲರ್‌ರವರು ಬರೆದ ವೇದ ಗ್ರಂಥಗಳಿಗೆ ಮೂರು ನೂರು ರೂಪಾಯಿಗಳ ಕ್ರಯ! ವಿ. ರಾಥ್ ಕೃತ ಪೀಟರ್ಸ್‌ಬರ್ಗ ಸಂಸ್ಕೃತ ಜರ್ಮನ್ ಮಹಾಕೋಶ ಹತ್ತು ಸಾವಿರ ಪುಟಗಳುಳ್ಳದು. ಇದರ ಕ್ರಯ ಒಂದು ಸಾವಿರ ರೂಪಾಯಿ !

ವೇದಜ್ಞಾನ ಪ್ರಸಾರವಾಗಲು ಪಾಶ್ಚಾತ್ಯ ಪಂಡಿತರು ಎಂತಹ ಪ್ರಚಂಡ ಪ್ರಯತ್ನಗಳನ್ನು ಮಾಡಿದ್ದಾರೆಂಬುದು ಮೇಲಣ ಸಂಗತಿಗಳಿಂದ ಗೊತ್ತಾಗಬಹುದು. ಕಳೆದ ೫೦-೬೦ ವರುಷಗಳಲ್ಲಿ ಹಿಂದೆ ೫-೬ ಸಾವಿರ ವರುಷಗಳಲ್ಲಾಗದಿದ್ದಷ್ಟು ವೇದಜ್ಞಾನ ಪ್ರಸಾರವಾಯಿತು. ಕಳೆದ ಅರ್ಧ ಶತಮಾನದಲ್ಲಿಯೇ ವೇದಗಳ ಸಂಬಂಧವಾಗಿ ೫೧ ಟೀಕೆ ಟಿಪ್ಪಣೆಗಳ ಗ್ರಂಥಗಳು ರಚಿಸಲ್ಪಟ್ಟವು.

ರಮೇಶ ಚಂದ್ರ ದತ್ತ, ಟಿಳಕ, ಅವಿನಾಶ ಚಂದ್ರ ದಾಸ, ಮೊದಲಾದ ಆಧುನಿಕ ಶಿಕ್ಷಣ ಹೊಂದಿದ ಅನೇಕ ಸುಪ್ರಸಿದ್ಧ ಭಾರತೀಯ ವೇದಜ್ಞರು ವೇದಗಳ ಸಂಬಂಧವಾಗಿ ಅನೇಕ ಹೊಸ ವಿಚಾರಗಳನ್ನು ಪ್ರಕಾಶಗೊಳಿಸಿದರು. ಬಂಗಾಲಿ, ಹಿಂದಿ, ಮರಾಠಿ ಮೊದಲಾದ ದೇಶ ಭಾಷೆಗಳಲ್ಲಿಯೂ ವೇದಗಳು ಬರೆಯಲ್ಪಟ್ಟವು. ದೇಶ ಭಾಷೆಯ ಓದು ಬರಹ ಬಲ್ಲವರಲ್ಲಿ ಯಾವ ಧರ್ಮ ಮತ ಪಂಥ ಕನಬಿನವರಾದ್ದರೂ ಈಗ ವೇದಗಳನ್ನು ಓದಲು ಸಮರ್ಥ[illegible] ವೇದಗಳ ವಿಷಯದಲ್ಲಿ ಮೊದಲಿದ್ದ ಕತ್ತಲೆ ಎಷ್ಟೋ ಹರಿದುಹೋಗಿ ಅಲ್ಲಲ್ಲಿ ಬೆಳಕು ತೋರಲಾರಂಭಿಸಿದೆ.

ಆದರೆ ಕನ್ನಡದಲ್ಲಿ ಮಾತ್ರ ಈ ಸಂಬಂಧವಾದ ವಿವೇಚನೆಗಳಿಲ್ಲ. ಕೇವಲ ಕನ್ನಡವೊಂದನ್ನೇ ಅರಿತ ಜನರು ಇನ್ನೂ ಆ ಕತ್ತಲಲ್ಲೇ ಇದ್ದಾರೆ. ಅಂಥವರಿಗೆ ಸ್ವಲ್ಪ ಬೆಳಕನ್ನು ತೋರಿಸುವುದೇ ವೇದವಿಷಯಕವಾದ ಈ ಲೇಖಮಾಲೆಯ ಉದ್ದೇಶ.

ಆದಕಾರಣ ವೇದಗಳ ಬಾಹ್ಯಾಂಗವನ್ನು ಕುರಿತು ಮೊದಲು ವಿವೇಚಿಸಿ ಅನಂತರ ಅವುಗಳಲ್ಲಿರತಕ್ಕ ಸಂಗತಿಗಳ ಸಂಬಂಧವಾಗಿ ವಿವರಿಸುವೆವು. ಈ ಸಂಬಂಧವಾಗಿ ಆಗಾಗ್ಗೆ ಪ್ರಕಟವಾಗುವ ಲೇಖನಗಳನ್ನು ವಾಚಕರು ಚಿಕಿತ್ಸಕ ಬುದ್ಧಿಯಿಂದಲೇ ಓದಿ ನಿಜಾಂಶಗಳನ್ನು ತಿಳಕೊಳ್ಳಲು ಪ್ರಯತ್ನಿಸುವರೆಂದು ನಂಬಿದ್ದೇವೆ. ಸಂದೇಹ ತೋರಿದ ಸಂಗತಿಗಳನ್ನು ಕುರಿತು ವಾಚಕರು ಈ ಪತ್ರಿಕೆಯಲ್ಲಿ ಪ್ರಸ್ತಾಪಿಸಲು ಅಡ್ಡಿಯಿಲ್ಲ. ವೇದಗಳ ಸಂಬಂಧವಾದ ನಿಜಜ್ಞಾನವುಂಟಾಗಿ ಹಿಂದುಗಳ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳಿಗೆ ಅನುಕೂಲವಾದ ವಿವೇಕೋದಯವಾಗಲೆಂಬುದೇ ಈ ಲೇಖಮಾಲೆಯ ಮುಖ್ಯೋದ್ದೇಶವು.

ಅಬಸೀನಿಯಾ ಸೈನ್ಯಕ್ಕೆ ತುರ್ಕಸ್ಥಾನದ ಸೇನಾಪತಿಗಳು!

ಮಹಾ ಯುದ್ಧದ ಕಾಲಕ್ಕೆ ಪ್ರಸಿದ್ಧವಾದ ಗಾಲಿಪೋಲಿ ಯುದ್ಧದಲ್ಲಿ ಪರಾಕ್ರಮವನ್ನು ತೋರಿಸಿದ ತುರ್ಕಿ ಸೇನಾಧಿಪತಿ ವಹೀಬಪಾಶಾ ಇವರೇ ಅಬಸೀನಿಯಾ ಇಟಲಿ ಯುದ್ಧದಲ್ಲಿ ಅಬಸೀನಿಯಾ ಸೇನಾನಾಯಕರಾಗುವರೆಂದು ಲಂಡನ್ನಿನ "ಪೀಪಲ್" ಎಂಬ ಪತ್ರಿಕೆಯು ಪ್ರಕಟಿಸಿದೆ.

ಗೀತಾ ಧರ್ಮ ವಿಚಾರ.

[ಕೈ. ವೀರಬಸವಪ್ಪ ಶ್ರೇಷ್ಠಿ ಇವರ ಕೆಲವು ವಿಚಾರಗಳು.]

ಕೈ. ವೀರಬಸವಪ್ಪ ಶ್ರೇಷ್ಠಿಯವರು ಮಹಾ ವಿದ್ವಾಂಸರಾಗಿದ್ದರು. ಧಾರ್ಮಿಕ ವಿಷಯದಲ್ಲಿ ಘನ ಪಂಡಿತರು. ಪಾಶ್ಚಾತ್ಯ ಮತ್ತು ಪೌರ್ವಾತ್ಯ ತತ್ವಜ್ಞಾನಗಳನ್ನು ಅರಿತಿದ್ದರು. ಭಾರತೀಯ ಬೇರೆ ಬೇರೆ ಮತ ಗ್ರಂಥಗಳನ್ನು ತುಲನಾತ್ಮಕ ದೃಷ್ಟಿಯಿಂದ ಅಧ್ಯಯನ ಮಾಡಿದ್ದರು. ವೀರಶೈವ ಮತ ವಿಷಯಕವಾದ ಇವರ ಪಾಂಡಿತ್ಯವಂತೂ ಅಸಾಧಾರಣವಾದುದು. ವೀರಶೈವರ ವಿವೇಕಾನಂದರೆಂತಲೂ ಇವರಿಗೆ ಬಹು ಜನರು ಹೇಳುತ್ತಿದ್ದರು.

ಇಂತಹ ಮಹನೀಯರು ಅಕಾಲದಲ್ಲಿ ಶಿವೈಕ್ಯರಾದುದು ಭಾರತೀಯ ತತ್ವಜ್ಞಾನ ಪ್ರಸಾರಣೆಗೆ ಒಂದು ಕೊರತೆಯೇ ಸರಿ. ವೀರಶೈವ ಸಮಾಜಕ್ಕಂತೂ ಬಹು ನಷ್ಟ. ಈ ತತ್ವಜ್ಞಾನಿಗಳು ಭಗವದ್ಗೀತೆಯನ್ನು ಬಹು ಚನ್ನಾಗಿ ಅಧ್ಯಯನ ಮಾಡಿದ್ದರು. ವೀರಶೈವ ಮತತತ್ವಗಳು ಭಗವದ್ಗೀತೆಯಲ್ಲಿ ಹೇಗೆ ವಿವೇಚಿಸಲ್ಪಟ್ಟಿವೆಯೆಂಬುವದನ್ನು ಇವರು ಜಗತ್ತಿನ ಮುಂದಿಡುವವರಿದ್ದರು.

ಭಗವದ್ಗೀತೆಗೆ ವೀರಶೈವಪರವಾದ ಭಾಷ್ಯವನ್ನು ಬರೆಯುವ ಇವರ ಮಹತ್ಕಾರ್ಯವು ನಾಲ್ಕಾರು ವರುಷ ನಡೆದಿದ್ದರೂ ಕೊನೆಗೂ ಅದು ಪೂರೈಸಲಿಲ್ಲ. ಈ ಮಹತ್ತರವಾದ ಕಾರ್ಯವನ್ನು ಮಧ್ಯದಲ್ಲಿಯೇ ಬಿಟ್ಟು ಇವರು ಪರಲೋಕವಾಸಿಗಳಾದುದು ಅತ್ಯಂತ ವಿಷಾದಕರವು.

ಪೂರ್ವ ಸಿದ್ಧತೆ.

ಈ ಅಪೂರ್ವ ಗ್ರಂಥವನ್ನು ರಚಿಸಲು ಕೈ. ಶ್ರೇಷ್ಠಿಯವರು ಮಾಡಿಕೊಂಡ "ಪೂರ್ವ ಸಿದ್ಧತೆಗಳನ್ನು ನೋಡಿದರೆ ಆ ಗ್ರಂಥವು ಎಷ್ಟು ಮಹತ್ವದ್ದಾಗುತ್ತಿದ್ದಿತೆಂಬುದು ತೋರುತ್ತದೆ. ಭಗವದ್ಗೀತೆಯ ೧೮ ಅಧ್ಯಾಯಗಳಲ್ಲಿಯ ಪ್ರತಿಯೊಂದು ಅಧ್ಯಾಯದಲ್ಲಿಯೂ ಇರತಕ್ಕ ವೀರಶೈವ ಮತತತ್ವದ್ಯೋತಕ ಶ್ಲೋಕಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿ ಬರೆದಿಟ್ಟಿದ್ದಾರೆ. ಗ್ರಂಥ ರಚನೆಗೆ ಇವರು ಮಾಡಿಟ್ಟ ಕಾರ್ಯಗಳಲ್ಲಿ ಇದೇ ಸ್ವಲ್ಪಾದರೂ ತಿಳಿಯತಕ್ಕದಾಗಿರುವುದರಿಂದ ಇವರು ಪ್ರತಿಪಾದಿಸುತ್ತಿದ್ದ ರೀತಿನೀತಿಗಳನ್ನು ಊಹಿಸಬಹುದಾಗಿದೆ.

ವೀರಶೈವ ಮತದ ಅಷ್ಟಾವರಣ, ಪಂಚಾಚಾರ ಷಟ್‌ಸ್ಥಳಗಳಲ್ಲಿ ಯಾವ ವಿಷಯವು ಯಾವ ಶ್ಲೋಕದಲ್ಲಿ ಸೂಚಿತವಾಗಿದೆಯೆಂಬುದು ಗೊತ್ತಾಗುವುದಕ್ಕೋಸ್ಕರ ಆಯಾಯ ಶ್ಲೋಕಗಳ ಹಿಂದೆ ವೀರಶೈವ ಮತದ ಆಯಾಯ ತತ್ವಗಳನ್ನು ನಿರ್ದೇಶಿಸಿದ್ದಾರೆ. ಆದರೆ ಆ ಶ್ಲೋಕಕ್ಕೆ ಆ ಪ್ರಕಾರ ಹೇಗೆ ಅರ್ಥ ಮಾಡುತ್ತಿದ್ದರೆಂಬುದನ್ನು ಮಾತ್ರ ಬರೆದಿಟ್ಟಿಲ್ಲ. ಆದುದರಿಂದ ಈ ಕಾರ್ಯವು ಅಪೂರ್ಣವಾಗಿಯೇ ಉಳಿದಿದೆ.

ರಾಮದಾಸ, ತುಕಾರಾಮ, ಜ್ಞಾನದೇವ, ಏಕನಾಥ ಮೊದಲಾದ ಮಹಾರಾಷ್ಟ್ರ ದೇಶದ ಸಾಧುಸಂತರ ಅಭಂಗಗಳಲ್ಲಿಯ ಸಂಖ್ಯೆಗಳನ್ನು ಬೇರೆ ಬೇರೆ ಪುಸ್ತಕಗಳಲ್ಲಿ ಬರೆದಿಟ್ಟಿದ್ದಾರೆ. ಅವುಗಳಲ್ಲಿ ವೀರಶೈವ ಮತದ ಯಾವ ಯಾವ ತತ್ವಗಳು ಅಡಕವಾಗಿವೆಯೆಂಬುದನ್ನೇನೂ ನಿರ್ದೇಶಿಸಿಲ್ಲ. ಆದುದರಿಂದ ಆ ಸಂಗತಿಗಳನ್ನು ಕಂಡುಹಿಡಿಯುವುದು ಅಸಾಧ್ಯವೇ ಸರಿ.

ಇದೇ ಪ್ರಕಾರ ಬೈಬಲ್ಲಿನ ಅನೇಕ ವಿಚಾರಗಳನ್ನು ಒಂದು ಪುಸ್ತಕದಲ್ಲಿ ಅಕ್ಷರಾನುಕ್ರಮಣಿಕೆಯಿಂದ ಸಂಕ್ಷಿಪ್ತವಾಗಿ ನಿರ್ದೇಶಿಸಿಟ್ಟಿದ್ದಾರೆ. ಈ ಸಂಗತಿಗಳನ್ನು ಏಕೆ ಮತ್ತು ಹೇಗೆ ಆ ಪುಸ್ತಕದಲ್ಲಿ ವಿವೇಚಿಸುತ್ತಿದ್ದರೋ ತಿಳಿಯದಾಗಿದೆ. ಈ ಪ್ರಕಾರ ಪೂರ್ವ ಸಿದ್ಧತೆಯನ್ನೇನೋ ಬಹು ಘನವಾಗಿಯೇ ಮಾಡಿಟ್ಟಿದ್ದರು ಆದರೆ ಅವುಗಳಲ್ಲಿ ಒಂದು ಪುಸ್ತಕದ ಸಂಗತಿಗಳನ್ನಾದರೂ ಸಂಪೂರ್ಣವಾಗಿ ವಿವೇಚಿಸಿಲ್ಲವಾದುದರಿಂದ ಅವರ ವಿಚಾರ ಸರಣಿಯು ಸ್ಪಷ್ಟವಾಗಿ ತಿಳಿಯಲು ಅವಕಾಶವಿಲ್ಲದಾಗಿದೆ.

ಸ್ವಲ್ಪ ಬೆಳಕು.

ಭಗವದ್ಗೀತೆಯಲ್ಲಿಯ ನೂರಾರು ಶ್ಲೋಕಗಳನ್ನು ಪ್ರತ್ಯೇಕವಾಗಿ ಬರೆದಿಟ್ಟು ಅವುಗಳ ಹಿಂದೆ ವೀರಶೈವ ಮತತತ್ವಗಳ ನಾಮ ನಿರ್ದೇಶ ಮಾಡಿರುವುದರಿಂದ ಮಾತ್ರ ಅವರ ವಿಚಾರ ಸರಣಿಯ ಮೇಲೆ ಆ ಟಿಪ್ಪಣಿಗಳು ಸ್ವಲ್ಪ ಬೆಳಕನ್ನು ಕೆಡವುತ್ತವೆ. ಆ ಬೆಳಕಿನಿಂದಲೇ ಶ್ರೇಷ್ಠಿಯವರ ಅದ್ವಿತೀಯ ಪಾಂಡಿತ್ಯವನ್ನೂ ಅವರು ಪ್ರತಿಪಾದಿಸುತ್ತಿದ್ದ ರೀತಿನೀತಿಗಳನ್ನೂ ಸ್ವಲ್ಪ ತಿಳಿದುಕೊಳ್ಳಬಹುದು.

ಆದಕಾರಣ ಮುಂದಣ ವಾರದಿಂದ ಆಗಾಗ್ಗೆ ಆಯಾಯ ಶ್ಲೋಕಗಳನ್ನೂ ಅವುಗಳ ಪ್ರಚಲಿತ ಅರ್ಥವನ್ನೂ ವಿವರಿಸಿ ಅವು ವೀರಶೈವರ ಯಾವ ತತ್ವಗಳಿಗೆ ಅನ್ವಯಿಸುತ್ತವೆಂದು ಶ್ರೇಷ್ಠಿಯವರು ಸೂಚಿಸಿದ್ದಾರೆಯೋ ಆ ತತ್ವಗಳನ್ನೂ ನಿರ್ದೇಶಿಸುವೆವು. ಅವುಗಳಿಂದ ವಾಚಕರಿಗೆ ಶ್ರೇಷ್ಠಿಯವರ ವಿಚಾರ ಸರಣಿಯು ಸ್ವಲ್ಪಾದರೂ ಗೊತ್ತಾಗಬಹುದು. ಭಗವದ್ಗೀತೆಯ ಸಂಬಂಧವಾಗಿ ಅವರು ಬರೆದಿಟ್ಟ ನಮಗೆ ದೊರೆತಿರುವ ಟಿಪ್ಪಣೆಗಳಲ್ಲಿ ಇವುಗಳ ವಿನಾ ಇನ್ನಾವ ಟಿಪ್ಪಣೆಗಳಿಂದಲೂ ಅವರ ವಿಚಾರಸರಣಿಯು ಸ್ವಲ್ಪಾದರೂ ತಿಳಿಯಲು ಅವಕಾಶವಿಲ್ಲದುದು ಅತ್ಯಂತ ವಿಷಾದದ ಸಂಗತಿಯು.

ನಾಮನಿರ್ದೇಶ.

ತಾವು ಬರೆಯ ಬಯಸಿದ ಪುಸ್ತಕಕ್ಕೆ **ಗೀತಾ ಧರ್ಮ ವಿಚಾರ** ಎಂಬ ಹೆಸರನ್ನಿಡುವವರಿದ್ದರೆಂದು ಒಂದು ಟಿಪ್ಪಣೆಯಲ್ಲಿ ಬರೆದಿಟ್ಟಿದ್ದರಿಂದ ಗೊತ್ತಾಗುತ್ತದೆ. ಮತ್ತು **ವಿಷಯ ಪ್ರವೇಶ** ಎಂಬ ಪೀಠಿಕೆಯನ್ನು ಬರೆಯುವಾಗ ಮೊದಲು ಭಗವದ್ಗೀತೆಯ ಈ ಕೆಳಗಿನ ಶ್ಲೋಕವನ್ನು ಶಿರೋಭಾಗದಲ್ಲಿ ಹಾಕುತ್ತಿದ್ದರೆಂದು ಆ ಟಿಪ್ಪಣೆಯಿಂದ ತಿಳಿಯುತ್ತದೆ,

ಅಧ್ಯೇಷ್ಯತೇಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ| ಜ್ಞಾನ ಯಜ್ಞೇನ ತೇನಾಹಮಿಷ್ಟಃ ಸ್ಯಾಮಿತಿ ಮೇ ಮತಿಃ||

ಅಧ್ಯಾಯ ೧೮ ಶ್ಲೋಕ ೭೦

ಅರ್ಥ:— ನಮ್ಮೀರ್ವರಲ್ಲಿ—ಎಂದರೆ ಕೃಷ್ಣಾರ್ಜುನರಲ್ಲಿ—ನಡೆದ ಈ ಧರ್ಮ ಸಂಬಂಧವಾದ ಸಂವಾದವನ್ನು ಯಾರು ಅಧ್ಯಯನ ಮಾಡುವರೋ ಅವರು ಜ್ಞಾನ ಯಜ್ಞದಿಂದ ನನ್ನನ್ನು-ಎಂದರೆ ಪರಮಾತ್ಮನನ್ನು ಪೂಜಿಸಿದಂತಾಗುವದೆಂದು ನಾನು ತಿಳಿಯುತ್ತೇನೆ.

ಅಭಿನಂದನ.

ಕೈ. ಶ್ರೇಷ್ಠಿಯವರು ಬರೆದಿಟ್ಟಿದ್ದ ಟಿಪ್ಪಣಿಗಳನ್ನು ಅವರ ಚಿ|| ಗಳಾದ ಕೊಲ್ಲಾಪುರದಲ್ಲಿರುವ **ಶ್ರೀಯುತ ಶ್ರೇಷ್ಠಿ ವಕೀಲರು ನಮ್ಮ ಕಡೆಗೆ ಕೊಟ್ಟು** ಇಷ್ಟರಮಟ್ಟಿಗಾದರೂ ಆ ಮಹಾ ಪಂಡಿತರ ವಿಚಾರಸರಣಿಯು ಗೊತ್ತಾಗುವಂತೆ ಮಾಡಿದ್ದರಿಂದ ನಾವು ಶ್ರೀ. ಶ್ರೇಷ್ಠಿ ವಕೀಲರನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇವೆ.

ವೇದಗಳ ವಿಷಯದಲ್ಲಿ ಕೆಲವು ವಿಚಾರ.

ವೇದಗಳು ಹಿಂದು ಜನರಿಗೆ ಬಹು ಪವಿತ್ರವಾದ ಗ್ರಂಥಗಳು. ಇವು ದೇವರಿಂದ ಜಗದಾದಿಯಲ್ಲಿಯೇ ಹುಟ್ಟಿದವೆಂದು ಹಿಂದುಗಳ ತಿಳುವಳಿಕೆ. ವೇದಗಳಲ್ಲಿಲ್ಲದ ಸಂಗತಿಗಳು ಬೇರಾವ ಗ್ರಂಥಗಳಲ್ಲಿಯೂ ಇಲ್ಲವೇ ಇಲ್ಲವೆಂದು ಹಿಂದುಗಳ ಭಾವನೆ. ವೇದಗಳಲ್ಲಿರದ ಸಂಗತಿಗಳು ಅಪ್ರಮಾಣಗಳೆಂದೇ ಅವರ ಹೇಳಿಕೆ.

ವೇದದಲ್ಲಿರತಕ್ಕ ಸಂಗತಿಗಳೆಲ್ಲಾ ಸತ್ಯವಾದವುಗಳೆಂದೇ ತಿಳಿದಿದ್ದಾರೆ. ಆದುದರಿಂದ ಸತ್ಯವೆಂದು ಹೇಳುವಾಗ 'ವೇದವಾಕ್ಯ' ಎಂದು ಹೇಳುವ ರೂಢಿಯೂ ಉಂಟು. ವೇದಗಳ ವಿಷಯದಲ್ಲಿ ಹಿಂದುಗಳಿಗೆ ಅಪಾರವಾದ ಭಕ್ತಿ ವಿಶ್ವಾಸಗಳಿವೆ.

ವೇದಗಳನ್ನು ಓದಿ, ಅವುಗಳಲ್ಲಿಯ ಸಂಗತಿಗಳನ್ನು ತಿಳಿದುಕೊಂಡು, ಅವುಗಳ ಸತ್ಯಾಸತ್ಯತೆಗಳನ್ನು ವಿಮರ್ಶಿಸಿ ಹೀಗೆ ಅಭಿಪ್ರಾಯ ಪಟ್ಟಿರುವರೇ? ಇಲ್ಲವೇ ಇಲ್ಲ. ವೇದಗಳನ್ನು ಓದಿದವರು ಲಕ್ಷಕ್ಕೊಬ್ಬರು ದೊರೆಯುವುದು ದುರ್ಲಭ. ಎಂದ ಮೇಲೆ ಅವುಗಳ ಅರ್ಥವನ್ನು ತಿಳಿದುಕೊಂಡು ಅವುಗಳ ಸತ್ಯಾಸತ್ಯತೆಗಳನ್ನು ವಿಮರ್ಶಿಸಿದವರು ಅತ್ಯಂತ ವಿರಲವಲ್ಲವೇ?

ಬಹುಕಾಲದಿಂದ ಕೋಟ್ಯಾಂತರ ಜನರು ವೇದಗಳ ವಿಷಯದಲ್ಲಿ ಹೇಳುತ್ತ ಬಂದುದನ್ನೇ ಈಗಲೂ ಹೇಳುತ್ತಿದ್ದಾರೆ. ಅವುಗಳನ್ನು ನೋಡಿದವರು ಕೂಡಾ ವಿರಳ. ಇಂತಹ ವಿಚಾರ ಯುಗದಲ್ಲಿ ಈ ಪ್ರಕಾರ ಅಂಧಪರಂಪರೆಯಾದ ಹೇಳಿಕೊಳ್ಳುತ್ತ ಬಂದುದನ್ನೇ ನಂಬಿಕೊಂಡಿರುವುದು ಅನುಚಿತವಲ್ಲವೇ? ಅಜ್ಞಾನವು ಅನರ್ಥದ ಮೂಲ. ಧಾರ್ಮಿಕ ವಿಷಯದಲ್ಲಂತೂ ತಪ್ಪುತಿಳುವಳಿಕೆಗಳಿರುವುದು ಬಹು ಅನರ್ಥಕರ.

ಪ್ರಾಚೀನ ಕಾಲದಲ್ಲಿ ಬ್ರಾಹ್ಮಣರೇ ವೇದಗಳನ್ನು ಓದಿ ಕ್ಷತ್ರಿಯ ಮತ್ತು ವೈಶ್ಯರಿಗೆ ಕಲಿಸುತ್ತಿದ್ದರು. ಅನಂತರ ಬ್ರಾಹ್ಮಣರ ವಿನಾ ಇನ್ನಾರೂ ವೇದಗಳನ್ನು ಓದಬಾರದೆಂಬ ಕಟ್ಟಪ್ಪಣೆಯಾಯಿತು. ವೇದವಾಕ್ಯಗಳನ್ನು ಕೇಳುವ ಶೂದ್ರರ ಕಿವಿಯಲ್ಲಿ ಕಾಸಿದ ಶೀಸವನ್ನು ಹಾಕಬೇಕೆಂತಲೂ ಕೊನೆಗೆ ಗೊತ್ತಾಯಿತು. ಇತ್ತೀಚಿಗೆ ವೇದಾಧ್ಯಯನವು ಬ್ರಾಹ್ಮಣರಲ್ಲಿಯೂ ಕಡಿಮೆಯಾಯಿತು.

ಎಂದ ಮೇಲೆ ವೇದಗಳ ತಿಳುವಳಿಕೆಯು ಜನಸಾಮಾನ್ಯರಿಗುಂಟಾಗುವುದು ಶಕ್ಯವೇ? ವೇದಗಳಲ್ಲಿ ಹಾಗಿದೆ, ಹೀಗಿದೆಯೆಂದು ಹೇಳುವವರೇ ಹೆಚ್ಚಿದರು. ಸಂಸ್ಕೃತದಲ್ಲಿರುವುದೆಲ್ಲಾ ವೇದವಾಕ್ಯವೆಂದು ನಂಬುವ ಕಾಲ ಬಂದಿತು. ಹೀಗಾಗಿ ವೇದಗಳ ವಿಷಯದಲ್ಲಿ ಎಲ್ಲೆಲ್ಲಿಯೂ ಕತ್ತಲೇ ಕತ್ತಲು.

ಇಂಗ್ಲಿಷರು ಈ ದೇಶದಲ್ಲಿ ಪ್ರಭುತ್ವವನ್ನು ಸ್ಥಾಪಿಸಿ ಇಂಗ್ಲಿಷ್ ವಿದ್ಯೆಯನ್ನು ಪ್ರಸಾರಗೊಳಿಸುವ ವರೆಗೂ ವೇದವಿಷಯಕವಾದ ಕತ್ತಲೆಯು ಹರಿದಿರಲಿಲ್ಲ. ಪ್ರೊ. ಮ್ಯಾಕ್ಸ್ ಮುಲ್ಲರ, ಎಫ್, ರೋಜನ್, ಆಲ್‌ಫ್ರೆಡ್ ಲುಡ್‌ವಿಕ್, ಎಚ್. ಗ್ರಾಸಮನ್ ಮೊದಲಾದ ಹತ್ತು ಹದಿನೈದು ಪಾಶ್ಚಾತ್ಯ ಮಹಾ ಪಂಡಿತರು ವೇದಗಳನ್ನು ಓದಿ ಇಂಗ್ಲಿಷ, ಜರ್ಮನ್, ಫ್ರೆಂಚ್ ಭಾಷೆಗಳಲ್ಲಿ ಬರೆದು ಪ್ರಪಂಚದ ಮುಂದಿಟ್ಟರು.

ವೇದಗಳನ್ನು ಬ್ರಾಹ್ಮಣರ ವಿನಾ ಯಾರೂ ಓದಬಾರದೆಂಬ ಆ ಕಟ್ಟು ಸುಟ್ಟು ಹೋಯಿತು. ಜಗತ್ತಿನ ಮುಂದೆಯೇ ವೇದಗಳು ಪ್ರಕಾಶಿಸಿದವು. ಮ್ಯಾಕ್ಸ್ ಮುಲ್ಲರ್‌ರವರು ಬರೆದ ವೇದ ಗ್ರಂಥಗಳಿಗೆ ಮೂರು ನೂರು ರೂಪಾಯಿಗಳ ಕ್ರಯ! ವಿ. ರಾಥ್ ಕೃತ ಪೀಟರ್ಸಬರ್ಗ ಸಂಸ್ಕೃತ ಜರ್ಮನ್ ಮಹಾಕೋಶ ಹತ್ತು ಸಾವಿರ ಪುಟಗಳುಳ್ಳದು. ಇದರ ಕ್ರಯ ಒಂದು ಸಾವಿರ ರೂಪಾಯಿ !

ವೇದಜ್ಞಾನ ಪ್ರಸಾರವಾಗಲು ಪಾಶ್ಚಾತ್ಯ ಪಂಡಿತರು ಎಂತಹ ಪ್ರಚಂಡ ಪ್ರಯತ್ನಗಳನ್ನು ಮಾಡಿದ್ದಾರೆಂಬುದು ಮೇಲಣ ಸಂಗತಿಗಳಿಂದ ಗೊತ್ತಾಗಬಹುದು. ಕಳೆದ ೫೦-೬೦ ವರುಷಗಳಲ್ಲಿ ಹಿಂದೆ ೫-೬ ಸಾವಿರ ವರುಷಗಳಲ್ಲಾಗದಿದ್ದಷ್ಟು ವೇದಜ್ಞಾನ ಪ್ರಸಾರವಾಯಿತು. ಕಳೆದ ಅರ್ಧ ಶತಮಾನದಲ್ಲಿಯೇ ವೇದಗಳ ಸಂಬಂಧವಾಗಿ ೫೧ ಟೀಕೆಟಿಪ್ಪಣಿಗಳ ಗ್ರಂಥಗಳು ರಚಿಸಲ್ಪಟ್ಟವು.

ರಮೇಶ ಚಂದ್ರ ದತ್ತ, ಟಿಳಕ, ಅವಿನಾಶ ಚಂದ್ರ ದಾಸ, ಮೊದಲಾದ ಆಧುನಿಕ ಶಿಕ್ಷಣ ಹೊಂದಿದ ಅನೇಕ ಸುಪ್ರಸಿದ್ಧ ಭಾರತೀಯ ವೇದಜ್ಞರು ವೇದಗಳ ಸಂಬಂಧವಾಗಿ ಅನೇಕ ಹೊಸ ವಿಚಾರಗಳನ್ನು ಪ್ರಕಾಶಗೊಳಿಸಿದರು. ಬಂಗಾಲಿ, ಹಿಂದಿ, ಮರಾಠಿ ಮೊದಲಾದ ದೇಶ ಭಾಷೆಗಳಲ್ಲಿಯೂ ವೇದಗಳು ಬರೆಯಲ್ಪಟ್ಟವು. ದೇಶ ಭಾಷೆಯ ಓದುಬರಹ ಬಲ್ಲವರಲ್ಲಿ ಯಾವ ಧರ್ಮ ಮತ ಪಂಥ ಕಸಬಿನವರಾದ್ದರೂ ಈಗ ವೇದಗಳನ್ನು ಓದಲು ಸಮರ್ಥರಾಗಿದ್ದಾರೆ. ಆದ್ದರಿಂದ ವೇದಗಳ ವಿಷಯದಲ್ಲಿ ಮೊದಲಿದ್ದ ಕತ್ತಲೆ ಎಷ್ಟೋ ಹರಿದುಹೋಗಿ ಅಲ್ಲಲ್ಲಿ ಬೆಳಕು ತೋರಲಾರಂಭಿಸಿದೆ.

ಆದರೆ ಕನ್ನಡದಲ್ಲಿ ಮಾತ್ರ ಈ ಸಂಬಂಧವಾದ ವಿವೇಚನೆಗಳಿಲ್ಲ. ಕೇವಲ ಕನ್ನಡವೊಂದನ್ನೇ ಅರಿತ ಜನರು ಇನ್ನೂ ಆ ಕತ್ತಲಲ್ಲೇ ಇದ್ದಾರೆ. ಅಂಥವರಿಗೆ ಸ್ವಲ್ಪ ಬೆಳಕನ್ನು ತೋರಿಸುವುದೇ ವೇದವಿಷಯಕವಾದ ಈ ಲೇಖಮಾಲೆಯ ಉದ್ದೇಶ.

ಆದಕಾರಣ ವೇದಗಳ ಬಾಹ್ಯಾಂಗವನ್ನು ಕುರಿತು ಮೊದಲು ವಿವೇಚಿಸಿ ಅನಂತರ ಅವುಗಳಲ್ಲಿರತಕ್ಕ ಸಂಗತಿಗಳ ಸಂಬಂಧವಾಗಿ ವಿವರಿಸುವೆವು. ಈ ಸಂಬಂಧವಾಗಿ ಆಗಾಗ್ಗೆ ಪ್ರಕಟವಾಗುವ ಲೇಖನಗಳನ್ನು ವಾಚಕರು ಚಿಕಿತ್ಸಕ ಬುದ್ಧಿಯಿಂದಲೇ ಓದಿ ನಿಜಾಂಶಗಳನ್ನು ತಿಳಕೊಳ್ಳಲು ಪ್ರಯತ್ನಿಸುವರೆಂದು ನಂಬಿದ್ದೇವೆ. ಸಂದೇಹ ತೋರಿದ ಸಂಗತಿಗಳನ್ನು ಕುರಿತು ವಾಚಕರು ಈ ಪತ್ರಿಕೆಯಲ್ಲಿ ಪ್ರಸ್ತಾಪಿಸಲು ಅಡ್ಡಿಯಿಲ್ಲ. ವೇದಗಳ ಸಂಬಂಧವಾದ ನಿಜಜ್ಞಾನವುಂಟಾಗಿ ಹಿಂದುಗಳ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳಿಗೆ ಅನುಕೂಲವಾದ ವಿವೇಕೋದವಾಗಲೆಂಬುದೇ ಈ ಲೇಖಮಾಲೆಯ ಮುಖ್ಯೋದ್ದೇಶವು.

ಅಬಸೀನಿಯಾ ಸೈನ್ಯಕ್ಕೆ ತುರ್ಕಸ್ಥಾನದ ಸೇನಾಪತಿಗಳು!

ಮಹಾ ಯುದ್ಧದ ಕಾಲಕ್ಕೆ ಪ್ರಸಿದ್ಧವಾದ ಗಾಲಿಪೋಲಿ ಯುದ್ಧದಲ್ಲಿ ಪರಾಕ್ರಮವನ್ನು ತೋರಿಸಿದ ತುರ್ಕಿ ಸೇನಾಧಿಪತಿ ವಹೀಬಪಾಶಾ ಇವರೇ ಅಬಸೀನಿಯಾ ಇಟಲಿ ಯುದ್ಧದಲ್ಲಿ ಅಬಸೀನಿಯಾ ಸೇನಾನಾಯಕರಾಗುವರೆಂದು ಲಂಡನ್ನಿನ "ಪೀಪಲ್" ಎಂಬ ಪತ್ರಿಕೆಯು ಪ್ರಕಟಿಸಿದೆ.

ಗೀತಾ ಧರ್ಮ ವಿಚಾರ.

[ಕೈ. ವೀರಬಸವಪ್ಪ ಶ್ರೇಷ್ಠಿ ಇವರ ಕೆಲವು ವಿಚಾರಗಳು.]

ಕೈ. ವೀರಬಸವಪ್ಪ ಶ್ರೇಷ್ಠಿಯವರು ಮಹಾ ವಿದ್ವಾಂಸರಾಗಿದ್ದರು. ಧಾರ್ಮಿಕ ವಿಷಯದಲ್ಲಿ ಘನ ಪಂಡಿತರು. ಪಾಶ್ಚಾತ್ಯ ಮತ್ತು ಪೌರ್ವಾತ್ಯ ತತ್ವಜ್ಞಾನಗಳನ್ನು ಅರಿತಿದ್ದರು. ಭಾರತೀಯ ಬೇರೆ ಬೇರೆ ಮತ ಪಂಥಗಳನ್ನು ತುಲನಾತ್ಮಕ ದೃಷ್ಟಿಯಿಂದ ಅಧ್ಯಯನ ಮಾಡಿದ್ದರು. ವೀರಶೈವ ಮತ ವಿಷಯಕವಾದ ಇವರ ಪಾಂಡಿತ್ಯವಂತೂ ಅಸಾಧಾರಣವಾದುದು. ವೀರಶೈವರ ವಿವೇಕಾನಂದರೆಂತಲೂ ಇವರಿಗೆ ಬಹು ಜನರು ಹೇಳುತ್ತಿದ್ದರು.

ಇಂತಹ ಮಹನೀಯರು ಅಕಾಲದಲ್ಲಿ ಶಿವೈಕ್ಯರಾದುದು ಭಾರತೀಯ ತತ್ವಜ್ಞಾನ ಪ್ರಸಾರಣೆಗೆ ಒಂದು ಕೊರತೆಯೇ ಸರಿ. ವೀರಶೈವ ಸಮಾಜಕ್ಕಂತೂ ಬಹು ನಷ್ಟ. ಈ ತತ್ವಜ್ಞಾನಿಗಳು ಭಗವದ್ಗೀತೆಯನ್ನು ಬಹು ಚನ್ನಾಗಿ ಅಧ್ಯಯನ ಮಾಡಿದ್ದರು. ವೀರಶೈವ ಮತತತ್ವಗಳು ಭಗವದ್ಗೀತೆಯಲ್ಲಿ ಹೇಗೆ ವಿವೇಚಿಸಲ್ಪಟ್ಟಿವೆಯೆಂಬುವನ್ನು ಇವರು ಜಗತ್ತಿನ ಮುಂದಿಡುವವರಿದ್ದರು.

ಭಗವದ್ಗೀತೆಗೆ ವೀರಶೈವಪರವಾದ ಭಾಷ್ಯವನ್ನು ಬರೆಯುವ ಇವರ ಮಹತ್ಕಾರ್ಯವು ನಾಲ್ಕಾರು ವರುಷ ಸಾಗಿದ್ದರೂ ಕೊನೆಗೂ ಅದು ಪೂರೈಸಲಿಲ್ಲ. ಈ ಮಹತ್ತರವಾದ ಕಾರ್ಯವನ್ನು ಮಧ್ಯದಲ್ಲಿಯೇ ಬಿಟ್ಟು ಇವರು ಪರಲೋಕವಾಸಿಗಳಾದುದು ಅತ್ಯಂತ ವಿಷಾದಕರವು.

ಪೂರ್ವ ಸಿದ್ಧತೆ.

ಈ ಅಪೂರ್ವ ಗ್ರಂಥವನ್ನು ರಚಿಸಲು ಕೈ. ಶ್ರೇಷ್ಠಿಯವರು ಮಾಡಿಕೊಂಡ ಪೂರ್ವ ಸಿದ್ಧತೆಗಳನ್ನು ನೋಡಿದರೆ ಆ ಗ್ರಂಥವು ಎಷ್ಟು ಮಹತ್ವದ್ದಾಗುತ್ತಿದ್ದಿತೆಂಬುದು ತೋರುತ್ತದೆ. ಭಗವದ್ಗೀತೆಯ ೧೮ ಅಧ್ಯಾಯಗಳಲ್ಲಿಯ ಪ್ರತಿಯೊಂದು ಅಧ್ಯಾಯದಲ್ಲಿಯೂ ಇರತಕ್ಕ ವೀರಶೈವ ಮತತತ್ವದ್ಯೋತಕ ಶ್ಲೋಕಗಳನ್ನು ಬೇರೆ ಬೇರೆಯಾಗಿ ವಿಂಗಡಿಸಿ ಬರೆದಿಟ್ಟಿದ್ದಾರೆ. ಗ್ರಂಥ ರಚನೆಗೆ ಇವರು ಮಾಡಿಟ್ಟ ಕಾರ್ಯಗಳಲ್ಲಿ ಇದೇ ಸ್ವಲ್ಪಾದರೂ ತಿಳಿಯತಕ್ಕದಾಗಿರುವುದರಿಂದ ಇವರು ಪ್ರತಿಪಾದಿಸುತ್ತಿದ್ದ ರೀತಿನೀತಿಗಳನ್ನು ಊಹಿಸಬಹುದಾಗಿದೆ

ವೀರಶೈವ ಮತದ ಅಷ್ಟಾವರಣ, ಪಂಚಾಚಾರ ಷಟಸ್ಥಳಗಳಲ್ಲಿ ಯಾವ ವಿಷಯವು ಯಾವ ಶ್ಲೋಕದಲ್ಲಿ ಸೂಚಿತವಾಗಿದೆಯೆಂಬುದು ಗೊತ್ತಾಗುವುದಕ್ಕೋಸ್ಕರ ಆಯಾಯ ಶ್ಲೋಕಗಳ ಹಿಂದೆ ವೀರಶೈವ ಮತದ ಆಯಾಯ ತತ್ವಗಳನ್ನು ನಿರ್ದೇಶಿಸಿದ್ದಾರೆ. ಆದರೆ ಆ ಶ್ಲೋಕಕ್ಕೆ ಆ ಪ್ರಕಾರ ಹೇಗೆ ಅರ್ಥ ಮಾಡುತ್ತಿದ್ದರೆಂಬುದನ್ನು ಮಾತ್ರ ಬರೆದಿಟ್ಟಿಲ್ಲ. ಆದುದರಿಂದ ಈ ಕಾರ್ಯವು ಅಪೂರ್ಣವಾಗಿಯೇ ಉಳಿದಿದೆ.

ರಾಮದಾಸ, ತುಕಾರಾಮ, ಜ್ಞಾನದೇವ, ಏಕನಾಥ ಮೊದಲಾದ ಮಹಾರಾಷ್ಟ್ರ ದೇಶದ ಸಾಧುಸಂತರ ಅಭಂಗಗಳಲ್ಲಿಯ ಸಂಖ್ಯೆಗಳನ್ನು ಬೇರೆ ಬೇರೆ ಪುಸ್ತಕಗಳಲ್ಲಿ ಬರೆದಿಟ್ಟಿದ್ದಾರೆ. ಅವುಗಳಲ್ಲಿ ವೀರಶೈವ ಮತದ ಯಾವ ಯಾವ ತತ್ವಗಳು ಅಡಕವಾಗಿವೆಯೆಂಬುದನ್ನೇನೂ ನಿರ್ದೇಶಿಸಿಲ್ಲ. ಆದುದರಿಂದ ಆ ಸಂಗತಿಗಳನ್ನು ಕಂಡುಹಿಡಿಯುವುದು ಅಸಾಧ್ಯವೇ ಸರಿ.

ಇದೇ ಪ್ರಕಾರ ಬೈಬಲ್ಲಿನ ಅನೇಕ ವಿಚಾರಗಳನ್ನು ಒಂದು ಪುಸ್ತಕದಲ್ಲಿ ಅಕ್ಷರಾನುಕ್ರಮಣಿಕೆಯಿಂದ ಸಂಕ್ಷಿಪ್ತವಾಗಿ ನಿರ್ದೇಶಿಸಿಟ್ಟಿದ್ದಾರೆ. ಈ ಸಂಗತಿಗಳನ್ನು ಏಕೆ ಮತ್ತು ಹೇಗೆ ಆ ಪುಸ್ತಕದಲ್ಲಿ ವಿವೇಚಿಸುತ್ತಿದ್ದರೋ ತಿಳಿಯದಾಗಿದೆ. ಈ ಪ್ರಕಾರ ಪೂರ್ವಸಿದ್ಧತೆಯನ್ನೇನೋ ಬಹು ಘನವಾಗಿಯೇ ಮಾಡಿಟ್ಟಿದ್ದರು ಆದರೆ ಅವುಗಳಲ್ಲಿ ಒಂದು ಪುಸ್ತಕದ ಸಂಗತಿಗಳನ್ನಾದರೂ ಸಂಪೂರ್ಣವಾಗಿ ವಿವೇಚಿಸಿಲ್ಲವಾದುದರಿಂದ ಅವರ ವಿಚಾರ ಸರಣಿಯು ಸ್ಪಷ್ಟವಾಗಿ ತಿಳಿಯಲು ಅವಕಾಶವಿಲ್ಲದಾಗಿದೆ.

ಸ್ವಲ್ಪ ಬೆಳಕು.

ಭಗವದ್ಗೀತೆಯಲ್ಲಿಯ ನೂರಾರು ಶ್ಲೋಕಗಳನ್ನು ಪ್ರತ್ಯೇಕವಾಗಿ ಬರೆದಿಟ್ಟು ಅವುಗಳ ಹಿಂದೆ ವೀರಶೈವ ಮತತತ್ವಗಳ ನಾಮ ನಿರ್ದೇಶ ಮಾಡಿರುವುದರಿಂದ ಮಾತ್ರ ಅವರ ವಿಚಾರ ಸರಣಿಯ ಮೇಲೆ ಆ ಟಿಪ್ಪಣಿಗಳು ಸ್ವಲ್ಪ ಬೆಳಕನ್ನು ಕೆಡವುತ್ತವೆ. ಆ ಬೆಳಕಿನಿಂದಲೇ ಶ್ರೇಷ್ಠಿಯವರ ಅದ್ವಿತೀಯ ಪಾಂಡಿತ್ಯವನ್ನೂ ಅವರು ಪ್ರತಿಪಾದಿಸುತ್ತಿದ್ದ ರೀತಿನೀತಿಗಳನ್ನೂ ಸ್ವಲ್ಪ ತಿಳಿದುಕೊಳ್ಳಬಹುದು.

ಆದಕಾರಣ ಮುಂದಣ ವಾರದಿಂದ ಆಗಾಗ್ಗೆ ಆಯಾಯ ಶ್ಲೋಕಗಳನ್ನೂ ಅವುಗಳ ಪ್ರಚಲಿತ ಅರ್ಥವನ್ನೂ ವಿವರಿಸಿ ಅವು ವೀರಶೈವರ ಯಾವ ತತ್ವಗಳಿಗೆ ಅನ್ವಯಿಸುತ್ತವೆಂದು ಶ್ರೇಷ್ಠಿಯವರು ಸೂಚಿಸಿದ್ದಾರೆಯೋ ಆ ತತ್ವಗಳನ್ನೂ ನಿರ್ದೇಶಿಸುವೆವು. ಅವುಗಳಿಂದ ವಾಚಕರಿಗೆ ಶ್ರೇಷ್ಠಿಯವರ ವಿಚಾರ ಸರಣಿಯು ಸ್ವಲ್ಪಾದರೂ ಗೊತ್ತಾಗಬಹುದು. ಭಗವದ್ಗೀತೆಯ ಸಂಬಂಧವಾಗಿ ಅವರು ಬರೆದಿಟ್ಟ ನಮಗೆ ದೊರೆತಿರುವ ಟಿಪ್ಪಣಿಗಳಲ್ಲಿ ಇವುಗಳ ವಿನಾ ಇನ್ನಾವ ಟಿಪ್ಪಣಿಗಳಿಂದಲೇ ಅವರ ವಿಚಾರಸರಣಿಯು ಸ್ವಲ್ಪಾದರೂ ತಿಳಿಯಲು ಅವಕಾಶವಿಲ್ಲದುದು ಅತ್ಯಂತ ವಿಷಾದದ ಸಂಗತಿಯು.

ನಾಮನಿರ್ದೇಶ.

ತಾವು **ಬರೆಯ** ಬಯಸಿದ ಪುಸ್ತಕಕ್ಕೆ **ಗೀತಾ ಧರ್ಮ ವಿಚಾರ** ಎಂಬ ಹೆಸರನ್ನಿಡುವವರಿದ್ದರೆಂದು ಒಂದು ಟಿಪ್ಪಣಿಯಲ್ಲಿ ಬರೆದಿಟ್ಟಿದ್ದರಿಂದ ಗೊತ್ತಾಗುತ್ತದೆ. ಮತ್ತು **ವಿಷಯ ಪ್ರವೇಶ** ಎಂಬ ಪೀಠಿಕೆಯನ್ನು ಬರೆಯುವಾಗ ಮೊದಲು ಭಗವದ್ಗೀತೆಯ ಈ ಕೆಳಗಿನ ಶ್ಲೋಕವನ್ನು ಶಿರೋಭಾಗದಲ್ಲಿ ಹಾಕುತ್ತಿದ್ದರೆಂದು ಆ ಟಿಪ್ಪಣಿಯಿಂದ ತಿಳಿಯುತ್ತದೆ,

ಅಧ್ಯೇಷ್ಯತೇಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ| ಜ್ಞಾನ ಯಜ್ಞೇನ ತೇನಾಹಮಿಷ್ಟಃ ಸ್ಯಾಮಿತಿ ಮೇ ಮತಿಃ||

ಅಧ್ಯಾಯ ೧೮ ಶ್ಲೋಕ ೭೦

ಅರ್ಥ:— ನಮ್ಮೀರ್ವರಲ್ಲಿ—ಎಂದರೆ ಕೃಷ್ಣಾರ್ಜುನರಲ್ಲಿ—ನಡೆದ ಈ ಧರ್ಮ ಸಂಬಂಧವಾದ ಸಂವಾದವನ್ನು ಯಾರು ಅಧ್ಯಯನ ಮಾಡುವರೋ ಅವರು ಜ್ಞಾನ ಯಜ್ಞದಿಂದ ನನ್ನನ್ನು-ಎಂದರೆ ಪರಮಾತ್ಮನನ್ನು ಪೂಜಿಸಿದಂತಾಗುವದೆಂದು ನಾನು ತಿಳಿಯುತ್ತೇನೆ.

ಅಭಿನಂದನ.

ಕೈ. ಶ್ರೇಷ್ಠಿಯವರು ಬರೆದಿಟ್ಟಿದ್ದ ಟಿಪ್ಪಣಿಗಳನ್ನು ಅವರ ಚಿ|| ಗಳಾದ ಕೊಲ್ಲಾಪುರದಲ್ಲಿರುವ **ಶ್ರೀಯುತ ಶ್ರೇಷ್ಠಿ ವಕೀಲರು** ನಮ್ಮ ಕಡೆಗೆ ಕೊಟ್ಟು ಇಷ್ಟರಮಟ್ಟಿಗಾದರೂ ಆ ಮಹಾ ಪಂಡಿತರ ವಿಚಾರಸರಣಿಯು ಗೊತ್ತಾಗುವಂತೆ ಮಾಡಿದ್ದರಿಂದ ನಾವು ಶ್ರೀ. ಶ್ರೇಷ್ಠಿ ವಕೀಲರನ್ನು ಹೃದಯಪೂರ್ವಕವಾಗಿ ಅಭಿನಂದಿಸುತ್ತೇವೆ.

ಸಮತ್ವ ವಾದ

ಅಥವಾ

ಅಸ್ಪೃಶ್ಯರುಗಳಲ್ಲೊಂದು ನಿವೇದನೆ.

ಇದೊಂದು ನೋಡಲು ಚಿಕ್ಕ ಪುಸ್ತಕ. ಇದರಲ್ಲಿ ೧೮ ಪುಟಗಳು ಮಾತ್ರ ಇವೆ. ಆದರೆ ಇದರಲ್ಲಿ ಮಹತ್ವದ ವಿಷಯವು ಚರ್ಚಿಸಲ್ಪಟ್ಟಿದೆ. ಲೇಖಕರು ಲಾಹೋರಿನ ಮೌಲಾನಾ ಮಹಮ್ಮದ ಅಲ್ಲಿ ಎಂ. ಎ. ಎಲ್. ಎಲ್. ಬಿ. ಇವರು. ಕನ್ನಡ ಅನುವಾದಕರು ಶ್ರೀ. ಎಚ್. ಕೆ. ಪಾಡೂರು ಎಂಬ ಮುಸ್ಲಿಮ್ ಸಾಹಿತ್ಯ ಸಮಿತಿಯ ಕಾರ್ಯದರ್ಶಿಗಳು. ಕ್ರಯ ೧॥ ಆಣೆ.

ಈ ಪುಸ್ತಕವನ್ನು ವಿಮರ್ಶೆಗಾಗಿ ಅನುವಾದಕರು ನಮ್ಮ ಕಡೆಗೆ ಕಳಿಸಿದ್ದಾರೆ. ಅಸ್ಪೃಶ್ಯರು ಹಿಂದು ಧರ್ಮವನ್ನು ಬಿಟ್ಟು ಮುಸ್ಲೀಮ್ ಧರ್ಮವನ್ನು ಸೇರಬೇಕೆಂದು ಸೂಚಿಸುವುದೇ ಲೇಖಕರ ಉದ್ದೇಶ. ಇದೇ ಸಮತ್ವವಾದವೆಂಬುದು ಅವರ ತಿಳುವಳಿಕೆ. ಈ ತಮ್ಮ ಉದ್ದೇಶವನ್ನು ಸಾಧಿಸಲು ಅನುಕೂಲವಾಗುವ ರೀತಿಯಲ್ಲಿಯೇ ಈ ಪುಸ್ತಕವನ್ನು ಬರೆದಿದ್ದಾರೆ.

ಆರಂಭದಲ್ಲಿ ಮನುಸ್ಮೃತಿಯ ಹತ್ತೆಂಟು ಶ್ಲೋಕಗಳ ಅರ್ಥಗಳನ್ನು ವಿವರಿಸಿದ್ದಾರೆ. ಶೂದ್ರರಿಗೆ ದ್ವಿಜರು ವಿಧಿಸಿದ ಕ್ರೂರ ನಿಯಮಗಳೇ ಆ ಶ್ಲೋಕಗಳಲ್ಲಿರತಕ್ಕ ಸಂಗತಿಗಳು. ಶೂದ್ರಾದಿ ದ್ವಿಜರಲ್ಲದ ಹಿಂದುಗಳ ಸಂಬಂಧದಲ್ಲಾಗಿ ಮನುಸ್ಮೃತಿಯಲ್ಲಿ ಉಕ್ತವಾದ ಈ ನಿರ್ಬಂಧಗಳು ಅತ್ಯಂತ ನಿಂದ್ಯವಾದವುಗಳು. ಮನುಷ್ಯ ಜಾತಿಯ ಉನ್ನತಿಗೆ ವಿಘಾತಕವಾದವುಗಳು. ಈ ನಿಯಮಗಳನ್ನು ಯಾವ ವಿವೇಕಿಯೂ ಈಗ ಮಾನ್ಯ ಮಾಡುವುದಿಲ್ಲ. ಈ ಮನು ಧರ್ಮ ಶಾಸ್ತ್ರವು ಈಗ ಪುಸ್ತಕದಲ್ಲಿ ಉಳಿದಿದೆಯೇ ವಿನಾ ಜನಾಂಗದ ಆಚರಣೆಯಲ್ಲಿ ಇಲ್ಲವೇ ಇಲ್ಲ. ಹೀಗಿರುವಾಗ ಆ ಹಿಂದಿನ ಸುದ್ದಿಯನ್ನು ಎತ್ತಿ ಹೇಳುವ ಕಾರಣವೇನು? ಅಸ್ಪೃಶ್ಯರು ಹಿಂದು ಧರ್ಮವನ್ನು ದೂರ ಮಾಡಬೇಕೆಂದಲ್ಲವೆ?

ಆಮೇಲೆ ಆರ್ಯ ಅನಾರ್ಯರ ಸಂಗತಿಗಳನ್ನು ಲೇಖಕರು ಪ್ರಸ್ತಾಪಿಸಿದ್ದಾರೆ. ಅನಾರ್ಯರಿಗೆ ದಸ್ಯು, ಶೂದ್ರ, ಎಂಬ ಹೆಸರುಗಳು ಬಂದಿವೆಯೆಂತಲೂ ಆರ್ಯರಿಂದಲೇ ಆದಿನಿವಾಸಿಗಳಾದ ಅಸ್ಪೃಶ್ಯರಿಗೆ ನಾನಾ ದುಃಖಪರಂಪರೆಗಳುಂಟಾದವೆಂತಲೂ ಲೇಖಕರು ಸೂಚಿಸಿದ್ದಾರೆ. ಈ ಪ್ರಕಾರ ಐತಿಹಾಸಿಕ ಸಂಗತಿಗಳನ್ನು ವಿವೇಚಿಸುತ್ತಾ ಅಸ್ಪೃಶ್ಯರು ಹಿಂದು ಸಮಾಜಕ್ಕೆ ಹೊರಗಿನವರೆಂಬ ಧ್ವನಿ ತೆಗೆದಿದ್ದಾರೆ.

ಹಾಗಾದರೆ ಹಿಂದು ಎಂಬುದರ ಅರ್ಥ ದ್ವಿಜ ಅಥವಾ ಆರ್ಯ ಎಂಬುದಾಗಿ ತಿಳಿಯಬೇಕಾಗುವುದು. ಹಿಂದು ಧರ್ಮವೆಂದರೆ ಆರ್ಯ ಧರ್ಮವೆಂದು ಹೇಳಬೇಕಾಗಬಹುದು. ಹೀಗೆ ಕೆಲವರು ಸಂಕುಚಿತವಾದ ಅರ್ಥವನ್ನಿಟ್ಟುಕೊಂಡಿದ್ದರೂ ವಿವೇಕಪರರು ಅದನ್ನು ಮಾನ್ಯ ಮಾಡುವುದಿಲ್ಲ.

ಆದಿದ್ರಾವಿಡರು, ದ್ರಾವಿಡರು ಮತ್ತು ಆರ್ಯರು ಈ ಮೂರೂ ಜನಾಂಗದವರು ಹಿಂದು ಸಮಾಜಕ್ಕೆ ಸೇರಿದವರು. ಹಿಂದು ಧರ್ಮದಲ್ಲಿ ಈ ಮೂರೂ ಜನಾಂಗಗಳ ಆಚಾರ ವಿಚಾರ ಸಂಸ್ಕೃತಿಗಳು ಕೂಡಿಹೋಗಿವೆ. ಈಗ ಅವುಗಳನ್ನು ಹಿಂದು ಧರ್ಮದಿಂದ ವಿಂಗಡಿಸುವುದು ಶಕ್ಯವೇ ಇಲ್ಲ. ಆದಿದ್ರಾವಿಡರೇ ಅಸ್ಪೃಶ್ಯರೆಂದು ವಾಡಿಕೆಯಾಗಿದೆ.

ಈ ಜನರಿಗೆ ಇಂಗ್ಲಿಷ್ ಪ್ರಭುತ್ವದಿಂದ ಎಷ್ಟೋ ಸಾಮಾಜಿಕ ಸ್ವಾತಂತ್ರ್ಯ ದೊರೆತು ಅವರೂ ವಿದ್ಯೆ ಉದ್ಯೋಗಗಳಲ್ಲಿ ಮುಂದರಿದು ಬರುತ್ತಿದ್ದಾರೆ. ಮಹಾತ್ಮಾ ಗಾಂಧಿಯವರ ಪ್ರಚಂಡ ಪ್ರಯತ್ನದಿಂದಂತೂ ಅಸ್ಪೃಶ್ಯತಾ ನಿವಾರಣೆಯ ಪವಿತ್ರ ಕಾರ್ಯ ಬಹು ಪರಿಣಾಮಕಾರಿಯಾಗಿಯೇ ಸಾಗಿದೆ. ಹೀಗಿರುವಾಗ ಹಿಂದು ಧರ್ಮ ಬಾಂಧವರಾದ ಆದಿಜನಗಳು ಹಿಂದು ಧರ್ಮದವರೇ ಅಲ್ಲವೆಂತಲೂ, ಅವರು ಹಿಂದು ಧರ್ಮದಲ್ಲಿರುವ ವರೆಗೆ ಅವರ ಉನ್ನತಿಯಾಗುವುದೇ ಇಲ್ಲವೆಂತಲೂ ಆದಕ್ಕಾಗಿ ಅವರು ಮುಸ್ಲೀಮ ಧರ್ಮವನ್ನು ಸ್ವೀಕರಿಸಬೇಕೆಂತಲೂ ಲೇಖಕರು ಹೇಳುವುದು ನ್ಯಾಯವೇ? ಧರ್ಮಾಂತರಗೊಳಿಸಲು ಇದೊಂದು ಉಪಾಯವಲ್ಲವೆ?

ಲೇಖಕರು ೧೦ ನೆಯ ಪುಟದಲ್ಲಿ ಹೀಗೆ ಹೇಳಿದ್ದಾರೆ— "ಅಸ್ಪೃಶ್ಯರು ಹಿಂದು ಧರ್ಮಕ್ಕೆ ಎಷ್ಟರತನಕ ವಿಶ್ವಾಸದಿಂದ ಅಂಟಿಕೊಂಡಿರುವರೋ ಅಷ್ಟರತನಕ ಅವರು ಮಾನಸಿಕ ಮತ್ತು ಶಾರೀರಕ ದಾಸತ್ವದ ಶೃಂಖಲೆಗಳಿಂದ ಬಿಗಿಯಾಗಿ ಬಂಧಿಸಲ್ಪಡುವರು. ಇದಕ್ಕೆ ಪ್ರತಿಯಾಗಿ ಇಸ್ಲಾಮ್ ಅವರಿಗೆ ಅಭ್ಯುದಯದ ವಿಶಾಲವಾದ ಹೆಬ್ಬಾಗಿಲನ್ನು ತೆರೆದು ಮಾನವರು ಎಷ್ಟೊಂದು ಉತ್ತುಂಗ ಸ್ಥಿತಿಯನ್ನೇರಲು ಸಾಧ್ಯವೋ ಅಷ್ಟೇ ಉನ್ನತ ಸ್ಥಿತಿಯನ್ನು ಹೊಂದುವಂತಹ ಚೇತರಣೆಯನ್ನೀವ ಜಾಗೃತಿಯನ್ನು ಅವರಲ್ಲಿ ತಲೆದೋರಿಸುವುದು."

ಅಸ್ಪೃಶ್ಯರು ನಿರಾಶರಾಗಿ ಮುಸಲ್ಮಾನ ಧರ್ಮವನ್ನು ಸ್ವೀಕರಿಸಬೇಕೆಂಬ ದುರುದ್ದೇಶದಿಂದಲೇ ಲೇಖಕರು ಈ ಪ್ರಕಾರ ಚಿತ್ರಿಸಿದ್ದಾರೆ. ಸನಾತನಿಗಳೆಂಬ ಹಿಂದುಗಳು ಇವರ ಈ ವಿವೇಚನೆಯಿಂದಲಾದರೂ ಜಾಗೃತರಾಗಿ, ಅಸ್ಪೃಶ್ಯ ಬಾಂಧವರು ಹಿಂದು ಧರ್ಮವನ್ನು ಬಿಟ್ಟು ಹೋಗದಂತೆ ಇನ್ನುಮೇಲಾದರೂ ಅವರಿಗೆ ಧಾರ್ಮಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳನ್ನು ಕೊಡುವರೇನು?

ಗಾಂಧೀಜಿಯವರು ಬ್ರಾಹ್ಮಣಾದಿ ನಾಲ್ಕು ವರ್ಣಗಳು ಹಿಂದು ಧರ್ಮದಲ್ಲಿರಬೇಕೆಂದು ಹೇಳುತ್ತಿದ್ದರೂ ಅವು ಜನ್ಮವಿಶಿಷ್ಟವಾಗಿರಬೇಕೆಂದು ಹೇಳುವುದಿಲ್ಲ. ಅವರ ವಿಚಾರದಲ್ಲಿ ಜನ್ಮ ಅಥವಾ ಕಸಬುಗಳಿಂದಲೇ ಯಾರೂ ಮೇಲು ಕೀಳಲ್ಲ. ಹೀಗಿರುವಾಗ ಲೇಖಕರು ಅವರ ಅಭಿಪ್ರಾಯಗಳನ್ನು ವಿಪರ್ಯಾಸ ಮಾಡಿ ಶೂದ್ರರು ಅಶುದ್ಧರು ದಾಸತ್ವಕ್ಕೆ ಮಾತ್ರ ಯೋಗ್ಯರು ಎಂಬ ದೂಷ್ಯ ವಚನಗಳನ್ನು ಶಾಸ್ತ್ರಗಳಿಂದ ಕಿತ್ತೊಗೆಯಲು ಸಿದ್ಧರಿಲ್ಲವೆಂದು ಸೂಚಿಸಿ ಮನುವಿನ ಅಭಿಪ್ರಾಯವನ್ನೇ ಗಾಂಧೀಜಿಯವರ ಹಣೆಗೆ ಕಟ್ಟುವ ನಿಂದ್ಯ ಪ್ರಯತ್ನವನ್ನು ಮಾಡಿದ್ದಾರೆ.

ಆಮೇಲೆ ಇಸ್ಲಾಮಿನ ಮಹತ್ವವನ್ನು ಅದು ವಿಶ್ವಧರ್ಮವೆಂಬುದನ್ನು ವಿವರಿಸಿ ಯಾವ ಧರ್ಮದವರಾದರೂ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೆ ಅವರಿಗೆ ಲಾಭವೇ ವಿನಾ ನಷ್ಟವಿಲ್ಲವೆಂದು ಹೇಳಿಕೊಂಡಿದ್ದಾರೆ. ಹೆತ್ತವರಿಗೆ ಹೆಗ್ಗಣ ಮುದ್ದೆಂಬ ಗಾದೆಯಂತೆ ಅವರವರ ಧರ್ಮ ಅವರವರಿಗೆ ಬಹು ಮಹತ್ವದ್ದಾಗಿ ತೋರುವುದು ಸಹಜ,

ಆರ್ಯರು ಅನಾರ್ಯರನ್ನು ಹೇಗೆ ಕೀಳಾಗಿ ಕಂಡು ಅವರಿಗೆ ನಾನಾ ಹಿಂಸೆಗಳನ್ನು ಕೊಟ್ಟರೋ ಹಾಗೆಯೇ ಮುಸಲ್ಮಾನರೂ ಮೂರ್ತಿ ಪೂಜಕರನ್ನು ಬಹು ಹೀನವಾಗಿ ಕಂಡು ಅವರಿಗೆ ಭಯಂಕರ ಯಾತನೆಗಳನ್ನುಂಟುಮಾಡಿಲ್ಲವೇ? ಧಾರ್ಮಿಕ ದುರಭಿಮಾನವು ಯಾರಲ್ಲಿರುತ್ತದೆಯೋ ಅವರಿಂದ ಇಂತಹ ನಿಂದ್ಯ ಕಾರ್ಯಗಳು ಹೆಚ್ಚು ಕಡಿಮೆಯಾಗಿ ಈ ವರೆಗೂ ಆಗುತ್ತಲೇ ಬಂದಿವೆ. ಲೇಖಕರು ಯಾವ ಪವಿತ್ರ ಕು ರಾ ನಿ ನ ಉಕ್ತಿಗಳನ್ನು ಬಹು ಕೊಂಡಾಡಿದ್ದಾರೆಯೋ ಅದೇ ಪವಿತ್ರ ಕುರಾನಿನಲ್ಲಿ ಈ ಕೆಳಗಿನ ವಾಕ್ಯಗಳಿವೆಯಲ್ಲಾ!

ಯಾರು ತಾವು ಸ್ವತಃ ಕಾಫಿರ್ (ಮೂರ್ತಿ ಪೂಜಕ) ರಾಗಿದ್ದಾರೆಯೋ ಅವರು ನೀವೂ ತಮ್ಮಂತೆಯೇ ಕಾಫಿರರಾಗಬೇಕೆಂದು ಬಯಸುತ್ತಾರೆ. ಅವರು ಎಲ್ಲಿಯವರೆಗೂ ದೇವರ ಮಾರ್ಗಕ್ಕೋಸ್ಕರ ದೇಶತ್ಯಾಗ ಮಾಡಲು ಸಿದ್ಧರಾಗುವುದಿಲ್ಲವೋ ಅಲ್ಲಿಯವರೆಗೆ ನೀವು ಅವರಲ್ಲಿ ಯಾರನ್ನೂ ಮಿತ್ರರನ್ನಾಗಿ ಮಾಡಿಕೊಳ್ಳಬೇಡಿರಿ. ಅವರು ದೇಶತ್ಯಾಗಕ್ಕೆ ತಲೆ ತಪ್ಪಿಸಿಕೊಳ್ಳುತ್ತಿದ್ದರೆ ಅವರನ್ನು ಕಂಡಲ್ಲಿ ಹಿಡಿದು ಕೊಲ್ಲಿರಿ. ಅವರನ್ನು ಮಿತ್ರರನ್ನಾಗಿಯಾಗಲಿ ಸಹಾಯಕರನ್ನಾಗಿಯಾಗಲಿ ಮಾಡಿಕೊಳ್ಳಬೇಡಿರಿ.

ಅಧ್ಯಾಯ ೪-೮೮.

ಯಾರು ಇಸ್ಲಾಂ ಮಾರ್ಗವನ್ನು ಮಾನ್ಯ ಮಾಡುತ್ತಾರೆಯೋ ಅವರು ದೇವರ ಮಾರ್ಗದಲ್ಲಿ ಯುದ್ಧ ಮಾಡುತ್ತಿದ್ದಾರೆ. ಯಾರು ಕಾಫಿರರೋ ಅವರು ಸೈತಾನ ಮಾರ್ಗದಲ್ಲಿ ಯುದ್ಧ ಮಾಡುತ್ತಿದ್ದಾರೆ. ಆದಕಾರಣ ಮುಸಲ್ಮಾನರೇ! ನೀವು ಸೈತಾನ ಪಕ್ಷದವರ ಸಂಗಡ ಯುದ್ಧ ಮಾಡಿರಿ. ಸೈತಾನನ ಯುಕ್ತಿಗಳೆಲ್ಲಾ ನಿರರ್ಥಕ ವಾದವುಗಳು.

ಅಧ್ಯಾಯ ೪-೭೬.

ಈ ಪ್ರಕಾರ ಮುಸಲ್ಮಾನರಿಗೂ, ಮುಸಲ್ಮಾನೇತರರಿಗೂ, ಮೇಲು ಕೀಳು, ಹಿತಾಹಿತಗಳನ್ನು ಬಗೆಯುತ್ತಿದ್ದ ವಿಷಮತ್ವವಾದದ ಅನೇಕ ವಾಕ್ಯಗಳನ್ನು ಕುರಾಣ ಗ್ರಂಥದಲ್ಲಿಯೇ ತೋರಿಸಬಹುದು. ಈ ಮೇಲಣ ಅರ್ಥಗಳು ಕ್ರೈಸ್ತ ಅಥವಾ ಹಿಂದು ಧರ್ಮದವರಿಂದ ಮಾಡಲ್ಪಟ್ಟವುಗಳಲ್ಲ. ಡಾ. ಮೌಲವಿ ಹಕೀಮ ಸೂಫಿ ಮೀರ ಮೊಹಂಮದ ಯಾಕೂಬಖಾನ ಎಂಬ ಇಸ್ಲಾಮ್ ಧರ್ಮದ ಪ್ರಸಿದ್ಧ ಪಂಡಿತರಿಂದಲೇ ಮಾಡಲ್ಪಟ್ಟವು.

ಯಾವದೇ ಒಂದು ಧರ್ಮವು ಅಥವಾ ಧರ್ಮ ಗ್ರಂಥವು ಸಂಪೂರ್ಣ ದೋಷವುಳ್ಳದ್ದಾಗಲಿ ಅಥವಾ ಸಂಪೂರ್ಣ ನಿರ್ದೋಷವುಳ್ಳದ್ದಾಗಲಿ ಇರುವುದಿಲ್ಲ. ಏಕೆಂದರೆ ಇವೆಲ್ಲಾ ಮನುಷ್ಯ ಕೃತ ಮತ್ತು ಆಯಾಯ ದೇಶ ಕಾಲ ಪರಿಸ್ಥಿತಿಗನುಸರಿಸಿ ಏರ್ಪಟ್ಟವು ಆದಕಾರಣ ಸಕಲರಿಗೂ ಸರ್ವ ಕಾಲಗಳಲ್ಲಿಯೂ ಸಕಲ ಆಚಾರ ವಿಚಾರಗಳು ಹಿತಕರವಾಗಿಯೇ ಇರುವುದು ಶಕ್ಯವಿಲ್ಲ. ಈ ಸತ್ಯ ಸಿದ್ಧಾಂತವನ್ನು ಲೇಖಕರು ಅರಿತಿದ್ದರೆ ಈ ಪ್ರಕಾರ ಧರ್ಮದ ದುರಭಿಮಾನದಿಂದ ಅಸ್ಪೃಶ್ಯರನ್ನು ತಮ್ಮ ಧರ್ಮಕ್ಕೆ ಸೆಳೆದುಕೊಳ್ಳುವ ರೀತಿಯಲ್ಲಿ ಬರೆಯುತ್ತಿರಲಿಲ್ಲ

ಪಂಜಾಬದಲ್ಲಿರುವ ಹಿಂದು ಮುಸಲ್ಮಾನ್ ಕಲಹಾಗ್ನಿಯ ಕಿಡಿಯೇ ಈ ಪುಸ್ತಕ. ಕರ್ನಾಟಕಕ್ಕೆ ಮುಸ್ಲಿಮ್ ಸಾಹಿತ್ಯ ಸಮಿತಿಯವರು ಕಿಡಿಯನ್ನು ತಂದು ಹೊತ್ತಿಸಿದುದು ವಿಷಾದಕರ. ಇಂಥ ಪುಸ್ತಕಗಳಿಂದ ಕರ್ನಾಟಕದಲ್ಲಿಯೂ ಹಿಂದು ಮುಸಲ್ಮಾನ್ ಕಲಹಕ್ಕೆ ಕಾರಣವಾಗುವಂತಹ ಸಾಹಿತ್ಯವು ಹೆಚ್ಚಬಹುದು. ಇದು ದೇಶಕ್ಕೆ ಕ್ಷೇಮಕರವಲ್ಲ. ಆದುದರಿಂದ ಪ್ರತಿಯೊಂದು ಧರ್ಮದಲ್ಲಿಯೂ ಇರತಕ್ಕ ಉತ್ತಮೋತ್ತಮ ತತ್ವಗಳನ್ನೇ ಆರಿಸಿ ತೆಗೆದು ಪರಸ್ಪರ ಪ್ರೇಮಾದರಗಳು ಹೆಚ್ಚುವಂತಹ ಸಾಹಿತ್ಯ ಪ್ರಸಾರಣೆಗೆ ಪ್ರಯತ್ನಿಸಬೇಕೇ ವಿನಾ ಈ ಪ್ರಕಾರ ಮತಗಳ ಹೋರಾಟಕ್ಕೆ ಆಸ್ಪದವಾಗುವ ಸಾಹಿತ್ಯದ ಕಡೆಗೆ ಮುಸ್ಲೀಮ್ ಸಾಹಿತ್ಯ ಸಮಿತಿಯವರು ಲಕ್ಷಿಸಬಾರದೆಂದು ನಮ್ಮ ಪ್ರೇಮದ ಸೂಚನೆ.

ಸುಶಿಕ್ಷಿತರು ಚರ್ಮದ ಉದ್ಯೋಗವನ್ನು ಏಕೆ ಮಾಡಬಾರದು?

ಸಾತಾರೆಯಲ್ಲಿ ಮಾಡಿದ ತಮ್ಮ ಒಂದು ವ್ಯಾಖ್ಯಾನದಲ್ಲಿ ಶ್ರೀ ಜಯಕರರು ಹೀಗೆ ಹೇಳಿದರು—

“ಸುಶಿಕ್ಷಿತರು ಮ್ಯಾಟ್ರಿಕ್, ಬಿ ಎ, ಎಮ್. ಎ, ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವದೇ ಜೀವನದ ಮಾರ್ಗವೆಂದು ತಿಳಿಯುತ್ತಾರೆ. ಈ ಮಧ್ಯದಲ್ಲಿ ಅವರು ಯಶಸ್ವಿಗಳಾಗಿ ಕಲಿಯುವದನ್ನು ಬಿಟ್ಟರೆ ಅವರಿಗೆ ಬೇರೊಂದು ಮಾರ್ಗವೇ ತೋರುವದಿಲ್ಲ. ಒಮ್ಮೆ ನನಗೆ ಒಬ್ಬ ತೋಟಿಗನ ಅಗತ್ಯವಿದ್ದಿತು. ಅದಕ್ಕಾಗಿ ಜಾಹಿರಾತಿನ ಮೂಲಕ ಪ್ರಕಟಪಡಿಸಿದರೂ ಒಬ್ಬ ಸುಶಿಕ್ಷಿತನಾದರೂ ಆ ಕೆಲಸ ಮಾಡಲು ಬರಲಿಲ್ಲ. ಸುಶಿಕ್ಷಿತರು ಮಾಡುವಂಥ ಅನೇಕ ಕಾರ್ಯಗಳಿರುತ್ತವೆ. ಅವರು ಕಾರ್ಯಗಳಲ್ಲಿ ಉಚ್ಚನೀಚವೆಂದು ಸಂಕಲ್ಪಿಸದೆ ತಮಗೆ ಅಭಿರುಚಿಯಿರುವ ಒಂದು ಕಾರ್ಯವನ್ನು ಕೈಕೊಂಡಲ್ಲಿ ಆರ್ಥಿಕ ಆಘಾತವುಂಟಾಗುವ ಸಂಭವವೇ ಇಲ್ಲ ಮುಂಬಯಿಯಲ್ಲಿ ಇಬ್ಬರು ಉಪಾಧ್ಯಾಯರು ಕೇವಲ ಮೃತ ಸಂಸ್ಕಾರ ಮಾಡಿ ೧೦೦-೧೫೦ ರೂ. ಗಳಿಸುತ್ತಾರೆ. ಅವರಿಬ್ಬರು ಯೋಗ್ಯ ಕಾಲಕ್ಕೆ ದೊರೆಯದಿದ್ದರೆ ೫-೬ ಗಂಟೆಗಳ ವರೆಗೆ ಹೆಣವನ್ನು ಹಾಕಿಟ್ಟಿರಿಸಬೇಕಾಗುವದು. ಅದ್ದರಿಂದ ಪ್ರತಿಯೊಂದು ಜ್ಞಾತಿಯವರು ತಮ್ಮಲ್ಲಿಯ ೫-೬ ಜನ ಸುಶಿಕ್ಷಿತರನ್ನು ಉಪಾಧ್ಯಾಯರನ್ನಾಗಿ ಏಕೆ ಮಾಡಿಕೊಳ್ಳಬಾರದು? ಮೊನ್ನೆ ಮೊನ್ನೆ ನನಗೆ ಒಬ್ಬ ಮೋಚಿಗಾರನು ತನಗೆ ೭೦೦-೮೦೦ ರೂ. ಪ್ರತಿ ತಿಂಗಳ ಪ್ರಾಪ್ತಿ ಇರುವದೆಂದು ಹೇಳಿದನು. ಅಂದ ಮೇಲೆ ಸುಶಿಕ್ಷಿತರು ಚರ್ಮಕಾರ ಉದ್ಯೋಗವನ್ನು ಏಕೆ ಕೈಕೊಳ್ಳಬಾರದು?

ಶ್ರೀ ಜಯಕರರು

ನಿರುದ್ಯೋಗದ ಪ್ರಶ್ನೆಯನ್ನು ಸುಶಿಕ್ಷಿತರೇ ಬಿಡಿಸಬೇಕು. ಅನ್ಯರಿಗೆ ಈ ತರದ ವಿಚಾರವು ಸರಿ ಬೀಳಲಿಕ್ಕಿಲ್ಲ. ಉದ್ಯೋಗ ಶ್ರೇಷ್ಠತೆಯನ್ನು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬಿಂಬಿಸುವಂತೆ ಶಾಲೆಯಲ್ಲಿಯೇ ವ್ಯವಸ್ಥೆಯಾಗಬೇಕು ಇಂಗ್ಲಂಡದ ಒಂದು ಶಾಲೆಯಲ್ಲಿ ಒಬ್ಬ ಶಿಕ್ಷಣತಜ್ಞನು ೫೦ ಜನ ವಿದ್ಯಾರ್ಥಿಗಳಿಗೆ “ನೀವು ಮುಂದೆ ಏನು ಮಾಡುವವರು?” ಎಂದು ಕೇಳಲು ೩-೪ ಜನರ ಹೊರ್ತಾಗಿ ಎಲ್ಲರೂ ಏನಾದರೊಂದು ಕೈಗಾರಿಕೆಯನ್ನು ಕೈಕೊಳ್ಳುವೆವೆಂದು ಹೇಳಿದರು ೩-೪ ಜನರು ಮಾತ್ರ ಬಿ. ಎ, ಎಮ್. ಎ, ಮೊದಲಾದ ಉಚ್ಚ ಶಿಕ್ಷಣ ಪಡೆಯುವೆವೆಂದು ಹೇಳಿದರು.

ಹಿಂದುಸ್ಥಾನಕ್ಕೆ ಬರಲಿರುವ ರಾಜ್ಯ ಪದ್ಧತಿಯು ನೀವು ಎಷ್ಟೇ ವಿರೋಧಿಸಿದರೂ ಅದು ಬಂದೇ ಬರುವದು. ಮತ್ತು ಅದನ್ನು ಕೈಕೊಳ್ಳಲು ಅನೇಕ ಅಪಾತ್ರರೂ ಮುಂದೆ ಬಂದೇ ಬರುವರು. ಶಿಕ್ಷಣ ವಿಭಾಗವು ಸಂಪೂರ್ಣವಾಗಿ ಹಿಂದೀಯರ ಕೈಯಲ್ಲಿಯೇ ಬರುವದು. ಕಾರಣ ಆ ಕಾಲಕ್ಕೆ ದೇಶಪ್ರೇಮಿಗಳು ಶಿಕ್ಷಣ ಕಾರ್ಯವನ್ನು ಕೈಕೊಂಡು ತಕ್ಕ ಬದಲಾವಣೆಗಳಿಂದ ವಿದ್ಯಾರ್ಥಿಗಳ ಮನೋಭೂಮಿಕೆಯನ್ನು ಮಾರ್ಪಡಿಸಿ ಅವರಲ್ಲಿ ಉದ್ಯಮಾಭಿರುಚಿಯನ್ನು ಉದ್ದೀಪನಗೊಳಿಸುವದು ಶಕ್ಯವಿದೆ.”

ಮಹಿಳಾ ಪ್ರಪಂಚ.

ಶ್ರದ್ಧಾನಂದ ಮಹಿಲಾಶ್ರಮ.

ಸಂಸಾರ ಚಕ್ರದಲ್ಲಿ ಸಿಲುಕಿದ ಹೀನ, ದೀನ, ಅನಾಥೆಯರಾದ ಅಬಲೆಯರಿಗೆ ಆಶ್ರಯ ಕೊಡುವದಕ್ಕಾಗಿ ಮುಂಬಯಿ ಮಾತುಂಗಾ ಓಣಿಯಲ್ಲಿ 'ಶ್ರದ್ಧಾನಂದ ಅನಾಥ ಮಹಿಲಾಶ್ರಮ' ಎಂಬ ಸಂಸ್ಥೆಯು ಸ್ಥಾಪಿತವಾಗಿದೆ. ಇಲ್ಲಿ ಆದಿಜನ ಮೊದಲ್ಗೊಂಡು ಎಲ್ಲ ಜಾತಿಯ ವನಿತೆಯರಿಗೂ ಆಶ್ರಯವುಂಟು. ಈ ಏಳು ವರ್ಷಗಳ ಅವಧಿಯಲ್ಲಿ ಸಂಸ್ಥೆಯು ೫೨೫ ಜನ ಮಹಿಳೆಯರಿಗೆ ಆಶ್ರಯ ಕೊಟ್ಟಿದೆ. ಇದರಿಂದ ಇಂಥ ಸಂಸ್ಥೆಗಳ ಉಪಯುಕ್ತತೆಯು ಚನ್ನಾಗಿ ಸ್ಪಷ್ಟವಾಗುವದು.

ಆಶ್ರಯಕ್ಕಾಗಿ ಬರುವ ಸ್ತ್ರೀಯರಲ್ಲಿ ಮುಖ್ಯವಾಗಿ ಮೂರು ವರ್ಗಗಳನ್ನು ಮಾಡಬಹುದು— ಕುಮಾರ್ತಿಯರು— ಪತಿತ್ಯಕ್ತರು— ವಿಧವೆಯರು ಎಂದು. ನೀಚರ ಬಲೆಗೆ ಬಿದ್ದು ನ್ಯಾಯಸ್ಥಾನವನ್ನು ಕಂಡ ಅನೇಕ ಅನಾಥೆಯರನ್ನು ನ್ಯಾಯಾಧೀಶರು ಇಲ್ಲವೆ ಪೋಲೀಸರು ತಾತ್ಪೂರ್ತಿಕವಾಗಿ ಈ ಆಶ್ರಮಕ್ಕೆ ಕಳಿಸುತ್ತಿರುತ್ತಾರೆ. ಗಂಡ ಹೆಂಡಿರಲ್ಲಿ ಕೆಲವೊಂದು ಮಾತಿಗೆ ಜಗಳವುಂಟಾಗಿ ಅನೇಕ ಸ್ತ್ರೀಯರು ತಮ್ಮ ಉಪಜೀವಿಕೆಗಾಗಿ ಆಶ್ರಮವನ್ನು ಸೇರುತ್ತಾರೆ. ಕಾಲಾಂತರದಿಂದ ಪರಸ್ಪರರ ಮನಸ್ಸು ಸ್ವಚ್ಛವಾದ ಮೇಲೆ ಅವರು ತಿರುಗಿ ಹೋಗಿ ಇರಬಲ್ಲರು. ಈ ಪ್ರಕಾರ ೭ ವರ್ಷಗಳಲ್ಲಿ ೪೮ ಜನ ಯುವತಿಯರಿಗೆ ಸರಿಯಾದ ಶಿಕ್ಷಣ ಕೊಟ್ಟು ತಿಳುವಳಿಕೆ ತೋರಿಸಿ ಅವರವರ ಪತಿಗಳ ಕಡೆಗೆ ಕಳಿಸಲಾಗಿದೆ.

ಎಷ್ಟೋ ಜನ ತರುಣಿಯರು ಸ್ವಭಾವ ವೈಪರೀತ್ಯದಿಂದ ಪತಿಯ ಸಂಗಡ ಕಲಹ ಮಾಡಿ ಮನೆ ಬಿಡುತ್ತಾರೆ. ಇಂಥವರು ಮೂರನೆಯ ಯಾರ ಆಶ್ರಯದಲ್ಲಾದರೂ ಉಳಿದು ಭ್ರಷ್ಟರಾಗಿ ಕಡೆಗೆ ಕಂಗಾಲಾಗಿ ಆಶ್ರಮಕ್ಕೆ ಬರುತ್ತಾರೆ. ಈ ಸಂಸ್ಥೆಯೊಂದಿಲ್ಲದಿದ್ದರೆ ಇಂಥವರ ಜೀವನವು ವ್ಯರ್ಥವಾದುವೇ ಸರಿ. ಸದ್ಯಕ್ಕೆ ಈ ಪ್ರಕಾರದ ಸ್ತ್ರೀಯರು ಒಂದು ಮೂರಾಂಶದಷ್ಟು ಇರುವರು. ಹಾಗೂ ಬರಬರುತ್ತ ಇಂಥವರ ಸಂಖ್ಯೆಯು ಹೆಚ್ಚುತ್ತಲೇ ಇದೆ. ಅನೇಕ ಬಾಲಕಿಯರ ತಾಯಿತಂದೆಗಳು ತೀರಾ ಬಡವರಿದ್ದುದರಿಂದ ಅವರು ತಮ್ಮ ಮಕ್ಕಳನ್ನು ಸಂಸ್ಥೆಗೆ ಒಪ್ಪಿಸುತ್ತಾರೆ. ದಾರಿ ತಪ್ಪಿದ, ಏನಾದರೊಂದು ಅಪರಾಧ ಮಾಡಿದ, ಅಸಹಾಯಳಾಗಿ ದೊರೆತಳೆಂದು, ಪೋಲೀಸರು ಎಷ್ಟೋ ಜನ ಕನ್ನಿಕೆಯರನ್ನು ತಂದೊಪ್ಪಿಸುತ್ತಾರೆ. ಇಂಥವರಿಗೆಲ್ಲ ಸಂಸ್ಥೆಯು ಜೀವನಾಧಾರವನ್ನು ಕಲ್ಪಿಸುತ್ತದೆ. ಅವರಿಗೆಲ್ಲ ಸರಿಯಾದ ಉದ್ಯೋಗವನ್ನು ಕಲಿಸಿಕೊಟ್ಟು ಪುನರ್ವಿವಾಹ ಮಾಡಿ ಪತಿಗಳ ಕಡೆಗೆ ಕಳಿಸಿಕೊಡಲಾಗುತ್ತದೆ. ಇಲ್ಲದಿದ್ದರೆ ನಿಶ್ಚಯವಾಗಿ ಇಂಥ ಅನಾಥೆಯರು ಪರಧರ್ಮದ ಪಾಲಾಗುತ್ತಿದ್ದರು.

ಕರ್ನಾಟಕದಲ್ಲಿಯೂ ಇಂಥ ಸಂಸ್ಥೆಗಳನ್ನು ಸ್ಥಾಪಿಸಿ ಅಬಲೆಯರಿಗೆ ಆಶ್ರಯ ಕೊಡಬಾರದೇಕೆ? ವ್ಯರ್ಥವಾಗಿ ಅನೇಕ ರೀತಿಗಳಿಂದ ಧನವನ್ನು ವಿನಿಯೋಗಿಸುತ್ತಿರುವವರು ಇಂಥ ಸಂಸ್ಥೆಗಳಿಗಾಗಿ ಏಕೆ ಸಹಾಯ ಮಾಡಬಾರದು? ಇಂಥ ಸಂಸ್ಥೆಗಳಿಂದ ಹಿಂದು ಸ್ತ್ರೀಯರಿಗೆ ಎಂಥ ರಕ್ಷಣೆ ಉಂಟಾಗುವದೆಂಬುದು ಈ ಉದಾಹರಣೆಯಿಂದ ಕಂಡು ಬರುವದಿಲ್ಲವೆ?

ತಾಯಿಯ ಪ್ರೇಮ ಎಲ್ಲಿದೆ?

ಭೂಮಿಗಿಂತ ದೊಡ್ಡದೂ ಆಕಾಶಕ್ಕಿಂತ ಎತ್ತರವಾದದ್ದೂ ಯಾವುದು? ಎಂಬ ಯಕ್ಷಪ್ರಶ್ನೆಗೆ **"ತಾಯಿಯ ಪ್ರೇಮವು"** ಎಂದು ಧರ್ಮರಾಜನು ಉತ್ತರ ಕೊಟ್ಟನಷ್ಟೆ. ಎಲ್ಲ ಭಾವನೆಗಳಲ್ಲಿ ಪ್ರೇಮವು ಶ್ರೇಷ್ಠವಾದುದು. ಅದರಲ್ಲಿ ತಾಯಿಯ ಪ್ರೇಮವು ಎಲ್ಲಕ್ಕೂ ಮಿಗಿಲಾದುದು. ಈ ಪವಿತ್ರವಾದ ಪ್ರೇಮವು ಪಶುಪಕ್ಷಿಗಳಲ್ಲಿಯೂ ಪ್ರಕಟವಾಗುವದಿಲ್ಲವೆ? ಆದರೆ ಇಂಥ ಪ್ರೇಮವನ್ನೂ ಭಂಗಗೊಳಿಸುವ ಮೋಹದ ಶಕ್ತಿಯೆಂಥದಿರಬೇಕು!

ಹೈದರಾಬಾದ ಸಂಸ್ಥಾನದಲ್ಲಿ ತಿಮ್ಮಾಪುರವೆಂಬ ಗ್ರಾಮ. ಅಲ್ಲಿ ಒಂದು ಮನೆಯನ್ನು ಕಟ್ಟುವ ಕೆಲಸ ನಡೆದಾಗ್ಗೆ ಮನೆಯ ಯಜಮಾನತಿಗೆ ಎರಡು ಸಾರೆ ಆಕಾಶವಾಣಿಯು ಕೇಳಿಸಿತಂತೆ. ಆಗ ಅವಳ ಮನಸ್ಸಿನಲ್ಲಿ ಎಂಥ ವಿಚಾರ ಬಂದಿತೊ! ಮನೆಯಲ್ಲಿ ಹುಗಿದಿಟ್ಟ ದ್ರವ್ಯವಿದೆಯೆಂದೂ ಅದಕ್ಕೆ ಏನಾದರೂ ಬಲಿಕೊಟ್ಟು ವಶಪಡಿಸಿಕೊಳ್ಳಬೇಕೆಂದೂ ನಿರ್ಧರಿಸಿಬಿಟ್ಟಳು. ತನ್ನ ದೈವ ತೆರೆಯುವ ಸಮಯವೇ ಬಂದಿರಲು ತನ್ನ ಹೊಟ್ಟೆಯ ಮಕ್ಕಳನ್ನಾದರೂ ಏಕೆ ಬಲಿ ಕೊಡಬಾರದು? ಎಂದು ತಿಳಿದು ಅವನ್ನು ಕೊಂದು ಗುಪ್ತ ನಿಧಿಗೆ ಶಾಂತಿಪಡಿಸಿ ಹುಡುಕಹತ್ತಿದಳು. ಧನವು ದೊರೆಯಲಿಲ್ಲ. ಮಕ್ಕಳೂ ಮಣ್ಣಾದವು. ಕೊನೆಗೆ ನಾಚಿಕೆಗೇಡಿತನವಷ್ಟೇ ಅಲ್ಲದೆ ಸೆರೆಮನೆವಾಸವೂ ಪ್ರಾಪ್ತಿಸಿ ಬಂತು.

ಇಂಥ ಪ್ರಸಂಗಗಳು ಇನ್ನೂ ಈ ದೇಶದಲ್ಲಿ ಸಂಭವಿಸುತ್ತಿರುವುದನ್ನು ನೋಡಿದರೆ ಹಿಂದುಸ್ಥಾನದ ಸ್ತ್ರೀ ಸಮಾಜದಲ್ಲಿ ಇನ್ನೂ ಎಂಥ ಅಜ್ಞಾನವು ತಾಂಡವವಾಡುತ್ತಿದೆಯೆಂಬುದು ಸುಧಾರಕರಿಗೆ ಹೊಳೆಯದೆ ಇರದು.

ಶಾಂತಿಗೆ ಸ್ತ್ರೀಯರೇ ಕಾರಣರು.

ಮದ್ರಾಸಿನ ಒಂದು ಸ್ತ್ರೀ ಸಭೆಯಲ್ಲಿ ಪ್ರಸಿದ್ಧ ಥಿಯಾಸೋಫಿಷ್ಟರಾದ ಡಾ. ಅರುಂಡೇಲರವರು ತಮ್ಮ ಭಾಷಣದಲ್ಲಿ ಈ ಪ್ರಕಾರ ಹೇಳಿದರು—

೨೧ ವರ್ಷಗಳ ಪೂರ್ವ ಇದೇ ಅಗಸ್ಟ ತಿಂಗಳಲ್ಲಿ ಪ್ರಚಂಡವಾದ ಮಹಾಯುದ್ಧವು ಪ್ರಾರಂಭವಾಯಿತಷ್ಟೆ. ಈಗಲೂ ಪುನಃ ಯುದ್ಧದ ಚಿಹ್ನಗಳು ತೋರಿಬರುತ್ತಲಿವೆ. ಪುರುಷರು ಯುದ್ಧದ ಹಂಬಲ ಬಿಡುವಂತೆ ಸ್ತ್ರೀಯರೇ ಯತ್ನಿಸಬೇಕು. ಶಾಂತಿ ಸೌಖ್ಯ ಕ್ಷೇಮಗಳನ್ನು ಬೀರಬೇಕು. ಹಿಂದೀ ಮಹಿಳೆಯರು ಹಿಂದುಸ್ಥಾನದ ಶಾಂತಿ ಮತ್ತು ಪವಿತ್ರತೆಗೆ ಕಾರಣವಾಗಿದ್ದಾರೆ. ಜಗತ್ತಿನಲ್ಲೆಲ್ಲ ಶಾಂತಿಯು ನೆಲಸಬೇಕಾದರೆ ಅದು ಸ್ತ್ರೀಯರಿಂದಲೇ ಶಕ್ಯ.

ಆಕಸ್ಮಿಕ ಮರಣ.

ಕೊಲ್ಹಾಪುರದಲ್ಲಿ ಶ್ರೀ ಶಾಲಿನೀ ನಿವಾಸ ಅರಮನೆಯಲ್ಲಿ ಕಳೆದ ೧೩ನೆಯ ತಾರೀಖಿನ ದಿವಸ ಕು. ಶಾಂತಾಬಾಯಿ ಭೋಸಲೆ ಎಂಬ ೨೦ ವರ್ಷದ ಯುವತಿಯು ಬಾಥರೂಮಿನಲ್ಲಿ ಸೀರೆ ಉಟ್ಟುಕೊಳ್ಳುತ್ತಿರುವಾಗ ಹೃದಯ ಕ್ರಿಯೆಯು ನಿಂತು ಆಕಸ್ಮಿಕವಾಗಿ ಮೃತಪಟ್ಟಳು. ಇವರು ಮಾತಾ ಪಿತೃ ವಿಹೀನರಾಗಿದ್ದುದರಿಂದ ಮಹಾರಾಜರೇ ಇವರ ಪಾಲನ ಮಾಡುತ್ತಿದ್ದರು. ಇವರು ಇಂಟರ ಸಾಯಿನ್ಸ ವರ್ಗದಲ್ಲಿ ಅಭ್ಯಾಸ ಮಾಡುತ್ತಿದ್ದು ಇವರ ನಿಧನಕ್ಕಾಗಿ ಆ ದಿವಸ ಕಾಲೇಜಿಗೂ ಸೂಟಿ ಕೊಡಲಾಯಿತು.

ಶೂನ್ಯದ ಸಂಚಾರ.

[ಮುಕ್ತಾಯಕ್ಕಗಳ ಸಂಪಾದನೆಯಿಂದ.]

[ಸ್ವಚ್ಛವಾದ ಆಕಾಶ. ಮುಕ್ತಾಯಕ್ಕಳು ಅಜಗಣ್ಣನ ಅರಳಿದ ಮೊಗವನ್ನು ತೊಡೆಯ ಮೇಲಿರಿಸಿಕೊಂಡು ದುಃಖಿಸುತ್ತಿದ್ದಾಳೆ. ಏಕೆ? ಐಕ್ಯಸ್ಥಲದಲ್ಲಿನಿಂದ ಶಬ್ದಮುಗ್ಧನಾದ ಅಜಗಣ್ಣನು ನಿರವಯಲ ಪದದಲ್ಲಿ ಲೀನನಾಗಿರುವನು. ವಿಯೋಗಭ್ರಾಂತಿಯಿಂದ ಮುಕ್ತಾಯಕ್ಕಳು ಪ್ರಲಾಪಿಸುತ್ತಿರುವಳು. ಅಷ್ಟರಲ್ಲಿ ಕಣ್ಣು ಕಟ್ಟುಗೆಯಾಗಿ, ಕೈಯ ಕಪ್ಪರವಾಗಿ, ಕಿವಿಯ ಸಕಲ ಪುರಾತನರ ಕಾರುಣ್ಯವೆನುತ್ತ, ಮನದ ಬಿಕ್ಷವನುಂಡು, ತನು ಪರಿಣಾಮವನ್ನೈದಿಹ' ಪ್ರಭುವು ಪ್ರಾಪ್ತನಾಗುತ್ತಾನೆ.]

ಪ್ರಭು— || ಅಂಗೈಯೊಳಗೊಂದು ಅರಳ್ದ ತಲೆಯ ಹಿಡಿದುಕೊಂಡು, ಕಂಗಳ ಮುತ್ತು ಪವಣಿಸುವಾಕೆ ನೀನಾರು ಹೇಳಾ. ಸಂದ ಸಂಪಿಗೆಯರಳ್ಗೆ ತುಂಬಿ ಬಂದುಂಬ ಭೇದವನರಿಯದೆ ಹಂಬಲಿಸುವ ಪರಿತಾಪವೇನು ಹೇಳಾ? ಒಂದೆಂಬೆನೆ? ಎರಡಾಗಿದೆ. ಎರಡೆಂಬೆನೆ? ಒಂದಾಗಿದೆ. ಅರಿವಿನೊಳಗಣ ಮರಹಿದೇನು ಹೇಳಾ? ದುಃಖವಿಲ್ಲದುದಕ್ಕೆ ಅಕ್ಕೆ ಇಲ್ಲದನುತಾಪ ನಮ್ಮ ಗುಹೇಶ್ವರ ಲಿಂಗದಲ್ಲಿ ತೋರುತ್ತಿದೆ. ನೀನಾರು ಹೇಳಾ ಎಲೆ ಅವ್ವಾ?||

ಅವ್ವಾ, ನೀನಾರು ರೋದಿಸುವವಳು? ಸಮಾಧಿಸ್ಥನಾದ ಆತನು ಅಗಲಿದನೆಂದು ತಿಳಿದಿರುವೆಯಾ? ಐಕ್ಯಸ್ಥಲದಲ್ಲಿದ್ದ ಅವನು ಸಂಪಿಗೆಯ ಹೂವು ತುಂಬಿಯಿಂದ ದೂರವಿರುವ ಹಾಗೆ ದೂರವಿರಲಿಲ್ಲವೆ? ಏನು ನಿನ್ನ ಈ ದುಃಖ? ಆತನೇನು ದುಃಖಕ್ಕೆ ಒಳಗಾದವನೆ? ನಿತ್ಯ ಸುಖಿಯ ಬಗ್ಗೆ ಪರಿತಪಿಸಿ ಫಲವೇನು? ಎಂದು ಕೇಳಲು ಮುಕ್ತಾಯಕ್ಕಳು ನಿಜ ಸಂಗತಿಯನ್ನು ತಿಳಿಸಿ ತನಗೆ ಗುರುವಿಲ್ಲದಂತಾದುದರಿಂದ ಅನುತಾಪಪಡುತ್ತಿರುವೆನೆಂದು ಹೇಳುತ್ತ,

|| ತನುವಿನೊಳಗೆ ತನುವಾಗಿ ಮನದೊಳಗೆ ಮನವಾಗಿ ಪ್ರಾಣದೊಳಗೆ ಪ್ರಾಣವಾಗಿಪ್ಪುದೆಂದರೆ ಕೆಲಬರಿಂಗೆ ಅರಿಯ ಬಪ್ಪುದೆ? ಅಂತರಂಗದೊಳಗೆ ಅದೆ ಎಂದರೇನು ಹೇಳಾ? ಮನಮುಟ್ಟಿ ಕಾಣಬಾರದು. ಬಹಿರಂಗದಲ್ಲಿ ಅದೆ ಎಂದರೆ ಪೂಜಿಸುವನ್ನಕ್ಕರ ಕಾಣಬಾರದು. ಸಾಕಾರವಲ್ಲದೆ ನಿರಾಕಾರ ಲಿಂಗವು ವ್ಯಾಕುಲವುಳ್ಳನ್ನಕ್ಕರ ಸಾಧ್ಯವಾಗದು. ಎನ್ನ ಮನದೊಳಗೆ ಘನವನನುಗೊಳಿಸಿ ತೋರುವರಿಲ್ಲದ ಕಾರಣ ಎನ್ನ ಅಜಗಣ್ಣನಿಕ್ಕಿದ ಸರಿದೊಡಕಿಂಗೆ ಬೆರಗಾದೆನು ಕಾಣಾ ಪ್ರಭುವೆ.||

ಎಂದು ತನಗೆ ಮುಕ್ತಿಯನ್ನು ಕೊಡುವ ಗುರುವು ಇಲ್ಲವಾದನೆಂದು ಶೋಕಿಸಹತ್ತಿದಳು. ಅದಕ್ಕೆ ಪ್ರಭುವು — ಮರುಳೆ, ಗುರುವು ಹೋದನೆಂದು ಚಿಂತಿಸುವಿಯಾ? ಗುರುವೆಂದರೇನು? ನಿನ್ನ ಮರಹು ನಷ್ಟವಾಗಿ ಅರಿವು ಸ್ವಾಯತವಾದಲ್ಲಿ ನಿನಗೆ ನೀನೇ ಗುರು ಎನ್ನಲು,

ಮುಕ್ತಾಯಕ್ಕ— || ತನ್ನ ತಾನರಿದವಂಗೆ ಅರಿವೆ ಗುರು. ಅರಿವರತು ಮರಹು ನಷ್ಟವಾಗಿದ್ದಲ್ಲಿ ದೃಷ್ಟ ನಷ್ಟವೇ ಗುರು. .... ಗುರು ತಾನಾದಡೂ ಗುರುವಿಡಿದಿರಬೇಕು, ಎನ್ನ ಅಜಗಣ್ಣ ತಂದೆಯಂತೆ.||

ಆದ್ದರಿಂದ ಪ್ರಭುವೆ, ತನಗೆ ತಾನೇ ಗುರು ಎಂಬ ಅದ್ವೈತದ ಮಾತು ನಡೆಯಲಾಗದೆಂದು ಈ ಪ್ರಕಾರ ತಿಳಿಸುತ್ತಾಳೆ—

||ಅದ್ವೈತವ ನೆಲೆಗೊಳಿಸಿ ಎರಡಳಿದೆನೆಂಬುದು ಶಿಸು ಕಂಡ ಕನಸಿನಂತಿರಬೇಕಲ್ಲದೆ ನುಡಿದು ಹೇಳುವನ್ನಕ್ಕರ ಭಿನ್ನವಿಲ್ಲವೆ ಹೇಳಾ?........ ಕಣ್ಣ ಮುಂದೆ ಸ್ವಯಂ ಪ್ರಕಾಶ ತೋರುತ್ತಿರ್ದಡೆ ತಾನಾಗಬಲ್ಲನೆ? ನೆರೆಯರಿತು ಮರೆಯಬಲ್ಲರೆ ಎನ್ನ ಅಜಗಣ್ಣನಂತೆ ಶಬ್ದ ಮುಗ್ಧವಾಗಿರಬೇಕಲ್ಲದೆ ಶಬ್ದ ಸಂದಣಿಯ ಮಾತು ಸಮಯವಲ್ಲ ನೋಡಾ ಪ್ರಭುವೆ.||

ಪ್ರಭು— ಅವ್ವಾ ಶಿವಶರಣರು ಶಬ್ದ ಸೂತಕಿಗಳಲ್ಲ. ಜೊಳ್ಳು ನುಡಿಯುವವರಲ್ಲ. ಪರಮಾತ್ಮನ ಬಗ್ಗೆ ಶಿಸು ಕಂಡ ಕನಸಿನಂತೆ ಅನ್ಯರಿಗೆ ಹೇಳದೆ ತಾವೇ ಸುಖಿಸಬಹುದಾದರೂ ಪರೋಪಕಾರಾರ್ಥವಾಗಿ ಹೇಳಬೇಕಾಗುತ್ತದೆ

ಮುಕ್ತಾಯಕ್ಕ — ||ನಡೆದು ನಡೆದು ನಡೆಯ ಕಂಡವರು ನುಡಿದು ನುಡಿದು ಹೇಳುತ್ತಿಹರೆ? ನುಡಿದು ನುಡಿದು ಹೇಳುವನ್ನಕ್ಕ ನಡೆದುದೆಲ್ಲ ಹುಸಿ ಎಂಬೆನು .... ಎನ್ನ ಅಜಗಣ್ಣ ತಂದೆ ಶಬ್ದಕ್ಕೆ ಹೇಸಿ ಮುಗುದನಾದನು.||

ಪ್ರಭು— ||ತನ್ನ ತಾನರಿದರೆ ನುಡಿ ಎಲ್ಲ ಪರತತ್ವ ನೋಡಾ! ತನ್ನ ತಾ ಮರೆದರೆ ನುಡಿ ಎಲ್ಲ ಮಾಯೆ ನೋಡಾ! ಅರಿದು ಮರೆದ ಶಿವಯೋಗಿಯ ಶಬ್ದವೆಲ್ಲವು ಉಪದೇಶವಲ್ಲದೆ ಭಿನ್ನ ಉಂಟೇ? ನಿನ್ನ ಮನದ ಕಳವಳವ ತಿಳುಹಲೆಂದು ಮಾತನಾಡಿಸಿ ನೋಡಿದಡೆ ಎನ್ನ ಮನದೊಳಗೆ ಕುಂದು ಕಲೆ ಎಂಬುದಿಲ್ಲ ನೋಡಾ. ನಮ್ಮ ಗುಹೇಶ್ವರ ಲಿಂಗಕ್ಕೆ ನೀನು ಉಪದೇಶವ ಶಿಸುವಾದ ಕಾರಣ ಬಾಯ್ತೆರೆದೆನಲ್ಲದೆ ಭಿನ್ನ ಉಂಟೆ ಹೇಳಾ ಮರುಳೆ.||

ಮುಕ್ತಾಯಕ್ಕ— || ನುಡಿಯ ಹಂಗಿನ್ನು ನಿಮಗೆ ಹಿಂಗದು. ನಡೆಯನೆಂತು ನೀವು ಪರರಿಗೆ ಹೇಳುವಿರಿ? ....ಭಾವದಣ್ಣ ತಾನಾದಲ್ಲದೆ ಇದಿರಿಂಗೆ ಹೇಳಬಹುದೆ? ಅರಿವ ತೋರಬಲ್ಲರೆ ತನ್ನನರುಹದೆ ಅರಹುವನು ಕಾಣಾ ಎನ್ನ ಅಜಗಣ್ಣ ತಂದೆ ||

ಆದ್ದರಿಂದ ಅರಿವುಂಟಾದ ಪರಿಯೆಂತು? ಅರಿದವರು ಅರಿದೆವೆಂಬರೆ? ಹಾಗೆ ಅರಿದೆನೆಂದು ಹೇಳುವದೇ ಮರವೆಯಾಗಿದೆ. ಅರಿವ ತೋರಬೇಕಾದರೆ ತನ್ನನ್ನು ಅರುಹಿಕೊಡುವ ಅಗತ್ಯವಿಲ್ಲ. ಅಂದರೆ ನುಡಿಯಿಂದ ಅರಹುವದಕ್ಕಿಂತ ನಡೆಯಿಂದಲೇ ತೋರಿದರೆ ಸಾಲದೆ? ಎಂದು ಮುಕ್ತಾಯಕ್ಕಳು ಬಿನ್ನವಿಸಲು,

ಪ್ರಭು— || ನುಡಿಯಿಂದ ನಡೆಗೆಟ್ಟಿತ್ತು. ನಡೆಯಿಂದ ನುಡಿಗೆಟ್ಟಿತ್ತು. ಭಾವದನು ಸುಟ್ಟು ಅದು ನಾಚಿ ಮಾದುದು ನೋಡಾ! ಗುಹೇಶ್ವರನೆಂಬ ಅರಿವು ಸಿನೆ ಬಂಜೆಯಾದುದಲ್ಲಾ! ||

ಅವ್ವಾ, ಅರಿದವರು ಮೂಕರಂತಿರಬೇಕೆಂದು ನೀನು ತಿಳಿದಿರುವಿಯಷ್ಟೆ. ನುಡಿ ಇದ್ದರೆ ನಡೆ ಇರದು; ನಡೆ ಇದ್ದರೆ ನುಡಿ ಇರದು; ಇದು ಸಹಜವೆ. ಆದರೆ ನಡೆ ನುಡಿಗೆ ಪ್ರೇರಕವಾದ ಯಾವ ಭಾವವೇ ಶಿವಯೋಗದಲ್ಲಿ ಲೀನವಾಗಿರುವದೋ ಅಗ್ಗ ನಡೆ ನುಡಿಗಳು ಶಿವಯೋಗಿಯನ್ನು ಬಂಧಿಸಲಾರವು. ಆದ್ದರಿಂದ ಅರಿವು ಉಸುರಲು ಆತನಿಗೆ ಮುಗ್ಧನಿರಬೇಕೆಂಬ ಕಟ್ಟು ಇಲ್ಲ.

ಮುಕ್ತಾಯಕ್ಕ || ಅಹುದಹುದು. ಶಿವಶರಣರ ಮಹಿಮೆಯ ಅರಿಗೆಯು ಕಾಣಬಾರದು.....ಅರಿವಡೆ ಮತಿಯಿಲ್ಲ. ನೆನೆವಡೆ ಮನವಿಲ್ಲ. ಅಜಗಣ್ಣ ತಂದೆಯನೊಳಕೊಂಡಿಪ್ಪ ನಿಮ್ಮ ಮಹಿಮೆಗೆ ನಮೋ ನಮೋ ಎನುತಿರ್ದೆನು ||

ಲಿಂ. ಪಾ.



ಶಾ. ಶ. ೧೮೫೭ ನೆಯ ಶ್ರಾವಣ ಬ|| ೫ ಸೋಮವಾರ.

ಭಯಸೂಚಕ ಚಟುವಟಿಕೆ.

ಹಿಂದುಸ್ಥಾನದಲ್ಲಿ ಇತ್ತೀಚಿಗೆ ಅನೇಕ ಚಟುವಟಿಕೆಗಳು ತಲೆದೋರುತ್ತಲಿವೆ. ಅವುಗಳಲ್ಲಿ ಕೆಲವು ಹಿತಕರ, ಕೆಲವು ಅಹಿತಕರವಾಗಿರತಕ್ಕದು ಸ್ವಾಭಾವಿಕ. ಅಹಿತಕರವಾದ ಚಟುವಟಿಕೆಗಳಲ್ಲಿ ಹಿಂದುಗಳಿಗೆ ಭಯಸೂಚಕವಾದ ಒಂದು ಹೊಸ ಚಟುವಟಿಕೆಯು ಎಲ್ಲೆಲ್ಲಿಯೂ ವ್ಯಾಪಿಸುತ್ತಿರುವುದು. ಆದುದರಿಂದ ಹಿಂದುಗಳೆಂದು ಹೇಳಿಕೊಳ್ಳುವವರು ಈಗಲೇ ಈ ಚಟುವಟಿಕೆಯ ಕಡೆಗೆ ಲಕ್ಷಿಸುವುದು ಯುಕ್ತವು.

ಹೊಸ ದೇಶ.

ಹಿಂದುಸ್ಥಾನದಲ್ಲಿಯೇ ಮತ್ತೊಂದು ಹೊಸ ದೇಶವನ್ನು ನಿರ್ಮಿಸಬೇಕೆಂದು ಅನೇಕ ಮುಸಲ್ಮಾನ್ ಪ್ರಮುಖರು ಪ್ರಯತ್ನಿಸುತ್ತಿದ್ದಾರೆ. ಆ ಹೊಸ ದೇಶಕ್ಕೆ 'ಪಾಕಿಸ್ಥಾನ' ಎಂಬ ಹೆಸರಂತೆ. ಹಿಂದುಸ್ಥಾನದಲ್ಲಿಯೇ ಮತ್ತೊಂದು ಪಾಕಿಸ್ಥಾನ! ಈ ಪಾಕಿಸ್ಥಾನದ ಉದ್ದೇಶವನ್ನು ಕುರಿತು ಮುಸಲ್ಮಾನ್ ಸಮಾಜದ ಪ್ರಮುಖರಾದ ಸುಪ್ರಸಿದ್ಧ ಕವಿ ಸರ್ ಮುಹಮ್ಮದ್ ಇಕ್ಬಾಲ್‌ರವರು ಈ ಮುಂಚೆಯೇ ಪ್ರಸ್ತಾಪಿಸಿದ್ದರು. ಆಗ ಕೆಲವು ಮುಸಲ್ಮಾನ ಪ್ರಮುಖರು ಹಿಂದುಗಳನ್ನು ಈಗಲೇ ಈ ವಿಷಯದಲ್ಲಿ ಎಚ್ಚರಗೊಳಿಸುವುದು ಯುಕ್ತವಲ್ಲವೆಂಬ ಉದ್ದೇಶದಿಂದಲೇ ಆ ಸಂಗತಿಯನ್ನು ಅಮಾನ್ಯ ಮಾಡಿದ್ದರೆಂದು ತೋರುತ್ತದೆ. ಈಗ ಈ ಚಟುವಟಿಕೆಯು ಎಲ್ಲ ಕಡೆಗೂ ಸಂಘಟಿತವಾಗಿ ಪ್ರಸಾರವಾಗಲುಪಕ್ರಮಿಸಿದೆ. ಈ ಸಂಬಂಧವಾದ ಒಂದು ಪ್ರಕಟನೆಯು ಇಂಗ್ಲಂಡಿನ ಪಾರ್ಲಮೆಂಟ ಸಭಾಸದರಲ್ಲಿಯೂ, ರಾಜಕಾರಣಪಟುಗಳಲ್ಲಿಯೂ, ವರ್ತಮಾನಪತ್ರ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಹಂಚಲ್ಪಟ್ಟಿದೆ. ಆ ಪ್ರಕಟನೆಯ ಕೆಳಗೆ ಮಿ. ಅಲಿ ಎಂಬ ಹೆಸರಿದೆ. ಈ ಲೇಖಕರು ತಾವು 'ಪಾಕಿಸ್ಥಾನ ರಾಷ್ಟ್ರೀಯ ಚಟುವಟಿಕೆಯ' ಅಧ್ಯಕ್ಷರೆಂದು ಹೇಳಿಕೊಂಡಿದ್ದಾರೆ. ವಿಲಾಯತಿಯಲ್ಲಿರುವ ಮುಸಲ್ಮಾನ್ ತರುಣ ವಿದ್ಯಾರ್ಥಿಗಳಲ್ಲಿಯೂ ಈ ಚಟುವಟಿಕೆಯ ಪ್ರಸಾರ ನಡೆದಿದೆ.

ಭಯಂಕರ ಸ್ವರೂಪ.

ಈ ಪಾಕಿಸ್ಥಾನದ ಚಟುವಟಿಕೆಯಲ್ಲಿ ಅಂತಹ ಭಯಂಕರ ಸ್ವರೂಪವೇನಿದೆಯೆಂದು ಕೆಲವರು ಕೇಳಬಹುದು. ಏಕೆಂದರೆ ಈ ಚಟುವಟಿಕೆಯ ಉದ್ದೇಶ ಮತ್ತು ವ್ಯಾಪಕತೆಗಳು ಬಹು ಜನರಿಗೆ ಇನ್ನೂ ತಿಳಿದೇ ಇಲ್ಲ. ಈ ಪಾಕಿಸ್ಥಾನದ ಚಟುವಟಿಕೆಗಾಗಿ ಹೊರಗೆ ಬಂದ ಆ ಪ್ರಕಟನೆಯಲ್ಲಿರುವ ಮುಖ್ಯಾಂಶವನ್ನೇ ಇಲ್ಲಿ ವಿವರಿಸುವದರಿಂದ ಈ ಅನರ್ಥಕರವಾದ ಚಟುವಟಿಕೆಯ ಭಯಂಕರ ಸ್ವರೂಪವು ಯಾರಿಗಾದರೂ ಸ್ಪಷ್ಟ ತಿಳಿಯುವುದು.

ಕಾಶ್ಮೀರ, ಪಂಜಾಬ, ಸಿಂಧ, ಗಡಿನಾಡು, ಬಲೂಚಿಸ್ಥಾನ ಈ ಭಾಗಗಳನ್ನೊಳಕೊಂಡ ಒಂದು ಮುಸಲ್ಮಾನ್ ದೇಶವು ಏರ್ಪಡಬೇಕಂತೆ ಇದರಲ್ಲಿ ಅಫಗಣಿಸ್ಥಾನವೂ ಕೂಡಬೇಕೆಂದೇ ಈ ಚಟುವಟಿಕೆಯ ಮೂಲ ಪುರುಷರ ಉದ್ದೇಶವಿದ್ದಿತಂತೆ. ಹಾಗಾದರೆ ಇದೊಂದು ಬಲವಾದ ಮುಸಲ್ಮಾನ್ ರಾಷ್ಟ್ರವಾಗಿಯೇ ಪರಿಣಮಿಸುವುದೆಂದು ಅವರ ತಿಳುವಳಿಕೆ. ಆ ಪ್ರಕಟನೆಯ ಮುಖ್ಯಾಂಶ ಹೀಗಿದೆ—

"ಈ ಹೊಸ ದೇಶಕ್ಕೆ ಪಾಕಿಸ್ಥಾನ ಎಂಬ ಹೆಸರನ್ನಿಡುವ ಕಾರಣವೇನಂದರೆ- ಪ್ ಎಂಬ ಅಕ್ಷರವು ಪಂಜಾಬ ಪ್ರಾಂತವನ್ನು ಆ ಎಂಬ ಸ್ವರವು ಅಫಗಾಣಿಸ್ಥಾನವನ್ನು ಕ್ ಎಂಬುದು ಕರಾಚಿಯನ್ನು ಸೂಚಿಸುತ್ತಾವೆ. ಈ ಪಾಕಿಸ್ಥಾನವು ಹಿಂದುಗಳ ಭೂಮಿಯಲ್ಲ ಪಾಕಿಸ್ಥಾನದ ನಿವಾಸಿಗಳು ಹಿಂದುಸ್ಥಾನದ ನಾಗರಿಕರೂ ಅಲ್ಲ. ಪಾಕಿಸ್ಥಾನಕ್ಕೆ ಪ್ರಾಚೀನ ಕಾಲದಿಂದಲೂ ಪ್ರತ್ಯೇಕವಾದ ಐತಿಹಾಸಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ರೀತಿನೀತಿಗಳಿವೆ.

ಮಾನವ ಜಾತಿಯ ಚರಿತ್ರೆಯ ಕಾಲದಿಂದಲೂ ಈ ಪಾಕಿಸ್ಥಾನವು ನಮ್ಮ (ಮುಸಲ್ಮಾನರ) ರಾಷ್ಟ್ರೀಯ ಮೂಲಸ್ಥಾನವಿದೆ. ಯಾವ ಪ್ರಕಾರ ಹಿಂದುಗಳು ಹಿಂದುಸ್ಥಾನಕ್ಕೆ ತಮ್ಮ ಜನ್ಮ ಭೂಮಿಯೆಂದು ಹೇಳುತ್ತಿದ್ದಾರೆಯೋ ಅದೇ ಪ್ರಕಾರ ಪಾಕಿಸ್ಥಾನವು ಮುಸಲ್ಮಾನರ ಜನ್ಮ ಭೂಮಿಯು. ಹಿಂದುಸ್ಥಾನದಲ್ಲಿ ಹಿಂದುಗಳ ಜನ ಸಂಖ್ಯೆಯು ಹೇಗೆ ಮುಕ್ಕಾಲು ಭಾಗವಿರುವುದರಿಂದ ಅದು ಅವರ ದೇಶವಾಗಿದೆಯೋ ಹಾಗೆಯೇ ಈ ಪಾಕಿಸ್ಥಾನದಲ್ಲಿ ಮುಸಲ್ಮಾನರ ಸಂಖ್ಯಾಧಿಕ್ಯವಿರುವುದರಿಂದ ಇದು ಮುಸಲ್ಮಾನರ ದೇಶವಾಗಿದೆ.

ಹಿಂದುಸ್ಥಾನದಿಂದ ಕೇವಲ ಭಿನ್ನವಾಗಿರತಕ್ಕ ಈ ಪಾಕಿಸ್ಥಾನದ ರಾಜಕೀಯ ಧಾರ್ಮಿಕ ಸಾಮಾಜಿಕ ಮುಂತಾದ ಶಾಸನಗಳು ಕೂಡಾ ಸ್ವತಂತ್ರವಾದವುಗಳೇ ಇರಬೇಕು. ಮುಂದೆ ಬರುವ ಹಿಂದುಸ್ಥಾನದ ಸಂಯುಕ್ತ ರಾಜ್ಯಘಟನೆಯಲ್ಲಿ ಈ ಪಾಕಿಸ್ಥಾನವನ್ನು ಪ್ರತ್ಯೇಕಗೊಳಿಸಿ ಇದಕ್ಕೂ ಹಿಂದುಸ್ಥಾನದಂತೆ ಒಂದು ಪ್ರತ್ಯೇಕ ಸ್ವರೂಪವನ್ನು ಕೊಡಬೇಕು."

ಮುಂದಣ ಪ್ರಯತ್ನ.

ಮೇಲಣ ಸಂಗತಿಗಳಿಂದ ಈ ಚಟುವಟಿಕೆಯು ಎಷ್ಟು ಭಯಂಕರವಾದುದೆಂಬುದು ಸ್ಪಷ್ಟವಾಗುತ್ತದೆ. ಬ್ರಹ್ಮದೇಶವನ್ನು ಹಿಂದುಸ್ಥಾನದಿಂದ ಬೇರೆ ಮಾಡುವಂತೆಯೇ ಪಂಜಾಬ ಮೊದಲಾದ ಉತ್ತರ ಭಾಗವನ್ನೂ ಹಿಂದುಸ್ಥಾನದಿಂದ ಭಿನ್ನ ಮಾಡಬೇಕೆಂದೇ ಈ ಚಟುವಟಿಕೆ ಪ್ರಾರಂಭವಾಗಿದೆ.

ಈಗ ಬರಲಿರುವ ಸುಧಾರಣೆಯಿಂದ ಸಿಂಧ ಪ್ರಾಂತವೇನೋ ಬೇರೆಯಾಯಿತು. ಇನ್ನು ಮುಂದೆ ಬರಲಿರುವ ಸಂಯುಕ್ತ ರಾಜ್ಯಘಟನೆಯ ಕಾಲಕ್ಕೆ ಇದೊಂದು ಪಾಕಿಸ್ಥಾನವು ಉದ್ಭವವಾದರೆ ಆ ಭಾಗದ ಹಿಂದುಗಳ ಗತಿಯೇನಾಗಬಹುದು? ಹಿಂದುಸ್ಥಾನವು ಈ ಪ್ರಕಾರ ಛಿನ್ನ ವಿಚ್ಛಿನ್ನವಾದರೆ ಮುಂದೆ ಇದಕ್ಕೆ ಪ್ರಪಂಚ

ದಲ್ಲಿ ಯಾವ ಸ್ಥಾನ ಪ್ರಾಪ್ತವಾಗಬಹುದು? ಎಂಬಂಶಗಳನ್ನು ಹಿಂದುಗಳಾದರೂ ಈಗ ಯೋಚಿಸುವುದು ನಿಹಿತವಲ್ಲವೇ?

ಮುಂದೆ ಸಂಯುಕ್ತ ರಾಜ್ಯಘಟನೆಯ ಕಾಲಕ್ಕೆ ಈ ಪ್ರಶ್ನೆ ಬಲವಾಗಿಯೇ ಮುಂದೆ ಬರುವಂತೆ ಕಾಣುತ್ತದೆ. ಸಿಂಧ ಪ್ರಾಂತವು ಈಗ ಬೇರೆಯಾಗಲಿಲ್ಲವೇ? ಹಾಗೆಯೇ ಮುಂದೆ ಇದೊಂದು ಪಾಕಿಸ್ಥಾನವುಂಟಾಗುವ ಸಂಭವವಿದೆ. ಹಿಂದುಗಳು ಈಗಿನಂತೆಯೇ ಈ ಚಟುವಟಿಕೆಯನ್ನು ನಿರ್ಲಕ್ಷಿಸಿ ಕಣ್ಣು ಮುಚ್ಚಿಕೊಂಡು ಕುಳಿತರೆ ಮುಂದೆ ಮಹದನರ್ಥವು ಬಂದೇ ಬರುವುದು. ರಾಷ್ಟ್ರೀಯ ಸಭೆಯು ಈಗಿನ ತನ್ನ ಅರಾಷ್ಟ್ರೀಯ ವೃತ್ತಿಯನ್ನೇ ಅನುಸರಿಸಿದ್ದರೆ ಪಾಕಿಸ್ಥಾನವೂ ಏರ್ಪಡದೆ ಇರಲಾರದು. ಆದಕಾರಣ ಅತ್ಯಂತ ಭಯಸೂಚಕವಾದ ಈ ಚಟುವಟಿಕೆಯನ್ನು ನಿಷೇಧಿಸಲು ಈಗಲಾದರೂ ರಾಷ್ಟ್ರ ಹಿತಚಿಂತಕರು ಮುಂದೆ ಬಂದು ಪ್ರಯತ್ನಿಸುವರೇ?

ಅಬಸೀನಿಯಾದ ಯುದ್ಧ ಸಿದ್ಧತೆ.

ಇಟಲಿ—ಅಬಸೀನಿಯಾ ಯುದ್ಧವನ್ನು ನಿಲ್ಲಿಸುವದಕ್ಕಾಗಿ ಬ್ರಿಟನ್ನವೇ ಮೊದಲಾದ ರಾಷ್ಟ್ರಗಳು ಪ್ರಯತ್ನಿಸುತ್ತಲಿದ್ದರೂ ಇತ್ತ ಆವೆರಡೂ ದೇಶಗಳು ಯುದ್ಧದ ಸಿದ್ಧತೆಯನ್ನು ಭರದಿಂದ ಸಾಗಿಸಿವೆ. ಸದ್ಯಕ್ಕೆ ಮಳೆಗಾಲವಿದ್ದುದರಿಂದ ಇಟಲಿಯು ಕೈ ಕಾಯುತ್ತಿದ್ದರೂ ಇನ್ನು ೫-೬ ವಾರಗಳಲ್ಲಿಯೇ ಯುದ್ಧವು ಪ್ರಾರಂಭವಾಗುವದೆಂದು ಅಬಸೀನಿಯಾದ ಬಾದಶಹರು ಸೈನ್ಯದ ಸಿದ್ಧತೆ ನಡೆಯಿಸಿರುವರು.

ಇಟಲಿಯು ಎರಡು ದಿಕ್ಕುಗಳಿಂದ ಅಬಸೀನಿಯಾದ ಮೇಲೆ ಏರಿ ಬರುವದೆಂದು ಊಹಿಸಲಾಗಿದೆ. ಇರಿಟ್ರಿಯಾದ ಕಡೆಗೆ ಭಯಂಕರ ಘಟ್ಟಗಳೂ ಅರಣ್ಯಗಳೂ ಇದ್ದದರಿಂದ ಅವನ್ನು ದಾಟಿ ಬರುವದು ಇಟಲಿ ಸೈನ್ಯಕ್ಕೆ ದುಸ್ತರವೆಂದು ಅಬಸೀನಿಯಾದ ಸ್ವಲ್ಪೇ ಸೈನ್ಯ ಇಡಲಾಗಿದೆ. ಅವರು ಅರಣ್ಯಗಳಲ್ಲಿ ಅಡಗಿಕೊಂಡು ಇಟಲಿ ಸೈನ್ಯಕ್ಕೆ ಸಾಕಾಗುವಷ್ಟು ತೊಂದರೆ ಕೊಡುವರು. ಸೋಮಾಲಿ ಲ್ಯಾಂಡದ ಕಡೆಗೆ ಇಂಥ ನೈಸರ್ಗಿಕ ಸಂರಕ್ಷಣೆಯಿಲ್ಲ. ಕಾರಣ ಅಬಸೀನಿಯಾದ ಮುಖ್ಯ ಸೈನ್ಯವು ಇಲ್ಲಿಯೇ ತಳ ಊರುವದು.

ಅಬಸೀನಿಯಾ ದೇಶವು ಪರ್ವತಮಯವಾಗಿರುವುದರಿಂದ ಭೂಮಿಯ ಮೇಲಿಂದ ಅಭಿಯೋಗಿಸುವದು ಅಸಾಧ್ಯವಾಗಿದ್ದರೂ ವಿಮಾನಗಳಿಂದ ಬೆಂಕಿಯ ಗುಂಡುಗಳನ್ನು ಹಾಕಿ ಹಬಸೀಗಳನ್ನು ನಾಶಮಾಡಬಹುದೆಂದು ಸೀ. ಮುಸೋಲಿನಿಯವರು ತಿಳಿದಿದ್ದಾರೆ. ಇದರಿಂದ ತಪ್ಪಿಸಿಕೊಳ್ಳಲು ಹಬಸಿಗಳು ಗಿರಿ ಕಂದರ ಸೇರಿದರೆ ವಿಷ ಗುಂಡುಗಳನ್ನೆಸೆದು ವಾತಾವರಣವನ್ನೆಲ್ಲ ದೂಷಿತಗೊಳಿಸಿ ಅವರನ್ನು ಕೊಲ್ಲಬಹುದೆಂದು ಎಣಿಸಿರುವರು. ಹಬಸಿಗಳು ಈ ವಿಪತ್ತಿನಿಂದಲೂ ರಕ್ಷಣೆ ಮಾಡಿಕೊಳ್ಳುವದಕ್ಕಾಗಿ ಜರ್ಮನಿಯಿಂದ ೫೦೦೦ ಮುಖಪರದೆಗಳನ್ನು ತರಿಸಿರುವರು. ಇವು ದೂಷಿತ ಹವೆಯಿಂದ ರಕ್ಷಣೆ ಮಾಡುವವು. ಇಷ್ಟರಲ್ಲೇ ಇನ್ನೂ ೩೦ ಸಾವಿರ ಮುಖಪರದೆಗಳು ಬರಲಿರುವವು.

ಕರಿ-ಬಿಳಿ.

ಇಟಲಿಯ ವಿರುದ್ಧವಾಗಿ ಹೋರಾಡಲು ಇಂಗ್ಲಂಡ ಜರ್ಮನಿ, ಪೋಲಂಡ, ಸ್ವೀಡನ್, ಝೆಕೋಸ್ಲೋವ್ಹಾಕಿಯಾ ಮೊದಲಾದ ದೇಶಗಳ ಸಾವಿರಾರು ತರುಣರು ಹಬಸಿ ಸೈನ್ಯದಲ್ಲಿ ತೆಗೆದುಕೊಳ್ಳಿರೆಂದು ಅರ್ಜಿ ಮಾಡಿಕೊಂಡಿರುವರು. ಆದರೆ ಬಿಳಿಯ ಸೈನಿಕರಲ್ಲಿ ಅಬಸೀನಿಯಾ ಬಾದಶಹರ ವಿಶ್ವಾಸವೇ ಇಲ್ಲದ್ದರಿಂದ ಅವರು ಒಪ್ಪಿರುವದಿಲ್ಲ. ಅಮೇರಿಕೆಯಲ್ಲಿಯ ಲಕ್ಷಾವಧಿ ಕೃಷ್ಣ ವರ್ಣದ ಜನರು ಅಬಸೀನಿಯಾದ ಸಂರಕ್ಷಣೆ ಮಾಡಬೇಕೆಂದು ವಿನಂತಿ ಮಾಡಿಕೊಂಡಿರುವರು. ಇಟಲಿಯು ಅಬಸೀನಿಯಾದ ಮೇಲೆ ಏರಿ ಹೋದದ್ದಾದರೆ ಕ್ರಿಸ್ತೀ ಧರ್ಮದ ಪ್ರೌಢಿಮೆಯು ವ್ಯರ್ಥವಾದುದೆಂದು ಸೂಚಿಸಿದ್ದಾರೆ.

ಈ ಯುದ್ಧವಾದರೆ ಕರಿ ಮತ್ತು ಬಿಳಿ ವರ್ಣದ ಜನರಲ್ಲಿ ಒಳ್ಳೇ ಮತಭೇದವಾಗುವದೆಂದು ಜ. ಸ್ಮಟ್ಸರವರು ಎಚ್ಚರಿಸಿದ್ದಾರೆ. ಅಬಸೀನಿಯಾ ಯುದ್ಧದಿಂದ ಆಫ್ರಿಕೆಯಲ್ಲಿಯ ಬ್ರಿಟಿಶ ವಸಾಹತುಗಳಿಗೂ ಹಾಗೂ ಸೂಡಾನ, ಇಜಿಪ್ತ ಇಟಲಿಯ ವಸಾಹತುಗಳ ಮೇಲೆ ಅನಿಷ್ಟವಾದ ಪರಿಣಾಮವುಂಟಾಗುವದು. ಒಂದುವೇಳೆ ಅಬಸೀನಿಯಾ ದೇಶವು ದೀರ್ಘಕಾಲದ ವರೆಗೆ ಯುದ್ಧಮಾಡಿ ಇಟಲಿಯನ್ನು ಹತಬಲಗೊಳಿಸಿದರೆ ಯುರೋಪ ಖಂಡದಲ್ಲಿಯೂ ಭಯಂಕರ ಪರಿಣಾಮವಾಗುವದೆಂದು ಈ ದಕ್ಷಿಣಾಫ್ರಿಕೆಯ ಮಂತ್ರಿಯು ಎಚ್ಚರಿಸಿದ್ದಾನೆ.

ಇಟಲಿಗೆ ಹಿಂದುಸ್ಥಾನದ ಸರಕು.

ಯುದ್ಧವು ಪ್ರಾರಂಭವಾದ ಕೂಡಲೆ ಇಟಲಿ ಸೈನ್ಯಕ್ಕೆ ಸರಾಯಿ ಬೇಕೇಬೇಕು. ಅದಕ್ಕಾಗಿ ಇಜಿಪ್ತದ ಸರಾಯಿ ಅಂಗಡಿಗಳನ್ನೆಲ್ಲ ಇಟಲಿಯು ಗುತ್ತಿಗೆ ಹಿಡಿದಿದೆ. ಮುಂಬಯಿ ಬಂದರದಿಂದ ಜೋಳ, ಮಸಾಲೆಯಕಾಳು, ಔಡ್ಲ ಮೊದಲಾದವುಗಳು ಹೆಚ್ಚಾಗಿ ಇಟಲಿಯ ಕಡೆಗೆ ಸಾಗಿಸಲ್ಪಡಹತ್ತಿವೆ. ಪ್ರತಿವಾರ ೨೦೦ ಟನ್ ಜೋಳವು ಇಟಲಿಗೆ ಕಳಿಸಲ್ಪಡುತ್ತದೆ. ಹಾಗೂ ೭೦೦೦ ಟನ್ ಔಡ್ಲ ಬೀಜಗಳು ಈ ಮೂರು ತಿಂಗಳಲ್ಲಿ ರಫ್ತಾಗಿವೆ. ಹಿಂದುಸ್ಥಾನದ ಬೂಟುಗಳೂ ಇಟಲಿಗೆ ಕಳಿಸಲ್ಪಡುತ್ತವೆ. ಬೂಟಿನ ಒಂದು ಕಾರ್ಯಾಲಯವು ಹೊಸದಾಗಿ ಸ್ಥಾಪಿತವಾಗಿದ್ದು ಅದರ ಬೂಟುಗಳನ್ನೆಲ್ಲ ಇಟಲಿಯು ಕೊಂಡುಕೊಂಡಿದೆ.

ಸಂಧಾನದ ಕಾರ್ಯ.

ಸಂಧಾನದ ಬಗ್ಗೆ ಇಂಗ್ಲಂಡು ವಿಶೇಷವಾಗಿ ಪ್ರಯತ್ನಿಸುತ್ತಿದ್ದರಿಂದ ಇಟಲಿಯ ವೃತ್ತ ಪತ್ರಿಕೆಗಳೆಲ್ಲ ಅದರ ಮೇಲೆ ರೇಗಿವೆ. ಸಂಧಾನಕ್ಕಾಗಿ ಇಂಗ್ಲಂಡ, ಫ್ರಾನ್ಸ ಮತ್ತು ಇಟಲಿಯ ಪರರಾಷ್ಟ್ರ ಖಾತೆಯ ಮಂತ್ರಿಗಳು ಚರ್ಚಿಸುತ್ತಿದ್ದಾರೆ. ಇಟಲಿಯು ಯುದ್ಧ ಸಿದ್ಧತೆ ಮಾಡುತ್ತಿದ್ದರೂ ರಾಷ್ಟ್ರ ಸಂಘವು ತಮಗೆ ಯುದ್ಧ ಸಾಮಗ್ರಿಗಳನ್ನು ಅಣಿ ಮಾಡಿಕೊಳ್ಳಲು ಆಸ್ಪದ ಕೊಡುವದಿಲ್ಲೆಂದು ಅಬಸೀನಿಯಾ ದೇಶವು ರಾಷ್ಟ್ರ ಸಂಘಕ್ಕೆ ನಿಷೇಧಪರ ಪತ್ರವನ್ನು ಕಳಿಸಿದೆ.

ಮ. ಗಾಂಧಿಯವರು ಯುರೋಪ ಖಂಡದಲ್ಲಿ ಸಂಚರಿಸುವಂತೆ ಮಾಡಿ ಶಾಂತಿಯನ್ನುಂಟುಮಾಡಬೇಕೆಂದು ಇಂಗ್ಲಂಡದಲ್ಲಿ ಕೆಲವರು ಪ್ರಯತ್ನಿಸುತ್ತಿದ್ದಾರೆ. ಈ ಬಗ್ಗೆ ಅವರಿಗೆ ನೋಬೆಲ್ ಪ್ರಾಯಿಝು ದೊರೆಯುವಂತೆ ಮಾಡಬೇಕೆಂದೂ ಅವರ ಮನೀಷೆಯಿದೆ. ಆದರೆ ಗಾಂಧೀಜಿಯವರು ಪ್ರತ್ಯಕ್ಷವಾಗಿ ಇದರಲ್ಲಿ ಭಾಗವಹಿಸುವರೆಂದು ಅನಿಸುವದಿಲ್ಲ.

—ನಾಗಪಟ್ಟಣದಲ್ಲಿ ಶೇಕ್ ಇಸ್ಮಾಯೇಲ್ ಎಂಬ ಒಬ್ಬ ಚಿರಂಜೀವಿಯು ತನ್ನ ೧೩೫ ನೆಯ ವರ್ಷದ ವರ್ಧಂತಿಯನ್ನಾಚರಿಸಿದನು. ಈತನು ಗಟ್ಟಿಮುಟ್ಟಾಗಿದ್ದಾನೆ. ಕಣ್ಣುಗಳು ಶುಭ್ರವಾಗಿವೆ. ದಿನಕ್ಕೈದು ಮೈಲು ನಡೆಯುತ್ತಾನೆ, ಚಹಾ ಕುಡಿಯುವವನಲ್ಲ, ಹೊಗೆಸೊಪ್ಪಿನ ಉಪಯೋಗ ಮಾಡಿದವನಲ್ಲ. ಇವುಗಳ ಸಂಗಪರಿತ್ಯಾಗವೇ ದೀರ್ಘಜೀವನದ ಗುಟ್ಟು ಎಂದಾತನ ಹೇಳಿಕೆ. ಈತನು ಹುಟ್ಟಿದುದು ೧೮೦೦ ರಲ್ಲಿ.

ಪತ್ರಗಳ ಸಾರಾಂಶ.

ವೀರಶೈವ ಫ್ರೀ ಬೋರ್ಡಿಂಗಿನಲ್ಲಿ ಸಭೆ

ತಾ|| ೧೪-೮-೩೫ ನೇ ದಿನ ಮಧ್ಯಾನ್ಹ ೨|| ಗಂಟೆಗೆ ಬೆಳಗಾಂವ ಶಹಪುರ ವೀರಶೈವ ಫ್ರೀ ಬೋರ್ಡಿಂಗಿನಲ್ಲಿ ಸಭೆ ಕೂಡಿತ್ತು.

ನಂದಗಡದ ಶ್ರೀಮನ್ನಿರಂಜನ ಶ್ರೀ ಮಹಾಂತ ಸ್ವಾಮಿಗಳು ಬೋರ್ಡಿಂಗಿನ ವಿದ್ಯಾರ್ಥಿಗಳ ಬಿನ್ನಹವನ್ನು ಮಾನ್ಯಮಾಡಿ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಸಭೆಗೆ ದೇಶನೂರ ಸ್ವಾಮಿಗಳು, ಕಿತ್ತೂರ ಕಲ್ಮಠದ ಸ್ವಾಮಿಗಳು, ಗೊಂಬೀಮಠದ ಗುರುಶಾಂತದೇವರು ಮೊದಲಾದ ಸ್ವಾಮಿಗಳು ಆಗಮಿಸಿದ್ದರು. ಮೊದಲಿಗೆ ಬೋರ್ಡಿಂಗಿನ ವಿದ್ಯಾರ್ಥಿಗಳ ಸರಸವಾದ ಭಾಷಣವಾದ ನಂತರ ಮೃತ್ಯುಂಜಯದೇವರು ಮುಥೋಳ ಇವರು 'ಬ್ರಹ್ಮಚರ್ಯ' ವೆಂದರೇನು ಎಂಬುದನ್ನು ತಿಳಿಸಿಕೊಟ್ಟರು. ಶ್ರೀ ಸಿದ್ಧವೀರದೇವರು ಬುದ್ಧಿಯ ಪ್ರಾಶಸ್ತ್ಯತೆಯ ವಿಷಯವಾಗಿ ಒಳ್ಳೇ ಆವೇಶಯುಕ್ತ ಸರಸ ಪರಿಪೂರಿತ ವಾಣಿಯಿಂದ ಅನೇಕ ಉದಾಹರಣೆಗಳ ಸಹಿತವಾಗಿ ೪೫-೫೦ ನಿಮಿಷಗಳ ವರೆಗೆ ಯಾವತ್ತೂ ಸಭಿಕರ ಎದೆ ತಟ್ಟುವಂತೆ ಭಾಷಣ ಮಾಡಿದ ನಂತರ ಅಧ್ಯಕ್ಷರಾದ ಮಹಾಸ್ವಾಮಿಗಳು ಪ್ರಚಂಡಕರತಾಡನ ಮತ್ತು ಜಯಜಯಕಾರದೊಡನೆ ಎದ್ದು ತಮ್ಮ ವಿಚಾರ ಪ್ರಚೋದಕ ನಿಸ್ಪೃಹಪರಿಪೂರ್ಣ ಅಮೋಘವಾಣಿಯಿಂದ 'ಬ್ರಹ್ಮಚರ್ಯವೂ ವಿದ್ಯಾರ್ಥಿಗಳೂ' ಎಂಬ ವಿಷಯದಿಂದ ಸುಮಾರು ೧|| ಘಂಟೆಯ ವರೆಗೆ ವಿದ್ಯಾರ್ಥಿಗಳನ್ನೂ ಮತ್ತು ಸಭಿಕರನ್ನೂ ತಲ್ಲೀನಗೊಳಿಸಿದರು. ನಂತರ ವಿದ್ಯಾರ್ಥಿಗಳು ಅಧ್ಯಕ್ಷರ, ಇತರ ವ್ಯಾಖ್ಯಾತೃಗಳ ಆಭಾರ ಮನ್ನಿಸಿದ ಮೇಲೆ ಸಭೆಯು ಜಯಜಯಕಾರದೊಡನೆ ಕೊನೆಗಂಡಿತು.

ತಾ|| ೧೫-೮-೩೫. **ಸೆಕ್ರೆಟರಿ**

ಶ್ರೀ ಶಿವಯೋಗ ಮಂದಿರ ವಾಚನಾಲಯಕ್ಕೆ ಗ್ರಂಥ ಸಹಾಯ.

ಪಂ. ರುದ್ರಾರಾಧ್ಯ ಶಾಸ್ತ್ರಿಗಳು ಮಹಾಗಾಂವ ಇವರು ನಮ್ಮ "ರೇವಣಸಿದ್ಧೇಶ್ವರ" ವಾಚನಾಲಯಕ್ಕೆ ತಾವು ರಚಿಸಿದ (೧)ರಮಲ ವಿದ್ಯಾರಹಸ್ಯ (೨)ಸ್ವಯಂ ಪುರೋಹಿತ (೩) ಐದು ವರ್ಷದ ಭವಿಷ್ಯ (೪) ಸತೀ ಹಿತೋಪದೇಶ, ಈ ನಾಲ್ಕು ಗ್ರಂಥಗಳನ್ನು ಪ್ರೇಮಪೂರ್ವಕ ಅರ್ಪಿಸಿದ್ದಾರೆ. ಇವು ಸಾಧಾರಣ ೮ ರೂಪಾಯಿ ಬೆಲೆ ಬಾಳುವವು. ಇದಕ್ಕಾಗಿ ಇವರನ್ನು ನಾವು ಅಭಿನಂದಿಸುತ್ತೇವೆ. ಹಾಗು ಇದರಂತೆ ಬೇರೆಯವರೂ ಸಹ ನಮ್ಮ ವಾಚನಾಲಯಕ್ಕೆ ಸಹಾಯ ಮಾಡುವರೆಂದು ನಂಬಿದ್ದೇವೆ.

ರೇ. ವಾ. ಸೆಕ್ರೆಟರಿ.

ಹಲಗೇರಿಯಲ್ಲಿ ಶಿವಾನುಭವ ಮಂಟಪ.

ರಾಣಿಬೆನ್ನೂರ ತಾಲೂಕ ಪೈಕಿ ಹಲಗೇರಿ ಗ್ರಾಮಕ್ಕೆ ಶ್ರೀ ಅನ್ನದಾನೀಶ್ವರ ವಿರಕ್ತಮಠ ಇವರು ಬಂದು ಬೋಧೆ ಮಾಡಿ ಒಂದು ಶಿವಾನುಭವ ಮಂಟಪವನ್ನು ಸ್ಥಾಪಿಸಿದರು. ಪ್ರತಿ ಸೋಮವಾರ ಶಿವಾನುಭವ ಮಂಟಪದಲ್ಲಿ ಬೋಧ ಮಾಡುವದಕ್ಕಾಗಿ ಶ್ರೀ ವೀರಪ್ಪಣ್ಣ ಕುಬಸದ ಇವರು ಒಪ್ಪಿಕೊಂಡಿರುವರು.

ಶ್ರೀ ಅನ್ನದಾನೀಶ್ವರರು ಇಲ್ಲಿಯ ಆದಿಜನ ಕೇರಿಯನ್ನೂ ನೋಡಿಕೊಂಡು ಆದಿಜನರಿಗೆ ನಾಲ್ಕು ಉಪದೇಶಪರ ಮಾತುಗಳನ್ನು ಹೇಳಿದರು. ಇವರಿಗೆ ಬೋಧೆ ಮಾಡಲು ಶ್ರೀ ಪುಟ್ಟಪ್ಪ ಗಚ್ಚಿನಮನಿ ಇವರು ಸಮ್ಮತಿಸಿರುವರು. ಹಾಗೂ ಶ್ರೀ ಉಜ್ಜನಗೌಡ್ರು ಪಾಟೀಲ ಇವರು ಆದಿಜನ ಬಾಲಕರಿಗೆ ಪಾಟಿ ಪೆನ್ಸಿಲು ಕೊಡಲು ಒಪ್ಪಿರುವರು.

ವ್ಯವಸ್ಥಾಪಕ

ತಾ|| ೧೨-೮-೩೫. **ಭಜನಾಸಂಘ ಹಲಗೇರಿ.**

ದುಃಖ ಪ್ರದರ್ಶನ.

ಶಿಪ್ಪಾ ವೀರಭದ್ರಪ್ಪನವರ ಮೋಹದ ಕುಮಾರನೂ ಶಿದ್ರಾಮಪ್ಪನವರ ಪ್ರೀತಿಯ ತಮ್ಮನೂ ಆದ ವೀರಪ್ಪನೆಂಬ ೧೮ ವರುಷದ ತರುಣನು ತಾ. ೧೨ ಚಂದ್ರವಾರ ೫ ಗಂಟೆಗೆ ವಿಷಮಜ್ವರದಿಂದ ಸ್ವರ್ಗಸ್ಥನಾದನು. ಔದಾರ್ಯ, ವಿನಯ, ಸಮಾಜ ಸೇವೆ ಮೊದಲಾದವುಗಳಲ್ಲಿ ಅಗ್ರಗಣ್ಯನಿದ್ದನೆಂಬುದಕ್ಕೆ ಅವನ ಸ್ಮಶಾನ ಯಾತ್ರೆಯ ಕಾಲಕ್ಕೆ ನೆರೆದ ಅಸಂಖ್ಯವಾದ ಎಲ್ಲ ಜಾತಿಯ ಜನ ಸಮೂಹವೇ ಸಾಕ್ಷಿಯು. ಸದ್ಗುಣಿಯಾಗಿದ್ದಂತೆಯೇ ಅಪ್ರತಿಮ ಧೈರ್ಯಶಾಲಿಯೂ ಸಾಹಸಿಯೂ ಆಗಿದ್ದನು. ಡಬಲ್ ಬಾರ್ ರೋಮನ್ ರಿಂಗ್ಸಗಳಲ್ಲಿ ಅವನ ಕೆಲಸವು ಅಪ್ರತಿಮವಾಗಿತ್ತು. ಕರ್ನಾಟಕದಲ್ಲೆಲ್ಲ ಮುಖಂಡರು ವ್ಯಾಯಾಮ ಕಾರ್ಯವನ್ನು ಹೆಚ್ಚು ಹೆಚ್ಚು ಪ್ರಚಾರದಲ್ಲಿ ತರುತ್ತಿರುವಾಗ್ಗೆ ಗುಳೇದಗುಡ್ಡದ ದತ್ತ ವ್ಯಾಯಾಮ ಸಂಘವು ತನ್ನದೊಂದು ಜ್ಯೋತಿಯನ್ನು ಕಳೆದುಕೊಂಡು ಕಂಣೀರು ಹಾಕಬೇಕಾಯಿತಲ್ಲವೆ? "ದೇವರಿಗೆ ಬೇಕಾದವರು ಬೇಗ ಸಾಯುವರು" ಎಂಬುದು ಸರ್ವ ಮಾನ್ಯವು. ಸಂಣವನೆಂದೆಣಿಸದೆ ಪ್ರೇಮದಿಂದ ತೆಗೆದುಕೊಂಡು ಹೋದ ಪರಮಾತ್ಮನು ಅವನ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಕೋರುವ,

ಗುಳೇದಗುಡ್ಡ ತಾ. ೧೬-೮-೩೫ } ದತ್ತಾತ್ರೇಯ ವ್ಯಾಯಾಮ ಮಂದಿರ.

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್, ಬಹು ಅಂದವಾದ ಅಕ್ಷರಗಳು, ಬಲು ಸುಲಭ ದರ. ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,
ಶ್ರೀ ರಂಗನಾಥ ಟೈಪ್ ಫೌಂಡರಿ
೬೭ ಕುಬೇರ ಸಾಹುಜಿ ಲೈನ್
ಚಿಕ್ಕಪೇಟೆ, ಬೆಂಗಳೂರು ಸಿಟಿ.

ವರ್ತಮಾನ ಸಾರ.

—ಮೈಸೂರು ಮಹಾರಾಜರ ವರ್ಧಂತಿ ಉತ್ಸವ ಮತ್ತು ದಸರಾ ಮಹೋತ್ಸವಗಳ ಕಾಲಕ್ಕೆ ಬರುವ ಜನರ ಮೇಲೆ ಸುಂಕ ಹಾಕಬೇಕೆಂದು ಮೈಸೂರು ಪೌರಸಭೆಯಲ್ಲಿ ಒಂದು ಗೊತ್ತುವಳಿಯು ಬಂದಿತು. ರಾಜ ದರ್ಶನಕ್ಕೆ ಬಂದವರಿಗೆ ಸುಂಕ ಹಾಕಬಹುದೇ ಎಂದು ಅಧ್ಯಕ್ಷರು ಪ್ರಶ್ನಿಸಲು ಒಬ್ಬ ಸಭಿಕರು, "ದೇವದರ್ಶನಕ್ಕೆ ಹೋದಾಗಲೂ ಹಾಕುತ್ತಾರಲ್ಲ ಸ್ವಾಮಿ" ಎಂದು ಹೇಳಿದರು. ಕೊನೆಗೆ ಈ ಗೊತ್ತುವಳಿಯು ಬಿದ್ದುಹೋಯಿತು.

—ಗೋಹಾಟಿಯಲ್ಲಿ ಒಬ್ಬ ಬ್ರಾಹ್ಮಣ ಪುರೋಹಿತನು ಒಂದು ಮನೆಯಲ್ಲಿ 'ಶಾಂತಿ ಕಲ್ಯಾಣ' ಮಾಡಿಸಲಿಕ್ಕೆಂದು ಹೋಗಿ ಆ ಮನೆಯ ಒಬ್ಬ ತರುಣಿಯನ್ನು ಎಬ್ಬಿಸಿಕೊಂಡು ಹೋಗಿರುವನು.

—ಪಂಜಾಬದ ಒಬ್ಬ ಮುಸಲ್ಮಾನ ಜಹಗೀರದಾರರು ತಮ್ಮ ವಶದ ಭೂಮಿಯಲ್ಲಿದ್ದ ಒಂದು ಶಿವ ದೇವಾಲಯವನ್ನು ಕೆಡವಿಸಿದ್ದರಿಂದ ಅಲ್ಲಿಯ ಹಿಂದುಗಳೆಲ್ಲ ಸಭೆ ಸೇರಿ ನಿಷೇಧ ಪ್ರದರ್ಶನ ಮಾಡಿದರಂತೆ.

—ಭಟಕಳ ಬಂದರವನ್ನು ಊರ್ಜಿತಗೊಳಿಸಿ ಕರ್ನಾಟಕದ ಒಂದು ಮುಖ್ಯ ಬಂದರವನ್ನಾಗಿ ಮಾಡಬೇಕೆಂದು ಯತ್ನಿಸಲಾಗಿದ್ದಿತಷ್ಟೆ. ಮೈಸೂರು ಸರಕಾರದವರೂ ಈ ಬಂದರವನ್ನು ತೆಗೆದುಕೊಳ್ಳಬೇಕೆಂದು ಪ್ರಯತ್ನಿಸಿದ್ದರು. ಆದರೆ ಈಗ ಅಲ್ಲಿ ಸರಕಾರದವರು ಒಂದು ದಂಡಿನ ಪಾಳ್ಯವನ್ನೂ ಮತ್ತು ವಿಮಾನ ನಿಲ್ದಾಣ (Airo-drome) ವನ್ನೂ ಸ್ಥಾಪಿಸಬೇಕೆಂದಿರುವರು. ನೋಡಬೇಕು; ಭಟಕಳದ ದೈವ ಎಂದು ತೆರೆಯುವದೊ!

—ನಿಝಾಮ ರಾಜ್ಯದಲ್ಲಿ ಉದ್ಗೀರ-ಬೀದರ ರೇಲ್ವೆ ಮಾರ್ಗದಲ್ಲಿ ಹತ್ತುವ ಮಾಂಜರಾ ನದಿಗೆ ಸೇತುವೆ ಕಟ್ಟುವ ಕಾರ್ಯ ನಡೆದಿದೆ. ಅದಕ್ಕೆ ಒಂದು ಲಕ್ಷ ರೂ. ವೆಚ್ಚಮಾಡಲು ನಿರ್ಧರಿಸಲಾಗಿದೆ.

—ಅಕೋಲಾದಲ್ಲಿ ಜೈನ ಒಳಪಂಗಡಗಳಲ್ಲಿ ಎರಡು ಮಹತ್ವದ ವಿವಾಹಗಳು ಜರುಗಿದವು. ಒಂದು ವಿವಾಹದಲ್ಲಿ ವರನು ಶ್ವೇತಾಂಬರನು; ವಧೂವು ದಿಗಂಬರ ಪಂಗಡದವಳು. ಇನ್ನೊಂದರಲ್ಲಿ ವರನು ಶ್ವೇತಾಂಬರನು. ವಧೂವು ಸನಾತನ ಜೈನ ಸಂಪ್ರದಾಯದವಳು. ಉಭಯ ವಿವಾಹಕ್ಕೂ ಸಾವಿರಾರು ಜನ ಪ್ರತಿಷ್ಠಿತ ಜೈನರು ಸೇರಿದ್ದರು.

—ಇಟಲಿಯಲ್ಲಿಯ ಒಂದು ಆಣೆಕಟ್ಟು ಒಡೆದು ೧೦೦ ಚೌರಸಮೈಲಿನ ಪ್ರದೇಶವೆಲ್ಲ ಜಲಮಯವಾಗಿದೆ. ಸಾವಿರಾರು ಜನರು ಸತ್ತಿರುವರು. ಅನೇಕರು ಜೀವ ಉಳಿಸಿಕೊಳ್ಳಲು ಮನೆಯನ್ನೇರಿ ಕುಳಿತುಕೊಂಡಿರಲು ಆ ಮನೆಗಳು ಕಳಚಿ ಬಿದ್ದು ಅವರೆಲ್ಲ ಜೀವಕ್ಕೆ ಎರವಾದರು.

—ಬಂಗಾಲದಲ್ಲಿಯ ದಾಮೋದರ ಎಂಬ ನದಿಗೆ ಮಹಾಪೂರ ಬಂದು ಅನೇಕ ಹಳ್ಳಿಗಳು ನಾಶವಾಗಿವೆ.

—ಸೌ. ಕಮಲಾ ನೆಹರು ಇವರ ಪ್ರಕೃತಿಯು ಪುನಃ ವ್ಯತ್ಯಸ್ತವಾಗಿದೆ. ಡಾಕ್ಟರರು ಹಾಸಿಗೆಯ ಮೇಲೆ ಯಾವಾಗಲೂ ಮಲಗಿಕೊಂಡಿರಲು ಹೇಳಿರುವರು.

—ಮುಂಬಯಿ ಎಂಪಾಯರ ಥೇಟರಿನಲ್ಲಿ ನಡೆದ ಒಂದು ಭೀಕರ ಸಿನೇಮಾ ದೃಶ್ಯವನ್ನು ನೋಡುತ್ತಿದ್ದ ಒಬ್ಬ ಯುರೋಪಿಯನ್ ಸ್ತ್ರೀಯಳು ಭಯದಿಂದ ಮೂರ್ಛೆಹೋದಳು. ಇಂಥ ಪ್ರಸಂಗಗಳು ಉಂಟಾದರೆ ವ್ಯವಸ್ಥೆ ಮಾಡುವ ಕುರಿತು ಮುಂಜಾಗ್ರತೆಯಿಂದ ವ್ಯವಸ್ಥಾಪಕರು ಎಲ್ಲ ಏರ್ಪಾಟು ಮಾಡಿದ್ದರಿಂದ ಆ ಸ್ತ್ರೀಗೆ ತೀವ್ರವೇ ಔಷಧೋಪಚಾರ ಮಾಡಲಾಯಿತು.

—ಪಂಜಾಬದಲ್ಲಿ ರಾವಿ ಮತ್ತು ಚಿನಾಬ ನದಿಗಳಿಗೆ ಮಹಾಪೂರ ಬಂದು ರೇಲ್ವೆ ಲಾಯಿನು ಕೊಚ್ಚಿಕೊಂಡು ಹೋಗಿದೆ.

—ಗೋಕಾಕದ ಹತ್ತರ ಅರಭಾವಿಯಲ್ಲಿ ಒಬ್ಬ ಒಡ್ಡನು ಒಂದು ಖಣಿಯಲ್ಲಿ ಸುರಂಗ ಹಾರಿಸಬೇಕೆಂದು ಕೊಳ್ಳೀ ಕೊಟ್ಟು ಮೇಲೆ ಬಂದನು. ಎಷ್ಟು ಹೊತ್ತಾದರೂ ಅದು ಹಾರಲಿಲ್ಲ. ಮತ್ತೊಮ್ಮೆ ಹಚ್ಚಬೇಕೆಂದು ಇಳಿದು ಹಾರಿಯಿಂದ ಕೆದರಲು ಮದ್ದು ಒಮ್ಮಿಂದೊಮ್ಮೆ ಹಾರಿ ಹಾರಿಯು ಒಡ್ಡನ ಟೊಂಕದೊಳಗೆ ಸಿಗಬಿದ್ದು ಹೊಟ್ಟೆಯಲ್ಲಿ ಪಾರಾಯಿತು. ಅದು ೨½ ಇಂಚು ಒಳಗೆ ಸೇರಿದ್ದಿತು. ರಕ್ತವು ಭಯಂಕರವಾಗಿ ಸೋರಾಡುತ್ತಿತ್ತು. ಆ ಸ್ಥಿತಿಯಲ್ಲಿ ಶಸ್ತ್ರ ಚಿಕಿತ್ಸೆಯಿಂದ ಹುಕ್ಕೇರಿಯ ಡಾ. ಕೋಕಟನೂರ ಮತ್ತು ಡಾ. ರೇಷ್ಮೆಯವರು ಹಾರಿಯನ್ನು ತೆಗೆದರು. ಒಡ್ಡನು ಮರುದಿವಸ ಅಂದರೆ ೧೨ ನೆಯ ತಾರೀಖಿನ ದಿವಸ ಮರಣಪಟ್ಟನು.

—ಸಂಯುಕ್ತ ಪ್ರಾಂತದ ಬದಾವುನ ಎಂಬಲ್ಲಿ ಒಂದು ಸಿನೇಮಾ ಕಂಪನಿಯ ಒಡೆಯನು ಒಬ್ಬ ಸರಕಾರಿ ಅಧಿಕಾರಿಗೆ ಯಾವಾಗಲೂ ಉಚಿತವಾಗಿ ಸಿನೇಮಾ ನೋಡಿಕೊಂಡು ಹೋಗುತ್ತಿದ್ದುದರಿಂದ ಏನೋ ಅನ್ನಲು ಆ ಅಧಿಕಾರಿಯು ಸಿಟ್ಟಿಗೆದ್ದು ಮನೆಯಿಂದ ಬಂದೂಕು ತಂದು ಸಿನೇಮಾ ಒಡೆಯನಿಗೆ ಗುಂಡಿಟ್ಟು ಕೊಂದನು.

—ಅಹಮ್ಮದನಗರದಲ್ಲಿ ಒಂದು ರಾಜಮಾರ್ಗವನ್ನು ಸರಿಪಡಿಸುವ ಕಾರ್ಯ ನಡೆದಾಗ್ಗೆ ಅಲ್ಲಿ ವಾಹನಗಳು ಓಡಾಡಬಾರದೆಂದು ಕೂಲಿಯವನು ಕೆಂಪು ದೀವಿಗೆ ಇರಿಸಿ ನಿದ್ರಿಸುತ್ತಿರಲು; ಒಬ್ಬ ಡ್ರಾಯವ್ಹರನು ದೀವಿಗೆಯನ್ನು ಕಂಡರೂ ಮೋಟಾರು ಹಾಗೇ ಮುಂದಕ್ಕೆ ಹೊಡೆಯಲು ಆಳು ಸಿಕ್ಕು ಜಜ್ಜಿಯಾದನು.

ಜಾತಕ ಪತ್ರಿಕೆ.

ತಮ್ಮ ಅಥವಾ ತಮ್ಮ ಮಕ್ಕಳ ಜನನ ಕಾಲ, ತಾರೀಖು ತಿಂಗಳು ಇಸವಿಯನ್ನು ಕಳುಹಿಸಿದರೆ ಎಲ್ಲಾ ಗಣಿತಗಳನ್ನು ಮಾಡಿಕೊಂಡು, ಬಾಲಾರಿಷ್ಟ, ಮಾತಾ ಪಿತ್ರಾರಿಷ್ಟ ದೋಷಗಳನ್ನು ಶೋಧಿಸಿ ದೋಷವಿದ್ದರೆ ಶಾಂತಿ ಕ್ರಮವನ್ನು ತಿಳಿಸಿ ಆಯುಷ್ಯಾಂತ್ಯದವರೆಗೆ ದಶಾ ಫಲಗಳನ್ನು ಕಂಟಕ ಕಾಲದಲ್ಲಿ ಮಾಡತಕ್ಕ ಶಾಂತಿ ಕ್ರಮಗಳನ್ನು ಬರೆದು ಕಳುಹಿಸುತ್ತೇವೆ. ಮುಂಗಡ ಹಣ ಕಳುಹಿಸಬೇಕು.

ಜಾತಕ ಪತ್ರಿಕೆ ಚಾರ್ಜ ರೂ. ೧ ಆ. ೪ ಮಾತ್ರ.

"ಶ್ರೀ ಸೂರ್ಯ ಜೀವ ರಕ್ಷ" ತಾಯಿತ.

ಗ್ರಹಣ ಕಾಲದಲ್ಲಿ ಅಮೂಲ್ಯವಾದ ಮೂಲಿಕೆಗಳಿಂದ ತಯಾರಿಸಿದೆ. ಹುಟ್ಟಿದ ಮಕ್ಕಳು ಸಾಯುವುದು ಗರ್ಭಸ್ರಾವವಾಗುವುದು ಇಂತಹ ಸ್ತ್ರೀಯರು ಇದನ್ನು ಧರಿಸಿದರೆ ಹುಟ್ಟಿದ ಮಕ್ಕಳು ಸಾಯುವದು ಗರ್ಭ ಸ್ರಾವವಾಗುವುದು, ನಿವಾರಣೆಯಾಗುವುದು. ಬಾಲಾರಿಷ್ಟ ದೋಷವಿರುವ ಮಕ್ಕಳು ಧರಿಸಿದರೆ ಖಂಡಿತ ಗುಣಬರುವುದು. ೧ ತಾಯಿತ ಚಾರ್ಜು ರೂ. ೧ (ಹಣ ಮುಂಗಡ)

ವಿಳಾಸ:— ಮ್ಯಾನೇಜರ್ ಶ್ರೀ ಸೂರ್ಯ ಜ್ಯೋತಿಷ್ಯ ಮಂದಿರ ಸರಗೂರು, ಪೋಸ್ಟು. ಡಿಸ್ಟ್ರಿಕ್ಟ ಮೈಸೂರು.

ವಿವಿಧ ವರ್ತಮಾನ.

ವಿಚಿತ್ರ ಪ್ರಾಣಿಗಳು!

ಮಧುಬಾನಿಯ ಕಾಡುಗಳಲ್ಲಿ ವಿಚಿತ್ರ ಪ್ರಾಣಿಗಳು ಬಂದಿವೆ. ಅವು ರಾತ್ರಿಯಲ್ಲಿ ಹಳ್ಳಿಯನ್ನು ಹೊಕ್ಕು ಕಳ್ಳತನದಿಂದ ಸಣ್ಣ ಸಣ್ಣ ಮಕ್ಕಳನ್ನು ಎತ್ತಿಕೊಂಡುಹೋಗಿ ತಿನ್ನುತ್ತವೆ. ಜನರು ಹಿಡಿಯಲಿಕ್ಕೆ ಹೋದರೆ ಕೈಗೆ ಸಿಗುವದಿಲ್ಲ. ಅರಣ್ಯದಲ್ಲಿ ಅನೇಕ ಸಣ್ಣ ಮಕ್ಕಳ ಎಲವುಗಳು ದೊರೆತಿವೆ.

೧ ನೇ ವರ್ಗದ ಪ್ರವಾಸಿಗಳಿಗೆ ಎಚ್ಚರಿಕೆ.

ಕಳೆದ ನಾಲ್ಕನೆಯ ತಾರೀಖಿನ ದಿವಸ ಭುಸಾವಳ ಸ್ಟೇಶನದಲ್ಲಿ ಒಬ್ಬ ೧ ನೇ ವರ್ಗದ ಪ್ರವಾಸಿಯು ಎಕ್ಸಪ್ರೆಸ್ ಉಗಿಬಂಡಿಯಲ್ಲಿ ಬಂದು ಕುಳಿತನು. ಒಳಗೆ ಕತ್ತಲು ಕವಿದದ್ದರಿಂದ ಕೂಲಿಯವನು ಒಂದು ಲಾಯಿಟ ಹಚ್ಚಿ ಹಾಸಿಗೆಗಂಟು ಇಟ್ಟು ಹೋದನು. ಸ್ವಲ್ಪ ಹೊತ್ತಿನ ಮೇಲೆ ಶೌಚಕೂಪವನ್ನು ತೊಳೆಯುವದಕ್ಕಾಗಿ ಒಬ್ಬ ಆಳು ಒಂದು ಶೌಚಕೂಪದ ಬಾಗಿಲನ್ನು ಎಷ್ಟು ಜಗ್ಗಿಡಿದರೂ ತೆರೆಯಲಿಲ್ಲ. ಅನಂತರ ಅವನು ಗಾರ್ಡನನ್ನೂ ಸ್ಟ್ಯಾಮನ್ನನನ್ನೂ ಕರೆದುಕೊಂಡು ಬಂದನು. ಮಹತ್ಪ್ರಯಾಸದಿಂದ ತೆರೆದು ನೋಡಲು ಒಳಗೆ ಇಬ್ಬರು ಮವಾಲಿಗಳು ಕುಳಿತಿದ್ದರು. ಶ್ರೀಮಂತ ಜನರನ್ನು ಸುಲಿಯಲು ಇದೊಂದು ಹಂಚಿಕೆ. ಕಾರಣ ಒಂದನೇ ಎರಡನೇ ತರಗತಿಗಳಲ್ಲಿ ಪ್ರವಾಸ ಮಾಡುವವರು ಎಚ್ಚರಿಕೆಯಿಂದಿರಬೇಕು.

ಸ್ಪೃಶ್ಯಾಸ್ಪೃಶ್ಯರ ಹೊಡೆದಾಟ.

ಭಾವನಗರ ಸಂಸ್ಥಾನದ ಒಂದು ಹಳ್ಳಿಯಲ್ಲಿ ಸ್ಪೃಶ್ಯಾಸ್ಪೃಶ್ಯರಲ್ಲಿ ಹೊಡೆದಾಟವಾಯಿತು. ಅಸ್ಪೃಶ್ಯರು ಮಾಡಿದ ಹೊಂಚಿನಿಂದ ಹಳ್ಳಿಗಳಲ್ಲಿಯ ಅನೇಕ ದನಗಳು ಸಾಯುತ್ತಿರುವವೆಂದು ತಿಳಿದು ಎರಡು ಹಳ್ಳಿಗಳ ಸ್ಪೃಶ್ಯಾಸ್ಪೃಶ್ಯರಲ್ಲಿ ಹೊಡೆದಾಟವಾಗಿ ಅನೇಕ ಆದಿಜನ ಕುಟುಂಬಗಳು ಊರು ಬಿಟ್ಟು ಹೋಗಿವೆ. ಇನ್ನುಮೇಲೆ ದನಗಳು ಸತ್ತರೆ ಹೊಣೆ ಯಾರು?

ಶಸ್ತ್ರಕ್ರಿಯ ನಡೆದಾಗ್ಗೆ ಗಾಯನ.

ಇಟಲಿಯ ಪ್ರಸಿದ್ಧ ಗಾಯಕಿಯಾದ ಮದಾಮುಗಾಲಿ ಕುರ್ಸಿ ಇವರು ತಮ್ಮ ಧ್ವನಿಯನ್ನು ಸುಧಾರಿಸಿಕೊಳ್ಳುವದಕ್ಕಾಗಿ ಅಮೇರಿಕೆಯಲ್ಲಿ ಚಿಕಿತ್ಸೆ ಮಾಡಿಸಿದರು. ಶಸ್ತ್ರಕ್ರಿಯೆಯು ನಡೆದಾಗ್ಗೆ ಇವರು ಗಾಯನ ಮಾಡುತ್ತ ತಮ್ಮ ಧ್ವನಿಯ ಮೇಲಾಗುವ ಪ್ರಕಾರವನ್ನು ಡಾಕ್ಟರರಿಗೆ ತಿಳಿಸುತ್ತಿದ್ದರಂತೆ.

ಲಾಹೋರ ದೊಂಬಿಗೆ ೨ ಲಕ್ಷ ರೂಪಾಯಿ.

ಲಾಹೋರದ ಶಹೀದಗಂಜದ ಬಗ್ಗೆ ಆದ ಸೀಖ ಮುಸಲ್ಮಾನ ದೊಂಬಿಯಲ್ಲಿ ವ್ಯವಸ್ಥೆಯನ್ನು ಮಾಡುವ ಬಗ್ಗೆ ಸರಕಾರದವರಿಗೆ ೨ ಲಕ್ಷ ರೂ. ವೆಚ್ಚವಾದವು. ಒಟ್ಟಿಗೆ ೧೫ ಜನರು ಮೃತರಾದರು. ಕಳೆದೊಂದು ತಿಂಗಳಿಂದಲೂ ಶಿಬಿರ ಹಾಕಿದ ಬ್ರಿಟಿಶ್ ಸೈನ್ಯ ಕಳೆದ ೧೨ ನೆಯ ತಾರೀಖಿನಿಂದ ಸ್ಥಳಾಂತರಿಸಲಾಯಿತು.

ಲ್ಯಾಂಡ ಮಾರ್ಗೇಜ ಬ್ಯಾಂಕಿನ ಸ್ಥಾಪನೆ.

ಹುಬ್ಬಳ್ಳಿಯಲ್ಲಿ ಕಾಟನ್‌ಸೇಲ ಸೊಸೈಟಿಯ ಕಟ್ಟಡದಲ್ಲಿ ಲ್ಯಾಂಡ ಮಾರ್ಗೇಜ ಬ್ಯಾಂಕಿನ ಉದ್ಘಾಟನೆಯು ಉತ್ಸವದಿಂದ ಪ್ರಾರಂಭವಾಯಿತು.

ಬೆಳಗಾವಿ ಜಿಲ್ಹೆಯಲ್ಲಿಯೂ ಇಂಥದೊಂದು ಬ್ಯಾಂಕು ಸ್ಥಾಪಿತವಾಗಿದ್ದು ಅದಕ್ಕೆ ಶ್ರೀ ಗಿಲಗಂಚಿಯವರು ಚೇರಮನ್ನರಾಗಿರುವರು.

ದೇವರ ಸಂಗಡ ಪೃಥ್ವೀ ಪ್ರದಕ್ಷಿಣ.

ಕಲಕತ್ತೆಯ ಮಾರವಾಡಿ ಮಂಡಲದವರು ಸನಾತನ ಹಿಂದುಗಳ ಧರ್ಮ ಭಾವನೆಗೆ ವ್ಯತ್ಯಾಸವಾಗದಂತೆ ಮಡಿ ಮೈಲಿಗೆಯ ವ್ಯವಸ್ಥೆಯುಳ್ಳ ಒಂದು ಹಡಗಿನಿಂದ ಭೂ ಪ್ರದಕ್ಷಿಣೆ ಮಾಡಿಸುವ ಯೋಜನೆ ಮಾಡಿದ್ದಾರೆ. ಇದು ಯುರೋಪ, ಏಶಿಯಾ, ಅಮೇರಿಕಾ ಮೊದಲಾದ ಖಂಡಗಳಲ್ಲಿಯ ಮುಖ್ಯ ಸ್ಥಳಗಳನ್ನೆಲ್ಲ ಸುತ್ತಿಕೊಂಡು ಬರುವದು. ಹಡಗಿನಲ್ಲಿ ಠಾಕುರದ್ವಾರದಂಥ ದೇವಾಲಯವನ್ನು ಮಾಡಿ ವಿಷ್ಣು ಮೂರ್ತಿಯನ್ನೂ ಸ್ಥಾಪಿಸಿರುವರು. ಪ್ರತಿನಿತ್ಯ ಹಡಗಿನಲ್ಲಿ ದೇವರ ಪೂಜೆ ಅರ್ಚನೆಗಳು ನಡೆಯುವವು.

ಕ್ರಿಸ್ತೀಯರಲ್ಲಿ ಭಿನ್ನಭೇದ.

ತ್ರಾವಣಕೋರದ ಶಾಸನ ಸಭೆಯಲ್ಲಿ ಮಿ. ಜಾನ ಜೋಸೆಫ ಎಂಬುವವರು ಒಂದು ಗೊತ್ತುವಳಿಯನ್ನು ತಂದು ಸಂಸ್ಥಾನದಲ್ಲಿಯ ಕೀಳು ಕುಲದ ಕ್ರಿಸ್ತೀಯರನ್ನ ಬೇರೆ ವರ್ಗವೆಂದು ತಿಳಿಯಬೇಕೆಂದು ಹೇಳಿದರು. ಪೂರ್ವ ಧರ್ಮದ ಜಾತಿಭೇದವು ಕ್ರಿಸ್ತೀಯರಲ್ಲಿ ಹಾಗೇ ಉಳಿಯುವದೆಂದೂ ಹಾಗೂ ಈ ಬೇರೆ ವರ್ಗವನ್ನು ಕಲ್ಪಿಸಲಿಕ್ಕೆ ಚರ್ಚದ ಅಧಿಕಾರಿಗಳಾದ ಪಾದ್ರಿಗಳ ಸಮ್ಮತಿಯಿದೆಯೆಂದೂ ಪ್ರತಿಪಾದಿಸಿದರು.

ಇದು ಕಾದಿಡುವ ಪತ್ರಿಕೆ.

ಓದಿ

ಕಾರಡಾಣಿ ಕಟ್ಟಲು ಕೊಟ್ಟುಬಿಡುವ ಪತ್ರಿಕೆಯಲ್ಲ!

ಅದೇಕೆ?

ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳ ಮಹತ್ವದ ಲೇಖಮಾಲೆಗಳು ಪ್ರಕಟವಾಗುತ್ತವೆ.

ಕನ್ನಡ ಭಾಷೆಯಲ್ಲಿ ಇಂಥ ಲೇಖನಗಳೇ ವಿರಳ.
ಓದಿ ಮನನ ಮಾಡಲು ಮೊದಲೇ ಕಾದಿಟ್ಟುಕೊಳ್ಳಿರಿ.

ಆಮೇಲೆ

ಮರುಗಬೇಡಿರಿ.

—ಮ್ಯಾನೇಜರ್.

ಪ್ರಪಂಚ ಸಂಚಾರ.

ಬಾಯಿಬಲ್ಲು ಇವರು ಎಂದಿನಿಂದ ಪ್ರಾರಂಭಿಸಿದರು?

ಮಹಾ ಯುದ್ಧದ ಕಾಲಕ್ಕೆ ಬ್ರಿಟನ್ನದ ಮುಖ್ಯ ಮಂತ್ರಿಗಳಾಗಿ ಅಮೋಘವಾದ ಕಾರ್ಯವನ್ನು ಮಾಡಿದ ಮಿ. ಲಾಯಿಡ ಜಾರ್ಜರವರು ಈಗ ಒಂದು ನೂತನ ಧರ್ಮವನ್ನು ಪ್ರಾರಂಭಿಸಿದ್ದಾರೆ. ಯುದ್ಧವನ್ನು ಮಾಡಕೂಡದು; ಅದು ಧರ್ಮಕ್ಕೆ ವಿರೋಧವಾದುದು ಎಂದು ಅವರು ಪ್ರಚಾರ ಮಾಡಹತ್ತಿದ್ದಾರೆ. ಈ ಬಗ್ಗೆ ಇಂಗ್ಲಂಡದ ಪ್ರಸಿದ್ಧ ತತ್ವಜ್ಞಾನಿಗಳಾದ ಮಿ. ಬರ್ಟ್ರ್ಯಾಂಡ ರಸೆಲ್‌ರವರು ಹೀಗೆ ಬರೆದಿರುವರು— ಲಾಯಿಡ ಜಾರ್ಜರ ಈ ಹೊಸ ವಿಧಾನವು ಮುಖ್ಯವಾಗಿ, "ಯುದ್ಧವು ಕ್ರಿಸ್ತೀಯತ್ವಕ್ಕೆ ವಿರೋಧವಾದುದು— ಯುದ್ಧವು ಮಾನವ ಸಹೋದರತ್ವಕ್ಕೆ ವಿಘಾತಕವಾದುದು" ಎಂಬ ಬಾಯಿಬಲ್ಲಿನಲ್ಲಿಯ ಉದ್ಗಾರಗಳನ್ನು ನೋಡಿದರೆ ಇವರು ಬಾಯಿಬಲ್ ಎಂದಿನಿಂದ ಓದಲು ಪ್ರಾರಂಭಿಸಿದರೆಂಬುದು ಸೋಜಿಗವಾಗಿದೆ. ಮಹಾಯುದ್ಧದ ಕಾಲಕ್ಕೆ ಇವರೇ ಅಲ್ಲವೆ? ಯುದ್ಧವು ಬೇಡವೆಂದವರನ್ನು ಸೆರೆಮನೆಗೆ ಕಳುಹಿಸುತ್ತಿದ್ದವರು? ಈಗ ಬಾಯಿಬಲ್ ಓದಲು ಎಂದಿನಿಂದ ಪ್ರಾರಂಭಿಸಿದರು? ಇವರು ಒಮ್ಮೆ ಭಾಷಣ ಮಾಡುವಾಗ್ಗೆ—"ಚೀನದಲ್ಲಿಯ ಒಬ್ಬ ಸಂತರು ಯುದ್ಧ ಮಾಡುವದು ಪಾಪವೆಂದು ಹೇಳಲು ಚೀನಿ ಸೈನಿಕರೆಲ್ಲ ತಮ್ಮ ಶಸ್ತ್ರಗಳನ್ನು ಕೆಳಗಿಟ್ಟರು. ಬಾಯಿಬಲ್ಲೂ ಯುದ್ಧ ಮಾಡಬೇಡವೆಂದೇ ಬೋಧಿಸುತ್ತದೆ. ಆದರೆ ಏಸುವಿನ ಭಕ್ತರು ಅದರಂತೆ ವರ್ತಿಸುವದಿಲ್ಲವಲ್ಲ." ಎಂದು ಕಳವಳಪಟ್ಟರು.

ಈ ಹೊಸ ಯುಗದ ಕಾರಣವನ್ನು ಜನರು ತರ್ಕಿಸದೆ ಬಿಟ್ಟಿಲ್ಲ. ಮುಂದೆ ಬರಲಿರುವ ಶಾಸನ ಸಭೆಗಳ ಚುನಾವಣೆಗಾಗಿ ನಿಲ್ಲುವ ಉದ್ದೇಶದಿಂದ ಈ ವೃದ್ಧ ಮುತ್ಸದ್ದಿಗಳು ಈ ಸೋಗು ಹಾಕಿರುವರೆಂದು ಊಹಿಸಲಾಗಿದೆ. ಮಿ. ರಸೆಲ್‌ರು ಮಾತ್ರ ಪ್ರಶ್ನೆಗೆ ಉತ್ತರ ಕೊಡಬೇಕೆಂದು ಮಿ. ಲಾಯಿಡ ಜಾರ್ಜರಿಗೆ ಆಹ್ವಾನಿಸಿದ್ದಾರೆ.

ಜಪಾನಿ ಸೈನ್ಯಾಧಿಕಾರಿಯ ಕೊಲೆ.

ಕಳೆದ ೧೨ ನೆಯ ತಾರೀಖಿನ ದಿವಸ ಜಪಾನದ ರಾಜಧಾನಿಯಾದ ಟೋಕಿಯೊ ಪಟ್ಟಣದಲ್ಲಿ ಯುದ್ಧಮಂತ್ರಿಯ ಕಚೇರಿಯಲ್ಲಿ ಮೇಜರ ಜನರಲ್ ನಾಗಾಟಾ ಇವರು ಒಬ್ಬ ಕರ್ನಲ್ಲನ ಸಂಗಡ ಮಾತಾಡುತ್ತಿರುವಾಗ ಇಬ್ಬರಲ್ಲಿಯೂ ಮಾತಿಗೆಮಾತು ಬೆಳೆದು ಕರ್ನಲ್ಲನು ತನ್ನ ಕತ್ತಿ ಹಿರಿದು ಮಿ. ನಾಗಾಟಾ ಇವರನ್ನು ಕೊಂದುಹಾಕಿದನು.

ನೀವು ಬೆನ್ನು ತಿರುಗಿಸಿದ ಕೂಡಲೆ ನಮ್ಮ ಜಗಳ.

ಬ್ಯಾ. ಜಯಕರರು ಇಂಗ್ಲಂಡದಲ್ಲಿಯ ಒಬ್ಬ ಮುತ್ಸದ್ದಿಗೆ ಹೀಗೆ ಕೇಳಿದರಂತೆ—"ನಿಮ್ಮಲ್ಲಿ ಎಂದಾದರೂ ಪಕ್ಷಭೇದಗಳು ಜಗಳಗಳು ಉಂಟಾಗುತ್ತವೆಯೆ? ಇಕೋ ನೋಡಿರಿ; ನಮ್ಮ ಹಿಂದುಸ್ಥಾನದಲ್ಲಿ ರಾಜಕೀಯ ವಿಷಯದಲ್ಲಿ ಇಂತಿಷ್ಟು ಭಿನ್ನಾಭಿಪ್ರಾಯಗಳಿವೆ." ಅದಕ್ಕೆ ಆ ಮುತ್ಸದ್ದಿಯು ಹೀಗೆ ಉತ್ತರ ಕೊಟ್ಟನು. "ನಾವು ಜಗಳಾಡುವದಿಲ್ಲವೆಂತಲ್ಲ. ನಮ್ಮಲ್ಲಿ ಮತಬೇಧವಿಲ್ಲವೆಂತಲೂ ಅಲ್ಲ. ಆದರೆ ನೀವು ಇಲ್ಲಿರುವ ವರೆಗೆ ಜಗಳ ಮತಭೇದಗಳಿಗೆ ಆಸ್ಪದವಿಲ್ಲ. ನೀವು ಹಿಂದುಸ್ಥಾನದ ಕಡೆಗೆ ಹೊರಳಿದ ಕೂಡಲೇ ನಮ್ಮ ಜಗಳಗಳು ಪ್ರಾರಂಭವಾಗುವವು."

ದೇಶದ ಮಾನವೆಂಬುದು ಇದರಲ್ಲಿದೆ. ಪರದೇಶಸ್ಥರ ಮುಂದೆ ಮತ, ಕಲಹಗಳನ್ನು ತೋರಿಸಿದರೆ ದೇಶಕ್ಕೆ ಎಂಥ ಅಪಮಾನವೆಂಬುದನ್ನು ತಿಳಿದಾದರೂ ಹಿಂದೀಯರು ಒಟ್ಟಾರೆ ವರ್ತಿಸುವರೆ?

ಚೀನದ ರಾಜ್ಯಭಾರವು ಅಲ್ಲಾಡಹತ್ತಿದೆ.

ಚೀನ ಸರಕಾರದ ಯುದ್ಧಮಂತ್ರಿ, ರೇಲ್ವೆಮಂತ್ರಿ ಮತ್ತು ಉದ್ಯೋಗ ಶಾಖೆಯ ಮಂತ್ರಿಗಳು ತಮ್ಮ ಕೆಲಸವನ್ನು ಒಮ್ಮೆಲೆ ಬಿಟ್ಟುಕೊಟ್ಟದ್ದರಿಂದ ಚೀನದ ಮಂತ್ರಿಮಂಡಲವು ಅಸ್ಥಿರವಾಗಿದೆ. ಚೀನ ಮತ್ತು ಜಪಾನದಲ್ಲಿ ಸಂಧಾನವನ್ನುಂಟುಮಾಡಿದ ವಾಂಗ ಚೀನ-ವಿ ಎಂಬ ಮುಖ್ಯ ಮಂತ್ರಿಗಳಿಗೆ ನೀವೇ ಸಕಲ ಹೊಣೆಗಾರಿಕೆಯನ್ನು ಹೊರಬೇಕೆಂದು ಬಿನ್ನವಿಸಿಕೊಂಡಿದ್ದಾರೆ.

ಸಯಾಮದ ರೀಜಂಟರ ಮರಣ.

ಸಯಾಮದ ಪೂರ್ವದ ರಾಜರಾದ ರಾಜಾಪ್ರಜಾದೀಪಕ ಇವರು ಸಿಂಹಾಸನವನ್ನು ಬಿಟ್ಟುಕೊಟ್ಟು ಯುರೋಪದಲ್ಲಿಯೇ ವಾಸಮಾಡಹತ್ತಿದ್ದಾರಷ್ಟೆ. ಅವರ ತರುವಾಯ ಚಿಕ್ಕ ರಾಜಪುತ್ರ ಆನಂದ ಇವರನ್ನು ಪಟ್ಟಕ್ಕೆ ಕುಳ್ಳಿರಿಸಲಾಗಿದೆ. ಅವರಿನ್ನೂ ಚಿಕ್ಕವರಿರುವುದರಿಂದ ಅವರ ಚಿಗಪ್ಪನಾದ ಪ್ರಿನ್ಸ ಅಲ್ವಲನ್ ಇವರೇ ರೀಜಂಟರಾಗಿದ್ದರು. ಇವರು ಕಳೆದ ೧೨ ನೆಯ ತಾರೀಖಿನ ದಿವಸ ಮೃತಪಟ್ಟದ್ದರಿಂದ ಪ್ರಜೆಗಳು ಪೂರ್ವದ ರಾಜ ಪ್ರಜಾದೀಪಕರನ್ನೇ ಕರೆಯಿಸಿಕೊಳ್ಳುವರೊ ಹೇಗೆ ನೋಡಬೇಕು.

ಗ್ಯಾರಂಟಿಯಾದ

ಬೀಜಗಳು ಮತ್ತು ಸಸಿಗಳು.

	ರೂ.	ಆ.	ಪೈ.
೧೨ ಪೊಟ್ಟಣ ರಖಂವಾರಿ ಹೂವಿನ ಬೀಜಗಳು	೧	೮	೦
೧೨ ,, ,, ನಾಟಿ ತರಕಾರಿ ಬೀಜಗಳು	೧	೪	೦
೧೨ ,, — ,, ಇಂಗ್ಲೀಷ — ,,	೨	೦	೦
೧೨ ಜಾತಿ ಗುಲಾಬಿ ಸೊಸಿಗಳು—	೪	೦	೦
೧೨ ,,—ಕಲಮಿ ಮಾವಿನ ಸೊಸಿಗಳು— ೬ ರಿಂದ	೯	೦	೦
೧೨ ,,—ಕಿತ್ತಲೆ. ನಿಂಬೆ, ಪೇರಲ, ಸೇಬು, ಪನ್ನೇರಳ, ದಾಳಿಂಬೆ, ಚಕ್ಕೋತ, ಪೀಚಸ್, ಮರಸೇಬು ಮೊದಲಾದವು	೫	೦	೦
೧೨ ,, ದ್ರಾಕ್ಷಿ, ಲಕ್ಕೋಟ, ರಾಜಪುರಿ, ಪೊಪಾಯ, ಅಂಜೂರ, ಸೀತಾಫಲ	೩	೦	೦
೧೨ ,, ಇತರ ಪುಷ್ಪ ಗಿಡಗಳು—	೩	೦	೦

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ದೇವಪ್ಪ ಅಂಡ್ ಸನ್

ಲಾಲ್‌ಬಾಗ್ ರೋಡು, ಬೆಂಗಳೂರು ಸಿಟಿ.

ವಿವಿಧ ವಿಷಯ.

ಮಂಗನ ಬುದ್ಧಿ ಕೌಶಲ್ಯ!

ಮಂಗನಿಂದಲೇ ಮನುಷ್ಯನ ಅವತಾರವಾಯಿತೆಂದು ಸುಪ್ರಸಿದ್ಧ ತತ್ವವಿಶಾರದ ಡಾರ್ವಿನ್ ಸಾಹೇಬನ ಸಿದ್ಧಾಂತವಷ್ಟೆ. ಮನುಷ್ಯ ಮತ್ತು ಮಂಗನಲ್ಲಿ ಕಂಡುಬರುವ ದೇಹದ ಏಕರಚನೆ ಸ್ವಭಾವಸಾಮ್ಯ ಮೊದಲಾದವುಗಳಿಂದ ಈ ಸಿದ್ಧಾಂತವು ಬಲಪಡುತ್ತದೆ. ಉದಾಹರಣಾರ್ಥವಾಗಿ ಮುಂಬಯಿಯಲ್ಲಿ ಮಾತುಂಗಾ ಜಿ. ಐ. ಪಿ. ರೇಲ್ವೆ ಕಾರ್ಯಾಲಯದ ಹತ್ತಿರ ಒಂದು ಮಂಗವಿದೆ. ಅದು ಸೇತುವೆಯ ಮೇಲೆ ಬರ ಹೋಗುವ ಜನರ ಮೇಲೆ ದೃಷ್ಟಿಯಿಟ್ಟು ಯಾರಾದರೂ ಮಿಠಾಯಿ ಮುಂತಾದ ತಿಂಬುಂಬುವ ವಸ್ತುಗಳನ್ನು ಒಯ್ಯುತ್ತಿದ್ದರೆ ಅವರನ್ನು ಅಡ್ಡಗಟ್ಟಿ ಭೀಕರ ಮುದ್ರೆಯನ್ನು ತೋರಿಸುವದು. ಅವರು ಏನಾದರೂ ಸ್ವಲ್ಪ ಹಾಕಿದಲ್ಲಿ ತೆಗೆದುಕೊಂಡು ಬಿಟ್ಟು ಬಿಡುವದು. ಯಾರಾದರೂ ದುಡ್ಡು, ಪೈಗಳನ್ನು ಕೊಟ್ಟರೆ ಅವನ್ನು ಅದು ತನ್ನ ಪಾಲಕನಾದ ಒಬ್ಬ ಸಾಧುವಿಗೆ ಕೊಡುವದು. ಏನೂ ಇಲ್ಲದ ಜನರನ್ನು ಅದು ಪೀಡಿಸುವದಿಲ್ಲ.

ನಾಣ್ಯಗಳು ತನಗಿರದಿದ್ದರೂ ತನ್ನ ಸ್ವಾಮಿಗಾದರೂ ಉಪಯುಕ್ತವಾಗಿರುವವೆಂದು ತಿಳಿದು ಅವುಗಳನ್ನು ಎತ್ತಿ ಅವನಿಗೆ ಕೊಡುವದು. ಮಂಗನ ಬುದ್ಧಿಯಲ್ಲಿ ಹೆಚ್ಚು ಸಂಸ್ಕಾರವಾಗಿರಬೇಕೆಂಬುದು ಹೊಳೆಯದೇ ಇರಲಾರದು. ಸಂಸ್ಕಾರ ಬಲದಿಂದ ಪರಿಸ್ಥಿತಿಗೆ ಅನುಸಾರವಾಗಿ ಈ ಲಕ್ಷಾವಧಿ ವರ್ಷಗಳ ಅವಧಿಯಲ್ಲಿ ಮಂಗನೇ ಮನುಷ್ಯನಾದನೆಂದು ನಿರ್ಣಯಿಸಿದುದು ಯುಕ್ತವೇ ಎಂದೆನಿಸುವದಿಲ್ಲವೆ ?

ಮಯಾಸುರ ಸೃಷ್ಟಿ.

ಯಾವುದೊಂದು ಅರಣ್ಯದಲ್ಲಿ ಒಂದು ಸುಂದರ ಪಟ್ಟಣ ಕೂಡಲೆ ನಿರ್ಮಾಣವಾಗಬೇಕಾದರೆ ಅದು ದೇವ ಶಿಲ್ಪಿಯಾದ ಮಯಾಸುರನ ಕಾರ್ಯವೆಂದು ಪುರಾಣಗಳ ಹೇಳಿಕೆ. ಅಂದು ಮೇಲೆ ಸ್ವರ್ಗಲೋಕದ ಜನರು ಈ ಕಾರ್ಯ ಮಾಡಿ ತೋರಿಸಿದ್ದರೆ ಇಂದು ಕೆಳಗೆ ಪಾತಾಳಲೋಕದ ನಿವಾಸಿಗಳು ಈ ಕಾರ್ಯವನ್ನು ಮಾಡಿ ತೋರಿಸುತ್ತಾರೆ.

ನೀವು ಎಲ್ಲಿಯಾದರೂ ಒಂದು ಮನೆಯನ್ನು ಕಟ್ಟಿಸಬೇಕಾದರೆ ಕಬ್ಬಿಣ ಕಟ್ಟಿಗೆ ಕೊಳ್ಳುವ ಅಗತ್ಯವಿಲ್ಲ. ನೀವು ಬಡಿಗ ಕಂಬಾರನನ್ನು ಕೂಡಿಸುವ ಅವಶ್ಯವಿಲ್ಲ. ಕೂಡಲೆ American House In Newyork City ಎಂಬ ಕಂಪನಿಗೆ ಬರೆಯಿರಿ. ಕ್ಯಾಟಲಾಗನ್ನು ಪರಿಶೀಲಿಸಿ ನಿಮಗೆ ಎಂಥ, ಎಷ್ಟು ಆಕಾರದ, ಎಷ್ಟು ಸೌಕರ್ಯದ ಮನೆ ಬೇಕೆಂಬುದಕ್ಕೆ ಆರ್ಡರು ಕೊಟ್ಟು ಬಿಡಿ. ಒಂದೆರಡು ದಿನಗಳಲ್ಲಿ ಮನೆಯು ನಿಮ್ಮಲ್ಲಿಗೆ ಕಳಿಸಲ್ಪಡುವದು. ಒಬ್ಬಿಬ್ಬರು ತಜ್ಞರು ನಾಲ್ಕಾರು ಕೂಲಿ ಜನರ ಸಹಾಯದಿಂದ ಒಂದೆರಡು ದಿನಗಳಲ್ಲಿಯೇ ಮನೆಯನ್ನು ಮಾಡಿ ನಿಲ್ಲಿಸುವರು. ಪುನಃ ನೀವು ಬೇರೆ ಕಡೆಗೆ ಹೋಗಬೇಕಾದರೆ ನಿಮ್ಮ ಮನೆಯನ್ನೂ ಸಂಗಡ ಒಯ್ಯಬಹುದು.

ಮನೆಗಳೆಂದರೆ ಪಾರಿವಾಳದ ಮನೆಗಳೆಂದು ತಿಳಿಯಬೇಡಿರಿ. ಸದ್ಯದ ತಾರೀಖಿನ ವರೆಗೆ ಸಿದ್ಧವಾದ ಸಕಲ ಸೌಕರ್ಯಗಳಿಂದ ಸುಸಜ್ಜಿತವಾದ ಮನೆಗಳು. ಅವುಗಳಲ್ಲಿ ನೀರಿನ ನಳವುಂಟು. ವಿದ್ಯುತ್ತಿನ ತಂತಿಗಳು ಕೂಡ್ರಿಸಲ್ಪಟ್ಟಿವೆ. ದೀವಿಗೆಗಳು ಮಧ್ಯದಲ್ಲಿರದೆ ಗೋಡೆಗಳಿಗೆ ಕೂಡ್ರಿಸಲ್ಪಟ್ಟಿರುತ್ತವೆ. ವಿದ್ಯುತ್ತಿನ ಬೀಸಣಿಕೆಗಳು, ರಂಜನೆಗಾಗಿ ರೇಡಿಯೊ, ಬಚ್ಚಲ ಗೃಹ, ಬಿಸಿನೀರು, ತಣ್ಣೀರು, ತುಷಾರ ಸ್ನಾನದ (Shower Bath) ಅನುಕೂಲತೆಗಳು, ಅಡಿಗೆ ಮಾಡುವ ಸ್ಟೋವ್, ಒಂದೆರಡು ದಿನಗಳಮಟ್ಟಿಗೆ ಧಾನ್ಯಫಲಗಳು, ಪಾತ್ರೆ ತೊಳೆಯುವ ಸಾಮಗ್ರಿಗಳು, ಬಟ್ಟೆಗಳನ್ನು ತೊಳೆಯುವ, ಇಸ್ತ್ರೀ ಮಾಡುವ ಸಕಲ ಸಲಕರಣೆಗಳು. ಎಲ್ಲವೂ ಸಿದ್ಧವಿರುವವು. ಅಡಿಗೆ ಮನೆ, ಬಚ್ಚಲ ಮನೆ ಮತ್ತು ನಾಲ್ಕು ಕೋಣೆಗಳುಳ್ಳ ಒಂದು ಸಿದ್ಧವಾದ ಮನೆಗೆ ೭೬೦ ಪೌಂಡು ಬೆಲೆ ಬೀಳುತ್ತದೆ. ಇವುಗಳನ್ನೂ ಕಂತಿನಿಂದ ಅಂದರೆ ಪ್ರತಿ ತಿಂಗಳಿಗೆ ೭ ಪೌಂಡು ೫ ಶಿಲಿಂಗುಗಳಂತೆ ೧೫ ವರುಷಗಳ ವರೆಗೆ ಕೊಟ್ಟು ಮುಟ್ಟಿಸಬಹುದು. ಈ ಮಧ್ಯದಲ್ಲಿ ಮನೆಗಾಗಲಿ ಮನೆಯ ಒಡೆಯನಿಗಾಗಲಿ ಅಪಾಯ ಸಂಭವಿಸಿದಲ್ಲಿ ಕ್ರಯವನ್ನು ಮುಟ್ಟಿಸುವದು ತೊಂದರೆಯಾಗಬಾರದೆಂದು ವಿಮೆಯನ್ನು ಇಳಿಸಲಾಗಿರುತ್ತದೆ. ಆದ್ದರಿಂದ ಅವರಿಗೆ ಹಣದ ಭಯವಿಲ್ಲ.

ಈ ಮನೆಗಳಿಗೆ ಮಣ್ಣು ಕಲ್ಲಿನ ಗೋಡೆಗಳಿಲ್ಲ. ತಳಗಳನ್ನೂ ಆಳವಾಗಿ ತೆಗೆಯುವ ಆವಶ್ಯಕತೆಯಿಲ್ಲ. ಸಿಮೆಂಟ್, ಆಸ್ಬೆಸ್ಟಾಸ್ ಮತ್ತು ಕಟ್ಟಿಗೆಯ ತಗಡುಗಳಿಂದ ಗೋಡೆಗಳನ್ನು ಮಾಡಿರುತ್ತಾರೆ. ತಳಗಳಿಲ್ಲದಿದ್ದರೂ ಈ ಮನೆಗಳು ಬಹು ಭದ್ರವಾಗಿರುತ್ತವೆ. ಗಂಟೆಗೆ ೧೨೦ ಮೈಲು ವೇಗದಿಂದ ಬಿರುಗಾಳಿ ಬೀಸಿದರೂ ಈ ಮನೆಗಳು ಕಿತ್ತು ಬೀಳುವದಿಲ್ಲ.

ಈ ಪ್ರಕಾರ ಪಟ್ಟಣಗಳ ಮನೆಗಳೆಲ್ಲ ಒಂದು ಪಟ್ಟಣದಿಂದ ಮತ್ತೊಂದು ಪಟ್ಟಣಕ್ಕೆ ಹಾರಹತ್ತಿದರೆ ಪೌರಾಣಿಕ ಮಯ ಸೃಷ್ಟಿಯು ಪುನಃ ಭೂಮಿಗೆ ಬಂದಂತಾಯಿತಲ್ಲವೆ?

ವೈಮಾನಿಕ ವಿದ್ಯಾ ಕೇಂದ್ರ.

ಹಿಂದೀ ತರುಣರಿಗೆ ವಿಮಾನ ವಿದ್ಯೆಯನ್ನು ಕಲಿಸಲು ದಿಲ್ಲಿಯಲ್ಲಿ 'ದ ಏರೊ ನಾಟಿಕಲ್ ಸೆಂಟರ ಆಫ ಇಂಡಿಯಾ' ಎಂಬ ಹೆಸರಿನಿಂದ ಸ್ಥಾಪಿತವಾದ ಸಂಸ್ಥೆಯು ಬರುವ ಅಕ್ಟೋಬರ ತಿಂಗಳಿನಲ್ಲಿ ಪ್ರಾರಂಭಿಸಲ್ಪಡುವದು. ಈ ಬಗ್ಗೆ ಕ್ಯಾ ಏಡನ್ ಇವರು ಮುಂಬಯಿ, ಕಲಕತ್ತಾ ಪಟ್ಟಣಗಳಲ್ಲಿ ಸಂಚರಿಸಿ ಪೂರ್ವ ಸಿದ್ಧತೆ ಮಾಡಹತ್ತಿದ್ದಾರೆ.

ಈ ಸಂಸ್ಥೆಯಲ್ಲಿ ಪ್ರಾರಂಭಕ್ಕೆ ೮೦ ಜನ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲಾಗುವದು. ಇಲ್ಲಿಯ ವರೆಗೆ ಇಂಗ್ಲಂಡದಲ್ಲಿ ಈ ಶಿಕ್ಷಣವನ್ನು ಸಂಪಾದಿಸಬೇಕಾಗುತ್ತಿತ್ತು. ಆದರೆ ಅದರ ಅರ್ಧದಷ್ಟು ವೆಚ್ಚದಲ್ಲಿಯೇ ಇಲ್ಲಿ ಶಿಕ್ಷಣ ದೊರೆಯುವದು. ಇದಲ್ಲದೆ ನಿಷ್ಣಾತರಾದ ವೈಮಾನಿಕರಿಂದ ಹಿಂದೀ ಪರಿಸ್ಥಿತಿಗೆ ಅನುರೂಪವಾಗಿ ಶಿಕ್ಷಣ ದೊರೆಯುವದು. ಇಲ್ಲಿ ಯಂತ್ರ ಶಾಸ್ತ್ರವನ್ನೂ ಆಮೂಲಾಗ್ರವಾಗಿ ಕಲಿಸಲ್ಪಡುವುದರಿಂದ ವಿದ್ಯಾರ್ಥಿಗಳು ತಮ್ಮ ಯಾಂತ್ರಿಕ ವಿದ್ಯೆಯನ್ನು ವೈಮಾನಕ್ಷೇತ್ರದಲ್ಲಿಯಷ್ಟೇ ಅಲ್ಲದೆ ಉಳಿದ ಕ್ಷೇತ್ರಗಳಲ್ಲಿಯೂ ಅನ್ವಯಿಸಲು ಅನುಕೂಲವಾಗುವದು. ರಾತ್ರಿಯಲ್ಲಿ ವಿಮಾನ ಹಾರಿಸುವ ಉಚ್ಚ ಶಿಕ್ಷಣವನ್ನೂ ಈ ಸಂಸ್ಥೆಯಲ್ಲಿ ಕೊಡಲಾಗುವದು.

ಪ್ರಾರಂಭಕ್ಕೆ ಇಲ್ಲಿ ೮೦ ವಿದ್ಯಾರ್ಥಿಗಳಮಟ್ಟಿಗೆ ಅನುಕೂಲ ಮಾಡಿ ಮುಂದೆ ಪ್ರತಿ ವರ್ಷ ೩೦ ವಿದ್ಯಾರ್ಥಿಗಳಂತೆ ತೆಗೆದುಕೊಳ್ಳಲಾಗುವದು.

ಜಾಣರ ದೇಶದಲ್ಲಿ...

ಅಮೇರಿಕಾ ಖಂಡದಲ್ಲಿಯ ಸಂಯುಕ್ತ ಸಂಸ್ಥಾನಗಳ ರಾಷ್ಟ್ರವು ಸುಧಾರಣೆಯಲ್ಲಿ ಬಹು ಮುಂದುವರಿದಿದೆ. ಇದಕ್ಕೆ ಅದರ ವಿಜ್ಞಾನ ಕೌಶಲ್ಯವೇ ಕಾರಣವಾಗಿದೆ. ಅಮೇರಿಕನ್ನರು ಪ್ರತಿಯೊಂದು ವಿಷಯದಲ್ಲಿಯೂ ಪ್ರಯೋಗವನ್ನಾರಂಭಿಸಿ ವಿಶೇಷವಾದ ಪ್ರಗತಿಯನ್ನು ಪಡೆದಿದ್ದಾರೆ. ಮಳೆಯಿಲ್ಲದ ಕ್ಷೇತ್ರಗಳಲ್ಲಿ ವಿಜ್ಞಾನಶಾಸ್ತ್ರದ ಸಹಾಯದಿಂದ ತಮಗೆ ಸಾಕಷ್ಟು ಮಳೆಯನ್ನು ಕರೆದುಕೊಳ್ಳುವರು. ಬೆಳೆಗಳಿಗೆ ಹುಳಹುಪ್ಪಡಿಗಳು ತಗಲಿದರೆ ಅವುಗಳನ್ನು ನಿವಾರಣೆ ಮಾಡುವ ಔಷಧಿಗಳನ್ನೂ ಕಂಡುಹಿಡಿದಿರುವರು. ಉತ್ತಮವಾದ ಗೊಬ್ಬರವನ್ನು ಸಿದ್ಧಪಡಿಸಿ ಬಂಜೆ ಭೂಮಿಯು ಸಹ ವಿಶೇಷವಾದ ಬೆಳೆಯನ್ನು ಕೊಡುವಂತೆ ಮಾಡಿಕೊಂಡಿದ್ದಾರೆ, ಹೀಗಾಗಿ ಧಾನ್ಯಗಳೂ, ಹಣ್ಣು ಕಾಯಿಗಳೂ ಅಲ್ಲಿ ವಿಶೇಷವಾಗಿ ಬೆಳೆಯುತ್ತವೆ. ಗೋದಿಯಂತೂ ವಿಪುಲವಾಗಿ ಬೆಳೆಯುತ್ತದೆ.

ಅಮೇರಿಕನ್ನರು ಈ ಪ್ರಕಾರ ಸುಧಾರಣೆಯನ್ನುಂಟುಮಾಡಿದುದು ಅವರ ಬುದ್ಧಿಶಕ್ತಿಯ ಬಲದಿಂದಲೇ. ಪ್ರತಿಯೊಬ್ಬ ಮನುಷ್ಯನು ತನ್ನ ಸುಖ ಸೌಕರ್ಯಕ್ಕಾಗಿ ತನ್ನ ಬುದ್ಧಿಯನ್ನು ಉಪಯೋಗಿಸುವದು ಸಹಜವೇ ಆಗಿದೆ. ಆದರೆ ಜಗತ್ತಿನ ವ್ಯವಹಾರವು ವಿಚಿತ್ರವಾಗಿದೆ. ಈಗ ಅಮೇರಿಕನ್ನರು ಆಚರಿಸುತ್ತಿರುವ ವಿಚಿತ್ರ ವರ್ತನೆಯನ್ನು ನೋಡಿದರೆ ನಮ್ಮಲ್ಲಿಯ ಅತಿ ದಡ್ಡ ಮನುಷ್ಯನೂ ಅವರಿಗೆ ದಡ್ಡರೆಂಬ ಹೆಸರು ಕೊಡದೆ ಇರಲಾರನು.

ಅಮೇರಿಕಾ ದೇಶದಲ್ಲಿ ಪೊಟೆಮ್ಯಾಕ್ ಎಂಬ ನದಿ ಪರ್ವತ ಶ್ರೇಣಿಗಳ ಮಧ್ಯದಲ್ಲಿ ಭರದಿಂದ ಹರಿಯುತ್ತಲಿದೆ. ದಂಡೆಯ ಮೇಲೆ ಒಂದು ಕಡೆ ಎತ್ತರವಾದ ಬಂಡೆಗಲ್ಲಿನ ಮೇಲೆ ಹತ್ತಾರು ಡಬ್ಬಿಗಳನ್ನು ಎಳೆದುಕೊಂಡು ಒಂದು ಉಗಿಬಂಡಿ ಬಂದು ನಿಂತಿತು. ಕೂಡಲೆ ಕೂಲಿಗಳು ಇಳಿದು ಡಬ್ಬಿಗಳಲ್ಲಿ ತುಂಬಿದ ಕಲ್ಲಂಗಡಿ ಹಣ್ಣುಗಳನ್ನು ಸಲಿಕೆಗಳಿಂದ ನದಿಯಲ್ಲಿ ಎಳೆದು ಹಾಕಹತ್ತಿದರು. ಹೀಗೆ ಒಂದರ ಹಿಂದೊಂದು ಉಗಿಬಂಡಿಗಳು ಕ್ರಮವಾಗಿ ಬಂದು ರಾಶಿ ರಾಶಿಯಾಗಿ ಆ ಹಣ್ಣುಗಳನ್ನು ನೀರಿನಲ್ಲಿ ಎಸೆದು ಹೋಗಹತ್ತಿವೆ. ನದಿಯಲ್ಲಿ ಕಲ್ಲಂಗಡಿ ಹಣ್ಣಿನ ಒಂದು ಹಸರು ನಡುಗಡ್ಡೆಯೇ ತೇಲಿ ಹೋಗುತ್ತಿರುವಂತೆ ಕಂಡುಬರುತ್ತಿದೆ. ಇವರಿಗೇನು ಹುಚ್ಚು ಮಾತ್ರ ಹಿಡಿದಿಲ್ಲವಷ್ಟೆ! ಎಷ್ಟು ರುಚಿಕರವಾದ ಹಣ್ಣುಗಳು! ಅವುಗಳನ್ನು ನಾಶಪಡಿಸುವದೇಕೆ?

ದಕ್ಷಿಣ ಇಲಿನೋಯಿ (Southern Illinois) ಪ್ರಾಂತ್ಯದಲ್ಲಿ ೧೯೩೦ ನೆಯ ಇಸ್ವಿಯ ಕಾಲಕ್ಕೆ ಸಾವಿರಾರು ಗ್ಯಾಲನ್ ಹಾಲನ್ನು ತಂದು ತಂದು ನದಿಯಲ್ಲಿ ಮತ್ತು ಕೊಳ್ಳ ಕಂದರಗಳಲ್ಲಿ ಸುರುವಿ ಬಿಡಲಾಯಿತು.

೧೯೩೧ ನೆಯ ಇಸ್ವಿಯಲ್ಲಿ ಅಮೇರಿಕನ್ ಒಕ್ಕಲಿಗರಿಗೆ ಕಳ್ಳಿದ್ದಲಿಯನ್ನು ಉರುವಲಕ್ಕೆ ಉಪಯೋಗಿಸಬೇಡಿರಿ. ಅದರ ಬದಲು ಕಾಳುಕಡಿಗಳನ್ನು ಸುಟ್ಟು ಹಾಕಿರಿ ಎಂದು ಉಪದೇಶ ಮಾಡುತ್ತಿದ್ದರು.

ಹೀಗೆಯೇ ಬಟಾಟೆಗಳನ್ನು, ಗೋದಿಗಳನ್ನು ಸುಟ್ಟು ಹಾಕಲಾಗುತ್ತದೆ. ಮೋಟಾರ ಮತ್ತು ಉಗಿಹಡಗುಗಳ ಕಂಪನಿಗಳು ತಮ್ಮ ಸಿದ್ಧವಾದ ಸರಕುಗಳನ್ನು ನಾಶಪಡಿಸುತ್ತಿದ್ದಾರೆ.

ಜಾಣರ ದೇಶದಲ್ಲಿ ಇದೆಂಥ ವಿಚಿತ್ರ ನಡತೆಯು? ಇಂಥ ಉಪಯುಕ್ತ ವಸ್ತುಗಳನ್ನು ಈ ಪ್ರಕಾರವಾಗಿ ನಾಶಪಡಿಸಲು ಇವರಿಗೆ ತಲೆ ಸರಿ ಇರಲಿಕ್ಕಿಲ್ಲವಷ್ಟೆ! ಎಂದು ಯಾರಾದರೂ ಶಂಕಿಸಬಹುದು. ಆದರೆ ಅವರು ಆ ಪ್ರಕಾರ ಮಾಡುವದು ಯಥಾರ್ಥವಾಗಿಯೇ ಇದೆ. ಏಕೆಂದರೆ ಪ್ರತಿಯೊಬ್ಬ ಅಮೇರಿಕನ್ನನ ಹತ್ತಿರ ೩೩೦ ಜನ ಯಂತ್ರ ಗುಲಾಮರಿರುವರೆಂದು ಅವರು ಅಭಿಮಾನದಿಂದ ಹೇಳುತ್ತಾರೆ. ಅಮೇರಿಕೆಯಲ್ಲಿರುವ ಜನ ಸಂಖ್ಯೆ ಮತ್ತು ಯಂತ್ರ ಸಂಖ್ಯೆಗಳ ಪ್ರಮಾಣದ ಮೇಲಿಂದ ಇದು ಸಿದ್ಧವಾಗುತ್ತದೆ. ಇಷ್ಟು ಯಂತ್ರಗಳು ನಿರಂತರವೂ ದುಡಿದು ದುಡಿದು ಹುಟ್ಟುವಳಿಯನ್ನು ವಿಪರೀತವಾಗಿ ಹೆಚ್ಚಿಸಿವೆ. ಇದರಿಂದ ಸಾಮಾನಿನ ಧಾರಣೆಯು ಒಮ್ಮೆಲೇ ಇಳಿದುದರಿಂದ ಕೆಲವರಿಗೆ ಭಯಂಕರ ಹಾನಿಯಾಗುತ್ತದೆ. ಒಬ್ಬನು ಟೊಪ್ಪಿಗೆಯ ಕಾರ್ಯಾಲಯವನ್ನು ತೆರೆದರೆ ಸ್ವಲ್ಪ ದಿವಸಗಳಲ್ಲಿಯೇ ಅವನಿಗೆ ದೊರೆಯುವ ಲಾಭವನ್ನು ಕಂಡು ಇನ್ನು ಕೆಲವರು ಅವೇ ಕಾರ್ಯಾಲಯಗಳನ್ನು ತೆರೆಯುತ್ತಾರೆ. ಕಡೆಗೆ ಅವರಲ್ಲಿ ಪೋಟಾಪೋಟಿ, ಏರಾಟಗಳಾಗಿ ಸ್ವಲ್ಪ ಕಾಲದಲ್ಲಿ ಲಕ್ಷ ಪಟ್ಟು ಸಿದ್ಧವಾದ ಸರಕುಗಳನ್ನು ತಯಾರಿಸುವ ಯಂತ್ರಗಳನ್ನು ಸ್ಥಾಪಿಸುವರು. ಕೂಡಲೆ ಅನೇಕ ಅಂಗಡಿಗಳಲ್ಲಿ ಟೊಪ್ಪಿಗೆಗಳೇ ಕಾಣಿಸಹತ್ತುತ್ತವೆ. ಮಾರಾಟದ ಪ್ರಮಾಣಕ್ಕಿಂತ ಹುಟ್ಟುವಳಿಯ ಪ್ರಮಾಣವು ವಿಶೇಷವಾದುದರಿಂದ ಟೊಪ್ಪಿಗೆಯ ಧಾರಣೆಯು ವಿಶೇಷವಾಗಿ ಇಳಿದು ಹುಟ್ಟುವಳಿಯು ಕಟ್ಟಾಗುತ್ತದೆ. ಯಂತ್ರಗಳು ನಿಲ್ಲಿಸಲ್ಪಡುತ್ತವೆ. ಹಲಕೆಲವು ವರ್ಷಗಳು ಕಳೆದರೂ ಧಾರಣೆ ಏರುವ ಲಕ್ಷಣವಿಲ್ಲ. ಕೋಟ್ಯಾವಧಿ ರೂಪಾಯಿಗಳನ್ನು ವೆಚ್ಚಮಾಡಿ ಸ್ಥಾಪಿಸಿದ ಯಂತ್ರ ಸಾಮುಗ್ರಿಗಳು ಜಂಗು ತಿನ್ನಹತ್ತುತ್ತವೆ. ಅಂದಮೇಲೆ ಕಾರ್ಯಾಲಯದವರು ತಮ್ಮ ಇದ್ದ ಸರಕನ್ನೆಲ್ಲ ನದಿಗೋ ಕಂದರಕ್ಕೋ ಎಸೆದು ಪುನಃ ಸರಕನ್ನು ಸಿದ್ಧಪಡಿಸಲು ಪ್ರಾರಂಭಿಸುತ್ತಾರೆ.

ವಿಜ್ಞಾನಶಾಸ್ತ್ರ ಬಲದಿಂದ ಪಂಚ ಮಹಾಭೂತಗಳನ್ನು ವಶಪಡಿಸಿಕೊಂಡು ಅವುಗಳ ಸಹಾಯದಿಂದ ಅತ್ಯಲ್ಪ ಕಾಲದಲ್ಲಿ ನಯವಾಗಿ ನುಣುಪಾಗಿ ಸರಕುಗಳನ್ನು ಸಿದ್ಧಪಡಿಸುವ ಶಕ್ತಿಯು ಮನುಷ್ಯನಲ್ಲಿದೆ. ಆದರೆ ಈ ಹೊಸದೊಂದು ವಿಪತ್ತನ್ನು ಅವನು ಹೇಗೆ ತಾನೆ ನೀಗಲು ಶಕ್ಯ? ಅತ್ಯಂತ ಪ್ರಯೋಜನಕಾರಿಗಳೆಂದು ಕಂಡು ಬರುವ ಈ ಯಂತ್ರ ರಾಕ್ಷಸಗಳನ್ನು ಅವನು ಬಿಟ್ಟುಕೊಟ್ಟು ತನ್ಮೂಲಕ ತಾನು ಉಂಟು ಮಾಡಿಕೊಂಡಿರುವ ಅನೇಕ ಸೌಕರ್ಯಗಳಿಗೆ ತಿಲಾಂಜಲಿಯನ್ನು ಕೊಟ್ಟು ಅಂಬಲಿ, ಕಂಬಳಿ ಎರಡರಿಂದ ಸಂತುಷ್ಟನಾಗುವಂತೆ ಮಾರ್ಪಡುವದು ಶಕ್ಯವೆ? ಎಂದಿಗೂ ಇಲ್ಲ. ಅಂದಮೇಲೆ ಅಮೇರಿಕೆಯ ಜಾಣರು ಈ ಯಂತ್ರ ಸಮಸ್ಯೆಯನ್ನು ಯಾವ ರೀತಿಯಲ್ಲಿ ಬಿಡಿಸುವರು?

ಕ್ವೇಟಾ ಭೂಕಂಪದ ವಿಚಿತ್ರ ಅನುಭವ!

ಕ್ವೇಟಾದಲ್ಲಿಯ ಒಬ್ಬ ಲೇವಡಿಗಾರನು ಭೂಕಂಪದ ಕಾಲಕ್ಕೆ ಹೂಳಲ್ಪಟ್ಟು ೪೭ ದಿವಸಗಳ ನಂತರ ನೆಲವನ್ನು ಅಗಿಯುವಾಗ್ಗೆ ಜೀವಂತವಿದ್ದುದು ಕಂಡುಬಂತು. ಅಲ್ಲಿಯ ವರೆಗೆ ಅವನಿಗೆ ತಿನ್ನಲಿಕ್ಕೂ ಅನ್ನವೂ ಕುಡಿಯಲಿಕ್ಕೆ ನೀರೂ ಮೈ ಕೈ ಅಲ್ಲಾಡಿಸುವಷ್ಟು ಆಸ್ಪದವೂ ಇದ್ದವಂತೆ.

ಕಾ ಲ ರಾ !

ಕಾ ಲ ರಾ !

ಕಾ ಲ ರಾ ! !

ಅಪೂರ್ವ ಶೋಧ ! ಆಶ್ಚರ್ಯಕರ ಗುಣ ! !

ಕಾಲರಾ ಸಂಜೀವಿನಿ.

ಕಾಲರಾ—

ಇದು ಮಾನವ ಚಿಕಿತ್ಸೆಗೆ ಮೀರಿದ ರೋಗವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ವಿಗಳಿಂದ ಶೋಧವಾಗಿದೆ. ಈ ಸಂಜೀವಿನಿ ಚೂರ್ಣವನ್ನು ಒಂದೇ ಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗುವದು. ಆಗ ನಿಮಗೆ ಖಂಡಿತವಾಗಿಯೂ ಅತ್ಯಾಶ್ಚರ್ಯವೂ ಆನಂದವೂ ಉಂಟಾಗುವವು.

—ಸಂಜೀವಿನಿ.

ಬೆಲೆ—

೧ ರೂ. ೫ ಆ.

ವಿಳಾಸ—

ಪ್ಲೇಗ ಸಂಜೀವಿನಿ ಆಫೀಸ್

ಗುಲಬರ್ಗಾ.

ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಥಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

B. V. Bhumraddi.

ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**

ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, ಮುಂಬಯಿ

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ.

ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್‌ಪ್ರಚುರ ಲೇಖಗಳಿವೆ.

ತ್ವರೆಮಾಡಿರಿ—ಬೆಲೆ ೧ ರೂ.—ತೀರುತ್ತಿವೆ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಷ್ಪ] ವಾ. ಚಂ. ೩-೪-೦ [ಮೇಲೊಂದು ಉಚಿತಪುಷ್ಪ

ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ನಾಲ್ಕನೆಯ ಪುಷ್ಪವಾದ

ಶ್ರೀ. ಹ. ಪಿ. ಜೋಶಿಯವರ

ಇದೀಗ ಹೊರಟಿದೆ] **ರಾಜವಲ್ಲಭ** [ಬೆಲೆ ಹತ್ತು ಆಣೆ.

ಕೀಚಕ ವಧೆ ಕಥೆಯನ್ನು ಆಧರಿಸಿ ಬರೆದ ಹೊಸ ಸಂಗೀತ ನಾಟಕ. ಉಚಿತ ಸಂಭಾಷಣೆ, ಮಿತವಿನೋದ, ಸುರಮ್ಯ ಪದ್ಯ ಮಾಲಿಕೆ.

ಜಯಕರ್ನಾಟಕ ಕಾರ್ಯಾಲಯ
ಧಾರವಾಡ.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸವೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು.
(ಮೈಸೂರು ಸ್ಟೇಟ್)

೫೦೦ ರೂ. ಗಳ ೩ ನೇ ಕ್ಲೇಮು ಸಿಕ್ಕಿತು !!

ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಶ್ಯುಅರನ್ಸ
ಕಂಪನಿ, ಲಿಮಿಟೆಡ್; ಧಾರವಾಡ.

ಇವರಿಗೆ—

ಮಹಾಶಯರೇ,

ಶಂಕರೆಪ್ಪ ಮಲ್ಲಪ್ಪ ಕೂಡ್ಲಂಣನವರ, ಸಾ|| ಧಾರವಾಡ ಇವರು ಮಾಡುವ ಶರಣಾರ್ಥಿಗಳು—

ನಾನು ನಿಮ್ಮ ಕಂಪನಿಯ ಪಾಲಿಸಿದಾರನಿದ್ದೆ. ನನಗೆ ಕೂಸು ಜನನವಾದ ಕೂಡಲೇ ಅದರ ಜನನ ಉತಾರವನ್ನು ನಿಮಗೆ ಕಳಿಸಿಕೊಟ್ಟೆ. ನೀವು ಯಾವ ತೊಂದರೆಯೂ ಇಲ್ಲದೆ ನನಗೆ ೫೦೦ ರೂಪಾಯಿಗಳನ್ನು ಕೊಟ್ಟಿರುತ್ತೀರಿ. ಯಾವತ್ತೂ ನನ್ನ ದೇಶಬಾಂಧವರು ಈ ಕಂಪನಿಯಲ್ಲಿ ವಿಮಾ ಇಳಿಸಿ ಲಾಭಹೊಂದುವರೆಂದು ಆಸಿಸುತ್ತೇನೆ.

ಧಾರವಾಡ
ತಾ|| ೭-೭-೩೫. } (ಸಹಿ) ಶಂಕರೆಪ್ಪ ಮಲ್ಲಪ್ಪ ಕೂಡ್ಲಂಣನವರ

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.



ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891

ಶರಣ ಸಂದೇಶ

The Sharana Sandesh.

ನ್ಯಾಯನಿಷ್ಠುರಿ। ದಾಕ್ಷಿಣ್ಯಪರನಲ್ಲ। ಲೋಕವಿರೋಧಿ। ಶರಣನಾರಿಗೂ ಅಂಜುವವನಲ್ಲ।
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ಶ್ರೀ ! ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವರ್ಗಣಿ:- ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೫.	ಆಲಮಟ್ಟಿ- ಸೋಮವಾರ ತಾರೀಖು ೨೦ ನೆಯ ಜನವರಿ ೧೯೩೬.	ಸಂಚಿಕೆ ೩೧

ಜನಸೇವೆಯೇ ದೇವರ ಸೇವೆ.

ಆದಿಜನರ ಧರ್ಮಾಂತರದ ನಿರ್ಧಾರ!

ಡಾ. ಅಂಬೇಡಕರರ ಭಾಷಣ.

ಮಹಾತ್ಮಾ ಗಾಂಧಿಯವರು

ತಾ. ೧೭ ನೆಯ ದಿನ ಮುಂಬೈಗೆ ಆಗಮಿಸಿದ್ದರು.
ಈ ದಿನ ಅಮದಾಬಾದಕ್ಕೆ ಹೋಗುವವರಿದ್ದಾರೆ.

ಬ್ರಿಟಿಶ್ ರೆಡ್‌ಕ್ರಾಸ್‌ದ ಮೇಲೆ

ಇಟಾಲಿಯವರು ಬಾಂಬು ಎಸೆದರು.
೧೪ ಜನರು ಮೃತಪಟ್ಟರು.
೪೫ ಜನರು ಗಾಯಹೊಂದಿದರು.

ದೇಹವೇ ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL - 587 3:3
Dt. Bijapur, (Karnataka)

ಶಿರಸಿಯಲ್ಲಿ

ಸಿದ್ಧೇಶ್ವರ ತಿಜೋರಿ ಮೇಲೆ ಕಳ್ಳರ ಹಲ್ಲಾ.

ಸಿದ್ಧೇಶ್ವರ ತಿಜೋರಿ ಕಾರಖಾನೆ ಹುಬ್ಬಳ್ಳಿ ಇವರಿಗೆ ಶಿರಸಿಯಿಂದ ಅವರ ತಿಜೋರಿ ಕೊಂಡ ರಾ|| ರಾ|| ಶಿವಬಸಪ್ಪ ಬೆಲ್ಲದ ಇವರಿಂದ ಬಂದ ಪತ್ರ—

ಮೊನ್ನೆ ಮೊನ್ನೆ ನಾವು ತಮ್ಮಲ್ಲಿ (ರೂ. ೩೨೫ ಕ್ಕೆ ೩ ಫೂಟು ಎತ್ತರದ್ದು) ತಿಜೋರಿ ಕೊಂಡದ್ದರಲ್ಲಿ ಮೊನ್ನೆಯೇ ಹೋದ ದೀಪಾವಳಿ ಲಕ್ಷ್ಮೀ ಪೂಜೆಯ ನಿಮಿತ್ಯ ನಮ್ಮ ಮನೆಯಲ್ಲಿಯ ಎಲ್ಲ ದಾಗೀನಗಳನ್ನೂ ವ ರೋಖಡಿ ರೂಪಾಯಿಗಳನ್ನೂ ಇಟ್ಟಿದ್ದೆವು. ಅದೇ ದಿವಸ ರಾತ್ರಿ ಯಾರೋ ಕಳ್ಳರು ನಮ್ಮ ಅಂಗಡಿ ಕೀಲಿ ಮುರಿದು ತಿಜೋರಿ ತೆರೆಯಲಿಕ್ಕೆ ವಡೆಯಲಿಕ್ಕೆ ಹೊಡೆದು ಬಡೆದು ಕಚ್ಚಿ ಹಾಕಿ ಅನೇಕ ತರಹದಿಂದಾ ಪ್ರಯತ್ನ ಮಾಡಿ ನಿರಾಶರಾಗಿ ತಿರುಗಿ ಹೋದದ್ದು ಬೆಳಿಗ್ಗೆ ಗೊತ್ತಾಯಿತು. ತಿಜೋರಿಗೆ ಪೆಟ್ಟುಗಳು ಮಾತ್ರ ಬಹಳ ಬಿದ್ದಿವೆ. ನಾರಿಯು ಬಣ್ಣ ಎಲ್ಲವೂ ಹಾರಿ ಹೋಗಿದೆ. ಬಾಕಿ ತಿಜೋರಿ ಮಾತ್ರ ಏನೂ ಕೆಟ್ಟಿಲ್ಲಾ.

ಸಾರಾಂಶ. ನಾನು ನಿಮ್ಮ ತಿಜೋರಿಯನ್ನೇ ತಕ್ಕ ವೇಳೆಗೆ ಕೊಂಡು ಆಗತಕ್ಕ ಸಾವಿರಾರು ರೂಪಾಯಿಯ ಲುಕ್ಸಾನವನ್ನು ನಿಮ್ಮಿಂದಲೇ ತಿರುಗಿ ಲಾಭ ಹೊಂದಿದಂತಾಗಿದೆ. ಎಂದು ತಿಳಿಸಲಿಕ್ಕೆ ತುಂಬಾ ಸಂತೋಷವಾಗುತ್ತದೆ.

ಇದನ್ನು ನೋಡಿ ನಮ್ಮ ಕೆಲವು ಸ್ನೇಹಿತರು ನಿಮ್ಮ ತಿಜೋರಿಯನ್ನೇ ಕೊಳ್ಳಬೇಕೆಂದು ವಿಚಾರಿಸುತ್ತಿದ್ದಾರೆ. ಅವರು ಪರಭಾರೆ ತಮಗೆ ಪತ್ರ ಹಾಕಿರಬಹುದು. ಹಾಗೂ ಸಮಕ್ಷಮ ನೋಡಲಿಕ್ಕೆ ಬರಬಹುದು.
ಇಂತೀ ನಮಸ್ಕಾರಗಳು. ಸಹಿ:— ಶಿವಬಸಪ್ಪ ಬೆಲ್ಲದ, ಶಿರ್ಶಿ.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಕಾಯಕವೆ ಕೈಲಾಸ	೦-೩-೦	ಸುಕಲಾದೇವಿಯ ಕಥೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ಶರಣಬಸವೇಶ್ವರನ ಚರಿತ್ರೆ	೦-೧-೬
ಏಕಲವ್ಯನ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಲಜಪತರಾಯರ ಚರಿತ್ರೆ	೦-೧-೬	ವಿಜಯವಾಣಿ	೦-೨-೦
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

ಓಂ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೫. | ಆಲಮಟ್ಟಿ- ಸೋಮವಾರ ತಾರೀಖು ೨೦ ನೆಯ ಜನವರಿ ೧೯೩೬. | ಸಂಚಿಕೆ ೨೧.

ಶುಶ್ರೂಷಾಪಥಕದ ಮೇಲೆ ಬಾಂಬು!

ಡೇಸಿ ಮತ್ತು ಅಶಾಂಗಿ ಸರೋವರದ ಮಧ್ಯದಲ್ಲಿರುವ ಬಾಲ್ಡಿಯಾ ಎಂಬ ಹಳ್ಳಿಯಲ್ಲಿ ಮೇಜರ ಬಗಾಯಿನ್ ಎಂಬವರ ಕೈಕೆಳಗೆ ಬ್ರಿಟಿಶ್ ರೆಡ್‌ಕ್ರಾಸ್ ಪಥಕದವರು ಶುಶ್ರೂಷೆ ಮಾಡುತ್ತಿದ್ದರು. ಆಗ ಇಟಾಲಿಯ ವಿಮಾನಗಳು ೩೦೦ ಪೌಂಡು ಭಾರವಾದ ೬ ಬಾಂಬುಗಳನ್ನು ಹಾಕಿದವು. ಅದರಿಂದ ಪಥಕದ ಗುಡಾರಗಳೆಲ್ಲ ಛಿನ್ನವಿಚ್ಛಿನ್ನವಾಗಿ ಉರಿಯು ಹತ್ತಿತು. ಗುಡಾರಗಳಲ್ಲಿದ್ದ ೧೪ ಜನರು ಹುರಿಪುಳಿಸಿ ಹೋದರು. ೩೫ ಜನರಿಗೆ ಭಯಂಕರ ಗಾಯಗಳಾಗಿವೆ. ಆದರೆ ಮೇಜರ್ ಬಗಾಯಿನ್‌ರವರಿಗೆ ಯಾವ ಅಪಾಯವೂ ಸಂಭವಿಸಿರುವುದಿಲ್ಲ. ಅವರು ಡಾಕ್ಟರ ಮತ್ತು ಪರಿಚಾರಿಕೆಯರಿಗಾಗಿ ಕೂಡಲೇ ತಂತಿ ಕೊಟ್ಟರು. ಬೆಳಗಾಗುವದರೊಳಗೆ ೪ ಜನ ಡಾಕ್ಟರರು ೧೨ ಜನ ನರ್ಸ್‌ಗಳು ಬಂದರು. ೧೪ ಜನ ಸತ್ತವರಲ್ಲಿ ಮುಖ್ಯವಾಗಿ ಸ್ತ್ರೀಯರು, ಕೂಸುಗಳು ವೃದ್ಧರು ಇವರೇ ಇರುವರು.

ಶುಶ್ರೂಷೆ ಮಾಡುವ ಬ್ರಿಟಿಶ್ ಜನರ ಮೇಲೆ ಈ ಪ್ರಕಾರ ಬಾಂಬು ಒಗೆದುದು ಜನೀವಾದಲ್ಲಿ ಒಳ್ಳೇ ಗಲಭೆಯನ್ನುಂಟು ಮಾಡಿದೆ. ಯಾವ ರೀತಿಯಿಂದಲಾದರೂ ಬ್ರಿಟಿಶರನ್ನು ಕೆಣಕಿ ರಾಷ್ಟ್ರ ಸಂಘವನ್ನು ಬಿಟ್ಟುಕೊಡುವದೇ ಮುಸೋಲಿನಿಯ ಉದ್ದೇಶವಾಗಿರಬಹುದೇ ಎಂಬ ಸಂಶಯ ಅನೇಕರಿಗೆ ಉಂಟಾಗಿದೆ. ಈ ಬಾಂಬು ಹಾಕಿದ ಬಗ್ಗೆ ತನ್ನ ಅಭಿಪ್ರಾಯವನ್ನು ಪ್ರಕಟಿಸಬೇಕೆಂದು ಇಟಲಿಗೆ ಅನೇಕರು ಹೇಳುತ್ತಿದ್ದಾರೆ. ಇಟಲಿ ಸರಕಾರದವರು ಈ ಬಗ್ಗೆ ಈ ರೀತಿ ಪ್ರಕಟಿಸಿದ್ದಾರೆ—

ಇಟಲಿಯ ವಿಮಾನುಗಳು ಮೊದಲು ಚನ್ನಾಗಿ ನಿರೀಕ್ಷಣೆ ಮಾಡಿ ಸೈನಿಕರ ಗುಡಾರಗಳಿರುವವೆಂದು ತಿಳಿದೇ ಬಾಂಬು ಹಾಕಿದವು. ಆದರೆ ಸೈನಿಕರ ಗುಡಾರಗಳ ಮಧ್ಯದಲ್ಲಿ ಶುಶ್ರೂಷಾಪಥಕವಿರುವದು ಅವರಿಗೇನು ಗೊತ್ತು? ಆ ಪ್ರಕಾರ ಪಥಕವಿರುವದು ರೆಡ್‌ಕ್ರಾಸ್ ಸಂಸ್ಥೆಯ ನಿಯಮಕ್ಕೇನೇ ವಿರೋಧಕರವಾಗಿದೆ. ಅಂದಮೇಲೆ ಶುಶ್ರೂಷಾಪಥಕಕ್ಕೆ ಹಾನಿ ಮಾಡಿದ ತಪ್ಪು ಶುಶ್ರೂಷಾಪಥಕದ್ದೇ ಆಗಿದೆ.

ಕ್ವೇಟಾದಲ್ಲಿ ಭೂಕಂಪ.

ಕಳೆದ ೧೭ ನೆಯ ತಾರೀಖಿನ ದಿವಸ ಮುಂಜಾನೆ ಕ್ವೇಟಾದಲ್ಲಿ ೬ ಸೇಕಂದುಗಳ ವರೆಗೆ ಭೂಕಂಪವಾಯಿತು. ಬಾಗಿಲು ಕಿಡಕಿ ಮುಂತಾದವುಗಳು ಅಲ್ಲಾಡಿದವು ಆದರೆ ಎಲ್ಲಿಯೂ ಹಾನಿಯಾಗಿರುವದಿಲ್ಲ.

ನಾ. ಆಗಾಖಾನರ ಸುವರ್ಣೋತ್ಸವ.

ಫೆಬ್ರುವರಿ ೧ ನೆಯ ತಾರೀಖಿನ ದಿವಸ ನಾ. ಆಗಾಖಾನರು ಕರಾಚಿಗೆ ಹೋಗುವರು. ಆ ಕಾಲಕ್ಕೆ ಅವರ ಶಿಷ್ಯರಾದ ಖೋಜಾ ಜನರು ೫ ದಿವಸಗಳ ವರೆಗೆ ಅವರ ಸುವರ್ಣೋತ್ಸವವನ್ನು ನೆರವೇರಿಸುವರು.

ಶೋಚನೀಯ ನಿಧನ.

ಲಂಡನ್ನಿನಲ್ಲಿದ್ದ ಸುಪ್ರಸಿದ್ಧ ಹಿಂದಿ ಕಮ್ಯುನಿಸ್ಟ ಶ್ರೀ. ಶಾಪುರಜಿ ಸಕಲಾತವಾಲಾ ಇವರು ತಾ. ೧೬ ನೆಯ ದಿನ ಹೃದಯದ ವಿಕಾರದಿಂದ ಮೃತಪಟ್ಟರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಇವರು ಈ ದೇಶದಲ್ಲಿಯೇ ಶಿಕ್ಷಣ ಹೊಂದಿ ಲಂಡನ್ನಿನಲ್ಲಿದ್ದು ಅಲ್ಲಿಯ ಕೂಲಿಕಾರರ ಪಂಗಡದಲ್ಲಿ ಪ್ರಮುಖರಾಗಿ ಕಾಮನ್ಸ ಸಭೆಯ ಸಭಾಸದರಾಗಿ ಬಹು ಪ್ರಸಿದ್ಧಿಯನ್ನು ಹೊಂದಿದ್ದರು. ಮರಣ ಸಮಯದಲ್ಲಿ ಇವರಿಗೆ ೬೧ ವರುಷಗಳಾಗಿದ್ದವು.

—ಇಂಗ್ಲೆಂಡಿನ ಸುಪ್ರಸಿದ್ಧ ಕವಿಗಳಾದ ರಡ್ಯಾರ್ಡ ಕಿಪ್ಲಿಂಗ್‌ರವರು ತಾ. ೧೮ ನೆಯ ದಿವಸ ಪರಲೋಕವಾಸಿಗಳಾದರು. ಈಗ ಇವರಿಗೆ ೬೯ ವರ್ಷಗಳಾಗಿದ್ದವು. ಇವರ ನಿಧನದಿಂದ ಇಂಗ್ಲಿಷ ಭಾಷೆಯ ಮಹಾ ಸಾಹಿತಿಗಳೊಬ್ಬರು ಇಲ್ಲದಂತಾಯಿತೆಂದು ಡಾ. ರವೀಂದ್ರನಾಥ ಟಾಗೋರರವರು, ದೇವಿ ಸರೋಜಿನಿಯವರು ತುಂಬಾ ವಿಷಾದವನ್ನು ವ್ಯಕ್ತಗೊಳಿಸಿದ್ದಾರೆ.

—ಮುಂಬೈ ಕೌನ್ಸಿಲ್ ಸಭಾಸದರಾದ ರಾ. ಬ. ಕಾಳೆಯವರು ತಾ. ೧೬ ನೆಯ ದಿನ ಪುಣೆಯಲ್ಲಿ ಹೃದಯ ವಿಕಾರದಿಂದ ನಿಧನ ಹೊಂದಿದರೆಂದು ತಿಳಿಸಲು ತುಂಬಾ ವಿಷಾದವಾಗುತ್ತದೆ.

ಶಿರಸಿಯಲ್ಲಿ

ಸಿದ್ಧೇಶ್ವರ ತಿಜೋರಿ ಮೇಲೆ ಕಳ್ಳರ ಹಲ್ಲಾ.

ಸಿದ್ಧೇಶ್ವರ ತಿಜೋರಿ ಕಾರಖಾನೆ ಹುಬ್ಬಳ್ಳಿ ಇವರಿಗೆ ಶಿರಸಿಯಿಂದ ಅವರ ತಿಜೋರಿ ಕೊಂಡ ರಾ|| ರಾ|| ಶಿವಬಸಪ್ಪ ಬೆಲ್ಲದ ಇವರಿಂದ ಬಂದ ಪತ್ರ—

ಮೊನ್ನೆ ಮೊನ್ನೆ ನಾವು ತಮ್ಮಲ್ಲಿ (ರೂ. ೩೨೫ ಕ್ಕೆ ೩ ಫೂಟು ಎತ್ತರದ್ದು) ತಿಜೋರಿ ಕೊಂಡದ್ದರಲ್ಲಿ ಮೊನ್ನೆಯೇ ಹೋದ ದೀಪಾವಳಿ ಲಕ್ಷ್ಮೀ ಪೂಜೆಯ ನಿಮಿತ್ಯ ನಮ್ಮ ಮನೆಯಲ್ಲಿಯ ಎಲ್ಲ ದಾಗೀನಗಳನ್ನೂ ವ ರೋಖಡಿ ರೂಪಾಯಿಗಳನ್ನೂ ಇಟ್ಟಿದ್ದೆವು. ಅದೇ ದಿವಸ ರಾತ್ರಿ ಯಾರೋ ಕಳ್ಳರು ನಮ್ಮ ಅಂಗಡಿ ಕೀಲಿ ಮುರಿದು ತಿಜೋರಿ ತೆರೆಯಲಿಕ್ಕೆ ಒಡೆಯಲಿಕ್ಕೆ ಹೊಡೆದು ಬಡೆದು ಕಚ್ಚಿ ಹಾಕಿ ಅನೇಕ ತರಹದಿಂದಾ ಪ್ರಯತ್ನ ಮಾಡಿ ನಿರಾಶರಾಗಿ ತಿರುಗಿ ಹೋದದ್ದು ಬೆಳಿಗ್ಗೆ ಗೊತ್ತಾಯಿತು. ತಿಜೋರಿಗೆ ಪೆಟ್ಟುಗಳು ಮಾತ್ರ ಬಹಳ ಬಿದ್ದಿವೆ. ಮಾರಿಯ ಬಣ್ಣ ಎಲ್ಲವೂ ಹಾರಿ ಹೋಗಿದೆ. ಬಾಕಿ ತಿಜೋರಿ ಮಾತ್ರ ಏನೂ ಕೆಟ್ಟಿಲ್ಲಾ.

ಸಾರಾಂಶ. ನಾನು ನಿಮ್ಮ ತಿಜೋರಿಯನ್ನೇ ತಕ್ಕ ವೇಳೆಗೆ ಕೊಂಡು ಆಗತಕ್ಕ ಸಾವಿರಾರು ರೂಪಾಯಿಯ ಲುಕ್ಸಾನವನ್ನು ನಿಮ್ಮಿಂದಲೇ ತಿರುಗಿ ಲಾಭ ಹೊಂದಿದಂತಾಗಿದೆ. ಎಂದು ತಿಳಿಸಲಿಕ್ಕೆ ತುಂಬಾ ಸಂತೋಷವಾಗುತ್ತದೆ.

ಇದನ್ನು ನೋಡಿ ನಮ್ಮ ಕೆಲವು ಸ್ನೇಹಿತರು ನಿಮ್ಮ ತಿಜೋರಿಯನ್ನೇ ಕೊಳ್ಳಬೇಕೆಂದು ವಿಚಾರಿಸುತ್ತಿದ್ದಾರೆ. ಅವರು ಪರಭಾರೆ ತಮಗೆ ಪತ್ರ ಹಾಕಿರಬಹುದು. ಹಾಗೂ ಸಮಕ್ಷಮ ನೋಡಲಿಕ್ಕೆ ಬರಬಹುದು.
ಇಂತೀ ನಮಸ್ಕಾರಗಳು. ಸಹಿ:— ಶಿವಬಸಪ್ಪ ಬೆಲ್ಲದ, ಶಿರ್ಶಿ.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಕಾಯಕವೆ ಕೈಲಾಸ	೦-೩-೦	ಸುಕಲಾದೇವಿಯ ಕಥೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ಶರಣಬಸವೇಶ್ವರನ ಚರಿತ್ರೆ	೦-೧-೬
ಏಕಲವ್ಯನ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಲಜಪತರಾಯರ ಚರಿತ್ರೆ	೦-೧-೬	ವಿಜಯವಾಣಿ	೦-೨-೦
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

ಓಂ

ಶರಣಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೫. | ಆಲಮಟ್ಟಿ- ಸೋಮವಾರ ತಾರೀಖು ೨೦ ನೆಯ ಜನವರಿ ೧೯೩೬. | ಸಂಚಿಕೆ ೨೧.

ಶುಶ್ರೂಷಾಪಥಕದ ಮೇಲೆ ಬಾಂಬು!

ಡೇಸಿ ಮತ್ತು ಆಶಾಂಗಿ ಸರೋವರದ ಮಧ್ಯದಲ್ಲಿರುವ ಬಾಲ್ಡಿಯಾ ಎಂಬ ಹಳ್ಳಿಯಲ್ಲಿ ಮೇಜರ ಬಗಾಯಿನ್ ಎಂಬವರ ಕೈಕೆಳಗೆ ಬ್ರಿಟಿಶ್ ರೆಡ್‌ಕ್ರಾಸ್ ಪಥಕದವರು ಶುಶ್ರೂಷೆ ಮಾಡುತ್ತಿದ್ದರು. ಆಗ ಇಟಾಲಿಯ ವಿಮಾನುಗಳು ೩೦೦ ಪೌಂಡು ಭಾರವಾದ ೬ ಬಾಂಬುಗಳನ್ನು ಹಾಕಿದವು. ಅದರಿಂದ ಪಥಕದ ಗುಡಾರಗಳೆಲ್ಲ ಛಿನ್ನವಿಚ್ಛಿನ್ನವಾಗಿ ಉರಿಯು ಹತ್ತಿತು. ಗುಡಾರಗಳಲ್ಲಿದ್ದ ೧೪ ಜನರು ಹುರಿಪುಳಿಸಿ ಹೋದರು. ೫೫ ಜನರಿಗೆ ಭಯಂಕರ ಗಾಯುಗಳಾಗಿವೆ. ಆದರೆ ಮೇಜರ್ ಬಗಾಯಿನ್‌ರವರಿಗೆ ಯಾವ ಅಪಾಯವೂ ಸಂಭವಿಸಿರುವುದಿಲ್ಲ. ಅವರು ಡಾಕ್ಟರ ಮತ್ತು ಪರಿಚಾರಿಕೆಯರಿಗಾಗಿ ಕೂಡಲೇ ತಂತೀ ಕೊಟ್ಟರು, ಬೆಳಗಾಗುವದರೊಳಗೆ ೪ ಜನ ಡಾಕ್ಟರರು ೧೨ ಜನ ನರ್ಸಗಳು ಬಂದರು. ೧೪ ಜನ ಸತ್ತವರಲ್ಲಿ ಮುಖ್ಯವಾಗಿ ಸ್ತ್ರೀಯರು, ಕೂಸುಗಳು ವೃದ್ಧರು ಇವರೇ ಇರುವರು.

ಶುಶ್ರೂಷೆ ಮಾಡುವ ಬ್ರಿಟಿಶ್ ಜನರ ಮೇಲೆ ಈ ಪ್ರಕಾರ ಬಾಂಬು ಒಗೆದುದು ಜಿನೀವಾದಲ್ಲಿ ಒಳ್ಳೇ ಗಲಭೆಯನ್ನುಂಟು ಮಾಡಿದೆ. ಯಾವ ರೀತಿಯಿಂದಲಾದರೂ ಬ್ರಿಟಿಶರನ್ನು ಕೆಣಕಿ ರಾಷ್ಟ್ರ ಸಂಘವನ್ನು ಬಿಟ್ಟುಕೊಡುವದೇ ಮುಸೋಲಿನಿಯ ಉದ್ದೇಶವಾಗಿರಬಹುದೇ ಎಂಬ ಸಂಶಯ ಅನೇಕರಿಗೆ ಉಂಟಾಗಿದೆ. ಈ ಬಾಂಬು ಹಾಕಿದ ಬಗ್ಗೆ ತನ್ನ ಅಭಿಪ್ರಾಯವನ್ನು ಪ್ರಕಟಿಸಬೇಕೆಂದು ಇಟಲಿಗೆ ಅನೇಕರು ಹೇಳುತ್ತಿದ್ದಾರೆ. ಇಟಲಿ ಸರಕಾರದವರು ಈ ಬಗ್ಗೆ ಈ ರೀತಿ ಪ್ರಕಟಿಸಿದ್ದಾರೆ—

ಇಟಲಿಯ ವಿಮಾನುಗಳು ಮೊದಲು ಚನ್ನಾಗಿ ನಿರೀಕ್ಷಣೆ ಮಾಡಿ ಸೈನಿಕರ ಗುಡಾರಗಳಿರುವವೆಂದು ತಿಳಿದೇ ಬಾಂಬು ಹಾಕಿದವು. ಆದರೆ ಸೈನಿಕರ ಗುಡಾರಗಳ ಮಧ್ಯದಲ್ಲಿ ಶುಶ್ರೂಷಾಪಥಕವಿರುವದು ಅವರಿಗೇನು ಗೊತ್ತು? ಆ ಪ್ರಕಾರ ಪಥಕವಿಡುವದು ರೆಡ್‌ಕ್ರಾಸ್ ಸಂಸ್ಥೆಯ ನಿಯಮಕ್ಕೇನೇ ವಿರೋಧಕರವಾಗಿದೆ. ಅಂದಮೇಲೆ ಶುಶ್ರೂಷಾಪಥಕಕ್ಕೆ ಹಾನಿ ಮಾಡಿದ ತಪ್ಪು ಶುಶ್ರೂಷಾಪಥಕದ್ದೇ ಆಗಿದೆ

ಕ್ವೇಟಾದಲ್ಲಿ ಭೂಕಂಪ.

ಕಳೆದ ೧೭ ನೆಯ ತಾರೀಖಿನ ದಿವಸ ಮುಂಜಾನೆ ಕ್ವೇಟಾದಲ್ಲಿ ೬ ಸೆಕಂದುಗಳ ವರೆಗೆ ಭೂಕಂಪವಾಯಿತು. ಬಾಗಿಲು ಕಿಡಕಿ ಮುಂತಾದವುಗಳು ಅಲ್ಲಾಡಿದವು ಆದರೆ ಎಲ್ಲಿಯೂ ಹಾನಿಯಾಗಿರುವದಿಲ್ಲ.

ನಾ. ಅಗಾಖಾನರ ಸುವರ್ಣೋತ್ಸವ.

ಫೆಬ್ರುವರಿ ೧ ನೆಯ ತಾರೀಖಿನ ದಿವಸ ನಾ. ಅಗಾಖಾನರು ಕರಾಚಿಗೆ ಹೋಗುವರು. ಆ ಕಾಲಕ್ಕೆ ಅವರ ಶಿಷ್ಯರಾದ ಖೋಜಾ ಜನರು ೫ ದಿವಸಗಳ ವರೆಗೆ ಅವರ ಸುವರ್ಣೋತ್ಸವವನ್ನು ನೆರವೇರಿಸುವರು.

ಶೋಚನೀಯ ನಿಧನ.

ಲಂಡನ್ನಿನಲ್ಲಿದ್ದ ಸುಪ್ರಸಿದ್ಧ ಹಿಂದಿ ಕಮ್ಯುನಿಷ್ಟ ಶ್ರೀ. ಶಾಪುರಜಿ ಸಕಲಾತವಾಲಾ ಇವರು ತಾ. ೧೬ ನೆಯ ದಿನ ಹೃದಯದ ವಿಕಾರದಿಂದ ಮೃತಪಟ್ಟರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಇವರು ಈ ದೇಶದಲ್ಲಯೇ ಶಿಕ್ಷಣ ಹೊಂದಿ ಲಂಡನ್ನಿನಲ್ಲಿದ್ದು ಅಲ್ಲಿಯ ಕೂಲಿಕಾರರ ಪಂಗಡದಲ್ಲಿ ಪ್ರಮುಖರಾಗಿ ಕಾಮನ್ಸ ಸಭೆಯ ಸಭಾಸದರಾಗಿ ಬಹು ಪ್ರಸಿದ್ಧಿಯನ್ನು ಹೊಂದಿದ್ದರು. ಮರಣ ಸಮಯದಲ್ಲಿ ಇವರಿಗೆ ೬೧ ವರುಷಗಳಾಗಿದ್ದವು.

—ಇಂಗ್ಲಂಡಿನ ಸುಪ್ರಸಿದ್ಧ ಕವಿಗಳಾದ ರಡ್ಯಾರ್ಡ ಕಿಪ್ಲಿಂಗ್ ರವರು ತಾ. ೧೮ ನೆಯ ದಿವಸ ಪರಲೋಕವಾಸಿಗಳಾದರು. ಈಗ ಇವರಿಗೆ ೭೦ ವರ್ಷಗಳಾಗಿದ್ದವು. ಇವರ ನಿಧನದಿಂದ ಇಂಗ್ಲಿಷ ಭಾಷೆಯ ಮಹಾ ಸಾಹಿತಿಗಳೊಬ್ಬರು ಇಲ್ಲದಂತಾಯಿತೆಂದು ಡಾ. ರವೀಂದ್ರನಾಥ ಟಾಗೋರರವರು, ದೇವಿ ಸರೋಜಿನಿಯವರು ತುಂಬಾ ವಿಷಾದವನ್ನು ವ್ಯಕ್ತಗೊಳಿಸಿದ್ದಾರೆ.

—ಮುಂಬೈ ಕೌನ್ಸಿಲ್ ಸಭಾಸದರಾದ ರಾ. ಬ. ಕಾಳೆಯವರು ತಾ. ೧೭ ನೆಯ ದಿನ ಪುಣೆಯಲ್ಲಿ ಹೃದಯ ವಿಕಾರದಿಂದ ನಿಧನ ಹೊಂದಿದರೆಂದು ತಿಳಿಸಲು ತುಂಬಾ ವಿಷಾದವಾಗುತ್ತದೆ.

ಕಲ್ಯಾಣ ಪಟ್ಟಣ.

ಬಹಳ ದಿವಸಗಳಿಂದ ನನಗೆ ಕಲ್ಯಾಣ ಪಟ್ಟಣವನ್ನು ನೋಡುವ ಕುತೂಹಲವಿತ್ತು. ಒಬ್ಬೊಂಟಿಗನಾಗಿ ಪ್ರವಾಸ ಮಾಡುವದು ತ್ರಾಸದಾಯಕವು. ನನಗಂತೂ ಬಹುತರ ಅಶಕ್ಯವು. ನನ್ನ ಮಿತ್ರರಾದ ಶ್ರೀ. ರಾ. ಬುದ್ಧಯ್ಯಸ್ವಾಮಿ ಪುರಾಣಿಕ ಇವರು ಸೊಲ್ಲಾಪುರಕ್ಕೆ ಗೃಹಕೃತ್ಯದ ಸಲುವಾಗಿ ಹೋಗಬೇಕಾಯಿತು ಅವರನ್ನು ಕೇಳಲಾಗಿ ಮುಂದೆ ಕಲ್ಯಾಣವನ್ನು ನೋಡಲಿಕ್ಕೆ ಬರುತ್ತೇವೆಂದು ಅವರು ಒಪ್ಪಿಕೊಂಡರು. ನಾವಿಬ್ಬರೂ ಕೂಡಿ ಸೊಲ್ಲಾಪುರಕ್ಕೆ ಹೋಗಿ ಅಲ್ಲಿಯ ಪವಿತ್ರ ಐತಿಹಾಸಿಕ ಸ್ಥಾನಗಳಾದ ಶ್ರೀ ಸಿದ್ಧರಾಮೇಶನ ದೇವಾಲಯ, ಅವನಿಗೆ ಶ್ರೀ ಮಲ್ಲಿಕಾರ್ಜುನ ಮತ್ತು ಶ್ರೀಮದಲ್ಲಮ ಪ್ರಭುದೇವರು ದರ್ಶನಕೊಟ್ಟ ಸ್ಥಳಗಳು, ಶ್ರೀ ರೇವಣಸಿದ್ಧೇಶ್ವರನ ದೇವಾಲಯ ಸೊನ್ನಲಿಗೆಯಲ್ಲಿ ಸಿದ್ಧರಾಮೇಶ್ವರನ ತಾಯಿಯಾದ ಸುಗ್ಗಲದೇವಿಯನ್ನು ರೇವಣಸಿದ್ಧೇಶ್ವರನು ಕಂಡು ಆಕೆಯ ಗರ್ಭಕ್ಕೆ ನಮಸ್ಕರಿಸಿ ಆಕೆಯಿಂದ ಸಿದ್ಧರಾಮೇಶ್ವರನು ಹುಟ್ಟುವದನ್ನು ಅರುಹಿದ ಸ್ಥಾನ, ಮುಂತಾದವುಗಳನ್ನು ನೋಡಿ ಸೊಲ್ಲಾಪುರದಲ್ಲಿ ವಾಸಿಸುವ ನಾಲ್ವತ್ತವಾಡ ಶ್ರೀ ಶಿವಶರಣ ವೀರಪ್ಪಯ್ಯನವರ ಸುಪುತ್ರಿಯರಾದ ಶರಣಮ್ಮನವರ ದರ್ಶನವನ್ನು ತೆಗೆದುಕೊಂಡೆವು. ಮರುದಿವಸ ರೇಲ್ವೆಯ ಮಾರ್ಗವಾಗಿ ಕಲಬುರ್ಗಿಗೆ ಹೋಗಿ ಶ್ರೀ ಶರಣ ಬಸವೇಶ್ವರನ ದರ್ಶನ ತೆಗೆದುಕೊಂಡು ಗದ್ದಿಗೆಮಠದಲ್ಲಿ ಸ್ಥಾಪಿಸಿರುವ ಶ್ರೀಮದ್ವೀರಶೈವ ಬಸವರಾಜ ಫ್ರೀ ಬೋರ್ಡಿಂಗ ಮುಂತಾದ ಸಂಸ್ಥೆಗಳನ್ನು ಸಂದರ್ಶಿಸಿದೆವು. ಅಲ್ಲಿಯ ವೀರಶೈವ ತರುಣ ಸಂಘದವರ ವಿನಂತಿಯ ಮೇರೆಗೆ 'ವೀರಶೈವ ಮತತತ್ವ ಮತ್ತು ಭಕ್ತಿ' ಈ ವಿಷಯುಗಳ ಮೇಲೆ ಗದ್ದಿಗಿ ಮಠದಲ್ಲಿ ಶ್ರೀ. ರಾ. ಬುದ್ಧಯ್ಯಸ್ವಾಮಿಗಳು ರಾತ್ರಿ ೮ ರಿಂದ ೧೦ ಗಂಟೆಯ ವರೆಗೆ ಕೂಡಿದ ಜನರ ಮೇಲೆ ಒಳ್ಳೇ ಪರಿಣಾಮವಾಗುವಂತೆ ಉಪದೇಶ ಮಾಡಿದರು. ಮರುದಿವಸ ಸರ್ವಿಸ ಮೋಟರದಿಂದ ಕಲ್ಯಾಣಕ್ಕೆ ಹೋದೆವು. ಈ ಸರ್ವಿಸ ಮೋಟಾರದ ಒಡೆಯರು ಗದಗಿನ ರಾ. ರಾ. ಭೂಮರಡ್ಡಿ ಬಸಪ್ಪನವರು. ಆ ಭಾಗದಲ್ಲಿ ಕೆಲವು ಮಾರ್ಗಗಳ ಮೇಲೆ ಇವರ ಒಂದೇ ಮೋಟರ ಸರ್ವಿಸ ಇರುವದು. ಕಲ್ಯಾಣದಲ್ಲಿ ಯಾತ್ರಿಕರಿಗೆ ಇಳಕೊಳ್ಳಲಿಕ್ಕೆ ಅನುಕೂಲತೆಯೇ ಇರುವದಿಲ್ಲ. ರಾ. ಭೂಮರಡ್ಡಿ ಬಸಪ್ಪನವರ ಪುತ್ರರಾದ ರಾ. ಕೋಟಪ್ಪನವರೂ ಮತ್ತು ಹುಮನಾಬಾದದಲ್ಲಿರುವ ಇದೇ ಮೋಟರ ಸರ್ವಿಸದ ವ್ಯವಸ್ಥಾಪಕರಾದ ಮೆಣಸಿನಕಾಯಿ ಪರಪ್ಪನವರೂ ನಮಗೆ ಕಲ್ಯಾಣದಲ್ಲಿ ಇಳಕೊಳ್ಳುವ ಮತ್ತು ಅಲ್ಲಿಯ ಎಲ್ಲ ಸ್ಥಳಗಳನ್ನು ತೋರಿಸುವ ವ್ಯವಸ್ಥೆಯನ್ನು ಮಾಡಿ ನಮಗೆ ಬಹಳೇ ಉಪಕಾರ ಮಾಡಿದರು.

ಕಲ್ಯಾಣ ಪಟ್ಟಣವು ಸೊಲ್ಲಾಪುರಕ್ಕೆ ೬೨ ಮೈಲುಗಳ ಮತ್ತು ಕಲಬುರ್ಗಿಯಿಂದ ಉತ್ತರಕ್ಕೆ ೫೨ ಮೈಲುಗಳ ಅಂತರದಲ್ಲಿದೆ. ಈ ಪಟ್ಟಣಕ್ಕೆ ಈ ಎರಡೂ ಮಾರ್ಗಗಳಿಂದ ಸರ್ವಿಸ ಮೋಟಾರದಲ್ಲಿ ಪ್ರಯಾಣ ಮಾಡಲು ಅನುಕೂಲವಿದೆ. ಇದು ನಿಜಾಮರಾಜ್ಯದೊಳಗಿನ ಒಂದು ಜಹಾಗಿರಿಯ ಮುಖ್ಯ ಸ್ಥಳವದೆ. ಈ ಜಹಾಗಿರಿಯ ಮುಖ್ಯಸ್ಥರಿಗೆ ನವಾಬರೆನ್ನುತ್ತಾರೆ. ಅವರ ಹೆಸರು ಮೈದಿ ಹುಸೇನಖಾನ. ಇವರಿಗೆ ಜಮಾಲುದ್ದೀನಖಾನೆಂಬ ಒಬ್ಬ ತಮ್ಮನಿದ್ದಾನೆ. ಜಹಾಗೀರಿನ ಆಡಳಿತವು ಈಗ ನಿಜಾಮ ಸರಕಾರದ ಕೈಕೆಳಗಿದೆ. ಇದರ ವಾರ್ಷಿಕ ಉತ್ಪನ್ನವು ಸುಮಾರು ೩|| ಲಕ್ಷ ರೂಪಾಯಿ. ಇಲ್ಲಿಯ ಈಗಿನ ಜನವಸ್ತಿಯು ಸುಮಾರು ೩೦ಸಾವಿರ ಇದ್ದು ಅದರಲ್ಲಿ ತುರುಕರ ಸಂಖ್ಯೆಯೇ $\frac{3}{4}$ ಇರುವುದು. ಉಳಿದಿದ್ದರಲ್ಲಿ ಲಿಂಗಾಯತರ ಸಂಖ್ಯೆಯು ಅರ್ಧದಷ್ಟು ಇದೆ.

ಪಟ್ಟಣದ ಅರ್ಧದಷ್ಟು ಭಾಗವು ಮೇಲಿಂದಮೇಲೆ ಒದಗಿದ ಪ್ಲೇಗಿನ ಹಾವಳಿಯಿಂದ ಹಾಳುಬಿದ್ದುಬಿಟ್ಟಿದೆ. ಇದರ ಸುತ್ತಲಿರುವ ಪೂರ್ವಕಾಲದ ಕುರುಹುಗಳ ಮೇಲಿಂದ ಶ್ರೀ ಬಸವೇಶ್ವರನ ಕಾಲದಲ್ಲಿ ಇದರ ವಿಸ್ತಾರವು ೩೬ ಚೌರಸ ಮೈಲು ಇದ್ದಿತೆಂಬುದು ನಿಜವೆಂದು ಕಾಣುತ್ತದೆ. ಇದರ ಈಗಿನ ಸ್ಥಿತಿಯನ್ನು ನೋಡಲಾಗಿ ಇದು ಸಮಾಜ ಸುಧಾರಣೆಯಲ್ಲಿಯೂ ಮತ್ತು ವಿದ್ಯೆಯಲ್ಲಿಯೂ ಬಹಳೇ ಹಿಂದುಳಿದಂತೆ ಕಾಣಿಸುತ್ತದೆ.

ಇಲ್ಲಿಯ ಮುಖ್ಯ ಉದ್ಯೋಗವು ಕಣಗಳನ್ನು ನೇಯುವುದಿದ್ದು ಸುಮಾರು ೫೦೦೦ ಮಗ್ಗಗಳಿವೆ. ಈ ಪಟ್ಟಣದ ಸುತ್ತುಮುತ್ತು ಮರಡಿ ಭೂಮಿ ವಿಶೇಷವಿದ್ದವರಿಂದ ಒಕ್ಕಲತನವು ಹೆಚ್ಚಾಗಿ ನಡೆಯುವುದಿಲ್ಲ. ಇಲ್ಲಿ ಐತಿಹಾಸಿಕ ನೋಡತಕ್ಕಂಥ ಸ್ಥಳಗಳು ಅನೇಕ ಇರುತ್ತವೆ. ಇವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ—

ಬಿಜ್ಜಳ ರಾಜನ ಕಾಲದ ಊರೊಳಗಿನ ಕಿಲ್ಲೆಯು ನೆಲಸಮವಾಗಿದೆ. ಆತನ ತರುವಾಯ ಈ ಪ್ರಾಂತವನ್ನು ಆಳಿದ ರಾಜರು ಕಟ್ಟಿಸಿದ ಕೋಟೆಯು ಪಟ್ಟಣದ ಉತ್ತರ ದಿಕ್ಕಿಗೆ ಊರ ಸಮೀಪದಲ್ಲಿಯೇ ಇರುವುದು. ಅದು ಈಗಲೂ ಒಳ್ಳೆಯ ಸ್ಥಿತಿಯಲ್ಲಿದ್ದು ನವಾಬರ ವಾಸಸ್ಥಳವೂ ಮತ್ತು ಈ ಜಹಾಗೀರಿನ ಮುಖ್ಯ ಕಚೇರಿಯ ಸ್ಥಳವೂ ಆಗಿರುತ್ತದೆ.

ಪಟ್ಟಣದ ಮಧ್ಯದಲ್ಲಿ ಶ್ರೀ ಬಸವೇಶನ ದೇವಸ್ಥಾನವಿದ್ದು ಅಲ್ಲಿ ದ್ವಿಕಾಲ ಪೂಜೆಯನ್ನು ಬಾಳೆಹಳ್ಳಿಯ ಶಾಖೆಗೆ ಸೇರಿದ ಶ್ರೀ ವಿರೂಪಾಕ್ಷಸ್ವಾಮಿ ಯೆಂಬ ಪಟ್ಟಾಧಿಕಾರಿಗಳು ಮಾಡುತ್ತಿರುವರು. ಅಲ್ಲಿಂದ ಉತ್ತರಕ್ಕೆ ಸ್ವಲ್ಪ ಅಂತರದ ಮೇಲೆ ಬಸವೇಶ್ವರನ ಮರುಷಗಟ್ಟೆಯ ಸ್ಥಾನವಿದ್ದು ಆ ಕಟ್ಟೆಯು ಈಗ ನಾಶವಾಗಿ ಅಲ್ಲಿ ಕಟಕರು ಒಂದು ಹೊಸ ಕಟ್ಟೆಯನ್ನು ಕಟ್ಟಿಸಿಕೊಂಡು ಅದರ ಮೇಲೆ ಮಾಂಸ ಮಾರುವ ಉದ್ಯೋಗವನ್ನು ಸಾಗಿಸಿರುತ್ತಾರೆ. ಈ ಕಟ್ಟೆಗೆ ತುರುಕರು ಈಗಲೂ ಇದು ಬಸವಣ್ಣನವರ ಕಟ್ಟೆಯೆಂದೇ ಹೇಳುತ್ತಾರೆ. ಇದರ ಸಮೀಪದಲ್ಲಿಯೇ ಬಸವೇಶ್ವರನ ಕಾಲದ ಕರಿಮಲ್ಲಿಗೆಯ ಕಂಟಿ ಇದ್ದುದನ್ನು ಈಗಲೂ ಜನರು ಹೇಳುತ್ತಾರೆ.

ಈ ಪಟ್ಟಣಕ್ಕೆ ದಕ್ಷಿಣಕ್ಕೆ ೩ ಮೈಲುಗಳ ಮೇಲೆ ತ್ರಿಪುರಾಂತವೆಂಬ ಒಂದು ಸಣ್ಣ ಹಳ್ಳಿಯು ಇರುವುದು. ಅದರ ಪಶ್ಚಿಮಕ್ಕೆ ಪಕ್ಕದಲ್ಲಿಯೇ ಸುಮಾರು ನಾಲ್ಕು ಮೈಲು ಸುತ್ತಳತೆಯುಳ್ಳ ತ್ರಿಪುರಾಂತಕವೆಂಬ ಹೆಸರಿನ ಕೆರೆಯು ನೀರಿನಿಂದ ತುಂಬಿರುವುದು. ಈ ಕೆರೆಯ ನೀರನ್ನೇ ೭-೮ ಮೈಲುಗಳ ವರೆಗಿನ ಭೂಮಿಯ ಸ್ನಾಗುವಳಿಗೆ ಉಪಯೋಗಿಸುತ್ತಾರೆ. ಈ ಕೆರೆಯ ಪಶ್ಚಿಮ ದಂಡೆಯ ಮೇಲೆ ಅತಿ ವಿಶಾಲವಾದ ಪತ್ರಿಯ ಬನವಿದ್ದು ಅದರ ಮಧ್ಯದಲ್ಲಿ ಶ್ರೀ ರೇವಣಸಿದ್ಧೇಶ್ವರರ ಮಕ್ಕಳಾದ ಶ್ರೀ ಘನಲಿಂಗ ರುದ್ರ ಮುನಿಗಳ ಗವಿಯು ಇರುವುದು ಇದರ ಮುಂಭಾಗದಲ್ಲಿ ೭ ಕಮಾನುಗಳುಳ್ಳ ೭ ಅಂಕಣಗಳಿದ್ದು ಮಧ್ಯದಲ್ಲಿ ೫೦ ಅಡಿಗಳ ಉದ್ದವಾದ ಗವಿಯು ಇರುವುದು. ಈ ಗವಿಯಲ್ಲಿ ಒಂದು ಲಿಂಗವಿದೆ. ಮುಂಭಾಗದಲ್ಲಿ ದಕ್ಷಿಣ ದಿಕ್ಕಿನ ಕೊನೆಯಲ್ಲಿ ಶ್ರೀ ರುದ್ರಮುನಿಗಳ ಶಿಷ್ಯರಾದ ಶ್ರೀ ಮರಿದೇವರ ಗದ್ದುಗೆ ಇದೆ. ದೇವಾಲಯದ ಮುಂದೆಯೇ ೧೦-೧೩ ದೊಡ್ಡ ಹುಣಸಿ ಮರಗಳಿದ್ದು ಅವುಗಳ ಮಧ್ಯದಲ್ಲಿ ಒಂದು ಸೀ ನೀರಿನ ಬಾವಿಯು ಇರುತ್ತದೆ. ಈ ದೇವಸ್ಥಾನದ ಪೂಜೆಯು ತ್ರಿಪುರಾಂತದ ಭಕ್ತರ ಸಹಾಯದಿಂದ ನಡೆಯುತ್ತಿದೆ. ಈ ಗವಿಯ ಹಿಂಭಾಗದಲ್ಲಿ ಶ್ರೀ ಬಸವೇ

ಶ್ವರನ ಅನುಭವ ಮಂಟಪವಿದ್ದು ಅದು ಈಗ ನೆಲಸಮವಾಗಿದೆ ಯೆಂದು ಹೇಳುತ್ತಾರೆ.

ಕೆರೆಯ ಉತ್ತರ ದಂಡೆಯಮೇಲೆ ಒಂದು ಪುರಾತನ ವಿಶಾಲ ವಾದ ಧರ್ಮಶಾಲೆಯಿದೆ. ಅದರ ಸಮೀಪದಲ್ಲಿಯೇ ಅಕ್ಕನಾಗ ಮ್ಮನ ಗವಿಯು ಇರುವುದು. ಈ ಗವಿಯ ಮಹಾದ್ವಾರವು ಉತ್ತ ರಕ್ಕಿದ್ದು ಅದರ ಎದುರಿಗೆ ೫ ಅಂಕಣಗಳ ಪಡಸಾಲೆ ಇರು ವುದು. ಗವಿಯ ಒಳಗೆ ಹೋಗುವ ಬಾಗಿಲವು ಪಶ್ಚಿಮ ದಿಕ್ಕಿಗಿದೆ. ಬಾಗಿಲದ ಅಳತೆಯು ಒಬ್ಬ ಮನುಷ್ಯನು ಮಾತ್ರ ಕುಳಿತುಕೊಂ ಡು ಹೋಗುವಷ್ಟಿದೆ. ಒಳಗೆ ಗವಿಯು ದಕ್ಷಿಣ ದಿಕ್ಕಿಗೆ ಸಾಗಿ ಮುಂದೆ ಮತ್ತೆ ಪಶ್ಚಿಮಕ್ಕೆ ತಿರುಗಿರುತ್ತದೆ. ಅಲ್ಲಿ ಮಧ್ಯದಲ್ಲಿ ಒಂದು ಲಿಂಗವಿದ್ದು ಲಿಂಗದ ಎರಡೂ ಮಗ್ಗುಲಿಗೆ ಪಾರ್ವತಿ ಸಮೇತವಾದ ಈಶ್ವರನ ಕಲ್ಲಿನ ಮೂರ್ತಿಯು ಇರುವುದು. ಈ ಗವಿಯಲ್ಲಿಯ ಯಾವ ಮೂರ್ತಿಗಳಿಗೂ ಪೂಜೆಯು ನಡೆಯುವಂತೆ ಕಾಣುವುದಿಲ್ಲ ಗವಿಯ ತುಂಬೆಲ್ಲ ಕತ್ತಲೆಯಿದ್ದು ಕಣ್ಣುಕಪ್ಪಡಿಗಳ ವಾಸಸ್ಥಾನ ವಾಗಿದೆ. ದೀಪದ ಸಹಾಯವಿಲ್ಲದೆ ಒಳಗೆ ಹೋಗಲು ಸಾಧ್ಯವಿಲ್ಲ.

ತ್ರಿಪುರಾಂತಕನ ಕೆರೆಯ ವಾಯುವ್ಯ ದಿಕ್ಕಿಗೆ ಶ್ರೀ ಮಡಿವಳ ಮಾಚಿದೇವನ ೯ ಅಂಕಣಗಳ ಗುಡಿಯಿದೆ. ಗುಡಿಯ ಸುತ್ತಲೂ ಹೊಂಡವಿದೆ. ಹೊಂಡದ ತುಂಬೆಲ್ಲ ಸಹಸ್ರ ದಳದ ಬಿಳೀ ಕಮ ಲದ ಬಳ್ಳಿಗಳಿವೆ. ಗುಡಿಯಲ್ಲಿ ಒಂದೇ ಪಾನ ಒಟ್ಟಲದಲ್ಲಿ ಎರಡು ಲಿಂಗಗಳಿದ್ದು ಅವು ಗುರು ಶಿಷ್ಯರವು ಎಂದು ಹೇಳುತ್ತಾರೆ. ಗುಡಿ ಯ ಮುಂದಿನ ಅಂಗಳದಲ್ಲಿ ಒಂದು ಬಾವಿಯಿದ್ದು ಅಲ್ಲಿಯೇ ಮಾಚಿದೇವನು ಶರಣರ ಬಟ್ಟೆಗಳನ್ನು ತೊಳೆಯುತ್ತಿದ್ದನೆಂದು ಹೇಳು ತ್ತಾರೆ.

ಈ ಗುಡಿಯ ಈಶಾನ್ಯಕ್ಕೆ ಗದ್ದಿಗಿಮಠವೆಂಬ ಶ್ರೀ ಅಲ್ಲಮ ಪ್ರಭುವಿನ ಮಠವಿದೆ. ಇಲ್ಲಿ ಒಬ್ಬ ವಿರಕ್ತ ಮೂರ್ತಿಗಳಿರುತ್ತಾರೆ. ಇದಕ್ಕೆ ಸ್ಥಿರಚರವಾದ ಯಾವ ಆಸ್ತಿಯೂ ಇರುವುದಿಲ್ಲ ಇಲ್ಲಿ ನಿತ್ಯ ಪೂಜೆಯು ನಡೆಯುತ್ತಿರುತ್ತದೆ. ಇದರ ಆಗ್ನೇಯಕ್ಕಿರುವ ಮರಡಿಯ ಮೇಲೆ ಶ್ರೀ ಬಸವೇಶ್ವರನ ಅರಮನೆಯಿತ್ತೆಂದು ಹೇಳು ತ್ತಾರೆ. ಅದರ ಕೆಳಬದಿಗೆ ಗಂಜೀಕೆರೆಯ ಸ್ಥಾನವಿದೆ. ಬಸವೇ ಶ್ವರನ ಕಾಲದಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗಣಂ ಗಳ ಸಲುವಾಗಿ ಮಾಡಿದ ಬೋನವನ್ನು ಬಸಿದ ನೀರು ಬಂದು ಇಲ್ಲಿ ನಿಲ್ಲುತ್ತಿದುದರಿಂದ ಇದಕ್ಕೆ ಗಂಜೀಕೆರೆಯೆಂದು ಕರೆಯುತ್ತಿದ್ದ ರೆಂದು ಹೇಳುತ್ತಾರೆ. ಕಲ್ಯಾಣದ ಪೂರ್ವ ದಿಕ್ಕಿಗೆ ಸುಮಾರು ೧೨ ಮೈಲುಗಳ ಅಂತರದ ಮೇಲೆ ಶ್ರೀ ಮೋಳಿಗೆ ಮಾರಯ್ಯನ ಗವಿಯು ಈಗ್ಯೂ ಒಳ್ಳೇ ಸ್ಥಿತಿಯಲ್ಲಿದೆ. ಅದರ ಹತ್ತಿರ ಒಂದು ಹಳೇ ಹೆಸರು ಗೊತ್ತಿಲ್ಲದ ದೊಡ್ಡ ಮರವಿದೆ. ಇದು ಮಾರಯ್ಯನು ತಂದಿಟ್ಟ ಕಟ್ಟಿಗೆಯ ಹೊರೆಯು ಚಿಗಿತು ಬೆಳೆದಿರುವದೆಂದು ಜನ ರು ಹೇಳುತ್ತಾರೆ.

ಈ ಪಟ್ಟಣದ ಪೂರ್ವ ಭಾಗದಲ್ಲಿ ಪೀರಪಾಚ್ಛಾನ ಬಂಗ್ಲೆ ಯೆಂದು ಒಂದು ವಿಶಾಲವಾದ ಮುಸಲ್ಮಾನ ಸತ್ಪುರುಷನ ಗೋರಿ ಯ ಸ್ಥಾನವಿದೆ. ಇದರ ವಿಷಯವಾಗಿ ಜನರು ಹೇಳುವುದೇನಂದರೆ--

"ಕಲ್ಯಾಣ ಪ್ರಾಂತವು ಇಂತರ ದೌಲಾ ಎಂಬ ಫಕೀರನಿಗೆ ಜಾಹಗೀರು ದೊರೆಯಿತು. ಈತನ ಗುರು ನಿಲಂಗಿ ಎಂಬ ಗ್ರಾಮ ದ ಪೀರಪಾಚ್ಛಾ ಎಂಬವನು. ಈತನ ಗೋರಿಯನ್ನು ಕಲ್ಯಾಣದ ಶಿವಾನುಭವ ಮಂಟಪದ ಕಲ್ಲುಗಳಿಂದ ಮಾಡಿದ ಮಂಟಪದಲ್ಲಿ ಮಾಡಬೇಕೆಂದು ಇಂತರ ದೌಲಾ ಫಕೀರನು ಯೋಚಿಸಿ ಅದರಂತೆ ಮಂಟಪವನ್ನು ಮಾಡಿಸಿದನು. ಪೀರಪಾಚ್ಛಾನು ನಿಲಂಗಿಯಲ್ಲಿ ತೀರಲು ಅವನ ದೇಹವನ್ನು ಕಲ್ಯಾಣಕ್ಕೆ ತರುವಾಗ ದಾರಿಯಲ್ಲಿ ಅದನ್ನಿಟ್ಟು ಅವನ್ನು ತರುವವರು ನಮಾಜ ಮಾಡಿ ನೋಡುವಷ್ಟ ರಲ್ಲಿ ಪಿಂಜರದಲ್ಲಿ ಪೀರಪಾಚ್ಛಾನ ಶರೀರವು ಇಲ್ಲದಂತಾಗಿ ಅದರ ಬದಲಾಗಿ ಒಂದು ಜತಿ ಆವಿಗಿ, ಒಂದು ಬೆತ್ತ, ಒಂದು ಕಾವಿಯ ಕಪನಿ ಕಂಡವು. ಮತ್ತು ಇತ್ತ ಕಲ್ಯಾಣದಲ್ಲಿ ಇಂತರ ದೌಲಾನಿಗೆ ಆವಿಗಿ, ಬೆತ್ತ, ಕಾವಿಯ ಕಪನಿಗಳನ್ನೇ ಗೋರಿಯಲ್ಲಿಟ್ಟು ಕಬರ ಸ್ಥಾನವನ್ನು ಮಾಡೆಂದು ಸ್ವಪ್ನ ಬಿತ್ತು. ಅದರಂತೆ ಅತನು ಮಾಡಿದನು."

ಮಂಟಪವು ೪೪ ಕಂಬಗಳುಳ್ಳದ್ದಿದ್ದು ಕಬರಸ್ಥಾನದ ಮೇಲೆ ಕಾವಿಯ ಬಟ್ಟೆಯನ್ನೇ ಹಾಕಿರುತ್ತಾರೆ. ಇದರ ಪೂರ್ವಕ್ಕೆ ಇಂತರ ದೌಲಾನ ಕಬರಸ್ಥಾನವಿದ್ದು ಅದಕ್ಕೂ ಕಾವಿಯ ಬಟ್ಟೆಯನ್ನೇ ಹೊದಿಸಿರುತ್ತಾರೆ. ಇದೇ ಆವಾರದಲ್ಲಿಯೇ ಇಂತರ ದೌಲಾನ ವಂಶ ಜರ ಅನೇಕ ಕಬರಸ್ಥಾನಗಳಿದ್ದು ಮಧ್ಯದಲ್ಲಿ ಒಂದು ವಿಶಾಲವಾದ ಮಸೀದಿಯಿದೆ. ಪೀರಪಾಚ್ಛಾನ ಗೋರಿಯ ಮುಂಭಾಗದ ಫರಸಿ ಯ ಮಧ್ಯದಲ್ಲಿ ಒಂದು ದೊಡ್ಡ ಹಳೇ ಕನ್ನಡ ಶಿಲಾಲಿಪಿಯ ಕಲ್ಲನ್ನು ಕೂಡ್ರಿಸಿರುವರು. ಈ ಶಿಲಾಲಿಪಿಯು ಈಗ ಬಹಳ ಸವೆ ದು ಹೋಗಿರುವುದರಿಂದ ಅಕ್ಷರಗಳು ಸ್ಪಷ್ಟ ಕಾಣುವಂತಿಲ್ಲ.

ಹಳೇ ಕಟ್ಟಡಗಳ ಸಂರಕ್ಷಣೆಯ ಕಾಯಿದೆಯು ಬ್ರಿಟಿಷ್ ಇಂಡಿಯಾದಲ್ಲಿ ಅಮಲಿನಲ್ಲಿ ಇರುವಂತೆ ನಿಜಾಮ ಇಲಾಖೆಯಲ್ಲಿ ಅಂಥ ಕಾಯಿದೆಯು ಇದ್ದರೆ ಆ ಖಾತೆಯವರು ಆ ಕಾಯಿದೆಯ ನ್ನು ಈ ಕಟ್ಟಡಗಳಿಗೆ ಅನ್ವಯಿಸುವಂತೆ ಮಾಡಿದರೆ ವೀರಶೈವ ರಿಗೆ ಮಹದುಪಕಾರ ಮಾಡಿದಂತಾಗುವುದು.

ಕಲ್ಯಾಣಕ್ಕೆ ಮುಟ್ಟಬೇಕಾದರೆ ಪುಣೆಯಿಂದ ಕಲಬುರ್ಗಿಗೆ ಹೋಗುವ ದೊಡ್ಡ ಮಾರ್ಗದಿಂದ ಕಲ್ಯಾಣದಿಂದ ಸುಮಾರು ೬ ಮೈಲಿನ ಮೇಲೆ ದಾರಿಯು ಒಡೆಯುತ್ತದೆ. ಈ ೬ ಮೈಲು ದಾರಿ ಯು ಕಾಡುದಾರಿ ಇರುವದರಿಂದ ಪ್ರವಾಸಕ್ಕೆ ತೊಂದರೆಯಾಗು ತ್ತದೆ. ಈ ದಾರಿಯನ್ನು ಸರಕಾರದವರು ಸರಿಯಾಗಿ ಮಾಡಿದರೆ ಪ್ರವಾಸಿಕರಿಗೆ ಬಹಳ ಅನುಕೂಲವಾಗುವದು.

ವೀರಭದ್ರಪ್ಪ ಹಾಲಭಾವಿ.

ಜಗತ್ತಿನಲ್ಲಿಯೇ ಚಿಕ್ಕ ರಾಷ್ಟ್ರ. ಆದರೆ ಸ್ವತಂತ್ರ!

ಯುರೋಪಖಂಡದ ಭೀಷಣಸ್ಪರ್ಧೆಯ ರಾಷ್ಟ್ರಗಳ ನೆರೆಯಲ್ಲಿ ಬಹು ಚಿಕ್ಕ ರಾಷ್ಟ್ರಗಳು ಸ್ವತಂತ್ರವಾಗಿರುವುದು ಆಶ್ಚರ್ಯವಲ್ಲವೆ?

ಲಿಶ್ಟೆನ್‌ಟಿಯನ್— ಇದೊಂದು ೬೫ ಚದುರುಮೈಲು ವಿ ಸ್ತಾರದ ಸ್ವತಂತ್ರ ರಾಷ್ಟ್ರ. ಆಸ್ಟ್ರಿಯಾ, ಸ್ವಿಟ್ಸರ್ಲಂಡ್, ದೇಶ ಗಳ ಮಧ್ಯದಲ್ಲಿದೆ. ಜನಸಂಖ್ಯೆ ಹತ್ತು ಸಾವಿರ ಮಾತ್ರ ಒಕ್ಕಲ ತನವೇ ಮುಖ್ಯ ಉದ್ಯೋಗ. ಪರದೇಶದವರ ವ್ಯಾಪಾರವೇ ಆ ದೇಶದಲ್ಲಿಲ್ಲ. ಇಟಲಿಯ ಸಂಗಡ ನಮ್ಮ ವ್ಯಾಪಾರವೇ ಇಲ್ಲ; ಎಂದಮೇಲೆ ನಿಮ್ಮ ನಿಯಮ ನಮಗೇನು ಸಂಬಂಧವೆಂದು ರಾಷ್ಟ್ರ ಸಂಘಕ್ಕೆ ಈ ರಾಷ್ಟ್ರವು ತಿಳಿಸಿತು!

ಸಾಮರಿನೊ— ಇದು ೩೨ ಚದುರುಮೈಲು ವಿಸ್ತಾರದ ರಾಷ್ಟ್ರ! ಜನಸಂಖ್ಯೆ ೧೩ ಸಾವಿರ. ಪ್ರಜಾಪ್ರಭುತ್ವ. ೧೬ ರಿಂದ ೬೦ ವರುಷಗಳೊಳಗಿನವರೆಲ್ಲರೂ ಯುದ್ಧವಿದ್ಯೆಯನ್ನು ಕಲಿಯಲೇ ಬೇಕೆಂಬ ನಿರ್ಬಂಧ.

ಮೋನಕೊ— ಇದು ನಾಲ್ಕೇ ಚದುರುಮೈಲು ವಿಸ್ತಾರದ ರಾಷ್ಟ್ರ! ಜನಸಂಖ್ಯೆಯಾದರೂ ೨೩ ಸಾವಿರ! ಇದು ಫ್ರಾನ್ಸ ದೇಶದ ಗಡಿಯಲ್ಲಿ ಸ್ವತಂತ್ರವಾಗಿದೆ!

ಹಿಂದುಸ್ಥಾನವೇ?— ನೀನೆಷ್ಟು ಘನವೋ ಅಷ್ಟೇ ನಿನ್ನ ಪಾರತಂತ್ರ್ಯವೂ ಘನವಾಗಿದೆಯಲ್ಲಾ! ಅವು ಸ್ವತಂತ್ರದಲ್ಲಿ ಹೆಸರು ವಾಸಿಯಾದರೆ ನೀನು ಪರತಂತ್ರದಲ್ಲಿ ಹೆಸರುವಾಸಿಯಲ್ಲವೆ?

ಆದಿಜನರ ಧರ್ಮಾಂತರದ ನಿರ್ಧಾರ!

ಡಾ. ಅಂಬೇಡಕರರ ಮಹತ್ವದ ಭಾಷಣ.

ಯುವಕ ಪರಿಷತ್ತು.

ಅಖಿಲ ಮಹಾರಾಷ್ಟ್ರೀಯ ಆದಿಜನ ಯುವಕ ಪರಿಷತ್ತು ಮದ್ರಾಸ ಪ್ರಾಂತದ ಆದಿಜನ ಮುಂದಾಳುಗಳಾದ ರಾವಸಾಹೇಬ ಪ್ರೊಫೆಸರ್ ಎಸ್. ಶಿವರಾಜ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ತಾ. ೧೨-೧-೩೬ ನೆಯ ದಿವಸ ಪುಣೆಯ ಅಹಲ್ಯಾಶ್ರಮದ ಮುಂದಣ ಭವ್ಯವಾದ ಮಂಟಪದಲ್ಲಿ ಕೂಡಿದ್ದಿತು.

ಈ ಪರಿಷತ್ತಿಗೆ ಡಾ. ಭೀಮರಾವ ಅಂಬೇಡಕರ್ ಮೊದಲಾದ ಆದಿಜನ ಮುಂದಾಳುಗಳು ಸರ್, ಗೋವಿಂದರಾವ ಮಾಡಗಾಂವಕರ್, ಮಿ. ಅಶ್ರಫ ಅಲ್ಲಿ, ಸರದಾರ ಇಂದ್ರಸಿಂಗ್ ಮುಂತಾದ ಕೆಲವು ಹಿಂದು, ಮುಸಲ್ಮಾನ್, ಶೀಖ ಪ್ರಮುಖರು ಆಗಮಿಸಿದ್ದರು. ಪರಿಷತ್ತಿಗೆ ೧೫೦೦ ಆದಿಜನ ಸ್ತ್ರೀ ಪುರುಷರು ಸೇರಿದ್ದರು.

ಶ್ರೀಮಂತ ಸರ್ ಸಯಾಜಿರಾವ ಗಾಯಕವಾಡ, ಬ್ಯಾ. ಜಯಕರ, ಶ್ರೀಮಂತ ರಾಣೀಸಾಹೇಬ ಸಾಂಗಲಿ, ಡಾ. ಪರಾಂಜಪೆ ಮೊದಲಾದ ಅನೇಕ ಹಿತಚಿಂತಕರಿಂದ ಪರಿಷತ್ತಿನ ಶುಭ ಚಿಂತನಾರ್ಥವಾಗಿ ಸಂದೇಶಗಳು ಬಂದಿದ್ದವು. ಆದಿಜನರ ಪ್ರಸಿದ್ಧ ಸಂಗೀತಗಾರರಾದ ಪ್ರೊ. ಸದಾಶಿವರಾವ ಇವರು ತಾವು ರಚಿಸಿದ ಸ್ವಾಗತಪರ ಪದ್ಯವನ್ನು ಬಹು ಸ್ವಾರಸ್ಯವಾಗಿ ಹಾಡಿದನಂತರ ಸಭೆಯ ಕಾರ್ಯವು ಪ್ರಾರಂಭವಾಯಿತು.

ಸ್ವಾಗತಾಧ್ಯಕ್ಷರ ಭಾಷಣ.

ಯುವಕ ಪರಿಷತ್ತಿನ ಸ್ವಾಗತಾಧ್ಯಕ್ಷರಾದ ಶ್ರೀಯುತ ಬಿ. ರಾಜಾರಾಮ ಬಿ. ಎಸ್‌ಸಿ. ಇವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು.—

ಅಸ್ಪೃಶ್ಯತೆಯು ಹಿಂದು ಧರ್ಮದ ಒಂದಂಗವಾಗಿಯೇ ಇದೆಯೆಂದು ನನಗೆ ಮನವರಿಕೆಯಾಗಿದೆ. ಇದು ಹೋಗಬೇಕಾದರೆ ಹಿಂದುಗಳಲ್ಲಿರತಕ್ಕ ಎಲ್ಲ ಜಾತಿಗಳೂ ಲೋಪವಾಗಬೇಕು. ನಾವು ಅನೇಕ ಶತಮಾನಗಳಿಂದ ನಾನಾ ಹಿಂಸೆಗಳನ್ನು ಹೊಂದುತ್ತಾ ಹಿಂದು ಧರ್ಮದಲ್ಲಿಯೇ ಇದ್ದರೂ ನಮ್ಮ ದುರವಸ್ಥೆಯೇನೂ ದೂರಾಗಿಲ್ಲ. ಹಿಂದು ಧರ್ಮದಲ್ಲಿರುವ ಜಾತಿಭೇದದ ವಿರುದ್ಧವಾಗಿಯೇ ನಾವು ಇಷ್ಟು ಚಟುವಟಿಕೆಯನ್ನು ನಡೆಸುತ್ತಿದ್ದೇವೆಯೇ ವಿನಾ ಹಿಂದು ಧರ್ಮದ ವಿಷಯವಾಗಿ ನಾವು ವಿರೋಧಿಸುವುದಿಲ್ಲ.

ಬ್ಯಾ. ಜಯಕರರ ಗೊತ್ತುವಳಿಯನ್ನು ಮೊನ್ನೆ ಕೂಡಿದ ಹಿಂದು ಮಹಾಸಭೆಯಲ್ಲಿ ಅಧ್ಯಕ್ಷರಾದ ಪಂಡಿತ ಮಾಲವೀಜಿಯವರು ತಳ್ಳಿಹಾಕಿದುದರ ಮೇಲಿಂದ ನಮಗೆ ಸಹಕರಿಸಿ ನಡೆಯಿರೆಂದು ಹೇಳುವವರ ಕಣ್ಣಿಗೆ ಅಂಜನ ಬಿದ್ದಿರಬಹುದು. ಹಿಂದು ಮುಸಲ್ಮಾನರ ಐಕ್ಯದ ಸಮಸ್ಯವನ್ನು ಬಿಡಿಸುವ ಮುಂಚೆ ನಮ್ಮ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯನ್ನು ಬಿಡಿಸಿರಿ. ಆಮೇಲೆ ಆ ಐಕ್ಯವು ತಾನೇ ಆಗುತ್ತದೆ. ಸ್ವರಾಜ್ಯದ ವಿಷಯವು ಕೂಡಾ ಇದರ ಮೇಲೆಯೇ ಮುಖ್ಯವಾಗಿ ಅವಲಂಬಿಸಿದೆ.

ಅಧ್ಯಕ್ಷರ ಭಾಷಣ.

ಯುವಕ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಶಿವರಾಜರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು —

"ಬರುವ ರಾಜಕೀಯ ಸುಧಾರಣೆಯಲ್ಲಿ ನಮಗೆ ತೃಪ್ತಿಕರವಾಗಿ ಕೌನ್ಸಿಲ್‌ದಲ್ಲಿ ಸ್ಥಾನಗಳು ದೊರೆತಿವೆ. ನಮಗೆ ರಾಜಕಾರಣದಲ್ಲಿ ಇದೇ ಈಗ ಪ್ರವೇಶ ದೊರೆತುದರಿಂದ ನಾವು ಈಗ ದೊರೆತ ಸೌಲಭ್ಯದ ಪ್ರಯೋಜನವನ್ನು ಸರಿಯಾಗಿ ಮಾಡಿಕೊಳ್ಳಬೇಕು. ನಾವು ನಮ್ಮ ರಕ್ಷಣೆಯ ವಿಷಯದಲ್ಲಿ ಜಾಗರೂಕರಾಗಿರಬೇಕು. ಇಲ್ಲದಿದ್ದರೆ ಸ್ಪೃಶ್ಯ ಹಿಂದುಗಳು ನಮ್ಮನ್ನು ಹಿಂಡಿ ಹಿಪ್ಪೆ ಮಾಡಬಹುದು.

ಈ ವರೆಗೂ ಧರ್ಮದ ಹೆಸರಿನಿಂದ ನಮ್ಮನ್ನು ಬಹು ದುರವಸ್ಥೆಗೀಡುಮಾಡಿದ್ದಾರೆ. ಹಿಂದುಗಳಲ್ಲಿಯ ಜಾತಿಭೇದವು ನಮ್ಮನ್ನು ಹಾಳು ಮಾಡಿ ನಾವು ತಲೆ ಎತ್ತದಂತೆ ಮಾಡಿಬಿಟ್ಟಿದೆ. ಒಂದಾನೊಂದು ಕಾಲದಲ್ಲಿ ಯಾವ ರಾಷ್ಟ್ರದ ಯಜಮಾನರೇ ನಾವಾಗಿದ್ದೆವೋ ಅದೇ ರಾಷ್ಟ್ರದಲ್ಲಿ ಈಗ ನಾವು ಗುಲಾಮರಂತೆ ಆಗಿದ್ದೇವೆ ಹಿಂದುಗಳು ಜಾತಿ ವ್ಯವಸ್ಥೆಯನ್ನು ನಾವು ರಾಜಕಾರಣದಲ್ಲಿ ಸೇರದಂತೆಯೇ ಮಾಡಿಬಿಟ್ಟಿದ್ದಾರೆ. ಪಾರ್ಲಿಮೆಂಟಿನ ಕೃಪೆಯಿಂದ ಈಗ ನಮಗೆ ರಾಜಕಾರಣದಲ್ಲಿ ಪ್ರವೇಶಿಸಲು ಅವಕಾಶ ದೊರೆತಿದೆ.

ನಾವು ಸಂಘಟಿತರಾಗಿ ಕೌನ್ಸಿಲ್ಲುಗಳಲ್ಲಿ ಪ್ರಯತ್ನಿಸದಿದ್ದರೆ ಸ್ಪೃಶ್ಯ ಹಿಂದುಗಳು ಮತ್ತೆ ನಮ್ಮನ್ನು ಗುಲಾಮಗಿರಿಯಲ್ಲಿ ಹಾಕಲು ಪ್ರಯತ್ನಿಸದೆ ಬಿಡರು. ನಮ್ಮ ವಿರುದ್ಧವಾಗಿ ಸ್ಪೃಶ್ಯ ಹಿಂದುಗಳು ಈಗಲೇ ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ ಈ ರಾಜಕಾರಣದ ವಿಷಯದಲ್ಲಿ ಬಹು ಜಾಗೃತರಾಗಿರಿ.

ಅಸ್ಪೃಶ್ಯತೆಯು ಹಿಂದು ಧರ್ಮದ ಮೂಲವಾಗಿದೆ. ಇದು ನಿವಾರಣೆಯಾಗುವ ಲಕ್ಷಣ ತೋರುವುದಿಲ್ಲ. ಮಿ. ಗಾಂಧಿಯವರು ಒಂದು ವರುಷದಲ್ಲಿ ಸ್ವರಾಜ್ಯ ದೊರಕಿಸಿಕೊಡುವುದಾಗಿ ಹೇಳಿದಂತೆಯೇ ಅಸ್ಪೃಶ್ಯತಾ ನಿವಾರಣೆಯ ಪ್ರಯತ್ನವೂ ಮಾತಿನಲ್ಲಿಯೇ ಮುಗಿಯುವುದು. ಮಿ. ಗಾಂಧಿಯವರು ಎಷ್ಟು ದುರ್ಬಲರಾಗಿದ್ದಾರೆಂಬುದಕ್ಕೆ ಆದಿಜನರಿಗೆ ಕವಿಠಾ ಗ್ರಾಮವನ್ನು ಬಿಟ್ಟು ಹೋಗಿರೆಂದು ಹೇಳಿದುದೇ ಸಾಕ್ಷಿಯಾಗಿದೆ.

ಕಾಂಗ್ರೆಸ್ಸಿನವರ ಕೌನ್ಸಿಲ್ಲ ಪ್ರವೇಶದಿಂದಲಾಗಲಿ ಅಥವಾ ಮಿ. ಗಾಂಧಿಯವರ ಉಪೋಷಣದಿಂದಾಗಲಿ ಇಲ್ಲವೆ ಇನ್ನಾವ ಪ್ರಯತ್ನಗಳಿಂದಲಾಗಲಿ ಈ ಅಸ್ಪೃಶ್ಯತೆಯು ಹಿಂದು ಧರ್ಮದಿಂದ ಹೋಗುವುದು ಶಕ್ಯವೇ ಇಲ್ಲ. ಆದಕ್ಕಾಗಿ ನಾವೇ ಈ ಧರ್ಮವನ್ನು ಬಿಟ್ಟುಬಿಡುವುದು ಅತ್ಯಾವಶ್ಯಕ.

ಧರ್ಮತ್ಯಾಗವೆಂದರೆ ಬೇರೆ ಧರ್ಮದಲ್ಲಿಯೇ ಹೋಗಬೇಕೆಂಬ ನಿಯಮವೇನೂ ಇಲ್ಲ. ನಾವೇ ಒಂದು ನೂತನ ಧರ್ಮವನ್ನು ಸ್ಥಾಪಿಸಬಹುದು. ಹಿಂದುಸ್ಥಾನಕ್ಕೆ ಹಿಂದುಧರ್ಮ ಬರುವ ಮುಂಚೆ ನಮ್ಮ ಆದಿದ್ರಾವಿಡರ ಯಾವ ಧರ್ಮವಿದ್ದಿತೋ ಆ ಪ್ರಾಚೀನ ಧರ್ಮವನ್ನೇ ಪುನರುಜ್ಜೀವನಗೊಳಿಸಬಹುದು. ನಾವು ಮಾಡಬೇಕಾದುದು ಇನ್ನೂ ನಿರ್ಧಾರವಾಗಿಲ್ಲ. ಸಂಪೂರ್ಣ ಯೋಚನೆಯ ನಂತರವೇ ಮುಂದರಿಯಬೇಕಾಗಿದೆ. ಡಾ. ಅಂಬೇಡಕರರು ಚಿರಾಯುಗಳಾಗಲಿ. ಅವರ ಘೋಷಣದಿಂದ ನಮ್ಮಲ್ಲಿ ಅಭೂತಪೂರ್ವ ಜಾಗೃತಿಯುಂಟಾಗಿದೆ."

ಇತರ ಭಾಷಣ.

ಶ್ರೀ ಬಿ ಎಚ್. ವರಾಳೆ— ಜಗತ್ತಿನ ಎಲ್ಲಾ ಧರ್ಮಗಳಲ್ಲಿ ಹಿಂದು ಧರ್ಮವು ತ್ಯಾಜ್ಯವಾದುದು. ಈ ಧರ್ಮದಲ್ಲಿರುವವರಿಗೆ ಮನುಷ್ಯತ್ವವೇ ಪ್ರಾಪ್ತವಾಗುವುದಿಲ್ಲ. ಇಂತಹ ಧರ್ಮದಲ್ಲಿರಬೇಕೆಂಬ ನಾಚಿಕೆಗೇಡಿತನವು ಯಾವ ಅಸ್ಪೃಶ್ಯನಿಗೂ ಬೇಡ. ಇಲ್ಲಿ ಕೂಡಿದ ಹಿಂದು ಮಹಾಸಭೆಯ ಸ್ವಾಗತಾಧ್ಯಕ್ಷರ ಭಾಷಣವು ಒಹು ಕೀಳುತನದ್ದಾಗಿದ್ದಿತು. ಡಾ. ಅಂಬೇಡಕರರ ಹಿಂದೆ ಏಳು ಕೋಟಿ ಜನರಿದ್ದಾರೆ. ಆದರೆ ಆ ಸ್ವಾಗತಾಧ್ಯಕ್ಷರ ಕಡೆ ೫-೬ ಮಡಿಯ ಭಟ್ಟರಿರಬಹುದು. ಅಸ್ಪೃಶ್ಯರಿಗೆ ಕಿರಾಣಿ ಅಂಗಡಿ, ಹಾಟೆಲ್ ಮೊದಲಾದ ಯಾವ ಅಂಗಡಿಗಳನ್ನಿಟ್ಟುಕೊಂಡು ವ್ಯಾಪಾರ ಮಾಡಲು ಅವಕಾಶವಿಲ್ಲ. ಈ ಧರ್ಮವನ್ನು ಬಿಟ್ಟು ಹೋದ ವಿನಾ ಇವರ ಸಾಂಪತ್ತಿಕ ಸುಧಾರಣೆಯಾಗುವುದು ಶಕ್ಯವಿಲ್ಲ.

ಶ್ರೀ ಹರಿಭಾವು ತೋರಣೆ— ಸ್ಪೃಶ್ಯ ಹಿಂದುಗಳು ತಮ್ಮ ಕಡೆ ನಮ್ಮನ್ನು ಎಳೆದುಕೊಳ್ಳಲು ಹವಣಿಸುತ್ತಿದ್ದಾರೆ. ಅವರ ಮಾತನ್ನು ನಂಬಬೇಡಿರಿ. ಅವರು ಕೊಡಿಸುವ ಕೋಟಿ ರೂಪಾಯಿ ನಮ್ಮ ಹಿತಕ್ಕಲ್ಲ. ತಮ್ಮ ಮಕ್ಕಳಿಗೂ ಪೆನ್‌ಶನ್ ತೆಗೆದುಕೊಂಡವರಿಗೂ ಕೆಲಸ ಹಚ್ಚಲು ಹಣ ಕೂಡಿಸುತ್ತಿದ್ದಾರೆ. ಹಿಂದು ಧರ್ಮದ ಮೋಸಗಾರಿಕೆಯನ್ನು ವಿವರಿಸಲು ಜಗತ್ತಿನ ಯಾವ ಕೋಶದಲ್ಲಿಯೂ ಶಬ್ದಗಳಿಲ್ಲ. ಇದಕ್ಕೆ ಒಂದಲ್ಲ, ಎರಡಲ್ಲ, ಅನಂತ ಮುಖ ನಮ್ಮ ಪರಮ ಪೂಜ್ಯ ಮುಂದಾಳು ಡಾ. ಅಂಬೇಡಕರರಿಗೆ ನಾವು ಈ ಧರ್ಮದಲ್ಲಿ ಒಂದು ನಿಮಿಷವಾದರೂ ಇರಲು ಸಿದ್ಧವಿಲ್ಲವೆಂದು ಹೇಳೋಣ.

ಶ್ರೀ ಎಸ್ ವೆಂಕಟರಾವ ಹೈದರಾಬಾದ— ನಾವು ಈ ದೇಶದಲ್ಲಿ ಬದುಕಿದ್ದೇವೆಂಬುದಕ್ಕೆ ಈ ಗೊತ್ತುವಳಿಯೇ ಸಾಕ್ಷಿ. ಧರ್ಮಾಂತರದ ಗೊತ್ತುವಳಿಯನ್ನು ನಾವು ಮಾಡದಿದ್ದರೆ ನಾವು ಸತ್ತವರೆಂದೇ ತಿಳಿಯಬೇಕು. ಅಮೇರಿಕೆಯ ನಿಗ್ರೋ ಜನರು ತಮ್ಮ ಸ್ವಾತಂತ್ರ್ಯಕ್ಕೋಸ್ಕರ ಹೇಗೆ ಹೋರಾಡಿದರೋ ಹಾಗೆಯೇ ನಾವು ನಮ್ಮ ಧಾರ್ಮಿಕ, ಸಾಮಾಜಿಕ, ಆರ್ಥಿಕ ಗುಲಾಮಗಿರಿಯನ್ನು ನಿವಾರಣೆ ಮಾಡಲು ಹೋರಾಡಬೇಕಾಗಿದೆ. ಹಿಂದು ಧರ್ಮವು ಈ ವರೆಗೆ ನಾಶ ಮಾಡಿದ ನಮ್ಮ ಮನುಷ್ಯತ್ವವನ್ನು ಡಾ. ಅಂಬೇಡಕರರು ತಮ್ಮ ಘೋಷಣದಿಂದ ಜಾಗೃತಗೊಳಿಸಿದ್ದಾರೆ. ಅವರ ಅಪ್ಪಣೆಯಂತೆ ನಡೆಯೋಣ.

ಶ್ರೀ ಸೀತಾರಾಮ ಲಾಂಡಗೆ ಪುಣೆ— ಹಿಂದು ಧರ್ಮದ ವ್ಯಾಖ್ಯೆಯನ್ನು ಯಾವ ಸನಾತನಿಗಳು ಮಾಡಿದ್ದಾರೆಯೋ ಅವರು ಸೈತಾನಿ ವೃತ್ತಿಯವರು. ಸನಾತನಿಗಳು ನಿಜವಾದ ಧರ್ಮವನ್ನು ತುಳಿದು ನಮ್ಮನ್ನು ಪಶು ಪಕ್ಷಿಗಳಿಗಿಂತಲೂ ಕೀಳಾಗಿ ಕಾಣುತ್ತಿದ್ದಾರೆ. ನಾಯಿಗಿಂತಲೂ ಕಡೆಯಾಗಿ ನಮ್ಮನ್ನು ಕಾಣುವ ಹಿಂದು ಧರ್ಮದಲ್ಲಿ ನಾವು ಕ್ಷಣಮಾತ್ರವಾದರೂ ಇರಕೂಡದು.

ಶ್ರೀ ಬಿ. ಎಸ್. ಕದಮ ನಗರ— ಅಸ್ಪೃಶ್ಯತೆಯನ್ನು ನಿವಾರಣೆ ಮಾಡಿಕೊಳ್ಳುವುದೆಂದರೆ ಮನುಷ್ಯತ್ವವನ್ನು ಸಂಪಾದಿಸುವುದು. ಸ್ಪೃಶ್ಯ ಹಿಂದುಗಳಲ್ಲಿ ಒಕ್ಕಟ್ಟಿದ್ದಂತೆ ನಮ್ಮಲ್ಲಿಲ್ಲ. ಕಾಂಗ್ರೆಸ್ ಮತ್ತು ಹಿಂದು ಮಹಾಸಭಾ ಇವು 'ನಿಮಕ ಹರಾಮ' ಸಂಸ್ಥೆಗಳಾಗಿವೆ. ಇವುಗಳಲ್ಲಿ ಸೇರಿದ ಸಕಟ ರಾಜಭೋಜರಿಗೆ ಮೋಸ ಹೋಗಬೇಡಿರಿ, ಪಂಡಿತ ಮಾಲವೀಯವರ ಮಾತಿಗೆ ಮರುಳಾಗಬೇಡಿರಿ. ನಮ್ಮ ನಿಜವಾದ ಮುಂದಾಳು ಡಾ. ಅಂಬೇಡಕರರು.

ಅಸ್ಪೃಶ್ಯತಾ ನಿವಾರಣೆಯ ದೃಶ್ಯವೆಂದು ಈ ದಿನ ನಾವು ಇಲ್ಲಿ ಹಿಂದು ಧರ್ಮದ ಒಂದು ಭವ್ಯ ಮೂರ್ತಿಯನ್ನು ಮಾಡಿ ಸುಡಬೇಕಾಗಿತ್ತು. ಮೇಲು ಕೀಳುಗಳ ವಿಷಮತ್ವದಿಂದ ಕೂಡಿದ ಈ ಹಿಂದು ಧರ್ಮವು ಜಗತ್ತಿನಲ್ಲಿ ಒಂದು ಕ್ಷಣ ಮಾತ್ರ ಇರಲು ಯೋಗ್ಯವಾದುದಲ್ಲ.

ಶ್ರೀ. ರಾಮಾ ಬಾಲಾ. ಭಂಗಿ ಸಮಾಜದ ಪ್ರಮುಖರು— ಹಿಂದು ಧರ್ಮದಲ್ಲಿ ೩೩ ಕೋಟಿ ದೇವರು; ೩೩ ಕೋಟಿ ಜನರು ! ಈ ಕೋಟ್ಯಾವಧಿ ದೇವರನ್ನೂ ಇವರ ಧರ್ಮವನ್ನೂ ಇವರ ಕಡೆಗೇ ಒಪ್ಪಿಸಿ ನಾವು ಬೇರೆ ಧರ್ಮದಲ್ಲಿ ಹೋಗೋಣ. ನಾಶಿಕದ ಭಟ್ಟರು ನಾವು ಜಾಗ್ರತೆ ಹೋಗಲೆಂದೂ ನಾವು ಒಂದು ರೋಗವಾಗಿದ್ದೇವೆಂದೂ ಹೇಳುತ್ತಾರೆ. ಈ ರೋಗ ಇಂದು ನಿಮ್ಮಲ್ಲಿಂದ ಬೇರೆ ಕಡೆ ಹೋದರೆ ಆಮೇಲೆ ಅದೇ ಭಯಂಕರ ಸ್ವರೂಪದಿಂದ ನಿಮ್ಮ ಎದೆಯ ಮೇಲೆ ಬಂದು ಕುಳಿತುಕೊಳ್ಳುವುದೆಂಬುದನ್ನು ನೆನಪಿನಲ್ಲಿಡಿರಿ. ಡಾ. ಅಂಬೇಡಕರರು ಧರ್ಮಾಂತರ ಹೊಂದಲಿ, ಹೊಂದದಿರಲಿ; ನಾವು ಮಾತ್ರ ಇಂದಿನಿಂದಲೇ ಧರ್ಮಾಂತರ ಹೊಂದುವ ಸಿದ್ಧತೆಯನ್ನು ಮಾಡಬೇಕು.

ಶ್ರೀ ಎಸ್. ಎನ್. ಶಿವತರಕರ್ ಮುಂಬೈ— ಡಾ. ಅಂಬೇಡಕರರ ಘೋಷಣದಿಂದ ಜಗತ್ತೇ ನಡುಗಿದೆ. ಪುಣೆಯಲ್ಲಿ ಮೊನ್ನೆ ಕೂಡಿದ ಅಸ್ಪೃಶ್ಯತಾ ನಿವಾರಣೆಯ ಪರಿಷತ್ತು ನಾಲ್ಕಾರು ಬ್ರಾಹ್ಮಣರ ಪರಿಷತ್ತು. ಡಾ. ಅಂಬೇಡಕರರ ಹಿಂದೆ ಯಾರಿದ್ದಾರೆಂದು ಆ ಪರಿಷತ್ತಿನಲ್ಲಿ ಒಬ್ಬರು ಕೇಳಿದ್ದರು. ಅವರು ಈಗ ಇಲ್ಲಿ ಒಂದು ನೋಡಲಿ. ಹಿಂದು ಮಹಾಸಭೆಯಲ್ಲಿದ್ದ ಅಸ್ಪೃಶ್ಯರು ತಮ್ಮ ಸಮಾಜದ ಮುಂದಾಳುಗಳಲ್ಲ. ಎಲ್ಲಿ ನೋಡಿದರೂ ಬ್ರಾಹ್ಮಣರೇ ಮುಂದೆ. ಕಮ್ಯುನಿಸ್ಟ, ಕಾಂಗ್ರೆಸ್, ಹಿಂದು ಮಹಾಸಭಾ, ಈ ಎಲ್ಲಾ ಚಟುವಟಿಕೆಗಳಲ್ಲಿಯೂ ಬ್ರಾಹ್ಮಣರೇ ಮುಂದೆ. ಆದರೆ ಜಾತಿ ನಿವಾರಣೆಯ ಚಟುವಟಿಕೆಗೆ ಮಾತ್ರ ಹಿಂದೆ. ಏಕೆಂದರೆ ಜಾತಿಭೇದ ಹೋದಮೇಲೆ ಬ್ರಾಹ್ಮಣರ ಬ್ರಾಹ್ಮಣ್ಯವು ಹೇಗೆ ಉಳಿಯುತ್ತದೆ ?

ನಾವು ಒಬ್ಬೊಬ್ಬರಾಗಿ ಧರ್ಮಾಂತರ ಹೊಂದಬಾರದು. ಏನಾದರೂ ಹೇಳಿ ನಮ್ಮನ್ನು ಮೋಸಗೊಳಿಸುವವರಿದ್ದಾರೆ. ಆದಕಾರಣ ನಮ್ಮ ಮುಂದಾಳುಗಳು ಹೇಳಿದಾಗ ನಾವೆಲ್ಲರೂ ಗುಂಪಾಗಿಯೇ ಧರ್ಮಾಂತರ ಹೊಂದಬೇಕು. ಗಾಂಧಿ, ಮಾಲವೀಯ, ಕೇಳಕರ ಇವರಾರೂ ಹಿಂದುಗಳ ಮುಂದಾಳುಗಳಲ್ಲ. ಏಕೆಂದರೆ ಇವರ ಮಾತನ್ನು ಯಾವ ಹಿಂದುಗಳೂ ಕೇಳುವುದಿಲ್ಲ. ಆದಕಾರಣ ತಮ್ಮ ಮುಂದಾಳುತನವನ್ನು ಇವರು ಬಿಟ್ಟುಬಿಡಬೇಕು. ಕೇಳಕರರು ತಮ್ಮ ಕೆಲವು ಚಿತ್ಪಾವನ ಬ್ರಾಹ್ಮಣರ ಮುಂದಾಳುಗಳಾಗಿರಲು ಅಡ್ಡಿಯಿಲ್ಲ.

ಶ್ರೀ ಬಿ. ಕೆ. ಗಾಯಕವಾಡ— ಅಸ್ಪೃಶ್ಯರಲ್ಲಿಯ ಜಾತಿಭೇದವನ್ನು ತೆಗೆದುಹಾಕುವ ಗೊತ್ತುವಳಿಯನ್ನು ಸಭೆಯ ಮುಂದಿಟ್ಟಾಗ ಹಿಂದು ಮಹಾಸಭೆಯ ಭಟ್ಟರ ಸಭೆಯಲ್ಲಿ ಯಾವ ಗೊತ್ತುವಳಿ ಒಪ್ಪಿಗೆಯಾಗಲಿಲ್ಲವೋ ಅದು ಈಗ ನಿಮ್ಮಿಂದ ಒಪ್ಪಿಗೆಯಾಗಬೇಕು. ನಾವೆಲ್ಲರೂ ಧರ್ಮಾಂತರ ಹೊಂದುವ ಮುಂಚೆ ನಮ್ಮಲ್ಲಿರುವ ಜಾತಿ ಭೇದಗಳನ್ನೆಲ್ಲಾ ತೆಗೆದುಹಾಕಿರಬೇಕು.

ಶ್ರೀ ರಾಮಚಂದ್ರ ಗುಣಾಜಿ ಸಕಟೆ— ಎಲ್ಲರೂ ದೇವರ ಮಕ್ಕಳು. ಹುಟ್ಟಿಸುವಾಗ ಈತ ಬ್ರಾಹ್ಮಣ, ಆತ ಮರಾಠಾ ಎಂದು ದೇವರೇನೂ ಚೀಟಿ ಕಟ್ಟಿ ಹುಟ್ಟಿಸುವುದಿಲ್ಲ. ಈ ಭೇದವನ್ನು ಬ್ರಾಹ್ಮಣರು ಮತ್ತು ಮರಾಠೆಯವರು ಮಾಡಿದ್ದಾರೆ. ಇವರ ಮನೆಯಲ್ಲಿ ಆಕಳು ಹಿಂಡುವ ವರೆಗೆ ಅದನ್ನು ಜೋಪಾನ ಮಾಡುತ್ತಾರೆ. ಅದು ಸತ್ತಮೇಲೆ ನಾವು ಎಳೆದುಕೊಂಡು ಹೋಗಬೇಕಂತೆ. ಅದೇಕೆ ? ಹಾಗಾದರೆ ತಮ್ಮ ಮನೆಯಲ್ಲಿ ಸತ್ತವರನ್ನು ನಮ್ಮ ಕಡೆ ಕೊಡುತ್ತಾರೆಯೇ ? ಹಿಂದು ಧರ್ಮಕ್ಕಿಂತ ಮುಸಲ್ಮಾನ್ ಮತ್ತು ಕ್ರಿಶ್ಚನ್ ರಾಜ್ಯಕರ್ತರ ಧರ್ಮ ಬಹು ಶ್ರೇಷ್ಠ.

ಡಾ. ಪಿ. ಜಿ. ಸೋಳಂಕಿ— ನಾವು ಸೋಮವಂಶೀಯ ಪಾಂಡವರ ಸಂತತಿಯವರು. ಆಗ ಕುರುಕ್ಷೇತ್ರದಲ್ಲಿ ಕೃಷ್ಣನ ಸಹಾಯದಿಂದ ಪಾಂಡವರು ಯುದ್ಧ ಮಾಡಿದಂತೆ ಈಗ ಕೃಷ್ಣನಂತಿರುವ ಡಾ. ಅಂಬೇಡಕರರ ಅಧಿಪತ್ಯದಲ್ಲಿ ನಾವು ಈ ಧರ್ಮ ಯುದ್ಧವನ್ನು ಹೂಡಿದ್ದೇವೆ. ಗಾಂಧಿಯವರು ನಮಗೆ ಇಚ್ಛೆಯಿಲ್ಲದ 'ಹರಿಜನ' ಎಂಬ ಹೆಸರನ್ನು ನಮಗಿಟ್ಟಿದ್ದಾರೆ. ನಮಗೆ ಪ್ರತ್ಯೇಕ ಪ್ರಾತಿನಿಧ್ಯವೇ ಬೇಕಾಗಿದೆ. ಗಾಂಧಿಯವರ ಪ್ರಾಣವನ್ನುಳಿಸಲು ಆಗ ನಾವು ನಮ್ಮ ಇಷ್ಟವಿಲ್ಲದೆ ಪುಣೆ ಒಪ್ಪಂದಕ್ಕೆ ಒಪ್ಪಿಗೆ ಕೊಟ್ಟೆವು.

ಹಿಂದು ಧರ್ಮವು ಹೇಡಿಗಳ ಧರ್ಮ. ಈ ಹೇಡಿಗಳು ನಮ್ಮ ಮೇಲೆ ಇರಬೇಕೆಂದು ಮಂಡಲಾಕಾರ ಪರಿಷತ್ತಿನಲ್ಲಿ ಗಾಂಧಿಯವರು ಬಹು ಪ್ರಯತ್ನಿಸಿದರು ಆದರೆ ಅದು ಕೈಗೂಡಲಿಲ್ಲ. ನಮ್ಮನ್ನು ಮುಟ್ಟಬೇಡಿರೆಂದು ಹೇಳುವ ಬ್ರಾಹ್ಮಣ, ಗುಜರಾಥಿ, ಮೊದಲಾದ ಎಲ್ಲಾ ಹಿಂದುಗಳು ಮುಂಬೈಯಲ್ಲಿ ಬೇರೆಯವರ ಹೋಟಲಿನಲ್ಲಿ ತಿನ್ನಬಾರದನ್ನು ತಿನ್ನುತ್ತಿದ್ದಾರೆ. ಇವರ ಮಡಿ ಒಲಿಯ ಹತ್ತಿರವೆ. ಒಲಿಯ ಹತ್ತಿರ ಇರುವವರು ಹೆಂಗಸರು. ಅದಕ್ಕಾಗಿ ಈ ಹೆಣ್ಣು ಧರ್ಮದಲ್ಲಿ ಒಂದು ನಿಮಿಷವಾದರೂ ಇರಬೇಡಿರಿ.

ಡಾ. ಅಂಬೇಡಕರರೇ ನಮ್ಮ ಸರ್ವಸ್ವ. ನಮಗೆ ವೇದ, ಶಾಸ್ತ್ರ, ಶಂಕರಾಚಾರ್ಯ, ಸಂತ, ಮಹಂತರಾರೂ ಬೇಡ. ಡಾ. ಅಂಬೇಡಕರರೇ ನಮಗೆ ಇವೆಲ್ಲ. ಹಿಟಲರ್, ಮುಸೋಲಿನಿ, ಕೇಮಾಲ ಪಾಶಾರವರಿಗೆ ಕೂಡಾ ೭ ಕೋಟಿ ಜನಗಳ ಬೆಂಬಲವಿಲ್ಲ. ನಮ್ಮ ಡಾ. ಅಂಬೇಡಕರರಿಗೆ ೭ ಕೋಟಿ ಜನರ ಬೆಂಬಲವಿದೆ.

ಡಾ. ಅಂಬೇಡಕರರ ಭಾಷಣ.

ಅಧ್ಯಕ್ಷರಿಗೆ ಕೃತಜ್ಞತೆಯನ್ನು ಅರ್ಪಿಸುವಾಗ ಡಾ. ಅಂಬೇಡಕರರು ಒಂದು ಮಹತ್ವದ ಭಾಷಣವನ್ನು ಮಾಡಿದರು. ಅದರ ಮುಖ್ಯಾಂಶ ಹೀಗಿದ್ದಿತು.—

" ಈಗ ನಾವು ಪ್ರಾರಂಭಿಸಿದ ಚಟುವಟಿಕೆಗೆ ಒಬ್ಬನ ಡೊಂಬರಾಟವೆಂದು ಕೆಲವರು ಟೀಕಿಸುತ್ತಿದ್ದಾರೆ. ಈ ಚಟುವಟಿಕೆಯಾಗಲಿ ಅಥವಾ ಜಗತ್ತಿನಲ್ಲಿ ನಡೆಯುವ ಯಾವ ಚಟುವಟಿಕೆಯೇ ಆಗಲಿ ಒಬ್ಬನಿಂದಲೇ ಕೊನೆಗಾಣುವುದಿಲ್ಲ. ನನ್ನ ತರುವಾಯ ನೀವೂ ದೊಳ್ಳು ಬಾರಿಸಿ ಮುಂದೆ ಬರಲು ಸಿದ್ಧರಾಗಬೇಕು. ನನ್ನ ಕಡೆ ಈ ವರೆಗೆ ಈ ಸಂಬಂಧವಾಗಿ ನಡೆದ ಚರ್ಚೆಗಳಲ್ಲಿ ಎರಡೇ ಅಭಿಪ್ರಾಯಗಳಿವೆ.

(೧) ಕೆಲವು ನಿಯಮಗಳನ್ನು ಗೊತ್ತುಮಾಡಿಕೊಡಿರಿ. ಅಸ್ಪೃಶ್ಯ ಹಿಂದುಗಳಿಂದ ನೆರವೇರದಿದ್ದರೆ ಧರ್ಮಾಂತರ ಹೊಂದಿರಿ. (೨) ಧರ್ಮಾಂತರ ಹೊಂದುವುದು ಅನರ್ಥಕರ. ಆದಕಾರಣ ಆ ಮಾರ್ಗವನ್ನು ಹಿಡಿಯಬೇಡಿರಿ. ಈ ಅಭಿಪ್ರಾಯಗಳ ಚರ್ಚೆಯನ್ನು ಮಾಡಲು ಇದು ಅನುಕೂಲ ಸಮಯವಲ್ಲ. ನಿಮಗೆ ನನ್ನಲ್ಲಿ ವಿಶ್ವಾಸವಿದ್ದರೆ ಧರ್ಮಾಂತರ ಹೊಂದಲು ಸಿದ್ಧರಾಗಿರಿ. ಏಸುಕ್ರಿಸ್ತನು ಜ್ಯೂ ಜನರಿಗೆ ಹೀಗೆ ಹೇಳಿದ್ದನು

Be unto me, littte Children and I will save you from sin.

"ಕೂಸುಗಳು ತಾಯಿಯ ಮೇಲೆ ವಿಶ್ವಾಸವಿಡುವಂತೆ ನನ್ನ ಮೇಲೆ ವಿಶ್ವಾಸವಿಡಿರಿ. ನಾನು ಹೇಳುವ ಧರ್ಮವನ್ನು ಅನುಸರಿಸಿರಿ !" ನಾನು ಸ್ಪೃಶ್ಯ ಜನರಿಗೆ ಹೇಳುವ ನಿಯಮಗಳನ್ನು ಅನುಸರಿಸಲು ಅವರಿಗೆ ಎಂದಿಗೂ ಶಕ್ಯವಿಲ್ಲ. ಜನಾಂಗಕ್ಕೆ ಶಿಕ್ಷಣ ದೊರೆತಾಗಲೇ ಅದಕ್ಕೆ ಕಣ್ಣು ಬಂದಿದೆಯೆಂದು ತಿಳಿಯಬೇಕು. ಆಗಲೇ ಅದು ಜಾಗೃತವಾಗುತ್ತದೆ.

ಹಿಂದುಸ್ಥಾನದ ಹಿಂದು ಜನಾಂಗದಲ್ಲಿ ಕಣ್ಣಿದ್ದ ಸಮಾಜವೆಂದರೆ ಬ್ರಾಹ್ಮಣರ ಸಮಾಜ. ಅದಕ್ಕೆ ಮಾತ್ರ ಕಣ್ಣಿದ್ದದರಿಂದ ಅದು ಜಾಗೃತವಾಗಿಯೇ ಇರುತ್ತದೆ. ಬ್ರಾಹ್ಮಣರ ಮುಂದೆ ನೀವು ಬೇಕಾದ ನಿಯಮ ನಿರ್ಬಂಧಗಳನ್ನಿಡಿರಿ. ಅವರು ತಮ್ಮ ಘನತೆಗೆ ಸ್ವಲ್ಪ ಕೊರತೆ ಬರುವಂತಿದ್ದರೆ ಆ ನಿಯಮಗಳನ್ನೆಂದಿಗೂ ಒಪ್ಪುವುದಿಲ್ಲ. ತಮ್ಮ ಘನತೆಗೆ ಕೊರತೆಯಿಲ್ಲದ ಯಾವ ನಿಯಮ ನಿರ್ಬಂಧಗಳನ್ನಾದರೂ ಅವರು ಒಪ್ಪಲು ಸಿದ್ಧರು.

ಅರಣ್ಯಗಳಲ್ಲಿ ರಾಜರು ಮೃಗಗಳನ್ನು ಜೋಪಾನ ಮಾಡಿಸುವುದೇಕೆಂಬುದನ್ನು ಬುದ್ಧನು ಒಂದು ಕಡೆ ಹೇಳಿದ್ದಾನೆ. ರಾಜರು ತಮಗೆ ಬೇಟೆಯಾಡಲು ಮೃಗಗಳು ಬೇಕೆಂದು ಅವುಗಳನ್ನು ರಕ್ಷಿಸುತ್ತಾರೆಯೇ ವಿನಾ ಅವುಗಳ ಕ್ಷೇಮಕ್ಕಾಗಿ ಜೋಪಾನ ಮಾಡುವುದಿಲ್ಲ. ಅದೇ ಪ್ರಕಾರ ಸ್ಪೃಶ್ಯ ಹಿಂದುಗಳು ತಮ್ಮ ಹಿತಕ್ಕಾಗಿ ನಿಮ್ಮನ್ನು ಬೇಟೆಯಾಡಲು ಕಾದಿಡುವವರಿದ್ದಾರೆ. ಆದುದರಿಂದ ಬಹು ಎಚ್ಚರಿಕೆ

ಗಾಂಧೀಜಿಯವರು ೯ ಲಕ್ಷ ರೂ. ಗಳನ್ನು ಕೂಡಿಸಿದುದು ನಿಮ್ಮ ಹಿತಕ್ಕಾಗಿ ಅಲ್ಲ. ನೀವು ರಾಷ್ಟ್ರೀಯ ಸಭೆಯನ್ನು ಬಿಟ್ಟು ಹೋಗಬಾರದೆಂತಲೂ, ರಾಷ್ಟ್ರೀಯ ಸಭೆಯ ಘನತೆಯು ಹೆಚ್ಚಬೇಕೆಂತಲೂ ಆ ಹಣವನ್ನು ಕೂಡಿಸಿದ್ದಾಗಿದೆ ಸ್ಪೃಶ್ಯ ಹಿಂದುಗಳು ದೇವರನ್ನೇ ನನ್ನ ಮುಂದೆ ತಂದು ನಿಲ್ಲಿಸಿದರೂ ನಾನು ಧರ್ಮಾಂತರ ಹೊಂದುವುದನ್ನೇನೂ ಬಿಡುವುದಿಲ್ಲ. ಅಸ್ಪೃಶ್ಯರ ಹಿತವನ್ನು ಅವರು ಮಾಡಲಿ, ಮಾಡದಿರಲಿ, ನಾನು ಮಾತ್ರ ಧರ್ಮಾಂತರವನ್ನು ಹೊಂದುವುದೇ ನಿರ್ಧಾರ.

ಹಿಂದುಗಳಲ್ಲಿಯ ಜಾತಿಭೇದ ನಿವಾರಣೆಯು ಸ್ವರಾಜ್ಯ ಸಂಪಾದನೆಗಿಂತಲೂ ಹೆಚ್ಚಿನದೆಂದು ನಾನು ತಿಳಿದಿದ್ದೇನೆ. ನಮ್ಮಲ್ಲಿರುವ ನಾನಾ ಜಾತಿ ಭೇದಗಳು ನಿವಾರಣೆಯಾಗಲೇ ಬೇಕು. ನನ್ನ ಮೇಲೆ ಎಷ್ಟು ದೊಡ್ಡ ಹೊಣೆಗಾರಿಕೆಯಿದೆಯೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಯಾವ ಕಾರ್ಯವನ್ನೂ ಆತುರದಿಂದ ಮಾಡುವಂತಿಲ್ಲ. ಮುಸಲ್ಮಾನ್ ಅಥವಾ ಕ್ರೈಸ್ತ ಇಲ್ಲವೆ ಶೀಖ ಧರ್ಮದಲ್ಲಿ ಹೋದ ಕೂಡಲೆ ನಮ್ಮ ಉದ್ಧಾರವಾಗುತ್ತದೆಂದು ನಾನೇನೂ ತಿಳಿದಿಲ್ಲ. ಅಲ್ಲಿಯೂ ನಾವು ಹೋರಾಡಲೇ ಬೇಕಾಗಿದೆ. ಎರಡೂ ಕಡೆಯಿಂದ ಕೋಟಿ ರೂ. ಗಳ ಪ್ರಸ್ತಾಪ ಪ್ರಾರಂಭವಾಗಿದೆ ಈ ಧರ್ಮಾಂತರದ ಕಾರ್ಯಕ್ಕೆ ದೇವರ ಅನುಗ್ರಹವೂ ಇದ್ದಂತೆ ತೋರುತ್ತದೆ. "

ಯುವಕ ಪರಿಷತ್ತಿನ ನಿರ್ಣಯಗಳು.

(೧) ಧರ್ಮಾಂತರದಿಂದಲೇ ಅಸ್ಪೃಶ್ಯರ ಉದ್ಧಾರವಾಗುವುದು. ಆದಕಾರಣ ಡಾ. ಅಂಬೇಡಕರರು ಮಾಡಿದ ಧರ್ಮಾಂತರದ ಘೋಷಣವನ್ನು ಈ ಪರಿಷತ್ತು ಮಾನ್ಯ ಮಾಡುತ್ತದೆ.

(೨) ಧರ್ಮಾಂತರವನ್ನು ಒಬ್ಬೊಬ್ಬರೇ ಮಾಡದೆ ಸಾಮುದಾಯಿಕವಾಗಿಯೇ ಮಾಡಬೇಕಾದುದರಿಂದ ಆಯಾಯ ಪ್ರಾಂತಗಳ ಮುಂದಾಳುಗಳು ಈ ಸಂಗತಿಯನ್ನು ತಮ್ಮ ಪ್ರಾಂತದಲ್ಲಿ ಪ್ರಸಾರಗೊಳಿಸಬೇಕು.

(೩) ಅಸ್ಪೃಶ್ಯರಲ್ಲಿರುವ ನಾನಾ ಒಳಪಂಗಡಗಳನ್ನೆಲ್ಲಾ ತೆಗೆದುಹಾಕಿ ಪರಸ್ಪರ ಊಟೋಪಚಾರ ಮತ್ತು ಶರೀರಸಂಬಂಧ ನಡೆಯಿಸಬೇಕೆಂದು ಈ ಪರಿಷತ್ತಿನ ಅಭಿಪ್ರಾಯ.

(೪) ಈ ಚಟುವಟಿಕೆಯನ್ನು ದೇಶದ ಎಲ್ಲ ಭಾಗಗಳಲ್ಲಿಯೂ ನಡೆಯಿಸಲು ಒಂದು ಸಂಘವನ್ನು ಏರ್ಪಡಿಸಿ ಕಾರ್ಯಕರ್ತರಿಗಾಗಿ ಧನ ನಿಧಿಯನ್ನೂ ಕೂಡಿಸಬೇಕು.

(೫) ಅಸ್ಪೃಶ್ಯರ ಉನ್ನತಿಗಾಗಿ ಜನತಾ ಎಂಬ ಪತ್ರಿಕೆಯನ್ನು ಪುನಃ ಪ್ರಾರಂಭಿಸಬೇಕು.

೩ ನೆಯ ಅಖಿಲ ಕರ್ನಾಟಕ ಗೋರಕ್ಷಣ ಪರಿಷತ್ತು.

ಅಖಿಲ ಕರ್ನಾಟಕ ಗೋರಕ್ಷಣ ಪರಿಷತ್ತು ಈ ಹಿಂದೆ ಬಳ್ಳಾರಿ ಮತ್ತು ಬಾಗಲಕೋಟೆಯಲ್ಲಿ ನಡೆದಿದ್ದು ಈ ಸಾರೆ ಮೂರನೇ ಅಖಿಲ ಕರ್ನಾಟಕ ಗೋರಕ್ಷಣ ಪರಿಷತ್ತು ಮೊದಲೇ ಪ್ರಸಿದ್ಧಿಸಿದ ಮೇರೆಗೆ ಹರಪನಹಳ್ಳಿಯಲ್ಲಿ ತಾ|| ೨೭-೧೨-೩೨ ನೇ ಶುಕ್ರವಾರ ದಾವಣಗೆರೆಯ ಶ್ರೀಮಾನ್ ಕೆ. ಎ. ಶ್ರೀನಿವಾಸಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿದ್ದಿತು.

ಸಭಾಂಗಣವು ತಳಿರು ತೋರಣಗಳಿಂದಲೂ ಚಿತ್ರ ವಿಚಿತ್ರವಾದ ಬಣ್ಣದ ಖಾದಿ ಬಟ್ಟೆಯಿಂದಲೂ ಅಲಂಕರಿಸಲ್ಪಟ್ಟಿದ್ದುದಲ್ಲದೆ ಗೋಮಹಿಮೆಯ ವಿಷಯವಾದ ಅನೇಕ ಬಣ್ಣ ಬಣ್ಣದ ಚಿತ್ರಪಟಗಳು ಪ್ರದರ್ಶಿಸಲ್ಪಟ್ಟಿದ್ದವು. ಸಭೆಗೆ ಕರ್ನಾಟಕದ ಬೇರೆ ಬೇರೆ ಪ್ರಾಂತದ ಜೀವದಯಾ ಸಂಸ್ಥೆಯ ಪ್ರತಿನಿಧಿಗಳೂ, ಭೂತದಯಾಪರರೂ ಆಗಮಿಸಿದ್ದರು. ಸಭೆಯು ಸರ್ಕಾರಿ ಅಧಿಕಾರಿಗಳೂ, ಪುರಪ್ರಮುಖರೂ ಮತ್ತು ಮಹಿಳೆಯರಿಂದ ಕಿಕ್ಕಿರಿದಿದ್ದಿತು. ಸ್ಥಳದ ಸುಮಾರು ಎರಡು ಸಾವಿರ ಮಹನೀಯರೂ ೩೦೦-೪೦೦ ಮಹಿಳೆಯರೂ ಆಗಮಿಸಿದ್ದರು. ಸಭೆಯು ದೇವತಾ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗಿ ಸ್ವಾಗತಾಧ್ಯಕ್ಷರ ಮತ್ತು ಅಧ್ಯಕ್ಷರ ಭಾಷಣವಾದ ಮೇಲೆ ಗೋರಕ್ಷಣ ವಿಷಯವಾಗಿ ಅನೇಕರ ಉಜ್ವಲ ಭಾಷಣಗಳಾಗಿ ಕೆಳಗಿನ ಠರಾವುಗಳು ಸರ್ವಾನುಮತದಿಂದ ತೀರ್ಮಾನಿಸಲ್ಪಟ್ಟವು.

ಜೀವದಯಾ ಸಂಸ್ಥೆಗಳನ್ನು ಸ್ಥಾಪಿಸಿ ಮೂಕ ಪ್ರಾಣಿಗಳ ರಕ್ಷಣೆಗಾಗಿ ಅವಿಶ್ರಾಂತ ಶ್ರಮ ವಹಿಸಿ ದುಡಿದ ದಾವಣಗೆರೆಯ ಶ್ರೀ ತವನಪ್ಪನವರ ದೇವೇಂದ್ರಪ್ಪನವರು, ಶ್ರೀ ಗದಗಿನ ಮೇಘಜಿ ಭೀಮಸೆಯವರು ಮತ್ತು ಶ್ರೀ ಕಲ್ಯಾಣಶೆಟ್ಟಿ ಗುರುಪಾದಪ್ಪನವರು ನಮ್ಮನ್ನಗಲಿದುದು ಜೀವದಯಾ ಪ್ರಚಾರಕ್ಕೆ ದೊಡ್ಡದೊಂದು ಕೊರತೆಯಾಯಿತೆಂದು ಈ ಸಭೆಯು ವಿಷಾದಿಸುತ್ತದೆ. ಮತ್ತು ದಯಾಮಯನಾದ ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತದೆ.

ಪ್ರತಿಯೊಬ್ಬರೂ ಕನಿಷ್ಠಪಕ್ಷ ಮನೆಗೊಂದರಂತೆಯಾದರೂ ಗೋವನ್ನು ಸಾಕಬೇಕೆಂದು ಈ ಸಭೆಯು ಸರ್ವರನ್ನೂ ಪ್ರಾರ್ಥಿಸುತ್ತದೆ.

ಹುಲ್ಲುಗಾವಲಿನ ಈಗಿರುವ ನಿರ್ಬಂಧವನ್ನು ತಪ್ಪಿಸಿ ಗೋವುಗಳಿಗೆ ಯಥೇಚ್ಛವಾಗಿ ಹುಲ್ಲು ದೊರೆಯುವಂತೆ ವ್ಯವಸ್ಥೆ ಮಾಡಬೇಕಾಗಿ ಈ ಸಭೆಯು ಸರಕಾರದವರನ್ನು ಪ್ರಾರ್ಥಿಸುತ್ತದೆ.

ಮಾದರಿಯ ಸಂಸ್ಥಾನವಾದ ಮೈಸೂರಿನಲ್ಲಿ ಕಾನೂನಿನ ಮೂಲಕ ಗೋವಧೆಯನ್ನು ನಿಲ್ಲಿಸುವ ವಿಷಯವಾಗಿ ಏರ್ಪಡಿಸಿದ್ದ ಕಮಿಟಿಯವರು ಈಗಾಗಲೇ ಸಾದರಪಡಿಸಿರುವ ವರದಿಯ ಮೇರೆಗೆ ಮೈಸೂರು ಶ್ರೀಮನ್ಮಹಾರಾಜರವರು ತಮ್ಮ ರಾಜ್ಯದಲ್ಲಿ ತಕ್ಷಣವೇ ಕಾಯಿದೆಯ ಮೂಲಕ ಗೋವಧೆಯನ್ನು ನಿಲ್ಲಿಸಬೇಕಾಗಿ ಈ ಸಭೆಯು ಅತ್ಯಂತ ದೈನ್ಯದಿಂದ ಪ್ರಾರ್ಥಿಸುತ್ತದೆ.

ಗೋವಧೆಯನ್ನು ಕಾಯಿದೆ ಮೂಲಕ ನಿಲ್ಲಿಸಿ ದೇಶದ ಸುಖಸಂಪತ್ತಿಗೆ ಕಾರಣರಾಗಬೇಕೆಂದು ಬ್ರಿಟಿಶ್ ಸರಕಾರದವರನ್ನು ಮತ್ತು ಆಶ್ರಿತ ಸಂಸ್ಥಾನಾಧೀಶ್ವರರನ್ನು ಈ ಸಭೆಯು ಪ್ರಾರ್ಥಿಸುತ್ತದೆ.

ಚರ್ಮದ ಉಪಯೋಗವು ಹೆಚ್ಚಿದಂತೆ ಪ್ರಾಣಿಗಳ ವಧೆಯೂ ಹೆಚ್ಚುಲವಕಾಶವಿರುವ ಪ್ರಯುಕ್ತ ಸರ್ವಭೂತದಯಾಪರರೂ ಚರ್ಮವನ್ನು ಮಿತವಾಗಿ ಉಪಯೋಗಿಸಬೇಕಾಗಿ ಈ ಸಭೆಯು ಪ್ರಾರ್ಥಿಸುತ್ತದೆ.

ಕರ್ನಾಟಕದ ಶ್ರೀಮಂತರು ಅಲ್ಲಲ್ಲಿ ಜೀವದಯಾ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕವೂ ಈಗಿರುವ ಜೀವದಯಾ ಸಂಸ್ಥೆಗಳಿಗೆ ಧನಸಹಾಯ ಮಾಡುವುದರ ಮೂಲಕವೂ ಜೀವದಯಾ ಪ್ರಚಾರ ಕಾರ್ಯವನ್ನು ಪ್ರೋತ್ಸಾಹಿಸಬೇಕಾಗಿ ಈ ಸಭೆಯು ಪ್ರಾರ್ಥಿಸುತ್ತದೆ.

ಅಹಿಂಸಾ ತತ್ವ ಪ್ರಚಾರ ಕಾರ್ಯದಲ್ಲಿ ಬಹು ಶ್ರದ್ಧೆ ವಹಿಸಿ ಕೆಲಸ ಮಾಡುತ್ತಲಿರುವ ಹುಬ್ಬಳ್ಳಿ ಜೀವದಯಾ ಸಂಘದವರಿಗೆ ಅಲ್ಲಿಯ ಶ್ರೀ ಕಚ್ಚಿದಶ ಓಶ್ವಾಲ್ ಜೈನ ಮಹಾಜನರು ಕಳೆದ ೧೫ ವರ್ಷಗಳಿಂದಲೂ ವಿಶೇಷ ರೀತಿಯಿಂದ ಪ್ರೋತ್ಸಾಹಿಸುತ್ತಿರುವುದಕ್ಕಾಗಿ ಈ ಸಭೆಯು ಅವರನ್ನು ಅಭಿನಂದಿಸುತ್ತದೆಯಲ್ಲದೆ ಮುಂದೆಯೂ ಇದೇ ರೀತಿಯಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ ಮಾಡಿಕೊಳ್ಳುತ್ತದೆ.

ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ರೀತಿಯಿಂದ ಜೀವದಯಾ ಕಾರ್ಯಕ್ಕೆ ತನು, ಮನ, ಧನಗಳಿಂದ ಸಹಾಯ ಮಾಡುತ್ತಲಿರುವ ಎಲ್ಲಾ ಮಹಾಶಯರಿಗೂ ಈ ಸಭೆಯು ಧನ್ಯವಾದಗಳನ್ನರ್ಪಿಸುತ್ತದೆ.

ಮೇಲ್ಕಂಡ ಠರಾವುಗಳು ತೀರ್ಮಾನವಾದ ನಂತರ ಸಭಾಧ್ಯಕ್ಷರ ಮುಕ್ತಾಯ ಭಾಷಣವಾಗಿ ಶ್ರೀ ಟಿ. ಬಿ. ಕೇಶವರಾಯರು ಸಭಾಧ್ಯಕ್ಷರಿಗೂ ಬೇರೆ ಬೇರೆ ಪ್ರಾಂತದಿಂದ ಆಗಮಿಸಿದ್ದ ಜೀವದಯಾ ಸಂಸ್ಥೆಯ ಪ್ರತಿನಿಧಿಗಳೇ ಮೊದಲಾದವರಿಗೂ ಧನ್ಯವಾದಗಳನ್ನರ್ಪಿಸಿದರು. ಗೋಮಾತೆಯ ಜಯಜಯಕಾರದೊಡನೆ ಸಭೆಯು ಬರಖಾಸ್ತಾಯಿತು.

'ಕಾಯಿನಾಡು.'

೫೦೦೦ ವರ್ಷಗಳ ಹಿಂದಿನ ಭಾರತ.

ಜಯಪುರದ ಸಂಸ್ಥಾನದ ಸರಕಾರದವರು ಪ್ರಾಚ್ಯ ವಿದ್ಯಾ ಖಾತೆಗೆ ರಾಯ್ ಬಹದ್ದೂರ್ ಪಂ. ದಯಾರಾಮ ಸಾಹ್ನಿಯವರನ್ನು ಪ್ರಾಚ್ಯ ಮತ್ತು ಐತಿಹಾಸಿಕ ಶೋಧನೆಗಳ ಡೈರೆಕ್ಟರಾಗಿ ನಿಯಮಿಸಿರುವರು. ಈ ಖಾತೆಯು ಈಗ ಬೈರಾಟದಲ್ಲಿ ಭೂಶೋಧನೆಗೆ ಆರಂಭ ಮಾಡಿದೆ.

ಪ್ರಾಚೀನ ಭಾರತ ಪಂಚಪಾಂಡವರು ಈಗಿನ ಬೈರನಾಥ ಬಳಿ ಇದ್ದ ರಾಜ್ಯದಲ್ಲಿ ತಮ್ಮ ಕೊನೆಯ ದಿನಗಳಲ್ಲಿ ಆಶ್ರಯವನ್ನು ಪಡೆದಿದ್ದರೆಂದು ತಿಳಿದು ಬಂದಿದೆ. ಅವರಿಗೆ ಆಶ್ರಯ ಕೊಟ್ಟವರು ವ್ರತರಾಜರು. ಈ ರಾಜ್ಯವು ಮಹಾಭಾರತ ಯುದ್ಧದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಿತೆಂದು ಹೇಳಲಾಗಿದೆ. ಈಗಿನ ಭೂಶೋಧನೆಯಿಂದ ಭಾರತದ ೫ ಸಾವಿರ ವರ್ಷಗಳ ಹಿಂದಿನ ಐತಿಹಾಸಿಕ ಯುಗಕ್ಕೆ ನಮ್ಮನ್ನು ಒಯ್ಯುತ್ತದೆ. ಶೋಧನೆ ನಡೆದಂತೆಲ್ಲ ಹೊಸ ಹೊಸ ಸಂಗತಿಗಳು ಹೊರಬೀಳಬಹುದೆಂಬ ನಿರೀಕ್ಷಣೆಯಿದೆ. ಭೈರನಾಥ ಗ್ರಾಮವು ಜಯಪುರದಿಂದ ದೆಹಲಿಗೆ ಹೋಗುವ ರಸ್ತೆಯಲ್ಲಿದೆ.

ಸರ್. ರೇಝಾಅಲ್ಲಿಯವರ ವಿವಾಹ.

ಹಿಂದುಸ್ಥಾನ ಸರಕಾರದ ದಕ್ಷಿಣಾಫ್ರಿಕೆಯಲ್ಲಿ ಏಜಂಟ ಸರ್, ಸಯ್ಯದ ಅಲ್ಲಿ ರೇಝಾ ಇವರು ವಿಧುರರು. ೫೦ ವರ್ಷ ಮೀರಿದವರು. ಮಿಸ್. ಸಾಮಿ ಎಂಬ ಹಿಂದು ಯುವತಿಗೆ ಮುಸಲ್ಮಾನ್ ಧರ್ಮ ದೀಕ್ಷೆಕೊಟ್ಟು ಇವರು ಜೋಹಾನ್ಸಬರ್ಗದಲ್ಲಿ ವಿವಾಹವಾದರು. ಇದರಿಂದ ಅಲ್ಲಿ ತುಂಬಾ ಗಲಭೆಯುಂಟಾಗಿದೆ.

ಡಾ. ಪಿ. ಜಿ. ಸೋಳಂಕಿ— ನಾವು ಸೋಮವಂಶೀಯ ಪಾಂಡವರ ಸಂತತಿಯವರು. ಆಗ ಕುರುಕ್ಷೇತ್ರದಲ್ಲಿ ಕೃಷ್ಣನ ಸಹಾಯದಿಂದ ಪಾಂಡವರು ಯುದ್ಧ ಮಾಡಿದಂತೆ ಈಗ ಕೃಷ್ಣನಂತಿರುವ ಡಾ. ಅಂಬೇಡಕರರ ಅಧಿಪತ್ಯದಲ್ಲಿ ನಾವು ಈ ಧರ್ಮ ಯುದ್ಧವನ್ನು ಹೂಡಿದ್ದೇವೆ. **ಗಾಂಧಿಯವರು ನಮಗೆ ಇಚ್ಛೆಯಿಲ್ಲದ 'ಹರಿಜನ' ಎಂಬ ಹೆಸರನ್ನು ನಮಗಿಟ್ಟಿದ್ದಾರೆ.** ನಮಗೆ ಪ್ರತ್ಯೇಕ ಪ್ರಾತಿನಿಧ್ಯವೇ ಬೇಕಾಗಿದೆ. ಗಾಂಧಿಯವರ ಪ್ರಾಣವನ್ನುಳಿಸಲು ಆಗ ನಾವು ನಮ್ಮ ಇಷ್ಟವಿಲ್ಲದೆ ಪುಣೆ ಒಪ್ಪಂದಕ್ಕೆ ಒಪ್ಪಿಗೆ ಕೊಟ್ಟೆವು.

ಹಿಂದು ಧರ್ಮವು ಹೇಡಿಗಳ ಧರ್ಮ. ಈ ಹೇಡಿಗಳು ನಮ್ಮ ಮೇಲೆ ಇರಬೇಕೆಂದು ಮಂಡಲಾಕಾರ ಪರಿಷತ್ತಿನಲ್ಲಿ ಗಾಂಧಿಯವರು ಬಹು ಪ್ರಯತ್ನಿಸಿದರು. ಆದರೆ ಅದು ಕೈಗೂಡಲಿಲ್ಲ. ನಮ್ಮನ್ನು ಮುಟ್ಟಬೇಡಿರೆಂದು ಹೇಳುವ ಬ್ರಾಹ್ಮಣ, ಗುಜರಾಥಿ, ಮೊದಲಾದ ಎಲ್ಲಾ ಹಿಂದುಗಳು ಮುಂಬೈಯಲ್ಲಿ ಇರಾಣಿಯವರ ಹೋಟಲಿನಲ್ಲಿ ತಿನ್ನಬಾರದನ್ನು ತಿನ್ನುತ್ತಿದ್ದಾರೆ. ಇವರ ಮಡಿ ಒಲಿಯ ಹತ್ತಿರವೆ. ಒಲಿಯ ಹತ್ತಿರ ಇರುವವರು ಹೆಂಗಸರು. ಆದಕ್ಕಾಗಿ ಈ ಹೆಣ್ಣು ಧರ್ಮದಲ್ಲಿ ಒಂದು ನಿಮಿಷವಾದರೂ ಇರಬೇಡಿರಿ.

ಡಾ. ಅಂಬೇಡಕರರೇ ನಮ್ಮ ಸರ್ವಸ್ವ. ನಮಗೆ ವೇದ, ಶಾಸ್ತ್ರ, ಶಂಕರಾಚಾರ್ಯ, ಸಂತ, ಮಹಂತರಾರೂ ಬೇಡ. ಡಾ. ಅಂಬೇಡಕರರೇ ನಮಗೆ ಇವೆಲ್ಲ. ಹಿಟಲರ್, ಮುಸೋಲಿನಿ, ಕೇಮಾಲ ಪಾಶಾರವರಿಗೆ ಕೂಡಾ ೭ ಕೋಟಿ ಜನಗಳ ಬೆಂಬಲವಿಲ್ಲ. ನಮ್ಮ ಡಾ. ಅಂಬೇಡಕರರಿಗೆ ೭ ಕೋಟಿ ಜನರ ಬೆಂಬಲವಿದೆ.

ಡಾ. ಅಂಬೇಡಕರರ ಭಾಷಣ.

ಅಧ್ಯಕ್ಷರಿಗೆ ಕೃತಜ್ಞತೆಯನ್ನು ಅರ್ಪಿಸುವಾಗ ಡಾ. ಅಂಬೇಡಕರರು ಒಂದು ಮಹತ್ವದ ಭಾಷಣವನ್ನು ಮಾಡಿದರು. ಅದರ ಮುಖ್ಯಾಂಶ ಹೀಗಿದ್ದಿತು.—

"ಈಗ ನಾವು ಪ್ರಾರಂಭಿಸಿದ ಚಟುವಟಿಕೆಗೆ ಒಬ್ಬನ ಡೊಂಬರಾಟವೆಂದು ಕೆಲವರು ಟೀಕಿಸುತ್ತಿದ್ದಾರೆ. ಈ ಚಟುವಟಿಕೆಯಾಗಲಿ ಅಥವಾ ಜಗತ್ತಿನಲ್ಲಿ ನಡೆಯುವ ಯಾವ ಚಟುವಟಿಕೆಯೇ ಆಗಲಿ ಒಬ್ಬನಿಂದಲೇ ಕೊನೆಗಾಣುವುದಿಲ್ಲ. ನನ್ನ ತರುವಾಯ ನೀವ್ಹೂ ಡೊಳ್ಳು ಬಾರಿಸಿ ಮುಂದೆ ಬರಲು ಸಿದ್ಧರಾಗಬೇಕು. ನನ್ನ ಕಡೆ ಈ ವರೆಗೆ ಈ ಸಂಬಂಧವಾಗಿ ನಡೆದ ಚರ್ಚೆಗಳಲ್ಲಿ ಎರಡೇ ಅಭಿಪ್ರಾಯಗಳಿವೆ.

(೧) ಕೆಲವು ನಿಯಮಗಳನ್ನು ಗೊತ್ತುಮಾಡಿಕೊಡಿರಿ. ಅವು ಸ್ಪೃಶ್ಯ ಹಿಂದುಗಳಿಂದ ನೆರವೇರದಿದ್ದರೆ ಧರ್ಮಾಂತರ ಹೊಂದಿರಿ. (೨) ಧರ್ಮಾಂತರ ಹೊಂದುವುದು ಅನರ್ಥಕರ. ಆದಕಾರಣ ಆ ಮಾರ್ಗವನ್ನು ಹಿಡಿಯಬೇಡಿರಿ. ಈ ಅಭಿಪ್ರಾಯಗಳ ಚರ್ಚೆಯನ್ನು ಮಾಡಲು ಇದು ಅನುಕೂಲ ಸಮಯವಲ್ಲ. ನಿಮಗೆ ನನ್ನಲ್ಲಿ ವಿಶ್ವಾಸವಿದ್ದರೆ ಧರ್ಮಾಂತರ ಹೊಂದಲು ಸಿದ್ಧರಾಗಿರಿ. ಏಸುಕ್ರಿಸ್ತನು ಜ್ಯೂ ಜನರಿಗೆ ಹೀಗೆ ಹೇಳಿದ್ದನು.

Be unto me, littte Children and I will save you from sin.

"ಕೂಸುಗಳು ತಾಯಿಯ ಮೇಲೆ ವಿಶ್ವಾಸವಿಡುವಂತೆ ನನ್ನ ಮೇಲೆ ವಿಶ್ವಾಸವಿಡಿರಿ. ನಾನು ಹೇಳುವ ಧರ್ಮವನ್ನು ಅನುಸರಿಸಿರಿ!" ನಾನು ಸ್ಪೃಶ್ಯ ಜನರಿಗೆ ಹೇಳುವ ನಿಯಮಗಳನ್ನು ಅನುಸರಿಸಲು ಅವರಿಗೆ ಎಂದಿಗೂ ಶಕ್ಯವಿಲ್ಲ. ಜನಾಂಗಕ್ಕೆ ಶಿಕ್ಷಣ ದೊರೆತಾಗಲೇ ಅದಕ್ಕೆ ಕಣ್ಣು ಬಂದಿದೆಯೆಂದು ತಿಳಿಯಬೇಕು. ಆಗಲೇ ಅದು ಜಾಗ್ರತವಾಗುತ್ತದೆ.

ಹಿಂದುಸ್ಥಾನದ ಹಿಂದು ಜನಾಂಗದಲ್ಲಿ ಕಣ್ಣಿದ್ದ ಸಮಾಜವೆಂದರೆ ಬ್ರಾಹ್ಮಣರ ಸಮಾಜ. ಅದಕ್ಕೆ ಮಾತ್ರ ಕಣ್ಣಿದ್ದದರಿಂದ ಅದು ಜಾಗ್ರತವಾಗಿಯೇ ಇರುತ್ತದೆ. ಬ್ರಾಹ್ಮಣರ ಮುಂದೆ ನೀವು ಬೇಕಾದ ನಿಯಮ ನಿರ್ಬಂಧಗಳನ್ನಿಡಿರಿ. **ಅವರು ತಮ್ಮ ಘನತೆಗೆ** ಸ್ವಲ್ಪ ಕೊರತೆ ಬರುವಂತಿದ್ದರೆ ಆ ನಿಯಮಗಳನ್ನೆಂದಿಗೂ **ಒಪ್ಪುವುದಿಲ್ಲ.** ತಮ್ಮ ಘನತೆಗೆ ಕೊರತೆಯಿಲ್ಲದ ಯಾವ ನಿಯಮ ನಿರ್ಬಂಧಗಳನ್ನಾದರೂ ಅವರು ಒಪ್ಪಲು ಸಿದ್ಧರು.

ಅರಣ್ಯಗಳಲ್ಲಿ ರಾಜರು ಮೃಗಗಳನ್ನು ಜೋಪಾನ ಮಾಡಿಸುವುದೇಕೆಂಬುದನ್ನು ಬುದ್ಧನು ಒಂದು ಕಡೆ ಹೇಳಿದ್ದಾನೆ. ರಾಜರು ತಮಗೆ ಬೇಟೆಯಾಡಲು ಮೃಗಗಳು ಬೇಕೆಂದು ಅವುಗಳನ್ನು ರಕ್ಷಿಸುತ್ತಾರೆಯೇ ವಿನಾ ಅವುಗಳ ಕ್ಷೇಮಕ್ಕಾಗಿ ಜೋಪಾನ ಮಾಡುವುದಿಲ್ಲ. ಅದೇ ಪ್ರಕಾರ ಸ್ಪೃಶ್ಯ ಹಿಂದುಗಳು ತಮ್ಮ ಹಿತಕ್ಕಾಗಿ ನಿಮ್ಮನ್ನು ಬೇಟೆಯಾಡಲು ಕಾದಿಡುವವರಿದ್ದಾರೆ. ಆದುದರಿಂದ ಬಹು ಎಚ್ಚರಿಕೆ.

ಗಾಂಧೀಜಿಯವರು ೯ ಲಕ್ಷ ರೂ. ಗಳನ್ನು ಕೂಡಿಸಿದುದು ನಿಮ್ಮ ಹಿತಕ್ಕಾಗಿ ಅಲ್ಲ. ನೀವು ರಾಷ್ಟ್ರೀಯ ಸಭೆಯನ್ನು ಬಿಟ್ಟು ಹೋಗಬಾರದೆಂತಲೂ, ರಾಷ್ಟ್ರೀಯ ಸಭೆಯ ಘನತೆಯು ಹೆಚ್ಚಬೇಕೆಂತಲೂ ಆ ಹಣವನ್ನು ಕೂಡಿಸಿದ್ದಾಗಿದೆ. ಸ್ಪೃಶ್ಯ ಹಿಂದುಗಳು ದೇವರನ್ನೇ ನನ್ನ ಮುಂದೆ ತಂದು ನಿಲ್ಲಿಸಿದರೂ ನಾನು ಧರ್ಮಾಂತರ ಹೊಂದುವುದನ್ನೇನೂ ಬಿಡುವುದಿಲ್ಲ. ಅಸ್ಪೃಶ್ಯರ ಹಿತವನ್ನು ಅವರು ಮಾಡಲಿ, ಮಾಡದಿರಲಿ, ನಾನು ಮಾತ್ರ ಧರ್ಮಾಂತರವನ್ನು ಹೊಂದುವುದೇ ನಿರ್ಧಾರ.

ಹಿಂದುಗಳಲ್ಲಿಯ ಜಾತಿಭೇದ ನಿವಾರಣೆಯು ಸ್ವರಾಜ್ಯ ಸಂಪಾದನೆಗಿಂತಲೂ ಹೆಚ್ಚಿನದೆಂದು ನಾನು ತಿಳಿದಿದ್ದೇನೆ. ನಮ್ಮಲ್ಲಿರುವ ನಾನಾ ಜಾತಿ ಭೇದಗಳು ನಿವಾರಣೆಯಾಗಲೇ ಬೇಕು. ನನ್ನ ಮೇಲೆ ಎಷ್ಟು ದೊಡ್ಡ ಹೊಣೆಗಾರಿಕೆಯಿದೆಯೆಂಬುದನ್ನು ನಾನು ಚೆನ್ನಾಗಿ ಬಲ್ಲೆನು. ಯಾವ ಕಾರ್ಯವನ್ನೂ ಆತುರದಿಂದ ಮಾಡುವಂತಿಲ್ಲ. ಮುಸಲ್ಮಾನ್ ಅಥವಾ ಕ್ರೈಸ್ತ ಇಲ್ಲವೆ ಶೀಖ ಧರ್ಮದಲ್ಲಿ ಹೋದ ಕೂಡಲೆ ನಮ್ಮ ಉದ್ಧಾರವಾಗುತ್ತದೆಂದು ನಾನೇನೂ ತಿಳಿದಿಲ್ಲ. ಅಲ್ಲಿಯೂ ನಾವು ಹೋರಾಡಲೇ ಬೇಕಾಗಿದೆ. ಎರಡೂ ಕಡೆಯಿಂದ ಕೋಟಿ ರೂ. ಗಳ ಪ್ರಸ್ತಾಪ ಪ್ರಾರಂಭವಾಗಿದೆ. ಈ ಧರ್ಮಾಂತರದ ಕಾರ್ಯಕ್ಕೆ ದೇವರ ಅನುಗ್ರಹವೂ ಇದ್ದಂತೆ ತೋರುತ್ತದೆ."

ಯುವಕ ಪರಿಷತ್ತಿನ ನಿರ್ಣಯಗಳು.

(೧) ಧರ್ಮಾಂತರದಿಂದಲೇ ಅಸ್ಪೃಶ್ಯರ ಉದ್ಧಾರವಾಗುವುದು. ಆದಕಾರಣ ಡಾ. ಅಂಬೇಡಕರರು **ಮಾಡಿದ ಧರ್ಮಾಂತರದ ಘೋಷಣವನ್ನು** ಈ ಪರಿಷತ್ತು ಮಾನ್ಯ ಮಾಡುತ್ತದೆ.

(೨) ಧರ್ಮಾಂತರವನ್ನು ಒಬ್ಬೊಬ್ಬರೇ ಮಾಡದೆ ಸಾಮುದಾಯಿಕವಾಗಿಯೇ ಮಾಡಬೇಕಾದುದರಿಂದ ಆಯಾಯ ಪ್ರಾಂತಗಳ ಮುಂದಾಳುಗಳು ಈ ಸಂಗತಿಯನ್ನು ತಮ್ಮ ಪ್ರಾಂತದಲ್ಲಿ ಪ್ರಸಾರಗೊಳಿಸಬೇಕು.

(೩) ಅಸ್ಪೃಶ್ಯರಲ್ಲಿರುವ ನಾನಾ ಒಳಪಂಗಡಗಳನ್ನೆಲ್ಲಾ ತೆಗೆದುಹಾಕಿ ಪರಸ್ಪರ ಊಟೋಪಚಾರ ಮತ್ತು ಶರೀರಸಂಬಂಧ ನಡೆಯಿಸಬೇಕೆಂದು ಈ ಪರಿಷತ್ತಿನ ಅಭಿಪ್ರಾಯ.

(೪) ಈ ಚಟುವಟಿಕೆಯನ್ನು ದೇಶದ ಎಲ್ಲ ಭಾಗಗಳಲ್ಲಿಯೂ ನಡೆಯಿಸಲು ಒಂದು ಸಂಘವನ್ನು ಏರ್ಪಡಿಸಿ ಕಾರ್ಯಕರ್ತರಿಗಾಗಿ ಧನ ನಿಧಿಯನ್ನೂ ಕೂಡಿಸಬೇಕು.

(೫) ಅಸ್ಪೃಶ್ಯರ ಉನ್ನತಿಗಾಗಿ ಜನತಾ ಎಂಬ ಪತ್ರಿಕೆಯನ್ನು ಪುನಃ ಪ್ರಾರಂಭಿಸಬೇಕು.

೩ ನೆಯ ಅಖಿಲ ಕರ್ನಾಟಕ ಗೋರಕ್ಷಣ ಪರಿಷತ್ತು.

ಅಖಿಲ ಕರ್ನಾಟಕ ಗೋರಕ್ಷಣ ಪರಿಷತ್ತು ಈ ಹಿಂದೆ ಬಳ್ಳಾರಿ ಮತ್ತು ಬಾಗಲಕೋಟೆಯಲ್ಲಿ ನಡೆದಿದ್ದು ಈ ಸಾರೆ ಮೂರನೇ ಅಖಿಲ ಕರ್ನಾಟಕ ಗೋರಕ್ಷಣ ಪರಿಷತ್ತು ಮೊದಲೇ ಪ್ರಸಿದ್ಧಿಸಿದ ಮೇರೆಗೆ ಹರಪನಹಳ್ಳಿಯಲ್ಲಿ ತಾ|| ೨೩-೧೨-೩೨ ನೇ ಶುಕ್ರವಾರ ದಾವಣಗೆರೆಯ ಶ್ರೀಮಾನ್ ಕೆ. ಎ. ಶ್ರೀನಿವಾಸಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿದ್ದಿತು.

ಸಭಾಂಗಣವು ತಳಿರು ತೋರಣಗಳಿಂದಲೂ ಚಿತ್ರ ವಿಚಿತ್ರವಾದ ಬಣ್ಣದ ಖಾದಿ ಬಟ್ಟೆಯಿಂದಲೂ ಅಲಂಕರಿಸಲ್ಪಟ್ಟದ್ದಲ್ಲದೆ ಗೋಮಹಿಮೆಯ ವಿಷಯವಾದ ಅನೇಕ ಬಣ್ಣ ಬಣ್ಣದ ಚಿತ್ರಪಟಗಳು ಪ್ರದರ್ಶಿಸಲ್ಪಟ್ಟದ್ದವು ಸಭೆಗೆ ಕರ್ನಾಟಕದ ಬೇರೆ ಬೇರೆ ಪ್ರಾಂತದ ಜೀವದಯಾ ಸಂಸ್ಥೆಯ ಪ್ರತಿನಿಧಿಗಳೂ, ಭೂತದಯಾಪರರೂ ಆಗಮಿಸಿದ್ದರು. ಸಭೆಯು ಸರಕಾರಿ ಅಧಿಕಾರಿಗಳೂ, ಪುರಪ್ರಮುಖರೂ ಮತ್ತು ಮಹಿಳೆಯರಿಂದ ಕಿಕ್ಕಿರಿದಿದ್ದಿತು. ಸ್ಥಳದ ಸುಮಾರು ಎಂಟು ಸಾವಿರ ಮಹನೀಯರೂ ೩೦೦-೪೦೦ ಮಹಿಳೆಯರೂ ಆಗಮಿಸಿದ್ದರು. ಸಭೆಯು ದೇವತಾ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗಿ ಸ್ವಾಗತಾಧ್ಯಕ್ಷರ ಮತ್ತು ಅಧ್ಯಕ್ಷರ ಭಾಷಣವಾದ ಮೇಲೆ ಗೋರಕ್ಷಣೆ ವಿಷಯವಾಗಿ ಅನೇಕರ ಉಜ್ವಲ ಭಾಷಣಗಳಾಗಿ ಕೆಳಗಿನ ಠರಾವುಗಳು ಸರ್ವಾನುಮತದಿಂದ ತೀರ್ಮಾನಿಸಲ್ಪಟ್ಟವು.

ಜೀವದಯಾ ಸಂಸ್ಥೆಗಳನ್ನು ಸ್ಥಾಪಿಸಿ ಮೂಕ ಪ್ರಾಣಿಗಳ ರಕ್ಷಣೆಗಾಗಿ ಅವಿಶ್ರಾಂತ ಶ್ರಮ ವಹಿಸಿ ದುಡಿದ ದಾವಣಗೆರೆಯ ಶ್ರೀ ತವನಪ್ಪನವರ ದೇವೇಂದ್ರಪ್ಪನವರು, ಶ್ರೀ ಗದಗಿನ ಮೋಘಜಿ ಭೀಮಸೆಯವರು ಮತ್ತು ಶ್ರೀ ಕಲ್ಯಾಣಶೆಟ್ಟಿ ಗುರುಪಾದಪ್ಪನವರು ನಮ್ಮನ್ನಗಲಿಮದು ಜೀವದಯಾ ಪ್ರಚಾರಕ್ಕೆ ದೊಡ್ಡದೊಂದು ಕೊರತೆಯಾಯಿತೆಂದು ಈ ಸಭೆಯು ವಿಷಾದಿಸುತ್ತದೆ. ಮತ್ತು ದಯಾಮಯನಾದ ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತದೆ.

ಪ್ರತಿಯೊಬ್ಬರೂ ಕನಿಷ್ಠಪಕ್ಷ ಮನೆಗೊಂದರಂತೆಯಾದರೂ ಗೋವನ್ನು ಸಾಕಬೇಕೆಂದು ಈ ಸಭೆಯು ಸರ್ವರನ್ನೂ ಪ್ರಾರ್ಥಿಸುತ್ತದೆ.

ಹುಲ್ಲುಗಾವಲಿನ ಈಗಿರುವ ನಿರ್ಬಂಧವನ್ನು ತಪ್ಪಿಸಿ ಗೋವುಗಳಿಗೆ ಯಥೇಚ್ಛವಾಗಿ ಹುಲ್ಲು ದೊರೆಯುವಂತೆ ವ್ಯವಸ್ಥೆ ಮಾಡಬೇಕಾಗಿ ಈ ಸಭೆಯು ಸರಕಾರದವರನ್ನು ಪ್ರಾರ್ಥಿಸುತ್ತದೆ.

ಮಾದರಿಯ ಸಂಸ್ಥಾನವಾದ ಮೈಸೂರಿನಲ್ಲಿ ಕಾನೂನಿನ ಮೂಲಕ ಗೋವಧೆಯನ್ನು ನಿಲ್ಲಿಸುವ ವಿಷಯವಾಗಿ ಏರ್ಪಡಿಸಿದ್ದ ಕಮಿಟಿಯವರು ಈಗಾಗಲೇ ಸಾದರ ಪಡಿಸಿರುವ ವರದಿಯ ಮೇರೆಗೆ ಮೈಸೂರು ಶ್ರೀಮನ್ಮಹಾರಾಜರವರು ತಮ್ಮ ರಾಜ್ಯದಲ್ಲಿ ತಕ್ಷಣವೇ ಕಾಯಿದೆಯ ಮೂಲಕ ಗೋವಧೆಯನ್ನು ನಿಲ್ಲಿಸಬೇಕಾಗಿ ಈ ಸಭೆಯು ಅತ್ಯಂತ ದೈನ್ಯದಿಂದ ಪ್ರಾರ್ಥಿಸುತ್ತದೆ.

ಗೋವಧೆಯನ್ನು ಕಾಯಿದೆ ಮೂಲಕ ನಿಲ್ಲಿಸಿ ದೇಶದ ಸುಖಸಂಪತ್ತಿಗೆ ಕಾರಣರಾಗಬೇಕೆಂದು ಬ್ರಿಟಿಶ್ ಸರಕಾರದವರನ್ನು ಮತ್ತು ಆಶ್ರಿತ ಸಂಸ್ಥಾನಾಧೀಶ್ವರರನ್ನು ಈ ಸಭೆಯು ಪ್ರಾರ್ಥಿಸುತ್ತದೆ.

ಚರ್ಮದ ಉಪಯೋಗವು ಹೆಚ್ಚಿದಂತೆ ಪ್ರಾಣಿಗಳ ವಧೆಯೂ ಹೆಚ್ಚಾಗಲವಕಾಶವಿರುವ ಪ್ರಯುಕ್ತ, ಸರ್ವಭೂತ ದಯಾಪರರೂ ಚರ್ಮವನ್ನು ಮಿತವಾಗಿ ಉಪಯೋಗಿಸಬೇಕಾಗಿ ಈ ಸಭೆಯು ಪ್ರಾರ್ಥಿಸುತ್ತದೆ.

ಕರ್ನಾಟಕದ ಶ್ರೀಮಂತರು ಅಲ್ಲಲ್ಲಿ ಜೀವದಯಾ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕವೂ ಈಗಿರುವ ಜೀವದಯಾ ಸಂಸ್ಥೆಗಳಿಗೆ ಧನ ಸಹಾಯ ಮಾಡುವುದರ ಮೂಲಕವೂ ಜೀವದಯಾ ಪ್ರಚಾರ ಕಾರ್ಯವನ್ನು ಪ್ರೋತ್ಸಾಹಿಸಬೇಕಾಗಿ ಈ ಸಭೆಯು ಪ್ರಾರ್ಥಿಸುತ್ತದೆ.

ಅಹಿಂಸಾ ತತ್ವ ಪ್ರಚಾರ ಕಾರ್ಯದಲ್ಲಿ ಬಹು ಶ್ರದ್ಧೆ ವಹಿಸಿ ಕೆಲಸ ಮಾಡುತ್ತಲಿರುವ ಹುಬ್ಬಳ್ಳಿ ಜೀವದಯಾ ಸಂಘದವರಿಗೆ ಅಲ್ಲಿಯ ಶ್ರೀ ಕಚ್ಛಿದಶ ಓಶ್ವಾಲ್ ಜೈನ ಮಹಾಜನರು ಕಳೆದ ೧೫ ವರ್ಷಗಳಿಂದಲೂ ವಿಶೇಷ ರೀತಿಯಿಂದ ಪ್ರೋತ್ಸಾಹಿಸುತ್ತಿರುವುದಕ್ಕಾಗಿ ಈ ಸಭೆಯು ಅವರನ್ನು ಅಭಿನಂದಿಸುತ್ತದೆಯಲ್ಲದೆ ಮುಂದೆಯೂ ಇದೇ ರೀತಿಯಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ ಮಾಡಿಕೊಳ್ಳುತ್ತದೆ.

ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ರೀತಿಯಿಂದ ಜೀವದಯಾ ಕಾರ್ಯಕ್ಕೆ ತನು, ಮನ, ಧನಗಳಿಂದ ಸಹಾಯ ಮಾಡುತ್ತಲಿರುವ ಎಲ್ಲಾ ಮಹಾಶಯರಿಗೂ ಈ ಸಭೆಯು ಧನ್ಯವಾದಗಳನ್ನರ್ಪಿಸುತ್ತದೆ.

ಮೇಲ್ಕಂಡ ಠರಾವುಗಳು ತೀರ್ಮಾನವಾದ ನಂತರ ಸಭಾಧ್ಯಕ್ಷರ ಮುಕ್ತಾಯ ಭಾಷಣವಾಗಿ ಶ್ರೀ ಟಿ. ಬಿ. ಕೇಶವರಾಯರು ಸಭಾಧ್ಯಕ್ಷರಿಗೂ ಬೇರೆ ಬೇರೆ ಪ್ರಾಂತದಿಂದ ಆಗಮಿಸಿದ್ದ ಜೀವದಯಾ ಸಂಸ್ಥೆಯ ಪ್ರತಿನಿಧಿಗಳೇ ಮೊದಲಾದವರಿಗೂ ಧನ್ಯವಾದಗಳನ್ನರ್ಪಿಸಿದರು. ಗೋಮಾತೆಯ ಜಯಜಯಕಾರದೊಡನೆ ಸಭೆಯು ಬರಕಾಸ್ತಾಯಿತು. 'ಕಾಯಿನಾಡು.'

೫೦೦೦ ವರ್ಷಗಳ ಹಿಂದಿನ ಭಾರತ.

ಜಯಪುರದ ಸಂಸ್ಥಾನದ ಸರಕಾರದವರು ಪ್ರಾಚ್ಯ ವಿದ್ಯಾ ಖಾತೆಗೆ ರಾಯ್ ಬಹದ್ದೂರ್ ಪಂ. ದಯಾರಾಮ ಸಾಹ್ನಿಯವರನ್ನು ಪ್ರಾಚ್ಯ ಮತ್ತು ಐತಿಹಾಸಿಕ ಶೋಧನೆಗಳ ಡೈರೆಕ್ಟರಾಗಿ ನಿಯಮಿಸಿರುವರು. ಈ ಖಾತೆಯು ಈಗ ಬೈರನಾಥದಲ್ಲಿ ಭೂಶೋಧನೆಗೆ ಆರಂಭ ಮಾಡಿದೆ.

ಪ್ರಾಚೀನ ಭಾರತ ಪಂಚಪಾಂಡವರು ಈಗಿನ ಬೈರನಾಥ ಬಳಿ ಇದ್ದ ರಾಜ್ಯದಲ್ಲಿ ತಮ್ಮ ಕೊನೆಯ ದಿನಗಳಲ್ಲಿ ಆಶ್ರಯವನ್ನು ಪಡೆದಿದ್ದರೆಂದು ತಿಳಿದು ಬಂದಿದೆ. ಅವರಿಗೆ ಆಶ್ರಯ ಕೊಟ್ಟವರು ವ್ರತರಾಜರು. ಈ ರಾಜ್ಯವು ಮಹಾಭಾರತ ಯುದ್ಧದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಿತೆಂದು ಹೇಳಲಾಗಿದೆ. ಈಗಿನ ಭೂಶೋಧನೆಯಿಂದ ಭಾರತದ ೫ ಸಾವಿರ ವರ್ಷಗಳ ಹಿಂದಿನ ಐತಿಹಾಸಿಕ ಯುಗಕ್ಕೆ ನಮ್ಮನ್ನು ಒಯ್ಯುತ್ತದೆ. ಶೋಧನೆ ನಡೆದಂತೆಲ್ಲ ಹೊಸ ಹೊಸ ಸಂಗತಿಗಳು ಹೊರಬೀಳಬಹುದೆಂಬ ನಿರೀಕ್ಷಣೆಯಿದೆ. ಭೈರನಾಥ ಗ್ರಾಮವು ಜಯಪುರದಿಂದ ದೆಹಲಿಗೆ ಹೋಗುವ ರಸ್ತೆಯಲ್ಲಿದೆ.

ಸರ್. ರೇಝೂಅಲ್ಲಿಯವರ ವಿವಾಹ.

ಹಿಂದುಸ್ಥಾನ ಸರಕಾರದ ದಕ್ಷಿಣಾಫ್ರಿಕೆಯಲ್ಲಿ ಏಜಂಟ ಸರ್, ಸಯ್ಯದ ಅಲ್ಲಿ ರೇಝೂ ಇವರು ವಿಧುರರು. ೫೦ ವರ್ಷ ಮೀರಿದವರು. ಮಿಸ್. ಸಾಮಿ ಎಂಬ ಹಿಂದು ಯುವತಿಗೆ ಮುಸಲ್ಮಾನ್ ಧರ್ಮ ದೀಕ್ಷೆಕೊಟ್ಟು ಇವರು ಜೋಹಾನ್ಸಬರ್ಗದಲ್ಲಿ ವಿವಾಹವಾದರು. ಇದರಿಂದ ಅಲ್ಲಿ ತುಂಬಾ ಗಲಭೆಯುಂಟಾಗಿದೆ.



ಶಾ. ಶ. ೧೮೫೭ ನೆಯ ಪುಷ್ಯ ಬ|| ೧೧ ಸೋಮವಾರ.

ಆದಿಜನ ಜಾಗೃತಿಯ ಪರಿಣಾಮ.

ಆದಿಜನರಲ್ಲಿ ಅಭೂತಪೂರ್ವ ಜಾಗೃತಿಯುಂಟಾಗಿದೆಯೆಂಬುದು ಕಳೆದ ಹಿಂದು ಮಹಾಸಭೆಯಲ್ಲಿಯು ಮತ್ತು ಮೊನ್ನೆ ಮಹಾರಾಷ್ಟ್ರೀಯ ಆದಿಜನ ಯುವಕ ಪರಿಷತ್ತಿನಲ್ಲಿಯೂ ನಡೆದಿರುವ ಸಂಗತಿಗಳಿಂದ ಸ್ಪಷ್ಟವಾಗುತ್ತದೆ. ಈ ಕಾಲದ ಶಿಕ್ಷಣವು ಮನುಷ್ಯನಲ್ಲಿ ಸ್ವಾಭಿಮಾನ ಮತ್ತು ಸ್ವಾತಂತ್ರ್ಯಗಳ ಕಲ್ಪನೆಯನ್ನು ಜಾಗ್ರತ ಉಂಟುಮಾಡುತ್ತದೆ. ಅಂತೆಯೇ ಆದಿಜನ ಸುಶಿಕ್ಷಿತರಿಗೆ ತಮ್ಮ ಹೀನ ದೀನ ಸ್ಥಿತಿಗಳ ಅರಿವುಂಟಾಗಿ ಅವುಗಳಿಂದ ಪಾರಾಗಲು ಪ್ರಯತ್ನಿಸಲುಪಕ್ರಮಿಸಿದ್ದಾರೆ. ಆ ಪ್ರಯತ್ನಗಳ ದ್ಯೋತಕವೇ ಈ ಜಾಗೃತಿಯು.

ಈ ದೇಶದ ಕೋಟ್ಯಾಂತರ ಜನಗಳನ್ನು ಸಾವಿರಾರು ವರುಷಗಳಿಂದ ಅಜ್ಞಾನಾಂಧಕಾರದಲ್ಲಿಟ್ಟು ಅವರನ್ನು ನಾನಾ ದುಃಖಗಳಿಗೀಡುಮಾಡಿದ ಹಿಂದು ಧರ್ಮದ ಕಟ್ಟಳೆಗಳು ಈಗ ಅವರಿಗೆ ರಾಕ್ಷಸೀ ಕೃತ್ಯಗಳಾಗಿ ತೋರಿದುದೇನಾಶ್ಚರ್ಯ? ಈ ಭಯಂಕರ ಹಿಂಸೆಗಳಿಂದ ಪಾರಾಗಲು ಪ್ರಯತ್ನಿಸುವುದು ಸುಶಿಕ್ಷಿತರಾದವರ ಕರ್ತವ್ಯವಾಗಿಯೇ ಪರಿಣಮಿಸುವುದು ಸ್ವಾಭಾವಿಕವಲ್ಲವೆ? ಬೆಳಕಿಗೆ ಬಂದಮೇಲೆ ಕತ್ತಲೆಯಲ್ಲಿ ಹೊಂದಿದ ದುಃಖವು ಹೆಚ್ಚು ಭೀಕರವಾಗಿ ತೋರುವುದು ಸ್ವಾಭಾವಿಕ.

ಅಂತೆಯೇ ಈಗ ಅವರಿಗೆ ಸಾಮಾಜಿಕ ಸ್ವಾತಂತ್ರ್ಯವು ದೊರೆಯಲಾರಂಭವಾದುದರಿಂದ ಹಿಂದಿನ ಪಾರತಂತ್ರ್ಯವು ಬಹು ಭಯಂಕರವಾಗಿ ತೋರುತ್ತದೆ. ಪೇಶ್ವೆಯವರ ರಾಜ್ಯ ನಾಶ ಮಾಡಲು ನಾವೇ ಇಂಗ್ಲಿಷರಿಗೆ ಇದೇ ಪುಣೆಯಲ್ಲಿ ಸಹಾಯ ಮಾಡಿದೆವೆಂದು ಯುವಕ ಪರಿಷತ್ತಿನ ಸ್ವಾಗತಾಧ್ಯಕ್ಷರು ಬಹು ಅಭಿಮಾನದಿಂದ ತಮ್ಮ ಭಾಷಣದಲ್ಲಿ ಹೇಳಿದುದರ ಕಾರಣವಾದರೂ ಇದೇ ಸರಿ.

ಸುಧಾರಣೆಯ ಸನಾತನಿಗಳು.

ಆದಿಜನರ ಸುಧಾರಣೆಯೇನೋ ಆಗಬೇಕು; ಆದರೆ ಅದು ವರ್ಣವಿಶಿಷ್ಟ ಸನಾತನ ಪದ್ಧತಿಯನ್ನನುಸರಿಸಿರಬೇಕೆಂದು ಹೇಳುವವರೇ ಸುಧಾರಣೆಯ ಸನಾತನಿಗಳು. ಇವರಿಗೆ ಆದಿಜನರ ಉಗ್ರ ಭಾಷಣಗಳಾಗಲಿ ಅಥವಾ ದೇವಾಲಯ ಪ್ರವೇಶಾದಿ ಮಾರ್ಗಗಳಾಗಲಿ ಯುಕ್ತ ತೋರುವುದಿಲ್ಲ. ಪುಣೆಯ ಕೇಸರೀಕಾರರು ಮಹಾರಾಷ್ಟ್ರ ಆದಿಜನ ಯುವಕ ಪರಿಷತ್ತಿನಲ್ಲಾದ ಉಗ್ರ ಭಾಷಣಗಳನ್ನು ಟೀಕಿಸಿದ್ದಲ್ಲದೆ ಅವರ ಸುಧಾರಣೆಗಾಗಿ ಪ್ರಯತ್ನಿಸುತ್ತಿರುವವರಿಗೆ ಆದಿಜನರು ಕೃತಜ್ಞರಾಗಿರಬೇಕೆಂದೂ ಅಪೇಕ್ಷಿಸಿದ್ದಾರೆ.

ಇದು ನ್ಯಾಯವಲ್ಲ. ಸವರ್ಣೀಯ ಹಿಂದುಗಳು ಈ ಮುಂಚೆ ಸಾವಿರಾರು ವರುಷಗಳಿಂದ ಆದಿಜನರ ಮೇಲೆ ಮಾಡಿಕೊಳ್ಳುತ್ತ ಬಂದಿದ್ದ ಬಲಾತ್ಕಾರಗಳ ಪಾಪವೇ ಈಗ ಆದಿಜನರ ಮುಖದಿಂದ ಉಗ್ರ ಭಾಷಣಗಳ ರೂಪದಲ್ಲಿ ಹೊರಬೀಳುತ್ತಲಿದೆಯೆಂದು ತಿಳಿಯಬೇಕು. ಮನುಸ್ಮೃತಿ ಮೊದಲಾದ ಗ್ರಂಥಗಳಲ್ಲಿ ಆದಿಜನರ ಸಂಬಂಧವಾಗಿದ್ದ ಉಕ್ತಿಗಳನ್ನು ನೋಡಿದರೆ ಆದಿಜನರು ಸವರ್ಣೀಯರನ್ನೂ ಅವರು ಧರ್ಮವೆಂದು ತಿಳಿದ ನಿಂದ್ಯ ರೀತಿಗಳನ್ನೂ ಎಷ್ಟು ಉಗ್ರತರವಾಗಿ ಖಂಡಿಸಿದರೂ ಸೌಮ್ಯವೆಂದೇ ತಿಳಿಯಬೇಕು.

ಆದಿಜನರ ಸುಧಾರಣೆಗಾಗಿ ನಾವು ಈಗ ಪ್ರಯತ್ನಿಸಿದರೆ ಅವರು ಕೃತಜ್ಞರಾಗಿರಬೇಕಾದುದಿಲ್ಲ. ನಾವೇ ಇಷ್ಟು ಕಾಲ ನಮ್ಮ ಹಿಂಸೆಯನ್ನು ಅವರು ತಾಳಿಕೊಂಡಿದ್ದುದಕ್ಕೆ ಕೃತಜ್ಞತೆಯನ್ನು ತೋರಿಸಬೇಕು. ನಾವು ನಮ್ಮ ಹಿಂದಿನವರ ಪಾಪದ ಮತ್ತು ಮುಂದಿನವರ ಅನರ್ಥ ಪರಂಪರೆಗಳ ನಿವಾರಣೆಗಾಗಿಯೇ ಅಸ್ಪೃಶ್ಯತಾ ನಿವಾರಣೆಯ ಕಾರ್ಯವನ್ನು ಮಾಡುತ್ತಿದ್ದೇವೆಂದು ತಿಳಿಯಬೇಕು. ಆದಿಜನಗಳ ಸುಧಾರಣೆಯ ವಿಷಯದಲ್ಲಿರುವ ಇವರ ಈ ಸನಾತನಿ ವೃತ್ತಿಯು ಅಯೋಗ್ಯವೂ ಅನರ್ಥಕರವೂ ಆಗಿದೆ.

ಸ್ಮೃತಾನಿ ಸನಾತನಿಗಳು.

ಹಿಂದು ಮಹಾಸಭೆ ಮತ್ತು ಆದಿಜನ ಯುವಕ ಪರಿಷತ್ತು ಪುಣೆಯಲ್ಲಿ ಜರುಗಿದನಂತರ ಮೊನ್ನೆ ಪುಣೆಯಲ್ಲಿ ಕೆಲವು ಕರ್ಮಠ ಸನಾತನಿಗಳು ಸೇರಿ ಹಿಂದು ಮಹಾಸಭೆಯಲ್ಲಾದ ಅಸ್ಪೃಶ್ಯತಾ ನಿವಾರಣೆಯ ಗೊತ್ತುವಳಿಯನ್ನು ಖಂಡಿಸಿದ್ದಾರೆ. ಇವರು ಸ್ಮೃತಾನಿ ವೃತ್ತಿಯ ಸನಾತನಿಗಳೆಂದು ಹೇಳಬಹುದು. ಏಕೆಂದರೆ ಅಸ್ಪೃಶ್ಯತೆಯು ಜನ್ಮವಿಶಿಷ್ಟವಾದುದಂತೆ! ಅಸ್ಪೃಶ್ಯರ ಜನ್ಮವು ಪಾಪದಿಂದುಂಟಾದುದಂತೆ!! ದೇವರ ರಾಜ್ಯದಲ್ಲಿ ಈ ಆದಿಜನರ ಜನ್ಮವು ಅಂದಮಾನ ದ್ವೀಪದ ಕಾರಾಗೃಹದ ಹಾಗೆ ಇದೆಯಂತೆ!!! ಹೀಗೆ ಹೇಳುವ ಸನಾತನಿಗಳು ರಾಕ್ಷಸೀವೃತ್ತಿಯವರೆಂದು ಹೇಳಿದರೆ ತಪ್ಪಾಗದು. ಈ ವಿಧವಾದ ಧಾರ್ಮಿಕ ಕಲ್ಪನೆಯಿಂದಲೇ ಹಿಂದು ಧರ್ಮವು ಮತ್ತು ಹಿಂದು ಜನಾಂಗವು ಈಗಿನ ದುರವಸ್ಥೆಗೀಡಾಗಿವೆ. ಇನ್ನು ಮೇಲೆ ಇವು ನಾಮಶೇಷವಾಗಲು ಕೂಡಾ ಈ ಕಲ್ಪನೆಯೇ ಕಾರಣವಾಗುವುದು. ಆದರೆ ಇಂಥ ಸನಾತನಿಗಳ ಸಂಖ್ಯೆ ದಿನೇ ದಿನೇ ಬಹು ಕಡಿಮೆಯಾಗುತ್ತಿರುವುದು ಸಂತೋಷದ ಸಂಗತಿಯು.

ಡಾ. ಅಂಬೇಡಕರರ ತಪ್ಪುದಾರಿ.

ಆದಿಜನರಲ್ಲಿ ಅಪೂರ್ವ ಜಾಗೃತಿಯೇನೋ ಉಂಟಾಗಿದೆ. ಆದರೆ ಇದು ಕ್ಷೇಮಕರವಾದುದಾಗುವಂತೆ ವಿನಿಯೋಗಿಸಲ್ಪಡಬೇಕು. ಹಿಂದು ಮಹಾಸಭೆಯ ತೀರ್ಮಾನಕ್ಕೆ ಒಪ್ಪಿದ ಆದಿಜನರು ಅವರಿಗೂ, ಹಿಂದು ಜನಾಂಗಕ್ಕೂ, ಹಿಂದು ರಾಷ್ಟ್ರಕ್ಕೂ ಕ್ಷೇಮಕರವಾದ ರೀತಿಯಲ್ಲಿಯೇ ಹೋಗುತ್ತಿದ್ದಾರೆ. ಆದಿಜನರಲ್ಲಿ ಇವರ ಪಂಗಡವೇ ಪ್ರಬಲವಾಗಿದೆ.

ಡಾ. ಅಂಬೇಡಕರರು ಧರ್ಮಾಂತರ ಹೊಂದುವ ಮಾರ್ಗವನ್ನನುಸರಿಸಿರುವುದು ನ್ಯಾಯವಲ್ಲ. ಮತ್ತು ಕ್ಷೇಮಕರವೂ ಅಲ್ಲ. ಧರ್ಮಾಂತರ ಹೊಂದಲು ಈಗ ಇವರು ಹೇಳುತ್ತಿರುವ ಕಾರಣವು ಅಸಂಗತವಾದುದಾಗಿದೆ. ಹಿಂದು ಮಹಾಸಭೆಯ ಮೊನ್ನಿನ ತೀರ್ಮಾ

ನದಿಂದ ಅಸ್ಪೃಶ್ಯತೆಯು ಹಿಂದು ಧರ್ಮದ ಒಂದಂಗವಲ್ಲವೆಂದೇ ನಿರ್ಧರವಾಗಿದೆ. ಎಂದಮೇಲೆ ಜಾತಿ ನಿವಾರಣೆಯ ಪ್ರಶ್ನೆಯು ಅಪ್ರಸಂಗವಲ್ಲವೇ?

ಆದಿಜನರಿಗೆ ಹಿಂದು ಸಮಾಜದಲ್ಲಿ ಎಲ್ಲರಂತೆಯೇ ಸಮಾನವಾದ ಸಾಮಾಜಿಕ ಧಾರ್ಮಿಕ ಮತ್ತು ಆರ್ಥಿಕ ಸ್ವಾತಂತ್ರ್ಯವಿರಬೇಕೆಂದು ಹೇಳುವುದು ನ್ಯಾಯವಾದುದು. ಅದಕ್ಕಾಗಿ ಹೋರಾಡಬೇಕಾದುದೂ ಯುಕ್ತವಾಗಿದೆ. ಆದರೆ ಜಾತಿಭೇದ ನಿವಾರಣೆಗೂ ಧರ್ಮಾಂತರಕ್ಕೂ ಸಂಬಂಧವೇನು? ಆದಿಜನರಲ್ಲದ ಹಿಂದುಗಳೆಲ್ಲ ಜಾತಿಭೇದವಿಲ್ಲದವರಾಗಿದ್ದಾರೆಯೋ? ಸಾವಿರಾರು ಜಾತಿಗಳೂ ಉಪಜಾತಿಗಳೂ ಅವರಲ್ಲಿವೆ. ಇವೆಲ್ಲ ನಿವಾರಣೆಯಾಗಬೇಕಾದುದೇನೋ ನಿಜ ಅದಕ್ಕಾಗಿ ಈ ಧರ್ಮದಲ್ಲಿದ್ದೇ ಎಲ್ಲರೂ ತಮ್ಮ ತಮ್ಮಲ್ಲಿಯ ಒಳಭೇದಗಳನ್ನೂ ಮುಖ್ಯ ಭೇದಗಳನ್ನೂ ತೆಗೆಯಲು ಪ್ರಯತ್ನಿಸಬೇಕು. ಹಿಂದುಗಳಲ್ಲಿ ಜಾತಿಭೇದವಿದೆಯೆಂದು ಬೇರೆ ಧರ್ಮದಲ್ಲಿ ಹೋಗಲು ಡಾ. ಅಂಬೇಡಕರರಂತೆ ಯಾವ ಜಾತಿಯ ಹಿಂದುಗಳಾದರೂ ಇಚ್ಛಿಸುತ್ತಿದ್ದಾರೆಯೇ?

ಇವರಿಗೆ ಪರಧರ್ಮದಲ್ಲಿ ಸೇರುವುದು ಬೇಕಾಗಿದೆ. ಅದಕ್ಕಾಗಿ ಇದೊಂದು ಜಾತಿಭೇದದ ಕಾರಣವನ್ನು ಮುಂದು ಮಾಡಿದರೆಂದೇ ಸ್ಪಷ್ಟವಾಗುತ್ತದೆ. ಇಲ್ಲದಿದ್ದರೆ ಅಸ್ಪೃಶ್ಯತಾ ನಿವಾರಣೆಯ ಸಂಬಂಧವಾಗಿ ಹಿಂದು ಮಹಾಸಭೆಯು ನಿರ್ಣಯಿಸಿದನಂತರ ಪುನಃ ಧರ್ಮಾಂತರದ ನಿರ್ಣಯವನ್ನು ಮಾಡುವ ಕಾರಣವಿರಲಿಲ್ಲ.

ಹಿಂದಿನ ಸವರ್ಣೀಯರ ತಪ್ಪಿನಿಂದ ಈಗಿನ ಸವರ್ಣೀಯ ಹಿಂದುಗಳು ಹೇಗೆ ನಾನಾ ತೊಂದರೆಗಳಿಗೀಡಾಗಬೇಕಾಗಿದೆಯೋ ಹಾಗೆಯೇ ಇಂದಿನ ಡಾ. ಅಂಬೇಡಕರರ ಧರ್ಮಾಂತರದಿಂದ ಮುಂದಿನ ಅವರ ಸಮಾಜದವರು ದುಃಖಗಳಿಗೊಳಗಾಗಬೇಕಾಗುತ್ತದೆಂಬುದನ್ನು ಇವರು ಯೋಚಿಸಬಾರದೆ? ಹಿಂದುಸ್ಥಾನವನ್ನು ಮುಸಲ್ಮಾನ್ ಅಥವಾ ಕ್ರೈಸ್ತರ ಸ್ಥಾನವನ್ನಾಗಿ ಮಾಡಬೇಕೆಂಬುದೇ ಇವರ ಉದ್ದೇಶವಿದೆಯೆಂದು ತೋರುವುದಿಲ್ಲವೆ? ಇದನ್ನು ವಿಚಾರಪರರೆಂದಿಗೂ ಮಾನ್ಯಮಾಡರು.

ಅಭಿನಂದನೀಯ ವಿಚಾರ.

ಯುವಕ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಶಿವರಾಜರು ತಮ್ಮ ವಂಶದವರೇ ಈ ದೇಶದ ಯಜಮಾನರಾಗಿದ್ದರೆಂತಲೂ ವರ್ಣವಾದಿಗಳಾದ ಹಿಂದುಗಳು ಈ ದೇಶಕ್ಕೆ ಬರದ ಪೂರ್ವದಲ್ಲಿದ್ದ ತಮ್ಮ ಧರ್ಮವನ್ನೇ ತಾವು ಅನುಸರಿಸಬಹುದೆಂತಲೂ ತಮ್ಮ ವಿಚಾರಗಳನ್ನು ಪ್ರದರ್ಶಿಸಿದುದು ಅಭಿನಂದನೀಯವಾದುದು. ನಿಜವಾಗಿ ಅವರೇ ಈ ದೇಶದ ಯಜಮಾನರು. ಆ ಜನಾಂಗವನ್ನೇ ದ್ರಾವಿಡರೂ ಆರ್ಯರೂ ಸೋಲಿಸಿ ಅವರನ್ನು ದುರವಸ್ಥೆಗೀಡುಮಾಡಿದರು.

ಅವರ ಪ್ರಾಚೀನ ಧರ್ಮವನ್ನು ಅವರು ಪ್ರಕಾಶಕ್ಕೆ ತಂದು ತಮ್ಮ ಆದಿದ್ರಾವಿಡ ಸಂಸ್ಕೃತಿಯನ್ನು ಉದ್ಧಾರ ಮಾಡಿದರೆ ಮನುಷ್ಯ ಜಾತಿಗೇನೇ ಒಂದು ಹೊಸ ಸೌಲಭ್ಯವನ್ನುಂಟುಮಾಡಿಕೊಟ್ಟಂತಾಗುವುದು. ಮುಸಲ್ಮಾನ್ ಅಥವಾ ಕ್ರೈಸ್ತ ಧರ್ಮೀಯರಿಗೆ ಇವರು ತುತ್ತಾಗದೆ ತಮ್ಮ ಪ್ರಾಚೀನ ಧರ್ಮವನ್ನೇ ಈ ಕಾಲಕ್ಕೆ ತಕ್ಕಂತೆ ಸುಧಾರಿಸಿ ಆಚರಣೆಯಲ್ಲಿ ತಂದುಕೊಳ್ಳುವುದು ತುಂಬಾ ಶ್ರೇಯಸ್ಕರವು.

ಈಗ ಆದಿಜನರಲ್ಲುಂಟಾದ ಜಾಗೃತಿಯು ಶ್ರೀ ರಾಜಭೋಜ ಮೊದಲಾದವರಂತೆ ಸುಧಾರಣಾಪ್ರಿಯ ಹಿಂದುಗಳಲ್ಲಿ ಸೇರಿಕೊಂಡಿದ್ದು ಹೋರಾಡಿ ಉನ್ನತಿಯನ್ನು ಹೊಂದಲು ಕಾರಣವಾದರೆ ಒಳ್ಳೆಯದು. ಅಥವಾ ಶ್ರೀ ಶಿವರಾಜರು ಯೋಚಿಸಿರುವಂತೆ ತಮ್ಮ ಪ್ರಾಚೀನ ಧರ್ಮವನ್ನೇ ಜೀರ್ಣೋದ್ಧಾರ ಮಾಡಿ ಸವರ್ಣೀಯ ಹಿಂದುಗಳಂತೆ ಸಾಮಾಜಿಕ ಸ್ವಾತಂತ್ರ್ಯ ಹೊಂದಲು ಸಾಧನವಾದರೆ ಬಾಧಕವೇನೂ ಇಲ್ಲ. ಈ ಎರಡೂ ಮಾರ್ಗಗಳನ್ನು ಬಿಟ್ಟು ಧರ್ಮಾಂತರವನ್ನೇ ಹೊಂದಲು ಕಾರಣವಾದರೆ ಅದು ಅನರ್ಥವನ್ನೇ ಉಂಟುಮಾಡದಿರಲಾರದು. ಆದಕಾರಣ ಆದಿಜನರ ಈ ಜಾಗೃತಿಯು ಇಂತಹ ದುಷ್ಪರಿಣಾಮಕ್ಕೆ ಕಾರಣವಾಗದಿರಲೆಂದೇ ಹಾರೈಸುತ್ತೇವೆ.

ರಾಷ್ಟ್ರೀಯ ಸಭೆಯ ಮುಂದಣ ಮಾರ್ಗ.

ರಾಷ್ಟ್ರೀಯ ಸಭೆಯು ಕಳೆದ ೫೦ ವರುಷಗಳಲ್ಲಿ ನಾನಾ ಪ್ರಕಾರ ಪ್ರಯತ್ನಿಸಿ ರಾಷ್ಟ್ರದಲ್ಲಿ ಅದ್ಭುತವಾದ ರಾಜಕೀಯ ಜಾಗೃತಿಯನ್ನುಂಟುಮಾಡಿದೆ. ಅಂತೆಯೇ ಈ ದೇಶದಲ್ಲಿ ಇಷ್ಟು ಪ್ರಬಲವಾದ ರಾಜಕೀಯ ಸಂಸ್ಥೆಯು ಬೇರೊಂದಿಲ್ಲವೆಂದು ಸಕಲರೂ ಹೇಳುತ್ತಿದ್ದಾರೆ.

ಈ ರಾಷ್ಟ್ರೀಯ ಸಭೆಯು ಮೊದಲು ಗೋಖಲೆಯವರ, ಅನಂತರ ಟಿಳಕರ, ಆ ಬಳಿಕ ಗಾಂಧೀಜಿಯವರ ನೇತೃತ್ವದಲ್ಲಿದ್ದು ಈ ವರೆಗೆ ಅನೇಕ ಅನುಭವಗಳನ್ನೂ ಹೊಂದಿದೆ. ರಾಷ್ಟ್ರದ ಈಗಿನ ಶಕ್ತಿ ಸಾಹಸ ಪರಿಸ್ಥಿತಿಗಳನ್ನು ತನ್ನ ಅನುಭವದಿಂದ ತೂಗಿ ನೋಡಿ ಮುಂದಿನ ಮಾರ್ಗವನ್ನು ಗೊತ್ತುಪಡಿಸಬೇಕಲ್ಲವೆ?

ಕಾಂಗ್ರೆಸ್ ಸಮತಾವಾದಿಗಳು ಈಗಾಗಲೇ ಅಧಿಕಾರ ಸ್ಥಾನಗಳನ್ನು ಆಕ್ರಮಿಸಿಕೊಳ್ಳಬಾರದೆಂದು ಚಟುವಟಿಕೆ ನಡೆಸಿದ್ದಾರೆ. ಪ್ರಾಗತಿಕ ಪಂಗಡದೊಂದಿಗೆ ರಾಷ್ಟ್ರೀಯಸಭೆ ಸೇರಬಾರದೆಂದು ಕೆಲವರು ಸೂಚಿಸುತ್ತಿದ್ದಾರೆ ಮುಂದಾಲೋಚನೆಯುಳ್ಳ ರಾಷ್ಟ್ರೀಯ ಸಭಾ ಚಾಲಕರು ಎಲ್ಲ ಪಂಗಡಗಳೊಂದಿಗೆ ಸೇರಿ ಏಕಮುಖದಿಂದ ಪರಿಣಾಮಕಾರಿಯಾದ ಚಟುವಟಿಕೆಯನ್ನು ಪ್ರಾರಂಭಿಸಬೇಕೆಂದು ಯೋಚಿಸುತ್ತಿದ್ದಾರೆ. ರಾಷ್ಟ್ರೀಯ ಸಭೆಯವರು ಅಧಿಕಾರ ಸ್ಥಾನಗಳನ್ನು ಸ್ವೀಕರಿಸುವುದೇ ಶ್ರೇಯಸ್ಕರವೆಂದು ಕೆಲವರು ಪ್ರತಿಪಾದಿಸುತ್ತಿದ್ದಾರೆ. ಕೌನ್ಸಿಲ್ ಪ್ರವೇಶವೇ ಅನಾವಶ್ಯಕವೆಂದು ಹೇಳುವವರೂ ಇದ್ದಾರೆ.

ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದರೆಂಬಂತೆ ರಾಷ್ಟ್ರೀಯ ಸಭೆಯು ಈ ಸಾರೆ ಇಂಥ ಅಪಾಯಕರವಾದ ಮಾರ್ಗವನ್ನು ಅನುಸರಿಸಬಾರದೆಂದೇ ವಿಚಾರಪರರು ತಿಳಿಸುತ್ತಿದ್ದಾರೆ. ರಾಷ್ಟ್ರೀಯ ಸಭೆಯು ಜಾತಿನಿರ್ಣಯವನ್ನು ಸ್ಪಷ್ಟವಾಗಿ ಖಂಡಿಸಿ ಅಧಿಕಾರ ಸ್ಥಾನಗಳನ್ನೂ ಆಕ್ರಮಿಸಿಕೊಳ್ಳಲು ಸಿದ್ಧವಾದರೇನೇ ಮುಂದಣ ಸುಧಾರಣೆಯು ಜಾಗ್ರತೆ ಪರಿವರ್ತನೆಹೊಂದಿ ಹೆಚ್ಚಿನ ಸ್ವಾತಂತ್ರ್ಯ ದೊರೆಯುವಂತಹ ಪರಿಣಾಮಕಾರಿಯಾದ ಚಟುವಟಿಕೆಯುಂಟಾಗುವುದು ಶಕ್ಯವು. ಇಲ್ಲದಿದ್ದರೆ ಅನ್ಯರಮುತ್ತು ಹೆಚ್ಚಿ ಆಳರಸರ ಪ್ರಭುತ್ವವೇ ಗಟ್ಟಿಗೊಂಡು ಜಾತಿವಾದಿಗಳ ಸ್ವಾರ್ಥ ಸಾಧನೆಗೆ ಕಾರಣವಾಗದಿರಲಾರದು. ಹಾಗಾಗಬಾರದೆಂದೇ ನಮ್ಮ ಹಾರೈಕೆ.

—ಮುಂಬೈ ಮಾಟುಂಗಾ ಉಪನಗರದಲ್ಲಿ ಕಳೆದ ೧೪ ನೆಯ ತಾರೀಖಿನ ಮಕರ ಸಂಕ್ರಮಣದ ದಿನ ೫೦೦ ಸವರ್ಣೀಯ ಹಿಂದು ಸ್ತ್ರೀಯರು ೨೦೦ ಆದಿಜನ ಹಿಂದು ಸ್ತ್ರೀಯರೂ ಸೇರಿ ಪರಸ್ಪರ ಎಳ್ಳು ಸಕ್ಕರೆಗಳನ್ನು ಕೊಡುವ ದಿವ್ಯ ಸಮಾರಂಭವನ್ನು ಜರುಗಿಸಿದರು. ಆಗ ಶ್ರೀ ಶಂಕರಾಚಾರ್ಯ ಡಾ. ಕುರ್ತಕೋಟಿಯವರು ಹೀಗೆ ಹೇಳಿದರು—

"ಹೆಣ್ಣುಮಕ್ಕಳು ಅಸ್ಪೃಶ್ಯತಾ ನಿವಾರಣೆಯ ಈ ಧರ್ಮಕಾರ್ಯಕ್ಕೆ ಹೀಗೆ ಮುಂದೆ ಬಂದುದು ಶುಭಲಕ್ಷಣ. ಧರ್ಮವು ಮನುಷ್ಯರಿಗಾಗಿ ಇದೆಯೇ ವಿನಾ ಧರ್ಮಕ್ಕಾಗಿ ಮನುಷ್ಯನೇನೂ ಇಲ್ಲ. ಅಸ್ಪೃಶ್ಯತಾ ನಿವಾರಣೆಯ ಈ ಪವಿತ್ರ ಕಾರ್ಯವನ್ನು ನೀವು ಮುಂದೆ ಸಾಗಿಸಿರಿ."

ಸ್ವೀಕಾರ ಮತ್ತು ವಿಮರ್ಶೆ.

ರಾಷ್ಟ್ರೀಯ ಸಭೆಯ ಸುವರ್ಣೋತ್ಸವದ ಈ ಕೆಳಗಿನ ಆರು ಪ್ರತ್ಯೇಕ ಸಂಚಿಕೆಗಳು ನಮ್ಮ ಕಡೆ ಬಂದಿವೆ. ಇವುಗಳನ್ನು ಕೃತಜ್ಞತಾಪೂರ್ವಕ ಸ್ವೀಕರಿಸಿ ಈ ಪತ್ರಿಕಾಧಿಪತಿಗಳು ರಾಷ್ಟ್ರಭಕ್ತಿಯ ಪ್ರಸಾರಣೆಗಾಗಿ ಮಾಡಿದ ಈ ಪ್ರಯತ್ನವನ್ನು ತುಂಬಾ ಅಭಿನಂದಿಸುತ್ತೇವೆ.

ಪ್ರಜಾಮತ ಮದ್ರಾಸ್— ಇದು ೪೮ ಪುಟಗಳ ಪತ್ರಿಕೆ. ಬೆಲೆ ಒಂದೇ ಆಣೆ. ಬಹು ಸುಲಭ. ಕರ್ನಾಟಕದ ಎಲ್ಲ ಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರ ಭಾವಚಿತ್ರಗಳೂ ಕಾಂಗ್ರೆಸ್ ಅಧ್ಯಕ್ಷರ ಭಾವಚಿತ್ರಗಳೂ ಇವೆ ಡಾ. ಪಟ್ಟಾಭಿ ಸೀತಾರಾಮಯ್ಯನವರ ಕಾಂಗ್ರೆಸ್ ಸಂಬಂಧವಾದ ಲೇಖನ, ಶ್ರೀಮತಿ ಸುಮತಿ ಬಾಯಿ ಬಿ. ಎ. ಎಲ್ ಟಿ ಇವರ ಅಸ್ಪೃಶ್ಯತಾ ನಿವಾರಣೆಯ ಲೇಖನ, ಪಂಡಿತ ತಾರಾನಾಥರು ತಮ್ಮ ಅಮೇರಿಕೆಯ ಮಿತ್ರರಿಗೆ ಬರೆದ ಮಹಾತ್ಮಾ ಗಾಂಧಿಯವರ ತತ್ವಗಳ ಸಂಬಂಧವಾದ ಪತ್ರ ಅವಶ್ಯಕವಾಗಿ ಓದತಕ್ಕವುಗಳು ಗಾಂಧೀಜಿಯವರಿದ್ದ ಯರವಡಾ ಕಾರಾಗೃಹದ ಚಿತ್ರವು ಒಂದು ವಿಶೇಷವಾದುದು.

ಸ್ವದೇಶಾಭಿಮಾನಿ ಮಂಗಳೂರ— ಇದು ೨೪ ಪುಟಗಳ ಪತ್ರಿಕೆ. ಬೆಲೆ ಒಂದಾಣೆ. ಬಹು ಮುದ್ದಾದ ಮುದ್ರಣ. ರಾಷ್ಟ್ರೀಯ ಸಭೆಯ ಎಲ್ಲ ಪ್ರಮುಖರ ಭಾವಚಿತ್ರಗಳಿವೆ. ಎಲ್ಲ ರಾಷ್ಟ್ರೀಯ ಸಭೆಗಳ ವೃತ್ತಾಂತಗಳನ್ನು ಮುಂದಣ ಸಂಚಿಕೆಗಳಲ್ಲಿಯೂ ಕೊಡುತ್ತಾ ಬಂದಿದ್ದಾರೆ. ತಾ. ೩-೧-೩೬ ನೆಯ ಪತ್ರಿಕೆಯಲ್ಲಿ ಕೊಟ್ಟ ಮೊದಲನೆಯ ರಾಷ್ಟ್ರೀಯ ಸಭೆಯ ಪ್ರತಿನಿಧಿಗಳ ಭಾವಚಿತ್ರ ಅಪೂರ್ವವಾದುದು.

ಕಂಠೀರವ ಮಂಗಳೂರು— ಇದು ೩೨ ಪುಟಗಳ ಪತ್ರಿಕೆ. ಬೆಲೆ ಒಂದಾಣೆ. ರಾಷ್ಟ್ರೀಯ ಸಭೆಯ ಪ್ರಮುಖರ ಭಾವಚಿತ್ರಗಳಿವೆ. ಖಾದಿಯ ಪ್ರತಿಷ್ಠೆ, ಮತ್ತು ರಾಷ್ಟ್ರೀಯ ಶಿಕ್ಷಣಗಳ ಸಂಬಂಧವಾದ ಲೇಖನಗಳು ಚನ್ನಾಗಿವೆ.

ರಾಷ್ಟ್ರಬಂಧು ಮಂಗಳೂರು— ಇದು ೨೪ ಪುಟಗಳ ಪತ್ರಿಕೆ. ಸೊಗಸಾದ ಮುದ್ರಣ. ರಾಷ್ಟ್ರ ಪ್ರಮುಖರ ಚಿತ್ರಗಳಿವೆ. ಮುಖಪುಟದ ಮೇಲಿನ ಭಾರತಾಂಬೆಯ ಚಿತ್ರವು ಭಾವಗರ್ಭಿತವಾದುದಾಗಿದೆ. ಭಾಷಾನ್ವಯ ಪ್ರಾಂತ್ಯಗಳು ಮತ್ತು ದೇಶಾಂತರಗಳಲ್ಲಿಯ ಹಿಂದೀಯರು ಎಂಬ ಲೇಖನ ವಾಚನೀಯವಾಗಿವೆ.

ಸಮಾಜ ಧಾರವಾಡ— ಇದು ಕ್ರೌನ್ ನಾಲ್ಕನೆಯ ಒಂದು ಭಾಗದ ಆಕಾರದಲ್ಲಿ ಪುಸ್ತಕ ರೂಪದಲ್ಲಿದೆ ರಾಷ್ಟ್ರದ ಕೆಲವು ಪ್ರಮುಖರ ಚಿತ್ರಗಳಿವೆ. ಗಾಂಧೀಜಿಯವರ ಆಧ್ಯಾತ್ಮಿಕ ಭೂಮಿಕೆ ಎಂಬ ಲೇಖನ ಚನ್ನಾಗಿದೆ. ಕ್ರಯ ೧ ಆಣೆ.

ವಿಶ್ವ ಕರ್ನಾಟಕ. ಬೆಂಗಳೂರು— ಇದು ೬೦ ಪುಟಗಳ ಪುಸ್ತಕ. ಎಲ್ಲ ರಾಷ್ಟ್ರೀಯ ಸಭೆಗಳ ಅಧ್ಯಕ್ಷರ ಭಾವಚಿತ್ರ ಮತ್ತು ಸಭೆಗಳ ಮುಖ್ಯ ಸಂಗತಿ ಪ್ರತಿಯೊಂದು ಪುಟದಲ್ಲಿ ಅಚ್ಚಾಗಿವೆ.

ರಾಷ್ಟ್ರೀಯ ಸಭೆಯ ಸಂಬಂಧವಾಗಿ ಬೇರೆ ಬೇರೆ ಪ್ರಾಂತಗಳ ವಿದ್ವಾಂಸರಿಂದ ರಾಜಕಾರಣದ ಭಿನ್ನ ಭಿನ್ನ ವಿಚಾರಸರಣಿಯ ಲೇಖನಗಳನ್ನು ತರಿಸಿ ಈ ಪ್ರತ್ಯೇಕ ಸಂಚಿಕೆಗಳಲ್ಲಿ ಪ್ರಕಟಿಸಿದ್ದರೆ ಕೇವಲ ಕನ್ನಡವನ್ನೇ ಓದುವವರಿಗೆ ಹೆಚ್ಚಿನ ಸಂಗತಿಗಳು ಗೊತ್ತಾಗುತ್ತಿದ್ದವು. ಇಂತಹ ವಿಶೇಷ ಸಂಚಿಕೆಯಲ್ಲಿಯೂ ಆ ವಿಧವಾದ ವಿಚಾರ ಸಂಗ್ರಹವಾಗದಿದ್ದುದೊಂದು ಕೊರತೆಯೇ ಸರಿ.

ವೀರಶೈವ— ಇದೊಂದು ಮಾಸ ಪತ್ರಿಕೆ. ಸಂಪಾದಕರು ಶ್ರೀ ಸಿ. ಸಂಗಯ್ಯನವರು. ಡೆಮ್ಮಿ ಎಂಟನೆಯ ಭಾಗದ ೩೨ ಪುಟಗಳುಳ್ಳದ್ದಾಗಿದೆ. ವಾರ್ಷಿಕ ಚಂದಾ ೨ ರೂ. ಬೆಂಗಳೂರಲ್ಲಿ ಪ್ರಕಟವಾಗುತ್ತದೆ. ವೀರಶೈವ ಮತದ ನಿಜ ತತ್ವಗಳನ್ನು ತಿಳಿಸುವುದೇ ಈ ಪತ್ರಿಕೆಯ ಉದ್ದೇಶವೆಂದು ಸಂಪಾದಕರು ಈ ಪ್ರಥಮ ಸಂಚಿಕೆಯಲ್ಲಿ ತಿಳಿಸಿದ್ದಾರೆ ಮತ್ತು ಗುರು ವಿರಕ್ತರೇನೂ ಪರಸ್ಪರ ಕಲಹ ಮಾಡುವುದಿಲ್ಲವೆಂತಲೂ ಭಕ್ತರೇ ಪಕ್ಷ ಕಟ್ಟಿ ಸಮಾಜದಲ್ಲಿ ಅನೈಕಮತ್ಯವನ್ನುಂಟುಮಾಡುತ್ತಿದ್ದಾರೆಂತಲೂ ತಿಳಿಸಿದ್ದಾರೆ. ಹೀಗೆ ಮಾಡದೆ ಗುರುವಿರಕ್ತರ ಅನುಗ್ರಹಕ್ಕೆ ಪಾತ್ರರಾಗಬೇಕೆಂತಲೂ ಸೂಚಿಸಿದ್ದಾರೆ.

ಈಗ ಗುರು ವಿರಕ್ತರಲ್ಲಿ ಮತತತ್ವಗಳ ವಿಷಯದಲ್ಲಿಯೇ ಭಿನ್ನಾಭಿಪ್ರಾಯವುಂಟಾದುದೂ ಮತ್ತು ಆ ಪ್ರಕಾರ ಆಯಾಯ ಪೀಠಗಳ ಸ್ವಾಮಿಗಳವರೇ ಪ್ರಕಟಿಸಿದುದೂ ಸಂಪಾದಕ ಮಹಾಶಯರಿಗೆ ಗೊತ್ತಿದ್ದರೆ ಹೀಗೆ ಬರೆಯುತ್ತಿರಲಿಲ್ಲವೆಂದು ತೋರುತ್ತದೆ. ವೀರಶೈವ ನಿಜತತ್ವಗಳನ್ನು ತಿಳಿಸುವಾಗ ವೀರಶೈವರಲ್ಲಿ ಬ್ರಾಹ್ಮಣಾದಿ ಜನ್ಮವಿಶಿಷ್ಟ ಚಾತುರ್ವರ್ಣಗಳಿವೆಯೇ ಇಲ್ಲವೇ ಭಕ್ತ ಮತ್ತು ಮಹೇಶ್ವರ ಎಂಬೆರಡು ಜನ್ಮವಿಶಿಷ್ಟ ಜಾತಿಗಳಿವೆಯೇ? ಇಲ್ಲವೆ? ಎಂಬ ಈ ಸಂಗತಿಗಳನ್ನು ಸಂಪಾದಕ ಮಹಾಶಯರು ಪ್ರಕಟಿಸಿದ್ದಾದರೆ ಈಗ ಗುರು ವಿರಕ್ತರ ಅನುಗ್ರಹ ಹೊಂದುವ ರೀತಿಯು ಗೊತ್ತಾಗುವುದು. ಈ ಪತ್ರಿಕೆಯು ಜನಾನುರಾಗಕ್ಕೆ ಪಾತ್ರವಾಗಲೆಂದು ಹಾರೈಸುತ್ತೇವೆ.

ವೀರಶೈವ ಸಂಜೀವಿನಿ— ಇದು ಮರಾಠಿ ಪಕ್ಷ ಪತ್ರಿಕೆ. ಉಮರಾವತಿಯಲ್ಲಿ ಪ್ರಕಟವಾಗುತ್ತದೆ. ಸಂಪಾದಕರು ಮಹಾರಾಷ್ಟ್ರ ದೇಶದ ಪ್ರಸಿದ್ಧ ರಾಜಕೀಯ ಮುಂದಾಳುಗಳು ಮತ್ತು ವೀರಶೈವ ಸಮಾಜದ ಪ್ರಮುಖರು ಆದ ಶ್ರೀ ನಾರಾಯಣ ರಾಮಲಿಂಗ ಬಾಮಣಗಾಂವಕರರು. ಇವರು ಮರಾಠಿಯಲ್ಲಿ ಪ್ರಸಿದ್ಧ ಲೇಖಕರು. ಈ ಪತ್ರಿಕೆಯು ಇವರಿಂದಲೇ ೩೬ ವರ್ಷಗಳ ಹಿಂದೆ ಉಂಟಾಗಿದ್ದಿತು. ಇಷ್ಟು ದೀರ್ಘ ಕಾಲದ ಮೇಲೆ ಆ ಭಾಗದ ವೀರಶೈವ ಪ್ರಮುಖರ ಆಗ್ರಹದಿಂದ ಮತ್ತೆ ಈ ಕಾರ್ಯವನ್ನು ಪ್ರಾರಂಭಿಸಿದುದಕ್ಕಾಗಿ ನಾವು ಶ್ರೀ ಬಾಮಣಗಾಂವಕರರನ್ನು ಹೃದಯಪೂರ್ವಕ ಅಭಿನಂದಿಸುತ್ತೇವೆ

ಈಗ ಉದಯವೆಂಬ ರಾಷ್ಟ್ರೀಯ ಪಕ್ಷದ ಪತ್ರಿಕೆಯ ಸಂಪಾದಕರಾಗಿಯೂ ಇದ್ದಾರೆ. ರಾಷ್ಟ್ರದ ಮತ್ತು ಸಮಾಜದ ಸೇವೆಯನ್ನು ಒಬ್ಬರೇ ಒಂದೇ ಕಾಲದಲ್ಲಿ ಪರಸ್ಪರ ವಿರೋಧವಿಲ್ಲದೆ ಹೇಗೆ ಮಾಡುವುದು ಶಕ್ಯವಿದೆಯೆಂಬುದಕ್ಕೆ ಇವರ ಈ ಕೃತಿಯು ಸಾಕ್ಷಿಯಾಗಿದೆ. ಇವರು ಪ್ರಗತಿಪರ ವಿಚಾರದವರು. ಈಗಿನ ಗುರುವಿರಕ್ತರ ಕಲಹದಲ್ಲಿ ತಮಗೆ ಸತ್ಯ ತೋರಿದುದನ್ನೇ ಪ್ರತಿಪಾದಿಸುವುದಾಗಿ ಈ ಪ್ರಥಮ ಸಂಚಿಕೆಯಲ್ಲಿ ತಿಳಿಸಿದ್ದಾರೆ. ಈ ಪತ್ರಿಕೆಯ ಪುನರ್ಜನ್ಮವು ಮಹಾರಾಷ್ಟ್ರದ ವೀರಶೈವರ ಜಾಗೃತಿಗೂ ವೀರಶೈವ ಮತದ ನಿಜತತ್ವಗಳ ಪ್ರಸಾರಣೆಗೂ ಕಾರಣವಾಗಲೆಂದು ಹಾರೈಸುತ್ತೇವೆ.

ಲಿಂಗಾಯತ ಮಾಳಿ ವಿಜಯ— ಇದೊಂದು ಪಕ್ಷ ಪತ್ರಿಕೆ. ಮರಾಠಿ ಮತ್ತು ಕನ್ನಡ ಭಾಷೆಗಳಿಂದ ಬೆಳಗಾವಿ ಜಿಲ್ಲಾ ಚಿಕ್ಕೋಡಿಯಲ್ಲಿ ಪ್ರಕಟವಾಗುತ್ತದೆ. ಇದರ ಸಂಪಾದಕರು ಶ್ರೀ. ನಾಥಾಜಿ ಅಕ್ಕಪ್ಪಾ ಮಾಳಿ. ವಾರ್ಷಿಕ ಚಂದಾ ೧॥ ರೂ.

ಲಿಂಗಾಯತರ ಅನೇಕ ಒಳಪಂಗಡಗಳಲ್ಲಿ ಮಾಳಿ ಎಂಬುದೂ ಒಂದು. ಇದು ಮರಾಠಿ ಶಬ್ದ. ಕನ್ನಡದಲ್ಲಿ ತೋಟಿಗರು ಎಂದು. ತೋಟದ ಕೆಲಸವನ್ನು ಮಾಡುತ್ತಿದ್ದುದರಿಂದ ತೋಟಿಗರೆಂದು ಕರೆಯಲ್ಪಟ್ಟರು. ನೇಯುವುದು, ಹೊಲಿಯುವುದು, ಎಣ್ಣೆ ತೆಗೆಯು

ವುದು ಮೊದಲಾದ ಅನೇಕ ಕಾರ್ಯಗಳಂತೆ ಕೋಟಿಗಾಡುವುದೂ ಒಂದು ಮಹತ್ವದ ಕಾರ್ಯ.

ಈ ವೀರಶೈವರ ಸಂಖ್ಯೆ ಸಾಧಾರಣ ೩ ಲಕ್ಷ ಇದೆ. ಇವರು ಕೊಲ್ಹಾಪುರ, ಜತ್ತಿ, ಮುಧೋಳ, ಸಾಂಗಲಿ, ಮಿರಜಿ, ಮಧ್ಯ ಪ್ರಾಂತ ಮೊದಲಾದ ಮರಾಠಿ ಭಾಷೆಯನ್ನಾಡುವ ಭಾಗಗಳಲ್ಲಿಯೂ ಬೆಳಗಾವ, ವಿಜಾಪುರ, ಧಾರವಾಡ, ನಿಜಾಮರಾಜ್ಯ ಮೊದಲಾದ ಕನ್ನಡ ಭಾಷೆಯನ್ನಾಡುವ ಪ್ರದೇಶಗಳಲ್ಲಿಯೂ ಇದ್ದಾರೆ. ಇವರು ಅಷ್ಟಾವರಣಶೀಲರು.

ಹೀಗಿರುವಾಗ ಇವರು ಲಿಂಗಾಯತರಲ್ಲಿಯೇ ತಾವು ಒಂದು ಜಾತಿಯವರೆಂದು ತಿಳಿಯುವುದು ಹಿತವಲ್ಲ. ವೀರಶೈವರಲ್ಲಿಯ ಒಳಪಂಗಡಗಳ ಏಕೀಕರಣವು ಧರ್ಮಸಮ್ಮತವಾಗಿದೆ. ವೀರಶೈವ ಮಹಾಸಭೆಯಲ್ಲಿಯೂ ಈ ತತ್ವವು ಮಾನ್ಯವಾಗಿದೆ. ವೀರಶೈವ ಒಳಪಂಗಡಗಳ ಏಕೀಕರಣವಾಗಬೇಕೆಂಬುದೂ ಈ ಪತ್ರಿಕೆಗೆ ಮಾನ್ಯವಿದೆ. ಎಂದಮೇಲೆ ' ಲಿಂಗಾಯತ ವಿಜಯ ' ಎಂಬ ಹೆಸರೇ ಈ ಪತ್ರಿಕೆಗಿರಬೇಕಾದುದು ಹಿತವೇ ವಿನಾ ಮಾಳಿ ಎಂಬ ಪ್ರತ್ಯೇಕಿಸುವ ಹೆಸರು ಇದರಲ್ಲಿ ಸೇರಿದುದು ಸರಿಯಲ್ಲ. ಇದರಿಂದ ವೀರಶೈವರಲ್ಲಿಯ ವಿಘಟನೆಯ ಕಲ್ಪನೆಗೆ ಅವಕಾಶವಾಗುವುದು. ಹೀಗೆ ವೀರಶೈವರಲ್ಲಿಯ ಕಾಯಕದ ಮೇಲಿಂದ ಬಂದ ಹೆಸರಿನವರೆಲ್ಲರೂ ತಮ್ಮದೊಂದು ಪ್ರತ್ಯೇಕ ಜಾತಿಯೆಂದು ತಿಳಿಯುತ್ತ ಹೋದರೆ ನೂರಾರು ಜಾತಿಗಳಾಗಲಿಕ್ಕಿಲ್ಲವೆ? ಈ ಸಂಗತಿಯ ಕಡೆಗೆ ಸಂಪಾದಕ ಮಹಾಶಯರು ಲಕ್ಷಿಸುವರೆಂದೂ ಈ ಪತ್ರಿಕೆಗೆ ಸಕಲ ವೀರಶೈವರೂ ಪ್ರೋತ್ಸಾಹಿಸುವರೆಂದೂ ನಾವು ತುಂಬಾ ನಂಬಿದ್ದೇವೆ.

ವೀರಶೈವ ಮತಸ್ಥಾಪಕರು ಯಾರು?

ಎಂಬ ಶ್ರೀಯುತ ಜೀರಿಗೆ ಬಸವಲಿಂಗಪ್ಪನವರು ಕನ್ನಡದಲ್ಲಿ ಬರೆದ ಈ ಪುಸ್ತಕವನ್ನೇ ಶ್ರೀ. ಜೀರಿಗೆ ಕೆ. ಬಸವಪ್ಪ ಬಿ. ಎ. ಬೆಂಗಳೂರು ಇವರು ಇಂಗ್ಲಿಷಿನಲ್ಲಿ ವಿಸ್ತರಿಸಿ Who is the founder of the Virasaiva or Lingayet Religion? ಎಂಬ ಪುಸ್ತಕವನ್ನು ಬರೆದಿದ್ದಾರೆ. ಕ್ರಯ ೮ ಆಣೆ. ಸ್ತುತ್ಯ ಪ್ರಯತ್ನ.

ಬಸವೇಶನೇ ವೀರಶೈವ ಮತಸ್ಥಾಪಕನೆಂದು ಈ ಪುಸ್ತಕದಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಕೇವಲ ಇಂಗ್ಲೀಷ್ ಬಲ್ಲವರಿಗೆ ಈ ಸಂಗತಿಯು ಸ್ಪಷ್ಟ ತಿಳಿಯಬೇಕಾದರೆ ಇನ್ನೂ ವಿವರವಾಗಿರಬೇಕಾಗಿದ್ದಿತು. ಏಕೆಂದರೆ, ಬಸವೇಶನ ಮತ್ತು ವೀರಶೈವ ಮತದ ಸಂಗತಿಗಳು ಇಂಗ್ಲೀಷಿನಲ್ಲಿ ಇನ್ನೂ ಅಷ್ಟು ಪ್ರಚಾರಪಾಗಿಲ್ಲ. ಈ ಪುಸ್ತಕಕ್ಕೆ ಪ್ರೋತ್ಸಾಹ ದೊರೆತು ಅಂತಹ ವಿವರವಾದ ಗ್ರಂಥವು ಗ್ರಂಥಕರ್ತರಿಂದ ಮುಂದೆ ಪ್ರಕಟವಾಗಲೆಂದೇ ನಾವು ಹಾರೈಸುತ್ತೇವೆ.

ಈ ಪುಸ್ತಕವು ಸಂಶೋಧಾತ್ಮಕವಾದ ಐತಿಹಾಸಿಕ ದೃಷ್ಟಿಯಿಂದ ಬರೆಯಲ್ಪಟ್ಟಿದೆ. ಆದಕಾರಣ, ಏಕಾಂತ ರಾಮಯ್ಯನು ರಾಮೇಶ್ವರ ಲಿಂಗಮೂರ್ತಿಯಿಂದ ವೀರಶೈವ ದೀಕ್ಷೆ ಹೊಂದಿದನೆಂದರೆ ಅದರ ಅರ್ಥವೇನೆಂಬುದನ್ನು ವಿವರಿಸಬೇಕಾಗಿದ್ದಿತು. ಏಕೆಂದರೆ ರಾಮೇಶ್ವರ ಲಿಂಗವು ಶಿಲಾಮೂರ್ತಿಯಷ್ಟೆ. ಅದು ದೀಕ್ಷೆ ಮಾಡಿತೆಂದರೆ ಅರ್ಥವೇನು?

ಬಸವಣ್ಣನವರೆಂದು ಪ್ರಕಟಿಸಿದ ಚಿತ್ರವು ಸರಿಯಾಗಿಲ್ಲ. ಕನ್ನಡದಲ್ಲಿಯೇ ಪ್ರಕಟವಾಗಿದ್ದರೆ ಅಷ್ಟೇನೂ ಬಾಧಕವಿರಲಿಲ್ಲ. ಏಕೆಂದರೆ ಇಲ್ಲಿ ಬಸವೇಶನ ಕಾಲ್ಪನಿಕವಾದ ಒಂದು ತರದ ಚಿತ್ರ ಬಳಕೆಯಲ್ಲಿದ್ದೇ ಇದೆ. ಬೇರೆಯವರು ತಮ್ಮ ತಮ್ಮ ಇಷ್ಟದಂತೆ ಪ್ರಕಟಿಸಿದರೂ ಜನರಲ್ಲಿ ಒಂದು ಕಲ್ಪನೆಯೇನೋ ಇದ್ದೇ ಇದೆ. ಆದರೆ ಪರಪ್ರಾಂತಗಳಲ್ಲಿಯ ಸ್ಥಿತಿ ಹಾಗಿಲ್ಲ. ಬಸವೇಶನ ಬಗ್ಗೆ ಹೊಸದಾಗಿ ಕಲ್ಪನೆಯನ್ನುಂಟುಮಾಡಿಕೊಡವುದಿದೆ. ಎಂದಮೇಲೆ ಚಿತ್ರಕಲೆ ಭಾವ ಮೊದಲಾದವುಗಳ ಸಂಬಂಧವಾಗಿ ಯೋಚಿಸಿ ಒಳ್ಳೆಯ ರೀತಿಯಲ್ಲಿಯೇ ಬರೆಯಿಸಿ ಪ್ರಕಟಿಸಬೇಕಾಗಿದ್ದಿತು. ಇಲ್ಲವೆ ಈಗ ಪ್ರಚಾರದಲ್ಲಿ ಬಂದುದನ್ನಾದರೂ ಮುದ್ರಿಸಬೇಕಾಗಿದ್ದಿತು.

ಬಹಿರಂಗವಾದ ಅಭಿನಂದನೆ.

———:::———

ನೈಜಾಮ ರಾಜ್ಯದ ಆರ್ಯಸಮಾಜದವರಲ್ಲಿ ಕೆಲವರು ವೀರಶೈವ ಸಮಾಜದ ವಿಷಯವಾಗಿ ನಡೆಸಿದ ನಿಂದ್ಯ ಪ್ರಯತ್ನಗಳು ನನ್ನಿಂದ ಬೈಲಿಗೆ ಬಂದವೆಂತಲೂ ನಾನು ಆ ಭಾಗದಲ್ಲಿ ಅವರ ಚಟುವಟಿಕೆಯ ಪ್ರತೀಕಾರಕ್ಕೋಸ್ಕರ ಪ್ರಯತ್ನಿಸುತ್ತಿದ್ದೇನೆಂತಲೂ ನಿಷೇಧ ಪ್ರದರ್ಶನದ ಅನೇಕ ಸಭೆಗಳಲ್ಲಿ ಉಕ್ತವಾದುದು ಸರಿಯಷ್ಟೆ.

ಆರ್ಯ ಸಮಾಜದವರ ನಿಂದ್ಯ ಪ್ರಯತ್ನವನ್ನು ಬೈಲಿಗೆ ತಂದವರು ಉದ್ಗಿರಿಯ ಲೇಖಕರು. ನಾನೇನೂ ಅದಕ್ಕೆ ಸ್ವಲ್ಪವೂ ಕಾರಣನಲ್ಲ. ಅದನ್ನು ನಿಷೇಧಿಸಲು ಮುಂದಾದವರು ಗುಲಬರ್ಗಾ ಯುವಕ ಸಂಘದವರು. ಆ ಸಭೆಯಲ್ಲಿ ನಾನೊಬ್ಬ ವ್ಯಾಖ್ಯಾತನಾದೆನು. ಇಷ್ಟೇ ನಾನು ಮಾಡಿದುದು. ಆ ಸಭೆಯಲ್ಲಿ ನಡೆದ ನನ್ನ ವ್ಯಾಖ್ಯಾನದ ವಿಷಯವಾಗಿಯೂ ಆ ಯುವಕ ಸಂಘದವರ ನ್ಯಾಯವಾದ ಪ್ರಕಟನೆಯ ಸಂಬಂಧವಾಗಿಯೂ ಅಲ್ಲಿಯ ಆರ್ಯ ಸಮಾಜದವರು ಅತ್ಯಂತ ಹೇಯವಾದ ಪ್ರಕಟನೆಯನ್ನು ಪ್ರಕಟಿಸಿದ್ದರಿಂದ ಪತ್ರಿಕಾಕರ್ತರ ಕರ್ತವ್ಯದಂತೆ ನಾನು ಸಮಾಜದ ಮುಂದೆ ಆ ಎಲ್ಲಾ ಸಂಗತಿಗಳನ್ನಿಡಬೇಕಾಯಿತು. ಇದನ್ನೇ ಇಷ್ಟು ಘನವಾಗಿ ಅನೇಕ ಸಭಿಕರು ತಿಳಿದುದರಿಂದ ನಾನು ಆ ಎಲ್ಲಾ ಸಭಿಕರನ್ನೂ ಹೃದಯಪೂರ್ವಕ ಅಭಿನಂದಿಸುತ್ತೇನೆ.

ಈ ಸಂಬಂಧವಾದ ಜಾಗೃತಿಗೆ ನಿಜಾಮ ಭಾಗದ ವೀರಶೈವರೇ ಕಾರಣರಾಗಿದ್ದಾರೆ. ಅವರೇ ಸಮಾಜದ ಮುಂದೆ ಮೊದಲು ಈ ವಿಷಯವನ್ನಿಟ್ಟವರು. ಇನ್ನು ಮೇಲಾದರೂ ಆ ಭಾಗದ ವೀರಶೈವ ಮಹಾಜನರು ಮುಂದಾಳುಗಳಾಗಿ ನಿಂತರೇನೇ ಅಲ್ಲಿಯ ಆರ್ಯ ಸಮಾಜದ ಉಪಟಳವು ಅಡಗುವುದು. ಏಕೆಂದರೆ ಆ ಭಾಗದಲ್ಲಿಯೇ ಅವರ ನಿಂದ್ಯ ಪ್ರಯತ್ನಗಳು ನಡೆದಿವೆ. ಆದುದರಿಂದ ಈ ಸಂಬಂಧವಾದ ಶ್ರೇಯಸ್ಸು ನೈಜಾಂ ಭಾಗದವರಿಗೇನೇ ಸಂಬಂಧಪಟ್ಟುದಾಗಿಯೂ, ಪಡತಕ್ಕುದಾಗಿಯೂ ಇದೆ.

ಹರ್ಡೇಕರ ಮಂಜಪ್ಪ.

ಶೋಚನೀಯ ನಿಧನ.

———::o::———

ಉಜ್ಜನಿ ಗುರುಪೀಠದ ಶ್ರೀ ಸಿದ್ಧಲಿಂಗ ಸ್ವಾಮಿಗಳವರು ಕಳೆದ ಸೋಮವಾರ ಉಜ್ಜನಿಯಲ್ಲಿ ಶಿವೈಕ್ಯರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಇವರು ವಿದ್ಯಾವಂತರೂ ವ್ರತಶೀಲರೂ ಆಗಿದ್ದರು.

ಶ್ರೀ ಸಿದ್ಧಲಿಂಗ ಸ್ವಾಮಿಗಳು ತಮ್ಮ ಪೂರ್ವ ಪದ್ಧತಿಯನ್ನೂ ತಮ್ಮ ಗುರುಪೀಠದ ಪರಂಪರೆಯನ್ನೂ ಬಿಟ್ಟು ಇತ್ತೀಚೆಗೆ ಬಸವಾದಿ ಪ್ರಮಥ ನಿಂದಕರ ಪಂಗಡದಲ್ಲಿ ಸೇರಿದ್ದರಿಂದ ವೀರಶೈವ ಸಮಾಜದ ಬಹು ಸಂಖ್ಯಾಕರಿಗೆ ಅಪ್ರಿಯರಾಗಿದ್ದರು. ಪರಮಾತ್ಮನು ಇವರ ಆತ್ಮಕ್ಕೆ ಚಿರಶಾಂತಿಯನ್ನೀಯಲೆಂದು ಹಾರೈಸುತ್ತೇವೆ.

ವಿವಿಧ ವರ್ತಮಾನ.

ಮೀಸೆಯನ್ನು ಬೆಳೆಸುವದು.

ಹಿಂದುಸ್ಥಾನವ ಅಭ್ಯುದಯದ ಕಾಲದಲ್ಲಿ ಮೀಸೆಗಳೂ ಬಹಳ ಉತ್ಕರ್ಷ ಸ್ಥಿತಿಯಲ್ಲಿದ್ದವು. ಆದರೆ ಹಿಂದುಸ್ಥಾನಕ್ಕೆ ದುರ್ಗತಿಯುಂಟಾದಂತೆ ಮೀಸೆಯ ದುರ್ಗತಿಯೂ ಉಂಟಾಗಹತ್ತಿದೆ. ಒಂದಾನೊಂದು ಕಾಲಕ್ಕೆ ಗಡ್ಡ ಮೀಸೆಗಳು ಜಾಣತನದ ಮತ್ತು ವೀರತ್ವದ ಚಿಹ್ನವಾಗಿದ್ದವು. ಆದರೆ ಈಗ ಜಾಣತನ ಮತ್ತು ವೀರತನಗಳಿಗೆ ಲೋಪಬಂದಿದೆಯೋ ಏನೋ ಎಂಬುವಂತೆ ಗಡ್ಡ ಮೀಸೆಗಳೂ ಲೋಪವಾಗಹತ್ತಿವೆ.

ಇಂಥ ಕಠಿಣ ಪರಿಸ್ಥಿತಿಯಲ್ಲಿ (?) ಒಂದು ಆಶೆಯ ಕಿರಣವು ತಲೆದೋರಹತ್ತಿದೆ ಯುರೋಪಖಂಡದಲ್ಲಿಯ ಹಂಗರಿ ದೇಶದಲ್ಲಿ ಪ್ರಜೆಗಳೆಲ್ಲರೂ ಮೀಸೆ ಬೆಳೆಯಿಸಬೇಕೆಂದು ಅಲ್ಲಿಯ ಸರಕಾರದವರು ಸಲಹೆ ಕೊಡುತ್ತಿದ್ದಾರೆ. ಇದಕ್ಕಾಗಿ ಅಲ್ಲಿಯ ಒಂದು ಉತ್ಕೃಷ್ಟ ಹಾಡು ಹಾಡುತ್ತಾರೆ. ಆ ಹಾಡಿನ ಸಾರಾಂಶವೆಂದರೆ ಒಬ್ಬ ಹಂಗರಿ ದೇಶದ ಕುಮಾರಿಕೆಯು ನುಣ್ಣಗೆ ಮುಖ ಕ್ಷೌರ ಮಾಡಿಸಿಕೊಂಡು ಬಂದ ತನ್ನ ಜರ್ಮನ್ ಪ್ರಿಯಕರನಿಗೆ ಮುದ್ದು ಕೊಡಲಿಲ್ಲವಂತೆ.

ಡಾ. ಫೆರಿಂಝಿ ಎಂಬ ಪೋಲೀಸ ದಳವಾಯಿಗಳು ತಮ್ಮ ಕೈಕೆಳಗಿನ ಸೈನಿಕರಿಗೆಲ್ಲ ಉದ್ದದ್ದ ಮೀಸೆಗಳನ್ನು ಕಾಯಲಿಕ್ಕೆ ಅಪ್ಪಣೆ ಮಾಡಿದ್ದಾರೆ. ಅಲ್ಲಿಯ ಪಾರ್ಲಿಮೆಂಟಿನ ಕಾವಲುಗಾರರಿಗು ಸಹ ಹಂಗರಿ ಪದ್ಧತಿಯ ಉದ್ದಾದ ಮೀಸೆಗಳನ್ನು ಬಿಡಬೇಕೆಂದು ಆಜ್ಞಾಪಿಸಲಾಗಿದೆ.

ಪಶ್ಚಿಮದ ಆ ಗಾಳಿಯು ಹಿಂದುಸ್ಥಾನದ ಕಡೆಗೆ ಎಂದು ಬೀಸುವದೋ ನೋಡಬೇಕು!

ಉದ್ಯೋಗವಿಲ್ಲದ ಲೆಕ್ಕ.

ಇಂಗ್ಲಂಡದಲ್ಲಿ ಯಾರ್ಕಶಾಯರ ಎಂಬ ಒಂದು ಪರಗಣೆಯಿದೆ. ಅಲ್ಲಿಯ ಒಬ್ಬ ಸಭ್ಯಗೃಹಸ್ಥನು ಈ ರೀತಿ ಲೆಕ್ಕ ಮಾಡಿದ್ದಾನೆ.

ಒಬ್ಬ ಮನುಷ್ಯನು ಒಂದು ಇಂಚಿನ ೬೪ ನೆಯ ಒಂದು ಭಾಗದಷ್ಟು ಉದ್ದ ಗಡ್ಡ ಬೆಳೆದ ಕೂಡಲೆ ಕ್ಷೌರ ಮಾಡಿಸಿಕೊಳ್ಳುತ್ತಾನೆಂದು ತಿಳಿದರೆ ಅವನು ೨೦ ವರ್ಷದ ವಯಸ್ಸಿನಿಂದ ೭೫ ನೆಯ ವರ್ಷದ ವಯಸ್ಸಿನ ವರೆಗೆ ಅಂದರೆ ೭೧ ಗಜ ಉದ್ದವಾದ ಗಡ್ಡದ ಕೂದಲನ್ನು ಬೋಳಿಸಿ ತೆಗೆಯುತ್ತಾನೆ. ಮತ್ತು ಪ್ರತಿಯೊಂದು ಕ್ಷೌರಕ್ಕೆ ಅವನು ೧೦ ನಿಮಿಷಗಳನ್ನು ವೆಚ್ಚ ಮಾಡುತ್ತಾನೆಂದು ತಿಳಿದರೆ ಆ ತನ್ನ ೫೫ ವರ್ಷಗಳಲ್ಲಿ ೭೪ ದಿವಸಗಳನ್ನು ಕ್ಷೌರಕ್ಕಾಗಿಯೇ ಕಳೆಯುತ್ತಾನೆ.

ಆ ಹಾಳು ಸೌಂದರ್ಯ.

ಮಿಸ್ ಅಡಾಮೋರಿ ಎಂಬ ೧೮ ವರ್ಷ ವಯಸ್ಸಿನ ಬರ್ಮಿಂಗಹ್ಯಾಮ ಪಟ್ಟಣದ ತರುಣಿಗೆ ತನ್ನ ಮುಖವನ್ನು ಇನ್ನಿಷ್ಟು ಸುಂದರಗೊಳಿಸುವ ಬಯಕೆಯಾಯಿತು. ಆಗ ಅವಳು ತನ್ನ ಹುಬ್ಬಿನ ಕೂದಲುಗಳನ್ನು ಕಿತ್ತು ತೆಗೆದರೆ ಶೋಭೆಯಾಗುವದೆಂದು ಕೇಳಿ ಆ ಪ್ರಕಾರ ಕಿತ್ತಿಸಿಕೊಂಡಳು. ಆಗ ಆ ಸ್ಥಾನದಲ್ಲಿ ಹುಣ್ಣಾಗಿ ಕಡೆಗೆ ಅವಳು ಸತ್ತೇ ಹೋದಳು.

ಈ ಭಯಂಕರ ದುಷ್ಟವನ್ನು ಅಂಟಿಸಿಕೊಳ್ಳಬಾರದೆಂದು ಪ್ರಸಿದ್ಧ ಡಾಕ್ಟರರಾದ ಬಿ. ಟಿ. ರೋಸರವರು ಈ ಪ್ರಕಾರವಾಗಿ ಸೂಚಿಸಿದ್ದಾರೆ— ಸೌಂದರ್ಯವು ವೃದ್ಧಿಯಾಗಲೆಂದು ಇಂಥ ಅನೇಕ ಹುಚ್ಚುತನದ ಕಾರ್ಯಗಳನ್ನು ಕೈಕೊಳ್ಳುವದು ಅತಿ ನಿಂದ್ಯವಾದುದು. ಇದರಿಂದ ನಮ್ಮ ಚಿತ್ತವೃತ್ತಿಯು ಎಷ್ಟು ಹೀನಾವಸ್ಥೆಗೆ ಬಂದಿದೆಯೆಂಬುದು ಕಂಡುಬರುತ್ತದೆ.

ಬಸವಣ್ಣನವರ ವಚನಗಳು.

ಕಲಕತ್ತೆಯ ಮಾಡರ್ನ ರೀವ್ಯೂ ಪತ್ರಿಕೆಯಲ್ಲಿಯ ವಿಮರ್ಶೆ.

(೧೯೩೬ ರ ಜಾನೇವರಿ ತಿಂಗಳ ಸಮಗ್ರ ಸಂಚಿಕೆ ೭೨ ನೇ ಪುಟದಲ್ಲಿ ಶ್ರೀ ಚಿಂತಾಹರಣ ಚಕ್ರವರ್ತಿಯೆಂಬವರು ಬರೆದುದು.)

ಇಂಗ್ಲಿಷ - ಕನ್ನಡ

'Sayings of Basavanna' ಶ್ರೀ ಮಾಸ್ತಿ ವೆಂಕಟೇಶ ಐಯಂಗಾರ್ ಎಮ್. ಎ. ಇವರಿಂದ ಬರೆಯಲ್ಪಟ್ಟು ಗದಗಿನ ಶ್ರೀ ವೀರಶೈವ ತರುಣ ಸಂಘದಿಂದ ಪ್ರಕಟವಾದುದು. ಬೆಲೆ ೪ ಆಣೆ.

ಯುರೋಪಖಂಡದ ಸಾಹಿತ್ಯದ ಬಗ್ಗೆ ನಮಗೆ ಎಷ್ಟೋ ಮಟ್ಟಿಗೆ ಗೊತ್ತಿದ್ದರೂ ನಮ್ಮ ನೆರೆಹೊರೆಯ ಭಾರತ ದೇಶಿಯ ಭಾಷೆಗಳ ಅದರಲ್ಲಿಯೂ ವಿಶೇಷವಾಗಿ ದ್ರಾವಿಡ ಭಾಷೆಗಳ ಸಾಹಿತ್ಯಗಳ ವಿಷಯವಾಗಿ ನಮ್ಮ ಜ್ಞಾನವು ಅತ್ಯಂತ ಅಲ್ಪವಾಗಿರುವದುಂಟು. ಆದ್ದರಿಂದ ಈ ಸಾಹಿತ್ಯಗಳಲ್ಲಿರುವುದನ್ನು ಪ್ರಪಂಚದಲ್ಲಿ ಪ್ರಚಾರ ಮಾಡಿ ಜನಪ್ರಿಯ ಮಾಡುವಂಥ ಪ್ರತಿಯೊಂದು ಪ್ರಯತ್ನವೂ ಬಹಳೇ ಸ್ತುತ್ಯವಾದದ್ದಾಗಿದೆ ಪ್ರಾಚೀನ ಹಾಗು ಅರ್ವಾಚೀನ ಕನ್ನಡ ಸಾಹಿತ್ಯ ವಿಶೇಷವನ್ನು ಜಗತ್ತಿನ ದೃಷ್ಟಿಗೆ ತರಲು ಮಾಡುತ್ತಿರುವ ಪ್ರಯತ್ನಗಳಿಗೋಸ್ಕರ ಕನ್ನಡಿಗರನ್ನು ಅಭಿನಂದಿಸಬೇಕಾಗಿದೆ. ಈ ಸಂಬಂಧವಾಗಿ ಅವರಿಂದಲೂ ಇತರರಿಂದಲೂ ಪ್ರಸಿದ್ಧವಾದ ಕೃತಿಗಳಲ್ಲಿ ಕೆಳಗಿನವುಗಳ ಉಲ್ಲೇಖವನ್ನು ಇಲ್ಲಿ ಮಾಡಬಹುದಾಗಿದೆ. ರೈಸ ಇವರ History of the Kanarese Literature (ಕನ್ನಡ ಸಾಹಿತ್ಯದ ಚರಿತ್ರೆ) ಎಂಬ ಪುಸ್ತಕವು ಬಹಳೇ ಉಪಯುಕ್ತವಾದ ಪ್ರಕಟನೆಯಾಗಿದೆ. ಶ್ರೀ ನರಸಿಂಹಾಚಾರ್ಯರು ತಮ್ಮ ಕನ್ನಡ ಕವಿ ಚರಿತ್ರೆಗಳಲ್ಲ ಅತ್ಯಂತ ಮನೋವೇಧಕ ಮತ್ತು ಮಹತ್ವದ ಮಾಹಿತಿಯನ್ನು ಸಂಗ್ರಹಿಸಿ ಹೇಳಿದ್ದಾರೆ. ಕರ್ನಾಟಕ ಸಾಹಿತ್ಯ ಪರಿಷತ್ತಿನ ತ್ರೈಮಾಸಿಕ ಪತ್ರಿಕೆಯು ತನ್ನ ಪ್ರತಿ ಸಂಚಿಕೆಯೊಡನೆ ಅದರಲ್ಲಿ ಪ್ರಕಟವಾದ ಲೇಖನಗಳ ಸಂಕ್ಷಿಪ್ತ ಸಾರಾಂಶವನ್ನು ಇಂಗ್ಲೀಷದಲ್ಲಿ ಕೊಡುತ್ತದೆ. ಈಗ ವಿಮರ್ಶಿಸಲ್ಪಡುವ ಪುಸ್ತಕದಲ್ಲಿ ಸುಪ್ರಸಿದ್ಧ ವೀರಶೈವ ಮತ ಸುಧಾರಕನಾದ ಶ್ರೀ ಬಸವ (೧೨ನೇ ಶತಮಾನ) ನ ವಿಚಾರ ಪ್ರಚೋದಕವಾದ ವಚನಗಳಲ್ಲಿ ಕೆಲವನ್ನು ಆರಿಸಿ ಅವುಗಳ ಭಾಷಾಂತರವನ್ನು ಮೂಲದೊಡನೆ ಪ್ರಕಟ ಮಾಡಲಾಗಿದೆ. ಈ ವಚನಗಳು ಇವತ್ತಿನ ಮಿತಿಗೂ ಚಿತ್ತಾಕರ್ಷಕವಾಗಿದ್ದು ಅವುಗಳ ಪಠನವು ಲಾಭದಾಯಕವಾಗಿದೆ. ವಚನಗಳೊಡನೆ ದೀರ್ಘವಾಗಿರದಿದ್ದರೂ ಉಪಯುಕ್ತವಾಗಿರುವ ಟೀಕಾತ್ಮಕ ಪ್ರಾಸ್ತಾವಿಕ ಟಿಪ್ಪಣಿಗಳದ್ದು ಅವುಗಳಿಂದ ಈ ರಹಸ್ಯಮಯವಾದ ವಚನಗಳ ಇಂಗಿತವನ್ನು ಸುಲಭವಾಗಿ ಗ್ರಹಿಸಿಕೊಳ್ಳಲು ವಾಚಕರಿಗೆ ಸಹಾಯವಾಗಿದೆ. ಕನ್ನಡ ಸಾಹಿತ್ಯದ ಈ ನಿಧಿಯನ್ನು ಇಷ್ಟೊಂದು ಮಾಟಾದ ಕೈಹೊತ್ತಿಗೆಯ ರೂಪದಲ್ಲಿಯೂ ಮತ್ತು ಇಷ್ಟೊಂದು ಕಡಿಮೆ ಬೆಲೆಯಲ್ಲಿಯೂ ತಮ್ಮ ಬಾಗಿಲುಗಳವರೆಗೆ ತಂದು ಕೊಟ್ಟದ್ದಕ್ಕಾಗಿ ವಾಚಕ ವರ್ಗವೆಲ್ಲವೂ ಶ್ರೀ ಅಯ್ಯಂಗಾರ್ ಇವರಿಗೆ ಉಪಕೃತವಾಗಿರುತ್ತದೆ.

—ಶ್ರೀ. ಗಾಯಕವಾಡ ಮಹಾರಾಜರವರಿಗೆ ಆದಿಜನಗಳು ಅರ್ಪಿಸಿದ ವಿಜ್ಞಾಪನಾ ಪತ್ರಿಕೆಗೆ ಉತ್ತರವಾಗಿ ಹೇಳಿದ್ದರಲ್ಲಿ ಅಸ್ಪೃಶ್ಯತೆಯು ಮಾನವ ಧರ್ಮಕ್ಕೇನೇ ವಿರೋಧವಾದುದೆಂದು ತಿಳಿಸಿದರು.

ಪ ರಿ ಷ ತ್ತು.

ಕರ್ನಾಟಕ ವಿಭಾಗದ
ಬಿನ್ ಶೇತಕಿ ಪತ್ತಿನ ಸಹಕಾರಿ ಸಂಘಗಳ ಪರಿಷತ್ತು,
ಬಾಗಲಕೋಟೆ.

ಬಾಗಲಕೋಟೆಯಲ್ಲಿ ೧೯೩೬ ನೆಯ ಫೆಬ್ರುವರಿ ತಿಂಗಳ ೬, ೭, ಮತ್ತು ೮ ನೇ ತಾರೀಖುಗಳಲ್ಲಿ (ಶ್ರೀ ಬಸವೇಶ್ವರ ಜಾತ್ರೆಯ ಕಾಲಕ್ಕೆ) ಕೃಷಿ, ಕೈಗಾರಿಕೆ, ಕಲಾ-ಕೌಶಲ್ಯಗಳ ಸಂಬಂಧ ಪ್ರದರ್ಶನಗಳನ್ನೇರ್ಪಡಿಸಲಾಗಿದೆಯಷ್ಟೇ. ಅದೇ ಕಾಲಕ್ಕೆ ಕರ್ನಾಟಕ ವಿಭಾಗದ ಬಿನ್ ಶೇತಕಿ ಪತ್ತಿನ ಸಹಕಾರಿ ಸಂಘಗಳ ಪರಿಷತ್ತು ಕೂಡುವದಿದೆ.

ಬಿನ್ ಶೇತಕಿ ಪತ್ತಿನ ಸಹಕಾರಿ ಸಂಘಗಳ ಸುಧಾರಣೆಗೆ ಈ ಪರಿಷತ್ತು ಒಳ್ಳೇ ಹಿತಕಾರಿಯಾದುದಾಗಿದೆ. ವ ತ್ತು ಪ್ರದರ್ಶನ ಕಾಲಕ್ಕೆ ಇದನ್ನು ಕರೆಯುವದರಿಂದ ಇತರ ಯಾವತ್ತೂ ವ್ಯಾಪಾರೋದ್ಯೋಗ ಕೈಗಾರಿಕೆ, ಕಲಾ, ಕೌಶಲ್ಯಗಳ ಜ್ಞಾನಾಭಿವೃದ್ಧಿಯ ಲಾಭವು ನಮ್ಮ ಸಹಕಾರಿ ಬಾಧುಗಳಿಗೆ ಅನಾಯಾಸವಾಗಿ ದೊರೆಯುವುದು. ಆದ್ದರಿಂದ ಸದರ ಪರಿಷತ್ತಿಗೆ, ಕರ್ನಾಟಕದೊಳಗಿನ ಪ್ರತಿಯೊಂದು ಬಿನ್ ಶೇತಕಿ ಪತ್ತಿನ ಸಹಕಾರಿ ಸಂಘವು ಓರ್ವ ಪ್ರತಿನಿಧಿಯನ್ನು ಕಳುಹಿಸುವದಲ್ಲದೆ ಪರಿಷತ್ತಿನಲ್ಲಿ ಚರ್ಚಿಸುತ್ತಲಿರುವ ಉಪಯುಕ್ತ ಸೂಚನೆಗಳೇನಾದರೂ ಇದ್ದರೆ ತಿಳಿಸುವದಾಗಬೇಕು.

ಮತ್ತು ಎಲ್ಲ ಸಂಘಗಳು ಮತ್ತು ಬ್ಯಾಂಕುಗಳು, ಪರಿಷತ್ತಿನ ಖರ್ಚಿನ ಸಲುವಾಗಿ ಶಕ್ಯವಿದ್ದಮಟ್ಟಿಗೆ ಧನ ಸಹಾಯ ಮಾಡಬೇಕಾಗಿ ವಿನಂತಿ.

ವಿ. ಜಿ. ಕೊ. ಆ. ಇನಸ್ಟಿಟ್ಯೂಟ, ಬಾಗಲಕೋಟೆ.

ವ್ಹಿ. ಎಸ್. ಲೂತೀಮಠ ಬಿ. ಎ. ಎಲ್. ಎಲ್. ಬಿ. ಚೇರಮನ್,

ಎಂ. ಪಿ. ನಾಡಗೌಡ B. A. LL. B. ಆನರರಿ ಸೆಕ್ರೆಟರಿ.

ಅಧ್ಯಕ್ಷರು

ರಾ. ಬ. ಎಸ್. ಎನ್. ಅಂಗಡಿ
ಬೆ ಳ ಗಾ ಂ ವ.

ಬಾಗಲಕೋಟೆಯಲ್ಲಿ ತಾ. ೭-೨-೧೯೩೬ ನೇ ದಿವಸ ಕೂಡುವದಿದ್ದ ಕರ್ನಾಟಕ ವಿಭಾಗದ ಬಿನ್ ಶೇತಕಿ ಪತ್ತಿನ ಸಹಕಾರಿ ಸಂಘಗಳ ಪರಿಷತ್ತಿಗೆ ರಾ. ಬ. ಎಸ್. ಎನ್. ಅಂಗಡಿ ಬಿ. ಎ. ಎಲೆಲ್. ಬಿ., ಎಂ. ಎಲ್. ಸಿ. ಬೆಳಗಾಂವ. ಇವರು ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದಾರೆ. ಈ ಪರಿಷತ್ತು ಒಳ್ಳೇ ಪ್ರೇಕ್ಷಣೀಯ ಮತ್ತು ಪ್ರಯೋಜನಕರವಾದುದಾಗಿರುವದರಿಂದ ಕರ್ನಾಟಕದೊಳಗಿನ ಪ್ರತಿಯೊಂದು ಬಿನ್ ಶೇತಕಿ ಪತ್ತಿನ ಸಹಕಾರಿ ಸಂಘವು ಓರ್ವ ಪ್ರತಿನಿಧಿಯನ್ನು ಕಳುಹಿಸಿ ಇದರ ಲಾಭವನ್ನು ಪಡೆಯಬೇಕೆಂದು ವಿನಂತಿ.

ಇದೇ ಕಾಲಕ್ಕೆ ದೊಡ್ಡ ಪ್ರಮಾಣದಿಂದ ಒಕ್ಕಲತನದ ದನಗಳ ಮತ್ತು ಔದ್ಯೋಗಿಕ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ.

ಎಂ. ಪಿ. ನಾಡಗೌಡ ಬಿ. ಎ. ಎಲೆಲ್, ಬಿ.
ಆ. ಸೆಕ್ರೆಟರಿ
ಕೊ. ಆ. ಇನ್‌ಸ್ಟಿಟ್ಯೂಟ ಬಾಗಲಕೋಟೆ.

ಲಖನೌ ಪ್ರದರ್ಶನ.

ಪ್ರತಿವರ್ಷದಂತೆ ಕಾಂಗ್ರೆಸ ಅಧಿವೇಶನ ಕಾಲಕ್ಕೆ ಇದೇ ಮಾರ್ಚ ತಿಂಗಳ ಕೊನೆಯ ವಾರದಲ್ಲಿ ಒಂದು ದೊಡ್ಡ ಪ್ರದರ್ಶನ ನಾಗತಕ್ಕದ್ದಿದೆ. ಇದನ್ನು ಅಖಿಲ ಭಾರತ ಚರಖಾ ಸಂಘ ಹಾಗು ಅಖಿಲ ಭಾರತ ಗ್ರಾಮೋದ್ಯೋಗ ಸಂಘದವರು ಕೂಡಿಸತಕ್ಕವರಿದ್ದಾರೆ. ಈ ವರ್ಷದ ಪ್ರದರ್ಶನದಲ್ಲಿ ಖಾದೀ ಮತ್ತು ಹಳ್ಳಿಯಲ್ಲಿಯ ಕೈಗಾರಿಕೆಯ ಸಾಮಾನುಗಳಿಗೆ ವಿಶೇಷ ಸ್ಥಾನ ದೊರೆಯುವದದೆ. ಅವುಗಳಿಗೆ ಉತ್ತೇಜನ ಕೊಡುವದೇ ಈ ಪ್ರದರ್ಶನದ ಮುಖ್ಯ ಉದ್ದೇಶವೆಂದು ಹೇಳಬಹುದು. ಆದುದರಿಂದ ಗ್ರಾಮೋದ್ಯೋಗಕ್ಕೆ ಸಹಾಯ ಮಾಡಬಯಸುವವರು ಹಾಗು ಪ್ರತ್ಯಕ್ಷ ಇಂಥ ವ್ಯವಸಾಯವನ್ನು ಮಾಡುವವರು ತಮ್ಮ ತಮ್ಮ ಹಳ್ಳಿಗಳಲ್ಲಿ ತಯಾರಾಗುವ ವಸ್ತುಗಳನ್ನು ಈ ಪ್ರದರ್ಶನಕ್ಕೆ ಕಳಿಸುವದು ಅತ್ಯಂತ ಅವಶ್ಯವಾಗಿದೆ. ಇದರಿಂದ ಇಂತಹ ವಸ್ತುಗಳಿಗೆ ಹೆಚ್ಚಿನ ಬೇಡಿಕೆ ಬರುವದು.

ಸಣ್ಣ ಸಣ್ಣ ಕೈಗಾರಿಕೆಯವರಿಗೆ ತಮ್ಮ ವಸ್ತುಗಳನ್ನು ಲಖನೌಗೆ ಕಳಿಸುವದು ಕಠಿಣವಾಗುವದು. ಆದ್ದರಿಂದ ನಾವು ಕರ್ನಾಟಕದಲ್ಲಿಯ ಎಲ್ಲ ವಸ್ತುಗಳನ್ನು ಕಲೆಹಾಕಿ ಅವುಗಳನ್ನು ಯಾರಾದರೂ ಜವಾಬದಾರ ಮನುಷ್ಯನ ಸಂಗಡ ಲಖನೌಗೆ ಕಳಿಸುವ ಏರ್ಪಾಟು ಮಾಡಿರುತ್ತೇವೆ. ಎಲ್ಲರೂ ದಯವಿಟ್ಟು ಆದಷ್ಟು ತೀವ್ರ ತಮ್ಮಲ್ಲಿ ಆಗುವ ವಸ್ತುಗಳನ್ನು ನಮ್ಮ ಕಡೆಗೆ ಕಳಿಸಿಕೊಡಬೇಕು. ಲಖನೌದಿಂದ ತಿರುಗಿ ಬಂದನಂತರ ಆಯಾ ವಸ್ತುಗಳನ್ನು ಅವರವರ ಕಡೆಗೆ ಕಳಿಸುವೆವು. ಹೆಚ್ಚಿನ ವಿವರಕ್ಕಾಗಿ ನಮಗೆ ಬರೆಯಿರಿ.

ವಿಳಾಸ:-
ರಾಮಚಂದ್ರ ಹುಕ್ಕೇರಿಕರ
ಧಾರವಾಡ.

ಗ ದ ಗ.

ಇಲ್ಲಿಯ ಶ್ರೀಮನ್ನಿರಂಜನ ಅನ್ನದಾನ ಸ್ವಾಮಿಗಳವರ ಆಶ್ರಂಜಾಶ್ರಮದಲ್ಲಿ ಪ್ರತಿದಿವಸವೂ ಸಾಯಂಕಾಲ ೫|| ಗಂಟೆಯಿಂದ ಮರಿತೋಂಟದಾರ್ಯರಿಂದ ರಚಿಸಲ್ಪಟ್ಟ ತೋಂಟದ ಸಿದ್ಧಲಿಂಗ ಯತಿ ಪುಂಗವರ ಚರಿತ್ರೆಯು ನಡೆಯುತ್ತ ಇರುವುದು. ಭಕ್ತಾದಿಗಳು ಬಹಳೇ ಆಸಕ್ತಿಪರರಾಗಿ ಶ್ರವಣ ಮಾಡುತ್ತಿರುವರು. ಉತ್ಸಾಹಿ ತರುಣ ಸಾಹಿತಿಗಳೂ ಪ್ರೇಮದ ಬಳ್ಳಿಯ ಬಳಗದ ಗೌರವ ಕಾರ್ಯದರ್ಶಿಗಳೂ ಆದ ಶ್ರೀಯುತ ಮಲ್ಲಾಬಾದಿ ವೀರಭದ್ರಪ್ಪನವರು ಬೊಂಬಾಯಿ ಸಾಹಿತ್ಯ ಸಮ್ಮೇಳನದಿಂದ ಮರಳಿ ಬಂದವರು ಇಲ್ಲಿ "ಮಹಾ ಕವಿ ಹಂಪೆಯ ಹರಿಹರದೇವನ ಕಾವ್ಯಗಳ ಮಾಧುರ್ಯ ಮತ್ತು ಪ್ರಕಾಶ" ಈ ವಿಚಾರವಾಗಿ ಭಾಷಣವನ್ನು ಒಳ್ಳೇ ರಸಭರಿತವಾಗಿ ಮಾಡಿದ್ದಲ್ಲದೆ ತಾವು ರಚಿಸಿರುವ ಉಡುತಡಿಯ ಮಹಾದೇವಿಅಕ್ಕನವರ ನಾಟಕವನ್ನು ಓದಿ ಹೇಳಿದರು. ಈಗ ಬುಧವಾರದಿಂದ ವಚನ ವಾಙ್ಮಯದ ವಿಚಾರವಾಗಿ ಏಳು ದಿವಸಗಳ ವರೆಗೂ ಭಾಷಣಗಳನ್ನು ಸ್ವಾರಸ್ಯವಾಗಿಯೂ ಸಾಹಿತ್ಯ ಇತಿಹಾಸ ದೃಷ್ಟಿಯಿಂದಲೂ ತತ್ವಗಳ ಮಹೋನ್ನತಿಯ ದೃಷ್ಟಿಯಿಂದಲೂ ಉತ್ಸಾಹಭರಿತರಾಗಿ ಮಾಡುತ್ತಿರುವರು.

ಪ್ರತ್ಯಕ್ಷದರ್ಶಿ.

ಅಪೂರ್ವ ಶೋಧ! ಅಪೂರ್ವ ಶೋಧ!!

ಜರ್ಮನಿಯವರು ತಯಾರಿಸಿದ ವಿಷದ ಲಾಯಿಟು ಈಗ
ಹಿಂದುಸ್ಥಾನದಲ್ಲಿಯೇ ಸಿದ್ಧವಾಗುವಂತಾಗಿದೆ.

ಕೃಮಿನಾಶಕ ಲಾಯಿಟ.

ಶಿಫಾರಸ ಪತ್ರ.

ನಾನು ಕೃಮಿನಾಶಕ ಲಾಯಿಟನ್ನು ಉಪಯೋಗಿಸಿದೆ. ಇದು ತಗಣಿ, ದೋಮಿಗಳ ಮೇಲೆ ಬಹಳ ಉತ್ತಮ ಪ್ರಯೋಗವಿರುತ್ತದೆ. ಇದರ ಉಪಯೋಗದಿಂದ ತಗಣಿ, ದೋಮಿಗಳ ಕಾಟವು ಕಡಿಮೆಯಾಗಿ ಬಹಳ ಆರಾಮವೆನಿಸ ಹತ್ತಿರುತ್ತದೆ.

ತಾ. ೨೯-೧೨-೩೫

ಮಹಲಿಂಗರಾವ ನವಣಿ
ಹಾಯಕೋರ್ಟ ವಕೀಲ ಗುಲಬರ್ಗಾ.

ಉಪಯೋಗಿಸುವ ವಿಧಾನವು ಬಾಟ್ಲಿಯ ಸಂಗಡಲೇ ಇರುವದು. ೯ ದಿವಸಕ್ಕೆ ಸಾಲುವಷ್ಟು ೧ ಬಾಟ್ಲಿಗೆ ೦-೪-೦ ೧ ಡಜನ್ನಿಗೆ ೨-೧೨-೦. ವ್ಹಿ. ಪಿ. ಚಾರ್ಜ ಬೇರೆ.

ಕೆಳಗಿನ ಪ್ಲೇಗ ಸಂಜೀವಿನಿ ಆಫೀಸುಗಳಲ್ಲಿಯೂ ಎಜೆಂಟ್‌ರಲ್ಲಿಯೂ ದೊರೆಯುವದು.

ಪ್ಲೇಗ ಸಂಜೀವಿನಿ ಆಫೀಸ. ಸೋಲಾಪುರ.
" " ಹುಬ್ಬಳ್ಳಿ.
" " ಬೆಳಗಾಂವ.

ಏಜೆಂಟರು.
ಬಸೆಟ್ಟೆಪ್ಪ ಹಲಕುರ್ಕಿ ಬಾಗಲಕೋಟಿ.
ಎಸ್. ಚಂದ್ರಪ್ಪ ಕಾಂಡೂರ
ಪ್ಲೇಗ ಸಂಜೀವಿನಿ ಆಫೀಸ ಗುಲಬರ್ಗಾ.

ಕಾಲರಾ ಸಂಜೀವಿನಿ.

ಕಾಲರಾ—

ಇದು ಮಾನವ ಚಿಕಿತ್ಸೆಗೆ ಮೀರಿದ ರೋಗವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ವಿಗಳಿಂದ ಶೋಧವಾಗಿದೆ. ಈ ಸಂಜೀವಿನಿ ಚೂರ್ಣವನ್ನು ಒಂದೇ ಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗುವದು. ಆಗ ನಿಮಗೆ ಖಂಡಿತವಾಗಿಯೂ ಆಶ್ಚರ್ಯವೂ ಆನಂದವೂ ಉಂಟಾಗುವವು.

—ಸಂಜೀವಿನಿ.

ಬೆಲೆ—
೧ ರೂ. ೫ ಆ.

ವಿಳಾಸ— ಪ್ಲೇಗ ಸಂಜೀವಿನಿ ಆಫೀಸ್, ಗುಲಬರ್ಗಾ.

ವೀರಶೈವ ಮಹಾಶಯರೇ,

ಸತ್ಯ ಸಂಗತಿಗಳನ್ನು ತಿಳಿದುಕೊಳ್ಳಲು ಅಪೇಕ್ಷಿಸುವಿರಾ ?

ಹಾಗಾದರೆ

ವೀರಶೈವ

ಮತಾಚಾರ್ಯರ ಕಾಲನಿರ್ಣಯ

ಎಂಬ ಪುಸ್ತಕವನ್ನು ಜಾಗ್ರತೆ ತರಿಸಿಕೊಂಡು ಓದಿರಿ.

ಇದರಲ್ಲಿ ಶ್ರೀ ರೇವಣಸಿದ್ಧ ಶ್ರೀ ಮರುಳಸಿದ್ಧ ಶ್ರೀ ಪಂಡಿತಾರಾಧ್ಯ ಶ್ರೀ ಏಕೋರಾಮ ಶ್ರೀ ವಿಶ್ವಾರಾಧ್ಯ ಶ್ರೀ ಬಸವಣ್ಣ ಈ ಮಹಾಪುರುಷರ ಕಾಲಮಾನವನ್ನು ಕುರಿತು ಐತಿಹಾಸಿಕ ಪ್ರಬಲ ಪ್ರಮಾಣಗಳಿಂದ

ಶ್ರೀಮಾನ್ ಕರ್ಲಮಂಗಲಂ ಶ್ರೀಕಂಠಯ್ಯನವರು

ಬಹು ಸೊಗಸಾಗಿ ಬರೆದಿದ್ದಾರೆ.

೮೪ ಪುಟಗಳು. ಅಂದವಾದ ಮುದ್ರಣ.

ಕ್ರಯ ೧೨ ಆಣೆ ಇದ್ದದ್ದನ್ನು ೬ ಆಣೆಗೆ ಇಳಿಸಿದೆ.

೧೨ ಪುಸ್ತಕಗಳಿಗೆ ೪ ರೂ. ಅಂಚೆಯ ವೆಚ್ಚ ಬೇರೆ

ಸೂಚನೆ:— ಮೂರು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ವ್ಹಿ. ಪಿ. ಮೂಲಕ ಕಳಿಸುವದಾಗುತ್ತದೆ. ಒಂದೆರಡು ಪುಸ್ತಕಗಳನ್ನು ಅಪೇಕ್ಷಿಸತಕ್ಕವರು ಪೋಸ್ಟಚಾರ್ಜ ಸಹಿತ ಟಿಕಿಟ ಕಳಿಸಿದರೆ ಬುಕ್ ಪೋಸ್ಟ ದ್ವಾರ ಕಳಿಸಲಾಗುತ್ತದೆ.

ಪುಸ್ತಕ ದೊರೆಯುವ ವಿಳಾಸ-

ಜ್ಞಾನೋದಯ ಗ್ರಂಥಭಾಂಡಾರ ಆಲಮಟ್ಟಿ
ಪೋ. ಆಲಮಟ್ಟಿ ಜಿ. ವಿಜಾಪುರ

ಶ್ರೀ ಬಿ. ವಿಶ್ವನಾಥಪ್ಪ ಮಂಡಿ ಮರ್ಚಂಟ್
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಸ್ಥಳೀಯ ಸಂಸ್ಥೆಗಳ ಪತ್ರಿಕೆ.

ಪ್ರತಿ ತಿಂಗಳ ತಾ|| ೧ ಮತ್ತು ೧೫ ರಲ್ಲಿ ಪ್ರಕಟವಾಗುವ ಪಕ್ಷಪತ್ರಿಕೆ.

ಜಿಲ್ಲಾ ಬೋರ್ಡ್, ಪೌರಸಭೆ, ಗ್ರಾಮಪಂಚಾಯತಿ ಮುಂತಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಇತಿಹಾಸ, ಮೂಲತತ್ವ, ಆಡಳಿತ ಮುಂತಾದ ವಿಚಾರಗಳಲ್ಲಿ ನುರಿತ ಲೇಖಕರಿಂದ ಬರೆಯಲ್ಪಟ್ಟ ಬೋಧಪ್ರದ ಲೇಖನಗಳನ್ನೂ, ಆ ಸಂಸ್ಥೆಗಳ ಕಾರ್ಯಕ್ರಮ ಮತ್ತು ಘಟನೆಗೆ ಸಂಬಂಧಪಟ್ಟ ವಿಶೇಷ ಸಮಾಚಾರಗಳನ್ನೂ, ಸ್ಥಾನಿಕ ಸ್ವರಾಜ್ಯ ಸಂಬಂಧವಾದ ದೇಶವಿದೇಶ ವರ್ತಮಾನಗಳನ್ನೂ ಪ್ರಕಟಿಸುವ ಪತ್ರಿಕೆ.

ಇತರ ಸಂಗತಿಗಳೂ ವಿಶೇಷ ವರ್ತಮಾನಗಳೂ ಸಹ ಪ್ರಕಟವಾಗುವವು.

ಇಡೀ ಕನ್ನಡ ನಾಡಿನಲ್ಲಿ ಇಂತಹ ಪತ್ರಿಕೆಯು ಇದೊಂದೇ !

ವಾರ್ಷಿಕಚಂದಾ:— ೨ ರೂಪಾಯಿ; ಸಂಸ್ಥೆಗಳಿಗೆ ೫ ರೂಪಾಯಿ.

ವಿಳಾಸ:— ಟಿ ಯಲ್. ಚೆನ್ನಪ್ಪ, ವ್ಯವಸ್ಥಾಪಕ ಸ್ಥಳೀಯ ಸಂಸ್ಥೆಗಳ ಪತ್ರಿಕೆ. ಗಾಂಧಿ ನಗರ, ಬೆಂಗಳೂರು ಸಿಟಿ.

ವೀರಶೈವ ಮತಬೋಧೆ.

ಶ್ರೀ ಮಂಜಪ್ಪನವರು ಹರ್ಡೇಕರ ಇವರಿಂದ ರಚಿಸಲ್ಪಟ್ಟ ವೀರಶೈವ ಮತಬೋಧೆ ಎಂಬ ಪುಸ್ತಕವನ್ನು ತೆಲುಗು ಭಾಷೆಯಲ್ಲಿ ಭಾಷಾಂತರಿಸಿದೆ. ಈ ಕೆಳಗಿನ ವಿಳಾಸಗಳಿಗೆ ಬರೆದು ತರಿಸಿಕೊಳ್ಳಿರಿ.

ಅಂಚೆ ತಿಕೀಟು ಕಳಿಸಿದಲ್ಲಿ ಬುಕ್-ಪೋಸ್ಟ ಮಾಡಲಾಗುವದು.

—ಬೆಲೆ ಒಂದಕ್ಕೆ ೬ ಆಣೆ. —

ಮ್ಯಾನೇಜರ
ಜ್ಞಾನೋದಯ ಗ್ರಂಥ ಭಾಂಡಾರ
ಪೋ. ಆಲಮಟ್ಟಿ.
ಜಿ. ವಿಜಾಪುರ.

ಜಿ. ವೀರಭದ್ರಪ್ಪ.
ಮನೆ ನಂ. ೩೧೪೩.
ಕುಡಿಬಝಾರ ಹಲಕಾ(೩
ಹೈದರಾಬಾದ. (ದಖ್ಖ)

ದಿ ಸ್ವರಾಜ್ಯ ಬ್ಯಾಂಕಿಂಗ

ಮತ್ತು

ಇನ್ಸೂರನ್ಸ ಕಂಪನಿ ಲಿಮಿಟೆಡ್, ಧಾರವಾಡ.

ರೂ. ೭೦೨೧-೧-೫. ಕ್ಲೇಮು.

೧೯೩೫ ನೇ ಇಸ್ವಿಯ ೮ ತಿಂಗಳುಗಳಲ್ಲಿಯೇ

ಜನನ ಪಾಲಿಸಿದಾರರಿಗೆ ಕ್ಲೇಮಿನ ಹಣವು ಹಂಚಲ್ಪಟ್ಟಿದೆ.

ಡಿಶಂಬರ ಒಂದೇ ತಿಂಗಳಲ್ಲಿ ರೂ ೧೬೦೧—೫—೧೦ ಕ್ಲೇಮು ಹಣವನ್ನು ಕೊಡಲಾಗಿದೆ.

ಈ ಕಂಪನಿಯಲ್ಲಿ ಜನನ, ವಿವಾಹ ಮತ್ತು ಮರಣ ಈ ಪ್ರಕಾರ ಮೂರು ತರಹದ ವಿಮೆಗಳಿರುತ್ತವೆ.

ಪ್ರತಿಯೊಂದರ ಪ್ರವೇಶ ಫೀ ರೂ. ೫-೦-೦
ತಿಂಗಳ ಕಂತು .... . ರೂ. ೧-೦-೦
ವಾರ್ಷಿಕ ಫೀ .... ರೂ. ೬-೦-೦

ಈ ವಿಮೆಗಳು ಬಡವರಿಗೂ ಬಲ್ಲಿದರಿಗೂ ಬಹಳೇ ಉಪಯೋಗವುಳ್ಳವುಗಳಿರುತ್ತವೆ. ಕಾರಣ ಕರ್ನಾಟಕದ ಅಭಿಮಾನವುಳ್ಳ ಪ್ರತಿಯೊಬ್ಬರೂ ನಮ್ಮ ಕಂಪನಿಯ ಪಾಲಿಸಿದಾರರಾಗಬೇಕಾಗಿ ಇಚ್ಛಿಸುತ್ತೇವೆ.

ಮ್ಯಾನೇಜಿಂಗ ಏಜಂಟ್ಸ
ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಸುರನ್ಸ ಕಂ., ಲಿ.
ಧಾರವಾಡ.

ಸೂಚನೆ:- ಲಾಯಿಫ ಇನ್ಸುರನ್ಸ ಈ ಕಂಪನಿಯಲ್ಲಿ ತೀವ್ರವೇ ಪ್ರಾರಂಭವಾಗುವದು. ಏಜಂಟರಾಗಿ ಕೆಲಸ ಮಾಡಲು ಇಚ್ಛೆಯುಳ್ಳವರು ಈ ತಿಂಗಳ ಆಖೈರದೊಳಗಾಗಿಯೇ ೧೯೩೬ ನೇ ಇಸ್ವಿ ಆಖೈರದೊಳಗಾಗಿ ಎಷ್ಟು ಬಿಜಿನೆಸ್ಸು ಮಾಡುವಿರೆಂಬದನ್ನು ಸಹಾ ತಿಳಿಸಬೇಕಾಗಿ ವಿನಂತಿ.

EXCELLENT GET-UP! | NOW ON SALE | BEAUTIFUL PRINT!

Recommended by the Government of Mysore for High-School Libraries in the Mysore State.

WHO IS THE FOUNDER OF THE VIRASAIVA OR LINGAYET RELIGION?

An indispensable book for all lovers of HISTORY

Price As. 8. Postage Free.

Can be had from:—
Jeerage K. Basavappa B. A.
2, Cotton pet, BANGALORE city.
SOUTH INDIA.



ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೇಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ನಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!
-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

B. V. Bhumraddi.
ಮ್ಯಾನೇಜರ, ಗೌರೀಶಂಕರ ನಿವಾಸ ಹಿಂದೂ ಹೋಟೆಲ್
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, ಮುಂಬಯಿ.

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ
ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ ಸಾಮಾಜಿಕ ನಾಟಕ ಕಥೆ! ವಿದ್ವತ್ತ ಪ್ರಚುರ ಲೇಖಗಳಿವೆ.
ಹೊಸ ಸೌಲಭ್ಯಗಳು:—
ಬೆಲೆ ೧೦ ಆಣೆ, ೧೯೩೩ ರ ವಿಶೇಷ ಸಂಚಿಕೆಯೊಂದಿಗೆ ೧ ರೂ,
ಹಾಲಿ **ಚಂದಾದಾರರಿಗೆ ಉಚಿತ.** ತ್ವರೆಮಾಡಿರಿ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಷ್ಪ] ವಾ. ಚಂ ೩-೮-೦ [ಮೇಲೊಂದು ಉಚಿತಪುಷ್ಪ
ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ಐದನೆಯ ಪುಷ್ಪವಾದ
ಹಲವು ಪ್ರಸಿದ್ಧ ಕತೆಗಾರರ ಸರಸವಾದ
ಇದೀಗ ಹೊರಟಿದೆ] **ನೀಳ್ಗತೆಗಳು!** [ಬೆಲೆ ಹನ್ನೆರಡು ಆಣೆ.

**ಜಯಕರ್ನಾಟಕ ಕಾರ್ಯಾಲಯ
ಧಾರವಾಡ.**

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಸ್ಥೈರ್ಯವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು.
(ಮೈಸೂರು ಸ್ಟೇಟ್)

ಕನ್ನಡ ಪುಸ್ತಕಗಳು.

ಸಚಿತ್ರ ತುಳಸಸಪ್ತತಿ (೭೦ ವೇದಾಂತ ಕಥೆಗಳು)	೨-೦-೦
ಆಕಬರ-ಬೀರಬಲ (೨೮೦ ವಿನೋದ ಕಥೆಗಳು)	೨-೮-೦
ವ್ರತರತ್ನಮಾಲಾ (ಅರ್ಥಸಹಿತ ೪೦ ವ್ರತಗಳು)	೧-೪-೦
ಹಿಂದು-ಯುನಾನಿ ವೈದ್ಯ (ಅನುಭವಸಾರ)	೧-೮-೦
ಜ್ಯೋತಿಷ್ಯ ಸರ್ವ ವಿಷಯಾಮೃತ	೧-೮-೦
ಬೃಹಜ್ಜಾತಕ (ಅರ್ಥಸಹಿತ ದೊಡ್ಡದು)	೨-೦-೦
ಭರ್ತೃಹರಿ ನೀತಿಶಾಸ್ತ್ರ	೧-೮-೦
ಶಿವ ಮಹಾಪುರಾಣ (ಕಥಾಸಂಗ್ರಹ)	೨-೦-೦
ಬಸವ ಪುರಾಣ	೧-೦-೧
ಚನ್ನಬಸವ ಪುರಾಣ	೧-೪-೦
ನಿಜಗುಣರ ಆರು ಶಾಸ್ತ್ರವು	೫-೦-೦

ಟಪಾಲ ಖರ್ಚು ಬೇರೆ ಬೀಳುತ್ತದೆ.

ಎಲ್ಲ ತರದ ಪುಸ್ತಕಗಳು ನಮ್ಮಲ್ಲಿ ಸುಲಭ ಕ್ರಯಕ್ಕೆ ಸಿಕ್ಕುವವು.
ಆರ್ಡರಿನೊಂದಿಗೆ ಅಡ್ವಾನ್ಸ ಕಳುಹಿಸಬೇಕು.

ನಮ್ಮ ವಿಳಾಸಃ—

ಶ್ರೀನಿವಾಸ ಬುಕ್‌ಡಿಪೊ, ನಂ. ೬೩೭
ಗಂಗಮ್ಮಗುಡಿ ಬೀದಿ; **ದೇವರಾಜ ಮೊಹಲ್ಲಾ**
ಮೈಸೂರ.

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ
ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪು ಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ. ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,
ಶ್ರೀ ರಂಗನಾಥ ಟೈಪ್ ಫೌಂಡರಿ
೭೭ ಕುಬೇರ ಸಾಹುಜಿ ಲೈನ್
ಚಿಕ್ಕಪೇಟೆ, ಬೆಂಗಳೂರು ಸಿಟಿ

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿಯವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಿಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.

ಖಾದಿಯ ಕೊಂಡು
ಬಡತನದ ಬಾಧೆಯ ಕಳೆಯಿರಿ.

ಭಾರತದ ಬಡತನ ಬಯಲಾಗಲು
ಗಾಂಧಿಯವರು
ತೋರಿಸಿದ
ಖಾದಿಯೇ ಹಾದಿಯು.
ನಿಮ್ಮ ಮೈಮೇಲೆ
ಖಾದಿ ಬಂದರೆ
ಬಡವರ ಕೈಮೇಲೆ
ಕಾಸು ಬರುವದು.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ! ದಾಕ್ಷಿಣ್ಯಪರನಲ್ಲ! ಲೋಕವಿರೋಧಿ! ಶರಣನಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೬ । ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು

ಸಂಪುಟ ೫.	ಆಲಮಟ್ಟಿ- ಸೋಮವಾರ ತಾರೀಖು ೨೭ ನೆಯ ಜನವರಿ ...೬.	ಸಂಚಿಕೆ ೨೨

ಜನಸೇವೆಯೇ — ದೇವರ ಸೇವೆ.

ಪಂಚಮ ಜ್ಯಾರ್ಜ ಚಕ್ರವರ್ತಿಗಳ
ಶೋಚನೀಯ ನಿಧನ.

ಪ್ರಪಂಚದ ಸಕಲ ರಾಷ್ಟ್ರಗಳಲ್ಲಿಯೂ
ದುಃಖ ಪ್ರದರ್ಶನ.

ಬ್ರಿಟಿಶ್ ಸಾಮ್ರಾಜ್ಯದಲ್ಲೆಲ್ಲಾ
ಶೋಕ ವ್ಯಾಪಿಸಿತು.

ನೈಜಾಮರ ಜುಬಲಿಯ ಉತ್ಸವ ಮುಂದೆ ಹಾಕಲ್ಪಟ್ಟಿತು.

ಮಹಾತ್ಮಾ ಗಾಂಧೀಜಿ, ಠಾಗೋರ, ರಾಷ್ಟ್ರಾಧಿಪತಿ ರಾಜೇಂದ್ರ ಬಾಬು ಮೊದಲಾದ ಭಾರತೀಯ ಪ್ರಜಾ ಪ್ರಮುಖರ ದುಃಖ.

ತಾರೀಖು ೨೮-೧-೩೬ ನೆಯ ದಿವಸ
ಸರ್ವತ್ರ ದುಃಖ ಪ್ರದರ್ಶನ.

ದೇಶಸೇವೆ — ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL - 587 313
Dt. Bijapur, (Karnataka)

ಶಿರಸಿಯಲ್ಲಿ

ಸಿದ್ಧೇಶ್ವರ ತಿಜೋರಿ ಮೇಲೆ ಕಳ್ಳರ ಹಲ್ಲಾ.

ಸಿದ್ಧೇಶ್ವರ ತಿಜೋರಿ ಕಾರಖಾನೆ ಹುಬ್ಬಳ್ಳಿ ಇವರಿಗೆ ಶಿರಸಿಯಿಂದ ಅವರ ತಿಜೋರಿ ಕೊಂಡ ರಾ|| ರಾ|| ಶಿವಬಸಪ್ಪ ಬೆಲ್ಲದ ಇವರಿಂದ ಬಂದ ಪತ್ರ—

ಮೊನ್ನೆ ಮೊನ್ನೆ ನಾವು ತಮ್ಮಲ್ಲಿ (ರೂ. ೩೨೫ ಕ್ಕೆ ೩ ಫೂಟು ಎತ್ತರದ್ದು) ತಿಜೋರಿ ಕೊಂಡದ್ದರಲ್ಲಿ ಮೊನ್ನೆಯೇ ಹೋದ ದೀಪಾವಳಿ ಲಕ್ಷ್ಮೀ ಪೂಜೆಯ ನಿಮಿತ್ಯ ನಮ್ಮ ಮನೆಯಲ್ಲಿಯ ಎಲ್ಲ ದಾಗೀನಗಳನ್ನೂ ವ ರೋಖಡಿ ರೂಪಾಯಿಗಳನ್ನೂ ಇಟ್ಟಿದ್ದೆವ ಅದೇ ದಿವಸ ರಾತ್ರಿ ಯಾರೋ ಕಳ್ಳರು ನಮ್ಮ ಅಂಗಡಿ ಕೀಲಿ ಮುರಿದು ತಿಜೋ ಿಕ್ಕೆ ಪಡೆ: ಲಿಕ್ಕೆ ಹೊಡೆದು ಬಡೆದು ಕಚ್ಚಿ ಹಾಕಿ ಅನೇಕ ತರ ಹದಿ ತ್ನ ಮಾಡಿ ನಿರಾಶರಾಗಿ ತಿರುಗಿ ಹೋದದ್ದು ಬೆಳಿಗ್ಗೆ ಗೊತ್ತಾಯಿತು. ತಿಜೊ ಟ್ಟಗಳು ಮಾತ್ರ ಬಹಳ ಬಿದ್ದಿವೆ. ಮಾರಿಯ ಬಣ್ಣ ಎಲ್ಲವೂ ಹಾರಿ ಹೋ ಬಾಕಿ ತಿಜೋರಿ ಮಾತ್ರ ಏನೂ ಕೆಟ್ಟಿಲ್ಲಾ.

ಸಾರಾಂಶ. ನಾನು ನಿಮ್ಮ ತಿಜೋರಿಯನ್ನೇ ತಕ್ಕ ವೇಳೆಗೆ ಕೊಂಡು ಆಗತಕ್ಕ ಸಾವಿರಾರು ರೂಪಾಯಿಯ ಲುಕ್ಸಾನವನ್ನು ನಿಮ್ಮಿಂದಲೇ ತಿರುಗಿ ಲಾಭ ಹೊಂದಿದಂತಾಗಿದೆ ಎಂದು ತಿಳಿಸಲಿಕ್ಕೆ ತುಂಬಾ ಸಂತೋಷವಾಗುತ್ತದೆ.

ಇದನ್ನು ನೋಡಿ ನಮ್ಮ ಕೆಲವು ಸ್ನೇಹಿತರು ನಿಮ್ಮ ತಿಜೋರಿಯನ್ನೇ ಕೊಳ್ಳಬೇಕೆಂದು ವಿಚಾರಿಸುತ್ತಿದ್ದಾರೆ. ಅವರು ಪರಭಾರೆ ತಮಗೆ ಪತ್ರ ಹಾಕಿರಬಹುದು. ಹಾಗೂ ಸಮಕ್ಷಮ ನೋಡಲಿಕ್ಕೆ ಬರಬಹುದು.

ಇಂತೀ ನಮಸ್ಕಾರಗಳು. ಸಹಿ:— ಶಿವಬಸಪ್ಪ ಬೆಲ್ಲದ, ಶಿರ್ಶಿ.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೧-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಕಾಯಕವೆ ಕೈಲಾಸ	೦-೩-೦	ಸುಕಲಾದೇವಿಯ ಕಥೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ಶರಣಬಸವೇಶ್ವರನ ಚರಿತ್ರೆ	೦-೧-೬
ಏಕಲವ್ಯನ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಲಜಪತರಾಯರ ಚರಿತ್ರೆ	೦-೧-೬	ವಿಜಯವಾಣಿ	೦-೨-೦
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

ಓಂ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೫. | ಆಲಮಟ್ಟಿ- ಸೋಮವಾರ ತಾರೀಖು ೨೭ ನೆಯ ಜನವರಿ ೧೯೩೬. | ಸಂಚಿಕೆ ೨೨.

ಜಾರ್ಜ ಚಕ್ರವರ್ತಿಗಳ ಶೋಚನೀಯ ನಿಧನ.

ನಿಧನದ ಸುದ್ದಿ.

ಜಾರ್ಜ ಚಕ್ರವರ್ತಿಗಳಿಗೆ ಕಳೆದ ವಾರ ಶೀತವ್ಯಾಧಿಯುಂಟಾಯಿತು. ಎರಡು ನೂರು ದಿನಗಳಲ್ಲಿಯೇ ಅದು ವಿಕೋಪ ಸ್ಥಿತಿಗೆ ಮುಟ್ಟಿತು. ಕಳೆದ ೨೦ ನೆಯ ತಾರೀಖಿನ ಸಾಯಂಕಾಲ ಚಿಂತಾಜನಕ ಸ್ಥಿತಿ ತೋರಿತು. ಆಕ್ಸಿಜನ್ ಮೂಲಕ ಹವೆಯು ಉತ್ಸಾಹಜನಕವಾದುದಾಗುವಂತೆ ಮಾಡಿದರು. ಚಕ್ರವರ್ತಿಗಳು ಶಾಂತ ವಾತಾವರಣದಲ್ಲಿರಬೇಕೆಂದು ರಾಜ ಭವನದ ಸುತ್ತಲು ನಾಲ್ಕು ಮೈಲು ಪ್ರದೇಶದಲ್ಲಿ ವಿಮಾನ ಕೂಡಾ ಬರದಂತೆ ಮಾಡಿದರು. ಇಷ್ಟೆಲ್ಲಾ ಪ್ರಯತ್ನಿಸಿದರೂ ಪ್ರಕೃತಿಯೇ ವಿಜಯ ಹೊಂದಿ ಚಕ್ರವರ್ತಿಗಳ ಪ್ರಾಣವನ್ನು ತಾ. ೨೦-೧-೩೬ ನೆಯ ರಾತ್ರಿ ೧೧ ಗಂಟೆ ೫೫ ನಿಮಿಷಗಳಲ್ಲಿ ಹರಣ ಮಾಡಿತು. ಆಗ ಈ ದೇಶದಲ್ಲಿ ಬೆಳಗಿನ ೫ ಗಂಟೆ ೨೫ ನಿಮಿಷಗಳಾಗಿದ್ದವು.

ನಿಧನ ಕಾಲದ ದೃಶ್ಯ.

ಈ ಶೋಚನೀಯ ನಿಧನ ವಾರ್ತೆಯು ನಿಮಿಷಾರ್ಧದಲ್ಲಿ ಎಲ್ಲೆಲ್ಲಿಯೂ ವ್ಯಾಪಿಸಿತು. ನಿಧನಕಾಲಕ್ಕೆ ಮಹಾರಾಣಿ ಮೇರಿಯವರು ಪ್ರಿನ್ಸ ಆಫ್ ವೇಲ್ಸರು ಚಕ್ರವರ್ತಿಗಳ ಪಾರೀಸಿನ ಪಾದ್ರಿಗಳೆಂದು ಕಂಟರಬರಿಯ ಆರ್ಚಬಿಶಪರು ಚಕ್ರವರ್ತಿಗಳ ಹತ್ತಿರದಲ್ಲಿಯೇ ಇದ್ದರು. ಆಕಾಲದ ದೃಶ್ಯವು ಹೃದಯದ್ರಾವಕವಾದುದಾಗಿದ್ದಿತು. ಅಂತ್ಯ ಕಾಲಕ್ಕೆ ಮಹಾರಾಣಿಯವರನ್ನೂ ರಾಜಕುಟುಂಬದವರನ್ನೂ ಹತ್ತಿರ ಬರಮಾಡಿಕೊಂಡರು ಎಲ್ಲರೂ ನಿಶ್ಚಲ ದೃಷ್ಟಿಯಿಂದ ಚಕ್ರವರ್ತಿಗಳನ್ನೇ ನೋಡುತ್ತಿದ್ದರು. ಪ್ರಾಣೋತ್ಕ್ರಮಣದ ವರೆಗೂ ಮಹಾರಾಣಿಯವರು ತಮ್ಮ ದುಃಖವನ್ನು ನಿಗ್ರಹಿಸಿದ್ದರು. ಚಕ್ರವರ್ತಿಗಳು ಇಹಲೋಕವನ್ನು ಬಿಟ್ಟೊಡನೆ ಮಹಾರಾಣಿಯವರು ಯುವರಾಜರನ್ನು ಅಪ್ಪಿ ಶೋಕಿಸಲಾರಂಭಿಸಿದರು.

ಅಂತ್ಯವಿಧಿ

ಚಕ್ರವರ್ತಿಗಳ ಶವವು ಸಾರಿಂಸ ಪಟ್ಟಣದ ಚರ್ಚಿಗೆ ತೆಗೆದುಕೊಂಡು ಹೋಗಲ್ಪಟ್ಟಿತು. ಅಲ್ಲಿಂದ ತಾ. ೨೩ ನೆಯ ದಿನ ಲಂಡನ್ ಪಟ್ಟಣಕ್ಕೆ ತರಲ್ಪಟ್ಟಿತು. ಅಂದಿನಿಂದ ತಾ. ೨೮-೧-೩೬ ರ ವರೆಗೆ ವೆಸ್ಟಮಿನಿಸ್ಟರ್‌ದಲ್ಲಿ ಜನಗಳ ದರ್ಶನಕ್ಕಾಗಿ ಇಡಲ್ಪಟ್ಟು ಆ ಮೇಲೆ ಮೆರವಣಿಗೆ ಮಾಡಿ ಅಂತ್ಯ ಸಂಸ್ಕಾರ ಕೊಡಲ್ಪಡುವುದು. ತಾ. ೨೮ ನೆಯ ದಿನವು ಬ್ರಿಟಿಶ್ ಸಾಮ್ರಾಜ್ಯದಲ್ಲೆಲ್ಲಾ ದುಃಖ-ಪ್ರದರ್ಶನದ ದಿನವಾಗಿದೆ.

ದಿವ್ಯ ಚಾರಿತ್ರ್ಯ.

ಜಾರ್ಜ ಚಕ್ರವರ್ತಿಗಳು ತಾ. ೩-೬-೧೮೬೫ ರಲ್ಲಿ ಜನ್ಮವೆತ್ತಿದರು. ಈಗ ಅವರಿಗೆ ೭೧ ನೆಯ ವರುಷ ನಡೆದಿತ್ತು. ಪ್ರಪಂಚದ ಪ್ರವಾಸವನ್ನು ಮಾಡಿದ್ದರು. ಬಹು ಸಾತ್ವಿಕ ವೃತ್ತಿಯವರು. ದಯಾಶೀಲರು. ನೌಕಾ ವಿದ್ಯೆಯಲ್ಲಿ ಬಹು ಪ್ರವೀಣರು. ಜಗತ್ತಿನ ಶಾಂತತೆಗಾಗಿ ತುಂಬಾ ಪ್ರಯತ್ನಿಸಿದರು. ಪ್ರಜಾಪ್ರಭುತ್ವದಲ್ಲಿ ಪ್ರೇಮಾದರಗಳುಳ್ಳವರಾಗಿದ್ದರು.

ಪ್ರಪಂಚವೇ ದುಃಖಿಸುತ್ತಿದೆ.

ಅಂಶಿಯೋ ಜರ್ಮನ್ ಮೊದಲಾದ ಪ್ರಪಂಚದ ಎಲ್ಲಾ ಸುಧಾರಿಸಿದ ರಾಷ್ಟ್ರಗಳ ಪ್ರಮುಖರು, ಭಾರತೀಯ ಮಹಾರಾಜರು, ರಾಜರು, ಮಹಾತ್ಮಾ ಗಾಂಧಿಯವರೇ ಮೊದಲಾದ ರಾಷ್ಟ್ರೀಯ ಪ್ರಮುಖರು, ಜಾರ್ಜ ಚಕ್ರವರ್ತಿಗಳ ನಿಧನಕ್ಕೋಸ್ಕರ ಅತ್ಯಂತ ದುಃಖಿಸಿದ್ದಾರೆ.

ರಾಜ್ಯಭಾರದ ವ್ಯವಸ್ಥೆ.

The king never dies, ರಾಜನಿಗೆ ಮರಣವಿಲ್ಲವೆಂದು ಇಂಗ್ಲಂಡಿನಲ್ಲಿ ಹೇಳುವ ವಾಡಿಕೆಯಿದೆ. ಏಕೆಂದರೆ ಒಬ್ಬ ರಾಜನು ಮರಣಹೊಂದಿದೊಡನೆಯೇ ಇನ್ನೊಬ್ಬರನ್ನು ರಾಜಪದಕ್ಕೆ ನಿಯಮಿಸಲೇ ಬೇಕಾಗುತ್ತದೆ. ಆದುದರಿಂದ The king is dead; Long live the king (ರಾಜನು ಮೃತಪಟ್ಟ, ರಾಜನು ದೀರ್ಘಾಯುವಾಗಲಿ.) ಎಂಬ ವಿರೋಧಾತ್ಮಕವಾದ ಶಬ್ದವು ಪ್ರಚಾರದಲ್ಲಿದೆ. ತಾ. ೨೧ ನೆಯ ದಿನವೇ ಪ್ರಿನ್ಸ ಆಫ್ ವೆಲ್ಸರು ಎಂಟನೆಯ ಎಡ್ವರ್ಡ ಎಂಬ ಹೆಸರಿನಿಂದ ಇಂಗ್ಲಂಡಿನ ರಾಜರಾಗಿಯೂ ಹಿಂದುಸ್ಥಾನದ ಚಕ್ರವರ್ತಿಗಳಾಗಿಯೂ ನಿಯಾಮಕವಾದರು. ಮುಂದಣ ವರ್ಷ ಇವರ ರಾಜ್ಯಾರೋಹಣ ಸಮಾರಂಭವು ಜರುಗುವುದು.

ಗಾಂಧೀಜಿಯುವರನ್ನು ಹಿಡಿದವರಾರು ?

ಮೊನ್ನೆ ತಾನೆ ಗತಿಸಿದ ಹಿಂದಣ ವ್ಹಾಯಿಸರಾಯ ಲಾರ್ಡ ರೀಡಿಂಗರವರ ಪ್ರಭುತ್ವದ ಕಾಲವಲ್ಲಿ ಸರ್. ತೇಜ ಬಹದ್ದೂರ್ ಸಪ್ರುರವರು ಅವರ ಮಂತ್ರಿಮಂಡಳದಲ್ಲಿದ್ದರಷ್ಟೆ. ಲಾರ್ಡ ರೀಡಿಂಗ ರವರ ಲೋಕೋತ್ತರ ಜೀವನ ಚರಿತ್ರೆಯಲ್ಲಿ ಸರ್ ಸಪ್ರೂಜಿಯವರು ತಾವು ಕೇಳಿ, ನೋಡಿ, ಅನುಭವಿಸಿದ ಮಹತ್ವದ ಸಂಗತಿಗಳನ್ನು ಕುರಿತು 'ಲೀಡರ್' ಪತ್ರಿಕೆಯಲ್ಲಿ ಲೇಖನಗಳನ್ನು ಬರೆಯುತ್ತಿದ್ದಾರೆ. ಲಾರ್ಡ ರೀಡಿಂಗ ರವರ ಸಂಬಂಧವಾಗಿ ತಮ್ಮ ಮೊದಲನೆಯ ಲೇಖನದಲ್ಲಿ ಸರ್ ಸಪ್ರೂಜಿಯವರು ಹೀಗೆ ಬರೆದಿದ್ದಾರೆ —


ಸರ್ ಸಪ್ರೂರವರು.

" ಲಾರ್ಡ ರೀಡಿಂಗರ ಪರಿಚಯ ಹೊಂದುವ ಸುಯೋಗವು ಅವರು ಎಂದು ಮುಂಬೈ ಪಟ್ಟಣಕ್ಕೆ ಆಗಮಿಸಿದರೋ ಅಂದೇ ನನಗೆ ಪ್ರಾಪ್ತವಾಯಿತು. ಆ ದಿನ ನಾನು ಲಾರ್ಡ ರೀಡಿಂಗರನ್ನು ಅವರ ಮಂತ್ರಿಮಂಡಲದ ಇತರರೊಡನೆ ಸ್ವಾಗತ ಮಾಡಿದ ನಂತರ ಅರ್ಧ ತಾಸು ಅವರ ಸಂಗಡ ಮಾತನಾಡಿದೆನು. ದಿಲ್ಲಿಗೆ ಬಂದನಂತರ ಅದೇ ದಿನವೇ ನನ್ನನ್ನು ಕಾಣಿರೆಂದು ಅವರು ನಾನು ಬರುವಾಗ ನನಗೆ ತಿಳಿಸಿದರು. ಆ ಪ್ರಕಾರ ದಿಲ್ಲಿಯಲ್ಲಿ ಅವರನ್ನು ನಾನು ಕಂಡೆನು.

ಆ ದಿನ ನಾವು ಎರಡು ತಾಸು ಮಾತನಾಡಿದೆವು. ದೇಶದ ರಾಜಕೀಯ ಸ್ಥಿತಿಯನ್ನೂ ಜನಗಳ ಅಭಿಪ್ರಾಯವನ್ನೂ ಸವಿಸ್ತಾರವಾಗಿ ತಿಳಿಸಲು ನನಗೆ ಹೇಳಿದರು. ಆಗ ನಾನು ಪಂಜಾಬಿನ ಗಲಾಟೆ, ರಾಷ್ಟ್ರೀಯ ಸಭೆಯು ಘೋಷಣ ಮಾಡಿದ ಅಸಹಕಾರತೆ, ಮತ್ತು ಜಾತಿ ವಿಷಯಕ ಕಲಹ ಇವುಗಳನ್ನು ಕುರಿತು ತಿಳಿಸಿದೆನು. ಅವರ ಗ್ರಹಣಶಕ್ತಿಯು ಅಪೂರ್ವವಾದುದೆಂತಲು ಮತ್ತು ತಿಳಿದುಕೊಳ್ಳುವ ಸಂಗತಿಗಳು ಅತಿ ಮುಖ್ಯವಾದವುಗಳೆಂತಲು ನನಗೆ ತೋರಿತು. ಈ ಸಂಭಾಷಣೆಯ ನಂತರ ಹೀಗೆ ಹೇಳಿದರು— "ನಾನು ಎಲ್ಲಾ ಸ್ಥಿತಿಗಳನ್ನು ಕಣ್ಣಾರೆ ನೋಡಿ, ಪ್ರಮುಖರೊಂದಿಗೆ ಸಂಭಾಷಣೆ ಮಾಡಿ, ಅನಂತರವೇ ನಾನೊಂದು ಅಭಿಪ್ರಾಯಕ್ಕೆ ಬರುವೆನು. "

ಇವರೇನೋ ಬೇರೆಯಾಗಿ ಕಾಣುತ್ತಾರೆ ?

ಮರುದಿನ ಮತ್ತೆ ನನ್ನನ್ನು ಕರೆಯಿಸಿ ಒಂದು ತಾಸು ಮಾತನಾಡಿದರು. ಬೇರೆ ಬೇರೆ ಪಂಗಡಗಳ ಪ್ರಮುಖರೊಂದಿಗೆ ಸಂಭಾಷಣೆ ಮಾಡುವುದು ಹೆಚ್ಚು ಪ್ರಯೋಜನಕಾರಿಯೆಂದು ನಾನು ತಿಳಿಸಿದೆನು. ಆ ನನ್ನ ಹೇಳಿಕೆಗೆ ಅವರು ಒಪ್ಪಿ ಬೇರೆ ಬೇರೆ ಪ್ರಮುಖರು ತಮ್ಮ ಅಭಿಪ್ರಾಯವನ್ನು ತಿಳಿಸಿದರೆ ಬಹು ಸಂತೋಷದಿಂದ ತಿಳಿದುಕೊಳ್ಳಲು ಸಿದ್ಧರಿದ್ದೇವೆಂದು ಹೇಳಿದರು.

ಆಗ ನಾನು ನನ್ನ ಹೊಣೆಗಾರಿಕೆಯಿಂದಲೇ ಕೆಲವು ಪ್ರಮುಖರನ್ನು ಸಂಭಾಷಣೆಗಾಗಿ ಕರೆಯಬೇಕೆಂದು ಯೋಚಿಸಿದೆನು. ಅದಕ್ಕಾಗಿ ನಾನು ಮೊದಲು ಅಲಹಾಬಾದಕ್ಕೆ ಹೋಗಿ ಪಂಡಿತ ಮಾಲವೀಜಿಯವರನ್ನು ಕಂಡೆನು. ವ್ಹಾಯಿಸ್‌ರಾಯರನ್ನು ಕಾಣಲು ನಾನು ಪಂಡಿತಜಿಯವರ ಮನಸ್ಸನ್ನು ಒಲಿಸಿದೆನು. ಅವರು ಸಿಮ್ಲಾಕ್ಕೆ ಹೋಗಿ ಎರಡಾವರ್ತಿ ರೀಡಿಂಗರನ್ನು ಕಂಡರು.

ಆಮೇಲೆ ಲಾಲಾಲಜಪತರಾಯರ ಮತ್ತು ಹಸನ ಇಮಾಮ ಮೊದಲವರ ಸಂಗಡ ವ್ಹಾಯಿಸ್‌ರಾಯರು ಮಾತನಾಡಿದರು. ಅದೇ ಕಾಲಕ್ಕೆ ಅಂಡ್ರ್ಯೂಜ್‌ರು ಸಿಮ್ಲಾಕ್ಕೆ ಬಂದಿದ್ದರು. ಅವರು ನನ್ನಲ್ಲಿಯೇ ಉಳಿದಿದ್ದರು. ನಾನು ಅವರ ಸಂಗಡ ಮಹಾತ್ಮಾ ಗಾಂಧೀಜಿಯವರು ವ್ಹಾಯಿಸ್‌ರಾಯರನ್ನು ಕಂಡು ಮಾತಾಡಿದರೆ ದೇಶಕ್ಕೆ ಮಹದುಪಕಾರವಾಗುವದೆಂದು ತಿಳಿಸಿದೆನು. ಗಾಂಧೀಜಿಯವರು ವ್ಹಾಯಿಸ್‌ರಾಯರನ್ನು ಕಾಣುವರೇ ? ಎಂದು ಅಂಡ್ರೂಜ್‌ರು ನನ್ನನ್ನು ವಿಚಾರಿಸಿದರು. ನಾನು ಕಾಣಬಹುದೆಂದು ಹೇಳಿದನು. ಅಂಡ್ರೂಜ್‌ರು ಸರಕಾರಿ ಅಧಿಕಾರಿಗಳ ವಿಷಯದಲ್ಲಿ ಸದಭಿಪ್ರಾಯವುಳ್ಳವರಾಗಿರಲಿಲ್ಲವೆಂದು ನನಗೆ ತೋರಿತು. ಅವರು ರೀಡಿಂಗರನ್ನು ಕಾಣಲು ಇಷ್ಟಪಡದಿದ್ದರೂ ನಾನು ಒತ್ತಾಯವಾಗಿ ಹೇಳಿದೆನು. ಅವರು ಕೊನೆಗೆ ರೀಡಿಂಗರನ್ನು ಕಂಡು ಮಾತನಾಡಿ ಬಂದು "ಸಪ್ರು ನಿಮ್ಮ ವಿಚಾರ ಸರಿಯಾದುದು. ಗಾಂಧೀಜಿಯವರೂ ರೀಡಿಂಗರನ್ನು ಕಾಣುವುದು ಒಳ್ಳೆಯದು. ಇವರೇನೋ ಬೇರೆಯಾಗಿ ಕಾಣುತ್ತಿದ್ದಾರೆ" ಎಂದು ಹೇಳಿದರು.

ಗಾಂಧೀಜಿಯುವರ ಸಂಭಾಷಣೆ.

ಆಬಳಿಕ ಅಂಡ್ರ್ಯೂಜರು ಗಾಂಧೀಜಿಯವರ ಬಳಿಗೆ ಹೋಗಿ ವ್ಹಾಯಿಸರಾಯರನ್ನು ಕಾಣಲು ತಿಳಿಸಿದರು. ಅದಕ್ಕೆ ಗಾಂಧೀಜಿಯವರೂ ಒಪ್ಪಿದರು. ಆ ಪ್ರಕಾರ ಸಿಮ್ಲಾದಲ್ಲಿ ಲಾರ್ಡ ರೀಡಿಂಗ ಮತ್ತು ಮಹಾತ್ಮಾ ಗಾಂಧಿಯವರು ಎರಡು ದಿವಸ ಸಂಭಾಷಣೆ, ಚರ್ಚೆ, ವಿಚಾರವಿನಿಮಯ ಮಾಡಿದನಂತರ ಒಂದು ತೀರ್ಮಾನಕ್ಕೆ ಬಂದರು. ಆಮೇಲೆ ವ್ಹಾಯಿಸರಾಯರು ಗಾಂಧೀಜಿಯವರ ಅಭಿಪ್ರಾಯಗಳನ್ನೆಲ್ಲಾ ಮಂತ್ರಿಮಂಡಲದ ಮುಂದಿಟ್ಟರು. ನಾವೆಲ್ಲರೂ ಚರ್ಚಿಸಿದೆವು. ಉಭಯ ಪಕ್ಷದವರಿಗೂ ಸಮಾಧಾನಕರವಾದ ತೀರ್ಮಾನವಾಗುವುದೆಂದು ಆಗ ತೋರಿತು.

ಆಮೇಲೆ ಯುವರಾಜರ ಆಗಮನವನ್ನು ಬಹಿಷ್ಕರಿಸುವ ಪ್ರಸಂಗ ಬಂದಿತು. ಖಿಲಾಫತ್ ಮುಂದಾಳುಗಳಲ್ಲಿ ಕೆಲವರ ಮೇಲೆ ನಡೆದಿದ್ದ ವ್ಯಾಜ್ಯದಿಂದ ಸ್ಥಿತಿಯು ಬಹು ಸೂಕ್ಷ್ಮವಾಗಿತ್ತು. ಪಂಡಿತ ಮೋತಿಲಾಲರಿಗೂ ನಾನು ವ್ಹಾಯಿಸ್‌ರಾಯರನ್ನು ಕಾಣಲು ಬರೆದಿದ್ದೆನು. ಅವರ ಪತ್ರವು ಆಶಾಜನಕವಾಗಿಯೂ ಇದ್ದಿತು. ಏಕೆಂದರೆ ಸಂಭಾಷಣೆಗೆ ಬರಲು ಒಪ್ಪಿದ್ದರು. ಆಮೇಲೆ ಅವರ ಮನಸ್ಸು ಬೇರೆಯಾಯಿತು. ಸಂಭಾಷಣೆಗೆ ಬರಲು ಶಕ್ಯವಿಲ್ಲವೆಂದು ಪತ್ರವನ್ನು ಬರೆದರು. ಅದರ ಕೊನೆಯಲ್ಲಿ ಒಂದು ಪರ್ಶಿಯನ್ ಕವಿತೆಯನ್ನು ಬರೆದಿದ್ದರು. ಅದರ ಅಭಿಪ್ರಾಯ ಹೀಗಿದ್ದಿತು—

" ಏನು ಆಗಬೇಕಾಗಿದ್ದಿತೋ ಅದೇ ಆಯಿತು. ಇನ್ನು ಬೇರೆ ಉಪಾಯವಿಲ್ಲ. ಸಮುದ್ರದಲ್ಲಿ ಹಡಗವನ್ನು ತಳ್ಳಿಬಿಟ್ಟದ್ದಾಯಿತು. ತಿರುಗಿ ಬರುತ್ತದೋ ? ಏನೋ " ಈ ಪತ್ರವನ್ನು ಓದಿದನಂತರ ನನ್ನ ಚಿಂತೆಯು ಹೆಚ್ಚಿತು. ಯುವರಾಜರ ಆಗಮನದ ಕಾಲಕ್ಕೆ ಕಾಂಗ್ರೆಸ್ಸು ಏನು ಮಾಡುವುದೋ ಎಂದು ನಾನು ಚಿಂತಿಸುತ್ತಿದ್ದೆನು.

ಇಂದಿನ ಕೈದಿ - ನಾಳಿನ ಮಂತ್ರಿ !

ಕಾಂಗ್ರೆಸ್ ಸರ್ವತ್ರ ಬಹಿಷ್ಕಾರ ಹಾಕಬೇಕೆಂಬ ಯೋಚನೆಯಲ್ಲಿದ್ದಿತು. ಇದರಿಂದ ದೇಶಕ್ಕೆ ಅನರ್ಥ ಸಂಭವಿಸುವುದೆಂದೇ ಲಾರ್ಡ ರೀಡಿಂಗರ ಅಭಿಪ್ರಾಯ, ನಾವೆಲ್ಲರೂ ಅದೇ

ಅಭಿಪ್ರಾಯದವರಾಗಿದ್ದೆವು. ಕೆಲವು ಪ್ರಮುಖರು ಕೂಡಾ ನಮ್ಮ ಅಭಿಪ್ರಾಯವನ್ನು ಒಪ್ಪಿದರು. ಆದರೆ ಕೆಲವರು ತಮ್ಮ ಹಟವನ್ನೇ ಸಾಧಿಸಿದರು. ಲಾರ್ಡ ರೀಡಿಂಗರು ಯುವರಾಜರ ಸ್ವಾಗತಕ್ಕಾಗಿ ಮುಂಬೈಗೆ ಹೋದರು. ಆಗ ಅಲ್ಲಿ ಸಂಭವಿಸಿದ ದೊಂಬಿಯ ಸಂಬಂಧವಾಗಿ ನಾನು ಬರೆಯಲಿಚ್ಛಿಸುವುದಿಲ್ಲ.

ರೀಡಿಂಗರು ಮುಂಬೈಯಿಂದ ನಿರಾಶರಾಗಿಯೇ ಬಂದರು. ಆಗ ಅವರು ಸ್ವಲ್ಪ ಸಿಟ್ಟಾಗಿದ್ದಂತೆಯೂ ತೋರಿತು. ಅವಶ್ಯಕ ಕಂಡಲ್ಲಿ ಕಠಿಣವಾದ ಉಪಾಯವನ್ನು ಮಾಡಬೇಕೆಂದೇ ಅವರು ನಿರ್ಧರಿಸಿದ್ದರೂ ಪ್ರಾಂತಿಕ ಸರಕಾರಗಳು ಅದರ ದುರುಪಯೋಗ ಮಾಡಬಾರದೆಂತಲೂ ಅವರು ಯೋಚಿಸಿದ್ದರು. ರಾಜಕೀಯ ಮುಂದಾಳುಗಳ ವಿಚಾರದಲ್ಲಿ ಸಲ್ಲದ ನಡವಳಿಕೆಯನ್ನು ಅಧಿಕಾರಿಗಳು ನಡೆಯಿಸಕೂಡದೆಂದೇ ಅವರ ಅಭಿಪ್ರಾಯವಾಗಿದ್ದಿತು.

ಕಲಕತ್ತೆಯಲ್ಲಿ ಮಾತನಾಡುತ್ತಿದ್ದಾಗ ಒಬ್ಬ ಪ್ರತಿಷ್ಠಿತ ಮತ್ತು ಸುಪ್ರಸಿದ್ಧ ವ್ಯಕ್ತಿಯು— ಅವರ ಹೆಸರನ್ನು ನಾನು ಹೇಳುವುದಿಲ್ಲ— ಕೈ. ಚಿತ್ತರಂಜನ ದಾಸರ ಸಂಬಂಧವಾಗಿ ಮಾತನಾಡುವಾಗ ಶಿಷ್ಟಾಚಾರಕ್ಕೆ ತಪ್ಪಿದ ಶಬ್ದವನ್ನು ಪ್ರಯೋಗಿಸಿದರು. ಆಗ ರೀಡಿಂಗರು ಅವರಿಗೆ ಹೀಗೆ ಹೇಳಿದರು— "ಅವರು ಹೀಗೆ ಹಾಗೆ ಎಂದು ಹೇಳುವುದು ನನಗೆ ಸರಿತೋರುವುದಿಲ್ಲ ಬಾದಶಹರ ಈ ದಿನದ ಕೈದಿಯು ನಾಳೆ ದಿನ ಮಂತ್ರಿಗಳಾಗಬಹುದು."

ಪ್ರಮುಖರ ಪರಿಷತ್ತು.

ಅಧಿಕಾರಿಗಳ ಮತ್ತು ಪ್ರಮುಖರ ಭಿನ್ನಾಭಿಪ್ರಾಯಗಳು ನಿವಾರಣೆಯಾಗಬೇಕೆಂಬ ನನ್ನ ಉದ್ದೇಶವನ್ನೇನೂ ನಾನು ಬಿಟ್ಟಿರಲಿಲ್ಲ. ಈ ವಿಚಾರವಾಗಿ ಸರ್. ಇಬ್ರಾಹಿಮ್ ರಹಿಮತುಲ್ಲಾ ಮೊದಲಾದವರು ನನಗೆ ಪತ್ರ ಬರೆದಿದ್ದರು. ನಾನು ಆಮೇಲೆ ದಿಲ್ಲಿಯಿಂದ ಕಲಕತ್ತೆಗೆ ವ್ಹಾಯಿಸರಾಯರನ್ನು ಕಾಣಲು ಹೋಗಿ ಪ್ರಮುಖರ ಒಂದು ಪರಿಷತ್ತನ್ನು ಕೂಡಿಸಬೇಕೆಂದು ತಿಳಿಸಿದೆನು. ಅದಕ್ಕೆ ರೀಡಿಂಗರು ಒಪ್ಪಿದರು. ಆಮೇಲೆ ನಾನು ನನ್ನ ಮಿತ್ರರಾದ ಪಂಡಿತ ಹೃದಯನಾಥ ಕುಂಝರು ಮತ್ತು ಶ್ರೀ ಜಮನಾದಾಸರನ್ನು ಕಂಡೆನು.

ಪ್ರಮುಖರ ಪರಿಷತ್ತಿಗೆ ಗಾಂಧೀಜಿಯವರು ಬರುವಂತೆ ಮಾಡಿರೆಂದು ಅವರಿಗೆ ನಾನು ತಿಳಿಸಿದೆನು. ಅವರು ಗಾಂಧೀಜಿಯವರನ್ನು ಕಂಡು ಮಾತನಾಡಿ ನನಗೆ ತಂತಿಯ ಮೂಲಕ ಗಾಂಧೀಜಿಯವರು ಬರುವರೆಂದು ತಿಳಿಸಿದರು. ನಾನು ಈ ಸಂಗತಿಯನ್ನು ರೀಡಿಂಗರಿಗೆ ತಿಳಿಸಿದೆನು. ಆ ಕೂಡಲೇ ಅವರು ಮಂತ್ರಿಮಂಡಲದ ಎಲ್ಲರನ್ನೂ ಕಲಕತ್ತೆಗೆ ಕರೆಯಿಸಿದರು. ನಾವು ಅದೇ ದಿನ ರಾತ್ರಿ ಸ್ಪೆಶಲ್ ಟ್ರೇನಿನಿಂದ ಕಲಕತ್ತೆಗೆ ಹೊರಟೆವು.

ನಾವು ಗಾಡಿಯಲ್ಲಿದ್ದಾಗಲೇ ಕೈ. ದಾಸರನ್ನು ಬಂಗಾಲ ಸರಕಾರದವರು ಸೆರೆ ಹಿಡಿದರು. ಅಲಹಾಬಾದ ಸ್ಟೇಶನ್ನಿನಲ್ಲಿ ನಮಗೆ ಈ ಸಂಗತಿ ತಿಳಿಯಿತು. ಆಗ ಸ್ಥಿತಿಯು ಮತ್ತೆ ಬೇರೆಯಾಗುವುದೆಂದು ನಾವು ಯೋಚಿಸಿದೆವು. ನಾನು ಕಲಕತ್ತದಲ್ಲಿ ಸರ್. ಚಾರುಚರಣ ಘೋಷ ಇವರಲ್ಲಿರುತ್ತಿದ್ದೆನು. ಆದಕಾರಣ ನಾನು ಗಾಡಿಯಿಂದ ಇಳಿದು ಅಲ್ಲಿಗೆ ಹೋದೊಡನೆ ಹೀಗೆಯೇ ನೀವು ಬರಲು ವ್ಹಾಯಿಸರಾಯರ ಸೆಕ್ರೆಟರಿಗಳು ತಿಳಿಸಿದ್ದಾರೆಂದು ಹೇಳಿದರು. ನಾನು ಹಾಗೇ ಹೊರಟೆನು. ಅಷ್ಟರಲ್ಲಿ ಮುನಸಿ ಈಶ್ವರ ಚರಣರಿಂದ ನನಗೆ ಫೋನ ಬಂದಿತು. ಅವರೂ ಪಂಡಿತ ಮಾಲವೀಜಿಯವರೂ ಒಂದೇ ಕಡೆ ಇದ್ದರು. ಗಾಂಧೀಜಿಯವರು ಬರುವುದಿಲ್ಲವಾಗಿ ಪಂಡಿತಜಿಯವರಿಗೆ ತಂತಿ ಬಂದಿದೆಯೆಂದು ಆ ಫೋನದಿಂದ ತಿಳಿಸಿದರು.

ಗಾಂಧೀಜಿಯವರನ್ನು ಹಿಡಿದುದು.

ನಾನು ರೀಡಿಂಗರಲ್ಲಿಗೆ ಹೋದೆನು. ಗಾಂಧೀಜಿಯವರು ಬರುವುದಿಲ್ಲವೆಂಬ ತಂತಿಯನ್ನು ಅವರು ತೋರಿಸಿ ಕುಂಜರು ಮತ್ತು ಜಮನಾದಾಸರು ಬರುವ ವರೆಗೂ ದಾರಿ ನೋಡೋಣವೆಂದು ಹೇಳಿದರು. ಪರಿಷತ್ತಿನಲ್ಲಿ ಮಾಡುವ ಭಾಷಣವನ್ನು ಅವರು ಸಿದ್ಧಗೊಳಿಸಿದ್ದರು. ಅದರ ಒಂದು ಪ್ರತಿಯನ್ನು ನನಗೆ ಕೊಟ್ಟರು. ಅದನ್ನು ನಾನು ಇನ್ನೂ ಕಾದಿಟ್ಟಿದ್ದೇನೆ. ಪರಿಷತ್ತಿನ ಕಾರ್ಯ ಫಲಕಾರಿಯಾಗುವುದಿಲ್ಲವೆಂದು ಯೋಚಿಸಿದೆವು. ಏಕೆಂದರೆ ಗಾಂಧೀಜಿಯವರು ಬರಲಿಲ್ಲ.

ಪಂಡಿತ ಮಾಲವೀಜ, ಹಸನ ಇಮಾಮ, ಬಿಜಂಟ ಮೊದಲಾದ ಪ್ರಮುಖರು ಬಂದಿದ್ದರು. ಗಾಂಧೀಜಿಯವರ ಮನಸ್ಸನ್ನು ಒಲಿಸಲು ಮಾಲವೀಜಿಯವರು ಬಹು ಪ್ರಯತ್ನಿಸಿದರು. ಚಿತ್ತರಂಜನ ದಾಸರ ಅಭಿಪ್ರಾಯವನ್ನು ತೆಗೆದುಕೊಂಡು ಮಾಲವೀಜಿಯವರು ಮೊದಲು ನನ್ನ ಕಡೆ ಬಂದರು. ನಮ್ಮಿಬ್ಬರಲ್ಲಿ ಮತಭೇದವಿದ್ದರೂ ನಿಮ್ಮ ಬಗ್ಗೆ ನನ್ನಲ್ಲಿ ವಿಶ್ವಾಸವಿರುವುದರಿಂದ ಪ್ರಮುಖರ ಪರಿಷತ್ತು ಫಲಕಾರಿಯಾಗುವಂತಿದ್ದರೆ ನಾನು ಒಪ್ಪಿಗೆ ಕೊಡುತ್ತೇನೆ. ಮತ್ತು ಗಾಂಧೀಜಿಯವರಿಗೂ ಆ ಪ್ರಕಾರ ತಿಳಿಸುತ್ತೇನೆಂದು ದಾಸರು ನನಗೆ ಹೇಳಿಕಳಿಸಿದ್ದರು. ಪ್ರಮುಖರ ಪರಿಷತ್ತು ಫಲಕಾರಿಯಾಗುತ್ತದೆ. ನೀವು ಒಪ್ಪಿಗೆಕೊಡಬೇಕೆಂದೇ ನಾನು ಅವರಿದ್ದಲ್ಲಿಗೆ ಎಂದರೆ ಸೆರೆಮನೆಗೆ ಹೇಳಿಕಳಿಸಿದೆನು.

ಆಮೇಲೆ ಮಾಲವೀಜಿಯವರು ಬಂದು ರೀಡಿಂಗರನ್ನು ತಾವು ಕಾಣಬೇಕಾಗಿದೆಯೆಂದು ನನಗೆ ತಿಳಿಸಿದರು. ನಾನು ಆ ಪ್ರಕಾರ ಅವರಿಗೆ ಹೇಳಿದೆ. ಅವರು ನಮ್ಮಿಬ್ಬರನ್ನೂ ಕರೆಸಿದರು. ಎಲ್ಲಾ ಸಂಗತಿಗಳನ್ನೂ ಮಾತನಾಡಿದೆವು. ಗಾಂಧೀಜಿಯವರಿಗೆ ತಾವು ತಂತೀ ಕೊಡುವುದಾಗಿ ಮಾಲವೀಜಿಯವರು ಹೇಳಿದರು. ಆಮೇಲೆ ಸರಕಾರಿ ತಂತಿಯಿಂದೇ ಗಾಂಧೀಜಿಯವರಿಗೆ ತಂತಿ ಮಾಡಿದ್ದಾಯಿತು. ಅವರು ಬರಲಿಲ್ಲ.

ಖಿಲಾಫತ್ತಿನ ಕೈದಿಗಳ ಬಿಡುಗಡೆಯಾದ ವಿನಾ ಅವರು ಬರುವುದಿಲ್ಲವೆಂದು ತೋರಿತು. ಪರಿಷತ್ತಿನ ನಂತರ ಖಿಲಾಫತ್ ಕೈದಿಗಳು ಬಿಡಲ್ಪಡುವರೆಂದು ನಾವು ಯೋಚಿಸಿದ್ದೆವು. ಪುನಃ ಸಂಧಿಗಾಗಿ ಪ್ರಯತ್ನಿಸಲು ಯಾವ ಪ್ರಯೋಜನವೂ ಆಗಲಿಲ್ಲ. ಗಾಂಧೀಜಿಯವರನ್ನು ಹಿಡಿಯುವ ವಿಚಾರವಾಗಿ ಲಾರ್ಡ ರೀಡಿಂಗರು ನನ್ನನ್ನು ವಿಚಾರಿಸಿದರು. ನಾನು ಅದನ್ನು ತುಂಬಾ ವಿರೋಧಿಸಿದೆನು. ಅವರು ನನ್ನ ವಿಚಾರವನ್ನು ಸಹಾನುಭೂತಿಪೂರ್ವಕ ಲಾಲಿಸಿದರು. ಆದರೆ ನಿರ್ಣಯವು ಮಾತ್ರ ನನ್ನ ವಿರೋಧವಾಗಿ ಪರಿಣಮಿಸಿತು.

ಗಾಂಧೀಜಿಯವರನ್ನು ಹಿಡಿಯಬಾರದಾಗಿ ನಾನು ಹೇಳಿದುದು ಕೆಲವು ಅಧಿಕಾರಿಗಳಿಗೆ ಸರಿಬರಲಿಲ್ಲ. ಅವರು ನನ್ನನ್ನು ವಿರೋಧಿಸಿದರು. ಆದರೆ ಒಬ್ಬ ಸುಪ್ರಸಿದ್ಧ ಅಧಿಕಾರಿಗಳು ಮಾತ್ರ ನನ್ನ ವಿಚಾರವನ್ನು ಅಭಿನಂದಿಸಿದರು. ಆ ದಿನ ರಾತ್ರಿ ನಾನು ಲಾರ್ಡ ರೀಡಿಂಗರಿಗೆ ಒಂದು ವಿಸ್ತಾರವಾದ ಪತ್ರವನ್ನು ಬರೆದೆನು. ಅದು ಒಂದು ರೀತಿಯಲ್ಲಿ ನನ್ನ ಕೆಲಸಕ್ಕೆ ರಾಜಿನಾಮೆಯಾಗಿಯೇ ಪರಿಣಮಿಸುವಂತಿದ್ದಿತು. ಆ ದಿನ ರಾತ್ರಿ ನನಗೆ ತುಂಬಾ ಚಿಂತೆ. ಲಾರ್ಡ ರೀಡಿಂಗರು ಅದೇ ರಾತ್ರಿ ತಮ್ಮ ನಿರ್ಣಯವನ್ನೂ ಬೇರೆ ಮಾಡಿ ಗಾಂಧೀಜಿಯವರನ್ನು ಹಿಡಿಯಬಾರದಾಗಿ ಸೂಚಿಸಿದರು. ಮರುದಿನ ನನ್ನನ್ನು ಕರೆಸಿ ನಿಮ್ಮ ವಿಚಾರ ಸರಿಯಾಗಿದೆ. ನಾವೇನೋ ನಮ್ಮ ಗಡಿ ಮೀರಿ ಹೋಗಿದ್ದೇವೆ. ಇಂಗ್ಲಂಡಿನಲ್ಲಿ ನಮ್ಮ ವಿರುದ್ಧ ಗಲಾಟೆಯಾಗಬಹುದೆಂದು ಹೇಳಿದರು. ಹಾಗೆ ವಿರೋಧವಾಯಿತೆಂದು ೧೯೩೩ ರಲ್ಲಿ ಮ್ಯಾಂಟೆಗೋರವರು ನನಗೆ ಲಂಡನ್ನಿನಲ್ಲಿ ತಿಳಿಸಿದರು. ಲಾರ್ಡ ರೀಡಿಂಗರು ಬಿಟ್ಟರೂ ಕೆಲವು ವಾರಗಳ ನಂತರ ಮುಂಬೈ ಸರಕಾರದವರು ಗಾಂಧೀಜಿಯವರನ್ನು ಹಿಡಿದರು."

ಈ ಸಂಗತಿಗಳಿಂದ ಲಾರ್ಡ ರೀಡಿಂಗ್‌ರವರ ಉದಾರತನವೂ, ರಾಜಕಾರಣ ಪಟುತ್ವವೂ, ಗೊತ್ತಾಗುವುದಿಲ್ಲವೇ?

ಮೇಯೋ ಅಮ್ಮಗೆ ಮಂಗಳಾರತಿ!

ಮಿಸ್. ಮೇಯೋ ಅಮ್ಮನು 'ಮದರ ಇಂಡಿಯಾ' ಎಂಬ ಪುಸ್ತಕವನ್ನು ಬರೆದು ಹಿಂದುಸ್ಥಾನದವರಿಗಂತೂ ಬಹು ಪರಿಚಿತಳಾಗಿದ್ದಾಳಷ್ಟೆ. ಈ ಅಮ್ಮ ಹಿಂದುಸ್ಥಾನದವರ ಅಹಿತಕ್ಕಾಗಿ ಇನ್ನೊಂದು ಪುಸ್ತಕವನ್ನು ಬರೆದಿದ್ದಾಳೆ. ಅದರ ಹೆಸರು 'ಫೇಸ್ ಆಫ್ ಮದರ ಇಂಡಿಯಾ' ಎಂಬುದಾಗಿದೆ. ಅದು ಹಿಂದುಸ್ಥಾನಕ್ಕೆ ಬರಬಾರದೆಂದೇ ಸರಕಾರದವರು ಅಪ್ಪಣೆ ಮಾಡಿ ಅಮ್ಮಗೆ ಚೆನ್ನಾಗಿ ಮಂಗಳಾರತಿ ಮಾಡಿದ್ದಾರೆ.

ಈ ಪುಸ್ತಕದಲ್ಲಿ ಅಂತಹ ಅಹಿತದ ಸಂಗತಿಗಳೇನಿರಬಹುದೆಂಬ ಶಂಕೆಯುಂಟಾಗುತ್ತದಷ್ಟೆ. ಅದಕ್ಕಾಗಿ ಆ ಪುಸ್ತಕದ ಪರಿಚಯವನ್ನು ಸ್ವಲ್ಪ ಮಟ್ಟಿಗೆ ಇಲ್ಲಿ ಕೊಟ್ಟಿದೆ. ಅದರಿಂದ ಸರಕಾರದ ಅಪ್ಪಣೆ ಯೋಗ್ಯವಾದುದೆಂದೇ ಸ್ಪಷ್ಟವಾಗುವುದು.

ಈ ಪುಸ್ತಕದಲ್ಲಿ ೪೦೭ ಚಿತ್ರಗಳಿವೆ. ಅವುಗಳಲ್ಲಿ ಹಿಂದುಗಳನ್ನು ನಿಂದಿಸುವಂತಹುಗಳೇ ಹೆಚ್ಚು. ಮುಸಲ್ಮಾನರ ಸ್ತುತಿ ಮತ್ತು ಹಿಂದುಗಳ ನಿಂದ್ಯೆ ಇವೇ ಆ ಪುಸ್ತಕದಲ್ಲಿಯ ಮುಖ್ಯ ಸಂಗತಿಗಳು. ಗಾಂಧೀಜಿಯವರನ್ನು ಯಥೇಚ್ಛವಾಗಿ ಆ ಪುಸ್ತಕದಲ್ಲಿ ಬೈದದ್ದಾಗಿದೆ. ಮುಸಲ್ಮಾನರನ್ನು ನಿರ್ಮೂಲ ಮಾಡುವುದೇ ಗಾಂಧೀಜಿಯವರ ಎಲ್ಲ ಕಾರ್ಯಗಳ ಉದ್ದೇಶವಂತೆ! ಹಿಂದುಗಳಿಗೆ ಮೋಸ ಹೋಗಿ ಇಂಗ್ಲಿಷರ ವಿರುದ್ಧವಾಗಿ ಏನನ್ನೂ ಮಾಡಬೇಡಿರೆಂದು ಮುಸಲ್ಮಾನರಿಗೆ ಈ ಅಮ್ಮನು ಕಿವಿಮಾತನ್ನು ಹೇಳಿದ್ದಾಳೆ.

ಸರ್. ಸಸ್ಲೆ ರೀಡ್ ಸಂಪಾದಕ 'ಟಾಯಿಮ್ಸ್ ಆಫ್ ಇಂಡಿಯಾ' ಇವರು ಈ ಪುಸ್ತಕದ ವಿಚಾರವಾಗಿ ಹೀಗೆ ಹೇಳಿದ್ದಾರೆ—

"ಮುಸಲ್ಮಾನ್ ಮತ್ತು ಮುಸಲ್ಮಾನ್ ಧರ್ಮಗಳ ಸ್ತುತಿ, ಹಿಂದು ಮತ್ತು ಹಿಂದು ಧರ್ಮಗಳ ವಿಪರ್ಯಾಸಾತ್ಮಕ ದೃಶ್ಯ ಇವುಗಳನ್ನು ವ್ಯಕ್ತಗೊಳಿಸುವುದೇ ಲೇಖಕಿಯ ಉದ್ದೇಶವಾಗಿದೆ. ಬೋಲನ್ ಕಣಿವೆ ಮಾರ್ಗವಾಗಿ ಹಿಂದುಸ್ಥಾನಕ್ಕೆ ಬಂದು ರಕ್ತಪಾತ, ಕೊಲೆಸುಲಿಗೆ, ಗ್ರಾಮದಹನಗಳನ್ನು ಮಾಡಿ ಹೋದ ಮುಸಲ್ಮಾನರು ಮಿಸ್ ಮೇಯೋ ಇವರಿಗೆ ವಿಭೂತಿಗಳಾಗಿ ತೋರಿದ್ದಾರೆ.

ಆದರೆ ಅಕಬರ ಬಾದಶಹನಂತಹ ಮಹಾಪುರುಷನ ಸ್ತುತಿ ಮಾಡುವುದು ಲೇಖಕಿಗೆ ಸರಿ ತೋರಿಲ್ಲ. ಆತನ ಹತ್ತಿರ ಇದ್ದ ದೂರದರ್ಶಿ ಹಿಂದು ಮಂತ್ರಿ ರಾಜಾ ತೋಡರಮಲ್ಲನ ನೆನವು ಕೂಡಾ ಆಗಿಲ್ಲ. ಹಿಂದು ಧರ್ಮದಲ್ಲಿ ತ್ಯಾಜ್ಯವಾದ ಅನೇಕ ಸಂಗತಿಗಳಿರುವುದೇನೋ ನಿಜ. ಜಗತ್ತಿನ ಶ್ರೇಷ್ಠ ರಾಷ್ಟ್ರಗಳ ಪಂಕ್ತಿಯಲ್ಲಿ ಹಿಂದುಸ್ಥಾನವೂ ಸೇರಬೇಕಾದರೆ ಅದಷ್ಟು ಜಾಗ್ರತೆ ಹಿಂದು ಸಮಾಜ ಸುಧಾರಣೆ ಹೊಂದಬೇಕಾದುದೂ ಅಗತ್ಯ. ಆದರೆ ರಾಜಾ ರಾಮಮೋಹನ ರಾಯರಿಂದ ಈ ವರೆಗೆ ಆಗಿರುವ ಅನೇಕ ಸಮಾಜ ಸುಧಾರಕ ಕಾರ್ಯಗಳನ್ನು ನಿರ್ಲಕ್ಷಿಸುವಂತಿಲ್ಲ. ಗಾಂಧಿಯವರ ಚಟುವಟಿಕೆಯಿಂದ ಹಿಂದುಸ್ಥಾನಕ್ಕೆ ಕೆಲವು ಸಂಗತಿಗಳಲ್ಲಿ ಅಹಿತವಾಗಿದೆಯೆಂದು ಕೆಲವರು ಹೇಳುತ್ತಿದ್ದರೂ ಅಸ್ಪೃಶ್ಯತಾ ನಿವಾರಣೆಯ ಅವರ ಮಹತ್ಕಾರ್ಯವನ್ನು ಉಲ್ಲೇಖಿಸದಿದ್ದುದು ಅನ್ಯಾಯವೇ ಸರಿ."

ಸರ್. ಅಲ್‌ಫ್ರೆಡ್ ವಾಟ್‌ಸನ್ ಸಂಪಾದಕ 'ಸ್ಟೇಟ್ಸ್‌ಮನ್' ಇವರು ಅಮ್ಮನ ಈ ಹೊಸ ಕೂಸಿನ ಗುಣ ಲಕ್ಷಣಗಳನ್ನು ಹೀಗೆ ತಿಳಿಸಿದ್ದಾರೆ.

"ಹಿಂದು ಮುಸಲ್ಮಾನರ ದೊಂಬಿಯ ಪ್ರಸಂಗ, ಹಿಂದು ಧರ್ಮದ ನಿಂದ್ಯ ನಡವಳಿಕೆಗಳ ದೃಶ್ಯ, ಗಾಂಧಿಯವರ ಶಾಸನಭಂಗದ ನೋಟ ಇವೇ ಚಿತ್ರಗಳಲ್ಲಿಯ ಮುಖ್ಯ ಸಂಗತಿಗಳು. ಹಿಂದು ಮುಸಲ್ಮಾನರ ಕಲಹಕ್ಕೆ ಭೀಕರ ಸ್ಥಿತಿಯಿದೆಯೆಂದು ತೋರಿಸುವುದೇ ಈ ಲೇಖಕಿಯ ಉದ್ದೇಶ. ಹಿಂದುಸ್ಥಾನದಲ್ಲಿ ಬ್ರಿಟಿಶ್ ಪ್ರಭುತ್ವದ ಸಾಮರ್ಥ್ಯವು ಕಿಂಚಿತ್ ಕಡಿಮೆಯಾದರೆ ಹಿಂದು ಮುಸಲ್ಮಾನರ ಯುದ್ಧ ಪ್ರಾರಂಭವಾಯಿತೆಂದೇ ತಿಳಿಯಬೇಕೆಂದು ಮೇಯೋರವರ ಹೇಳಿಕೆ."

ಇಂತಹ ದುಷ್ಟ ವಿಚಾರಗಳ ಪುಸ್ತಕವು ಹಿಂದುಸ್ಥಾನದಲ್ಲಿ ಬಂದರೆ ಅದರಿಂದ ಅನರ್ಥ ಸಂಭವಿಸುವುದೆಂದು ವಿಲಾಯತಿಯಲ್ಲಿ ಶ್ರೀ ಬಿ. ಬಿ. ರಾಯ ಚೌಧರಿ ಮೊದಲಾದವರು ಮುಖ್ಯ ಮಂತ್ರಿಗಳ ವರೆಗೂ ಈ ಸಂಗತಿಯನ್ನು ಮುಟ್ಟಿಸಿದರು. ಹಿಂದುಸ್ಥಾನದಲ್ಲಿರುವ ಜಾತಿಯ ಕಲಹಾಗ್ನಿಯನ್ನು ಈ ಪುಸ್ತಕವು ಹೆಚ್ಚಿಸುತ್ತದೆಂದು ಹಿಂದುಸ್ಥಾನ ಸರಕಾರದವರು ಆ ಪುಸ್ತಕ ಈ ದೇಶದಲ್ಲಿ ಬರಬಾರದೆಂದು ಕಟ್ಟು ಮಾಡಿದುದು ಯುಕ್ತವಾಗಿಲ್ಲವೆ?

ನಾನೇಕೆ ಆರ್ಯ ಸಮಾಜ ಬಿಟ್ಟೆ?

ಸುಪ್ರಸಿದ್ಧ ಆರ್ಯ ಸಮಾಜ ಪ್ರಚಾರಕರಾಗಿದ್ದ ಶ್ರೀ ಸ್ವಾಮಿ ಕರ್ಮಾನಂದಜಿಯವರು ಆರ್ಯ ಸಮಾಜವನ್ನು ಬಿಟ್ಟು ಜೈನ ಮತವನ್ನು ಸ್ವಿಕರಿಸಿದರಷ್ಟೆ. ಅವರು ತಾವು ಆರ್ಯ ಸಮಾಜಕ್ಕೆ ಶರಣು ಹೊಡೆದು ಜೈನ ಮತ ಸ್ವೀಕರಿಸಿದ ಕಾರಣವನ್ನು ಪ್ರಸಿದ್ಧಗೊಳಿಸಿದ್ದಾರೆ. ಅದರ ಮುಖ್ಯಾಂಶ ಹೀಗಿದೆ.—

"ನಾನು ೩೦ ವರುಷಗಳ ಹಿಂದೆ ದಿಲ್ಲಿಯಲ್ಲಿ ಆರ್ಯ ಸಮಾಜದ ವ್ಯಾಖ್ಯಾನಗಳನ್ನು ಕೇಳಲಿಕ್ಕೆ ಹೋಗುತ್ತಿದ್ದೆ. ಆಗ ಆ ಸಮಾಜದ ತತ್ವಗಳು ನನಗೆ ಒಪ್ಪಿಗೆಯಾದವು. ಆಮೇಲೆ ಆ ಸಮಾಜದ ಗ್ರಂಥಗಳನ್ನು ಓದಲಾರಂಭಿಸಿದೆನು. ವೇದಗಳು ದೇವರಿಂದ ಬಂದವುಗಳೆಂಬ ಮಾತು ನನಗೆ ಅದೇಕೋ ಒಪ್ಪಿಗೆಯಾಗುತ್ತಿರಲಿಲ್ಲ. ಅನೇಕ ಪಂಡಿತರನ್ನು ಕೇಳಿದೆ. ಅವರು ಕೂಡಾ ನಿರುತ್ತರರಾಗುತ್ತಿದ್ದರು.

ಸ್ವಾಮಿ ದರ್ಶನಾನಂದಜಿಯವರು ಆರ್ಯ ಸಮಾಜದಲ್ಲಿಯೇ ಮಹಾಪಂಡಿತರಾಗಿದ್ದರು. ಅವರಲ್ಲಿ ಹೋಗಿ ಮಾತನಾಡಿದೆ. ಅವರು ರೋಗದಿಂದ ಬಳಲುತ್ತಿದ್ದರೂ ತಮ್ಮ ತರುವಾಯ ಜೈನರನ್ನು ಸೋಲಿಸುವಂತಹ ಆರ್ಯ ಸಮಾಜದ ಪಂಡಿತರು ಇಲ್ಲವಲ್ಲಾ ಎಂದು ಚಿಂತಿಸುತ್ತಿದ್ದರು. ನಾನು ಅವರ ಚಿಂತೆಯನ್ನು ನೋಡಿ ಜೈನರನ್ನು ಸೋಲಿಸುವ ಸಾಮರ್ಥ್ಯ ಪಡೆಯಬೇಕೆಂದು ನಿರ್ಧರಿಸಿದೆನು. ಸಂಸ್ಕೃತದಲ್ಲಿ ಪಾಂಡಿತ್ಯ ಹೊಂದದೆ ಇದು ಸಾಧ್ಯವಿರಲಿಲ್ಲ. ಆದಕಾರಣ ನಾನು ಸಂಸ್ಕೃತವನ್ನು ಕಲಿಯಲು ಕಾಶಿಗೆ ಹೋಗಿ ಆಮೇಲೆ ಶಿವಪುರಕ್ಕೆ ಬಂದು ಸಂಸ್ಕೃತವನ್ನು ಕಲಿತೆನು.

ಆ ಬಳಿಕ ವೇದ ಮತ್ತು ಜೈನರ ಧರ್ಮ ಗ್ರಂಥಗಳನ್ನು ಓದಿ ಶಾಸ್ತ್ರಾರ್ಥಕ್ಕಾಗಿ ಈ ದೇಶದ ಎಲ್ಲಾ ಭಾಗಗಳಲ್ಲಿಯೂ ಸಂಚರಿಸಿದೆನು. ನಾನು ಒಂದು ಸಾವಿರಕ್ಕೆ ಮೇಲ್ಪಟ್ಟಷ್ಟು ಸಾರೆ ಧಾರ್ಮಿಕ ವಿವಾದಗಳನ್ನು ನಡೆಸಿರಬಹುದು. ಅನೇಕ ಜೈನ ಪಂಡಿತರನ್ನು ಸೋಲಿಸಿದೆನು. ಜೈನರ ಮೇಲೆ ಶಾಸ್ತ್ರಾರ್ಥಕ್ಕೆ ಆಕ್ರಮಣವನ್ನು ಈ ಕಾಲದಲ್ಲಿ ನನ್ನಷ್ಟು ಯಾರೂ ಮಾಡಿಲ್ಲ. ರಾಜಕಾರಣದಲ್ಲಿ ಸೇರಿ ಶಾಸನಭಂಗದ ಕಾಲಕ್ಕೆ ಶಿಕ್ಷೆಯನ್ನೂ ಅನುಭವಿಸಿದೆನು.

ಜೈನರ ಸ್ಯಾದ್ವಾದವು ನನಗೆ ಬಹು ಒಪ್ಪಿಗೆಯಾಯಿತು. ವೇದಗಳನ್ನು ದೇವರು ಹೇಳಿದ್ದಾನೆಂಬ ಆರ್ಯ ಸಮಾಜದವರ ಪ್ರತಿಪಾದನೆ ಕೊನೆಗೂ ನನಗೆ ಒಪ್ಪಿಗೆಯಾಗಲಿಲ್ಲ. ಜಗದಾದಿಯಲ್ಲಿ ತರುಣ ತರುಣಿಯರಾಗಿಯೇ ಜನರು ಹುಟ್ಟಿದರೆಂಬ ಈ ಆರ್ಯ ಸಮಾಜದವರ ಹೇಳಿಕೆ ಸುಳ್ಳೆಂದು ನನಗೆ ಮನವರಿಕೆಯಾಯಿತು. ಈ ಸಂಗತಿಗಳನ್ನೆಲ್ಲಾ ಚರ್ಚಿಸಿದರೆ ಉತ್ತರವೇನೂ ಯಾರಿಂದಲೂ ಸಮರ್ಪಕವಾಗಿ ದೊರೆಯಲಿಲ್ಲ. ಕೊನೆಗೆ ಈ ಮತವನ್ನೇ ಬಿಟ್ಟು ಜೈನರ ತತ್ವವೇ ಸರಿಯೆಂದು ಆ ಮತವನ್ನು ಅಂಗೀಕರಿಸಿದ್ದೇನೆ."

ಶ್ರೀಮಂತರಿಗೆ ಆದರ್ಶನಾದ ಮಹಾಪುರುಷ.

ದಾನಶೂರ ಅಂಡ್ರ್ಯು ಕಾರ್ನೇಗಿ.

ಅತುಲವಾದ ದ್ರವ್ಯ ಸಂಗ್ರಹ ಮತ್ತು ಅದಕ್ಕೆ ತಕ್ಕಂತಹ ದಾನಗುಣ, ಅಗಾಧವಾದ ಪರಿಶ್ರಮ ಮತ್ತು ಅದಕ್ಕೆ ತಕ್ಕಂತಹ ಉಲ್ಹಾಸವೃತ್ತಿ, ಅಪಾರವಾದ ಔದಾರ್ಯ ಮತ್ತು ಅದಕ್ಕನುಕೂಲವಾದ ವಿಲಕ್ಷಣ ಉದ್ಯೋಗಪ್ರೀತಿ; ಅತರ್ಕ್ಯವಾದ ವಿದ್ಯಾಭಿರುಚಿ ತದನುರೂಪವಾದ ಶಾಂತತಾ ಪ್ರೀತಿ; ಈ ಸದ್ಗುಣಗಳು ಒಂದೇ ಒಂದು ಮಾನವ ವ್ಯಕ್ತಿಯಲ್ಲಿ ತೋರಿ ಬರುವದು ಅಪೂರ್ವವಾಗಿದೆ ಆದರೆ ಕಾರ್ನೇಗಿಯವರ ಆ ಉದ್ಯೋಗ ಶೀಲತೆ, ಆ ಉದಾರತನ, ಆ ಶಾಂತತಾ ಪ್ರಯತ್ನಗಳು ಅವರನ್ನು ಲೋಕೈಕ ವಿಖ್ಯಾತರನ್ನಾಗಿ ಮಾಡಿವೆ ಆ ಮಹಾ ಪುರುಷರ ಜನ್ಮ ಶತಾಬ್ದಿ ಸಮಾರಂಭವು ಕೆಲವು ದಿವಸಗಳ ಪೂರ್ವದಲ್ಲಿ ಅತ್ಯಂತ ವಿಜೃಂಭಣೆಯಿಂದ ಜಗತ್ತಿನ ಎಲ್ಲ ಭಾಗಗಳಲ್ಲ ನೆರವೇರಿಸಲ್ಪಟ್ಟಿತು.

ಬಾಲ್ಯ ಜೀವನ.

೧೮೩೫ ನೆಯ ಇಸ್ವಿ ನವ್ಹಂಬರ ೨೫ ನೆಯ ತಾರೀಖಿನ ದಿವಸ ಸ್ಕಾಟಲಂಡ ದೇಶದ ಡಂಫರ್ಮ್ಲೈನ್ ಎಂಬ ಒಂದು ಸಣ್ಣ ಹಳ್ಳಿಯಲ್ಲಿ ಈ ಪುಣ್ಯ ಪುರುಷನು ಒಂದು ದರಿದ್ರ ಕುಟುಂಬದಲ್ಲಿ ಜನ್ಮವೆತ್ತಿದನು. ಕುಟುಂಬದ ಕಟುತರ ದಾರಿದ್ರ್ಯದ ಮೂಲಕ ಕಾರ್ನೇಗಿಯ ತಂದೆಯು ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಅಮೇರಿಕೆಗೆ ಹೊರಟುಬಿಟ್ಟನು. ಕಾರ್ನೇಗಿಯು ಅಗ್ಗೆ ೧೩ ವರ್ಷ ವಯಸ್ಸಿನವನಾಗಿದ್ದರೂ ಶಾಲೆಯ ಬಾಗಿಲನ್ನು ಕಂಡಿರಲಿಲ್ಲ. ಅಮೇರಿಕೆಯಲ್ಲಿ ಅರಿಪೊಟ್ಟೆಯಿಂದಿದ್ದ, ಏನಾದರೊಂದು ಉದ್ಯೋಗ ದೊರಕಿಸಲು ಅವನು ಅತ್ತಿಂದಿತ್ತ ಅಲೆಯುಹತ್ತಿದನು. ಕೊನೆಗೆ ಅವನು ಮಹತ್ಪ್ರಯಾಸದಿಂದ ತಂತಿ ಸಮಾಚಾರ ತಲುಪಿಸುವ ಉದ್ಯೋಗವನ್ನು ಕೈಕೊಂಡನು.

ವಿದ್ಯಾ ಲಾಲಸೆ.

ಬಾಲ ಕಾರ್ನೇಗಿಗೆ ವಿದ್ಯೆಯ ಮೇಲೆ ಬಲು ಲಾಲಸೆ. ಆದರೆ ಅವನಿಗೆ ಪುಸ್ತಕ ದೊರೆಯುವುದು ಹೇಗೆ? ಆ ಕಾಲಕ್ಕೆ ಪಿಟ್ಸಬರ್ಗ ಎಂಬ ಸಭ್ಯ ಗೃಹಸ್ಥನು ಕೂಲಿಕಾರರ ಮಕ್ಕಳಿಗಾಗಿ ಒಂದು ಉಚಿತ ವಾಚನಾಲಯವನ್ನು ಏರ್ಪಡಿಸಿದ ಸಂಗತಿಯನ್ನು ತಿಳಿದು ಅತ್ಯಾನಂದದಿಂದ ಆ ವಿದ್ಯಾ ಪ್ರೇಮಿಯು ಒಂದು ದಿನ ಆ ವಾಚನಾಲಯಕ್ಕೆ ಹೋದನು. ಆದರೆ ವಾಚನಾಲಯದ ಚಾಲಕನು ಅವನನ್ನು ಒಳಗೆ ಬಿಡಲಿಲ್ಲ. ಕಾರ್ನೇಗಿಗೆ ಆಶ್ಚರ್ಯವಾಯಿತು ವಿಸ್ಮಯದಿಂದ ಅವನು ಚಾಲಕನ ಮೋರೆಯನ್ನು ನೋಡಹತ್ತಿದನು. 'ಇದನ್ನು ಕೂಲೀ ಮಾಡುವ ಬಾಲಕರಿಗಾಗಿ ತೆರೆಯಲಾಗಿದೆ' ಎಂದು ಚಾಲಕನು ನುಡಿದನು. 'ನಾನೂ ಒಬ್ಬ ಕೂಲಿಯಿಂದಲೇ ಉಪಜೀವಿಸುವವನು. ತಂತೀ ಒಯ್ಯುವ ಕೆಲಸವು ಕೂಲಿಯಲ್ಲವೊ?' ಎಂದು ಚಿಕ್ಕ ಕಾರ್ನೇಗಿಯು ದಿಟ್ಟತನದಿಂದ ನುಡಿದನು. ಚಾಲಕನಿಗೆ ಇದಾವುದೂ ತಿಳಿಯಲಿಲ್ಲ. ಅವನು ಕಾರ್ನೇಗಿಯನ್ನು ಹೊರಗೆ ಹಾಕಿಬಿಟ್ಟನು.

ಸಂತಾಪಾತಿಶಯದಿಂದ ಕಾರ್ನೇಗಿಯು ವಾಚನಾಲಯದ ಯಜಮಾನನಾದ ಪಿಟ್ಸಬರ್ಗನಿಗೆ ಒಂದು ಪತ್ರ ಬರೆದನು. ಪಿಟ್ಸಬರ್ಗನಿಗೆ ಹುಡುಗನ ಓದುವ ಅಭಿರುಚಿಯನ್ನು ಕಂಡು ಕೌತುಕವೆನಿಸಿತು. 'ಕೂಲಿಕಾರ'ರಿಗಾಗಿ ಎಂದು ಅವನು ಮಾಡಿದ ವ್ಯಾಖ್ಯೆಯಲ್ಲಿ ಕಾರ್ನೇಗಿಯು ಕಾಯಕವು ಬರುತ್ತಿರಲಿಲ್ಲವಾದರೂ ಅವನಿಗೆ ವಾಚನಾಲಯವನ್ನು ಉಪಯೋಗಿಸಿಕೊಳ್ಳಲು ಅಪ್ಪಣೆ ಕೊಟ್ಟನು ಕಾರ್ನೇಗಿಯು ಅಂದಿನಿಂದ ಪ್ರತಿ ಶನಿವಾರವೂ ಉತ್ಕೃಷ್ಟವಾದ ಒಂದೊಂದು ಪುಸ್ತಕವನ್ನು ಮನೆಗೆ ತೆಗೆದುಕೊಂಡು ಹೋಗಿ ಆಸ್ಥೆಯಿಂದ ಓದಹತ್ತಿದನು.

ಉದ್ಯೋಗ ಪ್ರೀತಿ.

ತರುಣ ಕಾರ್ನೇಗಿಯು ತನ್ನ ಕಾರ್ಯವನ್ನು ಒಳ್ಳೇ ಜಾಗರೂಕತೆಯಿಂದ ಮಾಡುತ್ತ ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದುತ್ತ ಬಂದನು. ತಾರು ತಲುಪಿಸುವ ತನ್ನ ಉದ್ಯೋಗ ಮಾಡಿಕೊಂಡು ಉಳಿದ ವೇಳೆಯಲ್ಲಿ ಅವನು ತಾರಾಯಂತ್ರದ ವಿಷಯಕವಾದ ಗ್ರಂಥಗಳನ್ನು ಓದುತ್ತಿದ್ದನು. ಮುಂದೆ ಮೂರು ವರ್ಷಗಳಲ್ಲಿ ಅವನು ತಾರಾಯಂತ್ರದ ಚಾಲಕನಾಗಿ ನಿಯಮಿಸಲ್ಪಟ್ಟನು. ಮುಂದೆ ಎರಡು ವರ್ಷಗಳಲ್ಲಿ ಅವನು ತನ್ನ ಪಿತೃಗೃಹವನ್ನು ಮಾರಿ ೫೦೦ ಡಾಲರಿನ ಭಾಂಡವಲು ಹಾಕಿ ರೇಲ್ವೆಯ "ಸ್ಲೀಪಿಂಗ ಕಾರ" ತಯಾರ ಮಾಡಿದನು. ಇವನ ಈ ಕಾರ್ಯದಲ್ಲಿ ವೂಡ್ರುಫ ಎಂಬ ಇವನಷ್ಟೇ ಸಾಹಸಿಯಾದ ಮಿತ್ರನು ನೆರವಾದನು. ಇವನ ಕೌಶಲ್ಯವನ್ನು ಕಂಡು ೧೮೫೯ ರಲ್ಲಿ ಸ್ಕಾಟ್ ರೇಲ ರೋಡ ಕಂಪನಿಯವರು ಇವನನ್ನು ತಮ್ಮ ಉಪಾಧ್ಯಕ್ಷನನ್ನಾಗಿ ಮಾಡಿಕೊಂಡರು.

ಆ ಕಾಲಕ್ಕೆ ಅಮೇರಿಕೆಯಲ್ಲಿ ಯುದ್ಧವು ಪ್ರಾರಂಭವಾಯಿತು. ಆ ಕಾಲಕ್ಕೆ ರೇಲ್ವೆಯು ಇನ್ನೂ ಪ್ರಚಾರದಲ್ಲಿರಲಿಲ್ಲ. ಇದ್ದವುಗಳೆಲ್ಲ ಬಹು ಹೀನಾವಸ್ಥೆಯಲ್ಲಿದ್ದವು. ಆದುದರಿಂದ ಕಾರ್ನೇಗಿಯು ಭಯಂಕರ ಕಬ್ಬಿಣ ಸಂಗ್ರಹವನ್ನು ಮಾಡಿ ಸ್ವತಃ ರೇಲ್ವೆ ಡಬ್ಬಿಗಳನ್ನೂ ಎಂಜಿನಗಳನ್ನೂ ತಯಾರಿಸಹತ್ತಿದನು. ಅವನು ಸಿದ್ಧಪಡಿಸಿದ ಉಕ್ಕಿನ ಸೇತುವೆಗಳಂತೂ ಒಳ್ಳೇ ಉಪಯುಕ್ತವಾದವು. ಯುದ್ಧದ ಕಾಲದಲ್ಲಿ ಕಾರ್ನೇಗಿಯ ಈ ಪ್ರಚಂಡ ಸಾಹಸಕ್ಕೆ ಮಹತ್ತ್ವದ ಯಶವುಂಟಾಯಿತು. ಆದರಿಂದ ಅವನ ಮೇಲೆ ಸುವರ್ಣ ವೃಷ್ಟಿಯೇ ಆಯಿತೆನ್ನಬಹುದು. ಆ ಕಾರ್ಯಾಲಯದಿಂದ ಕಾರ್ನೇಗಿಗೆ ಪ್ರತಿವರ್ಷ ೪೦ ಲಕ್ಷ ಡಾಲರುಗಳ (೧ ಡಾಲರ ೩॥ ರೂಪಾಯಿ) ಲಾಭವಾಗಹತ್ತಿತು. ಸ್ವಲ್ಪ ವರ್ಷಗಳಲ್ಲಿಯೇ ಕಾರ್ನೇಗಿಯು ಸಾವಿರ ಎಕರೆ ಭೂಮಿಯನ್ನು ಕೊಂಡುಕೊಂಡು ಥಾಮ್ಸನ್ ಸ್ಟೀಲ ವರ್ಕ್ಸ ಎಂಬ ಕಬ್ಬಿಣ ಕಾರ್ಯಾಲಯವನ್ನು ಸ್ಥಾಪಿಸಿದನು ೨೦ ವರ್ಷಗಳ ಅವಧಿಯಲ್ಲಿ ಆ ಕಂಪನಿಯ ಲಾಭವು ಪೂರ್ವದ ೬೦ ಪಟ್ಟು ಬೆಳೆಯಿತು.

ದಾನಶೂರ ಕಾರ್ನೇಗಿ.

೧೯೦೦ ನೆಯ ಇಸ್ವಿಯ ಕಾಲ ಕಾರ್ನೇಗಿಯು ಇಹಲೋಕದ ಕುಬೇರನಾಗಿದ್ದುದು. ಅವನ ಧನವೆಂದರೆ ನಾಣ್ಯಗಳ ಒಂದು ಪರ್ವತವೇ ಆಗಬಹುದು. ಆದರೆ ಆಶ್ಚರ್ಯದಲ್ಲಿ ಆಶ್ಚರ್ಯ! ಕಾರ್ನೇಗಿಯು ಅದೇ ವರ್ಷ ಬರೆದ ತನ್ನ "The gospel of Wealth" ಎಂಬ ಪುಸ್ತಕದಲ್ಲಿ ಈ ಪ್ರಕಾರ ಬರೆದಿದ್ದನು— "ಶ್ರೀಮಂತನಾಗಿದ್ದು ಹಾಗೇ ಸತ್ತು ಹೋಗುವ ಮನುಷ್ಯನು ಅಗೌರವದಿಂದ ಸಾಯುತ್ತಾನೆ. ಧನವುಳ್ಳ ಗೃಹಸ್ಥನೆಂದರೆ ಅವನೊಬ್ಬ ತನ್ನ ಬಡಬಂಧುಗಳ ಟ್ರಸ್ಟಿ (ಪತ್ತಿವವನು) ಯೇ ಸರಿ.

ಕಾರ್ನೇಗಿಯು ತನ್ನ ಭವ್ಯವಾದ ಕಾರ್ಯಾಲಯವನ್ನು ೮೯೦೦೦೦೦೦ ಡಾಲರುಗಳಿಗೆ ಯುನಾಯಿಟೆಡ್ ಸ್ಟೇಟ್ಸ ಸ್ಟೀಲ ಕಾರ್ಪೋರೇಶನ್‌ದವರಿಗೆ ಮಾರಿಬಿಟ್ಟನು. ಅಲ್ಲಿಂದ ಅವನು ನಿಶ್ಚಿಂತನಾಗಿ ತನ್ನ ಅಪಾರವಾದ ಧನವನ್ನು ದಾನ ಮಾಡುವದರಲ್ಲಿಯೇ ವಿನಿಯೋಗಿಸಹತ್ತಿದನು.

ಅವನು ತನ್ನ ಜನ್ಮ ಗ್ರಾಮದಲ್ಲಿ ವಾಚನಾಲಯ ಸ್ಥಾಪಿಸಲು ಮೊದಲು ಮಾಡಿದನು. ತಾನು ವಾಚನಾಲಯಕ್ಕೆ ಧನ ಕೊಟ್ಟರೆ ಅಲ್ಲಿಯ ನಿವಾಸಿಗಳು ಆ ವಾಚನಾಲಯವನ್ನು ಕಡೆತನಕ ನಡೆಯಿಸಿಕೊಂಡು ಹೋಗುವ ಹೊಣೆಗಾರಿಕೆಯನ್ನು ಹೊರಬೇಕೆಂದು ಅವನು ಶರ್ತು ಹಾಕಿದ್ದನು. ಒಮ್ಮೆ ಅವನು ಒಂದು ವರ್ತಮಾನ ಪತ್ರವನ್ನು ಸಹಜವಾಗಿ ಓದುತ್ತಿರುವಾಗ್ಗೆ ಈ ವಾಕ್ಯವು ಅವನಿಗೆ ವಿಶೇಷ ಪರಿಣಾಮವನ್ನುಂಟುಮಾಡಿತು—

"The gods send thread for a web begun."

ಈ ನಿಶ್ಚಯದಿಂದ ಅವನು ನ್ಯೂಯಾರ್ಕ ಪಟ್ಟಣದಲ್ಲಿ ೬೮ ಗ್ರಂಥಾಲಯಗಳನ್ನು ಸ್ಥಾಪಿಸಿದನು. ಇಂಗ್ಲಂಡದಲ್ಲಿ ೬೬೦ ಪುಸ್ತಕಾಲಯಗಳನ್ನು ಸ್ಥಾಪಿಸಲು ೨೦ ಲಕ್ಷ ಡಾಲರು ಕಾಣಿಕೆಯಾಗಿ ಕೊಟ್ಟನು. ೧೯೧೯ ನೆಯ ಇಸ್ವಿಯ ಸುಮಾರಕ್ಕೆ ಅವನು ಅಮೇರಿಕಾ, ಇಂಗ್ಲಂಡ, ಮತ್ತು ಇನ್ನುಳಿದ ದೇಶಗಳಲ್ಲಿ ಗ್ರಂಥಾಲಯ ಸ್ಥಾಪನೆಗಾಗಿ ೬೦೬೦೦೦೦೦ ಡಾಲರುಗಳನ್ನು ವೆಚ್ಚ ಮಾಡಿದನು. ನೋಡಿರಿ! ಅಗಾಧ ದೈವೀ ಲೀಲೆ!! ಅನಾಥ ವಾಚನಾಲಯದಿಂದ ಒಂದಾನೊಂದು ಕಾಲಕ್ಕೆ ಹೊರದೂಡಲ್ಪಟ್ಟ ಕಾರ್ನೇಗಿಯೆತ್ತ; ಹಾಗೂ ಕೋಟ್ಯಾವಧಿ ನಾಣ್ಯಗಳನ್ನು ಕೊಟ್ಟು ಅನ್ಯರ ಹಿತಕ್ಕಾಗಿ ಗ್ರಂಥಾಲಯ ಸ್ಥಾಪನ ಮಾಡುವ ಕಾರ್ನೇಗಿಯೆತ್ತ!

ಗ್ರಂಥಾಲಯ ಸ್ಥಾಪನೆ ಮಾಡಿದಂತೆಯೇ ಕಾರ್ನೇಗಿಯು ಈ ಪ್ರಕಾರ ಉಳಿದ ಸಂಸ್ಥೆಗಳಿಗೂ ದಾನ ಕೊಟ್ಟಿರುವದನ್ನು ನೋಡಿರಿ—

೧೯೦೨ ನೆಯ ಇಸ್ವಿಯಲ್ಲಿ ವಾಶಿಂಗ್ಟನ್ನದಲ್ಲಿಯ ಕಾರ್ನೇಗಿ ಸಂಸ್ಥೆಗೆ ೨೨೦೦೦೦೦೦ ಡಾಲರ; ೧೯೦೪ ರಲ್ಲಿ ಕಾರ್ನೇಗಿ ಹೀರೊ ಫಂಡಿಗೆ ೫೦೦೦೦೦೦; ೧೯೦೫ ರಲ್ಲಿ ಅಧ್ಯಾಪಕರ ಪ್ರಗತಿಗಾಗಿ ಸ್ಥಾಪಿಸಿದ ಕಾರ್ನೇಗಿ ಫೌಂಡೇಶನ್ನಿಗೆ ೨೯೨೫೦೦೦೦, ೧೯೦೬ರಲ್ಲಿ ಅಂತರ ರಾಷ್ಟ್ರೀಯ ಕಾರ್ನೇಗಿ ಎಂಡೋಮೆಂಟಗೆ ೧೦೦೦೦೦೦೦ ಡಾಲರ; ೧೯೧೧ ರಲ್ಲಿ ನ್ಯೂಯಾರ್ಕದಲ್ಲಿಯ ಕಾರ್ನೇಗಿ ಕಾರ್ಪೋರೇಶನ್ನಿಗೆ ೧೨೫೦೦೦೦೦೦; ಸ್ಕಾಟಲಂಡ ವಿಶ್ವವಿದ್ಯಾಲಯ ಕಾರ್ನೇಗಿ ಟ್ರಸ್ಟಗೆ ೧೦೦೦೦೦೦೦ ಡಾಲರ ಡಂಫರ್ಮ್ಲಿನ್ ಟ್ರಸ್ಟಿಗೆ ೩೭೫೦೦೦೦; ೧೯೧೬ ರಲ್ಲಿ ಕಾರ್ನೇಗಿ ಹಿರೊ'ಫಂಡ ಟ್ರಸ್ಟಿಗೆ ೧೨೫೦೦೦೦; ಕಾರ್ನೇಗಿ ಯುನಾಯಿಟೆಡ್ ಕಿಂಗಡಮ್ ಟ್ರಸ್ಟಿಗೆ ೧೦೦೦೦೦೦೦ ಡಾಲರ ೧೯೦೩ ರಲ್ಲಿ; ಹೇಗದಲ್ಲಿಯ ಶಾಂತತಾ ಸದನಕ್ಕೆ ೧೫೦೦೦೦೦ ಡಾಲರ ಇತ್ಯಾದಿ. ಇತ್ಯಾದಿ.

ಕಾಣಿಕೆಯ ಈ ಪ್ರಚಂಡವಾದ ಸಂಖ್ಯೆಗಳನ್ನು ನೋಡಿದರೆ ನಮ್ಮ ದರಿದ್ರ ಭಾರತೀಯ ಬಂಧುಗಳು ವಿಶ್ವಾಸವನ್ನೇ ಇಡಲಿಕ್ಕಿಲ್ಲ. ಆದರೆ ಜಗತ್ತಿನಲ್ಲಿ ಕಾರ್ನೇಗಿಗಿಂತಲೂ ಹೆಚ್ಚಿನ ಶ್ರೀಮಂತರಿರುತ್ತಾರೆ. ಆದರೆ ಅವನಂಥ ದಾನಿಯು ಮಾತ್ರ ಎಂದೂ ಆಗಲಿಕ್ಕಿಲ್ಲ. "ನಾನು ೭ ಕೋಟಿ ಪೌಂಡುಗಳನ್ನು ಕೊಟ್ಟುಬಿಟ್ಟಿರುವೆನೆಂದು ನನ್ನ ಕಾರ್ಯದರ್ಶಿಯು ಹೇಳುತ್ತಾನೆ. ದೇವ ದೇವ! ಇಷ್ಟು ವಿಪುಲ ಸಂಪತ್ತು ನನ್ನಲ್ಲಿ ಹೇಗೆ ಬಂತು?" ಎಂದು ಕಾರ್ನೇಗಿಯು ದಾನ ನೀಡಿ ಉದ್ಗಾರ ತೆಗೆದನು.

ಶಾಂತಿಯ ದೂತ.

ಅಂಡ್ರ್ಯೂ ಕಾರ್ನೇಗಿಯವರ ಶಾಂತತೆಯ ಪ್ರಯತ್ನಕ್ಕೆ ಅಂದು ಯಶ ದೊರೆತಿದ್ದರೆ ಮಹಾ ಯುದ್ಧವೇ ಸಂಭವಿಸುತ್ತಿರಲಿಲ್ಲವೆಂದು ಹೇಳುತ್ತಾರೆ. ಮಹಾ ಯುದ್ಧವಾದ ಕೂಡಲೇ ಕಾರ್ನೇಗಿಯವರು ಹೀಗೆ ಕಳವಳಪಟ್ಟರು— "ಎಂಥಾ ಭ್ರಾಂತಿಯಿದು! ಎಂದೆಂದೂ ಯಾವ ಕಾಲದಲ್ಲೂ ಸಮಗ್ರ ಜಗತ್ತು ಈ ಪ್ರಕಾರ ರಣಾಂಗಣದಲ್ಲಿ ಲೋಲಾಡುತ್ತಿರಲಿಕ್ಕಿಲ್ಲ! ಕಾಡಪಶುವಿನಂತೆ ಮನುಷ್ಯನೇ ಮನುಷ್ಯನನ್ನು ಸಂಹರಿಸುತ್ತಿದ್ದಾನೆ!" ಗ್ರೇಟ ಬ್ರಿಟನ್ನದಲ್ಲಿ ಸಂಸ್ಥಾಪಿಸಲ್ಪಟ್ಟ ಶಾಂತತಾ ಸಂಸ್ಥೆಗೆ ಕಾರ್ನೇಗಿಯವರು ಮೊದಲನೆಯ ಅಧ್ಯಕ್ಷರಾಗಿದ್ದರು. ಸರ್ವತ್ರ ಶಾಂತತೆ ನೆಲಿಸಬೇಕೆಂದು ಅವರು ಅಪರಂಪಾರವಾದ ಪ್ರಯತ್ನ ಮಾಡಿದರು. ಅಮೇರಿಕೆಯ ಆಗಿನ ಅಧ್ಯಕ್ಷರಾದ ವಿಲ್ಸನ್‌ರವರು ಮಹಾಯುದ್ಧವನ್ನು ಕೊನೆಗಾಣಿಸುವದಕ್ಕಾಗಿ ಸೈನ್ಯವನ್ನು ಕಳುಹಲು ಕಾರ್ನೇಗಿಯವರು ಅವರಿಗೆ ಈ ಪ್ರಕಾರ ತಂತೀ ಕಳಿಸಿದರು— "ದೇವರು ನಿಮ್ಮನ್ನು ಆಶೀರ್ವದಿಸಲಿ. ಜಗತ್ತಿಗೆ ನೀವು ಶಾಂತತೆಯನ್ನು ತಂದು ಕೊಡುವಿರಿ. ಎಲ್ಲರಿಗಿಂತಲೂ ಹೆಚ್ಚಿನ ವೀರರೆಂದು ನೀವು ಗಣ್ಯರಾಗುವಿರಿ."

ಅಂಡ್ರ್ಯೂ ಕಾರ್ನೇಗಿಯವರಿಗೆ ಶಾಲೆ ಕಾಲೇಜುಗಳ ಶಿಕ್ಷಣದ ಗಂಧವು ಕೂಡಾ ಇರಲಿಲ್ಲ ಇಂಥವರು ವಿದ್ಯಾಭಿವೃದ್ಧಿಯ ಕಾರ್ಯಕ್ಕೆ ಎಂಥ ಪ್ರಚಂಡ ಸಹಾಯ ಮಾಡಿದರೆಂಬುದನ್ನು ನೋಡಿದರೆ ಮನುಷ್ಯನ ಕೌತುಕಕ್ಕೆ ಸೀಮೆಯೇ ಉಳಿಯುವಂತಿಲ್ಲ. ಅವರು ತಮ್ಮ ಪ್ರಯತ್ನ ವಿಶೇಷದಿಂದ ಚನ್ನಾಗಿ ವಿದ್ಯಾಭ್ಯಾಸ ಮಾಡಿದ್ದರಲ್ಲದೆ ಸೆಂಟ ಅಂಡ್ರ್ಯೂಜ ವಿಶ್ವವಿದ್ಯಾಲಯದ ಎಲ ಎಲ್. ಡಿ. ಪ್ರಶಸ್ತಿಯನ್ನು ಸಂಪಾದಿಸಿದ್ದರು. ಅವರು ಸರ್ವೋತ್ಕೃಷ್ಟವಾದ ೭ ಗ್ರಂಥಗಳನ್ನು ಬರೆದಿದ್ದಾರೆ. ನಮ್ಮ ಹಿಂದುಸ್ಥಾನದಲ್ಲಿಯೂ ಇಂಥ ಒಬ್ಬ ಅಂಡ್ರ್ಯೂ ಕಾರ್ನೇಗಿಯು ಜನ್ಮವೆತ್ತಬಾರದೆ?

ಯಾದಗಿರಿ ಶಂಕರಕಾಲೇಜ.

ಬಸವಾದಿ ಪ್ರಮಥರ ನಿಂದಕರಲ್ಲಿ ಒಬ್ಬರಾದ ಶ್ರೀ ಚಿದರಿ ವೀರಭದ್ರುಶಾಸ್ತ್ರಿಗಳನ್ನು ಯಾದಗಿರಿ ಶಂಕರಕಾಲೇಜದಲ್ಲಿ ಅಧ್ಯಾಪಕರನ್ನಾಗಿ ಮಾಡಿಕೊಂಡ ಬಗ್ಗೆ ಗಂಗಾವತಿ ವೀರಶೈವ ಸಭೆಯವರು ಆ ಕಾಲೇಜಿನ ಚಾಲಕರ ಈ ವಿಪರ್ಯಾಟನ್ನು ನಿಷೇಧಿಸಿ ಒಂದು ಬರವಣಿಗೆಯನ್ನು ಪ್ರಕಟನೆಗೆ ಕಳಿಸಿದ್ದಾರೆ.

ಶಂಕರ ಕಾಲೇಜದ ಈ ವರೆಗಿನ ಚರಿತ್ರೆಯನ್ನು, ಶ್ರೀ ಚಿದರಿ ವೀರಭದ್ರುಶಾಸ್ತ್ರಿಗಳನ್ನು ಈಗ ನಿಯಮಿಸಿಕೊಂಡದ್ದರಿಂದಾಗುವ ಅಹಿತವನ್ನು ಕುರಿತು ಬರೆಯಲ್ಪಟ್ಟ ಒಂದು ವಿಸ್ತಾರವಾದ ಲೇಖನವೂ ಶ್ರೀ ಎಮ್. ಆರ್. ಮೂರ್ತಿಯವರಿಂದ ಪ್ರಕಟನೆಗೆ ಬಂದಿದೆ.

[ಸಂಸ್ಥೆಯ ಚಾಲಕರು ಇತ್ತ ಲಕ್ಷಿಸಿ ತಮ್ಮ ಸಂಸ್ಥೆಯು ಬಹು ಜನ ಪ್ರಿಯವಾಗಿ ದಾತೃಗಳ ಉದ್ದೇಶವು ನೆರವೇರುವಂತೆ ಮಾಡುವುದೇ ಇವರಿಗೆ ಭೂಷಣವಲ್ಲವೆ? ಸ. ಶ.]

ವಿಜಾಪುರ.

ಕಳೆದ ೧೭ ನೆಯ ತಾರೀಖಿನ ದಿವಸ ವಿಜಾಪುರದ ಶ್ರೀ ಸಿದ್ಧೇಶ್ವರ ಸಂಸ್ಥೆಯ ಆಶ್ರಯದಲ್ಲಿ ಕಲಬುರ್ಗಿಯ ಶ್ರೀ ರೇವಣಸಿದ್ಧಯ್ಯಸ್ವಾಮಿ ಇವರ ಪ್ರಯತ್ನ ವಿಶೇಷದಿಂದ ಸಿಂಪೀ ಜಾತಿಯ ಒಬ್ಬ ಗೃಹಸ್ಥನು ಮತ್ತು ಅವನ ಪತ್ನಿಯು ವಿಧಿಪೂರ್ವಕವಾಗಿ ಲಿಂಗಧಾರಣ ದೀಕ್ಷೆಯನ್ನು ಹೊಂದಿದರು.

ಬಾಗಲಕೋಟೆ ಪರಿಷತ್ತು ಮುಂದೆ ಹಾಕಲ್ಪಟ್ಟಿತು.

ಇಲ್ಲಿ ತಾ. ೭-೨-೧೯೩೬ನೇ ದಿನ ಕೂಡಬೇಕೆಂದು ಗೊತ್ತಾಗಿದ್ದ ಕರ್ನಾಟಕ ವಿಭಾಗದ ಬಿನ್ ಶೇತಕಿ ಪತ್ತಿನ ಸಹಕಾರ ಸಂಘಗಳ ಪರಿಷತ್ತು ಇಲ್ಲಿಯ ವೈಲಿಬೇನೆಯ ನಿಮಿತ್ತ ಮುಂದೆ ಹಾಕಲ್ಪಟ್ಟಿತು.

ಸೆಕ್ರೆಟರಿ.

ಇತಿಹಾಸದಲ್ಲಿ ಬರೆದಿಡುವ ಸಂಗತಿ.

ಭಾಯಿ ಪರಮಾನಂದರ ವಿಚಾರ.

ದಿಲ್ಲಿಯ 'ಹಿಂದು' ಪತ್ರಿಕೆಯಲ್ಲಿ ಭಾಯಿ ಪರಮಾನಂದರು ಈ ಪ್ರಕಾರವಾಗಿ ಬರೆದಿದ್ದಾರೆ—

"ಡಾ. ಅಂಬೇಡಕರರ ಧರ್ಮಾಂತರದ ಘೋಷಣೆಯು ಹಿಂದು ಸಮಾಜ ಸಮುದ್ರದಲ್ಲಿ ಕಲ್ಲೋಲಕಲ್ಲೋಲವನ್ನು ಮಾಡಿಬಿಟ್ಟಿದೆ. ಮಹಾತ್ಮಾ ಗಾಂಧಿಯವರು ಅಸ್ಪೃಶ್ಯರ ಹಿತಾರ್ಥವಾಗಿ ಕೂಡಿಸಿದ ಲಕ್ಷಾವಧಿ ರೂಪಾಯಿಗಳು ತಮ್ಮ ಸಲುವಾಗಿ ಏನೂ ವೆಚ್ಚವಾಗುತ್ತಿರುವದಿಲ್ಲವೆಂದು ಅಸ್ಪೃಶ್ಯರ ಆಕ್ಷೇಪಣೆ. ಅಸ್ಪೃಶ್ಯರಿಗಾಗಿ ಗಾಂಧೀಜಿಯವರು ಇಟ್ಟ ಹರಿಜನ ಎಂಬ ಹೆಸರು ಕೂಡಾ ಅವರಿಗೆ ಎಳ್ಳಷ್ಟು ರುಚಿಸದು. ಈ ಅವಸ್ಥೆಯಲ್ಲಿ ಮುಸಲ್ಮಾನ, ಕ್ರಿಸ್ತೀ, ಶೀಖ, ಬೌದ್ಧ ಮೊದಲ ದವರು ನಾ ಮುಂದೆ, ನೀ ಮುಂದೆ ಎಂದು ಡಾ. ಅಂಬೇಡಕರರನ್ನು ತಮ್ಮ ತಮ್ಮ ಕಡೆಗೆ ಎಳೆದುಕೊಳ್ಳಲು ಹವಣಿಸುತ್ತಿದ್ದರು ಇಂಥ ಸೂಕ್ಷ್ಮ ಪ್ರಸಂಗದಲ್ಲಿ ಪುಣೆಯ ಹಿಂದು ಮಹಾಸಭೆಯ ವಿಷಯ ನಿಯಾಮಕ ಅಧಿವೇಶನವು ಕೂಡಿತ್ತು.

ಮಧ್ಯ ರಾತ್ರಿಯಾಗಿರಬಹುದು. ಡಾ. ಜಯಕರರು ವಿಷಯ ನಿಯಾಮಕ ಕಮೀಟಿಯಲ್ಲಿ ಒಂದು ಗೊತ್ತುವಳಿಯನ್ನು ತಂದರು. ಹಿಂದುಗಳೆಲ್ಲರಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಮೊದಲಾದವುಗಳ ವಿಷಯದಲ್ಲಿ ಸಮಾನತೆಯಿರಬೇಕೆಂಬುದೇ ಅದರ ಆಶಯವಾಗಿತ್ತು. ಅದಕ್ಕೆ ಒಬ್ಬ ಸನಾತನಿ ಮಿತ್ರರು ಈ ಪ್ರಕಾರದ ಆತಂಕವನ್ನು ತೋರಿಸಿದರು.— ಮಹಾಸಭೆಯ ಘಟನಾವಲಿಯಲ್ಲಿ ಸೂಚನೆ ಎಂಬುದಾಗಿ ಕೊಟ್ಟ ಮಹಾಸಭೆಯು ಹಿಂದುಗಳ ಯಾವದೇ ಪಂಗಡದ ಆಚಾರ ವಿಚಾರಗಳಲ್ಲಿ ಕೈ ಹಾಕುವದಿಲ್ಲವೆಂದು ಸ್ಪಷ್ಟ ಹೇಳಿದೆ ಎಂದು ತೋರಿಸಲು ಡಾ. ಜಯಕರರು ಯುಕ್ತಿಯುಕ್ತವಾಗಿ ಹೀಗೆ ಪ್ರತಿಪಾದಿಸಿದರು.— ಹಿಂದುಗಳಲ್ಲಿರುವ ಅನೇಕ ಜಾತಿ ಪಾತಿಗಳು ಧಾರ್ಮಿಕವೆಂದು ಹೇಳಲಾಗುವುದಿಲ್ಲ. ಅವುಗಳನ್ನು ತೆಗೆದುಹಾಕಲು ಹಿಂದು ಮಹಾಸಭೆಯು ಪ್ರಯತ್ನಿಸಿದರೆ ಧಾರ್ಮಿಕ ವಿಷಯದಲ್ಲಿ ಕೈ ಹಾಕಿದಂತಾಗಲಿಲ್ಲ. ಇಂಥವುಗಳಿಗೆಲ್ಲ ಧಾರ್ಮಿಕ ತಿಳುವಳಿಕೆಗಳೆನ್ನಹತ್ತಿದರೆ ಅಸ್ಪೃಶ್ಯನು ಬಾವಿಯಲ್ಲಿ ನೀರು ಸೇದದಂತೆ ಮಾಡುವುದು ಕೂಡಾ ಧರ್ಮವೆಂದು ಹೇಳುವವರ ಮಾತು ಯೋಗ್ಯವೆ ಅನ್ನಬೇಕಾದೀತು. ಆದುದರಿಂದ ಆ ಸೂಚನೆಯನ್ನು ಇಲ್ಲಿ ಗಮನಿಸಲಾಗುವುದಿಲ್ಲ.

ನಾನು ಡಾ. ಮುಂಜೆಯವರಿಗೆ ಆ ಸೂಚನೆಯನ್ನು ಮಹಾಸಭೆಯ ಘಟನಾವಲಿಯಲ್ಲಿ ಎಂದಿನಿಂದ ಸೇರಿಸಲಾಗಿದೆಯೆಂದು ಕೇಳಲು ಅವರಿಗೆ ಸಮರ್ಪಕವಾಗಿ ಉತ್ತರ ಕೊಡಲು ಬರಲಿಲ್ಲ.

ಕೊನೆಗೆ ಅಧ್ಯಕ್ಷರು ಈ ಗೊತ್ತುವಳಿಯ ಮೇಲೆ ರೂಲಿಂಗ ಕೊಟ್ಟರು. ಆಗ್ಗೆ ಶ್ರೀ ಜಯಕರರು ಹೀಗೆ ಹೇಳಿದರು— ಅಧ್ಯಕ್ಷರ ರೂಲಿಂಗ ಬದಲಿಸಲು ನಾನು ಕೇಳುವದಿಲ್ಲ. ಅಥವಾ ಈ ಗೊತ್ತುವಳಿಯನ್ನೂ ನಾನು ಮುಂಡಿಸುವುದಿಲ್ಲ. ಹಿಂದುಗಳು ಇಷ್ಟು ಮಾತ್ರ ನೆನಪಿನಲ್ಲಿಡಲಿ. ಇಲ್ಲಿಯ ವರೆಗೆ ಅಸ್ಪೃಶ್ಯರನ್ನು ಕೀಳು ಕಲದವರೆಂದು ನಡೆಸಿಕೊಂಡಿರುವಂತೆ ಇನ್ನುಮೇಲೆ ನಡೆಸಿಕೊಳ್ಳುವದು ಶಕ್ಯವಿಲ್ಲ. ಹಿಂದು ಮಹಾಸಭೆಯೆಂದರೆ ಹಿಂದುಗಳ ಸರ್ವಾಂಗ ಸಂಘಟನೆಯನ್ನು ಮಾಡುವದಾಗಿದೆ. ಹಿಂದುಗಳನ್ನು ರಕ್ಷಿಸಿಕೊಳ್ಳುವುದು ಅದರ ಉದ್ದೇಶವಾಗಿದೆ. ಆ ಕಾರ್ಯವನ್ನು ಮಾಡದೆ ಹೋದರೆ ಅದು ಇದ್ದರೂ ಸರಿ; ಇಲ್ಲದಿದ್ದರೂ ಸರಿ!

ಕೊನೆಗೆ ಅಧ್ಯಕ್ಷರಾದ ಮಾಲವೀಜಿಯವರು— "ನಾನೇನು ಹುಡುಗನಲ್ಲ. ಎಲ್ಲಾ ಪ್ರಸಂಗಗಳನ್ನೂ ಚನ್ನಾಗಿ ತಿಳಿದೇ ರೂಲಿಂಗ ಕೊಟ್ಟಿರುವೆನು. ಇದು ನಿಮಗೆ ಸರಿಗಾಣದಿದ್ದರೆ ನಾನು ಅಧ್ಯಕ್ಷ ಪದವನ್ನು ಬಿಟ್ಟು ಹೋಗುವೆನು." ಎಂದರು.

ಮರುದಿನ ಶ್ರೀ ರಾಧಾ ಕುಮುದ ಮುಕರ್ಜಿಯವರು ಅಧ್ಯಕ್ಷರ ರೂಲಿಂಗಿಗೆ ವಿರೋಧವಾಗದಂತೆಯೂ ಮತ್ತು ಅಸ್ಪೃಶ್ಯರಿಗೆ ಒಪ್ಪಿಗೆಯಾಗುವಂತೆಯೂ ಒಂದು ಗೊತ್ತುವಳಿಯನ್ನು ತಂದರು. ಅದನ್ನು ಸ್ವತಃ ಶ್ರೀ ಶಂಕರಾಚಾರ್ಯರೇ (ಡಾ. ಕುರ್ತಕೋಟಿ) ಮುಂಡಿಸಿದರು. ಹತ್ತು ಜನ ಅಸ್ಪೃಶ್ಯ ಪ್ರತಿನಿಧಿಗಳು ಸಹ ಅದು ತಮಗೆ ಒಪ್ಪಿಗೆಯಾಗಿದೆಯೆಂದು ತಿಳಿಸಿದರು. ಅದರಲ್ಲಿ ಮುಖ್ಯವಾದ ಬದಲಾವಣೆಯೆಂದರೆ 'ಧಾರ್ಮಿಕ' ಸಮಾನತೆಯೆಂಬುದರ ಬದಲಾಗಿ ಸಾರ್ವಜನಿಕ ಮತ್ತು ಸಾಮಾಜಿಕ ಎಂದು ಜೋಡಿಸಿ ಅಸ್ಪೃಶ್ಯರಿಗೆ ದೊರೆಯಬೇಕಾದ ಸೌಲಭ್ಯಗಳೆಲ್ಲ ದೊರೆಯುವಂತೆ ಮಾಡಲಾಯಿತು.

ಈ ಗೊತ್ತುವಳಿಯು ತೀರ್ಮಾನವಾಗದೆ ಇದ್ದಿದ್ದರೆ ಹಿಂದು ಮಹಾಸಭೆಯು ಸಂಘಟನೆಗೇನೇ ಅಪಾಯವುಂಟಾಗುವ ಸಂಭವವಿದ್ದಿತು. ಇಷ್ಟೇ ಅಲ್ಲ; ಅಸ್ಪೃಶ್ಯ ಮುಂದಾಳುಗಳಲ್ಲಿಯೂ ಅತ್ಯಂತ ನಿರಾಶಾವಾತಾವರಣವು ಪಸರಿಸುವ ಸಂಭವವಿದ್ದಿತು. ಆದರೆ ಪುಣೆಯಂಥ ಸನಾತನಿಗಳ ಕೇಂದ್ರ ನಗರದಲ್ಲಿ ಸಹಸ್ರಾರು ಪ್ರತಿನಿಧಿಗಳಲ್ಲಿ ಒಬ್ಬರ ವಿರೋಧವು ಕೂಡಾ ಇಲ್ಲದೆ ಈ ಗೊತ್ತುವಳಿಯು ತೀರ್ಮಾನವಾಗುವದೆಂದರೆ ಹಿಂದುಗಳ ಕಲ್ಪನೆಯಲ್ಲಾದ ಕ್ರಾಂತಿಯನ್ನು ತೋರಿಸುತ್ತಲಿದೆ. ಸನಾತನಿ ಮುಂದಾಳುಗಳು ದಲಿತ ವರ್ಗದ ಎಲ್ಲ ಜಾತಿಗಳನ್ನು ತಮ್ಮೊಳಗೆ ಕೂಡಿಸಿಕೊಂಡು ಹಿಂದುಗಳಲ್ಲಿ ಭಿನ್ನಭೇದವನ್ನುಂಟುಮಾಡುವ ಜಾತಿಗಳ ಪ್ರಾಬಲ್ಯವನ್ನು ಕಡಿಮೆ ಮಾಡಲು ಈ ಪ್ರಕಾರ ನೈತಿಕ ಧೈರ್ಯವನ್ನು ತೋರಿಸಿದುದು ಹಿಂದು ಮಹಾಸಭೆಯ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂಥದಾಗಿದೆ. ಈ ಗೊತ್ತುವಳಿಯಿಂದ ಹಿಂದು ಸಂಘಟನೆಯ ಬೇರುಗಳು ತಳತನಕ ಮುಟ್ಟಿದುದರಿಂದ ಅದು ಎಂದೆಂದೂ ಹೊಯ್ದಾಡುವ ಸಂಭವವಿಲ್ಲ. ಈ ಕಾರ್ಯವನ್ನು ಹಿಂದು ಮಹಾಸಭೆಯೇ ಮಾಡಲು ಶಕ್ಯವಾಗಿದ್ದಿತು ಮತ್ತು ಆ ಪ್ರಕಾರ ಅದು ಮಾಡಿ ತೋರಿಸಿತೆಂದು ನಾವು ಅಭಿಮಾನಪೂರ್ವಕ ಹೇಳಬಲ್ಲೆವು."

ಹಬಸಿಗಳಿಗೆ ಅಪೂರ್ವ ವಿಜಯ.

೨೦೦೦ ಇಟಲಿಗಳು ಸತ್ತರು.

ಮಕಾಲೆ ಹತ್ತಿರ ಇಟಲಿ ಅಬಸೀನಿಯಾ ಯುದ್ಧವು ಬಹು ಭಯಂಕರವಾಗಿ ಜರುಗಿ ಇಟಲಿಯು ಸೋತಿತು. ೭೦ ಮೈಲು ಪ್ರದೇಶದ ಬೇರೆ ಬೇರೆ ಸ್ಥಳಗಳಲ್ಲಿ ಹಗಲಿರುಳೂ ಯುದ್ಧ ನಡೆದಿದೆ. ಇಟಲಿಯ ೨ ಸಾವಿರ ಸೈನಿಕರು ಮಡಿದರು. ವಿಶೇಷವಾದ ಯುದ್ಧಸಾಮಗ್ರಿಯು ಹಬಸಿಗಳ ವಶವಾಯಿತು.

—ಪಂಡಿತ ಜವಾಹರಲಾಲರು ಫೆಬ್ರುವರಿ ಎರಡನೆಯ ವಾರದಲ್ಲಿ ಈ ದೇಶಕ್ಕೆ ಬರುವರೆಂದು ಪ್ರಕಟವಾಗಿದೆ



ಶಾ. ಶ. ೧೮೫೭ ನೆಯ ಮಾಘ ಶು|| ೩ ಸೋಮವಾರ.

ಚಕ್ರವರ್ತಿಗಳ ನಿಧನ.

ಇಂಗ್ಲೆಂಡಿನ ರಾಜರು ಮತ್ತು ಹಿಂದುಸ್ಥಾನದ ಚಕ್ರವರ್ತಿಗಳು ಆದ ಪಂಚಮಜಾರ್ಜರು ಕಳೆದ ೨೦ ನೆಯ ತಾರೀಖಿನ ರಾತ್ರಿ ಪರಲೋಕವಾಸಿಗಳಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಬ್ರಿಟಿಶ್ ರಾಜ್ಯವು ಈ ದೇಶದಲ್ಲಿ ಸ್ಥಾಪನೆಯಾದ ನಂತರ ಇವರೇ ಮೂರನೆಯ ಚಕ್ರವರ್ತಿಗಳು. ಇವರ ಆಳ್ವಿಕೆಯು ಪ್ರಪಂಚದ ಈ ವರೆಗಿನ ಎಲ್ಲ ಚಕ್ರವರ್ತಿಗಳ ಪ್ರಭುತ್ವಕ್ಕಿಂತ ವಿಶೇಷತರವಾದುದಾಗಿದ್ದಿತು.

ಜಗತ್ತಿನಲ್ಲಿ ಇಷ್ಟು ವಿಸ್ತಾರವಾದ ರಾಜ್ಯಕ್ಕೆ ವಿಕ್ಟೋರಿಯಾ ಮಹಾರಾಣಿಯವರು ಆಮೇಲೆ ಸಪ್ತಮ ಎಡ್ವರ್ಡರು ಅನಂತರ ಈ ಪಂಚಮ ಜಾರ್ಜರು ಮಾತ್ರವೇ ಚಕ್ರವರ್ತಿಗಳಾಗಿದ್ದುದು. ಮೊದಲಿನ ಉಭಯ ಚಕ್ರವರ್ತಿಗಳಿಗಿಂತ ಜಾರ್ಜ ಚಕ್ರವರ್ತಿಗಳ ಚರಿತ್ರವು ಬ್ರಿಟಿಶ್ ಸಾಮ್ರಾಜ್ಯದ ಇತಿಹಾಸದಲ್ಲಿ ಬಹು ಹೆಚ್ಚಿನ ಸ್ಥಾನವನ್ನು ಹೊಂದುವುದಾಗಿದೆ.

ಹಿಂದುಸ್ಥಾನದ ಚಕ್ರವರ್ತಿಗಳಾಗಿ ಇಲ್ಲಿಗೆ ಆಗಮಿಸಿದವರು ಇವರೇ ಮೊದಲನೆಯವರು. ವಂಗಭಂಗದಿಂದುಂಟಾದ ಹಿಂದುಸ್ಥಾನದಲ್ಲಿಯ ಮೊದಲನೆಯ ಲೋಕ ಜಾಗೃತಿಯ ಅದ್ಭುತ ಚಟುವಟಿಕೆಗೆ ಜಯ ದೊರೆತುದು ಇವರ ಪ್ರಭುತ್ವದಲ್ಲಿ, ಭರತಖಂಡದ ಬಹು ಪ್ರಾಚೀನ ರಾಜಧಾನಿಯಾಗಿದ್ದ ದಿಲ್ಲಿಯು ಪುನಃ ಪ್ರಭುತ್ವದ ಮುಖ್ಯಸ್ಥಾನವಾದುದು ಇವರ ಆಳ್ವಿಕೆಯಲ್ಲಿ.

ಮೋರ್ಲೆ-ಮಿಂಟೊ ಸುಧಾರಣೆ, ಮ್ಯಾಂಟಗೊ-ಚೇಮ್ಸಫರ್ಡ ಸುಧಾರಣೆ ಮತ್ತು ಈಗ ಬರಲಿರುವ ರಾಜಕೀಯ ಸುಧಾರಣೆ ಇವೆಲ್ಲವೂ ಇದೇ ಚಕ್ರವರ್ತಿಗಳ ಕಾಲದಲ್ಲಿ ಏರ್ಪಟ್ಟವು. ಭಾರತೀಯರಿಗೆ ಸ್ವರಾಜ್ಯ ಬೇಕೆಂದು ಮಹಾತ್ಮಾ ಗಾಂಧಿಯವರು ಅಭೂತಪೂರ್ವ ಅಹಿಂಸಾಮಯ ಅದ್ಭುತ ಚಟುವಟಿಕೆಯನ್ನು ಪ್ರಾರಂಭಿಸಿ ಶಾಸನಗಳನ್ನು ಉಲ್ಲಂಘಿಸಿದುದೂ ಇವರ ಪ್ರಭುತ್ವದಲ್ಲಿಯೆ. ಈ ಪ್ರಕಾರ ತಮ್ಮ ಪ್ರಭುತ್ವದ ವಿರೋಧವಾಗಿ ಹೋರಾಡಿದ ಅದ್ವಿತೀಯ ವಿಭೂತಿಯೊಂದಿಗೆ ಸಹಾನುಭೂತಿಯಿಂದ ಸಂಭಾಷಣೆ ಮಾಡಿದವರೂ ಇದೇ ಚಕ್ರವರ್ತಿಗಳು.

ಈ ಪ್ರಕಾರ ಹಿಂದುಸ್ಥಾನದ ದೃಷ್ಟಿಯಿಂದೊಂದರಿಂದಲೇ ಇವರ ಪ್ರಭುತ್ವವು ವಿಶೇಷತರವಾದುದೆಂದಲ್ಲ. ಐರ್ಲಂಡಿನ ರಾಜಕೀಯ ಹೋರಾಟದಲ್ಲಿ ಸಂಧಿಯ ಪ್ರಯತ್ನವು ಫಲಕಾರಿಯಾಗುವಂತೆ ಮಾಡಿದವರೂ ಇದೇ ಪ್ರಭುಗಳು. ಯುರೋಪಖಂಡದಲ್ಲಿ ಘನಘೋರ ಯುದ್ಧ ಪ್ರಾರಂಭವಾಗಿ ಅನೇಕ ರಾಜಸಿಂಹಾಸನಗಳು ಉರುಳಿದರೂ ಅಂತಹ ಕಾಲದಲ್ಲಿ ಲೋಕಪ್ರಿಯ ರಾಜರಾಗಿ ಆ ಖಂಡದಲ್ಲಿ ಶೋಭಿಸಿದವರೂ ಇವರೊಬ್ಬರೆ.

ಇಂಗ್ಲೆಂಡಿನ ರಾಜ್ಯ ಪದ್ಧತಿಯಂತೆ ಚಕ್ರವರ್ತಿಗಳು ಪ್ರತ್ಯಕ್ಷ ಮುಂದೆ ಬಂದು ಯಾವ ಕಾರ್ಯವನ್ನೂ ಸ್ವತಂತ್ರಿಸಿ ಮಾಡಲಿಕ್ಕೆ ಬರುವಂತಿಲ್ಲದಿದ್ದರೂ ಅವರ ಸೌಜನ್ಯ, ಪ್ರಜಾನುರಾಗ, ಸುಶೀಲತ್ವ ಮೊದಲಾದ ದಿವ್ಯ ಗುಣಗಳ ಪ್ರಭಾವವು ಪ್ರಭುತ್ವದ ಮೇಲೆ ಬೀಳದೆ ಇರುವುದೇ ಇಲ್ಲ.

ಆದುದರಿಂದ ಜಾರ್ಜ ಚಕ್ರವರ್ತಿಗಳು ತಮ್ಮ ಅನೇಕ ಶ್ರೇಷ್ಠ ಗುಣಗಳಿಂದ 'ಗ್ರೇಟಬ್ರಿಟನ್'ಕ್ಕೂ, ಬ್ರಿಟಿಶ್ ಸಾಮ್ರಾಜ್ಯಕ್ಕೂ, ಇಡೀ ಪ್ರಪಂಚಕ್ಕೂ ಬಹು ಪ್ರೇಮಾದರಗಳುಳ್ಳವರಾಗಿದ್ದರು. ಇವರಿಗೆ ಪರಮಾತ್ಮನು ಚಿರಶಾಂತಿಯನ್ನೀಯಲೆಂದು ಹಾರೈಸುತ್ತೇವೆ.

ಹೊಸ ಚಕ್ರವರ್ತಿಗಳು.

—:o:—

ಜಾರ್ಜ ಚಕ್ರವರ್ತಿಗಳು ನಿಧನ ಹೊಂದಿದ ನಂತರ ಅವರ ಪಟ್ಟಕ್ಕೆ ಎಂಟನೆಯ ಎಡ್ವರ್ಡರವರು ಬಂದರು. ಇವರು ತಾ. ೨೩-೬-೧೮೯೪ ರಲ್ಲಿ ಜನ್ಮವೆತ್ತಿದ್ದಾರೆ. ಈಗ ಇವರಿಗೆ ೪೨ ನೆಯ ವರುಷ ನಡೆದಿದೆ. ಇವರು ಇನ್ನೂ ಅವಿವಾಹಿತರು.

ಇವರು ಕಳೆದ ಮಹಾಯುದ್ಧದ ಕಾಲಕ್ಕೆ ರಣಕ್ಷೇತ್ರದಲ್ಲಿ ೧|| ವರುಷ ಸೈನ್ಯ ಶಾಖೆಯಲ್ಲಿಯೇ ಇದ್ದರು. ಇವರು ತಂದೆಯಂತೆಯೇ ನೌಕಾ ವಿದ್ಯೆಯಲ್ಲಿ ಪ್ರವೀಣರಿದ್ದಾರೆ. ಪ್ರಪಂಚ ಪರ್ಯಟನ ಮಾಡಿದ್ದಾರೆ. ಈ ದೇಶಕ್ಕೆ ೧೯೨೧ ರಲ್ಲಿ ಅಸಹಕಾರದ ಚಟುವಟಿಕೆಯ ಕಾಲಕ್ಕೆ ಪ್ರಿನ್ಸ್ ಆಫ್ ವೆಲ್ಸರಾಗಿ ಆಗಮಿಸಿದ್ದರು. ಇವರು ಪ್ರವಾಸಪ್ರಿಯರು. ಕ್ರಿ. ಶ. ೧೯೩೪ ರಲ್ಲಿ ತಮ್ಮ ಸ್ವಂತ ಒಂದು ವಿಮಾನವನ್ನು ಇಟ್ಟುಕೊಂಡು ತಮ್ಮ ಬಂಧುಗಳನ್ನು ಕೂಡಿಕೊಂಡು ಆಫ್ರಿಕಾ, ಅಮೇರಿಕಾ ಖಂಡಗಳಲ್ಲಿ ಸಂಚರಿಸಿದ್ದಾರೆ.

ಸ್ವದೇಶಿ ಅಭಿಮಾನವು ಈ ಚಕ್ರವರ್ತಿಗಳಲ್ಲಿ ವಿಶೇಷ. ಬ್ರಿಟಿಶ್ ವಸ್ತುಗಳನ್ನೇ ಕೊಂಡುಕೊಳ್ಳಿರೆಂಬ ಚಟುವಟಿಕೆಯ ಜನಕರೇ ಇವರೆಂದು ಹೇಳಬಹುದು. ನಿರುದ್ಯೋಗಿಗಳ ದುಃಖ ನಿವಾರಣೆಯ ಕಡೆಗೆ ಇವರು ಹೆಚ್ಚು ಲಕ್ಷಿಸುತ್ತಿದ್ದಾರೆ.

ತರುಣರ ಚಟುವಟಿಕೆಯ ಕಡೆಗೆ ಇವರು ಹೆಚ್ಚು ಲಕ್ಷಿಸುವವರಾಗಿದ್ದಾರೆ. ತರುಣರ ಹಿತಕ್ಕಾಗಿ ಶ್ರಮ, ಸಮಯ, ಮತ್ತು ಸ್ನೇಹ ಇವು ಮೂರು ಅವರಿಗೆ ಪ್ರಾಪ್ತವಾಗಬೇಕೆಂಬುದೇ ಇವರ ಅಭಿಪ್ರಾಯ. ತಮ್ಮ ತಂದೆಗಳ ಮೊನ್ನಿನ ರೌಪ್ಯ ಜುಬಲಿಯ ಕಾಲಕ್ಕೆ ತರುಣರ ಹಿತಕ್ಕಾಗಿ ಹತ್ತು ಲಕ್ಷ ಪೌಂಡುಗಳನ್ನು ಕೂಡಿಸಿದರು.

ಇಂತಹ ರಾಷ್ಟ್ರೋದ್ಧಾರ ಕಾರ್ಯ ಮಾಡಿದ ಎಂಟನೆಯ ಎಡ್ವರ್ಡ ಪ್ರಭುಗಳಿಗೆ ಚಿರಾಯುರಾರೋಗ್ಯಗಳನ್ನು ಪರಮಾತ್ಮನು ದಯಪಾಲಿಸಿ ಇವರ ಪ್ರಭುತ್ವದಲ್ಲಿ ಹಿಂದುಸ್ಥಾನವು ವಿಶೇಷವಾದ ರಾಜಕೀಯ ಸುಖ ಶಾಂತಿಗಳನ್ನು ಹೊಂದಲೆಂದು ಹಾರೈಸುತ್ತೇವೆ.

ಇವರು ವೀರಶೈವ ಮತ ಸ್ಥಾಪಕರೇ ?

ವೀರಶೈವ ಮತವನ್ನು ಶ್ರೀ. ಬಸವ ಮಹಾನುಭಾವನೇ ಸ್ಥಾಪಿಸಿದನೆಂದು ಬಹು ಜನರು ಪ್ರತಿಪಾದಿಸುತ್ತಿದ್ದಾರೆ. ಈ ಮತವು ಶ್ರೀ ರೇಣುಕಾದಿ ಪಂಚಾಚಾರ್ಯರಿಂದಲೇ ಸ್ಥಾಪನೆಯಾಗಿದೆಯೆಂದು ಪ್ರತಿಪಾದಿಸುವ ಒಂದು ಪಂಗಡವೂ ಇದೆ. ವೀರಶೈವ ಮತಕ್ಕೆ ಇವರಿಬ್ಬರೂ ಮೂಲವಲ್ಲವೆಂತಲೂ ಇವರಿಗಿಂತ ಪೂರ್ವದಲ್ಲಿ ವೀರಶೈವ ಮತವನ್ನು ಸ್ಥಾಪಿಸಿದಾತನು ಇನ್ನೊಬ್ಬನಿದ್ದಾನೆಂದು ಶ್ರೀಯುತ ಮಲ್ಲಿಕಾರ್ಜುನಪ್ಪ ತಾಳೀಕೋಟಿ ಎಂಬುವವರು ಬರೆದ ಒಂದು ಪ್ರಕಟನೆಯು ನಮ್ಮ ಕಡೆ ಬಂದಿದೆ. ಈ ಲೇಖನಕ್ಕೆ ೪೭ ಜನರು ಒಪ್ಪಿದ್ದಾರೆಂತಲೂ ಅದರಲ್ಲಿ ಕಾಣಿಸಿದ್ದಾರೆ.

ಈ ಲೇಖನವು ಬಹು ದೊಡ್ಡದಾಗಿದೆ. ಅದರಲ್ಲಿ ವೀರಶೈವ ಮತಕ್ಕೆ ಯಾರು ಮೂಲರೆಂಬುದನ್ನು ಕುರಿತು ಈ ಪ್ರಕಾರ ತಿಳಿಸಿದ್ದಾರೆ—

" ಈಗ ಸಧ್ಯಃ ಬದಾಮಿ ತಾಲೂಕಿಗೆ ಸೇರಿದ ಪಟ್ಟದಕಲ್ಲು ಐಹೊಳೆಯೆಂಬ ಗ್ರಾಮವನ್ನು ಪೂರ್ವದಲ್ಲಿ ವೀರಗಂಧರ್ವನೆಂಬ ರಾಜನು ಆಳುತ್ತಿರಲು ಗೋಮುಖಾಸುರನೆಂಬ ರಾಕ್ಷಸನು ಬಂದು ಐಹೊಳೆಯನ್ನು ಮುತ್ತಿ ವೀರಗಂಧರ್ವ ರಾಜನನ್ನು ಯುದ್ಧದಲ್ಲಿ ಸೋಲಿಸಿ ಸೆರೆಮನೆಯಲ್ಲಿ ಹಾಕಿ ಆ ರಾಜ್ಯವನ್ನು ಆಳತೊಡಗಿದನು. ಅವನ ಮಗಳಾದ ಬಲಿದೇವಿಯು ಶಿವನನ್ನು ಕುರಿತು ತಪಸ್ಸು ಮಾಡಲು ಪರಮಾತ್ಮನು ಮೆಚ್ಚಿ ಪಂಚವಕ್ತ್ರ ಗಣೇಶ್ವರನನ್ನು ಬಲಿದೇವಿಯ ಇಷ್ಟಾರ್ಥವನ್ನು ಕೊಟ್ಟುಬಾಯೆಂದು ಕಳಿಸಲು ಅವನು ಐಹೊಳೆ ಗ್ರಾಮದ ಗೌರವೇಶ್ವರ ಲಿಂಗದಲ್ಲಿ ಅವತರಿಸಿ ಬಲಿದೇವಿಗೆ ಪ್ರಸನ್ನನಾಗಿ ಗೋಮುಖಾಸುರನನ್ನು ಯುದ್ಧದಲ್ಲಿ ಸಂಹರಿಸಲು, ವೀರಗಂಧರ್ವರಾಜನು ತನ್ನ ಮಗಳನ್ನು ಪಂಚವಕ್ತ್ರ ಗಣೇಶ್ವರನಿಗೆ ಲಗ್ನಮಾಡಲು ಆಗ ಅವರಿಬ್ಬರ ಗರ್ಭದಲ್ಲಿ ಮುಖಾರಿ, ಕಾಲಾರಿ, ಪುರಾರಿ, ಸ್ಮರಾರಿ ವೇದಾರಿಯೆಂಬ ಪಂಚ ಪುತ್ರರು ಜನಿಸಿದರು. ಪಂಚವಕ್ತ್ರ ಗಣೇಶ್ವರನು ಶೇಷರಾಜನ ಮಗಳಾದ ನಾಗಕನ್ನಿಕೆಯು ಲಗ್ನವಾಗಲು ಅವಳ ಗರ್ಭದಲ್ಲಿ ಕಪರ್ದಿ, ಪಿನಾಕಿ, ಕಿನಾಶನ, ನಿಷ್ಕಳ, ಹರಿದ್ವಿಟ್‌ಯೆಂಬ ಪಂಚಪುತ್ರರು ಜನಿಸಿದರು. ಅವರೇ ಮುಂದೆ ವ್ಯಾಪಾರವನ್ನು ಮಾಡಿ ಗುದ್ದಲಿಶೆಟ್ಟಿ, ಓಲಿಶೆಟ್ಟಿ, ಕೋಲಿಶೆಟ್ಟಿ, ಅಂಗಡಿಶೆಟ್ಟಿ ಪಟ್ಟಣಶೆಟ್ಟಿರೆನಿಸಿಕೊಂಡರು ಈ ಮುಖಾರಿ ಮೊದಲಾದ ದಶಪಂಚಮರೇ ವೀರಶೈವ ಮತಕ್ಕೆ ಮೂಲರು."

ಬಸವ ಮಹಾನುಭಾವರಂತೆ ಪಂಚ ವಕ್ತ್ರ ಗಣೇಶ್ವರನೆಂಬುವವನು ಐತಿಹಾಸಿಕ ಪುರುಷನಲ್ಲ. ಲಿಂಗ ಮೂರ್ತಿಯಲ್ಲಿ ಹುಟ್ಟಿದನೆಂಬುದು ಕಲ್ಪನೆಯೇ ವಿನಾ ನಿಜ ಸ್ಥಿತಿಯಲ್ಲವಷ್ಟೆ. ಎಂದಮೇಲೆ ಈತನಿಂದ ಈ ಮತವು ಸ್ಥಾಪನೆಯಾಯಿತೆಂದು ತಿಳಿಯಲಿಕ್ಕಾಗುವುದಿಲ್ಲ. ಯಾರಿಗೆ ಇನ್ನೂ ಐತಿಹಾಸಿಕ ಮತ್ತು ಸಂಶೋಧಾತ್ಮಕ ದೃಷ್ಟಿಗಳೇ ಒಂದಿಲ್ಲವೋ ಅವರು ನಂಬಬಹುದು. ಪುಸ್ತಕದಲ್ಲಿರುವುದು, ಸಂಸ್ಕೃತದಲ್ಲಿ ಬರೆದುದು, ಇವೆಲ್ಲವೂ ನಿಜವೆಂದೇ ನಂಬುವವರು ಇವರ ಅಭಿಪ್ರಾಯವನ್ನ ಮಾನ್ಯ ಮಾಡಬಹುದು.

ಒಂದು ಮತದ ಸ್ಥಾಪಕನ ಗಬೇಕಾದರೆ ಆತನು ಅನ್ಯ ಮತಗಳನ್ನು ಖಂಡಿಸಬೇಕಾಗುತ್ತದೆ. ಆಗ ಅನ್ಯ ಮತೀಯರಿಗೂ ಆತನು ಪರಿಚಯದವನಾಗಬೇಕಾಗುತ್ತದೆ ಆತನು ಬೋಧಿಸಿದ ಅಥವಾ ಖಂಡಿಸಿದ ಶಾಸ್ತ್ರಗಳಾಗಲಿ ಇಲ್ಲವೆ ರಚಿಸಿದ ಗ್ರಂಥಗಳಾಗಲಿ ಇರಬೇಕಾಗುತ್ತದೆ. ಇವೆಲ್ಲಾ ಸಂಗತಿಗಳನ್ನು ಐತಿಹಾಸಿಕ ಪ್ರಮಾಣಗಳ ಒರೆಗಲ್ಲಿಗೆ ಹಚ್ಚಿ ನಿಜಾಂಶವನ್ನು ಕಂಡುಕೊಳ್ಳಬೇಕಾಗುತ್ತದೆ.

ಪಂಚ ವಕ್ತ್ರ ಗಣೇಶ್ವರನ ಸಂಬಂಧವಾಗಿ ಇಂತಹ ಯಾವ ಪ್ರಮಾಣಗಳೂ ಇಲ್ಲದೆ ಕಲ್ಪಿತ ಕಾದಂಬರಿಯಂತಿದ್ದ ಯಾವುದೋ ಒಂದು ಸಂಗತಿಯ ಮೇಲಿಂದ ಆತನೇ ಮತ ಸ್ಥಾಪಕನೆಂದು ಹೇಳುವುದು ಸರಿಯಲ್ಲ. ಇಂತಹ ಪರಿಶೋಧನೆಯ ಕಾಲದಲ್ಲಿ ಮತ ಸ್ಥಾಪಕರ ಸ್ಥಿತಿಯನ್ನು ಹೀಗೆ ತೋರಿಸುವುದು ಪರಿಹಾಸ್ಯಕ್ಕೆ ಕಾರಣವಾಗದಿರಲಾರದು.

ಈ ಲೇಖಕರು ರೇವಣಸಿದ್ಧನ ವಿಚಾರದಲ್ಲಿ ಹೇಗೆ ಐತಿಹಾಸಿಕ ದೃಷ್ಟಿಯನ್ನಿಟ್ಟುಕೊಂಡಿದ್ದಾರೆಯೋ ಹಾಗೆಯೇ ಈ ಪಂಚವಕ್ತ್ರನ ವಿಷಯದಲ್ಲಿಯೂ ಇಟ್ಟುಕೊಂಡಿದ್ದರೆ ಅವರಿಗೇನೇ ಈ ಸಂಗತಿ ಹೊಳೆಯುತ್ತಿತ್ತು. ಆಗಮಗಳನ್ನು ಇತ್ತಲಾಗಿ ಬೆಳಸಿದ್ದಾರೆಂದು ಲೇಖಕರು ಹೇಳಿದ್ದಾರೆ. ಎಂದಮೇಲೆ ತಾವು ಆಧಾರವಾಗಿ ಕೊಡುವ ಈ ಆಗಮ ಶ್ಲೋಕವೂ ಏಕೆ ಬೆಳೆಸಿಕೊಂಡಿದ್ದಾಗಿರಬಾರದೆಂಬುದನ್ನು ಯೋಚಿಸಬಾರದೆ ? ಅಂತೆಯೇ ಇಂಥ ಕಲ್ಪಿತ ಶ್ಲೋಕ ಮತ್ತು ಪುಸ್ತಕಗಳ ಆಧಾರದ ಮೇಲಿಂದ ಇಂತಹ ಮಹತ್ವದ ಸಂಗತಿಯನ್ನು ನಿರ್ಣಯಿಸುವುದು ಯುಕ್ತವಲ್ಲವೆಂತಲೂ ಇದು ಅಪಹಾಸ್ಯಕ್ಕೆ ಕಾರಣವಾಗುವುದೆಂತಲೂ ನಾವು ಹೇಳದ್ದೇವೆ.

ಇದರಿಂದ ವೀರಶೈವ ಮತಸ್ಥಾಪಕನ ಶೋಧವೇನೂ ಆಗದೆ ಈಗ ಉಂಟಾಗಿರುವ ವೀರಶೈವರ ಕಲಹದಲ್ಲಿ ಇನ್ನೊಂದು ರೀತಿಯನ್ನು ಹೆಚ್ಚಿಸಿದಂತೆ ಮಾತ್ರ ಆಗುವುದು ಜಂಗಮರು ತಾವು ಹೆಚ್ಚೆಂದು, ಗುರುಗಳು ತಾವು ಮೇಲೆಂದು ಈಗ ಹೇಳಿಕೊಳ್ಳುತ್ತಿರುವುದರ ಜತೆಯಲ್ಲಿ ಭಕ್ತರು--ಅದರಲ್ಲಿಯೂ ಪಂಚಮಸಾಲಿಯವರು— ತಾವು ಹೆಚ್ಚೆಂದು ಹೇಳಿಕೊಳ್ಳುವ ಇನ್ನೊಂದು ಪಂಥವು ತಲೆದೋರಬಹುದು.

ಹೀಗಾಗುವುದು ಕ್ಷೇಮಕರವಲ್ಲ. ಈಗ ಗುರುಗಳೆಂಬುವವರಲ್ಲಿ ಹೇಗೆ ಪರಸ್ಪರ ಕಲಹ ನಡೆದಿದೆಯೋ ಹಾಗೆಯೇ ಭಕ್ತರೆಂಬುವವರಲ್ಲಿಯೂ ಕಲಹವುಂಟಾಗಲು ಕಾರಣವಾಗಬಹುದು.

ಈಗ ಜಗತ್ತಿನಲ್ಲಿಯೇ ಪ್ರಬಲವಾಗಿರತಕ್ಕ ಬೌದ್ಧ, ಕ್ರೈಸ್ತ, ಮುಸಲ್ಮಾನ್ ಮತಗಳ ಸ್ಥಾಪಕರಾದ ಬುದ್ಧ, ಕ್ರಿಸ್ತ, ಮಹಮ್ಮದ ಈ ಮಹಾ ವಿಭೂತಿಗಳೇನು ಕಲ್ಲು ಮಣ್ಣುಗಳಲ್ಲಿ ಹುಟ್ಟಿದ್ದಾರೆಂದು ಆಯಾಯ ಮತೀಯರು ಹೇಳುತ್ತಿದ್ದಾರೆಯೇ ? ಈ ದೇಶದಲ್ಲಿ ಪ್ರಸಿದ್ಧವಾಗಿರತಕ್ಕ ಮಹಾವೀರ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ನಾನಕ ಮೊದಲಾದ ಮತಸ್ಥಾಪಕರೇನು ಶಿಲೆಯಿಂದ ಉದ್ಭವಿಸಿದರೆಂದು ಆಯಾಯ ಪಂಥದವರು ಹೇಳುತ್ತಿದ್ದಾರೆಯೇ ? ಇವರೆಲ್ಲರೂ ಐತಿಹಾಸಿಕ ಪುರುಷರು. ಎಲ್ಲರಂತೆಯೇ ಹುಟ್ಟಿದವರು, "ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ ?" ಎಂದು ಬಸವಮಹಾನುಭಾವನು ಹೇಳಿದುದನ್ನಾದರೂ ಜ್ಞಾಪಿಸಿಕೊಳ್ಳಬಾರದೆ ? ಒಬ್ಬರು ನಮ್ಮ ಐದು ಆಚಾರ್ಯರು ಐದು ಲಿಂಗಗಳಲ್ಲಿ ಉದ್ಭವಿಸಿದರೆಂದ ಕೂಡಲೆ ಇನ್ನೊಬ್ಬರು ನಮ್ಮ ಐದು ಮುಖಗಳ ಒಬ್ಬ ಗಣೇಶ್ವರ ಈ ಒಂದೇ ಲಿಂಗದಲ್ಲಿ ಉದ್ಭವಿಸಿದನೆಂತಲು ಮತ್ತೊಬ್ಬರು ಆ ವೃಷಭ ಮೂರ್ತಿಯು ಇವರಿಗೆ ಲಿಂಗವನ್ನು ಕೊಟ್ಟಿತೆಂತಲು ಹೇಳುವುದು ಶುದ್ಧ ಅಸಂಗತ. ಅನ್ಯ ಮತಗಳೆಲ್ಲಾ ಬೆಳೆಗುತ್ತಿರುವುದಕ್ಕೂ ಈ ಮತವು ಕಲ್ಲು ಮಣ್ಣುಗಳ ಪಾಲಾಗುತ್ತಿರುವುದಕ್ಕೂ ಇಂತಹ ತಪ್ಪುತಿಳುವಳಿಕೆಯನ್ನು ಜನರಲ್ಲಿ ಹುಟ್ಟಿಸುತ್ತಿರುವುದೇ ಕಾರಣವಾಗಿದೆ. ಧಾರ್ಮಿಕ ವಿಷಯವನ್ನು ಕೂಡಾ ಐತಿಹಾಸಿಕ ಮತ್ತು ಸಂಶೋಧಾತ್ಮಕ ದೃಷ್ಟಿಯಿಂದಲೇ ತಿಳಿದುಕೊಳ್ಳುವಂತಹ ಸ್ಥಿತಿಯು ಜನಸಾಮಾನ್ಯರಲ್ಲಿಯು ಕೂಡಾ ಉಂಟಾಗುವಂತೆ ಮಾಡಬೇಕೇ ವಿನಾ ಇಂತಹ ಅಸಂಗತ ಸಂಗತಿಗಳನ್ನು ಪ್ರಸಾರಗೊಳಿಸಿ ಹಿಂದುಳಿದ ಜನಸಾಮಾನ್ಯರಲ್ಲಿ ತಪ್ಪುತಿಳುವಳಿಕೆಯನ್ನುಂಟುಮಾಡುವುದು ಅನರ್ಥಕರವಲ್ಲವೆ ?

ಲಿಂಗಾಯತರು ಹಿಂದುಗಳಲ್ಲವೆ?

ಬೆಂಗಳೂರಿನ ಶ್ರೀ. ಜೀರಿಗೆ ಬಸವಲಿಂಗಪ್ಪನವರು ಬಸವರಾಜ ಪತ್ರಿಕೆಯಲ್ಲಿ "ಹಿಂದೂ ಮತದ ರಾಜಕೀಯದ ಆನುಕೂಲ್ಯಕ್ಕೋಸ್ಕರ ಸ್ವತಂತ್ರವಾದ ಲಿಂಗಾಯತ ಮತವನ್ನು ಪಾತಾಳಕ್ಕೆ ತುಳಿಯಬಹುದೇ ?" ಎಂಬ ಹೆಸರಿನ ಅನೇಕ ಲೇಖಗಳನ್ನು ಬರೆದಿದ್ದಾರೆ. ಅವುಗಳ ಭಾಷಾಂತರವು ಸುದರ್ಶನ ಪತ್ರಿಕೆಯಲ್ಲಿಯೂ ಪ್ರಕಟವಾಗಿದೆ.

ಲಿಂಗಾಯತರು ಹಿಂದುಗಳೆಂದು ಹೇಳಿಕೊಳ್ಳಬಾರದೆಂದೇ ಇವರ ಅಭಿಪ್ರಾಯವಿದ್ದಂತೆ ತೋರುತ್ತದೆ. ಯಾರಿಗೆ ಲಿಂಗಾಯತರೆನ್ನಬೇಕೆಂಬುದು ಇವರಿಗೆ ಹೇಗೆ ಗೊತ್ತಿದೆಯೋ ಹಾಗೆಯೇ ಯಾರಿಗೆ ಹಿಂದುಗಳೆನ್ನುತ್ತಾರೆಂಬುದೂ ಇವರಿಗೆ ಸರಿಯಾಗಿ ಗೊತ್ತಿದ್ದರೆ ಹೀಗೆ ಅನಾವಶ್ಯಕವಾಗಿ ಲೇಖನಗಳನ್ನು ಬರೆಯುತ್ತಿರಲಿಲ್ಲ. ಇಷ್ಟೇ ಅಲ್ಲ; ಶರಣ ಸಂದೇಶದ ಮೇಲೆ ಈ ವರೆಗೆ ಪರೋಕ್ಷವಾಗಿ ಟೀಕಿಸುತ್ತಾ ಬಂದು ಈಗ ಈ ಪ್ರಕಾರ ಪ್ರತ್ಯಕ್ಷವಾಗಿಯೇ ಜನರಲ್ಲಿ ದುರಭಿಪ್ರಾಯವುಂಟಾಗುವಂತೆ ಬರೆಯುವ ಸಾಹಸವನ್ನೂ ಮಾಡುತ್ತಿರಲಿಲ್ಲ.

ಶ್ರೀ ಬಸವಲಿಂಗಪ್ಪನವರಿಗೆ ಲಿಂಗಾಯತ ಶಬ್ದದ ಮೇಲೆ ಅತ್ಯಂತ ಪ್ರೇಮಾದರಗಳಿರುವುದೇನೋ ನಿಜ. ಅದು ಅಭಿನಂದನೀಯವಾದುದೇ ಸರಿ. ಆದರೆ ಈ ಅಭಿಮಾನವು ಹಿಂದು ಶಬ್ದವನ್ನು ದ್ವೇಷಿಸುವುದಾಗಿ ಪರಿಣಮಿಸಬಾರದಷ್ಟೆ.

ಇವರು ತಮ್ಮ ಲೇಖನಕ್ಕೆ ಕೊಟ್ಟ ಹೆಸರಿನಲ್ಲಿ ಮೊದಲು "ಹಿಂದು ಮತದ ರಾಜಕೀಯ ಆನುಕೂಲ್ಯಕ್ಕೋಸ್ಕರ" ಎಂದು ಹೇಳಿಕೊಂಡಿದ್ದಾರಷ್ಟೆ. ಈಗ ಬರಲಿರುವ ಬ್ರಿಟಿಶ್ ಇಂಡಿಯಾ ರಾಜಕೀಯ ಸುಧಾರಣೆಯ ರೀತಿನೀತಿಗಳನ್ನು ಇವರು ಚೆನ್ನಾಗಿ ತಿಳಿದುಕೊಂಡಿದ್ದರೆ ಈ ಪ್ರಕಾರ ದೋಷಾರೋಪಣೆ ಮಾಡುತ್ತಿರಲಿಲ್ಲ. ಈಗ ಬರುವ ರಾಜಕೀಯ ಸುಧಾರಣೆಯಲ್ಲಿ 'ಹಿಂದು' ಹೆಸರನ್ನೇ ಇಲ್ಲದಂತೆ ಮಾಡಿದ್ದಾರೆಂಬುದು ಇವರಿಗೆ ಗೊತ್ತಿದ್ದಂತೆ ಕಾಣುವುದಿಲ್ಲ. 'ಮುಸಲ್ಮಾನೇತರ' 'ಜನರಲ್' ಎಂಬ ಶಬ್ದಗಳವೆಯೇ ವಿನಾ 'ಹಿಂದು' ಎಂಬ ಒಂದು ಪ್ರತ್ಯೇಕ ಮತಕ್ಕೆ ಪ್ರಾತಿನಿಧ್ಯವೇನೂ ಇಲ್ಲವೇ ಇಲ್ಲ. ಎಂದಮೇಲೆ ರಾಜಕೀಯ ಆನುಕೂಲ್ಯಕ್ಕೋಸ್ಕರವೆಂದರೇನು ?

ಯಾವ ಲಿಂಗಾಯತರು ರಾಜಕೀಯ ಆನುಕೂಲ್ಯಕ್ಕೋಸ್ಕರ ತಾವು ಲಿಂಗಾಯತರಲ್ಲವೆಂತಲೂ ಹಿಂದುಗಳೆಂತಲೂ ಹೇಳಿಕೊಳ್ಳುತ್ತಿದ್ದಾರೆಂಬುದನ್ನು ಇವರು ತಿಳಿಸಿದ್ದರೆ ಚೆನ್ನಾಗಿತ್ತು. ಮತ್ತು ಹಾಗೆ ಹಿಂದುಗಳೆಂದು ಹೇಳಿಕೊಂಡರೆ ಯಾವ ರಾಜಕೀಯ ಆನುಕೂಲ್ಯ ದೊರೆಯುತ್ತದೆಂಬುದನ್ನೂ ಹೇಳಿದ್ದರೆ ಒಳ್ಳೆಯದಿತ್ತು. ಮುಸಲ್ಮಾನ್ ಎಂದು ಹೇಳಿಕೊಂಡರೆ ಮಾತ್ರ ರಾಜಕೀಯ ಆನುಕೂಲ್ಯ ದೊರೆಯುವುದು ಎಲ್ಲರಿಗೂ ಗೊತ್ತಿದೆ. ಹಾಗೆ ಹಿಂದು ಎಂಬ ಶಬ್ದಕ್ಕೆ ಯಾವ ಸರಕಾರದವರು ಯಾರಿಗೆ ಎಲ್ಲಿ ಅನುಕೂಲ ಪಡಿಸುತ್ತಿದ್ದಾರೆಂಬುದು ನಮಗಂತೂ ಗೊತ್ತಿಲ್ಲ. ಅದನ್ನು ಶ್ರೀ. ಬಸವಲಿಂಗಪ್ಪನವರು ಪ್ರಕಟಿಸಿದ್ದರೆ ಲಿಂಗಾಯತರು ಅಲ್ಲಿ ಸೇರಲು ತಮ್ಮ ಮತದ ಹೆಸರನ್ನು ಬಿಟ್ಟು ಹಿಂದು ಎಂಬ ಹೆಸರನ್ನೇ ಹೇಳುತ್ತಿದ್ದುದು ನಿಜವೇ, ಸುಳ್ಳೇ, ಎಂಬುದನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತಿದ್ದಿತು.

ತಾ. ೧೬-೧೨-೩೫ ನೆಯ ಬಸವರಾಜ ಪತ್ರಿಕೆಯಲ್ಲಿ "ಹಿಂದು ಮಾಡುತದು ಲಿಂಗಾಯತನ ತಗವಲ್ಲ ಹಿಂದು ಎಂಬುದು ವರ್ಣಾಶ್ರಮದಾ ಬ್ರಾಹ್ಮಣರ| ಸಂದಧಿಕಾರಕ್ಕೊಳಪಟ್ಟ ನಾಮವಿಶ್ಯುತರ|" ಎಂದು "ಬಿಡಿರಿ ಬಿಡಿರಿ ಹಿಂದು ಎಂಬ ಹೊರಗಣ ಮಂಜನು। ಹಿಡಿಯರಿ ಸ್ವತಂತ್ರತೆಯನು ಸ್ವಂತನಾಮವನು" ಎಂದು ಬರೆದಿದ್ದಾರೆ. ಇದರಿಂದ ಈ ಲೇಖಕರಿಗೆ ಹಿಂದು ಶಬ್ದದ ವ್ಯಾಖ್ಯೆಯೇ ಗೊತ್ತಿಲ್ಲವೆಂತಲೂ ಹಿಂದು ಎಂಬುದಕ್ಕೆ ವೃಥಾ ವಿರೋಧಿಸುತ್ತಿದ್ದಾರೆಂತಲೂ ಸ್ಪಷ್ಟವಾಗುತ್ತದೆ.

ಲಿಂಗಾಯತರನ್ನು ಹಿಂದುಗಳನ್ನಾಗಿ ಮಾಡುವುದು ಯುಕ್ತವಲ್ಲವಂತೆ! ಏಕೆಂದರೆ ಹಿಂದುಗಳೆಂದರೆ ವರ್ಣಾಶ್ರಮಗಳ ಬ್ರಾಹ್ಮಣರ ಅಧಿಕಾರಕ್ಕೊಳಪಟ್ಟಂತಾಗುತ್ತದಂತೆ!

ತಾ. ೨೦-೭-೩೬ನೆಯ ಬಸವರಾಜ ಪತ್ರಿಕೆಯಲ್ಲಿ ಈ ಲೇಖಕರೇ ಹಿಂದು ಮಹಾಸಭೆಯವರು ಜೈನ, ಶೀಖ, ಬೌದ್ಧರನ್ನು ಹಿಂದುಗಳೆಂದು ಹೇಳಿ ಲಿಂಗಾಯತರ ಹೆಸರನ್ನೇ ಎತ್ತಿಕೊಳ್ಳದಿರುವುದಕ್ಕೆ ವಿಷಾದಿಸಿದ್ದಾರೆ. ಇದು ವಿಚಿತ್ರವಲ್ಲವೆ? ಜೈನ, ಶೀಖ, ಬೌದ್ಧರು ವರ್ಣಾಶ್ರಮಗಳ ಬ್ರಾಹ್ಮಣರ ಅಧಿಕಾರಕ್ಕೊಳಪಟ್ಟಿದ್ದಾರೆಯೇ? ಹಿಂದು ಎಂದ ಮಾತ್ರದಲ್ಲಿ ಬ್ರಾಹ್ಮಣರ ಅಧೀನರಾಗುತ್ತೇವೆಂದು ಇವರು ಮೊದಲು ಬರೆದುದು ಸುಳ್ಳೆಂಬುದಕ್ಕೆ ಇವರ ಈ ಎರಡನೇ ಲೇಖನವೇ ಸಾಕ್ಷಿ. ಬ್ರಾಹ್ಮಣರ ಅಧಿಕಾರಕ್ಕೊಳಪಡುವುದರಿಂದ ಹಿಂದುಗಳೆಂದು ಹೇಳಿಕೊಳ್ಳಬಾರದಾಗಿ ಮೊದಲು ಬರೆದವರೂ ಇವರೆ. ಈಗ ಶೀಖರನ್ನೂ ಜೈನರನ್ನೂ ಹಿಂದುಗಳನ್ನಾಗಿ ಹಿಂದು ಮಹಾಸಭೆಯವರು ಪರಿಗಣಿಸಿದ್ದರೇ ವಿನಾ ಲಿಂಗಾಯತರ ಹೆಸರನ್ನೇ ಎತ್ತಿಲ್ಲವೆಂದು ವಿಷಾದಿಸಿದವರೂ ಇವರೇ.

ಹಿಂದು ಮಹಾಸಭೆಯ ಪ್ರತ್ಯೇಕ ಸಂಚಿಕೆಯಲ್ಲಿ ಹಿಂದು ಶಬ್ದದ ವ್ಯಾಖ್ಯೆಯನ್ನು ವಿವರವಾಗಿ ತಿಳಿಸಿದ್ದೇವೆ: ಸಿಂಧೂನದಿಯಿಂದ ದಕ್ಷಿಣ ಸಮುದ್ರದ ವರೆಗಿರುವ ಹಿಂದುಸ್ಥಾನದಲ್ಲಿ ಜನ್ಮವೆತ್ತಿದ ಯಾವ ವಿಭೂತಿಯ ಮತವನ್ನು ಯಾರು ಅನುಸರಿಸಿ ಅವರು ಈ ಹಿಂದುಸ್ಥಾನವೇ ತಮ್ಮ ಮಾತೃಭೂಮಿಯೆಂತಲೂ ತಿಳಿಯುತ್ತಾರೆಯೋ ಅವರೇ ಹಿಂದುಗಳು. ಇದೇ ಹಿಂದು ಮಹಾಸಭೆಯವರ ಹಿಂದು ಎಂಬ ಶಬ್ದದ ವ್ಯಾಖ್ಯೆ. ಅಂತೆಯೇ ವೇದ ಮಾನ್ಯ ಮಾಡದ ಮತ್ತು ಬ್ರಾಹ್ಮಣರ ವರ್ಣಾಶ್ರಮಗಳನ್ನು ಅನುಸರಿಸದ ಶೀಖ, ಜೈನ, ಬೌದ್ಧರು ಕೂಡಾ ಹಿಂದುಗಳಾಗಿಯೇ ಎಣಿಸಲ್ಪಡುತ್ತಿದ್ದಾರೆ.

ಸಕ್ಕರೆಯ ಕಾರ್ಯಾಲಯಕ್ಕೆ ಒಳ್ಳೇ ಸ್ಥಳ.

ಪ್ರತಿ ದಿನಕ್ಕೆ ೪೨೦ ಟನ್ ಕಬ್ಬನ್ನು ಹಿಂಡುವ ಆಧುನಿಕ ಸಕ್ಕರೆಯ ಕಾರ್ಯಾಲಯಕ್ಕೆ ಕೊಪ್ಪಳ ತಾಲೂಕು ಮುನಿರಾಬಾದ ಸ್ಥಳವು ಬಹು ಅನುಕೂಲವಾದುದು. ಇದರ ಸುತ್ತಲೂ ನಾಲ್ಕು ಮೈಲು ಕ್ಷೇತ್ರದಲ್ಲಿ ೬॥ ಸಾವಿರ ಎಕರೆ ಭೂಮಿಯು ತುಂಗಭದ್ರಾ ಕಾಲುವೆಯಿಂದ ಸಾಗುವಳಿಯಾಗುತ್ತಲಿದೆ.

ಈ ಸಂಸ್ಥಾನಾಧಿಪತಿಗಳಾದ ಸರ್ ಸಾಲರಜಂಗ ಬಹದ್ದೂರರವರು ತಮ್ಮಲ್ಲಿಯ ಉದ್ಯೋಗಕ್ಕೆ ತುಂಬಾ ಪ್ರೋತ್ಸಾಹಿಸುವರು. ಆದಕಾರಣ ಭೂಮಿ, ನೀರು, ಪೇಟೆಗಳೆಲ್ಲಾ ಅನುಕೂಲವಾಗಿರತಕ್ಕ ಈ ಸ್ಥಳಕ್ಕೆ ಸಾಹಸಿಗಳು ಬಂದು ಒಂದು ಸಕ್ಕರೆಯ ಕಾರ್ಯಾಲಯವನ್ನು ಸ್ಥಾಪಿಸಬಾರದೆ?

ಓರ್ವ ಕೊಪ್ಪಳದ ರೈತ.

ಅವರು ಈಗ ಹಿಂದುಗಳೆಂದು ಹೇಳಿಕೊಂಡ ಮಾತ್ರದಲ್ಲಿ ಜೈನ, ಶೀಖ ಮತಗಳನ್ನೇನೂ ಬಿಡಬೇಕೆಂದು ಯಾರೂ ಹೇಳುವುದಿಲ್ಲ. ಅವರು ಬಿಟ್ಟೂ ಇಲ್ಲ. ಅವರಿಗೆ ನಿಮ್ಮ ಮತ ಯಾವುದೆಂದು ಕೇಳಿದರೆ ಜೈನ ಅಥವಾ ಶೀಖ ಎಂದು ಹೇಳಕೂಡದೆಂಬ ಕಟ್ಟಲೆಯೂ ಇಲ್ಲ. ಹಿಂದು ಮಹಾಸಭೆಯ ನಿಯಮಗಳಲ್ಲಿಯೇ ಬೇರೆ ಬೇರೆ ಸಂಪ್ರದಾಯದವರಲ್ಲಿ ಪರಸ್ಪರ ಸಹಾನುಭೂತಿಯುಂಟಾಗುವಂತೆ ಪ್ರಯತ್ನಿಸಬೇಕೆಂದಿದೆಯೇ ವಿನಾ ಎಲ್ಲಾ ಮತಗಳನ್ನೂ ಬಿಟ್ಟು ಬ್ರಾಹ್ಮಣರ ವರ್ಣಾಶ್ರಮಗಳನ್ನು ಎಲ್ಲರೂ ಒಪ್ಪುವಂತೆ ಮಾಡಬೇಕೆಂದೇನೂ ಹೇಳಿಲ್ಲ.

ಆದಕಾರಣ ಈ ಎಲ್ಲಾ ಸಂಗತಿಗಳನ್ನು ಸರಿಯಾಗಿ ಯೋಚಿಸದೆ ವೃಥಾ ಬೇರೆಯವರ ಮೇಲೆ ಇಂತಹ ಲೇಖಕರು ಹೀಗೆ ಟೀಕಿಸುತ್ತಾ ಬರೆಯುತ್ತಿರುವುದು ತುಂಬಾ ವಿಷಾದಕರವು. ಮತ್ತು ಕಾಲದ ಅಪವ್ಯಯವು.

ಲಿಂಗಾಯತ ಮತವು ಬಸವೇಶ್ವರನಿಂದಲೇ ಸ್ಥಾಪನೆಯಾಯಿತೆಂದು ಶ್ರೀ ಬಸವಲಿಂಗಪ್ಪನವರು ಹೇಳುತ್ತಿದ್ದಾರಷ್ಟೆ. ಆ ಬಸವೇಶನು ಹಿಂದುಸ್ಥಾನದಲ್ಲಿ ಹುಟ್ಟಿಲ್ಲವೆ? ಆತನ ಮತೀಯರಾದ ಲಿಂಗಾಯತರು ಈ ಹಿಂದುಸ್ಥಾನವನ್ನು ಮಾತೃಭೂಮಿಯೆಂದು ತಿಳಿಯುವುದಿಲ್ಲವೆ? ಎಂದಮೇಲೆ ಹಿಂದು ಮಹಾಸಭೆಯ ವ್ಯಾಖ್ಯೆಯ ಪ್ರಕಾರ ಲಿಂಗಾಯತರು ಹಿಂದುಗಳಾಗುವುದಿಲ್ಲವೆ?

ಜೈನ, ಶೀಖ ಮತದವರು ಜನಪರಿಗಣನೆಯಲ್ಲಿ ಹೇಗೆ ತಮ್ಮ ತಮ್ಮ ಮತದ ಹೆಸರನ್ನೇ ಬರೆಯಿಸುತ್ತಿದ್ದಾರೆಯೋ ಹಾಗೆಯೇ ಲಿಂಗಾಯತರು ತಾವು ಲಿಂಗಾಯತ ಮತದವರೆಂದು ಬರೆಯಿಸಲು ಯಾರು ಬೇಡವೆಂದಿದ್ದಾರೆ? ಹಿಂದು ಎಂಬ ಹೆಸರೇ ಇವರಿಗೆ ಬೇಡ. ಆದರೆ ಹಿಂದು ಮಹಾಸಭೆಯು ಲಿಂಗಾಯತರನ್ನು ಗೌರವವಾಗಿ ಕಾಣುವುದು ಮಾತ್ರ ಬೇಕು. ಇದು ಸೂರ್ಯನನ್ನೇ ನೋಡುವುದಿಲ್ಲವೆಂದು ಕೋಣೆಯ ಕಿಡಿಕಿಗಳನ್ನೆಲ್ಲಾ ಮುಚ್ಚಿಕೊಂಡು ಸೂರ್ಯ ಪ್ರಕಾಶವೇ ಇಲ್ಲವಲ್ಲಾ ಎಂದು ಚಿಂತಿಸುವಂತೆಯೇ ಸರಿ.

ಹಿಂದು ಮಹಾಸಭೆಯು ಸೇರಲು ಪ್ರಾರಂಭವಾಗಿ ೧೭ ವರುಷಗಳಾದರೂ ದಕ್ಷಿಣ ಹಿಂದುಸ್ಥಾನಕ್ಕೆ ಬಂದುದೇ ಎರಡು ಸಾರೆ. ಅದೂ ಮಹರಾಷ್ಟ್ರ ದೇಶದಲ್ಲಿ ಮಾತ್ರ. ಲಿಂಗಾಯತರ ಬೆಳಕು ಉತ್ತರ ಹಿಂದುಸ್ಥಾನದಲ್ಲೆಷ್ಟಿದೆ? ಮಹರಾಷ್ಟ್ರದಲ್ಲಿ ಇವರೆಷ್ಟು ಗಣ್ಯರಾಗಿದ್ದಾರೆ? ಲಿಂಗಾಯತರಲ್ಲಿ ಅದೆಷ್ಟು ಜನರು ಮಹಾಸಭೆಯಲ್ಲಿ ಹೋಗಿ ದುಡಿದಿದ್ದಾರೆ? ಬಸವಾದಿ ಪ್ರಮಥರ ತತ್ವಗಳು ಇಂಗ್ಲಿಷ್, ಹಿಂದಿ, ಪಂಜಾಬಿ, ಬಂಗಾಲಿ ಮೊದಲಾದ ಪ್ರಸಿದ್ಧ ಭಾಷೆಗಳಲ್ಲಿ ಅದೆಷ್ಟು ಪ್ರಸಾರವಾಗಿವೆ? ಇವೆಲ್ಲ ಲೇಖಕರಿಗೆ ಚೆನ್ನಾಗಿ ಗೊತ್ತಿದೆಯಷ್ಟೆ. ಎಂದಮೇಲೆ "ಹಿಂದು ಮಹಾಸಭೆಯವರಿಗೆ ಪೃಥ್ವಿಯಲ್ಲಿ ಲಿಂಗಾಯತ ಧರ್ಮವೆಂಬುದೊಂದು ಧರ್ಮವಿದೆ ಎಂದು ಗೊತ್ತೇ ಇಲ್ಲ." ಎಂದು ಲೇಖಕರು ಬರೆದುದು ಯಾರಿಗೆ? ಮಹಾಸಭೆಯು ಪಕ್ಷಪಾತ ಮಾಡುತ್ತದೆಂದು ಅದರ ಚಾಲಕರಿಗೊ? ಅಥವಾ ಲಿಂಗಾಯತರು ಇನ್ನೂ ತಮ್ಮ ಮನೆಯನ್ನೇ ಬಿಟ್ಟು ಹೊರಗೆ ಹೋಗಿಲ್ಲವಲ್ಲಾ ಎಂಬ ಪಶ್ಚಾತ್ತಾಪದಿಂದ ನಮ್ಮನ್ನೇ ನಾವು ಹೀಯಾಳಿಸಿಕೊಂಡುದೋ?

ರಾಜಕಾರಣ, ಹಿಂದು ಶಬ್ದ, ಲಿಂಗಾಯತ ಮತ ಈ ಮೂರನ್ನೂ ಲೇಖಕರು ತಮ್ಮ ಲೇಖ ಮಾಲೆಯಲ್ಲಿ ಕೂಡಿಸಿ ಅಸಂಗತವಾಗಿ ಬರೆಯುತ್ತಿದ್ದಾರೆ. ಈ ಎಲ್ಲಾ ಸಂಗತಿಗಳನ್ನು ಚೆನ್ನಾಗಿ ಯೋಚಿಸಿಯೇ ಈ ವಿಷಯವನ್ನು ಪ್ರಸ್ತಾಪಿಸಬೇಕಾದುದು ಲೇಖಕರ ಕರ್ತವ್ಯವಲ್ಲವೆ?

ಹಿಂದು ಮಹಾಸಭಾ ಸಂಚಿಕೆಯಲ್ಲಿ ಜೈನ, ಬೌದ್ಧ ಆರ್ಯ ಸಮಾಜದವರ ಹೆಸರುಗಳ ಜತೆಗೆ ನಾವೇ ಲಿಂಗಾಯತರನ್ನು ಸೇರಿಸಿದ್ದೇವೆ ವಿನಾ ಮಹಾಸಭೆಯ ನಿರ್ಧಾರದಲ್ಲಿ ಲಿಂಗಾಯತರ ಹೆಸರೇ ಇಲ್ಲವೆಂದು ಲೇಖಕರು ನಮ್ಮನ್ನು ಆಕ್ಷೇಪಿಸಿದ್ದಾರೆ. ಹಿಂದು ಮಹಾಸಭೆಯವರ ಕಣ್ಣಿಗೆ ಬೀಳುವಷ್ಟು ನಾವು ಇನ್ನೂ ಬಲಪಟ್ಟಿಲ್ಲವಲ್ಲಾ ಎಂದು ಲೇಖಕರು ವಿಷಾದಿಸಬೇಕಾಗಿದ್ದಿತೇ ವಿನಾ ನಮ್ಮ ಮೇಲೆ ಹೀಗೆ ಆಕ್ಷೇಪಿಸಬಾರದಾಗಿತ್ತು. ಹಿಂದು ಮಹಾಸಭೆಯಲ್ಲಿ ನಾವು ಜೈನ, ಶೀಖರಂತೆ ನಮ್ಮ ಅಸ್ತಿತ್ವವನ್ನೂ ವೈಶಿಷ್ಟ್ಯವನ್ನೂ ತೋರಿಸಿಕೊಳ್ಳದಿದ್ದುದು ಲಿಂಗಾಯತರ ಹೀನ ದೀನ ಸ್ಥಿತಿಗಳ ದ್ಯೋತಕ.

ಈ ಸಾರೆ ಪುಣೆಯಲ್ಲಿ ಹಿಂದು ಮಹಾಸಭೆಯು ಸೇರಿದುದರಿಂದ ಅದರ ಕಾರ್ಯ ಚಾಲಕರಲ್ಲಿ ಕೆಲವರಾದರೂ ಲಿಂಗಾಯತ ಸಮಾಜದ ನಾಮ ನಿರ್ದೇಶ ಮಾಡಿದರು. ನಾವು ಯಾರನ್ನೋ ಮೋಸಗೊಳಿಸಲು ಹೀಗೆ ಇಲ್ಲದ ಲಿಂಗಾಯತ, ಎಂಬ ಶಬ್ದವನ್ನು ಸೇರಿಸಿದ್ದೇವೆಂದು ಲೇಖಕರು ತಿಳಿದು ವ್ಯಂಗವಾಗಿ ಬರೆದುದು ಅತ್ಯಂತ ನಿಂದ್ಯವಾದುದು. ಪುಣೆ ಹಿಂದು ಮಹಾಸಭೆಯ ಸ್ವಾಗತ ಸಂಘದವರು ಪ್ರಕಟಿಸಿದ ಪ್ರಸಿದ್ಧ ಪತ್ರಿಕೆಯನ್ನೇ ನಮ್ಮ ಕಡೆ ಪ್ರಕಟನೆಗಾಗಿ ಕಳಿಸಿದ್ದರು. ಅದನ್ನೇ ನಾವು ಮಹಾಸಭೆಗಿಂತ ನಾಲ್ಕು ತಿಂಗಳು ಹಿಂದೆಯೇ ತಾ. ೨೬-೮-೧೯೩೫ ನೆಯ ಶರಣ ಸಂದೇಶದಲ್ಲಿ **'ಹಿಂದು ಮಹಾಸಭೆ'** ಎಂಬ ಶಿರೋಲೇಖನದಿಂದ ಪ್ರಕಟಿಸಿದ್ದೇವೆ. ಅದರಲ್ಲಿ ಹಿಂದುವಿನ ಲಕ್ಷಣ ಎಂಬದರ ಕೆಳಗೆ 'ಆ ಸಿಂಧು ಸಿಂಧು' ಎಂಬ ಹಿಂದುವಿನ ವ್ಯಾಖ್ಯೆಯ ಶ್ಲೋಕವನ್ನೂ ಅದರ ಕೆಳಗೆ **ಬೌದ್ಧ ಜೈನ, ಲಿಂಗಾಯತ** ಎಂದು ಇದ್ದುದನ್ನೂ ಲೇಖಕರು ನೋಡಿಕೊಳ್ಳಬೇಕು. ಬೇಕಾದರೆ ಪುಣೆಯ ಹಿಂದು ಮಹಾಸಭೆಯವರಿಂದ ಆ ಪ್ರಕಟನೆಯನ್ನು ತರಿಸಿಕೊಳ್ಳಬೇಕು.

ಹಿಂದು ಮಹಾಸಭೆಯು ಕರ್ನಾಟಕದಲ್ಲಿ ಸೇರಿಲ್ಲ. ಲಿಂಗಾಯತರು ಕರ್ನಾಟಕ ಬಿಟ್ಟು ಮುಂದೆ ಹೋಗಿ ಉತ್ತರ ದೇಶದವರಿಗೆ ನಮ್ಮ ಅಸ್ತಿತ್ವವನ್ನು ತೋರಿಸಿ ಕೊಟ್ಟಿಲ್ಲ, ಎಂದಮೇಲೆ ನಮ್ಮ ಹೆಸರೇ ಬಾರದಿರುವುದು ಸ್ವಾಭಾವಿಕವಷ್ಟೆ. ಇದರಿಂದ ಹಿಂದು ಶಬ್ದವನ್ನೂ, ಹಿಂದು ಮಹಾಸಭೆಯನ್ನೂ ವಿರೋಧಿಸಿದರೆ ಯಾರಿಗೆ ನಷ್ಟ?

ಲೇಖಕರು ಅನೇಕ ದಿನಗಳಿಂದ ಈ ವಿಷಯವನ್ನು ಸಲ್ಲದ ರೀತಿಯಲ್ಲಿ ಚರ್ಚಿಸಿ ಮುರಾರಿಯಲ್ಲಿಯೂ ಪ್ರಕಟಿಸಿದ್ದರಿಂದ ಜನರಲ್ಲಿ ದುರಭಿಪ್ರಾಯವುಂಟಾದುದು ಹಿಂದು ಮಹಾಸಭಾ ಕಾಲಕ್ಕೆ ಪುಣೆಯಲ್ಲಿ ನಮಗೆ ಗೊತ್ತಾಯಿತು. ಆದಕಾರಣ ಈ ವಿಷಯವನ್ನು ಇಷ್ಟು ವಿಸ್ತಾರವಾಗಿ ವಿವರಿಸಿದ್ದೇವೆ. ಇವರ ಈ ವಿಧವಾದ ವಿಚಾರಸರಣಿಯು ಯಾವ ಲಿಂಗಾಯತ ಶಬ್ದಕ್ಕೆ ಗೌರವ ದೊರೆಯಬೇಕೆಂದು ಇವರು ಇಷ್ಟು ಅಪೇಕ್ಷಿಸುತ್ತಿದ್ದಾರೆಯೋ ಆ ಶಬ್ದಕ್ಕೆ ಅಗೌರವವನ್ನೇ ಉಂಟುಮಾಡುತ್ತದೆಂದು ತಿಳಿಯಬೇಕು.

ನಮ್ಮ ಮತ ಲಿಂಗಾಯತ ಮತ. ನಾವು ಹಿಂದು ಜನಾಂಗದವರು. ನಮ್ಮ ಮಾತೃಭೂಮಿ ಹಿಂದುಸ್ಥಾನ. ಈ ದೇಶ, ಈ ಜನಾಂಗ ಮತ್ತು ಈ ಮತಗಳ ಉನ್ನತಿಗಾಗಿ ಸರ್ವಸ್ವವನ್ನೂ ಸೂರೆ ಮಾಡುವುದು ಪ್ರತಿಯೊಬ್ಬ ಲಿಂಗಾಂಗಿಯ ಮುಖ್ಯ ಕರ್ತವ್ಯ. ಇವುಗಳಲ್ಲಿ ಯಾವುದನ್ನು ಉಪೇಕ್ಷಿಸಿದರಾಗಲಿ ಅಥವಾ ದ್ವೇಷಿಸಿದರಾಗಲಿ ನಮ್ಮ ನಾಶವನ್ನೇ ನಾವು ಮಾಡಿಕೊಂಡಂತಾಗುವುದು.

ಲೇಖಕರು ಪರೋಕ್ಷವಾಗಿಯೂ, ವ್ಯಂಗವಾಗಿಯೂ ಈ ಸಂಬಂಧವಾಗಿ ಏನನ್ನಾದರೂ ಹೀಗೆ ಬರೆಯದೆ ಸಪ್ರಮಾಣವಾಗಿಯೂ ಸ್ಪಷ್ಟವಾಗಿಯೂ ತಮ್ಮ ವಿಷಯವನ್ನು ನಮ್ಮ ಕಡೆಗೆ ಬರೆದು ಕಳುಹಿಸಿದರೆ ಅದನ್ನು ಪ್ರಕಟಿಸಿ ನಮ್ಮ ವಿಚಾರವನ್ನೂ ತಿಳಿಸುತ್ತೇವೆ. ಹೀಗೆ ಮಾಡುವುದರಿಂದ ನಿಜ ಸ್ಥಿತಿಯು ಗೊತ್ತಾಗುತ್ತದೆ. ಲಿಂಗಾಯತರು ಹಿಂದುಗಳೇಕೆ ಅಲ್ಲವೆಂಬ ಮುಖ್ಯ ವಿಷಯವೊಂದನ್ನೇ ಲೇಖಕರು ಪ್ರತಿಪಾದಿಸಬೇಕಾಗಿ ಪ್ರಾರ್ಥನೆ

ವಿ ವಿ ಧ ವಿ ಷ ಯ .

ಸುಧಾರಣೆಯ ಸತ್ಫಲ!

ಅಮೇರಿಕೆಯ ಒಬ್ಬ ಪತ್ರಿಕಾ ಪ್ರತಿನಿಧಿಯು ತಾನು ಕಣ್ಣಾಕ್ಷಿ ನೋಡಿದ ಸಂಗತಿಯನ್ನು ಈ ಪ್ರಕಾರ ತಿಳಿಸಿದ್ದಾನೆ—

"ಅಬಸೀನಿಯಾದ ಬಾದಶಹರು ಡೇಸಿ ಪಾಳ್ಯದಲ್ಲಿ ಬಂದಿರುವರೆಂಬ ಸಮಾಚಾರವನ್ನು ತಿಳಿದು ಇಟಲಿಯ ವಿಮಾನುಗಳು ಸದ್ದಿಲ್ಲದೆ ಬಂದು ಮೊದಲು ಅವರ ಅರಮನೆಯ ಮೇಲೆ ಬಾಂಬು ಹಾಕಿದವು. ಅರಮನೆಯು ನೆಲಸಮವಾಯಿತು. ಅಲ್ಲಿಂದ ಅವು ಅಮೇರಿಕೆಯ ರೆಡ್‌ಕ್ರಾಸ್ ಆಸ್ಪತ್ರೆಯ ಮೇಲೆ ಒಂದು ಬಾಂಬು ಎಸೆಯಹತ್ತಿದವು. ಬಾದಶಹರು ಆ ಸ್ಪ ತ್ರೆ ಯ ಆಶ್ರಯವನ್ನು ಹೊಂದಿರುವರೆಂದು ಅವರು ತಿಳಿದಿದ್ದರೋ ಏನೊ! ಅಲ್ಲಿಂದ ವಿಮಾನುಗಳು ಸೈನ್ಯವು ಬೀಡು ಬಿಟ್ಟಲ್ಲಿಗೆ ಸಾಗಿದವು. ಸುಂಯಿಗುಟ್ಟುತ್ತ ಒಂದು ಬಾಂಬು ಬಂದು ಪಾಳ್ಯದ ಮಧ್ಯದಲ್ಲಿ ಕೆಂಪು ಡೇರೆಗೆ ಬಡಿಯಿತು. ಆದರೆ ಬಾದಶಹರು ದೊರೆಯಲಿಲ್ಲ. ಆ ಕಾಲಕ್ಕೆ ರಾಸತಧಾರಿಯವರು ಬೀದಿಯಲ್ಲಿ ಜನರಲ್ ಬೀರು ಮತ್ತು ಡಾ. ಝುವ್ರೋಸ್ ಇವರೊಡನೆ ಮಾತಾಡುತ್ತ ನಿಂತಿದ್ದರು. ಬಾಂಬಿನ ಸಪ್ಪಳ ಕೇಳಿ ಅವರು ತಮ್ಮ ಆ್ಯಂಟಿ ಏರ್ ಕ್ರಾಫ್ಟ ಬಂದೂಕನ್ನು ತೆಗೆದುಕೊಂಡು ಗುಂಡು ಹಾರಿಸಹತ್ತಿದರು.

ಇಟಲಿಯ ಈ ದುರ್ವರ್ತನೆಯಿಂದ ಇಟಲಿಯ ಬೆಂಬಲಿಗರಾದ ಪತ್ರಿಕಾ ಪ್ರತಿನಿಧಿಗಳು ಸಹ ವಿರೋಧಿಗಳಾದರು. ಸತ್ತು ಹೋದ ನಿರುಪದ್ರವಿಗಳಲ್ಲಿ ಅನೇಕ ಜನ ಪತ್ರಿಕಾ ಪ್ರತಿನಿಧಿಗಳೂ ಇದ್ದರು. "ಇಕೋ ನೋಡಿರಿ" ಎಂದು ಒಬ್ಬ ಜ ರ್ಮ ನ್ ಯುದ್ಧ ಸರ್ಜನರು ಒಂದು ಹೆಣದ ಮೇಲಿನ ಅರಿವೆಯನ್ನು ಎತ್ತಿ ತೋರಿಸಿ- "ಇದು ನಮ್ಮ ಸುಧಾರಣೆಯ ಸತ್ಫಲ." ಎಂದರು. ಹೆಣದ ಹೊಟ್ಟೆ ಕಾಲುಗಳೆಲ್ಲ ಹರಿದು ನೋಡಲಿಕ್ಕೆ ಭೀಕರವಾಗಿದ್ದಿತು."

ಬಾಬರನ ಪತ್ರ.

ಬಾಬರನು ತನ್ನ ಜ್ಯೇಷ್ಠ ಪುತ್ರನಾದ ಹುಮಾಯುನನಿಗೆ ಫಾರ್ಶಿ ಭಾಷೆಯಲ್ಲಿ ಬರೆದ ಪತ್ರವು ಭೋಪಾಳದ ನವಾಬರ ಸ್ವಾಧೀನದಲ್ಲಿರುತ್ತದೆ. ಅದನ್ನು ಶ್ರೀ ಎನ್. ಸಿ. ಮೆಹತಾ ಐ. ಸಿ. ಎಸ್ ಇವರು "Twentieth Century" ಪ ತ್ರಿ ಕೆ ಯ ಲ್ಲಿ ಈ ರೀತಿ ಪ್ರಕಟಿಸಿರುವರು—

"ಸಾಮ್ರಾಜ್ಯದ ಸ್ಥಿರತ್ವಕ್ಕಾಗಿ ಇದನ್ನು ಬರೆದದ್ದಾಗಿದೆ. ನನ್ನ ಪುತ್ರನೆ, ಹಿಂದುಸ್ಥಾನ ದೇಶದಲ್ಲಿ ಅನೇಕ ಕುಲಗಳಿರುತ್ತವೆ. ಅಂಥ ದೇಶದ ಸಾಮ್ರಾಜ್ಯಾಧಿಕಾರವನ್ನು ಆ ದಯಾ-ನ್ಯಾಯ-ಶ್ರೇಯೋ ಪೂರ್ಣನಾದ ಪರಮಾತ್ಮನು ನಿನಗೆ ಒಪ್ಪಿಸಿದ್ದಾನೆ. ಆದುದರಿಂದ ಪ್ರತಿಯೊಂದು ಜಾತಿಯ ಪದ್ಧತಿಯಂತೆಯೇ ನ್ಯಾಯದಿಂದ ವರ್ತಿಸು. ಧರ್ಮದ ಮೂಢನಂಬಿಕೆಯನ್ನು ಬಿಟ್ಟು ಈ ಪ್ರಕಾರ ವರ್ತಿಸುವದೇ ಯೋಗ್ಯವು.

ಇಸ್ಲಾಮಿನ ಭದ್ರತೆಗಾಗಿ.

"ಮುಖ್ಯ ಸಂಗತಿಯೆಂದರೆ ಗೋವಧೆಯನ್ನು ಎಂದೂ ಮಾಡಬೇಡ. ಏಕೆಂದರೆ ಹಿಂದುಸ್ಥಾನದ ಜನರ ಹೃದಯವನ್ನು ಗೆಲ್ಲುವ ಮಾರ್ಗವು ಅದೇ ಆಗಿದೆ. ಈ ಪ್ರಕಾರ ರಾಜಕೃಪೆ ದೊರೆಯಿತೆಂದರೆ ಪ್ರಜೆಗಳೆಲ್ಲ ನಿನ್ನಲ್ಲಿ ಶ್ರದ್ಧೆಯುಳ್ಳವರಾಗುವರು. ನಿನ್ನ ಸಾಮ್ರಾಜ್ಯದಲ್ಲಿರುವ ಪ್ರತಿಯೊಂದು ಜಾತಿಯ ದೇವಾಲಯಗಳನ್ನೂ ಪೂಜಾಸ್ಥಾನಗಳನ್ನೂ ನೀನು ಭಂಗಪಡಿಸಬೇಡ. ರಾಜನ ಬಗ್ಗೆ ಪ್ರಜೆಗಳಲ್ಲಿಯೂ ಪ್ರಜೆಗಳ ಬಗ್ಗೆ ರಾಜನಲ್ಲಿಯೂ ಅನುರಾಗವುಂಟಾಗುವಂತೆ ನ್ಯಾಯದಿಂದ ವರ್ತಿಸು. ಬಲಾತ್ಕಾರದ ಶಸ್ತ್ರಕ್ಕಿಂತ ದಯಾ ಶಸ್ತ್ರದಿಂದ ಆಗುವ ಇಸ್ಲಾಮಿನ ಪ್ರಗತಿಯು ಶ್ರೇಷ್ಠವಾದದ್ದು.

ಶೀಯಾ ಮತ್ತು ಸುನ್ನೀ ಪಂಥಗಳಲ್ಲಿರುವ ಕಲಹಗಳನ್ನು ಲಕ್ಷ್ಯಕ್ಕೆ ತರಬೇಡ. ಏಕೆಂದರೆ ಅದರಲ್ಲಿಯೇ ಇಸ್ಲಾಮಿನ ಬಲಕ್ಕೆ ಭಂಗವುಂಟಾಗುವದು. ಭಿನ್ನ ಭಿನ್ನ ಮತದ ಪ್ರಜೆಗಳನ್ನೆಲ್ಲ ನಾಲ್ಕು ಮಹಾಭೂತಗಳ (Four Elements) ಪ್ರಕಾರ ಒಂದುಗೂಡಿಸು. ಅಂದರೆ ನಿನ್ನ ರಾಜ್ಯಾಂಗವು ಅನೇಕ ಗಂಡಾಂತರಗಳಿಂದ ಸುರಕ್ಷಿತವಾಗಿರುವದು."

ರಶಿಯಾದ ಅಭಿವೃದ್ಧಿ.

ರಶಿಯಾ ದೇಶವು ಇಲ್ಲಿಯ ವರೆಗೆ ಇಂಗ್ಲಂಡ ಮತ್ತು ಅಮೇರಿಕೆಗಳಿಂದ ಶಸ್ತ್ರಾಸ್ತ್ರಗಳನ್ನು ತರಿಸಿಕೊಳ್ಳುತ್ತಿದ್ದಿತು. ಆದರೆ ಇನ್ನು ಮೇಲೆ ಅದು ಪರದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವದಂತೆ. ಈ ಬಗ್ಗೆ ಪರದೇಶ ವ್ಯವಹಾರ ಮಂತ್ರಿಯಾದ ಎಮ್. ಪೋಲಿಸ್ಕ ಎಂಬುವರು ಅನ್ನುವದೇನಂದರೆ— ರಶಿಯಾ ದೇಶವು ಕಳೆದ ಎರಡು ವರ್ಷಗಳಿಂದಲೂ ಇರಾಣ ಮತ್ತು ತುರ್ಕಸ್ಥಾನಗಳಿಗೆ ಶಸ್ತ್ರಾಸ್ತ್ರ ಪೂರೈಕೆ ಮಾಡುತ್ತಲಿದೆ ಇನ್ನು ಮೇಲೆ ಅದು ಗ್ರೇಟಬ್ರಿಟನ್ ಮೊದಲಾದ ಯುರೋಪಿಯನ್ ರಾಷ್ಟ್ರಗಳಿಗೆ ಯಂತ್ರಸಾಮಗ್ರಿಗಳನ್ನು ಪೂರೈಸುವದು. ಅದರ ಕೈಗಾರಿಕೆಗಳು ಈಗ ಸು ಸ್ಥಿ ತಿ ಯಲ್ಲಿವೆ

ಉ ದ್ಗಿ ರಿ .

ಶ್ರೀ ಹಾವಗಿ ಸ್ವಾಮಿಗಳ ರಥೋತ್ಸವವು ಇಲ್ಲಿ ಈ ವರುಷ ಬಹು ಪರಿಣಾಮಕಾರಿಯಾಗಿ ಜರುಗಿತು. ಸುದರ್ಶನ ಪತ್ರಿಕಾಕರ್ತರಾದ ಶ್ರೀ ಸಿದ್ಧಮಲ್ಲಪ್ಪ ಕಲ್ಯಾಣಶೆಟ್ಟಿ ಇವರು ಮತ್ತು ಪ್ರಸಿದ್ಧ ಲಾವಣಿಕಾರರಾದ ಧುಳೆಯ ಶ್ರೀ ಸಿದ್ಧರಾಮಪ್ಪ ಮುಚಾಟೆ ಎಂಬುವವರು ಈ ಸಮಯಕ್ಕೆ ಬರಮಾಡಿಕೊಳ್ಳಲ್ಪಟ್ಟಿದ್ದರು. ಇವರು ವ್ಯಾಖ್ಯಾನ ಮತ್ತು ಪದಗಳಿಂದ ವೀರಶೈವ ಸಮಾಜದಲ್ಲಿ ವಿಶೇಷ ಜಾಗೃತಿಯನ್ನುಂಟುಮಾಡಿದರು.

(೧) ಹೀಗೆ ವೀರಶೈವ ಸಮಾಜೋನ್ನತಿಗಾಗಿ ಇಲ್ಲಿಯ ಪ್ರಸಿದ್ಧ ವಂದಾಳುಗಳಾದ ಶ್ರೀ ಸಂಗ್ರಾಮಪ್ಪ ವಕೀಲ, ಶ್ರೀ ಪ್ರಭುರಾವ ವಕೀಲ, ಧರ್ಮವೀರ ರಾಚಯ್ಯ ಸ್ವಾಮಿ ಮೊದಲಾದವರು ಪ್ರಯತ್ನಿಸುತ್ತಿರುವುದು ಈ ಭಾಗದ ವೀರಶೈವರ ಸುದೈವವೇ ಸರಿ.

(೨) ಲಿಂಗಾಯತರು ಆರ್ಯರೇನು? ಲಿಂಗ ಪರಮಾತ್ಮನು ಅಹುದೋ? ಅಲ್ಲವೊ? ಲಿಂಗಾಯತರ ಧರ್ಮ ಗ್ರಂಥ ಯಾವುದು? ಎಂದು ಆರ್ಯ ಸಮಾಜದವರು ಕೇಳಿದ ಪ್ರಶ್ನೆಗಳಿಗೆ ಶ್ರೀ ವಕೀಲ ಸಂಗ್ರಾಮಪ್ಪನವರು ಸಮರ್ಪಕ ಉತ್ತರ ಕೊಟ್ಟರು.

(೩) ಶ್ರೀ ಕಲ್ಯಾಣಶೆಟ್ಟಿ ವಕೀಲರು ವೀರಶೈವ ತತ್ವಜ್ಞಾನ ಮತ್ತು ಲಿಂಗಪೂಜಾ ರಹಸ್ಯವನ್ನು ಕುರಿತು ಅತ್ಯಂತ ಪರಿಣಾಮಕಾರಿಯಾದ ಭಾಷಣ ಮಾಡಿದರು. ಪ್ರತ್ಯಕ್ಷದರ್ಶಿ.

ಶುದ್ಧಿ ಸಮಾರಂಭ.

ಸೊಲ್ಲಾಪುರ ತಾಲೂಕು ಲಿಂಬಿಚಿಂಚೋಳಿಯಲ್ಲಿ ಗುರವ್ವ ಎಂಬ ಬಾಡಿಗುರುಬರ ಹೆಣ್ಣುಮಗಳು ೨೫ ವರ್ಷಗಳ ಹಿಂದೆ ಮುಸಲ್ಮಾನಳಾಗಿದ್ದಳು ಅವಳು ಹಿಂದು ಧರ್ಮದಲ್ಲಿ ಬರಲು ಅಪೇಕ್ಷಿಸಿದ್ದರಿಂದ ವೇ|| ಗೋಪಾಳ ಶ್ರೀಪಾದ ಜೋಶಿ ಎಂಬವರು ಶಾಸ್ತ್ರೋಕ್ತ ಶುದ್ಧಗೊಳಿಸಿ ಹಿಂದು ಧರ್ಮದಲ್ಲಿ ತೆಗೆದುಕೊಂಡರು.

ಗುಲಬರ್ಗಾ.

—:o:—

ತಾ ೧೦-೧-೩೬ ನೇ ದಿವಸ ಗುಲಬರ್ಗಾ ತರುಣ ಸಂಘದ ವತಿಯಿಂದ ಶಂಭುಲಿಂಗಶಾಸ್ತ್ರಿ ಕಾವ್ಯತೀರ್ಥ ಹಿರೇಮಠ ಘೀವನಹಳ್ಳಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೆಳಗಿನ ವಿಷಯಗಳನ್ನು ಸರ್ವಾನುಮತದಿಂದ ಪಾಸು ಮಾಡಿ ಮಹಾಸಭಾ ಸ್ವಾಗತ ಕಮಿಟಿ ರಾಯಚೂರ ಇವರಿಗೆ ತಿಳಿಸುತ್ತದೆ

(೧) ಮಹಾಸಭೆಯೊದರಿ ಅತ್ಯಂತ ಮಹತ್ವದ ವಿಷಯವಾಗಿದೆ. ಆ ಸಭೆಯಲ್ಲಿ ಸೇವೆಯನ್ನು ಮಾಡಲು ೩೦೦ಜನ ಸ್ವಯಂ ಸೇವಕರನ್ನು ತರುಣ ಸಂಘವು ಈಗಾಗಲೇ ಸಿದ್ಧ ಮಾಡಿರುತ್ತದೆ. ಮಾನನೀಯರಾದ ಸ್ವಾಗತ ಸಂಘದವರು ಗುಲಬರ್ಗಾ ತರುಣ ಸಂಘಕ್ಕೆ ಸೇವೆಯನ್ನು ಒಪ್ಪಿಸಬೇಕೆಂದು ಅದು ಪ್ರಾರ್ಥಿಸುತ್ತದೆ

(೨) ಮಹಾಸಭಾ ಸ್ವಾಗತ ಕಮೀಟಿಯವರು ಮಹಾಸಭೆಯ ಅಧ್ಯಕ್ಷತೆಯ ಪದವಿಗೆ ಯೋಗ್ಯರಾದ ಮತ್ತು ಕರ್ನಾಟಕಕ್ಕೂ ವೀರಶೈವ ಸಮಾಜಕ್ಕೂ ಭೂಷಣಪ್ರಾಯರಾದ ಮುಂಬೈ ಇಲಾಖೆಯ ವಿದ್ಯಾಖಾತೆಯ ಮಂತ್ರಿಗಳಾದ ನಾಮದಾರ ದಿವಾನಬಹಾದ್ದೂರ ಸಿದ್ಧಪ್ಪ ತೋಟಪ್ಪ ಕಂಬಳಿಯವರನ್ನೇ ಆರಿಸಬೇಕೆಂದು ಈ ಸಭೆಯು ಬಹಳ ಉತ್ಸಾಹದಿಂದ ಪ್ರಾರ್ಥಿಸುತ್ತದೆ. ಇದರಂತೆ ಬೇರೆ ಬೇರೆ ತರುಣ ಸಂಘಗಳಿಗೂ ಕೂಡ ಕಂಬಳಿಯವರನ್ನೇ ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ಪ್ರಾರ್ಥಿಸಲು ಬೇಡುತ್ತದೆ.

(೩) ರಾಯಚೂರಲ್ಲಿ ಈ ವರ್ಷ ಕೂಡುವ ಮಹಾಸಭೆಯಲ್ಲಿ ಸ್ವಾಗತ ಸಂಘದವರು ತರುಣ ಸಮ್ಮೇಲನವನ್ನು ಕೂಡಿಸಬೇಕೆಂದು ಈ ಸಭೆಯು ಪ್ರಾರ್ಥಿಸುತ್ತದೆ.

(೪) ಮತ್ತು ಕೈಗಾರಿಕೆಯ ಪ್ರದರ್ಶನವನ್ನೂ ಮಾಡಬೇಕೆಂದು ಪ್ರಾರ್ಥಿಸುತ್ತದೆ.

ಸೆಕ್ರೆಟರಿ.

ರಾಯಚೂರು.

—◆◆◆—

ತಾ. ೨-೧-೩೬ ನೇ ಸಾಯಂಕಾಲ ವೀರಶೈವ ಬೋರ್ಡಿಂಗ ರಾಯಚೂರಲ್ಲಿ ಸಮಸ್ತ ವೀರಶೈವರ ಸಭೆ ಶ್ರೀಯುತ ಇಂಡಿ ಗುರುಪಾದಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗಿನ ಠರಾವುಗಳನ್ನು ಸರ್ವಾನುಮತದಿಂದ ಪಾಸ ಮಾಡಿರುತ್ತದೆ.

(೧) ನಮ್ಮ ನಿಜಾಂ ಪ್ರಾಂತದ ವೀರಶೈವರ ಮಾನಮರ್ಯಾದೆಗೆ ಲೋಪ ಬರುವಂಥ ಭಯಂಕರ ದೋಷಾರೋಪಗಳನ್ನು ಗುಲಬರ್ಗಾ ಆರ್ಯ ಸಮಾಜದವರು ಮಾಡಿದ್ದಾರೆ. ಅದನ್ನು ಈ ಸಭೆಯು ಖಂಡಿಸುತ್ತದೆ. ಮತ್ತು ಆ ನಿಂದಾಸ್ಪದವಾದ ಸಂಗತಿಗಳನ್ನು ತಿರುಗಿ ತೆಗೆದುಕೊಳ್ಳಬೇಕೆಂದು ಈ ಸಭೆಯು ಅವರಿಗೆ ಅತ್ಯಾಗ್ರಹದಿಂದ ಸೂಚಿಸುತ್ತದೆ.

(೨) ಬೀದರ ಜಿಲ್ಲಾ ಉಗ್ಗಿರಿ ಆರ್ಯ ಸಮಾಜದ ಶ್ರೀ. ಶಾಮಲಾಲ ಇವರು ನಮ್ಮ ಪರಮಪೂಜ್ಯ ವಿಭೂತಿಯಾದ ಶ್ರೀ. ಬಸವೇಶ್ವರನನ್ನು ಮತ್ತು ನಾವು ನಿರಂತರ ಪೂಜಿಸುವ ಲಿಂಗವನ್ನೂ ಅಲ್ಲಗಳೆದಿದ್ದಾರೆ. ಅವರ ಈ ಕೃತಿಯನ್ನು ಈ ಸಭೆಯು ತೀಕ್ಷ್ಣವಾಗಿ ಖಂಡಿಸುವದಲ್ಲದೆ ಈ ತಮ್ಮ ನಿಂದಾಸ್ಪದವಾದ ಮಾತುಗಳನ್ನು ಅವರು ತಿರುಗಿ ತೆಗೆದುಕೊಳ್ಳಬೇಕೆಂದು ಸೂಚಿಸುತ್ತದೆ.

ವಿರೂಪಾಕ್ಷಗೌಡ ವಕೀಲ ಹೈಕೋರ್ಟ

ಸೆಕ್ರೆಟರಿ

ವೀರಶೈವ ಸಮಾಜ ರಾಯಚೂರ.

ಸಿದ್ಧಗಂಗಾ.

—◆—

ಪದ್ಧತಿಯ ಪ್ರಕಾರ ಇಲ್ಲಿ ಇದೇ ಮಾಘ ಬಹುಳ ೧೩ ಗುರುವಾರದಿಂದ (ತಾ. ೨೦-೨-೩೬) ಫಾಲ್ಗುಣ ಶುದ್ಧ ೭ ಶನಿವಾರ (ತಾ. ೨೯-೨-೩೬) ರ ವರೆಗೆ ರಥೋತ್ಸವಾದಿ ಕಾರ್ಯಗಳು ಜರಗುತ್ತವೆ.

ತಾ. ೨೬-೨-೩೬ ನೆಯ ದಿವಸ ತುಮಕೂರು ಡಿಸ್ಟ್ರಿಕ್ಟ ಡೆಪುಟಿ ಕಮಿಶನರ್ ಟಿ. ಅಬ್ದುಲ್‌ಖಾದರ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ದನಗಳ ಪ್ರದರ್ಶನವೂ ಸೇರುತ್ತದೆ. ಸಕಲರೂ ಆಗಮಿಸಬೇಕಾಗಿ ಕೋರಿಕೆ.

ಕಾರ್ಯದರ್ಶಿ.

ಧುಳೆ.

-◆-

ಇಲ್ಲಿಯ ವೀರಶೈವ ಜಾಹೀರ ಸಭೆಯು ಶ್ರೀ. ಶಂಕರಪ್ಪ ಕಾನಡೆ ಬಿ ಎ. ಇವರ ಅಧ್ಯಕ್ಷತೆಯಲ್ಲಿ ಕೂಡಿ ಈ ಕೆಳಗಿನ ನಿರ್ಣಯಗಳಾದವು.

(೧) ನಿಜಾಮರಾಜ್ಯದ ಆರ್ಯ ಸಮಾಜದವರು ವೀರಶೈವ ಸಮಾಜದ ವಿರುದ್ಧವಾಗಿ ನಡೆಸಿದ ಚಟುವಟಿಕೆಯನ್ನು ನಿಷೇಧಿಸುತ್ತದೆ. (೨) ಆರ್ಯ ಸಮಾಜಕ್ಕೆ ಹೋದ ವೀರಶೈವರನ್ನು ಲಿಂಗಾಯತ ಮತದಲ್ಲಿ ತೆಗೆದುಕೊಳ್ಳಲು ಒಪ್ಪಿಗೆ ಕೊಡುತ್ತದೆ. (೩) ಆರ್ಯ ಸಮಾಜದವರು ವೀರಶೈವರಿಗೆ ಅಪಮಾನಕರವಾದ ಚಟುವಟಿಕೆ ನಡೆಸಿದ್ದಾರೆ. ಇವನ್ನು ತಡೆಯಲು ಸಮಾಜದ ಎಲ್ಲ ಗುರು ವರ್ಗದವರೂ ಪ್ರಯತ್ನಿಸಬೇಕು. ಹಾಗೆ ಮಾಡದೆ ಅವರು ಸುಮ್ಮನಿದ್ದರೆ ಸಮಾಜದ ಸಹಾನುಭೂತಿಯು ಅವರಿಗಿಲ್ಲವೆಂದು ತಿಳಿಯಬೇಕು, (೪) ಈ ಕಾರ್ಯದಲ್ಲಿ ಮುಂದಾಳುಗಳಾದ ಶ್ರೀ. ಹರ್ಡೇಕರ್ ಮಂಜಪ್ಪನವರೇ ಮೊದಲಾದವರಿಗೆ ಈ ಸಭೆಯು ಸಹಾಯ ಮಾಡುವುದು.

ಕಾರ್ಯದರ್ಶಿ

ತಾಂಡೂರು.

—◆—

ಇಲ್ಲಿಯ ಹಿರೇಮಠದ ಶ್ರೀ ನೀಲಕಂಠಯ್ಯನವರು ಸ್ಥಾಪಿಸಿರುವ ಪಾಠಶಾಲೆ ಚನ್ನಾಗಿ ನಡೆದಿಲ್ಲವೆಂದೂ ಇವರಿಗೆ ಚಂದಾ ಕೊಡಕೂಡದೆಂದೂ ಒಂದು ಪ್ರಕಟನೆ ಹೊರಟಿದೆ. ಅದು ದ್ವೇಷ ಮೂಲಕವಾದುದು. ನಿಜಸ್ಥಿತಿ ಹಾಗಿಲ್ಲ. ಶ್ರೀ ನೀಲಕಂಠಯ್ಯನವರು ಪಾಠಶಾಲೆ ಚನ್ನಾಗಿ ನಡೆಸಿದ್ದಾರೆ. ಮನೆಯವರೆಲ್ಲರೂ ಮಕ್ಕಳಂತೆ ವಿದ್ಯಾರ್ಥಿಗಳನ್ನು ಜೋಪಾನ ಮಾಡುತ್ತಿದ್ದಾರೆ. ಆಳುಗಳಿಗಾಗಿ ಒಂದು ವರ್ಷದಲ್ಲಿ ೧೬ ರೂ. ಮಾತ್ರ ಖರ್ಚುಮಾಡಿದ್ದಾರೆ. ಈ ಎಲ್ಲಾ ಸಂಗತಿಗಳನ್ನು ನಾವು ಕಣ್ಣಾರೆ ನೋಡಿ ಬಂದಿದ್ದೇವೆ. ಮೊದಲಿನಂತೆ ನಾವು ಚಂದಾ ಕೊಡುತ್ತೇವೆ. ಎಲ್ಲರೂ ಕೊಡಬೇಕಾಗಿ ಈ ಕೆಳಗಿನ ಮಹಾಶಯರು ತಿಳಿಸಿದ್ದಾರೆ.

ಬಸವಲಿಂಗಪ್ಪ ಅಮಿನಪೂರ.	ಶರಣಪ್ಪ ವಕೀಲ ಹೈಕೋರ್ಟ ಹೈದರಾಬಾದ.
ವಕೀಲ ನಾರಾಯಣಪೇಟ.	(ಉರ್ಫ ಸಿದ್ಧಮಲ್ಲಪ್ಪ ಕೆಂಚಯ್ಯ)

ಕಾಂಗ್ರೆಸ್ಸಿನ ತಾರೀಖು ಬೇರೆಯಾಯಿತು.

ಲಖನೌದಲ್ಲಿ ಕಾಂಗ್ರೆಸ್ ಮಾರ್ಚ ತಿಂಗಳಲ್ಲಿ ಕೂಡಬೇಕೆಂದು ಗೊತ್ತಾಗಿತ್ತಷ್ಟೆ. ಆದರೆ ಈಗ ಎಪ್ರಿಲ್ ತಾರೀಖು ೧೨-೧೩ ನೆಯ ದಿನ ಕೂಡುವುದೆಂದು ರಾಷ್ಟ್ರಾಧಿಪತಿಗಳು ಪ್ರಕಟಿಸಿದ್ದಾರೆ.

ವಿವಿಧ ವಿಷಯ.

ಸುಧಾರಣೆಯ ಸತ್ಫಲ!

ಅಮೇರಿಕೆಯ ಒಬ್ಬ ಪತ್ರಿಕಾ ಪ್ರತಿನಿಧಿಯು ತಾನು ಕಣ್ಣಾ ಟ್ಟ ನೋಡಿದ ಸಂಗತಿಯನ್ನು ಈ ಪ್ರಕಾರ ತಿಳಿಸಿದ್ದಾನೆ—

“ಅಬಿಸೀನಿಯಾದ ಬಾದಶಹರು ಡೇಸಿ ಪಾಳ್ಯದಲ್ಲಿ ಬಂದಿರುವ ರೆಂಬ ಸಮಾಚಾರವನ್ನು ತಿಳಿದು ಇಟಲಿಯ ವಿಮಾನುಗಳು ಸದ್ದಿಲ್ಲದೆ ಬಂದು ಮೊದಲು ಅವರ ಅರಮನೆಯ ಮೇಲೆ ಬಾಂಬು ಹಾಕಿದವು. ಅರಮನೆಯು ನೆಲಸಮವಾಯಿತು. ಅಲ್ಲಿಂದ ಅವು ಅಮೇರಿಕೆಯ ರೆಡ್‌ಕ್ರಾಸ್ ಆಸ್ಪತ್ರಿಯ ಮೇಲೆ ಬಂದು ಬಾಂಬು ಎಸೆಯಹತ್ತಿದವು. ಬಾದಶಹರು ಆ ಸ್ಪತ್ರಿಯ ಆಶ್ರಯವನ್ನು ಹೊಂದಿರುವರೆಂದು ಅವರು ತಿಳಿದಿದ್ದರೋ ಏನೊ! ಅಲ್ಲಿಂದ ವಿಮಾನುಗಳು ಸೈನ್ಯವು ಬೀಡು ಬಿಟ್ಟಲ್ಲಿಗೆ ಸಾಗಿದವು. ಸುಂಯಿಗುಟ್ಟುತ್ತ ಒಂದು ಬಾಂಬು ಬಂದು ಪಾಳ್ಯದ ಮಧ್ಯದಲ್ಲಿ ಕೆಂಪು ಡೇರೆಗೆ ಬಡಿಯಿತು. ಆದರೆ ಬಾದಶಹರು ದೊರೆಯಲಿಲ್ಲ. ಆ ಕಾಲಕ್ಕೆ ರಾಸತಧಾರಿಯವರು ಬೀದಿಯಲ್ಲಿ ಜನರಲ್ ಬೀರು ಮತ್ತು ಡಾ. ಝುವ್ರೋಸ್ ಇವರೊಡನೆ ಮಾತಾಡುತ್ತ ನಿಂತಿದ್ದರು. ಬಾಂಬಿನ ಸಪ್ಪಳ ಕೇಳಿ ಅವರು ತಮ್ಮ ಅ್ಯಂಟಿ ಏರ್ ಕ್ರಾಫ್ಟ ಬಂದೂಕನ್ನು ತೆಗೆದುಕೊಂಡು ಗುಂಡು ಹಾರಿಸಹತ್ತಿದರು.

ಇಟಲಿಯ ಈ ದುರ್ವರ್ತನೆಯಿಂದ ಇಟಲಿಯ ಬೆಂಬಲಿಗರಾದ ಪತ್ರಿಕಾ ಪ್ರತಿನಿಧಿಗಳು ಸಹ ವಿರೋಧಿಗಳಾದರು. ಸತ್ತು ಹೋದ ನಿರುಪದ್ರವಿಗಳಲ್ಲಿ ಅನೇಕ ಜನ ಪತ್ರಿಕಾ ಪ್ರತಿನಿಧಿಗಳೂ ಇದ್ದರು. “ಇಕೋ ನೋಡಿರಿ” ಎಂದು ಒಬ್ಬ ಜರ್ಮನ್ ಯುದ್ಧ ಸರ್ಜನರು ಒಂದು ಹೆಣದ ಮೇಲಿನ ಅರಿವೆಯನ್ನು ಎತ್ತಿ ತೋರಿಸಿ- “ಇದು ನಮ್ಮ ಸುಧಾರಣೆಯ ಸತ್ಫಲ.” ಎಂದರು. ಹೆಣದ ಹೊಟ್ಟೆ ಕಾಲುಗಳೆಲ್ಲ ಹರಿದು ನೋಡಲಿಕ್ಕೆ ಭೀಕರವಾಗಿದ್ದಿತು.”

ಬಾಬರನ ಪತ್ರ.

ಬಾಬರನು ತನ್ನ ಜ್ಯೇಷ್ಠ ಪುತ್ರನಾದ ಹುಮಾಯುನನಿಗೆ ಫಾರ್ಶಿ ಭಾಷೆಯಲ್ಲಿ ಬರೆದ ಪತ್ರವು ಭೋಪಾಳದ ನವಾಬರ ಸ್ವಾಧೀನದಲ್ಲಿರುತ್ತದೆ. ಅದನ್ನು ಶ್ರೀ ಎನ್. ಸಿ. ಮೆಹತಾ ಐ. ಸಿ. ಎಸ್ ಇವರು “Twentieth Century” ಪತ್ರಿಕೆಯಲ್ಲಿ ಈ ರೀತಿ ಪ್ರಕಟಿಸಿರುವರು—

“ಸಾಮ್ರಾಜ್ಯದ ಸ್ಥಿರತ್ವಕ್ಕಾಗಿ ಇದನ್ನು ಬರೆದದ್ದಾಗಿದೆ. ನನ್ನ ಪುತ್ರನೆ, ಹಿಂದುಸ್ಥಾನ ದೇಶದಲ್ಲಿ ಅನೇಕ ಕುಲಗಳಿರುತ್ತವೆ. ಅಂಥ ದೇಶದ ಸಾಮ್ರಾಜ್ಯಾಧಿಕಾರವನ್ನು ಆ ದಯಾ-ನ್ಯಾಯ-ಶ್ರೇಯೋ ಪೂರ್ಣನಾದ ಪರಮಾತ್ಮನು ನಿನಗೆ ಒಪ್ಪಿಸಿದ್ದಾನೆ. ಆದುದರಿಂದ ಪ್ರತಿಯೊಂದು ಜಾತಿಯ ಪದ್ಧತಿಯಂತೆಯೇ ನ್ಯಾಯದಿಂದ ವರ್ತಿಸು. ಧರ್ಮದ ಮೂಢನಂಬಿಕೆಯನ್ನು ಬಿಟ್ಟು ಈ ಪ್ರಕಾರ ವರ್ತಿಸುವದೇ ಯೋಗ್ಯವು.

ಇಸ್ಲಾಮಿನ ಭದ್ರತೆಗಾಗಿ.

“ಮುಖ್ಯ ಸಂಗತಿಯೆಂದರೆ ಗೋವಧೆಯನ್ನು ಎಂದೂ ಮಾಡಿಸಬೇಡ. ಏಕೆಂದರೆ ಹಿಂದುಸ್ಥಾನದ ಜನರ ಹೃದಯವನ್ನು ಗೆಲ್ಲುವ ಮಾರ್ಗವು ಅದೇ ಆಗಿದೆ. ಈ ಪ್ರಕಾರ ರಾಜಕೃಪೆ ದೊರೆಯಿತೆಂದರೆ ಪ್ರಜೆಗಳೆಲ್ಲ ನಿನ್ನಲ್ಲಿ ಶ್ರದ್ಧೆಯುಳ್ಳವರಾಗುವರು. ನಿನ್ನ ಸಾಮ್ರಾಜ್ಯದಲ್ಲಿರುವ ಪ್ರತಿಯೊಂದು ಜಾತಿಯ ದೇವಾಲಯಗಳನ್ನೂ ಪೂಜಾಸ್ಥಾನಗಳನ್ನೂ ನೀನು ಭಂಗಪಡಿಸಬೇಡ. ರಾಜನ ಬಗ್ಗೆ ಪ್ರಜೆಗಳಲ್ಲಿಯೂ ಪ್ರಜೆಗಳ ಬಗ್ಗೆ ರಾಜನಲ್ಲಿಯೂ ಅನುರಾಗವುಂಟಾಗುವಂತೆ ನ್ಯಾಯದಿಂದ ವರ್ತಿಸು. ಬಲಾತ್ಕಾರದ ಶಸ್ತ್ರಕ್ಕಿಂತ ದಯಾ ಶಸ್ತ್ರದಿಂದ ಆಗುವ ಇಸ್ಲಾಮಿನ ಪ್ರಗತಿಯು ಶ್ರೇಷ್ಠವಾದದ್ದು.

ಶೀಯಾ ಮತ್ತು ಸುನ್ನೀ ಪಂಥಗಳಲ್ಲಿರುವ ಕಲಹಗಳನ್ನು ಲಕ್ಷಕ್ಕೆ ತರಬೇಡ. ಏಕೆಂದರೆ ಅದರಲ್ಲಿಯೇ ಇಸ್ಲಾಮಿನ ಬಲಕ್ಕೆ ಭಂಗವುಂಟಾಗುವದು. ಭಿನ್ನ ಭಿನ್ನ ಮತದ ಪ್ರಜೆಗಳನ್ನೆಲ್ಲ ನಾಲ್ಕು ಮಹಾಭೂತಗಳ (Four Elements) ಪ್ರಕಾರ ಒಂದುಗೂಡಿಸು. ಅಂದರೆ ನಿನ್ನ ರಾಜ್ಯಾಂಗವು ಅನೇಕ ಗಂಡಾಂತರಗಳಿಂದ ಸುರಕ್ಷಿತವಾಗಿರುವದು.”

ರಶಿಯಾದ ಅಭಿವೃದ್ಧಿ.

ರಶಿಯಾ ದೇಶವು ಇಲ್ಲಿಯ ವರೆಗೆ ಇಂಗ್ಲಂಡ ಮತ್ತು ಅಮೇರಿಕೆಗಳಿಂದ ಶಸ್ತ್ರಾಸ್ತ್ರಗಳನ್ನು ತರಿಸಿಕೊಳ್ಳುತ್ತಿದ್ದಿತು. ಆದರೆ ಇನ್ನು ಮೇಲೆ ಅದು ಪರದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವದಂತೆ. ಈ ಬಗ್ಗೆ ಪರದೇಶ ವ್ಯವಹಾರ ಮಂತ್ರಿಯಾದ ಎಮ್. ಪೋಲಿಸ್ಕ ಎಂಬುವರು ಅನ್ನುವದೇನಂದರೆ— ರಶಿಯಾ ದೇಶವು ಕಳೆದ ಎರಡು ವರ್ಷಗಳಿಂದಲೂ ಇರಾಣ ಮತ್ತು ತುರ್ಕಸ್ಥಾನಗಳಿಗೆ ಶಸ್ತ್ರಾಸ್ತ್ರ ಪೂರೈಕೆ ಮಾಡುತ್ತಲಿದೆ. ಇನ್ನು ಮೇಲೆ ಅದು ಗ್ರೇಟಬ್ರಿಟನ್ ಮೊದಲಾದ ಯುರೋಪಿಯನ್ ರಾಷ್ಟ್ರಗಳಿಗೆ ಯಂತ್ರಸಾಮಗ್ರಿಗಳನ್ನು ಪೂರೈಸುವದು. ಅದರ ಕೈಗಾರಿಕೆಗಳು ಈಗ ಸುಸ್ಥಿತಿಯಲ್ಲಿವೆ.

ಉದ್ಗಿರಿ.

ಶ್ರೀ ಹಾವಗಿ ಸ್ವಾಮಿಗಳ ರಥೋತ್ಸವವು ಇಲ್ಲಿ ಈ ವರುಷ ಬಹು ಪರಿಣಾಮಕಾರಿಯಾಗಿ ಜರುಗಿತು. ಸುದರ್ಶನ ಪತ್ರಿಕಾಕರ್ತರಾದ ಶ್ರೀ ಸಿದ್ಧಮಲ್ಲಪ್ಪ ಕಲ್ಯಾಣಶೆಟ್ಟಿ ಇವರು ಮತ್ತು ಪ್ರಸಿದ್ಧ ಲಾವಣಿಕಾರರಾದ ಧುಳೆಯ ಶ್ರೀ ಸಿದ್ಧರಾಮಪ್ಪ ಮುಚಾಟೆ ಎಂಬುವವರು ಈ ಸಮಯಕ್ಕೆ ಬರಮಾಡಿಕೊಳ್ಳಲ್ಪಟ್ಟಿದ್ದರು. ಇವರು ವ್ಯಾಖ್ಯಾನ ಮತ್ತು ಪದಗಳಿಂದ ವೀರಶೈವ ಸಮಾಜದಲ್ಲಿ ವಿಶೇಷ ಜಾಗೃತಿಯನ್ನುಂಟುಮಾಡಿದರು.

(೧) ಹೀಗೆ ವೀರಶೈವ ಸಮಾಜೋನ್ನತಿಗಾಗಿ ಇಲ್ಲಿಯ ಪ್ರಸಿದ್ಧ ಮುಂದಾಳುಗಳಾದ ಶ್ರೀ ಸಂಗ್ರಾಮಪ್ಪ ವಕೀಲ, ಶ್ರೀ ಪ್ರಭುರಾವ ವಕೀಲ, ಧರ್ಮವೀರ ರಾಚಯ್ಯ ಸ್ವಾಮಿ ಮೊದಲಾದವರು ಪ್ರಯತ್ನಿಸುತ್ತಿರುವುದು ಈ ಭಾಗದ ವೀರಶೈವರ ಸುದೈವವೇ ಸರಿ.

(೨) ಲಿಂಗಾಯತರು ಆರ್ಯರೇನು? ಲಿಂಗ ಪರಮಾತ್ಮನು ಆಹುದೋ? ಅಲ್ಲವೊ? ಲಿಂಗಾಯತರ ಧರ್ಮ ಗ್ರಂಥ ಯಾವುದು? ಎಂದು ಆರ್ಯ ಸಮಾಜದವರು ಕೇಳಿದ ಪ್ರಶ್ನೆಗಳಿಗೆ ಶ್ರೀ ವಕೀಲ ಸಂಗ್ರಾಮಪ್ಪನವರು ಸಮರ್ಪಕ ಉತ್ತರ ಕೊಟ್ಟರು.

(೩) ಶ್ರೀ ಕಲ್ಯಾಣಶೆಟ್ಟಿ ವಕೀಲರು ವೀರಶೈವ ತತ್ವಜ್ಞಾನ ಮತ್ತು ಲಿಂಗಪೂಜಾ ರಹಸ್ಯವನ್ನು ಕುರಿತು ಅತ್ಯಂತ ಪರಿಣಾಮಕಾರಿಯಾದ ಭಾಷಣ ಮಾಡಿದರು. ಪ್ರತ್ಯಕ್ಷದರ್ಶಿ.

ಶುದ್ಧಿ ಸಮಾರಂಭ.

ಸೊಲ್ಲಾಪುರ ತಾಲೂಕು ಲಿಂಬಿಚಿಂಚೋಳಿಯಲ್ಲಿ ಗುರವ್ವ ಎಂಬ ಬಾಡಿಗುರುಬರ ಹೆಣ್ಣುಮಗಳು ೨೫ ವರ್ಷಗಳ ಹಿಂದೆ ಮುಸಲ್ಮಾನಳಾಗಿದ್ದಳು. ಅವಳು ಹಿಂದು ಧರ್ಮದಲ್ಲಿ ಬರಲು ಅಪೇಕ್ಷಿಸಿದ್ದರಿಂದ ವೇ|| ಗೋಪಾಳ ಶ್ರೀಪಾದ ಜೋಶಿ ಎಂಬವರು ಶಾಸ್ತ್ರೋಕ್ತ ಶುದ್ಧಗೊಳಿಸಿ ಹಿಂದು ಧರ್ಮದಲ್ಲಿ ತೆಗೆದುಕೊಂಡರು.

ಗುಲಬರ್ಗಾ.

—:o:—

ತಾ ೧೦-೧-೩೬ ನೇ ದಿವಸ ಗುಲಬರ್ಗಾ ತರುಣ ಸಂಘದ ವತಿಯಿಂದ ಶಂಭುಲಿಂಗಶಾಸ್ತ್ರಿ ಕಾವ್ಯತೀರ್ಥ ಹಿರೇಮಠ ಘೇವನ ಹಳ್ಳಿ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೆಳಗಿನ ವಿಷಯಗಳನ್ನು ಸರ್ವಾನುಮತದಿಂದ ಪಾಸು ಮಾಡಿ ಮಹಾಸಭಾ ಸ್ವಾಗತ ಕಮಿಟಿ ರಾಯಚೂರ ಇವರಿಗೆ ತಿಳಿಸುತ್ತದೆ

(೧) ಮಹಾಸಭೆಯೊಂದರೆ ಅತ್ಯಂತ ಮಹತ್ವದ ವಿಷಯವಾಗಿದೆ. ಆ ಸಭೆಯಲ್ಲಿ ಸೇವೆಯನ್ನು ಮಾಡಲು ೩೦೦ಜನ ಸ್ವಯಂ ಸೇವಕರನ್ನು ತರುಣ ಸಂಘವು ಈಗಾಗಲೇ ಸಿದ್ಧ ಮಾಡಿರುತ್ತದೆ. ಮಾನನೀಯರಾದ ಸ್ವಾಗತ ಸಂಘದವರು ಗುಲಬರ್ಗಾ ತರುಣ ಸಂಘಕ್ಕೆ ಸೇವೆಯನ್ನು ಒಪ್ಪಿಸಬೇಕೆಂದು ಅದು ಪ್ರಾರ್ಥಿಸುತ್ತದೆ

(೨) ಮಹಾಸಭಾ ಸ್ವಾಗತ ಕಮೀಟಿಯವರು ಮಹಾಸಭೆಯ ಅಧ್ಯಕ್ಷತೆಯ ಪದವಿಗೆ ಯೋಗ್ಯರಾದ ಮತ್ತು ಕರ್ನಾಟಕಕ್ಕೂ ವೀರಶೈವ ಸಮಾಜಕ್ಕೂ ಭೂಷಣಪ್ರಾಯರಾದ ಮುಂಬೈ ಇಲಾಖೆಯ ವಿದ್ಯಾಖಾತೆಯ ಮಂತ್ರಿಗಳಾದ ನಾಮದಾರ ದಿವಾನ ಬಹಾದ್ದೂರ ಸಿದ್ಧಪ್ಪ ತೋಟಪ್ಪ ಕಂಬಳಿಯವರನ್ನೇ ಆರಿಸಬೇಕೆಂದು ಈ ಸಭೆಯು ಬಹಳ ಒತ್ತಾಯದಿಂದ ಪ್ರಾರ್ಥಿಸುತ್ತದೆ. ಇದರಂತೆ ಬೇರೆ ಬೇರೆ ತರುಣ ಸಂಘಗಳಿಗೂ ಕೂಡ ಕಂಬಳಿಯವರನ್ನೇ ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ಪ್ರಾರ್ಥಿಸಲು ಬೇಡುತ್ತದೆ.

(೩) ರಾಯಚೂರಲ್ಲಿ ಈ ವರ್ಷ ಕೂಡುವ ಮಹಾಸಭೆಯಲ್ಲಿ ಸ್ವಾಗತ ಸಂಘದವರು ತರುಣ ಸಮ್ಮೇಲನವನ್ನು ಕೂಡಿಸಬೇಕೆಂದು ಈ ಸಭೆಯು ಪ್ರಾರ್ಥಿಸುತ್ತದೆ.

(೪) ಮತ್ತು ಕೈಗಾರಿಕೆಯ ಪ್ರದರ್ಶನವನ್ನೂ ಮಾಡಬೇಕೆಂದು ಪ್ರಾರ್ಥಿಸುತ್ತದೆ.

ಸೆಕ್ರೆಟರಿ.

ರಾಯಚೂರು.

—◆◆◆—

ತಾ. ೨-೧-೩೬ ನೇ ಸಾಯಂಕಾಲ ವೀರಶೈವ ಬೋರ್ಡಿಂಗ ರಾಯಚೂರಲ್ಲಿ ಸಮಸ್ತ ವೀರಶೈವರ ಸಭೆ ಶ್ರೀಯುತ ಇಂಡಿ ಗುಂಡಾದಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗಿನ ಠರಾವುಗಳನ್ನು ಸರ್ವಾನುಮತದಿಂದ ಪಾಸ ಮಾಡಿರುತ್ತದೆ.

(೧) ನಮ್ಮ ನಿಜಾಂ ಪ್ರಾಂತದ ವೀರಶೈವರ ಮಾನಮರ್ಯಾದೆಗಳಿಗೆ ಲೋಪ ಬರುವಂಥ ಭಯಂಕರ ದೋಷಾರೋಪಗಳನ್ನು ಗುಲಬರ್ಗಾ ಆರ್ಯ ಸಮಾಜದವರು ಮಾಡಿದ್ದಾರೆ. ಅದನ್ನು ಈ ಸಭೆಯು ಖಂಡಿಸುತ್ತದೆ. ಮತ್ತು ಆ ನಿಂದಾಸ್ಪದವಾದ ಸಂಗತಿಗಳನ್ನು ತಿರುಗಿ ತೆಗೆದುಕೊಳ್ಳಬೇಕೆಂದು ಈ ಸಭೆಯು ಅವರಿಗೆ ಅತ್ಯಾಗ್ರಹದಿಂದ ಸೂಚಿಸುತ್ತದೆ.

(೨) ಬೀದರ ಜಿಲ್ಲಾ ಉದ್ಗಿರಿ ಆರ್ಯ ಸಮಾಜದ ಶ್ರೀ. ಶಾಮಲಾಲ ಇವರು ನಮ್ಮ ಪರಮಪೂಜ್ಯ ವಿಭೂತಿಯಾದ ಶ್ರೀ. ಬಸವೇಶ್ವರನನ್ನು ಮತ್ತು ನಾವು ನಿರಂತರ ಪೂಜಿಸುವ ಲಿಂಗವನ್ನೂ ಅಲ್ಲಗಳೆದಿದ್ದಾರೆ. ಅವರ ಈ ಕೃತಿಯನ್ನು ಈ ಸಭೆಯು ತೀಕ್ಷ್ಣವಾಗಿ ಖಂಡಿಸುವದಲ್ಲದೆ ಈ ತಮ್ಮ ನಿಂದಾಸ್ಪದವಾದ ಮಾತುಗಳನ್ನು ಅವರು ತಿರುಗಿ ತೆಗೆದುಕೊಳ್ಳಬೇಕೆಂದು ಸೂಚಿಸುತ್ತದೆ.

ವಿರೂಪಾಕ್ಷಗೌಡ ವಕೀಲ ಹೈಕೋರ್ಟ

ಸೆಕ್ರೆಟರಿ

ವೀರಶೈವ ಸಮಾಜ ರಾಯಚೂರ.

ಸಿದ್ಧಗಂಗಾ.

—◆—

ಪದ್ಧತಿಯ ಪ್ರಕಾರ ಇಲ್ಲಿ ಇದೇ ಮಾಘ ಬಹುಳ ೧೩ ಗುರುವಾರದಿಂದ (ತಾ, ೨೦-೩-೩೬) ಫಾಲ್ಗುಣ ಶುದ್ಧ ೭ ಶನಿವಾರ (ತಾ. ೨೯-೩-೩೬) ರ ವರೆಗೆ ರಥೋತ್ಸವಾದಿ ಕಾರ್ಯಗಳು ಜರಗುತ್ತವೆ.

ತಾ. ೨೭-೩-೩೬ ನೆಯ ದಿವಸ ತುಮಕೂರು ಡಿಸ್ಟ್ರಿಕ್ಟ ಡೆಪುಟಿ ಕಮಿಶನರ್ ಟಿ. ಅಬ್ದುಲ್‌ಖಾದರ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ದನಗಳ ಪ್ರದರ್ಶನವೂ ನೇರುತ್ತದೆ. ಸಕಲರೂ ಆಗಮಿಸಬೇಕಾಗಿ ಕೋರಿಕೆ.

ಕಾರ್ಯದರ್ಶಿ.

ಧುಳೆ.

-◆-

ಇಲ್ಲಿಯ ವೀರಶೈವ ಜಾಹೀರ ಸಭೆಯು ಶ್ರೀ. ಶಂಕರಪ್ಪ ಕಾನಡೆ ಬಿ ಎ. ಇವರ ಅಧ್ಯಕ್ಷತೆಯಲ್ಲಿ ಕೂಡಿ ಈ ಕೆಳಗಿನ ನಿರ್ಣಯಗಳಾದವು.

(೧) ನಿಜಾಮರಾಜ್ಯದ ಆರ್ಯ ಸಮಾಜದವರು ವೀರಶೈವ ಸಮಾಜದ ವಿರುದ್ಧವಾಗಿ ನಡೆಸಿದ ಚಟುವಟಿಕೆಯನ್ನು ನಿಷೇಧಿಸುತ್ತದೆ. (೨) ಆರ್ಯ ಸಮಾಜಕ್ಕೆ ಹೋದ ವೀರಶೈವರನ್ನು ಲಿಂಗಾಯತ ಮತದಲ್ಲಿ ತೆಗೆದುಕೊಳ್ಳಲು ಒಪ್ಪಿಗೆ ಕೊಡುತ್ತದೆ. (೩) ಆರ್ಯ ಸಮಾಜದವರು ವೀರಶೈವರಿಗೆ ಅಪಮಾನಕರವಾದ ಚಟುವಟಿಕೆ ನಡೆಸಿದ್ದಾರೆ. ಇದನ್ನು ತಡೆಯಲು ಸಮಾಜದ ಎಲ್ಲ ಗುರು ವರ್ಗದವರೂ ಪ್ರಯತ್ನಿಸಬೇಕು. ಹಾಗೆ ಮಾಡದೆ ಅವರು ಸುಮ್ಮನಿದ್ದರೆ ಸಮಾಜದ ಸಹಾನುಭೂತಿಯು ಅವರಿಗಿಲ್ಲವೆಂದು ತಿಳಿಯಬೇಕು, (೪) ಈ ಕಾರ್ಯದಲ್ಲಿ ಮುಂದಾಳುಗಳಾದ ಶ್ರೀ. ಹರ್ಡೇಕರ್ ಮಂಜಪ್ಪನವರೇ ಮೊದಲಾದವರಿಗೆ ಈ ಸಭೆಯು ಸಹಾಯ ಮಾಡುವುದು.

ಕಾರ್ಯದರ್ಶಿ

ತಾಂಡೂರು.

—•—

ಇಲ್ಲಿಯ ಹಿರೇಮಠದ ಶ್ರೀ ನೀಲಕಂಠಯ್ಯನವರು ಸ್ಥಾಪಿಸಿರುವ ಪಾಠಶಾಲೆ ಚನ್ನಾಗಿ ನಡೆದಿಲ್ಲವೆಂದೂ ಇವರಿಗೆ ಚಂದಾ ಕೊಡಕೂಡದೆಂದೂ ಒಂದು ಪ್ರಕಟನೆ ಹೊರಟಿದೆ. ಅದು ದ್ವೇಷ ಮೂಲಕವಾದುದು. ನಿಜಸ್ಥಿತಿ ಹಾಗಿಲ್ಲ. ಶ್ರೀ ನೀಲಕಂಠಯ್ಯನವರು ಪಾಠಶಾಲೆ ಚನ್ನಾಗಿ ನಡೆಸಿದ್ದಾರೆ. ಮನೆಯವರೆಲ್ಲರೂ ಮಕ್ಕಳಂತೆ ವಿದ್ಯಾರ್ಥಿಗಳನ್ನು ಜೋಪಾನ ಮಾಡುತ್ತಿದ್ದಾರೆ. ಅಳುಗಳಿಗಾಗಿ ಒಂದು ವರ್ಷದಲ್ಲಿ ೧೬ ರೂ. ಮಾತ್ರ ಖರ್ಚುಮಾಡಿದ್ದಾರೆ. ಈ ಎಲ್ಲಾ ಸಂಗತಿಗಳನ್ನು ನಾವು ಕಣ್ಣಾರೆ ನೋಡಿ ಬಂದಿದ್ದೇವೆ. ಮೊದಲಿನಂತೆ ನಾವು ಚಂದಾ ಕೊಡುತ್ತೇವೆ. ಎಲ್ಲರೂ ಕೊಡಬೇಕಾಗಿ ಈ ಕೆಳಗಿನ ಮಹಾಶಯರು ತಿಳಿಸಿದ್ದಾರೆ.

ಬಸವಲಿಂಗಪ್ಪ ಅಮಿನಪೂರ. — ಶರಣಪ್ಪ ವಕೀಲ ಹೈಕೋರ್ಟ ಹೈದರಾಬಾದ.

ವಕೀಲ ನಾರಾಯಣಪೇಟ. — (ಅರ್ಥ ಸದ್ಧರ್ಮರಕ್ಷ ಕರಣಯ್ಯ)

ಕಾಂಗ್ರೆಸ್ಸಿನ ತಾರೀಖು ಬೇರೆಯಾಯಿತು.

ಲಖನೌದಲ್ಲಿ ಕಾಂಗ್ರೆಸ್ ಮಾರ್ಚ ತಿಂಗಳಲ್ಲಿ ಕೂಡಬೇಕೆಂದು ಗೊತ್ತಾಗಿತ್ತಷ್ಟೆ. ಆದರೆ ಈಗ ಎಪ್ರಿಲ್ ತಾರೀಖು ೧೨-೧೩ ನೆಯ ದಿನ ಕೂಡುವುದೆಂದು ರಾಷ್ಟ್ರಾಧಿಪತಿಗಳು ಪ್ರಕಟಿಸಿದ್ದಾರೆ.

ಅಪೂರ್ವ ಶೋಧ! **ಅಪೂರ್ವ ಶೋಧ!!**

ಜರ್ಮನಿಯವರು ತಯಾರಿಸಿದ ವಿಷದ ಲಾಯಿಟು ಈಗ ಹಿಂದುಸ್ಥಾನದಲ್ಲಿಯೇ ಸಿದ್ಧವಾಗುವಂತಾಗಿದೆ.

ಕೃಮಿನಾಶಕ ಲಾಯಿಟ.

ಶಿಫಾರಸ ಪತ್ರ.

ನಾನು ಕೃಮಿನಾಶಕ ಲಾಯಿಟನ್ನು ಉಪಯೋಗಿಸಿದೆ. ಇದು ತಗಣಿ, ದೋಮಿಗಳ ಮೇಲೆ ಬಹಳ ಉತ್ತಮ ಪ್ರಯೋಗವಿರುತ್ತದೆ ಇದರ ಉಪಯೋಗದಿಂದ ತಗಣಿ, ದೋಮಿಗಳ ಕಾಟವು ಕಡಿಮೆಯಾಗಿ ಬಹಳ ಆರಾಮವೆನಿಸ ಹತ್ತಿರುತ್ತದೆ.

ಮಹಲಿಂಗರಾವ ನವಣಿ

ತಾ. ೨೯-೧೨-೩೫ ಹಾಯಕೋರ್ಟ ವಕೀಲ ಗುಲಬರ್ಗಾ.

ಉಪಯೋಗಿಸುವ ವಿಧಾನವು ಬಾಟ್ಲಿಯ ಸಂಗಡಲೇ ಇರುವದು. ೯ ದಿವಸಕ್ಕೆ ಸಾಲುವಷ್ಟು ೧ ಬಾಟ್ಲಿಗೆ ೦-೪-೦ ೧ ಡಜನ್ನಿಗೆ ೨-೧೨-೦. ವ್ಹಿ. ಪಿ. ಚಾರ್ಜ ಬೇರೆ.

ಕೆಳಗಿನ ಪ್ಲೇಗ ಸಂಜೀವಿನಿ ಆಫೀಸುಗಳಲ್ಲಿಯೂ ಎಜೆಂಟ್‌ರಲ್ಲಿಯೂ ದೊರೆಯುವದು.

ಪ್ಲೇಗ ಸಂಜೀವಿನಿ ಆಫೀಸ. ಸೋಲಾಪುರ.
" " ಹುಬ್ಬಳ್ಳಿ.
" " ಬೆಳಗಾಂವ.

ಏಜೆಂಟರು.
ಬಸೆಟ್ಟೆಪ್ಪ ಹಲಕುರ್ಕಿ ಬಾಗಲಕೋಟೆ.
ಎಸ್. **ಚಂದ್ರಪ್ಪ ತಾಂಡೂರ.**
ಪ್ಲೇಗ ಸಂಜೀವಿನಿ **ಆಫೀಸ ಗುಲಬರ್ಗಾ.**

ಕಾಲರಾ ಸಂಜೀವಿನಿ.

ಕಾಲರಾ—

ಇದು ಮಾನವ ಚಿಕಿತ್ಸೆಗೆ ಮೀರಿದ ರೋಗವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ವಿಗಳಿಂದ ಶೋಧವಾಗಿದೆ. ಈ ಸಂಜೀವಿನಿ ಚೂರ್ಣವನ್ನು ಒಂದೇ ಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗುವದು. ಆಗ ನಿಮಗೆ ಖಂಡಿತವಾಗಿಯೂ ಆಶ್ಚರ್ಯವೂ ಆನಂದವೂ ಉಂಟಾಗುವವು.

—ಸಂಜೀವಿನಿ.

ಬೆಲೆ— ೧ ರೂ. ೫ ಆ.

ವಿಳಾಸ— ಪ್ಲೇಗ ಸಂಜೀವಿನಿ ಆಫೀಸ್, ಗುಲಬರ್ಗಾ.

ವೀರಶೈವ ಮಹಾಶಯರೇ,

ಸತ್ಯ ಸಂಗತಿಗಳನ್ನು ತಿಳಿದುಕೊಳ್ಳಲು ಅಪೇಕ್ಷಿಸುವಿರಾ ?

ಹಾಗಾದರೆ

ವೀರಶೈವ ಮತಾಚಾರ್ಯರ ಕಾಲನಿರ್ಣಯ

ಎಂಬ ಪುಸ್ತಕವನ್ನು ಜಾಗ್ರತೆ ತರಿಸಿಕೊಂಡು ಓದಿರಿ.

ಇದರಲ್ಲಿ ಶ್ರೀ ರೇವಣಸಿದ್ಧ ಶ್ರೀ ಮರುಳಸಿದ್ಧ ಶ್ರೀ ಪಂಡಿತಾರಾಧ್ಯ ಶ್ರೀ ಏಕೋರಾಮ ಶ್ರೀ ವಿಶ್ವಾರಾಧ್ಯ ಶ್ರೀ ಬಸವಣ್ಣ ಈ ಮಹಾಪುರುಷರ ಕಾಲಮಾನವನ್ನು ಕುರಿತು ಐತಿಹಾಸಿಕ ಪ್ರಬಲ ಪ್ರಮಾಣಗಳಿಂದ

ಶ್ರೀಮಾನ್ ಕರ್ಲಮಂಗಲಂ ಶ್ರೀಕಂಠಯ್ಯನವರು

ಬಹು ಸೊಗಸಾಗಿ ಬರೆದಿದ್ದಾರೆ.

೮೪ ಪುಟಗಳು. ಅಂದವಾದ ಮುದ್ರಣ.

ಕ್ರಯ ೧೨ ಆಣೆ ಇದ್ದದ್ದನ್ನು ೬ ಆಣೆಗೆ ಇಳಿಸಿದೆ.

೧೨ ಪುಸ್ತಕಗಳಿಗೆ ೪ ರೂ. ಅಂಚೆಯ ವೆಚ್ಚ ಬೇರೆ

ಸೂಚನೆ:— ಮೂರು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ವ್ಹಿ. ಪಿ. ಮೂಲಕ ಕಳಿಸುವದಾಗುತ್ತದೆ. ಒಂದೆರಡು ಪುಸ್ತಕಗಳನ್ನು ಅಪೇಕ್ಷಿಸತಕ್ಕವರು ಪೋಸ್ಟ ಚಾರ್ಜ ಸಹಿತ ಟಿಕಿಟ ಕಳಿಸಿದರೆ ಬುಕ್ ಪೋಸ್ಟ ದ್ವಾರ ಕಳಿಸಲಾಗುತ್ತದೆ.

ಪುಸ್ತಕ ದೊರೆಯುವ ವಿಳಾಸ-

ಜ್ಞಾನೋದಯ ಗ್ರಂಥಭಾಂಡಾರ ಆಲಮಟ್ಟಿ ಪೋ. ಆಲಮಟ್ಟಿ ಜಿ. ವಿಜಾಪುರ	ಶ್ರೀ ಬಿ. ವಿಶ್ವನಾಥಪ್ಪ ಮಂಡಿ ಮರ್ಚಂಟ್ ಚಾಮರಾಜಪೇಟೆ, ಬೆಂಗಳೂರು ಸಿಟಿ.

ಸ್ಥಳೀಯ ಸಂಸ್ಥೆಗಳ ಪತ್ರಿಕೆ.

ಪ್ರತಿ ತಿಂಗಳ ತಾ|| ೧ ಮತ್ತು ೧೫ ರಲ್ಲಿ ಪ್ರಕಟವಾಗುವ ಪಕ್ಷಪತ್ರಿಕೆ.

ಜಿಲ್ಲಾ ಬೋರ್ಡ್, ಪೌರಸಭೆ, ಗ್ರಾಮಪಂಚಾಯತಿ ಮುಂತಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಇತಿಹಾಸ, ಮೂಲತತ್ವ, ಆಡಳಿತ ಮುಂತಾದ ವಿಚಾರಗಳಲ್ಲಿ ನುರಿತ ಲೇಖಕರಿಂದ ಬರೆಯಲ್ಪಟ್ಟ ಬೋಧಪ್ರದ ಲೇಖಗಳನ್ನೂ, ಆ ಸಂಸ್ಥೆಗಳ ಕಾರ್ಯಕ್ರಮ ಮತ್ತು ಘಟನೆಗೆ ಸಂಬಂಧಪಟ್ಟ ವಿಶೇಷ ಸಮಾಚಾರಗಳನ್ನೂ, ಸ್ಥಾನಿಕ ಸ್ವರಾಜ್ಯ ಸಂಬಂಧವಾದ ದೇಶವಿದೇಶ ವರ್ತಮಾನಗಳನ್ನೂ ಪ್ರಕಟಿಸುವ ಪತ್ರಿಕೆ.

ಇತರ ಸಂಗತಿಗಳೂ ವಿಶೇಷ ವರ್ತಮಾನಗಳೂ ಸಹ ಪ್ರಕಟವಾಗುವವು.

ಇಡೀ ಕನ್ನಡ ನಾಡಿನಲ್ಲಿ ಇಂತಹ ಪತ್ರಿಕೆಯು ಇದೊಂದೇ !

ವಾರ್ಷಿಕಚಂದಾ:— ೨ ರೂಪಾಯಿ; ಸಂಸ್ಥೆಗಳಿಗೆ ೫ ರೂಪಾಯಿ.

ವಿಳಾಸ:— ಟಿ. ಯಲ್. ಚನ್ನಪ್ಪ, ವ್ಯವಸ್ಥಾಪಕ ಸ್ಥಳೀಯ ಸಂಸ್ಥೆಗಳ ಪತ್ರಿಕೆ. ಗಾಂಧಿ ನಗರ, ಬೆಂಗಳೂರು ಸಿಟಿ.

ವೀರಶೈವ ಮತಬೋಧೆ.

ಶ್ರೀ ಮಂಜಪ್ಪನವರು ಹರ್ಡೇಕರ ಇವರಿಂದ ರಚಿಸಲ್ಪಟ್ಟ ವೀರಶೈವ ಮತಬೋಧೆ ಎಂಬ ಪುಸ್ತಕವನ್ನು ತೆಲಗು ಭಾಷೆಯಲ್ಲಿ ಭಾಷಾಂತರಿಸಿದೆ. ಈ ಕೆಳಗಿನ ವಿಳಾಸಗಳಿಗೆ ಬರೆದು ತರಿಸಿಕೊಳ್ಳಿರಿ.

ಅಂಚೆ ತಿಕೀಟು ಕಳಿಸಿದಲ್ಲಿ ಬುಕ್-ಪೋಸ್ಟ ಮಾಡಲಾಗುವದು

—ಬೆಲೆ ಒಂದಕ್ಕೆ ೩ ಆಣೆ. —

ಮ್ಯಾನೇಜರ ಜ್ಞಾನೋದಯ ಗ್ರಂಥ ಭಾಂಡಾರ ಪೋ. ಆಲಮಟ್ಟಿ. ಜಿ. ವಿಜಾಪುರ.	ಜಿ. ವೀರಭದ್ರಪ್ಪ. ಮನೆ ನಂ. ೩೧೪೬. ಕುಡಿಬಯ್ಯಾರ ಹಲಕಾ (೩ ಹೈದರಾಬಾದ. (ದಖ್ಖನ)

ದಿ ಸ್ವರಾಜ್ಯ ಬ್ಯಾಂಕಿಂಗ

ಮತ್ತು

ಇನ್ಶೂರನ್ಸ ಕಂಪನಿ ಲಿಮಿಟೆಡ್, ಧಾರವಾಡ.

ರೂ. ೭೦೨೧-೧-೫. ಕ್ಲೇಮು.

೧೯೩೫ ನೇ ಇಸ್ವಿಯ ೮ ತಿಂಗಳುಗಳಲ್ಲಿಯೇ

ಜನನ ಪಾಲಿಸಿದಾರರಿಗೆ ಕ್ಲೇಮಿನ ಹಣವು ಹಂಚಲ್ಪಟ್ಟಿದೆ.

ಡಿಶೆಂಬರ ಒಂದೇ ತಿಂಗಳಲ್ಲಿ ರೂ. ೧೬೦೧—೫—೧೦ ಕ್ಲೇಮು ಹಣವನ್ನು ಕೊಡಲಾಗಿದೆ.

ಈ ಕಂಪನಿಯಲ್ಲಿ ಜನನ, ವಿವಾಹ ಮತ್ತು ಮರಣ ಈ ಪ್ರಕಾರ ಮೂರು ತರಹದ ವಿಮೆಗಳಿರುತ್ತವೆ.

ಪ್ರತಿಯೊಂದರ ಪ್ರವೇಶ ಫೀ ರೂ. ೫-೦-೦

ತಿಂಗಳ ಕಂತು .... . ರೂ. ೧-೦-೦

ವಾರ್ಷಿಕ ಫೀ .... ರೂ. ೧-೧-೦

ಈ ವಿಮೆಗಳು ಬಡವರಿಗೂ ಬಲ್ಲಿದರಿಗೂ ಬಹಳೇ ಉಪಯೋಗವುಳ್ಳವುಗಳಿರುತ್ತವೆ. ಕಾರಣ ಕರ್ನಾಟಕದ ಅಭಿಮಾನವುಳ್ಳ ಪ್ರತಿಯೊಬ್ಬರೂ ನಮ್ಮ ಕಂಪನಿಯ ಪಾಲಿಸಿದಾರರಾಗಬೇಕಾಗಿ ಇಚ್ಛಿಸುತ್ತೇವೆ.

ಮ್ಯಾನೇಜಿಂಗ ಏಜಂಟ್ಸ

ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಶುರನ್ಸ ಕಂ., ಲಿ.

ಧಾರವಾಡ.

ಸೂಚನೆ:- ಲಾಯಿಫ ಇನ್ಶುರನ್ಸ ಈ ಕಂಪನಿಯಲ್ಲಿ ತೀವ್ರವೇ ಪ್ರಾರಂಭವಾಗುವದು. ಏಜಂಟರಾಗಿ ಕೆಲಸ ಮಾಡಲು ಇಚ್ಛೆಯುಳ್ಳವರು ಈ ತಿಂಗಳ ಅಖೈರದೊಳಗಾಗಿಯೇ ೧೯೩೬ ನೇ ಇಸ್ವಿ ಅಖೈರದೊಳಗಾಗಿ ಎಷ್ಟು ಬಿಜಿನೆಸ್ಸು ಮಾಡುವಿರೆಂಬದನ್ನು ಸಹಾ ತಿಳಿಸಬೇಕಾಗಿ ವಿನಂತಿ.

EXCELLENT GET-UP!	NOW ON SALE	BEAUTIFUL PRINT!

Recommended by the Government of Mysore for High-School Libraries in the Mysore State.

WHO IS THE FOUNDER OF THE VIRASAIVA OR LINGAYET RELIGION?

An indispensable book for all lovers of

HISTORY

Price As. 8. Postage Free.

Can be had from:—

Jeerage K. Basavappa B. A.

2, Cotton pet, BANGALORE city.

SOUTH INDIA.



ಗೌರೀಶಂಕರ ನಿವಾಸ.
ಮುಂಬಯಿ.

ಸೋಯಿದರ! **ಉತ್ತಮ ಸೌಕರ್ಯ!** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೀಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪ ವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ .... ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸ್ವಸ್ತುಲೂ ಬೇಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

B. V. Bhumraddi.
ಮ್ಯಾನೇಜರ, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, ಮುಂಬಯಿ.

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ
ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್ತ ಪ್ರಚುರ ಲೇಖಗಳಿವೆ.
ಹೊಸ ಸೌಲಭ್ಯಗಳು:—
ಬೆಲೆ ೧೦ ಆಣೆ, ೧೯೩೩ ರ ವಿಶೇಷ ಸಂಚಿಕೆಯೊಂದಿಗೆ ೧ ರೂ,
ಹೊಸ ಚಂದಾದಾರರಿಗೆ ಉಚಿತ. ತ್ವರೆಮಾಡಿರಿ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಷ್ಪ] ವಾ. ಚಂ. ೩-೪-೦ [ಮೇಲೊಂದು ಉಚಿತಪುಷ್ಪ
ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ಆಯ್ದನೆಯ ಪುಷ್ಪವಾದ
ಹಲವು ಪ್ರಸಿದ್ಧ ಕತೆಗಾರರ ಸರಸವಾದ
ಇದೀಗ ಹೊರಟಿದೆ] **ನೀಳ್ಗತೆಗಳು!** [ಬೆಲೆ ಸನ್ನೆರಡು ಆಣೆ.

ಜಯಕರ್ನಾಟಕ ಕಾರ್ಯಾಲಯ
ಧಾರವಾಡ.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಸ್ಸೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಆದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು.
(ಮೈಸೂರು ಸ್ಟೇಟ್)

ಶರಣ ಸಂದೇಶ.

ಸಂಪಾದಕರು:-

ಹರ್ಡೇಕರ್ ಮಂಜಪ್ಪನವರು.

ಶ್ರೀ ಬಸವಾದಿ ಪ್ರಮಥ

ತತ್ವಗಳನ್ನು

ಹಿಂದು ಸಮಾಜದೇಳಿಗೆಯ

ರೀತಿನೀತಿಗಳನ್ನೂ

ಪ್ರಸಾರಗೊಳಿಸುವ

ವಾರಪತ್ರಿಕೆ

ಕನ್ನಡದಲ್ಲಿ ಇದೊಂದೇ.

ವಾರ್ಷಿಕ ಚಂದಾ:-

ಅಂಚೆಯ ವೆಚ್ಚ ಸೇರಿ

೩ ರೂ. ಗಳು.

ಜಾಗ್ರತೆ ಚಂದಾದಾರರಾಗಿರಿ.

ಮ್ಯಾನೇಜರ್:- ಶರಣ ಸಂದೇಶ.

ಪೋ. ಆಲಮಟ್ಟಿ ಜಿ. ವಿಜಾಪುರ

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪು ಗಳು ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯ ಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರ ಗಳು. ಬಲು ಸುಲಭ ದರ ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಕೊಂ ದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸ ದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,

ಶ್ರೀ ರಂಗನಾಥ ಟೈಪ್ ಫೌಂಡರಿ

೬೭ ಕುಬೇರ ಸಾಹುಜಿ ಲೈನ್

ಚಿಕ್ಕಪೇಟೆ, ಬೆಂಗಳೂರು ಸಿಟಿ

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವ ಪ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪ ಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯ ದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯ ಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿ ರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾ ಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು

ಶ್ರೀ ನ . ಸ ನ ಿ ವ, ಜಿ ಗುಲಬರ್ಗಾ.

ಖಾದಿಯ ಕೊಂಡು

ಬಡತನದ ಬಾಧೆಯ ಕಳೆಯಿರಿ.

ಭಾರತದ ಬಡತನ ಬಯಲಾಗಲು

ಗಾಂಧಿಯವರು

ತೋರಿಸಿದ

ಖಾದಿಯೇ ಹಾದಿಯು.

ನಿಮ್ಮ ಮೈಮೇಲೆ

ಖಾದಿ ಬಂದರೆ

ಬಡವರ ಕೈಮೇಲೆ

ಕಾಸು ಬರುವದು.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಮಂ ದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The
Sharana Sandesh.

[illegible] ಕೂಡಲಸಂಗಮದೇವರ [illegible] ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು,

ಬಿಡಿಸಂಚಿಕೆಗೆ ೧ ಆಣೆ.
[illegible]:- ಅಂಚೆಯ ವೆಚ್ಚ ಸೇರಿ [illegible] ರೂ.

ಸೋಮವಾರವೂ ಪ್ರಕಟವಾಗು[illegible]

ಸಂಪುಟ ೫. | [illegible] ಸೋಮವಾರ ತಾರೀಖು ೩ ನೆಯ ಫೆಬ್ರು[illegible] | ಸಂಚಿಕೆ ೨೩

ಜನಸೇವೆಯೇ ದೇವರ ಸೇವೆ.

ಹೊಸ ಸುಧಾರಣೆಗಳಲ್ಲಿ ಸ್ಥಿತ್ಯಂತರ?

೮ ನೆಯ ಎಡ್ವರ್ಡ ಬಾದಶಹರು ದಿಲ್ಲಿಯಲ್ಲಿ ರಾಜ್ಯಾರೋಹಣ ಮಾಡುವ ಕಾಲಕ್ಕೆ ಹೊಸ ರಾಜಕೀಯ ಸುಧಾರಣೆಗಳಲ್ಲಿ ಅನೇಕ ಸ್ಥಿತ್ಯಂತರಗಳು ಆಗುವವಂತೆ.

ಸೋವ್ಹಿಯೆಟ್ - ಜಪಾನ ಯುದ್ಧ!

ರಶಿಯಾ ಮತ್ತು ಮಂಚೂರಿಯಾ ದೇಶಗಳ ಗಡಿಯಲ್ಲಿ ರಶಿಯನ್ ಮತ್ತು ಜಪಾನಿ ದಂಡಾಳುಗಳಲ್ಲಿ ಕಡುತರವಾದ ಯುದ್ಧ ನಡೆದಿದೆ.

ಚೀನದಲ್ಲಿ ಪ್ರಚಂಡ ಬಂಡಾಯ !!

ದಕ್ಷಿಣ ಚೀನದಲ್ಲಿ ಕಮ್ಯುನಿಸ್ಟರು ಬಂಡಾಯವನ್ನೆಬ್ಬಿಸಿ ಸೋವ್ಹಿಯೆಟ್ ಸರಕಾರವನ್ನು ಸ್ಥಾಪಿಸಿದ್ದಾರೆ.

ದೇಶಸೇವೆ [illegible]

SANGAM CLOTH STORES
Prop: M S Hundekar & Sons,
P.O: TERDAL - 587 313
Dt Bijapur, (Karnata

ಶಿರಸಿಯಲ್ಲಿ

ಸಿದ್ಧೇಶ್ವರ ತಿಜೋರಿ ಮೇಲೆ ಕಳ್ಳರ ಹಲ್ಲಾ.

ಸಿದ್ಧೇಶ್ವರ ತಿಜೋರಿ ಕಾರಖಾನೆ ಹುಬ್ಬಳ್ಳಿ ಇವರಿಗೆ ಶಿರಸಿಯಿಂದ ಅವರ ತಿಜೋರಿ ಕೊಂಡ ರಾ|| ರಾ|| ಶಿವಬಸಪ್ಪ ಬೆಲ್ಲದ ಇವರಿಂದ ಬಂದ ಪತ್ರ—

ಮೊನ್ನೆ ಮೊನ್ನೆ ನಾವು ತಮ್ಮಲ್ಲಿ (ರೂ. ೩೨೫ ಕ್ಕೆ ೩ ಫೂಟು ಎತ್ತರದ್ದು) ತಿಜೋರಿ ಕೊಂಡದ್ದರಲ್ಲಿ ಮೊನ್ನೆಯೇ ಹೋದ ದೀಪಾವಳಿ ಲಕ್ಷ್ಮೀ ಪೂಜೆಯ ನಿಮಿತ್ಯ ನಮ್ಮ ಮನೆಯಲ್ಲಿಯ ಎಲ್ಲ ದಾಗೀನಗಳನ್ನೂ ವ ರೋಖಡಿ ರೂಪಾಯಿಗಳನ್ನೂ ಇಟ್ಟಿದ್ದೆವು. ಅದೇ ದಿನಸ ರಾತ್ರಿ ಯಾರೋ ಕಳ್ಳರು ನಮ್ಮ ಅಂಗಡಿ ಕೀಲಿ ಮುರಿದು ತಿಜೋರಿ ತೆರೆಯಲಿಕ್ಕೆ ವಡೆಯಲಿಕ್ಕೆ ಹೊಡೆದು ಬಡೆದು ಛಚ್ಚು ಹಾಕಿ ಅನೇಕ ತರ ಹದಿಂದಾ ಪ್ರಯತ್ನ ಮಾಡಿ ನಿರಾಶರಾಗಿ ತಿರುಗಿ ಹೋದದ್ದು ಬೆಳಿಗ್ಗೆ ಗೊತ್ತಾಯಿತು. ತಿಜೋರಿಗೆ ಪೆಟ್ಟುಗಳು ಮಾತ್ರ ಬಹಳ ಬಿದ್ದಿವೆ. ಮೂರಿಯ ಬಣ್ಣ ಎಲ್ಲವೂ ಹಾರಿ ಹೋಗಿದೆ. ಬಾಕಿ ತಿಜೋರಿ ಮಾತ್ರ ಏನೂ ಕೆಟ್ಟಿಲ್ಲಾ.

ಸಾರಾಂಶ. ನಾನು ನಿಮ್ಮ ತಿಜೋರಿಯನ್ನೇ ತಕ್ಕ ವೇಳೆಗೆ ಕೊಂಡು ಆಗತಕ್ಕ ಸಾವಿರಾರು ರೂಪಾಯಿಯ ಲುಕ್ಸಾನವನ್ನು ನಿಮ್ಮಿಂದಲೇ ತಿರುಗಿ ಲಾಭ ಹೊಂದಿದಂತಾಗಿದೆ ಎಂದು ತಿಳಿಸಲಿಕ್ಕೆ ತುಂಬಾ ಸಂತೋಷವಾಗುತ್ತದೆ.

ಇದನ್ನು ನೋಡಿ ನಮ್ಮ ಕೆಲವು ಸ್ನೇಹಿತರು ನಿಮ್ಮ ತಿಜೋರಿಯನ್ನೇ ಕೊಳ್ಳಬೇಕೆಂದು ವಿಚಾರಿಸುತ್ತಿದ್ದಾರೆ. ಅವರು ಪರಭಾರೆ ತಮಗೆ ಪತ್ರ ಹಾಕಿರಬಹುದು. ಹಾಗೂ ಸಮಕ್ಷಮ ನೋಡಲಿಕ್ಕೆ ಬರಬಹುದು.

ಇಂತೀ ನಮಸ್ಕಾರಗಳು. ಸಹಿ:— ಶಿವಬಸಪ್ಪ ಬೆಲ್ಲದ, ಶಿರ್ಶಿ.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಕಾಯಕವೆ ಕೈಲಾಸ	೦-೩-೦	ಸುಕಲಾದೇವಿಯ ಕಥೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ಶರಣಬಸವೇಶ್ವರನ ಚರಿತ್ರೆ	೦-೧-೬
ಏಕಲವ್ಯನ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಲಜಪತರಾಯರ ಚರಿತ್ರೆ	೦-೧-೬	ವಿಜಯವಾಣಿ	೦-೨-೦
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

ಓಂ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೫. | ಆಲಮಟ್ಟಿ- ಸೋಮವಾರ ತಾರೀಖು ೩ ನೆಯ ಫೆಬ್ರುವರಿ ೧೯೩೬. | ಸಂಚಿಕೆ ೨೩.

ಪಂ. ಜವಾಹರಲಾಲರು ಅಧ್ಯಕ್ಷರು.

ಬಾಬು ರಾಜೇಂದ್ರ ಪ್ರಸಾದರ ಪ್ರಕಟನೆ.

೨೦೦೦ ಶೀಖ ಸತ್ಯಾಗ್ರಹಿಗಳ ಸೆರೆ.

ಜವಾಹರಲಾಲರು ಅಧ್ಯಕ್ಷರು.

ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಬಾಬುರಾಜೇಂದ್ರ ಪ್ರಸಾದರವರು ಕಳೆದ ೧ ನೆಯ ತಾರೀಖಿನ ದಿವಸ ಒಂದು ಪ್ರಕಟನೆ ಹೊರಡಿಸಿ ಲಖನೌ ಕಾಂಗ್ರೆಸ್ಸಿಗೆ ಪಂಡಿತ ಜವಾಹರಲಾಲರು ಅಧ್ಯಕ್ಷರಾಗಿ ಆರಿಸಲ್ಪಟ್ಟದ್ದಾರೆಂದು ತಿಳಿಸಿದ್ದಾರೆ. ಒಟ್ಟು ೨೧ ಪ್ರಾಂತಿಕ ಕಾಂಗ್ರೆಸ್ ಕಮೀಟಿಗಳಲ್ಲಿ ಬಂಗಾಲ ಮತ್ತು ಗಡಿನಾಡಿನ ಎರಡು ಕಮೀಟಿಗಳು ಸೇರಿಯಲಿಲ್ಲ. ಆದರೆ ಇನ್ನುಳಿದ ೧೯ ಕಮೀಟಿಗಳು ಏಕಾಭಿಪ್ರಾಯದಿಂದ ಪಂಡಿತಜಿಯವರನ್ನೇ ಅಧ್ಯಕ್ಷರನ್ನಾಗಿ ಆರಿಸಿವೆ.

ಶೀಖ ಸತ್ಯಾಗ್ರಹ ವಾರ್ತೆ.

ಲಾಹೋರ ಜಿಲ್ಲಾ ನ್ಯಾಯಾಧೀಶರು ಶೀಖರು ಜಾನೇವರಿ ಒಂದು ತಿಂಗಳಿನ ವರೆಗೆ ಕೃಪಾಣಗಳನ್ನು ಧರಿಸಿ ಸಂಚರಿಸಕೂಡದೆಂದು ಆಜ್ಞೆ ಮಾಡಿದ್ದರು. ಆ ಬಗ್ಗೆ ತಮ್ಮ ಅಸಂತೋಷವನ್ನು ಪ್ರಕಟಪಡಿಸುವದಕ್ಕಾಗಿ ಶೀಖರು ಸಮಗ್ರ ಒಂದು ತಿಂಗಳ ವರೆಗೆ (೨೮ ನೆಯ ತಾರೀಖು ಬಿಟ್ಟು) ಕೃಪಾಣ ಸತ್ಯಾಗ್ರಹ ಹೂಡಿದರು.

ಸರತಿಗೆ ೫ ಜನರಂತೆ ಶೀಖರು ಕೃಪಾಣಗಳನ್ನು ಧರಿಸಿ ಪಟ್ಟಣದಲ್ಲಿ ಬಂದ ಕೂಡಲೆ ಪೋಲೀಸರು ಅವರನ್ನು ಕೈಸೆರೆ ಮಾಡುತ್ತಿದ್ದರು. ಶೀಖರು ವ್ಯವಸ್ಥಿತವಾಗಿ ಐದೇ ಜನರ 'ಜಥ್ಥಾ' ಕಳಿಸುತ್ತಿದ್ದರು. ಸರಕಾರದವರೂ ಸಾಧಾರಣವಾಗಿ ಅವರಿಗೆಲ್ಲ ಒಂದೊಂದೇ ದಿವಸದ ಮಟ್ಟಿಗೆ ಶಿಕ್ಷೆವಿಧಿಸಿದ್ದಾರೆ. ೩೧ ದಿವಸಗಳಲ್ಲಿ ಒಟ್ಟಿಗೆ ೨೦೦೦ಶೀಖರು ಸತ್ಯಾಗ್ರಹಮಾಡಿ ಸೆರೆಯಾಳಾದರು.

ಈ ಸತ್ಯಾಗ್ರಹ ಸಮರದಲ್ಲಿ ಸ್ತ್ರೀಯರೂ ವಿಶೇಷವಾಗಿ ಭಾಗ ವಹಿಸಿದ್ದರು. ಪ್ರಸಿದ್ಧ ಕಾಂಗ್ರೆಸ್ ಮುಂದಾಳುಗಳಾದ ಸರ್ದಾರ ಶಾರ್ದೂಲಸಿಂಗ ಕವೀಶ್ವರ ಇವರ ಪತ್ನಿ ಸರದಾರಣಿ ಪ್ರಕಾಶ ಕುವರ, ಸೌ. ಹರನಾಮ ಕುವರ, ಸೌ. ಲಾಭಾ ಕುವರ, ಸರದಾರ ಸುಂದರಸಿಂಗರವರ ಪತ್ನಿ ಸೌ. ರಾಜ ಕುವರ ಇವರ ನೇತೃತ್ವದಲ್ಲಿ ಶೀಖ ಸ್ತ್ರೀಯರ 'ಜಥ್ಥಾ'ಗಳು ಹೊರಟು ಕೈಸೆರೆ ಹೊಂದಿದವು.

ಕೃಪಾಣ ಬಂಧನದ ಕಟ್ಟಳೆಯ ಅವಧಿಯು ಜಾನೇವರಿ ೩೧ ನೆಯ ತಾರೀಖಿನ ಮಧ್ಯ ರಾತ್ರಿಗೆ ಮುಗಿದುದರಿಂದ ಅಂದು ೫೦೦ ಸತ್ಯಾಗ್ರಹಿಗಳು ಸೆರೆ ಹಿಡಿಯಲ್ಪಟ್ಟರು. ಅವರಲ್ಲಿ ೭೫ ಜನ ಸ್ತ್ರೀ ಸತ್ಯಾಗ್ರಹಿಗಳಿದ್ದರು.

ಈ ಸತ್ಯಾಗ್ರಹ ಸಮರದಲ್ಲಿ ಭಾಗ ವಹಿಸಿದ ಸರದಾರ ಅಪ್ತಾರಸಿಂಗರಿಗೆ ೪೫ ದಿವಸಗಳ ಶಿಕ್ಷೆಯಾಗಿದ್ದಿತು. ಅವರನ್ನು ೩೧ ನೆಯ ತಾರೀಖಿನ ರಾತ್ರಿ ಬಿಟ್ಟುಬಿಡಲಾಯಿತು. ಮರುದಿನ ಅವರ ನೇತೃತ್ವದಲ್ಲಿಯೇ ಒಂದು ಸತ್ಯಾಗ್ರಹ "ಜಥ್ಥಾ" ಕೃಪಾಣ ಧರಿಸಿ ಹೊರಟು ಲಾಹೋರದ ಎಲ್ಲ ಗುರುದ್ವಾರಗಳನ್ನು ಸಂದರ್ಶಿಸಿತು. ಆದರೆ ಪೋಲೀಸರು ಆ ಜಥ್ಥಾವನ್ನು ಕೈಸೆರೆ ಮಾಡಲಿಲ್ಲ.

—ಇಟಲಿ ಮತ್ತು ಹಬಸಿಗಳಲ್ಲಿ ಹಿಂದೆಂದೂ ಆಗದಂಥ ಪ್ರಚಂಡ ಯುದ್ಧವಾಗಿ ಹಬಸಿಗಳು ಜಯಶಾಲಿಗಳಾದರು. ಇಟಾಲಿಯನ್ನರ ಎಷ್ಟೋ ಸೈನ್ಯವನ್ನು ಮದ್ದು ಗುಂಡುಗಳನ್ನು ಮತ್ತು ಅನೇಕ ಮಶೀನಗನ್ನುಗಳನ್ನು ಹಬಸಿಗಳು ವಶಪಡಿಸಿಕೊಂಡರು.

ಲಿಂಗಾಯತರೂ - ಹಿಂದುತ್ವವೂ.

"ಹೊಸದು" ಎಂದರೆ ಅಮೇರಿಕೆಯಲ್ಲಿ ಬಲು ಪ್ರೀತಿ. ಅದಕ್ಕೆ ವಿಪರೀತವಾದ ಭಾವನೆ ಇಲ್ಲಿಯ ಬಹು ಜನ ಹಿಂದು ಜನರಲ್ಲಿ. ಅದೊಂದು ಹಿಂದು ನಿವಾಸಿಗಳ ಮನೋವೃತ್ತಿಯೇ ಆಗಿದೆಯೆನ್ನಬಹುದು. ಹಿಂದುಗಳು ಯಾವ ಚಟುವಟಿಕೆಗಳ ಜನ್ಮವನ್ನು ತಮ್ಮ ಪುತ್ರ ಜನನದಂತೆ ಅತ್ಯಾನಂದದಿಂದ ಕಂಡಿದ್ದಾರೆ? ಮಹಾತ್ಮಾ ಗಾಂಧಿಯವರ ಖಾದಿ ಚಟುವಟಿಕೆಯಾಗಲಿ, ಅಸ್ಪೃಶ್ಯತಾ ನಿವಾರಣೆಯಾಗಲಿ ಪ್ರಥಮದಲ್ಲಿ ಯಾವ ಪ್ರಕಾರ ತಿಳಿಯಲ್ಪಟ್ಟವು? ಅನಂತರ ಅವುಗಳ ಬಗ್ಗೆ ಜನಾಭಿಪ್ರಾಯವು ಹೇಗೆ ವ್ಯತ್ಯಸ್ತವಾಗುತ್ತ ಹೋಯಿತು? ಇವನ್ನು ವಾಚಕರು ಅರಿಯದವರಲ್ಲ. ಆಂದಮೇಲೆ ಕರ್ನಾಟಕದಲ್ಲಿ ಈಗೀಗ ಪಾದ ಪ್ರಸಾರ ಮಾಡುತ್ತಲಿರುವ ಹಿಂದುತ್ವದ ಚಟುವಟಿಕೆಯ ವಿಷಯವಾಗಿಯೂ ಅದೇ ಕಲ್ಪನೆಯಿರುವುದು ಕರ್ನಾಟಕಸ್ಥರಿಗೆ ಸಹಜವಾದುದೇ ಆಗಿದೆ.

ಕರ್ನಾಟಕದಲ್ಲಿ ಪ್ರತಿಷ್ಠಿತ ಸಮಾಜವೆಂದರೆ ಲಿಂಗಾಯತ ಸಮಾಜ. ಉಳಿದ ದೇಶಗಳಲ್ಲಿ ಇಲ್ಲವೆ ಉಳಿದ ಪ್ರಾಂತಗಳಲ್ಲಿ ಉಂಟಾಗುವ ಚಟುವಟಿಕೆಗಳು ಲಿಂಗಾಯತರ ಮುಖಾಂತರವೇ ಕರ್ನಾಟಕದಲ್ಲೆಲ್ಲ ಪಸರಿಸಬೇಕಿದ್ದಿತು. ಆದರೆ ವಸ್ತುಸ್ಥಿತಿಯು ಹೀಗಿಲ್ಲ. ಯಾವುದಾದರೂ ಬ್ರಾಹ್ಮಣರ ನಂತರವೇ ನಮಗೆ ಬರುತ್ತಲಿದೆ. ಧಾರ್ಮಿಕ ಸಾಮಾಜಿಕ ಯಾವ ವಿಷಯದಲ್ಲಾದರೂ ಬ್ರಾಹ್ಮಣರ ಸ್ವಾಮಿತ್ವವನ್ನು ಒಪ್ಪಿಕೊಳ್ಳದ ನಾವು ಇನ್ನೂ ಸ್ವತಂತ್ರವಾಗಿ ಯಾವುದೊಂದು ಚಟುವಟಿಕೆಯನ್ನು ಬೇರೂರಿಸಲು ಅಸಮರ್ಥರೇ ಆಗಿದ್ದೇವೆ.

ಹಲವು ವರ್ಷಗಳ ಪೂರ್ವದಲ್ಲಿ ವೀರಶೈವ ಸಮಾಜದ ಒಬ್ಬ ಪ್ರಮುಖ ಕಾರ್ಯಕರ್ತರ ಸಭೆಯಲ್ಲಿ ಲಿಂಗಾಯತರು ಇಂಗ್ಲೀಷವೆಂಬ ಪರ ಭಾಷೆಯನ್ನು ಕಲಿಯಲಾಗದೆಂದು ಒಂದು ಗೊತ್ತುವಳಿಯಾಗಿದ್ದಿತಂತೆ. ಬ್ರಾಹ್ಮಣರು ಇಂಗ್ಲೀಷು ಕಲಿತು ನೌಕರಿಗಳ ಲಾಭ ತಕ್ಕೊಂಡು ಪತ್ರನೆ ಬೇಗಿದ ಮೇಲೆ ಅವರನ್ನು ಕಂಡು ಲಿಂಗಾಯತರು ಈಗೀಗ ಬಿ. ಎ. ಎಮ್. ಎ. ಆಗಲಿಕ್ಕೆ ಹವಣಿಸುತ್ತಿದ್ದಾರೆ. ಇದಕ್ಕೆಲ್ಲ ಮುಖ್ಯ ಕಾರಣವೆಂದರೆ ಉಳಿದ ಸಮಾಜಗಳ ಮತ್ತು ಉಳಿದ ಪ್ರಾಂತಗಳ ಬಳಕೆ ನಮಗೆ ತೀರಾ ಕಡಿಮೆ. ಅಲ್ಲಿ ಉಂಟಾಗುತ್ತಿರುವ ಅನೇಕಾನೇಕ ಉಪಯುಕ್ತ ಚಟುವಟಿಕೆಗಳನ್ನು ನಮ್ಮಲ್ಲಿ ತೀವ್ರವೇ ಅಂಗವಿಸಿಕೊಂಡು ಬಿಡಬೇಕೆಂಬ ಲವಲವಿಕೆಯೂ ಕಡಿಮೆ.

ಸದ್ಯಕ್ಕೆ ಹಿಂದುತ್ವದ ಚಟುವಟಿಕೆಯನ್ನೇ ತೆಗೆದುಕೊಳ್ಳೋಣ. ಇದರ ಮಹತ್ವವನ್ನು ಅರಿತವರು ಕರ್ನಾಟಕದಲ್ಲಿ ಬಹು ಸ್ವಲ್ಪ ಜನರಿರುತ್ತಾರೆ. ಈ ಹೊಸ ವಿಷಯವು ಲಿಂಗಾಯತರಿಗೆ ಯಾವ ರೀತಿಯಿಂದ ಅನ್ವಯಿಸುತ್ತದೆ. ಅದನ್ನು ಲಿಂಗಾಯತರು ಸ್ವಾಗತಿಸಬೇಕೋ ಬೇಡವೊ ಎಂಬಂಶಗಳನ್ನೆಲ್ಲ ಸಾಧಕ ಬಾಧಕ ರೀತಿಯಿಂದೆಲ್ಲವನ್ನೂ ಪರಿಶೀಲಿಸದೆ ಕೆಲ ಸದ್ಗೃಹಸ್ಥರು ಇದರ ಆಗಮನದಿಂದ ನಮ್ಮ ಮತವು ಪಾತಾಳಕ್ಕೇ ಇಳಿಯುತ್ತದೆಂದು ತಿಳಿಯುತ್ತಾರೆ. ಪ್ರಾಚೀನ ಕಾಲದಲ್ಲಿ ಅಜ್ಞ ಜನರು ಆಕಾಶ ಗುಡುಗಿದರೆ ದೇವರ ಪ್ರಕೋಪವಾಯಿತೆಂದೂ, ತಮಗೇನೋ ಅನಿಷ್ಟ ಸಂಭವಿಸುವದೆಂದೂ, ತಿಳಿಯುತ್ತಿದ್ದರಂತೆ. ಅದೇ ಕಲ್ಪನೆ ಈಗಲು ಕೂಡಾ ಅಲ್ಲಲ್ಲಿ ಇರುವುದನ್ನು ನೋಡಿದರೆ ಕೌತುಕವೆನಿಸುತ್ತದೆ.

ಎಂಥ ಮೂಢ ಕಲ್ಪನೆ! ಹಿಂದುತ್ವದ ಆಗಮನಕ್ಕೂ ವೀರಶೈವತ್ವದ ನಿರ್ಗಮನಕ್ಕೂ ಏನು ಸಂಬಂಧ? ತೀರಾ ವಿರೋಧವಾದ ತಿಳುವಳಿಕೆ. ಹಿಂದುತ್ವದ ಭಾವನೆಯಿಂದ ವೀರಶೈವತ್ವವು ಇನ್ನೂ ಬಲಶಾಲಿಯಾಗುತ್ತದೆ, ಇನ್ನೂ ಪ್ರಖರವಾಗುತ್ತದೆ; ಹಾಗು ಇನ್ನೂ ವ್ಯಾಪಕವಾಗುತ್ತದೆ. ಲಿಂಗಾಯತ ಮತದ ಉಜ್ವಲ ತತ್ವಗಳು ಹಿಂದುಗಳೆಲ್ಲರಿಗೆ ಸರ್ವ ಮಾನ್ಯವಾಗುವ ಸಮಯ ಈಗ ಬಂದಿದೆ.

ಶೀಖ ಪಂಥದ ಒಬ್ಬ ಮುಂದಾಳುಗಳೊಡನೆ ನಾನು ಸಂಭಾಷಣೆ ಮಾಡುತ್ತಿರುವಾಗ ಅವರು ಹೀಗೆ ಹೇಳಿದರು.— "ಶೀಖರು ಮೊದಲನೆಯ ನಂಬರ ಹಿಂದುಗಳು. ನಾವು ಹಿಂದುಗಳೆಂದು ಹೇಳಲು ಅಭಿಮಾನಪಡುತ್ತೇವೆ. ಉಳಿದ ಹಿಂದುಗಳಿಂದ ನಾವೇನಾದರೂ ಪ್ರಾಪ್ತ ಮಾಡಿಕೊಳ್ಳಬೇಕೆಂದು ನಾನು ಹೀಗೆ ಹೇಳುವದಿಲ್ಲ. ಆದರೆ ಹಿಂದು ಸಕಲರಿಗೆ ವಿಪತ್ತು ಬಂದಾಗ್ಗೆ ರಕ್ಷಣೆ ಮಾಡಿದವರು ನಾವು. ಹಿಂದುತ್ವವು ಲೋಪವಾಗುವ ಲಕ್ಷಣ ಕಂಡಾಗ್ಗೆ ಅದಕ್ಕೆ ಅಭಯ ಹಸ್ತವನ್ನು ನೀಡಿದವರು ನಾವು. ಪ್ರಾಣಾರ್ಪಣ ಮಾಡಿ ನಾವು ಹಿಂದುತ್ವದ ಹೆಸರನ್ನು ಕಾಯ್ದಿದ್ದೇವೆ. ಅಂದಮೇಲೆ ಹಿಂದುತ್ವದ ಅಭಿಮಾನ ನಾವು ಹೇಗೆ ಬಿಟ್ಟುಬಿಡೋಣ."

ವೀರಶೈವರೆ, ಈ ಮಾತಿನ ಸಾರವನ್ನು ಸರಿಯಾಗಿ ನೋಡಿಕೊಳ್ಳಿರಿ. ಶೀಖರಂತೆಯೇ ನಾವೂ ಅದೇ ಅಭಿಮಾನದಿಂದ ನಾವು ಹಿಂದುಗಳೆಂದು ಏಕೆ ಹೇಳಬಾರದು? ಏಕೆಂದರೆ ಹಿಂದುಗಳಿಗೆ ವಿಪತ್ತು ಬಂದಾಗ್ಗೆ ಸರ್ವಾಂಗಸಂಪೂರ್ಣ ಸುಸ್ಥಿರವಾದ ಸಮಾಜ ಸಂಘಟನೆಯನ್ನು ತೋರಿಸಿಕೊಟ್ಟವರು ನಾವು. ನಾ ಹೆಚ್ಚು ನೀ ಕಡಿಮೆ; ನನ್ನ ಕುಲ ಹೆಚ್ಚು ನಿನ್ನ ಕುಲ ಕಡಿಮೆ; ನಾನು ಬ್ರಾಹ್ಮಣ ನೀನು ಶೂದ್ರ; ನಾನು ಸ್ಪೃಶ್ಯ ನೀನು ಅಸ್ಪೃಶ್ಯ; ಹೀಗೆ ಹಿಂದುಗಳೆಲ್ಲ ದಿಙ್ಮೂಢರಾದಾಗ ಅವರೆಲ್ಲರಿಗೆ ನಿಜವಾದ ಮಾರ್ಗವನ್ನು ತೋರಿಸಿಕೊಟ್ಟು ಮುಂದಾಗುವ ಪರಧರ್ಮಾಘಾತವೆಂಬ ಪ್ರಚಂಡ ಅನರ್ಥವನ್ನು ತಪ್ಪಿಸಿದವರು ನಾವು. ಈಗಾದರೂ ನಾವು ಹಿಂದು ಸಮಾಜಕ್ಕೆ ಇದೇ ಸಂಜೀವಿನಿ ಮಾತ್ರೆಯನ್ನು ಕೊಡುವದಕ್ಕಾಗಿಯೇ ನಾವು ಹಿಂದುಗಳೆಂದು ಅತ್ಯುತ್ಸಾಹದಿಂದ ಹೇಳಿಕೊಳ್ಳುವದು.

ಹಾಗಾದರೆ ಹಿಂದುತ್ವದ ಬಗ್ಗೆ ಈಗ ವೀರಶೈವರ ಕರ್ತವ್ಯವೇನು? ಮಹಾರಾಷ್ಟ್ರದಲ್ಲಾಗುತ್ತಿರುವ ಆದಿಜನರ ಭಯಸೂಚಕ ಭೇರಿನಿನಾದವನ್ನು ಕೇಳುತ್ತಿರುವಿರಲ್ಲವೆ? ಅಂದಮೇಲೆ ಅದೇ ಭೇರಿಯು ಕರ್ನಾಟಕದಲ್ಲೂ ಇನ್ನು ಸ್ವಲ್ಪೇ ವರ್ಷಗಳಲ್ಲಿ ರಣ ಗುಡಲಿಕ್ಕಿಲ್ಲೆಂದು ಯಾರು ಹೇಳುವರು? ಯಾವ ಜನರು ಪೃಥ್ವಿಯ ಎಲ್ಲ ಜನಾಂಗಗಳಿಗಿಂತಲೂ ಎಲ್ಲಕ್ಕೂ ಪ್ರಾಚೀನರೆಂದು ಇತಿಹಾಸಜ್ಞರೆಲ್ಲ ಹೇಳುತ್ತಿದ್ದಾರೆಯೋ ಆ ಆದಿಜನರು ಈಗ ತಮ್ಮ ಆದಿಯ ಬಂಟತನಕ್ಕೆ (record) ಶರಣುಹೊಡೆಯುವವರಿದ್ದಾರೆ. ಯಾವ ಜನರು ಈ ದೇಶದ ಎಲ್ಲಕ್ಕೂ ಪ್ರಾಚೀನತಮವಾದ ಸಂಸ್ಕೃತಿಯನ್ನು ಅನೇಕ ಕಷ್ಟನಷ್ಟಗಳನ್ನನುಭವಿಸಿದರೂ ಇಲ್ಲಿಯವರೆಗೆ ಕಾಯ್ದುಕೊಂಡು ಬಂದಿದ್ದಾರೆಯೋ ಅವರು ಇನ್ನು ಸ್ವಲ್ಪೇ ವರ್ಷಗಳಲ್ಲಿ ಅದೆಲ್ಲವನ್ನು ಪರಿತ್ಯಾಗ ಮಾಡುವವರಿದ್ದಾರೆ ಇದೆಲ್ಲ ಏತಕ್ಕಾಗಿ? ನಮ್ಮೆಲ್ಲ ಹಿಂದುಗಳ ಅತ್ಯಾಚಾರಕ್ಕಾಗಿ! ನಮ್ಮ ಹೆಮ್ಮೆಯ ಸೇಡಿಗಾಗಿ!!

ಇವರನ್ನು ಪರಾವೃತ್ತಗೊಳಿಸುವದು ಬ್ರಾಹ್ಮಣರೊಬ್ಬರಿಂದ ಶಕ್ಯವೆ? ಅಥವಾ ಯಾವದೇ ಒಂದೇ ಒಂದು ಮತೀಯರಿಂದ

ಲಾದರೂ ಶಕ್ಯವೆ? ಕರ್ನಾಟಕದವುಟ್ಟಿಗಂತೂ ಲಿಂಗಾಯತರ ಸಹಾಯವಿಲ್ಲದೆ ಈ ಕಾರ್ಯವು ಯಾರೊಬ್ಬರಿಂದಲೂ ಶಕ್ಯವಿಲ್ಲ. ಕರ್ನಾಟಕದಲ್ಲಿ ಬಹು ಜನರು ಲಿಂಗಾಯತರು. ಸುಧಾರಕ ಸಮಾಜದವರು ಅವರು. ಅವರ ತತ್ವಗಳಲ್ಲೀ ಅಸ್ಪೃಶ್ಯತೆಗೆ ಸ್ಥಾನವಿಲ್ಲ. ಆಂದಮೇಲೆ ಮುಖ್ಯವಾಗಿ ಅವರು ಪ್ರೋತ್ಸಾಹಕೊಟ್ಟರೇನೇ ಈ ಅಸ್ಪೃಶ್ಯತಾ ನಿವಾರಣೆಯ ಕಾರ್ಯವು ಸರಿಯಾಗಿ ನಡೆಯುವದು.

ವೀರಶೈವರು ಹಿಂದುಗಳೆಂದರೆ ವೀರಶೈವತ್ವಕ್ಕೆ ಶರಣುಹೊಡೆದಂತಾಯಿತೆ? ವೀರಶೈವರು ಹಿಂದುತ್ವಕ್ಕೆ ಸಹಾಯ ಮಾಡುವದು ಅವರಿಗೆ ಅನರ್ಥಕಾರಿಯಾಗಿ ಪರಿಣಮಿಸುವದೇ? ಹೀಗೆ ಆಕ್ಷೇಪಿಸುವವರಿಗೆ ಲಿಂಗಾಯತರ ರಾಜಕೀಯ ಅನುಕೂಲ್ಯದ ಆಶೆ ಎಲ್ಲಿಂದ ಕಂಡುಬಂತು? ಹಿಂದುಸ್ಥಾನದಲ್ಲಿ ಹಿಂದುಗಳ ನಾಮಶೇಷವೇ ಎಲ್ಲಿ ಆಗುವದೋ ಎಂಬ ಭೀತಿಯಾಗಿರುವಲ್ಲಿ ಲಿಂಗಾಯತ ಸಮಾಜವೊಂದು ಹಾಗೇ ಉಳಿಯುವದೆಂದು ತಿಳಿಯಬಹುದೆ?

ಲಿಂಗಾಯತರು ತಾವೊಬ್ಬರೇ ತಮ್ಮ ಸಮಾಜಕ್ಕಾಗಿ ಮಾಡುವ ಕಾರ್ಯಗಳೂ ಇವೆ. ಅನ್ಯರೊಡನೆ ಸಹಕರಿಸಿ ಮಾಡುವ ಕಾರ್ಯಗಳೂ ಇವೆ. ಲಿಂಗಾಯತರು ಉಳಿದ ಹಿಂದುಗಳೊಡನೆ ಸಹಕರಿಸಿ ಮಾಡುವ ಅನೇಕ ಕಾರ್ಯಗಳಿವೆ. ಅವುಗಳಲ್ಲಿ ಕೆಲವಂತೂ ಬಿಟ್ಟದ್ದನ್ನು ಬಿಟ್ಟು ಈಗಲೇ ಮಾಡಬೇಕಾಗಿ ಬಂದಿವೆ. ಗ್ರಾಮವೆಲ್ಲ ದಹಿಸಿಹೋಗುವ ಸಮಯ ಬಂದಾಗ್ಗೆ ಎಲ್ಲರೂ ಕೂಡಿ ಅದನ್ನು ಆರಿಸುವ ಪ್ರಥಮ ಕಾರ್ಯವನ್ನು ಕೈಕೊಳ್ಳುವವನ್ನು ಬಿಟ್ಟು ನಾವೊಬ್ಬರು ನಮ್ಮ ಮನೆಯಮುಟ್ಟಿಗೆ ನೋಡಿಕೊಂಡರಾಯಿತೆಂದು ತಿಳಿಯುವದು ಮೂರ್ಖತನವಲ್ಲವೆ?

ಬಂಧುಗಳೆ, ಈಗಾಗಲೆ ಕ್ರಿಸ್ತೀಯರು ಕರ್ನಾಟಕದಲ್ಲಿ ಪ್ರಬಲಗೊಳ್ಳುತ್ತಿದ್ದಾರೆ. ಅನೇಕ ಅಲ್ಲದಸಲ್ಲದ ರೀತಿಗಳಿಂದ ಹಿಂದುಗಳ ಧರ್ಮಗ್ರಂಥಗಳ ಖಂಡನೆ ನಡೆಸಿದ್ದಾರೆ. ಇಂಥ ಸಮಯದಲ್ಲಿ ಲಿಂಗಾಯತರ ಹೊಣೆಗಾರಿಕೆಯು ವಿಶೇಷವಾಗಿದೆ. ಏಕೆಂದರೆ ಅದರ ಪರಿಣಾಮವು ಲಿಂಗಾಯತ ಸಮಾಜದ ಮೇಲೆ ವಿಶೇಷವಾಗಿ ಆಗುವದು. ಎಲ್ಲರ ಯೋಗ ಕ್ಷೇಮವನ್ನು ಬ್ರಾಹ್ಮಣರೇ ನೋಡಿಕೊಳ್ಳುವರೆಂಬ ಭ್ರಮೆಯನ್ನು ಹಿಡಿಯಲಾಗದು. ಮೊನ್ನೆ ಪುಣೆಯಲ್ಲಾದ ಸನಾತನಿಗಳ ಸಭೆಯಲ್ಲಿ ಒಬ್ಬರು ಈ ಪ್ರಕಾರ ಹೇಳಿದರು—"ಹಿಂದು ಮಹಾಸಭೆಯವರು ಶೀಖ, ಜೈನ, ಬೌದ್ಧ ಮೊದಲಾದವರೆಲ್ಲರನ್ನೂ ಸ್ವಾಗತಿಸಿ ಸನಾತನಿ ಬ್ರಾಹ್ಮಣರನ್ನು ಮಾತ್ರ ಮರೆತೇ ಬಿಟ್ಟರು." ಇನ್ನೊಬ್ಬ ಮಹಾಶಯರು ಹೀಗೆ ಹೇಳಿದರು—"ನಾವು ಸನ ತನಿ ಬ್ರಾಹ್ಮಣರು ಹಿಂದು ಮಹಾಸಭೆಯನ್ನು ಎಲ್ಲಾ ವಿಷಯಗಳಲ್ಲಿ ಅನುಸರಿಸುತ್ತೇವೆ. ಆದರೆ ಮಹಾಸಭೆಯು ನಮ್ಮ ಧಾರ್ಮಿಕ ವಿಷಯದಲ್ಲಿ ಕೈಹಾಕಿದರೆ ನಾವು ಅದನ್ನು ಅನುಮೋದಿಸಲಾರೆವು." ಇವರ ಧಾರ್ಮಿಕ ವಿಷಯವೆಂದರೆ ಅಸ್ಪೃಶ್ಯತಾ ನಿವಾರಣೆಯಾಗಬಾರದೆಂಬುದೇ ಸರಿ.

ಆದುದರಿಂದ ಲಿಂಗಾಯತ ಬಂಧುಗಳೆ, ನಾವು ಅನ್ಯ ಹಿಂದು ಬಂಧುಗಳನ್ನು ಕೂಡಿಸಿಕೊಳ್ಳುವದರಲ್ಲಿ ನಮ್ಮೆಲ್ಲರಿಗೂ ಬಹು ಹಿತವಿದೆ. ನಾಲ್ಕು ಜನ ಅಣ್ಣ ತಮ್ಮಂದಿರಲ್ಲಿ ಒಬ್ಬನು ಸಂಪತ್ತುಳ್ಳವನಾಗಿ, ಸಾಕಷ್ಟು ದೃಢಕಾಯನಾಗಿದ್ದರೆ ತನ್ನ ಅಸಹಾಯ ದೀನ ಬಂಧುಗಳನ್ನು ಮರೆತುಬಿಡುವುದು ಗೌರವವೇ? ಅವರು ಅಣ್ಣಾ ಎಂದರೆ ನೀನು ನನ್ನ ತಮ್ಮನಲ್ಲ ಹೋಗು ಎಂದೆನ್ನಬಹುದೆ? ಹಾಗೆಂದರೆ ದೀನದಯಾಳುವಾದ ಆ ಪರಮಾತ್ಮನು ನಮ್ಮನ್ನು ಈ ಭೂಮಿಯಲ್ಲಿ ಎಂದೂ ಕ್ಷೇಮದಿಂದಿರಿಸಲಿಕ್ಕಿಲ್ಲ.

ಪಾಟೀಲ ಲಿಂಗನಗೌಡ.

ವೀರಶೈವ ತರುಣ ಸಂಘ ಕೊಲ್ಲಾಪುರ.

ಶ್ರೀ. ಸಿ. ಎಸ್. ಹಿರೇಮಠ, ಎಸ್. ಆರ್. ಪಾಟೀಲ, ಭೀಮಪುರೆ, ಜಿ. ವ್ಹಿ. ಸೋಳಸೆ, ಎಮ್. ಕೆ. ಬಾಳೆ, ಎಸ್. ವ್ಹಿ. ಭೈರೋಪಾಟೀಲ, ಎ. ಎಮ್. ಚನಶೆಟ್ಟಿ, ಎಸ್. ಎಸ್. ಮಲಗೌಡ ಮೊದಲಾದ ಉತ್ಸಾಹೀ ತರುಣರು ಕೊಲ್ಲಾಪುರದಲ್ಲಿ ತಾರೀಖು ೧೫-೧೨-೩೫ ನೆಯ ದಿವಸ ವೀರಶೈವ ತರುಣ ಸಂಘದ ಸ್ಥಾಪನೆ ಮಾಡಿದ್ದಾರೆ. ಶಿಕ್ಷಣ ಸಂಪಾದನೆಗಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಅನೇಕ ವಿದ್ಯಾರ್ಥಿಗಳು ಕೊಲ್ಲಾಪುರದಲ್ಲಿ ವಾಸಿಸುತ್ತಿದ್ದಾರೆ. ಆದುದರಿಂದ ಈ ವಿದ್ಯಾರ್ಥಿಗಳ ಉತ್ಸಾಹಭರಿತ ಹೃದಯಗಳಲ್ಲಿ ಸಮಾಜ ಸೇವೆಯ ಅಂಕುರವುಂಟಾಗುವದಕ್ಕಾಗಿ ಇಂಥ ಸಂಘದ ಅವಶ್ಯಕತೆಯೆನಿಸಿ ಇದನ್ನು ಸ್ಥಾಪಿಸಿದ್ದಾಗಿದೆ.

ಈ ಸಂಘದ ಉದ್ದೇಶಗಳು ಈ ಪ್ರಕಾರವಾಗಿವೆ—

(೧) ವೀರಶೈವರಲ್ಲಿಯ ಒಳಪಂಗಡಗಳ ಭಿನ್ನಭೇದ ಭಾವನೆಗೆ ತಡೆಯನ್ನುಂಟುಮಾಡಿ ವೀರಶೈವ ಸಮಾಜದ ಎಲ್ಲ ಒಳಪಂಗಡಗಳಲ್ಲಿ ಭೋಜನ ವಿವಾಹಾದಿಗಳು ಜರಗುವಂತೆ ಪ್ರಯತ್ನಮಾಡುವದು ಮತ್ತು ಆ ಪ್ರಕಾರ ಜನತೆಯಲ್ಲಿ ಪ್ರಸಾರಮಾಡುವದು.

(೨) ನಮ್ಮ ಧರ್ಮದ ಮೇಲಾಗುತ್ತಿರುವ ಪರಧರ್ಮೀಯರ ಆಕ್ರಮಣವನ್ನು ತಡೆಯುವದು

(೩) ಶಾಲೆ ಕಾಲೇಜುಗಳಿಗೆ ಸೂಟಿಯಿದ್ದಾಗ್ಗೆ ಗ್ರಾಮಾಂತರಗಳಲ್ಲೆಲ್ಲ ಸಂಚರಿಸಿ ಧರ್ಮ ತತ್ವಗಳನ್ನು ಬೋಧಿಸಿ ಸಮಾಜದಲ್ಲಿ ಜಾಗೃತಿಯನ್ನುಂಟುಮಾಡುವದು.

(೪) ಸಮಾಜದ ಮುಂದಾಳುಗಳಿಂದ ವ್ಯಾಖ್ಯಾನ ಮಾಡಿಸಿ ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡುವದು.

(೫) ಸಾಮಾಜಿಕ ಮತ್ತು ಧಾರ್ಮಿಕ ಲೇಖನಗಳ ಮೂಲಕ ಜಾಗೃತಿಯನ್ನುಂಟುಮಾಡುವದು.

(೬) ನಮ್ಮ ಧರ್ಮವನ್ನು ತ್ಯಜಿಸಿ ಪರಧರ್ಮ ಸೇರಿದಂಥವರು ಪಶ್ಚಾತ್ತಾಪಬಟ್ಟು ಸ್ವಧರ್ಮದಲ್ಲಿ ಬರಲಿಚ್ಛಿಸುವವರನ್ನು ಶುದ್ಧಗೊಳಿಸಿ ಪುನಃ ನಮ್ಮ ಧರ್ಮದಲ್ಲಿ ಸೇರ್ಪಡೆ ಮಾಡಿಕೊಳ್ಳುವದು. ಇತ್ಯಾದಿ.

ಇವಲ್ಲದೆ ಕನ್ನಡ ವೀರಶೈವ ವಾಙ್ಮಯದ ಮತ್ತು ವಚನ ಶಾಸ್ತ್ರದ ಪರಿಚಯವಾಗುವದಕ್ಕಾಗಿ ಶ್ರೀಯುತ ಎಸ್. ಎಸ್. ಪಾಟೀಲ ಮತ್ತು ಶ್ರೀ ಎಮ್ ಜಿ ಪಾಟೀಲ ಇವರ ನೇತೃತ್ವದಲ್ಲಿ ಕನ್ನಡ ಕಲಿಸುವ ಒಂದು ವರ್ಗವನ್ನು ಪ್ರಾರಂಭಿಸಲಾಗಿದೆ.

ಸಿ. ಎಸ್. ಹಿರೇಮಠ ಬಿ. ಎ.
ಕಾರ್ಯದರ್ಶಿ
ವೀ ತ. ಸಂಘ ಕೊಲ್ಲಾಪುರ.

ಒಕ್ಕಲತನ, ದನಗಳ, ಔದ್ಯೋಗಿಕ ಪ್ರದರ್ಶನ ಬಾಗಲಕೋಟೆ.

ಬಾಗಲಕೋಟೆಯಲ್ಲಿ ಪ್ಲೈಗ ಬೇನೆ ಪ್ರಾರಂಭವಾಗಿರುವುದರಿಂದ ಫೆಬ್ರುವರಿ ತಿಂಗಳ ೬-೭ ಮತ್ತು ೮ ನೇ ತಾರೀಖುಗಳಲ್ಲಿ ನೆರವೇರಿಸಬೇಕೆಂದು ಪ್ರಸಿದ್ಧ ಮಾಡಿದ ಪ್ರದರ್ಶನವು ಸದ್ಯಃ ಅನಿವಾರ್ಹ ನಿಮಿತ್ಯ ಮುಂದೆ ಹಾಕುವುದರಲ್ಲಿ ಬಂದಿದೆ. ಮತ್ತು ಈ ಪ್ರದರ್ಶನವು ಮುಂದೆ ನೆರವೇರಿಸಬೇಕೆಂದು ಗೊತ್ತುಪಡಿಸಿದ ತಾರೀಖುಗಳನ್ನು ಹಿಂದಿನಿಂದ ಪ್ರಸಿದ್ಧ ಮಾಡುವುದರಲ್ಲಿ ಬರುವುದು.

ಸೆಕ್ರೆಟರಿ.

ಲಿಂಗಾಯತರೂ - ಹಿಂದುತ್ವವೂ.

"ಹೊಸದು" ಎಂದರೆ ಅನೇಕರಿಗೆ ಬಲು ಪ್ರೀತಿ. ಅದಕ್ಕೆ ವಿಪರೀತವಾದ ಭಾವನೆ ಇಲ್ಲಿಯ ಬಹು ಜನ ಹಿಂದು ಜನರಲ್ಲಿ. ಅದೊಂದು ಹಿಂದು ನಿವಾಸಿಗಳ ಮನೋವೃತ್ತಿಯೇ ಆಗಿದೆಯೆನ್ನಬಹುದು. ಹಿಂದುಗಳು ಯಾವ ಚಟುವಟಿಕೆಗಳ ಜನ್ಮವನ್ನು ತಮ್ಮ ಪುತ್ರ ಜನನದಂತೆ ಅತ್ಯಾನಂದದಿಂದ ಕಂಡಿದ್ದಾರೆ? ಮಹಾತ್ಮಾ ಗಾಂಧಿಯವರ ಖಾದಿ ಚಟುವಟಿಕೆಯಾಗಲಿ, ಅಸ್ಪೃಶ್ಯತಾ ನಿವಾರಣೆಯಾಗಲಿ ಪ್ರಥಮದಲ್ಲಿ ಯಾವ ಪ್ರಕಾರ ತಿಳಿಯಲ್ಪಟ್ಟವು? ಅನಂತರ ಅವುಗಳ ಬಗ್ಗೆ ಜನಾಭಿಪ್ರಾಯವು ಹೇಗೆ ವ್ಯತ್ಯಸ್ತವಾಗುತ್ತ ಹೋಯಿತು? ಇವನ್ನು ವಾಚಕರು ಅರಿಯದವರಲ್ಲ. ಅಂದಮೇಲೆ ಕರ್ನಾಟಕದಲ್ಲಿ ಈಗೀಗ ವಾದ ಪ್ರಸಾರ ಮಾಡುತ್ತಲಿರುವ ಹಿಂದುತ್ವದ ಚಟುವಟಿಕೆಯ ವಿಷಯವಾಗಿಯೂ ಅದೇ ಕಲ್ಪನೆಯಿರುವುದು ಕರ್ನಾಟಕಸ್ಥರಿಗೆ ಸಹಜವಾದುದೇ ಆಗಿದೆ

ಕರ್ನಾಟಕದಲ್ಲಿ ಪ್ರತಿಷ್ಠಿತ ಸಮಾಜವೆಂದರೆ ಲಿಂಗಾಯತ ಸಮಾಜ. ಉಳಿದ ದೇಶಗಳಲ್ಲಿ ಇಲ್ಲವೆ ಉಳಿದ ಪ್ರಾಂತಗಳಲ್ಲಿ ಉಂಟಾಗುವ ಚಟುವಟಿಕೆಗಳು ಲಿಂಗಾಯತರ ಮುಖಾಂತರವೇ ಕರ್ನಾಟಕದಲ್ಲೆಲ್ಲ ಪಸರಿಸಬೇಕಿದ್ದಿತು. ಆದರೆ ವಸ್ತುಸ್ಥಿತಿಯು ಹೀಗಿಲ್ಲ. ಯಾವುದಾದರೂ ಬ್ರಾಹ್ಮಣರ ನಂತರವೇ ನಮಗೆ ಬರುತ್ತಲಿದೆ. ಧಾರ್ಮಿಕ ಸಾಮಾಜಿಕ ಯಾವ ವಿಷಯದಲ್ಲಾದರೂ ಬ್ರಾಹ್ಮಣರ ಸ್ವಾಮಿತ್ವವನ್ನು ಒಪ್ಪಿಕೊಳ್ಳದ ನಾವು ಇನ್ನೂ ಸ್ವತಂತ್ರವಾಗಿ ಯಾವುದೊಂದು ಚಟುವಟಿಕೆಯನ್ನು ಬೇರೂರಿಸಲು ಅಸಮರ್ಥರೇ ಆಗಿದ್ದೇವೆ.

ಹಲವು ವರ್ಷಗಳ ಪೂರ್ವದಲ್ಲಿ ವೀರಶೈವ ಸಮಾಜದ ಒಬ್ಬ ಪ್ರಮುಖ ಕಾರ್ಯಕರ್ತರ ಸಭೆಯಲ್ಲಿ ಲಿಂಗಾಯತರು ಇಂಗ್ಲೀಷವೆಂಬ ಪರ ಭಾಷೆಯನ್ನು ಕಲಿಯಲಾಗದೆಂದು ಒಂದು ಗೊತ್ತುವಳಿಯಾಗಿದ್ದಿತಂತೆ. ಬ್ರಾಹ್ಮಣರು ಇಂಗ್ಲೀಷು ಕಲಿತು ನೌಕರಿಗಳ ಲಾಭ ತಕ್ಕೊಂಡು ಧರ್ಮನೆ ಡೇಗಿದ ಮೇಲೆ ಅವರನ್ನು ಕಂಡು ಲಿಂಗಾಯತರು ಈಗೀಗ ಬಿ. ಎ. ಎಮ್. ಎ. ಆಗಲಿಕ್ಕೆ ಹವಣಿಸುತ್ತಿದ್ದಾರೆ. ಇದಕ್ಕೆಲ್ಲ ಮುಖ್ಯ ಕಾರಣವೆಂದರೆ ಉಳಿದ ಸಮಾಜಗಳ ಮತ್ತು ಉಳಿದ ಪ್ರಾಂತಗಳ ಬಳಕೆ ನಮಗೆ ತೀರಾ ಕಡಿಮೆ. ಅಲ್ಲಿ ಉಂಟಾಗುತ್ತಿರುವ ಅನೇಕಾನೇಕ ಉಪಯುಕ್ತ ಚಟುವಟಿಕೆಗಳನ್ನು ನಮ್ಮಲ್ಲಿ ತೀವ್ರವೇ ಅಂಗವಿಸಿಕೊಂಡು ಬಿಡಬೇಕೆಂಬ ಲವಲವಿಕೆಯೂ ಕಡಿಮೆ.

ಸದ್ಯಕ್ಕೆ ಹಿಂದುತ್ವದ ಚಟುವಟಿಕೆಯನ್ನೇ ತೆಗೆದುಕೊಳ್ಳೋಣ. ಇದರ ಮಹತ್ವವನ್ನು ಅರಿತವರು ಕರ್ನಾಟಕದಲ್ಲಿ ಬಹು ಸ್ವಲ್ಪ ಜನರಿರುತ್ತಾರೆ. ಈ ಹೊಸ ವಿಷಯವು ಲಿಂಗಾಯತರಿಗೆ ಯಾವ ರೀತಿಯಿಂದ ಅನ್ವಯಿಸುತ್ತದೆ. ಅದನ್ನು ಲಿಂಗಾಯತರು ಸ್ವಾಗತಿಸಬೇಕೋ ಬೇಡವೊ ಎಂಬಂಶಗಳನ್ನೆಲ್ಲ ಸಾಧಕ ಬಾಧಕ ರೀತಿಯಿಂದೆಲ್ಲವನ್ನೂ ಪರಿಶೀಲಿಸದೆ ಕೆಲ ಸದ್ಗೃಹಸ್ಥರು ಇದರ ಆಗಮನದಿಂದ ನಮ್ಮ ಮತವು ಪಾತಾಳಕ್ಕೇ ಇಳಿಯುತ್ತದೆಂದು ತಿಳಿಯುತ್ತಾರೆ. ಪ್ರಾಚೀನ ಕಾಲದಲ್ಲಿ ಅಜ್ಞ ಜನರು ಆಕಾಶ ಗುಡುಗಿದರೆ ದೇವರ ಪ್ರಕೋಪವಾಯಿತೆಂದೂ, ತಮಗೇನೋ ಅನಿಷ್ಟ ಸಂಭವಿಸುವದೆಂದೂ, ತಿಳಿಯುತ್ತಿದ್ದರಂತೆ. ಅದೇ ಕಲ್ಪನೆ ಈಗಲು ಕೂಡಾ ಅಲ್ಲಲ್ಲಿ ಇರುವುದನ್ನು ನೋಡಿದರೆ ಕೌತುಕವೆನಿಸುತ್ತದೆ.

ಎಂಥ ಮೂಢ ಕಲ್ಪನೆ! ಹಿಂದುತ್ವದ ಆಗಮನಕ್ಕೂ ವೀರಶೈವತ್ವದ ನಿರ್ಗಮನಕ್ಕೂ ಏನು ಸಂಬಂಧ? ತೀರಾ ವಿರೋಧವಾದ ತಿಳುವಳಿಕೆ. ಹಿಂದುತ್ವದ ಭಾವನೆಯಿಂದ ವೀರಶೈವತ್ವವು ಇನ್ನೂ ಬಲಶಾಲಿಯಾಗುತ್ತದೆ, ಇನ್ನೂ ಪ್ರಖರವಾಗುತ್ತದೆ; ಹಾಗು ಇನ್ನೂ ವ್ಯಾಪಕವಾಗುತ್ತದೆ. ಲಿಂಗಾಯತ ಮತದ ಉಜ್ವಲ ತತ್ವಗಳು ಹಿಂದುಗಳೆಲ್ಲರಿಗೆ ಸರ್ವಮಾನ್ಯವಾಗುವ ಸಮಯ ಈಗ ಬಂದಿದೆ.

ಶೀಖ ಪಂಥದ ಒಬ್ಬ ಮುಂದಾಳುಗಳೊಡನೆ ನಾನು ಸಂಭಾಷಣೆ ಮಾಡುತ್ತಿರುವಾಗ ಅವರು ಹೀಗೆ ಹೇಳಿದರು.— "ಶೀಖರು ಮೊದಲನೆಯ ನಂಬರ ಹಿಂದುಗಳು ನಾವು ಹಿಂದುಗಳೆಂದು ಹೇಳಲು ಅಭಿಮಾನಪಡುತ್ತೇವೆ. ಉಳಿದ ಹಿಂದುಗಳಿಂದ ನಾವೇನಾದರೂ ಪ್ರಾಪ್ತ ಮಾಡಿಕೊಳ್ಳಬೇಕೆಂದು ನಾನು ಹೀಗೆ ಹೇಳುವದಿಲ್ಲ, ಆದರೆ ಹಿಂದು ಸಕಲರಿಗೆ ವಿಪತ್ತು ಬಂದಾಗ್ಗೆ ರಕ್ಷಣೆ ಮಾಡಿದವರು ನಾವು. ಹಿಂದುತ್ವವು ಲೋಪವಾಗುವ ಲಕ್ಷಣ ಕಂಡಾಗ್ಗೆ ಅದಕ್ಕೆ ಅಭಯ ಹಸ್ತವನ್ನು ನೀಡಿದವರು ನಾವು. ಪ್ರಾಣಾರ್ಪಣ ಮಾಡಿ ನಾವು ಹಿಂದುತ್ವದ ಹೆಸರನ್ನು ಕಾಯ್ದಿದ್ದೇವೆ ಅಂದಮೇಲೆ ಹಿಂದುತ್ವದ ಅಭಿಮಾನ ನಾವು ಹೇಗ ಬಿಟ್ಟುಬಿಡೋಣ."

ವೀರಶೈವರೆ, ಈ ಮಾತಿನ ಸಾರವನ್ನು ಸರಿಯಾಗಿ ನೋಡಿಕೊಳ್ಳಿರಿ. ಶೀಖರಂತೆಯೇ ನಾವೂ ಅದೇ ಅಭಿಮಾನದಿಂದ ನಾವು ಹಿಂದುಗಳೆಂದು ಏಕೆ ಹೇಳಬಾರದು? ಏಕೆಂದರೆ ಹಿಂದುಗಳಿಗೆ ವಿಪತ್ತು ಬಂದಾಗ್ಗೆ ಸರ್ವಾಂಗಸಂಪೂರ್ಣ ಸುಸ್ಥಿರವಾದ ಸಮಾಜ ಸಂಘಟನೆಯನ್ನು ತೋರಿಸಿಕೊಟ್ಟವರು ನಾವು. ನಾ ಹೆಚ್ಚು ನೀ ಕಡಿಮೆ; ನನ್ನ ಕುಲ ಹೆಚ್ಚು ನಿನ್ನ ಕುಲ ಕಡಿಮೆ; ನಾನು ಬ್ರಾಹ್ಮಣ ನೀನು ಶೂದ್ರ; ನಾನು ಸ್ಪೃಶ್ಯ ನೀನು ಅಸ್ಪೃಶ್ಯ; ಹೀಗೆ ಹಿಂದುಗಳೆಲ್ಲ ದಿಂಙ್ಮೂಢರಾದಾಗ ಅವರೆಲ್ಲರಿಗೆ ನಿಜವಾದ ಮಾರ್ಗವನ್ನು ತೋರಿಸಿಕೊಟ್ಟು ಮುಂದಾಗುವ ಪಂಥವರ್ಣಾಘಾತವೆಂಬ ಪ್ರಚಂಡ ಅನರ್ಥವನ್ನು ತಪ್ಪಿಸಿದವರು ನಾವು. ಈಗಾದರೂ ನಾವು ಹಿಂದು ಸಮಾಜಕ್ಕೆ ಇದೇ ಸಂಜೀವಿನಿ ಮಾತ್ರೆಯನ್ನು ಕೊಡುವದಕ್ಕಾಗಿಯೇ ನಾವು ಹಿಂದುಗಳೆಂದು ಅತ್ಯುತ್ಸಾಹದಿಂದ ಹೇಳಿಕೊಳ್ಳುವದು.

ಹಾಗಾದರೆ ಹಿಂದುತ್ವದ ಬಗ್ಗೆ ಈಗ ವೀರಶೈವರ ಕರ್ತವ್ಯವೇನು? ಮಹಾರಾಷ್ಟ್ರದಲ್ಲಾಗುತ್ತಿರುವ ಆದಿಜನರ ಭಯಸೂಚಕ ಭೇರಿನಿನಾದವನ್ನು ಕೇಳುತ್ತಿರುವರಿಲ್ಲವೆ? ಅಂದಮೇಲೆ ಅದೇ ಭೇರಿಯು ಕರ್ನಾಟಕದಲ್ಲೂ ಇನ್ನು ಸ್ವಲ್ಪೇ ವರ್ಷಗಳಲ್ಲಿ ರಣಗುಡಲಿಕ್ಕಿಲ್ಲೆಂದು ಯಾರು ಹೇಳುವರು? ಯಾವ ಜನರು ಪೃಥ್ವಿಯ ಎಲ್ಲ ಜನಾಂಗಗಳಿಗಿಂತಲೂ ಎಲ್ಲಕ್ಕೂ ಪ್ರಾಚೀನರೆಂದು ಇತಿಹಾಸಜ್ಞರೆಲ್ಲ ಹೇಳುತ್ತಿದ್ದಾರೆಯೋ ಆ ಆದಿಜನರು ಈಗ ತಮ್ಮ ಆದಿಯ ಬಂಟತನಕ್ಕೆ (record) ಶರಣುಹೊಡೆಯುವವರಿದ್ದಾರೆ. ಯಾವ ಜನರು ಈ ದೇಶದ ಎಲ್ಲಕ್ಕೂ ಪ್ರಾಚೀನತಮವಾದ ಸಂಸ್ಕೃತಿಯನ್ನು ಅನೇಕ ಕಷ್ಟನಷ್ಟಗಳನ್ನನುಭವಿಸಿದರೂ ಇಲ್ಲಿಯವರೆಗೆ ಕಾಯ್ದುಕೊಂಡು ಬಂದಿದ್ದಾರೆಯೋ ಅವರು ಇನ್ನು ಸ್ವಲ್ಪೇ ವರ್ಷಗಳಲ್ಲಿ ಅದೆಲ್ಲವನ್ನು ಪರಿತ್ಯಾಗ ಮಾಡುವವರಿದ್ದಾರೆ ಇದೆಲ್ಲ ಏತಕ್ಕಾಗಿ? ನಮ್ಮೆಲ್ಲ ಹಿಂದುಗಳ ಅತ್ಯಾಚಾರಕ್ಕಾಗಿ! ನಮ್ಮ ಹೆಮ್ಮೆಯ ಸೇಡಿಗಾಗಿ!!

ಇವರನ್ನು ಪರಾವೃತ್ತಗೊಳಿಸುವದು ಬ್ರಾಹ್ಮಣರೊಬ್ಬರಿಂದ ಶಕ್ಯವೆ? ಅಥವಾ ಯಾವದೇ ಒಂದೇ ಒಂದು ಮತೀಯರಿಂದ

ಲಾದರೂ ಶಕ್ಯವೆ? ಕರ್ನಾಟಕದವರಿಟ್ಟಿಗಂತೂ ಲಿಂಗಾಯತರ ಸಹಾಯವಿಲ್ಲದೆ ಈ ಕಾರ್ಯವು ಯಾರೊಬ್ಬರಿಂದಲೂ ಶಕ್ಯವಿಲ್ಲ. ಕರ್ನಾಟಕದಲ್ಲಿ ಬಹು ಜನರು ಲಿಂಗಾಯತರು. ಸುಧಾರಕ ಸಮಾಜದವರು ಅವರು. ಅವರ ತತ್ವಗಳಲ್ಲೇ ಅಸ್ಪೃಶ್ಯತೆಗೆ ಸ್ಥಾನವಿಲ್ಲ. ಅಂದಮೇಲೆ ಮುಖ್ಯವಾಗಿ ಅವರು ಪ್ರೋತ್ಸಾಹಕೊಟ್ಟರೇನೇ ಈ ಅಸ್ಪೃಶ್ಯತಾ ನಿವಾರಣೆಯ ಕಾರ್ಯವು ಸರಿಯಾಗಿ ನಡೆಯುವದು.

ವೀರಶೈವರು ಹಿಂದುಗಳೆಂದರೆ ವೀರಶೈವತ್ವಕ್ಕೆ ಶರಣುಹೊಡೆದಂತಾಯಿತೆ? ವೀರಶೈವರು ಹಿಂದುತ್ವಕ್ಕೆ ಸಹಾಯ ಮಾಡುವದು ಅವರಿಗೆ ಅನರ್ಥಕಾರಿಯಾಗಿ ಪರಿಣಮಿಸುವದೇ? ಹೀಗೆ ಆಕ್ಷೇಪಿಸುವವರಿಗೆ ಲಿಂಗಾಯತರ ರಾಜಕೀಯ ಅನುಕೂಲ್ಯದ ಆಶೆ ಎಲ್ಲಿಂದ ಕಂಡುಬಂತು? ಹಿಂದುಸ್ಥಾನದಲ್ಲಿ ಹಿಂದುಗಳ ನಾಮಶೇಷವೇ ಎಲ್ಲಿ ಆಗುವದೋ ಎಂಬ ಭೀತಿಯಾಗಿರುವಲ್ಲಿ ಲಿಂಗಾಯತ ಸಮಾಜವೊಂದು ಹಾಗೇ ಉಳಿಯುವದೆಂದು ತಿಳಿಯಬಹುದೆ?

ಲಿಂಗಾಯತರು ತಾವೊಬ್ಬರೇ ತಮ್ಮ ಸಮಾಜಕ್ಕಾಗಿ ಮಾಡುವ ಕಾರ್ಯಗಳೂ ಇವೆ. ಅನ್ಯರೊಡನೆ ಸಹಕರಿಸಿ ಮಾಡುವ ಕಾರ್ಯಗಳೂ ಇವೆ. ಲಿಂಗಾಯತರು ಉಳಿದ ಹಿಂದುಗಳೊಡನೆ ಸಹಕರಿಸಿ ಮಾಡುವ ಅನೇಕ ಕಾರ್ಯಗಳಿವೆ. ಅವುಗಳಲ್ಲಿ ಕೆಲವಂತೂ ಬಿಟ್ಟದ್ದನ್ನು ಬಿಟ್ಟು ಈಗಲೇ ಮಾಡಬೇಕಾಗಿ ಬಂದಿವೆ. ಗ್ರಾಮವೆಲ್ಲ ದಹಿಸಿಹೋಗುವ ಸಮಯ ಬಂದಾಗ್ಗೆ ಎಲ್ಲರೂ ಕೂಡಿ ಅದನ್ನು ಆರಿಸುವ ಪ್ರಥಮ ಕಾರ್ಯವನ್ನು ಕೈಕೊಳ್ಳುವದನ್ನು ಬಿಟ್ಟು ನಾವೊಬ್ಬರು ನಮ್ಮ ಮನೆಯಮಟ್ಟಿಗೆ ನೋಡಿಕೊಂಡರಾಯಿತೆಂದು ತಿಳಿಯುವದು ಮೂರ್ಖತನವಲ್ಲವೆ?

ಬಂಧುಗಳೆ, ಈಗಾಗಲೆ ಕ್ರಿಸ್ತೀಯರು ಕರ್ನಾಟಕದಲ್ಲಿ ಪ್ರಬಲಗೊಳ್ಳುತ್ತಿದ್ದಾರೆ. ಅನೇಕ ಅಲ್ಲದಸಲ್ಲದ ರೀತಿಗಳಿಂದ ಹಿಂದುಗಳ ಧರ್ಮಗ್ರಂಥಗಳ ಖಂಡನೆ ನಡೆಸಿದ್ದಾರೆ. ಇಂಥ ಸಮಯದಲ್ಲಿ ಲಿಂಗಾಯತರ ಹೊಣೆಗಾರಿಕೆಯು ವಿಶೇಷವಾಗಿದೆ. ಏಕೆಂದರೆ ಅದರ ಪರಿಣಾಮವು ಲಿಂಗಾಯತ ಸಮಾಜದ ಮೇಲೆ ವಿಶೇಷವಾಗಿ ಆಗುವದು. ಎಲ್ಲರ ಯೋಗ ಕ್ಷೇಮವನ್ನು ಬ್ರಾಹ್ಮಣರೇ ನೋಡಿಕೊಳ್ಳುವರೆಂಬ ಭ್ರಮೆಯನ್ನು ಹಿಡಿಯಲಾಗದು. ಮೊನ್ನೆ ಪುಣೆಯಲ್ಲಾದ ಸನಾತನಿಗಳ ಸಭೆಯಲ್ಲಿ ಒಬ್ಬರು ಈ ಪ್ರಕಾರ ಹೇಳಿದರು—"ಹಿಂದು ಮಹಾಸಭೆಯವರು ಶೀಖ, ಜೈನ, ಬೌದ್ಧ ಮೊದಲಾದವರೆಲ್ಲರನ್ನೂ ಸ್ವಾಗತಿಸಿ ಸನಾತನಿ ಬ್ರಾಹ್ಮಣರನ್ನು ಮಾತ್ರ ಮರೆತೇ ಬಿಟ್ಟರು." ಇನ್ನೊಬ್ಬ ಮಹಾಶಯರು ಹೀಗೆ ಹೇಳಿದರು—"ನಾವು ಸನಾತನಿ ಬ್ರಾಹ್ಮಣರು ಹಿಂದು ಮಹಾಸಭೆಯನ್ನು ಎಲ್ಲಾ ವಿಷಯಗಳಲ್ಲಿ ಅನುಸರಿಸುತ್ತೇವೆ. ಆದರೆ ಮಹಾಸಭೆಯು ನಮ್ಮ ಧಾರ್ಮಿಕ ವಿಷಯದಲ್ಲಿ ಕೈಹಾಕಿದರೆ ನಾವು ಅದನ್ನು ಅನುಮೋದಿಸಲಾರೆವು." ಇವರ ಧಾರ್ಮಿಕ ವಿಷಯವೆಂದರೆ ಅಸ್ಪೃಶ್ಯತಾ ನಿವಾರಣೆಯಾಗಬಾರದೆಂಬುದೇ ಸರಿ.

ಆದುದರಿಂದ ಲಿಂಗಾಯತ ಬಂಧುಗಳೆ, ನಾವು ಅನ್ಯ ಹಿಂದು ಬಂಧುಗಳನ್ನು ಕೂಡಿಸಿಕೊಳ್ಳುವದರಲ್ಲಿ ನಮ್ಮೆಲ್ಲರಿಗೂ ಬಹು ಹಿತವಿದೆ. ನಾಲ್ಕು ಜನ ಅಣ್ಣತಮ್ಮಂದಿರಲ್ಲಿ ಒಬ್ಬನು ಸಂಪತ್ತುಳ್ಳವನಾಗಿ, ಸಾಕಷ್ಟು ದೃಢಕಾಯನಾಗಿದ್ದರೆ ತನ್ನ ಅಸಹಾಯ ದೀನಬಂಧುಗಳನ್ನು ಮರೆತುಬಿಡುವುದು ಗೌರವವೇ? ಅವರು ಅಣ್ಣಾ ಎಂದರೆ ನೀನು ನನ್ನ ತಮ್ಮನಲ್ಲ ಹೋಗು ಎಂದೆನ್ನಬಹುದೆ? ಹಾಗೆಂದರೆ ದೀನದಯಾಳುವಾದ ಆ ಪರಮಾತ್ಮನು ನಮ್ಮನ್ನು ಈ ಭೂಮಿಯಲ್ಲಿ ಎಂದೂ ಕ್ಷೇಮದಿಂದಿರಿಸಲಿಕ್ಕಿಲ್ಲ.

ಪಾಟೀಲ ಲಿಂಗನಗೌಡ.

ವೀರಶೈವ ತರುಣ ಸಂಘ ಕೊಲ್ಲಾಪುರ.

ಶ್ರೀ. ಸಿ. ಎಸ್. ಹಿರೇಮಠ, ಎನ್. ಆರ್. ಪಾಟೀಲ, ಭೀಮಪುರೆ, ಜಿ. ವ್ಹಿ. ಸೋಳಸೆ, ಎಮ್. ಕೆ. ಬಾಳೆ, ಎಸ್. ವ್ಹಿ. ಭೈರೋಪಾಟೀಲ, ಎ. ಎಮ್. ಚನಶೆಟ್ಟಿ, ಎಸ್. ಎಸ್. ಮಲಗೌಡ ಮೊದಲಾದ ಉತ್ಸಾಹೀ ತರುಣರು ಕೊಲ್ಲಾಪುರದಲ್ಲಿ ತಾರೀಖು ೧೫-೧೨-೩೫ ನೆಯ ದಿವಸ ವೀರಶೈವ ತರುಣ ಸಂಘದ ಸ್ಥಾಪನೆ ಮಾಡಿದ್ದಾರೆ. ಶಿಕ್ಷಣ ಸಂಪಾದನೆಗಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಅನೇಕ ವಿದ್ಯಾರ್ಥಿಗಳು ಕೊಲ್ಲಾಪುರದಲ್ಲಿ ವಾಸಿಸುತ್ತಿದ್ದಾರೆ. ಆದುದರಿಂದ ಈ ವಿದ್ಯಾರ್ಥಿಗಳ ಉತ್ಸಾಹಭರಿತ ಹೃದಯಗಳಲ್ಲಿ ಸಮಾಜ ಸೇವೆಯ ಅಂಕುರವುಂಟಾಗುವದಕ್ಕಾಗಿ ಇಂಥ ಸಂಘದ ಅವಶ್ಯಕತೆಯೆನಿಸಿ ಇದನ್ನು ಸ್ಥಾಪಿಸಿದ್ದಾಗಿದೆ.

ಈ ಸಂಘದ ಉದ್ದೇಶಗಳು ಈ ಪ್ರಕಾರವಾಗಿವೆ—

(೧) ವೀರಶೈವರಲ್ಲಿಯ ಒಳಪಂಗಡಗಳ ಭಿನ್ನಭೇದ ಭಾವನೆಗೆ ತಡೆಯನ್ನುಂಟುಮಾಡಿ ವೀರಶೈವ ಸಮಾಜದ ಎಲ್ಲ ಒಳಪಂಗಡಗಳಲ್ಲಿ ಭೋಜನ ವಿವಾಹಾದಿಗಳು ಜರುಗುವಂತೆ ಪ್ರಯತ್ನಮಾಡುವದು ಮತ್ತು ಆ ಪ್ರಕಾರ ಜನತೆಯಲ್ಲಿ ಪ್ರಸಾರಮಾಡುವದು.

(೨) ನಮ್ಮ ಧರ್ಮದ ಮೇಲಾಗುತ್ತಿರುವ ಪರಧರ್ಮೀಯರ ಆಕ್ರಮಣವನ್ನು ತಡೆಯುವದು.

(೩) ಶಾಲೆ ಕಾಲೇಜುಗಳಿಗೆ ಸೂಟಿಯಿದ್ದಾಗ್ಗೆ ಗ್ರಾಮಾಂತರಗಳಲ್ಲೆಲ್ಲ ಸಂಚರಿಸಿ ಧರ್ಮ ತತ್ವಗಳನ್ನು ಬೋಧಿಸಿ ಸಮಾಜದಲ್ಲಿ ಜಾಗೃತಿಯನ್ನುಂಟುಮಾಡುವದು.

(೪) ಸಮಾಜದ ಮುಂದಾಳುಗಳಿಂದ ವ್ಯಾಖ್ಯಾನ ಮಾಡಿಸಿ ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡುವದು.

(೫) ಸಾಮಾಜಿಕ ಮತ್ತು ಧಾರ್ಮಿಕ ಲೇಖನಗಳ ಮೂಲಕ ಜಾಗೃತಿಯನ್ನುಂಟುಮಾಡುವದು.

(೬) ನಮ್ಮ ಧರ್ಮವನ್ನು ತ್ಯಜಿಸಿ ಪರಧರ್ಮ ಸೇರಿದಂಥವರು ಪಶ್ಚಾತ್ತಾಪಪಟ್ಟು ಸ್ವಧರ್ಮದಲ್ಲಿ ಬರಲಿಚ್ಛಿಸುವವರನ್ನು ಶುದ್ಧಗೊಳಿಸಿ ಪುನಃ ನಮ್ಮ ಧರ್ಮದಲ್ಲಿ ಸೇರ್ಪಡೆ ಮಾಡಿಕೊಳ್ಳುವದು. ಇತ್ಯಾದಿ.

ಇವಲ್ಲದೆ ಕನ್ನಡ ವೀರಶೈವ ವಾಙ್ಮಯದ ಮತ್ತು ವಚನಶಾಸ್ತ್ರದ ಪರಿಚಯವಾಗುವದಕ್ಕಾಗಿ ಶ್ರೀಯುತ ಎಸ್. ಎಸ್. ಪಾಟೀಲ ಮತ್ತು ಶ್ರೀ ಎಮ್ ಜಿ ಪಾಟೀಲ ಇವರ ನೇತೃತ್ವದಲ್ಲಿ ಕನ್ನಡ ಕಲಿಸುವ ಒಂದು ವರ್ಗವನ್ನು ಪ್ರಾರಂಭಿಸಲಾಗಿದೆ.

ಸಿ. ಎಸ್. ಹಿರೇಮಠ ಬಿ. ಎ.
ಕಾರ್ಯದರ್ಶಿ
ವೀ. ತ. ಸಂಘ ಕೊಲ್ಲಾಪುರ.

ಒಕ್ಕಲತನ, ದನಗಳ, ಔದ್ಯೋಗಿಕ ಪ್ರದರ್ಶನ
ಬಾಗಲಕೋಟೆ.

ಬಾಗಲಕೋಟೆಯಲ್ಲಿ ಮೈಲಿ ಬೇನೆ ಪ್ರಾರಂಭವಾಗಿರುವುದರಿಂದ ಫೆಬ್ರುವರಿ ತಿಂಗಳ ೬-೭ ಮತ್ತು ೮ ನೇ ತಾರೀಖುಗಳಲ್ಲಿ ನೆರವೇರಿಸಬೇಕೆಂದು ಪ್ರಸಿದ್ಧ ಮಾಡಿದ ಪ್ರದರ್ಶನವು ಸದ್ಯಃ ಅನಿವಾರ್ಯ ನಿಮಿತ್ತ ಮುಂದೆ ಹಾಕುವುದರಲ್ಲಿ ಬಂದಿದೆ. ಮತ್ತು ಈ ಪ್ರದರ್ಶನವು ಮುಂದೆ ನೆರವೇರಿಸಬೇಕೆಂದು ಗೊತ್ತುಪಡಿಸಿದ ತಾರೀಖುಗಳನ್ನು ಹಿಂದಿನಿಂದ ಪ್ರಸಿದ್ಧ ಮಾಡುವುದರಲ್ಲಿ ಬರುವುದು.

ಸೆಕ್ರೆಟರಿ.

ಪಂಚಮ ಜಾರ್ಜ ಬಾದಶಹರ ಅಂತ್ಯಸಂಸ್ಕಾರ.

ಚಕ್ರವರ್ತಿಗಳ ಕೊನೆಯ ದರ್ಶನಕ್ಕಾಗಿ ಅಸಂಖ್ಯ ಜನಸಮೂಹ.

ಬಾದಶಹರು ದಿವಂಗತರಾದ ನಾಲ್ಕನೆಯ ದಿವಸಕ್ಕೆ ಅಂದರೆ ೨೪-೧-೩೬ ನೆಯ ತಾರೀಖಿನ ಪ್ರಾತಃಕಾಲ ಸರ್ವ ಜನರಿಗೆ ಅವರ ಅಂತ್ಯ ದರ್ಶನಕ್ಕಾಗಿ ಬಿಡಲಾಯಿತು. ಅನೇಕ ಜನರು ಇನ್ನೂ ಮಧ್ಯರಾತ್ರಿಯಲ್ಲಿಯೇ ಬಂದು ನಿಂತಿದ್ದರು. ಅಸಹ್ಯವಾದ ಚಳಿಯು ಬಿದ್ದಿದ್ದರೂ ಜನರು ಲಕ್ಷಿಸಲಿಲ್ಲ. ಪ್ರಾತಃಕಾಲ ೮ ಗಂಟೆಗೆ ಬಾದಶಹರ ಶವವನ್ನಿಟ್ಟಿದ್ದ ಭವನದ ದ್ವಾರಗಳನ್ನು ತೆರೆಯಲಾಯಿತು. ಸಾಯಂಕಾಲದ ವರೆಗೂ ಜನರು ಬಿಡವಿಲ್ಲದೆ ಬಂದು ನೋಡಿಕೊಂಡು ಹೋಗುತ್ತಿದ್ದರು.

ಅಸಾಧಾರಣ ಜನದಟ್ಟಣೆ.

ಬಾದಶಹರ ಶವದ ಪೆಟ್ಟಿಗೆಯ ಸುತ್ತಲೂ ಭಾಲೆಗಳನ್ನು ಧರಿಸಿದ ಅಂಗರಕ್ಷಕರು, ಬಿಚ್ಚುಗತ್ತಿಗಳನ್ನು ಹಿಡಿದ ಜೀವರಕ್ಷಕರು, ಕೊಡಲಿಗಳನ್ನು ಧರಿಸಿದ ರಕ್ಷಕರು ಇವರೆಲ್ಲ ಹಗಲಿರುಳು ಕಣ್ಣು ರೆಪ್ಪೆಗಳನ್ನು ಬಡಿಯದೆ ಕಾವಲು ಮಾಡುತ್ತಿದ್ದರು. ಗಂಟೆಗೊಮ್ಮೆ ಅಂಗರಕ್ಷಕರನ್ನು ಬದಲಿಸಲಾಗುತ್ತಿದ್ದಿತು. ಕಣ್ಣು ಮಿಟುಕಿಸದೆ ಕಾವಲು ಮಾಡಿದುದರಿಂದ ಒಬ್ಬ ಕಾವಲುಗಾರನು ಮೂರ್ಛೆ ಹೋಗಿ ಬಿದ್ದನು. ಆದಿತ್ಯವಾರವಂತೂ ಕೊನೆಯ ದರ್ಶನಕ್ಕೆಂದು ಸಾಧಾರಣ ೨|| ಲಕ್ಷಕ್ಕಿಂತಲೂ ಅಧಿಕವಾಗಿ ಜನರು ಬಂದು ನೋಡಿಕೊಂಡು ಹೋದರು. ದರ್ಶನಕ್ಕಾಗಿ ಬರುವ ಜನರ ವಿಶೇಷ ಸಂದಣಿಯನ್ನು ಕಂಡು ಸೋಮವಾರ ಮಧ್ಯಾಹ್ನ ೧ ಗಂಟೆಯ ವರೆಗೂ ನೋಡುವ ಅವಧಿಯನ್ನು ಹೆಚ್ಚಿಸಲಾಯಿತು. ಅದೇ ದಿವಸ ಜಾರ್ಜ ಬಾದಶಹರ ಭಗಿನಿಯಾದ ನಾರ್ವೆ ದೇಶದ ಮಾಡ್ ರಾಣಿಯು ನಾರ್ವೆ ರಾಜರಾದ ಹಕ್ಕಾನ ಇವರೊಡನೆ ವೆಸ್ಟಮಿನಿಸ್ಟರಕ್ಕೆ ಬಂದು ದರ್ಶನ ತೆಗೆದುಕೊಂಡರು. ಅಂದು ರಾತ್ರಿ ಮಹಾರಾಣಿ ಮೇರಿ ಇವರು ಬೆಲ್ಜಿಯಮ್, ಬಲ್ಗೇರಿಯಾ, ನಾರ್ವೆ, ಡೆನ್ಮಾರ್ಕ ದೇಶಗಳ ರಾಜ ರಾಣಿಯರೊಡನೆ ಹಾಗು ಇಟಲಿಯ ಯುವರಾಜ, ಅರ್ಲ ಆಫ ಅ್ಯಥಲೋನ ಮೊದಲಾದವರೊಡನೆ ಬಂದು ಬಾದಶಹರ ಶವದ ದರ್ಶನ ತೆಗೆದುಕೊಂಡರು. ಹೊರಗೆ ಸಾವಿರಾರು ಜನರು ಇನ್ನೂ ದರ್ಶನಕ್ಕಾಗಿ ಕಾಯ್ದು ನಿಂತುದರಿಂದ ಮರುದಿನ ಬೆಳಗಿನ ನಾಲ್ಕು ಗಂಟೆಯ ವರೆಗೂ ದರ್ಶನಕ್ಕಾಸ್ಪದಕೊಡಲಾಯಿತು.

ಸ್ಮಶಾನ ಯಾತ್ರೆ.

ಬಾದಶಹರ ಅಂತ್ಯ ದರ್ಶನಕ್ಕೆಂದು ಅಪಾರವಾದ ಜನಸಮೂಹವು ದಾರಿಯುದ್ದಕ್ಕೂ ಕಿಕ್ಕಿರಿದು ನಿಂತಿದ್ದಿತು. ಕೆಲವು ಕಡೆ ಪ್ರೇಕ್ಷಕರಿಂದ ೧೦೦-೧೫೦ ರೂಪಾಯಿಗಳ ವರೆಗೆ ಭಾಡಿಗೆ ತೆಗೆದುಕೊಂಡು ಮಾರ್ಗದಲ್ಲಿ ನಿಲ್ಲಲು ಸ್ಥಲ ಕೊಡಲಾಯಿತು. ೨೮-೧-೩೬ ನೆಯ ತಾರೀಖಿನ ಬೆಳಿಗ್ಗೆ ೯ ಗಂಟೆಗೆ ನೂತನ ಬಾದಶಹರಾದ ೮ ನೆಯ ಎಡ್ವರ್ಡರವರು ವೆಸ್ಟಮಿನಿಸ್ಟರಕ್ಕೆ ಬಂದರು. ಒಂದೆರಡು ನಿಮಿಷಗಳಲ್ಲಿಯೇ ರಾಜ್ಯ ಮನೆತನದ ಎಲ್ಲ ಸ್ತ್ರೀ ಪುರುಷರು ಆಗಮಿಸಿದರು. ಸರಿಯಾಗಿ ೯—೪೯ ಗಂಟೆಗೆ ಬಾದಶಹರ ಶವದ ಪೆಟ್ಟಿಗೆಯನ್ನು ತೋಫಿನ ಗಾಡಿಯ ಮೇಲೆ ಇರಿಸಿ ಮೆರವಣಿಗೆಯನ್ನು ಪ್ರಾರಂಭಿಸಲಾಯಿತು. ಶವದ ಪೆಟ್ಟಿಗೆಯ ಮೇಲೆ ಮಹಾರಾಣಿಯವರು ಹಾಕಿದ ಹಾರವೂ, ರಾಜ ಕಿರೀಟವೂ ಮತ್ತು ರಾಜ ಚಿಹ್ನಾಂಕಿತ ಧ್ವಜಗಳೂ ಇದ್ದವು.

ಮೆರವಣಿಗೆಯು ಒಂದು ಮೈಲು ಉದ್ದವಾಗಿದ್ದಿತು. ತೋಫಿನ ಗಾಡಿಯನ್ನು ನಾವಿಕರು ಎಳೆಯುತ್ತಿದ್ದರು. ಮೆರವಣಿಗೆಯ ಮುಂಭಾಗದಲ್ಲಿ ದಂಡಾಳುಗಳು ನಡೆದಿದ್ದರು. ಅವರ ಹಿಂದೆ ಸಾಮ್ರಾಜ್ಯದ ಸರ್ವ ಪ್ರತಿನಿಧಿಗಳು ಸಾಗಿದ್ದರು. ಶವದ ಪೆಟ್ಟಿಗೆಯ ಹಿಂದೆ ನೂತನ ಬಾದಶಹರೂ, ಅವರ ಸಹೋದರರೂ ಪರದೇಶಗಳ ರಾಜರೂ ರಾಜಪುತ್ರರೂ, ಉಳಿದ ರಾಷ್ಟ್ರಗಳ ಪ್ರತಿನಿಧಿಗಳೂ, ಪಾದಚಾರಿಗಳಾಗಿ ಸಾಗಿದ್ದರು. ಅವರ ಹಿಂದೆ ಮಹಾರಾಣಿ ಮೇರಿ, ರಾಜಪುತ್ರಿ ಮತ್ತು ರಾಜ ಸೊಸೆಯಂದಿರು ಗಾಡಿಗಳಲ್ಲಿ ಕುಳಿತು ಹೊರಟಿದ್ದರು.

ಮೆರವಣಿಗೆ ಹೊರಟಾಗ ಎರಡೂ ಬದಿಗಳಲ್ಲಿ ವಿರಾಟ್ ಜನಸಮೂಹವು ಲೀನ ಮುಖದಿಂದ ನಿಂತುಕೊಂಡಿದ್ದಿತು. ಒಂದು ಇಂಚು ಕೂಡಾ ಸ್ಥಲವು ತೆರವಿದ್ದಿಲ್ಲ. ಎರಡೂ ಬದಿಗೆ ಕಪ್ಪು ಧ್ವಜಗಳನ್ನು ತೂಗಬಿಡಲಾಗಿದ್ದಿತು. ಹಾಯಿಡ ಪಾರ್ಕದ ಹತ್ತಿರ ಮೆರವಣಿಗೆ ಬರಲು ೬೦೦ ಭಿನ್ನ ಭಿನ್ನ ಪತಾಕೆಗಳನ್ನು ಹಿಡಿದ ೬೦೦ ಜನರು ಕೊನೆಯ ಸನ್ಮಾನ ಮಾಡಿದರು. ಇಲ್ಲಿ ಜನ ಸಮ್ಮರ್ದವು ವಿಶೇಷವಾಗಿ ಅನೇಕ ಜನರು ಮೂರ್ಛೆ ಹೋದರು. ಪೋಲೀಸರು "ಲೌಡ ಸ್ಪೀಕರ" ಗಳ ಮೂಲಕ ಜನರನ್ನು ಸರಿಸುತ್ತಿದ್ದರು. ಮೆರವಣಿಗೆಯಲ್ಲಿ ಗಾಯಪಟ್ಟವರ ಉಪಚಾರಕ್ಕಾಗಿ ೫೦೦೦ ಡಾಕ್ಟರರನ್ನು ನಿಯಮಿಸಲಾಗಿದ್ದಿತು. ೩೦ ಸೇವಾ ಸಂಸ್ಥೆಗಳು ಉಪಚಾರ ಕಾರ್ಯವನ್ನು ಕೈಕೊಂಡಿದ್ದವು. ಒಟ್ಟಿಗೆ ೮೦೦ ಜನರು ಮೂರ್ಛೆ ಹೋದವರು ಉಪಚಾರ ಹೊಂದಿದರು. ೬೦೦೦ ಜನರು ಗಾಯಪಟ್ಟವರು ಗುಣ ಹೊಂದಿದರು. ಒಬ್ಬನು ಮಾತ್ರ ಸತ್ತನು.

ಅಂತ್ಯ ಸಂಸ್ಕಾರ.

ಈ ಪ್ರಕಾರ ಮೆರವಣಿಗೆಯು ೨||| ಗಂಟೆಗಳ ವರೆಗೆ ಸಾಗಿ ಪ್ಯಾಡಿಂಗ್ಟನ್ ನಿಲ್ದಾಣಕ್ಕೆ ಬಂದು ತಲುಪಿತು. ಅಲ್ಲಿಂದ ಶವವನ್ನು ಸ್ಪೆಶಲ್ ಉಗಿಬಂಡಿಯಲ್ಲಿ ಇರಿಸಿ ವಿಂಡಸರ ನಿಲ್ದಾಣಕ್ಕೆ ತರಲಾಯಿತು. ಅಲ್ಲಿಂದ ಪುನಃ ಮೆರವಣಿಗೆಗೆ ಪ್ರಾರಂಭವಾಗಿ ೨ ಗಂಟೆಗೆ ಸೆಂಟ ಜಾರ್ಜೆಸ್ ಚಾಪೆಲ್‌ಕ್ಕೆ ಶವವನ್ನು ತರಲಾಯಿತು. ೨-೧೨ ನಿಮಿಷಕ್ಕೆ ಸರಿಯಾಗಿ ಶವವನ್ನು ಸಮಾಧಿಯಲ್ಲಿರಿಸಲಾಯಿತು. ಆಗ್ಗೆ ಎಲ್ಲ ಕಡೆಯಿಂದ ದುಃಖದ ನಿಶ್ವಾಸಗಳು ಹೊರಡಹತ್ತಿದವು. ಕಡೆಗೆ ೨ ನಿಮಿಷಗಳ ವರೆಗೆ ಎಲ್ಲರೂ ಸ್ತಬ್ಧತೆಯಿಂದ ಪ್ರಾರ್ಥನೆ ಮಾಡಿ ಸಂತಾಪಾತಿಶಯದಿಂದ ತಮ್ಮ ಬಿಡಾರಗಳಿಗೆ ತೆರಳಿದರು.

ಮಹಾರಾಣಿಯ ಸಂದೇಶ.

ಕಳೆದ ತಿಂಗಳ ೩೦ ನೆಯ ತಾರೀಖಿನ ದಿವಸ ಜಾರ್ಜ ಬಾದಶಹರ ಪತ್ನಿಯವರಾದ ಮಹಾರಾಣಿ ಮೇರಿ ಇವರು ಇಂಗ್ಲಂಡದಲ್ಲಿಯ ಮತ್ತು ಸಾಮ್ರಾಜ್ಯದೊಳಗಿನ ಪ್ರಜೆಗಳನ್ನುದ್ದೇಶಿಸಿ ಒಂದು ಸಂದೇಶ ಕಳಿಸಿದ್ದಾರೆ. ತಮ್ಮ ಪತಿಯ ನಿಧನದ ಬಗ್ಗೆ ಸಹಾನುಭೂತಿಪರ ಸಂದೇಶಗಳು ಎಲ್ಲ ಕಡೆಯಿಂದ ಬಂದುದಕ್ಕಾಗಿ ತಾವು ಆ ಬಗ್ಗೆ ಬಹಳ ಕೃತಜ್ಞರಾಗಿದ್ದೇವೆಂದು ಆ ಸಂದೇಶದಲ್ಲಿ ತಿಳಿಸಿದ್ದಾರೆ.

—ನೂತನ ಬಾದಶಹರಾದ ೮ನೆಯ ಎಡ್ವರ್ಡರವರು ತೀವ್ರವೇ ಬ್ರಿಟಿಶ್ ಸಾಮ್ರಾಜ್ಯದಲ್ಲೆಲ್ಲ ಸಂಚಾರ ಮಾಡಲಿರುವರು.

ಶ್ರೀ ಶಂಕರಾಚಾರ್ಯರ ಉಜ್ವಲ ಭಾಷಣ.

ಡಾ. ಅಂಬೇಡಕರರಿಗೆ ಹೊಸದೊಂದು ಪಂಥ ಪ್ರಾರಂಭಿಸಲು ಸೂಚನೆ.

ಮುಂಬಯಿಯಲ್ಲಿ ೨೬-೧-೩೭ ನೆಯ ತಾರೀಖಿನ ದಿವಸ ದಲಿತವರ್ಗದ ಶಿಕ್ಷಣ ಸಂಸ್ಥೆಯ ವತಿಯಿಂದ ಶ್ರೀಮಜ್ಜಗದ್ಗುರು ಶಂಕರಾಚಾರ್ಯರ (ಡಾ. ಕುರ್ತಕೋಟಿ) ಭಾಷಣವಾಯಿತು. ಆವರ ಭಾಷಣದ ಮುಖ್ಯಾಂಶವನ್ನು ಮಾತ್ರ ಇಲ್ಲಿ ಕೊಡಲಾಗಿದೆ—

“ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಅನೇಕ ಸಾರೆ ಭಾಷಣ ಮಾಡಿದ್ದಾಗಿದೆ. ಆದರೆ ಸಂಪೂರ್ಣವಾಗಿ ಮನಬಿಚ್ಚಿ ಸ್ಪಷ್ಟವಾಗಿ

ಶ್ರೀ ಶಂಕರಾಚಾರ್ಯರು. (ಡಾ. ಕುರ್ತಕೋಟಿ)

ಹೇಳುವಷ್ಟು ಸಮಯವು ಈ ಮೊದಲು ದೊರಕಿರಲಿಲ್ಲ ಆದುದರಿಂದ ಈಗ ಅದೇ ವಿಷಯವನ್ನು ಕುರಿತು ಸಮಗ್ರವಾಗಿ ಹೇಳುತ್ತೇನೆ.

ಧರ್ಮ ಮತ್ತು ಅಸ್ಪೃಶ್ಯತಾ ಈ ಎರಡು ಶಬ್ದಗಳ ಸಂಬಂಧವು ಸೂರ್ಯ ಮತ್ತು ಕತ್ತಲೆ ಇವುಗಳ ಸಂಬಂಧವು ಹೇಗಿರುವುದೋ ಆದೇ ಪ್ರಕಾರವಾಗಿ ಇದೆ. ಎಲ್ಲಿ ಸೂರ್ಯನು ಪ್ರಕಾಶಿಸುತ್ತಿರುವನೋ ಅಲ್ಲಿ ಕತ್ತಲೆ ಇರಲಾರದು. ಹಾಗೆಯೇ ಎಲ್ಲಿ ಧರ್ಮವಿರುವದೋ ಅಲ್ಲಿ ಅಸ್ಪೃಶ್ಯತೆ ಇರಲಾರದು.

ಧರ್ಮಕ್ಕೆ ಅಸ್ಪೃಶ್ಯತೆಯು ಮಾನ್ಯವಿಲ್ಲ. ಯಾವುದರಿಂದ ನಮ್ಮ ಉನ್ನತಿಯು ಪರಮಾವಧಿಯಾಗುವದೋ ಅದೇ ಧರ್ಮವೆಂದು ಶಾಸ್ತ್ರಕಾರರು ಹೇಳುತ್ತಾರೆ. ಸ್ವಾಮಿ ವಿವೇಕಾನಂದರು ಅಮೇರಿಕೆಯಲ್ಲಿದ್ದಾಗ್ಗೆ ಹೀಗೆ ಹೇಳಿದ್ದಾರೆ.—

“ ನಿಜವಾದ ಧರ್ಮದ ರೂಪವು ಈಗ ಬಹುವಾಗಿ ಬದಲಿಸಿದೆ. ಧರ್ಮವೆಂದರೆ ಈಗ Touch me not (ನನ್ನನ್ನು ಮುಟ್ಟಬೇಡ) ಎಂದಾಗಿ ಹೋಗಿದೆ. ”

ಈ ಪ್ರಕಾರ ನಾವು ಈಗ ಯಾವುದಕ್ಕೋ ಧರ್ಮವೆಂದು ಹೇಳುತ್ತಿದ್ದೇವೆ. ಎಂದಿನಿಂದ ನಾವು ಧರ್ಮದ ಹೆಸರಿನಲ್ಲಿ ಕೆಲವು ಸಂಗತಿಗಳನ್ನು ತಿರಸ್ಕರಿಸಹತ್ತಿದೆವೋ ಅಂದಿನಿಂದ ನಮ್ಮ ಅಧೋಗತಿಯು ಆರಂಭವಾಗಹತ್ತಿತು.

ನಮ್ಮ ಸಂಸ್ಕೃತಿಯು ಎಲ್ಲಕ್ಕೂ ಶ್ರೇಷ್ಠವಾದುದಾಗಿದೆ. ಆದರೆ ಈ ಸಂಸ್ಕೃತಿಯೆಂದರೆ ಈಗ ‘ಭಟಜ’ ಗಳು ಹೇಳುವ ಸಂಸ್ಕೃತಿಯಲ್ಲ ‘ಉಭೌ ತೌ ನ ವಿಜಾನೀತೊ’ ಎಂಬಂತೆ ಶಾಸ್ತ್ರಗಳಲ್ಲಿ ಹೇಳಿದ ಸಂಸ್ಕೃತಿಯೇ ಶ್ರೇಷ್ಠವೆಂದು ತಿಳಿಯುವಂಥವರೂ ಮತ್ತು ಹಳೆಯದೆಲ್ಲವೂ ಕೆಡಕು ಎಂದು ತಿಳಿಯುವಂಥವರೂ ಈ ಉಭಯರೂ ನಮ್ಮ ಶ್ರೇಷ್ಠ ಸಂಸ್ಕೃತಿಯನ್ನು ತಿಳಿಯಲಾರರು. ಆದರೆ ಹಿಂದುಸ್ಥಾನದಲ್ಲಿ ಹಿಂದುಗಳ ಹತ್ತಿರ ಏನೂ ಇಲ್ಲದಿದ್ದರೂ ಅದೊಂದು ಮಾತ್ರ ಇದೆ. ನಮ್ಮ ಹತ್ತಿರ ಅಧಿಕಾರವಿಲ್ಲ ಧನವಿಲ್ಲ; ನಾವೆಲ್ಲ ನಿರಾಧಾರರಾಗಿದ್ದೇವೆ. ಆದರೆ ಜಗತ್ತೆಲ್ಲವನ್ನು ತಲೆಬಾಗಿಸುವಂಥ ಸಂಸ್ಕೃತಿಯು ಮಾತ್ರ ನಮ್ಮಲ್ಲಿದೆ

ನಮ್ಮ ಧರ್ಮವು Touch Me Notism ಕಲಿಸುತ್ತಿರುವುದಿಲ್ಲ. ಆದುದರಿಂದ ಧರ್ಮವನ್ನು ಬೇರು ಸಹಿತ ಕಿತ್ತೊಗೆಯಲಿಕ್ಕೆ ಹವಣಿಸದೆ ಒಬ್ಬ ಸಜ್ಜನರು ದೇಹದ ಕೊಳೆತ ಭಾಗವನ್ನಷ್ಟು ಕತ್ತರಿಸಿ ತೆಗೆಯುವಂತೆ ಧರ್ಮದ ಕೆಲವು ದುಷ್ಟ ಕಲ್ಪನೆಗಳನ್ನು ಕಿತ್ತಿ ಹಾಕಬೇಕು. ಅದರಲ್ಲಿ ದೋಷಗಳಿರುವವೆಂದು ಸಂಪೂರ್ಣವಾಗಿ ವರ್ಜಿಸುವುದು ಯುಕ್ತವಾಗಲಾರದು

ನಮ್ಮ ಪೂರ್ವಜರು, ೨॥ ಸಾವಿರ ವರ್ಷಗಳ ಹಿಂದಿನ ನಮ್ಮ ಪೂರ್ವಜರು, ಕಾಲಕ್ಕನುರೂಪವಾದ ಶಾಸ್ತ್ರಗಳನ್ನೇ ಮಾಡಿದರು ! ಆದರೆ ಅದು ನಮ್ಮ ಪುಣೆಯ ಭಟಜಿಗಳಿಗೆ ತಿಳಿಯಬೇಕಲ್ಲ? ಒಂದು ವೇಳೆ ತಿಳಿದರೂ ತಿಳಿಯಿತೆಂದು ಅವರು ಎಂದೂ ಅನ್ನುವುದಿಲ್ಲ ನಾವು ಹೇಳುವುದನ್ನು ಅವರ ಮಕ್ಕಳು ಮಾತ್ರ ಒಪ್ಪಿಕೊಳ್ಳುವರು. ಈ ಭಟಜಿಗಳು ತೀರಿಹೋದ ಮೇಲೆ ಇವರ ಮಕ್ಕಳು ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ಕೆ ಸಿದ್ಧವಾಗುವರು.

“ ನಿಮ್ಮ ಅಭಿಪ್ರಾಯವನ್ನಾದರೂ ನಮ್ಮ ಮುಂದೆ ಮಂಡಿಸಿರಿ. ಅಂದರೆ ನಿಮಗೆ ಸರಿಯಾಗಿ ತಿಳಿಹೇಳಲು ಶಕ್ಯವಾಗುವುದು ಎಂದು ಆ ಭಟಜಿಗಳಿಗೆ ತಿಳಿಸಿದರೆ ಅವರು ಎಂದೂ ಮುಂದೆ ಬಂದಿಲ್ಲ. ನಮ್ಮ ಆದ್ಯ ಶಂಕರಾಚಾರ್ಯರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸುವದಕ್ಕಾಗಿಯೇ ಎಲ್ಲ ಕಡೆಗೆ ಸಂಚಾರ ಮಾಡಿದರು. ಶಂಕರಾಚಾರ್ಯರು ಬೌದ್ಧ ಧರ್ಮದ ಖಂಡನೆ ಮಾಡಿಲ್ಲವೆಂಬುದನ್ನು ಪುನಃ ಲಕ್ಷದಲ್ಲಿಡಿರಿ. ಇನ್ನೂ ಬೌದ್ಧ ಧರ್ಮದಿಂದಲೇ ಅನೇಕ ಸಂಗತಿಗಳನ್ನು ಅವರು ತೆಗೆದುಕೊಂಡಿದ್ದಾರೆ. (Shankaracharya has supplemented Buddhism) ಅವರು ತಮ್ಮ ಅಭಿಪ್ರಾಯವನ್ನು ಜನರಿಗೆ ಸ್ಪಷ್ಟ ಮಾಡಿ ತೋರಿಸಿದ್ದರಿಂದಲೇ ಜನರೆಲ್ಲ ಅವರಿಗೆ ಮಾನಮನ್ನಣೆ ಮಾಡಿದರು.

ಇಂಥ ಮಾನ ಮನ್ನಣೆಗಳು ಈಗ ಅನಾಯಾಸವಾಗಿ ದೊರತು ಕೆಲ ಕೆಲವರು “ಛೆ; ಅವನು ನಮಗೆ ನಮಸ್ಕಾರ ಮಾಡಲಿಲ್ಲ. ನಮ್ಮ ಅಪಮಾನವಾಯಿತು” ಎಂದು ಆಕ್ಷೇಪಿಸಹತ್ತಿದರು. ಒಬ್ಬನು ನಮಸ್ಕಾರ ಮಾಡದಿದ್ದರೇನೇ ಅವರಿಗೆ ಅಷ್ಟು ಅಪಮಾನವೆನ್ನಿಸುತ್ತದೆಂದಮೇಲೆ ನಮಸ್ಕಾರ ಮಾಡುವವನಿಗೆ ತಲೆ ತಗ್ಗಿಸುವಾಗ್ಗೆ

ಪಂಚಮ ಜಾರ್ಜ ಬಾದಶಹರ ಅಂತ್ಯಸಂಸ್ಕಾರ.

ಚಕ್ರವರ್ತಿಗಳ ಕೊನೆಯ ದರ್ಶನಕ್ಕಾಗಿ ಅಸಂಖ್ಯ ಜನಸಮೂಹ.

ಬಾದಶಹರು ದಿವಂಗತರಾದ ನಾಲ್ಕನೆಯ ದಿವಸಕ್ಕೆ ಅಂದರೆ ೨೪-೧-೩೬ ನೆಯ ತಾರೀಖಿನ ಪ್ರಾತಃಕಾಲ ಸರ್ವ ಜನರಿಗೆ ಅವರ ಅಂತ್ಯ ದರ್ಶನಕ್ಕಾಗಿ ಬಿಡಲಾಯಿತು. ಅನೇಕ ಜನರು ಇನ್ನೂ ಮಧ್ಯರಾತ್ರಿಯಲ್ಲಿಯೇ ಬಂದು ನಿಂತಿದ್ದರು. ಅಸಹ್ಯವಾದ ಚಳಿಯು ಬಿದ್ದಿದ್ದರೂ ಜನರು ಲಕ್ಷಿಸಲಿಲ್ಲ. ಪ್ರಾತಃಕಾಲ ೮ ಗಂಟೆಗೆ ಬಾದಶಹರ ಶವವನ್ನಿಟ್ಟಿದ್ದ ಭವನದ ದ್ವಾರಗಳನ್ನು ತೆರೆಯಲಾಯಿತು. ಸಾಯಂಕಾಲದ ವರೆಗೂ ಜನರು ಬಿಡವಿಲ್ಲದೆ ಒಂದು ನೋಡಿಕೊಂಡು ಹೋಗುತ್ತಿದ್ದರು.

ಅಸಾಧಾರಣ ಜನದಟ್ಟಣೆ.

ಬಾದಶಹರ ಶವದ ಪೆಟ್ಟಿಗೆಯ ಸುತ್ತಲೂ ಭಾಲೆಗಳನ್ನು ಧರಿಸಿದ ಅಂಗರಕ್ಷಕರು, ಬಿಚ್ಚುಗತ್ತಿಗಳನ್ನು ಹಿಡಿದ ಜೀವರಕ್ಷಕರು, ಕೊಡಲಿಗಳನ್ನು ಧರಿಸಿದ ರಕ್ಷಕರು ಇವರೆಲ್ಲ ಹಗಲಿರುಳು ಕಣ್ಣು ರೆಪ್ಪೆಗಳನ್ನು ಬಡಿಯದೆ ಕಾವಲು ಮಾಡುತ್ತಿದ್ದರು. ಗಂಟೆಗೊಮ್ಮೆ ಅಂಗರಕ್ಷಕರನ್ನು ಬದಲಿಸಲಾಗುತ್ತಿದ್ದಿತು. ಕಣ್ಣು ಮಿಸುಕಿಸದೆ ಕಾವಲು ಮಾಡುದುದರಿಂದ ಒಬ್ಬ ಕಾವಲುಗಾರನು ಮೂರ್ಛೆ ಹೋಗಿ ಬಿದ್ದನು. ಆದಿತ್ಯವಾರವಂತೂ ಕೊನೆಯ ದರ್ಶನಕ್ಕೆಂದು ಸಾಧಾರಣ ೨|| ಲಕ್ಷಕ್ಕಿಂತಲೂ ಅಧಿಕವಾಗಿ ಜನರು ಬಂದು ನೋಡಿಕೊಂಡು ಹೋದರು. ದರ್ಶನಕ್ಕಾಗಿ ಬರುವ ಜನರ ವಿಶೇಷ ಸಂದಣಿಯನ್ನು ಕಂಡು ಸೋಮವಾರ ಮಧ್ಯಾಹ್ನ ೧ ಗಂಟೆಯ ವರೆಗೂ ನೋಡುವ ಅವಧಿಯನ್ನು ಹೆಚ್ಚಿಸಲಾಯಿತು. ಅದೇ ದಿವಸ ಜಾರ್ಜ ಬಾದಶಹರ ಭಗಿನಿಯಾದ ನಾರ್ವೆ ದೇಶದ ಮಾಡ್ ರಾಣಿಯು ನಾರ್ವೆ ರಾಜರಾದ ಹಕ್ಕಾನ ಇವರೊಡನೆ ವೆಸ್ಟಮಿನಿಸ್ಟರಕ್ಕೆ ಬಂದು ದರ್ಶನ ತೆಗೆದುಕೊಂಡರು. ಅಂದು ರಾತ್ರಿ ಮಹಾರಾಣಿ ಮೇರಿ ಇವರು ಬೆಲ್ಜಿಯಮ್, ಬಲ್ಗೇರಿಯಾ, ನಾರ್ವೆ, ಡೆನ್ಮಾರ್ಕ ದೇಶಗಳ ರಾಜ ರಾಣಿಯರೊಡನೆ ಹಾಗು ಇಟಲಿಯ ಯುವರಾಜ, ಅರ್ಲ ಆಫ ಲ್ಯಾಥಲೋನ ಮೊದಲಾದವರೊಡನೆ ಬಂದು ಬಾದಶಹರ ಶವದ ದರ್ಶನ ತೆಗೆದುಕೊಂಡರು. ಹೊರಗೆ ಸಾವಿರಾರು ಜನರು ಇನ್ನೂ ದರ್ಶನಕ್ಕಾಗಿ ಕಾಯ್ದು ನಿಂತುದರಿಂದ ಮರುದಿನ ಬೆಳಗಿನ ನಾಲ್ಕು ಗಂಟೆಯ ವರೆಗೂ ದರ್ಶನಕ್ಕಾಸ್ಪದಕೊಡಲಾಯಿತು.

ಸ್ಮಶಾನ ಯಾತ್ರೆ.

ಬಾದಶಹರ ಅಂತ್ಯ ದರ್ಶನಕ್ಕೆಂದು ಅಪಾರವಾದ ಜನಸಮೂಹವು ದಾರಿಯುದ್ದಕ್ಕೂ ಕಿಕ್ಕಿರಿದು ನಿಂತಿದ್ದಿತು. ಕೆಲವು ಕಡೆ ಪ್ರೇಕ್ಷಕರಿಂದ ೧೦೦-೧೫೦ ರೂಪಾಯಿಗಳ ವರೆಗೆ ಭಾಡಿಗೆ ತೆಗೆದುಕೊಂಡು ಮಾರ್ಗದಲ್ಲಿ ನಿಲ್ಲಲು ಸ್ಥಲ ಕೊಡಲಾಯಿತು. ೨೮-೧-೩೬ ನೆಯ ತಾರೀಖಿನ ಬೆಳಗ್ಗೆ ೯ ಗಂಟೆಗೆ ನೂತನ ಬಾದಶಹರಾದ ೮ ನೆಯ ಎಡ್ವರ್ಡರವರು ವೆಸ್ಟಮಿನಿಸ್ಟರಕ್ಕೆ ಬಂದರು. ಒಂದೆರಡು ನಿಮಿಷಗಳಲ್ಲಿಯೇ ರಾಜ್ಯ ಮನೆತನದ ಎಲ್ಲ ಸ್ತ್ರೀ ಪುರುಷರು ಆಗಮಿಸಿದರು. ಸರಿಯಾಗಿ ೯—೪೫ ಗಂಟೆಗೆ ಬಾದಶಹರ ಶವದ ಪೆಟ್ಟಿಗೆಯನ್ನು ತೋಫಿನ ಗಾಡಿಯ ಮೇಲೆ ಇರಿಸಿ ಮೆರವಣಿಗೆಯನ್ನು ಪ್ರಾರಂಭಿಸಲಾಯಿತು. ಶವದ ಪೆಟ್ಟಿಗೆಯ ಮೇಲೆ ಮಹಾರಾಣಿಯವರು ಹಾಕಿದ ಹಾರವೂ, ರಾಜ ಕಿರೀಟವೂ ಮತ್ತು ರಾಜ ಚಿಹ್ನಾಂಕಿತ ಧ್ವಜಗಳೂ ಇದ್ದವು.

ಮೆರವಣಿಗೆಯು ಒಂದು ಮೈಲು ಉದ್ದವಾಗಿದ್ದಿತು. ತೋಫಿನ ಗಾಡಿಯನ್ನು ನಾವಿಕರು ಎಳೆಯುತ್ತಿದ್ದರು. ಮೆರವಣಿಗೆಯ ಮುಂಭಾಗದಲ್ಲಿ ದಂಡಾಳುಗಳು ನಡೆದಿದ್ದರು. ಅವರ ಹಿಂದೆ ಸಾಮ್ರಾಜ್ಯದ ಸರ್ವ ಪ್ರತಿನಿಧಿಗಳು ಸಾಗಿದ್ದರು. ಶವದ ಪೆಟ್ಟಿಗೆಯ ಹಿಂದೆ ನೂತನ ಬಾದಶಹರೂ, ಅವರ ಸಹೋದರರೂ ಪರದೇಶಗಳ ರಾಜರೂ ರಾಜಪುತ್ರರೂ, ಉಳಿದ ರಾಷ್ಟ್ರಗಳ ಪ್ರತಿನಿಧಿಗಳೂ, ಪಾದಚಾರಿಗಳಾಗಿ ಸಾಗಿದ್ದರು. ಅವರ ಹಿಂದೆ ಮಹಾರಾಣಿ ಮೇರಿ, ರಾಜಪುತ್ರಿ ಮತ್ತು ರಾಜ ಸೊಸೆಯಂದಿರು ಗಾಡಿಗಳಲ್ಲಿ ಕುಳಿತು ಹೊರಟಿದ್ದರು.

ಮೆರವಣಿಗೆ ಹೊರಟಾಗ ಎರಡೂ ಬದಿಗಳಲ್ಲಿ ವಿರಾಟ್ ಜನಸಮೂಹವು ಲೀನ ಮುಖದಿಂದ ನಿಂತುಕೊಂಡಿದ್ದಿತು. ಒಂದು ಇಂಚು ಕೂಡಾ ಸ್ಥಲವು ತೆರವಿದ್ದಿಲ್ಲ. ಎರಡೂ ಬದಿಗೆ ಕಪ್ಪು ಧ್ವಜಗಳನ್ನು ತೂಗಬಿಡಲಾಗಿದ್ದಿತು. ಹಾಯಿಡ ಪಾರ್ಕದ ಹತ್ತರ ಮೆರವಣಿಗೆ ಬರಲು ೬೦೦ ಭಿನ್ನ ಭಿನ್ನ ಪತಾಕೆಗಳನ್ನು ಹಿಡಿದ ೬೦೦ ಜನರು ಕೊನೆಯ ಸನ್ಮಾನ ಮಾಡಿದರು. ಇಲ್ಲಿ ಜನ ಸಮ್ಮರ್ದವು ವಿಶೇಷವಾಗಿ ಅನೇಕ ಜನರು ಮೂರ್ಛೆಹೋದರು ಪೋಲೀಸರು "ಲೌಡ ಸ್ಪೀಕರ" ಗಳ ಮೂಲಕ ಜನರನ್ನು ಸರಿಸುತ್ತಿದ್ದರು. ಪೆಟ್ಟಿಗೆಯಲ್ಲಿ ಗಾಯಪಟ್ಟವರ ಉಪಚಾರಕ್ಕಾಗಿ ೫೦೦೦ ಡಾಕ್ಟರರನ್ನು ನಿಯಮಿಸಲಾಗಿದ್ದಿತು. ೩೦ ಸೇವಾ ಸಂಸ್ಥೆಗಳು ಉಪಚಾರ ಕಾರ್ಯವನ್ನು ಕೈಕೊಂಡಿದ್ದವು. ಒಟ್ಟಿಗೆ ೮೦೦ ಜನರು ಮೂರ್ಛೆ ಹೋದವರು ಉಪಚಾರ ಹೊಂದಿದರು. ೭೦೦೦ ಜನರು ಗಾಯಪಟ್ಟವರು ಗುಣ ಹೊಂದಿದರು. ಒಬ್ಬನು ಮಾತ್ರ ಸತ್ತನು

ಅಂತ್ಯ ಸಂಸ್ಕಾರ.

ಈ ಪ್ರಕಾರ ಮೆರವಣಿಗೆಯು ೨||| ಗಂಟೆಗಳ ವರೆಗೆ ಸಾಗಿ ಪ್ಯಾಡಿಂಗ್ಟನ್ ನಿಲ್ದಾಣಕ್ಕೆ ಬಂದು ತಲುಪಿತು. ಅಲ್ಲಿಂದ ಶವವನ್ನು ಸ್ಪೆಶಲ್ ಉಗಿಬಂಡಿಯಲ್ಲಿ ಇರಿಸಿ ವಿಂಡಸರ ನಿಲ್ದಾಣಕ್ಕೆ ತರಲಾಯಿತು. ಅಲ್ಲಿಂದ ಪುನಃ ಮೆರವಣಿಗೆಗೆ ಪ್ರಾರಂಭವಾಗಿ ೨ ಗಂಟೆಗೆ ಸೆಂಟ ಜಾರ್ಜೆಸ್ ಚಾಪೆಲ್‌ಕ್ಕೆ ಶವವನ್ನು ತರಲಾಯಿತು. ೨-೧೨ ನಿಮಿಷಕ್ಕೆ ಸರಿಯಾಗಿ ಶವವನ್ನು ಸಮಾಧಿಯಲ್ಲಿರಿಸಲಾಯಿತು. ಆಗ್ಗೆ ಎಲ್ಲ ಕಡೆಯಿಂದ ದುಃಖದ ನಿಶ್ವಾಸಗಳು ಹೊರಡಹತ್ತಿದವು. ಕಡೆಗೆ ೨ ನಿಮಿಷಗಳ ವರೆಗೆ ಎಲ್ಲರೂ ಸ್ತಬ್ಧತೆಯಿಂದ ಪ್ರಾರ್ಥನೆ ಮಾಡಿ ಸಂತಾಪಾತಿಶಯದಿಂದ ತಮ್ಮ ಬಿಡಾರಗಳಿಗೆ ತೆರಳಿದರು.

ಮಹಾರಾಣಿಯ ಸಂದೇಶ.

ಕಳೆದ ತಿಂಗಳ ೩೦ ನೆಯ ತಾರೀಖಿನ ದಿವಸ ಜಾರ್ಜ ಬಾದಶಹರ ಪತ್ನಿಯವರಾದ ಮಹಾರಾಣಿ ಮೇರಿ ಇವರು ಇಂಗ್ಲಂಡದಲ್ಲಿಯ ಮತ್ತು ಸಾಮ್ರಾಜ್ಯದೊಳಗಿನ ಪ್ರಜೆಗಳನ್ನುದ್ದೇಶಿಸಿ ಒಂದು ಸಂದೇಶ ಕಳಿಸಿದ್ದಾರೆ. ತಮ್ಮ ಪತಿಯ ನಿಧನದ ಬಗ್ಗೆ ಸಹಾನುಭೂತಿಪರ ಸಂದೇಶಗಳು ಎಲ್ಲ ಕಡೆಯಿಂದ ಬಂದುದಕ್ಕಾಗಿ ತಾವು ಆ ಬಗ್ಗೆ ಬಹಳ ಕೃತಜ್ಞರಾಗಿದ್ದೇವೆಂದು ಆ ಸಂದೇಶದಲ್ಲಿ ತಿಳಿಸಿದ್ದಾರೆ.

—ನೂತನ ಬಾದಶಹರಾದ ೮ನೆಯ ಎಡ್ವರ್ಡರವರು ಶೀಘ್ರವೇ ಬ್ರಿಟಿಶ್ ಸಾಮ್ರಾಜ್ಯದಲ್ಲೆಲ್ಲ ಸಂಚಾರ ಮಾಡಲಿರುವರು.

ಶ್ರೀ ಶಂಕರಾಚಾರ್ಯರ ಉಜ್ವಲ ಭಾಷಣ.

ಡಾ. ಅಂಬೇಡಕರರಿಗೆ ಹೊಸದೊಂದು ಪಂಥ ಪ್ರಾರಂಭಿಸಲು ಸೂಚನೆ.

ಮುಂಬಯಿಯಲ್ಲಿ ೨೬-೧-೩೬ ನೆಯ ತಾರೀಖಿನ ದಿವಸ ದಲಿತವರ್ಗದ ಶಿಕ್ಷಣ ಸಂಸ್ಥೆಯು ವತಿಯಿಂದ ಶ್ರೀಮಜ್ಜಗದ್ಗುರು ಶಂಕರಾಚಾರ್ಯರ (ಡಾ. ಕುರ್ತಕೋಟಿ) ಭಾಷಣವಾಯಿತು. ಅವರ ಭಾಷಣದ ಮುಖ್ಯಾಂಶವನ್ನು ಮಾತ್ರ ಇಲ್ಲಿ ಕೊಡಲಾಗಿದೆ—

“ ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಅನೇಕ ಸಾರೆ ಭಾಷಣ ಮಾಡಿದ್ದಾಗಿದೆ. ಆದರೆ ಸಂಪೂರ್ಣವಾಗಿ ಮನಬಿಚ್ಚಿ ಸ್ಪಷ್ಟವಾಗಿ

ಶ್ರೀ ಶಂಕರಾಚಾರ್ಯರು. (ಡಾ. ಕುರ್ತಕೋಟಿ)

ಹೇಳುವಷ್ಟು ಸಮಯವು ಈ ಮೊದಲು ದೊರೆತಿರಲಿಲ್ಲ. ಆದುದರಿಂದ ಈಗ ಅದೇ ವಿಷಯವನ್ನು ಕುರಿತು ಸಮಗ್ರವಾಗಿ ಹೇಳುತ್ತೇನೆ.

ಧರ್ಮ ಮತ್ತು ಅಸ್ಪೃಶ್ಯತಾ ಈ ಎರಡು ಶಬ್ದಗಳ ಸಂಬಂಧವು ಸೂರ್ಯ ಮತ್ತು ಕತ್ತಲೆ ಇವುಗಳ ಸಂಬಂಧವು ಹೇಗಿರುವುದೋ ಅದೇ ಪ್ರಕಾರವಾಗಿ ಇದೆ. ಎಲ್ಲಿ ಸೂರ್ಯನು ಪ್ರಕಾಶಿಸುತ್ತಿರುವನೋ ಅಲ್ಲಿ ಕತ್ತಲೆ ಇರಲಾರದು. ಹಾಗೆಯೇ ಎಲ್ಲಿ ಧರ್ಮವಿರುವದೋ ಅಲ್ಲಿ ಅಸ್ಪೃಶ್ಯತೆ ಇರಲಾರದು.

ಧರ್ಮಕ್ಕೆ ಅಸ್ಪೃಶ್ಯತೆಯು ಮಾನ್ಯವಿಲ್ಲ. ಯಾವುದರಿಂದ ನಮ್ಮ ಉನ್ನತಿಯು ಪರಮಾವಧಿಯಾಗುವದೋ ಅದೇ ಧರ್ಮವೆಂದು ಶಾಸ್ತ್ರಕಾರರು ಹೇಳುತ್ತಾರೆ. ಸ್ವಾಮಿ ವಿವೇಕಾನಂದರು ಅಮೇರಿಕೆಯಲ್ಲಿದ್ದಾಗ್ಗೆ ಹೀಗೆ ಹೇಳಿದ್ದಾರೆ.—

“ ನಿಜವಾದ ಧರ್ಮದ ರೂಪವು ಈಗ ಬಹುವಾಗಿ ಬದಲಿಸಿದೆ. ಧರ್ಮವೆಂದರೆ ಈಗ Touch me not (ನನ್ನನ್ನು ಮುಟ್ಟಬೇಡ) ಎಂದಾಗಿ ಹೋಗಿದೆ. ”

ಈ ಪ್ರಕಾರ ನಾವು ಈಗ ಯಾವುದಕ್ಕೋ ಧರ್ಮವೆಂದು ಹೇಳುತ್ತಿದ್ದೇವೆ. ಎಂದಿನಿಂದ ನಾವು ಧರ್ಮದ ಹೆಸರಿನಲ್ಲಿ ಕೆಲವು ಸಂಗತಿಗಳನ್ನು ತಿರಸ್ಕರಿಸಹತ್ತಿದೆವೋ ಅಂದಿನಿಂದ ನಮ್ಮ ಅಧೋಗತಿಯುಂಟಾಗಹತ್ತಿತು.

ನಮ್ಮ ಸಂಸ್ಕೃತಿಯು ಎಲ್ಲಕ್ಕೂ ಶ್ರೇಷ್ಠವಾದುದಾಗಿದೆ. ಆದರೆ ಈ ಸಂಸ್ಕೃತಿಯೆಂದರೆ ಈಗ ‘ಭಟಜ’ ಗಳು ಹೇಳುವ ಸಂಸ್ಕೃತಿಯಲ್ಲ. ‘ಉಭೌ ತೌ ನ ವಿಜಾನೀತೊ’ ಎಂಬಂತೆ ಶಾಸ್ತ್ರಗಳಲ್ಲಿ ಹೇಳಿದ ಸಂಸ್ಕೃತಿಯೇ ಶ್ರೇಷ್ಠವೆಂದು ತಿಳಿಯುವಂಥವರೂ ಮತ್ತು ಹಳೆಯದೆಲ್ಲವೂ ಕಡಕು ಎಂದು ತಿಳಿಯುವಂಥವರೂ ಈ ಉಭಯರೂ ನಮ್ಮ ಶ್ರೇಷ್ಠ ಸಂಸ್ಕೃತಿಯನ್ನು ತಿಳಿಯಲಾರರು. ಆದರೆ ಹಿಂದುಸ್ಥಾನದಲ್ಲಿ ಹಿಂದುಗಳ ಹತ್ತಿರ ಏನೂ ಇಲ್ಲದಿದ್ದರೂ ಅದೊಂದು ಮಾತ್ರ ಇದೆ. ನಮ್ಮ ಹತ್ತಿರ ಅಧಿಕಾರವಿಲ್ಲ ಧನವಿಲ್ಲ; ನಾವೆಲ್ಲ ನಿರಾಧಾರರಾಗಿದ್ದೇವೆ. ಆದರೆ ಜಗತ್ತೆಲ್ಲವನ್ನು ತಲೆಬಾಗಿಸುವಂಥ ಸಂಸ್ಕೃತಿಯು ಮಾತ್ರ ನಮ್ಮಲ್ಲಿದೆ.

ನಮ್ಮ ಧರ್ಮವು Touch Me Notism ಕಲಿಸುತ್ತಿರುವುದಿಲ್ಲ. ಆದುದರಿಂದ ಧರ್ಮವನ್ನು ಬೇರು ಸಹಿತ ಕಿತ್ತೊಗೆಯಲಿಕ್ಕೆ ಹವಣಿಸದೆ ಒಬ್ಬ ಸಜ್ಜನರು ದೇಹದ ಕೊಳೆತ ಭಾಗವನ್ನಷ್ಟು ಕತ್ತರಿಸಿ ತೆಗೆಯುವಂತೆ ಧರ್ಮದ ಕೆಲವು ದುಷ್ಟ ಕಲ್ಪನೆಗಳನ್ನು ಕಿತ್ತಿ ಹಾಕಬೇಕು. ಅದರಲ್ಲಿ ದೋಷಗಳಿರುವವೆಂದು ಸಂಪೂರ್ಣವಾಗಿ ವರ್ಜಿಸುವುದು ಯುಕ್ತವಾಗಲಾರದು.

ನಮ್ಮ ಪೂರ್ವಜರು, ೨॥ ಸಾವಿರ ವರ್ಷಗಳ ಹಿಂದಿನ ನಮ್ಮ ಪೂರ್ವಜರು, ಕಾಲಕ್ಕನುರೂಪವಾದ ಶಾಸ್ತ್ರಗಳನ್ನೇ ಮಾಡಿದರು ! ಆದರೆ ಇದು ನಮ್ಮ ಪುಣೆಯ ಭಟಜಿಗಳಿಗೆ ತಿಳಿಯಬೇಕಲ್ಲ? ಒಂದು ವೇಳೆ ತಿಳಿದರೂ ತಿಳಿಯಿತೆಂದು ಅವರು ಎಂದೂ ಅನ್ನುವುದಿಲ್ಲ. ನಾವು ಹೇಳುವುದನ್ನು ಅವರ ಮಕ್ಕಳು ಮಾತ್ರ ಒಪ್ಪಿಕೊಳ್ಳುವರು. ಈ ಭಟಜಗಳು ತೀರಿಹೋದ ಮೇಲೆ ಇವರ ಮಕ್ಕಳು ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ಕೆ ಸಿದ್ಧವಾಗುವರು.

ನಿಮ್ಮ ಅಭಿಪ್ರಾಯವನ್ನಾದರೂ ನಮ್ಮ ಮುಂದೆ ಮಂಡಿಸಿರಿ. ಅಂದರೆ ನಿಮಗೆ ಸರಿಯಾಗಿ ತಿಳಿಹೇಳಲು ಶಕ್ಯವಾಗುವುದು ಎಂದು ಆ ಭಟಜಗಳಿಗೆ ತಿಳಿಸಿದರೆ ಅವರು ಎಂದೂ ಮುಂದೆ ಬರಲಿಲ್ಲ. ನಮ್ಮ ಆದ್ಯ ಶಂಕರಾಚಾರ್ಯರು ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸುವದಕ್ಕಾಗಿಯೇ ಎಲ್ಲ ಕಡೆಗೆ ಸಂಚಾರ ಮಾಡಿದರು. ಶಂಕರಾಚಾರ್ಯರು ಬೌದ್ಧ ಧರ್ಮದ ಖಂಡನೆ ಮಾಡಿಲ್ಲವೆಂಬುದನ್ನು ಪುನಃ ಲಕ್ಷದಲ್ಲಿಡಿರಿ. ಇನ್ನೂ ಬೌದ್ಧ ಧರ್ಮದಿಂದಲೇ ಅನೇಕ ಸಂಗತಿಗಳನ್ನು ಅವರು ತೆಗೆದುಕೊಂಡಿದ್ದಾರೆ. (Shankaracharya has supplemented Buddhism) ಅವರು ತಮ್ಮ ಅಭಿಪ್ರಾಯವನ್ನು ಜನರಿಗೆ ಸ್ಪಷ್ಟ ಮಾಡಿ ತೋರಿಸಿದ್ದರಿಂದಲೇ ಜನರೆಲ್ಲ ಅವರಿಗೆ ಮಾನಮನ್ನಣೆ ಮಾಡಿದರು.

ಇಂಥ ಮಾನ ಮನ್ನಣೆಗಳು ಈಗ ಅನಾಯಾಸವಾಗಿ ದೊರೆತು ಕೆಲ ಕೆಲವರು “ಛೆ; ಅವನು ನಮಗೆ ನಮಸ್ಕಾರ ಮಾಡಲಿಲ್ಲ. ನಮ್ಮ ಅಪಮಾನವಾಯಿತು” ಎಂದು ಆಕ್ಷೇಪಿಸಹತ್ತಿದರು. ಒಬ್ಬನು ನಮಸ್ಕಾರ ಮಾಡದಿದ್ದರೇನೇ ಅವರಿಗೆ ಅಷ್ಟು ಅಪಮಾನವೆನ್ನಿಸುತ್ತದೆಂದಮೇಲೆ ನಮಸ್ಕಾರ ಮಾಡುವವನಿಗೆ ತಲೆ ತಗ್ಗಿಸುವಾಗ್ಗೆ

ಎಷ್ಟು ಅಪಮಾನವಾಗುತ್ತಿರುವದೆಂಬುದನ್ನು ಇವರು ತ್ರೈರಾಶಿಕ ಹಾಕಿ ನೋಡಲಿ. ಅಸ್ಪೃಶ್ಯತೆಯ ಭಾವನೆಯೂ ಹೀಗೆಯೇ. ಸ್ತ್ರೀಯರನ್ನೂ ನಡೆಯಿಸಿಕೊಳ್ಳುವ ಪದ್ಧತಿಯೂ ಇದೇ ರೀತಿ. ಇಂಥ ಅನೇಕ ಸಂಗತಿಗಳನ್ನು ಕಂಡು ಡಾ. ಅಂಬೇಡಕರರಿಗೆ ಈ ಹುಚ್ಚು ಧರ್ಮವನ್ನು ಬಿಟ್ಟುಕೊಡಬೇಕೆಂದು ಅನಿಸಿರಬೇಕು. ನಿಜವಾಗಿಯೂ ಈ ಧರ್ಮವನ್ನು ಬಿಟ್ಟುಕೊಟ್ಟು ಮತ್ತೊಂದು ಧರ್ಮವನ್ನು ಸ್ಥಾಪಿಸಿ ಅವರು ಆದರ ಧರ್ಮ ಗುರುವಾಗಬೇಕೆಂದು ನನಗನಿಸುತ್ತದೆ. (ಚಪ್ಪಾಳೆ, ಹೀಯರ, ಹೀಯರ) ಯಾವ ಪ್ರಕಾರ ದಯಾನಂದನು ಮುಂದೆ ಬಂದನೋ, ಯಾವ ಪ್ರಕಾರ ಬಸವೇಶ್ವರನು ಮುಂದೆ ಬಂದನೋ ಅದೇ ಪ್ರಕಾರ ನೀವೂ ಮುಂದೆ ಬನ್ನಿರಿ ಮತ್ತು ಹೊಸದೊಂದು ಧರ್ಮದ ಪ್ರವರ್ತಕರಾಗಿರಿ. ಆದರೆ ಹಿಂದು ಧರ್ಮವನ್ನೇ ಬಿಟ್ಟುಕೊಡುವುದು ಯೋಗ್ಯವಾಗಲಾರದು. ನಾನು ಡಾ. ಅಂಬೇಡಕರರಿಗೆ ಇಷ್ಟೇ ಹೇಳುವದಿದೆ— ಸ್ವತಂತ್ರ ಪಂಥವನ್ನು ತೆಗೆಯಿರಿ ಆದರೆ ಮುಸಲ್ಮಾನ ಅಥವಾ ಕ್ರಿಸ್ತೀಯರಾಗಬೇಡಿರಿ.

ಡಾ. ಸೋಳಂಕಿ:— ಹಾಗಾದರೆ ಕ್ರಿಸ್ತೀ ಮತ್ತು ಮುಸಲ್ಮಾನ ಧರ್ಮಗಳಿಗೆ ನೀವು ಹೆದರುತ್ತೀರೆಂದ ಹಾಗಾಯಿತು. ಅಸ್ಪೃಶ್ಯರು ಶೀಖ ಅಥವಾ ಬೌದ್ಧ ಧರ್ಮವನ್ನು ಸ್ವೀಕರಿಸಿದರೆ ನಿಮಗೆ ಭೀತಿ ಇಲ್ಲವಷ್ಟೆ?

ಡಾ. ಕುರ್ತಕೋಟಿ:— ಇಲ್ಲ ನಾವೆಂದೂ ಹೆದರುವುದಿಲ್ಲ. ಹಾಗಾದರೆ ನಮಗೆ ಸಂತೋಷವೇ ಇದೆ. ಹಿಂದುಸ್ಥಾನವು ಹಿಂದು ಜನರ ಸ್ಥಾನವಾಗಬೇಕೆಂದು ನಮ್ಮ ಇಚ್ಛೆ ಇದೆ. ಶೀಖರು ನಮ್ಮ ಸಂಸ್ಕೃತಿಗೇನೂ ವಿರುದ್ಧವಿಲ್ಲ. ಅವರು ರಾಮ ಭಜನೆ ಮಾಡುತ್ತಾರೆ. ಬೌದ್ಧರೂ ವಿರುದ್ಧವಿಲ್ಲ. ಅಸ್ಪೃಶ್ಯರು ಮುಸಲ್ಮಾನರಾದರೂ ನಾವು ಹೆದರುವುದಿಲ್ಲ. ಏಕೆಂದರೆ ಇಂದು ಅವರೆಲ್ಲ ಮುಸಲ್ಮಾನರಾದರೂ ನಾಳೆ ಅವರನ್ನೆಲ್ಲ ನಾವು ಹಿಂದುಗಳನ್ನಾಗಿ ಮಾಡುವೆವು.

ಆದರೆ ನಿಮ್ಮ ಹೊಣೆಗಾರಿಕೆಯನ್ನು ಅರಿತುಕೊಳ್ಳಿರಿ (ಡಾ. ಸೋಳಂಕಿಯವರ ಕಡೆಗೆ) ಇಂದಿನ ಕಾಲವೆಂದರೆ Survival of the fittest ಅಂದರೆ ಜೀವಿಸಲು ಶಕ್ತನಾದವನೇ ಜೀವದಿಂದಿರುವ ಕಾಲ. ಆದುದರಿಂದ ನೀವು ಮತ್ತೊಂದು ಪಂಥ ತೆಗೆಯಿರಿ ನಿಮ್ಮ ಧರ್ಮ ಪಂಥಕ್ಕೆ ನಮ್ಮೊಳಗಿನ ಅನೇಕ ಅನುಯಾಯಿಗಳು ಬಂದು ಕೂಡುವರು. ಆರ್ಯ ಸಮಾಜದಲ್ಲಿ ಅಸ್ಪೃಶ್ಯತೆ ಇಲ್ಲ. ಆದರೆ ಆರ್ಯ ಸಮಾಜದ ಶಾಖೆಗಳೆಲ್ಲ ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವುದರಿಂದ ಹಳ್ಳಿಯ ಅಸ್ಪೃಶ್ಯರಲ್ಲಿ ಆರ್ಯ ಸಮಾಜದ ಪ್ರಸಾರವಾದರೂ ಆ ಅಸ್ಪೃಶ್ಯತೆಯು ಹಾಗೇ ಉಳಿಯುವದು. ಇನ್ನು ಅಸ್ಪೃಶ್ಯರು ಕ್ರಿಸ್ತೀಯರಾದರೂ ಯುಕ್ತವಾಗಲಾರದು. ಏಕೆಂದರೆ ಅವರು ಕ್ರಿಸ್ತೀಯರಾದರೂ "ಸ್ಪಿರಿಟ್" ನಲ್ಲಿ ಹಿಂದುಗಳೇ ಆಗಿದ್ದಾರೆ. ಅವರಲ್ಲಿಯೂ ಅನೇಕ ಭಿನ್ನ ಭೇದಗಳಿವೆ.

ಆದುದರಿಂದ ಒಂದು ಧರ್ಮವನ್ನು ಸ್ವೀಕರಿಸಿ ಅಸ್ಪೃಶ್ಯತೆಯನ್ನು ಕಳೆಯಬೇಕೆಂಬ ಭೀತಿ ನಿಮಗೇಕೆ? ಜನ್ಮ ದಾತ ಕ್ಷತ್ರಿಯರಾದ ನೀವು ಒತ್ತಾಯಪೂರ್ವಕ ನಿಮ್ಮ ಅಸ್ಪೃಶ್ಯತೆಯನ್ನೇಕೆ ನಷ್ಟಗೊಳಿಸಬಾರದು?

ಡಾ. ಸೋಳಂಕಿ:— (ಸ್ಮಿತಪೂರ್ವಕ) ಆಗುವದು; ಅದೂ ಆಗುವುದು.

ಡಾ. ಕುರ್ತಕೋಟಿ:— ನನಗೆ ಆನಂದವೆನಿಸುತ್ತದೆ. ಸನಾತನಿಗಳು ಕೇಳುವುದಿಲ್ಲ ಸರಿ. Rod on the fool's back (ಮೂರ್ಖನ ಬೆನ್ನ ಮೇಲೆ ಚಬಕದೇಟು) ಎಂಬ ಗಾದೆಯು ನಿಮಗೆ ಗೊತ್ತೇ ಇದೆ. (ಭಯಂಕರ ಚಪ್ಪಾಳೆ)

ಈ ಪ್ರಕಾರ ೧॥ ಗಂಟೆಯ ವರೆಗೆ ಶ್ರೀಗಳ ಉಜ್ವಲ ಭಾಷಣವಾಯಿತು.

೬೦ ಲಕ್ಷ ಮುಸಲ್ಮಾನರ ಇಸ್ಲಾಮು ತ್ಯಾಗ?

ಕುರೇಶಿ ಮುಸಲ್ಮಾನ ಮುಂದಾಳುಗಳು ಡಾ. ಅಂಬೇಡಕರರಿಗೆ ಬರೆದ ಪತ್ರ.

"ಯಂಗಮೆನ್ಸ್ ಕುರೇಶಿ ಅಸೋಸಿಯೇಶನ್" ದ ಕಾರ್ಯದರ್ಶಿಗಳಾದ ಶ್ರೀ ಅಬ್ದುಲ್ ರಹಮಾನ ಇವರು ಡಾ. ಅಂಬೇಡಕರರಿಗೆ ಈ ಪ್ರಕಾರವಾಗಿ ಒಂದು ಅನಾವೃತ ಪತ್ರ ಬರೆದಿದ್ದಾರೆ—

"ಡಾ. ಅಂಬೇಡಕರರೇ,

ಧರ್ಮಾಂತರವಾಗುವುದಕ್ಕೆ ನೀವು ಘೋಷಣೆ ಮಾಡಿದಂದಿನಿಂದ ಎಲ್ಲ ಕಡೆಗೆ ಬಹಳ ಗಲಭೆಯುಂಟಾಗಹತ್ತಿದೆ. ೮ ಕೋಟಿ ಜನ ಅಸ್ಪೃಶ್ಯರನ್ನು ಹಿಂದು, ಮುಸ್ಲಿಮ್, ಶೀಖ, ಕ್ರಿಸ್ತಿ ಮೊದಲಾದವರೆಲ್ಲರೂ ತಮ್ಮೊಳಗೆ ಸೆಳೆದುಕೊಳ್ಳಲು ಯತ್ನಿಸುತ್ತಿದ್ದಾರೆ. ಏಕೆಂದರೆ ತಮ್ಮ ತಮ್ಮ ಸಮಾಜವು ವೃದ್ಧಿಯಾಗಿ ತಮಗೆ ಹೆಚ್ಚಿಗೆ ನೌಕರಿಗಳೂ, ಶಾಸನ ಸಭೆಗಳಲ್ಲಿ ಸ್ಥಾನಗಳೂ ದೊರೆಯಬೇಕೆಂದೇ ಅವರು ಆಶಿಸುತ್ತಿದ್ದಾರೆ.

ಕುರೇಶಿ ಮುಸಲ್ಮಾನ.

ಹಿಂದುಗಳ ಉದಾಸೀನತೆಯಿಂದ ಅಸ್ಪೃಶ್ಯರ ಗತಿಯಾಗಿರುವಂತೆಯೇ ಸದ್ಯದ ಮುಸಲ್ಮಾನರ ಸ್ಥಿತಿಯೂ ಕರುಣಾಜನಕವಾಗಿದೆ. ೧೯೧೯ ನೆಯ ಇಸ್ವಿಯಲ್ಲಿ ನಮ್ಮ ಕುರೇಶಿ ಮುಸಲ್ಮಾನರಲ್ಲಿ ಒಂದು ಚಟುವಟಿಕೆಯು ಪ್ರಾರಂಭವಾಯಿತು. (ಇವರಿಗೆ ಸಾಧಾರಣವಾಗಿ ಮಿರಾಶಿ ಎಂದೆನ್ನುತ್ತಾರೆ ಇವರ ಸಂಖ್ಯೆಯು ಹಿಂದುಸ್ಥಾನದಲ್ಲೆಲ್ಲ ೮ ಲಕ್ಷವಿರುತ್ತದೆ) ನಾವು ಕುರೇಶಿ ಮುಸಲ್ಮಾನರೆಂದು ಹೇಳಲು ಪ್ರಾರಂಭಿಸಿದ ಕೂಡಲೆ ಉಳಿದ ಮುಸಲ್ಮಾನರು ನಮಗೆ ವಿರೋಧಿಸಹತ್ತಿದರು. ನಮ್ಮ ಅಮೀರನನ್ನು ಕೊಂದುಹಾಕುವುದಾಗಿ ಹೆದರಿಸಿದರು. ಯಾವ ಯಾವ ಗ್ರಾಮಗಳಲ್ಲಿ ಮಿರಾಶಿಗಳು ತಾವು ಕುರೇಶಿ ಮುಸಲ್ಮಾನರೆಂದು ಹೇಳಿಕೊಳ್ಳಹತ್ತಿದರೊ ಅಲ್ಲಲ್ಲಿ ಅವರಿಗೆ ಉಳಿದ ಮುಸಲ್ಮಾನರು ತೊಂದರೆ ಕೊಡಹತ್ತಿದರು. ಹಿಂದುಸ್ಥಾನದ ೮ ಲಕ್ಷ ಕುರೇಶಿ ಮುಸಲ್ಮಾನರು ಜಗತ್ತಿನಲ್ಲಿ ಮಾನಿಷ್ಟ ರೀತಿಯಿಂದ ಬಾಳಬೇಕೆಂಬುದೇ ನಮ್ಮ ಉದ್ದೇಶವಾಗಿದೆ. ಉಳಿದ ಮುಸಲ್ಮಾನರು ಮೇಲಕ್ಕೇಳುವುದನ್ನು ಸಹಿಸದಿರುವಂಥ ಸ್ಥಿತಿಯು ಮುಸಲ್ಮಾನರದಿರುವಾಗ ಅವರು ನಿಮ್ಮ ಹಾಗೂ ನಿಮ್ಮ ಅಸ್ಪೃಶ್ಯ ಬಂಧುಗಳ ಉದ್ಧಾರವನ್ನೆಂತು ಮಾಡುವರು?

ಪಂಜಾಬದ ೬೦ ಲಕ್ಷ ಪೇಶಾವರ ಮುಸಲ್ಮಾನರ ವಿಷಯವಾಗಿಯೂ ಉಳಿದ ಮುಸಲ್ಮಾನರ ವರ್ತನೆಯು ಇದೇ ಪ್ರಕಾರವಾಗಿದೆ. ಮೊನ್ನೆ ಮೊನ್ನೆ ಸಂಭವಿಸಿದ ಸಂಗತಿಯೇನೆಂದರೆ ಪೂಂಛ (ಕಾಶ್ಮೀರ) ದಲ್ಲಿ ಪೇಶಾವರ ಮುಸಲ್ಮಾನರು ಸಭೆ ಕೂಡಿಸುತ್ತಿರಲು ತಾವು ಉಚ್ಚ ವರ್ಗದವರೆಂದು ಹೇಳಿಕೊಳ್ಳುವ ಮುಸಲ್ಮಾನರು ಅದನ್ನು ನಿಲ್ಲಿಸಿಬಿಟ್ಟರು. ಪೇಶಾವರ ಮುಸಲ್ಮಾನರು ತಲೆಯೆತ್ತಬಾರದೆಂಬುದೇ ಅವರ ಉದ್ದೇಶವಾಗಿದೆ. ನೀವು ಒಂದುವೇಳೆ ಅಸ್ಪೃಶ್ಯರಿಗೆ ರಾಜಕೀಯ ಅನುಕೂಲತೆಗಳನ್ನು ಮಾಡಿಕೊಡಲಿಚ್ಛಿಸಿ ಅವರನ್ನು ಧರ್ಮಾಂತರಕ್ಕಾಗಿ ಪ್ರೇರೇಪಿಸುತ್ತಿದ್ದರೆ ನೀವು ಮುಸಲ್ಮಾನರೇ ಆಗಿರಿ; ಶೀಖರೇ ಆಗಿರಿ; ಎಲ್ಲಿ ಹೋದರೂ ಒಂದು ಧರ್ಮದ ಬಲಾತ್ಕಾರದಿಂದ ಮತ್ತೊಂದು ಧರ್ಮದ ಗುಲಾಮರನ್ನಾಗಿ ಮಾಡುವಿರೆಂಬುದು ಖಂಡಿತ. ಆಯಾ ಮತಗಳನ್ನು ಬೆಳೆಯಿಸಿಕೊಟ್ಟರೆ ಅವರು ಪೀಡಿತರಾದ ಅಸ್ಪೃಶ್ಯರ ಮೇಲೆ ಅತ್ಯಾಚಾರ ನಡೆಯಿಸುವರು.

ಸ್ವತಃ ಒಂದು ಜಾತಿಯನ್ನುಂಟುಮಾಡಿರಿ.

ಆದುದರಿಂದ ನಾನು ನಿಮಗೆ ಸರಿಯಾದ ಸಲಹೆಯನ್ನು ಕೊಡಬೇಕೆಂದಿದ್ದೇನೆ. ನೀವು ಸ್ವತಃ ಒಂದು ಧರ್ಮವನ್ನು ಸ್ಥಾಪಿಸಿದರೆ

ಭಗವದ್ಗೀತೆಯೂ ವೀರಶೈವ ತತ್ವಗಳೂ.

ಕೈ. ಶ್ರೀಷಿ್ಟಯವರ ವಿಚಾರಗಳು.

ಶ್ರೀ ಶ್ರೀಷ್ಟಿಯವರು ಭಗವದ್ಗೀತೆ ಮತ್ತು ವೀರಶೈವ ತತ್ವಗಳನ್ನು ತುಲನಾತ್ಮಕ ರೀತಿಯಿಂದ ಅಭ್ಯಾಸ ಮಾಡಿ ಗೀತೆಯಲ್ಲಿಯ ಹಲಕೆಲವು ಶ್ಲೋಕಗಳಿಗೆ ವೀರಶೈವರ ಅಷ್ಟಾವರಣ, ಷಟ್ಸ್ಥಲಗಳಲ್ಲಿಯ ಹೆಸರುಗಳನ್ನು ಹೋಲಿಸಿ ಬರೆದಿದ್ದಾರೆ. ಆದುದರಿಂದ ಅವರು ಸೂಚಿಸಿದ ಕೆಲವು ಶ್ಲೋಕಗಳನ್ನೂ ಮತ್ತು ಅದೇ ಭಾವವನ್ನು ಸೂಚಿಸುವ ವಚನಗಳನ್ನೂ ಇಲ್ಲಿ ಕೊಡಲಾಗಿದೆ.

ಗೀತೆಯಲ್ಲಿಯ ಈ ಶ್ಲೋಕಗಳನ್ನು ಶ್ರೀ ಶ್ರೀಷ್ಟಿಯವರು ಲಿಂಗವೆಂದು ಸಂಬೋಧಿಸಿರುವರು.

ಅಹಮಾತ್ಮಾ ಗುಡಾಕೇಶ ಸರ್ವ ಭೂತಾಶಯ ಸ್ಥಿತಃ|
ಅಹಮಾದಿಶ್ಚ ಮಧ್ಯಂಚ ಭೂತಾನಾಮಂತ ಏವಚ||
ಗೀತಾ (೧೦-೨೦)

ಯಚ್ಚಾಪಿ ಸರ್ವ ಭೂತಾನಾಂ ಬೀಜಂ ತದಹಮರ್ಜುನ|
ನತದಸ್ತಿ ವಿನಾ ಯತ್ಸ್ಯಾನ್ಮಯಾ ಭೂತಂ ಚರಾಚರಮ್||
(೧೦-೩೯)

ಅರ್ಥ:— ಗುಡಾಕೇಶನೆ, (ಅರ್ಜುನನೆ) ಸರ್ವ ಭೂತಗಳ ಅಂತರ್ಯಾಮಿಯಾದ ಆತ್ಮನು ನಾನು. ಮತ್ತು ನಾನು ಸರ್ವ ಪ್ರಾಣಿಗಳ ಆದಿಯೂ ಮಧ್ಯನೂ ಅಂತನೂ ಆಗಿರುವೆನು. (೧೦-೨೦)

ಅರ್ಜುನನೆ, ಸರ್ವ ಭೂತಗಳ ಬೀಜವೆಂತೆಂಬುದಾದರೂ ನಾನೇ. ಚರ ಮತ್ತು ಅಚರವಾದ ಭೂತಗಳೆಂಬವು ನನ್ನ ಹೊರತಾಗಿ ಇಲ್ಲ. (೧೦-೩೯)"

ಇದೇ ಅರ್ಥವನ್ನು ಹೋಲುವ ಈ ವಚನಗಳನ್ನು ನೋಡಿರಿ:-

ಎಲ್ಲೆಲ್ಲಿ ನೋಡಿದಡಲ್ಲಲ್ಲಿ ನೀನೇ ದೇವಾ! ಪಿಂಡಾಂಡಗಳೊಳಗೆಲ್ಲ ನೀನೇ ದೇವಾ| ಮಹದಾಕಾಶರೂಪ ಪರಂಜ್ಯೋತಿ ನೀನೇ ದೇವಾ! ಉಪಮಾತೀತ ವಾಙ್ಮನಕ್ಕಗೋಚರ ನೀನೇ ದೇವಾ| ಸ್ವಾನುಭೂತಿ ಸ್ವರೂಪ ಶರಣಜನಮನೋವಲ್ಲಭ ನೀನೇ ದೇವಾ| ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ||

ಲಿಂಗಮಧ್ಯೆ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಮ್|
ಲಿಂಗಬಾಹ್ಯಾತ್ಪರಂ ನಾಸ್ತಿ ತಸ್ಮೈ ಲಿಂಗಾತ್ಮನೇ ನಮಃ||

ಅರ್ಥ:— ಚರಾಚರ ಸಹಿತವಾದ, ಮೂರು ಲೋಕಗಳನ್ನು ಒಳಗೊಂಡ ಸಕಲ ಜಗತ್ತೆಲ್ಲವೂ ಲಿಂಗ ಮಧ್ಯದಲ್ಲಿರುತ್ತದೆ ಲಿಂಗದ ಹೊರತಾಗಿ ಯಾವುದೂ ಇಲ್ಲ. ಆ ಲಿಂಗಾತ್ಮನಿಗೆ ನಮಸ್ಕಾರವು.

ಈ ಕೆಳಗಿನ ಶ್ಲೋಕಗಳಿಗೆ ಭಕ್ತಿಗಮ್ಯ ಎಂದು ಸಂಕೇತ ಮಾಡಿರುವರು:—

ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ|
ಶಕ್ಯಂ ಏವಂವಿಧೊ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ||
(೧೧-೫೩)

ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂ ವಿಧೋಽರ್ಜುನ|
ಜ್ಞಾತುಂ ದ್ರಷ್ಟುಂಚ ತತ್ವೇನ ಪ್ರವೇಷ್ಟುಂಚ ಪರಂತಪ||
(೧೧-೫೪)

ಅರ್ಥ:— ನೀನೀಗ ನನ್ನನ್ನು ಕಂಡಿರುವ ರೀತಿಯಾಗಿ ಕಾಣುವದು ವೇದ ಪಠನದಿಂದಾಗಲಿ, ತಪಸ್ಸಿನಿಂದಾಗಲಿ, ದಾನದಿಂದಾಗಲಿ, ಯಜ್ಞ ಸಾಧನದಿಂದಾಗಲಿ, ಶಕ್ಯವಾಗಿರುವದಿಲ್ಲ. (೧೧-೫೩)

ಪರಂತಪನಾದ ಅರ್ಜುನನೆ, ನನ್ನನ್ನು ಈ ರೀತಿಯಿಂದ ಅರಿತುಕೊಳ್ಳುವದೂ ನೋಡುವದೂ ತತ್ವಪೂರ್ವಕವಾಗಿ ನನ್ನಲ್ಲಿ ಸೇರಿಕೊಳ್ಳುವದೂ ಅನನ್ಯ ಭಕ್ತಿಯಿಂದಲೇ ಸಾಧ್ಯವಾದ ಮಾತು.

ಗೀತವ ಹಾಡಿದಡೇನು ?| ಶಾಸ್ತ್ರ ಪುರಾಣಗಳ ಕೇಳಿದಡೇನು ?| ವೇದ ವೇದಾಂತವ ನೋಡಿದಡೇನು ?| ಮನ ಒಲಿದು ಲಿಂಗ ಜಂಗಮವ ಪೂಜಿಸಲರಿಯದವರು ?| ಎಲ್ಲಗಲ್ಲಿ ಅನುಭಾವಿಯಾದಡೇನು?| ಭಕ್ತಿಯಿಲ್ಲದವರನೊಲ್ಲ ಕೂಡಲ ಸಂಗಮದೇವಾ||

ಇದಕ್ಕೆ ಶಿವಾರ್ಪಣ ಅಥವಾ ಅರ್ಪಣಯೋಗವೆಂದು ಸೂಚಿಸಿದ್ದಾರೆ.

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್|
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್||
(೯-೨೭)

ಅರ್ಥ:— ಎಲೌ ಕೌಂತೇಯನೇ, ನೀನು ಮಾಡುತ್ತಿರುವುದನ್ನೂ ತಿನ್ನುವುದನ್ನೂ ಹೋಮ ಮಾಡುತ್ತಿರುವುದನ್ನೂ, ದಾನ ಮಾಡುವವನ್ನೂ ತಪಸ್ಸ ಗೈಯುವದನ್ನೂ ಹೀಗೆ ಅದನ್ನೆಲ್ಲ ನನಗೆ ಸಮರ್ಪಿಸುತ್ತಿರು.

ತನುವ ಬೇಡಿದಡೀವೆ| ಮನವ ಬೇಡಿದಡೀವೆ| ಧನವ ಬೇಡಿದಡೀವೆ| ಬೇಡು ಬೇಡೆಲೆ ತಂದೆ| ಕಣ್ಣು ಬೇಡಿದಡೀವೆ| ತಲೆಯ ಬೇಡಿದಡೀವೆ| ಕೂಡಲ ಸಂಗಮದೇವ ನಿಮಗಿತ್ತು ಶುದ್ಧನಾಗಿಪ್ಪೆ ನಿಮ್ಮ ಪುರಾತನರ ಮನೆಯಲ್ಲಿ|| -

ಸ್ಥಿತಪ್ರಜ್ಞನ ವಿಷಯವಾಗಿ ಹೀಗೆ ಹೇಳಿದ್ದಾರೆ—

ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ|
ಶುಭಾಶುಭ ಪರಿತ್ಯಾಗೀ ಭಕ್ತಿಮಾನ್ಯಃ ಸ ಮೇ ಪ್ರಿಯಃ||

ಅರ್ಥ:— ಏತೇತರ ಹರ್ಷವನ್ನು ತಳೆಯದವನೂ, ದ್ವೇಷವನ್ನು ಮಾಡದವನೂ, ಶೋಕ ಮಾಡದವನೂ, ಆಕಾಂಕ್ಷೆಯನ್ನು ತಳೆಯದವನೂ, (ಕರ್ಮಗಳ) ಶುಭಾಶುಭ (ಫಲ)ಗಳನ್ನು ಲಕ್ಷಿಸದವನೂ ಆದ ಭಕ್ತನೇ ನನಗೆ ಪ್ರಿಯನು.

ಕಾಯದ ಕಳವಳಕ್ಕಂಜಿ ಕಾಯಯ್ಯ ಎನ್ನೆನು. ಜೀವನೋಪಾಯಕ್ಕಂಜಿ ಈಯಯ್ಯ ಎನ್ನೆನು. ಯದ್ಭಾವಂ ತದ್ಭವತಿ ಉರಿ ಬರಲಿ, ಸಿರಿಬರಲಿ ಬೇಕು ಬೇಡೆನ್ನೆನು. ಅನು ನಿಮ್ಮ ಹಾರೆನು; ಮಾನವರ ಬೇಡೆನು. ಆಣೆ ನಿಮ್ಮಾಣೆ ಕೂಡಲ ಸಂಗಮದೇವಾ.

ನಿಮ್ಮ ಜಾತಿಯ ಅನುಯಾಯಿಗಳ ಸಂಸಾರವು ಉತ್ತಮವಾಗಿ ಸಾಗುವುದು. ಹೀಗೆ ಮಾಡಿದ್ದಾದರೆ ನನ್ನ ಜಾತಿಯ ಎಲ್ಲ ಸದಸ್ಯರೂ ನಿಮ್ಮನ್ನು ಅನುಸರಿಸುವರು. ನೀವು ಮತ್ತು ನಾವು ಮತ್ತು ನಮ್ಮಂತೆಯೇ ಪೀಡಿತರಾದ ಉಳಿದ ಬಂಧುಗಳು ಎಲ್ಲರೂ ಕೂಡಿಕೊಂಡು ಒಂದು ಜಾತಿಯನ್ನು ಮಾಡಿಕೊಳ್ಳೋಣ. ನಾವು ನಮ್ಮ ಧರ್ಮಕ್ಕೆ "ಜೀವನ" ಎಂಬ ಹೆಸರನ್ನಿಡೋಣ. ನಾವು ಮುಸಲ್ಮಾನರಾಗುವುದು ಬೇಡ. ಶೀಖ ಅಥವಾ ಹಿಂದುಗಳಾಗುವುದು ಬೇಡ. ನಿಮ್ಮಂತೆಯೇ ನಾವೂ ಮುಸಲ್ಮಾನರಿಗೆ ನೋಟೀಸು ಕೊಟ್ಟಿದ್ದೆವು. ಆ ಅವಧಿಯು ಮೀರಿಹೋಯಿತು. ನಾವು ಈಗ ಸ್ವತಂತ್ರರಿದ್ದೇವೆ. ಅವರು ನಮ್ಮನ್ನು ಬಾಧಿಸಿರುವ ನಿಯಮ ನಿರ್ಬಂಧಗಳ ಬಗ್ಗೆ ನಮಗೆ ತಿರಸ್ಕಾರವುಂಟಾಗಿದೆ. ನಾನು ಶೀಘ್ರದಲ್ಲಿಯೇ ನಿಮಗೆ ಭೆಟ್ಟಿಯಾಗುವೆನು."

'ಹಿಂದು' (ದಿಲ್ಲಿ)



ಶಾ. ಶ. ೧೮೫೭ ನೆಯ ಮಾಘ ಶು॥ ೧೧ ಸೋಮವಾರ.

ಪಂ. ಜವಾಹರಲಾಲರ ಮುಂದಣ ಕಾರ್ಯ.

ಪಂಡಿತ ಜವಾಹರಲಾಲರು ಮುಂದಣ ವಾರ ಹಿಂದುಸ್ಥಾನಕ್ಕೆ ಆಗಮಿಸುವವರಿದ್ದಾರೆ. ಲಖನೌ ಪಟ್ಟಣದಲ್ಲಿ ಸೇರುವ ರಾಷ್ಟ್ರೀಯ ಸಭೆಗೆ ಪಂಡಿತಜಿಯವರೇ ಅಧ್ಯಕ್ಷರಾಗಿ ಆರಿಸಲ್ಪಟ್ಟಂತಾಗಿದೆ ಹಿಂದುಸ್ಥಾನದ ಈಗಿನ ರಾಜಕೀಯ ಸ್ಥಿತಿಯಲ್ಲಿ ಪಂಡಿತಜಿಯವರಿಗಿಂತ ಹೆಚ್ಚು ಅನುಕೂಲರಾದ ಅಧ್ಯಕ್ಷರು ದೊರೆಯುವುದು ಶಕ್ಯವೇ ಇಲ್ಲ. ಆದರೆ ಪಂಡಿತಜಿಯವರ ಎಲ್ಲ ಅಭಿಪ್ರಾಯಗಳೂ ಈ ದೇಶದ ಎಲ್ಲ ಪಕ್ಷದವರಿಗೂ ಮಾನ್ಯವಾದವುಗಳಾಗಿಯೇ ಇವೆಯೆಂದು ಮಾತ್ರ ಯಾರೂ ತಿಳಿಯಬಾರದು.

ಪಂಡಿತಜಿಯವರು ಪರದೇಶಕ್ಕೆ ತಮ್ಮ ಧರ್ಮಪತ್ನಿಯವರಾದ ಸೌ. ಕಮಲಾದೇವಿಯವರ ಆರೋಗ್ಯಾಭಿವೃದ್ಧಿಗೆ ನೆರವಾಗಲು ಹೋಗಿದ್ದರು. ಪರಮಾತ್ಮನ ಕೃಪೆಯಿಂದ ಸೌ. ಕಮಲಾದೇವಿಯವರು ಬಹುಮಟ್ಟಿಗೆ ಆರೋಗ್ಯವನ್ನು ಹೊಂದಿ ತಮ್ಮ ವೀರ ಪತಿಯನ್ನು ಆ ಶೂರ ದೇವಿಯು ರಾಷ್ಟ್ರಕಾರ್ಯಕ್ಕೆ ಮಾತೃಭೂಮಿಗೆ ಹೋಗಲು ಒತ್ತಾಯಪಡಿಸಿದುದು ಭಾರತೀಯ ಮಹಿಳಾ ಮಂಡಲಕ್ಕೇನೇ ಅತ್ಯಂತ ಅಭಿಮಾನಾಸ್ಪದವಾದ ಸಂಗತಿಯು. ಪಂಡಿತಜಿಯವರಾದರೋ ಪತ್ನಿಯ ಕಡೆಯ ಯೋಚನೆಯನ್ನು ಬಿಟ್ಟು ಮಾತೃಭೂಮಿಯ ಕಡೆಗೆ ಈಗಾಗಲೇ ಲಕ್ಷಿಸಿ ಲಂಡನ್ನಿನ ಪತ್ರಿಕಾ ಪ್ರತಿನಿಧಿಗಳಲ್ಲಿ ತಮ್ಮ ಅನೇಕ ಅಭಿಪ್ರಾಯಗಳನ್ನು ವ್ಯಕ್ತಗೊಳಿಸಿದ್ದಾರೆ. ಅವುಗಳ ಮುಖ್ಯಾಂಶ ಹೀಗಿದೆ.—

"(೧) ಹಿಂದುಸ್ಥಾನದ ಆರ್ಥಿಕ ಅವನತಿಯು ಬಹು ಭೀಕರವಾದುದಾಗಿದೆ. ಪ್ರಪಂಚದ ನಾನಾ ರಾಷ್ಟ್ರಗಳ ಕೈಗಾರಿಕೆಗಳು ಹಿಂದುಸ್ಥಾನದಲ್ಲಿ ಪ್ರಸಾರವಾಗಿ ಹಿಂದುಸ್ಥಾನದವರ ಉದ್ಯೋಗಗಳನ್ನೆಲ್ಲಾ ಹಾಳು ಮಾಡಿರುವುದರಿಂದ ಆ ಜನರು ಒಕ್ಕಲತನದಲ್ಲಿ ಸೇರಿದರು. ಇದರಿಂದ ಒಕ್ಕಲಿಗರೂ ಕಲ್ಪನಾತೀತವಾದ ಗೋಳಿಗೀಡಾಗಿದ್ದಾರೆ.

(೨) ಹೊಸದಾಗಿ ಬರುವ ರಾಜಕೀಯ ಸುಧಾರಣೆಯಲ್ಲಿ ಹಿಂದುಸ್ಥಾನದ ಈ ಅಸಂತೋಷವನ್ನು ನಿವಾರಣೆ ಮಾಡುವ ಯಾವ ಉಪಾಯಗಳೂ ಮಾಡಲ್ಪಟ್ಟಿಲ್ಲ. (೩) ಹೊಸ ರಾಜಕೀಯ ಸುಧಾರಣೆಯು ಯಾವ ಪಕ್ಷದವರಿಗೂ ಮಾನ್ಯವಾಗಿಲ್ಲ. (೪) ರಾಷ್ಟ್ರೀಯ ಸಭೆಯು ಕೌನ್ಸಿಲ್ ಪ್ರವೇಶದ ಹೋರಾಟದಲ್ಲಿ ಸೇರುವುದು. ಆದರೆ ಹೊಸ ಸುಧಾರಣೆಯನ್ನು ಸಾಗಿಸುವುದಕ್ಕಲ್ಲ; ಅದನ್ನು ತಡೆಯುವುದಕ್ಕೆ. (೫) ಇದು ಅಧಿಕಾರ ಸ್ಥಾನವನ್ನು ಸ್ವೀಕರಿಸುವುದೋ ಇಲ್ಲವೋ ಕಾಂಗ್ರೆಸ್ಸಿನಲ್ಲಿಯೇ ನಿರ್ಣಯವಾಗುವುದು (೬) ಇಂಗ್ಲೆಂಡಿನ ರಾಜಕಾರಣ ಪಟುಗಳಿಗೆ ಹಿಂದುಸ್ಥಾನದ ಸ್ಥಿತಿಗತಿಗಳ ಜ್ಞಾನವೇ ಇಲ್ಲ. ಭಾರತ ಮಂತ್ರಿಗಳಿಗೇನೇ ಈ ದೇಶದ ಪರಿಜ್ಞಾನವಿಲ್ಲ. (೭) ಹಿಂದುಸ್ಥಾನದಲ್ಲಿಯ ಜಾತಿಯ ಪ್ರಶ್ನೆಗೆ ವೃಥಾ ಮಹತ್ವ ಕೊಟ್ಟಿದ್ದಾರೆ. ಧಾರ್ಮಿಕ ಉತ್ಸವಗಳಲ್ಲಿ ನಡೆಯುವ ದೊಂಬಿಯ ಪ್ರಸಂಗಗಳನ್ನು ಬಿಟ್ಟರೆ ಜಾತಿಯ ಇನ್ನಾವ ವಿಷಯಗಳಿಗೂ ಮಹತ್ವವೇನೂ ಇಲ್ಲ. (೮) ಸಮಾಜ ಸತ್ತಾವಾದವೇ ನನ್ನ ಮತ. ಆದರೆ ಅದು ಹಿಂದುಸ್ಥಾನದಲ್ಲಿ ಎಷ್ಟರಮಟ್ಟಿಗೆ ಯಾವಾಗ ಹೇಗೆ ಪ್ರಸಾರವಾಗುವುದೋ ಈಗಲೇ ಹೇಳಲಿಕ್ಕಾಗುವುದಿಲ್ಲ."

ಪಂಡಿತಜಿಯವರ ಈ ಅಭಿಪ್ರಾಯಗಳು ಬಹುಮಟ್ಟಿಗೆ ರಾಷ್ಟ್ರಕ್ಕೆ ಮಾನ್ಯವಾದವುಗಳೇ ಇವೆ. ಮುಂದೆ ಬರಲಿರುವ ಸುಧಾರಣೆಯನ್ನು ಹೇಗೆ ವಿರೋಧಿಸುವುದೆಂಬುದೇ ಮುಖ್ಯ ಪ್ರಶ್ನೆಯಾಗಿದೆ. ಸುಧಾರಣೆಯು ತೃಪ್ತಿಕರವಾಗಿಲ್ಲವೆಂದು ಎಲ್ಲ ಪಕ್ಷದವರೂ ಹೇಳುವುದೇನೋ ನಿಜ. ಆದರೆ ಅದನ್ನು ವಿರೋಧಿಸಲು ಎಲ್ಲರೂ ಏಕಮುಖವಾಗಿ ಪ್ರಯತ್ನಿಸುವರೆಂದು ಮಾತ್ರ ಹೇಳಲಿಕ್ಕೆ ಬರುವಂತಿಲ್ಲ. ಆದಕಾರಣ ವಿರೋಧವು ಪರಿಣಾಮಕಾರಿಯಾಗಲಾರದು.

ಹಿಂದುಸ್ಥಾನದಲ್ಲಿ ಜಾತಿಯ ಪ್ರಶ್ನೆಯೇನೂ ಮಹತ್ವದ್ದಾಗಿಲ್ಲವೆಂದು ಪಂಡಿತಜಿಯವರು ತಿಳಿದಿರುವುದು ತಪ್ಪೇ ಸರಿ. ಹೊಸ ಸುಧಾರಣೆಯು ಯಾವ ನೆಲಗಟ್ಟಿನ ಮೇಲೆ ಕಟ್ಟಲ್ಪಟ್ಟಿದೆಯೋ ಅದೇ ಜಾತಿಯ ಜಗಳವನ್ನು ಹೆಚ್ಚಿಸತಕ್ಕುದಾಗಿರುವುದರಿಂದ ಜಾತಿಯ ಜಗಳಕ್ಕೇನೂ ಮಹತ್ವವಿಲ್ಲವೆನ್ನಬಹುದೆ? ಮುಂದಣ ಹೊಸ ಕೌನ್ಸಿಲ್ ಚುನಾವಣೆಯ ಹೋರಾಟದಲ್ಲಿ ಜಾತಿಯ ಜಗಳವು ನಾನಾ ರೂಪಗಳಿಂದ ಬೆಳೆಯದೆ ಇರಲಾರದು.

ಜಾತಿವಿಶಿಷ್ಟ ನಿರ್ಣಯ ಪದ್ಧತಿಯಿರುವ ವರೆಗೂ ಜಾತಿಯ ಜಗಳಕ್ಕೆ ಮಹತ್ವವಿಲ್ಲವೆಂದು ತಿಳಿಯುವುದು ನಮ್ಮನ್ನೇ ನಾವು ಮೋಸಗೊಳಿಸಿಕೊಂಡಂತೆಯೇ ಸರಿ. ಮುಸಲ್ಮಾನರು ಜಾತಿ ನಿರ್ಣಯವನ್ನು ಇಟ್ಟುಕೊಂಡೇ ಜಾತಿಯ ಜಗಳವನ್ನು ಬಿಡಿರೆಂದು ಹೇಳುತ್ತಿದ್ದಾರಲ್ಲವೇ? ನಾ ಆಗಾಖಾನರು ಈ ದೇಶಕ್ಕೆ ಬಂದೊಡನೆಯೇ ಹೇಳಿದುದೇನು? "ಸುಧಾರಣೆಯಿಂದ ದೊರೆತುದನ್ನು ಅನುಭವಿಸಿರಿ; ದೊರೆಯದಿದ್ದುದಕ್ಕೆ ಪ್ರಯತ್ನಿಸಿರಿ. ಹಿಂದು ಮುಸಲ್ಮಾನರ ಐಕ್ಯಕ್ಕೋಸ್ಕರ ಪ್ರಯತ್ನಿಸುವೆನು." ಎಂದಲ್ಲವೆ? ಮುಸಲ್ಮಾನ್ ಮುಂದಾಳುಗಳು ಈ ಪ್ರಕಾರ ತಮ್ಮ ಧೋರಣವನ್ನಿಟ್ಟುಕೊಂಡು ನಡೆಯುವ ವರೆಗೆ ಪಂಡಿತಜಿಯವರ ವಿರೋಧವು ಪರಿಣಾಮಕಾರಿಯಾಗುವುದಾಗಲಿ ಅಥವಾ ಜಾತಿಯ ಜಗಳವು ಉಪೇಕ್ಷಣೀಯವಾದುದಾಗುವುದಾಗಲಿ ಶಕ್ಯವೆ?

೧೯೨೯ ನೆಯ ಇಸವಿಯಲ್ಲಿ ಪಂಡಿತಜಿಯವರು ರಾಷ್ಟ್ರೀಯ ಸಭೆಯ ಅಧ್ಯಕ್ಷರಾಗಿದ್ದಾಗಿನ ಸ್ಥಿತಿಗೂ ಈಗಿನ ಸ್ಥಿತಿಗೂ ಮಹದಂತರವಾಗಿದೆ. ಆಗ ರಾಷ್ಟ್ರಕ್ಕೆ ತನ್ನ ಶಕ್ತಿ ಸಾಹಸಗಳ ತೂಕ ಗೊತ್ತಾಗಿರಲಿಲ್ಲ. ಈಗ ಅರಿತಿದ್ದಾಗಿದೆ. ಪಂಡಿತಜಿಯವರು ಇಲ್ಲಿಗೆ ಆಗಮಿಸಿದ ನಂತರ ಎಲ್ಲ ಸ್ಥಿತಿಗಳನ್ನೂ ನೋಡಿ ತಮ್ಮ ಸಹಕಾರಿಗಳೊಂದಿಗೆ ವಿಚಾರ ವಿನಿಮಯ ಮಾಡಿ ತಮ್ಮ ಮುಂದಣ ಕಾರ್ಯ ಪದ್ಧತಿಯನ್ನು ಗೊತ್ತುಪಡಿಸುವರೆಂಬುದರಲ್ಲಿ ಸಂದೇಹವೇ ಇಲ್ಲ. ಇವರ ಮುಂದಾಳುತನದಲ್ಲಿ ರಾಷ್ಟ್ರಕ್ಕೆ ಶ್ರೇಯಸ್ಕರವಾದ ಕಾರ್ಯಕ್ರಮಗಳು ಏರ್ಪಡಲೆಂದೇ ಹಾರೈಸುತ್ತೇವೆ.

ವೀರಶೈವ ತತ್ವ ಪ್ರಚಾರಕ ಸಂಘದ ಸದಸ್ಯರು

ಮಾಡಬೇಕಾದ ಮಹತ್ವದ ಕಾರ್ಯ.

ವೀರಶೈವ ತತ್ವ ಪ್ರಚಾರಕ ಸಂಘವು ತಾ. ೨೦-೪-೧೯೩೨ ನೆಯ ದಿವಸ ಸ್ಥಾಪನೆಯಾಯಿತಷ್ಟೆ. ಅಂದಿನಿಂದ ಒಂದು ವರ್ಷದೊಳಗಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರ ದೇಶಗಳಲ್ಲಿ ಈ ಸಂಘಕ್ಕೆ ಸಾಧಾರಣ ೧೫೦೦ ವೀರಶೈವ ಸ್ತ್ರೀ ಪುರುಷರು ಸದಸ್ಯರಾದರು. ಶರಣ ಸಂದೇಶ ಪತ್ರಿಕೆಯಲ್ಲಿ ತಾ. ೨೩-೧-೩೩ರ ವರೆಗೆ ೧೧೭೨ ಜನರ ಹೆಸರು ಪ್ರಕಟವಾಗಿವೆ. ಮೂರು ನಾಲ್ಕು ನೂರು ಹೆಸರುಗಳು ಪ್ರಕಟವಾಗದೆ ಹಾಗೇ ಉಳಿದಿವೆ. ಈ ಸದಸ್ಯರು ಒಪ್ಪಿದ ಸಂಗತಿಗಳು ಈ ಕೆಳಗೆ ಉದಾಹರಿಸಿದಂತಿವೆ. ಇವರಲ್ಲಿ ಅಷ್ಟಾವರಣಯುಕ್ತರಾದ ಎಲ್ಲ ಒಳಪಂಗಡದವರೂ ಇದ್ದಾರೆಂದು ಹೇಳಲು ಅಡ್ಡಿಯಿಲ್ಲ

(೧) ಅಷ್ಟಾವರಣ ಯುಕ್ತರಾದ ಎಂದರೆ ಜಂಗಮರ ಬಳಿಕೆಯಲ್ಲಿರುವ ವೀರಶೈವರು ಯಾವ ಕಾಯಕದವರು ಎಂದರೆ ಒಳಭೇದದವರಿದ್ದರೂ ಅವರಲ್ಲಿ ಅನ್ನೋದಕ ಸೇವಿಸಲು ಸಿದ್ಧನಿದ್ದೇನೆ.

(೨) ಲಿಂಗಾಂಗಿಗಳಾದ ಬಳಿಕೆಯಲ್ಲಿರದ ಶುದ್ಧಾಚಾರಸಂಪನ್ನರನ್ನು ದೀಕ್ಷೆ ಮಾಡಿಸಿ ಬಳಿಕೆಯಲ್ಲಿ ತೆಗೆದುಕೊಳ್ಳಲು ಸಿದ್ಧನಿದ್ದೇನೆ.

(೩) ವೀರಶೈವ ಮತವನ್ನು ಯಾವ ಕಾರಣದಿಂದಲೇ ಆಗಲಿ ಬಿಟ್ಟು ಪರಧರ್ಮಗಳಿಗೆ ಹೋದವರನ್ನು ಮತ್ತು ವೀರಶೈವ ಮತಕ್ಕೆ ಬರಲು ಇಚ್ಛೆವುಳ್ಳ ಪರಧರ್ಮದವರನ್ನು ಅವರು ಶುದ್ಧಾಚಾರ ಸಂಪನ್ನರಾಗಿದ್ದರೆ ವೀರಶೈವ ಮತದಲ್ಲಿ ತೆಗೆದುಕೊಳ್ಳಲು ಒಪ್ಪಿಗೆಯುಳ್ಳವನಾಗಿದ್ದೇನೆ. "

ಈ ವರೆಗಿನ ಕಾರ್ಯ.

ಈ ಸಂಘವು ಸದಸ್ಯರನ್ನು ಮಾಡುವ ಚಟುವಟಿಕೆಯನ್ನು ಮೊದಲು ಪ್ರಾರಂಭಿಸಿತು ಅದು ತುಂಬಾ ಜಯಪ್ರದವೂ ಆಯಿತು ಧಾರವಾಡದ ೧೧ ನೆಯ ಮಹಾಸಭೆಯಲ್ಲಿ ವೀರಶೈವ ಏಕೀಕರಣದ ಗೊತ್ತುವಳಿಯು ಈ ಸಂಘದ ಸದಸ್ಯರ ಪ್ರಯತ್ನ ವಿಶೇಷದಿಂದಲೇ ತೀರ್ಮಾನವಾಯಿತು. ಆ ಗೊತ್ತುವಳಿಯು ಹೀಗಿದೆ—

"ವೀರಶೈವ ಧರ್ಮವು ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಯಾವ ಬಗೆಯ ಜಾತಿಭೇದವನ್ನೂ ಅಂಗೀಕರಿಸುವುದಿಲ್ಲ. ಆದ್ದರಿಂದ ಅದರ ಉಪಪಂಗಡಗಳಲ್ಲಿ ಏಕೀಕರಣವು ಎಲ್ಲ ರೀತಿಗಳಿಂದ ತೀವ್ರವಾಗಿ ಆಗಲಿಕ್ಕೆ ಸಮಾಜದವರು ತಮ್ಮ ಶಕ್ತ್ಯನುಸಾರ ಪ್ರಯತ್ನಿಸಬೇಕೆಂದು ಈ ಮಹಾಸಭೆಯು ನಿರ್ಣಯಿಸುತ್ತದೆ."

ಮಹಾಸಭೆಯ ಈ ನಿರ್ಣಯದಿಂದ ವೀರಶೈವರಲ್ಲಿ ಬ್ರಾಹ್ಮಣಾದಿ ನಾಲ್ಕು ವರ್ಣಗಳಿವೆಯೆಂದು ಹೇಳುತ್ತಿರುವ ಕೆಲವರ ಅಭಿಪ್ರಾಯವಾಗಲಿ ಅಥವಾ ಭಕ್ತ ಮಹೇಶ್ವರರೆಂಬ ಎರಡು ಜಾತಿಗಳಿವೆಯೆಂದು ಹೇಳುತ್ತಿರುವ ಕೆಲವರ ವಾದವಾಗಲಿ ವೀರಶೈವ ಮಹಾಸಭೆಗೆ ಮಾನ್ಯವಿಲ್ಲವೆಂದೇ ಸಿದ್ಧವಾಯಿತು. ವೀರಶೈವ ತತ್ವ ಪ್ರಚಾರಕ ಸಂಘದ ಕಾರ್ಯ ಪ್ರಾರಂಭವಾದೊಡನೆ ಉಂಟಾಗಿದ್ದ ಜಾತಿಯ ವಾದವನ್ನು ಮಹಾಸಭೆಯು ಈ ಪ್ರಕಾರ ತೀರ್ಮಾನಿಸಿತು.

ಆಮೇಲೆ ಈ ಸಂಘದ ಸದಸ್ಯರು ಶಿವಾನುಭವ ಮಂಟಪವನ್ನು ಅಲ್ಲಲ್ಲಿ ಸ್ಥಾಪಿಸಲು ಪ್ರಯತ್ನಿಸಿ ವಚನಪ್ರವಚನಗಳ ಕಡೆಗೆ ಜನರು ತಿರುಗುವಂತೆ ಮಾಡಿದರು. ಬೆಂಗಳೂರಿನ ಶ್ರೀಮನ್ನಿರಂಜನ ಶ್ರೀ ಮಹದೇವ ಸ್ವಾಮಿಗಳವರ ಪ್ರಯತ್ನವು ಈ ವಿಷಯದಲ್ಲಿ ಅಪೂರ್ವವಾದುದು. ಅನೇಕ ಸ್ಥಳಗಳಲ್ಲಿ ಈ ಪೂಜ್ಯರಿಂದ ವಚನ ಪ್ರವಚನಗಳ ಮೂಲಕ ವೀರಶೈವ ತತ್ವಗಳು ಪ್ರಚಾರವಾಗಿವೆ. ಇತ್ತೀಚೆಗೆ ಹಾವೇರಿಯ ಸದಸ್ಯರು ತಮ್ಮಲ್ಲಿ ಒಂದು ವ್ಯಾಖ್ಯಾನ ಮಾಲೆಯನ್ನೇ ಏರ್ಪಡಿಸಿ ತತ್ವ ಪ್ರಚಾರಗೊಳಿಸಿದರು.

ಮುಂದಿನ ಕಾರ್ಯ.

ಈ ಸಂಘದ ಸದಸ್ಯರು ಇನ್ನು ಮೇಲೆ ಸಂಘದ ಮುಖ್ಯ ಕಾರ್ಯಗಳಾದ ಶಿವದೀಕ್ಷೆ ಮತ್ತು ಏಕೀಕರಣಗಳನ್ನು ಪ್ರಾರಂಭಿಸಬೇಕು. ಪರಧರ್ಮದವರ ಆಕ್ರಮಣವು ದಿನೇ ದಿನೇ ಹೆಚ್ಚುತ್ತ ಬಂದಿದೆಯಷ್ಟೆ. ಮೊದಲಿನಿಂದಲೂ ಪಾದ್ರಿಗಳು ತಮ್ಮ ಕಾಯಕವನ್ನು ನಡೆಯಿಸುತ್ತಲೇ ಬಂದಿದ್ದಾರೆ. ಕರ್ನಾಟಕದಲ್ಲಿ ಅವರ ಬಲೆಗೆ ಬಿದ್ದವರು ಹೆಚ್ಚಾಗಿ ಲಿಂಗಾಯತರು. ಇತ್ತೀಚೆಗೆ ಸಿದ್ದೀಕ ಸಾಹೇಬರ ಗಲಾಟೆ ಪ್ರಾರಂಭವಾಗಿ ಅದು ಎಲ್ಲೆಲ್ಲಿಯೂ ವ್ಯಾಪಿಸಿದೆ. ಮೂರನೆಯದಾದ ಆರ್ಯ ಸಮಾಜವೊಂದು ಕುಲಗೆಡಿಸುವ ಕಾರ್ಯ ಪ್ರಾರಂಭಿಸಿದೆ

ಕರ್ನಾಟಕದಲ್ಲಿ ವೀರಶೈವರ ಸಂಖ್ಯೆ ಹೆಚ್ಚಾಗಿರುವುದರಿಂದಲೂ, ಈ ಸಮಾಜವು ಶಿಕ್ಷಣದಲ್ಲಿ ಬಹು ಹಿಂದುಳಿದಿರುವುದರಿಂದಲೂ, ಈ ಕುಲಗೆಡಿಸುವ ಹೋರಾಟದಲ್ಲಿ ವೀರಶೈವರೇ ಆಹುತಿಯಾಗುವುದು ಸ್ವಾಭಾವಿಕ. ಎಂದಮೇಲೆ ಇವರು ಸ್ವಸಂರಕ್ಷಣೆಯ ಪ್ರಯತ್ನವನ್ನು ಸಂಘ ಮೂಲಕ ಮಾಡಿಕೊಳ್ಳುವುದು ಅವಶ್ಯಕವಾಗಿಲ್ಲವೆ? ಅಂತೆಯೇ ಈ ವಿರಶೈವ ತತ್ವ ಪ್ರಚಾರಕ ಸಂಘವು ಈ ಕಾರ್ಯವನ್ನು ಮುಖ್ಯವಾಗಿಟ್ಟುಕೊಂಡಿದೆ.

ಮುಖ್ಯ ಸ್ಥಳಗಳು.

ಈ ಸಂಘದ ಸದಸ್ಯರು ಕರ್ನಾಟಕ ಮತ್ತು ಮಹಾರಾಷ್ಟ್ರದ ಅನೇಕ ಮುಖ್ಯ ಸ್ಥಳಗಳಲ್ಲಿ ಹೆಚ್ಚಾಗಿದ್ದಾರೆ. ಅವರು ಸ್ಥಳೀಯ ಸಂಘವನ್ನು ಏರ್ಪಡಿಸಿಕೊಂಡು ತಮ್ಮ ತಮ್ಮ ತಾಲೂಕುಗಳಲ್ಲಿಯಾದರೂ ಈ ಸಂಬಂಧವಾದ ಚಟುವಟಿಕೆಯನ್ನು ನಡೆಯಿಸಬೇಕು.

ಬೆಂಗಳೂರು, ದಾವಣಗೆರೆ, ರಾಣೆಬೆನ್ನೂರು, ತುಮ್ಮಿನಕಟ್ಟಿ, ಹಾವೇರಿ, ಹುಬ್ಬಳ್ಳಿ, ಗದಗ, ಬಾಗಲಕೋಟೆ, ಹುನಗುಂದ, ಇಳಕಲ್ಲ, ಚಡಚಣ, ಯಾತಗಿರಿ, ಗುಲಬರ್ಗಾ, ಸೊಲ್ಲಾಪುರ, ಮೋಮಿನಾಬಾದ, ಅಥರಗಾ, ಗೋಕಾಕ, ಮೊದಲಾದ ಎಲ್ಲ ಭಾಗಗಳ ಅನೇಕ ಸ್ಥಳಗಳಲ್ಲಿ ಈ ಸಂಘದ ಸದಸ್ಯರು ಹೆಚ್ಚಾಗಿದ್ದಾರೆ. ಇವರು ವೀರಶೈವ ತತ್ವ ಪ್ರಚಾರಕ ಸಭೆಯನ್ನು ತಮ್ಮ ತಾಲೂಕಿನ ಮಟ್ಟಿಗಾದರೂ ಕೂಡಿಸಿ ಆ ತಾಲೂಕಿನಲ್ಲಿ ದೀಕ್ಷೆ ಮತ್ತು ಏಕೀಕರಣದ ಕಾರ್ಯಗಳನ್ನು ಪ್ರಾರಂಭಿಸುವುದು ಅಗತ್ಯವಾಗಿಲ್ಲವೆ?

ಮಂಟಮುರಿಯ ವೀರಶೈವ ಮಹಾಜನರು ಏಕೀಕರಣದ ವಿಷಯದಲ್ಲಿ ಅನುಕರಣೀಯವಾದ ಕಾರ್ಯವನ್ನು ಮಾಡಿಲ್ಲವೆ? ಆ ಪ್ರಕಾರ ಪ್ರತಿಯೊಂದು ಕಡೆ ಏಕೀಕರಣದ ಚಟುವಟಿಕೆಯನ್ನು ನಡೆಯಿಸುವುದು ಯುಕ್ತವಲ್ಲವೆ? ರಾಯಚೂರು ವೀರಶೈವ ಮಹಾಸಭೆಯ ಕಾಲದಲ್ಲಿ ಈ ಸಂಘದ ಪ್ರತ್ಯೇಕ ಸಭೆಯನ್ನೇರ್ಪಡಿಸಿ ಈ ಕಾರ್ಯಗಳು ಸರ್ವತ್ರ ವ್ಯಾಪಕವಾಗುವಂತೆ ಮಾಡಬೇಕಾಗಿದೆ. ಆದುದರಿಂದ ಈ ವಿಷಯದ ಕಡೆಗೆ ಸದಸ್ಯರು ಲಕ್ಷಿಸುವರೆಂದು ತುಂಬಾ ನಂಬಿದ್ದೇವೆ.

ಪತ್ರಗಳ ಸಾರಾಂಶ.

ಬೈಲಹೊಂಗಲದಲ್ಲಿ ಶುದ್ಧೀ ಸಮಾರಂಭ.

ಬೈಲಹೊಂಗಲದಲ್ಲಿ ಶ್ರೀ ಸಾವಂತ್ರೆವ್ವ ಪತ್ತಾರ ಎಂಬ ಪಂಚಾಳ ಹೆಣ್ಣುಮಗಳು ಬಹು ದಿವಸಗಳಿಂದಲೂ ವೀರಶೈವ ದೀಕ್ಷೆಯನ್ನು ಹೊಂದಬೇಕೆಂದು ಮನಸ್ಸು ಮಾಡಿದ್ದಳು. ಆದರೆ ಅವಳ ಬಯಕೆಯು ಪೂರ್ಣವಾಗುವಷ್ಟರಲ್ಲಿಯೇ ಶಿವಾಧೀನವಾದಳು. ಸಾಯುವ ಮುಂದೆ ಅವಳು ತನ್ನ ಮಕ್ಕಳನ್ನು ವೀರಶೈವ ಧರ್ಮದಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿ ಸತ್ತಳು. ಅವಳ ಇಚ್ಛೆಯಂತೆ ಅವಳ ಹಿರೇ ಹೆಣ್ಣುಮಗಳಾದ ಶ್ರೀ ಬಸವಣ್ಣೆವ್ವನು ತನ್ನ ತಮ್ಮ ಮಹಾದೇವಪ್ಪ ಮತ್ತು ತಂಗಿ ಕಾಶೀಬಾಯಿಯೊಡನೆ ವೀರಶೈವ ಧರ್ಮ ದೀಕ್ಷೆ ಕೊಡಬೇಕೆಂದು ವೀರಶೈವ ದೈವದವರಿಗೆ ವಿಜ್ಞಾಪಿಸಿಕೊಳ್ಳಲು ಅವರು ಸಮ್ಮತಿಸಿದರು. ಇದೇ ಕಾಲಕ್ಕೆ ಹೂಲಿ ಬೃಹನ್ಮಠದ ಶ್ರೀ ಚರಪಟ್ಟಾಧ್ಯಕ್ಷರು ಬೈಲಹೊಂಗಲಕ್ಕೆ ದಯಮಾಡಿಸಿದ್ದುದರಿಂದ ಅವರಿಗೆ ಈ ಸಂಗತಿಯನ್ನು ನಿವೇದಿಸಲು ಅವರೂ ಸಂತೋಷದಿಂದ ಸಮ್ಮತಿಕೊಟ್ಟರು.

ಈ ಮೇರೆಗೆ ಮಾಘ ಶು|| ೨ ನೆಯ ದಿನ ಈ ಮೂವರನ್ನೂ ಮತ್ತು ಶಿವನಗೌಡ ಮಲ್ಲಾಪುರ ಎಂಬ ಕ್ರಿಸ್ತೀ ಧರ್ಮಹೊಂದಿದ ಪುರುಷನನ್ನೂ ಶಿವದೀಕ್ಷೆಯಿಂದ ಶುದ್ಧಗೊಳಿಸಿ ವೀರಶೈವ ಮತದಲ್ಲಿ ತೆಗೆದುಕೊಂಡು ಎಲ್ಲ ವೀರಶೈವರು ಅವರೊಡನೆ ಭೋಜನ ಮಾಡಿ ತಮ್ಮ ಸಹಾನುಭೂತಿಯನ್ನು ತೋರಿಸಿದರು.

'ತರುಣಕರ್ನಾಟಕ'ದಿಂದ

ಹಿಂದು ತರುಣರಿಗೆ ಜಾಹೀರ ವಿನಂತಿ.

ತಾ. ೨೩-೨-೩೩ ನೆಯ ರವಿವಾರ ದಿವಸ ಸುಕ್ಷೇತ್ರ ಬಂಥನಾಳದಲ್ಲಿ ಜರಗುವ ಉತ್ಸವ ಕಾಲದಲ್ಲಿ ಹಿಂದು ಸಮಾಜದಲ್ಲಿ ಅದರಲ್ಲಿ ವಿಶೇಷವಾಗಿ ವೀರಶೈವ ಸಮಾಜೋತ್ಕರ್ಷವಾಗಲು ಏನು ಮಾಡಬೇಕು? ಈ ವಿಷಯದ ಸಲುವಾಗಿ ಶ್ರೀಮನ್ನಿರಂಜನ ಶ್ರೀ ಬಂಥನಾಳ ಶಿವಯೋಗಿಗಳ ಸನ್ನಿಧಿಯಲ್ಲಿ ತರುಣರ ಆಲೋಚನಾ ಕಮೀಟಿ ಕೂಡಿ ಸಮಾಜೋನ್ನತಿಗೆ ಸದ್ಯಃ ಯಾವ ಯಾವ ಕಾರ್ಯ ಕೈಕೊಳ್ಳಬೇಕೆಂಬ ನಿರ್ಣಯವು ಮಾಡಲ್ಪಡುವದು. ಕಾರಣ ಉತ್ಸಾಹಿ ತರುಣರೆಲ್ಲರೂ ಅವಶ್ಯವಾಗಿ ಆಗಮಿಸಬೇಕಾಗಿ ವಿನಂತಿ.

ವ್ಯವಸ್ಥಾಪಕ ಮಂಡಳಿ
ಬಂಥನಾಳ.

ನೈಜಾಮ ವೀರಶೈವ ವಿದ್ಯಾವರ್ಧಕ ಸಮಿತಿ ಗುಲಬರ್ಗಾ.

ತಾ. ೨೯-೧-೩೩ ನೆಯ ಬುಧವಾರ ದಿವಸ ಸಾಯಂಕಾಲ ೮ ಗಂಟೆಗೆ ಶ್ರೀ ಶರಣಬಸವೇಶ್ವರ ವಿದ್ಯಾಲಯದ ಪ್ರಾರಂಭೋತ್ಸವವು ಮಕ್ತಂಪೂರ ಹಂಗರಗಿಮಠದಲ್ಲಿ ಶ್ರೀ ಶರಣಬಸವೇಶ್ವರ ಸಂಸ್ಥಾನದ ಯಜಮಾನರಾದ ಶ್ರೀ. ಸಾಧು ದೊಡ್ಡಪ್ಪ ಅಪ್ಪಾ ಇವರ ಪವಿತ್ರ ಹಸ್ತದಿಂದ ನೆರವೇರಿಸಲ್ಪಟ್ಟಿತು. ಉತ್ಸವಕ್ಕೆ ಅನೇಕ ಜನ ಸದ್ಗೃಹಸ್ಥರೂ, ವಿದ್ಯಾರ್ಥಿಗಳೂ ಆಗಮಿಸಿ ಶೋಭೆಯನ್ನುಂಟುಮಾಡಿದ್ದರು. ಪ್ರಾರಂಭದಲ್ಲಿ ಬಸವಸ್ತವನವಾಯಿತು. ಆಮೇಲೆ ಪ್ರಾರಂಭೋತ್ಸವವು ಜರುಗಿತು. ಅನಂತರ ವಿದ್ಯಾಲಯದ ಹೆಡ್ ಮಾಸ್ತರರಾದ ಸಿದ್ಧವೀರಯ್ಯನವರು ಸಂಸ್ಥೆಯ ಉದ್ದೇಶವನ್ನು ಓದಿ ಹೇಳಿದರು. ಸಹಾಯಾಧ್ಯಾಪಕರಾದ ಮಹಾದೇವಪ್ಪನವರು ಕನ್ನಡ ಭಾಷೆಯ ಪ್ರಚಾರದ ವಿಷಯವಾಗಿ ಭಾಷಣ ಮಾಡಿದರು. ಉಳಿದ ನಾಲ್ಕಾರು ಜನ ತರುಣರ ಭಾಷಣಗಳಾದ ಮೇಲೆ ಶ್ರೀ ಶರಣಬಸವೇಶ್ವರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶಿವರಾಜಪ್ಪ ಹೇಮಶೆಟ್ಟಿ
ಗುಲಬರ್ಗಾ.

ಯಾದಗಿರಿ.

ನಿಜಾಂ ವೀರಶೈವ ವಿದ್ಯಾವರ್ಧಕ ಫಂಡಿನ ಜನರಲ್ಲ ಕಮಿಟಿಯು ತಾ. ೨೫-೪-೪೫ ಫಸಲಿ ದಿವಸ ಯಾದಗಿರಿ ವಿರಕ್ತಮಠದಲ್ಲಿ ಕೂಡಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಬಾರದ ಕಾರಣ ನಿಯಮದ ಪ್ರಕಾರ ಸರ್ವಾನುಮತದಿಂದ ಶ್ರೀ. ಎನ್. ರುದ್ರಪ್ಪನವರು ವಕೀಲ ಹಾಯಕೋರ್ಟ ಇವರ ಅಧ್ಯಕ್ಷತೆಯಲ್ಲಿ ಈ ಕೆಳಗೆ ವಿವರಿಸಿದ ಪ್ರಕಾರ ನಿರ್ಣಯಿಸಲ್ಪಟ್ಟಿತು.

(೧) ಸಮಾಜದ ಮುಖ್ಯರಲ್ಲಿ ಒಬ್ಬರಾದ ಉಜ್ಜನೀ ಪೀಠದ ಶ್ರೀಗಳು ಲಿಂಗೈಕ್ಯರಾದುದಕ್ಕೆ ಮತ್ತು ಸಾರ್ವಭೌಮರಾದ ಜಾರ್ಜ ಪಂಚಮರವರ ನಿಧನದ ಬಗ್ಗೆ ಕಮಿಟಿಯವರು ದುಃಖ ಪ್ರದರ್ಶನ ಮಾಡುತ್ತಾರೆ

(೨) ಗುಲಬರ್ಗಾ ಕೋ-ಆಪರೇಟಿವ್ಹ ಬ್ಯಾಂಕ ಮತ್ತು ತಾಂಡೂರು ಕೋಆಪರೇಟಿವ್ಹ ಬ್ಯಾಂಕ ಇವೆರಡರಲ್ಲಿ ಕಮ್ಮಿ ಬಡ್ಡಿಯಿಂದ ಹಣ ಇದ್ದುದಕ್ಕೆ ನಷ್ಟವಾಗುತ್ತದೆ. ಕಾರಣ ಮುದ್ದತು ಮುಗಿದಾಕ್ಷಣವೇ ಸೆಕ್ರೆಟರಿಗಳು ಅಲ್ಲಿಂದ ಹಣ ತೆಗೆದು ಯಾದಗಿರಿ ಶಹರ ಬ್ಯಾಂಕಿನಲ್ಲಿ ಬಡ್ಡೀದರ ಹೆಚ್ಚಿದ್ದ ಕಾರಣ ೩ ವರುಷದ ಮುದ್ದತ್ತಿನ ವರೆಗೆ ಇಡತಕ್ಕದ್ದು.

(೩) ಫಂಡಿನ ಕಾರ್ಯ ಸಮಾಧಾನಕಾರಕವಾಗಿ ಜರುಗಿಲ್ಲವಾದಕಾರಣ ಸರ್ವ ಮೆಂಬರರು ಫಂಡಿನ ಅಭಿವೃದ್ಧಿಗಾಗಿ ಸರ್ವತೋಮುಖವಾಗಿ ಪ್ರಯತ್ನಿಸತಕ್ಕದ್ದು.

(೪) ಅಧಿಕಾರಿಗಳ ಬದಲಾವಣೆಯ ವಿಷಯವಾಗಿ ಹೊಸದಾಗಿ ನಿರ್ಣಯ ಮಾಡಲಾಯಿತು.

(೫) ಶ್ರೀ ರಾಮರಡ್ಡಿ ಸಾಹೇಬ ವಕೀಲರು ಮತ್ತು ನೀಲಕಂಠ ರಾವಸಾಹೇಬ ವಕೀಲರು ಈ ಉಭಯರನ್ನು ಆನರರಿ ಮೆಂಬರರಾಗಿ ನೇಮಿಸಿದೆ.

(೬) ಸೆಕ್ರೆಟರಿಯವರ ಮುಕ್ಕಾಂ ಯಾದಗಿರಿ ಇದ್ದಕಾರಣ ಫಂಡಿನ ದಫ್ತರ ಯಾದಗಿರಿಯಲ್ಲಿರತಕ್ಕದ್ದು. ಮತ್ತು ಫಂಡಿನ ಯಾವತ್ತು ಕಾಗದ ಪತ್ರಗಳನ್ನು ಅವರಿಗೆ ಒಪ್ಪಿಸತಕ್ಕದ್ದು. ಶಿಲ್ಕು ಸಹ ಒಪ್ಪಿಸತಕ್ಕದ್ದು.

(೭) ಜನರಲ್ ಕಮಿಟಿಗೆ ೧೦ ರೂ. ಗಳನ್ನು ಕೊಟ್ಟವರೇ ಮತಕೊಡಲು ನಿರ್ಣಯವಾಗಿತ್ತು. ಆ ನಿಯಮದಿಂದ ಕಾರ್ಯಗಳಲ್ಲಿ ತೊಂದರೆ ಬರುವ ಕಾರಣ ಮುಂದೆ ಮೊದಲಿನಂತೆ ೧ ರೂ. ಕೊಟ್ಟವರೂ ಸಹ ಜನರಲ್ ಕಮಿಟಿಯ ಮೆಂಬರರು ಇದ್ದರು.

(೮) ಶ್ರೀ ಕಲ್ಲಯ್ಯಾ ಸ್ವಾಮಿ ಇವರು ಅಭ್ಯಾಸದಿಂದ ನಿವೃತ್ತರಾದ ಕಾರಣ ಇವರಿಗೆ ಕೊಡತಕ್ಕ ವೇತನ ರೂ. ೬ ನ್ನು ಎಫ್. ಎ. ಕ್ಲಾಸಿನಲ್ಲಿ ಅಭ್ಯಾಸ ಮಾಡತಕ್ಕ ಆರು ಮಂದಿ ವಿದ್ಯಾರ್ಥಿಗಳಿಗೆ ೧ ರೂ. ಹೆಚ್ಚು ವೇತನ ಕೊಡತಕ್ಕದ್ದು. ಶ್ರೀ ಕಲ್ಲಯ್ಯ ಸ್ವಾಮಿ ಇವರಿಗೆ ಮೂರು ತಿಂಗಳ ಹಿಂದಿನ ವೇತನವನ್ನು ಎಲ್. ಎಲ್. ಬಿ. ಮತ್ತ ಬಿ. ಎ. ಅಭ್ಯಾಸ ಮಾಡುವ ಮೂರು ಜನ ವಿದ್ಯಾರ್ಥಿಗಳಿಗೆ ಪ್ರತಿ ಒಬ್ಬರಿಗೆ ಅರ್ಧ ರೂ. ಯಂತೆ ಪ್ರತಿ ತಿಂಗಳ ವೇತನ ಹೆಚ್ಚು ಕೊಡತಕ್ಕದ್ದು.

ರುದ್ರಪ್ಪ ಶಿಣ್ಣೂರ ಸೆಕ್ರೆಟರಿ.

ಭಾಯಿ ಪರಮಾನಂದರಿಗೆ ಬರೆದ ಪತ್ರ.

[ತಾ|| ೨೦-೧೨-೩೫ ನೆಯ ದಿವಸ ಲಾಹೋರಿಗೆ ಭಾಯಿ ಪರಮಾನಂದಜಿಯವರ ಕಡೆಗೆ ಆರ್ಯ ಸಮಾಜದ ವಿಷಯವಾಗಿ ಒಂದು ಪತ್ರವನ್ನು ಹಿಂದಿ ಭಾಷೆಯಲ್ಲಿ ಬರೆಯಲಾಗಿದ್ದಿತು. ಅದನ್ನು ಅವರು ದಿಲ್ಲಿಯ 'ಹಿಂದು' ಪತ್ರಿಕೆಯಲ್ಲಿ ಪ್ರಕಟಪಡಿಸಿರುವರು. ಆ ಪತ್ರವನ್ನೇ ಕನ್ನಡದಲ್ಲಿ ಇಲ್ಲಿ ಪ್ರಕಟಿಸಿದೆ—]

ಆರ್ಯ ಸಮಾಜವು ಅನ್ಯರ ಮೇಲೆ ತನ್ನ ಖಂಡನ ನಡೆಯಿಸುವದಿಲ್ಲ.

ಮನೆಯ ಬಂಧುಗಳ ಮೇಲೆ ನಡೆಯಿಸಹತ್ತಿದೆ ಇದರಿಂದ ಅದು ಹಿಂದು ಸಂಘಟನೆಯನ್ನು ಲೋಪ ಮಾಡುತ್ತಲಿದೆ.

(ಲೇ:— ಎಮ್. ಎಮ್. ಹಾರ್ಡೇಕರ)

ದೇವತಾಸ್ವರೂಪ ಭಾಯಿ ಪರಮಾನಂದಜಿಯವರ ಸನ್ನಿಧಾನಕ್ಕೆ:—

ಪೂಜ್ಯರೆ,

ಇಂದು ನಿಮ್ಮ ಕಡೆಗೆ ಲಿಂಗಾಯತ ಸಮಾಜಕ್ಕೆ ಪೂಜ್ಯನಾದ ಶ್ರೀ ಬಸವೇಶ್ವರನ ವಚನಗಳ ಒಂದು ಪುಸ್ತಕವನ್ನೂ (Sayings of Basawanna) ಮತ್ತು ನಿಜಾಮ ರಾಜ್ಯದಲ್ಲಿಯ ಆರ್ಯ ಸಮಾಜಿಗಳ ಒಂದು ಹಸ್ತ ಪತ್ರಿಕೆಯನ್ನೂ ಕಳಿಸಿದ್ದೇನೆ. ಆ ಪುಸ್ತಕದಲ್ಲಿಯ ವಚನಗಳು ಕನ್ನಡದಲ್ಲಿವೆ. ಅವುಗಳನ್ನು ಒಬ್ಬ ಬ್ರಾಹ್ಮಣ ವಿದ್ವಾಂಸರು ಕನ್ನಡದಲ್ಲಿ ಭಾಷಾಂತರಿಸಿದ್ದಾರೆ. ಆ ಪುಸ್ತಕದ ಮೇಲಿಂದ ಶ್ರೀ ಬಸವೇಶ್ವರನ ವಿಷಯವಾಗಿ ಈ ಪ್ರಕಾರ ನಿಮಗೆ ಗೊತ್ತಾಗಬಹುದು.

೧೨ನೆಯ ಶತಮಾನದಲ್ಲಿ ಆಳುತ್ತಿದ್ದ ಬಿಜ್ಜಳನೆಂಬ ಚಾಲುಕ್ಯ ಅರಸನ ಹತ್ತರ ಬಸವೇಶ್ವರನೆಂಬ ಮಂತ್ರಿ ಇದ್ದನು. ಅವನು ಹಿಂದುಗಳ ಐಕ್ಯತೆ ಸಂಸ್ಕೃತಿ ಶುದ್ಧಿ ಮತ್ತು ಸಂಘಟನೆಗಳ ಸರ್ವೋತ್ಕೃಷ್ಟವಾದ ರೀತಿಯನ್ನು ಕಂಡು ಹಿಡಿದು ಮತ್ತು ಅದರಂತೆ ತಾನು ಸ್ವತಃ ಆಚರಿಸಿ ಒಂದು ಸುಸಂಘಟಿತವಾದ ಸಮಾಜವನ್ನು (ವೀರಶೈವ ಅಥವಾ ಲಿಂಗಾಯತ) ದಕ್ಷಿಣ ಹಿಂದುಸ್ಥಾನದಲ್ಲುಂಟುಮಾಡಿದನು

ಯಾವ ಪ್ರಕಾರ ಗುರು ಗೋವಿಂದಸಿಂಹನನ್ನು ಶೀಖರು ಹಿಂದುಗಳ ಸ್ವಾತಂತ್ರ್ಯದಾತೃವೆಂದು ತಿಳಿಯುತ್ತಾರೆಯೋ ಮತ್ತು ಅದಕ್ಕೆ ಉಳಿದ ಹಿಂದುಗಳು ಸಹ ಒಪ್ಪಿಗೆ ಕೊಡುತ್ತಾರೆಯೊ ಅದೇ ಪ್ರಕಾರ ವೀರಶೈವರು ಶ್ರೀ. ಬಸವೇಶ್ವರನ ಸಮಾಜ ಸಂಘಟನೆ, ಸಮತೆ, ಅಸ್ಪೃಶ್ಯತಾ ನಿವಾರಣೆ, ಶುದ್ಧಿ ಮೊದಲಾದ ಅನೇಕ ಉಪಯುಕ್ತ ಕಾರ್ಯಗಳ ಮೂಲಕ ಅವನನ್ನು ಅತ್ಯಂತ ಪೂಜ್ಯವಾಗಿ ಕಾಣುತ್ತಾರೆ. ಮತ್ತು ಅವನು ಹಿಂದುಗಳೆಲ್ಲರಿಗೆ ಆದರಣೀಯನೆಂದು ಹೇಳಿದರೆ ಯಾವ ಹಿಂದುವೂ ಅವನನ್ನು ನಿಂದಿಸಲಾರನು. ಇತ್ತ ಕಡೆಯ ಆರ್ಯ ಸಮಾಜಿಗಳಾದರೊ ಶ್ರೀ. ಬಸವೇಶ್ವರನನ್ನು ಯಥೇಷ್ಟವಾಗಿ ನಿಂದಿಸುತ್ತಿದ್ದಾರೆ. ಶ್ರೀ. ಬಸವೇಶ್ವರನು ಶ್ರೀ. ದಯಾನಂದರ ಚರಣ ಧೂಳಿಗೂ ಸರಿಬ್ಬಾರನು; ವೀರಶೈವರು ಲಿಂಗವೆಂದು ಕಲ್ಲನ್ನು ಕೊರಳಲ್ಲಿ ಕಟ್ಟಿಕೊಳ್ಳುತ್ತಾರೆ, ಈ ಮೊದಲಾದ ದೂಷಣೆಗಳನ್ನು ಆರ್ಯ ಸಮಾಜವು ಹೊರಿಸುತ್ತಲಿದೆ.

ಈ ನೀತಿಯಿಂದ ಆರ್ಯ ಸಮಾಜವು ಹಿಂದುಗಳಲ್ಲಿ ಸಂಘಟನೆಯನ್ನುಂಟುಮಾಡುತ್ತಿರುವದೋ? ಅಥವಾ ವಿಘಟನೆಯನ್ನೊ? ಇತ್ತಕಡೆ ಲಿಂಗಾಯತ ಸಮಾಜವು ಹಿಂದು ಸಮಾಜದ ಅರ್ಧಕ್ಕಿಂತಲೂ ಅಧಿಕವಾಗಿದೆ. ಕರ್ನಾಟಕದಲ್ಲಿ ಅದೇ ಪ್ರಮುಖ ಸಮಾಜವಾಗಿದೆ ಲಿಂಗಾಯತರು ಆರ್ಯ ಸಮಾಜಕ್ಕೆ ಸಹಾಯ ಮಾಡಿ ವಿಧರ್ಮಿಗಳ ಸಂಗಡ ಖಂಡನಮಂಡನ ನಡೆಯಿಸಲು ಹಚ್ಚಿದರೆ ಆರ್ಯ ಸಮಾಜಿಗಳು ವಿಧರ್ಮಿಗಳನ್ನಂತೂ ಬಿಟ್ಟೇಬಿಟ್ಟರು ಹಾಗು ತಮ್ಮ ಹಿಂದು ಬಂಧುಗಳ ಮೇಲೆಯೇ ಆಕ್ರಮಣ ನಡೆಯಿಸಹತ್ತಿದರು. ಇದರ ಸಂಗಡ ಕಳಿಸಿದ ಹಸ್ತಪತ್ರಿಕೆಯು ಆರ್ಯ ಸಮಾಜಿಗಳ ಕುಚೇಷ್ಟೆಯನ್ನು ತೋರಿಸುತ್ತದೆ.

ಈ ಸಾರೆ ದಿಲ್ಲಿಯ 'ಹಿಂದು' ಪತ್ರಿಕೆಯಲ್ಲಿ ಆರ್ಯ ಸಮಾಜವು ಆಂತರಿಕ ದ್ವೇಷದಿಂದ ಶೈಶವಾವಸ್ಥೆಯಲ್ಲಿಯೇ ನಾಶಪಥವನ್ನು ಹಿಡಿದಿದೆಯೆಂದು ನೀವು ಬರೆದಿದ್ದೀರಿ. ಅದು ಸತ್ಯವಿದೆ. ಇಷ್ಟೇ ಅಲ್ಲ, ಅದು ಹಿಂದು ಬಂಧುಗಳ ಮೇಲೆಯೇ ಆಕ್ರಮಣ ನಡೆಯಿಸಿ ಹಿಂದು ಸಂಘಟನವನ್ನು ಲೋಪಗೊಳಿಸುತ್ತದೆ. ಈಗ ಆರ್ಯ ಸಮಾಜದ ಈ ಹಸ್ತಪತ್ರಿಕೆ ಮೊದಲಾದವುಗಳಿಂದ ಪರಿಣಾಮವೇನಾಯಿತು? ಕರ್ನಾಟಕ ಮತ್ತು ಮಹಾರಾಷ್ಟ್ರದ ವೀರಶೈವರು ರೊಚ್ಚಿಗೆದ್ದರು. ಗ್ರಾಮ ಗ್ರಾಮಾಂತರಗಳಲ್ಲಿ ಆರ್ಯ ಸಮಾಜ ನಿಷೇಧ ಪ್ರದರ್ಶನಗಳಾಗಹತ್ತಿವೆ. ಆರ್ಯ ಸಮಾಜಕ್ಕೆ ಯಾರೂ ಸಹಾಯ ಮಾಡಬೇಡಿರಿ, ಆರ್ಯ ಸಮಾಜದ ಮೇಲೆ ಬಹಿಷ್ಕಾರ ಹಾಕಿರಿ ಎಂದು ಗೊತ್ತುವಳಿಗಳು ಮಾಡಲ್ಪಡಹತ್ತಿವೆ. ಆರ್ಯ ಸಮಾಜದ ಈ ದುಷ್ಟ ಕಾರ್ಯದಿಂದ ಹಿಂದುತ್ವಕ್ಕೇನೇ ಆಘಾತವುಂಟಾಗುತ್ತಲಿದೆ. ಹಿಂದು ಮಹಾಸಭೆಯು ಮಾಡಲಾರದಂಥ ವಿಶೇಷತೆಯಾದರೂ ಆರ್ಯ ಸಮಾಜದಲ್ಲಿ ಏನಿದೆ? ಪರಸ್ಪರ ಜಗಳ ಹಚ್ಚುವದು ಮಾತ್ರವೆ? ವೀರಶೈವ ಸಮಾಜದ ಸಹಸ್ರಾರು ಕನ್ಯೆಯರು ಪ್ರತಿದಿನವೂ ಭ್ರಷ್ಟರಾಗುತ್ತಿದ್ದಾರೆಂದು ವೀರಶೈವ ಸಮಾಜಕ್ಕೆ ಕುಂದು ತರುವ ಪ್ರಯತ್ನವನ್ನು ಆರ್ಯ ಸಮಾಜವು ಮಾಡುತ್ತಲಿದೆ. ಈ ಹಸ್ತಪತ್ರಿಕೆಗಳನ್ನು ಯಾವನೊಬ್ಬ ವ್ಯಕ್ತಿಯು ಹೊರಡಿಸಿರುವದಿಲ್ಲ. ಆದರೆ ಒಂದು ಸಂಸ್ಥೆಯವರು ಹೊರಡಿಸಿದ್ದಾರೆ.

ಆದುದರಿಂದ ಇದೆಲ್ಲವನ್ನು ನೋಡಿ ನಮ್ಮ ಆರ್ಯ ಸಮಾಜ ಬಂಧುಗಳಿಗೆ ಸರಿಯಾಗಿ ತಿಳುವಳಿಕೆಯುಂಟಾಗುವಂತೆ ನೀವು ಎಚ್ಚರಿಕೆಯನ್ನು ಕೊಡಬೇಕು. ಈ ಬಗ್ಗೆ 'ಹಿಂದು' ಪತ್ರಿಕೆಯಲ್ಲಿ ನೀವು ಒಂದು ಲೇಖ ಬರೆಯುವದೂ ಯುಕ್ತವಾಗಿದೆ. ಇಲ್ಲದಿದ್ದರೆ ಪ್ರಸಂಗವು ವಿಕೋಪಕ್ಕೆ ಹೋಗಬಹುದು. ಹಿಂದು ನಿರ್ಬಲ ಸಮಾಜದ ಹೊಣೆಗಾರಿಕೆಯು ಆರ್ಯ ಸಮಾಜದ ಮೇಲಿರುವದಿಲ್ಲ; ನಿಮ್ಮ ಮೇಲಿದೆ. ಆದುದರಿಂದ ನೀವು ಮೇಲ್ಕಂಡ ಉಪಾಯವನ್ನು ಅವಶ್ಯವಾಗಿ ಮಾಡಬೇಕು.

ಆರ್ಯ ಸಮಾಜದ ದೃಷ್ಟಿಕೋಣವು ಈಗ ಸಂಕುಚಿತವಾಗುತ್ತಲಿದೆ ಅದು ಹಿಂದುಗಳಲ್ಲಿರುವ ಲಕ್ಷಾವಧಿ ಜಾತಿ ಉಪಜಾತಿಗಳಲ್ಲಿ ಒಂದು ಪಂಗಡವಾಗಹತ್ತಿದೆ. ಅದು ಈಗ ಎರಡನೆಯವರ ಮೇಲೆ ಖಂಡನ ನಡೆಯಿಸುವದಿಲ್ಲ. ಮನೆಯ ಬಂಧುಗಳ ಮೇಲೆ ನಡೆಯಿಸುತ್ತಲಿದೆ. ಒಬ್ಬ ಸತ್ಪುರುಷರನ್ನು ನಿಂದೆ ಮಾಡಿದ್ದಕ್ಕಾಗಿ ದಕ್ಷಿಣ ಹಿಂದುಸ್ಥಾನದಲ್ಲಿ ಈಗಾಗಲೆ ಒಬ್ಬ ಆರ್ಯ ಸಮಾಜಿಯ ಮೇಲೆ ವ್ಯಾಜ್ಯವು ನಡೆದಿದೆ.

ನೀವು ಪುಣೆಗೆ ಬಂದಾಗ್ಗೆ ನಿಮಗೆ ಭೆಟ್ಟಿಯಾಗಿ ಎಲ್ಲವನ್ನೂ ನಿವೇದಿಸುವೆನು. ತಾವು ಉತ್ತರ ಕೊಡುವ ಶ್ರಮವಹಿಸಿದರೆ ಕೃತಜ್ಞನಾಗುವೆನು.

—ಇಜಿಪ್ತದಲ್ಲಿ ವಿದ್ಯಾರ್ಥಿಗಳ ದೊಂಬಿಯಲ್ಲಿ ಪೋಲೀಸರು ಗುಂಡು ಹಾರಿಸಿ ೧೨ ವಿದ್ಯಾರ್ಥಿಗಳನ್ನು ಗಾಯಪಡಿಸಿದರು.

ವಿವಿಧ ವರ್ತಮಾನ.

ಸಸ್ಯಾಹಾರದ ಪರಿಣಾಮ.

ಅಲಾಹಾಬಾದದಲ್ಲಿ ಕೂಡಿದ ಕುಂಭಮೇಲಾ ಉತ್ಸವದಲ್ಲಿ ಮುಂಬಯಿಯ ಬಾಬಾ ಕೃಷ್ಣಾನಂದ ಎಂಬ ಒಬ್ಬ ಸಾಧುವು ಒಂದು ಹುಲಿಯನ್ನು ತಂದಿದ್ದನು. ಹುಟ್ಟಿದಂದಿನಿಂದ ಅದನ್ನು ಸಸ್ಯಾಹಾರದ ಮೇಲೆಯೇ ಬೆಳೆಯಿಸಿದ್ದನು. ಹುಲಿಯು ಜನರ ಗದ್ದಲದಲ್ಲಿ ನಿರ್ಭಯದಿಂದ ಮತ್ತು ಏನೊಂದು ತೊಂದರೆ ಕೊಡದೆ ಹೋಗುತ್ತಿದ್ದಿತು. ಧಾರ್ಮಿಕ ಪ್ರವಚನ ನಡೆದ ಕಾಲಕ್ಕೆ ಅದು ತನ್ನ ಸ್ವಾಮಿಯ ಸಂಗಡ ಕುಳಿತುಕೊಳ್ಳುತ್ತಿದ್ದಿತು. ದಿನಾಲು ಅದು ಅನ್ನ, ಬೇಳೆ ಮೊದಲಾದವುಗಳನ್ನೇ ತಿನ್ನುತ್ತಿದ್ದುದರಿಂದ ಸಂಪೂರ್ಣ ಅಹಿಂಸಾವಾದಿಯಾಗಿಬಿಟ್ಟಿದೆ.

ಪ್ರಾಣಿಗಳಲ್ಲಿ ಸ್ವದೇಶಪ್ರೀತಿ.

ಮನುಷ್ಯನಲ್ಲದೆ ಉಳಿದ ಪ್ರಾಣಿಗಳು ಸಹ ತಮ್ಮ ಜನ್ಮ ಭೂಮಿಯನ್ನು ವಿಶೇಷವಾಗಿ ಪ್ರೀತಿಸುತ್ತಿರುವುದು ಕಂಡುಬಂದಿದೆ. ಈ ಬಗ್ಗೆ ಬ್ರಿಟನ್ನದಲ್ಲಿ ಕೆಲವು ಪ್ರಯೋಗಗಳನ್ನು ಮಾಡಲಾಯಿತು. ಯಾರ್ಕಶಾಯರದ ಕೆಲವು ಏಡಿಗಳನ್ನು ಗುರುತು ಮಾಡಿ ಲಿಂಕೋಲ್ನಶಾಯರಕ್ಕೆ ತಂದು ಬಿಡಲಾಯಿತು. ಆದರೆ ಅವು ಅಲ್ಲಿರದೆ ಪುನಃ ಯಾರ್ಕಶಾಯರದ ನೀರಿನಲ್ಲಿ ಬಂದಿದ್ದವು. ಮತ್ತೊಂದು ಏಡಿಯನ್ನು ಕಿನ್‌ಕಾರ್ಡಿನ್‌ಶಾಯರದಲ್ಲಿ ತಂದು ಬಿಡಲಾಗಿದ್ದಿತು. ಆ ಸ್ಥಾನವು ಏಡಿಗಳ ವಾಸಕ್ಕೆ ಅನುಕೂಲವಾದುದಾಗಿರಲಿಲ್ಲ. ಆ ಏಡಿಯು ಸಾವಕಾಶವಾಗಿ ಮಾರ್ಗಕ್ರಮಿಸುತ್ತ ಪುನಃ ತನ್ನ ಮೊದಲಿನ ಸಮುದ್ರಕ್ಕೆ ಬಂದಿದ್ದಿತು.

ಈ ಉದಾಹರಣೆಗಳಿಂದ ಮನುಷ್ಯನು ಎಷ್ಟೋ ಅರಿತುಕೊಳ್ಳ ಬೇಕಾಗಿದೆ.

ಆಧುನಿಕ ಚಾರ್ವಾಕ.

ಯಾರೊಸ್ಲಾವ್ಸ್ಕಿ ಎಂಬ ಹೆಸರಿನ ಆಧುನಿಕ ಚಾರ್ವಾಕನೊಬ್ಬನು ರಶಿಯಾದಲ್ಲಿದ್ದಾನೆ. ದೇವರು ಇಲ್ಲವೆಂದು ತ್ರಿಕರಣಪೂರ್ವಕ ನಂಬುವದೇ ಅವನ ಮತ. ರಶಿಯಾದ ಸೋವ್ಹಿಯೆಟ್ ಸರಕಾರದ ಅಧೀನದಲ್ಲಿ ೧೬ ಕೋಟಿ ಪ್ರಜೆಗಳಿದ್ದಾರೆ. ಅವರಲ್ಲಿ ೪ ಕೋಟಿ ಜನರು ಅವನ ಮತಕ್ಕೆ ಸೇರಿದ್ದಾರೆ. ದಿನದಿನವೂ ಅವನ ಮತವು ಬೆಳೆಯುತ್ತಿದೆಯಂತೆ. ರಸಿಯಾದಲ್ಲಿ ಹೊಸದಾಗಿ ೧೦-೧೨ ಪಟ್ಟಣಗಳು ಹುಟ್ಟಿವೆ. ಅಲ್ಲಿ ಚರ್ಚ ಅಥವಾ ಯಾವ ಧಾರ್ಮಿಕ ಸಂಸ್ಥೆಗಳಿಗೂ ಅಸ್ಪದವಿಲ್ಲ. ಹುಟ್ಟಿದಾಗ ಲಗ್ನವಾಗುವಾಗ ಯಾವ ಸಂಸ್ಕಾರವನ್ನೂ ಮಾಡಲಾಗುವದಿಲ್ಲ. ಯಾರೊಸ್ಲಾವ್ಸ್ಕಿಯವರು ನಾಸ್ತಿಕ ಸಂಘದ ಅಧ್ಯಕ್ಷರಾಗಿದ್ದಾರೆ ಚರ್ಚದ ವಿರೋಧವಾಗಿ ಇವರು ಈ ಪ್ರಕಾರ ಚಟುವಟಿಕೆ ನಡೆಸಿದ್ದರಿಂದ ಇವರ ಶಿಷ್ಯರು ಇವರಿಗೆ "Red anti-Pope" ಎಂಬ ಬಿರುದನ್ನು ಕೊಟ್ಟಿದ್ದಾರೆ.

ಟೆಲಿಫೋನಿನಲ್ಲಿ ಸುಧಾರಣೆ.

ಬ್ರಿಟಿಶ್ ಟೆಲಿಫೋನ ಆಫೀಸಿನವರು ಟೆಲಿಫೋನಿನಲ್ಲಿ ಈ ಪ್ರಕಾರ ಸುಧಾರಣೆ ಮಾಡುವ ಪ್ರಯೋಗ ನಡೆಯಿಸಿದ್ದಾರೆ. ಟೆಲಿಫೋನಿನ ಗಂಟೆ ಬಾರಿಸಿದ ಕೂಡಲೆ ಉತ್ತರ ಕೊಡುವವರು ಯಾರೂ ಇಲ್ಲದಿದ್ದರೆ ಹೊಸದಾಗಿ ಕೂಡ್ರಿಸಿದ ಒಂದು ಯಂತ್ರವು ಈ ಪ್ರಕಾರ ಮಾತಾಡುವದು. "ಮಿ........ಇವರು ಹೊರಗೆ ಹೋಗಿದ್ದಾರೆ. ನೀವೇನಾದರೂ ಹೇಳುವದಿದ್ದರೆ ಬರೆದಿಡುತ್ತೇನೆ."

ಇದನ್ನು ಕೇಳಿಕೊಂಡು ಪುನಃ ಆಚೆಯ ಕಡೆಯ ಮಾತಾಡುವವರು ತಾವು ಹೇಳುವದನ್ನು ಹೇಳಿದರೆ ಆ ಶಬ್ದಗಳನ್ನು ಒಂದು ಕಾಗದದ ಮೇಲೆ ಬರೆದು ಮೇಜಿನ ಮೇಲಿಡುತ್ತದೆ. ಇದರಿಂದ ಎಷ್ಟೋ ವೇಳೆಯು ಉಳಿತಾಯವಾಗುವದು.

ಕಿವಿಕಿತ್ತು ಹಚ್ಚಬಹುದು.

ಇಂಗ್ಲಂಡದ ಸ್ಟ್ರ್ಯಾಫೋರ್ಡಶಾಯರದಲ್ಲಿ ಒಬ್ಬ ಹುಡುಗನ ಒಂದು ಕಿವಿಯು ಅಂದಗೇಡಿಯಾಗಿದ್ದಿತು. ಅದನ್ನು ಕಂಡು ಆ ಹುಡುಗನ ತಂದೆ ತಾಯಿಗಳಿಗೆ ಬಲು ಚಿಂತೆಯಾಗಿದ್ದಿತು. ಆದರೆ ಸರ ಹ್ಯಾರೋಲ್ಡಗಿಲಿ ಎಂಬ ಸರ್ಜನರು ಯಾರಾದರೂ ಮನುಷ್ಯರು ತಮ್ಮ ಕಿವಿಯನ್ನು ಕೊಟ್ಟರೆ ಆ ಹುಡುಗನಿಗೆ ಹಚ್ಚಿಬಿಡುವೆವೆಂದು ತಿಳಿಸಿದರು. ಆ ಪ್ರಕಾರ ಆ ಹುಡುಗನ ಅಮ್ಮನು ತನ್ನ ಕಿವಿಯನ್ನು ಕೊಯ್ದು ಹಚ್ಚಲು ಸಮ್ಮತಿಸಿದಳು. ಆ ಪ್ರಕಾರ ಅವನಿಗೆ ಕಿವಿ ಹಚ್ಚಲಾಯಿತು. ಈಗ ಆ ಹುಡುಗನ ಆ ಹೊಲಿದ ಕಿವಿಯು ಮಾಯ್ದು ಎರಡೂ ಕಿವಿಗಳಲ್ಲಿ ಯಾವ ವ್ಯತ್ಯಾಸವೂ ಕಾಣದಂತಾಗಿದೆ.

ವಿಚಿತ್ರ ವಿಧಿಯೋಗ !

ಸ್ವಲ್ಪ ದಿವಸಗಳ ಪೂರ್ವದಲ್ಲಿ ಇಂದೂರಿನಲ್ಲಿ ಒಂದು ವಿಚಿತ್ರ ಘಟನೆಯು ಸಂಭವಿಸಿತು. ಪ್ರಸಿದ್ಧ ರಾಮಕೃಷ್ಣ ಭಾಂಡಾರಕರ ಮನೆತನದ ಒಬ್ಬ ತರುಣಿಯು ಅಲಾಹಾಬಾದದ ಒಬ್ಬ ಮುಸಲ್ಮಾನ ತರುಣನನ್ನು ವರಿಸಿದಳು. ಇವರ ವಿವಾಹವು ಸಿವ್ಹಿಲ್ ಮ್ಯಾರೇಜ ಕಟ್ಟಳೆಯ ಮೇರೆಗೆ ಇಂದೂರಿನಲ್ಲಿ ಆಯಿತು. ದೈವದ ವಿಚಿತ್ರ ಘಟನೆಯೆಂದರೆ ಈ ವಿವಾಹವನ್ನು ಕನ್ಯೆಯ ಅಜ್ಜನೇ ಮಾಡಬೇಕಾಗಿ ಬಂದಿತು. ಏಕೆಂದರೆ ಆವಳ ಅಜ್ಜನಾದ ಶ್ರೀ. ಯಶವಂತರಾವ ಭಾಂಡಾರಕರ ಇವರೇ ಸಿವ್ಹಿಲ ಮ್ಯಾರೇಜಿಸ್ ಖಾತೆಯ ರಜಿಸ್ಟ್ರಾರ್ ಕೆಲಸದಲ್ಲಿದ್ದಾರೆ.

ರಾಮಕೃಷ್ಣ ಭಾಂಡಾರಕರ ಇವರ ಮೊಮ್ಮಗಳೊಬ್ಬಳು ಈ ಪೂರ್ವದಲ್ಲಿಯೇ ಒಬ್ಬ ಮುಸಲ್ಮಾನನೊಡನೆ ವಿವಾಹವಾಗಿದ್ದಾಳೆ.

ಪ್ಯಾರಿಸದಲ್ಲಿ ಸ್ತ್ರೀ ಪೋಲೀಸರು.

ಕಳೆದ ವರ್ಷದ ಎಪ್ರಿಲ್ ತಿಂಗಳಲ್ಲಿ ಪ್ರಯೋಗಕ್ಕೆಂದು ಇಬ್ಬರು ಸ್ತ್ರೀ ಪೋಲೀಸರನ್ನು ಫ್ರಾನ್ಸದ ರಾಜಧಾನಿಯಾದ ಪ್ಯಾರಿಸ್ ಪಟ್ಟಣದಲ್ಲಿ ನಿಯಮಿಸಲಾಗಿದ್ದಿತು. ಆದರೆ ಈಗ ಅವರ ಮಹತ್ವವು ವಿಶೇಷವಾಗಿ ತೋರಿ ೨೦ ಜನ ಸ್ತ್ರೀ ಪೋಲೀಸರನ್ನು ಹೆಚ್ಚಿಸಲಾಗಿದೆ. ಇವರು ಮುಖ್ಯವಾಗಿ ಸ್ತ್ರೀಯರ ಮತ್ತು ಸಣ್ಣ ಮಕ್ಕಳ ಬಗ್ಗೆ ವಿಶೇಷ ಲಕ್ಷವನ್ನು ತೆಗೆದುಕೊಳ್ಳುವರು.

EXCELLENT GET-UP! NOW ON SALE BEAUTIFUL PRINT!

Recommended by the Government of Mysore for High-School Libraries in the Mysore State.

WHO IS THE FOUNDER OF THE VIRASAIVA OR LINGAYET RELIGION?

An indispensable book for all lovers of HISTORY

Price As. 8. Postage Free.

Can be had from:—

Jeerage K. Basavappa B. A.
2, Cotton pet, BANGALORE city.
SOUTH INDIA.

ವಿ ವಿ ಧ ವಿ ಷ ಯ .

ಇಂಗ್ಲಂಡದ ಬಂಗಾರವು ಇರುವುದೆಲ್ಲಿ ?

ಇಂಗ್ಲಂಡ ಬ್ಯಾಂಕಿನ ೧೫ ಕೋಟಿ ಪೌಂಡು ಬಂಗಾರವನ್ನು ಲಂಡನ್ ಪಟ್ಟಣದ ಮಧ್ಯವಸತಿಯಿರುವ ರಾಜಮಾರ್ಗಗಳ ಕೆಳಗೆ ಭೂಗರ್ಭದಲ್ಲಿ ಇರಿಸುವ ವ್ಯವಸ್ಥೆಯನ್ನು ಮಾಡಲಾಗಿದೆ.

ಭೂಪೃಷ್ಠದ ೬೦ ಅಡಿ ಆಳದಲ್ಲಿ ೧೫ ಅಡಿ ಅಗಲ ೨೦ ಅಡಿ ಉದ್ದವಾದ ಕೋಣೆಗಳನ್ನು ಸಿದ್ಧಪಡಿಸಲಾಗಿದೆ. ಈ ಕೋಣೆಗಳ ಒಳಮಗ್ಗಲಿಗೆ ಕಬ್ಬಿಣದ ಬಲವಾದ ತಗಡುಗಳನ್ನು ಕೂಡ್ರಿಸಲಾಗಿದೆ. ಇವುಗಳ ಸುತ್ತಲೂ ಭೂಮಿಯೊಳಗೆ ಒಂದು ಹೊಳೆಯು ಹರಿದುಹೋಗುವಂತೆ ವ್ಯವಸ್ಥೆ ಮಾಡಲಾಗಿದೆ. ಈ ಕೋಣೆಗಳಿಗೆ ಬೆಂಕಿಯ ಅಪಾಯದ ಭೀತಿಯಿಲ್ಲ. ಮದ್ದುಗುಂಡುಗಳ ಅನಾಹುತವಾಗುವ ಸಂಭವವಿಲ್ಲ. ಇವುಗಳನ್ನು ಕಟ್ಟಲಿಕ್ಕೇನೇ ೬೦ಲಕ್ಷ ಪೌಂಡು ವೆಚ್ಚವಾಗಿದೆ.

ಭೂಗರ್ಭದಲ್ಲಿಯ ಈ ಕಾರ್ಯವು ಒಳ್ಳೇ ಗುಪ್ತವಾಗಿರಿಸಲಾಗಿದೆ. ಸಾಧಾರಣ ೬೫೦ ಜನ ಆರಿಸಿ ನಿಯಮಿಸಿಕೊಂಡ ಕೆಲಸಗಾರರು ಈ ಸುರಂಗಮಾರ್ಗದಲ್ಲಿ ಕೆಲಸಮಾಡುತ್ತಿದ್ದಾರೆ. ಅವರು ಹಗಲಿನಲ್ಲಿ ಕೆಲಸಮಾಡುವದು ಬಹು ಕಡಿಮೆ. ಸುತ್ತಿಗೆ ಹಾರಿಗಳ ಸಪ್ಪಳವು ಹಗಲಿನಲ್ಲಿ ಉಂಟಾಗಬಾರದೆಂದು ಕಟ್ಟೆಚ್ಚರಿಕೆಯಿದೆ. ಆದುದರಿಂದ ರಾತ್ರಿಯಲ್ಲಿಯೇ ೬ ಗಂಟೆಯಿಂದ ಪುನಃ ಬೆಳಗಿನ ೬ ಗಂಟೆಯ ವರೆಗೆ ಕಾರ್ಯವು ವಿಶೇಷವಾಗಿ ಸಾಗುತ್ತಲಿದೆ. ಈ ಕೆಲಸವನ್ನು ಮಾಡಹತ್ತಿ ಈಗ ೧೦ ವರ್ಷಗಳಾದವು. ಇನ್ನೂ ೫ ವರ್ಷಗಳ ವರೆಗೆ ನಡೆಯುವ ಲಕ್ಷಣವಿದೆ. ಈ ಗುಪ್ತ ತಿಜೋರಿಯು ಸಂಪೂರ್ಣವಾಗಿ ಸಿದ್ಧವಾಗಲಿಕ್ಕೆ ೨ ಕೋಟಿ ಪೌಂಡು ವೆಚ್ಚವಾಗುವವು. ರಾತ್ರಿಯಲ್ಲಾ ಈ ಕೋಣೆಗಳನ್ನು ಕಾವಲುಗಾರರು, ಸೋಲ್ಜರರು, ಬೆಂಕಿನೊಂದಿಸುವವರು ಮತ್ತು ಸಾದಾ ಉಡುಪಿನಲ್ಲಿರುವ ಗುಪ್ತ ಪೋಲೀಸರು ಕಾಯುತ್ತಿದ್ದಾರೆ. ಕೆಲಸಗಾರರು ಯಾರೂ ಹೊರಗೆ ಹೋಗುವದು ಸಾಧ್ಯವಿಲ್ಲ. ಬಾಗಿಲುಗಳಿಗೆಲ್ಲ ಸಂಕೇತದ ಕೀಲಿಗಳನ್ನು ಹಾಕಿಬಿಡುತ್ತಾರೆ. ಈ ಪ್ರಚಂಡ ತಿಜೋರಿಯ ಹೆಬ್ಬಾಗಿಲವು ಎಷ್ಟೋ ಟನ್ ಭಾರವಾಗಿದೆ. ಅದನ್ನು ವಿದ್ಯುತ್ತಿನ ಸಹಾಯದಿಂದಲೇ ತೆರೆಯುವರು. ಇಲ್ಲವೆ ಮುಚ್ಚುವರು.

ಈ ಬಾಗಿಲದ ಕೀಲಿಗೆ ಎರಡು ಕೈಗಳಿರುತ್ತವೆ. ಅವು ಇಬ್ಬರು ಅಧಿಕಾರಿಗಳ ಸ್ವಾಧೀನದಲ್ಲಿರಬೇಕು. ಬಾಗಿಲವನ್ನು ತೆರೆಯುವಾಗ್ಗೆ ಆ ಇಬ್ಬರೂ ಅಧಿಕಾರಿಗಳು ಅಲ್ಲಿರಬೇಕು. ಈ ಪ್ರಕಾರ ಅದರ ಗುಪ್ತತೆಯ ಬಗ್ಗೆ ಒಳ್ಳೇ ಜಾಗರೂಕತೆಯನ್ನು ವಹಿಸಲಾಗಿದೆ.

ವ್ಯವಹಾರಜ್ಞಾನ ಸಂಸ್ಥೆ.

ಪಂಜಾಬದಲ್ಲಿ ಇತ್ತಿತ್ತಲಾಗಿ ಜಾತಿಯ ಜಗಳಗಳು ಹೆಚ್ಚುತ್ತಲಿವೆ. ಇವುಗಳನ್ನು ನಿರ್ಮೂಲ ಮಾಡಲು ಲಾಹೋರದಲ್ಲಿ ಇತ್ತಿತ್ತಲ್ಲೇ ವ್ಯವಹಾರಜ್ಞಾನ ಸಂಸ್ಥೆ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಈ ಸಂಸ್ಥೆಯ ಸಭಾಸದರೆಲ್ಲರು ಯಾವಾಗಲೂ ಎಲ್ಲ ವಿಷಯಗಳಲ್ಲಿಯೂ ವ್ಯವಹಾರಜ್ಞಾನವನ್ನೇ ಉಪಯೋಗಿಸಬೇಕು. ಶಾಸ್ತ್ರ ಧರ್ಮಪುಸ್ತಕ ಮೊದಲಾದವನ್ನು ಎಂದೂ ಆಧಾರವಾಗಿಟ್ಟುಕೊಂಡು ಮಾತನಾಡಲಾಗದು ಇದೇ ಆ ಸಂಸ್ಥೆಯವರ ಮೊದಲನೆಯ ನಿರ್ಬಂಧವಾಗಿದೆ. ಮೂಢನಂಬಿಕೆಯನ್ನೂ ಮೂಢಾಚಾರಗಳನ್ನೂ ಬಿಡಿಸಿ ಸಾರಾಸಾರ ವಿಚಾರವನ್ನುಂಟುಮಾಡುವ ಶಕ್ತಿಯುಂಟಾಗುವಂತೆ ಮಾಡಲು ಈ ಸಂಸ್ಥೆಯವರು ವಿಶೇಷ ತರದ ಪುಸ್ತಕಗಳನ್ನು ಪ್ರಸಾರ ಮಾಡುವರು. ಮತ್ತು ಈ ಬಗೆಯ ಪುಸ್ತಕಗಳೇ ಉಳ್ಳಂಥ ಒಂದು ವಿಶೇಷ ಪುಸ್ತಕಾಲಯವನ್ನು ಏರ್ಪಡಿಸುವರು.

ಬಲ್ಲವರ ಅನುಭವ.

ಇಂಗ್ಲಂಡದಲ್ಲಿಯ ಕೆಲವು ಜನ ಡಾಕ್ಟರರು ಭೂಪ್ರದಕ್ಷಿಣೆಗಾಗಿ ಹೊರಟು ಎಲ್ಲಾ ದೇಶಗಳಲ್ಲಿ ಸಂಚರಿಸಿ ಬಂದರು. ಅವರಲ್ಲಿ ಜೆ ಆರ್ಬರಸ್ನಿಥನ್ಸ ಎಂಬವರು ದೇಶವಾಸಿಗಳ ಆಹಾರ ಪದ್ಧತಿಯ ಬಗ್ಗೆ ಈ ರೀತಿ ಬರೆದಿರುತ್ತಾರೆ—

"ಒಂದು ಪ್ರದೇಶದಲ್ಲಿ ವಾಸಿಸುವ ನಿವಾಸಿಗಳ ಆರೋಗ್ಯವು ಮುಖ್ಯವಾಗಿ ಆ ಪ್ರದೇಶಗಳಲ್ಲಿ ಬೆಳೆಯುವ ಸಸ್ಯಾದಿಗಳನ್ನು ಅವಲಂಬಿಸಿರುತ್ತದೆ. ಯಾವ ದೇಶದವರು ಸ್ವಾಭಾವಿಕವಾದ ತಮ್ಮ ದೇಶದ ಆಹಾರವನ್ನು ಬಿಟ್ಟು ಪರದೇಶದ ಆಹಾರಗಳನ್ನು ಸೇವಿಸಹತ್ತುವರೊ ಅವರ ಆರೋಗ್ಯವು ತೀವ್ರವಾಗಿಯೇ ಕೆಟ್ಟುಹೋಗುತ್ತದೆ.

ಆಯರ್ಲಂಡದ ಜನರು ತಮ್ಮ ದೇಶದಲ್ಲಿ ಬೆಳೆಯುವ ಬಟಾಟಿಗಳನ್ನು ತಿನ್ನುತ್ತಿದ್ದಾಗ್ಗೆ ಪುಷ್ಟ ಶರೀರಿಗಳಾಗಿದ್ದರು. ಆದರೆ ಬರಬರುತ್ತ ಪರದೇಶದ ಆಹಾರಗಳನ್ನು ಸೇವಿಸಹತ್ತಿದಂತೆ ಅವರ ಪೂರ್ವದ ಆರೋಗ್ಯವು ಉಳಿಯಲಿಲ್ಲ. ಈ ಬಗ್ಗೆ ಚೀನೀ ಜನರು ಬಹಳ ಲಕ್ಷ ತೆಗೆದುಕೊಳ್ಳುತ್ತಾರೆ.

ಅವರಲ್ಲಿ ಒಂದೊಂದು ಕುಟುಂಬದವರು ತಮ್ಮ ಅಡಿಗೆಯನ್ನು ಸ್ವತಃ ಮಾಡುತ್ತಿರುವುದರಿಂದ ಅವರಲ್ಲಿ ಆರೋಗ್ಯವು ಸುರಕ್ಷಿತವಾಗಿ ಉಳಿದಿದೆ. ಆಹಾರದ ಬಗ್ಗೆ ಎಚ್ಚರಪಡುವವರೆಂದರೆ ಯಹೂದಿಗಳು. ಇವರು ಜಗತ್ತಿನ ಯಾವ ಭಾಗದಲ್ಲಿದ್ದರೂ ತಮ್ಮ ಮೋಝೆ ಪದ್ಧತಿಯಂತೆಯೇ ಅಡಿಗೆಮಾಡಿ ಉಣ್ಣುತ್ತಾರೆ. ಆದುದರಿಂದಲೇ ಅವರು ಆರೋಗ್ಯಸಂಪನ್ನರಾಗಿರುವರು.

ನಮ್ಮ ಹಿಂದುಸ್ಥಾನದ ಜನರು ತಮ್ಮ ಪ್ರಾಚೀನ ಪದ್ಧತಿಯ ಊಟವನ್ನೇ ಉಣ್ಣುವದು ಆರೋಗ್ಯ ದೃಷ್ಟಿಯಿಂದ ಮೇಲಾದದ್ದೆಂದು ಕಂಡುಬರುವದಿಲ್ಲವೆ? ಆದರೆ ದುರ್ದೈವಿಗಳಾದ ಈ ಜನರು ತಮ್ಮ ದೇಶದ ಸರ್ವೋತ್ಕೃಷ್ಟ ಸಸ್ಯಾದಿಗಳನ್ನು ಪರದೇಶಗಳಿಗೆ ಕಳಿಸಿ ಪರದೇಶದಿಂದ ಬರುವ ಚಹಾ, ಬಿಸ್ಕೀಟ, ಬ್ರೆಡ್, ಬಟರ, ವಿಸ್ಕಿ ಮೊದಲಾದವುಗಳನ್ನು ಕೇವಲ ಗೌರವಾರ್ಥವಾಗಿ ಸೇವಿಸುತ್ತಾರೆ. ಅದರಿಂದ ಮುಂದೆ ಎಂಥ ಅನರ್ಥ ಸಂಭವಿಸುತ್ತದೆಂಬುದು ಈ ಜನರಿಗೆ ಗೊತ್ತಿದ್ದರಲ್ಲವೆ!

ಪ್ರಾರ್ಥನೆಯ ಮಹತ್ವ.

ಡಾ. ಹಾಯಸ್ಲೋಪ ಎಂಬುವವರು ಪ್ರಾರ್ಥನೆಯ ಮಹತ್ವವನ್ನು ಕುರಿತು ಈ ಪ್ರಕಾರವಾಗಿ ಹೇಳುತ್ತಾರೆ— ನನ್ನ ಅನುಭವಕ್ಕೆ ಬಂದ ಸರ್ವೋತ್ತಮ ಔಷಧವೆಂದರೆ ಪ್ರಾರ್ಥನೆಯು. ಇದನ್ನು ನಿತ್ಯವೂ ಪ್ರಯೋಗಿಸಿದರೆ ಮನಸ್ಸಿಗೆ ಮತ್ತು ಸ್ನಾಯುಗಳಿಗೆ ಶಾಂತತೆಯನ್ನೂ ಸೌಖ್ಯವನ್ನೂ ಉಂಟುಮಾಡುವದು.

ಅನೇಕ ಚಿಂತೆಗಳಿಂದ ಮನವು ವ್ಯಗ್ರವಾಗಿದ್ದರೆ ಮತ್ತು ಅದರ ಪರಿಣಾಮವಾಗಿ ನಿದ್ರೆಯು ಬಾರದೆಹೋದರೆ ಔಷಧ ಮೊದಲಾದವುಗಳನ್ನು ಸೇವಿಸುವದಕ್ಕಿಂತ ಪರಮಾತ್ಮನ ಪ್ರಾರ್ಥನೆ ಮಾಡುವದು ಶ್ರೇಷ್ಠವಾದದ್ದು.

ಅಪೂರ್ವ ಶೋಧ! ಅಪೂರ್ವ ಶೋಧ!!

ಜರ್ಮನಿಯವರು ತಯಾರಿಸಿದ ವಿಷದ ಲಾಯಿಟು ಈಗ
ಹಿಂದುಸ್ಥಾನದಲ್ಲಿಯೇ ಸಿದ್ಧವಾಗುವಂತಾಗಿದೆ.

ಕೃಮಿನಾಶಕ ಲಾಯಿಟ.

ಶಿಫಾರಸ ಪತ್ರ.

ನಾನು ಕೃಮಿನಾಶಕ ಲಾಯಿಟನ್ನು ಉಪಯೋಗಿಸಿದೆ. ಇದು ತಗಣಿ, ದೋಮಿಗಳ ಮೇಲೆ ಬಹಳ ಉತ್ತಮ ಪ್ರಯೋಗವಿರುತ್ತದೆ. ಇದರ ಉಪಯೋಗದಿಂದ ತಗಣಿ, ದೋಮಿಗಳ ಕಾಟವು ಕಡಿಮೆಯಾಗಿ ಬಹಳ ಆರಾಮವೆನಿಸ ಹತ್ತಿರುತ್ತದೆ.

ಮಹಲಿಂಗರಾವ ಸವಣಿ
ಹಾಯಕೋರ್ಟ ವಕೀಲ ಗುಲಬರ್ಗಾ.

ತಾ. ೨೯-೧೨-೩೫

ಉಪಯೋಗಿಸುವ ವಿಧಾನವು ಬಾಟ್ಲಿಯ ಸಂಗಡಲೇ ಇರುವದು. ೯ ದಿವಸಕ್ಕೆ ಸಾಲುವಷ್ಟು ೧ ಬಾಟ್ಲಿಗೆ ೦-೪-೦ ೧ ಡಜನ್ನಿಗೆ ೨-೧೨-೦. ವ್ಹಿ. ಪಿ. ಚಾರ್ಜ ಬೇರೆ.

ಕೆಳಗಿನ ಪ್ಲೇಗ ಸಂಜೀವಿನಿ ಆಫೀಸುಗಳಲ್ಲಿಯೂ ಎಜೆಂಟರಲ್ಲಿಯೂ ದೊರೆಯುವದು.

ಪ್ಲೇಗ ಸಂಜೀವಿನಿ ಆಫೀಸ. ಸೋಲಾಪುರ.
" " ಹುಬ್ಬಳ್ಳಿ.
" " ಬೆಳಗಾಂವ.

ಏಜೆಂಟರು.
ಬಸೆಟ್ಟೆಪ್ಪ ಹಲಕುರ್ಕಿ ಬಾಗಲಕೋಟೆ.
ಎಸ್. ಚಂದ್ರಪ್ಪ ಕಾಂಡೂರ.
ಪ್ಲೇಗ ಸಂಜೀವಿನಿ ಆಫೀಸ ಗುಲಬರ್ಗಾ.

ಕಾಲರಾ ಸಂಜೀವಿನಿ.

ಕಾಲರಾ—

ಇದು ಮಾನವ ಚಿಕಿತ್ಸೆಗೆ ಮೀರಿದ ರೋಗವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ವಿಗಳಿಂದ ಶೋಧವಾಗಿದೆ. ಈ ಸಂಜೀವಿನಿ ಚೂರ್ಣವನ್ನು ಒಂದೇ ಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗುವದು. ಆಗ ನಿಮಗೆ ಖಂಡಿತವಾಗಿಯೂ ಆಶ್ಚರ್ಯವೂ ಆನಂದವೂ ಉಂಟಾಗುವವು.

—ಸಂಜೀವಿನಿ.

ಬೆಲೆ—
೧ ರೂ. ೫ ಆ.

ವಿಳಾಸ— ಪ್ಲೇಗ ಸಂಜೀವಿನಿ ಆಫೀಸ್, ಗುಲಬರ್ಗಾ.

ವೀರಶೈವ ಮಹಾಶಯರೇ,

ಸತ್ಯ ಸಂಗತಿಗಳನ್ನು ತಿಳಿದುಕೊಳ್ಳಲು ಅಪೇಕ್ಷಿಸುವಿರಾ ?

ಹಾಗಾದರೆ

ವೀರಶೈವ

ಮತಾಚಾರ್ಯರ ಕಾಲನಿರ್ಣಯ

ಎಂಬ ಪುಸ್ತಕವನ್ನು ಜಾಗ್ರತೆ ತರಿಸಿಕೊಂಡು ಓದಿರಿ.

ಇದರಲ್ಲಿ ಶ್ರೀ ರೇವಣಸಿದ್ಧ ಶ್ರೀ ಮರುಳಸಿದ್ಧ ಶ್ರೀ ಪಂಡಿತಾರಾಧ್ಯ,
ಶ್ರೀ ಏಕೋರಾಮ ಶ್ರೀ ವಿಶ್ವಾರಾಧ್ಯ ಶ್ರೀ ಬಸವಣ್ಣ
ಈ ಮಹಾಪುರುಷರ ಕಾಲಮಾನವನ್ನು ಕುರಿತು
ಐತಿಹಾಸಿಕ ಪ್ರಬಲ ಪ್ರಮಾಣಗಳಿಂದ

ಶ್ರೀಮಾನ್ ಕರ್ಲಮಂಗಲಂ ಶ್ರೀಕಂಠಯ್ಯನವರು

ಬಹು ಸೊಗಸಾಗಿ ಬರೆದಿದ್ದಾರೆ.

೮೪ ಪುಟಗಳು. ಅಂದವಾದ ಮುದ್ರಣ.

ಕ್ರಯ ೧೨ ಆಣೆ ಇದ್ದದ್ದನ್ನು ೬ ಆಣೆಗೆ ಇಳಿಸಿದೆ.

೧೨ ಪುಸ್ತಕಗಳಿಗೆ ೪ ರೂ. ಅಂಚೆಯ ವೆಚ್ಚ ಬೇರೆ

ಸೂಚನೆ:— ಮೂರು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ವ್ಹಿ. ಪಿ. ಮೂಲಕ ಕಳಿಸುವದಾಗುತ್ತದೆ. ಒಂದೆರಡು ಪುಸ್ತಕಗಳನ್ನು ಅಪೇಕ್ಷಿಸತಕ್ಕವರು ಪೋಸ್ಟಚಾರ್ಜ ಸಹಿತ ಟಿಕಿಟ ಕಳಿಸಿದರೆ ಬುಕ್ ಪೋಸ್ಟ ದ್ವಾರ ಕಳಿಸಲಾಗುತ್ತದೆ.

ಪುಸ್ತಕ ದೊರೆಯುವ ವಿಳಾಸ-

ಜ್ಞಾನೋದಯ ಗ್ರಂಥಭಾಂಡಾರ ಆಲಮಟ್ಟಿ
ಪೋ॥ ಆಲಮಟ್ಟಿ ಜಿ. ವಿಜಾಪುರ

ಶ್ರೀ ಬಿ. ವಿಶ್ವನಾಥಪ್ಪ ಮಂಡಿ ಮರ್ಚಂಟ್
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಸ್ಥಳೀಯ ಸಂಸ್ಥೆಗಳ ಪತ್ರಿಕೆ.

ಪ್ರತಿ ತಿಂಗಳ ತಾ॥ ೧ ಮತ್ತು ೧೫ ರಲ್ಲಿ ಪ್ರಕಟವಾಗುವ ಪಕ್ಷಪತ್ರಿಕೆ.

ಜಿಲ್ಲಾ ಬೋರ್ಡ್, ಪೌರಸಭೆ, ಗ್ರಾಮಪಂಚಾಯತಿ ಮುಂತಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಇತಿಹಾಸ, ಮೂಲತತ್ವ, ಆಡಳಿತ ಮುಂತಾದ ವಿಚಾರಗಳಲ್ಲಿ ನುರಿತ ಲೇಖಕರಿಂದ ಬರೆಯಲ್ಪಟ್ಟ ಬೋಧಪ್ರದ ಲೇಖನಗಳನ್ನೂ, ಆ ಸಂಸ್ಥೆಗಳ ಕಾರ್ಯಕ್ರಮ ಮತ್ತು ಘಟನೆಗೆ ಸಂಬಂಧಪಟ್ಟ ವಿಶೇಷ ಸಮಾಚಾರಗಳನ್ನೂ, ಸ್ಥಾನಿಕ ಸ್ವರಾಜ್ಯ ಸಂಬಂಧವಾದ ದೇಶವಿದೇಶ ವರ್ತಮಾನಗಳನ್ನೂ ಪ್ರಕಟಿಸುವ ಪತ್ರಿಕೆ.

ಇತರ ಸಂಗತಿಗಳೂ ವಿಶೇಷ ವರ್ತಮಾನಗಳೂ ಸಹ ಪ್ರಕಟವಾಗುವವು.

ಇಡೀ ಕನ್ನಡ ನಾಡಿನಲ್ಲಿ ಇಂತಹ ಪತ್ರಿಕೆಯು ಇದೊಂದೇ !

ವಾರ್ಷಿಕ ಚಂದಾ:— ೨ ರೂಪಾಯಿ; ಸಂಸ್ಥೆಗಳಿಗೆ ೫ ರೂಪಾಯಿ.
ವಿಳಾಸ:— ಟಿ ಎ.ಕೆ. ಚನ್ನಪ್ಪ, ವ್ಯವಸ್ಥಾಪಕ ಸ್ಥಳೀಯ ಸಂಸ್ಥೆಗಳ ಪತ್ರಿಕೆ ಗಾಂಧಿ ನಗರ, ಬೆಂಗಳೂರು ಸಿಟಿ.

ವೀರಶೈವ ಮತಬೋಧೆ.

ಶ್ರೀ ಮಂಜಪ್ಪನವರು ಹರ್ಡೇಕರ ಇವರಿಂದ ರಚಿಸಲ್ಪಟ್ಟ ವೀರಶೈವ ಮತಬೋಧೆ ಎಂಬ ಪುಸ್ತಕವನ್ನು ತೆಲುಗು ಭಾಷೆಯಲ್ಲಿ ಭಾಷಾಂತರಿಸಿದೆ. ಈ ಕೆಳಗಿನ ವಿಳಾಸಗಳಿಗೆ ಬರೆದು ತರಿಸಿಕೊಳ್ಳಿರಿ.

ಅಂಚೆ ತಿಕೀಟು ಕಳಿಸಿದಲ್ಲಿ ಬುಕ್-ಪೋಸ್ಟ ಮಾಡಲಾಗುವದು.

—ಬೆಲೆ ಒಂದಕ್ಕೆ ೩ ಆಣೆ. —

ಮ್ಯಾನೇಜರ
ಜ್ಞಾನೋದಯ ಗ್ರಂಥ ಭಾಂಡಾರ
ಪೋ. ಆಲಮಟ್ಟಿ.
ಜಿ. ವಿಜಾಪುರ.

ಜಿ. ವೀರಭದ್ರಪ್ಪ.
ಮನೆ ನಂ. ೩೦೩೬.
ಮುತಿಬಝಾರ ಹಲಗಾ (ದಿ
ಹೈದರಾಬಾದ. (ದಖ್ಖ)

ದಿ ಸ್ವರಾಜ್ಯ ಬ್ಯಾಂಕಿಂಗ
ಮತ್ತು
ಇನ್ಸೂರನ್ಸ ಕಂಪನಿ ಲಿಮಿಟೆಡ್, ಧಾರವಾಡ.

ರೂ. ೭೦೨-೧೧-೫. ಕ್ಲೇಮು.

೧೯೩೫ ನೇ ಇಸ್ವಿಯ ೮ ತಿಂಗಳುಗಳಲ್ಲಿಯೇ

ಜನನ ಪಾಲಿಸಿದಾರರಿಗೆ ಕ್ಲೇಮಿನ ಹಣವು ಹಂಚಲ್ಪಟ್ಟಿದೆ.

ಡಿಶೆಂಬರ ಒಂದೇ ತಿಂಗಳಲ್ಲಿ ರೂ. ೧೬೦೧—೫—೧೦ ಕ್ಲೇಮು ಹಣವನ್ನು ಕೊಡಲಾಗಿದೆ.

ಈ ಕಂಪನಿಯಲ್ಲಿ ಜನನ, ವಿವಾಹ ಮತ್ತು ಮರಣ ಈ ಪ್ರಕಾರ ಮೂರು ತರಹದ ವಿಮೆಗಳಿರುತ್ತವೆ.

ಪ್ರತಿಯೊಂದರ ಪ್ರವೇಶ ಫೀ ರೂ. ೫-೦-೦
ತಿಂಗಳ ಕಂತು .... ರೂ. ೧-೦-೦
ವಾರ್ಷಿಕ ಫೀ .... ರೂ. ೧-೦-೨

ಈ ವಿಮೆಗಳು ಬಡವರಿಗೂ ಬಲ್ಲಿದರಿಗೂ ಬಹಳೇ ಉಪಯೋಗವುಳ್ಳವುಗಳಿರುತ್ತವೆ. ಕಾರಣ ಕರ್ನಾಟಕದ ಅಭಿಮಾನವುಳ್ಳ ಪ್ರತಿಯೊಬ್ಬರೂ ನಮ್ಮ ಕಂಪನಿಯ ಪಾಲಿಸಿದಾರರಾಗಬೇಕಾಗಿ ಇಚ್ಛಿಸುತ್ತೇವೆ.

ಮ್ಯಾನೇಜಿಂಗ ಏಜಂಟ್ಸ
ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಶುರನ್ಸ ಕಂ., ಲಿ.
ಧಾರವಾಡ.

ಸೂಚನೆ:- ಲಾಯಿಫ ಇನ್ಶುರನ್ಸ ಈ ಕಂಪನಿಯಲ್ಲಿ ತೀವ್ರವೇ ಪ್ರಾರಂಭವಾಗುವದು. ಏಜಂಟರಾಗಿ ಕೆಲಸ ಮಾಡಲು ಇಚ್ಛೆಯುಳ್ಳವರು ಈ ತಿಂಗಳ ಅಖೈರದೊಳಗಾಗಿಯೇ ೧೯೩೬ ನೇ ಇಸ್ವಿ ಅಖೈರದೊಳಗಾಗಿ ಎಷ್ಟು ಬಿಜಿನೆಸ್ಸು ಮಾಡುವಿರೆಂಬದನ್ನು ಸಹಾ ತಿಳಿಸಬೇಕಾಗಿ ವಿನಂತಿ.

ನಿಮ್ಮ ಮನೆಗೆ ಆಲಂಕಾರವಾದ ಅನೇಕ ಬಣ್ಣಗಳಿಂದ ಕೂಡಿರುವ 10X14 ಸೈಜಿನ ಪಠಗಳು ಬೇಕೆ? ಹಾಗಾದರೆ ಕೆಳಗೆ ಕಂಡವುಗಳ ಪೈಕಿ 12 ಪಠಗಳು ಮಾತ್ರ ಒಂದು ರೂಪಾಯಿ ಕಳುಹಿಸಿದಲ್ಲಿ ಯಾವ ಖರ್ಚು ಇಲ್ಲದೆ ಕಳುಹಿಸುತ್ತೇವೆ.

ವಿ. ಪಿ. ಕಳುಹಿಸುವುದಿಲ್ಲ.

1 ಗಣಪತಿ 8. ಲಕ್ಷ್ಮೀ.
2 ಕೋದಂಡರಾಮ 9 ಸರಸ್ವತಿ.
3. ರಾಧರುಕ್ಮಿಣಿ ಕೃಷ್ಣ 10. ಮಹಾತ್ಮಗಾಂಧಿ.
4. ಶ್ರೀ ಕೃಷ್ಣ. 11. ಮಹಾವಿಷ್ಣು.
5. ಧೃವನಾರಾಯಣ. 12. ಮಾಧವನನಿರೀಕ್ಷಣೆ.
6. ಮಾರುತಿ 13. ರಾಧೆಯನಿರೀಕ್ಷಣೆ.
7. ಅನಂತಪದ್ಮನಾಭ 14. ಕೃಷ್ಣಲೀಲ.
15. ಬಸವೇಶ್ವರ.

12X16 ರ ಸೈಜು, ಬಸವೇಶ್ವರ 1ಕ್ಕೆ 0-3 0

ಯಜಮಾನ್ ಅಂಡ್ ಸ., ಬೆಂಗಳೂರು ಸಿಟಿ.

ಗೌರೀಶಂಕರ ನಿವಾಸ.
ಮುಂಬಯಿ.

ನೋಡಿದರೆ! ಉತ್ತಮ ಸೌಕರ್ಯ! ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜ ಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದಂಗಡಿಗಳಿಗೂ, ಸಿನಿಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪ ವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!
-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ನೋಡು ದರಗಳು-

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

B. V. Bhumraddi.
ಮ್ಯಾನೇಜರ, ಗೌರೀಶಂಕರ ನಿವಾಸ ಹಿಂದೂ ಹೋಟೆಲ್
ದಹಣೂಕರ ಬಿಲ್ಡಿಂಗ್. ಕಾಳಬಾದೇವಿ ರೋಡ, ಮುಂಬಯಿ.

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ.
ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್ಪ್ರಚುರ ಲೇಖಗಳಿವೆ.
ಹೊಸ ಸೌಲಭ್ಯಗಳು:—
ಬೆಲೆ ೧.೦ ಆಣೆ, ೧೯೩೩ ರ ವಿಶೇಷ ಸಂಚಿಕೆಯೊಂದಿಗೆ ೧ ರೂ,
ಹೊಸ ಚಂದಾದಾರರಿಗೆ ಉಚಿತ. ತ್ವರೆಮಾಡಿರಿ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಸ್ತಕ] ವಾ. ಚಂ ೩-೪-೦ [ಮೇಲೊಂದು ಉಚಿತಪುಸ್ತಕ
ಜ. ಕ. ಚಂದಾದಾರರಿಗೆ ೩ ರೂ.
ಮೂರನೆಯ ವರ್ಷದ ಆಯ್ದನೆಯ ಪುಸ್ತವಾದ
ಹಲವು ಪ್ರಸಿದ್ಧ ಕತೆಗಾರರ ಸರಸವಾದ
ಇದೀಗ ಹೊರಟಿದೆ] ನೀಳ್ಗತೆಗಳು! [ಬೆಲೆ ಹನ್ನೆರಡು ಆಣೆ.

ಜಯಕರ್ನಾಟಕ ಕಾರ್ಯಾಲಯ
ಧಾರವಾಡ.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಗೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದವಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ಶ್ರೇಷ್ಠತೆಯನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾನಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಪವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಟಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೀ ಪೇಟೆ, ತುಮಕೂರು.
(ಮೈಸೂರು ಸ್ಟೇಟ್)

ಶರಣ ಸಂದೇಶ.

ಸಂಪಾದಕರು

ಹರ್ಡೇಕರ್ ಮಂಜಪ್ಪನವರು.

ಶ್ರೀ ಬಸವಾದಿ ಪ್ರಮಥರ

ತತ್ವಗಳನ್ನು

ಒಂದು ಸಮಾಜದೊಳಗೆಂಯ

ರೀತಿನೀತಿಗಳನ್ನೂ

ಪ್ರಸಾರಗೊಳಿಸುವ

ವಾರಪತ್ರಿಕೆ

ಕನ್ನಡದಲ್ಲಿ ಇದೊಂದೇ.

ವಾರ್ಷಿಕ ಚಂದಾ:-

ಅಂಚಿನ ವೆಚ್ಚಸಹ

೩. ರೂ. ಗಳು.

ಜಾಗ್ರತೆ ಚಂದಾದಾರರಾಗಿರಿ.

ವ್ಯಾನೇಜರ್:- ಶರಣ ಸಂದೇಶ

ಪೋ. ಆಲಮಟ್ಟಿ ಜಿ ವಿಜಾಪುರ

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು

ಕನ್ನಡ ಮತ್ತು ಇಂಗ್ಲಿಷ್, ಎಲ್ಲಾ ತರದ ಟೈಪು ಗಳೂ ಒಳ್ಳೆಳ್ಳೆ ಬಾರ್ಡರುಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೆ ಮೆಟಲ್, ಬಹು ಅಂದವಾದ ಅಕ್ಷರಗಳು, ಬಲು ಸುಲಭ ದರ ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,

ಶ್ರೀ ರಂಗನಾಥ ಟೈಪ್ ಫೌಂಡರಿ

೭೭ ಕುಂಬೇರ ಸಾಹುಜಿ ಲೈನ್

ಚಿಕ್ಕಪೇಟೆ, ಬೆಂಗಳೂರು ಸಿಟಿ

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬರೆಯಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತಮ್ಮ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯೆಂದು ಹೇಳಿ ಜನರಿಗೆ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ, ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭಪಡೆಯಬೇಕು..

ಪುಸ್ತಕದ ಬೆಲೆಗೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ —

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು

ಪೋಸ್ಟ್. ಮಹಾಗಾಂವ್, ಜಿ ಗುಲಬರ್ಗ

ಖಾದಿಯು ಕೊಂಡು

ಬಡತನದ ಬಾಧೆಯ ಕಳೆಯಿರಿ.

ಭಾರತದ ಬಡತನ ಬಯಲಾಗಲು

ಗಾಂಧಿಯವರು

ತೋರಿಸಿದ

ಖಾದಿಯೇ ಹಾದಿಯು.

ನಿಮ್ಮ ಮೈಮೇಲೆ

ಖಾದಿ ಬಂದರೆ

ಬಡವರ ಕೈಮೇಲೆ

ಕಾಸು ಬರುವದು.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ **ಶ್ರೀ ಹರ್ಡೇಕರ್ ಮಂಜಪ್ಪನವರಿಂದ** ಪ್ರಕಟಿಸಲ್ಪಟ್ಟಿತು.

ಶರಣ ಸಂದೇಶ.

ಸಂಪಾದಕರು:-

ಹರ್ಡೇಕರ್ ಮಂಜಪ್ಪನವರು.

ಶ್ರೀ-ಬಸವಾದಿ ಪ್ರಮಥರ

ತತ್ವಗಳನ್ನು

ಹಿಂದು ಸಮಾಜದೇಳಿಗೆಯ

ರೀತಿನೀತಿಗಳನ್ನೂ

ಪ್ರಸಾರಗೊಳಿಸುವ

ವಾರಪತ್ರಿಕೆ

ಕನ್ನಡದಲ್ಲಿ ಇದೊಂದೇ.

ವಾರ್ಷಿಕ ಚಂದಾ:-

ಅಂಚೆಯ ವೆಚ್ಚ ಸೇರಿ

೩. ರೂ. ಗಳು.

ಜಾಗ್ರತೆ ಚಂದಾದಾರರಾಗಿರಿ.

ಮ್ಯಾನೇಜರ್:- ಶರಣ ಸಂದೇಶ

ಪೋ. ಆಲಮಟ್ಟಿ ಜಿ. ವಿಜಾಪುರ

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳದ್ದರೆ ಸುಲಭ ಚಾರ್ಜಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,

ಶ್ರೀ ರಂಗನಾಥ ಟೈಪ್ ಫೌಂಡರಿ

೬೭ ಕುಬೇರ ಸಾಹುಜಿ ಲೈನ್

ಚಿಕ್ಕಪೇಟೆ, ಬೆಂಗಳೂರು ಸಿಟಿ

ರಮುಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮುಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮುಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮುಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮುಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

- ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು

ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಖಾದಿಯ ಕೊಂಡು

ಬಡತನದ ಬಾಧೆಯ ಕಳೆಯಿರಿ.

ಭಾರತದ ಬಡತನ ಬಯಲಾಗಲು

ಗಾಂಧಿಯವರು

ತೋರಿಸಿದ

ಖಾದಿಯೇ ಹಾದಿಯು.

ನಿಮ್ಮ ಮೈಮೇಲೆ

ಖಾದಿ ಬಂದರೆ

ಬಡವರ ಕೈಮೇಲೆ

ಕಾಸು ಬರುವದು.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

ಓಂ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೫. | ಆಲಮಟ್ಟಿ- ಸೋಮವಾರ ತಾರೀಖು ೧೭ ನೆಯ ಫೆಬ್ರುವರಿ ೧೯೩೬. | ಸಂಚಿಕೆ ೨೫.

ಅಸೆಂಬ್ಲಿಯ ಕಾರ್ಯಕಲಾಪಗಳು.

ಕ್ರಿಮಿನಲ್ ಲಾ ಅಮೆಂಡಮೆಂಟಿದ ಚರ್ಚೆ.

೧೯೦೮ ರಲ್ಲಿ ಸ್ಥಾಪಿತವಾದ ಕ್ರಿಮಿನಲ್ ಲಾ ಅಮೆಂಡಮೆಂಟ ಶಾಸನವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಶ್ರೀ ಬಿ ದಾಸರವರು ಒಂದು ಗೊತ್ತುವಳಿಯನ್ನು ತಂದರು. ಆಬಗ್ಗೆ ಶ್ರೀ ಶ್ರೀಪ್ರಕಾಶರು ಎರಡು ಗಂಟೆಗಳ ವರೆಗೆ ಮಾತನಾಡಿ ಅಧಿಕಾರಿಗಳು ಆ ಶಾಸನದ ದುರುಪಯೋಗವನ್ನು ಹೇಗೆ ಮಾಡುತ್ತಿರುವರೆಂಬುದನ್ನು ಹೇಳಿದರು. ಅವರ ಭಾಷಣ ಮುಗಿದ ಮೇಲೆ ಸರ ನೃಪೇಂದ್ರನಾಥ ಸರ್ಕಾರ ಇವರು ಈ ಚರ್ಚೆಯನ್ನು ಸಾಕುಮಾಡಬೇಕೆಂದು ಒಂದು ನಿಲುವಳಿ ಸೂಚನೆ ತಂದರು. ಆದರೆ ಆ ಸೂಚನೆಯು ಬಿದ್ದುಹೋಯಿತು. ಅನಂತರ ಶ್ರೀ ಶಾಂತಸಿಂಗರವರು ಒಂದು ಗಂಟೆಯ ಕಾಲ ಮಾತಾಡಿದರು. ಈ ಶಾಸನದಿಂದ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಅಸಾಧಾರಣ ಅಧಿಕಾರ ಕೊಡಲ್ಪಟ್ಟಿದೆಯೆಂದು ಖಂಡಿಸಿದರು.

ಇದಕ್ಕೆ ಸರ ಮಹಮ್ಮದ ಯಾಕೂಬರವರು ವಿರೋಧಿಸಿದರು. "ಹೊಸ ರಾಜ್ಯಾಂಗ ರಚನೆಯಲ್ಲಿ ರಾಷ್ಟ್ರೀಯ ಪಕ್ಷದವರೇ ಮಂತ್ರಿಗಳಾದದ್ದಾದರೆ ಅವರಿಗೆ ಸ್ವಾಭಾವಿಕವಾಗಿಯೇ ಹೆಚ್ಚು ಅಧಿಕಾರ ದೊರೆಕಿಂತಾಗುವದು. ಇದಲ್ಲದೆ ಹಿಂದುಸ್ಥಾನದಲ್ಲಿ ಸಮತಾವಾದ, ಸಮಾಜ ಸತ್ತಾವಾದ ಮೊದಲಾದ ಚಟುವಟಿಕೆಗಳು ಹರಡುತ್ತಲಿವೆ. ಅವುಗಳನ್ನು ಹೇಗೆ ತಾನೆ ಬಗ್ಗು ಬಡಿಯುವಿರಿ?" ಎಂದರು.

೧೩ ನೆಯ ತಾರೀಖಿನ ದಿವಸ ಈ ಬಗ್ಗೆ ಪುನಃ ಚರ್ಚೆ ನಡೆಯಿತು. ಕೊನೆಗೆ ಪ್ರತಿಕೂಲ ಮತ್ತು ಅನುಕೂಲ ಮತ ತೆಗೆದುಕೊಳ್ಳಲಾಗಿ ಎರಡೂ ಕಡೆಗೆ ಸಮಾನವಾಗಿ ೬೬ ಮತಗಳು ಬಿದ್ದವು, ಆದರೆ ಅಧ್ಯಕ್ಷರು ತಮ್ಮ ಮತವನ್ನು ಪ್ರತಿಕೂಲ ಪಕ್ಷಕ್ಕೆ ಹಾಕಿದ್ದರಿಂದ ಆ ಗೊತ್ತುವಳಿಯು ಬಿದ್ದುಹೋಯಿತು.

ರೇಲ್ವೆ ಅಧಿಕಾರದ ಪ್ರಶ್ನೆ.

ಬಿ. ಎನ್. ಡಬ್ಲ್ಯು. ರೇಲ್ವೆ ಮತ್ತು ಎಮ್. ಎಸ್. ಎಮ್. ರೇಲ್ವೆ ಇವೆರಡನ್ನು ಸರಕಾರದವರು ತಮ್ಮ ಅಧಿಪತ್ಯದಲ್ಲಿ ತೆಗೆದುಕೊಳ್ಳಬೇಕೆಂಬ ಒಂದು ಗೊತ್ತುವಳಿಯು ಚರ್ಚೆಗೆ ಬಂದಿತು. ಎರಡೂ ರೇಲ್ವೆಗಳು ಸರಕಾರದ ವಶದಲ್ಲಿದ್ದರೆ ಹಾನಿಯಾಗುವದರ ಬದಲು ನೂರಕ್ಕೆ ನಾಲ್ಕರಂತೆ ಲಾಭವಾಗುತ್ತಿತ್ತೆಂದು ಡಾ. ಝಿಯಾಉದ್ದೀನರವರು ಹೇಳಿದರು. ಸರ ಎ. ಎಚ್. ಗಝ್ನವಿ ಇವರು ವಿರೋಧಿಸುತ್ತ— "ಈ ರೇಲ್ವೆಯವರು ತಮ್ಮ ಮೂರನೆಯ ತರಗತಿಯ ಪ್ರಯಾಣದ ದರಗಳನ್ನು ಉಳಿದ ರೇಲ್ವೆಗಳಿಗಿಂತ ಎರಡು ಮೂರಾಂಶದಷ್ಟು ಕಡಿಮೆ ಮಾಡಿದ್ದಾರೆ. ಅಂದಮೇಲೆ ಸರಕಾರದವರು ಅವುಗಳನ್ನು ವಶಕ್ಕೆ ತೆಗೆದುಕೊಂಡು ಸುಮ್ಮನೆ ಏಕೆ ನಷ್ಟಮಾಡಿಕೊಳ್ಳಬೇಕು?" ಎಂದರು. ಈ ರೇಲ್ವೆಗಳನ್ನು ಕೊಂಡುಕೊಳ್ಳಬೇಕಾದರೆ ೧೭೦ ಲಕ್ಷ ಪೌಂಡುಗಳನ್ನು ಸರಕಾರದವರು ರೊಖ್ಖ ಕೊಡಬೇಕಾಗುವದೆಂದು ಸರ ಮಹಮ್ಮದ ಝಫರುಲ್ಲಾಖಾನರವರು ಹೇಳಿದರು. ಇದಕ್ಕೆ ಪಂ. ಗೋವಿಂದ ವಲ್ಲಭಪಂತ ಇವರು— "೧೯೩೭ ನೆಯ ಇಸ್ವಿಯ ಒಳಗಾಗಿಯೇ ಸರಕಾರವು ಈ ರೇಲ್ವೆಗಳನ್ನು ವಶಕ್ಕೆ ತೆಗೆದುಕೊಳ್ಳಬೇಕೆಂದು ಅಸೆಂಬ್ಲಿಯು ನಿರ್ಣಯಿಸಿದ್ದು ಅದನ್ನು ಸರಕಾರವು ಮಾನ್ಯ ಮಾಡಿದೆ. ಸರಕಾರವು ಎಷ್ಟೆಷ್ಟೋ ಸಾಲ ತೆಗೆಯುತ್ತದೆ ಅಂದಮೇಲೆ ಈ ೧೭೦ ಲಕ್ಷ ಪೌಂಡುಗಳಿಗೆ ಅನುಮಾನಿಸುವ ಕಾರಣವಿಲ್ಲ." ಎಂದರು. ಕೊನೆಗೆ ಈ ರೇಲ್ವೆಗಳನ್ನು ಸರಕಾರಕ್ಕೆ ಒಪ್ಪಿಸಬೇಕೆಂಬ ಗೊತ್ತುವಳಿಯು ತೀರ್ಮಾನವಾಯಿತು.

ಶರಣ ಸಂದೇಶ ಪತ್ರಿಕೆಯು

ಶಿವರಾತ್ರಿಯ ನಿಮಿತ್ತವಾಗಿ ಮುಂದಿನ ವಾರ ಪ್ರಕಟವಾಗದೆ ಮಾರ್ಚ ತಿಂಗಳ ೨ ನೆಯ ತಾರೀಖಿನ ದಿನ ಪ್ರಕಟವಾಗುವುದು.

ಪದ್ಧತಿಯ ಪ್ರಕಾರ ಮಾಘ ಶುದ್ಧದಲ್ಲಿ
ವಿಶ್ರಾಂತಿ ಕೊಡದೆ ಈ ಪ್ರಕಾರ ಶಿವ
ರಾತ್ರಿಯ ಕಾಲಕ್ಕೆ ಕೊಡುವ
ಏರ್ಪಾಟು ಮಾಡಿದ್ದಾಗಿದೆ.

—ಮ್ಯಾನೇಜರ್.

ಯುರೋಪಖಂಡದಲ್ಲಿಯ ಸರ್ವಾಧಿಕಾರಿಗಳು.

ಅವರ ವಿಚಿತ್ರ ಗುಣಸ್ವಭಾವಗಳು!

ಸ್ಟಾಲಿನ್.

ಈತನು ಸೋವ್ಹಿಯೆಟ್ ರಶಿಯಾದ ಸರ್ವಾಧಿಕಾರಿ. ರಶಿಯವು ಸಮಾಜ ಸತ್ತಾವಾದದ ತತ್ವವನ್ನಂಗೀಕರಿಸಿ ಭರದಿಂದ ರಾಷ್ಟ್ರ ನಿರ್ಮಾಣ ಕಾರ್ಯವನ್ನು ಸಾಗಿಸಿರುವದು ಇವನ ನೇತೃತ್ವದಲ್ಲಿಯೇ ಸರಿ. ಇಂದು ಈತನ ಕೈಯಲ್ಲಿ ಘನತರವಾದ ಹೊಣೆಗಾರಿಕೆಯಿದೆ. ಒಂದು ಹೊಸ ಸಿದ್ಧಾಂತವನ್ನು ಈತನು ಜಯಶೀಲವನ್ನಾಗಿ ಮಾಡಿ ತೋರಿಸಬೇಕಾಗಿದೆ. ಕೋಟ್ಯಂತರ ಜನಗಳ ಜೀವನವು ಈತನ ಮೇಲೆ ಅವಲಂಬಿಸಿದೆ.

ಸ್ಟಾಲಿನ್‌ನಿಗೆ ಶಿರವುಳ್ಳ ಪರ್ವತ (mountain with a head) ವೆಂದು ರೂಪಕವಾಗಿ ಹೇಳುವರು. ಇದರಿಂದ ಇವನ ಸ್ಥಿರತೆ, ಗಾಂಭೀರ್ಯ, ಅಗಾಧತೆಗಳು ವ್ಯಕ್ತವಾಗುತ್ತವೆ. ಆದರೆ ಇವನ ಪ್ರತಿತಿಂಗಳ ವೇತನವೆಷ್ಟು? ೮೫ ರೂಪಾಯಿ ಮಾತ್ರ.

ಈತನ ಸ್ವಭಾವವು ವಿನಯಶೀಲವಾದದ್ದು; ಸ್ವಲ್ಪ ಹಾಸ್ಯದ ಮುದ್ರೆ. ಮೂರು ಕೋಣೆಗಳಿರುವ ಮನೆಯಲ್ಲಿ ಈತನ ವಾಸ. ಓದುವ ಅಭಿರುಚಿ ಹೆಚ್ಚು. ಯಾವಾಗಲೂ ಬಾಯಿಯಲ್ಲಿ ಚಿಲಿಮೆ. ಸ್ವಚ್ಛವಾದ ಆಹಾರ, ಹಳೇ ಸೆರೆಯ ಮೇಲೆ ಬಲು ಪ್ರೀತಿ ಆಗಾಗ್ಗೆ ಸಿನೇಮಾ ನೋಡಲು ಹೋಗುವನು.

ಮುಸೋಲಿನಿ.

ಇದೊಂದು ಕಬ್ಬಿಣದ ಗಂಡು ಗೊಂಬೆ. ಉಕ್ಕಿನ ನರಗಳುಳ್ಳ ದೇಹಯಷ್ಟಿ. ತೆಳ್ಳನ್ನ ಹೆಂಗಸರನ್ನು ಕಂಡರಾಗದು. ಮುಪ್ಪಿನವರನ್ನು ಸೇರಸು. ಧನವಂತರನ್ನೂ, ಬೆಕ್ಕುಗಳನ್ನೂ, ವಿಪುಲ ಧನವನ್ನೂ ಈತನು ಯಾವ ಕಾಲಕ್ಕೂ ಸೇರನು. ಇಟಲಿಯ ರಾಜಧಾನಿ ರೋಮ ನಗರದ ಮೇಲೆ ಈತನಿಗೆ ಬಲು ಪ್ರೀತಿ. ಮಗಳಾದ ಎಡ್ಡಾ ಇವಳು ಇವನಿಗೆ ಬಲು ಮುದ್ದು. ಈತನ ವಿರುದ್ಧವಾಗಿ ಮಾತನಾಡುವದು ಯಾರ ಧೈರ್ಯವಾಗದಿದ್ದರೂ ಇವನ ಮುದ್ದು ಮಗಳು ಮಾತ್ರ ನಿರ್ಭಯದಿಂದ ಮಾತಾಡುವಳು. ಒಕ್ಕಲಿಗರ ಮೇಲೆ ಈತನ ಪ್ರೇಮ ಬಹಳ. ಹಾಗೆಯೇ ಪುಸ್ತಕಗಳನ್ನು ಕಂಡರೂ ಬಲು ಹಿಗ್ಗು.

ಮುಸೋಲಿನಿಯು ಪರಮ ಆಸ್ತಿಕನು. ಕಟ್ಟಾ ಸನಾತನಿ ಎಂದರೂ ಅಡ್ಡಿಯಿಲ್ಲ. ದಿನಾಲು ಈಶ ಪ್ರಾರ್ಥನೆ ಮಾಡುತ್ತಾನೆ. ಹಣ್ಣು ಇವನ ಮುಖ್ಯ ಆಹಾರ. ಮುಂಜಾನೆ ಎದ್ದ ಕೂಡಲೆ ಹಣ್ಣು ಸೇವಿಸುವನು. ಮಧ್ಯಾಹ್ನದ ಊಟಕ್ಕೆ ಹಣ್ಣು ಮತ್ತು ಸಾರು ಬೇಕು. ರಾತ್ರಿಯಲ್ಲೂ ಹಣ್ಣನ್ನು ಮಾತ್ರ ತೆಗೆದುಕೊಳ್ಳುವನು.

ವಿಮಾನವನ್ನು ಕಂಡರೆ ಈತನಿಗೆ ಬಲು ಉತ್ಸಾಹ. ಶೀಘ್ರಗತಿಯುಳ್ಳ ಯಾವುದನ್ನು ಕಂಡರೂ ಈತನಿಗೆ ಬಲು ಹರ್ಷ. ಈತನ ಮಾಸಿಕ ವೇತನ ೧೫೦ ಪೌಂಡು.

ಹಿಟ್ಲರ್.

ಜರ್ಮನಿಯ ಸೂತ್ರಧಾರಕ. ಬಲೋಪಾಸಕನಾದರೂ ಸ್ವತಃ ಶಾರೀರಕ ಬಲವುಳ್ಳವನಾಗಿರುವದಿಲ್ಲ. ವ್ಯಾಯಾಮದಲ್ಲಿಯೂ ಇವನಿಗೆ ಆಸಕ್ತಿಯಿಲ್ಲ. ಕಳೆದ ಒಂದು ವರ್ಷದಲ್ಲಿ ಈತನ ತೂಕದಲ್ಲಿ ೧೨ ಪೌಂಡು ಹೆಚ್ಚಾಗಿದೆ.

ಕಟ್ಟಾ ಶಾಕಾಹಾರಿ. ಮದ್ಯ ಮಾಂಸಗಳಾಗಲಿ ಗಾಂಜ ತಂಬಾಕಗಳಾಗಲಿ ಈತನಿಗೆ ಎಂದೂ ಸೇರುವದಿಲ್ಲ. ಹೆಂಗಸರಲ್ಲಿ, ಪುಸ್ತಕಗಳಲ್ಲಿ ಇಲ್ಲವೆ ಆಹಾರ, ದ್ರವ್ಯಗಳಲ್ಲಿ ಇವನಿಗೆ ಎಂದೂ ಆಸಕ್ತಿಯಿಲ್ಲ. ಬಟ್ಟೆಗಳ ಮೇಲೂ ಈತನ ಪ್ರೇಮವಿಲ್ಲ. ೧೯೩೪ನೆಯ ಇಸ್ವಿಯ ಜೂನ ತಿಂಗಳಲ್ಲಿ ಸೀ. ಮುಸೋಲಿನಿಯನ್ನು ಕಾಣುವದಕ್ಕೆ ಹೋದಾಗ ಮಾತ್ರ ಈತನು ಒಂದು ಮಳೆಗೆ ತೊಯ್ಯದ ಹೊಸ ಕೋಟನ್ನು ಹೊಲಿಸಿದ್ದನು.

ಇವನ ಸಲಿಗೆಯ ಮಿತ್ರರೆಂಬವರು ಯಾರೂ ಇಲ್ಲ. ಗಾಯನಕ್ಕೆ ಮಾತ್ರ ಬಹಳ ಮೆಚ್ಚುತ್ತಾನೆ.

ಕೇಮಾಲ ಪಾಶಾ.

ಈತನ ಬಾಲ್ಯದ ಹೆಸರು ಮುಸ್ತಫಾ ಕೇಮಾಲ ಎಂದು. ಈತನ ವರ್ಗದಲ್ಲಿ ಮುಸ್ತಫಾ ಎಂಬ ಹೆಸರಿನ ೧೦-೧೨ ಹುಡುಗರಿದ್ದರಂತೆ. ಆದುದರಿಂದ ಈತನ ಶಿಕ್ಷಕರು ಈತನಿಗೆ ಕೇಮಾಲ ಎಂದು ಹೊಸದಾಗಿ ಜೋಡಿಸಿದರು. "ಕೇಮಾಲ" ಎಂದರೆ ತುರ್ಕಿ ಭಾಷೆಯಲ್ಲಿ ಸಂಪೂರ್ಣ ಎಂದಾಗುತ್ತದೆ. ಹೆಸರಿಗೆ ತಕ್ಕಂತೆ ಈತನು ಸಂಪೂರ್ಣ ಸುಧಾರಕನಾಗಿದ್ದಾನೆ. ತುರ್ಕರು ಹಾಕಿಕೊಳ್ಳುತ್ತಿದ್ದ "ಫೆಝ್" (ಗೊಂಡೆಯಟೊಪ್ಪಿಗೆ) ಟೊಪ್ಪಿಗೆ ಧರಿಸುವದನ್ನು ಬಿಡಿಸಿದನು. ಹೆಣ್ಣುಮಕ್ಕಳನ್ನು ಬುರಕಿಯಲ್ಲಿ ಸುತ್ತಿಡುವದನ್ನು ನಿಲ್ಲಿಸಿಬಿಟ್ಟನು. ಅನೇಕ ಜನ ಹೆಂಗಸರನ್ನು ಒಬ್ಬನೇ ಪುರುಷನು ಲಗ್ನವಾಗುವದನ್ನು ಬಂದ್ಮಾಡಿದನು. ಮಾಟತಂತ್ರಗಳನ್ನು, ಧಾರ್ಮಿಕ ಮೂಢಾಚಾರಗಳನ್ನು ಓಡಿಸಿಬಿಟ್ಟನು. ಇದಕ್ಕಾಗಿ ಇವನು ೭ ಸಾರೆ ತನ್ನ ಹೆಸರನ್ನು ಬದಲಾಯಿಸಿದ್ದಾನೆ. ಆದರೆ ಇವನು ಬೆಕ್ಕಿಗೆ ಬಹಳ ಹೆದರುತ್ತಾನೆ. ಮಿತಿಮೀರಿ ಸೆರೆ ಕುಡಿಯುತ್ತಾನೆ. ಇವನೂ ಪತ್ನಿಯನ್ನು ಬಿಟ್ಟುಕೊಟ್ಟು ಒಬ್ಬನೇ ವಾಸಿಸುತ್ತಿರುವನು.

ಗೋರಿಂಗ.

ಭೀಮಸೇನನಷ್ಟು ಬಲಶಾಲಿ. ದೀರ್ಘವಾದ ಕಾಯ. ಸಿಟ್ಟಂತೂ ವಿಪರೀತ. ಆದರೂ ಈ ಶೂರ ಜರ್ಮನ್ ಸೇನಾಪತಿಯು ಹಿಟ್ಲರನಿಗೆ ಹೆದರುತ್ತಾನೆ. ಇವನ ವಾಸ ಸ್ಥಳದಲ್ಲಿ ಎಲ್ಲಿ ನೋಡಿದಡಲ್ಲಿ ಹಿಟ್ಲರನ ಅರ್ಧ ಪ್ರತಿಮೆಗಳು ಕಂಡುಬರುತ್ತವೆ. ಕಳೆದ ವರ್ಷ ಈತನು ಒಬ್ಬ ಸಿನೇಮಾ ನಟಿಯನ್ನು ಲಗ್ನವಾದನು. ಆಗ್ಗೆ ೮೦ ಸಾವಿರ ಪೌಂಡುಗಳ ಬೆಲೆಯ ವಿವಾಹದ ಆಹೇರುಗಳು ಇವನಿಗೆ ಮಾಡಲ್ಪಟ್ಟವಂತೆ.

ಕಲ್ಲು ತೇಲುತ್ತವೆ!

ನಾಗಪುರದ ಶ್ರೀ ಬಿ. ಪಿ. ದೇಶಪಾಂಡೆ ಇವರು ಲಂಡನ್ನಿನ ಬ್ರಿಟಿಶ್ ಮ್ಯೂಜಿಯಮಕ್ಕೆ (ವಸ್ತು ಸಂಗ್ರಹಾಲಯ) ತೇಲಾಡುವ ಕಲ್ಲುಗಳನ್ನು ಕಳಿಸಿದ್ದಾರೆ. ಅವು ಅವರಿಗೆ ಯವತಮಾಳ ಜಿಲ್ಲೆಯಲ್ಲಿಯ ತಾಂಬಗಾಂವ ಎಂಬಲ್ಲಿ ದೊರೆತವಂತೆ. ಅವರಿಗೆ ದೊರೆತ ಕಲ್ಲು ಛಿದ್ರಗಳುಳ್ಳ ಇಟ್ಟಂಗಿಯಂತೆ ಇರುತ್ತದೆ. ನೀರ ಮೇಲೆ ಅದು ಸಂಪೂರ್ಣವಾಗಿ ತೇಲುತ್ತದೆ. ನಾಗಪುರದ ವಸ್ತು ಸಂಗ್ರಹಾಲಯದ ಮೇಲ್ವಿಚಾರಕರು ಸಹ ಈ ಬಗೆಯ ತೇಲುವ ಕಲ್ಲು ದೊರೆತುದು ಇದೇ ಮೊದಲು ಎಂದು ಅಭಿಪ್ರಾಯಪಡುತ್ತಾರೆ. ಏಕೆಂದರೆ ಇಲ್ಲಿಯ ವರೆಗೆ ನೀರಿನಲ್ಲಿ ಯಾವ ಜಾತಿಯ ಕಲ್ಲಾದರೂ ತೇಲುವದಿಲ್ಲವೆಂಬುದೇ ಅವರ ಗ್ರಹಿಕೆಯಾಗಿದ್ದಿತು.

ಮಹಿಳಾ ಪ್ರಪಂಚ.

ಸೀತೆಯು ಸಲೀಮಾ ಆದದ್ದು.

ದಿಲ್ಲಿಯ 'ಹಿಂದು' ಪತ್ರಿಕೆಯಲ್ಲಿ ಮಧ್ಯಪ್ರಾಂತದ ಶ್ರೀ ಟಿ. ಎಸ್. ಕಾಶಿವೆ ಇವರು ಒಂದು ಲೇಖ ಬರೆದಿದ್ದಾರೆ. ಅದರ ಮುಖ್ಯಾಂಶವು ಈ ಪ್ರಕಾರವಾಗಿದೆ—

" ನಮ್ಮ ಪ್ರಾಂತದಲ್ಲಿ ಹಿಂದು ಸ್ತ್ರೀಯರು ಪರಧರ್ಮ ಸೇರುವದು ಹೆಚ್ಚಾಗಹತ್ತಿದೆ. ಪ್ರತಿ ತಿಂಗಳ ೫೦ ಕ್ಕಿಂತಲೂ ಹೆಚ್ಚು ಜನರು ಮುಸಲ್ಮಾನ ಇಲ್ಲವೆ ಕ್ರಿಸ್ತೀಯರ ಧರ್ಮವನ್ನನುಸರಿಸುತ್ತಾರೆ.. ಈ ಕೆಳಗಿನ ಒಂದು ಉದಾಹರಣೆಯಿಂದ ಈ ಧರ್ಮಾಂತರದ ಕಾರಣವು ಸ್ಪಷ್ಟವಾಗುವದು.

ಒಂದು ದಿನ ನನ್ನ ಕಡೆಗೆ ಒಬ್ಬ ಸ್ವಯಂಸೇವಕನು ಒಬ್ಬ ಹೆಣ್ಣುಮಗಳನ್ನು ಕರೆದುಕೊಂಡು ಬಂದನು. ಅವಳು ಒತ್ತಾಯದಿಂದ ಮುಸಲ್ಮಾನಳಾಗಿ ಮಾಡಲ್ಪಟ್ಟಿದ್ದು ಈಗ ಪುನಃ ಹಿಂದು ಧರ್ಮಕ್ಕೆ ಬರಲು ಇಚ್ಛಿಸುತ್ತಿರುವಳೆಂದು ಹೇಳಿದನು. ನಾನು ಅವಳನ್ನು ವಿಚಾರಿಸಲು ಅವಳು ತನ್ನ ಪೂರ್ವೋತ್ತರವನ್ನು ಈ ಪ್ರಕಾರ ಹೇಳಿದಳು —

'ನನ್ನ ಹೆಸರು ಸೀತಾ. ಒಂದು ಉಚ್ಚ ಬ್ರಾಹ್ಮಣ ಕುಟುಂಬದಲ್ಲಿ ನಾನು ಜನಿಸಿದೆನು. ನಾನು ಚಿಕ್ಕವಳಿರುವಾಗಲೇ ನನ್ನ ತಂದೆ ತೀರಿಕೊಂಡನು. ನನ್ನ ತಾಯಿ ಬಡಿವೆಯಾದರೂ ನನ್ನ ಲಗ್ನ ಮಾಡಿದಳು. ಆದರೆ ಲಗ್ನವಾದ ನಾಲ್ಕಾರು ತಿಂಗಳಲ್ಲೇ ನನ್ನ ಪತಿಯು ತೀರಿಕೊಂಡನು. ವಿಧವೆಯಾದ ನಾನು ಪುನಃ ನನ್ನ ತಾಯಿಯ ಹತ್ತಿರ ಬಂದು ಇರಹತ್ತಿದೆನು.

ಆದರೆ ಬಡತನವೆಂಬುದು ಬಹಳ ಕೆಟ್ಟದು. ನಮ್ಮ ತಾಯಿಯು ನಮ್ಮ ಉಪಜೀವನಕ್ಕಾಗಿ ಬಹಳ ಕಷ್ಟಪಡುತ್ತಿದ್ದಳು. ಹೊಟ್ಟೆಯ ಪಾಡಿಗಾಗಿ ಕೊನೆಗೆ ನಾನು ದುರ್ಮಾರ್ಗಕ್ಕೆ ಬಿದ್ದೆನು. ಬರಬರುತ್ತ ನಾನು ಜಬಲಪುರದಲ್ಲಿ ಒಬ್ಬ ಸರಕಾರಿ ನೌಕರನ ಮನೆಯಲ್ಲಿ ಕೆಲಸಕ್ಕಾಗಿ ನಿಂತೆನು. ಆಗ ನನಗೆ ಭಯಂಕರ ಹುಣ್ಣು ಹುರುಕುಗಳಾದುದರಿಂದ ಅವರು ನನ್ನನ್ನು ಹೊರಗೆ ಹಾಕಿದರು. ಆಗ ಒಬ್ಬ ಯಜ್ಞೋಪವೀತಧಾರಿಯಾದ ಮನುಷ್ಯನು ನನಗೆ ಆಶ್ರಯಕೊಟ್ಟು ದಿನಾಲು ಔಷಧ ಕೊಡಿಸಿ ಹುಣ್ಣುಗಳನ್ನು ಗುಣಪಡಿಸಿದನು. ಆದರೆ ಅವನು ನಿಜವಾಗಿ ಮುಸಲ್ಮಾನನಾಗಿದ್ದನು. ಹಿಂದುಗಳೆಲ್ಲರೂ ನನ್ನನ್ನು ಮುಂದಕ್ಕೆ ಕರೆಯಲಿಲ್ಲ. ಆಮೇಲೆ ಒಬ್ಬ ಮುಸಲ್ಮಾನ ಮೋಟರ ಕ್ಲೀನರನು ನನ್ನನ್ನು ಲಗ್ನಮಾಡಿಕೊಂಡನು. ಈಗ ನಾನು ಪಶ್ಚಾತ್ತಾಪಪಟ್ಟು ನೀವು ಶುದ್ಧೀಕರಿಸಿ ಹಿಂದು ಧರ್ಮದಲ್ಲಿ ತೆಗೆದುಕೊಳ್ಳುವಿರೆಂದು ಕೇಳಿ ನಿಮ್ಮ ಕಡೆಗೆ ಬಂದಿದ್ದೇನೆ.'

ಆಗ ನಾನು ಸ್ಥಳೀಯ ಆರ್ಯ ಸಮಾಜದಲ್ಲಿ ಏಕೆ ಶುದ್ಧೀ ಹೊಂದುವದಿಲ್ಲೆಂದು ವಿಚಾರಿಸಲು ಅವಳು— 'ಅದು ನನಗೆ ಸರಿಕಾಣಲಿಲ್ಲ. ನಾನು ಪುನಃ ನಮ್ಮ ತಾಯಿಯ ಹತ್ತಿರವೇ ಇರಬೇಕೆಂದು ಇಚ್ಛಿಸುತ್ತೇನೆ. ಅಲ್ಲಿ ನನ್ನ ಒಬ್ಬ ಮಗಳೂ ಇರುತ್ತಾಳೆ. ಆದುದರಿಂದ ಹೇಗಾದರೂ ನನ್ನನ್ನು ಅಲ್ಲಿಗೆ ಕಳಿಸಿರಿ.'

ಇಂಥ ಅನೇಕ ಕಷ್ಟಗಳಿಗೀಡಾಗಿ ಹಿಂದು ತರುಣಿಯರು ಪರಧರ್ಮದ ಪಾಲಾಗುತ್ತಿದ್ದಾರೆ. ಇಂಥ ಅನಿಷ್ಟ ಸಂಗತಿಗಳಿಗೆ ತೀವ್ರವೇ ಯೋಗ್ಯ ವ್ಯವಸ್ಥೆಯಾಗದಿದ್ದರೆ "ಜೈರಾಮ" "ಜೈಗೋಪಾಲ" ಎಂಬುದಕ್ಕೆ ಪ್ರತಿಯಾಗಿ "ಕ್ಷೈರಾಮ" "ಕ್ಷೈಗೋಪಾಲ" ಎಂಬುದಾಗಬಹುದು." ಹಿಂದುಗಳು ತೀವ್ರವೇ ವಿಧವೆಯರಿಗಾಗಿ ತಕ್ಕ ವ್ಯವಸ್ಥೆಯನ್ನು ಮಾಡುವದು ಅವಶ್ಯವಲ್ಲವೆ ?

ಅ. ಭಾ. ಮಹಿಲಾ ಪರಿಷತ್ತು.

ಮಹಿಲಾ ಪರಿಷತ್ತಿನ ಈ ಸಾರೆಯ ಅಧಿವೇಶನವು ತ್ರಿವೇಂದ್ರಮದಲ್ಲಿ ತ್ರಾವಣಕೋರದ ಮಹಾರಾಣಿಯವರಾದ ಶ್ರೀ ಸೌ. ಸೇತು ಪಾರ್ವತಿಬಾಯಿಯವರ ಅಧ್ಯಕ್ಷತೆಯಲ್ಲಿ ಒಳ್ಳೇ ಯಶಸ್ವಿಯಾಗಿ ಜರುಗಿತು. ಸ್ತ್ರೀಯರ ಹಿತದ ಬಗ್ಗೆ ಅನೇಕ ಗೊತ್ತುವಳಿಗಳಾದವು. ಸಂತತಿ ಸಂಯಮನದ ಸಾಧಕ ಬಾಧಕತೆಯ ಬಗ್ಗೆ ಒಳ್ಳೇ ಕಳಕಳಿಯ ಭಾಷಣಗಳಾದವು. ಪುಣೆಯ ಶ್ರೀ ಮಾಲಿನೀಬಾಯಿ ಸುಕಥನಕರ ಇವರು ತಂದ ಈ ಪ್ರಕಾರದ ಗೊತ್ತುವಳಿಯು ತೀರ್ಮಾನವಾದುದು ಪ್ರಾಮುಖ್ಯವಾಗಿದ್ದಿತು.

ಹೊಸ ರಾಜ್ಯ ಘಟನೆಯಲ್ಲಿ ಸ್ತ್ರೀಯರಿಗೆ ಪತ್ನೀತ್ವದ ಮೇಲಿಂದ (wifehood qualification) ಮತದಾನ ಕೊಡಬೇಕೆಂಬ ಅಂಶವನ್ನು ನಿರಾಕರಿಸಿ ಪತ್ನೀತ್ವಕ್ಕೆ ಪ್ರತಿಯಾಗಿ ಶೈಕ್ಷಣಿಕ ಯೋಗ್ಯತೆಯ ಮೇಲಿಂದ ಸ್ತ್ರೀಯರಿಗೆ ಮತದಾನ ಸಿಗಬೇಕೆಂಬ ಗೊತ್ತುವಳಿಯನ್ನು ಶ್ರೀ ಮಾಲಿನೀ ಬಾಯಿಯವರು ಮಂಡಿಸಿದರು. ಇಂಥವರೊಬ್ಬರ ಪತ್ನಿಯೆಂದು ಹೇಳಿ ಸ್ತ್ರೀಯು ಮತವನ್ನು ಕೊಡುವದಕ್ಕಿಂತ ತನ್ನ ಶಿಕ್ಷಣದ ಯೋಗ್ಯತೆಯ ಮೇಲಿಂದಲೇ ಮತವನ್ನು ಕೊಡುವದಕ್ಕಾಗಿ ರಾಜಕೀಯ ಸುಧಾರಣೆಯಲ್ಲಿ ತಿದ್ದುಪಡಿಯಾಗಬೇಕೆಂದು ಪ್ರತಿಪಾದಿಸಿದರು. ಅವರ ಗೊತ್ತುವಳಿಯು ಬಹುಮತದಿಂದ ತೀರ್ಮಾನವಾಯಿತು.

ತ್ರಾವಣಕೋರದಲ್ಲಿ ಸ್ತ್ರೀ ಶಿಕ್ಷಣದ ಅಭಿವೃದ್ಧಿ.

ತ್ರಾವಣಕೋರ ಮತ್ತು ಕೋಚೀನ ಸಂಸ್ಥಾನಗಳಲ್ಲಿ ಪ್ರವಾಸ ಮಾಡಿ ಪ್ರತ್ಯಕ್ಷ ನೋಡಿದುದನ್ನು ಮಾರ್ಗರೆಟ್ ಇ ಕಝಿನ್ಸ ಇವರು ಈ ಪ್ರಕಾರವಾಗಿ ಬರೆದಿರುವರು. ಈ ಸಂಸ್ಥಾನಗಳಲ್ಲಿ ನೂರಕ್ಕೆ ೭೫ ರಷ್ಟು ಸುಶಿಕ್ಷಿತ ಸ್ತ್ರೀಯರು ದೊರೆಯುವರು. ಸಂಸ್ಥಾನದಲ್ಲಿ ಮೂರು ಮೈಲುಗಳಿಗೆ ಒಂದರಂತೆ ಶಾಲೆಗಳಿರುವವು. ಮೊನ್ನೆ ಮೊನ್ನೆ ತ್ರಿವೇಂದ್ರಮದಲ್ಲಿ ನೆರೆದ ಅ. ಭಾ. ಮಹಿಲಾ ಪರಿಷತ್ತಿನಲ್ಲಿ ಬಹುತರವಾಗಿ ಎಲ್ಲ ಸ್ತ್ರೀ ಸದಸ್ಯರಿಗೆ ಇಂಗ್ಲೀಷ ಬರುತ್ತಿದ್ದಿತು. ಯೆರ್ನಾಕುಲಮ್‌ದಲ್ಲಿಯ ಶಾಲೆಯಲ್ಲಿ ಸಾಧಾರಣ ೮೦ ಜನ ವಿದ್ಯಾರ್ಥಿನಿಯರು ಹಿಂದಿ ಭಾಷೆಯನ್ನು ಕಲಿಯುತ್ತಿದ್ದಾರೆ. ಕಾಲೇಜಿನಲ್ಲಿ ಅಭ್ಯಾಸ ಮಾಡುವ ೪ ಜನ ವಿದ್ಯಾರ್ಥಿನಿಯರು ಬಿ. ಎ. ಪರೀಕ್ಷೆಯಲ್ಲಿ ಹಿಂದಿಯನ್ನೇ ಎರಡನೆಯ ವಿಷಯವನ್ನಾಗಿ ತೆಗೆದುಕೊಂಡು ಉತ್ತೀರ್ಣರಾಗಿರುವರು.

ಈ ಸಂಸ್ಥಾನಗಳಲ್ಲಿ ಸ್ತ್ರೀಯರಿಗೆ ಮತದಾನದ ಅಧಿಕಾರವಿದೆ. ಮತ್ತು ಅವರ ದೇಶದ ಪದ್ಧತಿಯಂತೆ ಸ್ತ್ರೀಯರಿಗೂ ತಮ್ಮ ತಮ್ಮ ಬಂಧುಗಳ ಸಂಗಡ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ದೊರೆಯುತ್ತದೆ. ಆದ್ದರಿಂದ ಅಲ್ಲಿಯ ಸ್ತ್ರೀಯರಲ್ಲಿ ವಿಶೇಷವಾದ ಜಾಗೃತಿಯುಂಟಾಗಿರುವದು.

ಗ್ರಾಮ ಸುಧಾರಣೆ.

ಮುಂದಿನ ವರ್ಷದ ಆಯವ್ಯಯದ ಲೆಕ್ಕವಾದ ಮೇಲೆ ಸರಕಾರದವರು ಹಳ್ಳಿಗಳ ಸುಧಾರಣೆಗಾಗಿ ಪುನಃ ಒಂದು ಕೋಟಿ ರೂ. ಇಲ್ಲವೆ ಅದಕ್ಕಿಂತಲೂ ಹೆಚ್ಚಾಗಿ ಧನವನ್ನು ಮಂಜೂರ ಮಾಡುವರೆಂದು ತಿಳಿಯುತ್ತದೆ. ಇದರಿಂದ ಗ್ರಾಮ ಸುಧಾರಣೆಯ ಕಾರ್ಯವು ಇದಕ್ಕಿಂತಲೂ ವಿಶೇಷವಾಗಿ ಬಲಗೊಳ್ಳುವದೆಂದು ಊಹಿಸಲಾಗಿದೆ.

ಆದರೆ ಸರಕಾರದವರು ಮಾಡಬೇಕೆಂದಿರುವ ಗ್ರಾಮ ಸುಧಾರಣೆಯ ಪದ್ಧತಿಯು ಯಾವ ಪ್ರಕಾರದ್ದಿರುತ್ತದೆ? ಅವರು ಮೊದಲು ತಾಲೂಕಿಗೊಂದು ಮಾದರಿಯ ಹಳ್ಳಿಯನ್ನು ನಿರ್ಮಿಸಬೇಕೆಂದು ಇಚ್ಛಿಸುತ್ತಾರೆ. ಗ್ರಾಮದಲ್ಲೆಲ್ಲ ಸ್ವಚ್ಛವಾದ ಸುಂದರವಾದ ಬೀದಿಗಳಾಗಬೇಕು. ಮನೆಯ ಮುಂದಿರುವ ಗೊಬ್ಬರದ ರಾಶಿಗಳೆಲ್ಲ ಊರಹೊರಗೆ ದೂರದಲ್ಲಿ ಸಾಲಾಗಿರಬೇಕು. ಇದು ಸ್ವಚ್ಛತೆಯಾಯಿತು. ಆದರೆ ಹಳ್ಳಿಗರಿಗೆ ಇದರಿಂದ ಹೇಳಿಕೊಳ್ಳತಕ್ಕಂಥ ಲಾಭವೇನು ಆಗುವದೇ? ಅಸ್ವಚ್ಛತೆಗೆ ಮುಖ್ಯ ಕಾರಣವೆಂದರೆ ಸರಿಯಾಗಿ ನೀರಿನ ಪೂರೈಕೆ ಆಗದಿರುವದು. ಒಂದೊಂದು ತಾಲೂಕಿನಲ್ಲಿ ನೀರಿನ ಬರವೇ ಬಿದ್ದಿರುತ್ತದೆ. ಅಂಥಲ್ಲಿ ಸ್ವಚ್ಛವಾದ ನೀರು ದೊರೆಯುವಂತೆ ಮಾಡುವದು ಮೊದಲನೆಯ ಕಾರ್ಯವಲ್ಲವೆ? ಇನ್ನು ಹಳ್ಳಿಗರಿಗೆ ಒಂದು ಮುಖ್ಯ ಉದ್ಯೋಗವೆಂದರೆ ಕೋಳಿಗಳನ್ನು ಸಾಕಲು (Poultry System) ಸೂಚಿಸಲಾಗುತ್ತದೆ. ಇಂಥ ಉದ್ಯೋಗಗಳು ಹಳ್ಳಿಗರಿಗೆ ಸ್ವಾಭಾವಿಕವಾದವುಗಳಲ್ಲ. ಕರ್ನಾಟಕದಲ್ಲಿಯ ಒಕ್ಕಲಿಗರಿಗಂತೂ ಇದು ತೀರಾ ಅಪರಿಚಿತವಾದದ್ದು. ಉಳಿದ ಪ್ರಾಂತಗಳಲ್ಲಿ ಕೋಳಿಗಳು ಹಳ್ಳಿಗರಿಗೆ ಯೋಗ್ಯ ಲಾಭವನ್ನು ಕೊಡಬಹುದು. ಕೋಳಿಯ ತತ್ತಿಗಳು ಅವರಿಗೆ ಸಮಯ ಬಂದಾಗ ಅನ್ನವಾಗಿ ಪರಿಣಮಿಸಬಹುದು. ಆದರೆ ಆ ಪದ್ಧತಿಯು ಕರ್ನಾಟಕದಲ್ಲಿ ನೆಲೆಗೊಳ್ಳಲು ಶಕ್ಯವಿಲ್ಲ. ಆಯಾ ಪ್ರಾಂತದ ಆಯಾ ಜನರ ಮನೋವೃತ್ತಿಗಳ ಮೇಲಿಂದಲೇ ಸುಧಾರಣೆ ಮಾಡುವದು ಯುಕ್ತವು.

ಸರಕಾರದವರು ಹಳ್ಳಿಗರಿಗೆ ನಿಜವಾಗಿ ಹಿತವನ್ನು ಮಾಡಬೇಕೆಂದಿದ್ದರೆ ಅವರು ಈ ವ್ಯವಸ್ಥೆಯನ್ನು ಮೊದಲು ಮಾಡಬೇಕು. ಆದಿಜನ ಮೊದಲ್ಗೊಂಡು ಎಲ್ಲರಿಗೂ ಸ್ವಚ್ಛ ನೀರಿನ ಅನುಕೂಲತೆ ಮಾಡಿಕೊಡಬೇಕು. ಅನಂತರ ಹಳ್ಳಿಯ ಜಗಳಗಳನ್ನು ಶಕ್ಯವಿದ್ದಷ್ಟು ಅಲ್ಪವೆಚ್ಚದಲ್ಲಿಯೇ ತೀರಿಸಿಬಿಡುವದು. ಹಳ್ಳಿಗರು ಪರಸ್ಪರ ಕಲಹದಿಂದ ಭಯಂಕರ ಸಾಲಮಾಡಿ ಎಷ್ಟು ಅಧೋಗತಿಗೀಡಾಗಿದ್ದಾರೆಯೋ ಅಷ್ಟು ಯಾವುದರಿಂದಲೂ ಆಗಿಲ್ಲ.

ಇನ್ನು ಗಾಂಧೀಜಿಯವರ ಗ್ರಾಮೋದ್ಯೋಗ. ಇವರಲ್ಲಿ ದ್ರವ್ಯವಿರದಿದ್ದರೂ ಕಾರ್ಯಕರ್ತರಾದರೂ ಇದ್ದಾರಲ್ಲವೆ? ಆದರೆ ಇವರು ಮಾಡುವ ಕಾರ್ಯವೇನು? ಹಳ್ಳಿಗರಿಗೆ ಸ್ವಚ್ಛತೆಯಿಂದಿರಲು ಉಪದೇಶ ಮಾಡಿದ ಮಾತ್ರಕ್ಕೆ ಹಳ್ಳಿಗರ ಉದ್ಧಾರವಾಗಲಿಲ್ಲ. ಅಥವಾ ಮಲವಿಸರ್ಜನೆ ಮಾಡಿ ಮೇಲೆ ಮಣ್ಣುಮುಚ್ಚಿ ಬರುವ ಪರಿಪಾಠ ಹಾಕಿದರೆ ಎಂಥ ಘನತರವಾದ ಕಾರ್ಯ ಮಾಡಿದಂತಾಯಿತು? ಇವರು ಹಳ್ಳಿಗರಿಗೆ ಉದ್ಯೋಗದ ವಿಷಯದಲ್ಲಿ ವಿಚಾರಕ್ರಾಂತಿಯನ್ನು ಮಾಡಬೇಕು. ಅನೇಕ ಹಳ್ಳಿಗರಿಗೆ ಈಗೀಗ ಒಕ್ಕಲತನ ಮುಂತಾದವುಗಳು ಕನಿಷ್ಠವೆಂದು ತೋರಹತ್ತಿವೆ. ಅವರಿಗೂ ಪೇಟೆಯಲ್ಲಿ ನಾಲ್ಕಾರು ರೂಪಾಯಿಗಳ ಯಾವುದೊಂದು ಉದ್ಯೋಗ ದೊರೆತರೆ ಹಳ್ಳಿಗೆ ಶರಣುಹೊಡೆಯಲಿಕ್ಕೆ ಸಹ ಅವರು ಸಿದ್ಧರಾಗುವರು. ಹಳ್ಳಿಗಳಲ್ಲಿ ಅಲ್ಪ ಸ್ವಲ್ಪ ಶಿಕ್ಷಣಪಡೆದವರು ಪೇಟೆಯಲ್ಲಿಯ ನೌಕರಿಯನ್ನೇ ಅಪೇಕ್ಷಿಸುತ್ತಾರೆ.

ಈ ವಿಪರೀತ ಕಲ್ಪನೆಯು ನಾಶವಾಗಬೇಕಾದರೆ ಸುಶಿಕ್ಷಿತರು ಅದರಲ್ಲಿಯೂ ಉಚ್ಚ ವರ್ಗದವರು ಹಳ್ಳಿಗಳಲ್ಲಿ ವಾಸಮಾಡಬೇಕು. ಮತ್ತು ಹಳ್ಳಿಗರು ಮಾಡುವಂಥ ಕಾರ್ಯಗಳನ್ನು ಸ್ವತಃ ತಾವು ಮಾಡಿತೋರಿಸಬೇಕು ಉಚ್ಚ ವರ್ಗದವರಿಗೆ ನೌಕರಿ ದೊರೆಯುವದಿಲ್ಲವೆಂದು ಈಗ ಕೋಲಾಹಲ ನಡೆದಿದೆಯಷ್ಟೆ. ಹಾಗಾದರೆ ಅವರು ಹಳ್ಳಿಗಳಿಗೆ ಬಂದು ಮಗ್ಗಗಳನ್ನೇಕೆ ಹಾಕಬಾರದು? ಅವರ ಸ್ತ್ರೀಯರು ರಾಟಿಯಿಂದ ನೂಲನ್ನೇಕೆ ತೆಗೆಯಬಾರದು? ಅಂದರೆ ಉದ್ಯೋಗದಲ್ಲಿ ಶ್ರೇಷ್ಠ ಕನಿಷ್ಠ ಎಂಬ ಭಾವನೆಯು ತಾನಾಗಿಯೇ ಹೋಗುವದಲ್ಲವೆ?

ಆದರೆ ಈ ಕಾರ್ಯವು ಅವರಿಗೆ ಬೇಡ. ಚಹಾದ ದುಷ್ಪರಿಣಾಮವನ್ನು ಕುರಿತು ಬೋಧೆ ಮಾಡುವ ಒಬ್ಬ ಪ್ರಚಾರಕನು, "ತಡೆಯಿರಿ; ಒಂದು ಕಪ್ಪು ಚಹಾ ಕುಡಿದು ಬಂದೆನೆಂದರೆ ಇದಕ್ಕೂ ಹೆಚ್ಚಿಗೆ ಹೇಳುವೆನು" ಎಂದು ಹೇಳುವ ಪರಿಯಂತೆ ಕೆಲವರು ಇತ್ತ ಹಳ್ಳಿಗಳ ಸೇವೆಯನ್ನೂ ಕೈಕೊಂಡಿರುತ್ತಾರೆ; ಇತ್ತ ತಾಲೂಕ ಬೋರ್ಡ, ಜಿಲ್ಹಾ ಬೋರ್ಡಗಳಲ್ಲಿ ಸದಸ್ಯರಾಗಲೂ ಓಡಾಡುತ್ತಾರೆ. ಇತ್ತ ರಾಷ್ಟ್ರದ ಅಭಿಮಾನಿಗಳು ಹೌದು; ಇತ್ತ ಖಾದಿಯ ನಿರಭಿಮಾನಿಗಳೂ ಹೌದು. ಇತ್ತ ಗ್ರಾಮೋದ್ಯೋಗ ಸುಧಾರಣೆ ಬಯಸುತ್ತಾರೆ; ಇತ್ತ ರಾಟಿ ಕುದ್ದಲಿಗಳನ್ನು ಹಿಡಿಯಲು ನಾಚುತ್ತಾರೆ. ಕೆಲವರಿಗಂತೂ ಅದು "ಶೂದ್ರ ಕರ್ಮ"ವೆಂದೇ ತೋರುತ್ತದೆ. ಇಂಥವರು ಹಳ್ಳಿಗಳಲ್ಲಿ ಹೇಗೆ ತಾನೆ ಆದರ್ಶಪ್ರಾಯರಾಗಿರಲು ಶಕ್ಯ?

ಆದುದರಿಂದ ಗ್ರಾಮೋದ್ಯೋಗ ಕಾರ್ಯಕರ್ತರು ಸ್ವತಃ ಹಳ್ಳಿಗಳಲ್ಲಿ ನಿಂತುಕೊಂಡು ದಿನದ ದುಡಿತದಿಂದಲೇ ಪ್ರಾಮಾಣಿಕವಾಗಿ ಹೇಗೆ ಹೊಟ್ಟೆ ತುಂಬಿಸಿಕೊಳ್ಳಲು ಶಕ್ಯವಿದೆಯೆಂಬುದನ್ನು ತೋರಿಸಿಕೊಡಬೇಕು. ಹಳ್ಳಿಗರ ಬೇನೆ ಬೇಸರಿಕೆಗಳಲ್ಲಿ ನೆರವಾಗಬೇಕು. ಅವರು ದೇವರ ಹೆಸರಿನಲ್ಲಿ ಗುರು ದೇವತೆಗಳ ಹೆಸರಿನಲ್ಲಿ ಲಗ್ನ ಮೊದಲಾದವುಗಳಲ್ಲಿ ಮೂಢನಂಬಿಕೆಯಿಂದ ವಿಪರೀತ ವೆಚ್ಚ ಮಾಡುವದನ್ನು ಬಿಡಿಸಬೇಕು. ಸ್ವಚ್ಛತೆ ಶಿಕ್ಷಣಗಳ ಮಹತ್ವ ತೋರಿಸಬೇಕು. ಸಾದಾತನದಲ್ಲಿಯೇ ಶ್ರೇಷ್ಠ ಜೀವನವನ್ನು ನಡೆಯಿಸಲು ಹೇಗೆ ಶಕ್ಯವಿದೆಯೆಂಬುದಕ್ಕೆ ಸ್ವಂತ ಜೀವನದಿಂದ ಮಾರ್ಗದರ್ಶಕರಾಗಬೇಕು. ರಾಷ್ಟ್ರೀಯತ್ವಕ್ಕೆ ವಿಘಾತಕವಾಗುವಂಥ ಧರ್ಮದ ಉಚ್ಚ ನೀಚ ಮೂಢನಂಬಿಕೆ, ನನ್ನ ದೇವರು ಹೆಚ್ಚು ನಿನ್ನ ದೇವರು ಕಡಿಮೆ ಎಂಬ ಬಡಿದಾಟ ಮೊದಲಾದವನ್ನು ಬಿಡಿಸಬೇಕು. ಪಟ್ಟಣದಲ್ಲಿರುವ ನಾನಾ ತರದ ವ್ಯಕ್ತಿಗಳು ತಮ್ಮ ಸ್ವಂತ ಹಿತಕ್ಕಾಗಿ ಹಳ್ಳಿಗರನ್ನು ಹೇಗೆ ಸುಲಿಯಲು ಬರುತ್ತಿರುವರೆಂಬುದನ್ನು ತೋರಿಸಿಕೊಡಬೇಕು. ಅಂದರೆ ಅದು ರಾಷ್ಟ್ರ ಸೇವೆ. ಅದು ಹಳ್ಳಿಗರ ಉದ್ಧಾರದ ಪ್ರಥಮ ಮೆಟ್ಟಲು. ಅಂಥ ಬುದ್ಧಿಯು ಗ್ರಾಮೋದ್ಯೋಗ ಕಾರ್ಯವಾಹಕರಲ್ಲಿ ಬರುವದೇ?

—ಕುರುಡರಿಗಾಗಿ ಲಂಡನ್ನಿನಲ್ಲಿ ಮೊಳೆಯ ಪುಸ್ತಕಗಳನ್ನು ಹಂಚುತ್ತಾರೆ. ಇವು ಸಾಧಾರಣ ಪ್ರತಿಯೊಂದು ೫ ಪೌಂಡು ಭಾರವಿರುತ್ತವೆ. ಇಂಥ ೩ ಟನ್ ಭಾರವಾದ ಪುಸ್ತಕಗಳನ್ನು ಪ್ರತಿದಿನವೂ ಕುರುಡರಿಗೆ ಓದಲಿಕ್ಕೆ ಕೊಡುತ್ತಾರೆ.

ಹಾ ! ದಿವ್ಯ ತೇಜೋರಾಶಿ ಅಡಗಿತು.

ಶ್ರೀಮನ್ನಿರಂಜನ ಪ್ರಭು ಶೂನ್ಯ ಸಿಂಹಾಸನ ಸಂಪಾದನ ಜಗದ್ಗುರು ಮಹಾಪೀಠ ಆದಿ ಸಂಸ್ಥಾನ ಹಾಗಲವಾಡಿ ಶಾಖಾ ಸಂಸ್ಥಾನ ವಂಟಮುರಿ ಏತದ್ದಿವ್ಯ ಪೀಠಾಲಂಕೃತ ಸ್ವಾತಂತ್ರ್ಯಾಧಿಕಾರಿ ಶ್ರೀಮನ್ನಿರಂಜನ ಸಿದ್ಧರಾಮೇಶ್ವರ ಸ್ವಾಮಿಗಳವರು ತಾ. ೪-೩-೩೬ ಮಂಗಳವಾರ ರಾತ್ರಿ ಸುಮಾರ ೧೧-೧೨ ಗಂಟೆಯ ಕಾಲದಲ್ಲಿ ತಮ್ಮ ಅವತಾರ ಲೀಲೆಯನ್ನು ಸಮಾಪ್ತಗೊಳಿಸಿ ಶ್ರೀ ಪರಶಿವ ಲಿಂಗದಲ್ಲಿ ತಾದಾತ್ಮ್ಯ ಪಡೆದರೆಂದು ತಿಳಿಸಲಿಕ್ಕೆ ಪರಮಾವಧಿ ದುಃಖವೆನಿಸುತ್ತದೆ. ಅಂತ್ಯ ಸಂಸ್ಕಾರವು ಮರುದಿನ ಒಳ್ಳೇ ವಿಜೃಂಭಣೆಯಿಂದ ಜರುಗಿತು. ಊರೊಳಗಿನ ಎಲ್ಲ ಜಾತಿಗಳವರೂ ಸುತ್ತುಮುತ್ತಲಿನ ಅನೇಕ ಗ್ರಾಮಗಳವರೂ ಕೊನೆಯ ದರ್ಶನಕ್ಕಾಗಿ ಬಹು ಉತ್ಸುಕತೆಯಿಂದ ನೆರೆದಿದ್ದರು. ನೋಟವು ದರ್ಶನೀಯವೂ ಹೃದಯ ದ್ರಾವಕವೂ ಆಗಿದ್ದಿತು.

ಈ ಸ್ವಾಮಿವರ್ಯರು ತಮ್ಮ ಸ್ವಾಮಿತ್ವದ ಅಲ್ಪಾವಕಾಶದೊಳಗೆ ಪ್ರಕಟಿಸಿದ ದಿವ್ಯ ತೇಜವನ್ನು ಅವರ ಸಂಕ್ಷಿಪ್ತ ಚರಿತ್ರೆಯೊಡನೆ ಕೆಳಗೆ ನಿವೇದಿಸುವೆನು. ಇದು ಪ್ರಸ್ತುತ ಪರಿಸ್ಥಿತಿಯಲ್ಲಿ "ಗುರು ಜಂಗಮ ವರ್ಗಕ್ಕೆ" ಬಗೆ ಬಗೆಯಿಂದ ಬೋಧಪ್ರದವಾಗಿರುವದು.

ಇವರ ಜನ್ಮವು ಹುಕ್ಕೇರಿ ತಾಲೂಕಿನೊಳಗಿನ ದಡ್ಡಿ ಗ್ರಾಮದಲ್ಲಿರುವ ಒಂದು ಬಡತನದ ಆದರೂ ಸುಶೀಲ ಸಂಪನ್ನವಾದ ಗುರುಸ್ಥಲದ ಮನೆತನದಲ್ಲಿ ಸನ್ನ ೧೯೦೭ ನೇ ಇಸವಿಯಲ್ಲಿ ಆಯಿತು. ಇವರ ಹಿರಿಯರು ಚಿಕ್ಕಂದಿನಲ್ಲಿಯೇ ಲಿಂಗೈಕ್ಯರಾದುದರಿಂದ ಮುಂದಿನ ಪಾಲನ ಪೋಷಣ ಶಿಕ್ಷಣ ಮುಂತಾದುದರ ಭಾರವೆಲ್ಲ ಸಾಧ್ವೀಮಣಿಯಾದ ಇವರ ತಾಯಿಂದಿರು ಹಾಗು ಪರಮ ಸಾತ್ವಿಕ ದೇಶಿಕೇಂದ್ರ ಮೂರ್ತಿಯಾದ ಚಿಕ್ಕಂದಿರು ಈ ಉಭಯರ ಮೇಲೆಯೇ ಬಂದಿತು. ಇವರ ಮಠದ ಮೇಲೆ ಎಂದಾದರೂ ಆ ಊರ ಮತ್ತು ನೆರೆಹೊರೆಯ ಪ್ರಾಂತದ ಜನರ ಭಕ್ತಿ ವಿಶ್ವಾಸಗಳು ಒಳಿತಾಗಿರುವದರಿಂದ ಕೇವಲ ಭಿಕ್ಷಾವೃತ್ತಿಯ ಮೇಲೆಯೇ ಮುಂದಿನ ಚರಿತಾರ್ಥವು ತಕ್ಕಮಟ್ಟಿಗೆ ಚೆನ್ನಾಗಿಯೇ ಸಾಗಿತು. ಶಿಕ್ಷಣವಾದರೂ ದೇಶ ಭಾಷೆಯು ೬ನೇ ಈಯತ್ತೆಯ ವರೆಗೆ ಇದ್ದೂರ ಮರಾಠಿ ಶಾಲೆಯಲ್ಲೇ ದೊರೆಯಿತು. ತಮಗೆ ತಿಳುವಳಿಕೆ ಹುಟ್ಟಿದ ಮೇಲೆ ಹೆಚ್ಚಿನ ಶಿಕ್ಷಣವನ್ನು ಪಡೆಯಬೇಕೆನು ಶ್ರೀ ಸಿದ್ಧರಾಮೇಶ್ವರ ದೇವರು ಎಷ್ಟು ಹೆಣಗಾಡಿದರೂ ಅನುಕೂಲ ಪರಿಸ್ಥಿತಿಯೊದಗಲಿಲ್ಲ. ಹೀಗಿರುವಾಗ ಮುಂದೆ ಆಕಸ್ಮಾತ್ತಾಗಿ ಮೇಲೆ ನಿರ್ದೇಶಿಸಿದ ಅವರ ಚಿಕ್ಕಂದಿರಾದ ಶ್ರೀ ಮಹಾಲಿಂಗೇಶ್ವರ ದೇಶಿಕೇಂದ್ರರಿಗೆ ಮುಪ್ಪಿನ ಕಾಲದಲ್ಲಿ ವಂಟಮುರಿಯ ಸಂಪಾದನ ಜಗದ್ಗುರು ಪೀಠಾರೂಢರಾಗುವ ಯೋಗವು ಪ್ರಾಪ್ತವಾಯಿತು. ಬಳಿಕ ಶ್ರೀ ಸಿದ್ಧರಾಮೇಶ್ವರ ದೇವರು ಮರಿದೇವರಾಗಿ ಅವರ ಸೇವೆ ಸಹವಾಸಗಳಲ್ಲಿಯೇ ಕಾಲಹರಣ ಮಾಡಬೇಕಾಯಿತು. ಈ ಕಾಲದಲ್ಲಿ ಧಾರ್ಮಿಕ ಶಿಕ್ಷಣ ಸಂಸ್ಕಾರವು ಕೆಲಮಟ್ಟಿಗೆ ಅವರಿಗೆ ಲಭಿಸಿತು. ಶ್ರೀ ಮಹಾಲಿಂಗೇಶ್ವರ ಸ್ವಾಮಿಗಳು ಈಗ ಮೂರು ವರ್ಷಗಳ ಹಿಂದೆ ಮಹಾ ಜ್ಯೋತಿರ್ಲಿಂಗೈಕ್ಯರಾದ ಬಳಿಕ ಈ ನಮ್ಮ ವಿಚಿತ್ರ ಲೀಲಾ ಮೂರ್ತಿಗಳಾದ ಶ್ರೀ ಸಿದ್ಧರಾಮೇಶ್ವರ ದೇವರು ಅದೇ ಮಹಾಪೀಠದ ಅಧಿಕಾರಿಗಳಾದರು.

ಪೀಠದ ಹೆಸರೇನೋ ದೊಡ್ಡದು, ಆದರೆ ಮೊದಲಿನಿಂದಲೂ ಕಾಲಚಕ್ರ ಪ್ರಭಾವದಿಂದಲೋ ಕರ್ತವ್ಯ ನಿರತ ಯೋಗ್ಯ ಸ್ವಾಮಿಗಳ ಅಭಾವದಿಂದಲೋ ಇದು ವರೆಗೆ ಹೀನ ಸ್ಥಿತಿಯಲ್ಲಿಯೇ ಉಳಿದಿರುವದು. ಈ ಶ್ರೀಗಳವರು ಅದನ್ನೆಲ್ಲ ಸೂಕ್ಷ್ಮವಾಗಿ ಗಮನಿಸಿ ತಮ್ಮ ಕಾಲದಲ್ಲಿ ಶಕ್ಯವಿದ್ದಷ್ಟು ಸರಿಪಡಿಸಬೇಕೆಂದು ಉತ್ಕಟವಾದ ಹಂಬಲವುಳ್ಳವರಾಗಿದ್ದರು. "ಸ್ವಾಮಿತ್ವವೇನು ಸುಮ್ಮನೇ ಉಂಡು ತಿಂದು ಚೆಕ್ಕಂದದಿಂದ ಹೊತ್ತುಗಳೆಯುವ ವಿಷಯವಲ್ಲ. ಬರೇ ಪ್ರಸಾದ ಅನುಕೂಲತೆ ಮಾನ ಮರ್ಯಾದೆಗಳಿಗಾಗಿಯೇ ಅದನ್ನು ಯಾರೂ ವಹಿಸಕೂಡದು; ತಮ್ಮಿಂದ ಯತ್ಕಿಂಚಿತ್ತಾದರೂ ಪೀಠೋತ್ಕರ್ಷದ ಸೇವೆ ಘಟಿಸದಿದ್ದರೆ, ಸ್ವಾಮಿಗಳಾಗಿ ಫಲವೇನು ?" ಎಂದು ಬಾರಿಬಾರಿಗೆ ಅವರು ನುಡಿಯುತ್ತಿದ್ದರು. ಅವರು ಹೆಚ್ಚಿಗೆ ಶಿಕ್ಷಿತರಾಗಿರದಿದ್ದರೂ ಅವರ ವಿಚಾರ ಆಚರಣೆಗಳು ಬಹು ಮೇಲ್ತರದವಾಗಿ ಪದವಿಗೆ ತಕ್ಕ ಪ್ರಕಾಶವನ್ನುಂಟುಮಾಡುವಂತಹವಾಗಿದ್ದವು. ಸ್ವಂತದ ಸ್ವಾರ್ಥವಂತೂ ಅವರಲ್ಲಿ ಲವಮಾತ್ರವೂ ವಾಸವಾಗಿರಲಿಲ್ಲ. ಹಗಲಿರುಳು ಸರ್ವ ಕಾಲವೂ ನೋಡಿದಾಗೆಲ್ಲ ವೀರಶೈವ ಸಮಾಜೋನ್ನತಿಯ ಆಲೋಚನೆ, ಶಿವಾನುಭವ ವಾರ್ತೆ, ಲಿಂಗಾರ್ಚನಾನಂದ ಇತ್ಯಾದಿಗಳ ವಿನಾ ಮತ್ತೊಂದು ವಿಷಯವನ್ನು ಅವರು ಮರೆತಾದರೂ ನೆನೆಯಲಿಲ್ಲ. ಸಮಾಜಕ್ಕೋಸುಗ ಬೇಕಾದ ಸ್ವಾರ್ಥತ್ಯಾಗ ಮಾಡಲಿಕ್ಕೂ ಅವರು ಸಿದ್ಧರಿದ್ದರು. ಪಂಢರಪುರ-ಪುಣೆ-ಧುಳೆ-ವರ್‍ಹಾಡ ಮೊದಲಾದ ಕಡೆಯ ಮಹಾರಾಷ್ಟ್ರೀಯ ವೀರಶೈವರ ಧಾರ್ಮಿಕ ಹೀನ ದೀನ ಸ್ಥಿತಿಯನ್ನು ಓದಿ ಕೇಳಿಯಂತೂ ಅವರು ಯಾವಾಗಲೂ ಮರಮರನೆ ಮರುಗಿ "ನಾನು ಈ ಪಾರತಂತ್ರ್ಯದಲ್ಲಿ ಸಿಗಬೀಳದೆ ಇರುತ್ತಿದ್ದರೆ, ಅಲ್ಲಿ ಹೋಗಿ ಅವರಿಗೆ ಪರಿಪರಿಯಿಂದ ಶಕ್ಯವಿದ್ದಷ್ಟು ನೆರವಾಗಿ ಸೇವೆ ಮಾಡುತ್ತಿದ್ದೆನಲ್ಲ !" ಎಂದು ಚಡಪಡಿಸುತ್ತಿದ್ದರು. ಗುರು ವಿರಕ್ತರ ಜಗಳದಿಂದಂತೂ ಅವರ ಅಂತಃಕರಣಕ್ಕೆ ಬಹು ದೊಡ್ಡ ಆಘಾತವಾಗಿತ್ತು. "ಅದರ ನಿವಾರಣೋಪಾಯವೇನಾದರೂ ಹೊರಡಬಹುದೋ ಹೇಗೆ" ಎಂಬದನ್ನು ನೋಡುವ ಸಲುವಾಗಿಯೇ ಅವರು ಕಳೆದ ವರ್ಷ ಧಾರವಾಡ ಹಾವೇರಿ ಪೇಟೆಯ ಮುರಘಾ ಮಠದ ಪ್ರವಚನ ಸಮಾರಂಭಕ್ಕೆ ದಯಮಾಡಿಸಿದರು. ಅದರಂತೆ ಆಗ ಅಲ್ಲಿ ನೆರೆದ ಸಭೆಯಲ್ಲಿ ಒಂದು ಬಹು ಕಳಕಳಿಯ ಅಪ್ಪಣೆಯನ್ನಾದರೂ ಭಾಷಣದ್ವಾರವಾಗಿ ಪ್ರಕಟಿಸಿದರು. ಅದು ಸಕಲರಿಗೂ ಸಮ್ಮತವಾಯಿತು.

ಇತ್ತ ಊರೊಳಗೆ ತಮ್ಮ ಮಹಾ ಮಠದಲ್ಲಿ ನಿತ್ಯ ಶಿವಾನುಭವ ಪ್ರವಚನ ನಡೆಯುವ ಏರ್ಪಾಟು ಮಾಡಿರುವ ಹಾಗು ಸ್ವಂತ ಪ್ರೋತ್ಸಾಹದ ಬಲದಿಂದಲೇ ಇಲ್ಲಿ ಒಂದು ವೀರಶೈವ ಸಂಘವನ್ನು ಸ್ಥಾಪನಗೊಳಿಸಿ ಒಳಪಂಗಡಗಳ ಏಕೀಕರಣ ದ್ವಾರವಾಗಿ ಸಮಾಜದಲ್ಲಿ ಸಂಘಟನಾದಿ ಕಾರ್ಯಗಳನ್ನು ಜರುಗಿಸಿದ್ದರು. ಕೇವಲ ಪ್ರತಿಕೂಲ ಪರಿಸ್ಥಿತಿಯಲ್ಲಿ ಮೂರೇ ಮೂರು ವರ್ಷದ ಕಾಲದಲ್ಲಿ ತಮ್ಮ ಸ್ವಂತ ತಪೋಬಲದಿಂದ ಈ ವಿಧದ ಕಾರ್ಯಕ್ರಮವನ್ನು ಮುಂದಿಟ್ಟುಕೊಂಡು ತ್ರಿಕರಣ ಪೂರ್ವಕವಾಗಿ ಯತ್ನಿಸುವ ದಿವ್ಯ ತೇಜಸ್ಸು ಮುಂದೇನು ತಾನೇ ಮಾಡಲರಿಯದು ? ಭಕ್ತೋದ್ಧಾರವಂತೂ ಸರಿಯೆ ! ಮೂಲೆಗುಂಪಾದ ಸಂಪಾದನ ಸಮಯದ್ದೇ ಅಭ್ಯುದಯ ಕಾಲವು ಇವರಿಂದೊದಗಬಹುದೆಂಬ ಆಕಾಂಕ್ಷೆಯು ಜನರಲ್ಲಿ ಮೂಡಹತ್ತಿದ್ದಿತು ಇಂತಹ ಏರಿಕೆಯ ಕಾಲದಲ್ಲಿ ಒಮ್ಮಿಂದೊಮ್ಮೆ ಒದಗಿದ ಇವರ ಅಕಾಲ ಪರಶಿವೀಭೂತತೆಯಿಂದ ಸಕಲರಿಗೂ ವಜ್ರಾಘಾತಪ್ರಾಯ ದುಃಖವಾಗಿರುವದು. ಇದು ನಮ್ಮ ಇಡಿ ಸಮಾಜದ ಬಲವತ್ತರವಾದ ನಷ್ಟಚರ್ಯವಲ್ಲದೆ ಇನ್ನೇನು ?

ಹೆಚ್ಚಿಗೆ ಬರೆಯಲಾರೆ ! ಮುಂದೆ ಆ ಪರಮಾತ್ಮನೇ ಮಾರ್ಗ ತೋರಿಸಿ ರಕ್ಷಿಸಲಿಕ್ಕೆ ಸಮರ್ಥನಿರುವನೆಂದು ಸ್ವಸ್ಥನಾಗುವೆನು.

ಮು. ವಂಟಮುರಿ } ಸೇವಕ
ತಾ. ೧೦-೩-೩೬ } ಬಸವಪ್ಪ ಚನ್ನಪ್ಪ ಹಟ್ಟೀದ.

ಭಾಯಿ ಪರಮಾನಂದರ ಕೊಲೆಮಾಡಲು

ಭಯಸೂಚಕ ಪತ್ರ!

ಮತ್ತು

ಅದಕ್ಕೆ ಅವರ ಉತ್ತರ.

ಭಾಯಿ ಪರಮಾನಂದರಿಗೆ ಬರೆದ ಭಯಸೂಚಕ ಪತ್ರವು ದಿಲ್ಲಿಯ 'ಹಿಂದು' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಪತ್ರದಲ್ಲಿ ತಾರೀಖು ಇಲ್ಲವೆ ಗ್ರಾಮದ ಹೆಸರು ಇಲ್ಲವಂತೆ. ಪೋಸ್ಟಿನ ಮುದ್ರೆಯಲ್ಲಿ ಹಾಲ ಬಾಜಾರ ೨೭ನೆಯ ಜನವರಿ ಎಂದು ಇದೆ. ಪತ್ರದ ಭಾಷಾಂತರವು ಈ ಪ್ರಕಾರವಾಗಿದೆ—

"ನೀವು ಜಾತೀಯ ಭಕ್ತಿಯನ್ನು ಬಿಟ್ಟುಕೊಡಿರಿ; ಇಲ್ಲದಿದ್ದರೆ ನಿಮಗೆ ಕಠಿಣ ಶಿಕ್ಷೆಯನ್ನು ವಿಧಿಸಲಾಗುವದು ಮತ್ತು ನೀವು ತೀವ್ರವೇ ಕಾಂಗ್ರೆಸ್ಸಿನಲ್ಲಿ ಸೇರಿ ದೇಶಭಕ್ತಿಯ ಪ್ರಮಾಣ ಕೊಡಬೇಕು ಇಲ್ಲದಿದ್ದರೆ ಕೊಲೆ ಮಾಡಲ್ಪಡುವಿರಿ. —ಮದನಲಾಲ."

ಈ ಬಗ್ಗೆ ಭಾಯಿ ಪರಮಾನಂದರು 'ದೃಷ್ಟಿಕೋಣ' ಎಂಬ ಲೇಖನದಲ್ಲಿ ಉತ್ತರ ರೂಪವಾಗಿ ಬರೆದಿದ್ದರ ಮುಖ್ಯಾಂಶವನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ದೃಷ್ಟಿಕೋಣ

"ಅಮೃತಸರದ ಯಾವನೋ ಒಬ್ಬ ಕಾಂಗ್ರೆಸ್ಸಿನವನು ತನ್ನ ಹೆಸರು ಬದಲಿಸಿಕೊಂಡು ನನಗೆ ಈ ಪತ್ರವನ್ನು ಬರೆದಿದ್ದಾನೆ. 'ನೀವು ಜಾತೀಯ ಭಕ್ತಿಯನ್ನು ಬಿಟ್ಟುಬಿಡಿರಿ. ಕಾಂಗ್ರೆಸ್ಸಿನಲ್ಲಿ ಸೇರಿ ದೇಶಭಕ್ತಿಯ ಪ್ರಮಾಣ ಕೊಡಿರಿ. ಇಲ್ಲದಿದ್ದರೆ ಕೊಲೆ ಮಾಡಲ್ಪಡುವಿರಿ' ಎಂಬುದು ಆ ಪತ್ರದ ಸಾರಾಂಶ. ಇದು ಮೂರ್ಖತನದ ದ್ಯೋತಕವಾಗಿಲ್ಲವೆ? ಕಾಂಗ್ರೆಸ್ಸಿನ ಪ್ರಭಾವದಲ್ಲಿದ್ದವರ ಮಿದುಳು ಎಷ್ಟು ವಿಪರೀತವಾಗಿರುವದೆಂಬುದು ಇದರಿಂದ ಕಂಡು ಬರುತ್ತದೆ. ಈ ಪತ್ರವನ್ನು ಬರೆದವನೂ, ಬರೆಯಿಸಿದವರೂ ಮತ್ತು ಯಾರು ಇಂಥ ಜನರ ಬಗ್ಗೆ ಸಹಾನುಭೂತಿಯನ್ನು ತಾಳುವರೋ ಅವರೂ ನಾಚಿಕೆಯಿಂದ ತಲೆತಗ್ಗಿಸಬೇಕು ನನ್ನ ಶಬ್ದಗಳು ಕಠೋರವಾಗಿರುವವೆಂಬುದನ್ನು ನಾನು ಬಲ್ಲೆ. ಇದಕ್ಕೆ ಕಾರಣವೆಂದರೆ ಈ ಪತ್ರವನ್ನು ಬರೆದ ವ್ಯಕ್ತಿಯ ಮೇಲೆ ನನಗೆ ಸಿಟ್ಟು ಬಂದಿರುವದೆಂದಲ್ಲ. ಆದರೆ ಕಾಂಗ್ರೆಸ್ಸಿನ ಎಂಥೆಂಥ ದೊಡ್ಡ ದೊಡ್ಡ ಮುಂದಾಳುಗಳು ಈ ಪತ್ರದಲ್ಲಿದ್ದುದಕ್ಕಿಂತಲೂ ಅತಿ ಹೀನವಾದ ಶಬ್ದಗಳನ್ನು ನನ್ನ ಬಗ್ಗೆ ಪ್ರಯೋಗಿಸಿರುವರು.

ಕೊಲೆಯ ಬಗ್ಗೆ ನನಗೆ ಎಳ್ಳಷ್ಟು ಭಯವಿಲ್ಲ. ತದ್ವಿರುದ್ಧವಾಗಿ ಯಾವ ಪವಿತ್ರ ಕಾರ್ಯದ ಬಗ್ಗೆ ನಾನು ನನ್ನ ತುಚ್ಛ ಜೀವನವನ್ನು ಅರ್ಪಿಸಿರುವೆನೋ ಅದಕ್ಕೆ ನನ್ನ ಕೊಲೆಯಿಂದ ಸ್ವಲ್ಪಾದರೂ ಪ್ರಗತಿಯುಂಟಾದರೆ ನಾನು ಧನ್ಯನೆಂದೇ ಭಾವಿಸುವೆನು. ಕಾಂಗ್ರೆಸ್ಸಿನ ಸಲುವಾಗಿಯೇ ಒಂದುವೇಳೆ ಈ ಮರಣವು ಸಂಭವಿಸಿದ್ದಾದರೆ ಅದು ಕಾಂಗ್ರೆಸ್ಸಿನ ಗೋರಿಯನ್ನೇ ಸಿದ್ಧಗೊಳಿಸುವದು.

ನಾನು ಮರಣಕ್ಕೆ ಹೆದರುವದಿಲ್ಲ. ಇದಕ್ಕಿಂತಲೂ ಕಟುತರವಾದ ಪ್ರಸಂಗಗಳು ನನ್ನ ಮೇಲೆ ಬಂದು ಹತ್ತು ವರ್ಷಗಳಾದವು. ಎಲ್ಲಿಯ ವರೆಗೆ ಭಿನ್ನ ಮತದಾನ ಪದ್ಧತಿಯು ಆಚರಣೆಯಲ್ಲಿರುವದೋ ಅಲ್ಲಿಯವರೆಗೆ ಕಾಂಗ್ರೆಸ್ಸು ಚುನಾವಣೆಯಲ್ಲಿ ಭಾಗ ವಹಿಸುವದು ಆದಕ್ಕೆ ಸಲ್ಲದೆಂದು ನಾನು ಯಾವಾಗ್ಗೆ ಹೇಳಹತ್ತಿದೆನೋ ಆವಾಗ್ಗೆ, ಸರಕಾರವು ನನ್ನನ್ನು ಕೊಂಡುಕೊಂಡಿದೆ; ಅದ್ದರಿಂದ ನಾನು ಹಾಗೆ ಹೇಳುತ್ತಿದ್ದೇನೆಂದು ದೂಷಿಸಲಾಯಿತು. ಈಗ ಜಾತೀಯ ನಿರ್ಣಯದ ಅನಂತರ ಕಾಂಗ್ರೆಸ್ಸು ಚುನಾವಣೆಯಲ್ಲಿ ಬಹುಮತ ಮಾಡಿಕೊಂಡು ಅತ್ತಿತ್ತ ಒಲಿಯುತ್ತಿದ್ದುದನ್ನು ನೋಡಿ ಒಬ್ಬನೊಬ್ಬ ವ್ಯಕ್ತಿಯಾದರೂ ನನ್ನ ಸಿದ್ಧಾಂತವು ತಪ್ಪಾದುದೆಂದು ಅನ್ನುವ ಸಾಹಸ ಮಾಡಲಾರನು.

ಕಾಂಗ್ರೆಸ್ಸಿನ ದೃಷ್ಟಿಯೂ ನನ್ನ ದೃಷ್ಟಿಯೂ ಭಿನ್ನವಾಗಿವೆ. ಮಹಾತ್ಮಾ ಗಾಂಧಿಯವರು ಅಸಹಕಾರ ಚಟುವಟಿಕೆಯನ್ನು ಪ್ರಾರಂಭಿಸಿದಾಗ್ಗೆ ನಮ್ಮಿಬ್ಬರ ದೃಷ್ಟಿಗಳು ಒಂದೇ ಕೇಂದ್ರದಲ್ಲಿದ್ದವು. ಬರಬರುತ್ತ ಗಾಂಧೀಜಿಯವರು ಖಿಲಾಫತ್ತಿನ ಕಟ್ಟಾ ಅಭಿಮಾನಿಗಳಾದರು. ಇನ್ನೂ ಅವರು ಇದು ತಪ್ಪೆಂದು ಅನ್ನಲು ಸಿದ್ಧರಿಲ್ಲ. ಸಹರಾಣಪುರದ ಸಂಗತಿಯನ್ನು ನಾನು ಪ್ರತ್ಯಕ್ಷವಾಗಿ ನೋಡಿ ಮಹಾತ್ಮಾಜಿಯವರು ತಪ್ಪು ಮಾರ್ಗವನ್ನು ಹಿಡಿದಿರುವರೆಂದು ನಾನು ಹೇಳಿದೆನು. ಅದರ ನಂತರ ಅವರ ತಪ್ಪಿನ ಸಾಕ್ಷಿಗಾಗಿ ಅನೇಕ ಪ್ರಮಾಣಗಳು ನನಗೆ ದೊರೆತವು. ನಮ್ಮಿಬ್ಬರ ದೃಷ್ಟಿಕೋಣಗಳಲ್ಲಿ ವ್ಯತ್ಯಾಸವಿಷ್ಟೆ. ಮಹಾತ್ಮಾಜಿಯವರು ಮುಸಲ್ಮಾನರನ್ನು ಜಗ್ಗಿಕೊಂಡು ದೇಶದ ಸ್ವಾತಂತ್ರ್ಯ ಪಡೆಯಲು ಹವಣಿಸುತ್ತಿದ್ದರು. ಈ ಪದ್ಧತಿಯು ಹಿಂದುಗಳಿಗೆ ಬಹು ಭಯಾನಕವಾಗುವದೆಂದು ತೋರಿತು. ನನ್ನ ದೃಷ್ಟಿಯು ಹಿಂದುಗಳ ಮೇಲೆ; ಕಾಂಗ್ರೆಸ್ಸಿನ ದೃಷ್ಟಿಯು ದೇಶದ ಮೇಲೆ. ಆದರೆ ೨೪ ಕೋಟಿ ಹಿಂದುಗಳನ್ನು ಬದಿಗಿರಿಸಿ ಅದಾವ ದೇಶ ಹಿತವನ್ನು ಮಾಡುವರೋ ತಿಳಿಯದಾಗಿದೆ.

ದೇಶದೊಳಗಿನ ಎಲ್ಲ ಹಿಂದುಗಳು ಅಳಿದು ಹೋದರೆ ಉಳಿಯುವ ದೇಶವಾದರೂ ಯಾವ ಪ್ರಕಾರದ್ದು? ನಾನು ಈ ಮೊದಲೊಮ್ಮೆ ಬರೆದುಬಿಟ್ಟಿದ್ದೇನೆ. ಪರದೇಶಗಳಲ್ಲಿ ದೇಶ ಸೇವೆಯೆಂದರೆ ಆ ದೇಶದಲ್ಲಿ ವಾಸಿಸುವ ಜನಾಂಗದ ಸೇವೆಯೆಂದು. ಬ್ರಿಟಿಶರು ಜಗತ್ತಿನಲ್ಲಿರುವ ಬ್ರಿಟಿಶರನ್ನೆಲ್ಲ ತಮ್ಮ ದೇಶದ ಒಂದು ಅಂಗವೆಂದೇ ತಿಳಿಯುತ್ತಾರೆ. ಹಿಂದುಸ್ಥಾನದ ಜನಾಂಗವೆಂದು ಯಾವುದಾದರೂ ಇದ್ದದ್ದಾದರೆ ಅದು ಹಿಂದು ಜನಾಂಗವೇ ಆಗಿದೆ. ನೋಡೋಣ ಸಮಯ ಬಂದಾಗ್ಗೆ. ನಮ್ಮ ದೃಷ್ಟಿಕೋಣವು ಯಾವ ಪ್ರಕಾರವಿರಬೇಕೆಂಬುದು ತಾನೇ ಗೊತ್ತಾಗುವದು."

ಕ. ಪ್ರಾ. ಕಮೀಟಿಯ ಪ್ರಕಟನೆ.

ರಾಷ್ಟ್ರಪತಿ ಬಾಬೂ ರಾಜೇಂದ್ರ ಪ್ರಸಾದರು ೧೯೩೬-೩೭ನೇ ವರುಷದ ಸಲುವಾಗಿ ಈಗಿನಿಂದಲೇ ಕಾಂಗ್ರೆಸ್ ಸದಸ್ಯರನ್ನು ಮಾಡಲು ಅಪ್ಪಣೆ ಕೊಟ್ಟಿದ್ದಾರೆ. ಹಳ್ಳಿಗರು ಸುಗ್ಗಿಯಲ್ಲಿರುವದರಿಂದ ನಾಲ್ಕಾಣೆ ಕೊಟ್ಟು ಸದಸ್ಯರಾಗಲು ಈಗ ಅವರಿಗೆ ವಿಶೇಷ ಭಾರವೆನಿಸುವದಿಲ್ಲ.

ಕಾರಣ ಕರ್ನಾಟಕದೊಳಗಿನ ಎಲ್ಲ ಕಾಂಗ್ರೆಸ ಕಮಿಟಿಗಳು ಈಗಿನಿಂದಲೇ ಈ ಕಾರ್ಯವನ್ನು ಕೈಕೊಳ್ಳಬೇಕು. ಈ ಸಲ ಕನಿಷ್ಟ ೧ ಲಕ್ಷ ಸದಸ್ಯರನ್ನಾದರೂ ಮಾಡಬೇಕು. ಇಂದಿನಿಂದಲೇ ಒಳ್ಳೇ ಉತ್ಸಾಹದಿಂದ ಕಾರ್ಯ ಪ್ರಾರಂಭಿಸಿದಲ್ಲಿ ಅದೇನೂ ಅಶಕ್ಯದ ಮಾತಲ್ಲ. ಈ ಬಗ್ಗೆ ಕೆಳಗಿನ ನಿಯಮಗಳನ್ನು ಲಕ್ಷದಲ್ಲಿಡಬೇಕು.

(೧) ಈಗ ಮಾಡಿದ ಸದಸ್ಯರು ೧೯೩೬-೩೭ನೇ ವರುಷದ ಸದಸ್ಯರು. -೧ನೇ ಎಪ್ರಿಲ್ ೧೯೩೬ರಿಂದ ೩೧ನೇ ಮಾರ್ಚ ೩೭ ರ ವರೆಗೆ- (೨) ಕಳೆದ ವರುಷದ ರಜಿಸ್ಟರಿಗೂ ಈ ವರುಷದ ರಜಿಸ್ಟರಿಗೂ ಗೊಂದಲ ಬಾರದಂತೆ ಹೊಸ ವರುಷದ ಪಟ್ಟಿಯನ್ನು ಬೇರೆಯಾಗಿಡಬೇಕು. (೩) ಮತಕೊಡುವಾಗ್ಗೆ ಅಥವಾ ಬೇರೆ ಕೆಲಸಗಳಲ್ಲಿ ಈ ಸದಸ್ಯರು ೧ ನೆಯ ಎಪ್ರಿಲ್ ೧೯೩೬ ನೇ ದಿವಸ ಸದಸ್ಯರಾಗುವರೆಂದು ಎಣಿಸಬೇಕು.

ಧಾರವಾಡ
ತಾ. ೯-೨-೩೬

ರಂಗನಾಥ ದಿವಾಕರ,
ಕಾರ್ಯದರ್ಶಿ
ಕ. ಕಾ. ಪ್ರಾ. ಕ.

೧೨ ನೇ ವೀರಶೈವ ಮಹಾಸಭಾ ರಾಯಚೂರ.

ವರ್ಕಿಂಗ ಕಮೀಟಿಯ ಸಭೆ.

ಇದೇ ಸಂವತ್ಸರದ ಮಾಘ ಶುದ್ಧ ೧ ದಿವಸ ರಾಯಚೂರ ವೀರಶೈವ ಬೋರ್ಡಿಂಗಿನಲ್ಲಿ ಎಲ್ಲರೂ ಸಹಜವಾದ ಸಮಾಜಾಭಿಮಾನದಿಂದ ಪ್ರಯಾಸಗಳನ್ನು ಲೆಕ್ಕಿಸದೆ ಆಗಮಿಸಿದ್ದರು. ಸಭೆ ಪದ್ಧತಿಯಂತೆ ಮ. ರಾ. ಇಂಡಿ ಗುರುಶಿದ್ಧಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿ ಈಶ ಸ್ಮರಣದನಂತರ ಕಾರ್ಯದರ್ಶಿಗಳಾದ ಹರವಿ ವಿರೂಪಾಕ್ಷಗೌಡ ವಕೀಲ ಹೈಕೋರ್ಟ ಇವರು ಹಿಂದಿನ ವರ್ಕಿಂಗ ಕಮೀಟಿಯ ರಿಪೋರ್ಟನ್ನು ಸಭಿಕರಿಗೆ ತಿಳಿಸಿದರು ನಂತರ ಶ್ರೀ ಮುರಿಗಯ್ಯನವರು ಜಂಗಿನ (ಬಾಗಲಕೋಟೆ) ಇವರು ಮಹಾಸಭೆಯ ಪ್ರಯೋಜನ, ರಚನೆ ಮುಂತಾದವುಗಳ ಬಗ್ಗೆ ತಮ್ಮ ಅನುಭವಸಿದ್ಧವಾದ ವಿಷಯಗಳನ್ನು ಮನವರಿಕೆ ಮಾಡಿಕೊಟ್ಟನಂತರ ಮಹಾ ಸಭೆಯ ಅಧ್ಯಕ್ಷತೆಯ ಬಗ್ಗೆ ಮಹಾಸಭೆಯ ಸದಸ್ಯರಿಂದ ನಿರ್ಣಯಿಸಲ್ಪಟ್ಟ (೩) ಜನರು ಅಂದರೆ ಶ್ರೀಯುತ ಮುನಿಯಪ್ಪನವರು, ಶ್ರೀಯುತ ತಿಮ್ಮಣ್ಣನವರು, ಶ್ರೀಯುತ ಶಿರವಾರ ಬಸವನಗೌಡರು ಇವರ ಪೈಕಿ ಶ್ರೀ ರಸ್ತಾಪುರ ಮುನಿಯಪ್ಪನವರಿಗೆ (೪೯) ಶ್ರೀ ಗಣದಿನ್ನಿ ತಿಮ್ಮಣ್ಣನವರಿಗೆ (೩೨) ಮತಗಳು ಬಿದ್ದದ್ದರಿಂದ ಸರ್ವಾನುಮತಿಯಂತೆ ಶ್ರೀಯುತ ಮುನಿಯಪ್ಪನವರು ಅಧ್ಯಕ್ಷರಾಗಿಯೂ ಶ್ರೀಯುತ ಗಣದಿನ್ನಿ ತಿಮ್ಮಣ್ಣನವರು ಉಪಾಧ್ಯಕ್ಷರಾಗಿಯೂ ನಿರ್ಣಯಿಸಲ್ಪಟ್ಟಿತು. ಆದರೆ ಶ್ರೀಯುತ ಗಣದಿನ್ನಿ ತಿಮ್ಮಣ್ಣನವರು ಯಜಮಾನರಿದ್ದ ಕಾರಣ ಅವರನ್ನೇ ಅಧ್ಯಕ್ಷರನ್ನಾಗಿ ಮತ್ತು ತಮ್ಮನ್ನು ಉಪಾಧ್ಯಕ್ಷರಾಗಿ ನೇಮಿಸುವದಕ್ಕೆ ಶ್ರೀಯುತ ಮುನಿಯಪ್ಪನವರು ಅತ್ಯ ಸಂತೋಷದಿಂದ ವಿನಂತಿ ಮಾಡಿಕೊಂಡ ಪ್ರಕಾರ ಶ್ರೀಯುತ ಗಣದಿನ್ನಿ ತಿಮ್ಮಣ್ಣನವರು ಸ್ವಾಗತ ಸಂಘದ ಅಧ್ಯಕ್ಷರಾಗಿಯೂ ಶ್ರೀಯುತ ರಸ್ತಾಪುರ ಮುನಿಯಪ್ಪನವರು ಉಪಾಧ್ಯಕ್ಷರಾಗಿಯೂ ಸರ್ವಾನುಮತದಿಂದ ನೇಮಿಸಲ್ಪಟ್ಟರು. ನಂತರ ಈ ಕೆಳಗೆ ಕಾಣಿಸಿದ ೫ ಜನರನ್ನು ಕಾರ್ಯದರ್ಶಿಗಳನ್ನಾಗಿ ಆರಿಸಲ್ಪಟ್ಟಿತು. ಶ್ರೀ ಹರ್ವಿ ವಿರೂಪಾಕ್ಷ ಗೌಡ ವಕೀಲ ಹೈಕೋರ್ಟ, ಶ್ರೀ ಜೆ. ಅಮರಪ್ಪ ವಕೀಲ ಹೈಕೋರ್ಟ, ಶ್ರೀ ಯರಮರ್ಸ ಶಿದ್ರಾಮಪ್ಪ ವಕೀಲ, ಶ್ರೀ ಗದ್ವಾಲಿ ಶಿವನಾಗಪ್ಪ, ಶ್ರೀ ಶೆಟ್ಟಿ ಸಿದ್ಧಣ್ಣ.

ಕೋಶಾಧ್ಯಕ್ಷರು:— ಶ್ರೀ ಯರಮರ್ಸ ಅಮರಪ್ಪ ಗೌಡರು ಇವರನ್ನು ನೇಮಿಸಿದರು. ಮುಂದಿನ ವ್ಯವಸ್ಥಾಪಕ ಮಂಡಲಿಯ ನಿರ್ಣಯವು ಸ್ವಾಗತ ಸಂಘದವರು ನಿರ್ಣಯಿಸುವಂತೆ ಗೊತ್ತಾಗಿ ನಂತರ ಶ್ರೀ ಮುರಿಗಯ್ಯನವರು ಜಂಗಿನ ಇವರು ದೂರ ದೇಶದಿಂದ ಬಂದು ನಮ್ಮ ಸಮಾಜದ ಕಳಕಳಿಯಿಂದ ಸಭೆಯ ಕಾರ್ಯವನ್ನು ಯಶಸ್ವಿಯಾಗಿ ಮಾಡಿದುದಕ್ಕೆ ಅವರಿಗೆ ಸಭಿಕರು ತಮ್ಮ ಕೃತಜ್ಞತೆಯನ್ನು ಸೂಚಿಸಿದ ಬಳಿಕ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು.

ಹರ್ವಿ ವಿರೂಪಾಕ್ಷಗೌಡ	**ಗುರುಸಿದ್ಧಪ್ಪನವರು**
ವಕೀಲ ಹೈಕೋರ್ಟ	ಇಂಡಿ
ಸೆಕ್ರೆಟರಿ ವರ್ಕಿಂಗ್ ಕಮಿಟಿ.	ಅಧ್ಯಕ್ಷ ವರ್ಕಿಂಗ್ ಕಮಿಟಿ

ಸೂಚನೆ:—

[ವರ್ಕಿಂಗ್ ಕಮಿಟಿಯವರ ಮೇಲಣ ಪ್ರಕಟನೆಯಲ್ಲಿ ಮೊದಲು "ಮಹಾ ಸಭೆಯ ಅಧ್ಯಕ್ಷತೆಯ ಬಗ್ಗೆ ಮಹಾಸಭೆಯ ಸದಸ್ಯರಿಂದ ನಿರ್ಣಯಿಸಲ್ಪಟ್ಟ (೩) ಜನರು" ಎಂಬುದಾಗಿದೆ. ಮಹಾಸಭೆಯ ಅಧ್ಯಕ್ಷತೆಯ ಬಗ್ಗೆ ಎಂಬುದಕ್ಕೆ ಬದಲಾಗಿ ಮಹಾಸಭೆಯ ಸ್ವಾಗತ ಸಂಘಾಧ್ಯಕ್ಷತೆಯ ಬಗ್ಗೆ ಎಂಬುದಾಗಿರಬೇಕಾದುದರಿಂದ ವಾಚಕರು ಹಾಗೆಯೇ ಅದನ್ನು ಗ್ರಹಿಸಬೇಕು.

"ಓರ್ವ ಸಮಾಜ ಹಿತೈಷಿ" ಎಂಬ ಹೆಸರಿನಿಂದ ತಾ. ೨-೨-೪೬ ನೆಯ ದಿನ ರಾಯಚೂರಿನ ಒಂದು ಲೇಖನವು ನಮ್ಮ ಕಡೆ ಪ್ರಕಟನೆಗಾಗಿ ಬಂದಿದೆ. ಸ್ವಾಗತ ಸಂಘಾಧ್ಯಕ್ಷರ ಆಯ್ಕೆಯ ವಿಚಾರವಾಗಿಯೂ ತಾ. ೨-೧-೪೬ ನೆಯ ಶರಣ ಸಂದೇಶದಲ್ಲಿ ಆರ್ಯ ಸಮಾಜದವರ ನಿಷೇಧದ ಸುದ್ದಿಯು "ಸೆಕ್ರೆಟರಿ" ವಿರೂಪಾಕ್ಷಗೌಡರು ಎಂಬ ಹೆಸರಿನಿಂದ ಪ್ರಕಟವಾದುದರ ಸಂಬಂಧವಾಗಿಯೂ ಲೇಖಕರು ಆಕ್ಷೇಪಿಸಿ ಬರೆದಿದ್ದಾರೆ.

ಸಾರ್ವಜನಿಕ ಕಾರ್ಯಗಳಲ್ಲಿ ಭಿನ್ನಾಭಿಪ್ರಾಯವಾಗುವುದು ಸ್ವಾಭಾವಿಕ. ಆದರೆ ಅದು ವ್ಯಕ್ತಿದ್ವೇಷ ದ್ಯೋತಕವಾಗಿ ಪರಿಣಮಿಸಬಾರದು. ಸಮಾಜ ಕಾರ್ಯಕರ್ತರು ವ್ಯಕ್ತಿಗತ ಅಭಿಮಾನ ಬಿಟ್ಟು ಸ್ವಸ್ಥಳಕ್ಕೆ ಕೀರ್ತಿ ಬರುವಂತೆ ನಡೆಯಬೇಕಲ್ಲದೆ ಅನೈಕಮತ್ಯವನ್ನು ಹೆಚ್ಚಿಸಿ ಅನರ್ಥಕ್ಕೆ ಕಾರಣವಾಗುವಂತೆ ಯಾರೂ ನಡೆಯಬಾರದು. ವರ್ಕಿಂಗ್ ಕಮಿಟಿಯವರ ಮೇಲಣ ಪ್ರಕಟನೆಯನ್ನು ಎಲ್ಲರೂ ಮಾನ್ಯ ಮಾಡಿ ಪರಸ್ಪರ ಪ್ರೇಮಾದರಗಳಿಂದಲೂ ಐಕಮತ್ಯದಿಂದಲೂ ಈ ಮಹತ್ಕಾರ್ಯವನ್ನು ನೆರವೇರಿಸಬೇಕೆಂದು ನಮ್ಮ ಆಗ್ರಹದ ಸೂಚನೆ.

ಶ್ರೀಯುತ ವಿರೂಪಾಕ್ಷ ಗೌಡರಿಗೆ ಲೇಖಕರ ಆಕ್ಷೇಪಣೆಯ ವಿಚಾರವಾಗಿ ಬರೆದು ಕೇಳಿದುದರಲ್ಲಿ ಅವರು ಈ ಪ್ರಕಾರ ತಿಳಿಸಿದ್ದಾರೆ.—

"ರಾಯಚೂರು ವೀರಶೈವ ಸಮಾಜಕ್ಕೆ ಶ್ರೀಯುತ ಗಣದಿನ್ನಿ ತಿಮ್ಮಣ್ಣನವರು ಅಧ್ಯಕ್ಷರು. ನಾನು ಮತ್ತು ಶ್ರೀ ರಸ್ತಾಪುರ ಮುನಿಯಪ್ಪನವರು ಸೆಕ್ರೆಟರಿಗಳು. ಈ ರೀತಿ ನೇಮಕವಾಗಿ ಒಂದು ವರುಷ ಆಗುತ್ತಾ ಬಂತು. ಸಮಾಜದ ಸಂಬಂಧವಾಗಿ ಏನೇ ಪ್ರಚಾರಪಡಿಸತಕ್ಕದ್ದಿದ್ದಲ್ಲಿ ಇದೇ ರೀತಿ ಪ್ರಚಾರಪಡಿಸುತ್ತಾ ಬಂದಿದೆ. ನಾನು 'ಸೆಕ್ರೆಟರಿ' ಎಂದು ಬರೆದುದು ಲೇಖಕರಿಗೆ ಅಸಮಾಧಾನವಾಗಿರುವ ಪಕ್ಷದಲ್ಲಿ "ಸಮಾಜ ಸೇವಕ" ಎಂದು ಬರೆದರೂ ಅಡ್ಡಿಯಿಲ್ಲ."

ಇಷ್ಟರಿಂದ ಲೇಖಕರೂ ಸಮಾಧಾನ ಹೊಂದಿ ಈ ವಿಷಯವನ್ನು ಬೆಳೆಸಲಾರರೆಂದೇ ನಾವು ನಂಬಿದ್ದೇವೆ. ಈ ಸಂಗತಿಗಳೆಲ್ಲಾ ಏನೇನೋ ರೂಪ ಹೊಂದಿ ನಾನಾ ಪ್ರಕಾರ ಪ್ರಕಟವಾಗುವ ಲಕ್ಷಣ ತೋರಿರುದರಿಂದ ನಾವು ಈ ಪ್ರಕಾರ ಬಹಿರಂಗವಾಗಿಯೇ ಈ ಸೂಚನೆಯನ್ನು ಮಾಡಬೇಕಾಯಿತು. ನೈಜಾಮ ರಾಜ್ಯದ ವೀರಶೈವರು ತುಂಬಾ ಹಿಂಮುಳಿದಿರುವುದು ಸರಿಯಷ್ಟೆ. ಕಳೆದ ೩೨ ವರುಷಗಳಲ್ಲಿ ಈ ಸಾರೆ ಮಾತ್ರ ನಿಮ್ಮ ಭಾಗದಲ್ಲಿ ಮಹಾಸಭೆ ಕೂಡುವ ಸುಯೋಗ ಬಂದಿದೆ. ಹೀಗಿರುವಾಗ ಅನೈಕಮತ್ಯವನ್ನುಂಟು ಮಾಡುವ ಇಂಥ ಯಾವ ಪ್ರಯತ್ನಗಳೂ ರಾಯಚೂರಲ್ಲಿ ಇನ್ನು ಮೇಲೆ ಉಂಟಾಗದೆ ಮಹಾಸಭೆಯ ಕಾರ್ಯವು ಜಯಪ್ರದವಾಗಿಯೇ ಜರುಗುವಂತಹ ಪ್ರೇಮಾದರ ಸಾಹಸೋತ್ಸಾಹಗಳುಂಟಾಗಲೆಂದು ಹಾರೈಸುತ್ತೇವೆ —ಸಂಪಾದಕ.]

—ಪೆಟ್ರೋಲ ಮೊದಲಾದ ಎಣ್ಣೆಗಳನ್ನು ಪರದೇಶಗಳು ಪುರವಣೆ ಮಾಡುವದನ್ನು ನಿಲ್ಲಿಸಿದರೆ ಯುದ್ಧವು ತಾನೇ ನಿಲ್ಲುವದೆಂದು ರಾಷ್ಟ್ರ ಸಂಘವು ಈ ಬಗ್ಗೆ ವಿಚಾರಣೆ ಮಾಡಲು ಒಂದು ಸಮಿತಿಯನ್ನು ನಿಯಮಿಸಿದ್ದಿತು. ಅಮೇರಿಕೆಯು ಸಹಕರಿಸಿದರೆ ಇದು ಪರಿಣಾಮಕಾರಕವಾಗುವದೆಂದು ಆ ಕಮೀಟಿಯವರು ಅಭಿಪ್ರಾಯಪಟ್ಟರು.

—ಹುಬ್ಬಳ್ಳಿಯಲ್ಲಿ ಹಿಂದು ಮಹಿಲಾ ಸಮಾಜದ ವತಿಯಿಂದ ಕುಸರೆಳ್ಳಿನ ಪ್ರದರ್ಶನವಾಯಿತು. ಗೋಳಗುಮಟ, ಹುಬ್ಬಳ್ಳಿಯ ಕೊಆಪರೇಟಿವ್ಹ ದವಾಖಾನೆ, ಕಿಲ್ಲೆ, ಮಾಲೆಗಳು ಮುಂತಾದವನ್ನು ಕುಸರೆಳ್ಳಿನಿಂದಲೇ ಮಾಡಿದ್ದರು.



ಶಾ. ಶ. ೧೮೫೭ ನೆಯ ಮಾಘ ಶು|| ೧೦ ಸೋಮವಾರ

ರಾಷ್ಟ್ರೀಯ ಸಭೆಯವರ ದೃಷ್ಟಿದೋಷ.

ಭಾಯಿ ಪರಮಾನಂದಜಿಯವರು ಧಾರ್ಮಿಕ ಚಟುವಟಿಕೆಯನ್ನು ಬಿಟ್ಟು ರಾಷ್ಟ್ರೀಯ ಸಭೆಗೆ ಶರಣಾಗತರಾಗಿ ಅದರ ಕಾರ್ಯಗಳನ್ನು ನಡೆಯಿಸದಿದ್ದರೆ ಅವರನ್ನು ಕೊಲೆ ಮಾಡುವುದಾಗಿ ಯಾವಾತನೋ ಒಬ್ಬ ತಲೆತಿರುಕನು ಭಾಯೀಜಿಯವರಿಗೆ ಬರೆದಿರುವುದನ್ನೂ ಆ ಸಂಬಂಧವಾಗಿ ಅವರು ತಿಳಿಸಿರುವುದನ್ನೂ ಬೇರೆ ಕಡೆಗೆ ಕೊಟ್ಟಿದ್ದೇವೆ.

ಅತ್ಯಂತ ನಿಂದ್ಯವಾದ ಈ ಭಯಸೂಚನೆಯನ್ನು ರಾಷ್ಟ್ರೀಯ ಸಭೆಯ ಸುಜ್ಞ ಸದಸ್ಯರೆಲ್ಲರೂ ತುಂಬಾ ನಿಷೇಧಿಸದಿರಲಾರರು. ಈ ಪ್ರಕಾರ ತಿಳಿಸಿದ ಆ ತಲೆತಿರುಕನು ರಾಷ್ಟ್ರೀಯ ಸಭೆಯ ಸದಸ್ಯನೋ, ಅಥವಾ ಆ ಹೆಸರಿನ ವೇಷ ಹಾಕಿಕೊಂಡ ಬೇರೊಬ್ಬನೋ, ಯಾರು ಬಲ್ಲರು? ಅಂತು, ಈ ಪತ್ರವು ರಾಷ್ಟ್ರೀಯ ಸಭೆಯ ಬಹು ಜನರ ದೃಷ್ಟಿಕೋನದ ಕಡೆಗೆ ತಿರುಗುವಂತೆ ಮಾಡಿತು.

ಯಾರು ರಾಷ್ಟ್ರೀಯ ಸಭೆಯಲ್ಲಿ ಸೇರಿ ಅದರ ಕಾರ್ಯಗಳನ್ನೇ ಮಾಡುವುದಿಲ್ಲವೋ ಅಥವಾ ಅದರ ಕಾರ್ಯಕ್ರಮಗಳನ್ನು ವಿರೋಧಿಸುವರೋ ಅವರೆಲ್ಲಾ ರಾಷ್ಟ್ರದ್ರೋಹಿಗಳೆಂದು ತಿಳಿಯುವ ಜನರೇ ರಾಷ್ಟ್ರೀಯ ಸಭೆಯಲ್ಲಿ ಹೆಚ್ಚು. ವರುಷಕ್ಕೆ ನಾಲ್ಕಾಣೆ ಚಂದಾ ಕೊಟ್ಟು ರಾಷ್ಟ್ರೀಯ ಸಭೆಯ ಸದಸ್ಯನಾದ ಮಾತ್ರದಿಂದ ತಾನು ಸರ್. ಸಪ್ರುರವರಿಗಿಂತಲೂ ರಾಜಕಾರಣದಲ್ಲಿ ಪ್ರವೀಣನೆಂತಲೂ ಒಂದು ಸಾರೆ ಕಾರಾಗೃಹಕ್ಕೆ ಹೋಗಿ ಬಂದರಂತೂ ನಾ. ಶಾಸ್ತ್ರಿಗಳಿಗಿಂತಲೂ ಹೆಚ್ಚಿನ ದೇಶಭಕ್ತನೆಂತಲೂ ತಿಳಿಯುವ ಜನರೇ ಅಧಿಕ.

ಅಂತೆಯೇ ಧರ್ಮಾತ್ಮಾ ಮಾಲವೀಜಿಯವರು ರಾಷ್ಟ್ರೀಯ ಸಭೆಯು ಜಾತಿ ನಿರ್ಣಯದ ವಿಷಯದಲ್ಲಿ ಅನುಸರಿಸಿದ ಘಾತಕವಾದ ಮಾರ್ಗವನ್ನು ಬಿಟ್ಟೊಡನೆಯೇ ಅವರು ರಾಷ್ಟ್ರದ್ರೋಹಿಗಳಾಗಿಯೇ ರಾಷ್ಟ್ರೀಯ ಸಭೆಯ ಬಹು ಜನರಿಗೆ ತೋರಿದರು! ಹಿಂದು ಮಹಾಸಭೆಯನ್ನೂ ಅದರ ಚಾಲಕರನ್ನೂ ನಾನಾ ರೀತಿಗಳಲ್ಲಿ ಅಲ್ಲಗಳೆಯುತ್ತಿರುವುದಾದರೂ ಇಂಥ ರಾಷ್ಟ್ರಭಕ್ತರ ಶೀಲವಾಗಿಯೇ ಪರಿಣಮಿಸಿದೆ.

ರಾಷ್ಟ್ರೀಯ ಸಭೆಯ ಬಹುಜನರಲ್ಲಿರತಕ್ಕ ಈ ದೃಷ್ಟಿದೋಷವು ನಿವಾರಣೆಯಾಗಬೇಕು. ರಾಷ್ಟ್ರೋನ್ನತಿಯ ಸರ್ವ ಹೊಣೆಗಾರಿಕೆಯೂ ತಮ್ಮ ಮೇಲೆಯೇ ಇದೆಯೆಂಬ ಭ್ರಮೆಯು ಬಯಲಾಗಬೇಕು. ರಾಷ್ಟ್ರೀಯ ಸಭೆಯ ಹೊರಗಿರುವವರೆಲ್ಲಾ ದೇಶದ್ರೋಹಿಗಳೆಂತಲೂ ತಾವೇ ಮಹಾ ದೇಶಭಕ್ತರೆಂತಲೂ ಹೆಮ್ಮೆಪಡುವ ತಪ್ಪು ತಿಳುವಳಿಕೆಯನ್ನು ತೆಗೆದುಹಾಕಬೇಕು.

ನ್ಯಾಯವಾದ ರೀತಿಯಲ್ಲಿ ತಮ್ಮ ತಮ್ಮ ಇಷ್ಟದಂತೆ ಮಾತೃಭೂಮಿಯ ಸೇವೆ ಮಾಡಲು ಸಕಲರಿಗೂ ಸಮಾನವಾದ ಅಧಿಕಾರವಿದೆ. ರಾಷ್ಟ್ರೀಯ ಸಭೆಯು ರಾಜಕೀಯ ಕ್ಷೇತ್ರದಲ್ಲಿ ಪ್ರಬಲವಾಗಿದ್ದ ಮಾತ್ರದಿಂದ ಸಕಲರೂ ಅದನ್ನೇ ಅನುಸರಿಸಲೇ ಬೇಕೆಂದಾಗಲಿ ಅಥವಾ ಬೇರೆ ರೀತಿಯಲ್ಲಿ ಪ್ರಯತ್ನಿಸಲೇ ಬಾರದೆಂದಾಗಲಿ ಒತ್ತಾಯ ಪಡಿಸುವುದು ನ್ಯಾಯವಲ್ಲ. ಮತ್ತು ಕ್ಷೇಮಕರವೂ ಅಲ್ಲ. ಆದಕಾರಣ ರಾಷ್ಟ್ರೀಯ ಸಭೆಯ ಪ್ರಾಂತಿಕ ಪ್ರಮುಖರು ತಮ್ಮ ನುಡಿ ನಡೆಗಳಿಂದ ರಾಷ್ಟ್ರೀಯ ಸಭೆಯ ಜನಸಾಮಾನ್ಯರಲ್ಲಿರತಕ್ಕ ಈ ಅಂಧ ವಿಶ್ವಾಸವನ್ನು ತೆಗೆದುಹಾಕಿ ರಾಷ್ಟ್ರೀಯ ಸಭೆಯ ಹೊರಗಿದ್ದು ಜನಸೇವೆಯು ಮಾಡುವವರಲ್ಲಿಯೂ ಆದರಾಭಿಮಾನವುಳ್ಳವರಾಗುವಂತೆ ಮಾಡಬೇಕಾದುದು ಯುಕ್ತವಾಗಿಲ್ಲವೆ?

ವೀರಶೈವ ಸಂಘಟನಾ ಸಭೆ.

ಧಾರವಾಡದ ವೀರಶೈವ ತರುಣರು ಸ್ಥಾಪಿಸಿದ ವೀರಶೈವ ಸಂಘಟನಾ ಸಭೆಯ ಪ್ರಕಟನೆಯು ನಮ್ಮ ಕಡೆ ಬಂದಿದೆ. ಅದನ್ನು ಬೇರೆ ಕಡೆ ಪ್ರಕಟಿಸಿದ್ದಾಗಿದೆ. ಈ ಸಭೆಗೆ ಅಲ್ಲಿಯ ಅನೇಕ ಪ್ರಮುಖ ಪದವೀಧರರು ಸದಸ್ಯರಾದುದು ಮತ್ತು ಸಮಾಜೋನ್ನತಿಯ ಕಾರ್ಯಕ್ಕೆ ಈ ಪ್ರಕಾರ ಮುಂದೆ ಬಂದುದು ಅತ್ಯಂತ ಅಭಿನಂದನೀಯವಾದುದು.

ಈ ನಮ್ಮ ಧರ್ಮದಲ್ಲಿ ಗುರು ವರ್ಗದವರ ಪಕ್ಷ ಮತ್ತು ವಿರಕ್ತರ ಪಕ್ಷ ಎಂಬೆರಡು ಪಕ್ಷಗಳುಂಟಾಗಿವೆಯೆಂದು ಈ ಸಭೆಯವರು ತಿಳಿದಿದ್ದಾರೆ. ಇದು ಸರಿಯಲ್ಲ. ಗುರು ವಿರಕ್ತರ ಕಲಹವೆಂದು ತೋರುತ್ತಿದ್ದರೂ ಇದು ತತ್ವವಿಶಿಷ್ಟ ಭಿನ್ನಾಭಿಪ್ರಾಯಗಳಿಂದುಂಟಾದುದೆಂಬುದು ಈ ಸಭೆಯವರಿಗೆ ವಿಚಾರಾಂತ್ಯದಲ್ಲಿ ಗೊತ್ತಾಗದಿರಲಾರದು. ವೀರಶೈವರಲ್ಲಿ ಜನ್ಮ ವಿಶಿಷ್ಟವಾದ ವರ್ಣ ಅಥವಾ ವರ್ಗವು ಇದೆಯೋ ಇಲ್ಲವೋ ಎಂಬುದೇ ವಾದದ ಮುಖ್ಯ ಪ್ರಶ್ನೆ. ಇದೆಯೆಂಬುವ ಗುರುಗಳು, ವಿರಕ್ತರು ಮತ್ತು ಭಕ್ತರು ಇರುವಂತೆ ಇಲ್ಲವೆಂಬುವ ಭಕ್ತರೂ ವಿರಕ್ತರೂ ಗುರುಗಳೂ ಇದ್ದಾರೆ. ಆದಕಾರಣ ಈ ಸಭೆಯವರು ಮೊದಲು ಕಲಹದ ನಿಜ ಸಂಗತಿಗಳನ್ನೆಲ್ಲಾ ಪರ್ಯಾಲೋಚಿಸಿ ಕಾರ್ಯಾರಂಭ ಮಾಡುವುದೇ ಕ್ಷೇಮಕರವು. ಇಂತಹ ಮಹತ್ಕಾರ್ಯಕ್ಕೆ ಮುಂದೆ ಬಂದ ಈ ಎಲ್ಲ ಮಹಾಶಯರನ್ನೂ ನಾವು ಹೃದಯಪೂರ್ವಕ ಅಭಿನಂದಿಸಿ ಎಲ್ಲ ತರುಣಸಂಘದವರೂ ಇವರೊಂದಿಗೆ ಸಹಕರಿಸಬೇಕಾಗಿ ಕೋರುತ್ತೇವೆ.

ಧರ್ಮಾತ್ಮರ ಸಂದೇಶ.

ಬರುವ ಮಹಾಶಿವರಾತ್ರಿಯ ದಿನ ಸ್ಪೃಶ್ಯಾಸ್ಪೃಶ್ಯ ಸರ್ವ ಹಿಂದುಗಳಿಗೂ ಓಂನಮಃಶಿವಾಯ ಎಂಬ ಮಂತ್ರ ದೀಕ್ಷೆಯನ್ನು ಕೊಡಬೇಕಾಗಿ ಪಂಡಿತ ಮಾಲವೀಜಿಯವರು ತಿಳಿಸಿದ್ದಾರೆ.

ವೀರಶೈವ ಬಂಧು ಭಗಿನಿಯರಲ್ಲಿ ವಿಜ್ಞಾಪನೆ.

ಬಂಧು ಭಗಿನಿಯರೇ,

ಇಂದಿನ ವಾತಾವರಣದಲ್ಲಿ ಯಾವತ್ತೂ ಧರ್ಮಗಳೂ ಹಾಗೂ ಸಂಸ್ಥೆಗಳೂ ತಮ್ಮ ತಮ್ಮ ತಳಹದಿಯನ್ನು ಆದಷ್ಟು ಉತ್ತಮ ರೀತಿಯಿಂದ ನಿಜವಾದ ತತ್ವಗಳ ಮೇಲೆ ಭದ್ರಪಡಿಸಲು ಹತ್ತಿವೆ. ಅವುಗಳೆಲ್ಲವೂ ಸಾಮಾಜಿಕ, ನೈತಿಕ, ಹಾಗೂ ಬೌದ್ಧಿಕ ರೀತಿಯಿಂದ ಜನರಿಗೆ ಉಪಯೋಗವಾಗುವಂತೆ ಐಕ್ಯತೆಯಿಂದ ಕೊಳಚೆಯನ್ನು ತೆಗೆದುಹಾಕಿ ಆದಷ್ಟು ಧರ್ಮದ ಬೆಳಕು ಪ್ರಖರವಾಗುವಂತೆ ಮಾಡಲು ಹಗಲಿರುಳು ಯತ್ನಿಸಹತ್ತಿವೆ. ಆ ಉದ್ದೇಶವನ್ನೀಡೇರಿಸಲು ಹಣದ ಮಳೆಗರೆಯುತ್ತಾರೆ; ಸ್ವಾರ್ಥಬಿಟ್ಟು ದುಡಿಯುತ್ತಾರೆ. ಇದೀಗ ನಮ್ಮ ಸಂಕುಚಿತ ದೃಷ್ಟಿಯನ್ನು ತೊರೆದು ನೋಡಿದರೆ ಕಂಡುಬರುವ ಮಾತಾಗಿದೆ.

ಹೀಗೆ ನಮ್ಮ ಕಣ್ಣುಗಳಿಂದ ಅನ್ಯ ಧರ್ಮದವರ ಕಾರ್ಯವನ್ನ ನೋಡಿದರೂ ನಾವು ವೀರಶೈವರು ಏನು ಮಾಡಿದ್ದೇವೆ? ನಮ್ಮ ಧರ್ಮದ ತತ್ವಗಳು ಯಾವ ರೀತಿಯಿಂದಲೂ ಕಡಿಮೆ ಇರದಿದ್ದರೂ ಕಣ್ಣು ಮುಚ್ಚಿಕೊಂಡು ಕುರುಡರಂತೆ ನಿಜವಾದ ಧರ್ಮವನ್ನು ಅನುಸರಿಸದೆ ಕೇವಲ ಅವರ ಭೂತದ ನೆರಳನ್ನು ಅನುಸರಿಸಿದ್ದೇವೆ. ನಿಜವಾಗಿ ಇಂದಿನ ಸಮಾಜದಲ್ಲಿ ನಮ್ಮ ತತ್ವದ ನಿಜವಾದ ಅರ್ಥವನ್ನು ತಿಳಿದು ನಡೆಯುವವರು ಸಿಗುವದೇ ಇಲ್ಲ. ಸಿಕ್ಕರೂ ವಿರಳ. ಅವರನ್ನು ಹುಡುಕಲಿಕ್ಕೆ ಎಷ್ಟು ಜನ ಸೂರ್ಯರು ಉದಯಿಸಬೇಕೋ ಕಾಣೆವು. ಇವು ಧರ್ಮದ ತತ್ವಗಳು, ಇವುಗಳ ಅರ್ಥವು ಹೀಗೆ, ನಾವು ಹೀಗೆ ಇರಬೇಕು, ಇಂಥವುಗಳನ್ನು ಮಾನ್ಯ ಮಾಡಬೇಕು, ಇವು ಸಮಾಜಕ್ಕೆ ಕೇಡನ್ನುಂಟು ಮಾಡುತ್ತವೆ, ಆದಕಾರಣ ಇವನ್ನು ತಿದ್ದಿಕೊಳ್ಳುವದುಚಿತವಾದದ್ದೆಂದು ಪ್ರಯತ್ನವನ್ನೇ ಮಾಡುವದಿಲ್ಲ. ಹಿರಿಯರು ಸೌಳು ಬಾವಿಯ ನೀರನ್ನು ಕುಡಿಯುತ್ತಿದ್ದರೆಂದು ನಾವೂ ಅವುಗಳನ್ನೇ ಕುಡಿಯುವದು ಸರಿಯೇ? ಒಂದುವೇಳೆ ಸೀನೀರು ಸಿಗದಿದ್ದರೆ ಉಪಾಯವಿಲ್ಲ. ಸಿಗಲಿಕ್ಕಾಗಿಯೂ ಹಾಗೆ ನಡೆಯುವದು ಮೂರ್ಖತನವಲ್ಲವೆ?

ಧರ್ಮದ ತತ್ವಗಳು ನಿಜವಾಗಿಯೂ ಮಾನವನ ಉನ್ನತಿಗೆ ಕಾರಣವಾಗಿರುತ್ತವೆ. ಆದರೆ ಈಗಿನವರು ತಪ್ಪುತಿಳುವಳಿಕೆಯಿಂದ ನಡೆದು ತಮ್ಮ ಕಾಲಮೇಲೆ ತಾವೇ ಕಲ್ಲು ಹಾಕಿಕೊಳ್ಳುತ್ತಾರೆ ಇವರು ಕೇವಲ ತಾವೂ ಬಲಿಬೀಳುವದಲ್ಲದೇ ತಮ್ಮ ಅನುಯಾಯಿಗಳನ್ನು ಕೂಡ ಕೆಟ್ಟ ದಾರಿಗೆ ಹಚ್ಚುತ್ತಾರೆ. ಈಗ ನಮ್ಮ ಧರ್ಮದಲ್ಲಿ ಗುರುವರ್ಗದವರ ಪಕ್ಷ ಹಾಗೂ ವಿರಕ್ತರ ಪಕ್ಷ ಹೀಗೆ ಎರಡು ಪಕ್ಷಗಳನ್ನು ಮಾಡಿ ಒಂದೇಸವನೆ ಬಡಿದಾಡುವದು ಕಂಡುಬರುತ್ತದೆ. ಇವರಲ್ಲಿ ಕುರುಡರು ಕುರುಡರನ್ನು ಅನುಸರಿಸುತ್ತಿರುವರೆಂದು ತಿಳಿದುಬರುತ್ತದೆ. ಯಾರಿಗೂ ಧರ್ಮವನ್ನು ಯಾವ ರೀತಿಯಿಂದ ಬೆಳೆಸಬೇಕು, ಐಕ್ಯತೆಯನ್ನು ಹೇಗೆ ಉಂಟುಮಾಡಬೇಕೆಂಬುವ ವಿಚಾರವೇ ಇರುವದಿಲ್ಲ ಒಂದೇ ಧರ್ಮದಲ್ಲಿ ಹೀಗೆ ಎರಡು ಮೂರು ಪಂಗಡಗಳನ್ನು ಮಾಡಹತ್ತಿದ್ದಾರೆ. "ತಂದೆ ತಾಯಿ ಬಡಿದಾಟದಲ್ಲಿ" ಕೂಸು ಘಾಸಿಯಾಯಿತೆಂಬಂತೆ ಇವರ ಬಡಿದಾಟದಲ್ಲಿ ಸಮಾಜವೇ ಕೆಟ್ಟುಹೋಗುವ ಕಾಲ ಬಂದಿದೆ. ಯಾರು ಹೆಚ್ಚಾದರೇನು? ಯಾರು ಕೀಳಾದರೇನು? ಸಮಾಜಕ್ಕೆ ಹಿತವಾದರೆ ಸಾಕೆಂಬ ಭಾವನೆಯಿಲ್ಲ. ಇಬ್ಬರ ಬಡಿದಾಟದಲ್ಲಿ ಮೂರನೆಯವರಿಗೆ ಲಾಭವೆಂಬಂತೆ ಅನ್ಯ ಧರ್ಮದವರು ಇದರ ಉಪಯೋಗ ತೆಗೆದುಕೊಳ್ಳಹತ್ತಿದ್ದಾರೆ. ಇದನ್ನು ಈ ವರ್ಗ ರೂ ಕಣ್ಣು ಮುಚ್ಚಿಕೊಂಡು ನಾವು ದೊಡ್ಡವರು ನಮ್ಮ ಮಾತು ದೊಡ್ಡದು ಎಂಬ ಹೆಮ್ಮೆಯಲ್ಲಿಯೇ ತಮ್ಮ ಪಾಂಡಿತ್ಯವನ್ನು ಹಾಳುಮಾಡಹತ್ತಿದ್ದಾರೆ. ಧರ್ಮ ಯಾರಿಂದ ಹುಟ್ಟಿಸರೇನು? ಅದೇ ಧರ್ಮದಲ್ಲಿ ಹುಟ್ಟಿದ ನಾವು ಬೆಳೆಸುವದನ್ನು ಬಿಟ್ಟುಕೊಟ್ಟು ಅದಕ್ಕೆ ಅಳಿಗಾಲ ತರಲು ಕಾರಣರಾಗುವದು ಸರಿಯೇ? ಒಂದುವೇಳೆ ನಾವೇ ಉತ್ಪಾದಕರಾದರೂ ಅನ್ಯರು ಅದಕ್ಕೆ ಸಹಾಯ ಮಾಡುತ್ತಿದ್ದರೆ ಅವರನ್ನು ಹಳಿಯುವದರಿಂದ ಆದ ಪ್ರಯೋಜನವೇನು? ಅದರಲ್ಲಿರುವ ಉದಾರ ಭಾವವನ್ನು ಮಾನ್ಯ ಮಾಡುವದು ನಮ್ಮ ಕರ್ತವ್ಯವಲ್ಲವೆ? ಒಂದುವೇಳೆ ತಾವೇ ಉತ್ಪಾದಕರೆಂದು ಅಂದುಕೊಂಡರೂ ಅಂದುಕೊಳ್ಳಲಿ. ಆದರೆ ನಮ್ಮ ಧರ್ಮ ಉಳಿಯಲಿ, ಬೆಳೆಯಲಿ, ವಿಶ್ವಕ್ಕೆಲ್ಲಾ ತನ್ನ ಬೆಳಕನ್ನು ಕೊಡಲಿ ಎಂಬ ಉದಾರ ಬುದ್ಧಿ ಇರಬೇಡವೇ? ಇಬ್ಬರು ಸ್ತ್ರೀಯರು ಒಂದು ಕೂಸಿಗಾಗಿ ಬಡಿದಾಡುವಾಗ ನ್ಯಾಯ ತೀರಿಸುವವನು ಯುಕ್ತಿಯಿಂದ ಆ ಕೂಸನ್ನು ಕಡಿದು ಹಂಚಿರೆಂದು ಹೇಳಿದಾಗ ಹಡೆದವಳು, ಕರುಳ ಹರಿದುಕೊಂಡವಳು ನನ್ನ ಮಗು ಅವಳಲ್ಲಿಯೇ ಇರಲಿ; ಎಲ್ಲಿಯಾದರೂ ಬೆಳೆದು ದೊಡ್ಡವನಾದರೆ ಸಾಕೆಂದು ಅನ್ನಲಿಲ್ಲವೆ? ಅಂಥ ಗುಣವು ಈಗಿನವರಲ್ಲಿ ಏಕೆ ಬರಕೂಡದು? ಸತ್ಯವು ಎಂದಾದರೂ ಬಯಲಿಗೆ ಬರುತ್ತದೆ. ಈಗಿನವರಲ್ಲಿ ಇಬ್ಬರೂ ಜಾಣರಿಲ್ಲ. ಬಡಿದಾಡುವದರಿಂದ ಯಾವ ಕಾರ್ಯವಾಗುತ್ತದೆ? ಸಮಾಜಕ್ಕೆ ಅದರಿಂದ ಯಾವ ಹಿತವೂ ಇಲ್ಲವೆಂದು ತಿಳಿದು ಪ್ರಸಂಗ ಬಂದಲ್ಲಿ ಸೋತು ಕಾರ್ಯ ಮಾಡಿದ್ದರೆ ಸರಿಯಾಗುತ್ತಿತ್ತು. ಸಮಾಜ ಸೇವೆ ಮಾಡುವವನು ಅವನಿಗೆ ಯಾರೂ ದೊಡ್ಡವನೆಂದು ಕರೆಯದಿದ್ದರೂ ತನ್ನ ಕಾರ್ಯದ ಬಲದಿಂದ ದೊಡ್ಡವನಾಗುತ್ತಾನೆ. ನಮ್ಮ ವಿದ್ಯೆಯು ಹಾಗೂ ವಿನಯದ ಉಪಯೋಗವಾಗಬೇಕಾಗಿದ್ದರೆ ಧರ್ಮದ ಕಾರ್ಯದಲ್ಲಿಯಾಗಲೀ ಮಲಗಿರುವ ಜನರನ್ನು ಎಬ್ಬಿಸುವದರಲ್ಲಿಯಾಗಲೀ ಧರ್ಮದ ತತ್ವಗಳನ್ನು ಪ್ರತಿಯೊಬ್ಬ ವ್ಯಕ್ತಿಯು ತಿಳಿಯುವಂತೆ ಹಾಗೂ ಅದರಂತೆ ನಡೆಯುವಂತೆ ಮಾಡುವದರಲ್ಲಾಗಲೀ ಆಗಬೇಕಾಗಿದೆ. ಇದು ಶಬ್ದಗಳಿಂದ ಬಡಿದಾಡಿ ಪಾಂಡಿತ್ಯ ಹಾಳುಮಾಡಿಕೊಳ್ಳುವ ಕಾಲವಲ್ಲ. ಆದರೆ ಉತ್ತಮ ಕಾರ್ಯ ಮಾಡಬೇಕಾದ ಕಾಲ ಜನ ಸೇವೆಯೇ ಇಂದು ದೇವ ಸೇವೆಯಾಗಿದೆ. ಆದಕಾರಣ ಬಂಧು ಭಗಿನಿಯರೇ, ಇಂದು ನಮ್ಮಲ್ಲಿ ಉಂಟಾಗಿರುವ ಪಂಗಡಗಳನ್ನು ಮುರಿದುಹಾಕಿ ಜನರಲ್ಲಿರುವ ತಪ್ಪುತಿಳುವಳಿಕೆಯನ್ನು ಹೋಗಲಾಡಿಸಿ ನಿಜವಾದ ದಾರಿಗೆ ತರುವದು ತಮ್ಮೆಲ್ಲರ ಕರ್ತವ್ಯವಾಗಿದೆ. ಜನರಿಗೆ ನಿಜವಾದ ಧರ್ಮವಾವುದೆಂಬದನ್ನು ತಿಳಿಸೋಣ. ಅದಕ್ಕಾಗಿ ಯಾವತ್ತೂ ಧರ್ಮಗ್ರಂಥಗಳನ್ನು ಅಭ್ಯಾಸ ಮಾಡೋಣ ಎಷ್ಟೋ ಶ್ರಮವೆನಿಸಿದರೂ ಐಕ್ಯತೆಯನ್ನುಂಟು ಮಾಡೋಣ. ಇದೇ ಬಿನ್ನಹ, ವಿಜ್ಞಾಪನೆ. ಇದರಲ್ಲಿ ಎರಡೂ ಪಕ್ಷದವರೂ ಒಂದೇ; ಹಿರಿಕಿರಿದೆಂಬ ಭೇದಭಾವನೆಯಿಲ್ಲ.

ಯಾವದನ್ನೇ ವಿಚಾರಿಸುವಾಗ ಇತಿಹಾಸಕ್ಕೆ ವಿಶೇಷ ಮಹತ್ವ ಕೊಡದೆ ಸದಸದ್ವಿವೇಕ ಬುದ್ಧಿ ಹಾಗೂ ಬಹುಜನರ ಹಿತ ಇವೇ ನಮ್ಮ ಒರೆಗಲ್ಲಾಗಿ ಉಳಿಯುವಂತೆ ಮಾಡಬೇಕು.

(೧) ಈ ಮೇಲ್ಕಂಡ ಉದ್ದೇಶವನ್ನೀಡೇರಿಸಲು ನಾವು ಧಾರವಾಡದ ತರುಣರು "ವೀರಶೈವ ಸಂಘಟನಾ ಸಭಾ" ಎಂಬದೊಂದು ಸಂಘವನ್ನು ಸ್ಥಾಪಿಸಿದ್ದೇವೆ.

(೨) ಅದರಂತೆ ಮೇಲ್ಕಂಡ ಹೆಸ್ಸರಿಯನ್ನೇ ಮುಂದಿಟ್ಟುಕೊಂಡು ಕೆಲಸ ಮಾಡಲಿಕ್ಕೆ ಅಲ್ಲಲ್ಲಿ ಸಂಘಗಳನ್ನು ಸ್ಥಾಪಿಸಬೇಕೆಂದು ನಮ್ಮೆಲ್ಲರ ಹಂಬಲವಿದೆ. ಅವರೆಲ್ಲರೂ ವೀರಶೈವರಲ್ಲಿ ಸಂಘಟನೆಯಾಗುವಂತೆ ಪ್ರಯತ್ನಿಸಬೇಕೆಂದು ಬೇಡಿಕೊಳ್ಳುತ್ತೇವೆ.

(೩) ಹೀಗೆ ಪ್ರತಿಯೊಂದು ಊರಲ್ಲಿ ತರುಣ ಸಂಘಗಳಾಗಲೀ ಇಲ್ಲವೆ ವೀರಶೈವ ಮತತತ್ವ ಪ್ರಚಾರಕ ಸಂಘಗಳಾಗಲೀ ಸ್ಥಾಪಿತ

ವಾಗಬೇಕು. ಅವು ಯಾವದೊಂದು ಸ್ವಮತವನ್ನು ಸ್ಥಾಪಿಸುವ ವಿಶೇಷ ಪಂಗಡಕ್ಕೆ ಸೇರಕೂಡದು. ಎರಡೂ ಪಕ್ಷಗಳಲ್ಲಿ ತಥ್ಯಾಂಶ ವೆಷ್ಟಿದೆಯೆಂಬುವನ್ನು ಪ್ರಾಂಜಲ ಮನಸ್ಸಿನಿಂದ ಐತಿಹಾಸಿಕ ಆಧಾರಗಳನ್ನು ಅಭ್ಯಾಸಿಸಿ ಧಾರ್ಮಿಕ ತಜ್ಞರಿಂದ, ತತ್ವವಾದಿಗ ಳಿಂದ ವಿಷಯ ಜ್ಞಾನ ಮಾಡಿಕೊಂಡು ಅದರ ಫ್ರತಿ ಫಲದಿಂದ ಅಜ್ಞಾನದಲ್ಲಿರುವ ಅನೇಕ ಸಮಾಜ ಬಂಧುಗಳಿಗೆ ಮನವರಿಕೆಯಾ ಗಲು ಯತ್ನಿಸಬೇಕು.

(೪) ಹೀಗೆ ಸ್ಥಾಪಿತವಾದ ಸಂಘಗಳ ಪ್ರತಿನಿಧಿಗಳದೊಂದು ಸಭೆಯು ಇದೇ ಬರುವ ಎಪ್ರೈಲ್ ತಿಂಗಳಲ್ಲಿ ಒಂದು ಊರಲ್ಲಿ ಕೂಡಿ ವಿಚಾರ ವಿನಿಮಯ ಮಾಡಿ ತಮ್ಮ ತಮ್ಮ ಕಾರ್ಯಕ್ಕೆ ಪ್ರವೃತ್ತರಾಗಬೇಕೆಂದು ನಾವು ಆಶಿಸುತ್ತೇವೆ. ಯಾವ ಸಂಘದವರಾದರೂ ತಮ್ಮ ಊರಲ್ಲಿಯೇ ಈ ಸಭೆಯನ್ನು ಕರೆಯಬೇಕೆಂದು ನಮ್ಮ ಸಂಘಕ್ಕೂ ಹಾಗು ಇನ್ನುಳಿದ ಸಂಘಗಳಿಗೂ ಸೂಚಿಸಿದ ಪಕ್ಷದಲ್ಲಿ ನಾವು ಅವರೊಡನೆ ಸಹಕಾರ ಮಾಡಿ ಕೈಕೊಂಡ ಕಾರ್ಯವನ್ನು ಯಶಸ್ವಿಯಾಗಿ ಮಾಡಲು ಸಿದ್ಧರಿದ್ದೇವೆ.

(೫) ಈಗ ಬರುವ ಮೇ ತಿಂಗಳಲ್ಲಿ ರಾಯಚೂರಿನಲ್ಲಿ ಕೂಡಲಿರುವ "ಅಖಿಲ ವೀರಶೈವ ಮಹಾಸಭೆ" ಯಲ್ಲಿ ಸಮಾಜದ ಏಕೀಕರಣವೇ ಮುಖ್ಯ ವಿಷಯವಾಗಿರಬೇಕೆಂದು ಎತ್ತಿಸಲು ಹಾಗು ಅದನ್ನು ಯಶಸ್ವಿಯಾಗುವಂತೆ ಮಾಡಲು ನಮ್ಮ ಸಂಘವು ಇನ್ನುಳಿದ ಸಂಘಗಳ ಸಹಕಾರವನ್ನು ಬೇಡುತ್ತದೆ. ಈ ವಿಷಯವನ್ನು ಕುರಿತು ಸರ್ವ ಪಕ್ಷಗಳ ಪ್ರತಿನಿಧಿಗಳನ್ನು ಕರೆಯಿಸಿಕೊಂಡು ಮಹಾಸಭೆಯವರು ಶಾಂತತೆಯನ್ನು ನೆಲೆಗೊಳಿಸುವಂತೆ ಮಾಡಬೇಕೆಂದು ನಮ್ಮ ಸಂಘವು "ಮಹಾಸಭೆಯ ವಿಷಯನಿಯಾಮಕ" ಕಮಿಟಿಯವರಿಗೆ ಬೇಡಿಕೊಳ್ಳುತ್ತದೆ. ಪ್ರತಿಯೊಂದು ಸಂಘದವರಾದರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಅವರಿಗೆ ತಿಳಿಸಬೇಕೆಂದು ವಿಜ್ಞಾಪಿಸಿಕೊಳ್ಳುತ್ತೇವೆ.

(೬) ಆದಕಾರಣ ಎಪ್ರಿಲ ತಿಂಗಳಲ್ಲಿ ಪ್ರತಿನಿಧಿಗಳ ಸಭೆಯನ್ನು ಕೂಡಿಸುವದಕ್ಕಾಗಿ ಯಾವ ಯಾವ ಸ್ಥಾನಗಳಲ್ಲಿ ತರುಣ ಸಂಘಗಳಿವೆಯೆಂಬುವನ್ನೂ ಹಾಗೂ ಅವರು ಕೈಕೊಂಡ ಕಾರ್ಯವನ್ನು ತಿಳಿಯಲು ನಮ್ಮ ಸಂಘವು ಇಚ್ಛಿಸುತ್ತದೆ. ಅದಕ್ಕಾಗಿ ದಯವಿಟ್ಟು ಯಾವತ್ತೂ ಸಂಘದವರು ತಮ್ಮ ತಮ್ಮ ವರದಿಗಳನ್ನು ನಮ್ಮ ಸಂಘಕ್ಕೆ ಕಳಿಸಿ ಪತ್ರವ್ಯವಹಾರಮಾಡಬೇಕೆಂದು ಬೇಡಿಕೊಳ್ಳುತ್ತೇವೆ.

ಕಾರ್ಯದರ್ಶಿ ವೀರಶೈವ ಸಂಘಟನಾ ಸಭಾ
ಕೊಪ್ಪರ ಚಾಳ ಕಿಲ್ಲೆ ಧಾರವಾಡ.

ನಮ್ಮ ಸಂಘದ ಸದಸ್ಯರು.

(೧) ಪ್ರೊ. ಎಸ್. ಎಸ್. ಬಸವನಾಳ ಎಮ್. ಎ (೨) ಮಿ. ಎಸ್. ಎಸ್. ಮಳಿಮಠ ಬಿ. ಎ. ಎಲ್. ಎಲ್. ಬಿ (೩) ಮಿ ಸಿ. ಜಿ. ಹುಂಡೇಕಾರ ಬಿ. ಎ. ಎಲ್. ಎಲ್. ಬಿ. (೪) ಮಿ. ಬಿ. ಎಸ್. ಮಿಣಜಿಗಿ (ವ್ಯಾಪಾರಸ್ಥರು) (೫) ಶ್ರೀಮತಿ ಗಿರಿಜಾದೇವಿಯವರು ಇಚ್ಛಂಗಿಮಠ (೬) ಮಿ. ಗದಿಗೆಪ್ಪನವರು ಹುರಳಿ (೭) ಮಿ. ಎಸ್. ಎ. ಜಕಾತಿ (೮) ಮಿ. ಎಮ್. ಜಿ. ಹಂದ್ರಾಳ ಬಿ. ಎ. (೯) ಮಿ. ಬಿ. ವ್ಹಿ. ಮೆಣಸಿನಕಾಯಿ (೧೦) ಮಿ. ಎಚ್ ಜಿ. ಪಾಟೀಲ (೧೧) ಮಿ. ಆರ್. ಬಿ. ಹಾವೇರಿ (೧೨) ಮಿ. ಎಸ್. ವ್ಹಿ. ಹಂಜ (೧೩) ಮಿ. ಎನ್. ಬಿ. ಹಿರೇಮಠ (೧೪) ಮಿ. ವ್ಹಿ. ಕೆ. ಜವಳಿ (೧೫) ಮಿ. ಎ. ವ್ಹಿ. ಕವದಿ.

ಎಂ. ಜಿ. ಹಂದ್ರಾಳ. ಬಿ. ಎ.
ತಾತ್ಪೂರ್ತಿಕ ಕಾರ್ಯದರ್ಶಿ ವೀರಶೈವ ಸಂಘಟನಾ ಸಭಾ.
ಧಾರವಾಡ.

ಶಂಕರ ಸಂಸ್ಕೃತ ಕಾಲೇಜಿನ ಸೂಚನೆ.

——::೦::——

ಸಮಸ್ತ ವೀರಶೈವ ಮಹಾ ಜನಗಳಿಗೆ ನಿವೇದಿಸುವದೇನಂದರೆ— ನಮ್ಮ ಕಾಲೇಜಿನ ವಿಷಯಕ್ಕೆ ೩-೩-೩೬ ನೆಯ 'ನವ ಸಂದೇಶ' ಪತ್ರಿಕೆಯಲ್ಲಿ ಎಂ ಆರ್. ಮೂರ್ತಿ ನಾಗೇನಹಳ್ಳಿ ಎಂಬುವವರು ಒಂದು ಲೇಖವನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಅನೇಕ ವಿಷಯಗಳು ಸಂಪೂರ್ಣ ಸುಳ್ಳಾಗಿವೆಯಲ್ಲದೆ ವಿಶೇಷವಾಗಿ ಪಂಡಿತ ಶ್ರೀ ಚಿವರೆ ಮಠದ ವೀರಭದ್ರ ಶಾಸ್ತ್ರಿಗಳ ಬಗ್ಗೆ ಬರೆದ ಆಕ್ಷೇಪಗಳೆಲ್ಲಾ ಕೇವಲ ನಿರಾಧಾರವಾಗಿವೆ. ಶ್ರೀ ವೀರಭದ್ರ ಶಾಸ್ತ್ರಿಗಳು ತುಂಬಾ ವಿಮರ್ಶಕ ದೃಷ್ಟಿಯುಳ್ಳವರೂ ಕಾಲೇಜಿನಂತಹ ಸಂಸ್ಥೆಗಳನ್ನು ನಿರ್ವಹಿಸಿ ವಿದ್ಯಾರ್ಥಿಗಳನ್ನು ಸಮಾಜಾಭ್ಯುದಯಕ್ಕೆ ಸನ್ಮುಖರನ್ನಾಗಿ ಮಾಡಲು ಸಮರ್ಥರಾಗಿದ್ದಾರೆ. ಆದುದರಿಂದಲೇ ಅವರನ್ನು ನಮ್ಮ ಕಮಿಟಿಯು ಸ್ವಾಭಿಲಾಷೆಯಿಂದ ಪ್ರಿನ್ಸಿಪಾಲ ಸ್ಥಾನಕ್ಕೆ ಆಹ್ವಾನಿಸಿಕೊಂಡಿರುವದು. ಎಂ. ಆರ್. ನಾಗೇನಹಳ್ಳಿ ಎಂಬುವವರು ಈ ಮುಂಚೆ ನಮ್ಮ ಕಾಲೇಜಿನ ವಿದ್ಯಾರ್ಥಿಯಾಗಿದ್ದು ಮಹಾ ಕಲಹಪ್ರಿಯನೆಂದು ಪ್ರಸಿದ್ಧಿ ಪಡೆದಿದ್ದನಷ್ಟೆ. ಈತನು ಕೆಲವು ಸ್ವಾರ್ಥಿಗಳು ಹುರಿದುಂಬಿಸಿದ ಕೂಡಲೆ ಈ ತರಹದ ಲೇಖವನ್ನು ಪ್ರಕಟಿಸಿದ್ದಾನೆ. ಅದು ಎಷ್ಟೂ ವಿಶ್ವಾಸಾರ್ಹವಾಗಿಲ್ಲ. ನಮ್ಮ ಕಾಲೇಜಿನ ಸಮಸ್ತ ಕಾರ್ಯಗಳು ಶಾಂತತೆಯಿಂದಲೂ ವ್ಯವಸ್ಥೆಯಿಂದಲೂ ನಡೆಯುತ್ತಲಿವೆ. ಏನಾದರೂ ಸೂಚಿಸತಕ್ಕವರು ನಮಗೆ ತಿಳಿಸದೆ ವಿನಾ ಪತ್ರಿಕೆಗಳಲ್ಲಿ ಮಿಥ್ಯಾವಾರ್ತೆಗಳನ್ನು ಪ್ರಕಟಿಸಿ ವ್ಯರ್ಥವಾಗಿ ಆಂದೋಲನವನ್ನುಂಟುಮಾಡಬಾರದಾಗಿ ಸೂಚನೆ.

ಯಾದಗಿರಿ ತಾ. ೭-೨-೩೬ } **ಅಧ್ಯಕ್ಷರ ಅಪ್ಪಣೆ ಪ್ರಕಾರ ಸಹಾಯ ಸೆಕ್ರೆಟರಿ.**

—ಹಿಂದಕ್ಕೆ ಕುರಂದವಾಡದಲ್ಲಿ ನೆರವೇರಿದ ಮಹಾ ಯಜ್ಞದಂತೆಯೇ ನಾಂಗಲಿಯಲ್ಲಿಯೂ ಕೃಷ್ಣಾತಟಾಕದಲ್ಲಿ ಒಂದು ಮಹಾ ಯಜ್ಞ ಆಗಲಿರುವದು.

—ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳಿಗೆಲ್ಲ ಒಂದೇ ಒಂದು ಹಾಯಕೋರ್ಟ ಇರಬೇಕೆಂಬ ಬಗ್ಗೆ ಪುಣೆಯಲ್ಲಿ ದಕ್ಷಿಣ ಮಹಾರಾಷ್ಟ್ರದ ಕೆಲವು ಸಂಸ್ಥಾನಿಕರೂ ಮತ್ತು ದಿವಾಣರೂ ಕೂಡಿ ಚರ್ಚಿಸಿದರು. ಕೊನೆಗೆ ಎಲ್ಲ ಹಾಯಕೋರ್ಟುಗಳು ಕೂಡಿ ಒಂದು ಸಂಯುಕ್ತ ಹಾಯಕೋರ್ಟ ಮೊದಲು ಸ್ಥಾಪಿಸಬೇಕೆಂದು ನಿರ್ಣಯವಾಯಿತು.

—ಹೈದರಾಬಾದ ಸಂಸ್ಥಾನದ ವಾಪನ್ನಾಪೇಟ ಎಂಬಲ್ಲಿ ಸಿಂಹದ ಉಪದ್ರವ ಬಹಳವಾಗಿದೆ. ಅನೇಕ ಜನರು ಗಾಯಪಟ್ಟಿದ್ದಾರೆ. ಮೊನ್ನೆ ಒಬ್ಬ ಹೆಣ್ಣುಮಗಳು ಮಲಗಿಕೊಂಡಿರುವಾಗ ಮುಂದಿರುವ ಅವಳ ಕೂಸನ್ನು ಸಿಂಹವು ಎತ್ತಿಕೊಂಡು ಹೋಯಿತಂತೆ.

—ಸಿಕಂದರಾಬಾದದಲ್ಲಿದ್ದ ಕಮರುದ್ದೀನಮಸೀದೆಯಲ್ಲಿ ರಾಮಪ್ರಸಾದ ಎಂಬ ಒಬ್ಬ ತರುಣ ಬ್ರಾಹ್ಮಣನೊಬ್ಬನು ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದನು.

—ಬೆಳಗಾವಿ ಜಿಲ್ಹೆಯ ಹೊಲದ ಒಕ್ಕಲ ಬ್ಯಾಂಕಿನ ಉದ್ಘಾಟನ ಸಮಾರಂಭವು ದಿ. ಬ. ಕಂಬಳಿಯವರ ಹಸ್ತದಿಂದ ನೆರವೇರಿತು.

—ಮೈಸೂರ ನಗರದಲ್ಲಿ ಪ್ರಾರಂಭ ಮಾಡಿದ ರೇಡಿಯೋ ಯಂತ್ರಕ್ಕೆ ಸಂಸ್ಥಾನ ಸರಕಾರದವರು ೬ ಸಾವಿರ ರೂ. ಗಳನ್ನೂ ಮುಂದೆ ಪ್ರತಿ ತಿಂಗಳ ೩೦೦ ರೂಪಾಯಿಗಳನ್ನೂ ಕೊಡುವರು. ಇದರ ಮೂಲಕ ಹಳ್ಳಿಗಳಲ್ಲಿ ವಿದ್ಯಾಪ್ರಸಾರ, ಕೈಗಾರಿಕೆ, ಮನರಂಜನೆ ಮುಂತಾದವುಗಳನ್ನು ಮಾಡಬೇಕೆಂದಿರುವರು.

ಪತ್ರಗಳ ಸಾರಾಂಶ.

ಆತ್ಮಾನಂದದ ಸುದ್ದಿ.

ಬೆಂಗಳೂರಿನ ಶ್ರೀಮಾನ್ ಎಂ. ಎನ್. ಶಿವಪ್ಪನವರ ಸಹೋದರರು ಭಗವಾನ್ ಶ್ರೀ ಬಸವಣ್ಣನವರ ವಚನಗಳನ್ನು ಹಿಂದೀ ಭಾಷೆಗೆ ಪರಿವರ್ತನೆ ಮಾಡಿಸಿರುವರು. ಇದಕ್ಕೆ ಮುನ್ನುಡಿ ಅಲಹಾಬಾದಿನ ಸಾಹಿತ್ಯಕಲಾ ಕೋವಿದರಾದ ಪಂಡಿತ ಸುಂದರಲಾಲರು ಬರೆದಿರುತ್ತಾರೆ. ಈ ಪುಸ್ತಕವು ಶ್ರಿ ಬಸವ ಜಯಂತಿ ಒಳಗಾಗಿ ವಾಚಕರ ಕೈ ಸೇರಬೇಕೆಂದು ಬಹು ಜಾಗ್ರತೆಯಿಂದ ಹಿಂದಿ ಮುದ್ರಣಾಲಯದಲ್ಲಿ ಮುದ್ರಣವಾಗುತ್ತಿರುವುದು. ಉತ್ತರ ಕರ್ನಾಟಕದ ಪಧವೀಧರರು ಮತ್ತು ಶ್ರೀಮಂತರು ಮೇಲ್ಕಂಡ ಮಹನೀಯರ ಅನುಕರಣವನ್ನು ಅನುಸರಿಸಲೆಂದು ಜಗಚ್ಚಕ್ರ ಚಾಲಕನಾದ ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ.

ತಾ. ೧೦-೨-೧೯೩೬ ಬೆಂಗಳೂರು. } ಡಿ. ಯಶ್ ಚಂದ್ರಪ್ಪ.

ಉತ್ಸವ ಸಮಾರಂಭ.

ಬಂಥನಾಳ:— ಪ್ರತಿವರ್ಷದ ಪದ್ಧತಿಯಂತೆ ಇದೇ ತಿಂಗಳ ತಾ. ೨೨-೨೩-೨೪ ನೆಯ ತಾರೀಖಿನ ದಿವಸ (೧) ಅಗ್ನಿ ಸಮಾರಂಭ (೨) ಅಗ್ನಿ ಶಮನ ಮತ್ತು ಅನ್ನ ಸಂತರ್ಪಣ (೩) ದನಗಳ ಪ್ರದರ್ಶನ (೪) ತರುಣರ ಆಲೋಚನಾ ಕಮಿಟಿ (೫) ಶಿವಕೀರ್ತನ ಮುಂತಾದವುಗಳು ಜರಗುವವು. ಮುಖ್ಯವಾಗಿ ಸಮಾಜ ಸೇವೆ ಮಾಡಲಿಚ್ಛಿಸುವ ತರುಣರು ಅವಶ್ಯವಾಗಿ ಬರಬೇಕೆಂದು ಉತ್ಸವ ಕಮಿಟಿಯವರು ಪ್ರಕಟಿಸಿದ್ದಾರೆ.

ರಟಕಲ್ಲ:— (ನಿಜಾಮ ರಾಜ್ಯ) ಇಲ್ಲಿಯ ಶ್ರೀ ಮ. ನಿ. ಮುರುಘರಾಜೇಂದ್ರ ಮಹಾಸ್ವಾಮಿಗಳವರ ಮಠದಲ್ಲಿ ಮಹಾಶಿವರಾತ್ರಿಯ ದಿವಸ ಮಹಾರುದ್ರಾಭಿಷೇಕ ಕಾರ್ಯವು ನಡೆಯುತ್ತದೆ. ಸಮಸ್ತ ವೀರಶೈವರೂ ಆಗಮಿಸಬೇಕಾಗಿ ಉತ್ಸವದ ಭಕ್ತ ಮಂಡಲಿಯವರು ಪ್ರಾರ್ಥಿಸುತ್ತಾರೆ.

ದಾವಣಗೆರೆ:— ಇಲ್ಲಿಯ ಶ್ರೀ ವೀರಶೈವ ತರುಣ ಸಂಘದವರು ಚಿತ್ರದುರ್ಗದ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರಿಗೆ ತಾ. ೩-೨-೩೬ ನೆಯ ದಿವಸ ಬಿನ್ನವತ್ತಳೆಯನ್ನರ್ಪಿಸಿದರು. ಈ ತರುಣ ಸಂಘದವರು ವಿರಕ್ತ ಮಠದಲ್ಲಿ ವಾಚನಾಲಯ, ಪುಸ್ತಕ ಭಂಡಾರ, ಮತ್ತು ಸಾಪ್ತಾಹಿಕ ಧಾರ್ಮಿಕ ಪ್ರವಚನ ಮುಂತಾದವುಗಳನ್ನು ಏರ್ಪಡಿಸುವದಾಗಿ ಬಿನ್ನವತ್ತಳೆಯಲ್ಲಿ ನಿವೇದಿಸಿಕೊಂಡಿರುವರು.

ಹಿಂದು ಮಹಾಸಭಾ ಶಾಖೆ ವಿಜಾಪುರ.

ಇಲ್ಲಿ ಹಿಂದು ಮಹಾಸಭೆಯ ಶಾಖೆಯು ತಾ. ೧೬-೧೧-೩೫ನೇ ದಿವಸ ಸ್ಥಾಪನೆಯಾಗಿರುತ್ತದೆ. ಶಾಖೆಯು ಸದ್ಯಕ್ಕೆ ಮಾಡಲಿಚ್ಛಿಸುವ ಕಾರ್ಯಗಳು ಈ ಪ್ರಕಾರವಾಗಿವೆ—

೧ ಪಟ್ಟಣದ ಎಲ್ಲ ಕಡೆಗೂ ವ್ಯಾಯಾಮ ಶಾಲೆಗಳನ್ನು ಸ್ಥಾಪಿಸಿ ಲಾಠಿ ಕುಸ್ತಿ ಮೊದಲಾದ ಬಲ ಸಂವರ್ಧಕ ವ್ಯಾಯಾಮಗಳ ಶಿಕ್ಷಣ ಕೊಟ್ಟು ತರುಣರ ಬಲವನ್ನು ಸಂವರ್ಧನೆ ಮಾಡುವದು.

೨ ಸ್ವಯಂಸೇವಕರ ಸಂಘಗಳನ್ನು ಸ್ಥಾಪಿಸುವದು.

೩ ಅಸ್ಪೃಶ್ಯತಾ ನಿವಾರಣೆ.

೪ ಹಿಂದು ಸಂಘಟನೆ.

ಹಿಂದು ಮಹಾ ಸಭೆಯ ವಾರ್ಷಿಕ ವರ್ಗಣಿ ೫ ಆಣೆ(೦-೫-೦) ಇರುತ್ತದೆ. ಎಲ್ಲ ಹಿಂದುಗಳು ಕೆಳಗೆ ಬರೆದ ಪತ್ತೆಗೆ ಹಿಂದು ಮಹಾ ಸಭೆಯ ಕಚೇರಿಯಲ್ಲಿ ಬಂದು ವರ್ಗಣಿ ಕೊಟ್ಟು ಮೆಂಬರರಾಗಬೇಕೆಂದು ವಿನಂತಿ ಅದೆ.

ಪತ್ತೆ:— ವ್ಹಿ. ಬಿ. ಸರದೇಶಪಾಂಡೆ.
ಬಿ. ಎ ಎಲ್ ಎಲ್. ಬಿ. ವಕೀಲ. ಇವರ ಆಫೀಸ ಭತ್ತಿ ಇವರ ಥಿಯೇಟರದ ಹಿಂದೆ ಬಕ್ಷಿ ಇವರ ಮನೆಯಲ್ಲಿ.

ಒಕ್ಕಲಿಗರ ದೈನ್ಯಾವಸ್ಥೆ.

ವಿಜಾಪುರ ಜಿಲ್ಹೆಯ ಸಂಗಮ ಮರೋಳ ಭಾಗದಲ್ಲಿ ಮೊನ್ನೆ ಆಣೆಕಲ್ಲಿನ ಮಳೆಯಾಗಿ ಹತ್ತಿ, ಬಿಳಿಜೋಳದ ಬೆಳೆಗಳೆಲ್ಲ ಸಂಪೂರ್ಣ ಹಾಳಾಗಿಹೋಗಿವೆ. ಒಕ್ಕಲಿಗರೆಲ್ಲ ತಮ್ಮ ಹೊಲಗಳ ಅವಸ್ಥೆಯನ್ನು ನೋಡಿ ಕಣ್ಣೀರು ತಂದರು. ಹಪ್ತೆ, ತಗಾಯಿ, ಸೊಸಾಯಿಟಿ ಸಾವಕಾರರ ಸಾಲ, ಮುಂದಿನ ಪೀಕು ಬರುವವರೆಗೆ ಉಪಜೀವನ ಇವೆಲ್ಲ ಒಕ್ಕಲಿಗನಿಗೆ ಏಕಪ್ರಕಾರವಾಗಿ ಬಾಧಿಸಹತ್ತಿವೆ. ಸರಕಾರದವರು ಇದನ್ನು ನೋಡಿ ಹಪ್ತೆ ಸೂಟಬಿಡದಿದ್ದರೆ ಗತ್ಯಂತರವಿಲ್ಲ. ಪ್ರತ್ಯಕ್ಷದರ್ಶಿ.

ಮುಗುಟಖಾನ ಹುಬ್ಬಳ್ಳಿ.

ಇಲ್ಲಿ ತಾ. ೬-೨-೧೯೩೬ ನೇ ಗುರುವಾರ ದಿವಸ ಪರಮಪೂಜ್ಯ ರಾಚಪ್ಪನವರು ಹತ್ತಿ ಪೆ. ಹೆಡ್‌ಮಾಸ್ತರ ಇವರ ಹಸ್ತದಿಂದ "ಸಮಾಜ ಸೇವಾ ಮಂಡಲ" ದ ಉದ್ಘಾಟನ ಸಮಾರಂಭವು ವೈಭವದಿಂದ ಜರುಗಿತು.

ಸಮಾಜ ಸೇವಾ ಮಂಡಲದ ಧ್ಯೇಯಗಳು—

(೧) ಶಿಕ್ಷಣ ಪ್ರಸಾರ ಮಾಡುವದು. (೨) ಗ್ರಾಮ ಸುಧಾರಣಾ. (೩) ವಾಚನಾಭಿರುಚಿ ಹೆಚ್ಚಿಸುವದು. (೪) ಕನ್ನಡ ವಾಙ್ಮಯ ಪ್ರಸಾರ ಮಾಡುವದು. (೫) ಎಲ್ಲ ಧರ್ಮಗಳಿಗೆ ಸಹಾನುಭೂತಿ ತೋರಿಸುವುದು. (೬) ಶಾರೀರಕ ಶಿಕ್ಷಣದಭಿವೃದ್ಧಿ ಮಾಡುವದು. (೭) ಖಾದಿ ಪ್ರಸಾರ ಮಾಡುವದು. (೮) ಶಾಂತತೆ ನೆಲೆಗೊಳಿಸುವದು.

ಮಂಡಲದಲ್ಲಿ ಹಾಜರಿದ್ದ ಮೆಂಬರರ ಹೆಸರುಗಳು—

(೧) ಸ್ವಾಮಿ ಚಿನ್ಮಯಮೂರ್ತಿ ಓಂಕಾರ ಮಠ ಅಧ್ಯಕ್ಷ (೨) ಮಲ್ಲಪ್ಪಾ ರುದ್ರಪ್ಪ ಕತ್ತಿ ಉಪಾಧ್ಯಕ್ಷ (೩) ವಿರುಪಾಕ್ಷಪ್ಪಾ ಬಸವಂತಪ್ಪ ಬೆಟಗೇರಿ ಕೋಶಾಧ್ಯಕ್ಷ (೪) ಮುದಕಪ್ಪಾ ಭೀಮಪ್ಪಾ ಕೆಂಚರಾಹುತ (೫) ಬಸವಣ್ಣೆಪ್ಪಾ ಮಲ್ಲೇಶಪ್ಪಾ ನಂಗ್ಯೆನವರ ಇತ್ಯಾದಿ. ಐದು ಜನರು ವ್ಯಾನೇಜಿಂಗ ಕಮಿಟಿ ಮೆಂಬರರು ಇರುತ್ತಾರೆ. ಈ ಊರ ಈ ಉತ್ಸಾಹಿ ತರುಣರು ಆಳಲೀ ಭಕ್ತಿಯ ದೇಶ ಸೇವೆಯನ್ನು ಗೈಯಬೇಕೆಂದು ಈ ಮಂಡಲವನ್ನು ಸ್ಥಾಪಿಸಲಾಗಿದೆ. ಈ ಮಂಡಲವು ಹೇಗೆ ಸುಲಲಿತವಾಗಿ ನಡೆಯಬೇಕೆಂಬ ಬಗ್ಗೆ ಪೂಜ್ಯರಾದ ರಾಚಪ್ಪನವರು ಹತ್ತಿ ಹೆಡ್‌ಮಾಸ್ತರರೂ ಮತ್ತು ಶ್ರೀ ವೀರಭದ್ರಪ್ಪಣ್ಣಾ ಪಟ್ಟಣಶೆಟ್ಟಿ ಪೋಸ್ಟ ಮಾಸ್ತರ ಇವರೂ ಬೋಧಪ್ರದ ಭಾಷಣ ಮಾಡಿದರು. ಕಟ್ಟ ಕಡೆಗೆ ಈ ಮಂಡಲದ ವತಿಯಿಂದ ಸಮಾರಂಭಕ್ಕೆ ಬಂದ ಮಹನೀಯರ ಆಭಾರವನ್ನು ಸ್ವಾಮಿ ಚಿನ್ಮಯ ಮೂರ್ತಿಯವರು ಮನ್ನಿಸಿ ಸಭೆಯು ವಿಸರ್ಜಿಸಲ್ಪಟ್ಟಿತು.

ಸೆಕ್ರೆಟರಿ. ಸ. ಸೇ. ಮಂಡಲ.

ವಿವಿಧ ವಿಷಯ.

ಮಡಿ ಮೈಲಿಗೆಯ ನಿಜಸ್ವರೂಪ.

ಸ್ವಾಮಿ ವಿವೇಕಾನಂದರ ಗುರುಗಳಾದ ಶ್ರೀ ರಾಮಕೃಷ್ಣ ಪರಮಹಂಸರ ಬಳಿಗೆ ಒಬ್ಬ ಶಿಷ್ಯನು ಹೋಗಿ ಹೀಗೆ ಕೇಳಿದನು--"ಸ್ವಾಮಿ, ಮನುಸ್ಸು ಶುದ್ಧವಾಗಲಿಕ್ಕೆ ದೇಹ ಶುದ್ಧಿಯು ಅವಶ್ಯವೆಂದು ಹೇಳಲಾಗುತ್ತದೆ. ಆದರೆ ನಾನು ಧ್ಯಾನಮಾಡಲು ಕುಳಿತರೆ ಮನಸ್ಸಿನ ಏಕಾಗ್ರತೆಯೇ ಆಗಲೊಲ್ಲದು. ಇದಕ್ಕೆ ಹೇಗೆ ಮಾಡಬೇಕು?"

ಸ್ವಾಮಿಗಳು ಆತನನ್ನು ಕ್ಷಣಹೊತ್ತು ದಿಟ್ಟಿಸಿ ನೋಡಿ, ನೀನು ಧ್ಯಾನಕ್ಕೆ ಕೂಡ್ರುವ ಪೂರ್ವದಲ್ಲಿ ಹರಿಯೊಳಗಿನ ಹೊಲಸು ನಾರುವ ಕೆಸರನ್ನು ಹಣೆಗೆ ಬಳಿದುಕೊಂಡು ಧ್ಯಾನಮಾಡು. ಅಂದರೆ ಗುಣಬರುವದು ಎಂದು ಹೇಳಿದರು. ಮರುದಿವಸ ಎಲ್ಲ ಶಿಷ್ಯರಿಗೆ ಪರಮಹಂಸರು ಹೀಗೆ ಹೇಳಿದುದರ ರಹಸ್ಯವನ್ನು ಈ ಪ್ರಕಾರ ತಿಳಿಸಿಕೊಟ್ಟರು—

"ದೇಹದ ಸ್ವಚ್ಛತೆಯು ಮಧುರ ಭಾವನೆಯುಂಟಾಗಲು ಅತ್ಯಾವಶ್ಯಕವಾದುದಾಗಿದೆ. ಆದರೆ ಅದೇ ಮುಖ್ಯವಾದುದಲ್ಲ. ಏಕೆಂದರೆ ನಾವು ಯಾವಾಗಲೂ ದೇಹ ಶುದ್ಧಿಯ ಕಡೆಗೇನೇ ಲಕ್ಷ ಕೊಡಹತ್ತಿದರೆ ಅದೊಂದು ನಮಗೆ ಚಟವಾಗಿಯೇ ಪರಿಣಮಿಸುವದು. ಆ ಚಟದ ಮೂಲಕ ನಮ್ಮ ಮನಸ್ಸು ಯಾವಾಗಲೂ ದೇಹದ ಮೇಲೆಯೇ ಸುತ್ತುವರಿಯಹತ್ತುತ್ತದೆ. ಧ್ಯಾನ ಮೂಲಕ ಅಂತರ್ಯದಲ್ಲಿ ಪ್ರವೇಶಿಸುವ ಶಕ್ತಿಯೇ ಅದಕ್ಕೆ ಬರುವದಿಲ್ಲ. ಮಡಿ, ಮಡಿ ಎಂದು ಯಾವಾಗಲೂ ಮಡಿ ಹುಡಿಯಲ್ಲಿಯೇ ಮಗ್ನನಾದ ಆ ಶಿಷ್ಯನು ಧ್ಯಾನಕ್ಕೆ ಕುಳಿತಾಗ ನಾನು ನೋಡಿದೆನು. ಅವನ ಲಕ್ಷವು ಯಾವಾಗಲೂ ದೇಹದ ಮಡಿಯ ಕಡೆಗೇನೇ ಇದ್ದಿತು. ಅಂದಮೇಲೆ ಧ್ಯಾನಮಾಡಲು ಹೇಗೆ ತಾನೆ ಶಕ್ಯ?"

ಪರಮಹಂಸರ ಈ ಬೋಧೆಯನ್ನು ವಿಪರೀತ ಮಡಿ ಮಾಡುವವರು ಚನ್ನಾಗಿ ಯೋಚಿಸಲಿ. ದೇಹ ಶುದ್ಧಿಯು ಎಷ್ಟರಮಟ್ಟಿಗೆ ಆಗಬೇಕಾದುದೋ ಅಷ್ಟೇ ಮಾಡಿಕೊಳ್ಳುವದು ಯುಕ್ತವು ಗೋಡೆ ಮುಟ್ಟಿದರೆ, ಕಂಬ ಮುಟ್ಟಿದರೆ, ಎರಡನೆಯವರ ಸಂಗಡ ಮಾತನಾಡಿದರೆ ಮೈಲಿಗೆಯಾಯಿತೆಂದು ತಿಳಿಯುವವರಿಗೆ ನಿಜವಾಗಿ ಮಡಿಯ ಚಟವೇ ಹುಟ್ಟಿರುತ್ತದೆ. ಎಲ್ಲ ಚಟಗಳಂತೆ ಇದೂ ಒಂದು ಮಾಯಾಪ್ರಚೋದಿತ ಚಟವೇ ಆಗಿದೆ. ಗಾಂಜ ಸೇದುವದೂ ಒಂದು ಚಟ. ಚಹ ಕುಡಿಯುವದೂ ಒಂದು ಚಟ. ಒಂದು ದಿನ ಅವಿಲ್ಲದಿದ್ದರೆ ಹುಚ್ಚೇ ಹಿಡಿಯುವದು. ಹಾಗೆಯೇ ವಿಪರೀತ ಮಡಿ ಮಾಡುವದೂ ಒಂದು ಚಟ. ಒಂದು ದಿನ ಅಲ್ಪ ಸ್ವಲ್ಪ ಮಡಿ ಮಾಡಿದರೆ ಭ್ರಮೆಯೇ ಹಿಡಿಯುವದು.

ಇನ್ನು ಕೆಲವರಾದರೊ ಸ್ವಚ್ಛತೆಯ ಕಲ್ಪನೆಯು ಸಹ ಇಲ್ಲದೆ ಮಡಿ ಮೈಲಿಗೆಯನ್ನು ಪಾಲಿಸುತ್ತಾರೆ. ಅಂಥವರಿಗೆ ಹೊತ್ತಿಗೆಯು ಇಲ್ಲವೆ ರೂಢಿಯ ಗುಲಾಮರೆನ್ನಬಹುದು. ಅಂಥವರಿಗೆ ರಾಮಕೃಷ್ಣರೇ ಏಕೆ ಬ್ರಹ್ಮದೇವನು ಕೂಡಾ ಹೇಳಿದರೂ ಅವರ ವಿಭ್ರಮೆ ಹೋಗದು.

ಆದಿಜನರಿಗೆ ಸಹಾಯ.

ಶ್ರೀ ಶಂಕರಾಚಾರ್ಯರು (ಡಾ. ಕುರ್ತಕೋಟಿ) ನಾಸಿಕದಲ್ಲಿ "ಅಸ್ಪೃಶ್ಯತಾ ನಿವಾರಣೆ ಸಮಿತಿ" ಎಂಬ ಒಂದು ಸಂಘವನ್ನು ಸ್ಥಾಪಿಸಿದ್ದಾರೆ. ಅದರಲ್ಲಿ ೯ ಉಪಸಮಿತಿಗಳನ್ನು ಏರ್ಪಡಿಸಿದ್ದಾರೆ. ಒಂದನೆಯದು ವಕೀಲ ಸಮಿತಿ. ಅದರಲ್ಲಿ ಕೆಲವು ಜನ ವಕೀಲರು ಆದಿಜನರ ವ್ಯಾಜ್ಯಗಳನ್ನು ಹಿಡಿದು ಕೋರ್ಟು ಕಚೇರಿಗಳಲ್ಲಿ ಅವುಗಳ ವಿಷಯದಲ್ಲಿ ವಾದ ಮಾಡುವರು. ಎರಡನೆಯದು ವರ್ತಕರ ಸಮಿತಿಯು. ಇವರು ಆದಿಜನರಿಗೆ ಕಳ್ಳ ರೀತಿಯಲ್ಲಿ ಪದಾರ್ಥಗಳ ಪುರವಠೆ ಮಾಡುವರು. ಮೂರನೆಯದೊಂದು ಸಹಕಾರ ಸಮಿತಿಯೆಂದು ಇದೆ, ಈ ಸಮಿತಿಯವರು ಆದಿಜನ ಬ್ಯಾಂಕು ಸ್ಥಾಪಿಸಿ ಆದಿಜನರನ್ನು ಋಣಮುಕ್ತ ಮಾಡಲು ಉಪಾಯಗಳನ್ನು ಕೈಕೊಳ್ಳುವರು. ನಾಲ್ಕನೆಯದು ಕೀರ್ತನ ಸಮಿತಿಯು. ಈ ಸಮಿತಿಯವರು ಗ್ರಾಮಾಂತರಗಳಲ್ಲೆಲ್ಲ ಸಂಚರಿಸಿ ಆದಿಜನರಿಗೆ ಕೀರ್ತನೆಯ ಮೂಲಕ ಧರ್ಮ ಬೋಧೆ ಮಾಡುವರು. ಐದನೆಯದು ವೈದ್ಯ ಸಮಿತಿ. ಈ ಸಮಿತಿಯವರು ಆದಿಜನರಿಗೆ ಉಚಿತವಾಗಿ ಔಷಧೋಪಚಾರ ಮಾಡುವರು.

ಈ ಮುಂತಾಗಿ ಒಂಭತ್ತು ವಿಧದಿಂದ ಆದಿಜನ ಕಾರ್ಯ ಮಾಡುವ ಸಮಿತಿಗಳ ಏರ್ಪಾಟಾಗಿದೆ.

ದಿಲ್ಲಿಯಲ್ಲಿ ಆದಿಜನರಿಗಾಗಿ ೧೦ ಸಾವಿರ ರೂಪಾಯಿ ಬೆಲೆಯ ಒಂದು ದೇವಾಲಯವನ್ನು ಕಟ್ಟಿಸಲು ಪ್ರಾರಂಭವಾಗಿದೆ.

ದಿಲ್ಲಿಯಲ್ಲಿ ಕೂಡಿದ 'ಹರಿಜನ ಸೇವಕ ಸಂಘದ' ಸಭೆಯಲ್ಲಿ ಆದಿಜನರಿಗೆ ದೇವಾಲಯ ಪ್ರವೇಶಕ್ಕಾಗಿ ಮುಕ್ತತೆ ಮಾಡಿಕೊಡಲು ಅಸೆಂಬ್ಲಿಯಲ್ಲಿ ಒಂದು ಗೊತ್ತುವಳಿಯನ್ನು ತರಬೇಕೆಂದು ನಿರ್ಣಯವಾಯಿತು.

ಪವಿತ್ರ ಭಾವನೆ.

ಮಹಾತ್ಮಾಜಿಯವರ ಆಶ್ರಮದಲ್ಲಿ ವಿನೋಬಾ ಎಂಬ ಒಬ್ಬ ತರುಣನು ಖಾದಿಯ ಕೆಲಸದಲ್ಲಿ ಒಳ್ಳೇ ಕುಶಲನಾಗಿದ್ದಾನೆ. ಒಳ್ಳೇ ಶುದ್ಧ ಹೃದಯ ಆತನದು. ಖಾದಿಯ ನೂಲನ್ನು ಒಳ್ಳೇ ಭಕ್ತಿಯಿಂದ ತೆಗೆಯುವದರಿಂದ ಅವನ ನೂಲು ಸರ್ವೋತ್ಕೃಷ್ಟವಾಗುತ್ತದೆ. ಇನ್ನೊಂದು ವಿಶೇಷವೆಂದರೆ ಅವನು ಎರಡೂ ಕೈಗಳಿಂದಲೂ ನಯವಾಗಿ ನೂಲು ತೆಗೆಯುತ್ತಾನೆ. ಅಂಥ ಉತ್ತಮವಾದ ನೂಲಿನಿಂದ ಸರ್ವೋತ್ತಮವಾದ ಧೋತರ ಜೋಡುಗಳನ್ನು ತಯಾರಿಸುತ್ತಾನೆ.

ಅವನು ತಾನು ನೆಯ್ದ ಧೋತರದ ಮೊದಲನೆಯ ಜೋಡನ್ನು ತನ್ನ ತಂದೆಗೆ ಅರ್ಪಿಸಿದನು. ಉಳಿದ ಜೋಡಿಗಳನ್ನು ಕೊಳ್ಳಲಿಕ್ಕೆ ಅನೇಕ ಜನರು ಹಾತೊರೆದರು. ಅವನ ಹಸ್ತದಿಂದಾದ ಅಂಥ ಪವಿತ್ರ, ನಯವಾದ ಧೋತರಗಳಿಗಾಗಿ ಸಾಕಷ್ಟು ಬೆಲೆಯನ್ನು ಕೊಡಲು ಅವರು ಸಿದ್ಧರಿದ್ದರು. ಆದರೆ ಅಸ್ತೇಯ ವ್ರತವನ್ನು ಪಾಲಿಸುವ ವಿನೋಬನಿಗೆ ಅದು ಸರಿಬೀಳಲಿಲ್ಲ. ಅಂಥಾ ಪವಿತ್ರಾತ್ಮನ ಹಸ್ತದಿಂದ ಸಿದ್ಧವಾದ ಧೋತರಗಳು ದೇವರಿಗಲ್ಲದೆ ಮನುಷ್ಯರಿಗೆ ಸಲ್ಲವೆಂದು ತಿಳಿದು ಶ್ರೀ ಜಮನಾಲಾಲಜಿ ಬಜಾಜ ಇವರು ಅವುಗಳನ್ನು ತಾವು ಆದಿಜನರಿಗಾಗಿ ತೆರೆದು ಕೊಟ್ಟಿರುವ ಲಕ್ಷ್ಮೀನಾರಾಯಣ ದೇವರಿಗೆ ಸಮರ್ಪಿಸಿದರು. ಇನ್ನು ಮುಂದಾದರೂ ಅವನು ಸಿದ್ಧಪಡಿಸುವ ಬಟ್ಟೆಗಳನ್ನೆಲ್ಲ ಆದಿಜನರಿಗೂ ತೆರೆಯಲ್ಪಟ್ಟ ದೇವಾಲಯಗಳ ದೇವತೆಗಳಿಗೆಲ್ಲ ಅರ್ಪಿಸುವ ಸಂಕಲ್ಪ ಮಾಡಿರುವರು.

ವೀರಶೈವರಿಗೆ ಇದರಿಂದ ಒಂದು ಸಂಗತಿಯು ನೆನಪಾಗುವದಿಲ್ಲವೆ? ಪರಮ ಶಿವಶರಣರಾದ ಹರಳಯ್ಯನವರು ಪವಿತ್ರ ಹೃದಯದಿಂದ ಬಸವಣ್ಣನವರಿಗಾಗಿ ಸಿದ್ಧಪಡಿಸಿದ ಮೊಚ್ಚೆಗಳನ್ನು ಬಸವಣ್ಣನವರು ಸ್ವೀಕರಿಸದೆ ಇವು ಸಂಗಮದೇವನಿಗೇ ಸಲ್ಲತಕ್ಕವೆಂದು ಹೇಳಿದುದು ಇದೇ ಪವಿತ್ರ ಭಾವನೆಯಿಂದಲ್ಲವೆ?

ವಿವಿಧ ವರ್ತಮಾನ.

ಭೂಗರ್ಭದಲ್ಲಿ ನಗರ ರಚನೆ.

ದಕ್ಷಿಣ ಮತ್ತು ಉತ್ತರ ಧೃವಗಳಲ್ಲಿ ಯಾವಾಗಲೂ ಅತಿ ಶೀತವಿರುವದು ಸರಿಯಷ್ಟೆ. ಉತ್ತರ ಧೃವದ ಹತ್ತರ ಎಸ್ಕಿಮೊ ಎಂಬ ಜನರು ಬರ್ಫದ ಮನೆಗಳಲ್ಲಿ ವಾಸವಾಗಿರುವರು. ಅವರು ನಾಯಿಗಳಿಂದ ಎಳೆಯಲ್ಪಡುವ ಬಂಡಿಗಳಲ್ಲಿ ವಾಸ ಮಾಡುವರು. ಸಮುದ್ರದ ನೀರು ಅತಿ ಶೀತದಿಂದ ಗಡ್ಡೆಗಟ್ಟಿದರೂ "ಶೀಲ್" ಮುಂತಾದ ಜಲಚರ ಪ್ರಾಣಿಗಳನ್ನು ತಿಂದು ಜೀವಿಸುವರು

ಆದರೆ ದಕ್ಷಿಣಕ್ಕೆ ಅತಿ ದಕ್ಷಿಣಕ್ಕೆ ಸಿಂಹಲದ್ವೀಪದ ಕೆಳಕ್ಕೆ ಏನಿದೆ? ದಕ್ಷಿಣ ಧೃವದ ಸುತ್ತಲೂ ಭೂಮಿ ಇದೆಯೆಂದು ಶೋಧವಾಗಿದೆ. ಅದಕ್ಕೆ ದಕ್ಷಿಣ ಭೂಖಂಡವೆಂದು ಹೆಸರು. ಅಲ್ಲಿ ನೀರು ಯಾವಾಗಲೂ ಹೆಪ್ಪುಗಟ್ಟಿರುವುದರಿಂದ ಭೂಮಿ ಯಾವುದು? ನೀರು ಯಾವುದು? ಎಂಬುದು ಗೊತ್ತೇ ಆಗುವುದಿಲ್ಲ. ಆದರೂ ಭೂಗರ್ಭ ಶೋಧಕರು ಅಲ್ಲಿ ಬರ್ಫದ ಕೆಳಗೆ ಯುರೋಪಖಂಡದ ಎರಡರಷ್ಟು ಭೂಮಿ ಇರುವದೆಂದು ಶೋಧಿಸಿದ್ದಾರೆ.

ಈ ಬಗ್ಗೆ ಪ್ರೊ. ಫ್ರ್ಯಾಂಕ ಡೊಬನ್ ಹ್ಯಾಮ ಎಂಬ ಸಂಶೋಧಕರು ಹೀಗೆ ಹೇಳುತ್ತಾರೆ. ಅಲ್ಲಿ ಮನುಷ್ಯ ವಸತಿಯಿಲ್ಲ. ಪ್ರಾಣಿಗಳಿಲ್ಲ. ಒಂದು ಹುಲ್ಲು ಕಡ್ಡಿ ಸಹ ಬೆಳೆಯುವದಿಲ್ಲ. ಏಕೆಂದರೆ ಅಲ್ಲಿ ವಿಪರೀತ ಶೀತವಿರುವದು. ಆದರೂ ಭವಿಷ್ಯ ಕಾಲದಲ್ಲಿ ಅಲ್ಲಿ ಪಟ್ಟಣಗಳುಂಟಾಗುವವು. ಏಕೆಂದರೆ ಅಲ್ಲಿ ಬರ್ಫದ ಕೆಳಗೆ ೨ ಸಾವಿರ ಅಡಿಯಿಂದ ೧೦ ಸಾವಿರ ಅಡಿಗಳ ಆಳದಲ್ಲಿ ಕಲ್ಲಿದ್ದಲಿ, ಚಿಮಣಿ ಎಣ್ಣೆ ಮುಂತಾದ ಖನಿಜ ದ್ರವ್ಯಗಳು ಹೇರಳವಾಗಿ ದೊರೆಯುವವು. ಅಲ್ಲಿ ಜನರು ಭೂಪೃಷ್ಠದ ಮೇಲೆ ವಾಸ ಮಾಡಲಾರರು. ಭೂಗರ್ಭದಲ್ಲಿ ಪಟ್ಟಣಗಳನ್ನು ಕಟ್ಟಿಕೊಂಡು ಕೃತಕ ರೀತಿಯಿಂದ ಹವೆಯನ್ನು ಪೂರೈಸಿಕೊಳ್ಳುತ್ತ ಕೆಲಸ ಮಾಡುವರು. ಅಲ್ಲಿ ಹವೆಯ ಒಂದು ಪ್ರವಾಹವು ಯಾವಾಗಲೂ ಬೀಸುತ್ತಲಿದೆ. ಅದು ಆರೋಗ್ಯಕ್ಕೆ ಒಳ್ಳೇ ಹಿತಕರವಾಗಿದೆ. ಈ ಐದೂ ಖಂಡಗಳಲ್ಲಿ ವಾಸಿಯಾಗದ ರೋಗವುಳ್ಳ ರೋಗಿಗಳು ಅಲ್ಲಿಗೆ ಬಂದು ಗುಣ ಹೊಂದಬಹುದು. ನಾವು ಕೆಲ ಸಂಶೋಧಕರು ಕೂಡಿ ನಾಲ್ಕು ತಿಂಗಳುಗಳ ವರೆಗೆ ಅಲ್ಲಿದ್ದೆವು. ನಮ್ಮ ಆರೋಗ್ಯವು ಉತ್ಕೃಷ್ಟವಾಗಿದ್ದಿತು

ನದಿಯ ಕೆಳಗೆ ಸುರಂಗ ಮಾರ್ಗ.

ಲಂಡನ್ ಪಟ್ಟಣದ ಮಧ್ಯದಲ್ಲಿ ಥೇಮ್ಸ ಎಂಬ ನದಿಯು ಹರಿಯುತ್ತದೆ. ಅದರಲ್ಲಿ ಸಣ್ಣ ದೊಡ್ಡ ಹಡಗಗಳು ಸಹ ಓಡಾಡುತ್ತವೆ. ಈಗ ಲಂಡನ್ ನಗರದ ಕೆಳಗೆ ಒಂದು ನಗರವನ್ನು ರಚಿಸಿರುವರಷ್ಟೆ. ಈ ಭೂತಳದಲ್ಲಿಯ ಪಟ್ಟಣದಲ್ಲಿ ರೇಲ್ವೆಗಳು ಓಡಾಡುತ್ತವೆ. ಸೂರ್ಯ ಪ್ರಕಾಶದಷ್ಟು ಪ್ರಜ್ವಲ ಪ್ರಕಾಶವು ಬೀಳುವಂತೆ ವ್ಯವಸ್ಥೆ ಮಾಡಿದ್ದಾರೆ. ಈಗ ಥೇಮ್ಸ ನದಿಯ ಬುಡದಲ್ಲಿಯೂ ಸುರಂಗ ಮಾರ್ಗವನ್ನು ಮಾಡುವವರಿದ್ದಾರೆ. ಆ ಕಾರ್ಯವನ್ನು ಈ ಬೇಸಿಗೆಯಾದ ಕೂಡಲೆ ಪ್ರಾರಂಭಿಸುವರು. ೫ ವರ್ಷಗಳಲ್ಲಿ ಆ ಕಾರ್ಯವು ಸಂಪೂರ್ಣವಾಗುವದೆಂದು ತರ್ಕಿಸಲಾಗಿದೆ. ಅದಕ್ಕಾಗಿ ೩೦ ಲಕ್ಷ ಪೌಂಡು ವೆಚ್ಚ ಮಾಡುವರಂತೆ. ನದಿಯ ಮೇಲೆ ಸೇತುವೆಗಳಾಗುವದುಂಟು. ಆದರೆ ನದಿಯ ತಳದಲ್ಲಿಯೂ 'ಸೇತುವೆ' ಯಾಗುವದು ಆಶ್ಚರ್ಯಕರವಲ್ಲವೆ?

ಕತ್ತಲೆಯಲ್ಲಿ ನೋಡುವದು.

"ಮುಕ್ಕಣ್ಣ" ನಲ್ಲವಿದ್ದರೂ ಮೂರನೆಯ ಕಣ್ಣಿನ ಶೋಧ ಮಾತ್ರ ಆಗಿದೆ. ಕೋಲಂಬಿಯಾ ವಿಶ್ವ ವಿದ್ಯಾಲಯದ ಪ್ರೊಫೆಸರ ಡಾ. ಮಾರ್ಟಿಸನ್ ಬೋಗಾರ್ಟ ಎಂಬವರು ಒಂದು ಕೊಳವೆಯನ್ನು ಸಿದ್ಧಮಾಡಿರುವರು. ಅದರೊಳಗಿಂದ ನೋಡಿದರೆ ಕತ್ತಲೆಯಲ್ಲಿ ಸಹ ಎಲ್ಲ ಪದಾರ್ಥಗಳನ್ನು ಸ್ಪಷ್ಟವಾಗಿ ಕಾಣಬಹುದು. ಅದಕ್ಕಂತೆಯೇ ಅವರು ಅದಕ್ಕೆ 'ಮೂರನೆಯ ಕಣ್ಣು' (Third eye) ಎಂದು ಹೆಸರು ಕೊಟ್ಟಿದ್ದಾರೆ.

ಮನುಷ್ಯ ದೃಷ್ಟಿಯ ಶಕ್ತಿಯು ೬॥ ಯುನಿಟ್‌ಗಳುಳ್ಳದ್ದಾಗಿದೆ. ಆದರೆ ಈ ಕೊಳವೆಯೊಳಗಿಂದ ನೋಡಿದರೆ ಕಣ್ಣಿನ ಶಕ್ತಿಯು ೧೩೦೦೦ ಯುನಿಟ್‌ಗಳವರೆಗೆ ಹೆಚ್ಚುತ್ತದೆ. ಈ ಕೊಳವೆಯನ್ನು ದುರ್ಬೀನುಗಳಿಗೆ ಜೋಡಿಸಿ ಖಗೋಲದಲ್ಲಿಯ ಅತಿ ದೂರ ಗ್ರಹಗಳನ್ನು ಸ್ಪಷ್ಟವಾಗಿ ನೋಡಬಹುದು.

ಗಜ್ಜರಿ (carrot) ಗಳನ್ನು ಹೆಚ್ಚಾಗಿ ತಿನ್ನುವದರಿಂದ ಕತ್ತಲೆಯಲ್ಲಿ ಸಹ ನೋಡುವ ಶಕ್ತಿಯು ಹೆಚ್ಚಾಗುತ್ತದೆಂದು ಪ್ರೊ. ಬೋಗಾರ್ಟರವರು ಹೇಳುತ್ತಾರೆ. ಏಕೆಂದರೆ ಗಜ್ಜರಿಯಲ್ಲಿ ಕ್ಯಾರೊಟಾಯಿನ (Carrotine) ಎಂಬ ಕಿತ್ತಳೆಬಣ್ಣದ ಪದಾರ್ಥವೇ ಕಣ್ಣಿಗೆ ಆ ಶಕ್ತಿಯನ್ನು ತಂದುಕೊಡುವದಂತೆ.

ನಿಮಗೆ ಯಾವ ಕಣ್ಣು ಬೇಕು?

ಪ್ರೊ. ಉಚಿದಾ ಎಂಬ ಒಬ್ಬ ಜಪಾನಿ ಸರ್ಜನರು ಈ ಮೊದಲು ಶಸ್ತ್ರಕ್ರಿಯೆ ಮೂಲಕ ಜಪಾನಿಗಳ ರೆಪ್ಪೆಗಳನ್ನು ತೆಗೆದು ಯುರೋಪಿಯನ್ ಪದ್ಧತಿಯ ರೆಪ್ಪೆಗಳನ್ನು ಹಾಕುತ್ತಿದ್ದರು. ಆದರೆ ಈಗ ಶಸ್ತ್ರಕ್ರಿಯೆಯ ಮೂಲಕ ಕೆಂಪು ಹಸರು ಹಳದಿ ಬೇಕಾದ ಬಣ್ಣಗಳ ಕಣ್ಣುಗಳನ್ನು ಹಾಕುತ್ತಾರೆ. ಈಗ ಜಪಾನಿ ಹೆಂಗಸರು ನೀಲವರ್ಣದ ಕಣ್ಣುಗಳನ್ನೂ ಜಪಾನಿ ಪುರುಷರು ಹಸರು ಬಣ್ಣದ ಕಣ್ಣುಗಳನ್ನೂ ಹಾಕಿಸಿಕೊಳ್ಳಲು ಸೇರುತ್ತಾರೆ. ಪೌರ್ವಾತ್ಯ ಪದ್ಧತಿಯ ಕಪ್ಪು ಬಣ್ಣದ ರೆಪ್ಪೆಗಳು ಈಗ ಅಲ್ಲಿಯ ಸೊಗಸಿಗೆ ಉಚಿತವೆಂದು ತೋರುವುದಿಲ್ಲ.

ಹಿಂದುಸ್ಥಾನದ ಹತ್ತಿಗೆ ಬಂತು ಪಿಕಲಾಟ!

ಲ್ಯಾಂಕಶಾಯರದ ಎ. ಜ ಜೆ. ಡಿಪ್ಲೂರಿ ಎಂಬವರು ೨೦ ವರ್ಷಗಳಿಂದಲೂ ಪ್ರಯತ್ನ ಮಾಡಿ ಒಂದು ಮಿಶ್ರ ಜಾತಿಯ ವನಸ್ಪತಿಯನ್ನು ಶೋಧಿಸಿದ್ದಾರೆ. ಅದರ ಎಳೆಗಳು ಇಜಿಪ್ತದ ಹತ್ತಿಯ ತಂತುಗಳಷ್ಟು ನಯವಾಗಿರುತ್ತವೆ. ಮತ್ತು ಅದು ಬಹು ಅಗ್ಗವಾಗುವವಂತೆ. ಇದರಿಂದ ಬಟ್ಟೆಗಳನ್ನು ತಯಾರಿಸುವರು.

ಈ ವನಸ್ಪತಿಯ ಇನ್ನೊಂದು ಲಾಭವೆಂದರೆ ಇದರ ಚಲ್ಲಿ ಹೋದ ಎಳೆಗಳನ್ನು ಕೂಡಿಸಿ ಉತ್ತಮವಾದ 'ಬ್ಲ್ಯಾಂಕೆಟ್' ತಯಾರ ಮಾಡಬಹುದಂತೆ. ಅಂಥ ಬ್ಲ್ಯಾಂಕೆಟ್‌ಗಳ ಬೆಲೆಯು ಪ್ರತಿಯೊಂದಕ್ಕೆ ೨ ಆಣೆಯಂತೆ ಬೀಳುವದಂತೆ.

ಆ ಮೇಲಾದರೂ ಹಿಂದುಸ್ಥಾನದ ಜನರು ತಮ್ಮಲ್ಲಿಯೇ ರಾಟೆಗಳ ಮೂಲಕ ತಮ್ಮ ಹತ್ತಿಯನ್ನು ನುರಿಸುವರೇ?

ಮೋಟಾರಿನ ಬೆಳಕು ಹಳದೀ ಬಣ್ಣದ್ದಿರಬೇಕು.

ಫ್ರೆಂಚ ಸರಕಾರದವರು ಮೋಟಾರಿನ ಬೆಳಕು ಯಾವ ಪ್ರಕಾರದ್ದಿರಬೇಕೆಂಬುದನ್ನು ವಿಚಾರಿಸಲು ಒಂದು ಸಮಿತಿಯನ್ನು ನಿಯಮಿಸಿದ್ದರು. ಅವರು ಬಿಳಿಯ ಬೆಳಕಿಗಿಂತ ಹಳದೀ ಬಣ್ಣದ ಬೆಳಕು ಹೆಚ್ಚು ಯೋಗ್ಯವೆಂದು ಅಭಿಪ್ರಾಯಪಟ್ಟರು. ಆ ಪ್ರಕಾರ ಇನ್ನು ಮೇಲೆ ಫ್ರಾನ್ಸದಲ್ಲಿಯ ಮೋಟಾರುಗಳಿಗೆಲ್ಲ ಹಳದೀ ಬಣ್ಣದ ಲಾಯಿಟು ಕೊಡುವ ದೀವಿಗೆಗಳನ್ನು ಹಚ್ಚಲಾಗುವದು. ಈ ಬೆಳಕಿನಿಂದ ಕಣ್ಣಿಗೆ ಅಪಾಯವಾಗುವದಿಲ್ಲವಂತೆ. ಮತ್ತು ಮಾರ್ಗದಲ್ಲಿ ಜನರು ಕೂಡಲೆ ಚಲಿಸಲು ಅನುಕೂಲವಾಗುವದು.

ವಿವಿಧ ವಿಷಯ.

ಮಡಿ ಮೈಲಿಗೆಯ ನಿಜಸ್ವರೂಪ.

ಸ್ವಾಮಿ ವಿವೇಕಾನಂದರ ಗುರುಗಳಾದ ಶ್ರೀ ರಾಮಕೃಷ್ಣ ಪರಮಹಂಸರ ಬಳಿಗೆ ಒಬ್ಬ ಶಿಷ್ಯನು ಹೋಗಿ ಹೀಗೆ ಕೇಳಿದನು— "ಸ್ವಾಮಿ, ಮನುಸ್ಸು ಶುದ್ಧವಾಗಲಿಕ್ಕೆ ದೇಹ ಶುದ್ಧಿಯು ಅವಶ್ಯವೆಂದು ಹೇಳಲಾಗುತ್ತದೆ. ಆದರೆ ನಾನು ಧ್ಯಾನಮಾಡಲು ಕುಳಿತರೆ ಮನಸ್ಸಿನ ಏಕಾಗ್ರತೆಯೇ ಆಗಲೊಲ್ಲದು. ಇದಕ್ಕೆ ಹೇಗೆ ಮಾಡಬೇಕು?"

ಸ್ವಾಮಿಗಳು ಆತನನ್ನು ಕ್ಷಣಹೊತ್ತು ದಿಟ್ಟಿಸಿ ನೋಡಿ, ನೀನು ಧ್ಯಾನಕ್ಕೆ ಕೂಡ್ರುವ ಪೂರ್ವದಲ್ಲಿ ಹರಿಯೊಳಗಿನ ಹೊಲಸು ನಾರುವ ಕೆಸರನ್ನು ಹಣೆಗೆ ಬಳಿದುಕೊಂಡು ಧ್ಯಾನಮಾಡು. ಅಂದರೆ ಗುಣಬರುವದು ಎಂದು ಹೇಳಿದರು. ಮರುದಿವಸ ಎಲ್ಲ ಶಿಷ್ಯರಿಗೆ ಪರಮಹಂಸರು ಹೀಗೆ ಹೇಳಿದುದರ ರಹಸ್ಯವನ್ನು ಈ ಪ್ರಕಾರ ತಿಳಿಸಿಕೊಟ್ಟರು—

"ದೇಹದ ಸ್ವಚ್ಛತೆಯು ಮಧುರ ಭಾವನೆಯುಂಟಾಗಲು ಅತ್ಯಾವಶ್ಯಕವಾದುದಾಗಿದೆ. ಆದರೆ ಅದೇ ಮುಖ್ಯವಾದುದಲ್ಲ. ಏಕೆಂದರೆ ನಾವು ಯಾವಾಗಲೂ ದೇಹ ಶುದ್ಧಿಯ ಕಡೆಗೇನೇ ಲಕ್ಷ್ಯಕೊಡಹತ್ತಿದರೆ ಅದೊಂದು ನಮಗೆ ಚಟವಾಗಿಯೇ ಪರಿಣಮಿಸುವದು. ಆ ಚಟದ ಮೂಲಕ ನಮ್ಮ ಮನಸ್ಸು ಯಾವಾಗಲೂ ದೇಹದ ಮೇಲೆಯೇ ಸುತ್ತುವರಿಯುಹತ್ತುತ್ತದೆ. ಧ್ಯಾನ ಮೂಲಕ ಅಂತರ್ಯದಲ್ಲಿ ಪ್ರವೇಶಿಸುವ ಶಕ್ತಿಯೇ ಅದಕ್ಕೆ ಬರುವದಿಲ್ಲ. ಮಡಿ, ಮಡಿ ಎಂದು ಯಾವಾಗಲೂ ಮಡಿ ಹುಡಿಯಲ್ಲಿಯೇ ಮಗ್ನನಾದ ಆ ಶಿಷ್ಯನು ಧ್ಯಾನಕ್ಕೆ ಕುಳಿತಾಗ ನಾನು ನೋಡಿದೆನು. ಅವನ ಲಕ್ಷ್ಯವು ಯಾವಾಗಲೂ ದೇಹದ ಮಡಿಯ ಕಡೆಗೇನೇ ಇದ್ದಿತು. ಅಂದಮೇಲೆ ಧ್ಯಾನಮಾಡಲು ಹೇಗೆ ತಾನೆ ಶಕ್ಯ?"

ಪರಮಹಂಸರ ಈ ಬೋಧೆಯನ್ನು ವಿಪರೀತ ಮಡಿ ಮಾಡುವವರು ಚನ್ನಾಗಿ ಯೋಚಿಸಲಿ. ದೇಹ ಶುದ್ಧಿಯು ಎಷ್ಟರಮಟ್ಟಿಗೆ ಆಗಬೇಕಾದುದೋ ಅಷ್ಟೇ ಮಾಡಿಕೊಳ್ಳುವದು ಯುಕ್ತವು. ಗೋಡೆ ಮುಟ್ಟಿದರೆ, ಕಂಬ ಮುಟ್ಟಿದರೆ, ಎರಡನೆಯವರ ಸಂಗಡ ಮಾತನಾಡಿದರೆ ಮೈಲಿಗೆಯಾಯಿತೆಂದು ತಿಳಿಯುವವರಿಗೆ ನಿಜವಾಗಿ ಮಡಿಯ ಚಟವೇ ಹುಟ್ಟಿರುತ್ತದೆ. ಎಲ್ಲ ಚಟಗಳಂತೆ ಇದೂ ಒಂದು ಮಾಯಾಪ್ರಚೋದಿತ ಚಟವೇ ಆಗಿದೆ. ಗಾಂಜ ಸೇದುವದೂ ಒಂದು ಚಟ ಚಹ ಕುಡಿಯುವದೂ ಒಂದು ಚಟ. ಒಂದು ದಿನ ಅವಿಲ್ಲದಿದ್ದರೆ ಹುಚ್ಚೇ ಹಿಡಿಯುವದು. ಹಾಗೆಯೇ ವಿಪರೀತ ಮಡಿ ಮಾಡುವದೂ ಒಂದು ಚಟ. ಒಂದು ದಿನ ಅಲ್ಪ ಸ್ವಲ್ಪ ಮಡಿ ಮಾಡಿದರೆ ಭ್ರಮೆಯೇ ಹಿಡಿಯುವದು.

ಇನ್ನು ಕೆಲವರಾದರೊ ಸ್ವಚ್ಛತೆಯ ಕಲ್ಪನೆಯು ಸಹ ಇಲ್ಲದೆ ಮಡಿ ಮೈಲಿಗೆಯನ್ನು ಪಾಲಿಸುತ್ತಾರೆ. ಅಂಥವರಿಗೆ ಹೊತ್ತಿಗೆಯು ಇಲ್ಲವೆ ರೂಢಿಯ ಗುಲಾಮರೆನ್ನಬಹುದು. ಅಂಥವರಿಗೆ ರಾಮಕೃಷ್ಣರೇ ಏಕೆ ಬ್ರಹ್ಮದೇವನು ಕೂಡಾ ಹೇಳಿದರೂ ಅವರ ವಿಭ್ರಮೆ ಹೋಗದು.

ಆದಿಜನರಿಗೆ ಸಹಾಯ.

ಶ್ರೀ ಶಂಕರಾಚಾರ್ಯರು (ಡಾ. ಕುರ್ತಕೋಟಿ) ನಾಸಿಕದಲ್ಲಿ "ಅಸ್ಪೃಶ್ಯತಾ ನಿವಾರಣ ಸಮಿತಿ" ಎಂಬ ಒಂದು ಸಂಘವನ್ನು ಸ್ಥಾಪಿಸಿದ್ದಾರೆ. ಅದರಲ್ಲಿ ೯ ಉಪಸಮಿತಿಗಳನ್ನು ಏರ್ಪಡಿಸಿದ್ದಾರೆ. ಒಂದನೆಯದು ವಕೀಲ ಸಮಿತಿ. ಅದರಲ್ಲಿ ಕೆಲವು ಜನ ವಕೀಲರು ಆದಿಜನರ ವ್ಯಾಜ್ಯಗಳನ್ನು ಹಿಡಿದು ಕೋರ್ಟು ಕಚೇರಿಗಳಲ್ಲಿ ಅವುಗಳ ವಿಷಯದಲ್ಲಿ ವಾದ ಮಾಡುವರು. ಎರಡನೆಯದು ವರ್ತಕರ ಸಮಿತಿಯು. ಇವರು ಆದಿಜನರಿಗೆ ಶಕ್ಯ ರೀತಿಯಲ್ಲಿ ಪದಾರ್ಥಗಳ ಪುರವಠೆ ಮಾಡುವರು. ಮೂರನೆಯದೊಂದು ಸಹಕಾರ ಸಮಿತಿಯೆಂದು ಇದೆ. ಈ ಸಮಿತಿಯವರು ಆದಿಜನ ಬ್ಯಾಂಕು ಸ್ಥಾಪಿಸಿ ಆದಿಜನರನ್ನು ಋಣಮುಕ್ತ ಮಾಡಲು ಉಪಾಯಗಳನ್ನು ಕೈಕೊಳ್ಳುವರು. ನಾಲ್ಕನೆಯದು ಕೀರ್ತನ ಸಮಿತಿಯು. ಈ ಸಮಿತಿಯವರು ಗ್ರಾಮಾಂತರಗಳಲ್ಲೆಲ್ಲ ಸಂಚರಿಸಿ ಆದಿಜನರಿಗೆ ಕೀರ್ತನೆಯ ಮೂಲಕ ಧರ್ಮ ಬೋಧೆ ಮಾಡುವರು. ಐದನೆಯದು ವೈದ್ಯ ಸಮಿತಿ. ಈ ಸಮಿತಿಯವರು ಆದಿಜನರಿಗೆ ಉಚಿತವಾಗಿ ಔಷಧೋಪಚಾರ ಮಾಡುವರು.

ಈ ಮುಂತಾಗಿ ಒಂಭತ್ತು ವಿಧದಿಂದ ಆದಿಜನ ಕಾರ್ಯ ಮಾಡುವ ಸಮಿತಿಗಳ ಏರ್ಪಾಟಾಗಿದೆ.

ದಿಲ್ಲಿಯಲ್ಲಿ ಆದಿಜನರಿಗಾಗಿ ೧೦ ಸಾವಿರ ರೂಪಾಯಿ ಬೆಲೆಯ ಒಂದು ದೇವಾಲಯವನ್ನು ಕಟ್ಟಿಸಲು ಪ್ರಾರಂಭವಾಗಿದೆ.

ದಿಲ್ಲಿಯಲ್ಲಿ ಕೂಡಿದ 'ಹರಿಜನ ಸೇವಕ ಸಂಘದ' ಸಭೆಯಲ್ಲಿ ಆದಿಜನರಿಗೆ ದೇವಾಲಯ ಪ್ರವೇಶಕ್ಕಾಗಿ ಮುಕ್ತತೆ ಮಾಡಿಕೊಡಲು ಅಸೆಂಬ್ಲಿಯಲ್ಲಿ ಒಂದು ಗೊತ್ತುವಳಿಯನ್ನು ತರಬೇಕೆಂದು ನಿರ್ಣಯವಾಯಿತು.

ಪವಿತ್ರ ಭಾವನೆ.

ಮಹಾತ್ಮಾಜಿಯವರ ಆಶ್ರಮದಲ್ಲಿ ವಿನೋಬಾ ಎಂಬ ಒಬ್ಬ ತರುಣನು ಖಾದಿಯ ಕೆಲಸದಲ್ಲಿ ಒಳ್ಳೇ ಕುಶಲನಾಗಿದ್ದಾನೆ. ಒಳ್ಳೇ ಶುದ್ಧ ಹೃದಯ ಆತನದು. ಖಾದಿಯ ನೂಲನ್ನು ಒಳ್ಳೇ ಭಕ್ತಿಯಿಂದ ತೆಗೆಯುವದರಿಂದ ಅವನ ನೂಲು ಸರ್ವೋತ್ಕೃಷ್ಟವಾಗುತ್ತದೆ. ಇನ್ನೊಂದು ವಿಶೇಷವೆಂದರೆ ಅವನು ಎರಡೂ ಕೈಗಳಿಂದಲೂ ನಯವಾಗಿ ನೂಲು ತೆಗೆಯುತ್ತಾನೆ. ಅಂಥ ಉತ್ತಮವಾದ ನೂಲಿನಿಂದ ಸರ್ವೋತ್ತಮವಾದ ಧೋತರ ಜೋಡುಗಳನ್ನು ತಯಾರಿಸುತ್ತಾನೆ.

ಅವನು ತಾನು ನೆಯ್ದ ಧೋತರದ ಮೊದಲನೆಯ ಜೋಡನ್ನು ತನ್ನ ತಂದೆಗೆ ಅರ್ಪಿಸಿದನು. ಉಳಿದ ಜೋಡಿಗಳನ್ನು ಕೊಳ್ಳಲಿಕ್ಕೆ ಅನೇಕ ಜನರು ಹಾತೊರೆದರು. ಅವನ ಹಸ್ತದಿಂದಾದ ಅಂಥ ಪವಿತ್ರ, ನಯವಾದ ಧೋತರಗಳಿಗಾಗಿ ಸಾಕಷ್ಟು ಬೆಲೆಯನ್ನು ಕೊಡಲು ಅವರು ಸಿದ್ಧರಿದ್ದರು. ಆದರೆ ಅಸ್ತೆಯ ವ್ರತವನ್ನು ಪಾಲಿಸುವ ವಿನೋಬನಿಗೆ ಅದು ಸರಿಬೀಳಲಿಲ್ಲ. ಅಂಥಾ ಪವಿತ್ರಾತ್ಮನ ಹಸ್ತದಿಂದ ಸಿದ್ಧವಾದ ಧೋತರಗಳು ದೇವರಿಗಲ್ಲದೆ ಮನುಷ್ಯರಿಗೆ ಸಲ್ಲವೆಂದು ತಿಳಿದು ಶ್ರೀ ಜಮನಾಲಾಲಜಿ ಬಜಾಜ ಇವರು ಅವುಗಳನ್ನು ತಾವು ಆದಿಜನರಿಗಾಗಿ ತೆರೆದು ಕೊಟ್ಟಿರುವ ಲಕ್ಷ್ಮೀನಾರಾಯಣ ದೇವರಿಗೆ ಸಮರ್ಪಿಸಿದರು. ಇನ್ನು ಮುಂದಾದರೂ ಅವನು ಸಿದ್ಧಪಡಿಸುವ ಬಟ್ಟೆಗಳನ್ನೆಲ್ಲ ಆದಿಜನರಿಗೂ ತೆರೆಯಲ್ಪಟ್ಟ ದೇವಾಲಯಗಳ ದೇವತೆಗಳಿಗೆಲ್ಲ ಅರ್ಪಿಸುವ ಸಂಕಲ್ಪ ಮಾಡಿರುವರು.

ವೀರಶೈವರಿಗೆ ಇದರಿಂದ ಒಂದು ಸಂಗತಿಯು ನೆನಪಾಗುವುದಿಲ್ಲವೆ? ಪರಮ ಶಿವಶರಣರಾದ ಹರಳಯ್ಯನವರು ಪವಿತ್ರ ಹೃದಯದಿಂದ ಬಸವಣ್ಣನವರಿಗಾಗಿ ಸಿದ್ಧಪಡಿಸಿದ ಮೊಚ್ಚೆಗಳನ್ನು ಬಸವಣ್ಣನವರು ಸ್ವೀಕರಿಸದೆ ಇವು ಸಂಗಮದೇವನಿಗೇ ಸಲ್ಲತಕ್ಕವೆಂದು ಹೇಳಿದುದು ಇದೇ ಪವಿತ್ರ ಭಾವನೆಯಿಂದಲ್ಲವೆ?

ವಿವಿಧ ವರ್ತಮಾನ.

ಭೂಗರ್ಭದಲ್ಲಿ ನಗರ ರಚನೆ.

ದಕ್ಷಿಣ ಮತ್ತು ಉತ್ತರ ಧ್ರುವಗಳಲ್ಲಿ ಯಾವಾಗಲೂ ಅತಿ ಶೀತವಿರುವದು ಸರಿಯಷ್ಟೆ. ಉತ್ತರ ಧ್ರುವದ ಹತ್ತರ ಎಸ್ಕಿಮೊ ಎಂಬ ಜನರು ಬರ್ಫದ ಮನೆಗಳಲ್ಲಿ ವಾಸವಾಗಿರುವರು ಅವರು ನಾಯಿಗಳಿಂದ ಎಳೆಯಲ್ಪಡುವ ಬಂಡಿಗಳಲ್ಲಿ ವಾಸ ಮಾಡುವರು. ಸಮುದ್ರದ ನೀರು ಅತಿ ಶೀತದಿಂದ ಗಡ್ಡೆಗಟ್ಟಿದರೂ "ಶ್ರಿಂಪ್" ಮುಂತಾದ ಜಲಚರ ಪ್ರಾಣಿಗಳನ್ನು ತಿಂದು ಜೀವಿಸುವರು

ಆದರೆ ದಕ್ಷಿಣಕ್ಕೆ ಅತಿ ದಕ್ಷಿಣಕ್ಕೆ ಸಿಂಹಲದ್ವೀಪದ ಕೆಳಕ್ಕೆ ಏನಿದೆ? ದಕ್ಷಿಣ ಧ್ರುವದ ಸುತ್ತಲೂ ಭೂಮಿ ಇದೆಯೆಂದು ಶೋಧವಾಗಿದೆ. ಅದಕ್ಕೆ ದಕ್ಷಿಣ ಭೂಖಂಡವೆಂದು ಹೆಸರು. ಅಲ್ಲಿ ನೀರು ಯಾವಾಗಲೂ ಹೆಪ್ಪುಗಟ್ಟಿರುವುದರಿಂದ ಭೂಮಿ ಯಾವುದು? ನೀರು ಯಾವುದು? ಎಂಬುದು ಗೊತ್ತೇ ಆಗುವುದಿಲ್ಲ. ಆದರೂ ಭೂಗರ್ಭ ಶೋಧಕರು ಅಲ್ಲಿ ಬರ್ಫದ ಕೆಳಗೆ ಯುರೋಪಖಂಡದ ಎರಡರಷ್ಟು ಭೂಮಿ ಇರುವದೆಂದು ಶೋಧಿಸಿದ್ದಾರೆ.

ಈ ಬಗ್ಗೆ ಪ್ರೊ. ಫ್ರ್ಯಾಂಕ ಡೊಬನ್ ಹ್ಯಾಮ ಎಂಬ ಸಂಶೋಧಕರು ಹೀಗೆ ಹೇಳುತ್ತಾರೆ. ಅಲ್ಲಿ ಮನುಷ್ಯ ವಸತಿಯಿಲ್ಲ. ಪ್ರಾಣಿಗಳಿಲ್ಲ. ಒಂದು ಹುಲ್ಲು ಕಡ್ಡಿ ಸಹ ಬೆಳೆಯುವದಿಲ್ಲ. ಏಕೆಂದರೆ ಅಲ್ಲಿ ವಿಪರೀತ ಶೀತವಿರುವದು. ಆದರೂ ಭವಿಷ್ಯ ಕಾಲದಲ್ಲಿ ಅಲ್ಲಿ ಪಟ್ಟಣಗಳುಂಟಾಗುವವು. ಏಕೆಂದರೆ ಅಲ್ಲಿ ಬರ್ಫದ ಕೆಳಗೆ ೨ ಸಾವಿರ ಅಡಿಯಿಂದ ೧೦ ಸಾವಿರ ಅಡಿಗಳ ಆಳದಲ್ಲಿ ಕಲ್ಲಿದ್ದಲಿ, ಚಿಮಣಿ ಎಣ್ಣೆ ಮುಂತಾದ ಖನಿಜ ದ್ರವ್ಯಗಳು ಹೇರಳವಾಗಿ ದೊರೆಯುವವು. ಅಲ್ಲಿ ಜನರು ಭೂಪೃಷ್ಠದ ಮೇಲೆ ವಾಸ ಮಾಡಲಾರರು. ಭೂಗರ್ಭದಲ್ಲಿ ಪಟ್ಟಣಗಳನ್ನು ಕಟ್ಟಿಕೊಂಡು ಕೃತಕ ರೀತಿಯಿಂದ ಹವೆಯನ್ನು ಪೂರೈಸಿಕೊಳ್ಳುತ್ತ ಕೆಲಸ ಮಾಡುವರು. ಅಲ್ಲಿ ಹವೆಯ ಒಂದು ಪ್ರವಾಹವು ಯಾವಾಗಲೂ ಬೀಸುತ್ತಲಿದೆ ಅದು ಆರೋಗ್ಯಕ್ಕೆ ಒಳ್ಳೇ ಹಿತಕರವಾಗಿದೆ. ಈ ಐದೂ ಖಂಡಗಳಲ್ಲಿ ವಾಸಿಯಾಗದ ರೋಗವುಳ್ಳ ರೋಗಿಗಳು ಅಲ್ಲಿಗೆ ಬಂದು ಗುಣ ಹೊಂದಬಹುದು. ನಾವು ಕೆಲ ಸಂಶೋಧಕರು ಕೂಡಿ ನಾಲ್ಕು ತಿಂಗಳುಗಳವರೆಗೆ ಅಲ್ಲಿದ್ದೆವು. ನಮ್ಮ ಆರೋಗ್ಯವು ಉತ್ಕೃಷ್ಟವಾಗಿದ್ದಿತು

ನದಿಯ ಕೆಳಗೆ ಸುರಂಗ ಮಾರ್ಗ.

ಲಂಡನ್ ಪಟ್ಟಣದ ಮಧ್ಯದಲ್ಲಿ ಥೇಮ್ಸ ಎಂಬ ನದಿಯು ಹರಿಯುತ್ತದೆ. ಅದರಲ್ಲಿ ಸಣ್ಣ ದೊಡ್ಡ ಹಡಗಗಳು ಸಹ ಓಡಾಡುತ್ತವೆ. ಈಗ ಲಂಡನ್ ನಗರದ ಕೆಳಗೆ ಒಂದು ನಗರವನ್ನು ರಚಿಸಿರುವರಷ್ಟೆ. ಈ ಭೂತಳದಲ್ಲಿಯ ಪಟ್ಟಣದಲ್ಲಿ ರೇಲ್ವೆಗಳು ಓಡಾಡುತ್ತವೆ. ಸೂರ್ಯ ಪ್ರಕಾಶದಷ್ಟು ಪ್ರಜ್ವಲ ಪ್ರಕಾಶವು ಬೀಳುವಂತೆ ವ್ಯವಸ್ಥೆ ಮಾಡಿದ್ದಾರೆ ಈಗ ಥೇಮ್ಸ ನದಿಯ ಬುಡದಲ್ಲಿಯೂ ಸುರಂಗ ಮಾರ್ಗವನ್ನು ಮಾಡುವವರಿದ್ದಾರೆ. ಆ ಕಾರ್ಯವನ್ನು ಈ ಬೇಸಿಗೆಯಾದ ಕೂಡಲೆ ಪ್ರಾರಂಭಿಸುವರು. ೫ ವರ್ಷಗಳಲ್ಲಿ ಆ ಕಾರ್ಯವು ಸಂಪೂರ್ಣವಾಗುವದೆಂದು ತರ್ಕಿಸಲಾಗಿದೆ ಅದಕ್ಕಾಗಿ ೩೦ ಲಕ್ಷ ಪೌಂಡು ವೆಚ್ಚ ಮಾಡುವರಂತೆ. ನದಿಯ ಮೇಲೆ ಸೇತುವೆಗಳಾಗುವದುಂಟು. ಆದರೆ ನದಿಯ ತಳದಲ್ಲಿಯೂ 'ಸೇತುವೆ' ಯಾಗುವದು ಆಶ್ಚರ್ಯಕರವಲ್ಲವೆ?

ಕತ್ತಲೆಯಲ್ಲಿ ನೋಡುವದು.

"ಮುಕ್ಕಣ್ಣ" ನಲ್ಲದಿದ್ದರೂ ಮೂರನೆಯ ಕಣ್ಣಿನ ಶೋಧ ಮಾತ್ರ ಆಗಿದೆ. ಕೋಲಂಬಿಯಾ ವಿಶ್ವ ವಿದ್ಯಾಲಯದ ಪ್ರೊಫೆಸರ ಡಾ. ಮಾರ್ಟಸನ್ ಬೋಗಾರ್ಟ ಎಂಬವರು ಒಂದು ಕೊಳವೆಯನ್ನು ಸಿದ್ಧಮಾಡಿರುವರು ಅದರೊಳಗಿಂದ ನೋಡಿದರೆ ಕತ್ತಲೆಯಲ್ಲಿ ಸಹ ಎಲ್ಲ ಪದಾರ್ಥಗಳನ್ನು ಸ್ಪಷ್ಟವಾಗಿ ಕಾಣಬಹುದು. ಅದಕ್ಕಂತೆಯೇ ಅವರು ಅದಕ್ಕೆ 'ಮೂರನೆಯ ಕಣ್ಣು' (Third eye) ಎಂದು ಹೆಸರು ಕೊಟ್ಟಿದ್ದಾರೆ.

ಮನುಷ್ಯ ದೃಷ್ಟಿಯ ಶಕ್ತಿಯು ೬॥ ಯುನಿಟ್‌ಗಳುಳ್ಳದ್ದಾಗಿದೆ. ಆದರೆ ಈ ಕೊಳವಿಯೊಳಗಿಂದ ನೋಡಿದರೆ ಕಣ್ಣಿನ ಶಕ್ತಿಯು ೧೨೦೦೦ ಯುನಿಟ್‌ಗಳವರೆಗೆ ಹೆಚ್ಚುತ್ತದೆ. ಈ ಕೊಳವೆಯನ್ನು ದುರ್ಬೀನುಗಳಿಗೆ ಜೋಡಿಸಿ ಖಗೋಲದಲ್ಲಿಯ ಅತಿ ದೂರ ಗ್ರಹಗಳನ್ನು ಸ್ಪಷ್ಟವಾಗಿ ನೋಡಬಹುದು.

ಗಜ್ಜರಿ (carrot) ಗಳನ್ನು ಹೆಚ್ಚಾಗಿ ತಿನ್ನುವದರಿಂದ ಕತ್ತಲೆಯಲ್ಲಿ ಸಹ ನೋಡುವ ಶಕ್ತಿಯು ಹೆಚ್ಚಾಗುತ್ತದೆಂದು ಪ್ರೊ. ಬೋಗಾರ್ಟರವರು ಹೇಳುತ್ತಾರೆ. ಏಕೆಂದರೆ ಗಜ್ಜರಿಯಲ್ಲಿ ಕ್ಯಾರೊಟಾಯಿನ (Carrotine) ಎಂಬ ಕಿತ್ತಳೆಬಣ್ಣದ ಪದಾರ್ಥವೇ ಕಣ್ಣಿಗೆ ಆ ಶಕ್ತಿಯನ್ನು ತಂದುಕೊಡುವದಂತೆ.

ನಿಮಗೆ ಯಾವ ಕಣ್ಣು ಬೇಕು?

ಪ್ರೊ. ಉಚಿದಾ ಎಂಬ ಒಬ್ಬ ಜಪಾನಿ ಸರ್ಜನರು ಈ ಮೊದಲು ಶಸ್ತ್ರಕ್ರಿಯೆ ಮೂಲಕ ಜಪಾನಿಗಳ ರೆಪ್ಪೆಗಳನ್ನು ತೆಗೆದು ಯುರೋಪಿಯನ್ ಪದ್ಧತಿಯ ರೆಪ್ಪೆಗಳನ್ನು ಹಾಕುತ್ತಿದ್ದರು. ಆದರೆ ಈಗ ಶಸ್ತ್ರಕ್ರಿಯೆಯ ಮೂಲಕ ಕೆಂಪು ಹಸರು ಹಳದಿ ಬೇಕಾದ ಬಣ್ಣಗಳ ಕಣ್ಣುಗಳನ್ನು ಹಾಕುತ್ತಾರೆ ಈಗ ಜಪಾನಿ ಹೆಂಗಸರು ನೀಲವರ್ಣದ ಕಣ್ಣುಗಳನ್ನೂ ಜಪಾನಿ ಪುರುಷರು ಹಸರು ಬಣ್ಣದ ಕಣ್ಣುಗಳನ್ನೂ ಹಾಕಿಸಿಕೊಳ್ಳಲು ಸೇರುತ್ತಾರೆ. ಪೌರ್ವಾತ್ಯ ಪದ್ಧತಿಯ ಕಪ್ಪು ಬಣ್ಣದ ರೆಪ್ಪೆಗಳು ಈಗ ಅಲ್ಲಿಯ ಸೊಗಸಿಗೆ ಉಚಿತವೆಂದು ತೋರುವುದಿಲ್ಲ.

ಹಿಂದುಸ್ಥಾನದ ಹತ್ತಿಗೆ ಬಂತು ಪಿಕಲಾಟ!

ಲ್ಯಾಂಕಶಾಯರದ ಮಿ. ಜೆ. ಜೆ. ಡಿಪ್ಲ್ಯೂರಿ ಎಂಬವರು ೨೨ ವರ್ಷಗಳವರೆಗೂ ಪ್ರಯತ್ನಮಾಡಿ ಒಂದು ಮಿಶ್ರ ಜಾತಿಯ ವನಸ್ಪತಿಯನ್ನು ಶೋಧಿಸಿದ್ದಾರೆ. ಅದರ ಎಳೆಗಳು ಇಜಿಪ್ತದ ಹತ್ತಿಯ ತಂತುಗಳಷ್ಟು ನಯವಾಗಿರುತ್ತವೆ. ಮತ್ತು ಅದು ಬಹು ಅಗ್ಗವಾಗುವವಂತೆ. ಇದರಿಂದ ಬಟ್ಟೆಗಳನ್ನು ತಯಾರಿಸುವರು.

ಈ ವನಸ್ಪತಿಯ ಇನ್ನೊಂದು ಲಾಭವೆಂದರೆ ಇದರ ಚಲ್ಲಿ ಹೋದ ಎಳೆಗಳನ್ನು ಕೂಡಿಸಿ ಉತ್ತಮವಾದ 'ಬ್ಲ್ಯಾಂಕೆಟ್' ತಯಾರ ಮಾಡಬಹುದಂತೆ ಅಂಥ ಬ್ಲ್ಯಾಂಕೆಟ್‌ಗಳ ಬೆಲೆಯು ಪ್ರತಿಯೊಂದಕ್ಕೆ ೨ ಆಣೆಯಂತೆ ಬೀಳುವದಂತೆ.

ಆ ಮೇಲಾದರೂ ಹಿಂದುಸ್ಥಾನದ ಜನರು ತಮ್ಮಲ್ಲಿಯೇ ರಾಟಿಗಳ ಮೂಲಕ ತಮ್ಮ ಹತ್ತಿಯನ್ನು ನೂರಿಸುವರೇ?

ಮೋಟಾರಿನ ಬೆಳಕು ಹಳದೀ ಬಣ್ಣದ್ದಿರಬೇಕು.

ಫ್ರೆಂಚ ಸರಕಾರದವರು ಮೋಟಾರಿನ ಬೆಳಕು ಯಾವ ಪ್ರಕಾರದ್ದಿರಬೇಕೆಂಬುದನ್ನು ವಿಚಾರಿಸಲು ಒಂದು ಸಮಿತಿಯನ್ನು ನಿಯಮಿಸಿದ್ದರು. ಅವರು ಬಿಳಿಯ ಬೆಳಕಿಗಿಂತ ಹಳದೀ ಬಣ್ಣದ ಬೆಳಕು ಹೆಚ್ಚು ಯೋಗ್ಯವೆಂದು ಅಭಿಪ್ರಾಯಪಟ್ಟರು. ಆ ಪ್ರಕಾರ ಇನ್ನು ಮೇಲೆ ಫ್ರಾನ್ಸದಲ್ಲಿಯ ಮೋಟಾರುಗಳಿಗೆಲ್ಲ ಹಳದೀ ಬಣ್ಣದ ಲಾಯಿಟು ಕೊಡುವ ದೀವಿಗೆಗಳನ್ನು ಹಚ್ಚಲಾಗುವದು. ಈ ಬೆಳಕಿನಿಂದ ಕಣ್ಣಿಗೆ ಅಪಾಯವಾಗುವದಿಲ್ಲವಂತೆ. ಮತ್ತು ಮಾರ್ಗದಲ್ಲಿ ಜನರು ಕೂಡಲೆ ಚಲಿಸಲು ಅನುಕೂಲವಾಗುವದು.

ಅಪೂರ್ವ ಶೋಧ! ಅಪೂರ್ವ ಶೋಧ!!

ಜರ್ಮನಿಯವರು ತಯಾರಿಸಿದ ವಿಷದ ಲಾಯಿಟು ಈಗ
ಹಿಂದುಸ್ಥಾನದಲ್ಲಿಯೇ ಸಿದ್ಧವಾಗುವಂತಾಗಿದೆ.

ಕ್ರಿಮಿನಾಶಕ ಲಾಯಿಟ.

ಮತ್ತೊಂದು ಶಿಫಾರಸ ಪತ್ರ.

ಕ್ರಿಮಿನಾಶಕ ಲಾಯಿಟ್ ಉಪಯೋಗ ಮಾಡುವದರಲ್ಲಿ ನಮ್ಮ ಯತ್ತಿನ ಕೊಟಗಿಯೊಳಗಿನ ಗೋಮಾರಿ, ಹಾಲ ಉಣ್ಣಿ ಮತ್ತು ಅಂಬರ ಉಣ್ಣಿ ಯಾವತ್ತೂ ನಾಶವಾಗಿರುತ್ತವೆ. ಮತ್ತು ಯತ್ತು, ದನಗಳಿಗೆ ಸುಖವಾಗಿರುತ್ತದೆ. ಈ ಲಾಯಿಟು ಎರಡು ದಿವಸ ಕೊಟಗಿಯಲ್ಲಿ ಹಚ್ಚಿದಲ್ಲಿ ಯಾವತ್ತೂ ನಾಶವಾಗಿರುತ್ತವೆ. ಇದು ದನಗಳಿಗೆ ಬಹಳ ಉಪಯೋಗವದೆ.

ಚನವೀರಯ್ಯ ಕಲ್ಲಂಬಮಠ.

ಉಪಯೋಗಿಸುವ ವಿಧಾನವು ಬಾಟ್ಲಿಯ ಸಂಗಡಲೇ ಇರುವದು. ೯ ದಿವಸಕ್ಕೆ ಸಾಲುವಷ್ಟು ೧ ಬಾಟ್ಲಿಗೆ ೦-೪-೦ ೧ ಡಜನ್ನಿಗೆ ೨-೧೨-೦. ವ್ಹಿ. ಪಿ. ಚಾರ್ಜ ಬೇರೆ.

ಕೆಳಗಿನ ಪ್ಲೇಗ ಸಂಜೀವಿನಿ ಆಫೀಸುಗಳಲ್ಲಿಯೂ ಎಜೆಂಟ್‌ರಲ್ಲಿಯೂ ದೊರೆಯುವದು.

ಪ್ಲೇಗ ಸಂಜೀವಿನಿ ಆಫೀಸ. ಸೋಲಾಪುರ.
" " ಹುಬ್ಬಳ್ಳಿ.
" " ಬೆಳಗಾಂವ

ಏಜೆಂಟರು.
ಬಸೆಟ್ಟೆಪ್ಪ ಹಲಕುರ್ಕಿ ಬಾಗಲಕೋಟೆ.
ಎಸ್. ಚಂದ್ರಪ್ಪ ತಾಂಡೂರ.
ಪ್ಲೇಗ ಸಂಜೀವಿನಿ ಆಫೀಸ ಗುಲಬರ್ಗಾ.

ಕಾಲರಾ ಸಂಜೀವಿನಿ.

ಕಾಲರಾ—

ಇದು ಮಾನವ ಚಿಕಿತ್ಸೆಗೆ ಮೀರಿದ ರೋಗವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ವಿಗಳಿಂದ ಶೋಧವಾಗಿದೆ. ಈ ಸಂಜೀವಿನಿ ಚೂರ್ಣವನ್ನು ಒಂದೇ ಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗುವದು. ಆಗ ನಿಮಗೆ ಖಂಡಿತವಾಗಿಯೂ ಆಶ್ಚರ್ಯವೂ ಆನಂದವೂ ಉಂಟಾಗುವವು.

—ಸಂಜೀವಿನಿ.

ಬೆಲೆ—
೧ ರೂ. ೫ ಆ.

ವಿಳಾಸ— ಪ್ಲೇಗ ಸಂಜೀವಿನಿ ಆಫೀಸ್, ಗುಲಬರ್ಗಾ.

ವೀರಶೈವ ಮಹಾಶಯರೇ,

ಸತ್ಯ ಸಂಗತಿಗಳನ್ನು ತಿಳಿದುಕೊಳ್ಳಲು ಅಪೇಕ್ಷಿಸುವಿರಾ ?

ಹಾಗಾದರೆ

ವೀರಶೈವ

ಮತಾಚಾರ್ಯರ ಕಾಲನಿರ್ಣಯ

ಎಂಬ ಪುಸ್ತಕವನ್ನು ಜಾಗ್ರತೆ ತರಿಸಿಕೊಂಡು ಓದಿರಿ.

ಇದರಲ್ಲಿ ಶ್ರೀ ರೇವಣಸಿದ್ಧ ಶ್ರೀ ಮರುಳಸಿದ್ಧ ಶ್ರೀ ಪಂಡಿತಾರಾಧ್ಯ

ಶ್ರೀ ಏಕೋರಾಮ ಶ್ರೀ ವಿಶ್ವಾರಾಧ್ಯ ಶ್ರೀ ಬಸವಣ್ಣ

ಈ ಮಹಾಪುರುಷರ ಕಾಲಮಾನವನ್ನು ಕುರಿತು

ಐತಿಹಾಸಿಕ ಪ್ರಬಲ ಪ್ರಮಾಣಗಳಿಂದ

ಶ್ರೀಮಾನ್ ಕರ್ಲಮಂಗಲಂ ಶ್ರೀಕಂಠಯ್ಯನವರು

ಬಹು ಸೊಗಸಾಗಿ ಬರೆದಿದ್ದಾರೆ.

೮೮ ಪುಟಗಳು. ಅಂದವಾದ ಮುದ್ರಣ.

ಕ್ರಯ ೧೨ ಆಣೆ ಇದ್ದದ್ದನ್ನು ೬ ಆಣೆಗೆ ಇಳಿಸಿದೆ.

೧೨ ಪುಸ್ತಕಗಳಿಗೆ ೪ ರೂ. ಅಂಚೆಯ ವೆಚ್ಚ ಬೇರೆ

ಸೂಚನೆ:— ಮೂರು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ವ್ಹಿ. ಪಿ. ಮೂಲಕ ಕಳಿಸುವದಾಗುತ್ತದೆ. ಒಂದೆರಡು ಪುಸ್ತಕಗಳನ್ನು ಅಪೇಕ್ಷಿಸತಕ್ಕವರು ಪೋಸ್ಟಚಾರ್ಜ ಸಹಿತ ಟಿಕಿಟ ಕಳಿಸಿದರೆ ಬುಕ್ ಪೋಸ್ಟ ದ್ವಾರ ಕಳಿಸಲಾಗುತ್ತದೆ.

ಪುಸ್ತಕ ದೊರೆಯುವ ವಿಳಾಸ-

ಜ್ಞಾನೋದಯ ಗ್ರಂಥಭಾಂಡಾರ ಅಲಮಟ್ಟಿ	ಶ್ರೀ ಬಿ. ವಿಶ್ವನಾಥಪ್ಪ ಮಂಡಿ ಮರ್ಚಂಟ್
ಪೋ. ಅಲಮಟ್ಟಿ ಜಿ. ವಿಜಾಪುರ	ಚಾಮರಾಜಪೇಟೆ, ಬೆಂಗಳೂರು ಸಿಟಿ.

ಸ್ಥಳೀಯ ಸಂಸ್ಥೆಗಳ ಪತ್ರಿಕೆ.

ಪ್ರತಿ ತಿಂಗಳ ತಾ|| ೧ ಮತ್ತು ೧೫ ರಲ್ಲಿ ಪ್ರಕಟವಾಗುವ ಪಕ್ಷಪತ್ರಿಕೆ.

ಜಿಲ್ಲಾ ಬೋರ್ಡ್, ಪೌರಸಭೆ, ಗ್ರಾಮಪಂಚಾಯತಿ ಮುಂತಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಇತಿಹಾಸ, ಮೂಲತತ್ವ, ಆಡಳಿತ ಮುಂತಾದ ವಿಚಾರಗಳಲ್ಲಿ ನುರಿತ ಲೇಖಕರಿಂದ ಬರೆಯಲ್ಪಟ್ಟ ಬೋಧಪ್ರದ ಲೇಖನಗಳನ್ನೂ, ಆ ಸಂಸ್ಥೆಗಳ ಕಾರ್ಯಕ್ರಮ ಮತ್ತು ಘಟನೆಗೆ ಸಂಬಂಧಪಟ್ಟ ವಿಶೇಷ ಸಮಾಚಾರಗಳನ್ನೂ, ಸ್ಥಾನಿಕ ಸ್ವರಾಜ್ಯ ಸಂಬಂಧವಾದ ದೇಶವಿದೇಶ ವರ್ತಮಾನಗಳನ್ನೂ ಪ್ರಕಟಿಸುವ ಪತ್ರಿಕೆ.

ಇತರ ಸಂಗತಿಗಳೂ ವಿಶೇಷ ವರ್ತಮಾನಗಳೂ ಸಹ ಪ್ರಕಟವಾಗುವವು.

ಇಡೀ ಕನ್ನಡ ನಾಡಿನಲ್ಲಿ ಇಂತಹ ಪತ್ರಿಕೆಯು ಇದೊಂದೇ !

ವಾರ್ಷಿಕಚಂದಾ:— ೨ ರೂಪಾಯಿ; ಸಂಸ್ಥೆಗಳಿಗೆ ೫ ರೂಪಾಯಿ.

ವಿಳಾಸ:— ಟಿ. ಯಾ. ಚನ್ನಪ್ಪ, ವ್ಯವಸ್ಥಾಪಕ ಸ್ಥಳೀಯ ಸಂಸ್ಥೆಗಳ ಪತ್ರಿಕೆ. ಗಾಂಧಿ ನಗರ, ಬೆಂಗಳೂರು ಸಿಟಿ.

ವೀರಶೈವ ಮತಬೋಧೆ.

ಶ್ರೀ ಮಂಜಪ್ಪನವರು ಹರ್ಡೇಕರ ಇವರಿಂದ ರಚಿಸಲ್ಪಟ್ಟ **ವೀರಶೈವ ಮತಬೋಧೆ** ಎಂಬ ಪುಸ್ತಕವನ್ನು ತೆಲುಗು ಭಾಷೆಯಲ್ಲಿ ಭಾಷಾಂತರಿಸಿದೆ. ಈ ಕೆಳಗಿನ ವಿಳಾಸಗಳಿಗೆ ಬರೆದು ತರಿಸಿಕೊಳ್ಳಿರಿ.

ಅಂಚೆ ತಿಕೀಟು ಕಳಿಸಿದಲ್ಲಿ ಬುಕ್-ಪೋಸ್ಟ ಮಾಡಲಾಗುವದು.

—ಬೆಲೆ ಒಂದಕ್ಕೆ ೩ ಆಣೆ. —

ಮ್ಯಾನೇಜರ	ಜಿ. ವೀರಭದ್ರಪ್ಪ.
ಜ್ಞಾನೋದಯ ಗ್ರಂಥ ಭಾಂಡಾರ	ಮನೆ ನಂ. ೩೧೩೬.
ಪೋ. ಅಲಮಟ್ಟಿ	ಚುಡಿಬಜಾರ ಹಲಕಾ (೩
ಜಿ. ವಿಜಾಪುರ.	ಹೈದರಾಬಾದ. (ದಖನ)

ದಿ ಸ್ವರಾಜ್ಯ ಬ್ಯಾಂಕಿಂಗ

ಮತ್ತು

ಇನ್ಶೂರನ್ಸ ಕಂಪನಿ ಲಿಮಿಟೆಡ್, ಧಾರವಾಡ.

ರೂ. ೭೦೨-೧೧-೫. ಕ್ಲೇಮು.

ಲ೯೩೫ ನೇ ಇಸ್ವಿಯು ೮ ತಿಂಗಳುಗಳಲ್ಲಿಯೇ

ಜನನ ಪಾಲಿಸಿದಾರರಿಗೆ ಕ್ಲೇಮಿನ ಹಣವು ಹಂಚಲ್ಪಟ್ಟಿದೆ.

ಡಿಶೆಂಬರ ಒಂದೇ ತಿಂಗಳಲ್ಲಿ ರೂ. ೧೬೦೧—೫—೧೦ ಕ್ಲೇಮು ಹಣವನ್ನು ಕೊಡಲಾಗಿದೆ.

ಈ ಕಂಪನಿಯಲ್ಲಿ ಜನನ, ವಿವಾಹ ಮತ್ತು ಮರಣ ಈ ಪ್ರಕಾರ

ಮೂರು ತರಹದ ವಿಮೆಗಳಿರುತ್ತವೆ.

ಪ್ರತಿಯೊಂದರ ಪ್ರವೇಶ ಫೀ ರೂ. ೫-೦-೦

ತಿಂಗಳ ಕಂತು .... ರೂ. ೧-೦-೦

ವಾರ್ಷಿಕ ಫೀ .... ರೂ. ೧-೦-೦

ಈ ವಿಮೆಗಳು ಬಡವರಿಗೂ ಬಲ್ಲಿದರಿಗೂ ಬಹಳೇ ಉಪಯೋಗವುಳ್ಳವುಗಳಿರುತ್ತವೆ.

ಕಾರಣ ಕರ್ನಾಟಕದ ಅಭಿಮಾನವುಳ್ಳ ಪ್ರತಿಯೊಬ್ಬರೂ ನಮ್ಮ ಕಂಪನಿಯ

ಪಾಲಿಸಿದಾರರಾಗಬೇಕಾಗಿ ಇಚ್ಛಿಸುತ್ತೇವೆ.

ಮ್ಯಾನೇಜಿಂಗ ಏಜಂಟ್ಸ

ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಶುರನ್ಸ ಕಂ., ಲಿ.

ಧಾರವಾಡ.

ಸೂಚನೆ:- ಲಾಯಿಫ ಇನ್ಶುರನ್ಸ ಈ ಕಂಪನಿಯಲ್ಲಿ ತೀವ್ರವೇ ಪ್ರಾರಂಭವಾಗುವದು. ಏಜಂಟರಾಗಿ ಕೆಲಸ ಮಾಡಲು ಇಚ್ಛೆಯುಳ್ಳವರು ಈ ತಿಂಗಳ ಅಖೈರದೊಳಗಾಗಿಯೇ ೧೯೩೬ ನೇ ಇಸ್ವಿ ಅಖೈರದೊಳಗಾಗಿ ಎಷ್ಟು ಬಿಜಿನೆಸ್ಸು ಮಾಡುವಿರೆಂಬದನ್ನು ಸಹಾ ತಿಳಿಸಬೇಕಾಗಿ ವಿನಂತಿ.

EXCELLENT GET-UP!	NOW ON SALE	BEAUTIFUL PRINT!

Recommended by the Government of Mysore for High-School Libraries in the Mysore State.

WHO IS THE FOUNDER OF THE VIRASAIVA OR LINGAYET RELIGION?

An indispensable book for all lovers of

HISTORY

Price As. 8. Postage Free.

Can be had from:—

Jeerage K. Basavappa B. A.
2, Cotton pet, BANGALORE city.
SOUTH INDIA.

ನಮ್ಮಲ್ಲಿ
ಫೋಟೋ, ಲೈನ
ಬ್ಲಾಕುಗಳು, ಹಿತ್ತಾ
ಳಿ ಮತ್ತು ಸೀಸದ ಬ್ಲಾ
ಕುಗಳು, ಅರಗಿನ ಸೀಲು ಜ
ವಾನರ ಬಿಲ್ಲೆಗಳು, ರಬ್ಬರ್
ಮೊಹರುಗಳು, ದೇವರ
ತ್ರಿಬಣ್ಣದ ಪಟಗಳು, ಕ್ಯಾ
ಲೆಂಡರುಗಳು ನಿಮ್ಮ
ಮನ ಒಪ್ಪುವಂತೆ
ತಯಾರಾಗು
ತ್ತವೆ.

REGISTERED No. B. 2891.

ಶರಣ ಸಂದೇಶ

The Sharana Sandesh.

ನ್ಯಾಯನಿಷ್ಠುರಿ| ದಾಕ್ಷಿಣ್ಯಪರನಾನಲ್ಲ| ಲೋಕವಿರೋಧಿ| ಶರಣನಾರಿಗಂಜುವನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ. ೩೨೪ | ಮಹಾನುಭಾವಿ ಬಸವಣ್ಣನವರು

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೫. | ಆಲಮಟ್ಟಿ- ಸೋಮವಾರ ತಾರೀಖು ೧ ನೆಯ ಜೂನ | ಸಂಚಿಕೆ ೩೮

ಮನಿ
ರದ್ದಾಳ
ಬೆಳಗಾಂ

ಜನಸೇವೆಯೇ ದೇವರ ಸೇವೆ

ಹಿಂದಿ ರಾಜ್ಯಘಟನೆಯ
ಹೊಸ ಶಾಸನದಂತೆ

ಪ್ರಾಂತಿಕ ಪ್ರಭುತ್ವವು

ತಾರೀಖು ೧-೪-೧೯೩೭ ನೆಯ ದಿನ
ಪ್ರಾರಂಭವಾಗುವದು.

ಅಷ್ಟಮ ಎಡ್ವರ್ಡ ಚಕ್ರವರ್ತಿಗಳ

ರಾಜ್ಯಾರೋಹಣ ಸಮಾರಂಭವು

ತಾರೀಖು ೧೨-೫-೧೯೩೭ ನೆಯ ದಿನ
ಜರುಗುವುದು.

ಅರಬರ ದೊಂಬೆ!

ಪಾಲೆಸ್ಟಾಯಿನ್‌ದಲ್ಲಿ ಅರಬರು ದೊಂಬೆಯನ್ನು ಮಾಡಿದ್ದರಿಂದ
೯೬೯ ಅರಬರನ್ನು ೨೭೫ ಜ್ಯು ಜನರನ್ನು ಇಂಗ್ಲಿಷ್
ಸರಕಾರವು ಹಿಡಿದಿದೆ. ಬ್ರಿಟಿಶ್ ಸೈನ್ಯವೂ
ಕಳಿಸಲ್ಪಟ್ಟಿದೆ.

ದೇಶವೇ ದೇವಾಲಯ.

SANGAM CLOTH STORES
Prop: M S Hundekar & Sons,
P.O: TERDAL - 587315
Dt. Bijapur. (Karnataka)

ದಿ ಸ್ವರಾಜ್ಯ ಬ್ಯಾಂಕಿಂಗ

ಮತ್ತು

ಇನ್ಶೂರನ್ಸ ಕಂಪನಿ ಲಿಮಿಟೆಡ್, ಧಾರವಾಡ.

ರೂ. ೭೦೨-೧೧-೫. ಕ್ಲೇಮು.

೧೯೩೫ ನೇ ಇಸ್ವಿಯ ೮ ತಿಂಗಳುಗಳಲ್ಲಿಯೇ

ಜನನ ಪಾಲಿಸಿದಾರರಿಗೆ ಕ್ಲೇಮಿನ ಹಣವು ಹಂಚಲ್ಪಟ್ಟಿದೆ.

ಡಿಶೆಂಬರ ಒಂದೇ ತಿಂಗಳಲ್ಲಿ ರೂ. ೧೬೦೧—೫—೧೦ ಕ್ಲೇಮು ಹಣವನ್ನು ಕೊಡಲಾಗಿದೆ.

ಈ ಕಂಪನಿಯಲ್ಲಿ ಜನನ, ವಿವಾಹ ಮತ್ತು ಮರಣ ಈ ಪ್ರಕಾರ ಮೂರು ತರಹದ ವಿಮೆಗಳಿರುತ್ತವೆ.

ಪ್ರತಿಯೊಂದರ ಪ್ರವೇಶ ಫೀ ರೂ. ೫-೦-೦

ತಿಂಗಳ ಕಂತು .... ರೂ. ೧-೦-೦

ವಾರ್ಷಿಕ ಫೀ .... ರೂ. ೧-೦-೦

ಈ ವಿಮೆಗಳು ಬಡವರಿಗೂ ಬಲ್ಲಿದರಿಗೂ ಬಹಳೇ ಉಪಯೋಗವುಳ್ಳವುಗಳಿರುತ್ತವೆ. ಕಾರಣ ಕರ್ನಾಟಕದ ಅಭಿಮಾನವುಳ್ಳ ಪ್ರತಿಯೊಬ್ಬರೂ ನಮ್ಮ ಕಂಪನಿಯ ಪಾಲಿಸಿದಾರರಾಗಬೇಕಾಗಿ ಇಚ್ಛಿಸುತ್ತೇವೆ.

ಮ್ಯಾನೇಜಿಂಗ ಏಜಂಟ್ಸ
ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಶುರನ್ಸ ಕಂ., ಲಿ.
ಧಾರವಾಡ.

ಸೂಚನೆ:- ಲಾಯಿಫ ಇನ್ಶುರನ್ಸ ಈ ಕಂಪನಿಯಲ್ಲಿ ತೀವ್ರವೇ ಪ್ರಾರಂಭವಾಗುವದು. ಏಜಂಟರಾಗಿ ಕೆಲಸ ಮಾಡಲು ಇಚ್ಛೆಯುಳ್ಳವರು ಈ ತಿಂಗಳ ಅಖೈರದೊಳಗಾಗಿಯೇ ೧೯೩೬ ನೇ ಇಸ್ವಿ ಅಖೈರದೊಳಗಾಗಿ ಎಷ್ಟು ಬಿಜಿನೆಸ್ಸ ಮಾಡುವಿರೆಂಬದನ್ನು ಸಹಾ ತಿಳಿಸಬೇಕಾಗಿ ವಿನಂತಿ.

EXCELLENT GET-UP!	NOW ON SALE	BEAUTIFUL PRINT!

Recommended by the Government of Mysore for High-School Libraries in the Mysore State.

WHO IS THE FOUNDER OF THE VIRASAIVA OR LINGAYET RELIGION?

An indispensable book for all lovers of HISTORY

Price As. 8. Postage Free.

Can be had from:—
Jeerage K. Basavappa B. A.
2, Cotton pet, BANGALORE city.
SOUTH INDIA.

ನಮ್ಮಲ್ಲಿ ಫೋಟೋ, ಲೈನ ಬ್ಲಾಕುಗಳು, ಹಿತ್ತಾಳಿ ಮತ್ತು ಸೀಸದ ಬ್ಲಾಕುಗಳು, ಅರಗಿನ ಸೀಲು ಜವಾನರ ಬಿಲ್ಲೆಗಳು, ರಬ್ಬರ್ ಮೊಹರುಗಳು, ದೇವರ ತ್ರಿಬಣ್ಣದ ಪಠಗಳು, ಕ್ಯಾಲೆಂಡರುಗಳು ನಿಮ್ಮ ಮನ ಒಪ್ಪುವಂತೆ ತಯಾರಾಗುತ್ತವೆ.

REGISTERED No- B. 2891.

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ! ದಾಕ್ಷಿಣ್ಯಪರನಾನಲ್ಲ! ಲೋಕವಿರೋಧಿ! ಶರಣನಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ! ... ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ರಾ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವರ್ಗಣಿ:- ಅಂಚೆಯ ವೆಚ್ಚ ಸೇರಿ ३ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೫. | ಆಲಮಟ್ಟಿ- ಸೋಮವಾರ ತಾರೀಖು ೧ ನೆಯ ಜೂನ | ಸಂಚಿಕೆ ೩೮

ಮನಿ
ರದಾಳ
ಬೆಳಗಾಂ

ಜನಸೇವೆಯೇ ದೇವರ ಸೇವೆ.

ಹಿಂದಿ ರಾಜ್ಯಘಟನೆಯ
ಹೊಸ ಶಾಸನದಂತೆ

ಪ್ರಾಂತಿಕ ಪ್ರಭುತ್ವವು

ತಾರೀಖು ೧-೪-೧೯೩೭ ನೆಯ ದಿನ
ಪ್ರಾರಂಭವಾಗುವದು.

ಅಷ್ಟಮ ಎಡ್ವರ್ಡ ಚಕ್ರವರ್ತಿಗಳ

ರಾಜ್ಯಾರೋಹಣ ಸಮಾರಂಭವು

ತಾರೀಖು ೧೨-೫-೧೯೩೭ ನೆಯ ದಿನ
ಜರುಗುವುದು.

ಅರಬರ ದೊಂಬಿ!

ಪಾಲೆಸ್ಟಾಯಿನ್‍ದಲ್ಲಿ ಅರಬರು ದೊಂಬಿಯನ್ನು ಮಾಡಿದ್ದರಿಂದ
೯೬೯ ಅರಬರನ್ನು ೨೭೫ ಜ್ಯು ಜನರನ್ನು ಇಂಗ್ಲಿಷ್
ಸರಕಾರವು ಹಿಡಿದಿದೆ. ಬ್ರಿಟಿಶ್ ಸೈನ್ಯವೂ
ಕಳಿಸಲ್ಪಟ್ಟಿದೆ.

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur, (Karnataka)

೧೯೩೩ ಇಸ್ವಿಯಲ್ಲಿ ವಿಮಾ ಉದ್ಯಮವನ್ನು
ಪ್ರಾರಂಭಿಸಿ ವರ್ಷವರ್ಷಕ್ಕೆ ಅಭಿವೃದ್ಧಿಯನ್ನು ತೋರಿಸುತ್ತಾ
ಈಗ ಜೀವ ವಿಮೆಯನ್ನು ಕೈಕೊಂಡು
ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧಿಯನ್ನು ಪಡೆದ

ದಿ ಸ್ವರಾಜ್ಯ

ಬ್ಯಾಂಕಿಂಗ ಮತ್ತು ಇನ್ಸುಅರನ್ಸ ಕಂಪನಿ

ಲಿಮಿಟೆಡ್, ಧಾರವಾಡ.

ಕರ್ನಾಟಕದ ಮುಂದಾಳುಗಳಾದ ದೇಶಭಕ್ತ ಶ್ರೀಯುತ ಎಸ್. ಕೆ. ಹೊಸಮನಿ
ಬಿ. ಎ. ಎಲ್. ಎಲ್. ಬಿ., ಎಂ. ಎಲ್. ಎ. ಚೇಅರಮನ್
ಮತ್ತು
ಶ್ರೀಯುತ ವ್ಹಿ ಬಿ ಹಾಲಭಾವಿ ರಿಟಾಯರ್ಡ ಫರ್ಸ್ಟಕ್ಲಾಸ
ಸಬ್ ಜಜ್ ಧಾರವಾಡ ಇವರ ನೇತೃತ್ವದ ಕೆಳಗೆ ನಡೆದಿರುವ ಮತ್ತು ಕರ್ನಾಟಕದ
ವ್ಯಾಪಾರ ಉದ್ಯೋಗಗಳನ್ನು ಬೆಳಸಲಿಚ್ಛಿಸುವ ಸ್ವದೇಶಿ
ಕಂಪನಿಯಲ್ಲಿಯೇ ವಿಮೆ ಇಳಿಸಿರಿ.

ಧಾರವಾಡ ವಿಜಾಪುರ ಬೆಳಗಾಂವ ಕಾರವಾರ ಬಳ್ಳಾರಿ ರಾಯಚೂರ ಮತ್ತು ಮೈಸೂರು ಸ್ಟೇಟಿನಲ್ಲಿಯೂ
ಅಭಿಮಾನದಿಂದ ಕೆಲಸ ಮಾಡಲು ಕುಶಲ ಏಜಂಟರು ಬೇಕಾಗಿದ್ದಾರೆ. ವಿಶೇಷ ಮಾಹಿತಿಯನ್ನು
ಸಮಕ್ಷಮ ಇಲ್ಲವೇ ಪತ್ರದ್ವಾರದಿಂದ ತಿಳಿಯಬೇಕು.

The Manager
Shwarajya Banking Insurance Company Ltd.
DHARWAR.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಕಾಯಕವೆ ಕೈಲಾಸ	೦-೩-೦	ಸುಕಲಾದೇವಿಯ ಕಥೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ಶರಣಬಸವೇಶ್ವರನ ಚರಿತ್ರೆ	೦-೧-೬
ಏಕಲವ್ಯನ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಲಜಪತರಾಯರ ಚರಿತ್ರೆ	೦-೧-೬	ವಿಜಯವಾಣಿ	೦-೨-೦
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

ಓಂ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೫. | ಆಲಮಟ್ಟಿ- ಸೋಮವಾರ ತಾರೀಖು ೧ ನೆಯ ಜೂನ ೧೯೩೬. | ಸಂಚಿಕೆ ೩೮.

ಮತ್ತೆ ಭೂಮಿ ನಡುಗಿತು !

ಬಿಹಾರ ಮತ್ತು ಸಂಯುಕ್ತ ಪ್ರಾಂತಗಳಲ್ಲಿ ತಾ. ೨೭ ನೆಯ ದಿವಸ ಮಧ್ಯಾನ್ಹ ೧೨ ಗಂಟೆಯ ಸಮಯಕ್ಕೆ ಭೂಮಿ ನಡುಗಿತು. ಜನರು ಭಯಪಟ್ಟು ಅತ್ತಿತ್ತ ಓಡಲಾರಂಭಿಸಿದರು. ಅನೇಕ ಕಡೆ ಮನೆಗಳು ಅಲ್ಲಾಡಿದವು. ಬಾಗಿಲು ಮತ್ತು ಕಿಡಕಿಗಳು ತಾವಾಗಿಯೇ ಮುಚ್ಚಲ್ಪಟ್ಟವು.

ಪಾಟಣಾ, ಅಲಹಾಬಾದ, ಲಖನೌ, ದಿಲ್ಲಿ, ಕಾನಪುರ, ಮುಝಫರಪುರ ಮೊದಲಾದ ಪಟ್ಟಣಗಳಲ್ಲಿ ಈ ಭೂಕಂಪನದಿಂದ ಜನರು ಬಹು ಭಯಪಟ್ಟು ಬೈಲು ಪ್ರದೇಶಕ್ಕೆ ಓಡುತ್ತಿದ್ದರು. ಎಲ್ಲಿಯೂ ವಿಶೇಷ ನಷ್ಟವಾಗಲಿಲ್ಲ. ಕಲಕತ್ತಾದಲ್ಲಿಯೂ ಆ ದಿನ ನೆಲ ನಡುಗಿತು.

ಶಿವಾಲಯವನ್ನು ಭ್ರಷ್ಟಗೊಳಿಸಿದರು.

ಶಹಜಹಾನಪುರ ಜಿಲ್ಲೆಯ ಸುಲತಾನಪುರ ಎಂಬಲ್ಲಿ ಅಲ್ಲಿಯ ಕೆಲವು ಠುಂಟ ಮುಸಲ್ಮಾನರು ತಾ. ೨೨ ನೆಯ ದಿವಸ ಒಂದು ಶಿವಾಲಯದ ಮುಂದಿನ ದೀಪ ಸ್ತಂಭವನ್ನು ಒಡೆದುಹಾಕಿ ದೇವಾಲಯದಲ್ಲಿಯ ಶಿವಲಿಂಗವನ್ನು ಒಡೆದು ಅದನ್ನು ತೆಗೆದುಕೊಂಡು ಹೋದರು.

ಮುಸಲ್ಮಾನರ ಈ ಅತ್ಯಾಚಾರದ ಸುದ್ದಿ ತಿಳಿದೊಡನೆ ಅಲ್ಲಿಗೆ ಪೋಲೀಸರು ಬಂದು ಅನೇಕ ಮುಸಲ್ಮಾನರನ್ನು ಹಿಡಿದರು. ಅವರಲ್ಲಿ ೨೬ ಜನಗಳ ಮೇಲೆ ವ್ಯಾಜ್ಯವನ್ನು ಹೂಡಿದ್ದಾರೆ. ಹಿಂದುಗಳು ಹರತಾಳವನ್ನು ಆಚರಿಸಿದರು. ಮ್ಯಾಜಿಸ್ಟ್ರೇಟರು ೧೪೪ ನೆಯ ಶಾಸನವನ್ನು ಅಲ್ಲಿ ಆಚರಣೆಗೆ ತಂದಿದ್ದಾರೆ.

೫ ನಿಮಿಷದಲ್ಲಿ ೩೦ ಕೋಟಿ ರೂಪಾಯಿ!

ಹಿಂದುಸ್ಥಾನ ಸರಕಾರವು ನೂರಕ್ಕೆ ವರುಷಕ್ಕೆ ೨||| ರೂ. ಬಡ್ಡಿ ಪ್ರಕಾರ ೧೨ ಕೋಟಿ ರೂ. ಗಳ ಸಾಲವನ್ನು ಕೇಳಿತ್ತು. ಮುಂಬೈಯಲ್ಲಿ ತಾ. ೨೬ ನೆಯ ಮಧ್ಯಾನ್ಹ ಸಾಲ ಕೊಡುವವರ ಅರ್ಜಿಗಳು ವಿಪರೀತವಾಗಿ ಬಂದವು. ೫ ನಿಮಿಷದಲ್ಲಿಯೇ ೩೦ ಕೋಟಿ ರೂ. ಸಾಲ ಕೊಡಲು ಸಿದ್ಧವಾದ ಅರ್ಜಿಗಳು ಬಂದವು! ಆ ಅರ್ಜಿಗಳಲ್ಲಿ ೧೦೦ ಕ್ಕೆ ೪೦ ರಷ್ಟು ಅರ್ಜಿಗಳನ್ನು ಮಾತ್ರವೇ ಸ್ವೀಕರಿಸುವುದಾಗಿ ಸರಕಾರವು ತಿಳಿಸಿದೆ.

ನಾ ಮುಂದೆ ತಾ ಮುಂದೆ ಎಂದು ಸರಕಾರಕ್ಕೆ ಇಷ್ಟು ಕಡಿಮೆ ಬಡ್ಡಿಯಿಂದ ಸಾಲ ಕೊಡಲು ಮುಂದರಿಯುವ ಧನಿಕರು ಮುಂಬೈಯಲ್ಲಿ ಎಷ್ಟು ಜನರೊ ! ಅರೆ ನಿಮಿಷ ತಡವಾಯಿತಲ್ಲಾ ! ಎಂದು ಚಿಂತಿಸುತ್ತ ಅನೇಕರು ತಿರುಗಿ ಹೋದರು. ಇಷ್ಟು ಕಡಿಮೆ ಬಡ್ಡಿಯಲ್ಲಿ ಇಷ್ಟು ಜಾಗ್ರತೆ ಇಷ್ಟು ಹಣ ಕೂಡಿದುದು ಹಿಂದುಸ್ಥಾನದ ಚರಿತ್ರೆಯಲ್ಲಿಯೇ ಹೊಸದಂತೆ !

ಇದರಿಂದ ಧನಿಕರಲ್ಲಿ ಹಣವು ಎಷ್ಟು ವಿಪರೀತವಾಗಿ ಕೂಡಿಬಿದ್ದಿದೆಯೆಂಬುದು ಗೊತ್ತಾಗುವುದಿಲ್ಲವೇ? ಮೊದಲು ಜನರ ಬಳಕೆಗಾಗಿ ಹಣವನ್ನು ಕೊಡುತ್ತಿದ್ದರು. ಅಂತೆಯೇ ಜನ ಸಾಮಾನ್ಯರ ಕೈಯಲ್ಲಿಯೂ ಹಣ ಓಡಾಡುತ್ತಿತ್ತು. ಹಣವಿನ ತೊಂದರೆ ಈಗಿನಂತಿರಲಿಲ್ಲ. ಧನಿಕರೆಲ್ಲಾ ಕೊಟ್ಟರೆ ಕೆಟ್ಟೆವೆಂದು ಯೋಚಿಸಿ ಕೈಬಿಗಿ ಹಿಡಿದುದರಿಂದ ಜನರ ಬಳಕೆಯಲ್ಲಿ ಹಣ ಬರದಂತಾಯಿತು. ಧನಿಕರಲ್ಲಿ ಕೂಡಿ ಬಿದ್ದಿತು. ಅದಕ್ಕೆ ಇದೇ ಸಾಕ್ಷಿ.

ಶಾಹಿದಗಂಜ ವ್ಯಾಜ್ಯದ ತೀರ್ಪು.

ಲಾಹೋರಿನ ಶಾಹಿದಗಂಜ ಗುರುದ್ವಾರ ಸಂಬಂಧವಾಗಿ ಡಾ. ಮಹಮ್ಮದ ಆಲಮ ಎಂಬವರು ಹೂಡಿದ್ದ ವ್ಯಾಜ್ಯವನ್ನು ತಾ. ೨೫ ನೆಯ ದಿವಸ ಸೆಶನ್ಸ್ ಜಜ್ ಮಿ. ಸೇನರವರು ತೆಗೆದುಹಾಕಿದರು. ಪೀರ ಕಾಕುಶಹಾ ಕಬರಸ್ಥಾನದ ವ್ಯಾಜ್ಯದಲ್ಲಿ ಹಿಡಿಯಲ್ಪಟ್ಟಿದ್ದ ೧೧ ಜನ ಶೀಖರನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಿದರು.

ಇದರಿಂದ ಮುಸಲ್ಮಾನರು ಬಹು ಅಸಂತುಷ್ಟರಾಗಿದ್ದಾರೆ. ಆ ದಿನ ಹರತಾಳವನ್ನಾಚರಿಸಿದರು. ಪ್ರಚಂಡ ಸಭೆ ಕೂಡಿಸಿ ಈ ತೀರ್ಪನ್ನು ನಿಷೇಧಿಸಿದರು. ಡಾ. ಆಲಮರು ನನ್ನನ್ನು ಕೌನ್ಸಿಲ್ಲಿಗೆ ಆರಿಸಿ ಕಳಿಸಿದರೆ ಈ ಗುರುದ್ವಾರ್ ಅಕ್ಷಣ್ಣೇ ಕಿತ್ತುಹಾಕಿಸುವೆನೆಂದು ಹೇಳಿದರು.

ಬಸವ ನಿಂದಕರ ಬಳಗಕ್ಕೆ ಮತ್ತೊಬ್ಬರು.

ವೀರಶೈವರಲ್ಲಿಯೇ ಬಸವ ನಿಂದಕರ ಒಂದು ಬಲವಾದ ಬಳಗ ವಿದೆಯಷ್ಟೆ. ಅದಕ್ಕೆ ಆರ್ಯ ಸಮಾಜದ ಕೆಲವರು ಇತ್ತೀಚಿಗೆ ಸೇರಿದ್ದಾರೆ. ತಾವು ಇತಿಹಾಸ ಸಂಶೋಧಕರೆಂಬ ಹೆಸರಿನಿಂದ ಈಗ ಮತ್ತೊಬ್ಬರು ಬಸವ ಮಹಾನುಭಾವನನ್ನೂ ಆತನ ದಿವ್ಯ ತತ್ವಗಳನ್ನೂ ನಿಂದಿಸಲು ಮುಂದೆ ಬಂದಿದ್ದಾರೆ. ಆರ್ಯ ಸಮಾಜದ ಶ್ರೀ. ಸುಬ್ಬ ನರಸಿಂಹ ಶಾಸ್ತ್ರಿಗಳ ನಿಂದ್ಯ ಪ್ರಯತ್ನವನ್ನು ಕುರಿತು ಈ ಮುಂಚೆ ತಿಳಿಸಿದ್ದಾಗಿದೆಯಷ್ಟೇ.

ವೀರಶೈವ ಮತಾಚಾರ್ಯರ ಕಾಲನಿರ್ಣಯ ಎಂಬ ಪುಸ್ತಕವನ್ನು ಬರೆದು ವೀರಶೈವರಿಗೆ ಎಷ್ಟೋ ಪರಿಚಿತರಾಗಿದ್ದ ಶ್ರೀ. ಕರ್ಪೂಂಗಲಂ ಶ್ರೀಕಂಠಯ್ಯನವರು ಬಸವ ನಿಂದಕರ ಬಳಗದಲ್ಲಿ ಸೇರಿ ತಮ್ಮ ಬುದ್ಧಿವಂತಿಕೆಯ ದುರುಪಯೋಗವನ್ನು ಮಾಡಿಕೊಳ್ಳಲಾರಂಭಿಸಿದ್ದಾರೆ.

ಇವರು ಬ್ರಾಹ್ಮಣ, ಎಂಬ ಮಾಸಪತ್ರಿಕೆಯನ್ನು ಬೆಂಗಳೂರಲ್ಲಿ ಪ್ರಕಟಿಸುತ್ತಿದ್ದಾರೆ. ಅದರ ೧೧ ನೆಯ ಸಂಚಿಕೆಯಲ್ಲಿ 'ಮಧ್ವಾಚಾರ್ಯರ ಕಾಲದ ಧಾರ್ಮಿಕ ಪರಿಸ್ಥಿತಿ' ಎಂಬ ಲೇಖನವನ್ನು ಬರೆದು ಅದರಲ್ಲಿ ಬಸವ ಮಹಾತ್ಮನನ್ನೂ ಆತನ ಶ್ರೇಷ್ಠ ತತ್ವಗಳನ್ನೂ ಯಥೇಚ್ಛವಾಗಿ ನಿಂದಿಸಿದ್ದಾರೆ. ಆ ನಿಂದೆಯ ಲೇಖನವುಳ್ಳ ಸಂಚಿಕೆಯನ್ನು ಬೆಂಗಳೂರಿನ ಮಹಾಶಯರೊಬ್ಬರು ನಮ್ಮ ಕಡೆ ಕಳುಹಿಸಿದುದರಿಂದ ನಾವು ಈ ವಿಷಯವನ್ನು ಪ್ರಸ್ತಾಪಿಸಬೇಕಾಯಿತು.

ಯಾರು ಮಹಾತ್ಮರು?

ಈ ಲೇಖಕರು ತಮ್ಮ ಲೇಖನದ ಆರಂಭದಲ್ಲಿ ಯಾರು ಮಹಾತ್ಮರೆಂಬುದನ್ನು ವಿವೇಚಿಸುವಾಗ ಕೊನೆಯಲ್ಲಿ ಹೀಗೆ ಹೇಳಿದ್ದಾರೆ-

"ಕಳ್ಳನು ತನ್ನ ಪರಹಿಂಸಾಕಾರಿ ಕೃತ್ಯಗಳಿಗೋಸ್ಕರ ಸತ್ತರೆ, ವ್ಯಭಿಚಾರಿಯು ತನ್ನ ದುರ್ನಡತೆಗಳಿಗಾಗಿ ಸತ್ತರೆ, ಇಲ್ಲವೆ ಒಬ್ಬನು ಪುಂಡು ಘೋರರಿಗಳಿಗೆಲ್ಲಾ ಗುರುವಾಗಿ ತಾನು ರಾಜ್ಯಾಭಿಲಾಷೆಯಿಂದ ಹೋರಾಡಿ ಮಡಿದರೆ, ಅತಿ ಕಾಮಿಯಾಗಿ ತನ್ನ ಇಷ್ಟವು ಪೂರೈಸುವುದಕ್ಕಾಗಿ ಮನಬಂದಂತೆ ನಡೆದು ಕಡೆಗೆ ಕೆಟ್ಟರೆ, ಅಥವಾ ತನ್ನಂತೆ ಕೀಳು ಜನಗಳ ಮನಸ್ಸಿಗೆ ಆದರ್ಶನಾಗಿದ್ದರೆ, ಅವರನ್ನೂ, ಅವರ ತ್ಯಾಗವನ್ನೂ ಮಹತ್ವಪೂರ್ಣವಾದುದೆಂದು ಭಾವಿಸಲಾಗುವುದಿಲ್ಲ.

ಪ್ರಪಂಚದಲ್ಲಿ ಈ ಬಗೆಯ ಜನಗಳೂ ಅವರ ಅನುಯಾಯಿಗಳ ಅವಿಚಾರಪೂರ್ವಕವಾದ ಬುದ್ಧಿಯಿಂದ ಜಗದ್ಗುರುಗಳಾಗಿರುವುದುಂಟು. ಅವರ ಬಳಗದಲ್ಲಿ ಕಳ್ಳರೂ, ತಲೆ ಹೊಡಕರೂ, ದುರಾಚಾರಿಗಳೂ, ವ್ಯಭಿಚಾರಿಗಳೂ, "ಮಹಾ ಶರಣ" ರಾಗಿದ್ದುದುಂಟು ಅವರು ರಾಜ್ಯ ಅಧಿಕಾರಿಗಳ ಮೋಹಕ್ಕೆ ಬಲಿಯಾಗಿ ತಮ್ಮ ಸ್ವಕೀಯರನ್ನೇ ರಾಜರಿಗೆ ಒಪ್ಪಿಸಿದುದುಂಟು. ಅವರ ರಾಜ್ಯ ತೃಷ್ಣೆಯು ಅವರನ್ನು ಕಳ್ಳರನ್ನೂ, ಪುಂಡರನ್ನೂ, ಹಡಕಿಗರನ್ನೂ, ಬಳಗಕ್ಕೆ ಸೇರಿಸಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿದುದುಂಟು. ಕೊನೆಗೆ ಅವರು ತಮ್ಮ ಕಾರ್ಯವನ್ನು ಸಾಧಿಸಿದುದೂ ಇಲ್ಲವೇ ಅದಕ್ಕಾಗಿ ಅನ್ಯಾಯವಾಗಿ ಸತ್ತುದುದೂ ಉಂಟು. ಇದನ್ನೆಲ್ಲಾ ಧರ್ಮದ ಹೆಸರಿನಲ್ಲಿ ನ್ಯಾಯವೆನ್ನುವುದಾದರೆ ಪ್ರಪಂಚದಲ್ಲಿ ಸತ್ಯದ ಕೊಲೆಯಾಯಿತೆಂದೇ ಭಾವಿಸಬಹುದು"

ಮಧ್ವಾಚಾರ್ಯರ ಕಾಲ ಸ್ಥಿತಿ.

ಅನಂತರ ಶ್ರೀ ಮಧ್ವಾಚಾರ್ಯರ ಕಾಲದ ಧಾರ್ಮಿಕ ಸ್ಥಿತಿಯನ್ನು ವಿವರಿಸಲಾರಂಭಿಸಿ ಪೌರಾಣಿಕರ ಕಲ್ಪನೆಯ ಯಮಪುರಕ್ಕಿಂತಲೂ ಭಯಂಕರವಾಗಿದ್ದಿತೆಂದು ಭಾಸವಾಗುವಂತೆ ಈ ಇತಿಹಾಸ ಸಂಶೋಧಕರು ಆಗಿನ ಕರ್ನಾಟಕದ ಸ್ಥಿತಿಯನ್ನು ಚಿತ್ರಿಸಿದ್ದಾರೆ. ಆ ಭೀಕರ ಸ್ಥಿತಿಗಳನ್ನು ವರ್ಣಿಸುವಾಗ ಹೀಗೆ ಹೇಳಿದ್ದಾರೆ—

" ಶ್ರೀ ಮಧ್ವಾಚಾರ್ಯರು ಉದಯಿಸಿದ ಸಮಯದಲ್ಲಿ ನಮ್ಮ ಕರ್ನಾಟಕ ದೇಶದ ತುಂಬಾ ಅವೈದಿಕ ಶೈವರು ಪ್ರಬಲರಾಗಿದ್ದರು. ಇವರಲ್ಲಿ ಲಕುಲೀಶರು, ಪಾಶುಪತರು, ಕಾಳಾಮುಖರು, ಇವರೆಲ್ಲರಿಗಿಂತ ಕಾಪಾಲಿಕರು ದಟ್ಟವಾಗಿದ್ದರು. ಇವರು ಮಹಾ ಕ್ರೂರರು. ಮದ್ಯ, ಮತ್ಸ್ಯ, ಮೈಥುನಾದಿ ಪಂಚ ಮಕಾರಗಳು ಇವರ ನಿತ್ಯ ಕರ್ಮಗಳಾಗಿದ್ದವು."

ಹನ್ನೆರಡನೆಯ ಶತಮಾನದ ಆದಿ ಭಾಗದ ಹೊತ್ತಿಗೆ ಬೌದ್ಧ ಧರ್ಮವು ಮಂತ್ರಯಾನ ವಜ್ರಯಾನ, ಹೀನ ಯಾನಗಳಾಗಿ ಕೊಲ್ಲಾಪುರವು ಮಂತ್ರಯಾನ ಮತ್ತು ವಜ್ರಯಾನಗಳ ಬೌದ್ಧರಿಗೆ ಒಳ್ಳೆಯ ಅಭಿಮಾನದ ಸ್ಥಳವಾಗಿತ್ತು. ಇವರಿಗೆ ಈಶ್ವರ ವಿಶ್ವಾಸದೊಂದಿಗೆ ಬುದ್ಧನ ಬೋಧೆಗಳಾದ ದಯೆ ದಾಕ್ಷಿಣ್ಯಗಳೂ ಹಾಳಾಗಿ ಹೋಗಿದ್ದವು. ಈ ಹೀನ ವಜ್ರಯಾನದವರಲ್ಲಿ ಮದ್ಯ, ಮಂತ್ರ, ಹಠಯೋಗ, ಸ್ತ್ರೀ ಈ ನಾಲ್ಕು ಮುಖ್ಯ ವಸ್ತುಗಳಾಗಿದ್ದವು. ಈ ಕಡು ಪಾಪಿಗಳಾದ ನರ ಪಿಶಾಚಿಗಳು ೧೧-೧೨ ನೆಯ ಶತಮಾನಗಳಲ್ಲಿ ಕೊಲ್ಲಾಪುರ ಮತ್ತು ಗುಂಟೂರು ಜಿಲ್ಲೆಯ ಪರ್ವತಗಳಲ್ಲಿ ಬೀಡು ಬಿಟ್ಟುಕೊಂಡಿದ್ದರು."

ಬಸವನ ಮತ ವಜ್ರಯಾನ ಬೌದ್ಧ ಮತದಂತೆ !

ಕಾಪಾಲಿಕಾದಿ ಶೈವರ ಮತ್ತು ವಜ್ರಯಾನ ಮೊದಲಾದ ಬೌದ್ಧರ ಸಂಗತಿಗಳನ್ನು ವಿವರಿಸಿದ ಮೇಲೆ ವೀರಶೈವ ಮತ ಸಂಬಂಧವಾಗಿ ಹೀಗೆ ಬರೆದಿದ್ದಾರೆ—

"ಈ ನಡುವೆ ಶೈವ ಮತದಲ್ಲಿ ಕವಲೊಡೆದು ನಾನಾ ಶಾಖೆಗಳಾಗಿದ್ದವೆಂದು ಮೊದಲೇ ತಿಳಿಸಿದ್ದೇವೆ. ಆಗ ಶೈವ ಮತದಲ್ಲಿ "ವೇದ ಪ್ರಾಮಾಣ್ಯ" "ವರ್ಣಾಶ್ರಮ ಧರ್ಮ" ಗಳನ್ನು ತಿರಸ್ಕರಿಸಿ ವಿಷ್ಣು ಭಕ್ತಿಯನ್ನು ಸಂಪೂರ್ಣವಾಗಿ ತೊಡೆದು ಹಾಕುವುದಕ್ಕಾಗಿ "ವೀರಶೈವ" ಅವೈದಿಕವೆಂಬೊಂದು ಪಂಗಡದಲ್ಲಿ ನವಸ್ಫೂರ್ತಿಯುಂಟಾಯಿತು. ಇದು ಬೇಗನೇ ಹಿಂದಿನ ಮತದಲ್ಲಿದ್ದ ಬೇಕುಬೇಕಾದ ಸೌಲಭ್ಯಗಳನ್ನೆಲ್ಲಾ ಉಪಯೋಗಿಸಿಕೊಂಡು ಬಹಳ ಚುರುಕಿನಿಂದ ಹಬ್ಬುತ್ತಿತ್ತು. 'ತರದವಾಡಿ' ನಾಡಿನಲ್ಲಿ ಇದು ಮೊಳಕೆಯಾಗಿ 'ಕಲ್ಯಾಣದಲ್ಲಿ ಬೆಳೆಯುವುದಕ್ಕೆ ಮೊದಲಾಯಿತು. ಆಗಿನ ಸಮಯದಲ್ಲಿ ಈ ಸಮಾಜವನ್ನು ಬೆಳೆಸುವ ಭಾರವನ್ನು 'ಮಾದಿರಾಜ' ನ ಮಗನಾದ ಕಾಣ್ವ (ಕಮ್ಮೆ) ಶಾಖೆಯ ಶೈವ ಬ್ರಾಹ್ಮಣನಾದ 'ಬಸವೇಶ್ವರ' ನೆಂಬ ಭಂಡಾರಿಯು ವಹಿಸಿಕೊಂಡು ಕಂಕಣವನ್ನು ಕಟ್ಟಿಕೊಂಡಿದ್ದನು.

ನಾವು ಈಗ ವೀರಶೈವ ಮತವನ್ನು ಖಂಡನೆ ಮಂಡನೆ ಮಾಡುತ್ತಿಲ್ಲವೆಂಬುದನ್ನು ವಾಚಕರು ನೆನಪಿನಲ್ಲಿಟ್ಟಿರಬೇಕು. ನಾವು ತಾತ್ಕಾಲಿಕ ಧಾರ್ಮಿಕ ಪರಿಸ್ಥಿತಿಯನ್ನು ತಿಳಿಸುವುದಕ್ಕಾಗಿಯೇ ಈ ವಿಷಯವನ್ನು ತೆಗೆದುಕೊಂಡಿರುತ್ತೇವೆ. "ಬಸವರಾಜ" ನು ಕೈಲಾಸದಿಂದ ಲೋಕೋದ್ಧಾರಕ್ಕಾಗಿ ಬಂದ 'ನಂದಿಕೇಶ್ವರ' ನೆಂದು ಆ

ಕಾಲದ ಜನರಲ್ಲಿ ನಂಬಿಕೆಯಾಯಿತು. ಆತನ ಮಾತುಗಳು ವೇದಗಳಿಗಿಂತಲೂ ಪ್ರಮಾಣವಾದವುಗಳೆಂದು ಗಣಿಸಲ್ಪಟ್ಟವು. ಆತನು ವೀರಶೈವ ಮತದಲ್ಲಿ ತನ್ನದೇ ಒಂದು ಪಂಥವನ್ನು ಸ್ಥಾಪಿಸಿದನು. ಅದು ವರೆಗೆ ಅಸ್ತಿತ್ವದಲ್ಲಿದ್ದ 'ವೈದಿಕ ವೀರಶೈವ' ಮತವು ಕಳೆಗುಂದುತ್ತಿತ್ತು. ಅವರ ಪರಮ ಪ್ರಮಾಣ ಗ್ರಂಥವಾದ "ಸಿದ್ಧಾಂತ ಶಿಖಾಮಣಿ" ಯಲ್ಲಿ ಬರೆದಿದ್ದ "ಶೈವಂ ವೈದಿಕ ಸಮ್ಮತಂ" ಎಂಬ ಹಿತೋಪದೇಶವು ತನ್ನ ಗೌರವವನ್ನು ಕಳೆದುಕೊಂಡಿತ್ತು. ನಾನಾ ಬಗೆಯ ಶೈವ ಪಂಗಡಗಳು 'ವಜ್ರಯಾನ ಬೌದ್ಧ ಮತದಂತಿದ್ದ ಈ ಬಸವರಾಜನ ಮತವನ್ನು ಸ್ವೀಕರಿಸಿದವು. ಇದರಿಂದ "ಶೈವಂ ವೈದಿಕ ಸಮ್ಮತಂ" ಎನ್ನುತ್ತಿದ್ದ 'ವೀರಶೈವ' ಮತವು "ಶೈವಂ ಅವೈದಿಕ ಸಮ್ಮತಂ" ಎಂಬ ಮಾರ್ಪಾಡನ್ನು ಹೊಂದಿತು.

ಈ ಹೊಸ ಸ್ಫೂರ್ತಿಯನ್ನು ಹೊಂದಿ ಬೆಳೆಯುತ್ತಿದ್ದ "ವೀರಶೈವ ಮತದಲ್ಲಿ ನಾನಾ ಜಾತಿಯವರು, ನಾನಾ ವೃತ್ತಿಯವರು, ನಾನಾ ತರಗತಿಗಳವರೆಲ್ಲಾ ಸೇರಿಕೊಂಡಿದ್ದರು. ಒಬ್ಬೊಬ್ಬರೊಂದು ರೀತಿಯಿಂದ ತಮ್ಮ ಆಚಾರ ವ್ಯವಹಾರಗಳನ್ನು ಸಾಗಿಸುತ್ತಿದ್ದರು. ಎಲ್ಲರೂ 'ವೈದಿಕ ಧರ್ಮ' ದ ಕಡು ಹಗೆಗಳಾಗಿದ್ದರು. ಆದರೂ ಅಲ್ಲೊಂದು ಇಲ್ಲೊಂದು ವೇದ ವಾಕ್ಯಗಳನ್ನೂ ಕೆಲ ಆಗಮವಾಕ್ಯಗಳನ್ನೂ, ಹೆಚ್ಚಾಗಿ ಪುರಾಣ ಮತ್ತು ಇತಿಹಾಸಗಳ ವಾಕ್ಯಗಳನ್ನೂ ಉದಾಹರಿಸುತ್ತಿದ್ದುದುಂಟು. ಆದರೂ ಇವರೆಲ್ಲರೂ ವೇದಾಗಮಗಳಿಗೆ ಪ್ರಬಲ ವಿರೋಧಿಗಳಾಗಿದ್ದರು. ಆ ಕಾಲದಲ್ಲಿ ಎಲ್ಲೆಂದರಲ್ಲಿ ಬ್ರಾಹ್ಮಣ ನಿಂದನೆಯು ಕೇಳಿಬರುತ್ತಿತ್ತು. ಕ್ಷತ್ರಿಯ, ವೈಶ್ಯ, ಶೂದ್ರರ ಧಿಕ್ಕಾರವು ಅವ್ಯಾಹತವಾಗಿ ನಡೆಯುತ್ತಿತ್ತು. ಆಗ ಕರ್ನಾಟಕದಲ್ಲಿ ವೈದಿಕರ ಅರಸೊತ್ತಿಗೆಯಿಲ್ಲದುದರಿಂದಲೂ, 'ಬಸವರಾಜ' ನು ರಾಜಕೀಯಾಧಿಕಾರದಲ್ಲಿ ಭದ್ರಪಟ್ಟಿದ್ದುದರಿಂದಲೂ ಯಾರೂ ಉಸಿರೆತ್ತುವಂತಿರಲಿಲ್ಲ. ಕೊನೆಗೆ ಇವರು ತಮ್ಮನ್ನುಳಿದ ಎಲ್ಲಾ ವರ್ಣಾಶ್ರಮಿಗಳನ್ನೂ ಅಸ್ಪೃಶ್ಯತೆಯ ಮಟ್ಟಕ್ಕೇರಿಸಿ ಒಂದು ಹೊಸ ಅಸ್ಪೃಶ್ಯ ಜಾತಿಯನ್ನೇ ರಚಿಸಿಬಿಟ್ಟರು.

ಇವರಿಂದ ಹೊಸದಾಗಿ ಅಸ್ಪೃಶ್ಯತೆಯ ಪಟ್ಟಕ್ಕೇರಿದ ಹಿಂದುಗಳು ತುಂಬಾ ಆಲೋಚನಾಪರರಾಗಿದ್ದಿರಬೇಕು. ಇರಲಿ, ಹೀಗೆ ಅಸ್ಪೃಶ್ಯಕ್ಕೇರಿದ ಜಾತಿಗಳು ನಾನಾ ಪಾಡುಪಡುತ್ತಿದ್ದವು. ಈಗ ಅಸ್ಪೃಶ್ಯರು ಮುಟ್ಟಿದರೆ ಸ್ನಾನ ಮಾಡಿ ಶುದ್ಧರಾಗುತ್ತಿದ್ದರೆ ಆಗ ಅವರ ತಲೆಯನ್ನೇ ತುಂಡರಿಸಿಬಿಡುತ್ತಿದ್ದರು. ಎಲ್ಲೆಂದರಲ್ಲಿ ಜನರ "ವೇದಗಳನ್ನು ಬಹಿಷ್ಕರಿಸಿರಿ; ಆಗಮಗಳನ್ನು ತಿರಸ್ಕರಿಸಿರಿ; ಬ್ರಾಹ್ಮಣ್ಯವನ್ನು ದೂರಮಾಡಿ, ವೈದಿಕ ವರ್ಣಾಶ್ರಮ ಧರ್ಮವನ್ನು ತುಳಿದು ಪುಡಿ ಪುಡಿ ಮಾಡಿರಿ." ಎಂಬ ಘೋರ ನಾದವು ಕೇಳಬರುತ್ತಿತ್ತು. ಆಗ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಅಲ್ಲದೆ ಉಳಿದವರೂ ತಲೆಗಾವಲಿಗಾಗಿ ಮತಾಂತರಗೊಳ್ಳಬೇಕಾಗಿತ್ತು. ಈ ಮತ ಪ್ರಚಾರದ ಬಿಸಿಯು ಬರಿಯ ಹಿಂದುಗಳಿಗೇ ಅಲ್ಲದೆ ಜೈನ ಬೌದ್ಧರಿಗೂ ತಗಲಿತು. ಕೆಲ 'ವಜ್ರಯಾನ' ದ ಬೌದ್ಧರೂ ಈ ಹೊಸ ಮತವನ್ನು ಸೇರಿಕೊಂಡರು. ಇವರಲ್ಲಿ ಶ್ರೀಶೈಲದ ಗೋರಕ್ಷನು ಬಹಳ ಪ್ರಸಿದ್ಧನು. ಲಕ್ಷಾಂತರ ಜೈನರೂ, ಕರಗಿಹೋದರು. ಎಷ್ಟೋ ಚೈತ್ಯಾಲಯಗಳು ನೆಲಸಮವಾದವು. ಇಲ್ಲವೇ "ಶಿವ ಮಂದಿರ" ಗಳಾದವು ಎಷ್ಟೋ ವಿಷ್ಣು ಪ್ರತಿಮೆಗಳು ಕರಗಿಸಲ್ಪಟ್ಟವು. ಉಳಿದ ಹಾಳು ಬೀಳುಗಳಾದುದೆಷ್ಟೋ.

ಎಷ್ಟೋ ಇತರ ಶೈವ ಮತಗಳೂ ರೂಪಾಂತರಗೊಂಡವು. ಉಗ್ಗಡ ಮತಗಳು ಹೇಳ ಹೆಸರಿಲ್ಲದಂತೆ ಸುಟ್ಟು ಬೂದಿಯಾದವು. ಕೇವಲ ಕೆಳೆದುಳಿದವುಗಳ ಹೆಸರು ಬೆಟ್ಟಿನಲ್ಲೆಣಿಸುವಷ್ಟೂ ಉಳಿಯಲಿಲ್ಲ. ಸಾಕು, ಇದರಿಂದಲೇ ಆ ಕಾಲದ ನಮ್ಮ ದೇಶದ ಧಾರ್ಮಿಕ ಪರಿಸ್ಥಿತಿಯು ತಿಳಿಯಬಹುದೆಂದು ಹೇಳಬಹುದು. ನಾವು "ವೀರಶೈವ ಮತ" ವನ್ನು ಟೀಕೆ ಮಾಡಬೇಕೆಂಬ ಉದ್ದೇಶದಿಂದ ಈ ಸಂಗತಿಗಳನ್ನು ಬರೆಯಲಿಲ್ಲ. ವಸ್ತುಸ್ಥಿತಿಯನ್ನು ಮರೆಮಾಚದ ಹೇಳಬೇಕೆಂದು ಬರೆದಿರುತ್ತೇವೆ.

ಒಂದು ಕಡೆ 'ವಜ್ರಯಾನ' ದ ಬೌದ್ಧರೂ, ಮತ್ತೊಂದು ಕಡೆ ಕಾಪಾಲಿಕ, ಪಾಶುಪತಾದಿ ಅವೈದಿಕ ಶೈವರೂ, ಇತರ ಸುಧಾರಿಸಿದ ವಜ್ರಯಾನದಂತಹ 'ನೂತನ ಶೈವರೂ' ರಾಜಾಶ್ರಯವನ್ನು ಹೊಂದಿ ಪ್ರಬಲರಾಗುತ್ತಿದ್ದರು. ಈ ಅವೈದಿಕರು ಸೂಳೆಯರನ್ನಿಟ್ಟುಕೊಂಡು ಅವರ ಸಹಾಯದಿಂದ ಪುಂಡು ಪೋಕರಿಗಳನ್ನೆಲ್ಲಾ ವಶಪಡಿಸಿಕೊಂಡಿದ್ದರು. ಈ ದುರಾಚಾರಿಗಳು ತಮಗೆ ಬಿಟ್ಟಿಯಾಗಿ ದೊರೆತ "ಶರಣ" ಪಟ್ಟಕ್ಕಾಗಿ ಹೆಮ್ಮೆಪಟ್ಟು ಹೇಗೆ ಹೇಳಿದರೆ ಹಾಗೆ ಕುಣಿಯುತ್ತಿದ್ದರು. ಈ ಮತತ್ರಯವೂ ಒಂದೇ ರೀತಿಯಾದ ಆಚಾರಗಳನ್ನಿಟ್ಟುಕೊಂಡಿದ್ದುದರಿಂದ ಅವರವರಿಗೆ ಅಷ್ಟೊಂದು ಕಾದಾಟವಿರಲಿಲ್ಲ. ಯಾರು ನೋಡಿದರೂ "ಮಾರಿಯ ಕಣ್ಣು ಹೋತನ ಮೇಲೆ" ಎಂಬಂತೆ ವೈದಿಕ ಧರ್ಮವನ್ನೂ, ವರ್ಣಾಶ್ರಮಗಳಲ್ಲಿದ್ದುಕೊಂಡೇ ಇರಬೇಕೆಂದು ಹೇಳುತ್ತಿದ್ದವರನ್ನೇ ಕಾಡಿಸುತ್ತಿದ್ದರು.

ನಾನಾ ಬಗೆಯ ಶೈವ ಧರ್ಮಗಳ ಸರಪಣಿಯಲ್ಲಿ ಬಿಗಿಯಲ್ಪಟ್ಟು ಆಟಗಾರನ ಕೋತಿಯಂತೆ ತಿರುಗಿ ಕುಣಿಯಬೇಕಾಗಿದ್ದ ಹಿಂದೂ ಜಾತಿಗೆ ಮಧ್ವಾಚಾರ್ಯರು ಮೋಕ್ಷವನ್ನು ಕರುಣಿಸಿದರು."

ಇದೇ ಲೇಖಕರ ಮೊದಲಿನ ವಿಚಾರ.

ಈ ಕರ್ಲಮಂಗಲಂ ಶ್ರೀಕಂಠಯ್ಯನವರೇ ಈ ಮುಂಚೆ ಬರೆದಿರುವ ವೀರಶೈವ ಮತಾಚಾರ್ಯರ ಕಾಲನಿರ್ಣಯ ಎಂಬ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ.—

"ಈಗ "ವೀರಶೈವ" ರೆಂಬುವರಲ್ಲಿ ನಾವು ಮೂರು ಭಾಗಗಳನ್ನಾಗಿ ಮಾಡಬಹುದು. ೧. ಆಂಧ್ರದೇಶದ ಯಜ್ಞೋಪವೀತ ಮತ್ತು ಲಿಂಗಧಾರಿಗಳಾದ ಆರಾಧ್ಯ ಬ್ರಾಹ್ಮಣರು. ೨. ಅಲ್ಲಮ ಬಸವಣ್ಣ ಇವರಿಗೆ ಪ್ರಾಮುಖ್ಯತೆಯನ್ನು ಕೊಡುವ ವೀರಶೈವರು. ೩. ರೇಣುಕಾದಿಗಳ ಪಕ್ಷದವರೆಂದು ಹೇಳಿಕೊಳ್ಳುವ ಪಂಚಾಚಾರ್ಯರು. ಈ ಪಂಚಾಚಾರ್ಯರು ಮತ್ತು ಅಲ್ಲಮ ಬಸವ ಮೊದಲಾದವರ ಭಕ್ತರು ಇವರುಗಳ ವಿಷಯವಾಗಿ ಬರೆದರೆ ಕರ್ನಾಟಕದಲ್ಲಿ ಕನ್ನಡಿಗರು ಯಾರನ್ನೂ, ವೀರಶೈವರೆಂದು ತಿಳಿದುಕೊಂಡಿರುವರೋ ಅವರ ವಿಷಯವಾಗಿ ಬರೆದಂತೆಯೇ ಆಗುತ್ತದೆ. ಇವರಿಬ್ಬರಿಗೆ ಮತಸ್ಥಾಪನೆಯ ವಿಷಯದಲ್ಲಿ ಈಚೆಗೆ ಬಲವಾದ ಮತಭೇದವುಂಟಾಗಿರುತ್ತದೆ." ಪುಟ ೯

"ನಾನೂ ಕನ್ನಡಿಗ. ಬಸವಾದಿ ಶಿವಶರಣರೂ ಕನ್ನಡಿಗರು. ಎಂಬ ಆತ್ಮೀಯ ವಿಶ್ವಾಸದಿಂದ ವೀರಶೈವರ ಧರ್ಮ ಗ್ರಂಥಗಳನ್ನು ಆಸಕ್ತಿಯಿಂದ ಓದುತ್ತಿದ್ದೆನು. ಮತ್ತು ವೀರಶೈವ ಶರಣರ ವಚನಗಳನ್ನೂ ಓದುತ್ತಿದ್ದೆನು." ಪುಟ ೧೦

"ರೇವಣಸಿದ್ಧನೂ ಅವರ ತಂದೆಯೂ ಅಚ್ಚ ಕನ್ನಡಿಗರು. ಇವರು ಆ ಕಾಲದಲ್ಲಿದ್ದ ಶೈವಮತದವರಾಗಿದ್ದು ಲಿಂಗಧಾರಿಗಳಾದರು. ಇವರ ಕಾಲ ಕ್ರಿ. ಶ. ೧೧೮೭." ಪುಟ ೫೩.

"ಬಸವಣ್ಣನು ಕ್ರಿ. ಶ. ೧೧೫೬ ರಿಂದ ೧೧೬೭ ರಲ್ಲಿಯೇ ಯುವಕನಾಗಿದ್ದಿರಬೇಕೆಂದು ನಾನು ಊಹಿಸುತ್ತೇನೆ." ಪುಟ ೬೩.

"ವೀರಶೈವ ಮತಸ್ಥಾಪನೆಯ ಕೆಲಸದಲ್ಲಿ ಅಲ್ಲಮ ಪ್ರಭು, ಚನ್ನಬಸವಣ್ಣ, ಸಿದ್ಧರಾಮ, ರುದ್ರಮುನಿ ಇವರ ಕಾರ್ಯಗಳೇನೂ ಸಾಮಾನ್ಯವಾದವುಗಳಲ್ಲ. ಇವರೆಲ್ಲರೂ ತಮ್ಮ ವಚನಗಳಲ್ಲಿ ಬಸವಣ್ಣನಿಗೇ ಅಗ್ರಸ್ಥಾನವನ್ನು ಕೊಟ್ಟುಬಿಟ್ಟಿರುತ್ತಾರೆ." ಪುಟ ೬೪.

ಬಸವನು ಗುರು ಲಿಂಗ ಜಂಗಮ ಪೂಜಕನೆಂದು ಪ್ರಸಿದ್ಧನಾಗಿದ್ದನು. ಪುರಾಣಗಳಲ್ಲಿ ಕಥಿತನಾದ ಬಸವನೇ ಇವನಾಗಿದ್ದನೆಂದು ಹೇಳಲು ಅಡ್ಡಿಯಿಲ್ಲ." ಪುಟ ೬೦.

ಬಸವ ನಿಂದಕರ ಬಳಗಕ್ಕೆ ಮತ್ತೊಬ್ಬರು.

ವೀರಶೈವರಲ್ಲಿಯೇ ಬಸವ ನಿಂದಕರ ಒಂದು ಬಲವಾದ ಬಳಗ ವಿದೆಯಷ್ಟೆ. ಅದಕ್ಕೆ ಆರ್ಯ ಸಮಾಜದ ಕೆಲವರು ಇತ್ತೀಚಿಗೆ ಸೇರಿದ್ದಾರೆ. ತಾವು ಇತಿಹಾಸ ಸಂಶೋಧಕರೆಂಬ ಹೆಸರಿನಿಂದ ಈಗ ಮತ್ತೊಬ್ಬರು ಬಸವ ಮಹಾನುಭಾವನನ್ನೂ ಆತನ ದಿವ್ಯ ತತ್ವಗಳನ್ನೂ ನಿಂದಿಸಲು ಮುಂದೆ ಬಂದಿದ್ದಾರೆ. ಆರ್ಯ ಸಮಾಜದ ಶ್ರೀ. ಸುಬ್ಬ ನರಸಿಂಹ ಶಾಸ್ತ್ರಿಗಳ ನಿಂದ್ಯ ಪ್ರಯತ್ನವನ್ನು ಕುರಿತು ಈ ಮುಂಚೆ ತಿಳಿಸಿದ್ದಾಗಿದೆಯಷ್ಟೇ.

ವೀರಶೈವ ಮತಾಚಾರ್ಯರ ಕಾಲನಿರ್ಣಯ ಎಂಬ ಪುಸ್ತಕವನ್ನು ಬರೆದು ವೀರಶೈವರಿಗೆ ಎಷ್ಟೋ ಪರಿಚಿತರಾಗಿದ್ದ ಶ್ರೀ. ಕರ್ಲಮಂಗಲಂ ಶ್ರೀಕಂಠಯ್ಯನವರು ಬಸವ ನಿಂದಕರ ಬಳಗದಲ್ಲಿ ಸೇರಿ ತಮ್ಮ ಬುದ್ಧಿವಂತಿಕೆಯ ದುರುಪಯೋಗವನ್ನು ಮಾಡಿಕೊಳ್ಳಲಾರಂಭಿಸಿದ್ದಾರೆ.

ಇವರು ಬ್ರಾಹ್ಮಣ, ಎಂಬ ಮಾಸಪತ್ರಿಕೆಯನ್ನು ಬೆಂಗಳೂರಲ್ಲಿ ಪ್ರಕಟಿಸುತ್ತಿದ್ದಾರೆ. ಅದರ ೧೧ ನೆಯ ಸಂಚಿಕೆಯಲ್ಲಿ 'ಮಧ್ವಾಚಾರ್ಯರ ಕಾಲದ ಧಾರ್ಮಿಕ ಪರಿಸ್ಥಿತಿ' ಎಂಬ ಲೇಖನವನ್ನು ಬರೆದು ಅದರಲ್ಲಿ ಬಸವ ಮಹಾತ್ಮನನ್ನೂ ಆತನ ಶ್ರೇಷ್ಠ ತತ್ವಗಳನ್ನೂ ಯಥೇಚ್ಛವಾಗಿ ನಿಂದಿಸಿದ್ದಾರೆ ಆ ನಿಂದೆಯ ಲೇಖನವುಳ್ಳ ಸಂಚಿಕೆಯನ್ನು ಬೆಂಗಳೂರಿನ ಮಹಾಶಯರೊಬ್ಬರು ನಮ್ಮ ಕಡೆ ಕಳುಹಿಸಿದುದರಿಂದ ನಾವು ಈ ವಿಷಯವನ್ನು ಪ್ರಸ್ತಾಪಿಸಬೇಕಾಯಿತು.

ಯಾರು ಮಹಾತ್ಮರು?

ಈ ಲೇಖಕರು ತಮ್ಮ ಲೇಖನದ ಆರಂಭದಲ್ಲಿ ಯಾರು ಮಹಾತ್ಮರೆಂಬುದನ್ನು ವಿವೇಚಿಸುವಾಗ ಕೊನೆಯಲ್ಲಿ ಹೀಗೆ ಹೇಳಿದ್ದಾರೆ-

"ಕಳ್ಳನು ತನ್ನ ಪರಹಿಂಸಾಕಾರಿ ಕೃತ್ಯಗಳಿಗೋಸ್ಕರ ಸತ್ತರೆ, ವ್ಯಭಿಚಾರಿಯು ತನ್ನ ದುರ್ನಡತೆಗಳಿಗಾಗಿ ಸತ್ತರೆ, ಇಲ್ಲವೆ ಒಬ್ಬನು ಪುಂಡು ಪೋಕರಿಗಳಿಗೆಲ್ಲಾ ಗುರುವಾಗಿ ತಾನು ರಾಜ್ಯಾಭಿಲಾಷೆಯಿಂದ ಹೋರಾಡಿ ಮಡಿದರೆ, ಅತಿ ಕಾಮಿಯಾಗಿ ತನ್ನ ಇಷ್ಟವು ಪೂರೈಸುವುದಕ್ಕಾಗಿ ಮನಬಂದಂತೆ ನಡೆದು ಕಡೆಗೆ ಕೆಟ್ಟರೆ, ಅಥವಾ ತನ್ನಂತೆ ಕೀಳು ಜನಗಳ ಮನಸ್ಸಿಗೆ ಆದರ್ಶನಾಗಿದ್ದರೆ, ಅವರನ್ನೂ, ಅವರ ತ್ಯಾಗವನ್ನೂ ಮಹತ್ವಪೂರ್ಣವಾದುದೆಂದು ಭಾವಿಸಲಾಗುವುದಿಲ್ಲ.

ಪ್ರಪಂಚದಲ್ಲಿ ಈ ಬಗೆಯ ಜನಗಳೂ ಅವರ ಅನುಯಾಯಿಗಳ ಅವಿಚಾರಪೂರ್ವಕವಾದ ಬುದ್ಧಿಯಿಂದ ಜಗದ್ಗುರುಗಳಾಗಿರುವುದುಂಟು. ಅವರ ಬಳಗದಲ್ಲಿ ಕಳ್ಳರೂ, ಕಲೆ ಹೊಡಕರೂ, ದುರಾಚಾರಿಗಳೂ, ವ್ಯಭಿಚಾರಿಗಳೂ, "ಮಹಾ ಶರಣ" ರಾಗಿದ್ದುದುಂಟು ಅವರು ರಾಜ್ಯ ಅಧಿಕಾರಿಗಳ ಮೋಹಕ್ಕೆ ಬಲಿಯಾಗಿ ತಮ್ಮ ಸ್ವಕೀಯರನ್ನೇ ರಾಜರಿಗೆ ಒಪ್ಪಿಸಿದುದುಂಟು. ಅವರ ರಾಜ್ಯ ತೃಷ್ಣೆಯು ಅವರನ್ನು ಕಳ್ಳರನ್ನೂ, ಪುಂಡರನ್ನೂ, ಹಡಕಿಗರನ್ನೂ, ಬಳಗಕ್ಕೆ ಸೇರಿಸಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿದುದುಂಟು. ಕೊನೆಗೆ ಅವರು ತಮ್ಮ ಕಾರ್ಯವನ್ನು ಸಾಧಿಸಿದುದೂ ಇಲ್ಲವೇ ಅದಕ್ಕಾಗಿ ಅನ್ಯಾಯವಾಗಿ ಸತ್ತುದುದೂ ಉಂಟು. ಇದನ್ನೆಲ್ಲಾ ಧರ್ಮದ ಹೆಸರಿನಲ್ಲಿ ನ್ಯಾಯವೆನ್ನುವುದಾದರೆ ಪ್ರಪಂಚದಲ್ಲಿ ಸತ್ಯದ ಕೊಲೆಯಾಯಿತೆಂದೇ ಭಾವಿಸಬಹುದು"

ಮಧ್ವಾಚಾರ್ಯರ ಕಾಲ ಸ್ಥಿತಿ.

ಅನಂತರ ಶ್ರೀ ಮಧ್ವಾಚಾರ್ಯರ ಕಾಲದ ಧಾರ್ಮಿಕ ಸ್ಥಿತಿಯನ್ನು ವಿವರಿಸಲಾರಂಭಿಸಿ ಪೌರಾಣಿಕರ ಕಲ್ಪನೆಯ ಯಮಪುರಕ್ಕಿಂತಲೂ ಭಯಂಕರವಾಗಿದ್ದಿತೆಂದು ಭಾಸವಾಗುವಂತೆ ಈ ಇತಿಹಾಸ ಸಂಶೋಧಕರು ಆಗಿನ ಕರ್ನಾಟಕದ ಸ್ಥಿತಿಯನ್ನು ಚಿತ್ರಿಸಿದ್ದಾರೆ. ಆ ಭೀಕರ ಸ್ಥಿತಿಗಳನ್ನು ವರ್ಣಿಸುವಾಗ ಹೀಗೆ ಹೇಳಿದ್ದಾರೆ—

"ಶ್ರೀ ಮಧ್ವಾಚಾರ್ಯರು ಉದಯಿಸಿದ ಸಮಯದಲ್ಲಿ ನಮ್ಮ ಕರ್ನಾಟಕ ದೇಶದ ತುಂಬಾ ಅವೈದಿಕ ಶೈವರು ಪ್ರಬಲರಾಗಿದ್ದರು. ಇವರಲ್ಲಿ ಲಕುಲೀಶರು, ಪಾಶುಪತರು, ಕಾಳಾಮುಖರು, ಇವರೆಲ್ಲರಿಗಿಂತ ಕಾಪಾಲಿಕರು ದಟ್ಟವಾಗಿದ್ದರು. ಇವರು ಮಹಾ ಕ್ರೂರರು. ಮದ್ಯ, ಮತ್ಸ್ಯ, ಮೈಥುನಾದಿ ಪಂಚ ಮಕಾರಗಳು ಇವರ ನಿತ್ಯ ಕರ್ಮಗಳಾಗಿದ್ದವು."

ಹನ್ನೆರಡನೆಯ ಶತಮಾನದ ಆದಿ ಭಾಗದ ಹೊತ್ತಿಗೆ ಬೌದ್ಧ ಧರ್ಮವು ಮಂತ್ರಯಾನ ವಜ್ರಯಾನ, ಹೀನ ಯಾನಗಳಾಗಿ ಕೊಲ್ಲಾಪುರವು ಮಂತ್ರಯಾನ ಮತ್ತು ವಜ್ರಯಾನಗಳ ಬೌದ್ಧರಿಗೆ ಒಳ್ಳೆಯ ಅಭಿಮಾನದ ಸ್ಥಳವಾಗಿತ್ತು. ಇವರಿಗೆ ಈಶ್ವರ ವಿಶ್ವಾಸದೊಂದಿಗೆ ಬುದ್ಧನ ಬೋಧೆಗಳಾದ ದಯೆ ದಾಕ್ಷಿಣ್ಯಗಳೂ ಹಾಳಾಗಿ ಹೋಗಿದ್ದವು. ಈ ಹೀನ ವಜ್ರಯಾನದವರಲ್ಲಿ ಮದ್ಯ, ಮಂತ್ರ, ಹಠಯೋಗ, ಸ್ತ್ರೀ ಈ ನಾಲ್ಕು ಮುಖ್ಯ ವಸ್ತುಗಳಾಗಿದ್ದವು. ಈ ಕಡು ಪಾಪಿಗಳಾದ ನರ ಪಿಶಾಚಿಗಳು ೧೧-೧೨ ನೆಯ ಶತಮಾನಗಳಲ್ಲಿ ಕೊಲ್ಲಾಪುರ ಮತ್ತು ಗುಂಟೂರು ಜಿಲ್ಲೆಯ ಪರ್ವತಗಳಲ್ಲಿ ಬೀಡು ಬಿಟ್ಟುಕೊಂಡಿದ್ದರು."

ಬಸವನ ಮತ ವಜ್ರಯಾನ ಬೌದ್ಧ ಮತದಂತೆ !

ಕಾಪಾಲಿಕಾದಿ ಶೈವರ ಮತ್ತು ವಜ್ರಯಾನ ಮೊದಲಾದ ಬೌದ್ಧರ ಸಂಗತಿಗಳನ್ನು ವಿವರಿಸಿದ ಮೇಲೆ ವೀರಶೈವ ಮತ ಸಂಬಂಧವಾಗಿ ಹೀಗೆ ಬರೆದಿದ್ದಾರೆ—

"ಈ ನಡುವೆ ಶೈವ ಮತದಲ್ಲಿ ಕವಲೊಡೆದು ನಾನಾ ಶಾಖೆಗಳಾಗಿದ್ದವೆಂದು ಮೊದಲೇ ತಿಳಿಸಿದ್ದೇವೆ. ಆಗ ಶೈವ ಮತದಲ್ಲಿ "ವೇದ ಪ್ರಾಮಾಣ್ಯ" "ವರ್ಣಾಶ್ರಮ ಧರ್ಮ" ಗಳನ್ನು ತಿರಸ್ಕರಿಸಿ ವಿಷ್ಣು ಭಕ್ತಿಯನ್ನು ಸಂಪೂರ್ಣವಾಗಿ ತೊಡೆದು ಹಾಕುವುದಕ್ಕಾಗಿ "ವೀರಶೈವ" ಅವೈದಿಕವೆಂಬೊಂದು ಪಂಗಡದಲ್ಲಿ ನವಸ್ಫೂರ್ತಿಯುಂಟಾಯಿತು ಇದು ಬೇಗನೇ ಹಿಂದಿನ ಮತದಲ್ಲಿದ್ದ ಬೇಕುಬೇಕಾದ ಸೌಲಭ್ಯಗಳನ್ನೆಲ್ಲಾ ಉಪಯೋಗಿಸಿಕೊಂಡು ಬಹಳ ಚುರುಕಿನಿಂದ ಹಬ್ಬುತ್ತಿತ್ತು. 'ತರದವಾಡಿ' ನಾಡಿನಲ್ಲಿ ಇದು ಮೊಳಕೆಯಾಗಿ 'ಕಲ್ಯಾಣದಲ್ಲಿ ಬೆಳೆಯುವುದಕ್ಕೆ ಮೊದಲಾಯಿತು. ಆಗಿನ ಸಮಯದಲ್ಲಿ ಈ ಸಮಾಜವನ್ನು ಬೆಳೆಸುವ ಭಾರವನ್ನು 'ಮಾದಿರಾಜ' ನ ಮಗನಾದ ಕಾಣ್ವ (ಕಮ್ಮೆ) ಶಾಖೆಯ ಶೈವ ಬ್ರಾಹ್ಮಣನಾದ 'ಬಸವೇಶ್ವರ' ನೆಂಬ ಭಂಡಾರಿಯು ವಹಿಸಿಕೊಂಡು ಕಂಕಣವನ್ನು ಕಟ್ಟಿಕೊಂಡಿದ್ದನು.

ನಾವು ಈಗ ವೀರಶೈವ ಮತವನ್ನು ಖಂಡನೆ ಮಂಡನೆ ಮಾಡುತ್ತಿಲ್ಲವೆಂಬುದನ್ನು ವಾಚಕರು ನೆನಪಿನಲ್ಲಿಟ್ಟಿರಬೇಕು. ನಾವು ತಾತ್ಕಾಲಿಕ ಧಾರ್ಮಿಕ ಪರಿಸ್ಥಿತಿಯನ್ನು ತಿಳಿಸುವುದಕ್ಕಾಗಿಯೇ ಈ ವಿಷಯವನ್ನು ತೆಗೆದುಕೊಂಡಿರುತ್ತೇವೆ. "ಬಸವರಾಜ" ನು ಕೈಲಾಸದಿಂದ ಲೋಕೋದ್ಧಾರಕ್ಕಾಗಿ ಬಂದ 'ನಂದಿಕೇಶ್ವರ' ನೆಂದು ಆ

ಕಾಲದ ಜನರಲ್ಲಿ ನಂಬಿಕೆಯಾಯಿತು. ಆತನ ಮಾತುಗಳು ವೇದಗಳಿಗಿಂತಲೂ ಪ್ರಮಾಣವಾದವುಗಳೆಂದು ಗಣಿಸಲ್ಪಟ್ಟವು. ಆತನು ವೀರಶೈವ ಮತದಲ್ಲಿ ತನ್ನದೇ ಒಂದು ಪಂಥವನ್ನು ಸ್ಥಾಪಿಸಿದನು. ಅದು ವರೆಗೆ ಅಸ್ತಿತ್ವದಲ್ಲಿದ್ದ 'ವೈದಿಕ ವೀರಶೈವ' ಮತವು ಕಳೆಗುಂದುತ್ತಿತ್ತು. ಅವರ ಪರಮ ಪ್ರಮಾಣ ಗ್ರಂಥವಾದ "ಸಿದ್ಧಾಂತ ಶಿಖಾಮಣಿ" ಯಲ್ಲಿ ಬರೆದಿದ್ದ "ಶೈವಂ ವೈದಿಕ ಸಮ್ಮತಂ" ಎಂಬ ಹಿತೋಪದೇಶವು ತನ್ನ ಗೌರವವನ್ನು ಕಳೆದುಕೊಂಡಿತ್ತು. ನಾನಾ ಬಗೆಯ ಶೈವ ಪಂಗಡಗಳು "ವಜ್ರಯಾನ ಬೌದ್ಧ ಮತದಂತಿದ್ದ ಈ ಬಸವರಾಜನ ಮತವನ್ನು ಸ್ವೀಕರಿಸಿದವು. ಇದರಿಂದ "ಶೈವಂ ವೈದಿಕ ಸಮ್ಮತಂ" ಎನ್ನುತ್ತಿದ್ದ 'ವೀರಶೈವ' ಮತವು "ಶೈವಂ ಅವೈದಿಕ ಸಮ್ಮತಂ" ಎಂಬ ಮಾರ್ಪಾಡನ್ನು ಹೊಂದಿತು.

ಈ ಹೊಸ ಸ್ಫೂರ್ತಿಯನ್ನು ಹೊಂದಿ ಬೆಳೆಯುತ್ತಿದ್ದ "ವೀರಶೈವ ಮತದಲ್ಲಿ ನಾನಾ ಜಾತಿಯವರು, ನಾನಾ ವೃತ್ತಿಯವರು, ನಾನಾ ತರಗತಿಗಳವರೆಲ್ಲಾ ಸೇರಿಕೊಂಡಿದ್ದರು. ಒಬ್ಬೊಬ್ಬರೊಂದು ರೀತಿಯಿಂದ ತಮ್ಮ ಆಚಾರ ವ್ಯವಹಾರಗಳನ್ನು ಸಾಗಿಸುತ್ತಿದ್ದರು. ಎಲ್ಲರೂ 'ವೈದಿಕ ಧರ್ಮ' ದ ಕಡು ಹಗೆಗಳಾಗಿದ್ದರು. ಆದರೂ ಅಲ್ಲೊಂದು ಇಲ್ಲೊಂದು ವೇದ ವಾಕ್ಯಗಳನ್ನೂ ಕೆಲ ಆಗಮವಾಕ್ಯಗಳನ್ನೂ, ಹೆಚ್ಚಾಗಿ ಪುರಾಣ ಮತ್ತು ಇತಿಹಾಸಗಳ ವಾಕ್ಯಗಳನ್ನೂ ಉದಾಹರಿಸುತ್ತಿದ್ದುದುಂಟು. ಆದರೂ ಇವರೆಲ್ಲರೂ ವೇದಾಗಮಗಳಿಗೆ ಪ್ರಬಲ ವಿರೋಧಿಗಳಾಗಿದ್ದರು. ಆ ಕಾಲದಲ್ಲಿ ಎಲ್ಲೆಂದರಲ್ಲಿ ಬ್ರಾಹ್ಮಣ ನಿಂದನೆಯು ಕೇಳಿಬರುತ್ತಿತ್ತು. ಕ್ಷತ್ರಿಯ, ವೈಶ್ಯ, ಶೂದ್ರರ ಧಿಕ್ಕಾರವು ಅವ್ಯಾಹತವಾಗಿ ನಡೆಯುತ್ತಿತ್ತು. ಆಗ ಕರ್ನಾಟಕದಲ್ಲಿ ವೈದಿಕರ ಅರಸೊತ್ತಿಗೆಯಿಲ್ಲದುದರಿಂದಲೂ, 'ಬಸವರಾಜ'ನು ರಾಜಕೀಯಾಧಿಕಾರದಲ್ಲಿ ಭದ್ರಪಟ್ಟಿದ್ದುದರಿಂದಲೂ ಯಾರೂ ಉಸಿರೆತ್ತುವಂತಿರಲಿಲ್ಲ. ಕೊನೆಗೆ ಇವರು ತಮ್ಮನ್ನುಳಿದ ಎಲ್ಲಾ ವರ್ಣಾಶ್ರಮಿಗಳನ್ನೂ ಅಸ್ಪೃಶ್ಯತೆಯ ಮಟ್ಟಕ್ಕೇರಿಸಿ ಒಂದು ಹೊಸ ಅಸ್ಪೃಶ್ಯ ಜಾತಿಯನ್ನೇ ರಚಿಸಿಬಿಟ್ಟರು.

ಇವರಿಂದ ಹೊಸದಾಗಿ ಅಸ್ಪೃಶ್ಯತೆಯ ಪಟ್ಟಕ್ಕೇರಿದ ಹಿಂದುಗಳು ತುಂಬಾ ಆಲೋಚನಾಪರರಾಗಿದ್ದಿರಬೇಕು. ಇರಲಿ, ಹೀಗೆ ಅಸ್ಪೃಶ್ಯಕ್ಕೇರಿದ ಜಾತಿಗಳು ನಾನಾ ಪಾಡುಪಡುತ್ತಿದ್ದವು. ಈಗ ಅಸ್ಪೃಶ್ಯರು ಮುಟ್ಟಿದರೆ ಸ್ನಾನ ಮಾಡಿ ಶುದ್ಧರಾಗುತ್ತಿದ್ದರೆ ಆಗ ಅವರ ತಲೆಯನ್ನೇ ತುಂಡರಿಸಿಬಿಡುತ್ತಿದ್ದರು. ಎಲ್ಲೆಂದರಲ್ಲಿ ಜನರ "ವೇದಗಳನ್ನು ಬಹಿಷ್ಕರಿಸಿರಿ; ಆಗಮಗಳನ್ನು ತಿರಸ್ಕರಿಸಿರಿ; ಬ್ರಾಹ್ಮಣ್ಯವನ್ನು ದೂರಮಾಡಿ, ವೈದಿಕ ವರ್ಣಾಶ್ರಮ ಧರ್ಮವನ್ನು ತುಳಿದು ಪುಡಿ ಪುಡಿ ಮಾಡಿರಿ." ಎಂಬ ಘೋರ ನಾದವು ಕೇಳಿಬರುತ್ತಿತ್ತು. ಆಗ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಅಲ್ಲದೆ ಉಳಿದವರೂ ತಲೆಗಾವಲಿಗಾಗಿ ಮತಾಂತರಗೊಳ್ಳಬೇಕಾಗಿತ್ತು. ಈ ಮತ ಪ್ರಚಾರದ ಬಿಸಿಯು ಬರಿಯ ಹಿಂದುಗಳಿಗೇ ಅಲ್ಲದೆ ಜೈನ ಬೌದ್ಧರಿಗೂ ತಗಲಿತು. ಕೆಲ 'ವಜ್ರಯಾನ' ದ ಬೌದ್ಧರೂ ಈ ಹೊಸ ಮತವನ್ನು ಸೇರಿಕೊಂಡರು. ಇವರಲ್ಲಿ ಶ್ರೀಶೈಲದ ಗೋರಕ್ಷನು ಬಹಳ ಪ್ರಸಿದ್ಧನು. ಲಕ್ಷಾಂತರ ಜೈನರೂ, ಕರಗಿಹೋದರು. ಎಷ್ಟೋ ಚೈತ್ಯಾಲಯಗಳು ನೆಲಸಮವಾದವು. ಇಲ್ಲವೇ "ಶಿವ ಮಂದಿರ" ಗಳಾದವು ಎಷ್ಟೋ ವಿಷ್ಣು ಪ್ರತಿಮೆಗಳು ಕರಗಿಸಲ್ಪಟ್ಟವು. ಉಳಿದ ಹಾಳು ಬೀಳುಗಳಾದುವೆಷ್ಟೋ.

ಎಷ್ಟೋ ಇತರ ಶೈವ ಮತಗಳೂ ರೂಪಾಂತರಗೊಂಡವು. ಉಗ್ಗಡ ಮತಗಳು ಹೇಳ ಹೆಸರಿಲ್ಲದಂತೆ ಸುಟ್ಟು ಬೂದಿಯಾದವು. ಕೇವಲ ಕೆಳೆದುಳಿದವುಗಳ ಹೆಸರು ಬೆಟ್ಟನಲ್ಲೆಣಿಸುವಷ್ಟೂ ಉಳಿಯಲಿಲ್ಲ. ಸಾಕು, ಇದರಿಂದಲೇ ಆ ಕಾಲದ ನಮ್ಮ ದೇಶದ ಧಾರ್ಮಿಕ ಪರಿಸ್ಥಿತಿಯು ತಿಳಿಯಬಹುದೆಂದು ಹೇಳಬಹುದು. ನಾವು "ವೀರಶೈವ ಮತ" ವನ್ನು ಟೀಕೆ ಮಾಡಬೇಕೆಂಬ ಉದ್ದೇಶದಿಂದ ಈ ಸಂಗತಿಗಳನ್ನು ಬರೆಯಲಿಲ್ಲ. ವಸ್ತುಸ್ಥಿತಿಯನ್ನು ಮರೆಮಾಚದ ಹೇಳಬೇಕೆಂದು ಬರೆದಿರುತ್ತೇವೆ.

ಒಂದು ಕಡೆ 'ವಜ್ರಯಾನ' ದ ಬೌದ್ಧರೂ, ಮತ್ತೊಂದು ಕಡೆ ಕಾಪಾಲಿಕ, ಪಾಶುಪತಾದಿ ಅವೈದಿಕ ಶೈವರೂ, ಇತರ ಸುಧಾರಿಸಿದ ವಜ್ರಯಾನದಂತಹ 'ನೂತನ ಶೈವರೂ' ರಾಜಾಶ್ರಯವನ್ನು ಹೊಂದಿ ಪ್ರಬಲರಾಗುತ್ತಿದ್ದರು. ಈ ಅವೈದಿಕರು ಸೂಳೆಯರನ್ನಿಟ್ಟುಕೊಂಡು ಅವರ ಸಹಾಯದಿಂದ ಪುಂಡು ಪೋಕರಿಗಳನ್ನೆಲ್ಲಾ ವಶಪಡಿಸಿಕೊಂಡಿದ್ದರು. ಈ ದುರಾಚಾರಿಗಳು ತಮಗೆ ಬಿಟ್ಟಿಯಾಗಿ ದೊರೆತ "ಶರಣ" ಪಟ್ಟಕ್ಕಾಗಿ ಹೆಮ್ಮೆಪಟ್ಟು ಹೇಗೆ ಹೇಳಿದರೆ ಹಾಗೆ ಕುಣಿಯುತ್ತಿದ್ದರು. ಈ ಮತತ್ರಯವೂ ಒಂದೇ ರೀತಿಯಾದ ಆಚಾರಗಳನ್ನಿಟ್ಟುಕೊಂಡಿದ್ದುದರಿಂದ ಅವರವರಿಗೆ ಅಷ್ಟೊಂದು ಕಾದಾಟವಿರಲಿಲ್ಲ. ಯಾರು ನೋಡಿದರೂ "ಮಾರಿಯ ಕಣ್ಣು ಹೋತನ ಮೇಲೆ" ಎಂಬಂತೆ ವೈದಿಕ ಧರ್ಮವನ್ನೂ, ವರ್ಣಾಶ್ರಮಗಳಲ್ಲಿದ್ದುಕೊಂಡೇ ಇರಬೇಕೆಂದು ಹೇಳುತ್ತಿದ್ದವರನ್ನೇ ಕಾಡಿಸುತ್ತಿದ್ದರು.

ನಾನಾ ಬಗೆಯ ಶೈವ ಧರ್ಮಗಳ ಸರಪಣಿಯಲ್ಲಿ ಬಿಗಿಯಲ್ಪಟ್ಟು ಆಟಗಾರನ ಕೋತಿಯಂತೆ ತಿರುಗಿ ಕುಣಿಯಬೇಕಾಗಿದ್ದ ಹಿಂದೂ ಜಾತಿಗೆ ಮಧ್ವಾಚಾರ್ಯರು ಮೋಕ್ಷವನ್ನು ಕರುಣಿಸಿದರು."

ಇದೇ ಲೇಖಕರ ಮೊದಲಿನ ವಿಚಾರ.

ಈ ಕರ್ಮಮಂಗಲಂ ಶ್ರೀಕಂಠಯ್ಯನವರೇ ಈ ಮುಂಚೆ ಬರೆದಿರುವ ವೀರಶೈವ ಮತಾಚಾರ್ಯರ ಕಾಲನಿರ್ಣಯ ಎಂಬ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ.—

"ಈಗ "ವೀರಶೈವ" ರೆಂಬುವರಲ್ಲಿ ನಾವು ಮೂರು ಭಾಗಗಳನ್ನಾಗಿ ಮಾಡಬಹುದು. ೧. ಆಂಧ್ರದೇಶದ ಯಜ್ಞೋಪವೀತ ಮತ್ತು ಲಿಂಗಧಾರಿಗಳಾದ ಆರಾಧ್ಯ ಬ್ರಾಹ್ಮಣರು. ೨. ಅಲ್ಲಮ ಬಸವಣ್ಣ ಇವರಿಗೆ ಪ್ರಾಮುಖ್ಯತೆಯನ್ನು ಕೊಡುವ ವೀರಶೈವರು. ೩. ರೇಣುಕಾದಿಗಳ ಪಕ್ಷದವರೆಂದು ಹೇಳಿಕೊಳ್ಳುವ ಪಂಚಾಚಾರ್ಯರು. ಈ ಪಂಚಾಚಾರ್ಯರು ಮತ್ತು ಅಲ್ಲಮ ಬಸವ ಮೊದಲಾದವರ ಭಕ್ತರು ಇವರುಗಳ ವಿಷಯವಾಗಿ ಬರೆದರೆ ಕರ್ನಾಟಕದಲ್ಲಿ ಕನ್ನಡಿಗರು ಯಾರನ್ನೂ, ವೀರಶೈವರೆಂದು ತಿಳಿದುಕೊಂಡಿರುವರೋ ಅವರ ವಿಷಯವಾಗಿ ಬರೆದಂತೆಯೇ ಆಗುತ್ತದೆ. ಇವರಿಬ್ಬರಿಗೆ ಮತಸ್ಥಾಪನೆಯ ವಿಷಯದಲ್ಲಿ ಈಚೆಗೆ ಬಲವಾದ ಮತಭೇದವುಂಟಾಗಿರುತ್ತದೆ." ಪುಟ ೯

"ನಾನೂ ಕನ್ನಡಿಗ. ಬಸವಾದಿ ಶಿವಶರಣರೂ ಕನ್ನಡಿಗರು. ಎಂಬ ಆತ್ಮೀಯ ವಿಶ್ವಾಸದಿಂದ ವೀರಶೈವರ ಧರ್ಮ ಗ್ರಂಥಗಳನ್ನು ಆಸಕ್ತಿಯಿಂದ ಓದುತ್ತಿದ್ದೆನು. ಮತ್ತು ವೀರಶೈವ ಶರಣರ ವಚನಗಳನ್ನೂ ಓದುತ್ತಿದ್ದೆನು." ಪುಟ ೧೦

"ರೇವಣಸಿದ್ಧನೂ ಅವರ ತಂದೆಯೂ ಅಚ್ಚ ಕನ್ನಡಿಗರು. ಇವರು ಆ ಕಾಲದಲ್ಲಿದ್ದ ಶೈವಮತದವರಾಗಿದ್ದು ಲಿಂಗಧಾರಿಗಳಾದರು. ಇವರ ಕಾಲ ಕ್ರಿ. ಶ. ೧೧೮೭." ಪುಟ ೫೩.

"ಬಸವಣ್ಣನು ಕ್ರಿ. ಶ. ೧೧೫೬ ರಿಂದ ೧೧೬೭ ರಲ್ಲಿಯೇ ಯುವಕನಾಗಿದ್ದಿರಬೇಕೆಂದು ನಾನು ಊಹಿಸುತ್ತೇನೆ." ಪುಟ ೬೩.

"ವೀರಶೈವ ಮತಸ್ಥಾಪನೆಯ ಕೆಲಸದಲ್ಲಿ ಅಲ್ಲಮ ಪ್ರಭು, ಚನ್ನಬಸವಣ್ಣ, ಸಿದ್ಧರಾಮ, ರುದ್ರಮುನಿ ಇವರ ಕಾರ್ಯಗಳೇನೂ ಸಾಮಾನ್ಯವಾದವುಗಳಲ್ಲ. ಇವರೆಲ್ಲರೂ ತಮ್ಮ ವಚನಗಳಲ್ಲಿ ಬಸವಣ್ಣನಿಗೇ ಅಗ್ರಸ್ಥಾನವನ್ನು ಕೊಟ್ಟುಬಿಟ್ಟಿರುತ್ತಾರೆ." ಪುಟ ೬೪.

ಬಸವನು ಗುರು ಲಿಂಗ ಜಂಗಮ ಪೂಜಕನೆಂದು ಪ್ರಸಿದ್ಧನಾಗಿದ್ದನು. ಪುರಾಣಗಳಲ್ಲಿ ಕಥಿತನಾದ ಬಸವನೇ ಇವನಾಗಿದ್ದನೆಂದು ಹೇಳಲು ಅಡ್ಡಿಯಿಲ್ಲ" ಪುಟ ೬೦

"ನಾನು ಈ ಪುಸ್ತಕವನ್ನು ಬರೆಯುವಾಗ ವೀರಶೈವರು ಆವರ ಗೌರವಗಳಿಂದ ಕರೆಯುವ ಮಹಾವ್ಯಕ್ತಿಗಳನ್ನು, ಏಕವಚನದಲ್ಲಿ ಕರೆದು ಬರೆದುದು ತಾತ್ಸಾರದಿಂದಲ್ಲ ನನಗೂ ಆ ಮಹಾವ್ಯಕ್ತಿಗಳಲ್ಲಿ ಗೌರವವಿದೆ." ಪುಟ ೭೫.

ಲೇಖಕರಿಗೆ ಆಹ್ವಾನ

ಬಸವಾದಿ ಶಿವಶರಣರ ವಿಷಯದಲ್ಲಿಯೂ ಅವರ ಮತ ತತ್ವಗಳ ಸಂಬಂಧವಾಗಿಯೂ ಲೇಖಕರಿಗೆ ಮೊದಲಿದ್ದ ಅಭಿಪ್ರಾಯಕ್ಕೂ ಈಗಿನ ಅಭಿಪ್ರಾಯಕ್ಕೂ ಮಹದಂತರವಾಗಿದೆಯೆಂಬುದು ಯಾರಿಗಾದರೂ ತಿಳಿಯತಕ್ಕದ್ದಾಗಿದೆಯಷ್ಟೆ ಮೊದಲಿನ ಅಭಿಪ್ರಾಯ ನಿಜವಾಗಿದ್ದಿದ್ದರೆ ಈಗ ಇವರಿಗೆ ಬುದ್ಧಿ ಭ್ರಮಣೆಯಾಗಿರಬೇಕು. ಈಗಿನ ಸಂಗತಿಯೇ ನಿಜವಾಗಿದ್ದಿದ್ದರೆ ಅಂಥ ಹೊಸ ಶೋಧವಾದರೂ ಆಗಿರಬೇಕು.

ಆದುದರಿಂದ ಬಸವ ಮತವು ವಜ್ರಯಾನ ಬೌದ್ಧ ಮತದಂತಿದೆಯೆಂಬಂಶವನ್ನು ಆಧಾರಪೂರ್ವಕವಾಗಿ ಪ್ರಕಟಿಸಬೇಕೆಂದು ಈ ಮೂಲಕ ಆಹ್ವಾನಿಸುತ್ತೇವೆ. ಮೊದಲು ಈ ಸಂಗತಿಯೊಂದನ್ನು ಲೇಖಕರು ಸಪ್ರಮಾಣವಾಗಿ ಪ್ರತಿಪಾದಿಸಲಿ ಅನಂತರ ಬೇರೆ ವಿಷಯಗಳನ್ನು ಯೋಚಿಸೋಣ.

ಈ ಲೇಖನವನ್ನು ಪ್ರಕಟಿಸಲು ನಮ್ಮ ಕಡೆಗೇನೇ ಜಾಗ್ರತೆ ಕಳುಹಿಸಬೇಕೆಂದು ಲೇಖಕರಿಗೆ ಪ್ರೇಮದ ಸೂಚನೆ. ಇವರ ಈಗಿನ ಅಭಿಪ್ರಾಯಗಳನ್ನು ಕುರಿತು ನಾವು ಮುಂದೆ ಅನೇಕ ಲೇಖನಗಳನ್ನು ಬರೆಯುವವರಿದ್ದೇವೆಂದು ವಾಚಕರಿಗೆ ತಿಳಿಸದಿರಲಾರೆವು.

ವೀರಶೈವ ಸಮಾಜಕ್ಕೆ ವಿಜ್ಞಾಪನೆ

ವೀರಶೈವ ಸಮಾಜದ ತರುಣ ಸಂಘದವರು, ಲೇಖಕರು ಶ್ರೀಕಂಠಯ್ಯನವರ ಮೇಲಣ ವಿಧಾನಗಳನ್ನು ಸಪ್ರಮಾಣ ಸಿದ್ಧ ಮಾಡಿ ಕೊಡಲು ಅವರಿಗೆ ಒತ್ತಾಯಪಡಿಸುವರೆಂದೂ ಹಾಗೆ ಅವರು ಸಿದ್ಧಮಾಡಿ ಕೊಡದಿದ್ದರೆ ಆ ದುಷ್ಟ ವಿಧಾನಗಳನ್ನು ತಿರುಗಿ ತೆಗೆದುಕೊಳ್ಳುವಂತಹ ಚಟುವಟಿಕೆಗಳನ್ನು ಪ್ರಾರಂಭಿಸುವರೆಂದೂ ನಾವು ನಂಬಿದ್ದೇವೆ ವೀರಶೈವ ಸಮಾಜವು ಎಚ್ಚತ್ತಿದೆಯೋ ಮಲಗಿದೆಯೋ ಎಂಬುದನ್ನು ನೋಡಲಿಕ್ಕಾಗಿಯೇ ಇಂತಹ ನಿಂದ್ಯ ಪ್ರಯತ್ನಗಳನ್ನು ಮಾಡಲುಪಕ್ರಮಿಸಿದ್ದಾರೆಂದು ನಮ್ಮ ತಿಳುವಳಿಕೆ. ವೀರಶೈವರ ಧಾರ್ಮಿಕ ಸ್ವಾಭಿಮಾನವು ಇಂತಹ ಸಮಯದಲ್ಲಿಯೇ ತಾನೆ ಗೊತ್ತಾಗುವದು. ? —ಸಂಪಾದಕ.

ಶ್ರೀ ಹುಕ್ಕೇರಿಕರರ ಹೇಳಿಕೆ.

———:(*):———

ನಾನು ಬಸವ ಜಯಂತಿಯ ನಿಮಿತ್ತ ಒಂದು ಇಂಗ್ಲೀಷ ಲೇಖವನ್ನು ಬರೆದು ಅದರ ಒಂದು ಪ್ರತಿಯನ್ನು 'ಮುಂಬೈ ಕ್ರಾನಿಕಲ್'ಗೂ, ಇನ್ನೊಂದು 'ಸಂಯುಕ್ತ ಕರ್ನಾಟಕ'ಕ್ಕೂ ಕಳಿಸಿದೆನು. ಸಂಯುಕ್ತ ಕರ್ನಾಟಕದವರು ಅದನ್ನು ಕನ್ನಡಿಸಿ ೨೪-೪-೩೬ ನೇ ದಿನ ಪ್ರಕಟಿಸಿದರು.

ಆ ಲೇಖವನ್ನು ನಾನು ಅತ್ಯಂತ ಸದುದ್ದೇಶದಿಂದ ಬರೆದಿರುವೆನೆಂದು ನಿರ್ವಿಕಾರ ಮನಸ್ಸುಳ್ಳವನಿಗೆ ಸ್ಪಷ್ಟ ಕಾಣಿಸಬಹುದು. ಅದರ ಸದುದ್ದೇಶವನ್ನು ಲೆಕ್ಕಿಸದೆ ಅದರಲ್ಲಿ ಘೋರವಾದ ತಪ್ಪುಗಳಿರುವವೆಂದು ಆರೋಪಿಸಿ ಆ ತಪ್ಪುಗಳನ್ನೇ ಎತ್ತಿ ಅದನ್ನು, ಅದರ ಲೇಖಕನನ್ನು, ಅದರ ಭಾಷಾಂತರಕಾರರನ್ನು, ಅದನ್ನು ಪ್ರಕಟಿಸಿದ ಪತ್ರಿಕೆಯನ್ನು ಮುಂತಾದವುಗಳನ್ನೆಲ್ಲ ಉದ್ಧರಿಸಿಬಿಡಬೇಕೆಂದು ಹಲವರು ಕಂಕಣಬದ್ಧರಾದಂತೆ ತೋರುವದು.

ಈಗ ಇದರಲ್ಲಿಯ ಮೂರು ವಿಧಾನಗಳ ಬಗ್ಗೆ ಆಕ್ಷೇಪಗಳು ಎತ್ತಲ್ಪಟ್ಟಿವೆ ಅವುಗಳ ಬಗ್ಗೆ ನಾನು ಈಗ ಬರೆಯುತ್ತಿರುವೆನು

(೧) ಮೊದಲು ಇಂಗ್ಲೀಷ ವಾಕ್ಯದಲ್ಲಿಯ Maternal-Uncle ಎಂಬ ಶಬ್ದಗಳಿದ್ದು ಅದರ ಮುಂದೆಯೇ Uncle ಎಂಬ ಶಬ್ದವು ಅದೇ ಸಂದರ್ಭದಲ್ಲಿ ಉಪಯೋಗಿಸಲ್ಪಟ್ಟಿದೆ. (Bombay Cluonicle 25—4—36 Dak edition page 6 column 3, 3id paia) ಅದರ ಭಾಷಾಂತರವು ಚಿಕ್ಕಪ್ಪ ಎಂದು ಮಾಡಲ್ಪಟ್ಟಿದ್ದು ಬಹಳ ಶೋಚನೀಯವಾಗಿದೆ. ಆ ಬಗ್ಗೆ ಸಂಯುಕ್ತ ಕರ್ನಾಟಕದ ಸಂಪಾದಕರು ತಮ್ಮ ತಪ್ಪು ಒಪ್ಪಿ ವಿಷಾದವನ್ನು ವ್ಯಕ್ತ ಮಾಡಿದ್ದು ಯಥೋಚಿತವಾಗಿದೆ ಅದು 'ಮಾವ' ಎಂದು ಇರತಕ್ಕದ್ದು ಎಂಬ ಬಗ್ಗೆ ಭಿನ್ನಾಭಿಪ್ರಾಯವಿರಲಾರದು. ಈ ಬಗ್ಗೆ ನಾನಾದರೂ ಅತ್ಯಂತ ವಿಷಾದಿಸುವೆನು. ಹಾಗು ಮಾವ ಎಂದು ಓದಬೇಕೆಂದು ಬಿನ್ನವಿಸುವೆನು.

(೨) ಬಸವಣ್ಣ ಮುಂತಾದವರ ಬೋಧೆಯಿಂದ ಇಂಥ ದೊಡ್ಡ ಸಮಾಜದಲ್ಲಿ ಮದ್ಯಪಾನವಿಲ್ಲ ಎಂಬ ವಿಧಾನದಿಂದ ಬಸವಣ್ಣನವರ ಪೂರ್ವದಲ್ಲಿ ಮದ್ಯಪಾನವಿತ್ತು ಎಂದು ನಾನು ಹೇಳಿದಂತಾಗುವದೆಂದು ನನ್ನ ಮೇಲೆ ಆರೋಪವಿದೆ. ಆ ಉದ್ದೇಶವು ನನ್ನದಿರಲಿಲ್ಲ ಇಷ್ಟೇ ಅಲ್ಲ; ಈ ಅರ್ಥವು ನನಗೆ ಇದೂ ವರೆಗೆ ಹೊಳೆದಿರಲಿಲ್ಲ. ಸದ್ಯದಲ್ಲಿ ಕನಾಟಕದ ಬಹು ಜನ ಸಮಾಜವಾದ ಇಡೀ ಲಿಂಗಾಯತ ಸಮಾಜವು ಮದ್ಯಪಾನದಂಥ ದುರ್ವ್ಯಸನದಿಂದ ಸಂಪೂರ್ಣವಾಗಿ ಅಲಿಪ್ತರಿರುವರೆಂದು ಹೇಳುವುದೇ ನನ್ನ ಮುಖ್ಯ ಉದ್ದೇಶವು.

(೩) ವೀರಶೈವರು ಈಗ ಇತ್ತೀಚಿಗೆ ಸರಕಾರಿ ನೌಕರಿಗಳಲ್ಲಿ ಸೇರತೊಡಗಿದ್ದಾರೆ, ಎಂಬುದಕ್ಕೆ ಅನೇಕ ಕುತ್ಸಿತಾರ್ಥಗಳು ಕಲ್ಪಿಸಲ್ಪಟ್ಟಿವೆ. ವೀರಶೈವರು ನೋಕರಿಗೆ ಅಯೋಗ್ಯರು ಅಥವಾ ಅವರು ನೋಕರೀ ಮಾಡಬಾರದು ಎಂದು ನನ್ನ ಅಭಿಪ್ರಾಯವಿಲ್ಲ. ಎಲ್ಲ ಜಾತಿಯ ಮೊದಲಿನ ಸುಶಿಕ್ಷಿತರು ನೋಕರಿಯನ್ನೇ ಮಾಡಿದರು. ಅದೇ ಲಿಂಗಾಯತರು ಮಾಡಿದರೆ ಅದರಲ್ಲಿ ತಪ್ಪೇನು? ಸುಶಿಕ್ಷಿತರು ಹೆಚ್ಚಿಗೆ ಆದಂತೆ ಸಮಾಜದ ಎಲ್ಲ ಬಗೆಯ ಸುಧಾರಣೆಗಳ ಕಡೆಗೆ ಅವರ ಲಕ್ಷವು ಹೋಗಬೇಕೆಂದು ಹೇಳುವದೇ ನನ್ನ ಉದ್ದೇಶ ಇದೇ ಮಾತು ನಾನು ಎಲ್ಲ ಜಾತಿಯವರಿಗೂ ಹೇಳುತ್ತೇನೆ.

ಈ ರೀತಿ ಬಸವ ಜಯಂತಿಯಂಥ ಪುಣ್ಯ ದಿನದ ನೆನಪು ನಮ್ಮ ಪ್ರಾಂತದವರಿಗೆ ಹಾಗು ಕನ್ನಡ ಬಾರದಂಥ ಬೇರೆ ಪ್ರಾಂತದವರಿಗೆ ಮಾಡಿಕೊಡಬೇಕೆಂಬ ಉದ್ದೇಶದಿಂದ ನಾನು ಈ ಲೇಖವನ್ನು ಬರೆದೆನು. ಇದರಲ್ಲಿ ಬಸವೇಶ್ವರರು ಮಾಡಿದ ಕಾರ್ಯವನ್ನೂ ಉಪಕಾರವನ್ನೂ ಹೊಗಳಿ ಅವರ ಉಪದೇಶವನ್ನು ನಾವು ನೆನಪಿನಲ್ಲಿಟ್ಟು ಅದರಂತೆ ನಡೆಯಬೇಕೆಂದು ಹೇಳುವದು ಈ ಲೇಖದ ಉದ್ದೇಶವಾಗಿತ್ತು. ಈ ಲೇಖದಿಂದ ವ್ಯಕ್ತಿಯ ಅಥವಾ ಸಮಾಜದ ಮನಸ್ಸು ನೋಯಿಸುವುದು ಎಳ್ಳಷ್ಟೂ ನನ್ನ ಉದ್ದೇಶವಿದ್ದಿಲ್ಲ. ಹಾಗೆ ಆಗಿದ್ದರೆ ಅದು ಭಾಷೆಯ ತಪ್ಪು.

ಧಾರವಾಡ

ತಮ್ಮ

ತಾ. ೨೦-೫-೩೬

ರಾಮಚಂದ್ರ ಹುಕ್ಕೇರಿಕರ.

ಈ ಪತ್ರಿಕೆಯನ್ನು ಶ್ರೀ ಕರ್ಲಮಂಗಲಂ ಶ್ರೀಕಂಠಯ್ಯನವರಿಗೆ ರಜಿಸ್ಟರ್ ಮೂಲಕ ಕಳಿಸಿದೆ.

—ಮ್ಯಾನೇಜರ್

ಸೊಲ್ಲಾಪುರದಲ್ಲಿ ಸಹಭೋಜನ.

ಪಾಶ್ಚಾತ್ಯ ಶಿಕ್ಷಣ ಪ್ರಸಾರದಿಂದಲೂ ಸುಧಾರಣೆಗಳಿಂದಲೂ ಧಾರ್ಮಿಕ ವಿಷಯದಲ್ಲಿಯೂ ವಿಚಾರ ಕ್ರಾಂತಿಯು ವಿಶೇಷವಾಗು ತ್ತಲಿದೆಯಷ್ಟೆ. ಮಡಿ ಮೈಲಿಗೆ, ಊಟೋಪಚಾರಗಳಲ್ಲಿದ್ದ ಮೊದಲಿನ ಧಾರ್ಮಿಕ ಕಲ್ಪನೆಯು ಈಗ ಬಹುಮಟ್ಟಿಗೆ ಲೋಪವಾಗಿದೆ. ರೇಲ್ವೆ ಮೋಟಾರುಗಳೂ, ಚಹಾ ಕಾಫಿ ಅಂಗಡಿಗಳೂ, ಎಲ್ಲ ಧರ್ಮ ಮತ ಪಂಥದವರಲ್ಲಿ ಪರಸ್ಪರ ಬಳಕೆ ನಡೆಯುವಂತಹ ಕಾರ್ಯಗಳನ್ನು ಪ್ರಚಂಡವಾಗಿ ಸಾಗಿಸುತ್ತಲಿವೆ.

ಇತ್ತೀಚೆಗೆ ಅಸ್ಪೃಶ್ಯತಾ ನಿವಾರಣೆಯ ಚಟುವಟಿಕೆಯು ಹೆಚ್ಚಿದುದರಿಂದಲೂ ಡಾ. ಅಂಬೇಡಕರರು ಧರ್ಮ ತ್ಯಾಗದ ಘೋಷಣವನ್ನು ಮಾಡಿದುದರಿಂದಲೂ ಹಿಂದುಗಳಲ್ಲಿ ಸಹಭೋಜನದ ಪ್ರಚಾರವು ಹೆಚ್ಚಾಗಿ ಆಗಲಾರಂಭಿಸಿದೆ. ಮಹಾರಾಷ್ಟ್ರ ದೇಶವು ಈ ಕಾರ್ಯದಲ್ಲಿ ಬಹು ಮುಂದರಿದಿದೆ.

ಜುಣಕ ರೊಟ್ಟಿಯ ಊಟ.

ಹಿಂದುಗಳಲ್ಲಿಯ ಬ್ರಾಹ್ಮಣರಿಂದ ಅಂತ್ಯಜರ ವರೆಗಿನ ಎಲ್ಲ ಮತ ಪಂಥದವರೂ ಈಗ ನಡೆಯುತ್ತಲಿರುವ ಸಹಭೋಜನ ಸಮಾರಂಭದಲ್ಲಿ ಸೇರಬಹುದು. ಅಲ್ಲಿ ಸ್ಪೃಶ್ಯಾಸ್ಪೃಶ್ಯ ಭೇದವಿಲ್ಲ. ಧನಿಕರು ದರಿದ್ರರೆಂಬ ವ್ಯತ್ಯಾಸವಿಲ್ಲ. ಸುಶಿಕ್ಷಿತರು ಅಶಿಕ್ಷಿತರು ಎಂಬ ಹೆಚ್ಚು ಕಡಿಮೆಗಳಿಲ್ಲ. ಎಲ್ಲರೂ ಒಂದೇ ಕುಟುಂಬದವರಂತೆ ಪರಸ್ಪರ ಪ್ರೇಮಾದರಗಳಿಂದ ಊಟ ಮಾಡುವರು.

ಊಟಕ್ಕೆ ಗೊತ್ತುಮಾಡಿದಷ್ಟು ದುಡ್ಡನ್ನು ಕೊಟ್ಟು ಹೆಸರು ಬರೆಯಿಸಿ ಟಿಕೀಟು ತೆಗೆದುಕೊಳ್ಳಬೇಕು. ಎಲ್ಲರಿಗೂ ಜುಣಕ, ರೊಟ್ಟಿ, ಬೆಲ್ಲ, ಉಳ್ಳಾಗಡ್ಡಿ ಈ ಪ್ರಕಾರ ಬಡ ಜನಗಳು ಊಟ ಮಾಡತಕ್ಕ ಪದಾರ್ಥಗಳನ್ನೇ ಬಡಿಸಲಾಗುವದು. ಅಡಿಗೆ ಮಾಡುವವರೆಲ್ಲಾ ಬ್ರಾಹ್ಮಣಾದಿ ಉತ್ತಮ ಕುಲದವರೇ ಇರುತ್ತಾರೆಂದಲ್ಲ. ಆದಿಜನರೇ ಮೊದಲಾದ ಎಲ್ಲ ಕುಲಗಳ ಸ್ತ್ರೀ ಪುರುಷರೂ ಅಡಿಗೆಯ ಕಾರ್ಯವನ್ನೂ ನೀಡುವ ಕೆಲಸವನ್ನೂ ಮಾಡುತ್ತಿರುತ್ತಾರೆ.

ಸೊಲ್ಲಾಪುರದ ಸಮಾರಂಭ.

ಇಂತಹ ಸಹಭೋಜನದ ಸಮಾರಂಭಗಳು ಮಹಾರಾಷ್ಟ್ರ ದೇಶದ ಅನೇಕ ಸ್ಥಳಗಳಲ್ಲಿ ಈಗ ಜರುಗಲಾರಂಭಿಸಿವೆ. ಇಂತಹ ಸಮಾರಂಭವು ಕಳೆದ ೨೪ ನೆಯ ತಾರೀಖಿನ ರಾತ್ರಿ ಸೊಲ್ಲಾಪುರದಲ್ಲಿಯೂ ಜರುಗಿತು. ಈ ಜುಣಕ ರೊಟ್ಟಿಯ ಸಹಭೋಜನಕ್ಕೆ ಸಾಧಾರಣ ಎಂಟುನೂರು ಜನರು ಸೇರಿದ್ದರು. ಇವರಲ್ಲಿ ಅನೇಕ ಸ್ತ್ರೀಯರೂ ಇದ್ದರು.

ಬ್ಯಾ. ದಿವಾಕರ, ಡಾ. ವೈಶಂಪಾಯನ, ಡಾ. ಅಂತ್ರೋಳೀಕರ್, ಡಾ. ಆಪಟೆ, ಡಾ. ದೀಕ್ಷಿತ, ಶ್ರೀ ರಾಮಭಾವು ದೇಶಮುಖ ವಕೀಲ, ಶ್ರೀ ಕನಕಟ್ಟಿ, ಶ್ರೀ ತುಳಸೀದಾಸ ಜಾಧವ ಮೊದಲಾದ ಬ್ರಾಹ್ಮಣಾದಿ ಅನೇಕ ಮತಗಳ ಪ್ರಮುಖರು ಈ ಸಹಭೋಜನದಲ್ಲಿ ಭಾಗಿಗಳಾಗಿದ್ದರು. ಒಂದೇ ಮತದವರಲ್ಲಿ ಪರಸ್ಪರ ಉಟೋಪಚಾರಗಳನ್ನು ಮಾಡದೆ ಮೇಲು ಕೀಳುಗಳನ್ನು ಹೇಳುವವರು ಇನ್ನಾದರೂ ಎಚ್ಚರಿಯುವರೇ ?

ಶ್ರೀ. ಗದ್ರೆಯವರ ಭಾಷಣ.

“ನಿರ್ಭೀಡ” ಪತ್ರಿಕಾಕರ್ತರಾದ ಶ್ರೀ. ಗದ್ರೆಯವರು ಈ ಸಮಾರಂಭದ ಮುಂಚೆ ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು—

“ಹಿಂದಕ್ಕೆ. ನ್ಯಾ. ಚಂದಾವರಕರ, ಡಾ. ಭಾಂಡಾರಕರ ಮೊದಲಾದ ಮುಖಂಡರು ಯಾವ ಸಹಭೋಜನ ಪದ್ಧತಿಯನ್ನು ಪ್ರಾರಂಭಿಸಿದ್ದರೋ ಅದನ್ನೇ ನಾವು ಅನುಕರಿಸಿ ಈಗ ವಿಸ್ತಾರಗೊಳಿಸಿದ್ದೇವೆಯೇ ವಿನಾ ಹೊಸದೇನನ್ನೂ ಮಾಡಿರುವುದಿಲ್ಲ. ಸ್ವಾಮಿ ವಿವೇಕಾನಂದರು ನಮ್ಮ ಆಚರಣೆಯಲ್ಲಿರುವ ಅಸ್ಪೃಶ್ಯತೆಯನ್ನು ತುಂಬಾ ಖಂಡಿಸಿದ್ದಾರೆ ಹಿಂದು ಧರ್ಮದ ತತ್ವಜ್ಞಾನವೇನೋ ಶ್ರೇಷ್ಠವಾದುದು. ಆದರೆ ಅವರ ಈಗಿನ ಆಚಾರ ಧರ್ಮವು ಅಯೋಗ್ಯವಾದುದೆಂದೇ ಅವರ ಅಭಿಪ್ರಾಯವಾಗಿದ್ದಿತು.

ನಮ್ಮಲ್ಲಿಯ ಜಾತಿಯಕಲ್ಪನೆ ವಿಚಿತ್ರವಾದುದು. ಬ್ರಾಹ್ಮಣವೆಂಬುದೊಂದು ಜಾತಿ. ಆದರೆ ದೇಶಸ್ಥ, ಕೊಂಕಣಸ್ಥ, ಎಂಬವೂ ಹೇಗೆ ಜಾತಿಗಳಾಗುತ್ತವೆ? ಬ್ರಾಹ್ಮಣರ ಜಾತಿಗಳಲ್ಲಿ ಪರಸ್ಪರ ಎಷ್ಟು ದ್ವೇಷವಿದೆಯೋ ಅಷ್ಟು ಇತರ ಜಾತಿಗಳಲ್ಲಿಲ್ಲ.

ಮೊಚ್ಚೆಗಾರಿಕೆ ಮಾಡುವ ಬ್ರಾಹ್ಮಣರು.

ಗುಣ ಕರ್ಮಗಳಿಂದ ವರ್ಣ ವ್ಯವಸ್ಥೆಯಾಗಿದೆಯಷ್ಟೆ. ಹಾಗಾದರೆ ಯಾರು ಯಾವ ಗುಣ ಕರ್ಮಗಳಲ್ಲಿದ್ದಾರೆಯೋ ಅವರಿಗೆ ಆಯಾಯ ವರ್ಣದವರೆಂದು ಹೇಳಿರಿ. ಮೊನ್ನೆ ಪುಣೆಯಲ್ಲಿ ಬ್ರಾಹ್ಮಣರ ಆರ್ಥಿಕ ಪರಿಷತ್ತು ಕೂಡಿದ್ದಿತು. ಬ್ರಾಹ್ಮಣರು ತಮ್ಮ ಆರ್ಥಿಕ ಅಭಿವೃದ್ಧಿಗಾಗಿ ಬೇರೆ ಬೇರೆ ಕಸಬುಗಳನ್ನು ಮಾಡಬೇಕೆಂದು ನಿರ್ಧಾರವಾಯಿತು. ಬ್ರಾಹ್ಮಣರು ಬೇರೆ ಬೇರೆ ಕಸಬುಗಳನ್ನು ಮಾಡಿದರೂ ಅವರಿಗೆ ಬ್ರಾಹ್ಮಣರೆಂದೇ ಹೇಳಬೇಕೇ ಹೇಗೆ?

ಪುಣೆಯಲ್ಲಿ ಬ್ರಾಹ್ಮಣರು ಮೊಚ್ಚೆಗಾರಿಕೆಯ ಎರಡು ಅಂಗಡಿಗಳನ್ನಿಟ್ಟಿದ್ದಾರೆ. ಗುಣಕರ್ಮಗಳ ಮೇಲಿಂದ ಅವರಿಗೆ ಮೊಚ್ಚೆಗಾರರೆಂದು ಹೇಳಬೇಕಾಗುವುದು. ಆದರೆ ನಾವು ಅವರಿಗೆ ಈಗ ಹಾಗೆ ಹೇಳುತ್ತಿದ್ದೇವೆಯೋ? ಇಲ್ಲ. ಏಕೆಂದರೆ ನಾಳೆ ಒಬ್ಬ ಅಸ್ಪೃಶ್ಯನು ಬ್ರಾಹ್ಮಣರ ಕರ್ಮ ಮಾಡಿದರೆ ಆತನಿಗೆ ಬ್ರಾಹ್ಮಣನೆಂದು ಹೇಳಬೇಕಾಗುವುದಿಲ್ಲವೆ?

ಈಗ ಬ್ರಾಹ್ಮಣಾದಿ ವರ್ಣಗಳ ವ್ಯವಸ್ಥೆಯೇ ಇಲ್ಲ. ಎಲ್ಲರೂ ಶೂದ್ರರಾಗಲು ಎಂದರೆ ನೌಕರಿಯನ್ನು ಮಾಡಲು ಹಂಬಲಿಸುತ್ತಿದ್ದಾರೆ. ನಮ್ಮ ಧರ್ಮ ತತ್ವಗಳು ಉದಾತ್ತವಾಗಿದ್ದರೂ ಅವು ನಡೆಯುಲ್ಲಿಲ್ಲ. ಬ್ರಾಹ್ಮಣರಿಗೆ ಜಾತಿಭೇದ ದ್ವೇಷದ ರೋಗವುಂಟಾಗಿದೆ. ಪ್ಲೇಗ್ ಆದರೆ ಹೇಗೆ ನಾವು ವ್ಯಾಲಿ ತೆಗೆಯಿಸಿಕೊಳ್ಳುತ್ತೇವೆಯೋ ಹಾಗೆಯೇ ಈಗ ನಾವು ಸಮತೆಯ ಇಂಜಕ್ಶನ್ ತೆಗೆದುಕೊಂಡರೆ ಜಾತಿ ದ್ವೇಷವು ನಿವಾರಣೆಯಾಗುವುದು.

ಡಾ. ಬಾಬಾಸಾಹೇಬ ಅಂಬೇಡಕರರ ಘೋಷಣದಿಂದ ಈ ಚಟುವಟಿಕೆಗೆ ಬಲ ಬಂದಿದೆ. ಶ್ರೀ. ಶಂಕರಾಚಾರ್ಯರು (ಡಾ. ಕುರ್ತಕೋಟಿಯವರು) ಕೂಡಾ ನಮ್ಮಲ್ಲಿ ಸಮತಾಭಾವ ಬರಬೇಕೆಂದೇ ಹೇಳುತ್ತಿದ್ದಾರೆ. ಡಾಕ್ಟರರ ಮಗನು ಡಾಕ್ಟರನೇ ಆಗದಿದ್ದಾಗ ಬ್ರಾಹ್ಮಣರ ಮಗನು ಬ್ರಾಹ್ಮಣನೇ ಆಗಿದ್ದಾನೆಂದು ತಿಳಿಯುವುದು ಹೇಗೆ?

ಆದಿಜನರ ವಿಷಯದಲ್ಲಿ ಅವರೂ ಮನುಷ್ಯರೆಂಬ ಭಾವನೆಯಿಂದ ಅವರ ಸಂಗಡ ನಡೆದುಕೊಳ್ಳಬೇಕೆಂಬ ಉದ್ದೇಶದಿಂದಲೇ ಈ ಸಹಭೋಜನ ಪದ್ಧತಿಯನ್ನು ಪ್ರಾರಂಭಿಸಿದೆ.”

ವರ್ಣ ವ್ಯವಸ್ಥಾ ವಿಧ್ವಂಸಕ ಸಂಘ.

ಬ್ರಾಹ್ಮಣಾದಿ ವರ್ಣಗಳು ಅವುಗಳ ಕರ್ಮ ಧರ್ಮಗಳ ವ್ಯವಸ್ಥೆಯು ಹಿಂದುಸ್ಥಾನದ ವಿನಾ ಇನ್ನಾವ ದೇಶದಲ್ಲಿಯೂ ಹಿಂದು ಧರ್ಮದ ಹೊರತು ಪ್ರಪಂಚದ ಮತ್ತಾವ ಧರ್ಮದಲ್ಲಿಯೂ ಇಲ್ಲ. ಹಿಂದುಸ್ಥಾನದ ಮತ್ತು ಹಿಂದು ಸಮಾಜದ ಅಧೋಗತಿಗೆ ಈ ವರ್ಣ ವ್ಯವಸ್ಥೆಯೇ ಕಾರಣವಾಗಿದೆಯೆಂದು ಇತ್ತೀಚಿಗೆ ವೈದಿಕರೆಂದು ಹೇಳಿಕೊಳ್ಳುವವರಿಗೂ ತಿಳಿಯಲಾರಂಭಿಸಿದುದು ಸುದೈವವೇ ಸರಿ.

ಎರಡು ಸಾವಿರ ವರುಷಗಳ ಹಿಂದೆ ಭಗವಾನ್ ಬುದ್ಧನು ಈ ವರ್ಣಗಳ ಸಂಕೋಲಿಯನ್ನು ತೆಗೆದುಹಾಕಿದ್ದನು. ಅನಂತರ ಎಂಟುನೂರು ವರುಷಗಳ ಹಿಂದೆ ಬಸವ ಮಹಾನುಭಾವನೂ ಈ ವರ್ಣ ಜಾಲದಿಂದ ಜನಾಂಗವನ್ನು ಪಾರು ಮಾಡಲು ಪ್ರಯತ್ನಿಸಿದ್ದನು. ಆ ಮಹಾ ವಿಭೂತಿಗಳ ದಿವ್ಯ ಪ್ರಯತ್ನಗಳು ಸಂಪೂರ್ಣ ಫಲಕಾರಿಯಾಗಲಿಲ್ಲ.

ಪಾಶ್ಚಾತ್ಯ ಶಿಕ್ಷಣ ಪ್ರಸಾರದಿಂದ ಹಿಂದು ಜನಾಂಗದಲ್ಲಿ ಅತ್ಯದ್ಭುತವಾದ ವಿಚಾರ ಕ್ರಾಂತಿಯುಂಟಾಗಿದೆ. ಇದೇ ವರ್ಣ ವ್ಯವಸ್ಥೆಯನ್ನು ವಿಧ್ವಂಸಗೊಳಿಸಿ ಹಿಂದು ಸಮಾಜವನ್ನೂ ಹಿಂದು ದೇಶವನ್ನೂ ಉನ್ನತ ಸ್ಥಿತಿಗೆ ಮುಟ್ಟಿಸುವ ಲಕ್ಷಣಗಳು ಇದೀಗ ಸ್ಪಷ್ಟವಾಗಿ ತೋರುತ್ತಲಿವೆ.

ಬಹು ಕಾಲದಿಂದಲೂ ವೇದಗಳ ವಿಷಯದಲ್ಲಿ ಅಪಾರವಾದ ಅಂಧ ಶ್ರದ್ಧೆಯು ಹಿಂದುಗಳಲ್ಲಿ ನೆಲೆಸಿದೆ. ಅವುಗಳಲ್ಲಿ ಹೀಗಿದೆ, ಹಾಗಿದೆ, ಎಂದು ಯಾರು ಯಾವ ರೀತಿ ಅರ್ಥ ಮಾಡಿ ಎಂಥ ಹೀನ ಕಾರ್ಯಗಳನ್ನು ಹೇಳಿದರೂ ಕಣ್ಣು ಮುಚ್ಚಿಕೊಂಡು ಮಾಡುವ ಮೌಢ್ಯವು ಹಿಂದು ಜನಾಂಗದಲ್ಲಿ ಬಹು ಕಾಲದಿಂದಲೂ ಇದೆ.

ವೇದದ ಹುರುಳನ್ನು ಬೈಲಿಗೆ ಹಾಕಿ, ಅದರಲ್ಲಿಯ ಅನ್ಯಾಯಗಳನ್ನು ಯಾವ ಪುಣ್ಯಾತ್ಮರಾದರೂ ನಿಷೇಧಿಸಿದ್ದಾದರೆ ಅವರು ನಾಸ್ತಿಕರು, ಅವೈದಿಕರು, ಶೂದ್ರರು, ಕಡುಪಾಪಿಗಳು, ಪಾಮರರು ಎಂದು ನಾನಾ ರೀತಿಗಳಿಂದ ನಿಂದಿಸುವ ಪದ್ಧತಿಯು ಹಿಂದುಗಳಲ್ಲಿ ಬಹು ಕಾಲದಿಂದಲೂ ಬಂದಿದೆ. ಆದುದರಿಂದ ವೈದಿಕರೆಂದು, ವರ್ಣಾಶ್ರಮ ಧರ್ಮಿಗಳೆಂದು ಹೇಳಿಸಿಕೊಳ್ಳುವುದಕ್ಕಾಗಿಯೇ ಅನೇಕರು ಸಲ್ಲದ ಕರ್ಮಗಳನ್ನು ಕೂಡಾ ಆಚರಿಸುತ್ತ ಬಂದಿದ್ದಾರೆ.

ಈಗ ಉಂಟಾಗಿರತಕ್ಕ ಅತ್ಯದ್ಭುತವಾದ ವಿಚಾರ ಕ್ರಾಂತಿಯು ಪ್ರವಾಹವು ವರ್ಣ ಕಲ್ಪನೆಯ ಕೊಳೆಯನ್ನು ತೊಳೆದು ಹಿಂದು ಸಮಾಜವನ್ನು ಝಳ ಝಳ ಮಾಡುವಂತೆ ಕಾಣುತ್ತದೆ.

ಸಂಘ ಸ್ಥಾಪಕರಾರು ?

ಬ್ರಾಹ್ಮಣಾದಿ ವರ್ಣಗಳು ಅನಾವಶ್ಯಕವೆಂದೂ ಅನರ್ಥಕರವೆಂದೂ ಯಾರಾದರೂ ಹೇಳಿದರೆ ಅವರು ಅವೈದಿಕರೆಂದೇ ವರ್ಣವಾದಿಗಳಿಂದ ಹೇಳಿಸಿಕೊಳ್ಳಲ್ಪಡುತ್ತಿದ್ದಾರಷ್ಟೆ. ಆದರೆ ಈಗ ವೈದಿಕರೆಂಬುವವರೇ ವರ್ಣ ವಿಧ್ವಂಸನೆಗೆ ಸಿದ್ಧರಾಗಿದ್ದಾರೆ. ವೇದಗಳಲ್ಲಿ ಬ್ರಾಹ್ಮಣಾದಿ ನಾಲ್ಕು ವರ್ಣಗಳನ್ನು ಹೇಳಿಲ್ಲವೆಂತಲೂ ವರ್ಣವಾದವೇ ಅವೈದಿಕವೆಂದೂ ಪ್ರತಿಪಾದಿಸುತ್ತಿದ್ದಾರೆ! ಎಂತಹ ಕಾಲ ಬಂದಿತು ನೋಡಿರಿ.

ಲಖನೌ ಪಟ್ಟಣದಲ್ಲಿ ವರ್ಣ ವ್ಯವಸ್ಥಾ ವಿಧ್ವಂಸಕ ಸಂಘವು ಸ್ಥಾಪನೆಯಾಗಿದೆ. ಅದರ ಅಧಿಪತಿಗಳು ಪೂಜ್ಯ ಪಾದ ಶ್ರೀ ೧೦೮ ಸ್ವಾಮಿ ಬೋಧಾನಂದ ಮಹಾಸ್ಥವಿರ ಎಂಬುವವರು. ಶ್ರೀ ರಾಮಾಚರಣ ಎಂ ಎಲ್ ಸಿ. ಲಖನೌ, ಪಂಡಿತ ದೇವದತ್ತ ಆರ್ಯ ಫತ್ತೆಪುರ, ಡಾ ಧರ್ಮ ಪ್ರಕಾಶ ಬರೇಲಿ, ಭಗತ ದಯಾಲದಾಸ ಪ್ರಧಾನ ಆರ್ಯಸಮಾಜ ಕಾನಪುರ, ಭಿಷಗಾಚಾರ್ಯ ಈಶ್ವರದತ್ತ ಮೇಧಾರ್ಥಿ ವಿದ್ಯಾಲಂಕಾರ ಗುರುಕುಲ ಕಾಂಗಡಿ, ಪಂಡಿತ ರಾಮಸ್ವರೂಪ ಶಾಸ್ತ್ರಿ, ಆಚಾರ್ಯ ದಯಾನಂದ ಭಾರತೀಯ ವಿದ್ಯಾಲಯ ಕಾನಪುರ, ಪ್ರೊ. ರಾಮವಿಹಾರಿ ಲಾಲ ಶಾಸ್ತ್ರಿ ವೇದತೀರ್ಥ ಎಂ. ಎ ಎಲ್. ಎಲ್. ಬಿ ಕಾನಪುರ ಈ ಮುಂತಾದ ಮಹಾ ಮಹಾ ವಿದ್ವಾಂಸರೂ, ವೇದಜ್ಞರೂ ಆರ್ಯ ಸಮಾಜದವರೂ ವರ್ಣ ವ್ಯವಸ್ಥಾ ವಿಧ್ವಂಸಕ ಸಂಘವನ್ನು ಸ್ಥಾಪಿಸಿ ಅದರ ಕಾರ್ಯವನ್ನು ಪ್ರಚಂಡವಾಗಿ ನಡೆಯಿಸಿದ್ದಾರೆ.

ಭಿಷಗಾಚಾರ್ಯ ಶ್ರೀ ಈಶ್ವರದತ್ತ ಮೇಧಾರ್ಥಿ ಇವರು ಆರ್ಯ ಸಮಾಜದ ಸುಪ್ರಸಿದ್ಧ ವಿದ್ವಾಂಸರು. ಇವರು ತಮ್ಮ ಸಹಕಾರಿ ವಿದ್ವಾಂಸರನ್ನು ಕೂಡಿಕೊಂಡು **"ವರ್ಣ ವ್ಯವಸ್ಥಾ ಕಾ ಭಂಡಾ ಫೋಡ"** ಎಂಬ ಅತ್ಯಂತ ಮಹತ್ವವಾದ ಒಂದು ಪುಸ್ತಕವನ್ನು ಹಿಂದಿ ಭಾಷೆಯಲ್ಲಿ ಬರೆದಿದ್ದಾರೆ. ಅದರಲ್ಲಿಯ ಅನೇಕ ವಿಷಯಗಳನ್ನು ಕ್ರಮವಾಗಿ ಮುಂದೆ ಉದಾಹರಿಸುವೆವು.

ಈ ಪುಸ್ತಕದಲ್ಲಿಯ ಕೆಲವು ವಾಕ್ಯಗಳು.

"ಈ ವರ್ಣ ವ್ಯವಸ್ಥೆಯು ಹಿಂದುಗಳಿಗೆ ಮರಣ ವ್ಯವಸ್ಥೆಯಾಗಿದೆ ಮನುಸ್ಮೃತಿಯಲ್ಲಿಯ ವರ್ಣ ವ್ಯವಸ್ಥೆಯು ಅವೈದಿಕ. ಆರ್ಯ ಸಮಾಜದವರು ಪ್ರಚಲಿತ ವರ್ಣ ವ್ಯವಸ್ಥೆಯ ಗುಲಾಮರಾಗಿ ಎಲ್ಲಿಯ ವರೆಗೂ ಇರುತ್ತಾರೆಯೋ ಮತ್ತು ಗುಣಕರ್ಮಗಳ ವರ್ಣ ವ್ಯವಸ್ಥೆಯ ನೆರಕೆ ಮನೆಯಲ್ಲಿ ಕುಳಿತು "ಕೃಣ್ವಂತೋ ವಿಶ್ವಮಾರ್ಯಂ" ಎಂದು ಅಪಸ್ವರದ ಕೂಗನ್ನು ಎಲ್ಲಿಯ ವರೆಗೂ ಕೂಗುತ್ತಿರುತ್ತಾರೆಯೋ ಅಲ್ಲಿಯ ವರೆಗೆ ವಿಚಾರಶೀಲರಾದ ಯಾವ ಜನರು ತಾನೆ ಇವರ ಹತ್ತಿರ ಬರುವರು? ವೇದಗಳಲ್ಲಿ ಆರ್ಯ ಮತ್ತು ದಸ್ಯುಗಳೆಂಬ ಎರಡೇ ವರ್ಣಗಳು ಹೇಳಲ್ಪಟ್ಟಿವೆ.

ಸ್ವಾಮಿ ಶ್ರದ್ಧಾನಂದರು ಹೀಗೆ ಹೇಳಿದ್ದಾರೆ—

"ಆರ್ಯ ಸಮಾಜದವರು ಕೂಡಾ ಈಗಿನ ವರ್ಣ ವ್ಯವಸ್ಥೆಯ ಗುಲಾಮರಾಗಿದ್ದಾರೆ. ಆದಕಾರಣ ಬ್ರಾಹ್ಮಣಾದಿ ವರ್ಣಗಳ ನಿರ್ಣಯ ಮಾಡುವ ಕಾಲ ಇನ್ನೂ ಬಹು ದೂರ ಇದೆ. ಈಗ ಈ ಬ್ರಾಹ್ಮಣಾದಿ ವರ್ಣಗಳ ಹೆಸರನ್ನೇ ತೆಗೆದು ಹಾಕಿಬಿಡಬೇಕು."

ಆರ್ಯ ಸಮಾಜವು ವರ್ಣ ವ್ಯವಸ್ಥೆಯ ರೋಗದಿಂದ ಮುಕ್ತವಾಗಬೇಕು.

ಭಗವಾನ್ ಬುದ್ಧನು ವರ್ಣ ವ್ಯವಸ್ಥೆಗಳನ್ನು ವಿಧ್ವಂಸಗೊಳಿಸಿದನು. ದ್ವಿಜರು ಬೌದ್ಧರೊಂದಿಗೆ ಒಂದು ಸಾವಿರ ವರುಷ ಹೋರಾಡಿದರು. ಈ ಹೋರಾಟದಿಂದಲೇ ಕ್ರೈಸ್ತರೂ, ಮುಸಲ್ಮಾನರೂ ಈ ದೇಶದಲ್ಲಿ ನುಗ್ಗಲು ಅವಕಾಶವಾಯಿತು, ಈ ಪಿಶಾಚಿನಿ ವರ್ಣ ವ್ಯವಸ್ಥೆಯಿಂದಲೇ ಹಿಂದುಸ್ಥಾನಕ್ಕೆ ಈಗಿನ ಶೋಚನೀಯ ಸ್ಥಿತಿಯು ಬಂದಿತು."

ಬಸವಣ್ಣನವರ ಮಹತ್ಕಾರ್ಯದ ಅರುವು ಇನ್ನಾದರೂ ಅವರ ನಿಂದಕರಿಗೆ ಉಂಟಾಗುವುದೆ?

ಆದಿ ಹಿಂದು ಪರಿಷತ್ತು.

ಕಲಕತ್ತಾದಲ್ಲಿಯ ಆದಿಜನ ಮುಂದಾಳುಗಳಾದ ಶ್ರೀ. ರಸಿಕ ಲಾಲ ವಿಶ್ವಾಸ ಇವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಆದಿ ಹಿಂದುಗಳ ಪರಿಷತ್ತು ಕಳೆದ ೨೭ನೆಯ ತಾರೀಖಿನ ದಿವಸ ಲಖನೌ ಪಟ್ಟಣದಲ್ಲಿ ಜರುಗಿತು. ಈ ಪರಿಷತ್ತಿನಲ್ಲಿ ಠರಾವಾದ ಮುಖ್ಯ ಗೊತ್ತುವಳಿಗಳು ಈ ಪ್ರಕಾರಾಗಿವೆ.—

"ಅಖಿಲ ಭಾರತ ಆದಿ ಹಿಂದು ಪರಿಷತ್ತಿನವರು ಠರಾಯಿಸಿದ ವಿನಾ ಆದಿಜನರಲ್ಲಿ ಯಾರೂ ಧರ್ಮಾಂತರ ಹೊಂದಬಾರದು. ಆದಿಜನರಿಗೆ ಪ್ರಾಥಮಿಕ ಶಿಕ್ಷಣವು ಉಚಿತವಾಗಿ ದೊರೆಯಬೇಕು ಆದಿಹಿಂದುಗಳಾದ ನಮಗೆ "ಹರಿಜನ" ಎಂದು ಹೇಳಲಾಗದು."

ಡಾ. ಅಂಬೇಡಕರರಲ್ಲಿ ತಮಗಿದ್ದ ವಿಶ್ವಾಸವನ್ನು ವ್ಯಕ್ತಗೊಳಿಸಿ ಅವರ ಅಧ್ಯಕ್ಷತೆಯಲ್ಲಿಯೇ ಒಂದು ಸಮಿತಿಯನ್ನು ಏರ್ಪಡಿಸಿದರು. ಆ ಸಮಿತಿಯುವರು ಧರ್ಮಾಂತರದ ವಿಷಯವಾಗಿ ಯೋಚಿಸುವರು. ಇನ್ನುಮೇಲಾದರೂ ಇವರಿಗೆ 'ಹರಿಜನ' ಎಂದು ಹೇಳುವ ಹಟವನ್ನು ಅನೇಕರು ಬಿಡುವರೆ?

ರಾಯಚೂರಲ್ಲಿ ಕೂಡುವ
೧೭ ನೆಯ
ವೀರಶೈವ ಮಹಾಸಭೆಯ
ಸಕಲ ಸಂಗತಿಗಳೂ
ವಿವರವಾಗಿಯೂ ವಿಮರ್ಶಾತ್ಮಕವಾಗಿಯೂ ಮುಂದಣ ವಾರದ
ಶರಣ ಸಂದೇಶದಲ್ಲಿ
ಪ್ರಕಟವಾಗುವವು.
—ಮ್ಯಾನೇಜರ್.

ಸರ್ವ ಧರ್ಮ ಪರಿಷತ್ತು.

ಆದಿಜನರಿಗೆ ತಮ್ಮ ತಮ್ಮ ಧರ್ಮತತ್ವಗಳು ತಿಳಿಯಲೆಂದು ಶೀಖ, ಬೌದ್ಧ, ಜೈನ, ಕಬೀರ ಪಂಥ, ಆರ್ಯ ಸಮಾಜ, ಕ್ರಿಶ್ಚಿಯನ್ ಮತ್ತು ಮುಸಲ್ಮಾನ್ ಈ ಪ್ರಕಾರ ಏಳು ಧರ್ಮದವರ ಪರಿಷತ್ತು ಲಖನೌದಲ್ಲಿ ಕೂಡಿದ್ದಿತು. ೧೪ ಜನ ವಿದ್ವಾಂಸರು ತಮ್ಮ ತಮ್ಮ ಧರ್ಮಗಳ ಮಹತ್ವವನ್ನು ಕುರಿತು ಪರಿಷತ್ತಿನಲ್ಲಿ ಭಾಷಣ ಮಾಡಿದರು. ಎಲ್ಲ ಮತದವರಿಗಿಂತಲೂ ಮುಸಲ್ಮಾನ ಮತ್ತು ಶೀಖ ಜನರೇ ವಿಶೇಷವಾಗಿದ್ದರು. ಆದಿಜನರಿಗೆ ಅನೇಕರು ಅನೇಕ ರೀತಿಗಳಿಂದ ಸಹಾಯ ಮಾಡುತ್ತಿದ್ದರು. ಶೀಖರು ಅವರ ಊಟೋಪಚಾರಗಳಿಗೂ ಮುಸಲ್ಮಾನರು ಅವರ ಸಭಾಮಂಟಪದ ಕಾರ್ಯಕ್ಕೂ ನೆರವಾಗಿದ್ದರು. ಬೇರೆ ಬೇರೆ ಧರ್ಮಗಳ ಚಿಕ್ಕದೊಡ್ಡ ಪುಸ್ತಕಗಳನ್ನು ಅಲ್ಲಿ ಉಚಿತವಾಗಿ ಎಷ್ಟೋ ಹಂಚಿದರು. ಈ ಪ್ರಕಾರ ತಮ್ಮ ತಮ್ಮ ಧರ್ಮ ಪ್ರಸಾರದ ಕಾರ್ಯಕ್ಕೆ ಅನೇಕರು ಬಹು ಮುಂದಾಳುಗಳಾಗಿದ್ದರು.

— ಕಳೆದ ೨೩ ನೆಯ ತಾರೀಖಿನ ದಿವಸ ಸೊಲ್ಲಾಪುರದಲ್ಲಿ ಸಾಯುಂಕಾಲ ಮಿ. ಮಹಬುಸಾಹೇಬರ ಮನೆಗೆ ಸಿಡಿಲು ಬಡಿದು ಇಬ್ಬರ ಮೈ ಹೆಚ್ಚಾಗಿ ಬೆಂದಿದೆ. ಮೂವರಿಗೆ ಸ್ವಲ್ಪ ಮುಟ್ಟಿಗೆಸುಟ್ಟಿದೆ.

ಪ್ರಾಂತಿಕ ಪ್ರಭುತ್ವ.

ಹಿಂದುಸ್ಥಾನದ ಹೊಸ ರಾಜ್ಯ ಘಟನೆಯ ಶಾಸನದಂತೆ ತಾರೀಖು ೧-೪-೧೯೩೭ ನೆಯ ದಿವಸ ಹಿಂದುಸ್ಥಾನದಲ್ಲಿ ಪ್ರಾಂತಿಕ ಪ್ರಭುತ್ವವು ಪ್ರಾರಂಭವಾಗುವದು. ಈಗಿರತಕ್ಕ ಪ್ರಾಂತಿಕ ಮಂತ್ರಿಗಳ ಅಧಿಕಾರವು ತಾ. ೩೧-೩-೩೭ ರ ವರೆಗೆ ಮಾತ್ರ ಇದೆ.

ಹೊಸ ರಾಜ್ಯ ಘಟನೆಯು ತಾ. ೧-೪-೩೭ ನೆಯ ದಿವಸ ಪ್ರಾರಂಭವಾಗುವದು. ಅಂದಿನಿಂದ ಸೆಕ್ರೆಟರಿ ಆಫ್ ಸ್ಟೇಟ್ ಇನ್ ಕೌನ್ಸಿಲ್ ಈ ಸಂಸ್ಥೆಗೆ ಪ್ರತಿಯಾಗಿ ಸಲಹೆಗಾರರ ಮಂಡಲವು ಏರ್ಪಡುವದು. ಮತ್ತು ಅಂದಿನಿಂದ ಸರಕಾರಕ್ಕೆ ಪ್ರತ್ಯಕ್ಷ ಚಕ್ರವರ್ತಿಗಳಿಂದಲೇ ಅಧಿಕಾರವು ಪ್ರಾಪ್ತವಾಗುವದು. ಯಾರಿಂದ ಎಂದು ಹಿಂದುಸ್ಥಾನ ಸರಕಾರಕ್ಕೆ ಅಧಿಕಾರ ದೊರೆತರೂ ಅದರ ಬಣ್ಣವೇನೋ ಎಲ್ಲರಿಗೂ ತಿಳಿದುದೇ ಆಗಿದೆಯಷ್ಟೆ.

ಮಹಾರಾಷ್ಟ್ರದ ಒಕ್ಕಲಿಗರ ಸ್ಥಿತಿ.

ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ಕಾರ್ಯಕಾರಿ ಮಂಡಲದವರು ಮಹಾರಾಷ್ಟ್ರದಲ್ಲಿಯ ಒಕ್ಕಲಿಗರ ಸಾಂಪತ್ತಿಕ ಸ್ಥಿತಿಯನ್ನು ಕುರಿತು ಪರಿಶೋಧಿಸಿ ಒಂದು ವರದಿಯನ್ನು ಪ್ರಕಟಿಸಬೇಕಾಗಿ ಶ್ರೀ ಅಚ್ಯುತರಾವ ಪಟವರ್ಧನ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಕಳೆದ ವರುಷ ನಿಯಮಿಸಿದ್ದರು.

ಈ ಪಟವರ್ಧನ ಸಮಿತಿಯುವರು ಮಹಾರಾಷ್ಟ್ರ ದೇಶದ ಬೇರೆ ಬೇರೆ ಭಾಗಗಳಲ್ಲಿಯ ೫೦ ಹಳ್ಳಿಗಳಿಗೆ ಸ್ವಂತಾಗಿ ಹೋಗಿ ಅಲ್ಲಿಯ ಎಲ್ಲಾ ಸಂಗತಿಗಳನ್ನೂ ತಿಳಿದುಕೊಂಡು ದೇಶದ ಒಟ್ಟು ಸ್ಥಿತಿಯನ್ನು ತೂಕ ಹಾಕಿ ಒಂದು ವರದಿಯನ್ನು ಪ್ರಕಟಿಸಿದ್ದಾರೆ. ಈ ವರದಿಯಿಂದ ಈ ಕೆಳಗಿನ ಕೆಲವು ಸಂಗತಿಗಳು ಗೊತ್ತಾಗುತ್ತವೆ.

೧೯೨೮-೨೯ ನೆಯ ಇಸವಿಯಲ್ಲಿ ಮುಂಬೈ ಪ್ರಾಂತದ ಬೆಳೆಗಳ ಆದಾಯ ೧೨೦ ಕೋಟಿ ರೂ. ಇತ್ತು. ಆದರೆ ೧೯೩೩-೩೪ ನೆಯ ಇಸವಿಯಲ್ಲಿ ೬೦ ಕೋಟಿ ರೂ. ಗಳ ಆದಾಯ ಬಂದಿದೆ. ಇದರಿಂದ ಮಹಾರಾಷ್ಟ್ರದ ಒಕ್ಕಲಿಗರ ಆದಾಯ ಅರ್ಧದಷ್ಟು ಕಡಿಮೆಯಾಯಿತು. ಮುಂಬೈ ಪ್ರಾಂತದ ಒಕ್ಕಲಿಗರ ಸಾಲ ೧೫೦ ಕೋಟಿ ರೂ. ಗಳಿಗಿಂತ ಹೆಚ್ಚಾಗಿದೆ. ಹಿಂದುಸ್ಥಾನದ ಒಕ್ಕಲಿಗರಲ್ಲಿ ೧೦೦ಕ್ಕೆ ೮೦ ಒಕ್ಕಲಿಗರ ಒಕ್ಕಲತನವು ದಿವಾಳಿ ಸ್ಥಿತಿಗೆ ಬಂದಿದೆ.

ಕರ್ನಾಟಕದ ಒಕ್ಕಲಿಗರ ಸ್ಥಿತಿಯಾದರೂ ಇದಕ್ಕಿಂತ ಒಳ್ಳೆಯ ಸ್ಥಿತಿಯಲ್ಲಿದೆ?

---

೯ ಸಾಮ್ರಾಜ್ಯಗಳ ಭೂವಿಸ್ತಾರ, ಮತ್ತು ಜನಸಂಖ್ಯೆ.

ಸಾಮ್ರಾಜ್ಯ	ಚದರ ಮೈಲು	ಜನಸಂಖ್ಯೆ
ಬ್ರಿಟಿಶ್	೧೩,೦೪೨,೮೯೬	೪೯೬,೩೪೪,೫೫೬
ರಶಿಯಾ	೮,೨೪೧,೯೨೯	೧೬೫,೭೭೮,೪೦೦
ಫ್ರಾನ್ಸ	೪,೬೪೯,೪೦೭	೧೦೫,೪೪೪,೭೯೫
ಅಮೇರಿಕ	೩,೭೩೭,೪೩೬	೧೩೭,೯೦೪,೩೩೦
ಇಟಲಿ	೯೯೩,೯೪೪	೪೫,೧೦೫,೯೩೮
ಬೆಲ್ಜಿಯಂ	೯೨೬,೭೭೫	೩೭,೭೩೩,೬೪೧
ಪೋರ್ಚುಗೀಸ್	೮೪೮,೦೬೬	೧೫,೭೩೮,೯೫೪
ಡಚ್	೮೦೦,೫೬೯	೬೯,೨೬೦,೬೨೮
ಜಪಾನ	೭೨೩,೨೯೩	೧೨೯,೭೮೩,೫೫೫



ಶಾ. ಶ. ೧೮೫೮ ನೆಯ ಜ್ಯೇಷ್ಠ ಶು|| ೧೨ ಸೋಮವಾರ.

ನೈಜಾಮು ಪ್ರಾಂತದ ವೀರಶೈವರಿಗೆ ಇದೇ ಸುಸಮಯ.

ನಾಳೆ ರಾಯಚೂರಲ್ಲಿ ಅಖಿಲ ಭಾರತ ವೀರಶೈವ ಮಹಾಸಭೆಯ ೧೨ ನೆಯ ಅಧಿವೇಶನವು ಪ್ರಾರಂಭವಾಗುವುದಷ್ಟೆ. ಇದು ನೈಜಾಮು ಪ್ರಾಂತದ ವೀರಶೈವರಿಗೆ ತುಂಬಾ ಅಭಿಮಾನಾಸ್ಪದವಾದ ಸಂಗತಿಯು. ರಾಯಚೂರು ವೀರಶೈವ ಮಹಾ ಜನರಿಗಂತೂ ತುಂಬಾ ಭೂಷಣಪ್ರದವಾದ ಪ್ರಸಂಗವು.

ಏಕೆಂದರೆ, ನೈಜಾಮು ಪ್ರಾಂತದಲ್ಲಿ ವೀರಶೈವರ ಸಂಖ್ಯೆಯೇನೂ ಕಡಿಮೆಯಿಲ್ಲ. ಶ್ರಿ. ಶ. ೧೯೩೧ ನೆಯ ಜನ ಪರಿಗಣನೆಯಿಂದ ಆ ಪ್ರಾಂತದಲ್ಲಿ ೭,೮೮,೮೫೩ ಜನ ವೀರಶೈವರಿದ್ದಾರೆಂದು ಸ್ಪಷ್ಟ ಗೊತ್ತಾಗುತ್ತದೆ. ವ್ಯಾಪಾರ ಮೊದಲಾದ ಉದ್ಯೋಗಗಳ ಅನೇಕ ವೀರಶೈವರು ತಮ್ಮ ಒಳಪಂಗಡಗಳ ಹೆಸರುಗಳನ್ನೇ ಜನ ಪರಿಗಣನೆಯಲ್ಲಿ ಬರೆಸಿರುವುದರಿಂದ ವೀರಶೈವರ ಮೇಲಣ ಸಂಖ್ಯೆಗಿಂತ ಒಂದೆರಡು ಲಕ್ಷ ಹೆಚ್ಚಾಗಿಯೇ ಇರುವುದೆಂದು ಹೇಳಲು ಅಭ್ಯಂತರವಿಲ್ಲ.

ವೀರಶೈವ ಸಮಾಜದ ನಾಲ್ಕನೆಯ ಒಂದು ಭಾಗದಷ್ಟು ಮತ್ತು ನೈಜಾಮು ರಾಜ್ಯದ ಪ್ರಜೆಗಳಲ್ಲಿಯ ೧೫ ನೆಯ ಒಂದು ಭಾಗದಷ್ಟು ಇರತಕ್ಕ ಈ ವೀರಶೈವರು ಆ ಪ್ರಾಂತದ ಯಾವುದೋ ಒಂದು ಭಾಗದಲ್ಲಿ ಮಾತ್ರವೇ ಇದ್ದಾರೆಂದು ಹೇಳಬಹುದೇ? ಹಾಗೂ ಇಲ್ಲ; ರಾಯಚೂರು, ಗುಲಬರ್ಗಾ, ಬೀಡ, ಬೀದರ, ವರಂಗಲ್ ಮೊದಲಾದ ನೈಜಾಮು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿಯೂ ಇದ್ದಾರೆ. ಆ ರಾಜ್ಯದ ವೀರಶೈವರಲ್ಲಿ ಕನ್ನಡ, ಮರಾಠಿ, ಮತ್ತು ತೆಲಗು ಈ ಮೂರೂ ಭಾಷೆಗಳನ್ನಾಡುವವರಿದ್ದಾರೆ.

ಹೀಗಿದ್ದರೂ ನೈಜಾಮು ಪ್ರಾಂತದ ಒಂದು ಕಡೆ ಒಂದು ಸಾರೆಯಾದರೂ ಈ ಮಹಾಸಭೆಯು ಸೇರಿರಲಿಲ್ಲ. ಆ ಭಾಗದ ವೀರಶೈವರು ತಮ್ಮ ಪ್ರಾಂತದಲ್ಲಿ ಸಕಲ ಭಾಗಗಳ ವೀರಶೈವ ಮಹಾಜನರ ಇಂತಹ ಸ್ತೋಮವನ್ನು ಎಂದೂ ಕಂಡಿರಲಿಲ್ಲ. ವೀರಶೈವ ಸಮಾಜದ ಶಿಕ್ಷಣ ಪ್ರಸಾರಕ್ಕೆ ಎಷ್ಟೋ ಮಟ್ಟಿಗೆ ಜಾಗೃತಿಯನ್ನುಂಟುಮಾಡಿದ ಈ ಮಹಾಸಭೆಯನ್ನು ತಮ್ಮಲ್ಲಿಯೂ ಬರಮಾಡಿಕೊಳ್ಳುವ ಇಂತಹ ಸುಪ್ರಸಂಗವು ಅವರಿಗೆ ಹಿಂದೆಂದೂ ಬಂದಿರಲಿಲ್ಲ. ಎಂದಮೇಲೆ ನೈಜಾಮು ಪ್ರಾಂತದ ವೀರಶೈವರಿಗೆ ನಾಳಿನ ದಿನವು ಸುದಿನವಲ್ಲವೇ ?

ಎಲ್ಲವೂ ಇವೆ, ಆದರೆ ಒಂದಿಲ್ಲ.

ಮಹಾಸಭೆಯು ಸ್ಥಾಪನೆಯಾಗಿ ೩೨ ವರುಷಗಳಾದರೂ ನೈಜಾಮು ಭಾಗದಲ್ಲಿ ಒಂದು ಸಾರೆಯಾದರೂ ಮಹಾಸಭೆಯು ಏಕೆ ಸೇರಲಿಲ್ಲ? ಆ ಭಾಗದಲ್ಲಿ ಜನ ಸಂಖ್ಯೆಯಂತೂ ವಿಶೇಷವಾಗಿದೆ. ದನಿಕರಾದರೋ ಬೇರೆ ಭಾಗಗಳಿಗಿಂತ ಅಲ್ಲೇನೂ ಕಡಿಮೆಯಿಲ್ಲ. ಇಷ್ಟೇ ಅಲ್ಲ; ಶ್ರೀಮಂತರ ಸಂಖ್ಯೆ ಹೆಚ್ಚಿದೆಯೆಂದೇ ಹೇಳಬಹುದು. ಹಾಗಾದರೆ ಉದಾರ ಗುಣವೇನಾದರೂ ಇಲ್ಲವೇ ? ಆ ಭಾಗದ ಮಂಟಪ ಪೂಜೆ, ಪುರಾಣ ಪ್ರಸ್ತ, ಮೊದಲಾದವುಗಳಿಗೆ ಲಕ್ಷಾಂತರ ರೂ ಗಳು ವೆಚ್ಚವಾಗುತ್ತಿರುವುದನ್ನು ನೋಡಿದರೆ ಅವರಲ್ಲಿ ಉದಾರ ಗುಣವು ಹೆಚ್ಚಾಗಿಯೇ ಇದೆಯೆಂದು ಸ್ಪಷ್ಟ ಕಾಣುತ್ತದೆ.

ಈ ಪ್ರಕಾರ ಜನಬಲ, ಧನಬಲ, ಗುಣಬಲಗಳಿದ್ದರೂ ಮಹಾಸಭೆಯ ಕಡೆಗೆ ಈ ವರೆಗೆ ಅವರೇಕೆ ಲಕ್ಷಿಸಿರಲಿಲ್ಲ? ಈ ಸಭೆ ಸಮ್ಮೇಲನಗಳ ತಿಳುವಳಿಕೆಯು ಯಾವ ಪಾಶ್ಚಾತ್ಯ ಶಿಕ್ಷಣದಿಂದ ಬಂದಿದೆಯೋ ಆ ಶಿಕ್ಷಣವೇ ಆ ಭಾಗದ ವೀರಶೈವರಲ್ಲಿ ಶೂನ್ಯ. ಬ್ರಿಟಿಶ್ ಕರ್ನಾಟಕದ ಒಂದೆರಡು ವೀರಶೈವರ ಮನೆತನಗಳಲ್ಲಿ ಎಷ್ಟು ಪದವೀಧರರಿದ್ದಾರೆಯೋ ಅಷ್ಟು ಆ ಪ್ರಾಂತದ ೮-೧೦ ಲಕ್ಷ ವೀರಶೈವರಲ್ಲಿಯೂ ಇಲ್ಲ! ಆ ಪ್ರಾಂತದಲ್ಲಿ ಲಕ್ಷಕ್ಕೊಬ್ಬರಂತೆ ಪದವೀಧರರಿದ್ದಾರೆಂದು ಹೇಳಬಹುದು!

ಆಧುನಿಕ ಶಿಕ್ಷಣದಲ್ಲಿ ಅವರು ಇಷ್ಟು ಕಲ್ಪನಾತೀತವಾದ ಶೋಚನೀಯ ಸ್ಥಿತಿಯಲ್ಲಿರುವುದರಿಂದಲೇ ಮಹಾಸಭೆಯನ್ನು ಕೂಡಿಸಬೇಕೆಂಬ ಯೋಚನೆ, ಸಾಹಸಗಳು ಅವರಲ್ಲುಂಟಾಗಲಿಲ್ಲ. ಇದೀಗ ಆ ಭಾಗದಲ್ಲಿ ಸ್ವಲ್ಪ ಬೆಳಕು ಬಿದ್ದಿದೆ. ಅದಕ್ಕೆ ಈ ಮಹಾಸಭೆ ಸೇರಿದುದೇ ಸಾಕ್ಷಿ.

ಈ ಪ್ರಕಾರ ಸಭೆ ಕೂಡಿಸಿ ಅದನ್ನು ನೋಡಿ ಸಂತೋಷಪಟ್ಟರೆ ಕಾರ್ಯ ಪೂರೈಸಿತೇ ? ಇಷ್ಟಕ್ಕೇನೇ ಇದು ಸುಸಮಯವೆಂದು ತಿಳಿಯಬೇಕೇ ? ಹಾಗಲ್ಲ. ಇದರಿಂದ ಮುಂದೆ ಮಹತ್ಕಾರ್ಯವನ್ನು ಮಾಡಿಕೊಳ್ಳಬೇಕು. ಸುಶಿಕ್ಷಿತರ ಈ ಗೊಳಬೇಸಿದ ಕಾಲದಲ್ಲಿಯೇ ಶಿಕ್ಷಣ ಪ್ರಸಾರಕ್ಕಿರುವ ಕುಂದುಕೊರತೆಗಳನ್ನೆಲ್ಲಾ ತೂರಿ ಬಿಡಬೇಕು. ಹಾಗೆ ಮಾಡಿಕೊಂಡರೆ ಮಾತ್ರ ಇದೇ ಸುಸಮಯವಾಗುವದು.

ಈಗ ಮಾಡಬೇಕಾದುದೇನು ?

ಮಹಾಸಭೆಗೆ ನೈಜಾಮು ಪ್ರಾಂತದ ಎಲ್ಲ ಭಾಗಗಳ ಧನಿಕರೂ ಉದಾರಿಗಳೂ ಬರುತ್ತಿದ್ದಾರಷ್ಟೇ. ಈ ಸಮಯವನ್ನು ಕಳೆದುಕೊಳ್ಳದೆ ವಿದ್ಯಾಭಿಮಾನಿಗಳಾದ ಉದಾರ ಧನಿಕರು ನೈಜಾಮು ಪ್ರಾಂತದ ವೀರಶೈವರ ಇಂಗ್ಲೀಷ್ ಶಿಕ್ಷಣಕ್ಕಾಗಿ ಸಾವಿರಗಟ್ಟಲೆ ರೂ. ಗಳನ್ನು ದಾನಮಾಡಬೇಕು ಮಹಾಸಭೆಯು ಅವಿಚ್ಛಿನ್ನವಾಗಿ ಜರುಗಲು ದಾವಣಗೆರೆಯಲ್ಲಿ ಹೇಗೆ ೨-೩ ತಾಸುಗಳಲ್ಲಿಯೇ ೩೦ ಸಾವಿರ ರೂ. ಗಳು ಕೂಡಿದವೊ ಹಾಗೆಯೇ ನೈಜಾಮು ಪ್ರಾಂತದ ವೀರಶೈವರ ಶಿಕ್ಷಣ ಪ್ರಸಾರಕ್ಕಾಗಿ ಆ ಪ್ರಾಂತದ ವೀರಶೈವರಿಂದ ವಿಶೇಷವಾದ ಧನವು ಕೂಡಬೇಕು

ಆ ಭಾಗದ ಬಡ ವೀರಶೈವ ವಿದ್ಯಾರ್ಥಿಗಳಿಗಾಗುತ್ತಿರುವ ನಷ್ಟ ಕಷ್ಟಗಳನ್ನೂ, ಅದರಿಂದ ಸಮಾಜಕ್ಕೇನೇ ಉಂಟಾಗಿರುವ

ಕೊರತೆಗಳನ್ನೂ ಯೋಚಿಸಿ ಮನ ಕೊರಗಿದ್ದಾದರೆ ಒಬ್ಬೊಬ್ಬ ಧನಿಕರೇ ೩೦ ಸಾವಿರ ರೂ.ಗಳನ್ನೂ ಕೊಡಲು ಆ ಭಾಗದಲ್ಲಿ ಸಮರ್ಥರಿದ್ದಾರೆ. ಆದರೆ ಅವರಲ್ಲಿ ಇಂತಹ ಪ್ರವೃತ್ತಿಯು ಮಾತ್ರ ಈ ಕಾಲದಲ್ಲಾದರೂ ಉಂಟಾಗಬೇಕು. ಹಾಗಾದರೆ ನೈಜಾಮ ಪ್ರಾಂತದ ವೀರಶೈವರಿಗೆ ಇದೇ ಸುಸಮಯವಾಗುವುದು.

ಯಾವ ಸಮಾಜದಲ್ಲಿ ಆಧುನಿಕ ಶಿಕ್ಷಣ ಪ್ರಸಾರವಿಲ್ಲವೋ ಆ ಸಮಾಜವು ನೆರೆ ಸಮಾಜಗಳಲ್ಲಿ ಘನತೆಯಿಂದ ಬಾಳಲಾರದು. ಆ ಸಮಾಜದ ಧನಿಕರು, ಧಾರ್ಮಿಕ ಸಂಸ್ಥೆಗಳ, ಧರ್ಮ ತತ್ವಗಳ ಪ್ರಭಾವವು ಅನ್ಯ ಕಡೆ ಬೀಳಲಾರದು. ಈ ಕಾಲಕ್ಕೆ ಅಗತ್ಯವಾಗಿರತಕ್ಕ ಸಕಲ ಸೌಕರ್ಯಗಳನ್ನು ಆ ಸಮಾಜವು ಹೊಂದಿ ಸುಖಿಸಲಾರದು. ಅಂತೆಯೇ ನೈಜಾಮ ಪ್ರಾಂತದ ವೀರಶೈವರು ಈ ಸಮಯವನ್ನು ಸುಸಮಯವನ್ನಾಗಿ ಮಾಡಿಕೊಳ್ಳಲೆಂದೇ ಹಾರೈಸಿ ಈ ವಿಷಯವನ್ನು ಅವರ ಮುಂದಿಟ್ಟಿದ್ದೇವೆ.

ಬ್ರಿಟಿಶ್ ಕರ್ನಾಟಕ ಮತ್ತು ಮೈಸೂರು ಪ್ರಾಂತಗಳ ವೀರಶೈವರಂತೆ ವಿದ್ಯೆಯಲ್ಲಿ ನಿಮ್ಮ ಭಾಗದವರೂ ಮುಂದೆ ಬರಬೇಕೆಂದಿದ್ದರೆ, ನಿಮ್ಮ ಭಾಗದವರೂ ನಿಮ್ಮ ರಾಜ್ಯದಲ್ಲಿ ಆ ಭಾಗದವರಂತೆ ಶ್ರೇಷ್ಠವಾದ ಸರಕಾರಿ ಅಧಿಕಾರಗಳಲ್ಲಿರಬೇಕೆಂದು ಅಪೇಕ್ಷಿಸುತ್ತಿದ್ದರೆ, ಅವರಂತೆಯೇ ಸ್ವಂತ ಕಾಲೇಜ್, ಹೈಸ್ಕೂಲುಗಳನ್ನು ಸ್ಥಾಪಿಸುವಂತಹ ಪದವೀಧರರು ನಿಮ್ಮಲ್ಲಿಯೂ ಉದಯವಾಗಿ ನಿಮ್ಮ ಘನತೆಯು ಬೆಳಗಬೇಕೆಂದಿದ್ದರೆ, ಆ ಭಾಗದ ವೀರಶೈವರ ಮೇಲೆ ಬಾರದಿದ್ದಂತಹ ಅನೇಕ ವಿಪತ್ತುಗಳು ನಿಮ್ಮ ಮೇಲೆ ಬರುತ್ತಿರುವುದು ದೂರಾಗಬೇಕೆಂಬ ಇಚ್ಛೆಯು ನಿಮಗಿದ್ದರೆ ಈ ಕಾಲವನ್ನು ಕಳೆದುಕೊಳ್ಳದೆ ನಿಮ್ಮ ಉದಾರ ಗುಣವನ್ನು ವ್ಯಕ್ತಗೊಳಿಸಿ ದಿವ್ಯ ಕೀರ್ತಿಯನ್ನು ಹೊಂದುವಿರೆಂದೇ ನಂಬಿದ್ದೇವೆ.

ರಾಯಚೂರಿನ ಇತರ ಸಭೆಗಳು.

——:(◆):——

ಮಹಾ ಸಭೆಯ ಕಾಲದಲ್ಲಿಯೇ ವೀರಶೈವ ಮಹಿಳಾ ಪರಿಷತ್ತು, ವೀರಶೈವರ ತರುಣ ಪರಿಷತ್ತುಗಳು ಕೂಡುತ್ತಿದ್ದುದು ಅಭಿನಂದನೀಯವಾದುದು.

ಮಹಿಳಾ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ವಹಿಸಿದ ಸೌ|| ಪಾರ್ವತಿದೇವಿ ಕೇಸರಿಯವರು ಮೈಸೂರು ಪ್ರಾಂತದ ಪ್ರಮುಖ ಮುಂದಾಳುಗಳಾಗಿದ್ದ ಕೀರ್ತಿಶೇಷ ಎಂ. ಬಸವಯ್ಯನವರ ಸುಪುತ್ರಿಯರು. ಚಿಕ್ಕಂದಿನಿಂದಲೂ ಸಾರ್ವಜನಿಕ ಕಾರ್ಯದ ವಾತಾವರಣದಲ್ಲಿಯೇ ಇದ್ದವರು. ಸುಶಿಕ್ಷಿತರೂ ಸಮಾಜ ಕಾರ್ಯ ಪ್ರಿಯರೂ ಆಗಿದ್ದಾರೆ.

ವೀರಶೈವ ತರುಣರ ಪರಿಷತ್ತಿನ ಅಧ್ಯಕ್ಷರಾದ ಶ್ರೀಮಾನ್ ವೈ. ಮಹಾಬಲೇಶ್ವರಪ್ಪನವರಂತೂ ಕರ್ನಾಟಕದ ಸಾರ್ವಜನಿಕ ಮುಂದಾಳುಗಳಲ್ಲಿ ಒಬ್ಬ ಪ್ರಮುಖ ತರುಣರು. ಬಳ್ಳಾರಿ ಜಿಲ್ಲೆಯಲ್ಲಿಯ ಸಾರ್ವಜನಿಕ ಕಾರ್ಯ ಧುರೀಣರು.

ಇಂತಹ ಸಮರ್ಥರಾದ ಉಭಯ ಪರಿಷತ್ತುಗಳ ಅಧ್ಯಕ್ಷರ ನೇತೃತ್ವದಲ್ಲಿ ಆಯಾಯ ಪರಿಷತ್ತುಗಳು ತೃಪ್ತಿಕರವಾಗಿಯೇ ಜರುಗುವವೆಂದು ನಾವು ನಂಬಿದ್ದೇವೆ. ಇವುಗಳಿಂದ ಗೊತ್ತುವಳಿಯು ಒಂದೊಂದು ಕಾರ್ಯವಾದರೂ ಮುಂದೆ ಜರುಗುವಂತಹ ವಿಪಾರ್ಟುಗಳಾಗಲೆಂದೇ ಹಾರೈಸುತ್ತೇವೆ.

ಶ್ರೀ ಹುಕ್ಕೇರಿಕರರ ಸೌಜನ್ಯ.

ಕಳೆದ ಬಸವ ಜಯಂತಿಯ ಕಾಲಕ್ಕೆ ಶ್ರೀ. ಆರ್. ಎಸ್. ಹುಕ್ಕೇರಿಕರರು ಶ್ರೀ ಬಸವೇಶ್ವರ ಎಂಬ ಲೇಖನ ಬರೆದುದು ತಾ|| ೧೧-೫-೩೬ ನೆಯ ಶರಣ ಸಂದೇಶದಲ್ಲಿ ಪ್ರಕಟವಾಗಿದೆಯಷ್ಟೆ. ಆ ಲೇಖನವನ್ನು ಸಂಪೂರ್ಣವಾಗಿ ಓದಿದ್ದಾದರೆ ಲೇಖಕರ ಸದುದ್ದೇಶವು ಸ್ಪಷ್ಟವಾಗುತ್ತದೆ.

ತಮ್ಮ ಉದ್ದೇಶವು ಸ್ತುತ್ಯವಾದುದಾಗಿದ್ದರೂ ಬರವಣಿಗೆಯ ರೀತಿಯಿಂದಲೂ ತಪ್ಪಾದ ಭಾಷಾಂತರದಿಂದಲೂ ಉಂಟಾದ ಅನೇಕರ ಸಂಶಯಗಳನ್ನು ನಿವಾರಣೆ ಮಾಡಲು ತಮ್ಮ ಹೇಳಿಕೆಯನ್ನು ಪ್ರಕಟಿಸಿದ್ದಾರೆ. ಅದನ್ನು ಇದೇ ಸಂಚಿಕೆಯ ಬೇರೊಂದು ಕಡೆ ಕೊಟ್ಟಿದೆ. ಇದರಿಂದ ಲೇಖಕರ ಸೌಜನ್ಯವು ಸ್ಪಷ್ಟವಾಗುತ್ತದೆ. ಈ ಪ್ರಕಾರ ಜನಾಭಿಪ್ರಾಯವನ್ನು ಲಕ್ಷಿಸಿ ನಿಜ ಸ್ಥಿತಿಯನ್ನು ಪ್ರಕಟಿಸಿದುದಕ್ಕೋಸ್ಕರ ಶ್ರೀ. ಹುಕ್ಕೇರಿಕರರನ್ನು ನಾವು ಹೃದಯ ಪೂರ್ವಕ ಅಭಿನಂದಿಸುತ್ತೇವೆ.

ಶ್ರೀ ಕರ್ಲಮಂಗಲಂ ಶ್ರೀಕಂಠಯ್ಯನವರು ಬಸವ ಮಹಾನುಭಾವನ ವಿಚಾರವಾಗಿ ಬರೆದುದನ್ನು ಇದೇ ಪತ್ರಿಕೆಯ ಬೇರೆ ಕಡೆ ಪ್ರಕಟಿಸಿದ್ದೇವಷ್ಟೆ. ಬಸವ ಮಹಾತ್ಮನ ಮೇಲೆ ಮಾಡಿದ ಈ ಭಯಂಕರವಾದ ಆಕ್ಷೇಪಣೆಗಳ ವಿಷಯದಲ್ಲಿ ವೀರಶೈವ ಮತಾಭಿಮಾನಿಗಳೂ, ಐತಿಹಾಸಿಕ ಸತ್ಯಾಪೇಕ್ಷಿಗಳೂ, ವಚನ ಶಾಸ್ತ್ರಗಳ ಗುಣ-ಗೌರವಗಳನ್ನೂ ಪ್ರಯೋಜನಗಳನ್ನೂ ಘಂಟಾಘೋಷವಾಗಿ ಶ್ಲಾಘಿಸುವವರೂ ಯಾವ ಚಟುವಟಿಕೆಗಳನ್ನು ನಡೆಯಿಸುವರೋ ನೋಡಬೇಕಾಗಿದೆ.

ಬಸವಣ್ಣನವರ ಸಂಬಂಧವಾಗಿ

ಯಾರಿಂದ ಭಾಷಣ ಮಾಡಿಸಬೇಕು?

ವೀರಶೈವ ಸಮಾಜದ ಸುಪ್ರಸಿದ್ಧ ಧಾರ್ಮಿಕ ಮುಂದಾಳುಗಳೂ ಘನವಿದ್ವಾಂಸರೂ ಆದ ಶ್ರೀ. ಪಾವಟೆ ಸಿದ್ಧರಾಮಪ್ಪನವರು ಬರೆದ "ಶ್ರೀ. ಬಸವಜಯಂತಿಯ ಉಪನ್ಯಾಸಗಳು" ಎಂಬ ಲೇಖನವು ತಾ. ೨೫-೫-೩೬ ನೆಯ ತರುಣ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿದೆಯಷ್ಟೆ. ಅದರಲ್ಲಿ ಲೇಖಕ ಮಹಾಶಯರು ಬಸವ ಜಯಂತಿಯ ಕಾಲಕ್ಕೆ ವೀರಶೈವರಿಂದ ಅವರಲ್ಲಿಯೂ ವೀರಶೈವ ತತ್ವಗಳನ್ನು ಆಚರಿಸಿ ಅನುಭವಶಾಲಿಗಳಾದವರಿಂದಲೇ ಭಾಷಣ ಮಾಡಿಸಬೇಕೇ ವಿನಾ ಅನ್ಯ ಮತೀಯರಿಂದ ಮಾಡಿಸಬಾರದಾಗಿ ಸೂಚಿಸಿದ್ದಾರೆ.

ಅಂತಹ ಶಿವಾನುಭವಿಗಳಿಂದ ಭಾಷಣ ಮಾಡಿಸುವುದು ಆವಶ್ಯಕವೂ ಹೆಚ್ಚು ಪ್ರಯೋಜನವೂ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿರುವುದು ಶಕ್ಯವೇ ಇಲ್ಲ. ಆದರೆ ಪರಮತೀಯ ವಿದ್ವಾಂಸರಿಂದ ಬಸವಣ್ಣನವರ ಸಂಬಂಧವಾಗಿ ಭಾಷಣ ಮಾಡಿಸಬಾರದೆಂದು ಲೇಖಕರು ಸೂಚಿಸಿರುವುದು ತುಂಬಾ ಅಸಂಗತವಾಗಿದೆ.

ಏಕೆಂದರೆ, ಬಸವಣ್ಣನವರ ಅತ್ಯದ್ಭುತವಾದ ಕಾರ್ಯವು ಏಕ ಮುಖವಾದುದಲ್ಲ. ಲಿಂಗಾಂಗಿಗಳು ಮಾತ್ರ ಅರಿತು ಆಚರಿಸಬೇಕಾದ ಲಿಂಗಾಂಗ ಸಾಮರಸ್ಯದ ಸಂಗತಿಗಳನ್ನು ಮಾತ್ರವೇ ಅವರು ಒಗಟಿನ ಮಾತುಗಳಲ್ಲಿ ಹೇಳಿಲ್ಲ: ಹಾಗಿದ್ದಿದ್ದರೆ ಲೇಖಕರು ಸೂಚಿಸಿದ್ದು ಸಮಂಜಸವಾಗುತ್ತಿದ್ದಿತು.

ಬಸವಣ್ಣನವರು ಕನ್ನಡ ಸಾಹಿತ್ಯ ಸಂವರ್ಧಕರು. ಜನಾಂಗದ ನೀತಿರೀತಿಗಳನ್ನು ಬೋಧಿಸಿದ ಮಹಾತ್ಮರು. ಸಮಾಜ ಸುಧಾರಣೆಯ ದಿವ್ಯ ಮಾರ್ಗವನ್ನು ತೋರಿಸಿದ ಮಹಾ ವಿಭೂತಿಗಳು. ಆದುದರಿಂದ ಈ ಸಂಗತಿಗಳನ್ನೆಲ್ಲಾ ಅರಿತ ವಿದ್ವಾಂಸರಿಂದ ಇತರರು ಅರಿತುಕೊಳ್ಳಬೇಕಾದರೆ ಲಿಂಗವಂತಿಕೆಯ ಸಂಸ್ಕಾರ ಸ್ವಾನುಭವಗಳು ಆ ವಿದ್ವಾಂಸರಿಗಿರಬೇಕೆಂದು ಹೇಳುವುದು ಅಯುಕ್ತವಲ್ಲವೆ?

ಆದಕಾರಣ ಪರಮತೀಯ ವಿದ್ವಾಂಸರನ್ನು, ಈಗಿನಂತೆಯೇ ಆವಶ್ಯಕವಾಗಿ ಕರೆಯಿಸಿಕೊಂಡು ಭಾಷಣ ಮಾಡಿಸುವುದು ವಿಹಿತವೂ ಹಿತಕರವೂ ಆಗಿದೆಯೆಂದೇ ನಮಗೆ ತೋರುತ್ತದೆ.

ತಾಂಡೂರು ಸಮಾಚಾರ.

ಇಲ್ಲಿ ಎಷ್ಟೋ ವರ್ಷಗಳಿಂದ ಶ್ರೀ. ಭದ್ರೇಶ್ವರ ಜಾತ್ರೆಯು ನಿರ್ವಿಘ್ನವಾಗಿ ಸಾಗುತ್ತಾ ಇತ್ತು. ಹೋದ ವರ್ಷ ಕೆಲವು ಮುಸಲ್ಮಾನರು ತಮ್ಮ ಮಸೀದಿ ಮುಂದೆ ವಾದ್ಯಬಾರಿಸಬಾರದೆಂದು ಅಡ್ಡಿ ಮಾಡಿದ್ದರು. ಆಗ ಪೋಲೀಸರ ಸಹಾಯದಿಂದ ವಾದ್ಯ ಬಾರಿಸುತ್ತಲೇ ಹೋಗಿ ಜಾತ್ರೆಯ ಕಾರ್ಯವನ್ನು ನಡೆಸಿದ್ದು ಎಲ್ಲರಿಗೂ ಗೊತ್ತಾದ ಸಂಗತಿ.

ಈ ವರ್ಷ ಜಾತ್ರೆಯ ಕಾಲಕ್ಕೆ ಮಸೀದಿ ಮುಂದೆ ೪೦ ಅಡಿ ಬಿಟ್ಟು ವಾದ್ಯಬಾರಿಸಬೇಕೆಂದು ಹುಕುಂ ತಂದಿದ್ದರು. ಇಲ್ಲಿಯ ದೇವಾಲಯ ಪಂಚಕಮೀಟಿ ಪ್ರಮುಖರಾದ ಶ್ರೀ. ಸಸಾರಂ ಬಸಪ್ಪ ನವರು, ಶ್ರೀ. ಹೇರೂರು ಈರಪ್ಪನವರು ಮೊದಲಾದವರು ಹೈದರಾಬಾದದ ವರೆಗೂ ಹೋಗಿ ಒಳ್ಳೇ ಅಭಿಮಾನದಿಂದ ಸಿಲಸಿಲಾ ನಡೆದು ಬಂದಂತೆ ಮಸೀದಿ ಮುಂದೆ ವಾದ್ಯಬಾರಿಸುವ ಹುಕುಂ ತಂದದ್ದು ಬಹು ಭೂಷಣವಾದುದು.

ಮೆ|| ಪೋಲಿಸ್ ಸುಪರಿಂಟೆಂಡೆಂಟ ಸಾಹೇಬರು ಗುಲಬರ್ಗಾ ಮತ್ತು ಮೆ|| ಸರ್ಕಲ್ ಇನಸ್ಪೇಕ್ಟರ ಸಾಹೇಬರು ಕೋಡಂಗಲ್ ಹಾಗೂ ಕೆಲವು ಪೋಲಿಸ ಅಧಿಕಾರಿಗಳು ಈ ಜಾತ್ರೆಯನ್ನು ಸಾಂಗವಾಗಿ ಸಾಗಿಸಿದ್ದಕ್ಕಾಗಿ ಇವರಿಗೂ ತಾಂಡೂರು ಜಾಗೀರ ಹುದ್ದೇದಾರರಿಗೂ ಪಂಚಕಮೀಟಿಯವರು ಅಭಿನಂದಿಸಿದರು. ಇದೇ ಪ್ರಕಾರ ಪಂಚಕಮೀಟಿಯವರು ಐಕಮತ್ಯದಿಂದ ಮತಕಾರ್ಯ ಗಳನ್ನು ಮಾಡಿ ಕೀರ್ತಿಪಡೆಯಬೇಕು.

ಓರ್ವ ಭದ್ರೇಶ್ವರ ಭಕ್ತ.

ಶಿವದೀಕ್ಷಾ ಸಮಾರಂಭ.

ಶ್ರೀಮಜ್ಜಗದ್ಗುರು ಕೇದಾರ ಮಹಾ ಸನ್ನಿಧಿಯಿಂದ ಫಾಲ್ಗುಣ ಶುದ್ಧ ೧೦ ಶಕೆ ೧೮೫೮ ಮಂಗಳವಾರ ದಿವಸ ಲಿಂಗಧಾರಿಗಳಾದ, ತಾಲೂಕ ಜೇವರಗಿ ಪೈಕಿ ಹರವಾಳದಲ್ಲಿರುವ, ಹಾಲಮಠದ ಅದವಾನಿ ಮಲ್ಲಪ್ಪ, ಶಾಖಾಪುರದಲ್ಲಿರುವ ಮನಿಗಿರೆಪ್ಪ ಹೊಸಮನಿ, ಶಿದ್ಧಮಲ್ಲಪ್ಪ ಹೊಸಮನಿ ಮತ್ತು ಬಿರಾಳದ ಮಾಲೀಗೌಡ ಸಂಗಪ್ಪ ಮೊದಲಾದ ನಾಲ್ಕು ಮನೆತನದ ೩೬ ಜನಗಳಿಗೆ ಮಿತಿ ವೈಶಾಖ ಬ|| ೧೨ ಸೋಮವಾರ ದಿವಸ ತಾಲೂಕ ಸೋಲಾಪುರ ಪೈಕಿ ಹಾಡಳಗಿ ಹಿರೇಮಠದ ಶ್ರೀಮದ್ಘನಲಿಂಗ ಚಕ್ರವರ್ತಿಗಳಾದ ಹಂಪಯ್ಯ ಸ್ವಾಮಿಗಳಿಂದಲೂ ಮತ್ತು ತಾಲೂಕ ತುಳಜಾಪುರ ಪೈಕಿ ಕಿಲ್ಲೇನಳದುರ್ಗದ ಪಟ್ಟೆ ಚರಮೂರ್ತಿ ಚಿಕ್ಕವೀರ ಸ್ವಾಮಿಗಳಿಂದಲೂ ಶಿವದೀಕ್ಷಾ ಸಂಸ್ಕಾರವನ್ನು ಮಾಡಿಸಿ ಪಂಕ್ತಿಪಾವನ ಮಾಡಿರುತ್ತದೆ. ಈ ಜನರು ನಮ್ಮನ್ನೇ ಗುರುಗಳನ್ನಾಗಿ ಮಾಡಿಕೊಂಡಿದ್ದಾರೆ.

ರೇವಣಸಿದ್ಧ ಚನ್ನಬಸವಸ್ವಾಮಿ
ನಂದೀಮಠ ಬ್ರಹ್ಮಪೂರ
ಗುಲಬರ್ಗಾ.

ನಂಬಿಕೆ ದ್ರೋಹಿ ಅಬ್ದುಲ್ಲಾ ಶೇಟ್.

ಕೊರಟಗೆರೆ ತಾಲೂಕು (ಡಿಸ್ಟ್ರಿಕ್ಟ ತುಮಕೂರು) ಶೀತದ ಗ್ರಾಮಕ್ಕೆ ಮೇಲ್ಕಂಡ ಗುಪ್ತ ನಾಮಧೇಯ ಓರ್ವ ಸುಮಾರು ೪೦ ವರ್ಷ ವಯಸ್ಸಿನ ಮುಸಲ್ಮಾನನೊಬ್ಬನು ಬಂದು ಹದಿನೈದು ದಿನ ಮೊಕ್ಕಾಂ ಮಾಡಿ ಅನೇಕರಿಗೆ ಮೋಸಮಾಡಿ ೨೫ ರೂ. ಗಳ ವರೆಗೆ ಎತ್ತಿಕೊಂಡು ಪರಾರಿಯಾಗಿರುತ್ತಾನೆ. ಈತನ ಚಹರೆ ಸುಮಾರು ಐದೂವರೆ ಅಡಿ ಎತ್ತರ, ಬಣ್ಣ ಕಪ್ಪು, ಸಾಮಾನ್ಯ ದೃಢಾಂಗ ವುಳ್ಳವನು, ತುಟಿಯ ಮೇಲೆ ಕೆಂಪು ಬಿಳುಪು ಮಿಶ್ರವಾದ ಮಚ್ಚೆ ಗಳಿವೆ. ಎಚ್ಚರಿಕೆ.

ಬಿ. ರುದ್ರಪ್ಪ.

ಗಾಂಧೀಜಿಯವರ ಮಗನು ಮುಸಲ್ಮಾನ ಧರ್ಮ ಸ್ವೀಕರಿಸಿದನು.

ಮಹಾತ್ಮಾ ಗಾಂಧಿಯವರ ಹಿರಿಯಮಗ ಹಿರಾಲಾಲ ಎಂಬುವವರು ಮುಂಬೈಯಲ್ಲಿ ತಾ. ೨೯-೫-೩೬ ನೆಯ ದಿನ ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದರು.

ಮುಂಬೈ ಜುಮ್ಮಾ ಮಸೀದಿಯಲ್ಲಿ ಆ ದಿನ ಮಧ್ಯಾನ್ಹ ಪ್ರಾರ್ಥನೆಗೆ ೫ ಸಾವಿರ ಜನರು ಕೂಡಿದಾಗ ಮಿ. ಹಿರಾಲಾಲ ಇವರು ಇಸ್ಲಾಮಿ ಧರ್ಮವನ್ನು ಸ್ವೀಕರಿಸಿದರು. ಅವರಿಗೆ ಅಬ್ದುಲ್ಲಾ ಗಾಂಧಿ ಎಂಬ ಹೆಸರನ್ನಿಟ್ಟರು.

ಮಿ. ಅಬ್ದುಲ್ಲಾ ಗಾಂಧಿಯವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು— "ಇಸ್ಲಾಮಿ ಧರ್ಮವು ಜಗತ್ತಿನ ಎಲ್ಲ ಧರ್ಮಗಳಿಗಿಂತ ಉತ್ತಮವಾದುದಾಗಿದೆ. ಅದರಲ್ಲಿ ಎಲ್ಲ ಧರ್ಮಗಳ ಸಾರವು ಮತ್ತು ಸಾರ್ವತ್ರಿಕ ಬಂಧುಭಾವವು ಇವೆ. ಅಂತೆಯೇ ನಾನು ಈ ಧರ್ಮವನ್ನು ಸ್ವೀಕರಿಸಿದ್ದೇನೆ. ನಾನು ಸಾಯುವ ವರೆಗೂ ಇಸ್ಲಾಮಿ ಧರ್ಮದಲ್ಲಿಯೇ ಇರಬೇಕೆಂದು ನಿರ್ಧರಿಸಿದ್ದೇನೆ."

ಯಾರು ಕಾಡು ಜನರು?

ಹಬಸಿ ಜನರು ಕಾಡು ಜನರೆಂತಲೂ ಇಟಲಿ ಜನರು ನಾಗರಿಕರೆಂತಲೂ ಇಟಲಿಯ ಮುಸೋಲಿನಿಯು ಹೇಳುವದುಂಟಷ್ಟೆ. ಆ ನಿರಪರಾಧಿ ಜನಗಳ ಸಂಹಾರಮಾಡಿ ಅಬಸೀನಿಯಾ ದೇಶವನ್ನು ಕೈವಶಮಾಡಿಕೊಂಡ ಮೇಲೆ ಈಗ ಅಲ್ಲಿ ಒಂದು ಲಷ್ಕರಿ ನ್ಯಾಯ ಮಂಡಲವನ್ನು ನಿಯಮಿಸಿ ಇಟಲಿಯ ವಿರುದ್ಧವಾಗಿ ಯುದ್ಧ ಮಾಡಿದ ಹಬಸಿಗಳನ್ನು ಮುಸೋಲಿನಿಯು ಕೊಲ್ಲಿಸುತ್ತಿದ್ದಾನಂತೆ! ಎಂದ ಮೇಲೆ ಯಾರು ಕಾಡು ಜನರು? ಆ ನಿರಪರಾಧಿಗಳಾದ ಹಬಸಿಗಳೋ ಅವರನ್ನು ಹಿಂಸಿಸುವ ರಾಕ್ಷಸೀ ಕೃತ್ಯ ನಡೆಸಿರುವ ಇಟಾಲಿಯವರೋ?

—ಬಂಗಾಲ ಮತ್ತು ಆಸಾಮ ಪ್ರಾಂತಗಳಲ್ಲಿ ವಿಪರೀತ ಮಳೆಯಾದುದರಿಂದ ಬ್ರಹ್ಮಪುತ್ರಾ ನದಿಯು ಮೇರೆದಪ್ಪಿ ಬರುವಂತೆ ಕಾಣುತ್ತದೆ. ಕಲಕತ್ತಾ ರಂಗೂನಗಳ ಪ್ರವಾಸವು ನಿಂತಿದೆ.

—ರಾಷ್ಟ್ರೀಯ ಸಭಾಪತಿಗಳಾದ ನೆಹರುರವರು ತಾರೀಖು ೨೯-೫-೩೬ ನೆಯ ದಿವಸ ಲಾಹೋರ ಪಟ್ಟಣಕ್ಕೆ ಹೋದರು. ಅಲ್ಲಿ ಪ್ರಚಂಡ ಸ್ವಾಗತವಾಯಿತು. ಡಾ. ಸತ್ಯಪಾಲರ ಮನೆಯಲ್ಲಿದ್ದಾರೆ.

—ಪ್ಯಾರಿಸ್ ಪಟ್ಟಣದಲ್ಲಿ ಕಾರ್ಯಾಲಯಗಳ ಕೂಲಿಕಾರರು ಕಾರ್ಯಾಲಯಗಳಿಗೆ ಮಾತ್ರ ಹೋಗುತ್ತಿದ್ದಾರೆ. ಆದರೆ ಅಲ್ಲಿ ಕೆಲಸವನ್ನು ಮಾತ್ರ ಮಾಡುವುದಿಲ್ಲ. ಇಂತಹ ಸತ್ಯಾಗ್ರಹವನ್ನು ಪ್ರಾರಂಭಿಸಿದ್ದಾರೆ. ಮೋಟಾರ, ಯುದ್ಧೋಪಕರಣಗಳ ಕಾರ್ಯಾಲಯಗಳಲ್ಲಿ ೩೩ ಸಾವಿರ ಕೂಲಿಕಾರರು ಇಂಥ ಸತ್ಯಾಗ್ರಹವನ್ನು ಹೂಡಿದ್ದಾರೆ.

— ದತ್ತಾತ್ರೆಯ ಶಂಕರ ಗೋಡಬೋಲೆ ಎಂಬ ಬ್ರಾಹ್ಮಣರು ಆಯುರ್ಝುಕ್ ಎಂಬ ಜ್ಯೂ ಜಾತಿಯ ತರುಣಿಗೆ ಆರ್ಯ ಸಮಾಜದ ದೀಕ್ಷೆ ಕೊಡಿಸಿ ರಜಿಸ್ಟರ ಪದ್ಧತಿಯಂತೆ ವಿವಾಹವಾದರು.

ಅಖಿಲ ಭಾರತ ವೀರಶೈವ ಮಾಳಿ ಸಮಾಜೋನ್ನತಿ ಪರಿಷತ್ತು.

ಮಂಗಳವೇಢೆ.

ಪರಿಷತ್ತಿನ ಈ ಅಧಿವೇಶನವು ತಾ ೧೩ ಮತ್ತು ೧೪ ಜೂನ ೧೯೩೬ ಇಸ್ವಿ ಶನಿವಾರ ಹಾಗೂ ರವಿವಾರ ಎರಡು ದಿವಸ ಮಂಗಳವೇಢೆಯಲ್ಲಿ ಮ. ರಾ. ಸಾತಾಜಿ ಅಕ್ಕಪ್ಪ ಮಾಳಿ ಇವರ ಅಧ್ಯಕ್ಷತೆಯ ಕೆಳಗೆ ಜರುಗಿಸಲ್ಪಡುವದು. ನಮ್ಮ ವೀರಶೈವ ಮಾಳಿ ಜಾತಿಯ ಎಲ್ಲ ಸ್ತ್ರೀ ಪುರುಷರು ಹಾಜರಾಗಿ ಪರಿಷತ್ತು ಯಶಸ್ವಿ ಮಾಡಬೇಕಾಗಿ ವಿನಂತಿ.

ನಮ್ಮ ಜಾತಿಯ ನಾಮಾಭಿಧಾನಗಳು.

ಕರ್ನಾಟಕದ ಹೊರತು ಅನ್ಯ ಸ್ಥಳಗಳ ಮರಾಠಿ ಭಾಷೆಯಲ್ಲಿ ಮಾಳಿ, ಕರ್ನಾಟಕದ ಮಧ್ಯಭಾಗದೊಳಗೆ ಕನ್ನಡದಲ್ಲಿ ತೋಟಗೀರ ಮತ್ತು ದಕ್ಷಿಣದಲ್ಲಿ ಹೂಗಾರ ಹಾಗೂ ತೋಟಗೀರ ಎಂಬ ನಾಮಾಭಿಧಾನಗಳುಂಟು. ಆದ್ದರಿಂದ ಈ ನಾಮಾಭಿಧಾನಗಳುಳ್ಳ ಯಾವತ್ತು ಸ್ತ್ರೀ ಪುರುಷರು ಪರಿಷತ್ತಿಗೆ ಆಗಮಿಸಿ ಅದನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುವೆವು.

ಉದ್ದೇಶ

ನಮ್ಮ ವೀರಶೈವ ಮಾಳಿ (ತೋಟಗೀರ-ಹೂಗಾರ) ಸಮಾಜದಲ್ಲಿ ಸಂಘಟನೆಯೂ ಬಂಧು ಪ್ರೇಮವೂ ಹುಟ್ಟಿ ಅದರ ಸಾಮಾಜಿಕ, ಔದ್ಯೋಗಿಕ ಆರ್ಥಿಕ, ಮುಂತಾದ ಯಾವತ್ತು ತರದ ಸುಧಾರಣೆಯಾಗಬೇಕೆಂಬ ಉದ್ದೇಶದಿಂದ ಈ ವಾರ್ಷಿಕ ಪರಿಷತ್ತು ನೆರೆಯುವದು ಆದ್ದರಿಂದ ಎಲ್ಲರೂ ಈ ಪರಿಷತ್ತಿಗೆ ಹಾಜರಾಗಿ ಅದರ ಕೆಲಸದಲ್ಲಿ ಭಾಗ ವಹಿಸುವದು ಪ್ರತಿಯೊಬ್ಬರ ಪ್ರಮುಖ ಹಾಗೂ ಪವಿತ್ರವಾದ ಕರ್ತವ್ಯವಾಗಿದೆ

ಸಾಧನಗಳು

ಸಮಾಜ ಸುಧಾರಣೆಗಾಗಿ ಪರಿಷತ್ತಿನಂಥ ಕಾರ್ಯಗಳನ್ನು ನೆರವೇರಿಸುವದೆಂದರೆ ಜಾದುಗಾರಿಕೆ ಅಲ್ಲ. ಪರಿಷತ್ತಿನಂಥ ಕೆಲಸಗಳು ಸಮಾಜ ಸುಧಾರಣೆಯ ಕಾರ್ಯದಲ್ಲಿ ಎಷ್ಟು ಮಹತ್ವಪೂರ್ಣವಾಗಿವೆಯೋ ಅಷ್ಟೇ ಅವು ಖರ್ಚುಳ್ಳವುಗಳಾಗಿವೆ. ಹಣದ ಹೊರತು ಆಟವೇ ಸಾಗುವದಿಲ್ಲ. ಆದ್ದರಿಂದ ಈ ಪರಿಷತ್ತಿನ ಕೆಲಸಕ್ಕಾಗಿ ಹಣದ ಸಹಾಯ ಮಾಡಲಿಕ್ಕೆ ಪ್ರತಿಯೊಂದು ಗ್ರಾಮದ ಸಮಾಜ ಬಾಂಧವರಿಗೆ ವಿನಂತಿಸುವೆವು. ಪರಿಷತ್ತಿನ ಖರ್ಚಿಗಾಗಿ ಕೊಡುವ ಹಣದ ಬಗ್ಗೆ ಪಾವತಿ ಪಡಕೊಳ್ಳಬೇಕು. ಪಾವತಿಯ ಹೊರತು ಯಾರೂ ಹಣ ಕೊಡಬಾರದು. ಪಾವತಿವಿನಃ ಹಣ ಕೊಟ್ಟಲ್ಲಿ ಅದಕ್ಕೆ ಸ್ವಾಗತ ಮಂಡಲದವರು ಜಬಾಬದಾರರಿಲ್ಲ.

ಪರಿಷತ್ತು ನೆರಿಯಿಸಲಿಕ್ಕೆ ಹಣವು ಅವಶ್ಯಕವಾದ ಸಾಧನವಾಗಿರುವಂತೆ ಪರಿಷತ್ತನ್ನು ಯೋಗ್ಯರೀತಿಯಿಂದ ಕೊನೆಗಾಣಿಸಲಿಕ್ಕೆ ಸ್ವಯಂಸೇವಕರ ದಲವು ಪ್ರಮುಖವಾದುದೊಂದು ಸಾಧನವಿದೆ. ಸ್ವಯಂಸೇವಕರೆಂದರೆ ಪರಿಷತ್ತಿನ ಶಿಸ್ತಿನ ಮೆಟ್ಟು. ಆದ್ದರಿಂದ ಇಂಥ ಸಮಾಜ ಸೇವೆಯ ಉತ್ಕೃಷ್ಟ ಸಂಧಿಯನ್ನು ನಮ್ಮೊಳಗಿನ ವಿದ್ಯಾರ್ಥಿಗಳು ಕಳಕೊಳ್ಳದೆ ಪರಿಷತ್ತಿನಲ್ಲಿ ಸ್ವಯಂಸೇವಕರಾಗಲು ಇಚ್ಛಿಸುವವರು ತಮ್ಮ ತಮ್ಮ ಹೆಸರುಗಳನ್ನು ಸ್ವಾಗತ ಮಂಡಳಕ್ಕೆ ತಿಳಿಸಬೇಕು.

ಮಾನವೀ ಕರ್ತವ್ಯ.

ನಮ್ಮ ಜಾತಿಯ ಬಾಂಧವರು ಅಜ್ಞರಿದ್ದು ಅವರು ಹಳ್ಳಿಗಳಲ್ಲಿ ವಿಶೇಷವಾಗಿ ಹರಡಿಕೊಂಡಿರುವರು. ಕಾರಣ, ಆ ಆ ಭಾಗದೊಳಗಿನ ಎಲ್ಲ ಸುಜ್ಞರು ತಮ್ಮತಮ್ಮ ಭಾಗಗಳಲ್ಲಿ ಪ್ರಚಾರ ಕಾರ್ಯವನ್ನು ಕೈಕೊಂಡು ಪರಿಷತ್ತಿನ ಸಂಗತಿಯನ್ನು ಯಾವತ್ತು ಗ್ರಾಮಗಳಲ್ಲಿ ಎಲ್ಲರಿಗೂ ತಿಳಿಸಬೇಕೆಂಬ ವಿನಂತಿ. ಮಾನವೀ ಜೀವಿತವು ಭೋಗಗಳನ್ನು ಭೋಗಿಸುವದಕ್ಕಾಗಿರದೆ ಕರ್ತವ್ಯ ಕ್ಷೇತ್ರಗಳೊಳಗಿನ ಪರಸೇವೆಯನ್ನು ಮಾಡುವದಕ್ಕಾಗಿದೆ ಎಂಬ ತತ್ವವನ್ನು ಸುಜ್ಞರು ಸಾರ್ಥಕಗೊಳಿಸುವರೆಂದು ನಂಬಿಗಿದೆ. ಇನ್ನೊಂದು ಮಹತ್ವದ ಕೆಲಸವೇನಂದರೆ ಪ್ರತಿಯೊಬ್ಬ ಸುಶಿಕ್ಷಿತನು ತಮ್ಮ ತಮ್ಮ ಭಾಗದೊಳಗಿನ ಹಳ್ಳಿ ಪಳ್ಳಿಗಳಲ್ಲಿಯ ಜಾತಿ ಬಾಂಧವರ ಹೆಸರಿನ ಯಾದಿಯನ್ನು ತಯಾರಿಸಿ ಶೀಘ್ರವೇ ನಮ್ಮ ಕಡೆಗೆ ಕಳಿಸಬೇಕೆಂದು ಬೇಡಿಕೊಳ್ಳುತ್ತೇವೆ.

ಸ್ತ್ರೀಯರನ್ನು ಹಾಜರಿಡಿಸಿರಿ.

ಪುರುಷರೊಂದಿಗೆ ಸ್ತ್ರೀಯರ ಸುಧಾರಣೆಯಾಗುವದು ಅತ್ಯಂತ ಅವಶ್ಯಕವಾಗಿದೆ. ಬಾಲಕರನ್ನು ಉತ್ತಮರಾದ ನಾಗರಿಕರನ್ನಾಗಿ ಮಾಡಲಿಕ್ಕೆ ಮಾತೆಯ ಶಿಕ್ಷಣವೇ ಅತ್ಯಂತ ಮಹತ್ವದ್ದಾಗಿದೆ. ಆದ್ದರಿಂದ ಶ್ರೇಷ್ಠ ತರದ ಮಾತೆಯ ಹೊರತು ಉತ್ತಮ ನಾಗರಿಕತೆಯ ಶಿಕ್ಷಣವು ಬಾಲಕನಿಗೆ ದೊರೆಯುವ ಬಗೆ ಹೇಗೆ ಎಂಬದನ್ನು ವಿಚಾರಿಸಿ ಪ್ರತಿಯೊಬ್ಬರು ಸಂಕೋಚವನ್ನು ತ್ಯಜಿಸಿ ಪರಿಷತ್ತಿಗೆ ಸ್ತ್ರೀಯರನ್ನು ಹಾಜರಿಡಬೇಕಾಗಿ ವಿನಂತಿಸುವೆವು.

ಸವಲತ್ತು ಮತ್ತು ಸೋಯಿಯು.

ನಮ್ಮ ಜಾತಿಯಬಾಂಧವರಿಗೆ ಪರಿಷತ್ತಿನ ಹಾಗೂ ಅದರ ಜಬಾಬದಾರಿಯ ಕಲ್ಪನೆಯು ತೀರ ಕಡಿಮೆ. ಇಂಥ ಪರಿಸ್ಥಿತಿಯಲ್ಲಿ ಪ್ರೇಕ್ಷಕ ಫೀ ಮತ್ತು ಭೋಜನ ಫೀ ಹೇರಿದರೆ ತಪ್ಪು ತಿಳವಳಿಕೆಯಾಗುವ ಸಂಭವ ತೋರುತ್ತಿರುವದರಿಂದ ಪರಿಷತ್ತಿನಲ್ಲಿ ಯಾವದೇ ಖರ್ಚು ತಗಲದಂತೆ ವ್ಯವಸ್ಥೆ ಮಾಡಲ್ಪಟ್ಟಿದೆ. ಸಾರಾಂಶ ಪರಿಷತ್ತಿಗೆ ಬರುವ ಸ್ತ್ರೀ ಪುರುಷರಿಗೆ ಅಲ್ಲಿ ಯಾವದೇ ಖರ್ಚು ಮಾಡಬೇಕಾಗುವದಿಲ್ಲ. ಊಟದ ಹಾಗೂ ಇಳಕೊಳ್ಳುವ ವ್ಯವಸ್ಥೆಯು ಪುಕ್ಕಟ ಇಡಲ್ಪಟ್ಟಿದೆ. ಹೆಂಗಸರಿಗೂ ಹಾಗೂ ಗಂಡಸರಿಗೂ ಬೇರೆ ಬೇರೆ ವ್ಯವಸ್ಥೆ ಮಾಡಲ್ಪಟ್ಟಿದೆ.

ಮಂಗಳವೇಢೆ ಎಲ್ಲಿ ಅದೆ?

ಮಂಗಳವೇಢೆ ಈ ಗ್ರಾಮವು ಪಂಢರಪೂರದಿಂದ ದಕ್ಷಿಣ ದಿಕ್ಕಿಗೆ ಹನ್ನೆರಡು ಮೈಲುಗಳ ಅಂತರದ ಮೇಲೆ ಇದೆ. ಪಂಢರಪೂರದ ವರೆಗೆ ರೇಲ್ವೆದಿಂದಾಗಲೀ ಮೋಟಾರದಿಂದಾಗಲೀ ಹೋಗಬಹುದು. ಅಲ್ಲಿಂದ ಮುಂದೆ ಮಂಗಳವೇಢೆಗೆ ಕೇವಲ ಮೋಟಾರ ವಾಹನದ ಸೋಯಿಯು ಚನ್ನಾಗಿದೆ. ಮಂಗಳವೇಢೆಯ ಮೋಟಾರ ಸ್ಟ್ಯಾಂಡಿನ ಮೇಲೆ ಇದ್ದ ಪರಿಷತ್ತಿನ ಸ್ವಯಂಸೇವಕರು ತಮ್ಮನ್ನು ಪರಿಷತ್ತಿನ ಮಂಟಪಕ್ಕೂ ಮತ್ತು ಇಳಕೊಳ್ಳುವ ಸ್ಥಳಕ್ಕೂ ಮುಟ್ಟಿಸುವರು.

ವಿನಂತಿಯು.

ತಾವು ತಮ್ಮ ಯಾವತ್ತು ಜಾತಿಬಾಂಧವರೊಂದಿಗೆ ಪರಿಷತ್ತಿನ ಕಾರ್ಯದಲ್ಲಿ ಭಾಗ ವಹಿಸಿ ಈ ಪರಿಷತ್ತು ಯಶಸ್ವಿಯನ್ನಾಗಿ ಮಾಡಲು ಸ್ವಾಗತ ಮಂಡಳವು ತಮ್ಮನ್ನು ವಿನಂತಿಸುತ್ತದೆ. ಪರಿಷತ್ತಿಗೆ ಎಲ್ಲ ಜಾತಿಬಾಂಧವರು ಆಗಮಿಸುವಂತೆ ತಾವು ಕಾಳಜೀ ಪೂರ್ವಕವಾಗಿ ಪ್ರಯತ್ನ ಪಟ್ಟು ಸಮಾಜ

ಕಾರ್ಯಕ್ಕೆ ನೆರವಾಗುವಿರೆಂದು ನಮಗೆ ದೃಢವಾದ ನಂಬಿಗೆಯುಂಟು.

ಪರಿಷತ್ತಿಗೆ ಬರುವವರು ನಮಗೆ ಮುಂಗಡ ತಿಳಿಸದೆ ಪರಿಷತ್ತಿಗೆ ಬಂದರೂ ಯಾವದೇ ಗೈರಸೋಯಿಯಾಗುವಂತಿಲ್ಲ. ಆದಾಗ್ಯೂ "ನಾವು ಆಗಮಿಸುವೆವು" ಎಂಬದನ್ನು ಮೊದಲಿಗೆ ತಿಳಿಸಿದಲ್ಲಿ ನಮಗೆ ಬಹಳೇ ಅನುಕೂಲತೆಯಾಗವದು.

ತಮ್ಮ
ಕೃಪಾಕಾಂಕ್ಷಿಗಳಾದ

ಶಿವಪ್ಪ ಭೀಮಾ ಕುದರಿ — **ಅವುಬಾ ಹೊನ್ನಪ್ಪ ಭೀಮುದೆ**
ಸೆಕ್ರೆಟರಿ. — ಸ್ವಾಗತಾಧ್ಯಕ್ಷ

ವೀರಶೈವ ಬಡ ವಿದ್ಯಾರ್ಥಿಗಳಿಗೆ.

ಶಿವಾನುಭವ ವ ಇಂಗ್ಲೀಷ ಕಲಿಯುವ ಎಲ್ಲ ವೀರಶೈವ ಬಡವಿದ್ಯಾರ್ಥಿಗಳಿಗೆ ತಿಳಿಸುವದೇನಂದರೆ ಪದ್ಧತಿಯಂತೆ ಈ ವರ್ಷ ಬೋರ್ಡಿಂಗಿನಲ್ಲಿ ಸೇರಲಪೇಕ್ಷಿಸುವವರು ಸದ್ಯದಲ್ಲಿ ಇದ್ದವರು ಸಹ ತಾ. ೧೪-೬-೩೬ ನೇ ಇಶ್ವಿಯೊಳಗಾಗಿ ಬೋರ್ಡಿಂಗಿಗೆ ಮುಟ್ಟುವಂತೆ ಅರ್ಜಿ ಕಳಿಸಬೇಕು. ಅರ್ಜಿಗಳನ್ನು ಬೋರ್ಡಿಂಗಿನಲ್ಲಿ ದೊರೆಯುವ ಛಾಪಿ ನಮೂನೆಗಳ ಮೇಲೆಯೇ ಮಾಡತಕ್ಕದ್ದು ಮುದ್ದತು ಮೀರಿ ಬಂದ ಅರ್ಜಿಗಳ ಮತ್ತು ಪೂರ್ಣ ಮಾಹಿತಿಯಿಲ್ಲದ ವ ಕೈ ಬರಹದ ಅರ್ಜಿಗಳು ವಿಚಾರವಾಗಲಾರವು. ಸದರಿ ಅರ್ಜಿ ಫಾರ್ಮುಗಳು ಸಂಸ್ಥೆಯ ಆಫೀಸಿನಲ್ಲಿ ಉಚಿತವಾಗಿ ದೊರೆಯುವವು. ಸಮಕ್ಷಮ ಬಂದು ಅಥವಾ ಅಂಚೆ ತಿಕೀಟು ಒಂದು ಆಣೆಯದು ಇಟ್ಟು ಕಳಿಸಿದಲ್ಲಿ ಅರ್ಜಿ ಫಾರ್ಮುಗಳು ಕಳಿಸಲ್ಪಡುತ್ತವೆ.

ಸಂಸ್ಥೆಯ ಜನರಲ್ ಕಮೀಟಿಯ ಮೆಂಬರರುಗಳಿಗೆ ಈ ನೋಟೀಸ ಮೂಲಕ ತಿಳಿಸುವದೇನಂದರೆ ಈ ವರ್ಷ ವಿದ್ಯಾರ್ಥಿಗಳನ್ನು ತಗೊಳ್ಳುವದರ ಬಗ್ಗೆ ಬಂದ ಅರ್ಜಿಗಳ ವಿಚಾರ ತಾ. ೧೪-೬-೩೬ ರವಿವಾರ ಮುಂಜಾನೆ ೮ ಘಂಟೆಗೆ ಸಂಸ್ಥೆಯಲ್ಲಿ ಕಮೀಟಿಯು ಕೂಡುವದು ಆ ಸಮಯಕ್ಕೆ ತಾವು ಬರಬೇಕಾಗಿ ವಿನಂತಿ.

ಬಸಪ್ಪ ದೊಡ್ಡಫಕೀರಪ್ಪ ಲಕಮನಹಳ್ಳಿ
ಚೇರಮನ್.
ಶ್ರೀ. ಮ. ನಿ. ಜ. ಮುರುಘಾರಾಜೇಂದ್ರ ಫ್ರೀ ಬೋರ್ಡಿಂಗ.

ಮಹತ್ವದ ಸುದ್ದಿಗಳು.

—ಪಂಚಮಜಾರ್ಜ ಚಕ್ರವರ್ತಿಗಳ ಸ್ಮಾರಕಕ್ಕಾಗಿ ಮುಂಬೈಯಲ್ಲಿ ಒಂದು ಔಷಧಾಲಯ ಮತ್ತು ಅನಾಥಾಲಯ ಕಟ್ಟಲ್ಪಡುವವು. ಅವುಗಳಿಗಾಗಿ ೫ ಲಕ್ಷ ರೂ. ಕೂಡಬೇಕಾಗಿದೆ ಈಗ ೨ ಲಕ್ಷ ರೂ. ಕೂಡಿವೆ.

— ಮುಂಬೈ ಅಪಾಲೋ ಬಂದರದ ಹತ್ತರ ಕಟ್ಟಲ್ಪಟ್ಟ ಶ್ರೀಮಾನ್ ಗೋಸ್ವಾಮಿ ಧನರಾಜ ಗಿರಜಿ ಇವರ "ಧನರಾಜ ಮಹಾಲ" ಎಂಬುದಕ್ಕೆ ೨೪ ಲಕ್ಷ ರೂ. ಗಳು ವೆಚ್ಚವಾಗಿವೆಯಂತೆ.

—ಪುಣೆಯಲ್ಲಿಯ ಶೀಖ ಮಂದಿರದಲ್ಲಿ ೨-೩ ನೂರು ಅದಿಜನರು ಕೂಡಿದ್ದರು. ಅವರಿಗೆ ಶೀಖಧರ್ಮದಲ್ಲಿ ಬರಲು ಉಪದೇಶ ಮಾಡಿದರು.

— ರಾವಳಪಿಂಡಿಯಲ್ಲಿ ಶೀಖ ಮತ್ತು ಮುಸಲ್ಮಾನರಲ್ಲಿ ದೊಂಬಿಯಾಗಿ ನಾಲ್ಕು ಜನ ಶೀಖರಿಗೆ ತುಂಬಾ ಗಾಯವಾಗಿದೆ.

ವರನು ಬೇಕು.

—::೦::—

ಲಿಂಗಾಯತ ಸುಶಿಕ್ಷಿತ ವರನು ಬೇಕಾಗಿದೆ. ಕನ್ಯೆಯು ಸುಶಿಕ್ಷಿತಳಿದ್ದು ಇಂಗ್ಲೀಷ ನಾಲ್ಕನೆಯ ಈಯತ್ತೆಯ ವರೆಗೆ ಕಲಿತಿದ್ದಾಳೆ. ರೂಪು ಸುಂದರ. ವರ್ಣ ಮನೋಹರ. ಗೃಹಕೃತ್ಯಗಳಲ್ಲಿ ದಕ್ಷಳು.

ವರನ ಸ್ಥಾವರ ಉತ್ಪನ್ನವಿದ್ದರಂತೂ ನೆಟ್ಟಗೆ. ಇಲ್ಲದಿದ್ದರೆ ಸ್ವಂತ ಬುದ್ಧಿ ಬಲದಿಂದ ಅರ್ಜನೆ ಮಾಡುವವನಾಗಿರಬೇಕು. ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಿರಿ

B. C|o
ಶರಣ ಸಂದೇಶ ಆಫೀಸ, ಆಲಮಟ್ಟಿ.

ಹೊಸದು ! **ತೀರ ಹೊಸದು !!**

ಅರವಿಂದ ಗ್ರಂಥಮಾಲೆ.

—:◆:—

ಸಂಪಾದಕರು:— **ಮ ಧು ರ ಚೆ ನ್ನ ರು.**

ವಿಚಾರ ಪ್ರಚುರ ವಾಙ್ಮಯವನ್ನು ಒದಗಿಸುವ, ಸುರಸ ಸಾಹಿತ್ಯವನ್ನು ಸೂರೆಗೊಳಿಸುವ ಒಂದೇ ಒಂದು ಗ್ರಂಥಮಾಲೆಯೆಂದರೆ ಇದೇ. ೧೦೦ ರಿಂದ ೧೨೫ ಪುಟಗಳ ಆರು ಪುಸ್ತಕಗಳು. ಅಲ್ಲದೆ ಕಾಣಿಕೆಯ ಪುಸ್ತಕವೊಂದು ಕೊಡಲ್ಪಡುವದು. ಮೊದಲನೆಯ ಪುಷ್ಪವಾದ 'ನಂದನವನ' ವು ಈಗಾಗಲೇ ಅರಳಿದೆ. ಬೆಲೆ ರೂ ೩-೮-೦.

ವಿಳಾಸ:—
'ಅರವಿಂದ ಗ್ರಂಥಮಾಲಾ' ಕಾರ್ಯಾಲಯ
ಪೋ. ಹಲಸಂಗಿ ಜಿ. ವಿಜಾಪುರ.

ತ್ವರೆಮಾಡಿರಿ! ತ್ವರೆಮಾಡಿರಿ!!

ಬಸವ ಭೂಮಿ.

ಶ್ರೀ ಮಾಗಾಂವ ಶರಣಯ್ಯನವರಿಂದ ರಚಿಸಲ್ಪಟ್ಟ ಬಸವಭೂಮಿಯೆಂಬ ಈ ಚಿಕ್ಕ ಪುಸ್ತಕದಲ್ಲಿ, ಸಾಧಾರಣ ೩೦-೩೫ ಪದ್ಯಗಳು ಇರುತ್ತವೆ ಈ ಪದ್ಯಗಳಲ್ಲಿ ಬಸವಾದಿ ಪ್ರಮಥರು ಮಾಡಿದ ಧಾರ್ಮಿಕ ಕ್ರಾಂತಿಯನ್ನು ಶುಲಭ ರೀತಿಯಿಂದ ವರ್ಣಿಸಲಾಗಿದೆ. ಪುಸ್ತಕವು ಸದ್ಯಃ ಪ್ರಿಂಟಿನಲ್ಲಿದ್ದು, ರಾಯಚೂರಿನಲ್ಲಿ ಕೂಡುವ ೧೨ ನೆಯ ವೀರಶೈವ ಮಹಾಸಭೆಯ ಕಾಲಕ್ಕೆ ಮಾರಲ್ಪಡುವವು. ಬೆಲೆ ರೂ. ೦-೨-೦.

ನೋಟ :— ಈ ಪುಸ್ತಕದಲ್ಲಿ, ರಸವತ್ತಾದ ಕೆಲವು ಹಿಂದೀ ಪದ್ಯಗಳೂ ಕೂಡ ಇರುತ್ತವೆ.

ವಿಳಾಸ:— **ಕಲ್ಯಾಣ ಕರ್ನಾಟಕ ಬುಕ್ ಡಿಪೊ**
ಗುಲಬರ್ಗಾ.

ಪ ತ್ರ ಗ ಳ ಸಾ ರಾ ಂ ಶ.

ನೈಜಾಮ ಸ್ಟೇಟ ಪೈಕಿ ಚಿಂಚೋಳ್ಳಿಯಲ್ಲಿ ದೀಕ್ಷಾ ಸಮಾರಂಭ.

—:(◆):—

ಪುರಾಣ ಮತ್ತು ಪಟ್ಟಾಭಿಷೇಕ ಮಹೋತ್ಸವದ ಚಿಂಚೋಳ್ಳಿ ದೈವ ಮಂಡಳಿಯು ತಾ. ೬-೫-೩೬ ನೇ ದಿವಸ ಶ್ರೀಮನ್ನಿರಂಜನ ಬಂಥನಾಳ ಶಿವಯೋಗಿಗಳನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಶ್ರೀ ರೇವಣ ಸಿದ್ಧೇಶ್ವರ ಪುರಾಣ ಪ್ರವಚನವನ್ನು ೧೨ ದಿವಸಗಳ ವರೆಗೆ ಮಾಡಿಸಿದವರಾದರು. ನಿತ್ಯ ಸಾವಿರಾರು ಜನರು ಶ್ರೋತೃಗಳಾಗಿ ನೆರೆಯುತ್ತಿದ್ದರು. ಕಡೆಯ ದಿವಸ ತಾ. ೧೭-೫-೩೬ ನೆಯ ದಿವಸ ಶ್ರೀ ಶಿವಯೋಗಿಗಳ ಸನ್ನಿಧಿಯಲ್ಲಿ ಮಾಳಕೋಟಿ ಸಂಚಾರಿ ಪಟ್ಟಾಧ್ಯಕ್ಷರು ಆ ಊರ ಹಿರೇಮಠದ ರುದ್ರದೇವರಿಗೆ ಚರ ಪಟ್ಟಾಧಿಕಾರವನ್ನು ಕೊಡುವವರಾದರು. ಅಲ್ಲಿ ಹಿರೇಮಠದ ಶಿದ್ಧರಾಮ ಪಟ್ಟದ ಸ್ವಾಮಿಗಳು ಮೊದಲಾದವರು ಆಗಮಿಸಿದ್ದರು. ಅನ್ನ ಸಂತರ್ಪಣೆ ಪಲ್ಲಕ್ಕಿ ಉತ್ಸವ ಮೊದಲಾದವುಗಳು ಒಳ್ಳೇ ತೃಪ್ತಿಕರವಾಗಿ ಜರುಗಿದವು. ಮತ್ತು ಲಿಂಗ ಬಿಟ್ಟು ತಿರುಗುವ ೨೦೦ ಲಿಂಗಾಯತರಿಗೆ ಲಘು ದೀಕ್ಷೆಯಿಂದ ಲಿಂಗಧಾರಣ ಮಾಡಲ್ಪಟ್ಟಿತು. ಕಡೆಯ ದಿವಸ ಸಭೆ ನೆರೆದು ಅಳ್ಳಗಿ ಗುರುಶಾಂತ ಶಾಸ್ತ್ರಿಗಳು, ಮಸೂತಿ ಶಂಕರ ಶಾಸ್ತ್ರಿಗಳು, ಬಸರಕೋಡದ ಕರಿಬಸವ ಶಾಸ್ತ್ರಿಗಳೇ ಮೊದಲಾದವರು ವೀರಶೈವರ ನಿಜ ಆಚರಣೆಯ ಪರವಾಗಿ ಭಾಷಣ ಮಾಡಿದವರಾದರು. ಜುಟ್ಟು ಜನಿವಾರಾದಿ ಆಚರಣೆಗಳನ್ನು ವೀರಶೈವ ಲಕ್ಷಣ ಪರವಾಗಿ ಹೇಳುವ ವೀರಶೈವ ವಿಧ್ವಂಸಕ ಚಳವಳಖೋರರ ಮಾತಿಗೆ ಯಾರೂ ಮೋಸ ಹೋಗಬಾರದೆಂದು ಒಳ್ಳೇ ಕಳಕಳಿಯಿಂದ ಮಾತಾಡಿದವರಾದರು. ಅಂತು ಸರ್ವ ಕಾರ್ಯಗಳು ಆ ಭಗವಾನ್ ಬಸವಾಚಾರ್ಯನ ಕೃಪೆಯಿಂದ ಸಾಂಗೋಪಾಂಗವಾಗಿ ಜರುಗಿದವೆಂದು ತಿಳಿಸಲು ಸಂತೋಷವೆನಿಸುತ್ತದೆ.

ಪ್ರತ್ಯಕ್ಷದರ್ಶೀ.

ವೀರಶೈವ ಧರ್ಮದ ನಿಜತತ್ವ ಪ್ರಚಾರ.

ತಾರೀಖು ೧೯-೫-೧೯೩೬ನೇ ದಿವಸ ಹಿರೇಕೆರೂರ ವೀರಶೈವ ಸಮಾಜದ ಜಾಯಂಟ ಸೆಕ್ರೆಟರಿಗಳಾದ ಶ್ರೀ. ಪುಟ್ಟಪ್ಪನವರು ಹಳಕಟ್ಟೆ ಇವರ ವಿಜ್ಞಾಪನೆಯ ಪ್ರಕಾರ ಶ್ರೀ. ಅನ್ನದಾನೀಶ್ವರ ಸ್ವಾಮಿ ವಿರಕ್ತಮಠ ಇವರು ವೀರಶೈವ ಧರ್ಮದ ನಿಜತತ್ವ ಪ್ರಚಾರಕ್ಕಾಗಿ ಆಗಮಿಸಿದರು. ಪರಮಪೂಜ್ಯ ಮೃತ್ಯುಂಜಯ ಮಹಾಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿರುವ ಶಿವಾನುಭವ ಮಂಟಪದಲ್ಲಿ ಹೆಣ್ಣುಮಕ್ಕಳನ್ನು ಕುರಿತು ಪ್ರವಚನ ಸಾಗಿಸಿದರು.

ತಾರೀಖು ೨೦-೫-೩೬ ನೇ ದಿವಸ ಶ್ರೀ. ಪುಟ್ಟಪ್ಪನವರ ಕೂಡ ಶಿರಾಳಕೊಪ್ಪ ಶಿಕಾರಿಪುರಗಳಿಗೆ ಹೋಗಿ ಶಿಕಾರಿಪುರದಲ್ಲಿ ನಾಲ್ಕು ದಿವಸ ಪ್ರವಚನ ನಡೆಸಿದರು. ಸ್ತ್ರೀಯರಲ್ಲಿ ಒಳ್ಳೇ ಜಾಗೃತಿಯಾಯಿತು.

ಸಿದ್ಧರಾಮೇಶ್ವರ ಸದುಪದೇಶ ಎಂಬ ಇಪ್ಪತ್ತು ಚಿಕ್ಕ ಪುಸ್ತಕಗಳನ್ನು ತರಿಸಲು ಹೆಣ್ಣು ಮಕ್ಕಳು ದ್ರವ್ಯದ ಅನುಕೂಲ ಮಾಡಿಕೊಟ್ಟರು.

ಶ್ರೀ ಮಹಾದೇವಪ್ಪ ಹೊನ್ನಶೆಟ್ಟರು— ಇವರು ಸದಾಚಾರಿಗಳಿದ್ದು ತಮ್ಮ ಮನೆಯ ಮಹಡಿಯ ಮೇಲೆ ಶಿವಾನುಭವ ಸಾಗಲು ಒಳ್ಳೇ ಶಿಸ್ತಿನ ಏರ್ಪಾಟ ಮಾಡಿದ್ದರು ಕಪನಳ್ಳಿ ಶಿವಯೋಗ ಮಂದಿರಕ್ಕೆ ಸ್ವಾಮಿಯವರನ್ನು ಕರೆದುಕೊಂಡು ಹೋಗಿದ್ದರು.

ತಾರೀಖು ೨೪-೫-೩೬ ನೇ ದಿವಸ ಶಿಕಾರಿಪುರದಿಂದಾ ಶಿರಾಳಕೊಪ್ಪಕ್ಕೆ ಶ್ರೀ ಪುಟ್ಟಪ್ಪನವರೊಡನೆ ಹೋಗಿ ಅಲ್ಲಿ ಪ್ರವಚನ ನಡೆಯಿಸಿ ಸಮೀಪದಲ್ಲಿದ್ದ ಬೆಳ್ಳಿಗಾವಿ ಎಂಬ ಪ್ರಸಿದ್ಧ ಐತಿಹಾಸಿಕ ಧರ್ಮದ ಪ್ರಾಚೀನ ಸ್ಥಳವನ್ನು ನೋಡಿ, ಹಿರೇಕೆರೂರ ಮಾರ್ಗವಾಗಿ ಹುಬ್ಬಳ್ಳಿ ಪ್ರಾತಿನಿಧಿಕ ಸಭೆಗೆ ಹೋದರು.

ತಾ|| ೨೪-೫-೩೬. ಜಾಯಂಟ ಸೆಕ್ರೆಟರಿ
ವೀರಶೈವ ಸಮಾಜ, ಹಿರೇಕೆರೂರ.

ಕಲಾಮಂದಿರ ಧಾರವಾಡ.

ಈ ಕಲಾಮಂದಿರವು ರಾಜಾ ಲಖಮಗೌಡಾ ಸರದೇಸಾಯಿ ಹಾಯಸ್ಕೂಲಿನಲ್ಲಿ ೧೯೩೫ ನೆಯ ಇಸ್ವಿಯ ಜೂನ್ ತಿಂಗಳಲ್ಲಿ ಸುರುವು ಆದದ್ದು ಎಲ್ಲರಿಗೂ ವಿದಿತವಿರುತ್ತದೆ. ಇಲ್ಲಿಯ ವಿದ್ಯಾರ್ಥಿಗಳು ೧೯೩೬ ನೇ ಇಸ್ವಿಯ ಮಾರ್ಚ ತಿಂಗಳಲ್ಲಿ ಮುಂಬಯಿ ಸರ್. ಜೇ. ಜೇ. ಸ್ಕೂಲ ಆಫ್ ಆರ್ಟದಲ್ಲಿ ನೆರೆದ ಪರೀಕ್ಷೆಗೆ ಕೂತು ಉತ್ತಮ ರೀತಿಯಿಂದ ಎಲ್ಲರೂ ಪಾಸಾಗಿರುತ್ತಾರೆ. ಪಾಸಾದವರ ಪರಿಣಾಮವು ಗವ್ಹರ್ನಮೆಂಟ ಗ್ಯಾಝಿಟದಲ್ಲಿ (೧-೫-೩೬) ಪ್ರಸಿದ್ಧಿಸಲ್ಪಟ್ಟಿರುತ್ತದೆ. ಮುಂಬಯಿಯ ಸರ್. ಜೇ. ಜೇ. ಸ್ಕೂಲ ಆಫ್ ಆರ್ಟ ಡ್ರಾಯಿಂಗ ಆ್ಯಂಡ್ ಪೇಂಟಿಂಗ ಸೆಕ್ಶನ್‌ದಲ್ಲಿ ಕಲಿಸುವವನ್ನು ವಿಷಯಗಳು ಇಲ್ಲಿ ಸ್ವಲ್ಪೇ ಅವಧಿಯಲ್ಲಿ ಮತ್ತು ಸ್ವಲ್ಪ ಖರ್ಚಿನಲ್ಲಿ ಉತ್ತಮ ರೀತಿಯಿಂದ ಕಲಿಸಲ್ಪಡುವವು.

ಈ ಕ್ಲಾಸುಗಳು ಪುನಃ ಇದೇ ಜೂನ್ ತಿಂಗಳ ೧ನೇ ತಾರೀಖಿನಿಂದ ಅದೇ ಹಾಯಸ್ಕೂಲಿನಲ್ಲಿ ಸುರುವು ಆಗುವವು. ಆದ್ದರಿಂದ ಇಲ್ಲಿಗೆ ಬರಲಿಚ್ಛಿಸುವವರು ಈ ಮಂದಿರದ ಪ್ರಾಸ್ಪೆಕ್ಟಸ್ ತರಿಸಿಕೊಂಡು ತಮಗೆ ಇಚ್ಛಿತವಾದ ಕ್ಲಾಸಿಗೆ ಬರಲಿಕ್ಕೆ ಆದಷ್ಟು ಇದೇ ತಿಂಗಳಲ್ಲಿ ಪ್ರಿನ್ಸಿಪಾಲರ ಕಡೆಗೆ ಅರ್ಜಿ ಕಳಿಸಬೇಕು. ಸ್ಥಳಗಳು ನಿಯಮಿತವಿರುವದರಿಂದ ಬೇಗನೇ ಅರ್ಜಿ ಮಾಡಿದವರಿಗೆ ಹೆಚ್ಚು ಸವಲತ್ತು ಸಿಗುವದು.

ಪ್ರಾಸ್ಪೆಕ್ಟಸ್ ತರಿಸಿಕೊಳ್ಳುವವರು ೨ ಆಣೆ ಪೋಸ್ಟಲ್ ಸ್ಟಾಂಪುಗಳನ್ನು ಕಳಿಸಬೇಕು.

೧೪-೫-೩೬	ಪ್ರಿನ್ಸಿಪಾಲ, ದಾ. ವೀ. ಹಾಲಭಾವಿ.
ಕಲಾಮಂದಿರ	ಎ. ಎಂ. ಜಿ. ಡಿ. ಆರ್ಟ
ಧಾರವಾಡ	ಮುಂಬಯಿ

ಜಾಹೀರ ಸೂಚನೆ.

ನರೋಣಿ ಕ್ಷೇತ್ರದಲ್ಲಿರುವ ಹಿರೇಮಠದ ಶಿಷ್ಯ ಮಂಡಳಿಗೆ ಜಾಹೀರ ಸೂಚನೆ—

ಸದರೀ ಮಠದ ಶಿಷ್ಯ ಮಂಡಳಿ ದಾವಣಗೇರಿ, ಚಿತ್ರದುರ್ಗ, ಗದಗ, ಹುಬ್ಬಳ್ಳಿ ವಗೈರೆ ಕಡೆ ಇದ್ದು ಈಗ ಅವರಲ್ಲಿಗೆ ಈ ಭಾಗದ ಯಾರೋ ಒಬ್ಬರು ನಾವೇ ಗುರುಗಳೆಂದು ಬಂದು ಶಿಷ್ಯರನ್ನು ಮೋಸಗೊಳಿಸಲಿಕ್ಕೆ ಹತ್ತಿರುವರೆಂದು ಕೇಳಿದ್ದೇವೆ. ಇದು ನಿಜವಿದ್ದ ಪಕ್ಷದಲ್ಲಿ ಸದರೀ ಮಠದ ಶಿಷ್ಯ ಮಂಡಳಿ ಅಲ್ಲಿ ಹಿರೇಮಠದ ಶ್ರೀ ಶಿದ್ಧರಾಮ ಪಟ್ಟದದೇವರ ಕಡೆಗೆ ಪತ್ರವ್ಯವಹಾರ ಅಥವಾ ಸಮಕ್ಷಮ ಭೆಟ್ಟಿಯಾದಲ್ಲಿ ಸರ್ವ ವಿಷಯ ಖುಲಾಸ ಆಗುವದು.

ಅಲ್ಲಿ ಪಟ್ಟದ ಸ್ವಾಮಿಗಳು.

ಅಪೂರ್ವ ಶೋಧ! ಅಪೂರ್ವ ಶೋಧ!!

ಜರ್ಮನಿಯವರು ತಯಾರಿಸಿದ ವಿಷದ ಲಾಯಿಟು ಈಗ
ಹಿಂದುಸ್ಥಾನದಲ್ಲಿಯೇ ಸಿದ್ಧವಾಗುವಂತಾಗಿದೆ.

ಕೃಮಿನಾಶಕ ಲಾಯಿಟ.

ಸುಖವಾದ ನಿದ್ರೆಯೂ ಆರೋಗ್ಯವೂ ಬೇಕಾಗಿದ್ದರೆ ಇದನ್ನುಪಯೋಗಿಸಿರಿ. ಬರೇ ಪ್ರಕಾಶದಿಂದಲೇ ಸಾಂಕ್ರಾಮಿಕ ರೋಗಗಳನ್ನು ಹೆಚ್ಚಿಸುವ ಮತ್ತು ಭಯಂಕರ ತ್ರಾಸಕೊಡುವ ತಗಣಿ, ದೋಮಿ, (ಗುಂಗಾಡಿ) ಚಿಕ್ಕಾಡ, ಪ್ಲೇಗಕೃಮಿ, ಇಲಿ, ವಗೈರೆ ಪ್ರಾಣಿಗಳು ಮಾಯವಾಗುವವು. ಬಡಬಗ್ಗರಿಗೂ ಕೂಡ ಸುಲಭವಾಗಿ ದೊರೆಯಬೇಕೆಂದು ಕಿಮ್ಮತ್ತನ್ನು ಕಡಿಮೆ ಮಾಡಲಾಗಿದೆ. ಇದರ ಉಪಯೋಗದಿಂದ ಮನುಷ್ಯನಿಗೆ ಯಾವ ತರದ ಅಪಾಯವೂ ಇಲ್ಲ. ಉಪಯೋಗಿಸುವ ವಿಧಾನವು ಬಾಟ್ಲಿಯ ಸಂಗಡಲೇ ಇರುವದು. ೯ ದಿವಸಕ್ಕೆ ಸಾಲುವಷ್ಟು ೧ ಬ್ಯಾಟ್ಲಿಗೆ ೦-೪-೦ ೧ ಡಜನ್ನಿಗೆ ೨-೧೨-೦. ವ್ಹಿ. ಪಿ. ಚಾರ್ಜ ಬೇರೆ.

ಕೆಳಗಿನ ಪ್ಲೇಗ ಸಂಜೀವಿನಿ ಆಫೀಸುಗಳಲ್ಲಿಯೂ ಎಜೆಂಟ್‌ರಲ್ಲಿಯೂ ದೊರೆಯುವದು.

ಪ್ಲೇಗ ಸಂಜೀವಿನಿ ಆಫೀಸ. ಸೋಲಾಪುರ.
" " ಹುಬ್ಬಳ್ಳಿ.
" " ಬೆಳಗಾಂವ

ಏಜೆಂಟರು.
ಬಸೆಟ್ಟೆಪ್ಪ ಹಲಕುರ್ಕಿ ಬಾಗಲಕೋಟ.
ಎಸ್. ಚಂದ್ರಪ್ಪ ತಾಂಡೂರ
ಪ್ಲೇಗ ಸಂಜೀವಿನಿ ಆಫೀಸ ಗುಲಬರ್ಗಾ.

ಕಾಲರಾ ಸಂಜೀವಿನಿ.

ಕಾಲರಾ—
ಇದು ಮಾನವ ಚಿಕಿತ್ಸೆಗೆ ಮೀರಿದ ರೋಗವೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಿರಿ. ಈ ದಿವ್ಯ ವನಸ್ಪತಿಯು ಮಹಾ ತಪಸ್ವಿಗಳಿಂದ ಶೋಧವಾಗಿದೆ. ಈ ಸಂಜೀವಿನಿ ಚೂರ್ಣವನ್ನು ಒಂದೇ ಸಾರೆ ತೆಗೆದುಕೊಂಡರೆ ಸಾಕು. ತಪ್ಪದೆ ತಟ್ಟನೆ ಗುಣವಾಗುವದು. ಆಗ ನಿಮಗೆ ಖಂಡಿತವಾಗಿಯೂ ಆಶ್ಚರ್ಯವೂ ಆನಂದವೂ ಉಂಟಾಗುವವು.

—ಸಂಜೀವಿನಿ.

ಬೆಲೆ—
೧ ರೂ. ೫ ಆ.

ವಿಳಾಸ— ಪ್ಲೇಗ ಸಂಜೀವಿನಿ ಆಫೀಸ್, ಗುಲಬರ್ಗಾ.

ವೀರಶೈವ ಮಹಾಶಯರೇ,

ಸತ್ಯ ಸಂಗತಿಗಳನ್ನು ತಿಳಿದುಕೊಳ್ಳಲು ಅಪೇಕ್ಷಿಸುವಿರಾ ?

ಹಾಗಾದರೆ

ವೀರಶೈವ

ಮತಾಚಾರ್ಯರ ಕಾಲನಿರ್ಣಯ

ಎಂಬ ಪುಸ್ತಕವನ್ನು ಜಾಗ್ರತೆ ತರಿಸಿಕೊಂಡು ಓದಿರಿ.

ಇದರಲ್ಲಿ ಶ್ರೀ ರೇವಣಸಿದ್ಧ ಶ್ರೀ ಮರುಳಸಿದ್ಧ ಶ್ರೀ ಪಂಡಿತಾರಾಧ್ಯ
ಶ್ರೀ ಏಕೋರಾಮ ಶ್ರೀ ವಿಶ್ವಾರಾಧ್ಯ ಶ್ರೀ ಬಸವಣ್ಣ
ಈ ಮಹಾಪುರುಷರ ಕಾಲಮಾನವನ್ನು ಕುರಿತು
ಐತಿಹಾಸಿಕ ಪ್ರಬಲ ಪ್ರಮಾಣಗಳಿಂದ

ಶ್ರೀಮಾನ್ ಕರ್ಲಮಂಗಲಂ ಶ್ರೀಕಂಠಯ್ಯನವರು

ಬಹು ಸೊಗಸಾಗಿ ಬರೆದಿದ್ದಾರೆ.

೮೪ ಪುಟಗಳು. ಅಂದವಾದ ಮುದ್ರಣ.

ಕ್ರಯ ೧೨ ಆಣೆ ಇದ್ದದ್ದನ್ನು ೬ ಆಣೆಗೆ ಇಳಿಸಿದೆ.

೧೨ ಪುಸ್ತಕಗಳಿಗೆ ೪ ರೂ. ಅಂಚೆಯ ವೆಚ್ಚ ಬೇರೆ

ಸೂಚನೆ:— ಮೂರು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ವ್ಹಿ. ಪಿ. ಮೂಲಕ ಕಳಿಸುವದಾಗುತ್ತದೆ. ಒಂದೆರಡು ಪುಸ್ತಕಗಳನ್ನು ಅಪೇಕ್ಷಿಸತಕ್ಕವರು ಪೋಸ್ಟಚಾರ್ಜ ಸಹಿತ ಟಿಕಿಟ ಕಳಿಸಿದರೆ ಬುಕ್ ಪೋಸ್ಟ ದ್ವಾರ ಕಳಿಸಲಾಗುತ್ತದೆ.

ಪುಸ್ತಕ ದೊರೆಯುವ ವಿಳಾಸ-

ಜ್ಞಾನೋದಯ ಗ್ರಂಥಭಾಂಡಾರ ಆಲಮಟ್ಟಿ
ಪೋ. ಆಲಮಟ್ಟಿ ಜಿ. ವಿಜಾಪುರ

ಶ್ರೀ ಬಿ. ವಿಶ್ವನಾಥಪ್ಪ ಮಂಡಿ ಮರ್ಚಂಟ್
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಸ್ಥಳೀಯ ಸಂಸ್ಥೆಗಳ ಪತ್ರಿಕೆ.

ಪ್ರತಿ ತಿಂಗಳ ತಾ|| ೧ ಮತ್ತು ೧೫ ರಲ್ಲಿ ಪ್ರಕಟವಾಗುವ ಪಕ್ಷಪತ್ರಿಕೆ.

ಜಿಲ್ಲಾ ಬೋರ್ಡ್, ಪೌರಸಭೆ, ಗ್ರಾಮಪಂಚಾಯತಿ ಮುಂತಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಇತಿಹಾಸ, ಮೂಲತತ್ವ, ಆಡಳಿತ ಮುಂತಾದ ವಿಚಾರಗಳಲ್ಲಿ ನುರಿತ ಲೇಖಕರಿಂದ ಬರೆಯಲ್ಪಟ್ಟ ಬೋಧಪ್ರದ ಲೇಖಗಳನ್ನೂ, ಆ ಸಂಸ್ಥೆಗಳ ಕಾರ್ಯಕ್ರಮ ಮತ್ತು ಘಟನೆಗೆ ಸಂಬಂಧಪಟ್ಟ ವಿಶೇಷ ಸಮಾಚಾರಗಳನ್ನೂ, ಸ್ಥಾನಿಕ ಸ್ವರಾಜ್ಯ ಸಂಬಂಧವಾದ ದೇಶವಿದೇಶ ವರ್ತಮಾನಗಳನ್ನೂ ಪ್ರಕಟಿಸುವ ಪತ್ರಿಕೆ.

ಇತರ ಸಂಗತಿಗಳೂ ವಿಶೇಷ ವರ್ತಮಾನಗಳೂ ಸಹ ಪ್ರಕಟವಾಗುವವು.

ಇದೀ ಕನ್ನಡ ನಾಡಿನಲ್ಲಿ ಇಂತಹ ಪತ್ರಿಕೆಯು ಇದೊಂದೇ !

ವಾರ್ಷಿಕಚಂದಾ:— ೨ ರೂಪಾಯಿ; ಸಂಸ್ಥೆಗಳಿಗೆ ೫ ರೂಪಾಯಿ.

ವಿಳಾಸ:— ಟಿ. ಯಾ. ಚನ್ನಪ್ಪ, ವ್ಯವಸ್ಥಾಪಕ ಸ್ಥಳೀಯ ಸಂಸ್ಥೆಗಳ ಪತ್ರಿಕೆ. ಗಾಂಧಿ ನಗರ, ಬೆಂಗಳೂರು ಸಿಟಿ.

ವೀರಶೈವ ಮತಬೋಧೆ.

——::೦::——

ಶ್ರೀ ಮಂಜಪ್ಪನವರು ಹರ್ಡೇಕರ ಇವರಿಂದ ರಚಿಸಲ್ಪಟ್ಟ ವೀರಶೈವ ಮತಬೋಧೆ ಎಂಬ ಪುಸ್ತಕವನ್ನು ಜಿ. ವೀರಭದ್ರಪ್ಪ ಹೈದರಾಬಾದ ಇವರಿಂದ ತೆಲುಗು ಭಾಷೆಯಲ್ಲಿ ಭಾಷಾಂತರಿಸಿದೆ. ಈ ಕೆಳಗಿನ ವಿಳಾಸಗಳಿಗೆ ಬರೆದು ತರಿಸಿಕೊಳ್ಳಿರಿ.

ಅಂಚೆ ತಿಕೀಟು ಕಳಿಸಿದಲ್ಲಿ ಬುಕ್-ಪೋಸ್ಟ ಮಾಡಲಾಗುವದು.

—ಬೆಲೆ ಒಂದಕ್ಕೆ ೩ ಆಣೆ. —

ಮ್ಯಾನೇಜರ
ಜ್ಞಾನೋದಯ ಗ್ರಂಥ ಭಾಂಡಾರ
ಪೋ. ಆಲಮಟ್ಟಿ.
ಜಿ. ವಿಜಾಪುರ.

ಜಿ. ವೀರಭದ್ರಪ್ಪ.
ಮನೆ ನಂ. ೩೧೩೬.
ಚುಡಿಬಝಾರ ಹಲಕಾ (೩
ಹೈದರಾಬಾದ. (ದಕ್ಷಿಣ)

ಶಿರಸಿಯಲ್ಲಿ

ಸಿದ್ಧೇಶ್ವರ ತಿಜೋರಿ ಮೇಲೆ ಕಳ್ಳರ ಹಲ್ಲಾ.

ಸಿದ್ಧೇಶ್ವರ ತಿಜೋರಿ ಕಾರಖಾನೆ ಹುಬ್ಬಳ್ಳಿ ಇವರಿಗೆ ಶಿರಸಿಯಿಂದ ಅವರ ತಿಜೋರಿ ಕೊಂಡ ರಾ|| ರಾ|| ಶಿವಬಸಪ್ಪ ಬೆಲ್ಲದ ಇವರಿಂದ ಬಂದ ಪತ್ರ—

ಮೊನ್ನೆ ಮೊನ್ನೆ ನಾವು ತಮ್ಮಲ್ಲಿ (ರೂ. ೩೨೫ ಕ್ಕೆ ೩ ಫೂಟು ಎತ್ತರದ್ದು) ತಿಜೋರಿ ಕೊಂಡದ್ದರಲ್ಲಿ ಮೊನ್ನೆಯೇ ಹೋದ ದೀಪಾವಳಿ ಲಕ್ಷ್ಮೀ ಪೂಜೆಯ ನಿಮಿತ್ಯ ನಮ್ಮ ಮನೆಯಲ್ಲಿಯ ಎಲ್ಲ ದಾಗೀನಗಳನ್ನೂ ವ ರೋಖಡಿ ರೂಪಾಯಿಗಳನ್ನೂ ಇಟ್ಟಿದ್ದೆವು. ಅದೇ ದಿವಸ ರಾತ್ರಿ ಯಾರೋ ಕಳ್ಳರು ನಮ್ಮ ಅಂಗಡಿ ಕೀಲಿ ಮುರಿದು ತಿಜೋರಿ ತೆರೆಯಲಿಕ್ಕೆ ಮಡೆಯಲಿಕ್ಕೆ ಹೊಡೆದು ಬಡೆದು ಕಚ್ಚ್ಯ ಹಾಕಿ ಅನೇಕ ತರಹದಿಂದಾ ಪ್ರಯತ್ನ ಮಾಡಿ ನಿರಾಶರಾಗಿ ತಿರುಗಿ ಹೋದದ್ದು ಬೆಳಿಗ್ಗೆ ಗೊತ್ತಾಯಿತು. ತಿಜೋರಿಗೆ ಪೆಟ್ಟುಗಳು ಮಾತ್ರ ಬಹಳ ಬಿದ್ದಿವೆ. ಮಾರಿಯ ಬಣ್ಣ ಎಲ್ಲವೂ ಹಾರಿಹೋಗಿದೆ. ಬಾಕಿ ತಿಜೋರಿ ಮಾತ್ರ ಏನೂ ಕೆಟ್ಟಿಲ್ಲಾ.

ಸಾರಾಂಶ. ನಾನು ನಿಮ್ಮ ತಿಜೋರಿಯನ್ನೇ ತಕ್ಕ ವೇಳೆಗೆ ಕೊಂಡು ಆಗತಕ್ಕ ಸಾವಿರಾರು ರೂಪಾಯಿಯ ಲುಕ್ಸಾನವನ್ನು ನಿಮ್ಮಿಂದಲೇ ತಿರುಗಿ ಲಾಭ ಹೊಂದಿದಂತಾಗಿದೆ ಎಂದು ತಿಳಿಸಲಿಕ್ಕೆ ತುಂಬಾ ಸಂತೋಷವಾಗುತ್ತದೆ.

ಇದನ್ನು ನೋಡಿ ನಮ್ಮ ಕೆಲವು ಸ್ನೇಹಿತರು ನಿಮ್ಮ ತಿಜೋರಿಯನ್ನೇ ಕೊಳ್ಳಬೇಕೆಂದು ವಿಚಾರಿಸುತ್ತಿದ್ದಾರೆ. ಅವರು ಪರಭಾರೆ ತಮಗೆ ಪತ್ರ ಹಾಕಿರಬಹುದು. ಹಾಗೂ ಸಮಕ್ಷಮ ನೋಡಲಿಕ್ಕೆ ಬರಬಹುದು.
ಇಂತೀ ನಮಸ್ಕಾರಗಳು. ಸಹಿ:— ಶಿವಬಸಪ್ಪ ಬೆಲ್ಲದ, ಶಿರ್ಸಿ.

EXCELLENT GET-UP! NOW ON SALE BEAUTIFUL PRINT!

Recommended by the Government of Mysore for High-School Libraries in the Mysore State.

WHO IS THE FOUNDER OF THE VIRASAIVA OR LINGAYET RELIGION?

An indispensable book for all lovers of
HISTORY
Price As. 8. Postage Free.

Can be had from:—
Jeerage K. Basavappa B. A.
2, Cotton pet, BANGALORE city
SOUTH INDIA

ನಮ್ಮಲ್ಲಿ ಫೋಟೋ, ಲೈನ್ ಬ್ಲಾಕುಗಳು, ಹಿತ್ತಾಳಿ ಮತ್ತು ಸೀಸದ ಬ್ಲಾಕುಗಳು, ಅರಗಿನ ಸೀಲು ಜವಾನರ ಬಿಲ್ಲೆಗಳು, ರಬ್ಬರ್ ಮೊಹರುಗಳು, ದೇವರ ೩ ಬಣ್ಣದ ಪಟಗಳು, ಕ್ಯಾಲೆಂಡರುಗಳು ನಿಮ್ಮ ಮನ ಒಪ್ಪುವಂತೆ ತಯಾರಾಗುತ್ತವೆ.

ಗೌರೀಶಂಕರ ನಿವಾಸ.

ಊಟ-ವಸತಿ ಗೃಹ.

ಮುಂಬಯಿ.

ಸೋಯಿದರೆ. **ಉತ್ತಮ ಸೌಕರ್ಯ.** **ಎಲ್ಲಕ್ಕಿಂತ ಅನುಕೂಲ ಸ್ಥಳ!**

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಡಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೇಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!

-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ತಲೂರ ರಾಯನಗೌಡರು,
ಒಡೆಯರು, **ಗೌರೀಶಂಕರ ನಿವಾಸ ಹಿಂದೂ ಹೋಟೆಲ್**
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, **ಮುಂಬಯಿ.**

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ.
ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸರಸನಾಟಕ ಕಥೆ! ವಿದ್ವತ್ತ ಪ್ರಚುರ ಲೇಖಗಳಿವೆ.

ಹೊಸ ಸೌಲಭ್ಯಗಳು:—

ಬೆಲೆ ೧೦ ಆಣೆ, ೧೯೩೩ ರ ವಿಶೇಷ ಸಂಚಿಕೆಯೊಂದಿಗೆ ೧ ರೂ,
ಹೊಸ ಚಂದಾದಾರರಿಗೆ ಉಚಿತ. ತ್ವರೆಮಾಡಿರಿ.

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಷ್ಪ] ವಾ. ಚಂ. ೩-೪-೦ [ಮೇಲೊಂದು ಉಚಿತಪುಷ್ಪ
ಜ. ಕ. ಚಂದಾದಾರರಿಗೆ ೩ ರೂ.

ಮೂರನೆಯ ವರ್ಷದ ಆಯ್ದನೆಯ ಪುಷ್ಪವಾದ
ಹಲವು ಪ್ರಸಿದ್ಧ ಕತೆಗಾರರ ಸರಸವಾದ
ಇದೀಗ ಹೊರಟಿದೆ] **ನೀಳ್ಗತೆಗಳು!** [ಬೆಲೆ ಹನ್ನೆರಡು ಆಣೆ.

ಜಯಕರ್ನಾಟಕ ಕಾರ್ಯಾಲಯ
ಧಾರವಾಡ.

ಸುಗಂಧರಾಜ ದಶಾಂಗ.

ಇದು ಸಕಲ ಶಿವಭಕ್ತ ಶರಣರ ಚಿತ್ತೋಲ್ಲಾಸಸ್ಸೈಯ್ಯುವಂತೆ ಅನಂತ ಸುಗಂಧಮಯ ಕುಸುಮಂಗಳಿಂದಲೂ ಸುಗಂಧಮಯ ಗಿಡಮೂಲಿಕೆಗಳಿಂದಲೂ ಪರಿಮಳ ದ್ರವ್ಯಗಳಿಂದಲೂ ನಿಷಿದ್ಧ ಪದಾರ್ಥಗಳ ಸಂಪರ್ಕವಿಲ್ಲದೆಯೂ, ಶಿವಶರಣರು ಶಿವಯೋಗಿಗಳು ಮಹಾನಂದಮಂಗೊಳ್ಳುವಂತೆ ಸ್ವದೇಶಿ ಪದಾರ್ಥದಿಂದಲೇ ತಯಾರಿಸಿದೆ.

ಈ ನಮ್ಮ ಸುಗಂಧರಾಜ ದಶಾಂಗವನ್ನು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರ ಸನ್ನಿಧಿಯು ಉಪಯೋಗಿಸಿ ಇದರ ನಿಜಾನಂದವನ್ನು ತಮ್ಮ ಬಹುಮಾನ ಪತ್ರದ್ವಾರ ಆಶೀರ್ವದಿಸಿದ್ದಾಗಿದೆ. ಅಲ್ಲದೆ ಅನೇಕ ಶಿವಯೋಗಿಗಳಿಂದಲೂ, ತಪಸ್ವಿಗಳಿಂದಲೂ, ದೊಡ್ಡ ಮನುಷ್ಯರುಗಳಿಂದಲೂ, ಬಹುಮಾನ ಪತ್ರಗಳನ್ನು ಪಡೆದಿದೆ.

ನಮ್ಮ ಸುಗಂಧರಾಜ ದಶಾಂಗವನ್ನು ಬಾಣಂತಿಯರ ಸ್ನಾನಾಂತರ ತಲೆ ಕಾಯಿಸಲು ಶೀತಬಾಧಾ ಪರಿಹಾರವಾಗುವದು.

N. B. ಈಗಿನ ಕರ್ಪೂರದಲ್ಲಿ ನಿಷಿದ್ಧ ಪದಾರ್ಥಗಳು ಸೇರಿರುವದರಿಂದ ಅದಕ್ಕೆ ಪ್ರತಿಯಾಗಿ ಸುಗಂಧಮಯ ಧೂಪದ ಕೊಡವನ್ನು ತಯಾರಿಸಿದೆ. ಇದರಿಂದ ಧೂಪ ಮತ್ತು ದೀಪ ಎರಡಕ್ಕೂ ಉಪಯೋಗವಾಗುತ್ತದೆ. ವಿಳಾಸ:—

ಜಿ. ಎಸ್. ಗಂಗಾಧರಯ್ಯ,
ಸುಗಂಧರಾಜ ದಶಾಂಗ ಕಾರ್ಖಾನೆ, ಅರಳೇ ಪೇಟೆ, ತುಮಕೂರು.
(ಮೈಸೂರು ಸ್ಟೇಟ್)

ಶರಣ ಸಂದೇಶ.

ಸಂಪಾದಕರು:-

ಹರ್ಡೇಕರ್ ಮಂಜಪ್ಪನವರು.

ಶ್ರೀ ಬಸವಾದಿ ಪ್ರಮಥರ
ತತ್ವಗಳನ್ನು
ಹಿಂದು ಸಮಾಜದೇಳಿಗೆಯ
ರೀತಿನೀತಿಗಳನ್ನು
ಪ್ರಸಾರಗೊಳಿಸುವ
ವಾರಪತ್ರಿಕೆ
ಕನ್ನಡದಲ್ಲಿ ಇದೊಂದೇ.

ವಾರ್ಷಿಕ ಚಂದಾ:-
ಅಂಚೆಯ ವೆಚ್ಚ ಸೇರಿ
೩. ರೂ. ಗಳು.
ಜಾಗ್ರತೆ ಚಂದಾದಾರರಾಗಿರಿ.

ಮ್ಯಾನೇಜರ್:- ಶರಣ ಸಂದೇಶ.
ಪೋ. ಆಲಮಟ್ಟಿ ಜಿ. ವಿಜಾಪುರ.

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ. ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,
ಶ್ರೀ. ರಂಗನಾಥ ಟೈಪ್ ಫೌಂಡರಿ
೬೭ ಕುಬೇರ ಸಾಹುಜಿ ಲೈನ್
ಚಿಕ್ಕಪೇಟೆ, ಬೆಂಗಳೂರು ಸಿಟಿ.

ರಮುಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮುಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮುಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮುಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮುಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆಗಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಖಾದಿಯ ಕೊಂಡು
ಬಡತನದ ಬಾಧೆಯ ಕಳೆಯಿರಿ.

ಭಾರತದ ಬಡತನ ಬಯಲಾಗಲು
ಗಾಂಧಿಯವರು
ತೋರಿಸಿದ
ಖಾದಿಯೇ ಹಾದಿಯು.
ನಿಮ್ಮ-ಮೈಮೇಲೆ
ಖಾದಿ ಬಂದರೆ
ಬಡವರ ಕೈಮೇಲೆ
ಕಾಸು ಬರುವದು.

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The
Sharana Sandesh

ನ್ಯಾಯನಿಷ್ಠುರ! ದಾಕ್ಷಿಣ್ಯಪರನಾನಲ್ಲ! ಲೋಕವಿರೋಧಿ! ಶರಣನಾರಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೮ ॥ ಮಹಾನುಭಾವ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ಚಂದಾ:- ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೬.	ಆಲಮಟ್ಟಿ- ಸೋಮವಾರ ತಾರೀಖು ೨೧ ನೆಯ ಸಪ್ಟೆಂಬರ್ ೧೯೩೬.	ಸಂಚಿಕೆ ೫

ಜನಸೇವೆಯೇ ದೇವರ ಸೇವೆ.

ಮಹಾತ್ಮರ
ವರ್ಧಂತಿಯ ಸಪ್ತಾಹ.

ಮಹಾತ್ಮಾ ಗಾಂಧಿಯವರ ೬೮ ನೆಯ ವರ್ಷ ವರ್ಧಂತಿಯ
ಸಪ್ತಾಹವು ಇದೇ ೨೬ ನೆಯ ತಾರೀಖಿನಿಂದ ಪ್ರಾರಂಭ.
ಖಾದಿ ಪ್ರಸಾರ, ಗ್ರಾಮೋದ್ಧಾರ, ಅಸ್ಪೃಶ್ಯತಾ
ನಿವಾರಣೆ ಈ ದಿವ್ಯ ಕಾರ್ಯಗಳೇ ಈ
ಸಪ್ತಾಹದಲ್ಲಿ ಪ್ರಚಂಡವಾಗಿ
ಜರುಗಲಿ.

ದೇಹವೇ ದೇವಾಲಯ.

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur, (Karnataka)

SANGAM CLOTH STORE
Prop: M. S. Hundekar & Sons,
P.O: TERDAL - 587 315
Dt. Bijapur, (Karnataka)

ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಸುರನ್ಸ ಕಂ. ಲಿ.

ಧಾರವಾಡ.

ಈ ಕಂಪನಿಯುವರು ಕರ್ನಾಟಕದ ಪ್ರತಿಯೊಂದು ಭಾಗದಲ್ಲಿ
ಹಳ್ಳಿಗಳಲ್ಲಿಯೂ ಸಹ ಇಷ್ಟು ಪ್ರಸಿದ್ಧಿಯನ್ನು ಪಡೆಯಲು
ಯಾವ ಕಾರಣ ಗೊತ್ತೊ ?
" ಏನೂ ತೊಂದರೆಯಿಲ್ಲದೆ ತೀವ್ರದಲ್ಲಿಯೋ ಹಕ್ಕಿನ ಪಾವತಿ "

ಚೇರಮನ್ನರು-	ವ್ಹಾಯಿಸ ಚೇರಮನ್ನರು-
ದೇಶಭಕ್ತ ಶ್ರೀಯುತ ಎಸ್. ಕೆ. ಹೊಸಮನಿ	ಶ್ರೀಯುತ ವ್ಹಿ. ಬಿ. ಹಾಲಭಾವಿ
B. A. L. LB. M. L. A.	B. A. L. L. B.
ಮತ್ತು	ರಿಟಾಯರ್ಡ್ ಫಸ್ಟ್‌ಕ್ಲಾಸ ಸಬ್‌ಜಡ್ಜ
ಪ್ರೆಸಿಡೆಂಟ ಕೆ. ಪಿ. ಸಿ. ಸಿ.	ಧಾರವಾಡ.

ಇಂದಿನ ವರೆಗೆ ಕ್ಲೇಮು ಹಣ:— ೨೦೪೬೫-೧-೪ ರೂಪಾಯಿಗಳು.

ಈ ತಿಂಗಳಲ್ಲಿ ಪಾವತಿಯಾದ ವಿವಾಹ ಕ್ಲೇಮುಗಳು.

(೧)	ರಾ| ರಾ| ಚಿಕ್ಕಳ್ಳಿ ವೀರಭದ್ರಪ್ಪ ಹಾರವೇಟ ತುಮಕೂರ	ರೂ. ೩೮೬-೩-೩
(೨)	ರಾ| ರಾ| ಕುಮಾರಯ್ಯ ಚಂದ್ರಯ್ಯ ವಿರಕ್ತಮಠ ಹಾನಗಲ್ಲ	ರೂ. ೩೮೬-೩-೩
(೩)	ರಾ| ರಾ| ಲಕ್ಷ್ಮಣಶಿಂಗ ಸೂರಶಿಂಗ ಕಾರ್ಪೆಂಟ್ಟರ ಕಾಟನ್‌ಪೇಟ ತುಮ್ಕೂರ	ರೂ. ೩೮೬-೩-೩
	ಅಂತೂ	ರೂ. ೧೧೫೮-೯-೯

ವಿಮೆಯ ಸ್ಕೀಮುಗಳ ಸಂಪೂರ್ಣ ಮಾಹಿತಿಗಾಗಿ ಇಂದೇ ಬರೆಯಿರಿ.

The Manager
Swarajya Banking & Insurance Company Ltd.
DHARWAR.

ಹೊಸ ಚಿತ್ರಗಳು.

ಅನೇಕ ಬಣ್ಣಗಳಿಂದ ಕೂಡಿದ ಈ ಕೆಳಗೆ ಕಂಡ ಫೋಟೋಗಳಿಗಾಗಿ ಒಂದು ರೂಪಾಯಿಯನ್ನು ಕಳುಹಿಸಿಕೊಟ್ಟಲ್ಲಿ ೧೨ ಫೋಟೋಗಳನ್ನು ಕಳುಹಿಸಿ ಕೊಡುತ್ತೇವೆ. ವ್ಹಿ. ಪಿ. ಮಾಡುವುದಿಲ್ಲ.

೧ ಸಿಂಹಾಸನದ ಮೇಲೆ ಕೂತಿರುವ ಬಸವೇಶ್ವರ.
೨ ಕುದುರೆಯ ಮೇಲೆ ಕೂತಿರುವ ಬಸವೇಶ್ವರ.
೩ ಶಿವಾನುಭವ ಮಂಟಪ.
೪ ಅಕ್ಕಮಹಾದೇವಿ.
೫ ಶರಭಲೀಲೆ.
೬ ಬೇಡರ ಕಣ್ಣಪ್ಪ. (ಒಂದು ಬಣ್ಣದ್ದು.)

ಎ. ಎಂ. ಯಜಮಾನ್ ಅಂಡ್ ಸನ್.
ಚಿಕ್ಕಪೇಟೆ ಬೆಂಗಳೂರು ಸಿಟಿ.

ಸ್ಥಳೀಯ ಸಂಸ್ಥೆಗಳ ಪತ್ರಿಕೆ.

ಪ್ರತಿ ತಿಂಗಳ ತಾ\|\| ೧ ಮತ್ತು ೧೫ ರಲ್ಲಿ ಪ್ರಕಟವಾಗುವ ಪಕ್ಷಪತ್ರಿಕೆ.

ಜಿಲ್ಲಾ ಬೋರ್ಡ್, ಪೌರಸಭೆ, ಗ್ರಾಮಪಂಚಾಯತಿ ಮುಂತಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಇತಿಹಾಸ, ಮೂಲತತ್ವ, ಆಡಳಿತ ಮುಂತಾದ ವಿಚಾರಗಳಲ್ಲಿ ನುರಿತ ಲೇಖಕರಿಂದ ಬರೆಯಲ್ಪಟ್ಟ ಬೋಧಪ್ರದ ಲೇಖಗಳನ್ನೂ, ಆ ಸಂಸ್ಥೆಗಳ ಕಾರ್ಯಕ್ರಮ ಮತ್ತು ಘಟನೆಗೆ ಸಂಬಂಧಪಟ್ಟ ವಿಶೇಷ ಸಮಾಚಾರಗಳನ್ನೂ, ಸ್ಥಾನಿಕ ಸ್ವರಾಜ್ಯ ಸಂಬಂಧವಾದ ದೇಶವಿದೇಶ ವರ್ತಮಾನಗಳನ್ನೂ ಪ್ರಕಟಿಸುವ ಪತ್ರಿಕೆ.

ಇತರ ಸಂಗತಿಗಳೂ ವಿಶೇಷ ವರ್ತಮಾನಗಳೂ ಸಹ ಪ್ರಕಟವಾಗುವವು.

ಇಡೀ ಕನ್ನಡ ನಾಡಿನಲ್ಲಿ ಇಂತಹ ಪತ್ರಿಕೆಯು ಇದೊಂದೇ !

ವಾರ್ಷಿಕಚಂದಾ:— ೨ ರೂಪಾಯಿ; ಸಂಸ್ಥೆಗಳಿಗೆ ೫ ರೂಪಾಯಿ.
ವಿಳಾಸ:— ಟಿ. ಯ್. ಚನ್ನಪ್ಪ, ವ್ಯವಸ್ಥಾಪಕ ಸ್ಥಳೀಯ ಸಂಸ್ಥೆಗಳ ಪತ್ರಿಕೆ. ಗಾಂಧಿ ನಗರ, ಬೆಂಗಳೂರು ಸಿಟಿ.

ಓಂ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೬. | ಆಲಮಟ್ಟಿ- ಸೋಮವಾರ ತಾರೀಖು ೨೧ ನೆಯ ಸಪ್ಟೆಂಬರ್ ೧೯೩೬. | ಸಂಚಿಕೆ ೫.

ಮಹತ್ವದ ಸುದ್ದಿಗಳು.

—ಈ ತಿಂಗಳ ೨೬ ನೆಯ ತಾರೀಖಿನ ದಿವಸ ಎಲ್ಲ ಸಂಸ್ಥಾನಗಳ ದಿವಾನರ ಪರಿಷತ್ತು ಮುಂಬೈಯಲ್ಲಿ ಕೂಡುವುದಿದೆ.

—ಮಿ. ಅಬ್ದುಲ್ಲಾ ಗಾಂಧಿಯವರು ಕಾನ್ಪೂರು ಎಂಬಲ್ಲಿ ಭಾಷಣ ಮಾಡುವಾಗ ಗಾಂಧೀಜಿಯವರನ್ನೂ, ಸಾಬರಮತಿ ಆಶ್ರಮವನ್ನೂ, ಮನುಸ್ಮೃತಿಯನ್ನೂ ಕುರಿತು ನಿಂದ್ಯ ಟೀಕೆಗಳನ್ನು ಮಾಡಿದ್ದರಿಂದ ಸಭಿಕರು ತುಂಬಾ ಗಲಾಟೆಯನ್ನು ಮಾಡಿದರು.

—ರಾಷ್ಟ್ರೀಯ ಸಭೆಯವರು ಫೈಜಪುರ ಮತ್ತು ಸಾವದಾ ಈ ಹಳ್ಳಿಗಳ ಆರೋಗ್ಯ ಕೆಡದಂತೆಯೂ ಹಳ್ಳಿಯ ಮುಂದೆ ಮೂರು ಫರ್ಲಾಂಗ್ ಮಾರ್ಗವನ್ನು ಮಾಡಿ ಅಪಾಯವಾಗದಂತೆಯೂ ವ್ಯವಸ್ಥೆ ಮಾಡಬೇಕೆಂಬ ಕಟ್ಟಳೆಯ ಮೇಲೆ ಸರಕಾರದವರು ಫೈಜಪುರದಲ್ಲಿ ರಾಷ್ಟ್ರೀಯ ಸಭೆ ಜರುಗಲು ಅಪ್ಪಣೆಯನ್ನು ಕೊಟ್ಟಿದ್ದಾರೆ.

—ರಾಷ್ಟ್ರೀಯ ಆದಿಹಿಂದುಗಳಿಗೂ ಕಾಂಗ್ರೆಸ್ ಪಕ್ಷಕ್ಕೂ ಚುನಾವಣೆಯಲ್ಲಿ ಮತೈಕ್ಯವುಂಟಾಗಲು ಮುಂಬೈಯಲ್ಲಿಯ ರಾಷ್ಟ್ರೀಯ ಆದಿಹಿಂದುಗಳ ಪ್ರಮುಖರಾದ ಶ್ರೀ. ನಾರಾಯಣರಾವ ಕಾಜರೋಳಕರ ಇವರ ಸಂಗಡ ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ. ಶಂಕರರಾವ ದೇವ ಇವರು ವಿಚಾರ ವಿನಿಮಯ ಮಾಡುವವರಿದ್ದಾರೆ.

—ಕಳೆದ ಬುಧವಾರದಿಂದ ವಿಜಾಪುರ ಜಿಲ್ಹೆಯ ಕೆಲವು ಭಾಗಗಳಲ್ಲಿ ಚೆನ್ನಾಗಿ ಮಳೆಯಾಗುತ್ತಾ ಇದೆ ಜನರಿಗೆ ಎಷ್ಟೋ ಸಮಾಧಾನವಾಗಿದೆ.

—ಶ್ರೀ. ಅಣೆಯವರು ಲೋಕಶಾಯಿ ಸ್ವರಾಜ್ಯ ಪಕ್ಷವನ್ನು ಬಿಟ್ಟಿದ್ದರಿಂದ ೪-೬ ಪ್ರಮುಖರೂ ಈ ಪಕ್ಷವನ್ನು ಬಿಡುವರೆಂದೂ ಶ್ರೀ. ಲ. ಬ. ಭೋಪಟಕರರು ಈ ಪಕ್ಷದ ಅಧ್ಯಕ್ಷರಾಗುವರೆಂದೂ ಸುದ್ದಿ.

—ಬಂಗಾಲ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಜಾತಿನಿರ್ಣಯ ನಿಷೇಧದ ಚಟುವಟಿಕೆಯನ್ನು ನಡೆಯಿಸುವುದು ಅಶ್ರಮವೆಂದು ಪಂಡಿತ ಜವಾಹರಲಾಲ ನೆಹರುರವರು ತಿಳಿಸಿದ್ದಕ್ಕೆ ಆ ಪ್ರಾಂತಿಕ ಕಮಿಟಿಯವರು ಇಷ್ಟರಲ್ಲೇ ಉತ್ತರವನ್ನು ಕೊಡುವವರಿದ್ದಾರೆ.

—ಪಂಡಿತ ಜವಾಹರಲಾಲ ನೆಹರುರವರು ಇಷ್ಟರಲ್ಲೇ ಬಂಗಾಲ ಮತ್ತು ಮದ್ರಾಸ ಪ್ರಾಂತಗಳಲ್ಲಿ ಸಂಚರಿಸಲು ಹೊರಡುವವರಿದ್ದಾರೆ.

—ನೈಜಾಮ ಸರಕಾರದವರು ಮೋಟಾರುಗಳು ತಿರುಗಾಡುವ ಬಗ್ಗೆ ಒಂದು ಹೊಸ ಕಟ್ಟಳೆಯನ್ನು ಮಾಡಿದ್ದಾರೆ. ಬರುವ ೬ ನೆಯ ತಾರೀಖಿನಿಂದ ಅದು ಆಚರಣೆಯಲ್ಲಿ ಬರುವದು. ಹೈದರಾಬಾದದಿಂದ ಶಿಕಂದ್ರಾಬಾದದ ವರೆಗಿನ ಕೆಲವು ಮಾರ್ಗಗಳನ್ನು ಸರಕಾರದವರು ಕಾದಿಟ್ಟುಕೊಂಡಿದ್ದರಿಂದ ಮೋಟಾರು ಸಾರಿಗೆ ಉದ್ಯೋಗ ಮಾಡುವವರಿಗೆ ತುಂಬಾ ನಷ್ಟವಾಗುವದಿದೆಯಂತೆ.

—ಹಿಂದು ಮಹಾಸಭೆಯ ೧೮ ನೆಯ ಅಧಿವೇಶನವು ಬರುವ ತಿಂಗಳು ೨೧, ೨೨, ೨೩ ನೆಯ ತಾರೀಖುಗಳಲ್ಲಿ ಲಾಹೋರಿನಲ್ಲಿ ಕೂಡುವುದು.

—ಕಳೆದ ೧೧ ನೆಯ ತಾರೀಖಿನ ದಿವಸ ಈ ದೇಶದಿಂದ ೬೨, ೧೦, ೨೬೬ ರೂ. ಗಳ ಬಂಗಾರವು ಯುರೋಪ ಮತ್ತು ಅಮೇರಿಕಾ ಖಂಡಗಳಿಗೆ ಹೋಯಿತು.

—ಅಫಗಾಣ ಸರಕಾರದವರು ತಮ್ಮ ಸೈನ್ಯ ಬಲವನ್ನು ಹೆಚ್ಚಿಸುತ್ತಿದ್ದಾರೆ. ಇದಕ್ಕಾಗಿ ಪ್ರಜೆಗಳಿಂದ ಸ್ವಂತ ಹಣವೂ ಕೊಡಲ್ಪಡುತ್ತಾ ಇದೆ.

—ನಾಶಿಕ ಜಿಲ್ಹಾ ವೀರಶೈವ ಪರಿಷತ್ತಿನಲ್ಲಿ ಕಾಂಗ್ರೆಸ್ ಪಕ್ಷಕ್ಕೇನೇ ಮತಕೊಡಬೇಕೆಂದು ಠರಾವಾಯಿತು.

—ಗಾಂಧೀಜಿಯವರ ೬೮ ನೆಯ ವರ್ಷ ವರ್ಧಂತಿಯು ಹಿಂದುಸ್ಥಾನದ ಎಲ್ಲ ಸ್ಥಳಗಳಲ್ಲಿಯೂ ಬಹು ಪರಿಣಾಮಕಾರಿಯಾಗಿ ಜರುಗುವಂತೆ ಅಲ್ಲಲ್ಲಿ ಏರ್ಪಾಟುಗಳು ನಡೆದಿವೆ.

—ಜರ್ಮನಿಯಲ್ಲಿಯ ಕೂಲಿಕಾರರಿಗೆ ೫೦ ಲಕ್ಷ ಮನೆಗಳನ್ನು ಕಟ್ಟಿಕೊಡುವ ಒಂದು ಪ್ರಚಂಡ ಕಾರ್ಯಕ್ರಮವು ಇಷ್ಟರಲ್ಲೇ ಸರಕಾರದಿಂದ ಪ್ರಾರಂಭಿಸಲ್ಪಡುವುದಂತೆ.

—ಹಿಂದಿ ಹಾಕಿ ಸಂಘದವರು ಜರ್ಮನ್ ಹಾಕಿ ಸಂಘದವರನ್ನು ಆಟದಲ್ಲಿ ಸೋಲಿಸಿದರು.

—ಮುಂಬೈ ವಿಶ್ವವಿದ್ಯಾಲಯದ ಸದಸ್ಯತ್ವದ ಚುನಾವಣೆಗೆ ಶ್ರೀ. ಕನ್ಯಾಲಾಲ ಮುನಸಿ ಇವರು ಹುರಿಯಾಳುಗಳಾಗಿ ನಿಲ್ಲಲು ಸರದಾರ ಪಟೇಲರು ಒಪ್ಪಿಗೆಯನ್ನು ಕೊಟ್ಟರು.

ವೀರಶೈವ ಮಹಾಸಭೆ ಮತ್ತು ರಾಜಕಾರಣ.

ಕಳೆದ ೬ ನೆಯ ತಾರೀಖಿನ ದಿವಸ ಗದಗಿನಲ್ಲಿ ಕೆಲವು ರಾಷ್ಟ್ರೀಯ ವೀರಶೈವರು ಸೇರಿ ರಾಯಚೂರು ವೀರಶೈವ ಮಹಾಸಭೆಯಲ್ಲಿ ವೀರಶೈವರು ಮುಂಬರುವ ಶಾಸನ ಮಂಡಲಗಳ ಸಂಬಂಧವಾಗಿ ಮಾಡಿದ ಗೊತ್ತುವಳಿಯನ್ನು ನಿಷೇಧಿಸಿದರಷ್ಟೆ. ಆದುದರಿಂದ ವೀರಶೈವ ಮಹಾಸಭೆಗೂ ರಾಜಕಾರಣಕ್ಕೂ ಯಾವ ಸಂಬಂಧವು ಎಷ್ಟರ ಮಟ್ಟಿಗೆ ಇದೆಯೆಂಬುದೂ ವೀರಶೈವ ಮಹಾಸಭೆಯು ವೀರಶೈವ ಸಮಾಜದ ಅಭಿಪ್ರಾಯವನ್ನು ವ್ಯಕ್ತಗೊಳಿಸುತ್ತದೆಯೇ ಇಲ್ಲವೇ ಎಂಬುವೂ ಚರ್ಚೆಗೆ ಬಂದಿವೆ. ಈ ಚರ್ಚೆಯಿಂದ ನಿಜ ಸಂಗತಿಯು ಗೊತ್ತಾಗಲೆಂದೇ ಈ ವಿಷಯವನ್ನು ಪ್ರಸ್ತಾಪಿಸಿದ್ದೇವೆ.

ಇಂಗ್ಲಿಷರ ಪ್ರಭುತ್ವವು ಈ ದೇಶದಲ್ಲಿ ಸ್ಥಾಪನೆಯಾದನಂತರ ಯಾವ ಜನರು ಇಂಗ್ಲಿಷ್ ವಿದ್ಯೆಯಲ್ಲಿ ಮುಂದರಿದರೋ ಅವರೇ ಸರಕಾರಿ ಅಧಿಕಾರಗಳಲ್ಲಿ ಸೇರಲು ಶಕ್ಯವಾಯಿತು. ಯಾರು ಸರಕಾರಿ ಅಧಿಕಾರಗಳಲ್ಲಿ ಸೇರಿದರೋ ಅವರಿಗೇನೇ ಇಂಗ್ಲಿಷರ ರಾಜಕಾರಣದ ಪರಿಜ್ಞಾನವಾಯಿತು. ಪಾಶ್ಚಾತ್ಯ ಶಿಕ್ಷಣವು ಹೇಗೆ ಹೇಗೆ ಪ್ರಸಾರವಾಗುತ್ತಾ ಬಂದಿತೋ ಹಾಗೆ ಹಾಗೆ ರಾಜಕಾರಣದ ತಿಳುವಳಿಕೆಯೂ ಜನಾಂಗದಲ್ಲಿ ಹೆಚ್ಚುತ್ತಾ ಬಂದಿತು.

ವೀರಶೈವ ಸಮಾಜವು ಪಾಶ್ಚಾತ್ಯ ಶಿಕ್ಷಣದಲ್ಲಿ ಬಹು ಹಿಂದುಳಿದುದು. ಇದರ ಸಂಖ್ಯಾ ಪರಿಮಿತಿಗೂ ಇಂಗ್ಲಿಷ್ ಶಿಕ್ಷಣ ಹೊಂದಿದವರ ಸಂಖ್ಯೆಗೂ ಹೋಲಿಸಿ ನೋಡಿದರೆ ನಮ್ಮ ನೆರೆಯಲ್ಲಿರತಕ್ಕ ಬ್ರಾಹ್ಮಣ ಸಮಾಜದವರಿಗಿಂತ ಇದು ಈಗಲೂ ಶಿಕ್ಷಣದಲ್ಲಿ ಹಿಂದೇ ಉಳಿದಿದೆ. ವೀರಶೈವರು ೧೯೦೪ ರಲ್ಲಿ ವೀರಶೈವ ಮಹಾಸಭೆ ಎಂಬುದನ್ನು ಏರ್ಪಡಿಸಿಕೊಂಡು ಆ ಮೂಲಕ ತಮ್ಮ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಗಳಿಗಾಗಿ ಪ್ರಯತ್ನಿಸಲಾರಂಭಿಸಿದರು. ಆಗ ಈ ಸಮಾಜದಲ್ಲಿ ಎಂಟುಹತ್ತು ಜನ ಪದವೀಧರರು ಮಾತ್ರ ಇದ್ದರೆಂದು ಹೇಳಬಹುದು. ವೀರಶೈವರ ರಾಜಕಾರಣವು ಆಗ ಹೇಗಿತ್ತೆಂಬುದನ್ನು ಆ ಸಭೆಯಲ್ಲಾದ ಈ ಕೆಳಗಿನ ಗೊತ್ತುವಳಿಯಿಂದ ತಿಳಿದುಕೊಳ್ಳಬಹುದು. ಏಳನೆ ಗೊತ್ತುವಳಿ ಹೀಗಿದೆ.—

“ ವೀರಶೈವರು ವಿದ್ಯದಲ್ಲಿ ಹಿಂದುಳಿದಿರುವುದರಿಂದ ಇವರಿಗೆ ಸರಕಾರದವರು ವಿದ್ಯಾರ್ಥಿ ವೇತನ ಮತ್ತು ಸರಕಾರಿ ಉದ್ಯೋಗಗಳನ್ನು ಕೊಟ್ಟು ವಿದ್ಯೆಯನ್ನು ಕಲಿಯುವುದಕ್ಕೆ ಉತ್ತೇಜನ ಬರುವಂತೆ ಪ್ರೋತ್ಸಾಹಿಸಬೇಕೆಂದು ಈ ಮಹಾಸಭೆಯ ಪರವಾಗಿ ಅಧ್ಯಕ್ಷರು ನಮ್ಮ ದಯಾಳು ಸರಕಾರದವರಿಗೆ ವಿನಂತಿ ಮಾಡಿಕೊಳ್ಳಬೇಕೆಂದು ಮಹಾಸಭೆಯವರು ಅಭಿಪ್ರಾಯಪಡುತ್ತಾರೆ. ”

ಈಗ ವಿದ್ಯೆಯಲ್ಲಿ ಬಹು ಹಿಂದುಳಿದಿರತಕ್ಕ ಆದಿ ಹಿಂದುಗಳು ಸರಕಾರದಲ್ಲಿ ಯಾವ ಸೌಲಭ್ಯಗಳನ್ನು ಕೇಳಲು ಎಷ್ಟು ಎದೆಗಾರಿಕೆಯುಳ್ಳವರಾಗಿದ್ದಾರೆಯೋ ಅಷ್ಟು ಕೂಡಾ ಆಗ ವೀರಶೈವರು ಶಕ್ತರಿರಲಿಲ್ಲವೆಂದೇ ಮೇಲಿನ ಗೊತ್ತುವಳಿಯಿಂದ ಸ್ಪಷ್ಟವಾಗುತ್ತದೆ. ಇದು ಅವರ ದೋಷವಲ್ಲ. ಶಿಕ್ಷಣದ ಅಭಾವದಿಂದುಂಟಾಗುವ ಸ್ವಾಭಾವಿಕ ಸ್ಥಿತಿ.

ಅನಂತರ ೧೨ ವರುಷಗಳಲ್ಲಿ ಯಾವ ಸ್ಥಿತಿಯುಂಟಾಯಿತು ? ಪಾಶ್ಚಾತ್ಯ ಶಿಕ್ಷಣವು ಎಷ್ಟೋ ಪ್ರಸಾರವಾಯಿತು. ಈ ದೇಶದಲ್ಲಿ ಮೋರ್ಲೆಮಿಂಟೊ ಸುಧಾರಣೆಯು ಆಚರಣೆಯಲ್ಲಿ ಬರುವುದನ್ನು ತಿಳಿದುಕೊಂಡು ವೀರಶೈವರ ರಾಜಕಾರಣವು ಸ್ವಲ್ಪ ಮುಂದಡಿಯಿಟ್ಟಿತು. ದಾವಣಗೆರೆಯಲ್ಲಿ ಕೂಡಿದ ೧೯೧೭ ನೆಯ ಇಸವಿ ವೀರಶೈವ ಮಹಾಸಭೆಯಲ್ಲಿ ಹೀಗೆ ಠರಾವಾಯಿತು.— ಮೂರನೆಯ ಗೊತ್ತುವಳಿ ಹೀಗಿದೆ.

“ ಸಾಮ್ರಾಜ್ಯ ನಿಯಮ ನಿರ್ಮಾಣ ಸಭೆಯಲ್ಲಿಯೂ, ಎಲ್ಲಾ ಪ್ರಾಂತಿಕ ಶಾಸನ ಸಭೆಗಳಲ್ಲಿಯೂ, ಪ್ರಜಾ ಪ್ರತಿನಿಧಿ ಸಭೆಗಳಲ್ಲಿಯೂ ಮುನಸಿಪಾಲ್ಟಿಗಳಲ್ಲಿಯೂ ಸಂಪದಭ್ಯುದಯ ಸಭೆಗಳಲ್ಲಿಯೂ ಮತ್ತು ಇತರ ಸ್ಥಳೀಯ ಮತ್ತು ಪ್ರಾಂತಿಕ ಸಂಘಗಳಲ್ಲಿಯೂ ಎಲ್ಲಾ ಸರಕಾರಿ ಇಲಾಖಾ ಉದ್ಯೋಗಗಳಲ್ಲಿಯೂ ವೀರಶೈವ ಸಮಾಜಕ್ಕೆ ಇದರ ಸಂಖ್ಯೆಗೂ, ಪ್ರಾಮುಖ್ಯತೆಗೂ ತಕ್ಕಂತೆ ಸಾಮಾನ್ಯ ಚುನಾವಣೆಯಿಂದಲ್ಲದೆ ಪ್ರತ್ಯೇಕ ಚುನಾವಣೆಯಿಂದಲೂ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡಬೇಕೆಂದು ಈ ಮಹಾಸಭೆಯು ಬ್ರಿಟಿಶ್ ಸರಕಾರವನ್ನೂ ದೇಶೀಯ ಸಂಸ್ಥಾನಗಳನ್ನೂ ಅತಿ ನಮ್ರತೆಯಿಂದಲೂ ರಾಜ ನಿಷ್ಠೆಯಿಂದಲೂ ಪ್ರಾರ್ಥಿಸುತ್ತದೆ. ”

ಈ ಗೊತ್ತುವಳಿಯು ೧೯೦೪ ರಲ್ಲಿ ಸರಕಾರವನ್ನು ಕೇಳಿಕೊಂಡ ಗೊತ್ತುವಳಿಗಿಂತ ಎಷ್ಟೋ ಮೇಲುತರದ್ದಾಗಿದೆ. ಮುಸಲ್ಮಾನರಂತೆ ಇದು ಆಗ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೇಳಿದೆ. ಅನಂತರ ಸಾಧಾರಣ ೨೦ ವರುಷಗಳಲ್ಲಿ ವೀರಶೈವರ ರಾಜಕಾರಣವು ಎಷ್ಟು ಮುಂದರಿಯಿತೆಂಬುದನ್ನು ನೋಡೋಣ. ಕಳೆದ ಜೂನ ತಿಂಗಳಲ್ಲಿ ರಾಯಚೂರಲ್ಲಾದ ವೀರಶೈವ ಮಹಾಸಭೆಯು ಹೀಗೆ ನಿರ್ಣಯ ಮಾಡಿತು. ೧೯ ನೆಯ ಗೊತ್ತುವಳಿ ಹೀಗಿದೆ.—

“ ರಾಜಕೀಯ ಸುಧಾರಣಾ ಕಾಯಿದೆಯು ಬೇಗನೆ ಪ್ರಚಾರದಲ್ಲಿ ಬರತಕ್ಕದ್ದಾಗಿದ್ದು ಇದಕ್ಕೋಸ್ಕರ ವೀರಶೈವರು ಸುಸಂಘಟಿತವಾಗಿ ಪ್ರಯತ್ನಿಸಿ ಹೆಚ್ಚಾಗಿ ಕಾಯಿದೆ ಮಂಡಳಗಳಲ್ಲಿ ಸೇರಬೇಕೆಂತಲೂ ಅವುಗಳಲ್ಲಿ ಸೇರಿದ ಬಳಿಕ ದೇಶಕ್ಕೂ, ಸಮಾಜಕ್ಕೂ, ಹಿತಕರವಾಗಿರುವ ಕಾರ್ಯಕ್ರಮಗಳನ್ನು ಅನುಸರಿಸಿ ಅವುಗಳನ್ನು ನಡೆಯಿಸಬೇಕೆಂತಲೂ ಈ ಸಭೆಯು ಅಭಿಪ್ರಾಯಪಡುತ್ತದೆ. ”

ಈ ಗೊತ್ತುವಳಿಯು ದಾವಣಗೆರೆ ಮಹಾಸಭೆಯಲ್ಲಾದ ಗೊತ್ತುವಳಿಗಿಂತ ಎಷ್ಟೋ ಶ್ರೇಷ್ಠತರವಾದುದಾಗಿದೆ. ಪ್ರತ್ಯೇಕ ಪ್ರಾತಿನಿಧ್ಯದ ಶಬ್ದವೇ ಇದರಲ್ಲಿಲ್ಲ. ಸರಕಾರದ ಕಡೆಗೆ ತಿರುಗಿ ಸಹ ನೋಡಿಲ್ಲ.

ಈ ಮೇಲಣ ಮೂರು ಗೊತ್ತುವಳಿಗಳು ವೀರಶೈವ ಸಮಾಜದಲ್ಲಾದ ರಾಜಕೀಯ ಉತ್ಕ್ರಾಂತಿಯ ಮೂರು ಅಂತಸ್ತುಗಳೆಂಬುದರಲ್ಲಿ ಸಂದೇಹವಿಲ್ಲ. ಹೀಗಾಗುವುದು ಸ್ವಾಭಾವಿಕ. ಈಗ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ರಾಷ್ಟ್ರೀಯ ಸಭೆಯೂ ಇದೇ ವಿಧವಾದ ಅಂತಸ್ತುಗಳನ್ನು ದಾಟುತ್ತಲೇ ಬಂದಿದೆ. ವಿದ್ಯೆಯಲ್ಲಿ ಬಹು ಮುಂದರಿದಿರುವ ಬ್ರಾಹ್ಮಣ ಸಮಾಜವು ಕೂಡಾ ಸರಕಾರಿ ಅಧಿಕಾರ ಪ್ರಾಪ್ತಿಯೇ ತನ್ನ ಗುರಿಯೆಂತಲೂ ಒಂದು ಕಾಲದಲ್ಲಿ ತಿಳಿದುಕೊಂಡಿತ್ತು.

ಶಿಕ್ಷಣ ಪ್ರಸಾರವಾದಂತೆ ಜನಾಂಗದ ರಾಜಕೀಯ ಆಕಾಂಕ್ಷೆಗಳು ಹೆಚ್ಚುತ್ತ ಬರುವುದು ಸ್ವಾಭಾವಿಕ, ಈ ನಿಯಮದಂತೆಯೇ ವೀರಶೈವ ಸಮಾಜದಲ್ಲಾದರೂ ರಾಜಕಾರಣದ ವಿಚಾರವು ವಿಕಾಸವಾಗುತ್ತಾ ಬಂದಿತು. ಇನ್ನು ಮುಂದೆಯೂ ವಿಕಾಸವಾಗುತ್ತಾ ಹೋಗುವುದು. ಮಹಾಸಭೆಯ ಠರಾವು ವೀರಶೈವ ಸಮಾಜದ ಅಭಿಪ್ರಾಯವೆಂದು ತಿಳಿಯುವುದು ನ್ಯಾಯವೇ ವಿನಾ ಅದು ಒಬ್ಬ ಅಧ್ಯಕ್ಷರ ಇಲ್ಲವೆ ನಾಲ್ಕಾರು ಜನರ ಅಭಿಪ್ರಾಯವೆಂದು ಹೇಳುವುದು ವಿಹಿತವಲ್ಲವೆಂದೇ ಇದರಿಂದ ಗೊತ್ತಾಗುವುದಿಲ್ಲವೆ?

ವೀರಶೈವರು ಮತ್ತು ರಾಜಕೀಯ ಪಂಗಡಗಳು.

ಕಳೆದ ೬ ನೆಯ ತಾರೀಖಿನ ದಿವಸ ಗದಗಿನಲ್ಲಿ ಕೆಲವು ರಾಷ್ಟ್ರೀಯ ವೀರಶೈವರು ಸಭೆ ಸೇರಿ ಮಾಡಿದ ಗೊತ್ತುವಳಿಯಲ್ಲಿ ಈ ಪ್ರಕಾರ ಇದೆ—

“ಸಂಪೂರ್ಣ ಸ್ವರಾಜ್ಯವೇ ಭಾರತೀಯರ ಅರ್ಥಾತ್ ವೀರಶೈವರದೂ ಧ್ಯೇಯವಾಗಿದೆಯೆಂದು ಈ ಸಭೆಯು ತನ್ನ ಸ್ಪಷ್ಟಾಭಿಪ್ರಾಯವನ್ನು ವ್ಯಕ್ತಮಾಡುತ್ತದೆ”

ಗದಗಿನಲ್ಲಿ ವೀರಶೈವರ ರಾಜಕೀಯ ಧ್ಯೇಯವನ್ನು ನಿಶ್ಚಯಗೊಳಿಸಲು ಈ ಸಭೆಯು ಕೂಡಿದ್ದಿತೆ? ಹಾಗೆ ತಿಳಿಸಿ ಇದು ವೀರಶೈವ ಸಮಾಜದ ಪ್ರಾತಿನಿಧ್ಯದಿಂದ ಈ ನಿರ್ಣಯವನ್ನು ಮಾಡಿತೆ? ವೀರಶೈವರ ರಾಜಕೀಯ ಗುರಿಯನ್ನು ಸಾರಲು ಇದಕ್ಕೆ ಅಧಿಕಾರವು ಹೇಗೆ ಬಂದಿತು? ಇದನ್ನು ವಿಚಾರಪರರು ಗ್ರಾಹ್ಯ ಮಾಡುವರೆ? ಈ ಮೊದಲಾದ ವಿವಾದಾಸ್ಪದವಾದ ಸಂಗತಿಗಳು ಹಾಗಿರಲಿ. ವೀರಶೈವರಲ್ಲಿ ಕೆಲವರು ಸಂಪೂರ್ಣ ಸ್ವರಾಜ್ಯವಾದಿಗಳದ್ದಾರೆಂದು ಮಾತ್ರ ಈ ಗೊತ್ತುವಳಿಯಿಂದ ಸ್ಪಷ್ಟವಾಗುವುದರಲ್ಲಿ ತಿಲಾಂಶವಾದರೂ ಸಂದೇಹವಿಲ್ಲ.

ಇದು ಕಾಂಗ್ರೆಸ್ಸಿನ ಈಗಿನ ಧ್ಯೇಯ. ಇದಕ್ಕೆ ಒಪ್ಪಿದ ಅನೇಕ ವೀರಶೈವರು ಕಾಂಗ್ರೆಸ್ ಪಕ್ಷದವರೆಂದು ಹೇಳಬಹುದು. ಹೀಗೆ ವೀರಶೈವರು ಈ ದೇಶದ ಬೇರೆ ಬೇರೆ ರಾಜಕೀಯ ಪಕ್ಷಗಳಲ್ಲಿಯೂ ಇದ್ದಾರೆ. ಹೀಗಿರುವುದು ಸ್ವಾಭಾವಿಕ. ಒಂದು ಸಮಾಜದವರೆಲ್ಲರೂ ಒಂದೇ ರಾಜಕೀಯ ಪಕ್ಷದಲ್ಲಿದ್ದಾರೆಂದು ಹೇಳುವುದು ಹೇಗೆ ಅನುಚಿತವೋ ಹಾಗೆಯೇ ಇರಬೇಕೆಂದು ಆಗ್ರಹಪಡುವುದೂ ವಿಫಲವಾದುದು. ಸಮಾಜದಲ್ಲಿ ಭಿನ್ನಾಭಿಪ್ರಾಯಗಳಿರುವುದು ಸ್ವಾಭಾವಿಕ.

ವೀರಶೈವರು ಈ ದೇಶದ ಯಾವ ರಾಜಕೀಯ ಪಂಗಡದಲ್ಲಿಯೂ ೧೯೨೦ ನೆಯ ಇಸವಿಯ ವರೆಗೆ ಸೇರಿರಲಿಲ್ಲವೆಂದು ಹೇಳಬಹುದು. ಗಾಂಧೀಜಿಯವರ ಅಸಹಕಾರ ಚಟುವಟಿಕೆಯು ಅದ್ಭುತವಾಗಿ ೧೯೨೦-೨೧ ರಲ್ಲಿ ಪ್ರಾರಂಭವಾದಾಗ ವೀರಶೈವ ಸುಶಿಕ್ಷಿತರು ಹೆಚ್ಚಾಗಿ ಬ್ರಾಹ್ಮಣೇತರ ಪಕ್ಷದಲ್ಲಿ ಸೇರಿದರು. ಇದೇ ಇವರ ಮೊದಲನೆಯ ರಾಜಕೀಯ ಪಕ್ಷ. ಕೈ. ಎಂ. ಬಸವಯ್ಯನವರು ಮೈಸೂರು ಪ್ರಾಂತದಲ್ಲಿಯು ದಿ| ಬ| ಕಂಬಳಿಯವರು ಮತ್ತು ಶ್ರೀಮಾನ್ ಚಿಕ್ಕೋಡಿ ಪಂಡಿತಪ್ಪನವರು ಮುಂಬೈ ಕರ್ನಾಟಕದ ವೀರಶೈವರಲ್ಲಿಯು ಆ ಕಾಲಕ್ಕೆ ಬ್ರಾಹ್ಮಣೇತರ ಪಕ್ಷವನ್ನು ಹೆಚ್ಚಾಗಿ ಪ್ರಸಾರಗೊಳಿಸಿದರು.

ಆಗ ಬಹುಮಟ್ಟಿಗೆ ಈ ಸಮಾಜವು ಆ ಪಕ್ಷವನ್ನೇ ಸೇರಿದ್ದಿತೆಂದು ಹೇಳಬಹುದು. ಖಾದಿ ಪ್ರಸಾರವು ಕೂಡಾ ಈ ಸಮಾಜಕ್ಕೆ ಆಗ ಒಪ್ಪಿಗೆಯಿರಲಿಲ್ಲ. ವೀರಶೈವರಲ್ಲಿ ಯಾರಾದರೂ ಒಬ್ಬರು ಖಾದಿ ಪ್ರಸಾರದ ಕಾರ್ಯ ಮಾಡಿದರೆ, ಮರಗಳಿಲ್ಲದ ಪ್ರದೇಶದಲ್ಲಿ ಔಡಲ ಗಿಡವೇ ಮರವಾಗಿ ಪರಿಣಮಿಸುವಂತೆ ಅವರೇ ಮಹಾ ದೇಶಭಕ್ತರಾಗುತ್ತಿದ್ದರು. ಅಂಥವರು ವೀರಶೈವ ಸಮಾಜಕ್ಕೇನೇ ಕಲಂಕವನ್ನು ತರುತ್ತಾರೆಂದು ಅವರು ವೀರಶೈವರೇ ಅಲ್ಲವೆಂದು ಪ್ರಕಟಗೊಳಿಸಲಿಕ್ಕೂ ಅನೇಕರು ಪ್ರೋತ್ಸಾಹಿಸುತ್ತಿದ್ದರು. ಆಗ ಖಾದಿ ಮತ್ತು ಕಾಂಗ್ರೆಸ್ ಇವು ವೀರಶೈವ ಸಮಾಜಕ್ಕೆ ಅಷ್ಟು ಅಪ್ರಿಯವಾಗಿದ್ದವು.

ಈ ಸ್ಥಿತಿಯು ಮುಂದೆ ಹತ್ತು ವರುಷಗಳಲ್ಲಿ ಉಳಿಯಲಿಲ್ಲ. ಗಾಂಧೀಜಿಯವರ ಶಾಸನ ಭಂಗದ ಚಟುವಟಿಕೆಯ ಕಾಲದಲ್ಲಿ ಖಾದಿ ಭಕ್ತರು ವಿಶೇಷವಾಗಿ ವೀರಶೈವರಲ್ಲಿ ತೋರಿದರು. ಖಾದಿ ಕಾರ್ಯಕ್ಕೂ ಕಾಂಗ್ರೆಸ್ಸಿನ ಚಟುವಟಿಕೆಗಳಿಗೂ ಧಾರಾಳವಾಗಿ ಧನ ಸಹಾಯಮಾಡಿದರು. ಇಷ್ಟೇ ಅಲ್ಲ; ನೂರಾರು ವೀರಶೈವರು ಶಾಸನ ಭಂಗದ ವೀರಚಟುವಟಿಕೆಯಲ್ಲಿಯೂ ಸೇರಿದರು. ಆದುದರಿಂದ ಆಗ ವೀರಶೈವ ಸಮಾಜವು ಬ್ರಾಹ್ಮಣೇತರ ಪಕ್ಷದಲ್ಲಿಯೇ ಇದೆಯೆಂದು ಹೇಳಲು ಯಾರಿಗೂ ಎದೆಗಾರಿಕೆಯಿರಲಿಲ್ಲ. ಆದರೆ ವೀರಶೈವ ಸಮಾಜವು ನಮ್ಮ ಪಾಲಾಯಿತೆಂದು ಕಾಂಗ್ರೆಸ್ ಪಕ್ಷದ ವೀರಶೈವರು ಹೇಳಿಕೊಳ್ಳುವಂತಹ ಸ್ಥಿತಿಯೂ ಪ್ರಾಪ್ತವಾಗಲಿಲ್ಲ. ಏಕೆಂದರೆ ಬ್ರಾಹ್ಮಣೇತರ ಪಕ್ಷದ ಪ್ರಮುಖರಾದ ದಿ| ಬ| ಕಂಬಳಿಯವರ ಕಡೆಗೆ ವೀರಶೈವರ ಬಲವು ಎಷ್ಟೋ ಇದ್ದೇ ಇದ್ದಿತು.

ದಿ| ಬ| ಕಂಬಳಿಯವರಿಗೆ ಮಂತ್ರಿತ್ವವು ಬ್ರಾಹ್ಮಣೇತರ ಪಕ್ಷದಿಂದಲೇ ಪ್ರಾಪ್ತವಾಗಿದ್ದರೂ ವೀರಶೈವರ ಬಲವೇನೂ ಅವರ ಈ ಸ್ಥಾನಕ್ಕೆ ಕಾರಣವಾಗಿಲ್ಲವೆಂದು ಹೇಳಲಿಕ್ಕೆ ಬರುವಂತಿಲ್ಲ. ಅನಂತರ ನಾಲ್ಕಾರು ವರುಷಗಳಲ್ಲಿ ಮತ್ತೆ ಎಷ್ಟೋ ಜಾಗೃತಿಯಾಯಿತು. ೧೯೩೭ ನೆಯ ಅಸೆಂಬ್ಲಿ ಚುನಾವಣೆಯ ಕಾಲಕ್ಕೆ ಶ್ರೀಮಾನ್ ಹೊಸಮನಿ ಸಿದ್ಧಪ್ಪನವರು ಜಯಶೀಲರಾದರು. ಇವರು ಕಾಂಗ್ರೆಸ್ ಪಕ್ಷದಿಂದ ಆರಿಸಿಬಂದಿದ್ದರೂ ವೀರಶೈವರ ಹೆಚ್ಚಾದ ಸಹಾಯವು ಇವರ ವಿಜಯಕ್ಕೆ ಕಾರಣವಾಗಿದೆಯೆಂಬುದನ್ನು ಯಾರೂ ನಿರಾಕರಿಸಲಾರರು.

ನಿಜಸ್ಥಿತಿಯು ಹೀಗಿರುವಾಗ ದಿ| ಬ| ಕಂಬಳಿಯವರು ಮಂತ್ರಿಗಳಾದ ಮಾತ್ರದಿಂದ ವೀರಶೈವ ಸಮಾಜವು ಸರಕಾರಕ್ಕೆ ಸೇರಿದ ಸಮಾಜ, ಇದು ರಾಷ್ಟ್ರದ್ರೋಹದ ಸಮಾಜ, ಸ್ವಾತಂತ್ರ್ಯ ಪ್ರಾಪ್ತಿಗೆ ಕಂಟಕವಾಗಿರುವ ಸಮಾಜ, ಎಂದು ಈ ಸಮಾಜವನ್ನು ಯಾರಾದರೂ ಅಲ್ಲಗಳೆದರೆ ಅದು ಅವರ ತಪ್ಪು ತಿಳುವಳಿಕೆ. ಇಲ್ಲವೇ ವೀರಶೈವರ ಅಥವಾ ದಿ| ಬ| ಕಂಬಳಿಯವರ ಉನ್ನತಿಯನ್ನು ಸಹಿಸದೆ ಹೇಳುವ ಮಾತು. ವೀರಶೈವ ಸಮಾಜದ ತೇಜೋಭಂಗ ಮಾಡುವ ದುರುದ್ದೇಶ. ದಿ| ಬ| ಕಂಬಳಿಯವರನ್ನು ಹೇಗಾದರೂ ಮಾಡಿ ಕೆಳಗೆಳೆಯಲು ಜನರು ಅವರ ಕಡೆಗೆ ಹೋಗಬಾರದೆಂದು ಸಮಾಜವನ್ನೇ ಕೀಳುಮಾಡಿ ಹೇಳುವ ಕುಟಿಲ ಪ್ರಯತ್ನ.

ದಿ| ಬ| ಕಂಬಳಿಯವರು ತಮ್ಮ ವಿಚಾರ ಸರಣಿಯಂತೆ, ತಮ್ಮ ಸಾಹಸ ದಕ್ಷತೆಗಳಂತೆ, ತಮಗೊದಗಿದ ಸಮಯ ಸಂದರ್ಭಗಳಂತೆ ಜಯಶೀಲರಾಗಿ ಮಂತ್ರಿಗಳಾದರು. ಹಾಗಾದ ಮಾತ್ರದಲ್ಲಿ ವೀರಶೈವ ಸಮಾಜವೇ ಸರಕಾರದ ಸಮಾಜವೆಂದು ಹೇಳುವುದಾಗಲಿ ಅಥವಾ ತಿಳಿದುಕೊಳ್ಳುವುದಾಗಲಿ ವಿಹಿತವಲ್ಲ. ವೀರಶೈವ ಸಮಾಜದಲ್ಲಿ ದಿ| ಬ| ಕಂಬಳಿಯವರೇನೋ ಒಬ್ಬರು ಆ ಸ್ಥಾನಕ್ಕೆ ಹೋಗಿದ್ದಾರೆ. ಬ್ರಾಹ್ಮಣ ಸಮಾಜದಲ್ಲಿ ಎಷ್ಟು ಜನರು ಇಂತಹ ಸ್ಥಾನಗಳಲ್ಲಿಲ್ಲ? ಯಾವ ರಾಜ್ಯಪದ್ಧತಿಯು ರಾಷ್ಟ್ರದ ರಕ್ತವನ್ನೇ ಹೀರುತ್ತದೆಂದು ಕಾಂಗ್ರೆಸ್ ಹೇಳುತ್ತದೆಯೋ ಅದೇ ರಾಜ್ಯಯಂತ್ರವನ್ನು ನಡೆಯಿಸುವ ಅಧಿಕಾರಿ ವರ್ಗದಲ್ಲಿ ವೀರಶೈವರಿಗಿಂತ ಎಷ್ಟು ಪಟ್ಟು ಬ್ರಾಹ್ಮಣರು ಹೆಚ್ಚಾಗಿಲ್ಲ? ಹಾಗಿದ್ದ

ಮಾತ್ರದಲ್ಲಿ ಬ್ರಾಹ್ಮಣ ಸಮಾಜವು ಸರಕಾರದ ಸಮಾಜವೆಂದು ಹೇಳಲಿಕ್ಕಾಗುವುದೆ ?

ಇಂಗ್ಲಿಷ್ ರಾಜ್ಯ ಪದ್ಧತಿಯನ್ನು ಕಠೋರವಾಗಿ ಖಂಡಿಸುವ ರಾಷ್ಟ್ರೀಯ ಬ್ರಾಹ್ಮಣರೂ ಬೇಕಷ್ಟು ಇದ್ದಾರೆ.. ಅದೇ ರಾಜ್ಯವನ್ನು ನಡೆಸುತ್ತಿರುವ ಬ್ರಾಹ್ಮಣರೂ ಯಥೇಚ್ಛವಾಗಿದ್ದಾರೆ. ಎಂದಮೇಲೆ ಬ್ರಾಹ್ಮಣ ಸಮಾಜವು ಕಾಂಗ್ರೆಸ್ ಸಮಾಜವೆ ? ಅಥವಾ ಸರಕಾರದ ಸಮಾಜವೆ ? ಕಾಂಗ್ರೆಸ್ ರಾಷ್ಟ್ರೀಯ ಪಕ್ಷದಲ್ಲಿ, ಕಾಂಗ್ರೆಸ್ ಸೋಶಿಯಾಲಿಸ್ಟ ಪಕ್ಷದಲ್ಲಿ, ಲೋಕಶಾಹಿ ಸ್ವರಾಜ್ಯ ಪಕ್ಷದಲ್ಲಿ, ಹಿಂದು ಮಹಾಸಭೆಯ ಪಕ್ಷದಲ್ಲಿ, ಪ್ರಾಗತಿಕ ಪಕ್ಷದಲ್ಲಿ, ಇಷ್ಟೇ ಅಲ್ಲ ವರ್ಣಾಶ್ರಮ ಸ್ವರಾಜ್ಯ ಪಕ್ಷದಲ್ಲಿ, ಬ್ರಾಹ್ಮಣರು ಕಡಿಮೆಯಾಗಿದ್ದಾರೆಯೆ ? ಎಂದಮೇಲೆ ಬ್ರಾಹ್ಮಣ ಸಮಾಜ ಯಾವ ಯಾವ ರಾಜಕೀಯ ಧ್ಯೇಯವುಳ್ಳ ಯಾವ ಪಕ್ಷಕ್ಕೆ ಸೇರಿದೆ ?

ಶಿಕ್ಷಣ ಪ್ರಸಾರವಾದಂತೆ ವಿಚಾರ ಸ್ವಾತಂತ್ರ್ಯ ಮತ್ತು ಭಿನ್ನತೆಗಳು ಸಮಾಜಲ್ಲಿ ಹೆಚ್ಚುವುದು ಸ್ವಾಭಾವಿಕ. ಆಗ ಈ ಪ್ರಕಾರ ಭಿನ್ನ ಭಿನ್ನ ಕಾರ್ಯಕ್ಷೇತ್ರಗಳಲ್ಲಿ ಒಂದೇ ಸಮಾಜದವರಿರುವುದು ಕ್ರಮ ಪ್ರಾಪ್ತ. ಇದು ಆ ಸಮಾಜದ ಉನ್ನತಿಯ ಒಂದು ಹೆಗ್ಗುರುತು. ಬ್ರಾಹ್ಮಣ ಸಮಾಜವೇನೋ ವಿಸ್ತಾರವಾಗಿದೆಯೆಂದು ಹೀಗಲ್ಲ. ಅತಿ ಚಿಕ್ಕದಾದ ಪಾರ್ಶಿ ಸಮಾಜದಲ್ಲಿ ಕೂಡಾ ಎಲ್ಲ ಪಕ್ಷಗಳ ಮಹಾ ವ್ಯಕ್ತಿಗಳು ಇಲ್ಲವೆ ? ಈ ನಿಯಮದಂತೆಯೇ ವೀರಶೈವ ಸಮಾಜದಲ್ಲಿಯೂ ಅನೇಕರು ಅನೇಕ ಪಂಗಡಗಳಲ್ಲಿರುವುದು ಸ್ವಾಭಾವಿಕ.

ದಿ| ಬ| ಕಂಬಳಿಯವರು ಮಂತ್ರಿಗಳಾದ ಮಾತ್ರದಲ್ಲಿ ವೀರಶೈವ ಸಮಾಜವು ಸರಕಾರದ ಸಮಾಜವಾಗುವುದಾದರೆ ಶ್ರೀಮಾನ್ ಹೊಸಮನಿ ಸಿದ್ದಪ್ಪನವರು ಕಾಂಗ್ರೆಸ್ ಪಕ್ಷದಿಂದ ಅಸೆಂಬ್ಲಿಯಲ್ಲಿ ಪ್ರತಿನಿಧಿಗಳಾದುದರಿಂದ ಇದು ಕಾಂಗ್ರೆಸ್ ಸಮಾಜವೇಕಲ್ಲ ? ಆದುದರಿಂದ ಒಬ್ಬಿಬ್ಬರ ವೈಯಕ್ತಿಕ ಕಾರ್ಯಕಲಾಪಗಳ ಮೇಲಿಂದ ಹೀಗೆ ಸಮಾಜವೇ ಅವರ ಪಾಲಿನದೆಂದು ಹೇಳುವುದು ಸರಿಯಲ್ಲ ತಮ್ಮ ಅದ್ವಿತೀಯವಾದ ದೇಶಭಕ್ತಿ ಮತ್ತು ಸ್ವಾರ್ಥತ್ಯಾಗಗಳಿಂದ ಶ್ರೀಮಾನ್ ಸಿದ್ದಪ್ಪನವರು ಇಂತಹ ಮನ್ನಣೆಯನ್ನು ಹೊಂದಿದ್ದಾರೆ. ಇವರು ವೀರಶೈವರೆಂಬ ಮಾತ್ರದಲ್ಲಿ ವೀರಶೈವ ಸಮಾಜವೇ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದಾಗಿದೆಯೆಂದು ಹೇಳಬಹುದೆ ?

ಈ ವರೆಗೆ ವೀರಶೈವರಲ್ಲಿ ಈ ಎರಡೇ ಪಕ್ಷಗಳಿಗೆ ಸೇರಿದವರಿದ್ದರು. ಈಗ ಬ್ಯಾರಿಸ್ಟರ್ ಸರದಾರರು ಪ್ರಾಗತಿಕ ಪಕ್ಷದಲ್ಲಿ ಸೇರಿ, ತಮ್ಮ ಪಕ್ಷವನ್ನು ಪ್ರಸಾರಗೊಳಿಸುತ್ತಿದ್ದಾರೆ ಇವರ ಪಕ್ಷದಲ್ಲಿಯೂ ಅನೇಕ ವೀರಶೈವರು ಸೇರಬಹುದು. ಆಗ ಅವರು ವೀರಶೈವ ಸಮಾಜವು ಪ್ರಾಗತಿಕ ಪಕ್ಷಕ್ಕೆ ಸೇರಿದ್ದೆಂದೂ ವಸಾಹತ ಸ್ವರಾಜ್ಯವೇ ವೀರಶೈವರ ಧ್ಯೇಯವೆಂದೂ ಹೇಳಬಹುದೇ? ಶ್ರೀಮಾನ್ ಬಾಮಣಗಾಪಕರರು ಲೋಕಶಾಹಿ ಸ್ವರಾಜ್ಯ ಪಕ್ಷದಲ್ಲಿ ಸೇರಿದ್ದಾರೆ. ಅವರು ವೀರಶೈವ ಸಮಾಜವು ತಮ್ಮ ಪಕ್ಷದ್ದೆಂದು ಹೇಳಿಕೊಳ್ಳಬಹುದೇ ?

ಆದಕಾರಣ ಒಂದು ಪಕ್ಷಕ್ಕೆ ಕೂಡಿದ ಕೆಲವರು ಇಡೀ ಸಮಾಜವೇ ತಮ್ಮ ಪಕ್ಷದ್ದೆಂದು ಹೇಳುವುದು ಅನುಚಿತ. ಹಾಗೆ ನಿರ್ಧರಿಸಬೇಕಾದರೆ ಎಲ್ಲ ಪಕ್ಷಗಳ ಪ್ರಾತಿನಿಧ್ಯ ಸಭೆಯು ಏರ್ಪಟ್ಟು ಚರ್ಚೆಯಾಗಿ ಬಹುಮತದಿಂದ ನಿರ್ಣಯವಾಗಬೇಕು. ಗದಗಿನಲ್ಲಿ ಕೂಡಿದ ರಾಷ್ಟ್ರೀಯ ವೀರಶೈವರ ಸಭೆಯು ಇಂಥ ಸಭೆಯಾಗಿರಲಿಲ್ಲ.

ವೀರಶೈವ ಸಮಾಜಕ್ಕೆ ಮುಸಲ್ಮಾನ್ ಮೊದಲಾದ ಕೆಲವು ಸಮಾಜಗಳಂತೆ ಜಾತಿವಿಶಿಷ್ಟವಾದ ಪ್ರತ್ಯೇಕ ಸ್ಥಾನವೇನೂ ಈಗಿನ ರಾಜ್ಯ ಘಟನೆಯಲ್ಲಿಲ್ಲ. ಎಂದಮೇಲೆ ಇದಕ್ಕೊಂದು ಪ್ರತ್ಯೇಕವಾದ ರಾಜಕೀಯ ಧ್ಯೇಯವಾದರೂ ಹೇಗೆ ಸಲ್ಲುತ್ತದೆ ? ಆದಕಾರಣ ರಾಷ್ಟ್ರೀಯ ವೀರಶೈವರು ಹೀಗೆ ಜಾತಿವಿಶಿಷ್ಟರ ಧ್ಯೇಯವನ್ನು ಗುರ್ತಿಸಲಿಕ್ಕೆ ಹೋಗುವುದೂ ಅದನ್ನು ಪ್ರಕಟಿಸಲಾರಂಭಿಸುವುದೂ ಅಸಂಗತವೂ ಅಹಿತಕರವೂ ಆಗಿಲ್ಲವೇ ?

ವಾದದ ಗೊತ್ತುವಳಿಯ ವಿವೇಚನೆ.

ಕಳೆದ ಜೂನ ತಿಂಗಳಲ್ಲಾದ ರಾಯಚೂರು ವೀರಶೈವ ಮಹಾಸಭೆಯಲ್ಲಿ ಮುಂಬರುವ ಶಾಸನ ಮಂಡಲಗಳ ಚುನಾವಣೆಯ ಕುರಿತು ಒಂದು ಗೊತ್ತುವಳಿಯಾಯಿತಷ್ಟೆ. ಆ ಗೊತ್ತುವಳಿಯ ಸಂಬಂಧವಾಗಿ ಸಂಯುಕ್ತ ಕರ್ನಾಟಕ ಪತ್ರಿಕಾ ಪ್ರತಿನಿಧಿಗಳು ಸುಳ್ಳು ಬರೆದು ಜನರಲ್ಲಿ ದುರಭಿಪ್ರಾಯವನ್ನುಂಟುಮಾಡಿದರು. ಆ ಸುಳ್ಳನ್ನೇ ನಂಬಿ ವೀರಶೈವ ಮಹಾಸಭೆಯ ಮೇಲೆ ಅನೇಕರು ಮಣ್ಣು ತೂರಲಾರಂಭಿಸಿದರು. ಆಗ ಎಲ್ಲ ಸಂಗತಿಗಳನ್ನೂ ತಾ. ೨೯-೬-೩೬ ನೆಯ ಶರಣ ಸಂದೇಶ ಪತ್ರಿಕೆಯಲ್ಲಿ ವಿಸ್ತಾರವಾಗಿ ವಿವರಿಸಿ ಮಹಾಸಭೆಯ ಮೇಲೆ ಮಾಡಲ್ಪಡುವ ದೋಷಾರೋಪಣೆಯು ಹೇಗೆ ಅಯುಕ್ತವಾದುದೆಂಬುದನ್ನು ನಮ್ಮ ವಾಚಕರ ಮುಂದಿಟ್ಟಿದ್ದೆವಷ್ಟೆ.

ಅದೇ ಲೇಖನದಲ್ಲಿ ಈ ವಿಷಯವನ್ನು ಇನ್ನು ಮೇಲೆ ವೃಥಾ ಚರ್ಚಿಸುವುದು ಹಿತಕರವಲ್ಲವೆಂತಲೂ ಸೂಚಿಸಿದ್ದೆವು. ಆದರೆ ರಾಯಚೂರು ಮಹಾಸಭೆಯಲ್ಲಾದ ಆ ಗೊತ್ತುವಳಿಯನ್ನು ಮತ್ತೆ ಕೆಲವರು ಭಾಷಣದಲ್ಲಿ ಅಲ್ಲಗಳೆಯಲಾರಂಭಿಸಿದ್ದಲ್ಲದೆ ಕಳೆದ ೬ ನೆಯ ತಾರೀಖಿನ ದಿವಸ ಗದಗಿನಲ್ಲಿ ಕೂಡಿದ ರಾಷ್ಟ್ರೀಯ ವೀರಶೈವರು ಅದನ್ನು ನಿಷೇಧಿಸಿ ವೀರಶೈವ ಸಮಾಜಕ್ಕೆ ಕಲಂಕ ಹಚ್ಚುವ ಅಯುಕ್ತವಾದ ಪ್ರಯತ್ನವನ್ನು ಮಾಡಿದ್ದರಿಂದ ನಾವು ಪುನಃ ಈ ವಿಷಯದ ಕಡೆಗೆ ಲಕ್ಷಿಸುವ ವಿಷಾದಕರ ಪ್ರಸಂಗವು ಬಂದಿತು.

ಮಹಾಸಭೆಯ ಗೊತ್ತುವಳಿ ಮತ್ತು ಅದರ ನಿಷೇಧದ ಗೊತ್ತುವಳಿ ಇವೆರಡೂ ಈ ಪ್ರಕಾರ ಇವೆ—

ಮಹಾಸಭೆಯ **ಗೊತ್ತುವಳಿ**— "ರಾಜಕೀಯ ಸುಧಾರಣಾ ಕಾಯದೆಯು ಬೇಗನೆ ಪ್ರಚಾರದಲ್ಲಿ ಬರತಕ್ಕದ್ದಾಗಿದ್ದು ಇದಕ್ಕೋಸ್ಕರ ವೀರಶೈವರು ಸುಸಂಘಟಿತವಾಗಿ ಪ್ರಯತ್ನಿಸಿ ಹೆಚ್ಚಾಗಿ ಕಾಯದೆ ಮಂಡಲಗಳಲ್ಲಿ ಸೇರಬೇಕೆಂತಲೂ ಅವುಗಳಲ್ಲಿ ಸೇರಿದ ಬಳಿಕ ದೇಶಕ್ಕೂ, ಸಮಾಜಕ್ಕೂ ಹಿತಕರವಾಗುವ ಕಾರ್ಯಕ್ರಮಗಳನ್ನು ಅನುಸರಿಸಿ ಅವುಗಳನ್ನು ನಡೆಯಿಸಬೇಕೆಂತಲೂ ಈ ಮಹಾಸಭೆಯು ಅಭಿಪ್ರಾಯಪಡುತ್ತದೆ."

ನಿಷೇಧಿಸಿದ ಗೊತ್ತುವಳಿ— "ಹೊಸರಾಜ್ಯಘಟನೆಗಳು ಅಗ್ರಾಹ್ಯವಾಗಿದ್ದು ಅವನ್ನು ಇಡೀ ರಾಷ್ಟ್ರದಲ್ಲಿಯ ಎಲ್ಲ ಪಕ್ಷಗಳೂ ನಿಷೇಧಿಸಿರುವಾಗ ರಾಯಚೂರಲ್ಲಿ ಕೂಡಿದ ವೀರಶೈವ ಮಹಾಸಭೆಯವರು ಹೊಸ ಸುಧಾರಣೆಗಳನ್ನು ಉಪಯೋಗಮಾಡಿಕೊಳ್ಳಬೇಕೆಂಬ ಅಭಿಪ್ರಾಯದ ನಿರ್ಣಯಮಾಡಿದುದನ್ನು ಈ ಸಭೆಯು ತೀವ್ರತರವಾಗಿ ನಿಷೇಧಿಸುತ್ತದೆ."

ವೀರಶೈವ ಮಹಾಸಭೆಯ ಈ ಗೊತ್ತುವಳಿಯೆಂದರೆ ಅದು ಸಾಮಾನ್ಯವಾಗಿ ವೀರಶೈವ ಸಮಾಜದ ಅಭಿಪ್ರಾಯವೆಂದೇ ನಮ್ಮ ತಿಳುವಳಿಕೆ. ಆ ಗೊತ್ತುವಳಿಯನ್ನು ತಂದ ಬ್ಯಾ. ಸರದಾರರ ಅಥವಾ ಅದಕ್ಕೆ ಅನುಮೋದನವನ್ನು ಕೊಟ್ಟ ಶ್ರೀಯುತ ಕೇಸರಿ ವಕೀಲರ ಇಲ್ಲವೆ ಆಗ ಅಧ್ಯಕ್ಷರಾಗಿದ್ದ ದಿ| ಬ| ಕಂಬಳಿಯವರ ಅಭಿಪ್ರಾಯವೆಂದು ನಾವು ಯೋಚಿಸುವುದಿಲ್ಲ. ಹಾಗೆ ಯಾರಾದರು ಯೋಚಿಸಿದರೆ ಅದು ತಪ್ಪು. ಒಂದು ಗೊತ್ತುವಳಿಯಿಂದ ಯಾವ ಅಭಿಪ್ರಾಯವು ವ್ಯಕ್ತವಾಗುತ್ತದೋ ಅಷ್ಟನ್ನೇ ನಾವು ಇಟ್ಟುಕೊಂಡು ಯೋಚಿಸಬೇಕೇ ವಿನಾ ಆಗ ಅಧ್ಯಕ್ಷರಾಗಿದ್ದವರ ಇಲ್ಲವೆ

ಗೊತ್ತುವಳಿಯನ್ನು ತಂದವರ ಮತ್ತು ಅದನ್ನು ಅನುಮೋದಿಸಿದವರ ಸ್ವಂತ ಅಭಿಪ್ರಾಯಗಳನ್ನೆಲ್ಲಾ ಆ ಗೊತ್ತುವಳಿಗೆ ಅಂಟಿಸುವುದು ನ್ಯಾಯವಲ್ಲ. ಸಾರ್ವಜನಿಕ ಕಾರ್ಯದ ರೀತಿ ನೀತಿಗಳನ್ನು ತಿಳಿದವರು ಇದನ್ನೆಂದೂ ಒಪ್ಪಲಾರರು.

ಅಂಥ ಮಹಾಸಭೆಯಲ್ಲಾದ ಗೊತ್ತುವಳಿಗೆ ಈ ಸ್ವರೂಪವನ್ನು ಕೊಡುವುದಾದರೆ ಅಲ್ಲಿದ್ದವರೆಲ್ಲಾ ಕುರಿಗಳೆಂಬೇ ಒಂದು ರೀತಿಯಲ್ಲಿ ಹೇಳಿದಂತಾಗುವುದು. ವೀರಶೈವ ಸಮಾಜದ ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಅರ್ಹವಾಗಿರತಕ್ಕ ಸಂಸ್ಥೆಯೆಂದರೆ ಈ ವರೆಗೆ ಮಹಾಸಭೆಯೊಂದೇ ಸರಿ. ಆ ಸಭೆಯ ತೀರ್ಮಾನವೇ ವೀರಶೈವ ಸಮಾಜದ ಬಹು ಭಾಗದವರ ಅಭಿಪ್ರಾಯವೆಂಬುದು ನಿರ್ವಿವಾದವಾದುದು. ಆದಕಾರಣ ಮಹಾಸಭೆಯ ಸ್ತುತಿ ನಿಂದೆಗಳು ವೀರಶೈವ ಸಮಾಜದ ಮಾನಾಪಮಾನಗಳು. ನಿಷ್ಪಕ್ಷಪಾತಿಗಳಿಗೆ ಮಾನ್ಯವಾದ ಈ ಸತ್ಯ ಸಂಗತಿಗಳನ್ನು ಮೊದಲು ತಿಳಿದುಕೊಂಡರೇನೇ ಈ ವಾದಕ್ಕೆ ಬಂದ ವಿಕೃತ ಸ್ವರೂಪವು ಎಷ್ಟೋ ಲೋಪವಾಗುವುದು.

ಮಹಾಸಭೆಯ ಗೊತ್ತುವಳಿಯಲ್ಲಿ ನಿಷೇಧಕರು ತಿಳಿದುಕೊಂಡಂತೆ "ಹೊಸ ರಾಜ್ಯ ಘಟನೆ" ಅಥವಾ "ಹೊಸ ಸುಧಾರಣೆಗಳು" ಗ್ರಾಹ್ಯವೇ ಅಗ್ರಾಹ್ಯವೇ ಎಂಬ ವಿಷಯೇ ಒಂದಿಲ್ಲವೆಂಬುದನ್ನು ಮೊದಲು ಲಕ್ಷಿಸಬೇಕು. "ರಾಜ್ಯಘಟನೆ" ಅಥವಾ "ಸುಧಾರಣೆಗಳೆಂಬ" ಶಬ್ದಗಳು ಪ್ರಾಂತಿಕ ರಾಜ್ಯ ಘಟನೆ ಮತ್ತು ಸಂಯುಕ್ತ ಘಟನೆ (Federation) ಗಳನ್ನು ಕೂಡಿಕೊಂಡವುಗಳಾಗಿವೆ.

ಮಹಾಸಭೆಯ ಗೊತ್ತುವಳಿಯಲ್ಲಾದರೋ "ಬೇಗನೆ ಪ್ರಚಾರದಲ್ಲಿ ಬರತಕ್ಕ ಕಾಯಿದೆ ಮಂಡಲಗಳಲ್ಲಿ" ಎಂದು ಸ್ಪಷ್ಟವಾಗಿದೆ. ಎಂದಮೇಲೆ ಬರುವ ಎಪ್ರೆಲ್ ತಿಂಗಳಲ್ಲಿ ಏರ್ಪಡುವ ಪ್ರಾಂತಿಕ ಮಂಡಲಗಳ ಸಂಬಂಧವಾಗಿಯೇ ಈ ಗೊತ್ತುವಳಿಯಿದೆಯೇ ವಿನಾ ಇಡೀ ರಾಜ್ಯ ಘಟನೆಯ ಪ್ರಸ್ತಾಪವೇ ಇದರಲ್ಲಿಲ್ಲವೆಂಬುದು ವಿಚಾರಪರರಿಗೆ ಸ್ಪಷ್ಟ ಗೊತ್ತಾಗುವುದು.

ಆದಕಾರಣ ನಿಷೇಧಕರು ತಮ್ಮ ಗೊತ್ತುವಳಿಯಲ್ಲಿ "ಮಹಾಸಭೆಯವರು ಹೊಸ ಸುಧಾರಣೆಗಳನ್ನುಪಯೋಗ ಮಾಡಿಕೊಳ್ಳಬೇಕೆಂಬ ಅಭಿಪ್ರಾಯದ" ಎಂಬುದಾಗಿ ಪ್ರಯೋಗಿಸಿರುವುದು ಸಮಂಜಸವಾಗಿಲ್ಲ.

ಕಳೆದ ೧೯೩೫ ನೆಯ ಫೆಬ್ರುವರಿ ತಿಂಗಳ ಅಸೆಂಬ್ಲಿ ಅಧಿವೇಶನದಲ್ಲಿ ಬ್ಯಾ. ಜಿನ್ನಾರವರು ಪ್ರಾಂತಿಕ ಘಟನೆ ಮತ್ತು ಸಂಯುಕ್ತ ಘಟನೆಗಳೆಂಬೆರಡು ಭಾಗಗಳನ್ನು ಮಾಡಿಯೇ ತೀರ್ಮಾನಕ್ಕಿಟ್ಟದ್ದರ ಕಾರಣವಾದರೂ ಇವುಗಳಲ್ಲಿ ಮಹದಂತರವಿದೆಯೆಂದೇ ಅಲ್ಲವೇ ?

ಪ್ರಾಂತಿಕ ಘಟನೆಯಲ್ಲಿ ಕೆಲವು ತಿದ್ದುಪಾಟುಗಳಾದರೆ ಒಪ್ಪಿಗೆಯೆಂದೇ ಅಸೆಂಬ್ಲಿಯಲ್ಲಿ ಬಹುಮತದಿಂದ ತೀರ್ಮಾನವಾದುದನ್ನು ಇಲ್ಲಿ ಲಕ್ಷಿಸಬೇಕಾದುದು. ಕಾಂಗ್ರೆಸ್ ಪಕ್ಷದ ಶ್ರೀ. ಸತ್ಯಮೂರ್ತಿಗಳಂತಹ ರಾಷ್ಟ್ರಭಕ್ತರು ಮಂತ್ರಿತ್ವವನ್ನು ವಹಿಸಿ ರಾಜ್ಯ ಸೂತ್ರವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳಬೇಕೆಂದು ಹೇಳುತ್ತಿರುವುದೂ ಇದೇ ಪ್ರಾಂತಿಕ ಮಂಡಲದಲ್ಲಿ ಕುಳಿತು. ಕಾಂಗ್ರೆಸ್ ಪಕ್ಷದವರು ಮೊನ್ನೆ ಪ್ರಕಟಿಸಿರುವ ತಮ್ಮ ಉದ್ದೇಶ ಪತ್ರಿಕೆಯಲ್ಲಿ ಹಣ ಕಾಸುಗಳ ಸಂಬಂಧವಾಗಿಯೂ ಇನ್ನಿತರ ಕೆಲವು ವಿಷಯಗಳಲ್ಲಿಯೂ ಜನರಿಗೆ ಹಿತ ಮಾಡುತ್ತೇವೆಂದು ಹೇಳಿರುವುದೂ ಇದೇ ಪ್ರಾಂತಿಕ ಶಾಸನ ಮಂಡಲದಲ್ಲಿ ಸೇರಿ.

ಈಗ ವೀರಶೈವ ಸಮಾಜವನ್ನು ಈ ಗೊತ್ತುವಳಿಯ ಮೂಲಕ ಅಲ್ಲಗಳೆದು ನಾಳೆ ಇದೇ ಸಮಾಜದವರಲ್ಲಿ ಕಾಂಗ್ರೆಸ್ಸಿಗೇನೇ ನಿಮ್ಮ ಮತವನ್ನು ಕೊಡಿರೆಂದು ಈ ನಿಷೇಧಕರು ಕೇಳಲಿಕ್ಕೆ ಹೋಗುತ್ತಿರುವುದಾದರೋ ಅದೇ ಶಾಸನ ಮಂಡಲಗಳಲ್ಲಿ ಸೇರುವುದಕ್ಕಾಗಿ.

ವೀರಶೈವ ಮಹಾಸಭೆಯು ಆ ತನ್ನ ಗೊತ್ತುವಳಿಯಲ್ಲಿ ಹೇಳುವುದಾದರೂ ಏನು ? ಕಾಂಗ್ರೆಸ್ ಪಕ್ಷದವರು ಯಾವ ಶಾಸನ ಮಂಡಲದಲ್ಲಿ ಹೋಗಬೇಕೆಂದು ಹೇಳುತ್ತಿದ್ದಾರೆಯೋ ಅದೇ ಮಂಡಲದಲ್ಲಿ ವೀರಶೈವರೂ ಹೋಗಿರೆಂದಲ್ಲವೆ ?

ಕಾಂಗ್ರೆಸ್ ಪಕ್ಷದವರು ಮತ್ತು ಇನ್ನಿತರ ಪಕ್ಷದವರು ತಾವು ಶಾಸನ ಮಂಡಲಗಳಲ್ಲಿ ಹೋಗಿ ಹೀಗೆ ಮಾಡುತ್ತೇವೆ, ಹಾಗೆ ಮಾಡುತ್ತೇವೆ, ಎಂದು ವಿವರವಾಗಿ ಹೇಳಿದ್ದಾರೆ. ಮಹಾಸಭೆಯವರಾದರೋ ದೇಶಕ್ಕೂ ಸಮಾಜಕ್ಕೂ ಹಿತಕರವಾದ ಕಾರ್ಯ ಮಾಡಿರೆಂದು ಹೇಳಿದ್ದಾರೆ.

ಎಂದ ಮೇಲೆ ಮಹಾಸಭೆಯು ಮಾಡಿದ ಘೋರತರವಾದ ರಾಷ್ಟ್ರದ್ರೋಹವೇನು ? ಇದನ್ನು ಹೀಗೆ ಪುನಃ ಪುನಃ ಹಳಿದು ವೀರಶೈವ ಸಮಾಜದ ತೇಜೋಭಂಗ ಮಾಡಲೆತ್ನಿಸುತ್ತಿರುವುದರ ಕಾರಣವೇನು ?

ಯಾವ ಸಮಾಜವು ಈ ನಾಡಿನಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಕಾರ್ಯಕ್ಕೆ ಎಷ್ಟೋ ತನುಮನಧನಗಳನ್ನು ಅರ್ಪಿಸಿಯೂ ಅರ್ಪಿಸುತ್ತಲೂ ಇದ್ದುದಲ್ಲದೆ ರಾಷ್ಟ್ರ ಸೇವಕರನ್ನು ಎಷ್ಟೋ ಗೌರವಿಸುತ್ತಿರುವುದಕ್ಕೆ ಇದು ಬಹುಮಾನವೇ ?

ಸ್ವಸಮಾಜದವರೇ ಆಗಲಿ ಅಥವಾ ಪರಸಮಾಜದವರೇ ಆಗಲಿ ಈ ಪ್ರಕಾರ ವೀರಶೈವ ಸಮಾಜವನ್ನು ವೃಥಾ ದೋಷಾರೋಪಣೆಗೆ ಗುರಿಮಾಡುವುದು ವಿಹಿತವೆ? ಕಾಂಗ್ರೆಸ್ಸಿನಂತಹ ಪವಿತ್ರ ನಿಯಮ ನಿರ್ಬಂಧಗಳ ಸಂಸ್ಥೆಯಲ್ಲಿರತಕ್ಕ ಇಂತಹ ಸ್ವಾರ್ಥತ್ಯಾಗಿಗಳು ಈ ಹಟತೊಟ್ಟಿರುವುದು ಅತ್ಯಂತ ದುಃಖದ ಸಂಗತಿಯಲ್ಲವೆ?

ಮಹಾಸಭೆಯ ಗೊತ್ತುವಳಿಯಲ್ಲಿ ಬ್ರಾಹ್ಮಣೇತರ ಪಕ್ಷಕ್ಕೆ ಮತಕೊಡಿರೆಂದಾಗಲಿ ಕಾಂಗ್ರೆಸ್ಸಿಗೆ ಮತಕೊಡಬೇಡಿರೆಂದಾಗಲಿ ಹೇಳಿದೆಯೇ ? ವೀರಶೈವ ಹುರಿಯಾಳುಗಳೆಲ್ಲರೂ ಕಾಂಗ್ರೆಸ್ ಪಕ್ಷದವರಾಗಿ ಶಾಸನ ಮಂಡಲಗಳಲ್ಲಿ ಹೋಗಿ ಕಾಂಗ್ರೆಸ್ಸಿನ ಅಪ್ಪಣೆಯಂತೆ ಕೆಲಸ ಮಾಡಿದರೆ ಈ ಗೊತ್ತುವಳಿಗೇನಾದರೂ ವಿರೋಧವಾಗುವುದೆ ? ದೇಶಕ್ಕೆ ಹಿತಕರವಾದ ರೀತಿಯಲ್ಲಿ ಎಂಬುದೇ ಈ ಗೊತ್ತುವಳಿಯ ಪ್ರಾಣ. ಇದನ್ನು ಶಾಸನ ಮಂಡಲಗಳಲ್ಲಿ ಸೇರಿದವರ ಸದಸದ್ವಿವೇಕ ಬುದ್ಧಿಗೇನೇ ಮಹಾಸಭೆಯವರು ಬಿಟ್ಟುಕೊಟ್ಟಿದ್ದಾರೇ ವಿನಾ ಅದಕ್ಕೆ ಯಾವ ಪ್ರತಿಬಂಧವನ್ನೂ ಇಟ್ಟಿಲ್ಲ.

ಯಾರೋ ಒಬ್ಬರೇ ಹೋಗಿ ನನಗೆ ಹೀಗೆಯೇ ತೋರಿತೆಂದು ಹೇಳಲಿಕ್ಕು ಕೂಡಾ ಆ ಗೊತ್ತುವಳಿಯಲ್ಲಿ ಅವಕಾಶವಿಲ್ಲ. ಸುಸಂಘಟಿತವಾಗಿ ಎಂದು ಸ್ಪಷ್ಟವಾಗಿದೆ. ಎಂದಮೇಲೆ ಈ ಗೊತ್ತುವಳಿಯು ವೀರಶೈವ ಸಮಾಜದ ತೇಜೋಭಂಗ ಮಾಡಿಸಿಕೊಳ್ಳುವಂತಹ ಯಾವ ರಾಷ್ಟ್ರದ್ರೋಹದ ವಿಷವುಳ್ಳದ್ದಾಗಿದೆ ?

ರಾಷ್ಟ್ರ ಸೇವೆಯ ನಮ್ಮ ವೀರ ಬಂಧುಗಳು ದಯವಿಟ್ಟು ಇನ್ನೊಮ್ಮೆ ಮಹಾಸಭೆಯ ಗೊತ್ತುವಳಿಯನ್ನೂ ಇತರ ಪಕ್ಷಗಳ ಗೊತ್ತುವಳಿ, ವಿವೇಚನೆ, ಪ್ರತಿಪಾದನಗಳನ್ನೂ ಸೂಕ್ಷ್ಮವಾಗಿ ಪರ್ಯಾಲೋಚಿಸಬೇಕೆಂದು ಅತ್ಯಂತ ಪ್ರೇಮಾದರಗಳಿಂದ ಸೂಚಿಸಿ ಸದ್ಯಕ್ಕೆ ಈ ವಿಸ್ತಾರವಾದ ವಿವೇಚನೆಯನ್ನು ಮುಗಿಸುತ್ತೇವೆ.

ತಿದ್ದುಪಾಟು.

ಪುಟ ೪ ರಲ್ಲಿದ್ದ ಮೋರ್ಲೆ-ಮಿಂಟೊ ಸುಧಾರಣೆ ಎಂಬುದಕ್ಕೆ ಪ್ರತಿಯಾಗಿ ಮ್ಯಾಂಟಗೊ-ಚೇಮ್ಸ್ ಫರ್ಡ ಸುಧಾರಣೆಯೆಂದು ತಿಳಿಯಬೇಕು.

ಮ್ಯಾನೇಜರ್.

ಕೊಲ್ಲಾಪುರ ಮಹಾರಾಜರ ಸಂದೇಶ.

ಕೊಲ್ಲಾಪುರದ ಶ್ರೀ ಛತ್ರಪತಿ ರಾಜಾರಾಮ ಮಹಾರಾಜರವರು ತಾ. ೨೭-೮-೩೬ ನೆಯ ದಿವಸ ರಾಯಬಾಗ ಎಂಬಲ್ಲಿಂದ ಮುಂಬೈಯಲ್ಲಿ ಜರುಗಿದ "ಜುಣಕ ಭಾಕರಿ" ಸಹಭೋಜನ ಸಮಾರಂಭದವರಿಗೆ ಸ್ಫೂರ್ತಿದಾಯಕವಾದ ಒಂದು ಸಂದೇಶವನ್ನು ಕಳಿಸಿದ್ದಾರೆ. ಅದರಲ್ಲಿ ಹೀಗಿದೆ.—

"ಜುಣಕ ಭಾಕರಿ ಸಹಭೋಜನಕ್ಕೆ ತಾವು ನನಗೆ ಆಮಂತ್ರಣ ಕೊಟ್ಟಿದಕ್ಕಾಗಿ ತುಂಬಾ ಕೃತಜ್ಞರಾಗಿದ್ದೇನೆ. ಹಿಂದು ಸಮಾಜದಲ್ಲಿ ನಿಜವಾದ ಸಮಭಾವನೆಯುಂಟಾಗಲು ಈ ಪ್ರಕಾರ ಸಹಭೋಜನ ಸಮಾರಂಭ ಜರುಗಬೇಕಾದುದು ಅಗತ್ಯವಾಗಿದೆ. ಅಂತೆಯೇ ನಮ್ಮ ಪರಮ ಪೂಜ್ಯ ಕೈ. ರಾಜಋಷಿ ಶಾಹೂಛತ್ರಪತಿ ಮಹಾರಾಜರು ಇಪ್ಪತ್ತು ವರುಷಗಳ ಪೂರ್ವದಲ್ಲಿಯೇ ಈ ಸಹಭೋಜನ ಪದ್ಧತಿಯನ್ನು ಪ್ರಾರಂಭಿಸಿದ್ದರು.

ನಾವು ಈಗಲು ಕೂಡಾ ಅವರ ಮಾರ್ಗವನ್ನೇ ಅನುಸರಿಸಿ ಪ್ರತಿನಿತ್ಯದ ಪಂಕ್ತಿಗೆ ಆದಿಹಿಂದುಗಳನ್ನು ಕರೆದುಕೊಂಡೇ ಊಟ ಮಾಡುತ್ತಿದ್ದೇವೆ ಆದರಿಂದ ನಮ್ಮ ರಾಜ್ಯದಲ್ಲಿ ಅಸ್ಪೃಶ್ಯತಾ ನಿವಾರಣೆಯು ಬಹು ತೀವ್ರತರವಾಗಿ ಸಾಗಿದೆ

ನಮ್ಮ ರಾಜ್ಯದಲ್ಲಿ ಇನ್ನು ಮುಂದೆ ಅಸ್ಪೃಶ್ಯತೆಯೆಂಬ ಶಬ್ದವು ಕೂಡಾ ಇರಕೂಡದೆಂದೇ ನಮ್ಮ ಉದ್ದೇಶ. ಇದು ದಿನೆ ದಿನೆ ನೆರವೇರುತ್ತಲೂ ಇದೆ. ಆದಕಾರಣ ಶ್ರೀಮತ್ ಕ್ಷಾತ್ರ ಜಗದ್ಗುರುಗಳ ತೇಜೋಮಯವಾದ ನೇತೃತ್ವದಲ್ಲಿ ನೀವು ನಡೆಯಿಸಿರುವ ಸಹಭೋಜನವು ಅಖಿಲ ಹಿಂದುಸ್ಥಾನದಲ್ಲಿರುವ ಅಸ್ಪೃಶ್ಯತೆಯ ನಿವಾರಣೆಗೆ ತುಂಬಾ ಸಹಾಯವಾಗುವುದರಲ್ಲಿ ಸಂದೇಹವಿಲ್ಲ. ಶ್ರೀ ಕ್ಷಾತ್ರ ಜಗದ್ಗುರುಗಳವರು ಅಸ್ಪೃಶ್ಯತಾ ನಿವಾರಣೆಯ ವಿಚಾರದಲ್ಲಿ ಈ ವರೆಗೆ ಮಹತ್ವದ ಕಾರ್ಯಗಳನ್ನು ಮಾಡಿ ಧರ್ಮ ಪೀಠದ ಮಹತ್ವವನ್ನೂ ಉಪಯುಕ್ತತೆಯನ್ನೂ ವ್ಯಕ್ತಗೊಳಿಸಿರುವುದರಿಂದ ಅವರು ನಿಮ್ಮ ಕಾರ್ಯಕ್ಕೆ ಬಹು ಸಹಾಯಕರಾಗುವರೆಂದೂ ನಾವು ದೃಢವಾಗಿ ನಂಬಿದ್ದೇವೆ.

ನಿಮ್ಮ ಈ ಸಮಾರಂಭ ಜಯಪ್ರದವಾಗಲೆಂದೂ ಹಿಂದು ಸಮಾಜದಲ್ಲಿ ನಿಜವಾದ ಸಮಾನತೆಯು ನಿರ್ಮಾಣವಾಗಲೆಂದೂ ಜಗನ್ಮಾತಾ ಶ್ರೀ ತುಳಜಾ ಭವಾನಿಯನ್ನು ನಾವು ಅನನ್ಯ ಭಾವದಿಂದ ಪ್ರಾರ್ಥಿಸುತ್ತೇವೆ."

ಕೊಲ್ಲಾಪುರದ ಲೋಕಪ್ರಿಯ ದಿವಾನರಾದ ಶ್ರೀ. ಡಿ. ಎ ಸುರ್ವೆ ಇವರು ಕೂಡಾ ಈ ಸಮಾರಂಭಕ್ಕೆ ಸಹಾನುಭೂತಿಯ ಸಂದೇಶವನ್ನು ಕಳಿಸಿ ಅದರಲ್ಲಿ ಹೀಗೆ ಹೇಳಿದ್ದಾರೆ—

"ಹಿಂದುಗಳಲ್ಲಿಯ ಈ ಸಹಭೋಜನ ಪದ್ಧತಿಯು ಕೇವಲ ಹಿಂದು ಸಮಾಜಕ್ಕೇನೇ ಹಿತಕರವಾದುದಲ್ಲದೆ ಹಿಂದಿ ರಾಷ್ಟ್ರದ ಕಲ್ಯಾಣಕ್ಕೂ ಸಹಾಯಕರವಾದುದಾಗಿದೆ."

ಪಂಜಾಬದ ಹಿಂದುಗಳ ಸ್ಥಿತಿ.

ಲಾಹೋರಿನ ದಯಾನಂದ ಆಂಗ್ಲೋ-ವೈದಿಕ ಕಾಲೇಜಿನ ಪ್ರೊಫೆಸರರಾದ ಶ್ರೀ. ದಿವಾಣಚಂದ ಶರ್ಮ ಎಂಬುವವರು ಕಳೆದ ೧೧ ನೆಯ ತಾರೀಖಿನ ದಿವಸ ಪುಣೆಯಲ್ಲಿಯ ಟಿಳಕ ಸ್ಮಾರಕ ಮಂದಿರದಲ್ಲಿ "ಪಂಜಾಬ ಮತ್ತು ಜಾತಿನಿರ್ಣಯ" ಎಂಬ ವಿಷಯವಾಗಿ ಒಂದು ಮಹತ್ವದ ಭಾಷಣವನ್ನು ಮಾಡಿದರು. ಅದರ ಮುಖ್ಯಾಂಶ ಹೀಗಿದ್ದಿತು.—

"ಪಂಜಾಬ ಪ್ರಾಂತವು ಆರ್ಯರ ಮೊದಲಿನ ವಸತಿ ಸ್ಥಾನವೆಂಬುದು ಎಷ್ಟು ಅಭಿಮಾನಾಸ್ಪದವಾದ ಸಂಗತಿಯೋ ಅಷ್ಟೇ ಅದು ಹಿಂದುಸ್ಥಾನದಲ್ಲಿ ಪ್ರವೇಶಿಸುವ ಪರದೇಶದವರಿಗೆ ಮಹಾದ್ವಾರವಾಗಿದೆಯೆಂಬುದು ದುರ್ದೈವದ ಸಂಗತಿಯು. ಪರದೇಶಗಳಿಂದ ಬರುವ ಪ್ರಾಯಶಃ ಎಲ್ಲ ದಾಳಿಗಳಿಗೂ ಪಂಜಾಬದ ಹಿಂದುಗಳೇ ಎದೆ ಕೊಡಬೇಕಾಗುತ್ತಾ ಬಂದಿದೆ. ಆದಕಾರಣ ಅನೇಕ ಸಾರೆ ಈ ಹೋರಾಟಗಳಲ್ಲಿ ಅಲ್ಲಿಯ ಹಿಂದುಗಳು ಜಯಶೀಲರೂ ಆಗಿದ್ದಾರೆ. ಮತ್ತು ಅಪಜಯವನ್ನೂ ಹೊಂದಿದ್ದಾರೆ. ಈ ಪ್ರಕಾರ ಆಗಾಗ್ಗೆ ಅವರು ದಾಳಿಗಳ ಹೋರಾಟದಲ್ಲಿ ಸಿಕ್ಕು ಎಷ್ಟೋ ನಿರ್ಬಲರಾದರು. ಹೀಗಿದ್ದರೂ ಎಷ್ಟೋ ಸಂಘಟನೆಯನ್ನು ಮಾಡಿಕೊಂಡು ೨೦ ವರುಷಗಳ ಹಿಂದೆ ತಕ್ಕಷ್ಟಾದರೂ ಒಳ್ಳೆಯ ಸ್ಥಿತಿಯಲ್ಲಿದ್ದರು.

ಇಪ್ಪತ್ತು ವರ್ಷಗಳಿಂದೀಚೆಗೆ ಪಂಜಾಬದ ಹಿಂದುಗಳು ದಿನೆ ದಿನೆ ಹೀನಾವಸ್ಥೆಗೀಡಾಗುತ್ತಿದ್ದಾರೆ. ಮೊರ್ಲೆ-ಮಿಂಟೊ ಸುಧಾರಣೆಯ ಮುಂಚೆ ಹಿಂದು ಮತ್ತು ಶೀಖರು ಬಹು ಐಕಮತ್ಯವುಳ್ಳವರಾಗಿದ್ದರು. ಇವರಲ್ಲಿ ಪರಸ್ಪರ ಊಟೋಪಚಾರಗಳು ನಡೆಯುತ್ತಿದ್ದವಲ್ಲದೆ ಕೆಲವು ಪ್ರಸಂಗಗಳಲ್ಲ ವಿವಾಹವೂ ಜರುಗುತ್ತಿದ್ದಿತು. ಈ ಉಭಯರೂ ಧಾರ್ಮಿಕ, ಸಾಮಾಜಿಕ, ಸಾಂಪತ್ತಿಕ ಸಂಗತಿಗಳಲ್ಲಿ ಬಹು ಐಕಮತ್ಯದಿಂದ ವರ್ತಿಸುತ್ತಿದ್ದಕಾರಣ ಪಂಜಾಬದ ಮುಂದಾಳುತನವು ಸ್ವಾಭಾವಿಕವಾಗಿಯೇ ಈ ಸಮಾಜಗಳ ಕಡೆಗೇನೇ ಇದ್ದಿತು. ಆಗ ಮುಸಲ್ಮಾನರು ಕೂಡಾ ಈ ಸಮಾಜಗಳ ಸಂಗಡ ಸಹಾನುಭೂತಿಯಿಂದಲೇ ನಡೆದುಕೊಳ್ಳುತ್ತಿದ್ದರು.

ಜಾತಿವಿಶಿಷ್ಟವಾದ ರಾಜಕಾರಣವು ಪ್ರಾರಂಭವಾದನಂತರ ಈ ಸ್ಥಿತಿಯು ಬೇರೆಯಾಗುತ್ತಾ ಬಂದಿತು. ಹಿಂದು ಮುಸಲ್ಮಾನರ ಭಿನ್ನ ಭಿನ್ನ ಮತದಾರರ ಸಂಘವು ಏರ್ಪಟ್ಟಿದ್ದರಿಂದ ಪರಸ್ಪರರಲ್ಲಿ ಜಾತಿದ್ವೇಷವುಂಟಾಗಿ ಭಯಂಕರ ಸ್ಥಿತಿಯನ್ನು ಹೊಂದುತ್ತಾ ಬಂದಿತು. ಹಿಂದು ಮತ್ತು ಶೀಖರಲ್ಲಿ ಅನೈಕಮತ್ಯವು ತಲೆದೋರಿ ಅದು ಹೆಚ್ಚುತ್ತಾ ಬಂದಿತು. ಹಿಂದು ಜನರಿಗೆ ಸರಕಾರಿ ನೌಕರಿಯಲ್ಲಿಯೂ ಸಾರ್ವಜನಿಕ ಸಂಸ್ಥೆಗಳ ನೌಕರಿಯಲ್ಲಿಯೂ ಪ್ರತಿಬಂಧವುಂಟಾಗಲಾರಂಭವಾಯಿತು. ಇದರಿಂದ ಹಿಂದು ಸುಶಿಕ್ಷಿತರು ನಿರುದ್ಯೋಗಿಗಳಾಗಿ ತೊಂದರೆಪಡುವ ಪ್ರಸಂಗ ಬಂದಿದೆ.

ಕೆಲವು ದ್ವೇಷಿಗಳು ಹಿಂದು ಧನಿಕರ ವಿಷಯದಲ್ಲಿ ಮುಸಲ್ಮಾನರ ಮನಸ್ಸನ್ನು ಕೆಡಿಸಲಾರಂಭಿಸಿದ್ದರಿಂದ ಹಿಂದು ಧನಿಕರ ಕೊಲೆಯಾಗಲಾರಂಭವಾಗಿದೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಮುಸಲ್ಮಾನರಿಗೇನೇ ಬಹುಮತವನ್ನು ಕೊಟ್ಟದ್ದರಿಂದ ಮುಂದೆ ಹಿಂದುಗಳಿಗೆ ಯಾವ ಯಾವ ವಿಪತ್ತುಗಳುಂಟಾಗುತ್ತವೆಂಬುದನ್ನು ಹೇಳಲಿಕ್ಕಾಗುವುದಿಲ್ಲ. ಹೀಗಿದ್ದರೂ ನಾವೇನೂ ನಿರಾಶರಾಗಿಲ್ಲ. ಹಿಂದು ಮತ್ತು ಶೀಖರಲ್ಲಿ ಸಂಘಟನೆಯನ್ನುಂಟುಮಾಡಿ ಆದಿಹಿಂದು ಬಾಂಧವರನ್ನು ಕೂಡಿಕೊಂಡು ನಾವು ನಮ್ಮ ಸಂಸ್ಕೃತಿ, ಸಾಮಾಜಿಕ ಮತ್ತು ರಾಜಕೀಯ ಮಾನ್ಯತೆಗಳನ್ನು ಹೊಂದೇಹೊಂದುವೆವು. ಕೀರ್ತಿಶೇಷ ಲಾಲಾ ಲಜಪತರಾಯರ ಮತ್ತು ಟಿಳಕರ ಬೋಧವು ನಮ್ಮ ಹೃದಯದಲ್ಲಿ ನಾಟದೆ. ಎಜ್ಯುಕೇಟ, ಆರ್ಗನೈಜ್, ಮತ್ತು ಎಜಿಟೇಟ್ ಎಂದರೆ ಶಿಕ್ಷಣ, ಸಂಘಟನೆ ಮತ್ತು ಆಂದೋಲನ ಇವೇ ಆ ಬೋಧದ ಸೂತ್ರಗಳು."

—ಸ್ಪೇನ ದೇಶದ ದೊಂಬಿಯಲ್ಲಿ ಸರಕಾರಿ ಪಕ್ಷಕ್ಕೆ ಅಪಜಯವೇ ಆಗುತ್ತಿದೆ. ದೊಂಬಿಗಾರರ ರಾಜ್ಯವಾಗುವ ಲಕ್ಷಣ ತೋರುತ್ತಿದೆ.

—ಪ್ಯಾಲಿಸ್ಟಾಯಿನ್‌ದಲ್ಲಿ ಅರಬರು ನಡೆಸಿರುವ ದೊಂಬಿಯನ್ನು ನಿಲ್ಲಿಸಲು ಬ್ರಿಟಿಶ್ ಸರಕಾರವು ಸರಿಯಾದ ಸೈನ್ಯಬಲವನ್ನೇ ಇನ್ನು ಉಪಯೋಗಿಸುವಂತೆ ತೋರುತ್ತದೆ.

ಶಾಸನ ಮಂಡಲಗಳ ಕಾರ್ಯಕಲಾಪ.

ಅಸೆಂಬ್ಲಿಯ ಸಮಾಚಾರ.

ಅಂದಮಾನ ದ್ವೀಪದಲ್ಲಿರುವ ರಾಜಕೀಯ ಕೈದಿಗಳ ಸಂಬಂಧವಾಗಿ ಕಳೆದ ೧೦ ನೆಯ ತಾರೀಖಿನ ದಿವಸ ಅಸೆಂಬ್ಲಿಯಲ್ಲಿ ತುಂಬಾ ಚರ್ಚೆ ನಡೆಯಿತು. ಅಲ್ಲಿ ಈಗ ೩೦೦ ಕ್ರಾಂತಿಕಾರಕರಿದ್ದಾರೆ. ಅವರಿಗಾಗಿ ೭೮೦ ಕೋಣೆಗಳಿವೆ. ಅದೊಂದು ನಂದನವನವೆಂದೇ ಸರಕಾರದ ಕಲ್ಪನೆ! ಮುಂದಣ ತಿಂಗಳಲ್ಲಿ ಸರ್. ಯಾಮಿನಖಾನ ಮತ್ತು ಶ್ರೀ. ರಾಜ ಯಾದಾ ಹಂಸರಾಜ ಎಂಬ ಅಸೆಂಬ್ಲಿಯ ಸಭಾಸದರಿಬ್ಬರು ಅಂದಮಾನದ ಈ ರಾಜಕೀಯ ಕೈದಿಗಳನ್ನು ನೋಡಲು ಹೋಗುವರು.

ಇವರು ಅಲ್ಲಿ ಹೋಗಿ ಅಲ್ಲಿಯ ಸ್ಥಿತಿಗಳನ್ನು ನೋಡಿಕೊಂಡು ಬರಬೇಕಾದುದೇ ವಿನಾ ತಾವು ನೋಡಿಕೊಂಡು ಬಂದ ಸಂಗತಿಗಳ ವರದಿಯನ್ನೇನೂ ಸರಕಾರಕ್ಕೆ ಕೊಡಬೇಕಾಗಿಲ್ಲ. ಈ ಉಭಯರನ್ನು ಆರಿಸುವಾಗ ಅಸೆಂಬ್ಲಿಯ ಬೇರೆ ಬೇರೆ ಪಕ್ಷಗಳ ಅಭಿಪ್ರಾಯವನ್ನೇನೂ ಕೇಳಿಲ್ಲ.

ತಾ. ೧೧ ನೆಯ ದಿನದ ಅಧಿವೇಶನದಲ್ಲಿ ಪ್ಯಾಲಿಸ್ಟಾಯಿನ್ ಆರಬರ ದೊಂಬಿಯ ಪ್ರಶ್ನೆಯು ಬಂದಿತು. ಮಿ ಅಸಫ ಅಲ್ಲಿಯವರ ಪ್ರಶ್ನೆಗೆ ಉತ್ತರವಾಗಿ ಸರಕಾರವು ತಿಳಿಸುವಾಗ ಹಿಂದುಸ್ಥಾನದ ಜನಾಭಿಪ್ರಾಯವನ್ನು ಬ್ರಿಟಿಶ್ ಸರಕಾರಕ್ಕೆ ತಿಳಿಸಿದ್ದಾಗಿದೆಯೆಂದು ಹೇಳಿದರು. ಶ್ರೀ ಸತ್ಯಮೂರ್ತಿಯವರು ಪ್ಯಾಲಿಸ್ಟಾಯಿನ್ ದೊಂಬೆಯ ಸಂಬಂಧವಾಗಿ ಒಂದು ನಿಲುವಳಿ ಸೂಚನೆಯನ್ನು ತರಲು ಇಚ್ಛಿಸಿದರು. ಅಧ್ಯಕ್ಷರು ಒಪ್ಪಿಗೆಯನ್ನೂ ಕೊಟ್ಟರು. ಆದರೆ ವ್ಹಾಯಿಸರಾಯರು ಅಪ್ಪಣೆಯನ್ನು ಕೊಡಲಿಲ್ಲ.

ಸರ್. ಮಹಮ್ಮದ ಯಾಕೂಬ ಇವರು ಕಾಂಗ್ರೆಸ್ ಪಕ್ಷದವರು ಆಗಾಗ್ಗೆ ತರುವ ನಿಲುವಳಿ ಸೂಚನೆಗಳು ಅಪ್ರಯೋಜನವಾದವುಗಳಾಗಿರುವುದರಿಂದ ಅವುಗಳ ನಿಷೇಧಕ್ಕಾಗಿ ಒಂದು ನಿಲುವಳಿ ಸೂಚನೆಯನ್ನು ತರಲಪೇಕ್ಷಿಸಿದರು. ಆದರೆ ಅಧ್ಯಕ್ಷರು ಅದಕ್ಕೆ ಒಪ್ಪಿಗೆಯನ್ನು ಕೊಡಲಿಲ್ಲ.

ಮುಂಬೈ ಶಾಸನ ಮಂಡಲದ ಸಮಾಚಾರ.

ಶ್ರೀ. ಜಿ. ಎಸ್. ಗಂಗೋಳಿಯವರ ಪ್ರಶ್ನೆಗೆ ಉತ್ತರವಾಗಿ ಖಾನಬಹಾದ್ದೂರ ಕೂಪರ ಇವರು ಹೀಗೆ ಹೇಳಿದರು.—

“ಕಾರವಾರ ಜಿಲ್ಲಾ ಹೊನ್ನಾವರ ತಾಲೂಕಿನ ಕರ್ಕಿ ಎಂಬ ಗ್ರಾಮದ ಜನಸಂಖ್ಯೆ ೩೩೫೭ ಈ ಗ್ರಾಮದಿಂದ ೭೫೧೩ ರೂ. ೩ ಆಣೆ ೫ ಪೈ ಭೂಕಂದಾಯ ಬರುತ್ತದೆ. ಭತ್ತವನ್ನು ಬೆಳೆಯುವ ಗದ್ದೆಗಳಿಗೆ ಎಕರೆ ಒಂದಕ್ಕೆ ೮ ರೂ. ಪ್ರಕಾರ ಕಂದಾಯ ಕೊಟ್ಟಂತಾಗುತ್ತದೆ.”

ಶ್ರೀ ಹಣಮಂತರಾವ ದೇಸಾಯಿ ಧಾರವಾಡ ಇವರು ಕರ್ನಾಟಕ ಸೆಂಟ್ರಲ್ ಬ್ಯಾಂಕಿನ ಸಂಬಂಧವಾಗಿ ಪ್ರಸ್ತಾಪಿಸುವಾಗ ದಿವಾನರಿಗೆ (ದಿ| ಬ| ಕಂಬಳಿಯವರಿಗೆ) ಯಾರು ತಮ್ಮವರೆಂದು ತೋರುತ್ತದೋ ಅವರು ಚುನಾವಣೆಯಲ್ಲಿ ಅಪಜಯ ಹೊಂದಿದ್ದರಿಂದ ಈ ನಿಯಮ ಮಾಡಬೇಕಾಯಿತೆಂದು ಹೇಳಿದರು. ಇದಕ್ಕೆ ದಿ| ಬ| ಕಂಬಳಿಯವರು ವಿರೋಧಿಸಿದರು. ಆಗ ಅಧ್ಯಕ್ಷರು ಈ ವಿಧಾನವನ್ನು ತಿರುಗಿ ತೆಗೆದುಕೊಳ್ಳಲು ಸೂಚಿಸಲು ಶ್ರೀ. ದೇಸಾಯರು ಆ ಹೇಳಿಕೆಯನ್ನು ತಿರುಗಿ ತೆಗೆದುಕೊಂಡರು.

ರಜಿಸ್ಟರ್ಡ ಗ್ರ್ಯಾಜ್ಯುಏಟ್ಸ ಮತದಾರ ಸಂಘದ ಪಟ್ಟಿಯ ಸದೋಷತ್ವವನ್ನು ಕುರಿತು ಡಾ. ವಾಡ ಇವರು ಒಂದು ನಿಲುವಳಿ ಸೂಚನೆಯನ್ನು ತಂದರು. ಇದು ಬಹು ಚರ್ಚೆಯಾಗಿ ಕೊನೆಗೆ ಬಹುಮತವಿಲ್ಲದೆ ಬಿದ್ದುಹೋಯಿತು.

ಕೊ - ಆಪರೇಟಿವ್ಹ ಸೊಸೈಟಿ ಶಾಸನದ ೪೮ ನೆಯ ನಿಯಮವನ್ನು ತೆಗೆದುಹಾಕಬೇಕೆಂದು ಶ್ರೀ. ಬಖಲೆಯವರು ಒಂದು ಗೊತ್ತುವಳಿಯನ್ನು ತಂದರು ಇದನ್ನು ದಿ| ಬ| ಕಂಬಳಿಯವರು ತಮ್ಮ ಭಾಷಣದಲ್ಲಿ ವಿರೋಧಿಸಿದರು ಈ ಗೊತ್ತುವಳಿಯ ವಿಚಾರವಾಗಿಯೂ ಚರ್ಚೆ ನಡೆದು ಕೊನೆಗೆ ಬಹುಮತವಿಲ್ಲದೆ ಬಿದ್ದುಹೋಯಿತು.

ದಿ| ಬ| ಕಂಬಳಿಯವರ ಪಕ್ಷದ ವಿಚಾರವಾಗಿ

ಶ್ರೀ. ಗಂಗಾಧರರಾಯರ ಅಭಿಪ್ರಾಯ.

ಕರ್ನಾಟಕದ ಸುಪ್ರಸಿದ್ಧ ಕಾಂಗ್ರೆಸ್ ಮುಂದಾಳುಗಳಾದ ಶ್ರೀ ದೇಶಪಾಂಡೆ ಗಂಗಾಧರರಾಯರು ಪುಣೆಗೆ ಕಳೆದ ೧೬ ನೆಯ ತಾರೀಖಿನ ದಿವಸ ಹೋದಾಗ ‘ಲೋಕಮಾನ್ಯ’ ಪತ್ರಿಕಾ ಪ್ರತಿನಿಧಿಗಳಲ್ಲಿ ಹೀಗ ಹೇಳಿದರು.—

“ದಿ| ಬ| ಕಂಬಳಿಯವರ ಲಿಂಗಾಯತ ಸಮಾಜದಲ್ಲಿಯ ಅನೇಕ ತರುಣರು ಉತ್ಸಾಹದಿಂದ ಮೊನ್ನಿನ ಸತ್ಯಾಗ್ರಹದ ಹೋರಾಟದಲ್ಲಿ ಸೇರಿದರು. ಆದರಿಂದ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು ಬಹು ಪ್ರಬಲವಾಗಿದೆ. ದಿ| ಬ| ಕಂಬಳಿಯವರ ಪಕ್ಷ ನಿರ್ಬಲವಾಯಿತು.

ಮುಂಬೈ ಶಾಸನ ಮಂಡಲಗಳ ಎಲ್ಲ ಸ್ಥಾನಗಳಿಗೂ ಕಾಂಗ್ರೆಸ್ಸಿನ ಹುರಿಯಾಳುಗಳನ್ನು ನಿಲ್ಲಿಸಲಾಗುವುದು. ಬೆಳಗಾವ, ಧಾರವಾಡ ಮತ್ತು ವಿಜಾಪುರ ಈ ಜಿಲ್ಲೆಗಳಲ್ಲಿ ತರುಣ ಲಿಂಗಾಯತ ಹುರಿಯಾಳುಗಳನ್ನು ಕಾಂಗ್ರೆಸ್ ಪಕ್ಷವು ನಿಲ್ಲಿಸುವುದು. ಅವರು ಜಯಶೀಲರಾಗುವರೆಂದೇ ದೃಢ ನಂಬಿಕೆಯಿದೆ. ಕಾರವಾರ ಜಿಲ್ಹೆಯ ಮೂರು ಸ್ಥಳಗಳಂತೂ ಕಾಂಗ್ರೆಸ್ಸಿನವುಗಳೇ ಸರಿ.

ಧಾರವಾಡ ಜಿಲ್ಹೆಯಲ್ಲಿ ತಮ್ಮ ಪಕ್ಷಕ್ಕೆ ಬಲ ಬರಬೇಕೆಂದು ದಿ| ಬ| ಕಂಬಳಿಯವರು ಕಾರಸ್ಥಾನದಿಂದ ಬಹು ಹಿಂದುಳಿದ ಸ್ತ್ರೀಯರಿಗಾಗಿ ಒಂದು ಸ್ಥಲವನ್ನು ಕಾದಿಟ್ಟಿದ್ದಾರೆ. ಅದು ಕೂಡಾ ಕಾಂಗ್ರೆಸ್ಸಿಗೇನೇ ದೊರೆಯುವುದು. ವಿಜಾಪುರ, ಧಾರವಾಡ, ಬೆಳಗಾವ ಜಿಲ್ಲೆಗಳಿಗಾಗಿ ಎರಡು ಹಿಂದುಳಿದವರ ಸ್ಥಾನಗಳಿವೆ. ಒಂದಕ್ಕೆ ಡಾ ಅಂಬೇಡಕರರು ತಮ್ಮ ಹುರಿಯಾಳನ್ನು ನಿಲ್ಲಿಸುವರು. ಇನ್ನೊಂದು ಸ್ಥಳಕ್ಕೆ ಕಾಂಗ್ರೆಸ್ ಹುರಿಯಾಳು ನಿಲ್ಲುವನು. ಅದೂ ಕಾಂಗ್ರೆಸ್ಸಿಗೆ ದೊರೆಯುವದು.

ದಿ| ಬ| ಕಂಬಳಿಯವರ ಪ್ರತಿಸ್ಪರ್ಧಿಯಾಗಿಯೇ ಒಬ್ಬ ಕಾಂಗ್ರೆಸ್ ಹುರಿಯಾಳನ್ನು ನಾವು ನಿಲ್ಲಿಸುವೆವು. ಅವರು ಕೂಡಾ ಜಯಶೀಲರಾಗುವರು. ದಿ| ಬ| ಕಂಬಳಿಯವರು ಅಧಿಕಾರಾರೂಢರಾಗಿದ್ದರೂ ತಮ್ಮ ಆಪ್ತೇಷ್ಟರಿಗೆ ಕೆಲವು ನೌಕರಿ ಕೊಟ್ಟದ್ದರ ವಿನಾ ತನ್ನ ಸಮಾಜಕ್ಕು ಕೂಡಾ ಅವರು ಯಾವ ಹಿತವನ್ನೂ ಮಾಡಿಲ್ಲ. ಆದಕಾರಣ ಜನರಿಗೆ ಅವರ ವಿಷಯದಲ್ಲಿ ಸ್ವಲ್ಪಾದರೂ ಪ್ರೇಮಾದರಗಳಿಲ್ಲ. ಕಾಂಗ್ರೆಸ್ಸಿನವರು ಯೋಗ್ಯ ಜಾಗೃತಿಯ ಕಾರ್ಯ ಮಾಡಿದರೆ ದಿ| ಬ| ಕಂಬಳಿಯವರು ಆರಿಸಿ ಬರುವುದು ಕೂಡಾ ಕಠಿಣವಾಗುವುದು.

ಶ್ರೀ ಜೋಗ ಇವರು ಧಾರವಾಡ ಮುನಸಿಪಾಲ್ಟಿಯಲ್ಲಿ ನಡೆದ ರೀತಿಯಿಂದ ಮತ್ತು ಧಾರವಾಡ ಸೆಂಟ್ರಲ್ ಬ್ಯಾಂಕಿಗೆ ಅವರು ಸರಕಾರದಿಂದ ಆರಿಸಲ್ಪಟ್ಟದ್ದರಿಂದ ಜನರಲ್ಲಿ ಅವರ ಬಗ್ಗೆ ಆದರ ಕಡಿಮೆಯಾಗಿದೆ. ಅವರು ಲೋಕಶಾಹಿ ಸ್ವರಾಜ್ಯ ಪಕ್ಷದಿಂದ ನಿಂತರೂ ಆರಿಸಿ ಬರುವಂತಿಲ್ಲ. ದಿ| ಬ| ಕಂಬಳಿಯವರ ಪಕ್ಷದ ಸಂಗಡಲೇ ಕಾಂಗ್ರೆಸ್ ಪಕ್ಷದ ಹೋರಾಟವಿದೆ. ಅದರಲ್ಲಿ ಜಯವನ್ನು ಹೊಂದುವುದು.”



ಶಾ. ಶ. ೧೮೫೮ ನೆಯ ನಿ. ಭಾದ್ರಪದ ಶು|| ೬ ಸೋಮವಾರ.

ನಿಷೇಧ ನಿರ್ಣಯದ ವಿಮರ್ಶೆ.

ಕಳೆದ ೬ ನೆಯ ತಾರೀಖಿನ ದಿವಸ ಗದಗಿನಲ್ಲಿ ಕೆಲವು ರಾಷ್ಟ್ರೀಯ ವೀರಶೈವರು ಸಭೆ ನೇರಿ, ರಾಯಚೂರು ವೀರಶೈವ ಮಹಾಸಭೆಯಲ್ಲಾದ ಮುಂದೆ ಜರುವ ಶಾಸನ ಮಂಡಲಗಳ ಚುನಾವಣೆಯ ಗೊತ್ತುವಳಿಯನ್ನು ನಿಷೇಧಿಸಿದ್ದಾರಷ್ಟೆ ಅದು ಈ ಪ್ರಕಾರವಾಗಿದೆ—

“ಹೊಸ ಸುಧಾರಣೆಗಳು ಅಗ್ರಾಹ್ಯವಾಗಿದ್ದು ಅವನ್ನು ಇಡೀ ರಾಷ್ಟ್ರದಲ್ಲಿಯ ಎಲ್ಲ ಪಕ್ಷಗಳೂ ನಿಷೇಧಿಸಿರುವಾಗ ರಾಯಚೂರಲ್ಲಿ ಕೂಡಿದ ವೀರಶೈವ ಮಹಾಸಭೆಯವರು ಹೊಸ ಸುಧಾರಣೆಗಳನ್ನು ಪಯೋಗ ಮಾಡಿಕೊಳ್ಳಬೇಕೆಂಬ ಅಭಿಪ್ರಾಯದ ನಿರ್ಣಯ ಮಾಡಿದುದನ್ನು ಈ ಸಭೆಯು ತೀವ್ರತರವಾಗಿ ನಿಷೇಧಿಸುತ್ತದೆ. ಸಂಪೂರ್ಣ ಸ್ವರಾಜ್ಯವೇ ಭಾರತೀಯರ-ಅರ್ಥಾತ್ ವೀರಶೈವರದೂ ಧ್ಯೇಯವಾಗಿದೆಯೆಂದು ತನ್ನ ಸ್ಪಷ್ಟಾಭಿಪ್ರಾಯವನ್ನು ವ್ಯಕ್ತಮಾಡುತ್ತದೆ.”

ಈ ನಿರ್ಣಯದಲ್ಲಿ ರಾಯಚೂರು ವೀರಶೈವ ಮಹಾಸಭೆಯ ನಿರ್ಣಯದ ನಿಷೇಧ ಮತ್ತು ವೀರಶೈವರ ರಾಜಕೀಯ ಧ್ಯೇಯ ನಿರ್ದೇಶ ಈ ಪ್ರಕಾರ ಎರಡು ವಿಷಯಗಳಿವೆ. ಇವುಗಳಲ್ಲಿ ರಾಜಕೀಯ ಧ್ಯೇಯ ನಿರ್ದೇಶವನ್ನು ಕುರಿತು ಬೇರೆ ಕಡೆ ವಿವೇಚಿಸಿದ್ದೇವೆ. ಇನ್ನುಳಿದುದು ಮಹಾಸಭಾ ಗೊತ್ತುವಳಿಯ ನಿಷೇಧ. ಅದು ಕೂಡಾ ಹೇಗೆ ಅಯುಕ್ತವಾಗಿದೆಯೆಂಬುದನ್ನೂ ಇನ್ನೊಂದು ಕಡೆ ತಿಳಿಸಿದ್ದೇವೆ.

ಈ ನಿರ್ಣಯವು ವೀರಶೈವರಿಗೆ ಯಾವ ಸಲಹೆ ಅಥವಾ ಸೂಚನೆಗಳನ್ನು ಕೊಡುತ್ತದೆ? ಇದು ಸಂಪೂರ್ಣವಾಗಿ ಒಂದು ಅಭಿಪ್ರಾಯವನ್ನಾದರೂ ತಿಳಿಸುತ್ತಿದೆಯೆ? ಎಂಬಂಶಗಳನ್ನು ಇಲ್ಲಿ ಸ್ವಲ್ಪ ಪ್ರಸ್ತಾಪಿಸೋಣ.

ರಾಷ್ಟ್ರೀಯ ವೀರಶೈವರ ಸಭೆಯು ಆ ಮುಂಚೆಯೇನೂ ಇರಲಿಲ್ಲವಷ್ಟೆ. ಅದರ ಕಾರ್ಯಕ್ರಮಗಳಾವವೂ ಆ ಮುಂಚೆಯೂ ಇರಲಿಲ್ಲ: ಈಗಲೂ ಇಲ್ಲವಷ್ಟೆ. ವೀರಶೈವರ ಮುಂದೆ ರಾಷ್ಟ್ರೀಯ ವೀರಶೈವರು ಈ ಗೊತ್ತುವಳಿಯನ್ನೊಂದೇ ಇಟ್ಟಿದ್ದಾರೆ. ಇದರಲ್ಲಿ ವೀರಶೈವರ ಧ್ಯೇಯವೇನೋ ಇದೆ. ಆದರೆ ಅದನ್ನು ಸಾಧಿಸುವ ಮಾರ್ಗವನ್ನು ಈ ಸಭೆಯವರು ಸಮಾಜಕ್ಕೆ ತಿಳಿಸಿದ್ದಾರೆಯೇ? ರಾಯಚೂರು ವೀರಶೈವ ಮಹಾಸಭೆಯಲ್ಲಾದ ಗೊತ್ತುವಳಿಯನ್ನು ಅಳಿಸಿಬಿಟ್ಟಮೇಲೆ ವೀರಶೈವ ಸಮಾಜಕ್ಕೆ ಸಂಪೂರ್ಣ ಸ್ವರಾಜ್ಯ ಸಂಪಾದನೆಯ ಮಾರ್ಗವೊಂದನ್ನು ತೋರಿಸಬೇಕಾದುದು ಅಗತ್ಯವಾಗಿಲ್ಲವೆ?

ಧ್ಯೇಯವೇನೋ ಗೊತ್ತಾಯಿತು. ಆದರೆ ಅದನ್ನು ಸಾಧಿಸುವ ಮಾರ್ಗವಾವುದು? ಆರ್ಯರು “ಕೃಣ್ವಂತೊ ವಿಶ್ವ ಮಾರ್ಯಂ” ಎಂಬುದಾಗಿ ವಿಶ್ವವನ್ನೆಲ್ಲಾ ಆರ್ಯಮಯ ಮಾಡಬೇಕೆಂದೇ ಧ್ಯೇಯವನ್ನಿಟ್ಟುಕೊಂಡು ವೇದಗಳ ಮೂಲಕ ಸಾರಿದ್ದಾರೆ. ಆದರೆ ಅವರು ಈಗ ಇರುವುದೆಲ್ಲಿ? “ಸ್ವದೇಶೇ ಭುವನತ್ರಯಂ” ಮೂರು ಲೋಕಗಳೂ ಸ್ವದೇಶವೆಂದೇ ವೀರಶೈವನು ತಿಳಿಯಬೇಕಾಗಿಯೇ ಆತನ ಮುಂದಿರುವ ಧ್ಯೇಯ. ಆದರೆ ಈಗಿರುವ ಸ್ಥಿತಿ ಹೇಗಿದೆ?

ಧ್ಯೇಯವನ್ನಿಟ್ಟುಕೊಳ್ಳುವುದೇನೋ ಶುಲಭ. ಆದರೆ ಅದನ್ನು ಹೊಂದುವುದು ಕಷ್ಟವಲ್ಲವೇ? ಈ ಸಭೆಯವರು ಆ ಸ್ವರಾಜ್ಯ ಸಾಧನೆಯ ರೀತಿಯನ್ನು ತಿಳಿಸುವುದು ಅಗತ್ಯವಾಗಿರಲಿಲ್ಲವೆ? ರಾಷ್ಟ್ರೀಯ ವೀರಶೈವರೆಂದರೆ ಈಗಿರತಕ್ಕ ಕಾಂಗ್ರೆಸ್ ರಾಷ್ಟ್ರೀಯ ಪಕ್ಷದವರೇ? ಅಥವಾ ಕಾಂಗ್ರೆಸ್ ಪಕ್ಷದವರೇ? ಇಲ್ಲವೆ ಕಾಂಗ್ರೆಸ್ ಸೋಶಾಲಿಸ್ಟ ಪಕ್ಷದವರೇ? ಇವುಗಳಲ್ಲಿ ಯಾವುದಾದರೊಂದು ಪಕ್ಷದವರೆಂದು ಹೇಳಿಕೊಂಡಿದ್ದರಾದರೂ ಆಯಾಯ ಪಕ್ಷದವರ ಕಾರ್ಯಕ್ರಮಗಳೇ ಇವರು ತೋರಿಸುವ ಕಾರ್ಯಕ್ರಮವೆಂದು ತಿಳಿದುಕೊಳ್ಳಬಹುದಾಗಿತ್ತು. ಆದರೆ ಹಾಗೇನಾದರೂ ಹೇಳಿಕೊಂಡಿದ್ದಾರೆಯೇ? ಇಲ್ಲವೇ ಇಲ್ಲ.

ರಾಷ್ಟ್ರೀಯ ವೀರಶೈವರೆಂದರೆ ಕಾಂಗ್ರೆಸ್ಸಿಗೆ ಸೇರಿದ ಈ ಮೂರೂ ಪಕ್ಷದವರೆಂದು ಧಾರಾಳವಾಗಿ ಹೇಳಬಹುದಲ್ಲವೇ? ಈ ಮೂರು ಪಕ್ಷದವರಲ್ಲಿ ಒಬ್ಬರಾದರೂ ರಾಷ್ಟ್ರೀಯರಲ್ಲವೆಂದು ಹೇಳುವ ಎದೆಗಾರಿಕೆಯು ಯಾರಿಗಿದೆ? ಈ ಮೂರೂ ಪಕ್ಷದವರಲ್ಲಿ ಸಾಧನೋಪಾಯಗಳು ಭಿನ್ನವಾಗಿಲ್ಲವೆ? ಎಂದಮೇಲೆ ಈ ರಾಷ್ಟ್ರೀಯ ವೀರಶೈವ ಸಭಿಕರಿಗೆ ನಿಮ್ಮ ಸಾಧನೋಪಾಯಗಳ ರೀತಿನೀತಿಗಳಾವುವೆಂದು ಕೇಳುವುದು ಸಮಂಜಸವಾಗಿಲ್ಲವೆ? ಧ್ಯೇಯವೊಂದನ್ನಿಟ್ಟುಕೊಂಡರೆ ತೀರಿತೆ? ಅದರ ಸಾಧನೋಪಾಯಗಳೇ ಬೇಡವೆ?

ನಿಷ್ಪಕ್ಷಪಾತದಿಂದ ಯೋಚಿಸುವವರಿಗೆ ಗದಗಿನಲ್ಲಿ ಕೂಡಿದ ರಾಷ್ಟ್ರೀಯ ವೀರಶೈವರ ಈ ನಿರ್ಣಯವು ಅಪೂರ್ಣವಿದೆಯೆಂದೇ ಗೊತ್ತಾಗುವುದಿಲ್ಲವೆ?

ಇಷ್ಟು ವಿವರವೇಕೆ?

ಗದಗಿನಲ್ಲಿ ಕೂಡಿದ ರಾಷ್ಟ್ರೀಯ ವೀರಶೈವ ಸಭೆಯವರು ತಾವು ಮಾಡಿದ ರಾಯಚೂರು ವೀರಶೈವ ಮಹಾಸಭೆಯಲ್ಲಾದ ನಿರ್ಣಯದ ನಿಷೇಧವನ್ನು ದಿನಪತ್ರಿಕೆ ಮತ್ತು ವಾರಪತ್ರಿಕೆಗಳಲ್ಲಿ ಹೆಚ್ಚಾಗಿಯೇ ಪ್ರಸಾರಗೊಳಿಸಿದ್ದಾರೆ. ಅದರಿಂದ ಬಹು ಜನರಲ್ಲಿ ವೀರಶೈವ ಸಮಾಜದ ಮತ್ತು ಮಹಾಸಭೆಯ ಸಂಬಂಧವಾಗಿ ತಪ್ಪು ತಿಳುವಳಿಕೆಯುಂಟಾಗುವ ಸಂಭವವಿದೆ. ಅಂತೆಯೇ ನಿಜಸ್ಥಿತಿಯು ಕೆಲವರಿಗಾದರೂ ಗೊತ್ತಾಗಲೆಂದು ನಾವು ಇದೇ ಸಂಚಿಕೆಯಲ್ಲಿಯೇ ಈ ವಿಷಯವನ್ನು ಬೇರೆ ಬೇರೆ ಲೇಖನಗಳ ಮೂಲಕ ಇಷ್ಟು ವಿವರವಾಗಿ ವಿವೇಚಿಸಿದ್ದೇವೆ.

ಕರ್ನಾಟಕ ಏಕೀಕರಣ ಪರಿಷತ್ತು.

ಬರುವ ನವಂಬರ್ ತಿಂಗಳಲ್ಲಿ ಕರ್ನಾಟಕ ಏಕೀಕರಣ ಪರಿಷತ್ತು ಬೆಳಗಾವಿಯಲ್ಲಿ ಕೂಡುವುದು ನಿಶ್ಚಯವಾಗಿದೆಯಷ್ಟೆ. ಇದು ಅತ್ಯಂತ ಸ್ತುತ್ಯವಾದ ಮತ್ತು ಆತ್ಯಗತ್ಯವಾದ ಪ್ರಯತ್ನವು. ಪರ ಪ್ರಾಂತದವರ ಕರ್ನಾಟಕದ ಮೇಲಣ ಆಕ್ರಮಣಕ್ಕೆ ಸರಕಾರವೂ ಪ್ರೋತ್ಸಾಹಿಸಲುಪಕ್ರಮಿಸಿದಮೇಲೆ ಕರ್ನಾಟಕದ ಮುಖಂಡರು ಬೆಳಗಾವಿಯಲ್ಲಿ ಜಾಗ್ರತೆ ಕೂಡಿ ಯೋಚಿಸಬೇಕಾದ ಪ್ರಸಂಗವೇ ಸಂಭವಿಸಿದೆಯೆಂದು ಕಳೆದ ೭ ನೆಯ ತಾರೀಖಿನಲ್ಲಿ ನಾವು ವಿಜ್ಞಾಪಿಸಿಕೊಂಡಿದ್ದೆವಷ್ಟೆ. ಈ ಪ್ರಕಾರ ಕರ್ನಾಟಕ ಏಕೀಕರಣ ಪರಿಷತ್ತಿನ ಮೂಲಕವಾಗಿಯೇ ಈ ವಿಷಯದ ಕಡೆಗೆ ಲಕ್ಷಿಸುವಂತೆ ಗೊತ್ತುಮಾಡಿದುದು ಬಹು ಸಮಂಜಸವಾಗಿದೆ.

ಹನ್ನೆರಡು ವರುಷಗಳ ಹಿಂದೆ ಕಾಂಗ್ರೆಸ್ಸಿನ ಕಾಲದಲ್ಲಿ ಬೆಳಗಾವಿಯಲ್ಲಿಯೇ ಕರ್ನಾಟಕ ಏಕೀಕರಣದ ಕಾರ್ಯವು ಪರಿಷತ್ತಿನ ಮೂಲಕ ಮುಂದೆ ಬಂದಿತು. ಆ ಕಾರ್ಯ ಈ ವರೆಗೂ ಅವಿಚ್ಛಿನ್ನವಾಗಿ ಪ್ರಬಲತರದಲ್ಲಿ ನಡೆದಿದ್ದರೆ ಸರಕಾರವು ಈಗ ಈ ರೀತಿಯಿಂದ ಕನ್ನಡ ನುಡಿಗೆ ಅನ್ಯಾಯ ಅವಮಾನಗಳನ್ನು ಮಾಡಲು ಮುಂದೆ ಬರುತ್ತಿರಲಿಲ್ಲ.

ಕರ್ನಾಟಕ ಏಕೀಕರಣ ಪರಿಷತ್ತಿನವರು ಈ ಸಾರೆಯಾದರೂ ಪರಿಷತ್ತಿನ ಕಾರ್ಯ ಅವ್ಯಾಹತವಾಗಿಯೂ ಪರಿಣಾಮಕಾರಿಯಾಗ್ಗಿಯೂ ಜರುಗುವಂತೆ ಯೋಗ್ಯ ವ್ಯವಸ್ಥೆಯನ್ನು ಮಾಡುವರೆಂದು ನಂಬಿದ್ದೇವೆ.

ಹಿಂದುಸ್ಥಾನಿ ಸೇವಾದಲದ ಮೇಲೆ ಅನ್ಯಾಯ.

ಹಿಂದುಸ್ಥಾನಿ ಸೇವಾದಲವು ಜನ ಸೇವೆ ಮಾಡತಕ್ಕ ಒಂದು ಅತ್ಯುತ್ತಮವಾದ ಸಂಸ್ಥೆಯು. ಅಖಿಲ ಹಿಂದುಸ್ಥಾನದಲ್ಲಿ ಇದೊಂದು ಜನಸೇವೆಯ ಶಿಕ್ಷಣವನ್ನು ತನ್ನ ಕೃತಿಯಿಂದಲೇ ಕೊಡತಕ್ಕ ಸೇವಕರ ಸಂಘವು. ಹೀಗಿದ್ದರೂ ಸರಕಾರವು ಇದನ್ನು ಶಾಸನ ವಿರುದ್ಧ ಸಂಸ್ಥೆಯೆಂದು ನಿಲ್ಲಿಸಿಬಿಟ್ಟಿದ್ದಾರಷ್ಟೆ. ಈ ಪ್ರತಿಬಂಧವನ್ನು ತೆಗೆದುಹಾಕುವ ವಿಚಾರವಾಗಿ ಅಸೆಂಬ್ಲಿಯಲ್ಲಿ ಪ್ರಶ್ನೆಯುಂಟಾದಾಗ ಸರ್. ಹೆನರಿ ಕ್ರೆಕ್‌ರವರು ಪ್ರಾಂತಿಕ ಸರಕಾರದ ಕಡೆಗೆ ಬೆರಳುಮಾಡಿ ತೋರಿಸಿದರು.

ಇದರಿಂದ ಹಿಂದುಸ್ಥಾನ ಸರಕಾರದವರಿಗೆ ಈ ಸೇವಾದಲದ ಮೇಲಿನ ನಿರ್ಬಂಧವನ್ನು ತೆಗೆದುಹಾಕುವ ಇಷ್ಟವಿಲ್ಲವೆಂದೇ ಸ್ಪಷ್ಟವಾಗುತ್ತದೆ. ಇದು ಬಹು ಅನ್ಯಾಯ ಹಿಂದುಸ್ಥಾನಿ ಸೇವಾದಲವು ಕಾಂಗ್ರೆಸ್ಸಿನಂತೆಯೇ ಅಹಿಂಸಾ ಮಾರ್ಗವನ್ನನುಸರಿಸಿ ರಾಷ್ಟ್ರ ಸೇವೆಯನ್ನು ಮಾಡುವುದಾಗಿದೆ. ಆದಕಾರಣ ಕಾಂಗ್ರೆಸ್ಸಿನ ಮೇಲಿದ್ದ ನಿರ್ಬಂಧವನ್ನು ಹೇಗೆ ತೆಗೆದುಹಾಕಿದರೋ ಹಾಗೆಯೇ ಈ ಸಂಸ್ಥೆಯ ಮೇಲಿರತಕ್ಕ ನಿರ್ಬಂಧವನ್ನೂ ತೆಗೆದುಹಾಕಲೇ ಬೇಕಾದುದು ಯುಕ್ತವೂ ನ್ಯಾಯವೂ ಆಗಿಲ್ಲವೆ?

ಡಾ| ಭಗವಾನದಾಸರ ಅಭಿಪ್ರಾಯ.

"ಮಹಾತ್ಮಾ ಬಸವೇಶ್ವರ ಕೆ ವಚನ್" ಎಂಬ ಪುಸ್ತಕದ ಬಗ್ಗೆ ಡಾ|| ಭಗವಾನ್‌ದಾಸ್ ಎಂ. ಎಲ್. ಎ. ಇವರಿಂದ ನಮ್ಮ ಕಡೆ ಬಂದ ಅಭಿಪ್ರಾಯವನ್ನು ಇಲ್ಲಿ ಕೊಡಲಾಗಿದೆ.

ತಾ. ೧೦-೯-೩೬

೪೦, ಸಮ್ಮರ್‌ಹಿಲ್.

ಸಿಮ್ಲಾ.

ನಮಸ್ಕಾರಗಳು.

ತಾವು ಕಳುಹಿಸಿದ "ಮಹಾತ್ಮಾ ಬಸವೇಶ್ವರ ಕೆ ವಚನ್" ಎಂಬ ಪುಸ್ತಕವು ತಲುಪಿತು. ಕೆಲವು ಪುಟಗಳನ್ನು ಓದಿದೆನು ಬಹಳ ಆನಂದವಾಯಿತು ಅನುವಾದಕರನ್ನೂ ಮತ್ತು ಪ್ರಕಾಶಕರನ್ನೂ ನಾನು ಹೃದಯಪೂರ್ವಕವಾಗಿ ಅಭಿನಂದಿಸದಿರಲಾರೆನು. ರಾಷ್ಟ್ರ ಭಾಷೆಯ ಸರಸ್ವತಿ ಭಾಂಡಾರದಲ್ಲಿ ನೀವುಗಳು ಒಂದು ರತ್ನವನ್ನು ಹೆಚ್ಚಿಸಿರುವಿರಿ. ಅಲಹಾಬಾದಿನ ಪಂಡಿತ ಶ್ರೀ. ಸುಂದರಲಾಲರು ತಮ್ಮ ಪ್ರಸ್ತಾವನೆಯಲ್ಲಿ ಬರೆದಿರುವ ವಿಷಯಗಳಿಗೆ ನನ್ನ ಸಂಪೂರ್ಣ ಒಪ್ಪಿಗೆ ಇದೆ. ಈ ಪುಸ್ತಕದ ಮುಖೇನ ರಾಷ್ಟ್ರ ಭಾಷೆಗೂ,. ಮತ್ತು ಹಿಂದೀ ಮಾತನಾಡುವವರಿಗೂ ಬಹಳ ಉಪಕಾರವಾಗುವುದು. ಭಾರತ ವರ್ಷದಲ್ಲಿ ಬುದ್ಧದೇವ ಮತ್ತು ಮಹಾವೀರರ ಹಿಂದಿನಿಂದಲೂ "ಜನ್ಮನಾವರ್ಣ" ದ ಭಾವನೆಯು ವೃದ್ಧಿಯಾಗಿತ್ತು ಆದ್ದರಿಂದ ಉಚ್ಚವರ್ಣಾಭಿಮಾನಿಗಳು ಲೋಭ, ಮಾನ, ಮದಾನ್ವಿತರಾಗಿ ಇತರ ದೇಶವಾಸಿಗಳನ್ನು ಹಿಂಸಿಸ ತೊಡಗಿದರು. ಆಗಿನಿಂದ ಬಸವೇಶ್ವರನಂತಹ ಮಹಾಪುರುಷರ ಜನ್ಮವಾಗುತ್ತಲೇ ಇದೆ. ಮತ್ತು ಅವರು ದೂಷಿತ ಭಾವನೆಯನ್ನು ನಿರ್ಮೂಲಮಾಡಲು ಯತ್ನಮಾಡಿದ್ದಾರೆ. ಮತ್ತು ಎಲ್ಲರ ವಚನದಲ್ಲಿಯೂ, ಒಂದೇ ರೀತಿಯಾದ ಸುಂದರ ಭಾವನೆಯು ಕಾಣುತ್ತಿದೆ. ಭಾರತದ ಉತ್ತರದಲ್ಲಿ ರಾಮಾನಂದ, ಕಬೀರ್, ದಾದೂ, ನಾನಕ್, ಪೂರ್ವದಲ್ಲಿ ಚೈತನ್ಯ, ಪಶ್ಚಿಮದಲ್ಲಿ ನಾಮದೇವ, ದಕ್ಷಿಣದಲ್ಲಿ ತಿರುವಳ್ಳುವಾರ್, ಬಸವೇಶ್ವರ ಮೊದಲಾದವರ ಭಕ್ತಿ ಭಾವನೆಯು, ಲೋಕ ಹಿತೈಷಿತತನದ ವಚನಗಳೂ, ಒಂದೇ ರೀತಿಯಾಗಿ ಕಾಣುತ್ತವೆ. ಪುನಃ ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಬೆಂಗಳೂರು

ತಾ. ೧೮-೯-೩೬ **ಯಂ. ಎನ್. ಶಿವಪ್ಪ.**

—ಗಾಂಧೀಜಿಯವರು ಮುಸಲ್ಮಾನ್ ಧರ್ಮವನ್ನು ಅನುಸರಿಸಿದರೆಂದು ಕೆಲವು ಮುಸಲ್ಮಾನ್ ಪತ್ರಿಕೆಗಳು ಪ್ರಕಟಿಸಿವೆಯಷ್ಟೆ. ಆದುದರಿಂದ ಗಾಂಧೀಜಿಯವರ ಪರವಾಗಿ ಶ್ರೀ. ಮಹದೇವಭಾಯಿ ದೇಸಾಯಿಯವರು ಈ ಸಂಗತಿಯು ಶುದ್ಧ ಸುಳ್ಳೆಂದು ತಿಳಿಸಿದ್ದಾರೆ.

—ಈ ದಿನ ಅಸೆಂಬ್ಲಿ ಮತ್ತು ಕೌನ್‌ಸಿಲ್ ಆಫ್ ಸ್ಟೇಟ್‌ಗಳ ಸಂಯುಕ್ತ ಅಧಿವೇಶನದಲ್ಲಿ ವ್ಹಾಯಿಸ್‌ರಾಯ ಲಾರ್ಡ ಲಿನ್‌ಲಿಥಗೋರವರು ಭಾಷಣ ಮಾಡುವವರಿದ್ದಾರೆ.

—ಬೈಲಹೊಂಗಲದಿಂದ ಬೆಳಗಾವಿಗೆ ಹೋಗುತ್ತಿದ್ದ ಪ್ರವಾಸಿಗಳ ಮೋಟಾರು ಒಂದು ಗಿಡಕ್ಕೆ ತಾಕಿ ಭಯಂಕರ ಅಪಘಾತ ಸಂಭವಿಸಿತು. ಮೂರು ಜನರು ಮರಣ ಹೊಂದಿದರು. ೨೨ ಜನರಿಗೆ ಪೆಟ್ಟಾಗಿದೆ. ಇವರಲ್ಲಿ ೭ ಜನರ ತಲೆಗೆ ಭಯಂಕರ ಗಾಯವಾಗಿದೆ.

—ಪುಣೆಯಲ್ಲಿ ತಾ. ೧೮ ನೆಯ ದಿವಸ ಮಧ್ಯಾನ್ಹ ೧ ಇಂಚು ಮಳೆಯಾಯಿತು. ಈ ಮಳೆಗಾಲದಲ್ಲಿ ಇದೇ ಅಲ್ಲಿಯ ದೊಡ್ಡ ಮಳೆ.

—ದಕ್ಷಿಣ ಬಿಹಾರ ಪ್ರಾಂತದಲ್ಲಿ ಅತಿವೃಷ್ಟಿಯಿಂದ ಮಹದನರ್ಥ ಸಂಭವಿಸಿದೆ. ಆದಕ್ಕಾಗಿ ಹಣವಿನ ಸಹಾಯವು ಅತ್ಯಾವಶ್ಯಕವೆಂದು ಶ್ರೀ. ರಾಜೇಂದ್ರ ಪ್ರಸಾದರ ಕಡೆಗೆ ಆ ಭಾಗದವರು ಬಿನ್ನವಿಸಿಕೊಂಡಿದ್ದಾರೆ ಶಕ್ಯವಿರುವ ಸಹಾಯವನ್ನು ಮಾಡುವುದಾಗಿಯೂ ರಾಜೇಂದ್ರರು ಆ ಭಾಗದವರಿಗೆ ತಿಳಿಸಿದ್ದಾರೆ.

ಕರ್ನಾಟಕ ಏಕೀಕರಣ ಪರಿಷತ್ತಿನ

ವಿಶೇಷ ಅಧಿವೇಶನ.

—:(•):—

ಬೆಳಗಾವಿ ೧೯೩೬.

ಇತ್ತೀಚಿಗೆ ಬ್ರಿಟಿಶ್ ಮತ್ತು ಸಂಸ್ಥಾನ ಸರಕಾರಗಳಿಂದ ಕನ್ನಡಕ್ಕೆ ಅನೇಕ ಅನ್ಯಾಯಗಳು ಉಂಟಾಗಹತ್ತಿವೆ. ಇವುಗಳಿಂದ ಕರ್ನಾಟಕದಲ್ಲಿ ಪರಪ್ರಾಂತೀಯರ ಮತ್ತು ಪರಭಾಷೆಯ ವರ್ಚಸ್ಸು ಅನವಶ್ಯಕವಾಗಿ ಬೆಳೆದು ಕರ್ನಾಟಕದ ಹಿತಸಂಬಂಧಗಳಿಗೆ ಬಾಧೆ ಬರಲಾರಂಭಿಸಿದೆ. ಕನ್ನಡದ ಬೆಳವಣಿಗೆಗೆ ಪರಪ್ರಾಂತೀಯರ ವಿರೋಧವಲ್ಲದೆ ಸರಕಾರದವರ ವಿರೋಧವೂ ಪ್ರಾರಂಭವಾಗಿ ಏಕೀಕೃತ ಕರ್ನಾಟಕದ ಕಲ್ಪನೆಗೆ ಆಘಾತವಾಗಿದೆ. ಬೆಳಗಾವಿ, ಧಾರವಾಡ, ವಿಜಾಪುರ, ಕಾರವಾರ ಜಿಲ್ಹೆಗಳಲ್ಲಿಯ ನೊಂದಣೀ ಖಾತೆಯಲ್ಲಿ ಮರಾಠಿಯ ಪ್ರವೇಶವಾಗಿದೆ. ಬೆಳಗಾವಿ, ಖಾನಾಪೂರ, ಚಿಕ್ಕೋಡಿ ತಾಲೂಕಗಳಲ್ಲಿಯ ಮತ್ತು ಸುಪೆ ಪೇಠೆಯಲ್ಲಿಯ ಮತದಾರರ ಪಟ್ಟಿಗಳು ಕೇವಲ ಮರಾಠಿಯಲ್ಲಿಯೂ ಬಳ್ಳಾರಿ ಜಿಲ್ಹೆಯ ಪೂರ್ವ ಭಾಗದಲ್ಲಿಯ ಮತದಾರ ಪಟ್ಟಿಗಳು ತೆಲುಗಿನಲ್ಲಿಯೂ ಪ್ರಕಟವಾಗಿವೆ. ಜಮಖಂಡಿ ಸಂಸ್ಥಾನದಲ್ಲಿಯ ಕಾಯದೆಮಂಡಲದಲ್ಲಿ ಕನ್ನಡ ವಿಷಯವನ್ನು ಚರ್ಚಿಸಕೂಡದೆಂದು ಕಟ್ಟಳೆಯಾಗಿದೆ. ಹೈದರಾಬಾದ ಸಂಸ್ಥಾನದ ಕಲಬುರ್ಗಿ ಜಿಲ್ಹೆಯ ಸರಕಾರಿ ವ್ಯವಹಾರವೆಲ್ಲ ಮರಾಠಿಯಲ್ಲಿಯೇ ನಡೆಯುತ್ತಿದೆ. ಉತ್ತರ ಕರ್ನಾಟಕ ಸಂಸ್ಥಾನಗಳಲ್ಲಿಯ ಸರಕಾರೀ ವ್ಯವಹಾರದಲ್ಲಿ ಕನ್ನಡಕ್ಕೆ ಮನ್ನಣೆಯಿಲ್ಲ; ಕನ್ನಡ ಶಾಲೆಗಳಿಗೆ ಪ್ರೋತ್ಸಾಹನವಿಲ್ಲ. ಬೆಳಗಾವಿ, ಚಿಕ್ಕೋಡಿ ಕೋರ್ಟುಗಳಲ್ಲಿ ಮರಾಠಿಯು ಕಾಲಿಟ್ಟು ಎಷ್ಟೋ ವರುಷಗಳಾದವು. ಪೋಸ್ಟ ಆಫೀಸಿನಲ್ಲಿ ಕನ್ನಡ ಫಾರ್ಮುಗಳು ದೊರೆಯುವದೇ ಕಠಿಣವಾಗಿದೆ. ಇನ್ನುಳಿದ ಎಷ್ಟೋ ಸರಕಾರಿ ಕಚೇರಿಗಳಲ್ಲಿಯೂ ಫಾರ್ಮು ಮೊದಲಾದವುಗಳೆಲ್ಲ ಮರಾಠಿಯಲ್ಲಿಯೇ, ಲೋಕನಿಯುಕ್ತವೆಂದೆನಿಸಿಕೊಳ್ಳುವ ಲೋಕಲ್ ಬೋರ್ಡ, ಮುನಸಿಪಾಲಿಟಿ, ಬ್ಯಾಂಕು ಮೊದಲಾದವುಗಳಲ್ಲಿ ಮರಾಠಿಯ ಪ್ರಾಬಲ್ಯವೇ ಇದೆ! ಬೆಳಗಾವಿಯ ಮುನಸಿಪಾಲಿಟಿಯ ವ್ಯವಹಾರವೆಲ್ಲ ಮರಾಠಿಯಲ್ಲಿ, ಧಾರವಾಡ ಲೋಕಲ್ ಬೋರ್ಡಿನ ವ್ಯವಹಾರವೆಲ್ಲ ಕನ್ನಡದಲ್ಲಿ ನಡೆಯಬೇಕೆಂದು ಗೊತ್ತುವಳಿ ಬಂದರೆ ಅಧ್ಯಕ್ಷರ ಮನ್ನಣೆ ದೊರೆಯಲಿಲ್ಲ. ಬಳ್ಳಾರಿಯಲ್ಲಿಯ ಕನ್ನಡ ಟ್ರೇನಿಂಗ್ ಕಾಲೇಜನ್ನು ಹೊಸಪೇಟೆಗೆ ಸ್ಥಲಾಂತರ ಮಾಡಿದ್ದರಿಂದ ಬಳ್ಳಾರಿಯಲ್ಲಿ ಆಂಧ್ರದ ವರ್ಚಸ್ಸು ಹೆಚ್ಚಾಗಹತ್ತಿದೆ. ಹೀಗಾಗಿ ಕನ್ನಡವು ಎಲ್ಲೆಲ್ಲಿಯೂ ಹಿಂದೂಡಲ್ಪಡಹತ್ತಿದೆ. ಮುಂಬಯಿ, ಪುಣೆ, ಮದ್ರಾಸ, ಮೊದಲಾದ ಸರಕಾರ ಕೇಂದ್ರಗಳಲ್ಲಿ ಮರಾಠಿಗರೂ ತೆಲುಗರೂ ಪ್ರಬಲವಾಗಿದ್ದರಿಂದಲೇ ಸರಕಾರೀ ಖಾತೆಗಳಲ್ಲಿ ಈ ರೀತಿ ಪರಭಾಷೆಗಳ ಪ್ರವೇಶವಾಗಹತ್ತಿದೆ. ಈ ಅನ್ಯಾಯಗಳನ್ನೆಲ್ಲ ತಡೆದು ಕನ್ನಡದ ಬೆಳವಣಿಗೆಯನ್ನು ಹೆಚ್ಚಿಸಲು ಅಖಿಲ ಕರ್ನಾಟಕ ಆಂದೋಲನವನ್ನು ಈಗಲೇ ಪ್ರಾರಂಭಿಸುವುದು ಅತ್ಯವಶ್ಯವಾಗಿದೆ. ಕರ್ನಾಟಕದ ಏಕೀಕರಣ ಚಳವಳಿಗೆ ಮತ್ತೆ ಮೂರ್ತಸ್ವರೂಪವನ್ನು ಕೊಡಬೇಕಾಗಿದೆ

ಈ ಎಲ್ಲ ದೃಷ್ಟಿಗಳಿಂದ ನೋಡಲಾಗಿ "ಕರ್ನಾಟಕ ಏಕೀಕರಣ ಪರಿಷತ್ತಿನ ವಿಶೇಷ ಅಧಿವೇಶನ" ವನ್ನು ಬೇಗನೆ ಕೂಡಿಸುವುದು ಅತ್ಯಂತ ಅವಶ್ಯವೆಂದು ಕಂಡದ್ದರಿಂದ ಇದೇ ನವ್ಹೆಂಬರ ತಿಂಗಳಲ್ಲಿ ಬೆಳಗಾವಿಯಲ್ಲಿ ಕರೆಯುವದು ಗೊತ್ತಾಗಿದೆ. ಇದಕ್ಕೆ ಈಗಾಗಲೇ ಅನೇಕ ಮುಖಂಡರ ಮತ್ತು ವೃತ್ತಪತ್ರಿಕೆಗಳ ಬೆಂಬಲ ದೊರೆತಿದೆ. ಕರ್ನಾಟಕದಲ್ಲಿಯ ಸಂಘ ಸಂಸ್ಥೆಗಳು, ವೃತ್ತಪತ್ರಿಕೆಗಳು, ಮುಖಂಡರು ಮತ್ತು ಜನಸಾಮಾನ್ಯವು ಸಲಹೆ ಸೂಚನೆಗಳನ್ನು ಕೊಟ್ಟು, ಧನಸಹಾಯವನ್ನು ಮಾಡಿ ಲೇಖನಗಳನ್ನು ಬರೆದು ಪ್ರತಿನಿಧಿಗಳನ್ನು ಕಳಿಸಿ ಸರ್ವ ವಿಧದಿಂದಲೂ ಈ ಪರಿಷತ್ತಿಗೆ ಸಹಾಯ ಮಾಡಬೇಕಾಗಿ ಬೇಡಿಕೊಳ್ಳುವೆವು.

ಬೆಳಗಾವಿ ತಾ. ೧೪-೯-೩೬

ಬಲವಂತರಾವ ದಾತಾರ.
ಅಧ್ಯಕ್ಷ
ತಾತ್ಪೂರ್ತಿಕ ಕಾರ್ಯಕಾರೀ ಮಂಡಲ.

ಮುಸಲ್ಮಾನ್ ಧರ್ಮ ಪ್ರಸಾರ.

ಈಜಿಪ್ತದವರ ಸಾಹಸ.

ಡಾ. ಅಂಬೇಡಕರರು ಧರ್ಮಾಂತರದ ಘೋಷಣಮಾಡಿದ ನಂತರ ಈಜಿಪ್ತದಲ್ಲಿಯ ಮುಸಲ್ಮಾನರು ಈ ಕಡೆಗೆ ಲಕ್ಷಿಸಿ ಮಾಡುತ್ತಿರುವ ಪ್ರಯತ್ನಗಳು ಅಲ್ಲಿಯ ಒಂದು ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆ ಪತ್ರಿಕೆಯು ತಿಳಿಸುವುದೇನಂದರೆ—

"ಈಜಿಪ್ತದ ಅಲ್ ಅಝುಹಾರ ಯುನಿವ್ಹರ್ಸಿಟಿಯ ರೆಕ್ಟರ್ ಶೇಖ ಅಲ್ ಮಾರಾವಿ ಇವರು ಹಿಂದುಸ್ಥಾನದಲ್ಲಿ ಮುಸಲ್ಮಾನ್ ಧರ್ಮ ಪ್ರಸಾರದ ಕಾರ್ಯ ಕೈಕೊಂಡು ಉಪದೇಶಕ್ಕಾಗಿ ೫ ಜನರನ್ನು ಇದೇ ವರುಷ ಕಳುಹಿಸುವರು. ಈ ಕಾರ್ಯಕ್ಕೆ ೨೫ ಸಾವಿರ ಪೌಂಡು ಕೂಡಿಸುವ ಸಿದ್ಧತೆಯಲ್ಲಿದ್ದಾರೆ. ಇವರಿಗೂ ಮುಸಲ್ಮಾನ್ ಧರ್ಮದ ಹಿಂದುಸ್ಥಾನದಲ್ಲಿಯ ಒಬ್ಬ ಪ್ರಮುಖರಿಗೂ ನಡೆದ ಪತ್ರವ್ಯವಹಾರ ಹೀಗಿದೆ. ಅದರ ಮುಖ್ಯಾಂಶ—

ಮಿ. ಶೇಖಮಾರಾವಿಯವರ ಪತ್ರ.

ಮಹಾಶಯರೇ, ಹಿಂದುಸ್ಥಾನದ ಅಸ್ಪೃಶ್ಯರು ಹಿಂದುಧರ್ಮವನ್ನು ಬಿಟ್ಟುಬಿಡುವುದಾಗಿ ನಿರ್ಧರಿಸಿದ್ದನ್ನು ನಾನು ಈಜಿಪ್ತದ ಒಂದು ಪತ್ರಿಕೆಯಲ್ಲಿ ಓದಿದೆನು. ನಮ್ಮ ಧರ್ಮಕ್ಕೆ ದೊರೆತ ಇಂತಹ ಸುವರ್ಣದಂಥ ಪ್ರಸಂಗವು ಮುಸಲ್ಮಾನ್ ಧರ್ಮದ ಚರಿತ್ರೆಯಲ್ಲಿಯೇ ಇಲ್ಲ. ಈ ಕಾಲದಲ್ಲಿ ಮುಸಲ್ಮಾನ್ ಧರ್ಮದ ಎಲ್ಲ ಸಂಥದವರೂ ಒಕ್ಕಟ್ಟಾಗಿ ಎಲ್ಲ ಪ್ರಯತ್ನಗಳಿಂದ ಅವರನ್ನು ಮುಸಲ್ಮಾನ ಧರ್ಮದಲ್ಲಿ ತೆಗೆದುಕೊಳ್ಳಬೇಕು. ಇಲ್ಲಿಂದ ಪ್ರಚಾರಕ್ಕಾಗಿ ಬರುವವರಲ್ಲಿ ಯಾವ ಗುಣವಿರಬೇಕು. ? ತಿಳಿಸಿರಿ.

ಸರ್. ಮಹಮ್ಮದ ಇಕ್ಬಾಲರ ಪತ್ರ.

ಹಿಂದುಗಳಲ್ಲಿ ಮುಸಲ್ಮಾನ್ ಧರ್ಮ ಪ್ರಸಾರಗೊಳಿಸುವ ಕಾರ್ಯ ತೀವ್ರತರವಾಗಿ ನಡೆದಿದೆ. ಮಹಾತ್ಮಾ ಗಾಂಧಿಯವರ ಮಗ ಮುಸಲ್ಮಾನ ಧರ್ಮವನ್ನು ಸ್ವೀಕರಿಸಿರುವುದರಿಂದ ಇವರ ಮೂಲಕ ಧರ್ಮ ಪ್ರಸಾರದ ಕಾರ್ಯವೂ ನಡೆದಿದೆ.

ನಿಮ್ಮ ಕಾರ್ಯಕ್ಕೆ ಒಂದು ದೊಡ್ಡ ಅಡ್ಡಿಯೇನಂದರೆ, ಅಸ್ಪೃಶ್ಯರ ಸಂಖ್ಯೆ ದಕ್ಷಿಣ ಹಿಂದುಸ್ಥಾನದಲ್ಲೇ ಹೆಚ್ಚಿದೆ. ಅವರಲ್ಲಿ ನಾಲ್ಕಾರು ಭಾಷೆಗಳು. ನಿಮ್ಮ ಭಾಷೆಯ ಸರಿಯಾಗ ಜ್ಞಾನವುಳ್ಳ ಆಯಾಯ ಭಾಷೆಗಳ ಪಂಡಿತರು ದೊರೆಯುವುದು ಕಠಿಣ. ಆದಕಾರಣ ನಿಮ್ಮ ಕಾರ್ಯಕ್ಕೆ ಅಷ್ಟು ಜಯದೊರೆಯುವ ಸಂಭವವಿಲ್ಲ.

ಆದರೂ ನೀವು ವಿದ್ವಾಂಸ ಜನರನ್ನು ಕಳಿಸಬೇಕು. ಅವರು ನಿಮ್ಮಲ್ಲಿಯ ಘನತೆಗೆ ತಕ್ಕಂಥವರಿರಬೇಕು. ಇಲ್ಲಿಂದ ನೀವು ಹೋಗುವಾಗ, ಧರ್ಮಾಂತರ ಹೊಂದಿದ ಅಸ್ಪೃಶ್ಯರ ಕೆಲವು ತರುಣರನ್ನು ನಿಮ್ಮ ಸಂಗಡ ಕರೆದುಕೊಂಡು ಹೋಗಿ ಅಲ್ಲಿ ಸರಿಯಾದ ಶಿಕ್ಷಣ ಕೊಡಿಸಿ ಅವರಿಂದ ಈ ದೇಶದ ಅವರ ಜನರಲ್ಲಿ ಧರ್ಮ ಪ್ರಸಾರವಾಗುವಂತೆ ಮಾಡಬೇಕು. ಸಂತಿ ಮತ್ತು ಗೋಷಾಪದ್ಧತಿಗಳೂ ಧರ್ಮ ಪ್ರಸಾರಕ್ಕೆ ಅಡ್ಡಿಯಾಗಿವೆ."

ಮೈಸೂರ-ಮಯೂರ.

ಮೈಸೂರು ಮಹಾರಾಜರು ಬರುವ ವಿಜಯಾ ದಶಮಿಯ ಕಾಲಕ್ಕೆ ಈ ದೇಶಕ್ಕೆ ಬರುವರು. ಆಗ ಹಿಂದಕ್ಕೆ ಟೀಪು ಸುಲ್ತಾನನ ಸಿಂಹಾಸನದ ಮೇಲಿದ್ದ ರತ್ನವಿಶಿಷ್ಟ ಮಯೂರವನ್ನು ತರುವರೆಂದು ಸುದ್ದಿ. ಶ್ರೀರಂಗಪಟ್ಟಣವು ಕೈವಶವಾದನಂತರ ಲಾರ್ಡ ಮಾರ್ನಿಂಗ್‌ಟನ್ ಇವರು ಅದನ್ನು ಮೂರನೆಯ ಜಾರ್ಜರ ಪತ್ನಿಯಾದ ರಾಣಿ ಶಾರ್ಲಟ ಎಂಬುವವರಿಗೆ ನಜರಾಣಿಯಾಗಿ ಕೊಟ್ಟಿದ್ದರಂತೆ ಕಳೆದ ೧೩೫ ವರುಷಗಳಿಂದ ಅದು ವಿಂಡಸರ್ ಕಸಲ್ಲ್‌ದಲ್ಲಿದೆ. ಅದು ತಮ್ಮ ಹತ್ತಿರ ಇರತಕ್ಕದ್ದು ಶುಭ ಲಕ್ಷಣವೆಂದು ಮುಸಲ್ಮಾನರ ನಂಬಿಗೆಯಂತೆ.

ಮುಸಲ್ಮಾನ್ ಮುಂದಾಳುಗಳ ಸಭೆ.

ಅಖಿಲ ಭಾರತೀಯ ಮುಸ್ಲೀಮ್ ಪರಿಷತ್ತಿಗೆ ಸಹಾನುಭೂತಿಯುಳ್ಳ ಮುಸಲ್ಮಾನ್ ಮುಂದಾಳುಗಳ ಸಭೆಯು ಇದೇ ೨೬ ನೆಯ ತಾರೀಖಿನ ದಿವಸ ಸಿಮಲಾದಲ್ಲಿ ಕೂಡುವುದೆಂದೂ ಈಗಿನ ರಾಜಕೀಯ ಪರಿಸ್ಥಿತಿಯ ಪರ್ಯಾಲೋಚನೆಯೇ ಈ ಸಭೆ ಕೂಡುವುದರ ಉದ್ದೇಶವೆಂದೂ ಮಿ. ಎ. ಅಬ್ದುಲ್ಲಾ ಹರೂನ ಇವರು ಪ್ರಕಟಿಸಿದ್ದಾರೆ.

ಪಂಡಿತ ಜವಾಹರಲಾಲ ನೆಹರುರವರ ಇತ್ತೀಚಿನ ಪ್ರಕಟನೆಗಳಿಂದಲೂ ಬಂಗಾಲ ಮತ್ತು ಪಂಜಾಬ ಪ್ರಾಂತಗಳಲ್ಲಿ ಹಿಂದುಗಳು ಜಾತಿನಿರ್ಣಯದ ವಿರೋಧವಾಗಿ ಹೂಡಿದ ಚಟುವಟಿಕೆಯಿಂದಲೂ ಉಂಟಾದ ಹೊಸ ಪರಿಸ್ಥಿತಿಯನ್ನು ಎಲ್ಲ ಮುಸಲ್ಮಾನರೂ ಪರ್ಯಾಲೋಚಿಸಬೇಕೆಂದೂ ಈ ಪ್ರಕಟನೆಯಲ್ಲಿದೆ.

ಕರ್ನಾಟಕ ಚೇಂಬರ ಆಫ್ ಕಾಮರ್ಸ

(ವಣಿಕ ಸಂಘ.)

ದಿ ಸೆಂಟ್ರಲ್ ಹಿಂದು ಮಿಲಿಟರಿ ಎಜ್ಯುಕೇಶನ ಸೊಸಾಯಿಟಿ ಮತ್ತು ದಿ ಭೋಸಲೆ ಮಿಲಿಟರಿ ಸ್ಕೂಲ ಸಂಸ್ಥೆಯವರು ಕ್ಷಿಪ್ರದಲ್ಲಿಯೇ ತೆಗೆಯುವ ಲಷ್ಕರಿ ಶಿಕ್ಷಣಾಲಯದಲ್ಲಿ ಇಂಗ್ಲಿಷ ಮತ್ತು ಹಿಂದಿ ಭಾಷೆಯಲ್ಲಿ ಶಿಕ್ಷಣ ಕೊಡುವುದನ್ನು ಗೊತ್ತುಮಾಡಿದ್ದರೂ, ಬಂಗಾಲಿ, ಗುಜರಾಥಿ ಮತ್ತು ಮರಾಠಿ ಭಾಷೆಗಳಲ್ಲಿ ವಿಷಯಗಳನ್ನು ತಿಳಿಸುವದರಲ್ಲಿ ಬರುವದೆಂದು ವರ್ತಮಾನ ಪತ್ರದಲ್ಲಿ ಪ್ರಕಟವಾಗಿದ್ದಿತು. ಕನ್ನಡ ಭಾಷೆಯ ಬಗ್ಗೆ ಏನೂ ವ್ಯವಸ್ಥೆ ಇಲ್ಲದ್ದನ್ನು ಕಂಡು ಚೇಂಬರದವರು ಕರ್ನಾಟಕ ವಿದ್ಯಾರ್ಥಿಗಳ ಅನುಕೂಲತೆಗಾಗಿ ಉಳಿದ ಎಲ್ಲ ಪ್ರಾಂತಗಳ ಭಾಷೆಯಂತೆ ಕನ್ನಡ ಭಾಷೆಗೂ ಪ್ರಾಮುಖ್ಯತೆಯನ್ನು ಕೊಡುವ ಬಗ್ಗೆ ಪತ್ರವ್ಯವಹಾರ ಮಾಡಿ ಆಬಗ್ಗೆ ಸಂಸ್ಥೆಯ ಜನರಲ್ ಸೆಕ್ರೆಟರಿಯವರಾದ ಡಾ. ಮುಂಜೆಯವರ ಕಡೆಯಿಂದ ಅನುಕೂಲ ಮತವನ್ನು ದೊರಕಿಸಿದ್ದಾರೆ ಕಾರಣ ಈ ಶಿಕ್ಷಣಾಲಯದ ಯೋಗ್ಯ ಉಪಯೋಗವನ್ನು ಕರ್ನಾಟಕದ ವಿದ್ಯಾರ್ಥಿಗಳು ಮಾಡಿಕೊಳ್ಳುವರಾಗಿ ನಂಬಿದ್ದೇವೆ.

ಬಾಗಲಕೋಟಿ. }
ತಾ. ೧೦-೯-೩೬. } ಗೌರವ ಕಾರ್ಯದರ್ಶಿಗಳು

ವರ್ತಮಾನ ಸಾರ.

ಚಿತ್ರದುರ್ಗದ "ಸತ್ಯವಾಣಿ" ಎಂಬ ವಾರಪತ್ರಿಕೆಯ ತಾ|| ೧೪-೯-೩೬ ನೆಯ ಸಂಚಿಕೆಯಲ್ಲಿ ಹೀಗೆ ಪ್ರಕಟವಾಗಿದೆ.—

"ವೀರಶೈವರು ಭಾವೀ ಸುಧಾರಣೆಗಳನ್ನಂಗೀಕರಿಸಿ ಅಧಿಕಾರ ಸ್ವೀಕಾರಗಳಿಗೆ ಸಿದ್ಧರಾಗಬೇಕೆಂಬ ದಿವಾನ್ ಬಹದ್ದೂರ ಕಂಬಳಿ ಮೊದಲಾದವರ ತತ್ವವು-ಇಡೀ ವೀರಶೈವರಿಗೆ ಅನ್ವಯಿಸಲಾರದೆಂಬುದನ್ನು ತೋರ್ಪಡಿಸಲು-ಪ್ರಚಾರ ಕೈಕೊಳ್ಳಬೇಕೆಂದು ರಾಷ್ಟ್ರೀಯ ವೀರಶೈವರ ಅಭಿಮತವಾಗಿದೆ. ಸರದಾರ್ ವೀರನಗೌಡ ಪಾಟೀಲ, ದೊಡ್ಡಮೇಟಿ ಅಂದಾನಪ್ಪ, ಚನ್ನಬಸವಸ್ವಾಮಿ, ಕೆ ಎಫ್ ಪಾಟೀಲ್, ವ್ಹಿ. ಬಿ. ಪುರಾಣಿಕ-ವಗೈರೆ ಮಹಾಶಯರನ್ನೊಳಗೊಂಡ ರಾಷ್ಟ್ರೀಯ ವೀರಶೈವ ಕಮಿಟಿಯೊಂದು ಸ್ಥಾಪಿಸಲ್ಪಟ್ಟಿದೆ"

—ಲೋಕಶಾಹಿ ಸ್ವರಾಜ್ಯ ಪಕ್ಷದ ಪರವಾಗಿ ಹೊರಡಲು ಪ್ರಾರಂಭವಾದ ರಾಷ್ಟ್ರಮತ ಎಂಬ ಪತ್ರಿಕೆಯಲ್ಲಿ ದೇಶಸೇವಿಕೆಯರ ಸಂಬಂಧವಾಗಿ ನಿಂದ್ಯ ಲೇಖನ ಪ್ರಕಟವಾದುದರಿಂದ ಆ ಪತ್ರಿಕೆಯನ್ನು ಬಹಿಷ್ಕರಿಸುವ ಚಟುವಟಿಕೆ ನಡೆದಿದೆ.

—ಮುಂಬೈಯಲ್ಲಿ ಗಣಪತ ಬಾಪೂಜಿ ನಲವಡೆ ಎಂಬ ತರುಣನಿಗೆ ೬ ಜನ ಮುಸಲ್ಮಾನ ಪುಂಡರು ಹೊಡೆದು ಕೊಂದರೆಂಬ ಅಪರಾಧಕ್ಕೋಸ್ಕರ ಅವರನ್ನು ಸೆರೆಹಿಡಿದಿದ್ದಾರೆ.

—ಚಾಳೀಸಗಾಂವ ಎಂಬಲ್ಲಿಯ ಒಬ್ಬ ಹೊಲೆಯರ ತರುಣಿಯನ್ನು ಇಮಾಮ ಅಬ್ದುಲ್ ರಹಿಮಾನ ಎಂಬ ಚಹಾ ಅಂಗಡಿಯವನು ಆರು ತಿಂಗಳ ಹಿಂದೆ ಓಡಿಸಿಕೊಂಡು ಹೋಗಿ ನಿಕಾ ಮಾಡಿಕೊಂಡಿದ್ದಾನೆಂಬ ಅಪರಾಧಕ್ಕಾಗಿ ಆ ಹೆಣ್ಣುಮಗಳ ಗಂಡನು ವ್ಯಾಜ್ಯ ಹೂಡಿದ್ದಾನೆ ಆ ಇಬ್ಬರೂ ಈಗ ಸೆರೆಹಿಡಿಯಲ್ಪಟ್ಟಿದ್ದಾರೆ.

—ಆದಿಹಿಂದುಗಳಿಗಾಗಿಯೇ ಒಂದು ಆರ್ಟ್ಸ್ ಕಾಲೇಜನ್ನು ಮುಂಬಯಿಯಲ್ಲಿ ಸ್ಥಾಪಿಸಲು ಡಾ. ಆಂಬೇಡಕರರು ಪ್ರಯತ್ನಿಸಿದ್ದಾರೆ. ಈ ಕಾರ್ಯಕ್ಕೆ ಶೀಖ ಸಮಾಜದಿಂದ ೫ ಲಕ್ಷ ರೂ. ಗಳ ಸಹಾಯ ದೊರೆಯುವದೆಂದು ತಿಳಿಯುತ್ತದೆ.

—ಜೋಧಪುರ ಸಂಸ್ಥಾನದ ಪಾಪನಿ ಎಂಬ ಗ್ರಾಮದಲ್ಲಿ ಅಲ್ಲಿಯ ದೇವಕಿ ಎಂಬ ಒಬ್ಬ ಬ್ರಾಹ್ಮಣ ತರುಣಿಯನ್ನು ಗುಲಾಮ ಹುಸೇನ ಎಂಬ ಪುಂಡ ಮುಸಲ್ಮಾನನು ಓಡಿಸಿಕೊಂಡು ಹೋದನೆಂದು ಆತನ ಮೇಲೆ ವ್ಯಾಜ್ಯ ನಡೆದಿದೆ. ಈ ವ್ಯಾಜ್ಯದ ಕಾಲಕ್ಕೆ ಮಿ. ವಹಿದುಲ್ಲಾಖಾನ ಮ್ಯಾಜಿಸ್ಟ್ರೇಟರು ಆ ಹೆಣ್ಣುಮಗಳನ್ನು ಪೋಲೀಸರ ಸ್ವಾಧೀನಪಡಿಸಲು ಅನ್ಯಾಯವಾದ ಅಪ್ಪಣೆಯನ್ನು ಮಾಡಿದುದರಿಂದ ಕೂಡಲೇ ಅವರನ್ನು ಬೇರೆ ಕಡೆ ಕೆಲಸಕ್ಕೆ ಕಳಿಸಿದರು

—ಹಿಂದುಸ್ಥಾನದಲ್ಲಿ ಫ್ಯಾಸಿಸ್ಟ ಪಂಥ ಪ್ರಚಾರದ ಕಾರ್ಯ ನಡೆಯಿಸಲು ಪರದೇಶದಿಂದ ಸಹಾಯ ಸೌಲಭ್ಯ ದೊರೆಯುತ್ತಾ ಇದೆಯೆಂದೂ ಪಂಡಿತ ಜವಾಹರಲಾಲ ಮೊದಲಾದ ಸೋಶಾಲಿಸ್ಟ ಪಕ್ಷದವರ ವಿರುದ್ಧ ಪ್ರಚಾರ ಕಾರ್ಯ ನಡೆಯುವದಿದೆಯೆಂದೂ ಪ್ರಕಟವಾಗಿದೆ.

—ಉರಣ ಎಂಬಲ್ಲಿ ಧೋಂಡಿ ಎಂಬ ಹೆಣ್ಣುಮಗಳ ವಿಷಯ ಭಂಗವನ್ನು ಮಾಡಿದನೆಂಬ ಅಪರಾಧಕ್ಕಾಗಿ ಹೀರಜ ಪೈಲವಾನ ಎಂಬ ಮುಸಲ್ಮಾನನ ಮೇಲೆ ವ್ಯಾಜ್ಯ ನಡೆದಿದೆ.

ಗಾಂಧೀ ಸಪ್ತಾಹದ ಕಾರ್ಯಕ್ರಮ.

(೨೬-೯-೧೯೩೬ ರಿಂದ ೨-೧೦-೧೯೩೬.)

ಪ್ರತಿವರುಷದಂತೆ ಇದೇ ೨೬ ನೇ ತಾರೀಖಿನಿಂದ ಅಕ್ಟೋಬರ ೨ ನೇ ತಾರೀಖಿನವರೆಗೆ ಕರ್ನಾಟಕದಲ್ಲಿ ಗಾಂಧೀ ಸಪ್ತಾಹವು ಆಚರಿಸಲ್ಪಡುವುದು. ಈ ವಾರದಲ್ಲಿ ಮುಖ್ಯವಾಗಿ ಖಾದಿ ಮಾರೋಣ, ನೂಲು ತೆಗೆಯೋಣ, ಹರಿಜನ ಕಾರ್ಯ, ಗ್ರಾಮೋದ್ಧಾರ ಇವೇ ಮುಂತಾದ ಕೆಲಸಗಳನ್ನು ಎಲ್ಲರೂ ಮಾಡುವುದು ಅವಶ್ಯವಿದೆ. ಹರಿಕೀರ್ತನೆ ಉಪನ್ಯಾಸ ಇವುಗಳ ಮುಖಾಂತರ ಮಹಾತ್ಮಾಜಿಯವರ ತತ್ವಜ್ಞಾನವನ್ನು ಜನರಿಗೆ ತಿಳಿಸಿಹೇಳಬೇಕು. ಅವರ ಚರಿತ್ರೆ ಮತ್ತು ತತ್ವಜ್ಞಾನಗಳ ಬಗ್ಗೆ ಪ್ರಸಿದ್ಧವಾದ ಪುಸ್ತಕಗಳನ್ನು ಮಕ್ಕಳಿಗೆ ಕೊಡಬೇಕು.

ಖಾದಿ ಮಾರಾಟ ಮತ್ತು ನೂಲುವುದು ಇವುಗಳ ಬಗ್ಗೆ ಕರ್ನಾಟಕ ಚರಖಾಸಂಘದವರು ಪ್ರತ್ಯೇಕ ಕಾರ್ಯಕ್ರಮ ಮಾಡಿದಲ್ಲಿ ಅವರಿಗೆ ಸಹಾಯಮಾಡಬೇಕು. ಇಲ್ಲವಾದರೆ ಸ್ವತಂತ್ರವಾಗಿ ಕೆಲಸ ಮಾಡಬೇಕು.

ಕರ್ನಾಟಕ ಶಿಕ್ಷಣ ಸಮಿತಿಯವರು— ಗಾಂಧೀ ವಿಚಾರಾರೋಹಣ, ಮಕ್ಕಳಗಾಂಧೀ, ಮಂಗಲಪ್ರಭಾತ, ನೀತಿಧರ್ಮ ಮುಂತಾದ ಮಹಾತ್ಮರ ತತ್ವಜ್ಞಾನವನ್ನು ಸುಲಭ ಭಾಷೆಯಲ್ಲಿ ತಿಳಿಸಿಹೇಳುವಂಥ ಪುಸ್ತಕಗಳನ್ನು ಪ್ರಸಿದ್ಧಿಸಿದ್ದಾರೆ. ಬೇಕಾದವರು ಅವರ ಕಡೆಯಿಂದ ತರಿಸಿಕೊಳ್ಳಬಹುದು.

ಕರ್ನಾಟಕದಲ್ಲಿಯ ಕಾಂಗ್ರೆಸ್ ಭಕ್ತರು ಮತ್ತು ಹರಿಜನಪ್ರೇಮಿಗಳು ಗಾಂಧೀ ಸಪ್ತಾಹವು ಕರ್ನಾಟಕದ ಎಲ್ಲಭಾಗಗಳಲ್ಲಿಯೂ ಆಚರಿಸಲ್ಪಡುವಂತೆ ಉತ್ಸಾಹದಿಂದ ಕೆಲಸ ಮಾಡಬೇಕೆಂದು ಬಿನ್ನಹ.

ಧಾರವಾಡ. ಕಾರ್ಯದರ್ಶಿ.
ತಾ. ೧೩-೯-೩೬ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ.

ಶಹಾಬಾದ. (ಗ್ರಾಮ)

ನಿನ್ನೆ (ತಾ|| ೧೫-೯-೩೬) ಸಾಯಂಕಾಲ ಶ್ರೀ. ಪಾಟೀಲ ಲಿಂಗನಗೌಡರು ಕಲಬುರ್ಗಿಯಿಂದ ನಮ್ಮ ಗ್ರಾಮಕ್ಕೆ ಆಗಮಿಸಿದರು. ಮೊದಲೇ ನಿಶ್ಚಯಿಸಿದ ಮೇರೆಗೆ ಶ್ರೀ ರಾಮಯ್ಯನವರು ನಂದೀಧ್ವಜ ಇವರ ಮನೆಯ ಮಹಡಿಯ ಮೇಲೆ ಅವರ ವ್ಯಾಖ್ಯಾನವಾಯಿತು. ಸಭೆಗೆ ನೂರಾರು ಜನ ಸ್ತ್ರೀ ಪುರುಷರು ಬಂದಿದ್ದರು

ಶ್ರೀ. ಲಿಂಗನಗೌಡರು ವೀರಶೈವರಲ್ಲಿ ಸಂಘಟನೆಯಾಗಬೇಕೆಂದು ಒಳ್ಳೇ ಮಾರ್ಮಿಕವಾಗಿ ಬೋಧಿಸಿದರು. ಒಂದು ಮನೆಯು ಭದ್ರವಾಗಿ ನಿಲ್ಲಬೇಕಾದರೆ ಅದಕ್ಕೆ ಸಿಮೆಂಟಿನ ಅಗತ್ಯವು ಎಷ್ಟಿರುವದೋ ಹಾಗೆಯೇ ವೀರಶೈವ ಸಮಾಜದಲ್ಲಿ ಸಂಘಟನೆಯುಂಟಾಗಲು ಶಿವಭಕ್ತಿಯ ಆವಶ್ಯಕತೆಯಿರುವದೆಂದು ತಿಳಿಸಿ ಆ ಭಕ್ತಿಯು ಹುಟ್ಟಬೇಕಾದರೆ ವೀರಶೈವ ಧರ್ಮದ ಸರಿಯಾದ ಜ್ಞಾನವಾಗಬೇಕೆಂದೂ ಆ ಜ್ಞಾನವುಂಟಾಗಲು ಶ್ರೀ ಬಸವಾದಿ ಪ್ರಮಥರ ವಚನಗಳನ್ನು ಓದಿ ತಿಳಿದು ಅದರಂತೆ ನಡೆಯಬೇಕೆಂದೂ ತಿಳಿಸಿದರು.

ಸ್ತ್ರೀಯರ ಬಗ್ಗೆ ಅವರು ಬೋಧಿಸುತ್ತ ಈ ಪ್ರಕಾರ ಹೇಳಿದರು.— ಭಯವೇ ಪಾಪ, ಧೈರ್ಯವೇ ಪುಣ್ಯ, ಯಾವಾತನು ಪುಣ್ಯ ಕಾರ್ಯ ಮಾಡುವನೋ ಆತನು ಎಂದೂ ಹೆದರನು. ಯಾವ ಹೆಣ್ಣು ಮಗಳು ಅಂಜುಬುರಕಳಿರುತ್ತಾಳೆಯೋ ಆಕೆಯು ಪಾಪಿಯೆಂದೇ ತಿಳಿಯಬೇಕು ಎಂದು ಹೇಳಿ ನಾನಾ ದೇವರುಗಳಿಗೆ ಸ್ತ್ರೀಯರು ಹರಿಕೆಹೊತ್ತು, ಅಜ್ಞಾನದಿಂದ ಮನಬಲ್ಲಂತೆ ವರ್ತಿಸುವುದನ್ನು ತೀವ್ರವಾಗಿ ಖಂಡಿಸಿದರು. ಒಬ್ಬನೇ ದೇವನಲ್ಲಿ ಭಕ್ತಿಯನ್ನಿಡಬೇಕೆಂದೂ, ಅನ್ಯ ಅನೇಕ ದೇವತೆಗಳಿಗೆ ನಡೆದುಕೊಳ್ಳುವದು, ಅನೇಕ ಕಡೆ ಭಕ್ತಿಮಾಡುವದು ದುರಾಚಾರವೆಂದು ಖಂಡಿಸಿ ಹೇಳಿದರು

ಅನಂತರ ಶ್ರೀ ನಾಗಪ್ಪ ಪಲ್ಲೇದ ಇವರು ಪದ್ಯರೂಪವಾಗಿ ನಮ್ಮ ಸಮಾಜದ ಅಜ್ಞಾನಾಚರಣೆಗಳನ್ನು ನಿವೇದಿಸಿ ಸಭಿಕರ ಆಭಾರ ಮನ್ನಿಸಿದರು. ಶಿವಬಸವಯ್ಯ ನಂದಿಧ್ವಜ.

ಶಹಾಬಾದ (ಸ್ಟೇಶನ್)

ತಾ|| ೧೨ ನೆಯ ದಿವಸ ಇಲ್ಲಿ ಆಲಮಟ್ಟಿಯ ಶ್ರೀ. ಲಿಂಗನಗೌಡರು ವ್ಯಾಖ್ಯಾನ ಮಾಡಿದರು ವೀರಶೈವರು ಶುದ್ಧೀ ಕಾರ್ಯವನ್ನು ಜೋರಿನಿಂದ ಸಾಗಿಸಬೇಕೆಂದೂ ಮತ್ತು ಶುದ್ಧೀ ಕೃತರನ್ನು ಪ್ರೇಮಾದರದಿಂದ ಕಂಡು ನಿಃಸಂಕೋಚವಾಗಿ ಅವರೊಡನೆ ಭೋಜನಾದಿಗಳನ್ನು ಜರುಗಿಸಬೇಕಂದೂ ಒತ್ತಿ ಹೇಳಿದರು. ಪರಧರ್ಮದವರು ಪ್ರಚಂಡಕಾರ್ಯಗಳನ್ನು ನಡೆಸಿರುವಾಗ ವೀರಶೈವರು ಕೈಕಟ್ಟಿಕೊಂಡು ಕುಳಿತುಕೊಳ್ಳುವದು ವೀರಶೈವ ಸಮಾಜಕ್ಕೆ ಭಯಂಕರ ಹಾನಿಯನ್ನು ತರುವದೆಂದು ಹೇಳಿ ಎಲ್ಲರೂ ಒಕ್ಕಟ್ಟಿನಿಂದ ಧರ್ಮ ಸೇವೆ ಮಾಡಬೇಕೆಂದು ಹೇಳಿದರು.

ಶರಣಪ್ಪ ಹರಸೂರ.

ಕೇಶವಾರ.

ಈ ನಮ್ಮ ಗ್ರಾಮದ ಹಿರೇಮಠದಲ್ಲಿ ಶ್ರೀ ಪಾಟೀಲ ಲಿಂಗನಗೌಡರು ಭಾಷಣಮಾಡಿ ಜನರನ್ನು ಸಂತೋಷಪಡಿಸಿದರು ಅಷ್ಟಾವರಣ ಯುಕ್ತರಾದ ವೀರಶೈವರು ಪರಸ್ಪರ ಊಟೋಪಚಾರ ಮಾಡಲು ಹಿಂದು ಮುಂದೆ ನೋಡಕೂಡದೆಂದೂ ಕುಲದಲ್ಲಿ ನಾ ಹೆಚ್ಚು ನೀ ಕಡಿಮೆ ಎಂದು ಹೋರಾಡುವದು ಅಧರ್ಮವೆಂದೂ ಹೇಳಿ ಧರ್ಮದಲ್ಲಿ ಅಜ್ಞಾನ ಮೂಲಕ ತಪ್ಪು ರೂಢಿಗಳು ಹೇಗೆ ಬೀಳುತ್ತವೆಂಬುದನ್ನೂ ಮತ್ತು ಅವುಗಳನ್ನು ಕಳೆಯುವದು ಈಗಿನ ಕಾಲಕ್ಕೆ ಎಷ್ಟು ಅಗತ್ಯವಾಗಿದೆಯೆಂಬುದನ್ನೂ ತಿಳಿಸಿ ಹೇಳಿದರು.

ಸಂಗಪ್ಪ ಕೋರವಾರ.

—ಪಂಡಿತ ಜವಾಹರಲಾಲ ನೆಹರುರವರು ನಾಗಲಾ ಎಂಬ ಊರಿಗೆ ಹೋಗಬೇಕಾದಾಗ ಮೋಟಾರ ಹೋಗಲು ಅಲ್ಲಿ ಅವಕಾಶ ಕೊಡದಿದ್ದುದರಿಂದ ಸೈಕಲ್ ಮೇಲೆ ಹೋಗುವಾಗ ಬಿದ್ದು ಸ್ವಲ್ಪ ಪೆಟ್ಟುಹೊಂದಿದರು.

—ಅಷ್ಟಮ ಚಕ್ರವರ್ತಿಗಳ ಮೇಲೆ ಪಿಸ್ತೂಲನ್ನು ಎಸೆದ ಮ್ಯಾಕ್‌ಮೆಹಾನ್ ಎಂಬ ಅಪರಾಧಿಗೆ ಒಂದು ವರುಷದ ಕಠಿಣ ಶಿಕ್ಷೆಯನ್ನು ವಿಧಿಸಿದರು ತಾನು ಚಕ್ರವರ್ತಿಗಳ ಕೊಲೆಮಾಡುವ ಗುಂಪಿಗೆ ಸೇರಿ ಈ ಕಾರ್ಯವನ್ನು ಮಾಡಿದನೆಂದೂ ಫ್ರಾನ್ಸಿಗೆ ಚಕ್ರವರ್ತಿಗಳು ಹೋದಾಗ ಅಲ್ಲಿಯಾದರೂ ಕೊಲೆಮಾಡಬೇಕೆಂದು ಯೋಚನೆಯಾಗಿತ್ತೆಂದೂ ಈತನು ತನ್ನ ಹೇಳಿಕೆಯಲ್ಲಿ ತಿಳಿಸಿದ್ದನು.

—ಬ್ಯಾರಿಸ್ಟರ್ ಸರದಾರ ಇವರು ಪ್ರಾಗತಿಕ ತತ್ವ ಪ್ರಚಾರಕ್ಕಾಗಿ ಕಳೆದ ವಾರ ವಿಜಾಪುರಕ್ಕೆ ಬಂದಿದ್ದರು. ಶ್ರೀ. ಎಸ್. ಪ್ಹಿ. ನಾಯಕ ವಕೀಲ, ಶ್ರೀ. ಎಲ್. ಅಜರೆಕರ್ ವಕೀಲ, ಶ್ರೀ. ಜಿ. ಪ್ಹಿ. ಹಿರೇಮಠ ವಕೀಲ ಮೊದಲಾದವರು ಇವರಿಗೆ ತುಂಬಾ ಸಹಾನುಭೂತಿಯನ್ನು ತೋರಿಸಿದರೆಂದು ತಿಳಿಯುತ್ತದೆ.

—ಹಿಂದುಸ್ಥಾನದ ಪೋಸ್ಟ ಶಾಖೆಯ ಸೇವಿಂಗ್ಸ ಬ್ಯಾಂಕಿನಲ್ಲಿ ೧೪ ಲಕ್ಷ ರೂ. ಗಳು "ವಾರಸದಾರರು" ಇಲ್ಲದೆ ಹಾಗೇ ಇವೆಯೆಂದು ಶ್ರೀ. ಶ್ರೀಪ್ರಕಾಶ ಇವರ ಪ್ರಶ್ನೆಗೆ ಉತ್ತರವಾಗಿ ಸರಕಾರದವರು ತಿಳಿಸಿದರು.

—ಪುಣೆಯಲ್ಲಿ ದಿ| ಬ| ಕಂಬಳಿಯವರ ಬಂಗಲೆಯಲ್ಲಿ ಬ್ರಾಹ್ಮಣೇತರರ ಪಕ್ಷದ ಸಭೆಯು ಕಳೆದ ೧೪ನೆಯ ತಾರೀಖಿನ ದಿವಸ ರಾ| ಬ| ನವಲೆ ಇವರ ಅಧ್ಯಕ್ಷತೆಯಲ್ಲಿ ಸೇರಿ ತಮ್ಮ ಪಕ್ಷದ ೬ ಜನ ಪ್ರಚಾರಕರನ್ನು ನಿಯಮಿಸಬೇಕೆಂದು ಗೊತ್ತಾಯಿತು.

—ಮಾಲೇರಕೋಟ ಸಂಸ್ಥಾನದಲ್ಲಿ ೬ ಜನ ಮುಸಲ್ಮಾನರನ್ನು ಸರಕಾರದವರು ಸೆರೆಹಿಡಿದುದರ ನಿಷೇಧಾರ್ಥವಾಗಿ ಆ ಸಂಸ್ಥಾನದಿಂದ ೨ ಸಾವಿರ ಮುಸಲ್ಮಾನರು “ಹಿಜರಾತ” ಎಂದರೆ ಕುಟುಂಬ ಸಹಿತ ಆ ಸ್ಥಾನವನ್ನು ಪರಿತ್ಯಾಗ ಮಾಡಿದ್ದಾರೆ.

—ಕಾಂಗ್ರೆಸ್ ರಾಷ್ಟ್ರೀಯ ಪಕ್ಷದವರಾದ ಶ್ರೀ. ಅಣೆ ಇವರು ಲೋಕಶಾಹಿ ಸ್ವರಾಜ್ಯ ಪಕ್ಷದ ಅಧ್ಯಕ್ಷಸ್ಥಾನವನ್ನು ಪರಿತ್ಯಜಿಸಿ ಆ ಪಕ್ಷದ ಅನೇಕರ ಕಾರ್ಯ ಪದ್ಧತಿಯನ್ನು ತುಂಬಾ ಖಂಡಿಸಿದ್ದಾರೆ.

—ಕ್ರಿ. ಶ. ೧೩೫೬ ರಲ್ಲಿ ವಿಜಯನಗರದ ರಾಜನಾಗಿದ್ದ ವೀರ ಬುಕ್ಕನು ಶೃಂಗೇರಿಗೆ ಅಲ್ಲಿಯ ಶಂಕರಾಚಾರ್ಯ ವಿದ್ಯಾತೀರ್ಥ ಇವರ ದರ್ಶನಕ್ಕೆ ಬಂದಿದ್ದನೆಂದು ಶಿಲಾಶಾಸನದಿಂದ ಗೊತ್ತಾಗುವುದಾಗಿ ಮೈಸೂರು ದೇಶದ ಪ್ರಾಚೀನವಸ್ತು ಸಂಶೋಧನ ಶಾಖೆಯವರ ಮೊನ್ನಿನ ವಾರ್ಷಿಕ ವರದಿಯಿಂದ ಗೊತ್ತಾಗುತ್ತದೆ. ಕನ್ನಡ ಭಾಷೆಯಲ್ಲಿ ಬರೆದ ಪದ್ಮ ಪುರಾಣದ ಒಂದು ಪ್ರತಿಯೂ ದೊರೆತಿದೆ. ಇದು ಬಹು ಪ್ರಾಚೀನ ಕಾಲದ್ದಾಗಿದೆಯಂತೆ.

ವಧೂ ಬೇಕು.

ಪ್ರೌಢ, ಸುಶಿಕ್ಷಿತ ಮತ್ತು ಸುಲಕ್ಷಣ ಯುಕ್ತ ವೀರಶೈವ ವಧೂ ಬೇಕು. ವರ ಸುಶಿಕ್ಷಿತ. ವಾರ್ಷಿಕ ಉತ್ಪನ್ನ ೧೫೦೦-೨೦೦೦ ರೂ. ವರೆಗೆ ಇದೆ. ಪಟ್ಟಣವಾಸಿ. ಸ್ವತಂತ್ರ ಉದ್ಯೋಗವಿದೆ. ಇಷ್ಟವುಳ್ಳವರು ಫೋಟೋ ಸಹಿತ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ಎಮ್.
C/o 'ಸುದರ್ಶನ' ಆಫೀಸ್,
ಸೊಲ್ಲಾಪುರ.

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು. ಪುಸ್ತಕದ ಬೆಲೆ ೧ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—
ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.

ಹೊಸ ಪುಸ್ತಕ.

ವಚನಶಾಸ್ತ್ರ ರಹಸ್ಯ.

ಶ್ರೀಮಾನ್ ದಿವಾಕರ ರಂಗನಾಥರಾಯರು ರಚಿಸಿದ ಅದ್ವಿತೀಯ ಗ್ರಂಥ ಶ್ರೀ ಬಸವಾದಿ ವಚನಕಾರರು ಬೋಧಿಸಿದ ಧಾರ್ಮಿಕ, ಸಾಮಾಜಿಕ, ನೈತಿಕ ಸಂಗತಿಗಳೆಲ್ಲಾ ತುಲನಾತ್ಮಕವಾಗಿ ವಿವೇಚಿಸಲ್ಪಟ್ಟ ಮಹತ್ವದ ಗ್ರಂಥ. ಪುಟ ೬೦೦ ಬೆಲೆ ೩ ರೂ.

ಬಸವೇಶ್ವರ ಕೆ ವಚನ.

ಭಗವಾನ್ ಬಸವಣ್ಣನವರ ಕೆಲವು ಮಹತ್ವದ ವಚನಗಳ ಹಿಂದೀ ಅನುವಾದ. ಸುಪ್ರಸಿದ್ಧ ಹಿಂದೀ ಪಂಡಿತರಾದ ಶ್ರೀಮಾನ್ ಸುಂದರಲಾಲಜಿಯವರ ಪ್ರಸ್ತಾವನೆ. ಅಚ್ಚುಕಟ್ಟಾದ ಮುದ್ರಣ. ರಾಷ್ಟ್ರೀಯ ಭಾಷೆಯಾದ ಹಿಂದೀ ಕಲಿಯಬೇಕೆನ್ನುವವರಿಗೆ ತುಂಬಾ ಸಹಾಯ. ಬೆಲೆ ೮ ಆಣೆ.

ವಿವಾಹ ಪದ್ಯಾವಳಿ.

ವಿವಾಹ ಮೊದಲಾದ ಮಂಗಳ ಕಾರ್ಯಗಳಲ್ಲಿ ಹಾಡುವ ಶುದ್ಧ ಕನ್ನಡ ಪದ್ಯಗಳ ಸಂಗ್ರಹ. ಪ್ರತಿಯೊಬ್ಬ ಹೆಣ್ಣುಮಗಳು ಪಠಿಸಲೇಬೇಕಾದ ಪುಸ್ತಕ.

೧ಕ್ಕೆ ೨ ಆ. ೧೦ ಪ್ರತಿಗಳಿಗೆ ೧ ರೂ.

ವೀರಶೈವ ಭಜನಾಮೃತ.

ಉದ್ಗಿರಿ ವೀರಶೈವ ಸಮಾಜದವರು ಪ್ರಕಾಶಗೊಳಿಸಿದ ಹಿಂದೀ ಪದಗಳ ಸಂಗ್ರಹ. ಹೊಸ ಶೈಲಿ. ಕಿವಿಗೆ ಇಂಪಾದ ದಾಟಿ. ಬೆಲೆ. ೧ಕ್ಕೆ ೧ ಆಣೆ.

೨೦ ಪ್ರತಿಗಳಿಗೆ ೧ ರೂ.

ಇವಲ್ಲದೆ

ನಮ್ಮಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಬರೆಯಲ್ಪಟ್ಟ ಎಲ್ಲ ಚಿಕ್ಕ ದೊಡ್ಡ ಪುಸ್ತಕಗಳೂ ಶ್ರೀ ಹಳಕಟ್ಟಿಯವರು ಪ್ರಕಟಿಸಿದ ಎಲ್ಲ ವಚನ ಗ್ರಂಥಗಳೂ ಯಾವಾಗಲೂ ದೊರೆಯುವವು.

ವಿಳಾಸ:—
ಎಸ್. ಸಿ. ಶಿವಲಿಂಗಣ್ಣ
ಕಲ್ಯಾಣ ಕರ್ನಾಟಕ ಬುಕ್ ಡಿಪೋ
ಗುಲಬರ್ಗಾ.

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್, ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ

ಪ್ರೊಪ್ರೈಟರ,
ಶ್ರೀ ರಂಗನಾಥ ಟೈಪ್ ಫೌಂಡರಿ
೬೭ ಕುಬೇರ ಸಾಹುಜಿ ಲೈನ್
ಚಿಕ್ಕಪೇಟೆ, ಬೆಂಗಳೂರು ಸಿಟಿ

ಜ್ಞಾನೋದಯ ಪತ್ರಿಕೆಯನ್ನು ಓದಿರಿ.

ನಿಮಗೆ ಜಗತ್ತಿನ ವರ್ತಮಾನ, ಪ್ರಚಲಿತ ಚಳವಳಿಗಳು ತಿಳಿಯಬೇಕೇ? ನಿಮ್ಮ ಬುದ್ಧಿಗೆ ಚಲನ ಕೊಡುವಂಥ ವಿಷಯಗಳನ್ನೋದಬೇಕೆಂದು ಅಪೇಕ್ಷಿಸುವಿರಾ? ಬಹುಶ್ರುತರಾಗಬೇಕೆಂಬ ಲವಲವಿಕೆಯಿದೆಯೆ? ಹಾಗಾದರೆ ಜ್ಞಾನೋದಯ ಪತ್ರಿಕೆಯನ್ನು ಓದಿರಿ ಇವರಲ್ಲಿ ಧಾರ್ಮಿಕ, ನೈತಿಕ, ಸಾಮಾಜಿಕ, ವ್ಯವಹಾರಿಕ ಒಳ್ಳೇ ವಿಚಾರಪೂರ್ಣ ಲೇಖನಗಳೂ ಮುಖ್ಯ ಮುಖ್ಯ ಸುದ್ದಿಗಳೂ ಒರುತ್ತಿರುತ್ತವೆ ವಾರ್ಷಿಕ ಚಂದಾ ಟಪಾಲ ವೆಚ್ಚ ಕೂಡಿ ೩ ರೂ.

ಮ್ಯಾನೇಜರ:- "ಜ್ಞಾನೋದಯ"
ತಾಳೀಕೋಟಿ. ಜಿ ವಿಜಾಪುರ.

ವೀರಶೈವರಲ್ಲಿ ವಿನಂತಿ.

ವೀರಶೈವ ಧರ್ಮದ ನಿಜತತ್ವವನ್ನು ತಿಳಿದುಕೊಳ್ಳಬೇಕೆಂಬುವ ಇಚ್ಛೆ ಇದ್ದರ, "ವೀರವಾಣಿ" ಎಂಬ ಮಾಸ ಪತ್ರಿಕೆಯನ್ನು ಇಂದೇ ತರಿಸಿಕೊಳ್ಳಿರಿ. ವಾರ್ಷಿಕ ಚಂದಾ ೧-೮-೦

ಸಂಪಾದಕರು— ಗಂಗಾಧರಪ್ಪ ಶಿ ಹೊದ್ಲೂರ.
"ವೀರವಾಣಿ" ಆಫೀಸ.
ಒಮ್ಮಾಪೂರಗಲ್ಲಿ ಹುಬ್ಬಳ್ಳಿ.

ಎಲ್ಲರೂ ಓದಲೇಬೇಕಾದ ಪುಸ್ತಕಗಳು

ಇಕೋ, ಇಲ್ಲಿವೆ.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಕಾಯಕವೆ ಕೈಲಾಸ	೦-೩-೦	ಸುಕಲಾದೇವಿಯ ಕಥೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ಶರಣಬಸವೇಶ್ವರ ಚರಿತ್ರೆ	೦-೧-೬
ಏಕಲವ್ಯನ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಲಜಪತರಾಯರ ಚರಿತ್ರೆ	೦-೧-೬	ವಿಜಯವಾಣಿ	೦-೨-೦
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬
ಬಸವ ಬೋಧಾಮೃತ	೦-೬-೦	ಸಿದ್ಧರಾಮೇಶನ ಸದುಪದೇಶ	೦-೦-೩
ಭಜನಾವಳಿ	೦-೧-೬	ಶುದ್ಧಿ ಮತ್ತು ಸಂಘಟನೆ	೦-೪-೦
ವೀ. ಮ. ಕಾಲನಿರ್ಣಯ (ಶ್ರೀಕಂಠಯ್ಯ ಕೃತ)	೦-೬-೦	ಸ್ಮಾರಕ ಚಂದ್ರಿಕೆ	೧-೦-೦
ಬಸವ ಸಂದೇಶ	೦-೦-೩	ಪ್ರಮಥಾಚಾರ ದೀಪಿಕೆ	೦-೩-೦
ವೀರಶೈವ ಏಕೀಕರಣ	೦-೦-೩	೬೩ ಪುರಾತನರ ಚರಿತ್ರೆ (ಮಿರ್ಜಿ ಕೃತ)	೨-೦-೦

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

ಶ್ರೀ ದೇವೀ ಪುರಾಣವು.

ಈ ಗ್ರಂಥವನ್ನು

ಶಿ. ಮೂ. ಸಿದ್ಧಲಿಂಗಾರ್ಯ ಸಾಲಿಮಠ, ರೋಣ

ಇವರು ಚೆನ್ನಾಗಿ ಪರಿಶೋಧಿಸಿ. ಇದರ ಪೂಜಾವಿಧಿ, ಕಠಿಣ ಶಬ್ದಗಳಿಗೆ ಅರ್ಥ ಸಹವಾಗಿ ಬರೆದು, ಬೇರೆ ಬೇರೆ ಫುಟಗಳಿಂದಲೂ ದಪ್ಪ ಕಾಗದಗಳಲ್ಲಿ ದೊಡ್ಡ ಅಕ್ಷರಗಳಿಂದಲೂ ಕೆಲವು ಚಿತ್ರಗಳಿಂದಲೂ ಅಚ್ಚುಗೊಳಿಸಿ ಪ್ರಸಿದ್ಧಪಡಿಸಿ ರುವರು. ಇದು ಸರ್ವರಿಗೂ ಪಾರಾಯಣಕ್ಕೆ ಬಹು ಯೋಗ್ಯವಾಗಿರುತ್ತದೆ. ಇದರಲ್ಲಿರುವ ೫೦ ವಿಷಯಗಳನ್ನು ಈ ಕೆಳಗೆ ವಿವರಿಸಿದೆ.

ಇದರಲ್ಲಿರುವ ವಿಷಯಗಳು.

೧ ಶ್ರೀ ದೇವೀಮಹಾತ್ಮೆಯ ಪೂಜಾವಿಧಾನವು ೨ ಸ್ನಾನಮಾಡುವ ಕ್ರಮವು ೩ ಅನುಷ್ಠಾನಕ್ಕೆ ಕೂಡ್ರುವ ದಿಕ್ಕುಗಳು ೪ ಹಾಸುವ ಆಸನಂಗಳ ಭೇದವು ೫ ಕೂಡ್ರುವ ಆಸನಕ್ರಮವು ೬ ಅನುಷ್ಠಾನ ಮಾಡುವ ಕ್ರಮವು ೭ ವಿಭೂತಿಮಾಡುವ ಕ್ರಮವು ೮ ವಿಭೂತಿ ವಿಧಾನಗೋಚರ ಚಕ್ರವು ೯ ವಿಭೂತಿ ಧಾರಣ ಸ್ಥಾನಗಳು ೧೦ ರುದ್ರಾಕ್ಷಿ ಧಾರಣ ಫಲಗಳು ೧೧ ದೇವತಾರ್ಚನಾ ಭೇದವು ೧೨ ದೇವತಾರಾಧನ ಫಲಕ್ರಮವು ೧೩ ದೇವತಾರ್ಚನಾ ಕ್ರಮವು ೧೪ ಅಷ್ಟೋಪಚಾರ ಪೂಜೆಯ ಕ್ರಮವು ೧೫ ಅಷ್ಟವಿಧಾರ್ಚನೆಯ ಮಂತ್ರಗಳು ೧೬ ಜಪಮಾಲಿಕಾ ಲಕ್ಷಣವು ೧೭ ಮಂತ್ರಪಲ್ಲವಂಗಳ ಫಲಕ್ರಮವು ೧೮ ಜಪಾರಂಭದಲ್ಲಿ ಧ್ಯಾನಿಸುವ ಧ್ಯಾನ ಮೂರ್ತಿ ಭೇದ ಫಲಗಳು ೧೯ ದೇವೀ ಮಹಾತ್ಮೆಯ ಪೂಜಾವಿಧಾನವು ೨೦ ದೀಪಸ್ಥಾಪನ ಕ್ರಮವು ೨೧ ಪೂರ್ಣಕುಂಭ ಯಂತ್ರಸ್ಥಾಪನ ಕ್ರಮವು ೨೨ ಯಂತ್ರೀ ಪ್ರಾಣಪ್ರತಿಷ್ಠಾ ದೇವತಾ ಸ್ಥಾಪನಾದಿ ಪೂಜಾವಿಧಾನವು ೨೩ ದೇವತಾರ್ಚನಾ ಮಂತ್ರವು ೨೪ ದಶಾವರಣ ದೇವತಾ ಯಂತ್ರವು ೨೫ ನವಾರ್ಣವ ಯಂತ್ರವು ೨೬ ಸರಸ್ವತಿ ಪೂಜೆಯು ೨೭ ಶಾಪೋದ್ಧಾರ ಮಂತ್ರಜಪವು ೨೮ ಉತ್ಕೀಲನ ಮಂತ್ರ ಜಪವು ೨೯ ಕೂಷ್ಮಾಂಡ ಬಲಿಕ್ರಮವು ೩೦ ನವಾರ್ಣವ ಮಂತ್ರನ್ಯಾಸ ಕ್ರಮವು ೩೧ ದೇವೀಮಹಾತ್ಮೆಯ ಚರಿತ್ರತ್ರಯನ್ಯಾಸ ಕ್ರಮವು ೩೨ ದೇವೀಮಹಾತ್ಮೆಯ ಗ್ರಂಥ ಪಠನ ಕ್ರಮವು ೩೩ ಶ್ರೀ ದೇವೀ ಕುಂಭಾಷ್ಟಕ ಮಂತ್ರ, ೩೪ ಕುಂಭಾಷ್ಟಕ ಮಂತ್ರಸಿದ್ಧಿ ಫಲಕ್ರಮವು ೩೫ ಕಾಳಿಕಾ ಬೀಜಮಂತ್ರಾಷ್ಟಕ ೩೬ ಇಚ್ಛಾ ಫಲ ಪ್ರಾಪ್ತಿಗೆ ಸಂಗ್ರಹ ಕ್ರಮವು ೩೭ ಉತ್ತರನ್ಯಾಸವಿಧಿ ೩೮ ಅನ್ನಸಂತರ್ಪಣ ಕ್ರಮವು ೩೯ ದೇವೀ ಮಹಾತ್ಮೆಯ ೧ ನೇ ಚರಿತ್ರವು (ಪೀಠಿಕಾಧ್ಯಾಯದಿಂದ ೩ ನೆಯ ಅಧ್ಯಾಯ ಸಂಪೂರ್ಣ) ೪೦ ದೇವೀ ಮಹಾತ್ಮೆಯ ೨ ನೇ ಚರಿತ್ರವು (೪ ನೇ ಅಧ್ಯಾಯದಿಂದ ೯ ನೇ ಅಧ್ಯಾಯ ಸಂಪೂರ್ಣ) ೪೧ ದೇವೀ ಮಹಾತ್ಮೆಯ ೩ ನೇ ಚರಿತ್ರವು (೧೦ ನೇ ಅಧ್ಯಾಯದಿಂದ ೧೮ ನೇ ಅಧ್ಯಾಯ ಸಂಪೂರ್ಣ) ೪೨ ಮಂಗಳಾರತಿ ಪದವು ೪೩ ಮಂಗಲ ನೀರಾಜನವು ೪೪ ಪುಷ್ಪಾಂಜಲಿಯು ೪೫ ಪ್ರದಕ್ಷಿಣೆಯು ೪೬ ನಮಸ್ಕಾರವು ೪೭ ಪ್ರಾರ್ಥನೆಯು ೪೮ ಅರ್ಘ್ಯ ಪ್ರದಾನವು ೪೯ ವಿಸರ್ಜನ ಪೂಜೆಯು ೫೦ ಕಠಿಣ ಶಬ್ದಗಳ ಅರ್ಥವು

ಈ ಪ್ರಕಾರ ಯಾವತ್ತು ಮಹತ್ವದ ವಿಷಯಗಳಿಂದೊಡಗೂಡಿದ ಈ ದೇವೀ ಮಹಾತ್ಮೆಯ ಮೂರನೆಯ ಆವೃತ್ತಿಯ ಪ್ರತಿಗಳು ಖರ್ಚು ಆಗಿ ಇನ್ನು ಸ್ವಲ್ಪವೇ ಶಿಲ್ಕು ಉಳಿದಿರುತ್ತವೆ. ಬೇಕಾದವರು ತೀವ್ರವಾಗಿ ತರಿಸಿಕೊಳ್ಳಬೇಕು.

ಕ್ರಯ ಮೂರು ರೂಪಾಯಿ (೩-೦-೦) [ವ್ಹಿ ಪಿ ವೆಚ್ಚ ಬೇರೆ.] ವಿಳಾಸ— **ಶ್ರೀ ರುದ್ರವಿಲಾಸ ಪ್ರೆಸ್ ಆ್ಯಂಡ್ ಬುಕ್‌ಡಿಪೊ, ಗದಗ.**

ವೈದ್ಯ ಶಿಕ್ಷಕ.

ಇದು ವೈದ್ಯಕ ಸಂಬಂಧವಾದ ಪುಸ್ತಕವು

ಈ ಪುಸ್ತಕದೊಳಗೆ ಬರೆಯಲ್ಪಟ್ಟ ಸಿದ್ಧ ಪುರುಷರಿಂದ ತಯಾರಿಸಿದ ಬಹು ಪುರಾತನ ತಾಳವಾಲಿಯೊಳಗಿನ ಬರಹದಿಂದಿದ್ದ ಔಷಧೋಪಾಯಗಳೆಲ್ಲವೂ ನಮ್ಮ ದೇಶೀ ಮೂಲಿಕೆಗಳಿಂದೊಡಗೂಡಿದವಿದ್ದು ನಾವು ಸ್ವಂತ ಅನುಭವದಿಂದ ಮಾಡಿ ನೋಡಿದವುಗಳಿರುತ್ತವೆ. ಮತ್ತು ತಲೆ ಮೊದಲು ಕಾಲು ಕಡೆಯಾಗಿ ಪುರುಷಾಕೃತಿಯಿಂದ ತಯಾರಿಸಿದ ಈ ಪುಸ್ತಕದೊಳಗಿನ ಔಷಧೋಪಾಯಗಳು ಒಂದೊಂದು ಅವಯವದ ರೋಗಕ್ಕೆ ೧೦—೨೦—೩೦ ರ ತನಕಲೂ ಒಂದೊಂದೇ ಕಡೆಯಲ್ಲಿರುವವು. ಅದರಂತೆ ಅನುಕ್ರಮಣಿಕೆಯನ್ನಾದರೂ ಹಾಕಲ್ಪಟ್ಟಿರುವೆವು ಅದ್ದರಿಂದ ಅವುಗಳನ್ನು ಹುಡುಕಲಿಕ್ಕೆ ಶ್ರಮ ಸಹ ಬೀಳುವಂತಿಲ್ಲ ಮತ್ತು ಭಸ್ಮ ರಸಾಯನ ಔಷಧ ಸಾಮಾನುಗಳೇನೂ ಇದರಲ್ಲಿ ಮಿಶ್ರವಾಗಿಲ್ಲವಾದ್ದರಿಂದ ಸಾಧಾರಣ ಸರ್ವರಿಗೂ ಸುಲಭೋಪಾಯದಿಂದ ಔಷಧ ತಯಾರಿಸಿಕೊಳ್ಳಲಿಕ್ಕೇನೂ ಅಡ್ಡಿಯಿಲ್ಲ. ೧ ತಲೆರೋಗ ೨ ಕಣ್ಣುರೋಗ ೩ ಮೂಗಿನರೋಗ ೪ ಬಾಯಿರೋಗ ೫ ಉದರರೋಗ ೬ ಜ್ವರ ೭ ಸರ್ವಾಂಗ ರೋಗ ೮ ವಾತರೋಗ ೯ ಪಿತ್ಥರೋಗ ೧೦ ಶ್ಲೇಷ್ಮರೋಗ ೧೧ ಗುಹ್ಯರೋಗ ೧೨ ಧಾತುಪುಷ್ಟಿಗೆ ೧೩ ಗುದರೋಗ ೧೪ ಹೆಣ್ಣುಗಳಿಗೆ ೧೫ ಯಾವತ್ತು ರೋಗಾದಿಗಳಿಗೆ ೧೬ ವಟಿಕಾ ೧೭ ಚೂರ್ಣ ೧೮ ತೈಲ ೧೯ ಕೃತ್ರಿಮ ಪರೀಕ್ಷೆ ೨೦ ಮಾಟಕ್ಕೆ ೨೧ ಪಾದರೋಗ ಈ ಪ್ರಕಾರ ಇರುತ್ತವೆ. ಪ್ರತಿಯೊಂದು ಕುಟುಂಬದವರು ಇದನ್ನು ಸಂಗ್ರಹಿಸಿದರೆ ವೈದ್ಯರ ಅವಶ್ಯಕತೆ ಇಲ್ಲದಂತಾಗುವದು. ಕಾರಣ ತೀವ್ರವೇ ತರಿಸಿಕೊಳ್ಳಿರಿ. ಇದರ ಬೆಲೆ:- ೧—೮—೦

ವಿಳಾಸ:— **ಶ್ರೀ ರುದ್ರವಿಲಾಸ ಪ್ರೆಸ್ ಆ್ಯಂಡ್ ಬುಕ್‌ಡಿಪೊ, ಗದಗ.**

ದುಷ್ಕಾಳ! ದುಷ್ಕಾಳ! ದುಷ್ಕಾಳ!

ಈಗ ಬಹು ಭಾಗಗಳಲ್ಲಿ ದುಷ್ಕಾಳ ಬೀಳಬಹುದೆಂದೇ

ನಿರ್ಧಾರವಾದಂತಾಗಿದೆ. ದುಷ್ಕಾಳ ಬಿದ್ದರೆ,

ಬಡವರಿಗೆ ಹೊಟ್ಟೆಯ ಚಿಂತೆ !

ಶ್ರೀಮಂತರಿಗೆ ದುಡ್ಡನ್ನು ಕಾಯುವ ಚಿಂತೆ !

ಹುಬಳ್ಳಿ ಸಿದ್ಧೇಶ್ವರ ಕಂಪನಿಯ

ಅತ್ಯುತ್ತಮ,

ಟ್ರೆಝುರಿಗಳನ್ನು ಕೊಂಡುಕೊಂಡರೆ

ಕಳ್ಳರ ಭಯವಿಲ್ಲ. ಕಾಯುವ ಕಾಟವಿಲ್ಲ.

ಬೆಂಕಿಯ ಭಯವಿಲ್ಲ. ಒಮ್ಮೆ ತರಿಸಿ ಅನುಭವ ಪಡೆಯಿರಿ.

ನಿಜಾಮು ಕರ್ನಾಟಕದವರ

ಅನುಕೂಲಕ್ಕಾಗಿ

ಕಂಪನಿಯ ಬೆಲೆಗೇನೇ

ದೊರೆಯುವ ಏರ್ಪಾಟು ಮಾಡಿದೆ.

ಎಸ್. ಸಿ. ಶಿವಲಿಂಗಣ್ಣ

ಕೆ. ಕೆ. ಪ್ರೆಸ್, ಗುಲಬರ್ಗಾ.

ಹೊಸದು ! **ತೀರ ಹೊಸದು !!**

ಅರವಿಂದ ಗ್ರಂಥಮಾಲೆ.

——:(◆):——

ಸಂಪಾದಕರು:— **ಮ ಧು ರ ಚೆ ನ್ನ ರು.**

ವಿಚಾರ ಪ್ರಚುರ ವಾಙ್ಮಯವನ್ನು ಒದಗಿಸುವ, ಸುರಸ ಸಾಹಿತ್ಯವನ್ನು ಸೂರೆಗೊಳಿಸುವ ಒಂದೇ ಒಂದು ಗ್ರಂಥಮಾಲೆ ಯೆಂದರೆ ಇದೇ. ೧೦೦ ರಿಂದ ೧೨೫ ಪುಟಗಳ ಆರು ಪುಸ್ತಕ ಗಳು. ಅಲ್ಲದೆ ಕಾಣಿಕೆಯ ಪುಸ್ತಕವೊಂದು ಕೊಡಲ್ಪಡುವದು. 'ನಂದನವನ', **'ಬಾಳಿನಲ್ಲಿ ಬೆಳಕು'**, 'ಮಿಲನ' ಈಗಾಗಲೇ ಅರಳಿವೆ. ಬೆಲೆ ರೂ ೩-೮-೦. **ವಿಳಾಸ:—**

'ಅರವಿಂದ ಗ್ರಂಥಮಾಲಾ' ಕಾರ್ಯಾಲಯ

ಪೋ. **ಹಲಸಂಗಿ** ಜಿ. ವಿಜಾಪುರ.

ಜಾಹೀರ ನೋಟೀಸು.

——:(◆):——

ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಸುರನ್ಸ ಕಂಪನಿಯ ಡಾಯರೆಕ್ಟರ ಬೋರ್ಡಿನವರು ಶ್ರೀಯುತ ವ್ಹಿ. ಡಿ. ಕಲಕೋಟಿ **ಕೊರಡೂರ** ಇವರನ್ನು ಅರ್ಗನಾಯಿಜಿಂಗ ಡಾಯರೆಕ್ಟರರನ್ನಾಗಿ ನಿಯಮಿಸಿದ್ದಾರೆ ಇನ್ನುಮೇಲೆ ಅವರು ಕರ್ನಾಟಕದ ಎಲ್ಲ ಭಾಗ ಗಳಲ್ಲಿ ಟೂರ ಮಾಡತಕ್ಕವರಿರುವರು

ಕಾರಣ ಎಜನ್ಸಿ ತೆಗೆದುಕೊಳ್ಳಲಿಚ್ಛಿಸುವ ಕನ್ನಡಿಗ ಉತ್ಸಾಹಿ ತರುಣರು ಸದರಿ ಡಾಯರೆಕ್ಟರರು ತಮ್ಮ ಸ್ಥಳದಲ್ಲಿ ಕ್ಯಾಂಪ ಮಾಡಿದಾಗ್ಗೆ ಅವರಿಗೆ ಭೆಟ್ಟಿಯಾಗಿ ಎಲ್ಲ ಮಾಹಿತಿಯನ್ನು ತಿಳಿದು ಕೊಳ್ಳಬೇಕು.

By the order of the board.
The Manager.

ಗೌರೀಶಂಕರ ನಿವಾಸ.

ಊಟ-ವಸತಿ ಗೃಹ.

ಮುಂಬಯಿ.

ಸೋಯಿದರ. ಉತ್ತಮ ಸೌಕರ್ಯ. ಎಲ್ಲಕ್ಕಿಂತ ಅನುಕೂಲ ಸ್ಥಳ!

ಸ್ಕೂಲ ಕಾಲೇಜುಗಳಿಗೂ, ಸ್ಮಾಲ್‌ಕಾಜ್ ಕೋರ್ಟಿಗೂ ಸಮುದ್ರದಢಕ್ಕೂ ಟ್ರಾಮುಕಾರ್ ರಸ್ತೆಗೂ, ಪೋಸ್ಟ ಆಫೀಸಿಗೂ, ಚಹದುಕಾನಗಳಿಗೂ, ಸಿನೆಮಾ ಥೇಟರುಗಳಿಗೂ, ಇನ್ನಿತರ ನೋಡುವಂಥ ಸ್ಥಳಗಳಿಗೂ ಅತಿ ಸಮೀಪವಾದ ಸ್ಥಳ! ಮುಂಬಯಿ ಶಹರದ ವ್ಯಾಪಾರ ಮತ್ತು ಇನ್ನಿತರ ದಂಧೆಗಳಿಗೆ ಕೇಂದ್ರಸ್ಥಾನ ....
ಅಂದವಾಗಿ ಸಿಂಗರಿಸಿದ ಖೋಲಿಗಳು! ರಮ್ಯವಾದ ಸ್ಥಾನ! ಸುತ್ತಲೂ ಬೆಳಕು! ಸುತ್ತಲೂ ಹವೆ!
-ಈಗಿನ ಆರ್ಥಿಕ ಪರಿಸ್ಥಿತಿಯ ಮೂಲಕ ಸರ್ವರಿಗೂ ಅನುಕೂಲವಾಗುವಂತೆ ಕಡಿಮೆ ಮಾಡಿದ ನಮ್ಮ ಸೋಯಿ ದರಗಳು-

ಪ್ರತಿ ಆದಿತ್ಯವಾರ ಮೃಷ್ಟಾನ್ನ ಭೋಜನ!
ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ತಲೂರ ರಾಯನಗೌಡರು.
ಒಡೆಯರು, ಗೌರೀಶಂಕರ ನಿವಾಸ ಹಿಂದೂ ಹೋಟೆಲ್
ದಹಣುಕರ ಬಿಲ್ಡಿಂಗ್, ಕಾಳಬಾದೇವಿ ರೋಡ, ಮುಂಬಯಿ.

ಜಯಕರ್ನಾಟಕ

ಕರ್ನಾಟಕದ ಪ್ರಮುಖ ಮಾಸಪತ್ರಿಕೆ.
ವಾರ್ಷಿಕ ಚಂದಾ ೫-೮-೦

ನಾಟ್ಯಾಂಕ

ವಿವಿಧಚಿತ್ರ! ಸಂಸನಾಟಕ ಕಥೆ! ವಿದ್ವತ್ತ್ವ ಪ್ರಚುರ ಲೇಖಗಳಿವೆ
ಹೊಸ ಸೌಲಭ್ಯಗಳು:—
ಬೆಲೆ ೧೦ ಆಣೆ, ೧೯೩೩ ರ ವಿಶೇಷ ಸಂಚಿಕೆಯೊಂದಿಗೆ ೧ ರೂ,
ಹೊಸ ಚಂದಾದಾರರಿಗೆ ಉಚಿತ. ತ್ವರೆಮಾಡಿರಿ

ಜಯಕರ್ನಾಟಕ ಗ್ರಂಥಮಾಲೆ

ವರ್ಷಕ್ಕೆ ೬ ಪುಸ್ತ] ವಾ. ಚಂ. ೩-೪-೦ [ಮೇಲೊಂದು ಉಚಿತಪುಸ್ತ
ಜ. ಕ. ಚಂದಾದಾರರಿಗೆ ೩ ರೂ.
ಮೂರನೆಯ ವರ್ಷದ ಅಯ್ದನೆಯ ಪುಸ್ತವಾದ
ಹಲವು ಪ್ರಸಿದ್ಧ ಕತೆಗಾರರ ಸರಸವಾದ
ಇದೀಗ ಹೊರಟಿದೆ } **ನೀಳ್ಗತೆಗಳು!** [ಬೆಲೆ ಹನ್ನೆರಡು ಆಣೆ.

ಜಯಕರ್ನಾಟಕ ಕಾರ್ಯಾಲಯ
ಧಾರವಾಡ.

ವೀರಶೈವ
ಮತಾಚಾರ್ಯರ ಕಾಲನಿರ್ಣಯ

ಎಂಬ ಪುಸ್ತಕವನ್ನು ಜಾಗ್ರುತೆ ತರಿಸಿಕೊಂಡು
ಓದಿರಿ ಇದರಲ್ಲಿ
ಶ್ರೀ ರೇವಣಸಿದ್ಧ ಶ್ರೀ ಮರುಳಸಿದ್ಧ ಶ್ರೀ ಪಂಡಿತಾರಾಧ್ಯ
ಶ್ರೀ ಏಕೋರಾಮ ಶ್ರೀ ವಿಶ್ವಾರಾಧ್ಯ
ಶ್ರೀ ಬಸವಣ್ಣನವರು
ಈ ಮಹಾ ಪುರುಷರ ಕಾಲಮಾನವನ್ನು ಕುರಿತು
ಐತಿಹಾಸಿಕ ಪ್ರಬಲ ಪ್ರಮಾಣಗಳಿಂದ
ಶ್ರೀಮಾನ್ ಕರ್ಲಮಂಗಲಂ ಶ್ರೀಕಂಠಯ್ಯನವರು
ಬಹು ಸೊಗಸಾಗಿ ಬರೆದಿದ್ದಾರೆ.
೮೪ ಪುಟಗಳು ಅಂದವಾದ ಮುದ್ರಣ
ಕ್ರಯ ೧೨ ಆಣೆ ಇದ್ದದ್ದನ್ನು ೬ ಆಣೆಗೆ ಇಳಿಸಿದೆ.
೧೨ ಪುಸ್ತಕಗಳಿಗೆ ೪ ರೂ. ಅಂಚೆಯ ವೆಚ್ಚ ಬೇರೆ.
ಸೂಚನೆ: — ಮೂರು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ವ್ಹಿ. ಪಿ. ಮೂಲಕ ಕಳಿಸುವದಾಗುತ್ತದೆ. ಒಂದೆರಡು ಪುಸ್ತಕಗಳನ್ನು ಅಪೇಕ್ಷಿಸತಕ್ಕವರು ಪೋಸ್ಟ ಚಾರ್ಜ ಸಹಿತ ಟಿಕಿಟ ಕಳಿಸಿದರೆ ಬುಕ್ ಪೋಸ್ಟ ದ್ವಾರ ಕಳಿಸಲಾಗುತ್ತದೆ

ಪುಸ್ತಕ ದೊರೆಯುವ ವಿಳಾಸ
ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ.
ಪೋ. ಆಲಮಟ್ಟಿ ಜಿ. ವಿಜಾಪುರ.
ಶ್ರೀ. ಬಿ. ವಿಶ್ವನಾಥಪ್ಪ ಮಂಡಿ ಮರ್ಚಂಟ್
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ
ಸುವರ್ಣ ಪದಕಗಳನ್ನು ಮತ್ತು ಸರ್ಟೀಫಿಕೇಟುಗಳನ್ನು ಪಡೆದು ಹೆಸರಾದ
ಇಂಡಿಯಾ ಸರಕಾರದಲ್ಲಿ ರಜಿಸ್ಟರ್ ಆದ

ಸಿದ್ಧೇಶ್ವರ ತ್ರೇಝುರಿ ಕಂಪನಿ, ಹುಬ್ಬಳ್ಳಿ.

ನಮ್ಮ "ಸಿದ್ಧೇಶ್ವರ ಟ್ರೇಝುರಿ" ಗಳನ್ನು ಈ ವರೆಗೆ ಕೈಗಾರಿಕೆಯ ಕೆಲಸಗಳಲ್ಲಿ ಹೆಸರಾದ ಯುರೋಪ, ಅಮೇರಿಕಾ ವಗೈರೆ ಪರರಾಷ್ಟ್ರಗಳಲ್ಲಿ ತಯಾರಾಗುವ ಟ್ರೇಝುರಿಗಳ ಪದ್ಧತಿಯ ಮೇರೆಗೆ ಹೊಸ ಉಕ್ಕಿನ ಅಖಂಡ ಒಂದೇ ತಗಡಿನಲ್ಲಿ ೧೨ ಮೂಲೆಗಳನ್ನು ೨೫೦ ಟನ್ ಪ್ರೇಷರ ಕೊಡುವ ಮಶಿನ್ನಿನಿಂದ ಬಗ್ಗಿಸಿ, ರಿಪ್ಪಿಟ್ಸ ಮೊದಲಾದವುಗಳಿಂದ ಜಾಯಿಂಟ ಮಾಡದೆ ಇಲೆಕ್ಟ್ರಿಸಿಟಿಯಿಂದ ಬೆಸೆದು ತಯಾರಿಸುತ್ತೇವೆ.

ಈ ಹೊಸ ಸುಧಾರಣೆಯಿಂದ ಮಾಡಿದ ತಿಜೋರಿಗಳಿಗೂ ಮತ್ತು ಯಾವದೇ ನಮ್ಮ ಸಾಮಾನಕ್ಕೂ ಯಾವ ತರದ ಭಯವಿಲ್ಲ. ಮತ್ತು ಅವು ಒಳ್ಳೇ ಮಜಬೂತವಾಗಿಯೂ ಸುಂದರವಾಗಿಯೂ ಆಗುತ್ತವೆ. ನಾವು ನಮ್ಮ ತಿಜೋರಿಗಳಿಗೂ ಮತ್ತು ನಮ್ಮಲ್ಲಿ ತಯಾರಾಗುವ ಉಕ್ಕಿನ ಕಪಾಟು, ಕ್ಯಾಶಬಾಕ್ಸ, ಸ್ಟ್ರಾಂಗರೂಮ ಡೋರ್ಸು ಗಳಿಗೂ ನಮ್ಮ ಕಾರಖಾನೆಯಲ್ಲಿಯೇ ತಯಾರಾಗುವ ಉತ್ತಮವಾದ ಮತ್ತು ಮಜಬೂತವಾದ ಕೀಲಿಗಳನ್ನು ಹಚ್ಚುತ್ತೇವೆ. ಮತ್ತು ಇದಲ್ಲದೆ ನಮ್ಮಲ್ಲಿ ಹೊಸ ಪದ್ಧತಿಯ ಮೇರೆಗೆ ತಯಾರಾಗುವ ಕಾಂಬಿನೇಶನ್ ಕೀ ಲೆಸ್ಸಾ ಲಾಕ್ಸು (ನಂಬರ ಕೀಲಿ) ಗಳನ್ನು ತಿಜೋರಿಗಳಿಗೆ ಹಚ್ಚಿಸಿದರೆ ಆ ತಿಜೋರಿಗಳನ್ನು ಯಾರೂ ತೆಗೆಯಲು ಸಾಧ್ಯವಿಲ್ಲ ಯಾರಾದರೂ ತೆಗೆದರೆ ಅವರಿಗೆ

೧೦೦೦ ರೂ. ಬಹುಮಾನ ಕೊಡುವೆವು.

ನಮ್ಮ ಫಾಯರ ಪ್ರೂಫ್ ತಿಜೋರಿಗಳು ತುಂಬಾ ಖಾತ್ರಿಯಾದವುಗಳಿರುತ್ತವೆ.

ಈ ಬಗ್ಗೆ ಅನೇಕ ವಸ್ತು ಪ್ರದರ್ಶನಗಳಲ್ಲಿ ಒಳಗೆ ನೋಟು ವಗೈರೆ ಸಾಮಾನುಗಳನ್ನು ಇಟ್ಟು ಕೆಂಪಗೆ ಕಾಸಿದನಂತರ ಒಳಗಿಟ್ಟ ಸಾಮಾನುಗಳು ಸುಡದೆ ಇದ್ದದ್ದನ್ನು ಖಾತ್ರಿ ಮಾಡಿಕೊಟ್ಟಿದ್ದೇವೆ.

ಧಾರಣೆಗಳ ಬಗ್ಗೆ ನಮ್ಮ ಸಚಿತ್ರ ಕ್ಯಾಟಲಾಗುಗಳಿಗೆ ಬರೆಯಿರಿ.
ಅ ಥ ವಾ
ಸಮಕ್ಷಮ ಬಂದಲ್ಲ ತಿಳಿಯುವದು.

ತಮ್ಮ ಹಿತಾಭಿಮಾನಿ,
ಸಿದ್ಧೇಶ್ವರ ಮತ್ತು ಕಂಪನಿ
ಟ್ರೇಝುರಿ ಮೇಕರ್ಸ
ಹುಬ್ಬಳ್ಳಿ.

ಫ್ಯಾಕ್ಟರಿ ಮತ್ತು ಹೆಡ್ ಆಫೀಸ್-
ಹುಬ್ಬಳ್ಳಿ.

ಬ್ರ್ಯಾಂಚ ಆಫೀಸುಗಳು-
ಹೈದರಾಬಾದ (ಡೆಕ್ಕನ) ಮತ್ತು ಕೊಲ್ಹಾಪುರ (ಲಕ್ಷ್ಮೀಪುರಿ)

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ! ದಾಕ್ಷಿಣ್ಯಪರನಲ್ಲ! ಲೋಕವಿರೋಧಿ! ಶರಣನಾರಿಗೂ ಅಂಜುವವನಲ್ಲ!
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ! ವ. ೨೨೯ ! ಮಹಾನುಭಾವ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವರ್ಗಣಿ:- ಅಂಚೆಯ ವೆಚ್ಚ ಸೇರಿ ೩ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ೬.	ಆಲಮಟ್ಟಿ- ಸೋಮವಾರ ತಾರೀಖು ೨೯ ನೆಯ ಮಾರ್ಚ ೧೯೪೭.	ಸಂಚಿಕೆ೩೦

ಜನಸೇವೆಯೇ ದೇವರ ಸೇವೆ

ಗವ್ಹರ್ನರರಲ್ಲಿ ಸಂಭಾಷಣೆ.

ಅಭಿವಚನ ಬೇಕಿದ್ದರೆ ಕಾರ್ಯಕ್ರಮವೂ ಬೇಕು!

ಮುಂಬೈ, ಮದ್ರಾಸ, ಸಂಯುಕ್ತ ಪ್ರಾಂತ, ಬಿಹಾರ
ಪ್ರಾಂತಗಳ ಗವ್ಹರ್ನರರ ಸಂಗಡ ಆಯಾಯ ಪ್ರಾಂತಗಳ
ಅಸೆಂಬ್ಲಿ ಕಾಂಗ್ರೆಸ್ ಪ್ರಮುಖರು
ಸಂಭಾಷಿಸಿದರು.

ಇನ್ನೂ ಯಾವ ನಿರ್ಣಯವೂ ಆಗಿಲ್ಲ.

ತಾ. ೧ ನೆಯ ದಿನ ಜರುಗುವ ಹರತಾಳದಲ್ಲಿ
ಮುಸಲ್ಮಾನರು ಸೇರಬಾರದಾಗಿ ಬ್ಯಾ. ಜಿನ್ನಾರವರು ತಿಳಿಸಿದ್ದಾರೆ.
ಲೋಕಶಾಹಿ ಸ್ವರಾಜ್ಯ ಪಕ್ಷಕ್ಕೂ
ಹರತಾಳ ಒಪ್ಪಿಗೆಯಿಲ್ಲ.

ಶೀಲವೇ ದೇವಾಲಯ.

SANGAM CLOTH STORES
Prop: M. S. Hundekar & sons.
P.O: TERDAL - 587 315
Dt. Bijapur. (Karnataka)

ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ
ಸುವರ್ಣ ಪದಕಗಳನ್ನು ಮತ್ತು ಸರ್ಟಿಫಿಕೇಟುಗಳನ್ನು ಪಡೆದು ಹೆಸರಾದ
ಇಂಡಿಯಾ ಸರಕಾರದಲ್ಲಿ ರಜಿಸ್ಟರ್ ಆದ

ಸಿದ್ಧೇಶ್ವರ ಟ್ರೇಝುರಿ ಕಂಪನಿ, ಹುಬ್ಬಳ್ಳಿ.

ನಮ್ಮ "ಸಿದ್ಧೇಶ್ವರ ಟ್ರೇಝುರಿ" ಗಳನ್ನು ಈ ವರೆಗೆ ಕೈಗಾರಿಕೆಯ ಕೆಲಸಗಳಲ್ಲಿ ಹೆಸರಾದ ಯುರೋಪ, ಅಮೇರಿಕಾ ವಗೈರೆ ಪರರಾಷ್ಟ್ರಗಳಲ್ಲಿ ತಯಾರಾಗುವ ಟ್ರೇಝುರಿಗಳ ಪದ್ಧತಿಯ ಮೇರೆಗೆ ಹೊಸ ಉಕ್ಕಿನ ಅಖಂಡ ಒಂದೇ ತಗಡಿನಲ್ಲಿ ೧೨ ಮೂಲೆಗಳನ್ನು ೫೦೦ ಟನ್ ಪ್ರೇಷರ ಕೊಡುವ ಮಶಿನ್ನಿನಿಂದ ಬಗ್ಗಿಸಿ, ರಿವ್ಹಿಟ್ಸ ಮೊದಲಾದವುಗಳಿಂದ ಜಾಯಿಂಟ ಮಾಡದೆ ಇಲೆಕ್ಟ್ರಿಸಿಟಿಯಿಂದ ಬೆಸೆದು ತಯಾರಿಸುತ್ತೇವೆ

ಈ ಹೊಸ ಸುಧಾರಣೆಯಿಂದ ಮಾಡಿದ ತಿಜೋರಿಗಳಿಗೂ ಮತ್ತು ಯಾವದೇ ನಮ್ಮ ಸಾಮಾನಕ್ಕೂ ಯಾವ ತರದ ಭಯುವಿಲ್ಲ. ಮತ್ತು ಅವು ಒಳ್ಳೇ ಮಜಬೂತವಾಗಿಯೂ ಸುಂದರವಾಗಿಯೂ ಆಗುತ್ತವೆ ನಾವು ನಮ್ಮ ತಿಜೋರಿಗಳಿಗೂ ಮತ್ತು ನಮ್ಮಲ್ಲಿ ತಯಾರಾಗುವ ಉಕ್ಕಿನ ಕಪಾಟು, ಕ್ಯಾಶಬಾಕ್ಸ, ಸ್ಟ್ರಾಂಗರೂಮ ಡೋರ್ಸು ಗಳಿಗೂ ನಮ್ಮ ಕಾರಖಾನೆಯಲ್ಲಿಯೇ ತಯಾರಾಗುವ ಉತ್ತಮವಾದ ಮತ್ತು ಮಜಬೂತವಾದ ಕೀಲಿಗಳನ್ನು ಹಚ್ಚುತ್ತೇವೆ. ಮತ್ತು ಇದಲ್ಲದೆ ನಮ್ಮಲ್ಲಿ ಹೊಸ ಪದ್ಧತಿಯ ಮೇರೆಗೆ ತಯಾರಾಗುವ ಕಾಂಬಿನೇಶನ್ ಕೀ ಲೆಸ್ಸಾ ಲಾಕ್ಸು (ನಂಬರ ಕೀಲಿ) ಗಳನ್ನು ತಿಜೋರಿಗಳಿಗೆ ಹಚ್ಚಿಸಿದರೆ ಆ ತಿಜೋರಿಗಳನ್ನು ಯಾರೂ ತೆಗೆಯಲು ಸಾಧ್ಯವಿಲ್ಲ ಯಾರಾದರೂ ತೆಗೆದರೆ ಅವರಿಗೆ

೧೦೦೦ ರೂ. ಬಹುಮಾನ ಕೊಡುವೆವು.

ನಮ್ಮ ಫಾಯರ ಪ್ರೂಫ್ ತಿಜೋರಿಗಳು ತುಂಬಾ ಖಾತ್ರಿಯಾದವುಗಳಿರುತ್ತವೆ.

ಈ ಬಗ್ಗೆ ಅನೇಕ ವಸ್ತು ಪ್ರದರ್ಶನಗಳಲ್ಲಿ ಒಳಗೆ ನೋಟು ವಗೈರೆ ಸಾಮಾನುಗಳನ್ನು ಇಟ್ಟು ಕೆಂಪಸಗೆ ಕಾಸಿದನಂತರ ಒಳಗಿಟ್ಟ ಸಾಮಾನುಗಳು ಸುಡದೆ ಇದ್ದದ್ದನ್ನು ಖಾತ್ರಿ ಮಾಡಿಕೊಟ್ಟಿದ್ದೇವೆ.

ಧಾರಣೆಗಳ ಬಗ್ಗೆ ನಮ್ಮ ಸಚಿತ್ರ ಕ್ಯಾಟಲಾಗುಗಳಿಗೆ ಬರೆಯಿರಿ.
ಅಥವಾ
ಸಮಕ್ಷಮ ಬಂದಲ್ಲ ತಿಳಿಯುವದು.

ತಮ್ಮ ಕೆಲಾಭಿಮಾನಿ,
ಸಿದ್ಧೇಶ್ವರ ಮತ್ತು ಕಂಪನಿ
ಟ್ರೇಝುರಿ ಮೇಕರ್ಸ
ಹುಬ್ಬಳ್ಳಿ.

ಫ್ಯಾಕ್ಟರಿ ಮತ್ತು ಹೆಡ್ ಆಫೀಸ್-
ಹುಬ್ಬಳ್ಳಿ.

ಬ್ರ್ಯಾಂಚ ಆಫೀಸುಗಳು-
ಹೈದರಾಬಾದ (ಡೆಕ್ಕನ) ಮತ್ತು ಕೊಲ್ಲಾಪುರ (ಲಕ್ಷ್ಮೀಪುರಿ)

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The Sharana Sandesh.

ನ್ಯಾಯನಿಷ್ಠುರಿ ದಾಕ್ಷಿಣ್ಯಪರನಲ್ಲ। ಲೋಕವಿರೋಧಿ ಶರಣನಾರಿಗೂ ಅಂಜುವವನಲ್ಲ।
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ । ವ. ೨೨೮ । ಮಹಾನುಭಾವ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವರ್ಗಣಿ:- ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೬. | ಆಲಮಟ್ಟಿ- ಸೋಮವಾರ ತಾರೀಖು ೨೯ ನೆಯ ಮಾರ್ಚ ೧೯೩೭. | ಸಂಚಿಕೆ ೩೦

ಗವ್ಹರ್ನರರಲ್ಲಿ ಸಂಭಾಷಣೆ.

ಅಭಿವಚನ ಬೇಕಿದ್ದರೆ ಕಾರ್ಯಕ್ರಮವೂ ಬೇಕು!

ಮುಂಬೈ, ಮದ್ರಾಸ, ಸಂಯುಕ್ತ ಪ್ರಾಂತ, ಬಿಹಾರ
ಪ್ರಾಂತಗಳ ಗವ್ಹರ್ನರರ ಸಂಗಡ ಆಯಾಯ ಪ್ರಾಂತಗಳ
ಅಸೆಂಬ್ಲಿ ಕಾಂಗ್ರೆಸ್ ಪ್ರಮುಖರು
ಸಂಭಾಷಿಸಿದರು.

ಇನ್ನೂ ಯಾವ ನಿರ್ಣಯವೂ ಆಗಿಲ್ಲ.

ತಾ. ೧ ನೆಯ ದಿನ ಜರುಗುವ ಹರತಾಳದಲ್ಲಿ
ಮುಸಲ್ಮಾನರು ಸೇರಬಾರದಾಗಿ ಬ್ಯಾ. ಜಿನ್ನಾರವರು ತಿಳಿಸಿದ್ದಾರೆ.
ಲೋಕಶಾಹಿ ಸ್ವರಾಜ್ಯ ಪಕ್ಷಕ್ಕೂ
ಹರತಾಳ ಒಪ್ಪಿಗೆಯಿಲ್ಲ.

SANGAM CLOTH STORES
Prop: M. S. Hundekar & Sons,
P.O: TERDAL - 587 315
Dt. Bijapur. (Karnataka)

ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧವಾದ
ರಾಷ್ಟ್ರೀಯ ಕಂಪನಿಯೆಂದರೆ
ಇದೊಂದೇ.

ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಸುರನ್ಸ ಕಂ. ಲಿ.
ಧಾರವಾಡ.

ಚೇರಮನ್	ವ್ಹಾಯಿಸ್ ಚೇರಮನ್
ದೇಶಭಕ್ತ ಶ್ರೀಯುತ ಎಸ್. ಕೆ. ಹೊಸಮನಿ	ಶ್ರೀಯುತ ವ್ಹಿ. ಬಿ. ಹಾಲಭಾವಿ
B A. LL B. M L A	B. A. LL. B. ರಿಟಾಯರ್ಡ
ಪ್ರೆಸಿಡೆಂಟ ಕೆ. ಪಿ. ಸಿ. ಸಿ.	ಫರ್ಸ್ಟ ಕ್ಲಾಸ್ ಸಬ್ ಜಜ್ಜ ಧಾರವಾಡ

ಭವಿಷ್ಯಕಾಲದ ಜೀವಿತದ ನಿರ್ವಾಹಕ್ಕೆ | ಈ ಕಂಪನಿಯನ್ನು ಕೇವಲ ರಾಷ್ಟ್ರೋನ್ನತಿಗಾಗಿ | ಕೊಂದರೆಯಿಲ್ಲದ ಒತ್ತಾಯದ ಉಳಿತಾಯ
ಸ್ಥಾಪಿಸಿರುವರು.

ರೂ. ೫೦೦ ರಿಂದ ರೂ. ೫೦೦೦ ಗಳ ವರೆಗೆ ಜೀವ ವಿಮಾ ಪಾಲಿಸಿಗಳು.

ಉದಾರ ಶರ್ತಿನ ಪಾಲಿಸಿಗಳು ! ಮಿತವ್ಯಯದ ಆಡಳಿತ ! ! ಸುಲಭವಾದ ಕಂತಗಳು ! ! !

ಈ ಕಂಪನಿಯವರು ಕಾರ್ಯ ಕುಶಲತೆಯಿಂದ ನಾನಾ ಎಂಬುವ ಕಂಪನಿಗಳಿಗೂ ಮುಂದೆ ಇದ್ದಾರೆ. ಸ್ಥಾಪಿಸಿದ ಎರಡೇ ವರ್ಷಗಳಲ್ಲಿ ಇಷ್ಟು ಪ್ರಗತಿಯನ್ನು ಮಾಡಿ ತೋರಿಸಲಿಕ್ಕೆ ಉಜ್ವಲ ದೇಶಭಕ್ತರೂ, ಸುಪ್ರಸಿದ್ಧರೂ, ಲೋಕಪ್ರಿಯರೂ, ವಿಮೆಯ ವ್ಯವಹಾರದಲ್ಲಿ ನುರಿತ ಪರಿಪಕ್ವ ಬುದ್ಧಿಯುಳ್ಳವರೂ ಇರುವ ಬೋರ್ಡಿನ ಡಾಯರೆಕ್ಟರರ ಆಡಳಿತೆಯೇ ಕಾರಣ. ಗೌರವದ ಕನ್ನಡಿಗ ವಿಮೇಚ್ಛುಗಳು ತಮ್ಮ ಹಿತವನ್ನೊಳಗೊಂಡ ಕರ್ನಾಟಕ ಮಾತೆಯ. ಈ ತರಹದ ಸೇವೆಗಾಗಿ ತಮ್ಮ ಬೆಂಬಲವನ್ನೀಯುವರೆಂದು ತುಂಬಾ ನಂಬಿರುವೆವು.

ಎಲ್ಲ ಕಡೆಯಲ್ಲಿಯೂ ಕುಶಲ ಏಜಂಟರು ಬೇಕು.

The Manager.

ಸುಸಮಯ ! ಸುಸಮಯ ! ಸುಸಮಯ !

ಶ್ರೀ ಅಕ್ಕಮಹಾದೇವಿ, ಶ್ರೀ ಪಂಚಾಚಾರ್ಯ, ಶ್ರೀ ಕಲ್ಯಾಣ ಬಸವೇಶ್ವರ, ಇವರುಗಳ ಜಯಂತಿಗಳು ಸಮೀಪಿಸುತ್ತಾ ಇವೆ ಜಯಂತಿಕಾಲದಲ್ಲಿ ಕೊಳ್ಳುವುದರಿಂದ ಜ್ಞಾಪಕಾರ್ಥವಾಗಿಯೂ ಮತ್ತು ಮನೆಗಳಲ್ಲಿಟ್ಟು ಪೂಜೆಮಾಡಲರ್ಹವಾಗಿರುತ್ತವೆ ಆದ್ದರಿಂದ ಜಯಂತಿಗಾಗಿ ದರಗಳನ್ನು ಕಮ್ಮಿ ಮಾಡಿರುತ್ತೇವೆ

೬×೧೦ ಸೈಜು ಸಿಂಹಾಸನದ ಮೇಲೆ ಕೂತಿರುವ ಬಸವೇಶ್ವರ,
,, ಕುದುರೆಯ ಮೇಲೆ ಕೂತಿರುವ ಬಸವೇಶ್ವರ.
,, ಅಕ್ಕಮಹಾದೇವಿ.
,, ಶರಭಲೀಲೆ. ೧೦೦ ಕ್ಕೆ ೨-೦-೦

ಇವುಗಳನ್ನು ಅನೇಕ ಬಣ್ಣಗಳಿಂದ ತಯಾರಿಸಿರುತ್ತದೆ.

ಪಂಚಾಚಾರ್ಯ ಲಿಂಗೋದ್ಭವ (ಒಂದೇ ಬಣ್ಣದವು)
ಜಗದ್ಗುರು ಬಾಳೆಹೊನ್ನೂರು ಸ್ವಾಮಿಗಳು. ,,
ಬೇಡರ ಕಣ್ಣಪ್ಪ. ,,
೧೦೦ ಕ್ಕೆ ೨-೦-೦

ಎಗ್. ಎಂ. ಯಜಮಾನ್ ಅಂಡ್ ಸನ್.
ಚಿಕ್ಕಪೇಟೆ ಬೆಂಗಳೂರು ಸಿಟಿ.

ಸ್ಥಳೀಯ ಸಂಸ್ಥೆಗಳ ಪತ್ರಿಕೆ.

ಪ್ರತಿ ತಿಂಗಳ ತಾ|| ೧ ಮತ್ತು ೧೫ ರಲ್ಲಿ ಪ್ರಕಟವಾಗುವ ಪಕ್ಷಪತ್ರಿಕೆ.

ಜಿಲ್ಲಾ ಬೋರ್ಡ್, ಪೌರಸಭೆ, ಗ್ರಾಮಪಂಚಾಯತಿ ಮುಂತಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಇತಿಹಾಸ, ಮೂಲತತ್ವ, ಆಡಳಿತ ಮುಂತಾದ ವಿಚಾರಗಳಲ್ಲಿ ನುರಿತ ಲೇಖಕರಿಂದ ಬರೆಯಲ್ಪಟ್ಟ ಬೋಧಪ್ರದ ಲೇಖಗಳನ್ನೂ, ಆ ಸಂಸ್ಥೆಗಳ ಕಾರ್ಯಕ್ರಮ ಮತ್ತು ಘಟನೆಗೆ ಸಂಬಂಧಪಟ್ಟ ವಿಶೇಷ ಸಮಾಚಾರಗಳನ್ನೂ, ಸ್ಥಾನಿಕ ಸ್ವರಾಜ್ಯ ಸಂಬಂಧವಾದ ದೇಶವಿದೇಶ ವರ್ತಮಾನಗಳನ್ನೂ ಪ್ರಕಟಿಸುವ ಪತ್ರಿಕೆ.

ಇತರ ಸಂಗತಿಗಳೂ ವಿಶೇಷ ವರ್ತಮಾನಗಳೂ ಸಹ ಪ್ರಕಟವಾಗುವವು.

ಇಡೀ ಕನ್ನಡ ನಾಡಿನಲ್ಲಿ ಇಂತಹ ಪತ್ರಿಕೆಯು ಇದೊಂದೇ !

ವಾರ್ಷಿಕಚಂದಾ:— ೨ ರೂಪಾಯಿ; ಸಂಸ್ಥೆಗಳಿಗೆ ೫ ರೂಪಾಯಿ.
ವಿಳಾಸ:— ಟಿ. ಯ. ಚನ್ನಪ್ಪ, ವ್ಯವಸ್ಥಾಪಕ ಸ್ಥಳೀಯ ಸಂಸ್ಥೆಗಳ ಪತ್ರಿಕೆ ಗಾಂಧಿ ನಗರ, ಬೆಂಗಳೂರು ಸಿಟಿ.

ಓಂ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೬. | ಆಲಮಟ್ಟಿ- ಸೋಮವಾರ ತಾರೀಖು ೨೯ ನೆಯ ಮಾರ್ಚ ೧೯೩೭. | ಸಂಚಿಕೆ ೩೦.

ಮಹತ್ವದ ಸುದ್ದಿಗಳು.

—ಪಂಡಿತ ಜವಾಹರಲಾಲರು ಪಂಜಾಬ ಪ್ರಾಂತದ ಕಾಂಗ್ರೆಸ್ ಕೆಲಸಗಾರರು ತೃಪ್ತಿಕರವಾಗಿ ಕೆಲಸ ಮಾಡಿಲ್ಲವೆಂದು ಆಕ್ಷೇಪಿಸಿದ್ದರಿಂದ, ಅದರ ನಿಷೇಧಾರ್ಥವಾಗಿ ಆ ಪ್ರಾಂತದ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಡಾ. ಸತ್ಯಪಾಲರು ಕಾಂಗ್ರೆಸ್ಸಿನಿಂದ ಹೊರಗೆ ಬರುವರಂತೆ.

—ವಿಂಡಸರ್-ಸಿಂಪ್ಸನ್‌ರ ವಿವಾಹ ಬರುವ ಮೇ ತಿಂಗಳ ೩ ನೆಯ ತಾರೀಖಿಗೆ ಜರುಗುವುದೆಂದೂ ಅದೇ ದಿನ ಮುಖ್ಯ ಮಂತ್ರಿಗಳಾದ ಬಾಲ್ಡವಿನ್‌ರು ಮಂತ್ರಿಪಟ್ಟದಿಂದ ನಿವೃತ್ತರಾಗುವರೆಂದೂ ಸುದ್ದಿ.

—ಬ್ರಿಟಿಶ್ ಮುಖ್ಯ ಮಂತ್ರಿಗಳಿಗೆ ವರುಷಕ್ಕೆ ೧೦ ಸಾವಿರ ಪೌಂಡು ಇತರ ಮಂತ್ರಿಗಳಿಗೆ ೫ ಸಾವಿರ ಪೌಂಡು ವೇತನ ದೊರೆಯಬೇಕೆಂದು ಮುಂದಿನ ವಾರ ಪಾರ್ಲಮೆಂಟಿನಲ್ಲಿ ಒಂದು ಗೊತ್ತುವಳಿ ಬರುವುದಿದೆ.

—ಸಕ್ಕರಿ ಉದ್ಯೋಗಕ್ಕೆ ೧೯೪೬ ನೆಯ ಇಸವಿ ವರೆಗೆ ಯಾವ ವಿಧವಾದ ಸಂರಕ್ಷಣೆಯನ್ನು ಕೊಡಬೇಕೆಂಬ ವಿಚಾರದಲ್ಲಿ ಪರ್ಯಾಲೋಚಿಸಲು ಸರಕಾರದವರು ಒಂದು ಸಮಿತಿಯನ್ನು ಏರ್ಪಡಿಸಿದ್ದಾರೆ.

—ಶ್ರೀ. ನರಿಮನ್ನರು ಕಾಂಗ್ರೆಸ್ ಪ್ರಮುಖರಲ್ಲಿ ಬಿಕಮತ್ಯವಿರಲು ಅನುಸರಿಸಿದ ಅಭಿನಂದನೀಯವಾದ ಧೋರಣವನ್ನು ನೋಡಿ ಅವರ ಸನ್ಮಾನಾರ್ಥವಾಗಿ ಮುಂಬೈ ಕಾರ್ಪೋರೇಶನ್ನಿನ ಸಭೆ ನಾಳೆ ಕೂಡುವುದಿದೆ.

—ಸಿಂಧ ಪ್ರಾಂತದಲ್ಲಿ ಒಟ್ಟು ಮೂರು ಮಂತ್ರಿಗಳು. ಸರ್. ಹಿದಾಯತುಲ್ಲಾ ಇವರು ಮುಖ್ಯ ಮಂತ್ರಿಗಳು. ಮಿ. ಮೀರಬಂದೆ ಅಲ್ಲಿಖಾನರು ಎರಡನೆ ಮಂತ್ರಿಗಳು. ಇವರು ೩೫ ವರುಷದವರಿದ್ದಾರೆ. ಶ್ರೀ. ಮುಖಿ ಗೋವಿಂದರಾಮ ಇವರು ಮೂರನೆಯ ಮಂತ್ರಿಗಳು. ಇವರು ೪೧ ವರುಷ ವಯಸ್ಸಿನವರು. ಇವರು ಸಿಂಧ ಪ್ರಾಂತದ ಹಿಂದು ಮಹಾ ಸಭೆಯ ಅಧ್ಯಕ್ಷರಾಗಿದ್ದರು.

—ಬಂಗಾಲ ಪ್ರಾಂತದಲ್ಲಿ ಒಟ್ಟು ೧೧ ಮಂತ್ರಿಗಳು ಮಿ. ಫಜಲುಲ್ ಹಕ್ಕ ಇವರೇ ಮುಖ್ಯ ಮಂತ್ರಿಗಳಾಗುವರು. ಒಟ್ಟು ೬ ಜನ ಮುಸಲ್ಮಾನರು ೫ ಜನ ಹಿಂದುಗಳು ಮಂತ್ರಿಗಳಿರುವರು. ಹಿಂದುಗಳಲ್ಲಿ ಇಬ್ಬರು ಆದಿಹಿಂದುಗಳು. ಹೀಗೆ ಆದಿ ಹಿಂದುಗಳು ಮಂತ್ರಿಗಳಾದುದು ಈ ವರೆಗಿನ ಆ ಜನಾಂಗದ ಚರಿತ್ರೆಯಲ್ಲಿಯೇ ಹೊಸದು.

—ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ಸಿಗೆ ವಿರೋಧವಾದ ಒಂದು ಪಕ್ಷವು ಅಸೆಂಬ್ಲಿಯಲ್ಲಿ ನಾ. ಶ್ರೀವಾಸ್ತವ ಇವರ ಅಧ್ಯಕ್ಷತೆಯಲ್ಲಿ ಏರ್ಪಡುವುದೆಂದೂ ಅದಕ್ಕೆ ಮುಸಲೀಮ್ ಲೀಗ್ ಸಹಾಯವಾಗುವುದೆಂದೂ ಸುದ್ದಿ.

—ಮುಂಬೈ ಪ್ರಾಂತದ ಅಸೆಂಬ್ಲಿಯಲ್ಲಿ ಆರು ಜನ ಮಂತ್ರಿಗಳಿರುವರೆಂದೂ ಕರ್ನಾಟಕದಿಂದ ಶ್ರೀ. ಲಕ್ಕಪ್ಪಯವರನ್ನು ತೆಗೆದುಕೊಳ್ಳುವರೆಂದೂ ಸುದ್ದಿ.

—ಕಾಂಗ್ರೆಸ್ಸಿನವರು ಕೇಳುವಂತೆ ಗವರ್ನರರು ಅಭಿವಚನ ಕೊಡುವುದು ಶಕ್ಯವಿಲ್ಲವೆಂದು ಲಂಡನ್ ಟೈಮ್ಸ ಪತ್ರಿಕೆ ತಿಳಿಸುತ್ತದೆ.

—ಈ ದಿವಸ (ತಾ. ೨೯) ಶ್ರೀ. ಸುಭಾಷಚಂದ್ರ ಬೋಸರ ಸನ್ಮಾನಾರ್ಥವಾಗಿ ಬಂಗಾಲ ಪ್ರಾಂತದಲ್ಲಿ ಅವರ ಬಂಧವಿಮೋಚನೆಯ ಆನಂದ ಪ್ರದರ್ಶನ ಸಮಾರಂಭ ಜರುಗುವುದು. ಬಂಗಾಲ ಪ್ರಾಂತದ ಪರವಾಗಿ ಶ್ರೀ. ಸುಭಾಷಚಂದ್ರ ಬೋಸರಿಗೆ ಮಾನಪತ್ರವನ್ನು ಸಮರ್ಪಿಸುವ ಸಮಾರಂಭ ಜರುಗುವುದು.

—ಆರನೆಯ ಜಾರ್ಜ ಪ್ರಭುಗಳ ರಾಜ್ಯಾರೋಹಣ ಸಮಾರಂಭದ ದಿವಸ ಹಿಂದುಸ್ಥಾನದ ಎಲ್ಲ ರಾಜಕೀಯ ಕೈದಿಗಳನ್ನು ಬಿಟ್ಟುಬಿಡಬೇಕೆಂದು ಲಂಡನ್ನಿನ " ನೆಶನಲ್ ಕೌನ್ಸಿಲ್ ಆಫ್ ಸಿವ್ಹಿಲ್ ಲಿಬರ್ಟಿ " ಸಂಸ್ಥೆಯ ೧೨ ಸಭಾಸದರು ಬ್ರಿಟಿಶ್ ಮುಖ್ಯ ಮಂತ್ರಿಗಳಿಗೂ ಭಾರತ ಮಂತ್ರಿಗಳಿಗೂ ಪ್ರಾರ್ಥಿಸಿಕೊಂಡಿದ್ದಾರೆ.

ಅಕ್ಕನ ಹುಣ್ಣಿಮೆ ಬಂತು.

ಚೈತ್ರ ಶುದ್ಧ ಹುಣ್ಣಿಮೆ ಅಕ್ಕಮಹಾದೇವಿಯ ಹುಣ್ಣಿಮೆ. ಅದು ಬರುವ ಎಪ್ರೆಲ್ ತಿಂಗಳ ೨೫ ನೆಯ ತಾರೀಖಿಗೆ ಇದೆ. ನಮ್ಮ ಅಕ್ಕ ತಂಗಿಯರು ಈಗಲೇ ಹುಣ್ಣಿಮೆಯ ಕಾರ್ಯಕಲಾಪಗಳ ಸಿದ್ಧತೆ ಮಾಡಿಕೊಳ್ಳಲು ಪ್ರಾರಂಭಿಸಲಿ.

ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧವಾದ

ರಾಷ್ಟ್ರೀಯ ಕಂಪನಿಯೆಂದರೆ

ಇದೊಂದೇ.

ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಸುರೆನ್ಸ ಕಂ! ಲಿ.

ಧಾರವಾಡ.

ಚೇರಮನ್	ವ್ಹಾಯಿಸ್ ಚೇರಮನ್
ದೇಶಭಕ್ತ ಶ್ರೀಯುತ ಎಸ್. ಕೆ. ಹೊಸಮನಿ	ಶ್ರೀಯುತ ವ್ಹಿ. ಬಿ. ಹಾಲಭಾವಿ
B A LL B M L A.	B. A. LL. B. ರಿಟಯರ್ಡ
ಪ್ರೆಸಿಡೆಂಟ ಕೆ. ಪಿ ಸಿ. ಸಿ.	ಫರ್ಸ್ಟ ಕ್ಲಾಸ್ ಸಬ್ ಜಜ್ಜ ಧಾರವಾಡ

ಭವಿಷ್ಯತ್ಕಾಲದ ಜೀವಿತದ ನಿರ್ವಾಹಕ್ಕೆ | ಈ ಕಂಪನಿಯನ್ನು ಕೇವಲ ರಾಷ್ಟ್ರೋನ್ನತಿಗಾಗಿ ಸ್ಥಾಪಿಸಿರುವರು. | ತೊಂದರೆಯಿಲ್ಲದ ಒತ್ತಾಯದ ಉಳಿತಾಯ

ರೂ. ೫೦೦ ರಿಂದ ರೂ. ೫೦೦೦ ಗಳ ವರೆಗೆ ಜೀವ ವಿಮಾ ಪಾಲಿಸಿಗಳು.

ಉದಾರ ಶರ್ತಿನ ಪಾಲಿಸಿಗಳು! ಮಿತವ್ಯಯದ ಆಡಳಿತ!! ಸುಲಭವಾದ ಕಂತಗಳು!!!

ಈ ಕಂಪನಿಯವರು ಕಾರ್ಯ ಕುಶಲತೆಯಿಂದ ನಾನಾ ಎಂಬುವ ಕಂಪನಿಗಳಿಗೂ ಮುಂದೆ ಇದ್ದಾರೆ. ಸ್ಥಾಪಿಸಿದ ಎರಡೇ ವರ್ಷಗಳಲ್ಲಿ ಇಷ್ಟು ಪ್ರಗತಿಯನ್ನು ಮಾಡಿ ತೋರಿಸಲಿಕ್ಕೆ ಉಜ್ವಲ ದೇಶಭಕ್ತರೂ, ಸುಪ್ರಸಿದ್ಧರೂ, ಲೋಕಪ್ರಿಯರೂ, ವಿಮೆಯ ವ್ಯವಹಾರದಲ್ಲಿ ನುರಿತ ಪರಿಪಕ್ವ ಬುದ್ಧಿಯುಳ್ಳವರೂ ಇರುವ ಬೋರ್ಡಿನ ಡಾಯರೆಕ್ಟರರ ಆಡಳಿತೆಯೇ ಕಾರಣ. ಗೌರವದ ಕನ್ನಡಿಗ ವಿಮೇಚ್ಛುಗಳು ತಮ್ಮ ಹಿತವನ್ನೊಳಗೊಂಡ ಕರ್ನಾಟಕ ಮಾತೆಯ. ಈ ತರಹದ ಸೇವೆಗಾಗಿ ತಮ್ಮ ಬೆಂಬಲವನ್ನೀಯುವರೆಂದು ತುಂಬಾ ನಂಬಿರುವೆವು.

ಎಲ್ಲ ಕಡೆಯಲ್ಲಿಯೂ ಕುಶಲ ಏಜಂಟರು ಬೇಕು.

The Manager.

ಸುಸಮಯ! ಸುಸಮಯ! ಸುಸಮಯ!

ಶ್ರೀ ಅಕ್ಕಮಹಾದೇವಿ, ಶ್ರೀ ಪಂಚಾಚಾರ್ಯ, ಶ್ರೀ ಕಲ್ಯಾಣ ಬಸವೇಶ್ವರ, ಇವರುಗಳ ಜಯಂತಿಗಳು ಸಮೀಪಿಸುತ್ತಾ ಇವೆ ಜಯಂತಿಕಾಲದಲ್ಲಿ ಕೊಳ್ಳುವುದರಿಂದ ಜ್ಞಾಪಕಾರ್ಥವಾಗಿಯೂ ಮತ್ತು ಮನೆಗಳಲ್ಲಿಟ್ಟು ಪೂಜೆಮಾಡಲರ್ಹವಾಗಿರುತ್ತವೆ ಆದ್ದರಿಂದ ಜಯಂತಿಗಾಗಿ ದರಗಳನ್ನು ಕಮ್ಮಿ ಮಾಡಿರುತ್ತೇವೆ

೮×೧೦ ಸೈಜು ಸಿಂಹಾಸನದ ಮೇಲೆ ಕೂತಿರುವ ಬಸವೇಶ್ವರ.
,, ಕುದುರೆಯ ಮೇಲೆ ಕೂತಿರುವ ಬಸವೇಶ್ವರ.
,, ಅಕ್ಕಮಹಾದೇವಿ.
,, ಶರಭಲೀಲೆ. ೧೦೦ ಕ್ಕೆ ೨-೦-೦,

ಇವುಗಳನ್ನು ಅನೇಕ ಬಣ್ಣಗಳಿಂದ ತಯಾರಿಸಿರುತ್ತದೆ.

ಪಂಚಾಚಾರ್ಯ ಲಿಂಗೋದ್ಭವ. (ಒಂದೇ ಬಣ್ಣದವು)
ಜಗದ್ಗುರು ಬಾಳೆಹೊನ್ನೂರು ಸ್ವಾಮಿಗಳು. ,,
ಬೇಡರ ಕಣ್ಣಪ್ಪ. ,,
೧೦೦ ಕ್ಕೆ ೨-೦-೦

ಎಸ್. ಎಂ. ಯಜಮಾನ್ ಅಂಡ್ ಸನ್.
ಚಿಕ್ಕಪೇಟೆ ಬೆಂಗಳೂರು ಸಿಟಿ.

ಸ್ಥಳೀಯ ಸಂಸ್ಥೆಗಳ ಪತ್ರಿಕೆ.

ಪ್ರತಿ ತಿಂಗಳ ತಾ|| ೧ ಮತ್ತು ೧೫ ರಲ್ಲಿ ಪ್ರಕಟವಾಗುವ ಪಕ್ಷಪತ್ರಿಕೆ.

ಜಿಲ್ಲಾ ಬೋರ್ಡ್, ಪೌರಸಭೆ, ಗ್ರಾಮಪಂಚಾಯತಿ ಮುಂತಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಇತಿಹಾಸ, ಮೂಲತತ್ವ, ಆಡಳಿತ ಮುಂತಾದ ವಿಚಾರಗಳಲ್ಲಿ ನುರಿತ ಲೇಖಕರಿಂದ ಬರೆಯಲ್ಪಟ್ಟ ಬೋಧಪ್ರದ ಲೇಖನಗಳನ್ನೂ, ಆ ಸಂಸ್ಥೆಗಳ ಕಾರ್ಯಕ್ರಮ ಮತ್ತು ಘಟನೆಗೆ ಸಂಬಂಧಪಟ್ಟ ವಿಶೇಷ ಸಮಾಚಾರಗಳನ್ನೂ, ಸ್ಥಾನಿಕ ಸ್ವರಾಜ್ಯ ಸಂಬಂಧವಾದ ದೇಶವಿದೇಶ ವರ್ತಮಾನಗಳನ್ನೂ ಪ್ರಕಟಿಸುವ ಪತ್ರಿಕೆ.

ಇತರ ಸಂಗತಿಗಳೂ ವಿಶೇಷ ವರ್ತಮಾನಗಳೂ ಸಹ ಪ್ರಕಟವಾಗುವವು.

ಇಡೀ ಕನ್ನಡ ನಾಡಿನಲ್ಲಿ ಇಂತಹ ಪತ್ರಿಕೆಯು ಇದೊಂದೇ!

ವಾರ್ಷಿಕಚಂದಾ:— ೨ ರೂಪಾಯಿ; ಸಂಸ್ಥೆಗಳಿಗೆ ೫ ರೂಪಾಯಿ.
ವಿಳಾಸ:— ಟಿ. ಆರ್. ಚನ್ನಪ್ಪ, ವ್ಯವಸ್ಥಾಪಕ ಸ್ಥಳೀಯ ಸಂಸ್ಥೆಗಳ ಪತ್ರಿಕೆ ಗಾಂಧಿ ನಗರ, ಬೆಂಗಳೂರು ಸಿಟಿ.

ಓಂ

ಶರಣ ಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೬. | ಆಲಮಟ್ಟಿ- ಸೋಮವಾರ ತಾರೀಖು ೨೯ ನೆಯ ಮಾರ್ಚ ೧೯೩೭. | ಸಂಚಿಕೆ ೩೦.

ಮಹತ್ವದ ಸುದ್ದಿಗಳು.

—ಪಂಡಿತ ಜವಾಹರಲಾಲರು ಪಂಜಾಬ ಪ್ರಾಂತದ ಕಾಂಗ್ರೆಸ್ ಕೆಲಸಗಾರರು ತೃಪ್ತಿಕರವಾಗಿ ಕೆಲಸ ಮಾಡಿಲ್ಲವೆಂದು ಆಕ್ಷೇಪಿಸಿದ್ದರಿಂದ, ಅದರ ನಿಷೇಧಾರ್ಥವಾಗಿ ಆ ಪ್ರಾಂತದ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಡಾ. ಸತ್ಯಪಾಲರು ಕಾಂಗ್ರೆಸ್ಸಿನಿಂದ ಹೊರಗೆ ಬರುವರಂತೆ.

—ವಿಂಡಸರ್-ಸಿಂಪ್ಸನ್‌ರ ವಿವಾಹ ಬರುವ ಮೇ ತಿಂಗಳ ೨೨ ನೆಯ ತಾರೀಖಿಗೆ ಜರುಗುವುದೆಂದೂ ಅದೇ ದಿನ ಮುಖ್ಯ ಮಂತ್ರಿಗಳಾದ ಬಾಲ್ಡವಿನ್‌ರು ಮಂತ್ರಿಪಟ್ಟದಿಂದ ನಿವೃತ್ತರಾಗುವರೆಂದೂ ಸುದ್ದಿ.

—ಬ್ರಿಟಿಶ್ ಮುಖ್ಯ ಮಂತ್ರಿಗಳಿಗೆ ವರುಷಕ್ಕೆ ೧೦ ಸಾವಿರ ಪೌಂಡು ಇತರ ಮಂತ್ರಿಗಳಿಗೆ ೫ ಸಾವಿರ ಪೌಂಡು ವೇತನ ದೊರೆಯಬೇಕೆಂದು ಮುಂದಿನ ವಾರ ಪಾರ್ಲಮೆಂಟಿನಲ್ಲಿ ಒಂದು ಗೊತ್ತುವಳಿ ಬರುವುದಿದೆ.

—ಸರ್ಕಾರಿ ಉದ್ಯೋಗಕ್ಕೆ ೧೯೪೬ ನೆಯ ಇಸವಿ ವರೆಗೆ ಯಾವ ವಿಧವಾದ ಸಂರಕ್ಷಣೆಯನ್ನು ಕೊಡಬೇಕೆಂಬ ವಿಚಾರದಲ್ಲಿ ಪರ್ಯಾಲೋಚಿಸಲು ಸರಕಾರದವರು ಒಂದು ಸಮಿತಿಯನ್ನು ಏರ್ಪಡಿಸಿದ್ದಾರೆ.

—ಶ್ರೀ. ನರಿಮನ್ನರು ಕಾಂಗ್ರೆಸ್ ಪ್ರಮುಖರಲ್ಲಿ ಬಿಕಮತ್ಯ ವಿರಲು ಅನುಸರಿಸಿದ ಅಭಿನಂದನೀಯವಾದ ಧೋರಣವನ್ನು ನೋಡಿ ಅವರ ಸನ್ಮಾನಾರ್ಥವಾಗಿ ಮುಂಬೈ ಕಾರ್ಪೋರೇಶನ್ನಿನ ಸಭೆ ನಾಳೆ ಕೂಡುವುದಿದೆ.

—ಸಿಂಧ ಪ್ರಾಂತದಲ್ಲಿ ಒಟ್ಟು ಮೂರು ಮಂತ್ರಿಗಳು. ಸರ್. ಹಿದಾಯತುಲ್ಲಾ ಇವರು ಮುಖ್ಯ ಮಂತ್ರಿಗಳು. ಮಿ· ಮೀರಬಂದೆ ಅಲ್ಲಿಖಾನರು ಎರಡನೆ ಮಂತ್ರಿಗಳು. ಇವರು ೩೫ ವರುಷದವರಿದ್ದಾರೆ. ಶ್ರೀ. ಮುಖಿ ಗೋವಿಂದರಾಮ ಇವರು ಮೂರನೆಯ ಮಂತ್ರಿಗಳು, ಇವರು ೬೧ ವರುಷ ವಯಸ್ಸಿನವರು. ಇವರು ಸಿಂಧ ಪ್ರಾಂತದ ಹಿಂದು ಮಹಾ ಸಭೆಯ ಅಧ್ಯಕ್ಷರಾಗಿದ್ದರು.

—ಬಂಗಾಲ ಪ್ರಾಂತದಲ್ಲಿ ಒಟ್ಟು ೧೧ ಮಂತ್ರಿಗಳು· ಮಿ. ಫಜಲುಲ್ ಹಕ್ಕ ಇವರೇ ಮುಖ್ಯ ಮಂತ್ರಿಗಳಾಗುವರು. ಒಟ್ಟು ೬ ಜನ ಮುಸಲ್ಮಾನರು ೫ ಜನ ಹಿಂದುಗಳು ಮಂತ್ರಿಗಳಿರುವರು. ಹಿಂದುಗಳಲ್ಲಿ ಇಬ್ಬರು ಆದಿಹಿಂದುಗಳು. ಹೀಗೆ ಆದಿ ಹಿಂದುಗಳು ಮಂತ್ರಿಗಳಾದುದು ಈ ವರೆಗಿನ ಆ ಜನಾಂಗದ ಚರಿತ್ರೆಯಲ್ಲಿಯೇ ಹೊಸದು.

—ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ಸಿಗೆ ವಿರೋಧವಾದ ಒಂದು ಪಕ್ಷವು ಅಸೆಂಬ್ಲಿಯಲ್ಲಿ ನಾ. ಶ್ರಿವಾಸ್ತವ ಇವರ ಅಧ್ಯಕ್ಷತೆಯಲ್ಲಿ ಏರ್ಪಡುವುದೆಂದೂ ಅದಕ್ಕೆ ಮುಸಲೀಮ್ ಲೀಗ್ ಸಹಾಯವಾಗುವುದೆಂದೂ ಸುದ್ದಿ.

—ಮುಂಬೈ ಪ್ರಾಂತದ ಅಸೆಂಬ್ಲಿಯಲ್ಲಿ ಆರು ಜನ ಮಂತ್ರಿಗಳಿರುವರೆಂದೂ ಕರ್ನಾಟಕದಿಂದ ಶ್ರೀ. ಲಕ್ಮಯಮರಸ್ಸು ತೆಗೆದುಕೊಳ್ಳುವರೆಂದೂ ಸುದ್ದಿ.

—ಕಾಂಗ್ರೆಸ್ಸಿನವರು ಕೇಳುವಂತೆ ಗವ್ಹರ್ನರರು ಅಭಿವಚನ ಕೊಡುವುದು ಶಕ್ಯವಿಲ್ಲವೆಂದು ಲಂಡನ್ ಟೈಮ್ಸ ಪತ್ರಿಕೆ ತಿಳಿಸುತ್ತದೆ.

—ಈ ದಿವಸ (ತಾ. ೨೯) ಶ್ರೀ. ಸುಭಾಷಚಂದ್ರ ಬೋಸರ ಸನ್ಮಾನಾರ್ಥವಾಗಿ ಬಂಗಾಲ ಪ್ರಾಂತದಲ್ಲಿ ಅವರ ಬಂಧವಿಮೋಚನೆಯ ಆನಂದ ಪ್ರದರ್ಶನ ಸಮಾರಂಭ ಜರುಗುವುದು. ಬಂಗಾಲ ಪ್ರಾಂತದ ಪರವಾಗಿ ಶ್ರೀ. ಸುಭಾಷಚಂದ್ರ ಬೋಸರಿಗೆ ಮಾನಪತ್ರವನ್ನು ಸಮರ್ಪಿಸುವ ಸಮಾರಂಭ ಜರುಗುವುದು·

—ಆರನೆಯ ಜಾರ್ಜ ಪ್ರಭುಗಳ ರಾಜ್ಯಾರೋಹಣ ಸಮಾರಂಭದ ದಿವಸ ಹಿಂದುಸ್ಥಾನದ ಎಲ್ಲ ರಾಜಕೀಯ ಕೈದಿಗಳನ್ನು ಬಿಟ್ಟುಬಿಡಬೇಕೆಂದು ಲಂಡನ್ನಿನ " ನೆಶನಲ್ ಕೌನ್ಸಿಲ್ ಅಫ್ ಸಿವ್ಹಿಲ್ ಲಿಬರ್ಟಿ " ಸಂಸ್ಥೆಯ ೧೨ ಸಭಾಸದರು ಬ್ರಿಟಿಶ್ ಮುಖ್ಯ ಮಂತ್ರಿಗಳಿಗೂ ಭಾರತ ಮಂತ್ರಿಗಳಿಗೂ ಪ್ರಾರ್ಥಿಸಿಕೊಂಡಿದ್ದಾರೆ.

ಅಕ್ಕನ ಹುಣ್ಣಿಮೆ ಬಂತು.

ಚೈತ್ರ ಶುದ್ಧ ಹುಣ್ಣಿಮೆ ಅಕ್ಕಮಹಾದೇವಿಯ ಹುಣ್ಣಿಮೆ. ಅದು ಬರುವ ಎಪ್ರಿಲ್ ತಿಂಗಳ ೨೫ ನೆಯ ತಾರೀಖಿಗೆ ಇದೆ. ನಮ್ಮ ಅಕ್ಕ ತಂಗಿಯರು ಈಗಲೇ ಹುಣ್ಣಿಮೆಯ ಕಾರ್ಯಕಲಾಪಗಳ ಸಿದ್ಧತೆ ಮಾಡಿಕೊಳ್ಳಲು ಪ್ರಾರಂಭಿಸಲಿ.

ವೀರಶೈವವೂ ಶ್ರೀಕರ ಭಾಷ್ಯವೂ.

(ಲೇ:—ಶ್ರೀಯುತ ಸಿದ್ಧರಾಮಪ್ಪ ಪಾವಟೆ ಬಿ. ಎ. ಎಲ್‌ಎಲ್. ಬಿ ಹುಬ್ಬಳ್ಳಿ.)

[ವ್ಯಾಖ್ಯಾತೃತ ಬ್ರಹ್ಮಸೂತ್ರಕ್ಕೆ ಶ್ರೀಪತಿ ಪಂಡಿತರು ೧೧ನೆಯ ಶತಮಾನದಲ್ಲಿ ವೀರಶೈವ ಪರವಾಗಿ ಭಾಷ್ಯವನ್ನು ಬರೆದಿದ್ದಾರೆಂತಲೂ ಅದಕ್ಕೆ ಶ್ರೀಕರ ಭಾಷ್ಯವೆಂದು ಹೇಳುತ್ತಿದ್ದಾರೆಂತಲೂ, ಸರ್. ಕೆ. ಪಿ ಪುಟ್ಟಣ್ಣಶೆಟ್ಟರ ವಿಶೇಷ ಪ್ರಯತ್ನದಿಂದ ಅದು ಅಚ್ಚಾಗಿ ಈಗ ಬೆಳಕಿಗೆ ಬಂದಿದೆಯೆಂತಲೂ ಈ ಮುಂಚೆ ನಾವು ತಾರೀಖು ೧೧-೧-೩೩ ನೆಯ ಸಂಚಿಕೆಯಲ್ಲಿ ತಿಳಿಸಿದ್ದೇವಷ್ಟೆ. ಈ ಗ್ರಂಥದ ವಿಚಾರವಾಗಿ ಶ್ರೀಮಾನ್ ಪಾವಟೆ ಸಿದ್ಧರಾಮಪ್ಪನವರು ಒಂದು ವಿಮರ್ಶಾತ್ಮಕವಾದ ಅತ್ಯಂತ ಮಹತ್ವದ ಲೇಖನವನ್ನು ಬರೆದಿದ್ದಾರೆ. ಅದು ಇದೇ ತಿಂಗಳ "ಶಿವಾನುಭವ" ಪತ್ರಿಕೆಯಲ್ಲಿ ಪ್ರಕಟವಾಗಿದೆ ಅದರ ಮುಖ್ಯಾಂಶವನ್ನು ಕೆಳಗೆ ಕೊಟ್ಟಿದೆ—

—ಸಂಪಾದಕ.]

"ಈ ಗ್ರಂಥವನ್ನು ಸರ್ ಕೆ. ಪಿ. ಪುಟ್ಟಣಶೆಟ್ಟರವರ ಅಧ್ಯಕ್ಷ್ಯಾನದಲ್ಲಿ ಶ್ರೀಯುತ ಹಯವದನರಾಯರು ಪರಿಶೋಧಿಸಿ ಅಚ್ಚುಗೊಳಿಸಿ ಹೊರಪಡಿಸಿರುವರು. ಹಳೆಯ ಗ್ರಂಥಗಳನ್ನು ನುಸಿಗಳ ಬಾಯಿಗೀಡಾಗದಂತೆ ಹೊರ್ರದೆಗೆದು ಓದುಗರ ಮುಂದಿಡುವುದು ಹೊಗಳತಕ್ಕದ್ದು ಹೌದು. ಗ್ರಂಥವು ಅಲ್ಲಲ್ಲಿಯ ಪ್ರಮಾಣಗಳಿಂದ ಒಪ್ಪುತ್ತಿದೆ, ಇದೆಲ್ಲ ಸರಿಯೇ. ಅದು ತನ್ನ ಕರ್ತೃವಿನ ಪಾಂಡಿತ್ಯವನ್ನೂ ವಿಪುಲವಾದ ಅಧ್ಯಯನವನ್ನೂ ತೋರಿಸುವುದರಲ್ಲಿ ಮತಭೇದಕ್ಕೆ ಇಂಬಿಲ್ಲ. ಆದರೆ ಈ ಹಿರಿಯ ಗ್ರಂಥವು ವ್ಯಾಸ ಸೂತ್ರಗಳ ಅಭಿಪ್ರಾಯವನ್ನು ಅನುಸರಿಸಿದೆಯೋ? ಇದರಲ್ಲಿ ಅಷ್ಟಾವರಣ ಪಂಚಾಚಾರ ಪರವಾದ ವೀರಶೈವ ಧರ್ಮದ ತಿರುಳು ಅಡಗಿದೆಯೋ? ಎಂಬ ಮಾತಿಗೆ ಉತ್ತರವು ಇಲ್ಲವೆಂದು ತೋರುತ್ತಿದೆ.

ಇಲ್ಲಿ ಕೆಲವರು ಚಕಿತರಾಗಬಹುದು. ನಮ್ಮ ವೀರಶೈವ ಮತಕ್ಕೆ ಒಂದು ಭಾಷ್ಯ ಗ್ರಂಥವು ದೊರೆತಿರಲು ಅದನ್ನು ಹೀಗೆ ಟೀಕಿಸುವದು ಎಂತಹ ಕೆಡಗೇಡಿತನವು? ದ್ವೈತಾದ್ವೈತ ವಿಶಿಷ್ಟಾದ್ವೈತ ಮತಗಳು ಒಂದೊಂದು ಭಾಷ್ಯಗಳಿಂದ ಒಪ್ಪುತ್ತಿರಲು ನಮ್ಮೀ ವೀರಶೈವಕ್ಕೆ ಭಾಷ್ಯವಿಲ್ಲದಿರುವುದ. ಎಸ್ಟೊಂದು ಕನಿಕರಕ್ಕೀಡು? ಭಾಷ್ಯವಿಲ್ಲದ ಮತವನ್ನು ಬಲ್ಲವರು ವೈದಿಕವೆಂದು ನಂಬುವದೆಂತು? ವೈದಿಕವಿಲ್ಲದ ಮತವು ಕ್ಷುದ್ರ ಪಾಷಂಡಿಗಳ ಧರ್ಮವಲ್ಲದೆ ಶಿಷ್ಟರ ಧರ್ಮವಹುದೆಂತು? ಎಂಬವೇ ಮೊದಲಾದ ವಿಚಾರಗಳು ತಲೆದೋರಿ ತಾವು ನನ್ನನ್ನು ಆಕ್ಷೇಪಿಸಬಹುದು. ಇಲ್ಲಿ ನನ್ನದೊಂದು ಮಾತು.

ಆವುದೊಂದು ಅವರವರ ನಿಜ ಸುಖದ ತೊಲಬನ್ನು ಬಯಸಿ ನಡೆವರಿಗೆಲ್ಲ ಶಾಂತಿಯನ್ನು ತೋರಿಸುವುದೋ ಅದೇ ನಿಜವಾದ ಅರಿವಿನ ಹಾದಿಯು. ಅದುವೇ ಪರಮೇಶ್ವರನ ಸೃಷ್ಟಿಯನ್ನೂ ಮುಕ್ತಿಯ ಸೋಪಾನವನ್ನೂ ಆಗಿಸುವುದು. ಅದುವೇ ಇಹ ಪರ ಎರಡಕ್ಕೆ ಸಾಧನವಹುದು. ಧರ್ಮದ ತಿರುಳು ನಮ್ಮ ಬಾಳನ್ನು ಶಿವಮಯವನ್ನಾಗಿಸುವದರಲ್ಲಿದೆ.

ನಮ್ಮ ಶರಣರು ಶಿವಭಕ್ತ ಮಾರ್ಗವು ಕುಲಜಾತಿಗಳ ಹಂಬಲುಗಳನ್ನು ಬಿಸುಟ್ಟ ಪ್ರತ್ಯಾತ್ಮನ ಸದ್ಗುಣ ಸದಾಚಾರ ಶಿವನಿಷ್ಠೆಗಳಿಂದ ನಿಲುಕುವುದೆಂದು ಸಾರಿದರು. ಅದಕ್ಕೆ ಶಿವಾಗಮ ವಾಕ್ಯಗಳು ಪ್ರಮಾಣವಾಗಿವೆ. ಅವುಗಳನ್ನು ಎದುರಿಸಿ ಶ್ರೀಕರ ಭಾಷ್ಯವು ಲಿಂಗದೀಕ್ಷೆಗೆ ಬ್ರಾಹ್ಮಣಾದಿ ತ್ರಿವರ್ಣವು ಮಾತ್ರ ಅಧಿಕಾರಿಯು. ಭಸ್ಮ ರುದ್ರಾಕ್ಷಗಳು ಅವರಿಗೆಯೇ ಸಲ್ಲುವವು. ಎಂದು ಹೇಳಹೋದರೆ ನಾವದನ್ನು ಸ್ವೀಕರಿಸಲಾರೆವು.

ವರ್ಣ ಧರ್ಮಕ್ಕೂ ಶೈವ ಧರ್ಮಕ್ಕೂ ಭೇದ ಎಷ್ಟುಂಟು? ವರ್ಣ ಧರ್ಮವು ಹುಟ್ಟು ಹೆಚ್ಚುಕಡಿಮೆ, ಶೈವ ಧರ್ಮವು ಶಿವಭಕ್ತಿಯ ದೊಡ್ಡತನವನ್ನು ಅವಲಂಬಿಸಿದೆ. ಇನ್ನು ಶರಣರ ಶೈವದಲ್ಲಿ ವೀರಶೈವವು ಶ್ರೇಷ್ಠವಾದುದು ಎಂದ ಬಳಿಕ ಇದರಲ್ಲಿ ಶೂದ್ರತ್ವವನ್ನು ಆಪಾದಿಸುವುದು ಶಾಸ್ತ್ರ ವಿರೋಧವೂ ಅನುಭವ ವಿರೋಧವೂ ವ್ಯವಹಾರ ವಿರೋಧವೂ ಆಗಿದೆ. ವೀರಶೈವ ಸಿದ್ಧಾಂತವನ್ನು ಆಚರಿಸಿದ ಶಿವಶರಣರೂ ಶಿವಯೋಗಿಗಳೂ ನಮ್ಮ ಲಿಂಗಾಯತ ಧರ್ಮದಲ್ಲಿ ಆಗಲಿ, ಅಥವಾ ಲಿಂಗಾಯತ ತತ್ವ ಪದಾರ್ಥಗಳಲ್ಲಿಯಾಗಲಿ, ಅಂದರೆ ಅಷ್ಟಾವರಣ ಪಂಚಾಚಾರಗಳು. ಅಂಗ-ಲಿಂಗ ಸಾಮರಸ್ಯಗಳು, ಎಂಬವುಗಳಲ್ಲಿ ಶೂದ್ರತ್ವವು, ನಡುವಗಲಲ್ಲಿ ಕತ್ತಲೆಯಂತೆ ಎಂದಿರುವರು. ಶ್ರೀ. ಷಡಕ್ಷರ ಕವಿಯು "ಹಲವು ಜಾತಿಯಲ್ಲಿ ಹುಟ್ಟಿರಲಿ ಸದ್ಗುರುವಿನಿಂದ ಲಿಂಗದೀಕ್ಷೆಯಾದ ಬಳಿಕ ಲಿಂಗವನ್ನು ತಾಳಿ ಹಲವು ತೆರದ ಪೂಜೆಗಳನ್ನು ಮಾಡುವರಾದರೂ ಆ ಪೂಜೆಗಳಿಂದ ಅವರು ಶೂದ್ರರೆನಿಸರು" ಎಂದು ಹೇಳಲ್ಲವೆ?

ಶ್ರೀಪತಿ ಪಂಡಿತರಿಂದ ಪ್ರಕಟವಾದ ಈ ಸಂದರ್ಭವು ಶಿವಾನುಭವ ಸಮ್ಮತವಾದರೆ ನಮ್ಮ ಸಮಗ್ರ ಸಮಾಜವು ವೀರಶೈವವಲ್ಲ. ಅದೊಂದು ಶೂದ್ರರ ಬಳಗವಹುದು. ಕೆಳವರ್ಗದ ಅಗ್ರಗಣ್ಯರು ಇದೊಂದು ತಮಗೆ ಸಾಧಕವೆಂದು ಪೊಂಗಬಹುದು. ಆದರೆ ಅದು ಬರಿದು ಹುಚ್ಚು. ಇಲ್ಲಿ ವೀರಶೈವತ್ವಕ್ಕೆ ಬೇಕೆನ್ನುವ ಘಟಕಗಳಾವು. (೧) ಬ್ರಾಹ್ಮಣರ ಗುರುತ್ವವನ್ನು ಒಡಂಬಡಬೇಕು. (೨) ಬ್ರಾಹ್ಮಣ ಕ್ಷತ್ರಿಯ ವೈಶ್ಯವೆಂಬ ತ್ರಿವರ್ಣದಲ್ಲಿ ಜನ್ಮವೆತ್ತಿರಬೇಕು. (೩) ಜಂಗಮರನ್ನು ಬಿಡಬೇಕು. ಹೀಗಿಲ್ಲದಿದ್ದಲ್ಲಿ, ಭಸ್ಮ ರುದ್ರಾಕ್ಷಧಾರಣಕ್ಕಾಗಲಿ ನಮಃ ಶಿವಾಯವೆಂಬ ಪಂಚಾಕ್ಷರ ಮಂತ್ರವನ್ನು ಉಪದೇಶ ಪಡೆಯಲಿಕ್ಕಾಗಲಿ ಅಧಿಕಾರವಿಲ್ಲ. ಪಾದೋದಕ ಪ್ರಸಾದಕ್ಕೂ ಅಧಿಕಾರವಿಲ್ಲ. ಬ್ರಾಹ್ಮಣನು ಸರ್ವ ದೇವತಾರೂಪನು. ಹಾಗಿರುವ ಗುರುತ್ವವನ್ನು ಒಪ್ಪದ ನಾವು ಶೂದ್ರರಿಗಿಂತಲು ಕೆಳಗಿನವರು. ಶೂದ್ರರಿಗೆ ನಮಃ ಶಿವಾಯ ಮಂತ್ರವನ್ನು ಶಿವಾಯನಮಃ ಎಂದು ತಿರುವಿ ಉಪದೇಶಿಸಲಿಕ್ಕಾದರು ಬರುವದು. ಬ್ರಾಹ್ಮಣ ಗುರುತ್ವವನ್ನು ಒಪ್ಪದ ನಾವು ವೇದ ಸಿದ್ಧವಾದ ನಾಲ್ಕು ವರ್ಣಗಳಲ್ಲಿಯಾಗಲಿ ಸ್ಮೃತಿ ಸಿದ್ಧವಾದ ಹದಿನೆಂಟು ಜಾತಿಗಳಲ್ಲಾಗಲಿ ಬಾಹಿರರಿಂದ ನಾವು ತಿರುವಿ ಶಿವಾಯ ನಮಃ ಎಂದು ಸಹ ಪಂಚಾಕ್ಷರೋಪದೇಶವನ್ನು ಪಡೆಯಲಾರೆವು. ಲಿಂಗಾಂಗ ಸಾಮರಸ್ಯವು ತತ್ವಮಸಿ ಎಂಬ ಮಹಾ ವಾಕ್ಯದ ಪ್ರತಿಪಾದ್ಯವು ಅಪೌರುಷೇಯಾಧಿಕರಣದಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಶಿವದೀಕ್ಷಾ ವಿಶಿಷ್ಟರಾದುದರಿಂದ ಲಿಂಗಾಂಗ ಸಾಮರಸ್ಯಕ್ಕೆ ಅಧಿಕಾರಿಗಳಹರು ಶೂದ್ರರಿಗೆ ಷಡಧ್ವಶೋಧನಾಪೂರ್ವಕ ಶಿವದೀಕ್ಷೆಯು ಇಲ್ಲದ್ದರಿಂದ ಬ್ರಹ್ಮ ವಿದ್ಯೆಯಲ್ಲಿ ಅಧಿಕಾರವಿಲ್ಲೆಂದು ಸ್ಥಾಪಿಸುತ್ತಿರುವರಿಂದ ಶಿವದೀಕ್ಷೆಯು ಅವರಿಗಿಲ್ಲವೆಂದು ಸ್ಥಾಪಿಸಿಯದೆ. ಎಂಬಿದು ಈ ಗ್ರಂಥದ ಕನ್ನಡವು

ಚಳವಳಿಗಾರರು ಬ್ರಾಹ್ಮಣರ ಗುರುತ್ವವನ್ನು ಒಪ್ಪರೋ? ತಾವೇ ಬ್ರಾಹ್ಮಣರೆಂದು ಕಾಶೀನಾಥ ಶಾಸ್ತ್ರಿಗಳು ಹೇಳಿದರೆ, ಸ್ಮಾರ್ತ ವೈಷ್ಣವ ಮಾಧ್ವ ಬ್ರಾಹ್ಮಣರನ್ನು ಒಪ್ಪಿಸುವರೋ? ಇವರ ಪದ್ಧತಿ, ಮಳೆ, ಮುತ್ತಿನ ಕಂತೆ, ಪಂಚಪಣ್ಣಿಗೆಗಳಾಗಲಿ, ವೀರಾದಿಗಳಾಗಲಿ ಬ್ರಾಹ್ಮಣ ಗೋತ್ರಗಳೆಂದು ಆವ ಗ್ರಂಥದಲ್ಲಿ ತೋರಿಸಬಲ್ಲರು? ಜನ್ನಿವಾರವಿಲ್ಲದೆ ಲಿಂಗಧಾರಣವು ಬ್ರಾಹ್ಮಣ್ಯವನ್ನು ಉಂಟು ಮಾಡುವದೋ?

ಅಂದಬಳಿಕ ಹಿಂದೆ ಎಂದಾದರು ನಮ್ಮ ಚಳವಳಿಗಾರರಿಗೆ ವರ್ಣ ಬ್ರಾಹ್ಮಣ್ಯವಿದ್ದಿತೆಂದು ಹಿಡಿದರೆ ಜನ್ಮಿವಾರವನ್ನು ಎಂಟನೂರು ವರ್ಷಗಳ ವರೆಗೆ ಬಿಟ್ಟ ಅತ್ಯತಿವ್ರಾತ್ಯತಮತ್ವವು ನೀಗಲು ಶಾಸ್ತ್ರದಲ್ಲಿ ಪ್ರಾಯಶ್ಚಿತ್ತ ವಿಧಿಯನ್ನು ಕಾಣೆವು. ಮತ್ಸ್ಯಸೂಕ್ತದ ಪ್ರಾಯಶ್ಚಿತ್ತ ಪ್ರಕರ್ಣದ ಮೂವತ್ತೆಂಟನೆಯ ಪಟಲದಲ್ಲಿ ಆವಾತನಿಗೆ ಬ್ರಾಹ್ಮಣನಾದರೆ ಹದಿನೈದು ವರ್ಷಗಳು ಕ್ಷತ್ರಿಯನಾದರೆ ಇಪ್ಪತ್ತೊಂದು ವರ್ಷಗಳು ಮೀರುವವೊ ಅಂತಹ ಬ್ರಾಹ್ಮಣನು ಅಥವಾ ಕ್ಷತ್ರಿಯನು ವ್ರಾತ್ಯಹೋಮವನ್ನು ಆಚರಿಸಿ ಪುನಃ ಮೌಂಜೀಬಂಧವನ್ನು ಹೊಂದಬಹುದು. ಇದು ಆದರ ವಿಧಿಯು.

ಹದಿನೈದು ವರ್ಷಕ್ಕೆ ಮೂರು ವಾರದಂತೆ ಉಪನಯನವಿಲ್ಲದೆ ಎಂಟು ನೂರು ವರ್ಷಗಳು ಕಳೆದ ನಮ್ಮ ಹೊಸ ಹಾರವರು ನಾಲ್ವತ್ತೆಂಟು ವಾರಗಳ ವರೆಗೆ ಕೀಳ ಉದ್ದಿನ ವ್ರತವನ್ನು ನಡೆಯಿಸುವರೆಂದರೆ ಶಾಸ್ತ್ರವಿಲ್ಲ. ಚಂಡಿಕೆಯು ಪ್ರಾಯಶ್ಚಿತ್ತದಲ್ಲಿ ತನ್ನನುಳಿಸಿ ದೇವರಿಗೆ ಕೂದಲುಗೊಡಲಿಕ್ಕಲ್ಲದೆ ಬ್ರಾಹ್ಮಣ್ಯಸಿದ್ಧಿಗಾಗಿ ಅಲ್ಲ.

ಆಪಸ್ತಂಬ ಧರ್ಮಸೂತ್ರದಲ್ಲಿ "ಉಪನಯನಂ ವಿದ್ಯಾರ್ಥಸ್ಯ ಶ್ರುತಿತಃ ಸಂಸ್ಕಾರಃ" ವಿದ್ಯೆಗಲಿಯತಕ್ಕ ತ್ರೈವರ್ಣಿಕನಿಗೆ ಶ್ರುತಿಯುಹಾಕಿದ ಸಂಸ್ಕಾರವು ಉಪನಯನವು ಎಂದು ಹೇಳಿಯದೆ. ಉಪನಯನ ವಿಧಿಯಲ್ಲಿ ಎಲ್ಲಿಯೂ ಲಿಂಗಧಾರಣವು ಬರುವುದಿಲ್ಲ. ಆದುದರಿಂದ ಕೇವಲ ಲಿಂಗಧಾರಣದಿಂದ ಉಪನಯನ ಸಂಸ್ಕಾರವು ಆದಂತಾಯಿತೆಂಬುದು ಅಸಂಗತವು. ಅದು ಎಂತಿರಲಿ. ಈ ಭಾಷ್ಯವು ಶರಣ ಮಾರ್ಗಕ್ಕೆ ವಿರುದ್ಧವಾದುದರಿಂದ ಅದನ್ನು ವ್ಯಾಸಸೂತ್ರಾನುಸಾರಿಯಲ್ಲವೆಂದು ತೋರಿಸುತ್ತ ವ್ಯಾಸಸೂತ್ರಗಳಿಗೆ ಅಷ್ಟಾವರಣ ಪಂಚಾಚಾರವನ್ನು ಅಪ್ಪಿಸಿಹೋದ ಶ್ರೀಪತಿ ಪಂಡಿತರು ಒಂದು ಬಗೆಯಿಂದ ಆ ಸೂತ್ರಗಳು ವೀರಶೈವ ಧರ್ಮಕ್ಕೂ ತತ್ವಕ್ಕೂ ಅನ್ವಯಿಸಲಾರವೆಂಬುದನ್ನು ತೋರಿಸಿದುದಕ್ಕಾಗಿ ಅವರನ್ನು ಅಭಿವಂದಿಸುವೆನು.

ನಾಗಪುರ ಹಿಂದು ಸಭೆಯ ಸ್ತುತ್ಯ ಸಾಹಸ.

ಕಳೆದ ವಾರ ಒಬ್ಬ ಪಠಾಣನು ಒಬ್ಬ ಕುಲೀನ ಬ್ರಾಹ್ಮಣ ತರುಣಿಯನ್ನು ಓಡಿಸಿಕೊಂಡು ಹೋಗಿದ್ದನು. ಈ ಸಂಗತಿಯು ನಾಗಪುರ ಹಿಂದು ಸಭೆಯವರಿಗೆ ಗೊತ್ತಾದೊಡನೆ ಸ್ವಯಂಸೇವಕರನ್ನು ಕಳುಹಿಸಿ ಭುಸಾವಳ ಸ್ಟೇಶನ್ನಿನಲ್ಲಿ ಆ ಪಠಾಣನನ್ನು ಹಿಡಿಸಿದರು. ಆ ಹೆಣ್ಣುಮಗಳನ್ನು ಕ್ವೇಟಾಕ್ಕೆ ತೆಗೆದುಕೊಂಡು ಹೋಗುತ್ತಿದ್ದನಂತೆ.

ಇದೇ ಪ್ರಕಾರ ೨೨ ವರುಷಗಳ ಒಬ್ಬ ಯುವತಿಯನ್ನೂ ಅವಳ ೭ ವರುಷಗಳ ಒಂದು ಮಗುವನ್ನೂ ಓಡಿಸಿಕೊಂಡು ಹೋದುದನ್ನು ಈ ಹಿಂದು ಸಭೆಯವರು ಗೊತ್ತು ಹಚ್ಚಿದರು.

ಕಳೆದ ೨೦ ತಿಂಗಳುಗಳಲ್ಲಿ ೬೦೦ ಹಿಂದು ಸ್ತ್ರೀಯರನ್ನು ಮುಸಲ್ಮಾನರಿಂದ ಈ ಹಿಂದು ಸಭೆಯವರು ಬಿಡಿಸಿದ್ದಾರೆ. ೧೩ ಮಂದಿರಗಳನ್ನು ರಕ್ಷಿಸಿದರು. ೧೦೫ ಸ್ಥಳಗಳಲ್ಲಿ ಸಭೆಗಳನ್ನು ಕೂಡಿಸಿ ಹಿಂದುಜಾಗೃತಿಯನ್ನುಂಟುಮಾಡಿದರು. ಈ ೨೦ ತಿಂಗಳುಗಳಲ್ಲಿ ೯೦ ಜನರಿಗೆ ಶುದ್ಧೀಕರಿಸಿ ಹಿಂದು ಧರ್ಮದಲ್ಲಿ ತೆಗೆದುಕೊಂಡರು. ಎಲ್ಲ ಭಾಗಗಳಲ್ಲಿಯೂ ಹೀಗೆ ಹಿಂದು ಸಭೆಗಳು ಕೆಲಸ ಮಾಡುವುದು ಅಗತ್ಯ.

ಜಾತ್ಯಂಧತೆ ಮತ್ತು ಕಾಂಗ್ರೆಸ್ ದೀಕ್ಷೆ.

ಮೊನ್ನೆ ಪ್ರಾಂತಿಕ ಅಸೆಂಬ್ಲಿ ಚುನಾವಣೆಯ ಕಾಲಕ್ಕೆ "ಜಾತ್ಯಂಧತೆ" ಮತ್ತು "ಕಾಂಗ್ರೆಸ್ ದೀಕ್ಷೆ" ಎಂಬ ಶಬ್ದಗಳು ಹೆಚ್ಚಾಗಿ ಬಳಿಕೆಯಲ್ಲಿ ಬಂದವಷ್ಟೆ. ಇವುಗಳಲ್ಲಿ ಅಡಗಿರುವ ಅರ್ಥವೇನೋ ಆ ಮುಂಚೆಯೂ ವ್ಯಕ್ತಗೊಳಿಸಲ್ಪಡುತ್ತಲೇ ಇತ್ತು. ಆದರೆ ಶಬ್ದ ಬೇರೆ. ಇತ್ತೀಚೆಗೆ ಈ ಶಬ್ದಗಳನ್ನೇ ಹೆಚ್ಚು ಬಳಿಸುತ್ತಿರುವುದರಿಂದ ನಾವು ಅವುಗಳ ಮೂಲಕವಾಗಿಯೇ ನಮ್ಮ ಅಭಿಪ್ರಾಯವನ್ನು ಈ ಲೇಖನದಲ್ಲಿ ತಿಳಿಸುವೆವು.

ತಾವು ಯಾವ ಜಾತಿಯವರೆಂದು ಹೇಳಿಕೊಳ್ಳುತ್ತಿದ್ದಾರೆಯೋ ಆ ಜಾತಿಯವರ ವಿಷಯದಲ್ಲಿಯೇ ಅಭಿಮಾನವುಳ್ಳವರಾಗಿ ಸತ್ಯಾಸತ್ಯತೆಗಳನ್ನು ಲಕ್ಷಿಸದೆ ಪಕ್ಷಪಾತದಿಂದ ಅವರ ಹಿತವನ್ನೇ ಬಯಸುವ ರೀತಿಗೆ ಜಾತ್ಯಂಧತೆಯೆಂದೂ, ಕಾಂಗ್ರೆಸ್ಸಿನ ನಿಯಮಗಳಿಗೆ ಒಪ್ಪಿ ನಾಲ್ಕಾಣೆ ಕೊಟ್ಟು ಸದಸ್ಯನಾಗುವುದಕ್ಕೆ ಕಾಂಗ್ರೆಸ್ ದೀಕ್ಷೆಯೆಂದೂ ಹೇಳುವುದಾಗಿದೆ.

ಯಾರು ಕಾಂಗ್ರೆಸ್ ದೀಕ್ಷೆಯನ್ನುಹೊಂದಿದ್ದಾರೆಯೋ ಅವರು ಜಾತ್ಯಂಧರಾಗಿರಬಾರದೆಂದೇ ಎಲ್ಲರೂ ಅಪೇಕ್ಷಿಸುತ್ತಿದ್ದಾರೆ. ಜಾತ್ಯಂಧತೆಯು ಕೀಳಾದುದೂ ರಾಷ್ಟ್ರಕ್ಕೆ ಅನರ್ಥಕರವಾದುದೂ ಆಗಿರುವುದರಿಂದ ಅದು ನಿವಾರಣೆಯಾಗಲು ಕಾಂಗ್ರೆಸ್ಸಿನ ದೀಕ್ಷೆಯನ್ನು ಹೊಂದುವುದೂ ಒಂದು ಉತ್ತಮ ಮಾರ್ಗವೆಂಬುದಾಗಿಯೂ ಕೆಲವರು ತಿಳಿದುಕೊಂಡಿರುವುದುಂಟು. ಇಷ್ಟೇ ಅಲ್ಲ, ಯಾರು ಕಾಂಗ್ರೆಸ್ ದೀಕ್ಷೆಯನ್ನು ಹೊಂದಿಲ್ಲವೋ ಅವರೆಲ್ಲರೂ ಜಾತ್ಯಂಧರೂ, ರಾಷ್ಟ್ರದ್ರೋಹಿಗಳೂ ಎಂಬುದಾಗಿಯೂ ಭಾವಿಸಿರುವುದುಂಟು. ಈ ಪ್ರಕಾರ ಜಾತ್ಯಂಧತೆ ಮತ್ತು ಕಾಂಗ್ರೆಸ್ ದೀಕ್ಷೆಗಳಿಗೆ ಕತ್ತಲೆ ಮತ್ತು ಬೆಳಕುಗಳಷ್ಟೇ ಸಂಬಂಧವೆಂದು ಅವರ ತಿಳುವಳಿಕೆ. ಅಂತೆಯೇ ಬೆಳಕು ಬಂದೊಡನೆ ಕತ್ತಲೆ ನಿವಾರಣೆಯಾಗುವಂತೆ ಕಾಂಗ್ರೆಸ್ ದೀಕ್ಷೆಯಾದೊಡನೆ ಜಾತ್ಯಂಧತೆಯು ಮಾಯವಾಗುವುದೆಂತಲೂ ಜಾತ್ಯಂಧತೆಯನ್ನು ಕಳೆಯಬೇಕಾದರೆ ಕಾಂಗ್ರೆಸ್ ದೀಕ್ಷೆಯನ್ನು ಹೊಂದಬೇಕೆಂತಲೂ ಅವರು ತಿಳಿದಿದ್ದಾರೆ

ಈ ವಿಧವಾದ ತಿಳುವಳಿಕೆಯಿಂದಲೇ ಇತ್ತೀಚೆಗೆ ರಾಷ್ಟ್ರಕಾರ್ಯ ಮಾಡುವವರಲ್ಲಾಗುವ ತಪ್ಪುಗಳಿಗೆಲ್ಲಾ ಜಾತ್ಯಂಧತೆಯ ದೋಷವನ್ನು ಹಚ್ಚಿ ತೀಕ್ಷ್ಣತರವಾಗಿ ಖಂಡಿಸುವುದು ಹೆಚ್ಚುತ್ತಾ ಇದೆ. ಇದು ಸಾರ್ವಜನಿಕ ಕಾರ್ಯದೇಳಿಗೆಗೆ ತುಂಬಾ ಬಾಧಕವಾದುದು. ಅಂತೆಯೇ ಸಾರ್ವಜನಿಕ ಕಾರ್ಯವೇ ಯಾರ ಜೀವನವಾಗಿದೆಯೋ ಅವರಾದರೂ ಈ ವಿಷಯವನ್ನು ಪರ್ಯಾಲೋಚಿಸಿ ನಿಜಸ್ಥಿತಿಯನ್ನು ತಿಳಿದುಕೊಳ್ಳುವುದು ಅಗತ್ಯ.

ಕಾಂಗ್ರೆಸ್ ದೀಕ್ಷೆಯ ಮಹತ್ವ.

ಕಾಂಗ್ರೆಸ್ಸಿನ ನಿಯಮಗಳಿಗೆ ಒಪ್ಪಿ ನಾಲ್ಕಾಣೆ ಕೊಟ್ಟು ಈ ದಿನ ಒಬ್ಬರು ಸದಸ್ಯರಾದ ಮಾತ್ರದಿಂದ ಅವರ ರಕ್ತನಾಳಗಳ

ಲ್ಲೆಲ್ಲಾ ಎಷ್ಟೋ ಕಾಲದಿಂದ ವ್ಯಾಪಿಸಿದ್ದ ಜಾತಿ ಭಾವನೆಯು ನಾಶವಾಯಿತೆಂದು ತಿಳಿಯುವುದೇ ಮೊದಲು ತಪ್ಪು. ಹೀಗೆ ಈ ದೀಕ್ಷೆಯಲ್ಲಿ ಒಳಗಿದ್ದ ಸಾವಿರಾರು ವರುಷಗಳ ಜಾತಿ ಭಾವನೆಯನ್ನು ನಾಶಮಾಡುವ ದಿವ್ಯ ಶಕ್ತಿಯಿದ್ದಿದ್ದರೆ ಹೊರಗಿನಿಂದ ಬಂದ ನೂರಾರು ವರುಷಗಳ ಪಾರತಂತ್ರ್ಯವನ್ನು ಅದೇಕೆ ನಿವಾರಣೆ ಮಾಡಿಕೊಳ್ಳುತ್ತಿರಲಿಲ್ಲ? ಅನೇಕ ಸಭೆ ಮತ್ತು ಸಂಘಗಳಿಗೆ ಸದಸ್ಯರಾಗುವಂತೆ ಈ ಕಾಂಗ್ರೆಸ್ಸಿಗೂ ಆಗುತ್ತಿದ್ದಾರೆ. ಆದರ ತತ್ವವು ತನಗೆ ಮಾನ್ಯವೆಂದು ಆ ದಿನ ಒಪ್ಪಿಕೊಂಡದ್ದಕ್ಕೆ ಅದೊಂದು ಗುರುತು.

ಅಂದಿನಿಂದ ಅದರಲ್ಲಿರುವ ಸತ್ಯ, ಅಹಿಂಸೆ, ಮಾರ್ಗಗಳನ್ನು ಅನುಸರಿಸಲು ಪ್ರಾರಂಭ. ಅದು ಆಯುಷ್ಯದ ಅಂತ್ಯದವರೆಗೂ ನಡೆಯಬಹುದು. ಶಾಲೆಗೆ ಹೋದೊಡನೆ ಮಹಾ ಪಂಡಿತನಾದನೆಂದು ತಿಳಿಯುವುದು ಹೇಗೆ ತಪ್ಪೋ ಹಾಗೆಯೇ ಕಾಂಗ್ರೆಸ್ ದೀಕ್ಷೆಯಾದೊಡನೆ ಸತ್ಯಸಂಧನಾದನೆಂದು ತಿಳಿಯುವುದೂ ತಪ್ಪು.

ಕೆಲವರು ಲಿಂಗಾಯತ ದೀಕ್ಷೆಗೂ ಕಾಂಗ್ರೆಸ್ ದೀಕ್ಷೆಗೂ ಹೋಲಿಸಿರುವುದುಂಟು. ಲಿಂಗಾಯತ ದೀಕ್ಷೆಯಾದನಂತರ ಕುಲಜಾತಿಗಳನ್ನು ಎಣಿಸಬಾರದೆಂಬುದು ತತ್ವ. ಆದರೆ ಎಣಿಸದಿದ್ದವರು ಮಾತ್ರ ದೊರೆಯುವುದು ಕಡಿಮೆ. ಲಿಂಗಾಂಗಿಗಳೆಲ್ಲರೂ ಬಸವಣ್ಣನವರೇ ಸರಿಯೆಂದು ತಿಳಿಯುವುದು ಎಷ್ಟು ಸಮಂಜಸವೋ ಅಷ್ಟೇ ಕಾಂಗ್ರೆಸ್ ದೀಕ್ಷೆಹೊಂದಿದವರೆಲ್ಲರೂ ಗಾಂಧೀಜಿಯವರೇ ಸರಿಯೆಂದು ತಿಳಿಯುವುದೂ ಸಮಂಜಸ!

ಸರಿಯಾದ ಕಾಲವನ್ನು ತೋರಿಸದಿದ್ದ ಗಡಿಯಾರವನ್ನು ನಂಬಿ ಗಾಡಿಯನ್ನು ತಪ್ಪಿಸಿಕೊಂಡವರು ಮರುಗುವರೇ ವಿನಾ ಅದು ಸರಿಯಾದ ಕಾಲ ತೋರಿಸುವುದಿಲ್ಲವೆಂದು ಮೊದಲೇ ತಿಳಿದವರು ಮರುಗುವ ಪ್ರಸಂಗವುಂಟೆ? ಇತ್ತೀಚಿಗೆ ಕೆಲವರು, ಕಾಂಗ್ರೆಸ್ಸಿನಲ್ಲಿರುವ ಕೆಲವು ಲಿಂಗಾಯತರು ಜಾತ್ಯಂಧರೆಂದೂ, ಬ್ರಾಹ್ಮಣರು ಜಾತ್ಯಂಧರೆಂದೂ, ಸವರ್ಣೀಯ ಹಿಂದುಗಳು ಜಾತ್ಯಂಧರೆಂದೂ, ವಿಷಾದಿಸುತ್ತಿದ್ದಾರೆ. ಇದಕ್ಕೆ ಅವರು ತಪ್ಪು ತಿಳಿದುಕೊಂಡುದೇ ಕಾರಣ.

ಹೇಗೆ ಕೆಲವರಿಗೆ ತಮ್ಮ ಜಾತಿಯವರೇ ಹೆಚ್ಚೆಂಬ ದುರಭಿಮಾನವಿದೆಯೋ ಹಾಗೆಯೇ ಕೆಲವರಿಗೆ ಕಾಂಗೆಸ್ಸಿನ ದೀಕ್ಷೆಯನ್ನು ಹೊಂದಿದವರೆಲ್ಲಾ ಶ್ರೇಷ್ಠರೆಂದೂ ಮಹಾ ರಾಷ್ಟ್ರಭಕ್ತರೆಂದೂ ಅನ್ಯರೆಲ್ಲಾ ದೇಶದ್ರೋಹಿಗಳೂ, ಜಾತ್ಯಂಧರೂ ಆಗಿದ್ದಾರೆಂದೂ ದುರಭಿಮಾನವುಂಟು. ಜಾತಿಯ ದುರಾಭಿಮಾನದಿಂದ ಹೇಗೆ ಜಾತಿಯ ಜಗಳ ಉಂಟಾಗುತ್ತಿವೆಯೋ ಹಾಗೆಯೇ ಕಾಂಗ್ರೆಸ್ ಪಕ್ಷಾಂಧತೆಯಿಂದ ಬೇರೆ ಪಕ್ಷಗಳ ಸಂಗಡ ವೃಥಾ ಹೋರಾಟಗಳೂ ಆಗುತ್ತಲಿವೆ.

ವಿಮರ್ಶಕ ವೃತ್ತಿಯಿರಬೇಕು.

ಕಾಂಗ್ರೆಸ್ ದೀಕ್ಷೆಹೊಂದಿದವರೆಲ್ಲಾ ಸರ್ವ ಸದ್ಗುಣ ಸಂಪನ್ನರೆಂದೂ ಅನ್ಯರೆಲ್ಲಾ ದುರ್ಗುಣ ದುರಾಚಾರಿಗಳೆಂದೂ ತಿಳಿಯುವುದೇ ಮೊದಲು ಮಳ್ಳುತನ. ಹಾಗೆ ತಿಳಿದು ಅನಂತರ ಮರುಗುವುದು ಮೂಢತನದ ಫಲಿತಾಂಶ. ಒಬ್ಬರನ್ನು ಮೋಸಗೊಳಿಸುವುದು ದುಷ್ಟತನವಾದರೆ ಅನ್ಯರಿಗೆ ಮೋಸಹೋಗುವುದು ದಡ್ಡತನ. ಇವೆರಡೂ ತ್ಯಾಜ್ಯವಾದವುಗಳೇ ಸರಿ. ಗಾಂಧೀಜಿಯವರೇ ಮೊದಲಾದ ಅನೇಕ ಮಹಾಪುರುಷರು ಕಾಂಗ್ರೆಸ್ ಸಂಸ್ಥೆಯಲ್ಲಿದ್ದು ಅನೇಕ ಮಹತ್ಕಾರ್ಯಗಳನ್ನು ಮಾಡುತ್ತಿರುವುದರಿಂದ ಅದಕ್ಕೆ ಒಂದು ವಿಶೇಷವಾದ ಘನತೆ ಬಂದಿತು. ಅದೇ ಸಂಧಿಯನ್ನು ಸಾಧಿಸಿ ಅನೇಕರು ಅನೇಕ ಸ್ವಾರ್ಥಗಳನ್ನು ಸಾಧಿಸಲು ಕಾಂಗ್ರೆಸ್ ದೀಕ್ಷೆ ಹೊಂದಿರುವುದು ಸ್ವಾಭಾವಿಕ. ಬುದ್ಧನ ಕಾಲದಲ್ಲಿ ಅನೇಕ ಡಾಂಭಿಕರು ಭಿಕ್ಷುಗಳಾಗಲಿಲ್ಲವೆ? ಬಸವಣ್ಣನ ಕಾಲದಲ್ಲಿ ಅನೇಕ ಮೋಸಗಾರರು ಜಂಗಮರಾಗಲಿಲ್ಲವೆ? ಹಾಗೆಯೇ ಗಾಂಧೀಜಿಯವರ ಕಾಲದಲ್ಲಿ ಅನೇಕರು ಸ್ವಾರ್ಥಸಾಧನೆಗೆ ಕಾಂಗ್ರೆಸ್ ದೀಕ್ಷೆಹೊಂದಿ ದೇಶಭಕ್ತರಾದರೆ ಅದರಲ್ಲಿ ಆಶ್ಚರ್ಯವೇನು? ಆದರೆ ಕಾಂಗ್ರೆಸ್ ದೀಕ್ಷೆ ಹೊಂದಿದವರೆಲ್ಲ ಸತ್ಯಸಂಧರೂ, ಜಾತ್ಯಂಧತೆಯ ಅತೀತರೂ, ಸ್ವಾರ್ಥವನ್ನು ಸುಟ್ಟವರೂ ಆಗುತ್ತಾರೆಂದು ನಂಬಿನಡೆಯುವುದು ಮಾತ್ರ ಆಶ್ಚರ್ಯಕರವಲ್ಲವೆ?

ಮಹಾ ಮಹಾ ಮುಖಂಡರೆಂದು ಮೆರೆದ ಅನೇಕರಲ್ಲಿಯೂ ಸ್ವಾರ್ಥ, ವ್ಯಕ್ತಿದ್ವೇಷ, ಜಾತ್ಯಂಧತೆ, ಮೊದಲಾದವುಗಳು ಇವೆಯೆಂಬುದು ಇತ್ತೀಚಿಗಂತೂ ಅನೇಕ ಭಾಗಗಳಲ್ಲಿ ಬೆಳಕಿಗೆ ಬಂದ ಸಂಗತಿಯಾಗಿದೆಯಷ್ಟೆ. ಆದಕಾರಣ ಈಗಲಾದರೂ ಎಚ್ಚತ್ತು ವಿಮರ್ಶಕ ಬುದ್ಧಿಯನ್ನು ಉಪಯೋಗಿಸಿಯೇ ಸಾರ್ವಜನಿಕ ಕಾರ್ಯವನ್ನೂ ಮಾಡುತ್ತಹೋದರೆ ಮೋಸಹೋದೆವೆಂದು ಹೀಗೆ ಮರುಗುವ ಪ್ರಸಂಗಬರವುದಿಲ್ಲ, ಮತ್ತು ಎಲ್ಲ ತಪ್ಪುಗಳೂ ಜಾತ್ಯಂಧತೆಯಿಂದಲೇ ಸಂಭವಿಸಿದವುಗಳೆಂಬ ಕಲ್ಪನೆಯುಂಟಾಗಿ ಸಾರ್ವಜನಿಕ ಕಾರ್ಯದಲ್ಲಿ ವೃಥಾ ಅವಿಶ್ವಾಸವೂ ಹೆಚ್ಚುವುದಿಲ್ಲ.

ಇದೊಂದು ಹೊಸ ವಿಚಾರ!

ಪಂಡಿತ ಜವಾಹರಲಾಲ ನೆಹರುರವರು ಈ ದೇಶದಲ್ಲಿ ಜಾತಿ ಮತ್ತು ಧರ್ಮಗಳ ಕಲಹವೇ ಇಲ್ಲವೆಂತಲೂ ಎಲ್ಲವೂ ಹೊಟ್ಟೆ ಬಟ್ಟೆಗಳ ಕಾಟದವುಗಳೇ ಸರಿಯೆಂತಲೂ ಹೇಳುತ್ತಿದ್ದಾರಷ್ಟೆ. ಈ ದೇಶದಲ್ಲಿ ಜಾತಿ ಭಾವನೆ ಜನ ಸಾಮಾನ್ಯದಲ್ಲಿಯೂ ಇದ್ದುದು ಈಗ ಸ್ವಲ್ಪ ಗೊತ್ತಾದಂತೆ ಕಾಣುತ್ತದೆ. ಏಕೆಂದರೆ ಇವರ ಪ್ರಾಂತದ ಮುಸಲ್ಮಾನ್ ಮತದಾರ ಸಂಘದಿಂದ ಒಬ್ಬರಾದರೂ ಕಾಂಗ್ರೆಸ್ ಪರವಾಗಿ ಆರಿಸಿಬರಲಿಲ್ಲ.

ಮೊನ್ನೆ ದಿಲ್ಲಿಯಲ್ಲಿ ಕೂಡಿದ ಅಖಿಲ ಭಾರತ ರಾಷ್ಟ್ರೀಯ ಸಮಿತಿಯ ಅಧ್ಯಕ್ಷರಾದಾಗ ಪಂಡಿತಜಿಯವರು ಒಂದು ಹೊಸ ವಿಚಾರವನ್ನು ಪ್ರದರ್ಶಿಸಿದರು. ಆಗ ಹೇಳಿದುದೇನೆಂದರೆ—

"ಈ ಸಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಪ್ರಚಂಡ ವಿಜಯ ದೊರೆಯಿತು. ಆದರೆ ಮುಸಲ್ಮಾನ್ ಮತದಾರ ಸಂಘದಲ್ಲಿ ಮಾತ್ರ ಜಯದೊರೆಯಲಿಲ್ಲ. ಇದಕ್ಕೆ ನಾವು ಈ ವರೆಗೆ ನಮ್ಮ ಮುಸಲ್ಮಾನ್ ಬಂಧುಗಳನ್ನು ದೂರಮಾಡಿರುವುದೇ ಕಾರಣ"

ಮುಸಲ್ಮಾನ್ ಮತದಾರ ಸಂಘದಿಂದ ಕಾಂಗ್ರೆಸ್ ಪರವಾಗಿ ಯಾರೂ ಆರಿಸಿಬಾರದಿದ್ದುದಕ್ಕೆ ಅವರಲ್ಲಿರುವ ಜಾತಿ ಭಾವನೆ ಮತ್ತು ಅರಾಷ್ಟ್ರೀಯವೃತ್ತಿ ಇವೇ ಕಾರಣವೆಂದು ಯಾರಿಗಾದರೂ ತಿಳಿಯುವಂತಿದೆ. ಹೀಗಿರುವಾಗ ಕಾಂಗ್ರೆಸ್ಸಿನವರು ಅವರನ್ನು ಈ ವರೆಗೂ ದೂರಮಾಡಿದ್ದಾರೆಂದೂ ಅದರಿಂದಲೇ ತಮಗೆ ಮುಸಲ್ಮಾನ್ ಮತದಾರ ಸಂಘದಲ್ಲಿ ಜಯದೊರೆಯಲಿಲ್ಲನೆಂದೂ ಇವರು ಹೇಳುವುದು ಒಂದು ಹೊಸ ವಿಚಾರವಲ್ಲವೆ?

ಕಾಂಗ್ರೆಸ್ಸಿನವರು ಮುಸಲ್ಮಾನರನ್ನು ದೂರಮಾಡಿದ್ದಾರೆಯೇ? ಅಥವಾ ಮುಸಲ್ಮಾನರೇ ಕಾಂಗ್ರೆಸ್ಸಿನಿಂದ ದೂರಾಗಿದ್ದಾರೆಯೇ? ಅನೇಕ ಮುಸಲ್ಮಾನ್ ಮುಂದಾಳುಗಳು ಕೂಡಾ ಅವರ ಜಾತಿ ಬಂಧುಗಳಿಗೆ ಕಾಂಗ್ರೆಸ್ಸಿಗೆ ಸೇರರೆಂದು ಹೇಳುತ್ತಾ ಇಲ್ಲವೆ? ಮುಸಲ್ಮಾನರನ್ನು ದೂರಮಾಡದೆ ಹತ್ತಿರಮಾಡಿಕೊಳ್ಳಬೇಕೆಂದು ಕಾಂಗ್ರೆಸ್ಸು ಎಷ್ಟೋ ಪಕ್ಷಪಾತದಿಂದ ನಡೆಯುತ್ತಾ ಬಂದಿದೆ. ಇದ

ರ ಈ ದೀಕ್ಷ ವೃತ್ತಿಯನ್ನು ನೋಡಿಯೇ ಅವರು ಇದರಿಂದ ದೂರಾಗಿ ಸರಕಾರದ ಹತ್ತಿರ ಹೋಗುತ್ತಿದ್ದಾರೆ. ರಾಷ್ಟ್ರಕ್ಕೆ ಘಾತಕವಾದುದೂ, ಹಿಂದುಗಳ ಮಾನಖಂಡನೆಗೆ ಕಾರಣವಾದುದೂ, ಆದ ಜಾತಿನಿರ್ಣಯವನ್ನು ಕಾಂಗ್ರೆಸ್ ಉದಾಸೀನಮಾಡಿದುದು ಮುಸಲ್ಮಾನರ ದಾಕ್ಷಿಣ್ಯಕ್ಕಲ್ಲವೆ?

ಬ್ಯಾ. ಜಿನ್ನಾರವರು ಅಸೆಂಬ್ಲಿಯಲ್ಲಿ ಜಾತಿನಿರ್ಣಯದ ಗೊತ್ತುವಳಿಯನ್ನು ತಂದಾಗ ಕಾಂಗ್ರೆಸ್ ಕೈಕಟ್ಟಿಕೊಂಡು ಕುಳಿತುದು ಅವರನ್ನು ದೂರಮಾಡಿದ ಲಕ್ಷಣವೋ? ಆರಂಭದಿಂದ ಮುಸಲ್ಮಾನರ ಪ್ರತ್ಯೇಕ ಪ್ರಾತಿನಿಧ್ಯಕ್ಕೆ ಒಪ್ಪಿಕೊಳ್ಳುತ್ತಾ ಬಂದುದು ಅವರನ್ನು ದೂರಮಾಡಿದ್ದರ ಗುರುತಾಗಿದೆಯೊ?

ಪಂಡಿತಜಿಯವರಂತಹ ಮುಖಂಡರೇ ಈ ಪ್ರಕಾರ ಅಸತ್ಯ ವಿಧಾನವನ್ನು ಮಾಡಿ ಮುಸಲ್ಮಾನರ ತಪ್ಪನ್ನು ತಮ್ಮ ತಲೆಯ ಮೇಲೆ ಹೊತ್ತುಕೊಳ್ಳಲಾರಂಭಿಸಿದರೆ ಅವರು ಇನ್ನೂ ಕಾಂಗ್ರೆಸ್ಸಿನಿಂದ ದೂರಾಗುವುದು ಸ್ವಾಭಾವಿಕ. ಈ ವರೆಗೆ ಕಾಂಗ್ರೆಸ್ ಮಾಡುತ್ತಾ ಬಂದ ಈ ತಪ್ಪಿನ ಫಲವೇ ಇದು. ಪಂಡಿತಜಿಯವರ ಅನೇಕ ತಪ್ಪುವಿಧಾನಗಳಲ್ಲಿ ಇದೊಂದು ಹೆಚ್ಚಿನದೆಂದೇ ಸ್ಪಷ್ಟವಾಗುವುದಿಲ್ಲವೆ?

ಪಂಡಿತಜಿಯವರ ಸ್ವಾತಂತ್ರ್ಯ.

ಹಿಂದುಸ್ಥಾನಕ್ಕೆ ಈಗ ಸ್ವರಾಜ್ಯ ಬೇಕಾಗಿದೆಯೆಂಬುದು ನಿರ್ವಿವಾದವಾದುದು. ಇಂಗ್ಲಿಷ ಸಾಮ್ರಾಜ್ಯದಲ್ಲಿರುವ ಬೇರೆ ವಸಾಹತುಗಳಿಗೆ ಹೇಗೆ ಅವು ಬೇಕಾದಾಗ ಸಾಮ್ರಾಜ್ಯದಿಂದ ದೂರಾಗುವ ಅಧಿಕಾರವುಳ್ಳವುಗಳಾಗಿವೆಯೋ ಹಾಗೆಯೇ ಅಧಿಕಾರವುಳ್ಳ ಸ್ವರಾಜ್ಯ ಈಗ ಹಿಂದುಸ್ಥಾನಕ್ಕೆ ದೊರಕಿದರೆ ಅದನ್ನು ಸ್ವಾಗತಿಸುವುದಾಗಿ ಗಾಂಧೀಜಿಯವರು ಮೊನ್ನೆ ಮಿ. ಪೋಲಕರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರಷ್ಟೆ.

ಪಂಡಿತ ಜವಾಹರಲಾಲರು ಮೊನ್ನೆ ದಿಲ್ಲಿಯಲ್ಲಿ ಕೂಡಿದ ಅಖಿಲ ಭಾರತ ರಾಷ್ಟ್ರೀಯ ಸಮಿತಿ ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ ಹೀಗೆ ಹೇಳಿದರು.

"ನಮಗೆ ಬೇಕಾದ ಸ್ವಾತಂತ್ರ್ಯ ವಸಾಹತುಗಳಂತೆ ಅಲ್ಲ. ಬ್ರಿಟಿಶರ ಸಂಬಂಧವು ಸಂಪೂರ್ಣವಾಗಿ ಅಳಿದು ಹೋಗಿರಬೇಕು. ನೀವು ಈಗ ಮಾಡಬೇಕಾಗಿರುವ ಪ್ರತಿಜ್ಞೆಯಲ್ಲಿರತಕ್ಕ ಸ್ವಾತಂತ್ರ್ಯ ಎಂಬುದರ ಅರ್ಥ ಹೀಗೆ."

ಪಂಡಿತಜಿಯವರ ಸ್ವಾತಂತ್ರ್ಯದ ಅರ್ಥವನ್ನು ಕೇಳಿ ಸಭಿಕರು ಪ್ರತಿಜ್ಞೆಮಾಡಿದರು. ಅವರಲ್ಲಿದ್ದ ಅಸೆಂಬ್ಲಿ ಸಭಾಸದರು ನಾಳೆ ಅಸೆಂಬ್ಲಿಗೆ ಹೋದಾಗ ಬ್ರಿಟಿಶ್ ರಾಜ ನಿಷ್ಠೆಯ ಪ್ರತಿಜ್ಞೆಯನ್ನೂ ಮಾಡುತ್ತಾರೆ! ಹೀಗೆ ಮಾಡುವ ಪ್ರತಿಜ್ಞೆಗಳ ಮಹತ್ವವು ಎಷ್ಟರಮಟ್ಟಿಗಿರಬಹುದು? ಪಂಡಿತ ಮದನಮೋಹನಮಾಲವೀಜಿಯವರೇ ಮೊದಲಾದವರು ಆ ದಿನ ಸಮಿತಿಯಲ್ಲಿ ಪ್ರತಿಜ್ಞೆ ಮಾಡದೆ ಹೋದರಂತೆ.

ಈಗ ಸಾಮ್ರಾಜ್ಯಕ್ಕೆ ಸಹಾಯಕರೇ?

ಪಂಡಿತ ಜವಾಹರಲಾಲರು ಮೊನ್ನೆ ಚುನಾವಣೆಯ ಕಾಲದಲ್ಲಿ ಸಂಚರಿಸುತ್ತಿದ್ದಾಗ ಹೊಸ ಘಟನೆಯನ್ನು ನಾಶಗೊಳಿಸಲಿಕ್ಕಾಗಿಯೇ ಕಾಂಗ್ರೆಸ್ ಅಸೆಂಬ್ಲಿಯಲ್ಲಿ ಸೇರುತ್ತದೆಂದೂ ಮಂತ್ರಿಪದವನ್ನು ಸ್ವೀಕರಿಸುವುದು ಬ್ರಿಟಿಶ್ ಸಾಮ್ರಾಜ್ಯಕ್ಕೆ ಸಹಾಯ ಮಾಡುವರೀತಿಯೆಂದೂ ಘಂಟಾಘೋಷವಾಗಿ ಸಾರುತ್ತಿದ್ದರಷ್ಟೆ.

ಪಂಡಿತಜಿಯವರು ಯಾವ ಕಾಂಗ್ರೆಸ್ಸಿನ ಅಧ್ಯಕ್ಷರೋ ಅದೇ ಕಾಂಗ್ರೆಸ್ ಈಗ ಮಂತ್ರಿಪದವನ್ನು ಸ್ವೀಕರಿಸಬೇಕೆಂದು ನಿರ್ಧರಿಸಿತಷ್ಟೆ. ಈಗ ಪಂಡಿತಜಿಯವರು ತಾನು ಒಬ್ಬ ಶಿಪಾಯಿಯಂತೆ ಕಾಂಗ್ರೆಸ್ಸಿನ ಕೆಲಸವನ್ನು ಮಾಡುತ್ತಿದ್ದೇನೆಂದು ಕೂಡಾ ಹೇಳಿದರಲ್ಲವೆ? ಮೊದಲು ಹೇಳಿದ್ದು ಸತ್ಯವಾಗಿದ್ದರೆ ಈಗ ಬ್ರಿಟಿಶ್ ರಾಜ್ಯ ಭದ್ರತೆಗೆ ಇವರು ಸಹಾಯ ಮಾಡುತ್ತಿದ್ದಾರೆಂದು ಹೇಳಬಹುದೆ?

ರಾಜ್ಯ ಘಟನೆಯನ್ನು ನಾಶಮಾಡುವ ಅಬ್ಬರದ ಮಾತುಗಳೆಲ್ಲಾ ಈಗ ಎಲ್ಲಿಯೋ ಮಾಯವಾದವು. ಶ್ರೀ. ರಾಜಗೋಪಾಲಾಚಾರ್ಯರು ಸ್ಪಷ್ಟವಾಗಿಯೇ ಹೇಳಿದ್ದೇನು? ಹೊಸ ರಾಜ್ಯ ಘಟನೆಯಿಂದ ಶಕ್ಯವಿರುವ ಪ್ರಯೋಜನಗಳನ್ನು ಹೊಂದುವುದೆಂದು. ಮಹಾತ್ಮಾ ಗಾಂಧಿಯವರು ಅಸೆಂಬ್ಲಿ ಸಭಾಸದರಿಗೆ ಮೊನ್ನೆ ಎಚ್ಚರಿಕೆಕೊಟ್ಟದ್ದೇನು? ರಾಜ್ಯಘಟನೆಯನ್ನು ತಡೆಯುವ ಉದ್ದೇಶದಿಂದಲೇ ಅಡ್ಡಿಗಳನ್ನು ತಂದೊಡ್ಡದೆ ಮೊದಲು ವಿಧಾಯಕ ಕಾರ್ಯಗಳನ್ನು ಕೈಕೊಳ್ಳಿರಿ. ಪಂಡಿತಜಿಯವರ ಆಗಿನ ಮಾತುಗಳು ರಾಜಕಾರಣದಲ್ಲಿ ಹೇಳಬೇಕಾದ ರೀತಿಗನುಸರಿಸಿದವುಗಳೇ ವಿನಾ ನಿಜಾರ್ಥದ್ಯೋತಕಗಳೇನೂ ಅಲ್ಲ.

ಪಂಡಿತಜಿಯವರ ಅಭಿನಂದನೀಯ ಧೋರಣ.

ಪಂಡಿತ ಜವಾಹರಲಾಲ ನೆಹರುರವರು ಮಹಾನ್ ರಾಷ್ಟ್ರಭಕ್ತರು. ಅದ್ವಿತೀಯ ಸ್ವಾರ್ಥತ್ಯಾಗಿಗಳು. ರಾಷ್ಟ್ರಕ್ಕಾಗಿ ಹಗಲಿರುಳೂ ದುಡಿಯಲು ಬಹು ಗಟ್ಟಿಗರು. ಇವರ ಅನುಯಾಯಿಗಳೂ ಅಸಂಖ್ಯರಿದ್ದಾರೆ. ಈಗ ಕಾಂಗ್ರೆಸ್ಸಿನ ಅಧಿಕಾರ ಸೂತ್ರವು ಯಾರ ಕೈಯಲ್ಲಿದೆಯೋ ಅವರಲ್ಲಿ ಬಹು ಮತವು ಇವರಿಗೆ ಅನುಕೂಲವಿಲ್ಲ. ಹೀಗಿರುವಾಗ ಕಾಂಗ್ರೆಸ್ಸಿನಿಂದ ಹೊರಗೆ ಬಂದು ತಾವೊಂದು ಪಕ್ಷವನ್ನು ಕಟ್ಟಬಹುದಾಗಿತ್ತು. ಈ ದೇಶದಲ್ಲಿ ಈ ವರೆಗೂ ಹೀಗೆ ಪಕ್ಷೋಪಪಕ್ಷಗಳು ಇಂತಹ ಬಿಕ್ಕಟ್ಟಿನಕಾಲದಲ್ಲಿ ಆಗುತ್ತಲೇ ಬಂದಿವೆ. ಆದರೆ ರಾಷ್ಟ್ರದ ಶಕ್ತಿಯನ್ನು ಕ್ಷೀಣಗೊಳಿಸುವ ಇಂಥ ಕಾರ್ಯಕ್ಕೆ ಮುಖವಿಡದೆ ರಾಷ್ಟ್ರದ ಅಭಿಪ್ರಾಯಕ್ಕೆ ತಲೆಬಾಗಿ ಕಾಂಗ್ರೆಸ್ಸಿನಲ್ಲಿದ್ದೇ ಕಾರ್ಯಮಾಡುತ್ತಿರುವುದು ಅತ್ಯಂತ ಅಭಿನಂದನೀಯವಾದುದು.

ಪಂಡಿತಜಿಯವರ ಸ್ವಾರ್ಥತ್ಯಾಗ ಮತ್ತು ದುಡಿತಗಳು ಹೇಗೆ ಅನುಕರಣೀಯವಾಗಿವೆಯೋ ಹಾಗೆಯೇ ಇವರ ಈ ಸ್ತುತ್ಯ ಧೋರಣವೂ ಅನುಕರಣೀಯವು. ರಾಷ್ಟ್ರದ ಮುಖಂಡರಲ್ಲಿ ಈ ವಿಧವಾದ ಐಕಮತ್ಯವು ಇತ್ತೀಚಿಗೆ ಉಂಟಾಗುತ್ತಿರುವುದು ರಾಷ್ಟ್ರೋನ್ನತಿಯ ಹೆಗ್ಗುರುತು. ಶ್ರೀಮಾನ್ ನರಿಮನ್ನರು ತಮ್ಮ ಸಂಬಂಧವಾದ ವಿವಾದವನ್ನು ನಿಲ್ಲಿಸಲು ತಾವೇ ಪ್ರಾರ್ಥಿಸಿಕೊಂಡು ಮುಖಂಡರಲ್ಲಿ ಐಕಮತ್ಯದಿಂದ ಕೆಲಸಮಾಡುವ ರೀತಿ ನೀತಿಗಳನ್ನು ತೋರಿಸಿಕೊಟ್ಟದ್ದು ಕೂಡಾ ಪಂಡಿತಜಿಯವರ ಅಭಿನಂದನೀಯವಾದ ಈ ಧೋರಣದ ಫಲಿತಾಂಶವೆಂದೇ ಹೇಳಬಹುದು. ಸರಕಾರದ ದಬ್ಬಾಳಿಕೆಗಿಂತಲೂ ನಮ್ಮ ನಮ್ಮಲ್ಲಿಯ ಅನೈಕಮತ್ಯವು ನಮ್ಮನ್ನು ಹೆಚ್ಚು ಹಣ್ಣುಮಾಡುತ್ತದೆಂತಲೂ ಇದರ ಉಪಯೋಗವನ್ನು ಸರಕಾರವೂ ಮಾಡಿಕೊಳ್ಳುತ್ತಿರುತ್ತದೆಂತಲೂ ರಾಷ್ಟ್ರಕ್ಕೆ ಈಗ ಗೊತ್ತಾಗುತ್ತಾ ಬಂದುದು ಶುಭಲಕ್ಷಣವಲ್ಲವೆ?

ಬ್ಯಾ. ಜಿನ್ನಾರವರ ಸಂಘಟನೆ.

ಬ್ಯಾ. ಜಿನ್ನಾರವರು ಸ್ವಾತಂತ್ರ್ಯ ಪ್ರೇಮಿಗಳು. ಆದುದರಿಂದ ಸಂಘಟನೆಯೂ ಇವರ ಪ್ರೇಮದ ವಿಷಯ ಅಂತೆಯೇ ಸಂಘಟನೆ ಮತ್ತು ಸ್ವಾತಂತ್ರ್ಯಗಳಿಗಾಗಿ ಇವರು ಹಗಲಿರಳೂ ಪ್ರಯತ್ನಿಸುತ್ತಿದ್ದಾರೆ. ಹಿಂದುಸ್ಥಾನಕ್ಕೆ ದೊರೆಯಬೇಕಾದ ಸ್ವಾತಂತ್ರ್ಯದಲ್ಲಿ "ಮುಸ್ಲೀಮ್ ಝೇಂಡಾ" ಮೆರೆಯಬೇಕೆಂಬ ಉದ್ದೇಶ ಮಾತ್ರ ಇವರಲ್ಲಿದೆಯೇ ವಿನಾ ಸ್ವಾತಂತ್ರ್ಯಕ್ಕೇನೂ ಇವರ ಅಡ್ಡಿಯಿಲ್ಲ

"ಮುಸ್ಲಿಮ್ ಝೇಂಡಾ" ಮೆರೆಯಬೇಕಾದರೆ ಮುಸಲ್ಮಾನರ ಸಂಘಟನೆಯಿಲ್ಲದಿದ್ದರೆ ಅದು ಹೇಗೆ ಸಾಧ್ಯ ? ಅದಕ್ಕಾಗಿ ಮಾತ್ರ ಇವರು ಮುಸಲ್ಮಾನರಲ್ಲಿ ಸಂಘಟನೆಯನ್ನುಂಟುಮಾಡುತ್ತಿದ್ದಾರೆಯೇ ವಿನಾ ಹಿಂದು ಮುಸಲ್ಮಾನರ ಐಕಮತ್ಯಕ್ಕೇನೂ ಇವರು ಪ್ರತಿಕೂಲವಾಗಿಲ್ಲ. ಹಿಂದು ಮುಸಲ್ಮಾನರ ಐಕಮತ್ಯಕ್ಕಾಗಿ ಯಾವಾಗಲೂ ಚಿಂತಿಸುತ್ತಿರುವ ಮುಸಲ್ಮಾನ ಪ್ರಮುಖರಲ್ಲಿ ಇವರು ಮುಂದಾಳುಗಳು !

ಅಂತೆಯೇ ಕಾಂಗ್ರೆಸ್ಸಿನಂತೆಯೇ ಮುಸಲೀಮ್ ಲೀಗ್ ಪಾರ್ಲಮೆಂಟರಿ ಬೋರ್ಡನ್ನು ಸ್ಥಾಪಿಸಿ ಚುನಾವಣೆಯಲ್ಲಿ ಸಂಘಟನೆಯನ್ನು ನಿರ್ಮಾಣಮಾಡಿದರು. ಮುಸಲ್ಮಾನರಾರೂ ಕಾಂಗ್ರೆಸ್ಸಿನ ಪರವಾಗಿ ಆರಿಸಿಬರದಂತೆ ಪ್ರಯತ್ನಿಸಿದರು, ಇವೆಲ್ಲಾ ಹಿಂದು ಮುಸಲ್ಮಾನರ ಐಕಮತ್ಯಕ್ಕೂ ಸ್ವಾತಂತ್ರ್ಯ ಪ್ರಾಪ್ತಿಗೂ ಮಾಡಿದ ಮಹತ್ಕಾರ್ಯಗಳು!

ಸಂಯುಕ್ತ ಪ್ರಾಂತದಲ್ಲಿ ಮುಸಲ್ಮಾನರ ಸಂಖ್ಯಾ ಬಲವು ೧೦೦ಕ್ಕೆ ೬ ರಂತೆ ಇದ್ದರೂ ಅಧಿಕಾರಗಳೆಲ್ಲಾ ೧೦೦ಕ್ಕೆ ೫೦ ರಂತೆ ಇವರ ಪಾಲಾಗಿದ್ದವು ಈಗ ಕಾಂಗ್ರೆಸ್ಸಿನ ಬಹುಮತವಾಗಿ ಶ್ರೀ ಪಂತರು ಮುಖ್ಯ ಮಂತ್ರಿಗಳಾಗುವರಷ್ಟೆ. ಅಲ್ಲಿ ಮುಸಲ್ಮಾನರ ವರ್ಚಸ್ಸು ಕಡಿಮೆಯಾದೀತೆಂದು ಮೊನ್ನೆ ಲಖನೌ ಪಟ್ಟಣಕ್ಕೆ ಹೋಗಿ ಛತ್ತಾರಿ ನಬಾಬರ ಪಕ್ಷದಲ್ಲಿ ಸಂಘಟನೆಯನ್ನುಂಟುಮಾಡಿದರು. ಏಕೆಂದರೆ ಹಿಂದ ಸ್ಥಾನದಲ್ಲಿ ಜಾಗ್ರತೆ ಹಿಂದು ಮುಸಲ್ಮಾನರ ಐಕಮತ್ಯವುಂಟಾಗಿ ಸ್ವಾತಂತ್ರ್ಯ ದೊರೆಯಲೆಂದು!

ಮಂತ್ರಿಪದವಿಯ ಆಸೆಗಾಗಿ ಯಾವ ಮುಸಲ್ಮಾನ್ ಅಸೆಂಬ್ಲಿ ಸಭಾಸದರೂ ಕಾಂಗ್ರೆಸ್ಸಿನ ಕಟ್ಟಿಗೆ ಒಪ್ಪಬೇಡಿರೆಂದು ಬ್ಯಾ. ಜಿನ್ನಾರವರು ಮೊದಲೇ ಎಚ್ಚರಿಸಿದ್ದಾರೆ ಏಕೆಂದರೆ ಮುಸಲ್ಮಾನರು ಕಾಂಗ್ರೆಸ್ಸಿನಿಂದ ಹೊರಗಿದ್ದರೇನೇ ಜಾಗ್ರತೆ ಹಿಂದು ಮುಸಲ್ಮಾನರ ಐಕಮತ್ಯವಾಗಿ ಸ್ವಾತಂತ್ರ್ಯ ದೊರೆಯುತ್ತದೆಂದೋ? ಅಥವಾ ಪಂಡಿತ ಜವಾಹರಲಾಲರ ತಿಳುವಳಿಕೆಯಂತೆ ಕಾಂಗ್ರೆಸ್ಸಿನವರು ಮುಸಲ್ಮಾನರನ್ನು ಈ ವರೆಗೆ ದೂರಮಾಡಿದ್ದರ ಪಾಪವು ಕಾಂಗ್ರೆಸ್ಸಿಗೆ ಗೊತ್ತಾಗಲೆಂದೋ ?

ಕಾಂಗ್ರೆಸ್ಸಿನವರು ಹಳ್ಳಿ ಹಳ್ಳಿಗೂ ಕಾಂಗ್ರೆಸ್ ಕಮಿಟಿಗಳನ್ನು ಸ್ಥಾಪಿಸಬೇಕೆಂದು ಗೊತ್ತುಮಾಡಿದ್ದಾರಷ್ಟೆ ಬ್ಯಾ. ಜಿನ್ನಾರವರೂ ಹಳ್ಳಿ ಹಳ್ಳಿಗೆ ಮುಸಲೀಮ್ ಲೀಗ್ ಸ್ಥಾಪಿಸಿ ಮುಸಲ್ಮಾನರ ಸಂಘಟನೆಯನ್ನು ಮಾಡಬೇಕೆಂದು ಮೊನ್ನೆ ಲಖನೌದಲ್ಲಿ ಹೇಳಿದ್ದಾರೆ. ಹೀಗೆ ಕಾಂಗ್ರೆಸ್ಸಿಗೆ ಎದುರಾಗಿ ಕಾರ್ಯಮಾಡಿ ಹಳ್ಳಿ ಹಳ್ಳಿಗಳಲ್ಲಿಯೂ ಮುಸಲ್ಮಾನರಲ್ಲಿ ಜಾತಿ ನಿಷ್ಠೆಯನ್ನು ಹೆಚ್ಚಿಸುತ್ತಿರುವುದು ಹಿಂದು ಮುಸಲ್ಮಾನರ ಐಕಮತ್ಯಕ್ಕೂ, ಸ್ವಾತಂತ್ರ್ಯಪ್ರಾಪ್ತಿಗೂ ತುಂಬಾ ಅನುಕೂಲವಾಗಲೆಂದು !

ಕೊನೆಗೆ ಒಂದೇ ಒಂದು ಮಾತು. "ನೀವು ಏಳಿರಿ, ಅಥವಾ ಬೀಳಿರಿ. ಅಂತು, ಒಕ್ಕಟ್ಟಿನಿಂದ ಬಾಳಿರಿ" ಎಂದು ಬ್ಯಾ ಜಿನ್ನಾರವರು ತಮ್ಮ ಮುಸಲ್ಮಾನ್ ಬಂಧುಗಳಿಗೆ ಹೇಳಿದ್ದಾರೆ. ಇದರಲ್ಲೇ ಹಿಂದು ಮುಸಲ್ಮಾನರ ಐಕಮತ್ಯ ಮತ್ತು ಹಿಂದುಸ್ಥಾನದ ಸ್ವಾತಂತ್ರ್ಯಗಳ ಗುಟ್ಟನ್ನು ಬ್ಯಾ, ಜಿನ್ನಾರವರು ಇಟ್ಟಿದ್ದಾರೆ. ಹಿಂದು ಮತ್ತು ಮುಸಲ್ಮಾನರ ಸಾಹಿತ್ಯ ಮತ್ತು ಸಂಸ್ಕೃತಿಗಳು ಭಿನ್ನವಾಗಿರುವುದರಿಂದ ಅವೆಂದಿಗೂ ಏಕೀಭವಿಸವೆಂದು ಕೂಡಾ ಇವರು ಸ್ಪಷ್ಟಪಡಿಸಿದ್ದಾರೆ. ಎಂದಮೇಲೆ ಇವುಗಳ ಸಂರಕ್ಷಣೆಗೆ ಹಿಂದುಸ್ಥಾನದಲ್ಲಿ ಇವರು ಮುಸ್ಲೀಮ್ ಪ್ರಭುತ್ವವನ್ನು ಬೇರೆ ಇಟ್ಟುಕೊಳ್ಳಲಿಕ್ಕಾಗಿಯೇ ಇಷ್ಟೆಲ್ಲಾ ಪ್ರಯತ್ನಿಸುತ್ತಿದ್ದಾರೆಂದು ಇನ್ನಾದರೂ ಅನೇಕ ರಾಷ್ಟ್ರವೀರರಿಗೆ ತಿಳಿದರೆ ಎಷ್ಟೋ ಒಳ್ಳೆಯದಲ್ಲವೆ ?

ಮುಂದಿನ ವಾರ

ಕನ್ನಡದ ಅಭಿಮಾನ

ಮತ್ತು

ಕಾಂಗ್ರೆಸ್ಸಿನ ಕಾರ್ಯಕಲಾಪ.

ಎಂಬ ಲೇಖನ ಪ್ರಕಟವಾಗುವುದು.

—ಮ್ಯಾನೇಜರ್.

ನೈಜಾಮುದ ಕನ್ನಡಿಗರ ಕಾರ್ಯ.

[ನೈಜಾಮು ರಾಜ್ಯದ ಕನ್ನಡ ನಾಡು ಕನ್ನಡ ಸಾಹಿತ್ಯದ ಬೀಡು ಅಲ್ಲಿ ಕನ್ನಡ ಗ್ರಂಥಗಳು ಪೂರ್ವ ಕಾಲದಲ್ಲಿ ವಿಶೇಷವಾಗಿ ರಚನೆಯಾಗಿವೆ. ಅವುಗಳ ಬಹು ಭಾಗವು ಇನ್ನೂ ಬೆಳಕಿಗೇನೇ ಬಂದಿಲ್ಲ. ಈ ವಿಚಾರವಾಗಿ "ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ"ಯ ಮೂರನೆಯ ಸಂಚಿಕೆಯಲ್ಲಿ ಹೈದರಾಬಾದಿನ ಶ್ರೀಮಾನ್ ಡಿ ಕೆ. ಭೀಮಸೇನರಾವ ಎಂ ಎ. ಇವರು ಬರೆದಿರುವ "ಹೈದರಾಬಾದು ಪ್ರಾಂತದಲ್ಲಿ ಕನ್ನಡ ಗ್ರಂಥಗಳ ಸಂಶೋಧನೆ" ಎಂಬ ಮಹತ್ವದ ಲೇಖನದಲ್ಲಿ ಹೀಗೆ ಹೇಳಿದ್ದಾರೆ. ಈ ವಿಷಯದ ಕಡೆಗೆ ಅಲ್ಲಿಯ ಕನ್ನಡಿಗರು ವಿಶೇಷವಾಗಿ ವೀರಶೈವರು ಈಗಲಾದರೂ ಲಕ್ಷಿಸಿ ಕಾರ್ಯತತ್ಪರರಾಗುವರೆ ?

—ಸಂಪಾದಕ]

"ರಾಜಾಶ್ರಯವನ್ನರಸದೆ ಕೇವಲ ಲೋಕಕಲ್ಯಾಣವನ್ನೇ ಅನುಲಕ್ಷಿಸಿ, ಸ್ವಾರ್ಥವನ್ನು ತ್ಯಜಿಸಿ, ಸಮಾಜವು ನೀತಿಪಥವನ್ನವಲಂಬಿಸುವಂತೆ ಮಾಡಿದ ಸಾಧು ಶರಣರ ಭಕ್ತ ಕವಿಗಳ ನಾಡು ನಮ್ಮ ರಾಷ್ಟ್ರವೇ ಆಗಿದೆ. ಬಸವೇಶ್ವರರಿಂದ ಪ್ರತಿಷ್ಠಾಪನವನ್ನು ಹೊಂದಿದ ವೀರಶೈವ ಮತವು ನಮ್ಮ ಪ್ರಾಂತದಲ್ಲಿ ರೂಢಮೂಲವಾದಷ್ಟು ಬೇರೆ ಎಲ್ಲಿಯೂ ಆಗಿಲ್ಲವೆಂದು ಹೇಳಬಹುದಾಗಿದೆ. ಈ ಮತವನ್ನವಲಂಬಿಸಿದ ಅತ್ಯಂತ ಪ್ರಾಚೀನರ ಕೃತಿಗಳು ನಮ್ಮಲ್ಲಿ ಇನ್ನೂ ಅನಾಮಧೇಯದ ಅವಸ್ಥೆಯಲ್ಲಿಯೇ ಉಳಿದುಕೊಂಡಿವೆ. ಇವುಗಳ ಸಂಶೋಧನೆಯ ಕಾರ್ಯದಲ್ಲಿ ನಮ್ಮ ನಾಡಿನ ಪ್ರತಿಯೊಬ್ಬ ವೀರಶೈವ ಬಂಧುವೂ ಬದ್ಧಕಂಕಣನಾಗಿ ಸಹಾಯಮಾಡಬೇಕಾಗಿದೆ. ವೀರಶೈವ ಮತ ತತ್ವಗಳನ್ನು ಬೋಧಿಸುವ ಮೂಲಕವಾಗಿ ಕನ್ನಡ ನಾಡಿನ ಜನತೆಯ ನೈತಿಕ ದೃಷ್ಟಿಯನ್ನೂ, ಸಾಮಾಜಿಕ ಜೀವನವನ್ನೂ ಉದಾತ್ತಗೊಳಿಸಿದಂಥ ಸಹಸ್ರಾರು ವಚನಗಳು ಇನ್ನೂ ಕತ್ತಲೆ ಮೂಲೆಗಳಲ್ಲಿ ಹುದಿಗಿಕೊಂಡಿವೆ ಅವು ಸೂರ್ಯರಶ್ಮಿಯನ್ನು ಎಂದು ಕಾಣುವುವೋ ಆ ಜಗಚ್ಚಕ್ಷುವಿಗೇ ಗೊತ್ತು "

ಲೋಕಶಾಹಿ ಸ್ವರಾಜ್ಯ ಪಕ್ಷ.

ಪುಣೆಯಲ್ಲಿ ಶ್ರೀ. ಅಣ್ಣಾಸಾಹೇಬ ಭೋಪಟಕರರ ಅಧ್ಯಕ್ಷತೆಯಲ್ಲಿ ತಾ. ೨೫ ನೆಯ ದಿವಸ ಲೋಕಶಾಹಿ ಸ್ವರಾಜ್ಯ ಪಕ್ಷದ ಸಭೆ ಸೇರಿತ್ತು. ಶ್ರೀ. ಕೇಳಕರ, ಡಾ. ಮುಂಜೆ, ಬ್ಯಾ. ಜಮನಾದಾಸ ಮೊದಲಾದ ಪ್ರಮುಖರು ಸೇರಿದ್ದರು.

ಈ ಪಕ್ಷವನ್ನು ಸ್ಥಿರಗೊಳಿಸಿ ಹೆಚ್ಚು ಪ್ರಸಾರಗೊಳಿಸಬೇಕೆಂದೂ ರಾಷ್ಟ್ರಮತ ಎಂಬ ಪತ್ರಿಕೆಯನ್ನು ಮುಂದೆ ನಡೆಯಿಸಬೇಕೆಂದೂ ಬರುವ ಮೇ ತಿಂಗಳಲ್ಲಿ ಈ ಪಕ್ಷದ ಒಂದು ಪರಿಷತ್ತನ್ನು ಕೂಡಿಸಬೇಕೆಂದೂ ಗೊತ್ತಾಯಿತು.

ಕಾಂಗ್ರೆಸ್ ಪಕ್ಷ ಮಂತ್ರಿಪದವನ್ನು ಸ್ವೀಕರಿಸಿ ರಾಜ್ಯಘಟನೆಯ ಸಂಬಂಧವಾಗಿ ಹರತಾಳವನ್ನು ಆಚರಿಸುವುದು ಸರಿಯಲ್ಲವೆಂದೂ ಲೋಕಶಾಹಿ ಸ್ವರಾಜ್ಯ ಪಕ್ಷವು ಆ ದಿನ ಹರತಾಳವನ್ನು ಆಚರಿಸದೆ ಬಹಿರಂಗವಾದ ಸಭೆ ಸೇರಿಸಿ ರಾಜ್ಯಘಟನೆಯ ಸಂಬಂಧವಾಗಿ ಜನರಿಗೆ ಸರಿಯಾದ ತಿಳುವಳಿಕೆಯನ್ನುಂಟು ಮಾಡಿಕೊಟ್ಟು ಅದು ಎಷ್ಟು ಅತೃಪ್ತಿಕರವಾಗಿದೆಯೆಂಬುದನ್ನು ಸ್ಪಷ್ಟೀಕರಿಸಬೇಕಾಗಿ ಅಧ್ಯಕ್ಷರು ಸೂಚಿಸಿದರು.

ಗಡಿನಾಡಿನ ದೊಂಬಿ.

ಹಿಂದುಸ್ಥಾನದ ಉತ್ತರಕ್ಕೆ ಬಲುಚಿಸ್ಥಾನ, ವಝಿರಿಸ್ಥಾನ ಈ ಭಾಗಗಳ ಗಡಿನಾಡಿನಲ್ಲಿ ಆಗಾಗ್ಗೆ ಕಾಡುಜನಗಳ ದೊಂಬಿಯು ಆಗುತ್ತಲೆ ಇರುತ್ತದೆ. ಅಫಗಾಣಿಸ್ಥಾನ ಮತ್ತು ಹಿಂದುಸ್ಥಾನಗಳ ನಡುವೆ ಕೆಲವು ಭಾಗದಲ್ಲಿ ಯಾರ ಪ್ರಭುತ್ವವೂ ಇಲ್ಲ. ಅಂತೆಯೇ ಅಲ್ಲಿ ಈ ದೊಂಬಿಗಾರರು ಸೇರಿಕೊಂಡು ಗಡಿನಾಡಿನ ಅನೇಕ ಸ್ಥಳಗಳಲ್ಲಿ ಆಗಾಗ್ಗೆ ಕೊಲೆ ಸುಲಿಗೆಗಳನ್ನು ನಡೆಸುತ್ತಿರುತ್ತಾರೆ.

ಈಗ ಇಪೀ ಫಕೀರರು ದೊಂಬಿಗಾರರಿಗೆ ತುಂಬಾ ಪ್ರೋತ್ಸಾಹಕರಾಗಿದ್ದಾರಂತೆ ಹಿಂದುಗಳ ಕೊಲೆ ಸುಲಿಗೆಯೇ ಇವರ ಮುಖ್ಯ ಕಾರ್ಯವಾದಂತೆ ತೋರುತ್ತದೆ. ಈ ವರೆಗೆ ೧೨ ಹಿಂದುಗಳನ್ನು ಓಡಿಸಿಕೊಂಡು ಹೋಗಿದ್ದಾರೆ. ಅನೇಕ ಮನೆಗಳ ಸುಲಿಗೆ ನಡೆಯಿಸಿದರು. ದಮುದಿಲ್ ಎಂಬಲ್ಲಿ ೯ ಜನ ಗುರಖಾ ಸೈನಿಕರಿಗೂ ೩೦ ಜನ ದೊಂಬಿಗಾರರಿಗೂ ಒಂದು ಕಾಳಗವೇ ಆಯಿತು.

ಮುಸಲ್ಮಾನರು ಹರತಾಳ ಮಾಡಕೂಡದು.

ಬ್ಯಾ. ಜಿನ್ನಾರವರು ಇದೇ ೧ನೆಯ ತಾರೀಖಿನ ದಿವಸ ಕಾಂಗ್ರೆಸ್ ಪಕ್ಷದವರು ಮಾಡುವ ಹರತಾಳವನ್ನು ಕುರಿತು ಹೀಗೆ ಪ್ರಕಟಿಸಿದ್ದಾರೆ—

“ಮುಸಲ್ಮಾನರು ಹರತಾಳದಲ್ಲಿ ಸೇರಬಾರದೆಂತಲೂ ಅವರು ಸೇರಲು ಇಷ್ಟವುಳ್ಳವರಿಲ್ಲವೆಂತಲೂ ಹಿಂದುಸ್ಥಾನದ ಅನೇಕ ಭಾಗಗಳಿಂದ ನನ್ನ ಕಡೆಗೆ ಪತ್ರ ಬಂದಿವೆ. ಮತ್ತು ನನ್ನ ಅಭಿಪ್ರಾಯವನ್ನು ತಿಳಿಸಬೇಕಾಗಿಯೂ ಸೂಚಿಸಿದ್ದಾರೆ. ನಾನು ಈ ವಿಚಾರವಾಗಿ ಆಲೋಚನೆಮಾಡಿದ್ದೇನೆ. ಮುಸಲ್ಮಾನರು ಹರತಾಳದಲ್ಲಿ ಸೇರಕೂಡದೆಂದೇ ನನ್ನ ಅಭಿಪ್ರಾಯ. ಏಕೆಂದರೆ, ಹೊಸ ರಾಜ್ಯ ಘಟನೆಯಿಂದ ಶಕ್ಯವಿರುವ ಪ್ರಯೋಜನವನ್ನು ಹೊಂದಬೇಕೆಂದೇ ಮುಸಲೀಮ್ ಲೀಗ್ ನಿರ್ಧರಿಸಿದೆ. ಮತ್ತು ಈ ಹರತಾಳದ ಉದ್ದೇಶವೇನೂ ಸಫಲವಾಗುವಂತಿಲ್ಲ. ಇದರಿಂದ ವ್ಯಾಪಾರಿಗಳ ಮತ್ತು ಜನ ಸಾಮಾನ್ಯರ ವೃಥಾ ಸಾಂಪತ್ತಿಕ ನಷ್ಟವಾಗುವ ಸಂಭವವಿದೆ”

೩೫ ರೂಪಾಯಿಗಳಲ್ಲಿ ವಿವಾಹ.

ವೀರಶೈವ ಸಮಾಜದಲ್ಲಿ ಲಗ್ನಗಳಿಗೋಸುಗ ಆಗುತ್ತಿರುವ ಖರ್ಚಿನ ದುಂದುಗಾರಿಕೆಗಳನ್ನು ನಿಲ್ಲಿಸಿ ತೀರ ಸ್ವಲ್ಪ ಹಣದಲ್ಲಿ ಲಗ್ನವಾಗುವ ಯೋಜನೆಯನ್ನು ವಿಜಾಪುರದ ಶ್ರೀ ಸಿದ್ಧೇಶ್ವರ ಸಂಸ್ಥೆಯವರು ಕೈಕೊಂಡಿದ್ದಾರೆ. ಲಗ್ನದ ಕಾರ್ಯವನ್ನು ಪೂರ್ತಿಗೊಳಿಸಲಿಕ್ಕೆ ಬೇಕಾಗುವ ಸ್ಥಳ, ಮಂಟಪ, ಬಾಂಡೆ, ಬಜಂತ್ರಿ ಮೊದಲಾದ ಎಲ್ಲ ಸಲಕರಣೆಗಳನ್ನು ಒದಗಿಸಿಕೊಳ್ಳಲಿಕ್ಕೆ ಪ್ರತಿಯೊಬ್ಬನಿಗೆ ಕನಿಷ್ಟ ೧೫ ದಿವಸಗಳಾದರೂ ಬೇಕಾಗುವುದು ಸಹಜವು. ಆದರೂ ಎಷ್ಟೋ ಪ್ರಸಂಗಗಳಲ್ಲಿ ವೇಳೆಗೆ ಸರಿಯಾಗಿ ಮೇಲ್ಮಾಣಿಸಿದಂಥ ಸಲಕರಣೆಗಳು ದೊರೆಯದ ಮೂಲಕ ತೀರ ತೊಂದರೆಗೂ ಬೀಳಬೇಕಾಗುವದು. ಮತ್ತು ಇವುಗಳಿಗಾಗಿ ಹಣವೂ ವಿಶೇಷ ಖರ್ಚಾಗುವದು. ಇವೆಲ್ಲ ತೊಂದರೆಗಳು ದೂರಾಗಲಿಕ್ಕೂ ಹಣದ ಉಳಿತಾಯವಾಗಲಿಕ್ಕೂ ಮೇಲ್ಮಾಣಿಸಿದ ಸಂಸ್ಥೆಯವರು ವೀರಶೈವ ವಿವಾಹ ಮಹೋತ್ಸವಗಳನ್ನು ಶ್ರೀ ಸಿದ್ಧೇಶ್ವರ ದೇವಸ್ಥಾನದ ಕ್ಷೇತ್ರದಲ್ಲಿ ಒಂದೇ ದಿವಸದಲ್ಲಿ ಮಾಡಿಕೊಡುವ ಕಾರ್ಯವನ್ನು ವಹಿಸಿದ್ದಾರೆ. ಈ ವಿವಾಹಕ್ಕೆ ಅಜಮಾಸು ೩೫ ರೂಪಾಯಿ ಗಳಷ್ಟು ಖರ್ಚು ಬರುವದು. ಈ ಸಂಸ್ಥೆಯವರು ಕೈಕೊಂಡ ವಿವಾಹದ ನವಯೋಜನೆಯ ಲಾಭವನ್ನು ಎಲ್ಲ ವೀರಶೈವ ಬಂಧುಗಳು ಹೊಂದಬೇಕೆಂದು ವಿಜ್ಞಾಪನೆ.

ಲಗ್ನ ಆಗತಕ್ಕವರು ಕೆಳಗಿನ ನಿಯಮಗಳನ್ನು ಪಾಲಿಸತಕ್ಕದ್ದು.

(೧) ವಧೂವರರ ಕೊಡತಕ್ಕೊಳ್ಳುವ ಕರಾರುಗಳನ್ನು ತಾವೇ ಮುಗಿಸಿಕೊಂಡು ಬರಬೇಕು.

(೨) ವರ ಕನ್ನೆಯರ ಬಳಗದವರು ಕೂಡಿ ೧೫ ಜನರಿಕ್ಕಿಂತ ಹೆಚ್ಚಿಗೆ ಬರಕೂಡದು. ಹೆಚ್ಚಿಗೆ ಬಂದಲ್ಲಿ ಆ ಬಗ್ಗೆ ಹೆಚ್ಚಿನ ಖರ್ಚು ಕೊಡಬೇಕಾಗುವದು.

(೩) ಕಾಯಿದೆ ಮತ್ತು ಶಾಸ್ತ್ರಕ್ಕೆ ಅನುಗುಣವಾಗಿ ವಧುವಿಗೆ ೧೪ ವರ್ಷ ವರನಿಗೆ ೧೮ ವರ್ಷ ಮುಕ್ಕಿದವರಿರಬೇಕು.

(೪) ವೀರಶೈವ ಕೆಲವು ಒಳಪಂಗಡದವರಲ್ಲಿ ಅಂದರೆ ಪುನರ್ವಿವಾಹ (ಉಡಕಿ) ಆಗದೇ ಇದ್ದವರಲ್ಲಿ ಅವರಿಗೆ ಬಡತನದ ಮೂಲಕ ಕನ್ಯಾ ಸಿಗದೇ ಇರೋಣದರಿಂದ ಅವಿವಾಹಿತವಾಗಿ ಜನ್ಮ ಕಳೆಯಬೇಕಾಗುತ್ತದೆ ಅಂಥವರು ವೀರಶೈವರಲ್ಲಿ ಯಾವದೇ ಒಳಪಂಗಡದವರ ಕೂಡ ಲಗ್ನವಾಗಲು ಸಿದ್ಧವಿದ್ದರೆ ಅಥವಾ ವೀರಶೈವರಲ್ಲಿ ಕನ್ಯಾ ಯಾವದೇ ಒಳಪಂಗಡದವರಲ್ಲಿ ಸಿಗದೇ ಇದ್ದ ಪಕ್ಷಕ್ಕೆ ವೀರಶೈವೇತರ (ಅಲಿಂಗಿಯ) ಹಿಂದು ಕನ್ನೆಯು ಲಗ್ನವಾಗಲು ಒಪ್ಪುತ್ತಿದ್ದರೆ ಅಂಥ ಕನ್ನೆಯನ್ನು ವೀರಶೈವ ಧರ್ಮ ದೀಕ್ಷೆ ಕೊಟ್ಟು ಶಿವಾಚಾರ ಸಂಪನ್ನರಾಗಿ ಮಾಡಿ ವಿವಾಹವನ್ನು ನೆರವೇರಿಸುವದರಲ್ಲಿ ಬರುವದು.

(೫) ಯಾರಾದರೂ ಬಹು ಜನರಿಗೆ ಭೋಜನವನ್ನು ಕೊಡಲಪೇಕ್ಷಿಸುವವರು ೨ ದಿವಸ ಮುಂಚಿತವಾಗಿ ಜನರ ಸಂಖ್ಯೆಯನ್ನು ತಿಳಿಸಿದಲ್ಲಿ ಖರ್ಚು ತಗೊಂಡು ವ್ಯವಸ್ಥೆ ಮಾಡುತ್ತದೆ. ಮಾತ್ರ ಊಟಕ್ಕೆ ಹೇಳುವದು ಕರೆಯುವದು ಅವರೇ ಮಾಡತಕ್ಕದ್ದು.

(೬) ಈ ಬಗ್ಗೆ ವಿಶೇಷ ಮಾಹಿತಿ ಬೇಕಾದಲ್ಲಿ ಸಂಸ್ಥೆಯ ಸೆಕ್ರೆಟರಿಯವರಿಗೆ ಕೇಳಬಹುದು.

ಸೆಕ್ರೆಟರಿ

ಶ್ರೀ ಸಿದ್ಧೇಶ್ವರ ಸಂಸ್ಥೆ ವಿಜಾಪುರ.



ತಾ. ಶ. ೧೮೫೮ ನೆಯ ಫಾಲ್ಗುಣ ಬ|| ೨ ಸೋಮವಾರ.

ಹೊಸ ಶಾಸನದ ಸ್ವಾಗತ ಹೇಗೆ ?

ಈಗಿನ ಮ್ಯಾಂಟಿಗೊ-ಚೇಮ್ಸಫರ್ಡ ಸುಧಾರಣೆಯ ಶಾಸನವು ಇದೇ ತಿಂಗಳು ೩೧ ನೆಯ ತಾರೀಖಿನ ಮಧ್ಯ ರಾತ್ರಿಗೆ ಲಯವಾಗುತ್ತದೆ. ೧೯೩೫ ನೆಯ ಇಸವಿ "ಇಂಡಿಯಾ ಆಕ್ಟ" ಆಗಲೇ ಉದಯವಾಗಿ ಎಪ್ರಿಲ್ ೧ ನೆಯ ತಾರೀಖಿನಿಂದ ಬ್ರಿಟಿಶ್ ಇಂಡಿಯಾದಲ್ಲಿ ಆಚರಣೆಗೆ ಬರುತ್ತದೆ. ಈ ಪ್ರಕಾರ ಬ್ರಿಟಿಶ್ ಇಂಡಿಯಾದಲ್ಲಿ ಮಹತ್ತರವಾದ ರಾಜಕೀಯ ಸ್ಥಿತ್ಯಂತರವಾಗುವುದು ತುಂಬಾ ಲಕ್ಷಿಸಲ್ಪಡಬೇಕಾದ ಸಂಗತಿಯೇನೋ ನಿಜ. ಆದರೆ ಅದನ್ನು ಸಂತೋಷ ಹೃದಯದಿಂದ ಭಾರತೀಯರು ಬರಮಾಡಿಕೊಳ್ಳುವರೇ ? ಅಥವಾ ಇದೆಂತಹ ಶಾಸನ ಬಂದಿತಲ್ಲಾ ! ಎಂದು ವಿಷಾದಪಡುವರೇ ?

ಹೊಸ ಶಾಸನದಂತೆ ಹಿಂದುಸ್ಥಾನದಲ್ಲಿ ಹನ್ನೊಂದು ಪ್ರಾಂತಗಳಷ್ಟೆ. ಇವುಗಳಲ್ಲಿ ಆರು ಪ್ರಾಂತಗಳು ಕಾಂಗ್ರೆಸ್ಸಿನ ಬಹುಮತಕ್ಕೆ ಒಳಪಟ್ಟಿವೆಯೆಂಬುದು ಸರ್ವಶ್ರುತ. ಎಂದಮೇಲೆ ಹಿಂದುಸ್ಥಾನದ ಬಹು ಭಾಗವು ಕಾಂಗ್ರೆಸ್ಸಿನ ಅಭಿಪ್ರಾಯಕ್ಕೊಳಪಟ್ಟದ್ದಾಗಿದೆಯೆಂಬುದನ್ನು ಸರಕಾರವು ಕೂಡಾ ಒಪ್ಪಿಕೊಳ್ಳಲೇಬೇಕಾಯಿತಷ್ಟೆ. ಈ ಹೊಸ ಶಾಸನವನ್ನು ಕಾಂಗ್ರೆಸ್ಸು ಯಾವ ರೀತಿಯಲ್ಲಿ ಬರಮಾಡಿಕೊಳ್ಳುತ್ತದೆಯೋ ಅದೇ ಪ್ರಕಾರ ಹಿಂದುಸ್ಥಾನವೇ ಸ್ವಾಗತಿಸಿತೆಂದು ಬಹುಮತದ ಸಿದ್ಧಾಂತದಂತೆ ಹೇಳಲು ಅಭ್ಯಂತರವೇನಿದೆ ?

ಕಾಂಗ್ರೆಸ್ ಪಕ್ಷವಾದರೋ ಎಪ್ರಿಲ್ ೧ ನೆಯ ತಾರೀಖಿನ ದಿವಸ ಹರತಾಳವನ್ನು ಆಚರಿಸಬೇಕಾಗಿ ನಿರ್ಧರಿಸಿದೆ ಅದೇ ಪ್ರಕಾರ ದೇಶದ ಎಲ್ಲ ಭಾಗಗಳಲ್ಲಿಯೂ ಆ ದಿನ ಹರತಾಳವನ್ನು ಆಚರಿಸುವರು. ಈ ಹರತಾಳದ ಪದ್ಧತಿಯನ್ನು ಪ್ರಚಾರದಲ್ಲಿ ತಂದವರು ಮಹಾತ್ಮಾ ಗಾಂಧಿಯವರಷ್ಟೆ. ಇವರು ತಾ. ೨೦-೩-೧೯೨೧ ನೆಯ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಹರತಾಳವನ್ನು ಬೋಧಿಸುವಾಗ "ನಮಗಾದ ವಿಷಾದವನ್ನು ಶಾಂತ ರೀತಿಯಲ್ಲಿ ತೋರಿಸುವ ಇದೊಂದು ರೀತಿ" ಎಂದೇ ಹೇಳಿದ್ದಾರೆ. ಆದ ಕಾರಣ ನಾಳಿನ ಈ ಹರತಾಳವು ಶೋಕಸೂಚಕವಾದುದೇ ಆಗಿದೆ.

ಹಿಂದುಸ್ಥಾನದಲ್ಲಿ ಕಾಂಗ್ರೆಸ್ಸಿನ ವಿನಾ ಇನ್ನೊಂದು ಪ್ರಮುಖ ಪಕ್ಷವೂ ಇದೆ. ಅದೇ ಮುಸಲ್ಮಾನ್ ಪಕ್ಷ. ಕಾಂಗ್ರೆಸ್ಸಿನ ಬಹುಮತವಿಲ್ಲದ ೫ ಪ್ರಾಂತಗಳಲ್ಲಿ ೪ ಪ್ರಾಂತಗಳು ಮುಸಲ್ಮಾನರ ಬಹುಮತಕ್ಕೊಳಪಟ್ಟಿವೆ. ಮುಸಲ್ಮಾನರಾದರೋ ಹರತಾಳವನ್ನು ಆಚರಿಸಕೂಡದಾಗಿಯೇ ಗೊತ್ತುಮಾಡಿದ್ದಾರೆ. ಎಂದ ಮೇಲೆ ಅವರಿಗೆ ಈ ಶಾಸನವು ಕಾಂಗ್ರೆಸ್ಸಿನವರಂತೆ ವಿಷಾದಕರವಾಗಿಲ್ಲವೆಂಬುದು ಸ್ಪಷ್ಟವಷ್ಟೆ.

ಮುಸಲ್ಮಾನರಿಗೆ ಮೊದಲು ಬೇಕಾದುದು ಪ್ರಾಂತಿಕ ಪ್ರಭುತ್ವ, ಅದರಲ್ಲಿ ಜಾತಿ ವಿಶಿಷ್ಟವಾದ ತಮ್ಮ ಹೆಚ್ಚಳಕ್ಕೆ ಅನುಕೂಲವಿದ್ದ ರೀತಿಗಳು. ಅವು ಈ ಹೊಸ ಶಾಸನದಲ್ಲಿ ಅವರ ಇಷ್ಟದಂತೆ ದೊರೆತಿವೆ. ಎಂದಮೇಲೆ ಅವರೇಕೆ ಈ ಶಾಸನದಿಂದ ಅಷ್ಟು ವಿಷಾದಿಸುವರು ? ಇವರಿಗೆ ಬೇಡವಾಗಿದ್ದ 'ಫೆಡರಲ್' ಶಾಸನಕ್ರಮವೂ ಇದೇ ಹೊಸ ಸುಧಾರಣೆಯಲ್ಲಿರುವುದರಿಂದ ಇವರು ಮೆರವಣಿಗೆಯ ಮೂಲಕ ಹೊಸ ಶಾಸನವನ್ನು ಬರಮಾಡಿಕೊಳ್ಳುವಂತೆಯೂ ಇಲ್ಲ.

ಭಾರತಮಾತೆಯು ಬಲಗೈಯಲ್ಲಿ ಕರಿ ನಿಶಾನೆಯನ್ನು ಮತ್ತು ಎಡಗೈ ಮುಷ್ಟಿಯಲ್ಲಿ ಗುಲಾಬಿ ಹೂವನ್ನು ಹಿಡಿದುಕೊಂಡು ಎಪ್ರಿಲ್ ೧ ನೆಯ ತಾರೀಖಿನ ದಿನ ಈ ಹೊಸಶಾಸನವನ್ನು ಸ್ವಾಗತಿಸುವ ದೃಶ್ಯವು ವಿಚಿತ್ರವೂ ವಿಷಾದಕರವೂ ಆಗಿದೆಯಲ್ಲವೆ ?

ಗವ್ಹರ್ನರರ ಸಂಗಡ ಸಂಭಾಷಣೆ.

ಅಭಿವಚನ ಕೊಡುವುದು ಅಶಕ್ಯವೆ ?

ಅಭಿವಚನ ಬೇಕಾದರೆ ಕಾರ್ಯಕ್ರಮವೂ ಬೇಕು !

ಸಂಯುಕ್ತ ಪ್ರಾಂತ.

ತಾ. ೨೪ ನೆಯ ದಿವಸ ಸಂಯುಕ್ತ ಪ್ರಾಂತದ ಗವ್ಹರ್ನರರಾದ ಸರ್. ಹೆಗ್‌ರವರು ಆ ಪ್ರಾಂತದ ಅಸೆಂಬ್ಲಿ ಕಾಂಗ್ರೆಸ್ ಪ್ರಮುಖರಾದ ಶ್ರೀ. ಗೋವಿಂದ ವಲ್ಲಭ ಪಂತರನ್ನು ಲಖನೌ ಪಟ್ಟಣದಲ್ಲಿ ಸಂಭಾಷಣೆಗಾಗಿ ಕರೆಯಿಸಿದರು. ಶ್ರೀ. ಪಂತರು ಖಾದಿ ಉಡುಪಿನಲ್ಲಿಯೇ ರಾಷ್ಟ್ರೀಯ ಧ್ವಜವುಳ್ಳ ಮೋಟಾರಿನಲ್ಲಿ ಕುಳಿತುಕೊಂಡು ಗವ್ಹರ್ನರರ ಕಡೆಗೆ ಹೋದರು

ಈ ಸಂಭಾಷಣೆಯ ಕಾಲದಲ್ಲಿ ಬೇರೆ ಯಾರೂ ಇರಲಿಲ್ಲ. ಸಂಭಾಷಣೆಯಲ್ಲಿ ನಡೆದ ವಿಚಾರಗಳು ಗುಪ್ತವಾಗಿಯೇ ಇಡಲ್ಪಟ್ಟಿವೆ. ಆದರೂ ಕಾಂಗ್ರೆಸ್ಸಿನ ಠರಾವನ್ನು ಪಂತರು ಗವ್ಹರ್ನರರಿಗೆ ತಿಳಿಸಿದರೆಂದು ಆವಿಧವಾಗಿ ಅಭಿವಚನ ಕೊಡಲು ಬರುವುದಿಲ್ಲವಾಗಿ ಗವ್ಹರ್ನರರು ತಿಳಿಸಿದರೆಂಬುದಾಗಿಯೂ ಊಹಿಸಲ್ಪಟ್ಟಿದೆ. ೨೯ ನೆಯ ತಾರೀಖಿನ ದಿವಸ ಪುನಃ ಉಭಯರ ಸಂಭಾಷಣೆ ಜರುಗುವುದಿದೆ.

ಈ ಸಂಬಂಧವಾಗಿ ಸಂಯುಕ್ತ ಪ್ರಾಂತದ ಸರಕಾರವು ಒಂದು ಪ್ರಕಟನೆಯನ್ನು ಹೊರಡಿಸಿ ಶ್ರೀ. ಪಂತರೊಂದಿಗೆ ಸಂಭಾಷಣೆ

ನಡೆಯಿತೆಂತಲೂ ಇನ್ನೂ ಯಾವ ನಿರ್ಣಯವೂ ಆಗದೆ ಪುನಃ ಸಂಭಾಷಣೆ ಜರುಗತಕ್ಕದ್ದಿದೆಯೆಂತಲೂ ತಿಳಿಸಲಾಗಿದೆ.

ಬಿಹಾರ ಪ್ರಾಂತ.

ಬಿಹಾರ ಪ್ರಾಂತದ ಗವ್ಹರ್ನರರಾದ ಸರ್. ಹೆಲೆಟ್‌ರವರು ಪಾಟಣಾದಲ್ಲಿ ತಾ. ೨೪ ನೆಯ ಸಾಯಂಕಾಲ ಆ ಪ್ರಾಂತದ ಅಸೆಂಬ್ಲಿ ಕಾಂಗ್ರೆಸ್ ಪ್ರಮುಖರಾದ ಶ್ರೀ. ಶ್ರೀಕೃಷ್ಣಸಿಂಹ ಇವರನ್ನು ಸಂಭಾಷಣೆಗೆ ಕರೆಯಿಸಿದ್ದರು. ಶ್ರೀ. ಸಿಂಹರವರು ಕಾಂಗ್ರೆಸ್ ನಿಶಾನೆಯುಳ್ಳ ಮೋಟಾರಿನಲ್ಲಿ ಕುಳಿತು ಗವ್ಹರ್ನರರ ಕಡೆಗೆ ಹೋಗಿ ೧॥ ತಾಸು ಮಾತನಾಡಿದರು. ಯಾವ ನಿರ್ಣಯವೂ ಆಗಲಿಲ್ಲ. ಸಂಭಾಷಣೆಯ ಸಂಗತಿಗಳು ಗುಪ್ತವಾಗಿಡಲ್ಪಟ್ಟಿವೆ.

ಮದ್ರಾಸ ಪ್ರಾಂತ.

ಮದ್ರಾಸಿನ ಗವ್ಹರ್ನರರಾದ ಲಾರ್ಡ ಅರ್ಸ್ಕಿನ್‌ರವರು ತಾ. ೨೫ನೆಯ ದಿವಸ ಮದ್ರಾಸ ಪ್ರಾಂತಿಕ ಅಸೆಂಬ್ಲಿ ಕಾಂಗ್ರೆಸ್ ಪ್ರಮುಖರಾದ ಶ್ರೀ. ರಾಜಗೋಪಾಲಾಚಾರ್ಯರನ್ನು ಬರಮಾಡಿಕೊಂಡಿದ್ದರು. ಶ್ರೀ. ಆಚಾರ್ಯರು ತಲೆಯ ಮೇಲೆ ಏನನ್ನೂ ಹಾಕಿಕೊಳ್ಳದೆ ತಮ್ಮ ಪದ್ಧತಿ ಖಾದಿ ಉಡುಪಿನಿಂದಲೇ ಗವ್ಹರ್ನರರನ್ನು ಕಾಣಲು ಹೋದರು. ಮು ಕ್ಕಾಲು ತಾಸಿನವರೆಗೆ ಸಂಭಾಷಣೆ ಜರುಗಿತು. ಆ ಮೇಲೆ ಸಾಯಂಕಾಲ ಮತ್ತೆ ಮಾತನಾಡಿದರು.

ಶ್ರೀ. ಆಚಾರ್ಯರ ಮತ್ತು ಗವ್ಹರ್ನರರ ಸಂಭಾಷಣೆ ಗುಪ್ತವಾಗಿಡಲ್ಪಟ್ಟಿದೆ. ಸಂಭಾಷಣೆ ನಡೆಯಿತೆಂತಲೂ ಇನ್ನೂ ಯಾವ ನಿರ್ಣಯವೂ ಆಗಿಲ್ಲವೆಂತಲೂ ಪುನಃ ಸಂಭಾಷಣೆ ಜರುಗುವುದೆಂತಲೂ ಸರಕಾರದಿಂದ ಪ್ರಕಟಿಸಲ್ಪಟ್ಟಿದೆ. ಕಾಂಗ್ರೆಸ್ಸಿನ ಠರಾವನ್ನು ಆಚಾರ್ಯರು ತಿಳಿಸಿ ಅದರ ಸ್ಪಷ್ಟೀಕರಣ ಮಾಡಿರಬಹುದು.

ಓರಿಸಾ ಮತ್ತು ಮಧ್ಯಪ್ರಾಂತ.

ಓರಿಸಾ ಪ್ರಾಂತದ ಗವ್ಹರ್ನರರು ಆ ಪ್ರಾಂತಿಕ ಅಸೆಂಬ್ಲಿ ಕಾಂಗ್ರೆಸ್ ಪಕ್ಷದ ಪ್ರಮುಖರಾದ ಶ್ರೀ. ವಿಶ್ವನಾಥದಾಸರನ್ನು ತಾ. ೨೫ ನೆಯ ದಿವಸ ಕರೆಯಿಸಿ ಸಾಧಾರಣ ಅರ್ಧತಾಸು ಮಾತನಾಡಿದರು.

ಮಧ್ಯಪ್ರಾಂತದ ಗವ್ಹರ್ನರರೂ ಆ ಪ್ರಾಂತದ ಕಾಂಗ್ರೆಸ್ ಪ್ರಮುಖರಾದ ಡಾ. ಖರೆಯವರೂ ತಾ. ೨೬ ನೆಯ ದಿವಸ ಮಾತನಾಡಿದರು. ಕಾಂಗ್ರೆಸ್ ಬಹುಮತಹೊಂದಿರುವ ಆರು ಪ್ರಾಂತಗಳಲ್ಲಿಯೂ ಪ್ರಾಥಮಿಕ ಸಂಭಾಷಣೆಯೇನೋ ಮುಗಿದಿದೆ. ಎಲ್ಲವೂ ಒಂದೇ ರೀತಿಯಾಗಿವೆ. ಅದುದರಿಂದ ಉತ್ತರಗಳು ಕೂಡಾ ಒಂದೇ ರೀತಿಯಲ್ಲಿ ಬರುವವೆಂದು ತಿಳಿಯಲು ಅಭ್ಯಂತರವಿಲ್ಲ.

ಮುಂಬೈ ಪ್ರಾಂತ.

ಮುಂಬೈ ಗವ್ಹರ್ನರರಾದ ಲಾರ್ಡ ಬ್ರೆಬರ್ನರವರು ಮುಂಬೈ ಪ್ರಾಂತಿಕ ಅಸೆಂಬ್ಲಿ ಕಾಂಗ್ರೆಸ್ ಪಕ್ಷದ ಪ್ರಮುಖರಾದ ಶ್ರೀ. ಖೇರ ಇವರನ್ನು ತಾ. ೨೫ ನೆಯ ಸಾಯಂಕಾಲ ಸಂಭಾಷಣೆಗೆ ಕರೆಯಿಸಿದ್ದರು. ಶ್ರೀ. ಖೇರ ಇವರು ಗವ್ಹರ್ನರರ ಕಡೆ ಹೋಗುವ ಮುಂಚೆ ಮತ್ತು ಹೋಗಿಬಂದ ಮೇಲೆ ಸರದಾರ ವಲ್ಲಭಭಾಯಿಯವರ ಸಂಗಡ ಮಾತನಾಡಿದರು.

ಗವ್ಹರ್ನರರ ಸಂಗಡ ಸಾಧಾರಣ ಒಂದು ತಾಸು ಸಂಭಾಷಣೆ ಜರುಗಿತು. ಈ ಸಂಭಾಷಣೆ ಗುಪ್ತವಾಗಿದ್ದರೂ ಶ್ರೀ. ಖೇರರು ಕಾಂಗ್ರೆಸ್ಸಿನ ಠರಾವನ್ನು ಗವ್ಹರ್ನರರಿಗೆ ತಿಳಿಸಿದರೆಂತಲೂ ಹಾಗೆ ಅಭಿವಚನಕೊಡಲು ಅಡ್ಡಿಗಳಿರುವುದರಿಂದ ಶಕ್ಯವಿಲ್ಲವೆಂದು ಗವ್ಹರ್ನರರು ಹೇಳಿದರೆಂತಲೂ ತಿಳಿದಿದೆ. ಈ ವಿಚಾರವಾಗಿ ಪುನಃ ಸಂಭಾಷಣೆ ಜರುಗುವುದಿದೆ. ಎಲ್ಲ ಪ್ರಾಂತಗಳಲ್ಲಿಯೂ ಈ ಮೊದಲನೆಯ ಸಾರಿಯ ಸಂಭಾಷಣೆಯು ಒಂದೇ ತರದಲ್ಲಿ ಜರುಗಿತೆಂದು ಹೇಳಬಹುದು.

ವಿಚಾರ ವಿನಿಮಯ.

ಎಲ್ಲ ಗವ್ಹರ್ನರರೂ ಕಾಂಗ್ರೆಸ್ ಮುಖಂಡರ ಅಭಿಪ್ರಾಯವನ್ನು ತಿಳಿದುಕೊಂಡು ವ್ಹಾಯಿಸ್‌ರಾಯರ ಸಂಗಡ ವಿಚಾರ ವಿನಿಮಯ ನಡೆಯಿಸಿದಂತೆ ತೋರುತ್ತದೆ. ವ್ಹಾಯಿಸ್‌ರಾಯರಿಗೂ ಭಾರತ ಮಂತ್ರಿಗಳಿಗೂ ಈ ಸಂಬಂಧವಾಗಿ ಸಂಭಾಷಣೆ ಜರುಗುತ್ತಿದ್ದಂತೆಯೂ ಕಾಣುತ್ತದೆ.

ಆಯಾಯ ಪ್ರಾಂತಿಕ ಕಾಂಗ್ರೆಸ್ ಅಸೆಂಬ್ಲಿ ಮುಂದಾಳುಗಳು ಕಾಂಗ್ರೆಸ್ಸಿನ ಅಧ್ಯಕ್ಷರಾದ ಪಂಡಿತ ಜವಾಹರಲಾಲರ ಸಂಗಡ ವಿಚಾರ ವಿನಿಮಯ ನಡೆಸಿದ್ದಾರೆ. ಈ ದಿವಸ ಪುನಃ ಈ ವಿಚಾರವಾಗಿ ಸಂಭಾಷಣೆ ಜರುಗಬಹುದು.

ಗವ್ಹರ್ನರರ ಅಭಿಪ್ರಾಯವೇನು ?

ಸಂಯುಕ್ತ ಪ್ರಾಂತದ ಗವ್ಹರ್ನರರು ಶ್ರೀ. ಗೋವಿಂದ ವಲ್ಲಭ ಪಂತರಿಗೆ ಹೀಗೆ ತಿಳಿಸಿದರೆಂದು ಗೊತ್ತಾಗಿದೆ—

“ಕಾಂಗ್ರೆಸ್ ಪಕ್ಷದ ಧೋರಣ ಮತ್ತು ಕಾರ್ಯಕ್ರಮಗಳನ್ನು ತಿಳಿಸಿದರೆ ಅಭಿವಚನವನ್ನು ಕೊಡಲು ಬರುತ್ತದೆಯೋ ಇಲ್ಲವೋ ಎಂಬುದನ್ನು ಹೇಳಲಿಕ್ಕೆ ಸಾಧ್ಯ. ಕಾಂಗ್ರೆಸ್ ಪಕ್ಷವು ಭೂ ಕಂದಾಯವನ್ನು ಎಷ್ಟು ಕಡಿಮೆಮಾಡುವುದೆಂಬುದು ನಮಗೆ ಗೊತ್ತಾದರೆ ಅದನ್ನು ಒಪ್ಪಲು ಶಕ್ಯವೋ ? ಅಶಕ್ಯವೋ ? ಎಂಬುದನ್ನು ಹೇಳಬಹುದು. ಗವ್ಹರ್ನರರು ಈಗ ಬರುವ ಶಾಸನದ ಸೀಮೆಯನ್ನೇನೂ ಮೀರಿಹೋಗುವುದಿಲ್ಲ.

ಮಂತ್ರಿಗಳು ಕೊಡುವ ಸಲಹೆಯು ಅಲ್ಪ ಸಂಖ್ಯಾಕರ ಹಿತಕ್ಕೆ ಮತ್ತು ಹೊಸ ಶಾಸನದ ೫೨ ನೆಯ ನಿಯಮಕ್ಕೆ ಬಾಧಕವಾಗದಂತೆ ಇದ್ದರೆ ಗವ್ಹರ್ನರರು ಅದಕ್ಕೆ ಒಪ್ಪುವರು.”

ಮುಂಬೈ ಗವ್ಹರ್ನರರು ಕೂಡಾ ಕಾಂಗ್ರೆಸ್ಸಿನವರು ತಮ್ಮ ಕಾರ್ಯಕ್ರಮಗಳನ್ನು ಪ್ರಕಟಿಸಿದರೆ ಅಭಿವಚನಕೊಡುವ ವಿಚಾರದಲ್ಲಿ ತಿಳಿಸಲು ಅನುಕೂಲವಾಗುವುದೆಂದು ತಿಳಿಸಿದರು.

ಹೊಸ ಶಾಸನವನ್ನು ನಾಶಗೊಳಿಸುವುದೇ ಕಾಂಗ್ರೆಸ್ಸಿನ ಉದ್ದೇಶವಿದ್ದರೆ ಅದಕ್ಕೆ ಅನುಗುಣವಾದ ಕಾರ್ಯಕ್ರಮಗಳನ್ನು ಮುಂದೆ ಮಾಡಬಹುದು. ಅವುಗಳನ್ನು ಯಾವ ಗವ್ಹರ್ನರರೂ ಒಪ್ಪದಿರುವುದು ಸ್ವಾಭಾವಿಕ. ಗವ್ಹರ್ನರರಾದರೂ ಹೊಸ ಶಾಸನಕ್ಕೂ ಮೇಲಾಧಿಕಾರಿಗಳ ಅಪ್ಪಣೆಗೂ ಒಳಪಟ್ಟೇ ರಾಜ್ಯ ಭಾರವನ್ನು ನಡೆಸಬೇಕಾಗುತ್ತದಷ್ಟೆ.

ಎಂದಮೇಲೆ ಸಂದಿಗ್ಧವಾಗಿ ಯಾವ ಸಂಗತಿಯೂ ಇರಕೂಡದು. ಹಾಗಾದರೇನೇ ಅಭಿವಚನದ ವಿಷಯವಾಗಿ ಪ್ರಸ್ತಾಪಿಸಲಿಕ್ಕೂ ಕೊಡಲ್ಪಟ್ಟ ಅಭಿವಚನವನ್ನು ಪೂರ್ತಿಗೊಳಿಸಲಿಕ್ಕೂ ಶಕ್ಯ. ಎಲ್ಲ ಪ್ರಾಂತಗಳ ಗವ್ಹರ್ನರರೂ ಪ್ರಾಯಶಃ ಇದೇ ಅಭಿಪ್ರಾಯವನ್ನು ತಿಳಿಸಿದಂತೆ ತೋರುತ್ತದೆ.

—ಅಮೇರಿಕೆಯ ವೇಟರ್ನ್ ಬರ್ಗ ಎಂಬ ಪಟ್ಟಣದ ಹತ್ತಿರ ಪ್ರಯಾಣಿಕರ ಒಂದು ದೊಡ್ಡ ವಿಮಾನು ಕೆಳಗೆ ಬಿದ್ದು ೧೦ ಪ್ರವಾಸಿಕರು ೨ ವೈಮಾನಿಕರು ಒಬ್ಬ ಕೆಲಸಗಾರ ಈ ಪ್ರಕಾರ ೧೩ ಜನರು ಮೃತಪಟ್ಟರು.

—ಮೋಸದ ನಾಣ್ಯಗಳನ್ನು ಮಾಡುವವರ ಒಂದು ಗುಂಪು ಇದ್ದುದು ಲಖನೌ ಪಟ್ಟಣದಲ್ಲಿ ಗೊತ್ತಾಗಿದೆ. ಅವರಲ್ಲಿ ೫ ಜನರನ್ನು ಹಿಡಿದಿದ್ದಾರೆ. ಅವರು ಈ ವರೆಗೆ ೫೦ ಸಾವಿರ ನಾಣ್ಯಗಳನ್ನು ಚಲಾವಣೆ ಮಾಡಿದ್ದಾರಾಗಿ ತಿಳಿದಿದೆ.

—ಸುಪ್ರಸಿದ್ಧ ಆಂಗ್ಲ ಕವಿಗಳಾದ ಮಿ. ಡ್ರಿಂಕ್‌ವಾಟರ ಇವರು ತಾ. ೨೫ ನೆಯ ಬೆಳಗಿನ ೩ ಗಂಟೆ ಸಮಯದಲ್ಲಿ ನಿದ್ರಾವಸ್ಥೆಯಲ್ಲಿಯೇ ಮೃತಪಟ್ಟರು ! ಇವರಿಗೆ ೫೪ ವರ್ಷಗಳಾಗಿದ್ದವು.

ಹುಬ್ಬಳ್ಳಿ ವೀರಶೈವ ಸಂಯುಕ್ತ ಸಂಘದ ಪ್ರಚಾರ ಕಾರ್ಯ.

ತೋಳಹುಣಸಿ: ಬಸವೇಶ್ವರ ಭಜನಾ ಸಂಘದ ತರುಣರನ್ನು ಕೂಡಿಸಿ ಬಸವ ಜಯಂತಿಯನ್ನು ಹೇಗೆ ಆಚರಿಸಬೇಕೆಂಬ ಬಗ್ಗೆ ಹೇಳಲಾಯಿತು. ಭಜನಾ ಪದ್ಧತಿಯನ್ನು ತಿಳಿಸಲಾಯಿತು. ಸಂಘಕ್ಕೆ ಒಂದು ವಾಚನಾಲಯವು ಅಗತ್ಯವೆಂದು ನಿರ್ಧರಿಸಿ ಸ್ಥಾಪಿಸಲ್ಪಟ್ಟಿತು. ಶಿವಪ್ಪ ಗುಡದೂರ-ಇವರು ಸಧ್ಯಕ್ಕೆ ಸ್ವಂತ ಖರ್ಚಿನಿಂದ “ ಶರಣ ಸಂದೇಶ ” ವಾರ ಪತ್ರಿಕೆಯನ್ನು ವಾಚನಾಲಯಕ್ಕೆ ತರಿಸಿಕೊಡುತ್ತೇವೆಂದು ಹೇಳಿದ್ದಾರೆ ಹನುಮಪ್ಪ ಗುಡದೂರ ಇವರೊಡನೆ ಶುದ್ಧಿ-ಸಂಘಟನೆಯ ಬಗ್ಗೆಯೂ ವಿಚಾರ ಮಾಡಲ್ಪಟ್ಟಿದೆ.

ದಾವಣಗೆರೆ: ವಿರಕ್ತಮಠದಲ್ಲಿ ಶ್ರೀ ನಿ ಪ್ರ. ಗುರುಶಾಂತಸ್ವಾಮಿಗಳೊಡನೆ ಅಸ್ಪೃಶ್ಯೋದ್ಧಾರ ಮತ್ತು ಶುದ್ಧಿ-ಸಂಘಟನೆಯ ಬಗ್ಗೆ ವಿಚಾರಿಸಲಾಗಿ ಸ್ವಾಮಿಗಳು ಈಗ ಅತ್ಯವಶ್ಯಕ ಮಾಡತಕ್ಕ ಕಾರ್ಯಗಳೇ ಅವು ಎಂದು ಸಮಾಜದ ಕಳಕಳಿಯಿಂದ ಮಾತನಾಡಿದರು ಅನುಕೂಲ ಪ್ರಸಂಗ ದೊರೆತಾಗ್ಗೆ ಧರ್ಮಪ್ರಚಾರ ಕಾರ್ಯದಲ್ಲಿ ತಾವೂ ನೆರವಾಗುತ್ತೇವೆಂದು ಹೇಳಿದ್ದಾರೆ.

ರಾಣೆಬೆನ್ನೂರ: ಶ್ರೀ. ಅನ್ನದಾನಪ್ಪ ಹೆಬಸೂರ-ಇವರೊಡನೆ ವೀ. ಹಡಪದ ಬಂಧುಗಳ ದೀಕ್ಷೆಯ ಬಗ್ಗೆ ವಿಚಾರಿಸಲಾಯಿತು. ೪-೫ ಗ್ರಾಮಗಳ ಬಂಧುಗಳು ಶಿವದೀಕ್ಷೆಯಿಂದ ಬಳಿಕೆಯಲ್ಲಿ ಬರಬೇಕೆಂಬುದಾಗಿಯೂ, ಆ ಎಲ್ಲ ಗ್ರಾಮಗಳಿಗೆ ಮುಂಚಿತವಾಗಿ ಧರ್ಮಜಾಗ್ರತಿಮಾಡಲು ಹೋಗಬೇಕೆಂಬದಾಗಿಯೂ ನಿರ್ಧರಿಸಲಾಯಿತು. ಅಥಣಿ ವಿ. ಹಡಪದ ಸಂಘ ಮತ್ತು ತುಮಕೂರ ಜಿಲ್ಲಾ ಹಡಪದ ಸಂಘ ಇವುಗಳೊಡನೆ ಸಹಕರಿಸಿ-ಕಾರ್ಯ ಸಾಗಿಸಬೇಕೆಂಬುದಾಗಿಯೂ, ಆ ಸಂಘದ ಕಾರ್ಯದರ್ಶಿಗಳೊಡನೆ ಪತ್ರವ್ಯವಹಾರ ನಡಿಸಬೇಕೆಂಬದಾಗಿಯೂ ನಿಶ್ಚಯಿಸಲ್ಪಟ್ಟು ಪತ್ರವ್ಯವಹಾರ ಮಾಡಲ್ಪಟ್ಟಿತು. ವೀರಶೈವ ನಯನಜ ಶೀಲವಂತರ ಹಿತಚಿಂತಕ ಸಂಘದ ವಿಚಾರ ದರ್ಪಣ ಎಂಬ ಪುಸ್ತಕಗಳನ್ನು ೮-೧೦ ಕಡೆಗೆ ಪ್ರಚಾರ ಮಾಡಲ್ಪಟ್ಟಿದೆ. ಶ್ರೀ. ಅನ್ನದಾನಪ್ಪನವರು “ ಶರಣ ಸಂದೇಶ ” ಮತ್ತು “ ಶಿವಾನುಭವ ” ಮತ್ತು “ ತರುಣ ಕರ್ನಾಟಕ ” ಪತ್ರಿಕೆಗಳನ್ನು ತರಿಸುತ್ತಿದ್ದಾರೆ. ಕೋರಿ ಕಾಗದದ ಮೇಲೆ ಬರೆದ “ ನಯನಜ ಪುರಾಣ ” ಎಂಬ ಹಳೆಗ್ರಂಥವನ್ನು ಸಂಗ್ರಹಿಸಿದ್ದಾರೆ. ಧರ್ಮ ಜಾಗ್ರತಿಯ ಬಗ್ಗೆ ಲೇಖನಗಳನ್ನು ಆಗಾಗ್ಗೆ ಬರೆಯುತ್ತಿದ್ದಾರೆ. ಹೋದಲ್ಲೆಲ್ಲಾ ಶಕ್ಯವಿದ್ದಷ್ಟು ಪ್ರಚಾರ ಮಾಡಿದ್ದಾರೆ.

ಹುಬ್ಬಳ್ಳಿ: ನಮ್ಮ ಬಿನ್ನಹವನ್ನು ಮನ್ನಿಸಿ ಶ್ರೀ. ಟೊಪಿಗಿ ಸಂಗನಬಸವಪ್ಪನವರು ಹುಬ್ಬಳ್ಳಿಯಿಂದ ಹಿರೇಕೆರೂರಿಗೆ ಹೋದಾಗ್ಗೆ ಅಲ್ಲಿ ದಿನಾಲು ಗಂಡು ಹುಡುಗರಿಗೂ, ಹೆಣ್ಣುಮಕ್ಕಳಿಗೂ ಪ್ರವಚನ ನಡೆಸಿದ್ದಾರೆ. ಹೆಂಣುಮಕ್ಕಳಲ್ಲಿ ಚೆನ್ನಾಗಿ ಜಾಗ್ರತಿಯಾಗುವ ಲಕ್ಷಣಗಳು ತೋರುತ್ತಿವೆ. ಶ್ರೀ. ಸಂಗನಬಸವಪ್ಪನವರ ಸ್ವಾರ್ಥತ್ಯಾಗವನ್ನು ನೋಡಿ ಶ್ರೀ. ಪುಟ್ಟಪ್ಪ ಹಳಕಟ್ಟಿ ಇವರು ಸಕ್ರಿಯ ಸಹಾನುಭೂತಿಯನ್ನು ತೋರಿಸುತ್ತಿದ್ದಾರೆ. “ ವೀರವಾಣಿ ” ಮಾಸಪತ್ರಿಕೆಯ ಸಂಪಾದಕರು ತಮ್ಮ (೧೨ ಸಂಚಿಕೆಗಳನ್ನು) ಉಚಿತವಾಗಿ ಕೊಟ್ಟಿದ್ದಾರೆ. ಶ್ರೀ. ಅನ್ನದಾನಪ್ಪ ಹಳಕಟ್ಟಿ-ಇವರು ಪ್ರವಚನಕ್ಕೆ ತಕ್ಕ ಗ್ರಂಥಗಳನ್ನೂ, ಸ್ಥಳವನ್ನೂ ಅನುಕೂಲಪಡಿಸಿ ಕೊಟ್ಟಿದ್ದಾರೆ.

ಹಾವೇರಿ: ಶ್ರೀಮನ್ನಿರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾ ಸನ್ನಿಧಿಯಲ್ಲಿ ಬಸವರಾಜ ಪತ್ರಿಕೆಯ ಸಂಪಾದಕರೂ ನಾನೂ ಹೋಗಿದ್ದೆವು. ಮಹಾ ಸ್ವಾಮಿಗಳು ಸಮಾಜ ಸುಧಾರಕರು ಗಮನಿಸತಕ್ಕ ಕೆಲವು ವಿಚಾರಗಳನ್ನು ಅಪ್ಪಣೆ ಕೊಡಿಸಿದರು. ಹಿಂದು ಸಮಾಜ ಸುಧಾರಕರು ಮುಖ್ಯವಾಗಿ ವೀರಶೈವರು ಮಹಾ ಸ್ವಾಮಿಗಳ ಮಹತ್ಕಾರ್ಯಗಳ ಪ್ರಯೋಜನವನ್ನು ಹೊಂದಬೇಕಾಗಿ ಕೋರುತ್ತೇನೆ.

ಬೆಂಗಳೂರ: ವೀರಶೈವ ಸಮಾಜ ಸೇವಾ ಸಂಘದ ಕಾರ್ಯಕಾರೀ ಮಂಡಲದ ಸದಸ್ಯರೂ ಸಮಾಜ ಹಿತಚಿಂತಕರೂ ಆಗಿರುವ ಶ್ರೀ ಡಿ. ಎಸ್. ಚಂದ್ರಪ್ಪನವರು ಶ್ರೀ. ಜವಳಿ ಬಿ. ಎ. ಆನರ್ಸ್-ಈ ಮಹಾಶಯರ ಬಿನ್ನಹವನ್ನೂ ಮನ್ನಿಸಿ ಪ್ರಚಾರ ಕಾರ್ಯಕ್ಕೆ (೧೦) ರೂ. ಗಳನ್ನು ಸಹಾಯ ಮಾಡಿದ್ದಕ್ಕಾಗಿ ಅಭಿನಂದಿಸುತ್ತೇವೆ ಇದೇ ಪ್ರಕಾರ ಅಲ್ಲಲ್ಲಿಯ ವೀರಶೈವ ಸಮಾಜ ಪ್ರೇಮಿಗಳು ಸಹಾಯಮಾಡಬೇಕಾಗಿ ಕೋರುತ್ತೇವೆ.

ಅನ್ನದಾನೀಶ್ವರ ವಿರಕ್ತಮಠ.

ಕಲ್ಯಾಣ.

ಸೊಲ್ಲಾಪುರದ ಸುದರ್ಶನ ಪತ್ರಿಕಾ ಪ್ರತಿನಿಧಿಗಳಾದ ಆದವಾನಿ ಶ್ರೀ ಅಯ್ಯಪ್ಪ ಶಾಸ್ತ್ರಿಗಳು ವಚನ ಶಾಸ್ತ್ರ ವಿಶಾರದ ಇವರು ಈ ನಮ್ಮ ಹಿಂದಿರುವ ನೈಜಾಮು ಭಾಗದಲ್ಲಿ ಸಂಚರಿಸುತ್ತ ಧರ್ಮ ಜಾಗೃತಿಯನ್ನು ಮಾಡುತ್ತಿದ್ದಾರೆ. ಶ್ರೀ ಕ್ಷೇತ್ರ ಕಲ್ಯಾಣದ ವೀರಶೈವ ತರುಣಸಂಘದವರ ಪ್ರಾರ್ಥನೆ ಮೇರೆಗೆ ಗಾವಡ ಗ್ರಾಮದಿಂದ ಇಲ್ಲಿಗೆ ತಾ. ೧೨ ನೆಯ ದಿವಸ ಬಂದರು. ಇಲ್ಲಿ ಮೂರು ದಿವಸ ಶ್ರೀ ಬಸವೇಶ್ವರ ಮಠದಲ್ಲಿ ವೀರಶೈವ ಸಂಸ್ಕೃತಿ, ಪಂಚಾಚಾರ್ಯರ ಕಾಲ ನಿರ್ಣಯ, ವಚನ ಸಾಹಿತ್ಯ ಈ ವಿಷಯಗಳ ಮೇಲೆ ಮಹತ್ವದ ಪ್ರವಚನಗಳಾದವು. ೪೦೦-೫೦೦ ಜನರು ಪ್ರವಚನ ಶ್ರವಣಕ್ಕೆ ಬರುತ್ತಿದ್ದರು.

ಆರ್ಯ ಸಮಾಜದವರ ಅನೇಕ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕೊಟ್ಟರು ಇಷ್ಟಲಿಂಗದ ಅವಶ್ಯಕತೆ ಬಗ್ಗೆ ಮಹತ್ವದ ವ್ಯಾಖ್ಯಾನವಾಯಿತು. ಇಲ್ಲಿಯ ವಯೋವೃದ್ಧ ಶ್ರೀ. ಮರೆಪ್ಪನವರು ನಾವು ಎಂದೂ ಇಂಥ ಶಿವಾನುಭಾವಿಗಳ ಪ್ರವಚನ ಕೇಳಿಲ್ಲ. ಎಂದು ಹೇಳಿದರು.

ಶ್ರೀ. ವಿರೂಪಾಕ್ಷ ಪಟ್ಟದ್ದೇವರು.

ಹಾವು ಕಚ್ಚಿದರೆ ಹೆದರಬೇಡಿರಿ! ಚಡಚಣಕ್ಕೆ ಹೋಗಿರಿ.

ಚಡಚಣದಲ್ಲಿರುವ ಬಸವಂತಪ್ಪ ಚನಬಸಪ್ಪ ಬರಡೋಲ ಇವರು ಹಾವು ಕಚ್ಚಿದವರನ್ನು ಮರಣದಿಂದ ಖಂಡಿತವಾಗಿ ಉಳಿಸುತ್ತಾರೆಂದು ಅವರಿಗೆ ಅನೇಕರು ಸರ್ಟಿಫಿಕೇಟಗಳನ್ನು ಕೊಟ್ಟಿದ್ದಾರೆ. ಇಷ್ಟೇ ಅಲ್ಲ. ಮೆ|| ಅ ಡೆ. ಕಲೇಕ್ಟರ ಸಾಹೇಬರು ಅವರ ನಿಸ್ವಾರ್ಥ ಬುದ್ಧಿಯ ಕೆಲಸಕ್ಕೆ ಮೆಚ್ಚಿ ಒಂದು ಪ್ರಶಸ್ತಿ ಪತ್ರಿಕೆಯನ್ನು ಕೊಟ್ಟು ಭಾವಚಿತ್ರವನ್ನು ತೆಗೆಯಿಸಿದ್ದಾರೆ. ಇವರ ಜನ ಸೇವೆಯು ನಿಸ್ವಾರ್ಥ ಬುದ್ಧಿಯದು. ಯಾರ ಕಡೆಯಿಂದಲೂ ಒಂದು ಕಾಸು ಬಯಸುವವರಲ್ಲ.. ಹಾವು ಕಡಿಯಿಸಿಕೊಂಡವರು ನೆಟ್ಟಗಾದರೆ ಇವರು ತಮ್ಮ ಕೆಲಸವಾಯಿತೆಂದು ತಿಳಿಯುವರು. ಅಂತೂ ಹಾವು ಕಡಿದರೆ ವಾಸಿಮಾಡುವ ಅದ್ಭುತ ಸಾಮರ್ಥ್ಯವು ಇವರಲ್ಲಿದೆ.

ಓರ್ವ ಅನುಭವಿ.

ಅಶೋಕನ ಧರ್ಮಪ್ರಚಾರ.

([illegible]|| ಶಂಕರ ಭಟ್ಟರು)

ಜಯಪುರ ರಾಜ್ಯದ ವೈರಾಟ್ ಎಂಬ ಸ್ಥಳದಲ್ಲಿ ದೊರೆತ ಅಶೋಕನ ಶಿಲಾಲೇಖವೊಂದರಲ್ಲಿ ಆತನ ಸ್ವಂತ ಚರಿತ್ರೆಯ ವಿಷಯವಾಗಿ ಹಲವು ಮಹತ್ವದ ಸಂಗತಿಗಳು ಅಂಕಿತವಾಗಿವೆ. ಆ ಲೇಖದಲ್ಲಿ 'ಅಶೋಕನು ಬೌದ್ಧಧರ್ಮದೀಕ್ಷಾಸ್ನಾನನಾಗಿ ೨|| ವರ್ಷಗಳವರೆಗೆ ಉಪಾಸಕನಾಗಿದ್ದನು. ಆ ಕಾಲದಲ್ಲಿ ಆತನ ಕೈಗಳಿಂದ ಯಾವ ಧರ್ಮಪ್ರಚಾರಕಾರ್ಯವೂ ನೆರವೇರಲಿಲ್ಲ. ಅಶೋಕನು ಉಪಾಸನಾವ್ರತವನ್ನು ಮುಗಿಸಿ ಆದ ಮೇಲೆ ಜಂಬೂದ್ವೀಪದ ಇತರ ಸಂಪ್ರದಾಯಗಳಲ್ಲಿ ಮಿಥ್ಯತ್ವವನ್ನು ಕಂಡುಕೊಂಡನು. ಇದೇ ವಿಷಯವನ್ನು ತನ್ನ ಪ್ರಜೆಗಳಿಗೂ ಆಜ್ಞಾಪಿಸಿದನು.' ಎಂದು ಬರೆದಿದೆ.

ಇನ್ನೊಂದು ಸ್ತಂಭಲೇಖದಲ್ಲಿ ಅಶೋಕನ ಆದೇಶವು ಈ ರೀತಿಯಾಗಿದೆ— 'ಸಾಧುಗಳೇ, ಬುದ್ಧ ಧರ್ಮ ಮತ್ತು ಸಂಘದ ವಿಷಯದಲ್ಲಿ ನನಗೆ ಎಷ್ಟರ ಮಟ್ಟಿಗೆ ಆದರವಿದೆಯೆಂದು ನಿಮಗೆ ಗೊತ್ತಿದೆ. ಭಗವಾನ್ ಬುದ್ಧದೇವನು ಕೊಟ್ಟ ಉಪದೇಶವೇ ಸರ್ವಶ್ರೇಷ್ಠವಾದುದು. ಅದನ್ನನುಸರಿಸಿದರೆ ಸದ್ಧರ್ಮವು ಚಿರಸ್ಥಾಯಿಯಾಗುವುದು.'

ಅಶೋಕನ ಸಾಂಚಿಸ್ತಂಭದಲ್ಲಿ ನೀತಿಧರ್ಮಗಳಿಗನುಸಾರವಾಗಿ ನಡೆಯಬೇಕೆಂದೂ, ಸತ್ಯ, ಪವಿತ್ರತೆ, ಉದಾರತೆ ಮೊದಲಾದ ಗುಣಗಳು ವಿಕಾಸಹೊಂದುವಂತೆ ಮಾಡಬೇಕೆಂದೂ, ಆತ್ಮನಿರೀಕ್ಷಣೆಯಿಂದ ಪಾಪಕರ್ಮಗಳಿಂದ ಬಚಾವಾಗಬೇಕೆಂದೂ, ಅಹಿಂಸೆ ಮತ್ತು ವಿಶ್ವಸಹೋದರತ್ವಗಳನ್ನು ಪಾಲಿಸಬೇಕೆಂದೂ ಅಭಿಪ್ರಾಯ ಬರುವ ಬರಹಗಳಿವೆ.

ಧೌಲೀ ಶಿಲಾಲೇಖದಲ್ಲಿ ಅಶೋಕನ ಪಂಚವಾರ್ಷಿಕ ಧರ್ಮೋತ್ಸವದ ಉಲ್ಲೇಖವಿದೆ.

ಅಶೋಕನ ಎಲ್ಲಾ ಲೇಖಗಳೂ ಆ ಕಾಲದ ಮಾತಾಡುವ ಭಾಷೆಯಲ್ಲೇ ಇದ್ದರೂ ಪ್ರಾಂತಭೇದಗಳಿಗೆ ತಕ್ಕಂತೆ ಪಂಜಾಬ್ ಮತ್ತು ಉಜ್ಜಯಿನಿಗಳ ಭಾಷೆಯಲ್ಲಿ ತುಸು ಹೆಚ್ಚು ಕಡಿಮೆ ಕಂಡು ಬರುತ್ತಿದೆ.

ಬರೀ ಶಿಲಾಲೇಖಗಳಿಂದಲೂ ಪ್ರಚಾರಕರಿಂದಲೂ ಧರ್ಮಪ್ರಚಾರಮಾಡಿಸಿ ಅಶೋಕನು ಸುಮ್ಮಗೆ ಕುಳಿತುಕೊಳ್ಳಲಿಲ್ಲ. ಆತನ ಪ್ರತಿಯೊಂದು ಪ್ರಾಂತದಲ್ಲಿಯೂ ಸರಕಾರದ ಕಡೆಯಿಂದಲೂ ಧರ್ಮಪ್ರಚಾರಕಾರ್ಯದ ಮೇಲ್ವಿಚಾರಣೆ ತಕ್ಕೊಳ್ಳಲಿಕ್ಕೆ ಒಬ್ಬೊಬ್ಬ ಅಧಿಕಾರಿಗಳನ್ನು ನೇಮಿಸಿ, ಧರ್ಮಪ್ರಚಾರಕರು ಅನ್ಯಾಯಮಾಡದಂತೆಯೂ ಪ್ರಜೆಗಳು ನೀತಿನ್ಯಾಯಗಳನ್ನು ಬಿಡದಂತೆಯೂ ನೋಡಿಕೊಳ್ಳುತ್ತಿದ್ದನು. ಈ ವಿಷಯವಾಗಿ ಆತನ ಶಿಲಾಲೇಖವೊಂದರಲ್ಲಿ ಹೀಗೆ ಹೇಳಿದೆ— 'ನನ್ನ ಧರ್ಮನಿರೀಕ್ಷಕರು ಸಾಧು ಮತ್ತು ಗೃಹಸ್ಥರನ್ನು ಸಂಬಂಧಿಸಿದ ವಿಭಿನ್ನ ಧಾರ್ಮಿಕ ವಿಷಯಗಳನ್ನು ನಿರೀಕ್ಷಿಸುತ್ತಾರೆ. ಇವರು ಎಲ್ಲಾ ಸಂಪ್ರದಾಯದವರ ಕೆಲಸಗಳನ್ನೂ ನೋಡುತ್ತಾರೆ. ನಾನು ಬ್ರಾಹ್ಮಣಧರ್ಮದ ಮತ್ತು ಸಂಘ ಧರ್ಮದ ಮೇಲ್ವಿಚಾರಣೆ ನೋಡುವಂತೆ ವ್ಯವಸ್ಥೆ ಮಾಡಿರುವೆನು. ಇವರು ಅಗತ್ಯ ಬಿದ್ದರೆ ಬೇರೆ ಬೇರೆ ಮತಗಳ ವಿಚಾರನೋಡಲಿಕ್ಕೆ ಪ್ರತ್ಯೇಕ ಜನರನ್ನು ನೇಮಿಸಬಹುದು. ನನ್ನ ಧರ್ಮನಿರೀಕ್ಷಕರು ಎಲ್ಲಾ ಮತದವರೊಂದಿಗೂ ಪಕ್ಷಪಾತವಿಲ್ಲದೆ ವರ್ತಿಸತಕ್ಕದ್ದು.

ಅಶೋಕನ ಧರ್ಮಪ್ರಚಾರಕರು ಯಾವ ರೀತಿಯ ಧರ್ಮವನ್ನು ಪ್ರಚಾರಮಾಡುತ್ತಿದ್ದರೆಂಬುದು ಈ ಕೆಳಗಿನ ಮಾತುಗಳಿಂದ ಸ್ಪಷ್ಟವಾಗಬಹುದು.---

ದೇವಪ್ರಿಯ ಮಹಾರಾಜಾ ಪ್ರಿಯದರ್ಶಿಯು ಹೀಗೆ ಹೇಳುತ್ತಾನೆ. 'ನನ್ನ ರಾಜ್ಯಾಭಿಷೇಕವಾಗಿ ಹನ್ನೆರಡು ವರ್ಷಗಳು ಎಂದಿಗೆ ಮುಗಿದಿದ್ದುವೋ ಆಗ ನಾನು ನನ್ನ ಸಾಮ್ರಾಜ್ಯದಲ್ಲೆಲ್ಲಾ ನನ್ನ ಸ್ವಾಮಿಭಕ್ತರಾದ ಕರ್ಮಚಾರಿಗಳು, ಅಧೀನ ರಾಜರು ಪ್ರತಿ ಐದು ವರುಷಗಳಿಗೊಮ್ಮೆ ತಮ್ಮ ಅಧಿಕಾರದಲ್ಲಿರುವ ಪ್ರದೇಶಗಳಲ್ಲಿ ಸಂಚಾರವಮಾಡಬೇಕು' ಎಂದು ಆಜ್ಞಾಪಿಸಿರುವೆನು. ಹಾಗೆ ಅಧಿಕಾರಿಗಳೂ ಅಧಿರಾಜರೂ ಸಂಚಾರ ಮಾಡುತ್ತಿರುವಾಗ ತಮ್ಮ ಕೈಕೆಳಗಿನ ಜನರಿಗೆ ಈ ರೀತಿ ಉಪದೇಶ ಮಾಡಬೇಕು:- 'ತಾಯಿ ತಂದೆಯರ ಆಜ್ಞೆಯನ್ನು ಪಾಲಿಸುವುದು ಪುಣ್ಯಪ್ರದ. ಪರಿಚಿತರೊಡನೆಯೂ ಸಂಬಂಧಿಕರೊಡನೆಯೂ ಉದಾರತೆಯನ್ನು ತೋರಿಸುವುದು ಪುಣ್ಯಕರ. ತಪಸ್ವಿಗಳಿಗೂ ಬ್ರಾಹ್ಮಣರಿಗೂ ಉದಾರತೆಯನ್ನು ತೋರಿಸುವುದು ಪುಣ್ಯಕರ. ಜೀವಹಿಂಸೆ ಮಾಡದಿರುವುದು ಪುಣ್ಯಕರ. ವಿಧರ್ಮಿಗಳನ್ನು ದೂಷಿಸದಿರುವುದು ಪುಣ್ಯಕರ'

'ಮತ್ತು ಆಯಾ ಧರ್ಮದವರು ಆಯಾ ಧರ್ಮಕ್ಕೆ ತಕ್ಕಂತೆ ಉಪದೇಶಮಾಡಬೇಕು. ಹಾಗೆಯೇ ನಡೆಯಬೇಕು.' ಅಶೋಕನು ಒಟ್ಟು ೨೫೬ ಮಂದಿ ಧರ್ಮಪ್ರಚಾರಕರನ್ನು ದೇಶವಿದೇಶಗಳಿಗೆ ಕಳುಹಿಸಿದ್ದನೆಂದು ತಿಳಿದುಬರುತ್ತದೆ.

ಸಮ್ರಾಟ್ ಅಶೋಕನು ಎಷ್ಟು ಸಮಾಧಾನದಿಂದ ಧರ್ಮಪ್ರಚಾರಕಾರ್ಯ ಮಾಡುತ್ತಿದ್ದನೆಂದು ಈ ಕೆಳಗಿನ ಮಾತುಗಳಿಂದ ತಿಳಿಯಬಹುದು. ಅವನು ಸರ್ವಮತಾನುಯಾಯಿಗಳು ಪರಮತಸಹಿಷ್ಣುಗಳಾಗಿರಬೇಕೆಂದು ತನ್ನ ಧರ್ಮಪ್ರಚಾರಕರಿಗೆ ಅಪ್ಪಣೆ ಕೊಟ್ಟಿರುವನು.

"ದೇವಪ್ರಿಯ ಮಹಾರಾಜ್ ಪ್ರಿಯದರ್ಶಿಯು ಎಲ್ಲಾ ಸಂಪ್ರದಾಯಗಳ ತಪಸ್ವಿಗಳನ್ನೂ ಗೃಹಸ್ಥರನ್ನೂ ದಾನಮಾನಗಳಿಂದ ಸನ್ಮಾನಿಸುತ್ತಾನೆ. ಎಲ್ಲಾ ಸಂಪ್ರದಾಯಗಳ ಮೂಲ ವಿಷಯಗಳು ಅಭಿವೃದ್ಧಿ ಹೊಂದಬೇಕೆಂದು ಹೀಗೆ ಮಾಡುವುದು. ಯಾರೂ ತಮ್ಮ ಮತವನ್ನು ಹೊಗಳಿ ಪರಮತವನ್ನು ದೂಷಿಸದಂತೆ ಜಾಗೃತರಾಗಿರಬೇಕು. ಮಹತ್ವದ ವಿಷಯಗಳಲ್ಲಿ ಕೂಡ ವಿಚಾರಪೂರ್ವಕ ಮಾತಾಡಿದರೆ ತನ್ನ ಮತಕ್ಕೆ ಪ್ರತಿಷ್ಠೆಯೂ ಪರಮತಕ್ಕೆ ಕಲ್ಯಾಣವೂ ಆಗುವುದು. ಅವಸರ ಮಾಡಿದರೆ ಪರಮತಕ್ಕೆ ಹಾನಿ ತಟ್ಟುವುದು. ತನ್ನ ಮತವನ್ನು ಹೊಗಳಿ ಪರಮತವನ್ನು ಯಾವನು ದೂಷಿಸುವನೋ ಅವನು ತನ್ನ ಮತಕ್ಕೇ ಹಾನಿ ತಂದುಕೊಳ್ಳುವನು. ಆದುದರಿಂದ ಆತ್ಮಸಂಯಮಪೂರ್ವಕವಾಗಿ ಪರಧರ್ಮವನ್ನು ಕೇಳಬೇಕು. ಇದೇ ದೇವಪ್ರಿಯನ (ಅಶೋಕನ) ಇಚ್ಛೆಯು. ದೇವಪ್ರಿಯನು ದಾನಮಾನಗಳ ವಿಷಯದಲ್ಲಿ ಮತಭೇದವನ್ನು ಎಣಿಸುವುದಿಲ್ಲ !"

ಇಂದಿನ ಧರ್ಮಾಧಿಕಾರಿಗಳೂ ರಾಜರೂ ಅಶೋಕನ ಧರ್ಮದೃಷ್ಟಿಯಿಂದ ಶಿಕ್ಷಣ ಹೊಂದಬೇಕು. ಇಂದಿನ ಧರ್ಮಪ್ರಚಾರಕರಲ್ಲಿ ಅಶೋಕನಂತಹ ಪರಮತಸಹಿಷ್ಣುತೆಯು ಕಂಡುಬರುತ್ತದೋ? ಇಂದಿನ ಧರ್ಮಪ್ರಚಾರ ಕಾರ್ಯದೊಂದಿಗೆ ರಾಜಕೀಯ ಸ್ವಾರ್ಥಸಾಧನೆಯು ತುಂಬಿಕೊಂಡಿದೆ. ಅಶೋಕನಿಗೆ ಕಲಿಂಗ ಯುದ್ಧದಲ್ಲಾದ ಪ್ರಾಣಹಾನಿಯನ್ನು ಕಂಡು ಇನ್ನು ಮುಂದೆ ತನ್ನ ವಂಶಜರಿಗೆ ಕೂಡ ಯುದ್ಧವು ಬೇಡವೇ ಬೇಡವೆಂದು ಕಂಡುಬಂದಿತ್ತು.

ಅವನ ಶಿಲಾಲೇಖವೊಂದರಲ್ಲಿ ಹೀಗೆ ಬರೆದಿದೆ— 'ನನ್ನ ಮಕ್ಕಳೂ ಮೊಮ್ಮಕ್ಕಳೂ ಹೊಸ ರಾಜ್ಯವನ್ನು ಜಯಿಸುವುದು ಪ್ರಶಸ್ತಕಾರ್ಯವೆಂದು ತಿಳಿಯದಿರಲಿ. ಶಕ್ತಿಯ ಮೂಲಕ ಜಯ ಹೊಂದುವುದಕ್ಕಿಂತ ಧರ್ಮದ ಮೂಲಕ ಜಯಹೊಂದುವುದೇ ಶ್ರೇಷ್ಠವೆಂದು ತಿಳಿಯಲಿ. ಹೀಗೆ ಮಾಡಿದರೆ ಇಹಪರಗಳೆರಡರಲ್ಲಿಯೂ ಸುಖವಿದೆ.'

"-ಶಂಕರ".

ಅಶೋಕನ ಧರ್ಮಪ್ರಚಾರ.

(ಶ್ರೀ|| ಶಂಕರ ಭಟ್ಟರು)

ಜಯಪುರ ರಾಜ್ಯದ ವೈರಾಟ್ ಎಂಬ ಸ್ಥಳದಲ್ಲಿ ದೊರೆತ ಅಶೋಕನ ಶಿಲಾಲೇಖವೊಂದರಲ್ಲಿ ಅತನ ಸ್ವಂತ ಚರಿತ್ರೆಯ ವಿಷಯವಾಗಿ ಹಲವು ಮಹತ್ವದ ಸಂಗತಿಗಳು ಅಂಕಿತವಾಗಿವೆ. ಆ ಲೇಖದಲ್ಲಿ 'ಅಶೋಕನು ಬೌದ್ಧಧರ್ಮದೀಕ್ಷಾಸ್ನಾನನಾಗಿ ೨|| ವರ್ಷಗಳವರೆಗೆ ಉಪಾಸಕನಾಗಿದ್ದನು. ಆ ಕಾಲದಲ್ಲಿ ಆತನ ಕೈಗಳಿಂದ ಯಾವ ಧರ್ಮಪ್ರಚಾರಕಾರ್ಯವೂ ನೆರವೇರಲಿಲ್ಲ. ಅಶೋಕನು ಉಪಾಸನಾವ್ರತವನ್ನು ಮುಗಿಸಿ ಆದ ಮೇಲೆ ಜಂಬೂದ್ವೀಪದ ಇತರ ಸಂಪ್ರದಾಯಗಳಲ್ಲಿ ಮಿಥ್ಯತ್ವವನ್ನು ಕಂಡುಕೊಂಡನು. ಇದೇ ವಿಷಯವನ್ನು ತನ್ನ ಪ್ರಜೆಗಳಿಗೂ ಆಜ್ಞಾಪಿಸಿದನು.' ಎಂದು ಬರೆದಿದೆ.

ಇನ್ನೊಂದು ಸ್ತಂಭಲೇಖದಲ್ಲಿ ಅಶೋಕನ ಆದೇಶವು ಈ ರೀತಿಯಾಗಿದೆ— 'ಸಾಧುಗಳೇ, ಬುದ್ಧ ಧರ್ಮ ಮತ್ತು ಸಂಘದ ವಿಷಯದಲ್ಲಿ ನನಗೆ ಎಷ್ಟರ ಮಟ್ಟಿಗೆ ಆದರವಿದೆಯೆಂದು ನಿಮಗೆ ಗೊತ್ತಿದೆ. ಭಗವಾನ್ ಬುದ್ಧದೇವನು ಕೊಟ್ಟ ಉಪದೇಶವೇ ಸರ್ವಶ್ರೇಷ್ಠವಾದುದು. ಅದನ್ನನುಸರಿಸಿದರೆ ಸದ್ಧರ್ಮವು ಚಿರಸ್ಥಾಯಿಯಾಗುವುದು.'

ಅಶೋಕನ ಸಾಂಚಿಸ್ತಂಭದಲ್ಲಿ ನೀತಿಧರ್ಮಗಳಿಗನುಸಾರವಾಗಿ ನಡೆಯಬೇಕೆಂದೂ, ಸತ್ಯ, ಪವಿತ್ರತೆ, ಉದಾರತೆ ಮೊದಲಾದ ಗುಣಗಳು ವಿಕಾಸಹೊಂದುವಂತೆ ಮಾಡಬೇಕೆಂದೂ, ಆತ್ಮನಿರೀಕ್ಷಣೆಯಿಂದ ಪಾಪಕರ್ಮಗಳಿಂದ ಬಚಾವಾಗಬೇಕೆಂದೂ, ಅಹಿಂಸೆ ಮತ್ತು ವಿಶ್ವಸಹೋದರತ್ವಗಳನ್ನು ಪಾಲಿಸಬೇಕೆಂದೂ ಅಭಿಪ್ರಾಯ ಬರುವ ಬರಹಗಳಿವೆ.

ಧೌಲೀ ಶಿಲಾಲೇಖದಲ್ಲಿ ಅಶೋಕನ ಪಂಚವಾರ್ಷಿಕ ಧರ್ಮೋತ್ಸವದ ಉಲ್ಲೇಖವಿದೆ.

ಅಶೋಕನ ಎಲ್ಲಾ ಲೇಖಗಳೂ ಆ ಕಾಲದ ಮಾತಾಡುವ ಭಾಷೆಯಲ್ಲೇ ಇದ್ದರೂ ಪ್ರಾಂತಭೇದಗಳಿಗೆ ತಕ್ಕಂತೆ ಪಂಜಾಬ್ ಮತ್ತು ಉಜ್ಜಯಿನಿಗಳ ಭಾಷೆಯಲ್ಲಿ ತುಸು ಹೆಚ್ಚು ಕಡಿಮೆ ಕಂಡು ಬರುತ್ತಿದೆ.

ಬರೇ ಶಿಲಾಲೇಖಗಳಿಂದಲೂ ಪ್ರಚಾರಕರಿಂದಲೂ ಧರ್ಮಪ್ರಚಾರಮಾಡಿಸಿ ಅಶೋಕನು ಸುಮ್ಮಗೆ ಕುಳಿತುಕೊಳ್ಳಲಿಲ್ಲ. ಆತನ ಪ್ರತಿಯೊಂದು ಪ್ರಾಂತದಲ್ಲಿಯೂ ಸರಕಾರದ ಕಡೆಯಿಂದಲೂ ಧರ್ಮಪ್ರಚಾರಕಾರ್ಯದ ಮೇಲ್ವಿಚಾರಣೆ ತಕ್ಕೊಳ್ಳಲಿಕ್ಕೆ ಒಬ್ಬೊಬ್ಬ ಅಧಿಕಾರಿಗಳನ್ನು ನೇಮಿಸಿ, ಧರ್ಮಪ್ರಚಾರಕರು ಅನ್ಯಾಯಮಾಡದಂತೆಯೂ ಪ್ರಜೆಗಳು ನೀತಿನ್ಯಾಯಗಳನ್ನು ಬಿಡದಂತೆಯೂ ನೋಡಿಕೊಳ್ಳುತ್ತಿದ್ದನು. ಈ ವಿಷಯವಾಗಿ ಆತನ ಶಿಲಾಲೇಖವೊಂದರಲ್ಲಿ ಹೀಗೆ ಹೇಳಿದೆ— 'ನನ್ನ ಧರ್ಮನಿರೀಕ್ಷಕರು ಸಾಧು ಮತ್ತು ಗೃಹಸ್ಥರನ್ನು ಸಂಬಂಧಿಸಿದ ವಿಭಿನ್ನ ಧಾರ್ಮಿಕ ವಿಷಯಗಳನ್ನು ನಿರೀಕ್ಷಿಸುತ್ತಾರೆ. ಇವರು ಎಲ್ಲಾ ಸಂಪ್ರದಾಯದವರ ಕೆಲಸಗಳನ್ನೂ ನೋಡುತ್ತಾರೆ. ನಾನು ಬ್ರಾಹ್ಮಣಧರ್ಮದ ಮತ್ತು ಸಂಘ ಧರ್ಮದ ಮೇಲ್ವಿಚಾರಣೆ ನೋಡುವಂತೆ ವ್ಯವಸ್ಥೆ ಮಾಡಿರುವೆನು. ಇವರು ಅಗತ್ಯ ಬಿದ್ದರೆ ಬೇರೆ ಬೇರೆ ಮತಗಳ ವಿಚಾರನೋಡಲಿಕ್ಕೆ ಪ್ರತ್ಯೇಕ ಜನರನ್ನು ನೇಮಿಸಬಹುದು. ನನ್ನ ಧರ್ಮನಿರೀಕ್ಷಕರು ಎಲ್ಲಾ ಮತದವರೊಂದಿಗೂ ಪಕ್ಷಪಾತವಿಲ್ಲದೆ ವರ್ತಿಸತಕ್ಕದ್ದು.

ಅಶೋಕನ ಧರ್ಮಪ್ರಚಾರಕರು ಯಾವ ರೀತಿಯ ಧರ್ಮವನ್ನು ಪ್ರಚಾರಮಾಡುತ್ತಿದ್ದರೆಂಬುದು ಈ ಕೆಳಗಿನ ಮಾತುಗಳಿಂದ ಸ್ಪಷ್ಟವಾಗಬಹುದು:—

ದೇವಪ್ರಿಯ ಮಹಾರಾಜಾ ಪ್ರಿಯದರ್ಶಿಯು ಹೀಗೆ ಹೇಳುತ್ತಾನೆ. 'ನನ್ನ ರಾಜ್ಯಾಭಿಷೇಕವಾಗಿ ಹನ್ನೆರಡು ವರ್ಷಗಳು ಎಂದಿಗೆ ಮುಗಿದಿದ್ದುವೋ ಆಗ ನಾನು ನನ್ನ ಸಾಮ್ರಾಜ್ಯದಲ್ಲೆಲ್ಲಾ ನನ್ನ ಸ್ವಾಮಿಭಕ್ತರಾದ ಕರ್ಮಚಾರಿಗಳು, ಅಧೀನ ರಾಜರು ಪ್ರತಿ ಐದು ವರುಷಗಳಿಗೊಮ್ಮೆ ತಮ್ಮ ಅಧಿಕಾರದಲ್ಲಿರುವ ಪ್ರದೇಶಗಳಲ್ಲಿ ಸಂಚಾರಮಾಡಬೇಕು' ಎಂದು ಆಜ್ಞಾಪಿಸಿರುವೆನು. ಹಾಗೆ ಅಧಿಕಾರಿಗಳೂ ಅಧಿರಾಜರೂ ಸಂಚಾರ ಮಾಡುತ್ತಿರುವಾಗ ತಮ್ಮ ಕೈಕೆಳಗಿನ ಜನರಿಗೆ ಈ ರೀತಿ ಉಪದೇಶ ಮಾಡಬೇಕು:- 'ತಾಯಿ ತಂದೆಯರ ಆಜ್ಞೆಯನ್ನು ಪಾಲಿಸುವುದು ಪುಣ್ಯಪ್ರದ. ಪರಿಚಿತರೊಡನೆಯೂ ಸಂಬಂಧಿಕರೊಡನೆಯೂ ಉದಾರತೆಯನ್ನು ತೋರಿಸುವುದು ಪುಣ್ಯಕರ. ತಪಸ್ವಿಗಳಿಗೂ ಬ್ರಾಹ್ಮಣರಿಗೂ ಉದಾರತೆಯನ್ನು ತೋರಿಸುವುದು ಪುಣ್ಯಕರ. ಜೀವಹಿಂಸೆ ಮಾಡದಿರುವುದು ಪುಣ್ಯಕರ. ವಿಧರ್ಮಿಗಳನ್ನು ದೂಷಿಸದಿರುವುದು ಪುಣ್ಯಕರ.'

'ಮತ್ತು ಆಯಾ ಧರ್ಮದವರು ಆಯಾ ಧರ್ಮಕ್ಕೆ ತಕ್ಕಂತೆ ಉಪದೇಶಮಾಡಬೇಕು. ಹಾಗೆಯೇ ನಡೆಯಬೇಕು.' ಅಶೋಕನು ಒಟ್ಟು ೨೫೬ ಮಂದಿ ಧರ್ಮಪ್ರಚಾರಕರನ್ನು ದೇಶವಿದೇಶಗಳಿಗೆ ಕಳುಹಿಸಿದ್ದನೆಂದು ತಿಳಿದುಬರುತ್ತದೆ.

ಸಮ್ರಾಟ್ ಅಶೋಕನು ಎಷ್ಟು ಸಮಾಧಾನದಿಂದ ಧರ್ಮಪ್ರಚಾರಕಾರ್ಯ ಮಾಡುತ್ತಿದ್ದನೆಂದು ಈ ಕೆಳಗಿನ ಮಾತುಗಳಿಂದ ತಿಳಿಯಬಹುದು. ಅವನು ಸರ್ವಮತಾನುಯಾಯಿಗಳು ಪರಮತಸಹಿಷ್ಣುಗಳಾಗಿರಬೇಕೆಂದು ತನ್ನ ಧರ್ಮಪ್ರಚಾರಕರಿಗೆ ಅಪ್ಪಣೆ ಕೊಟ್ಟಿರುವನು.

"ದೇವಪ್ರಿಯ ಮಹಾರಾಜ್ ಪ್ರಿಯದರ್ಶಿಯು ಎಲ್ಲಾ ಸಂಪ್ರದಾಯಗಳ ತಪಸ್ವಿಗಳನ್ನೂ ಗೃಹಸ್ಥರನ್ನೂ ದಾನಮಾನಗಳಿಂದ ಸನ್ಮಾನಿಸುತ್ತಾನೆ. ಎಲ್ಲಾ ಸಂಪ್ರದಾಯಗಳ ಮೂಲ ವಿಷಯಗಳು ಅಭಿವೃದ್ಧಿ ಹೊಂದಬೇಕೆಂದು ಹೀಗೆ ಮಾಡುವುದು. ಯಾರೂ ತಮ್ಮ ಮತವನ್ನು ಹೊಗಳಿ ಪರಮತವನ್ನು ದೂಷಿಸದಂತೆ ಜಾಗ್ರತರಾಗಿರಬೇಕು. ಮಹತ್ವದ ವಿಷಯಗಳಲ್ಲಿ ಕೂಡ ವಿಚಾರಪೂರ್ವಕ ಮಾತಾಡಿದರೆ ತನ್ನ ಮತಕ್ಕೆ ಪ್ರತಿಷ್ಠೆಯೂ ಪರಮತಕ್ಕೆ ಕಲ್ಯಾಣವೂ ಆಗುವುದು. ಅವಸರ ಮಾಡಿದರೆ ಪರಮತಕ್ಕೆ ಹಾನಿ ತಟ್ಟುವುದು. ತನ್ನ ಮತವನ್ನು ಹೊಗಳಿ ಪರಮತವನ್ನು ಯಾವನು ದೂಷಿಸುವನೋ ಅವನು ತನ್ನ ಮತಕ್ಕೇ ಹಾನಿ ತಂದುಕೊಳ್ಳುವನು. ಆದುದರಿಂದ ಆತ್ಮಸಂಯಮಪೂರ್ವಕವಾಗಿ ಪರಧರ್ಮವನ್ನು ಕೇಳಬೇಕು. ಇದೇ ದೇವಪ್ರಿಯನ (ಅಶೋಕನ) ಇಚ್ಛೆಯು. ದೇವಪ್ರಿಯನು ದಾನಮಾನಗಳ ವಿಷಯದಲ್ಲಿ ಮತಭೇದವನ್ನು ಎಣಿಸುವುದಿಲ್ಲ!"

ಇಂದಿನ ಧರ್ಮಾಧಿಕಾರಿಗಳೂ ರಾಜರೂ ಅಶೋಕನ ಧರ್ಮದೃಷ್ಟಿಯಿಂದ ಶಿಕ್ಷಣ ಹೊಂದಬೇಕು. ಇಂದಿನ ಧರ್ಮಪ್ರಚಾರಕರಲ್ಲಿ ಅಶೋಕನಂತಹ ಪರಮತಸಹಿಷ್ಣುತೆಯು ಕಂಡುಬರುತ್ತದೋ? ಇಂದಿನ ಧರ್ಮಪ್ರಚಾರ ಕಾರ್ಯದೊಂದಿಗೆ ರಾಜಕೀಯ ಸ್ವಾರ್ಥ ಸಾಧನೆಯು ತುಂಬಿಕೊಂಡಿದೆ. ಅಶೋಕನಿಗೆ ಕಲಿಂಗ ಯುದ್ಧದಲ್ಲಾದ ಪ್ರಾಣಹಾನಿಯನ್ನು ಕಂಡು ಇನ್ನು ಮುಂದೆ ತನ್ನ ವಂಶಜರಿಗೆ ಕೂಡ ಯುದ್ಧವು ಬೇಡವೇ ಬೇಡವೆಂದು ಕಂಡುಬಂದಿತ್ತು.

ಅವನ ಶಿಲಾಲೇಖವೊಂದರಲ್ಲಿ ಹೀಗೆ ಬರೆದಿದೆ— 'ನನ್ನ ಮಕ್ಕಳೂ ಮೊಮ್ಮಕ್ಕಳೂ ಹೊಸ ರಾಜ್ಯವನ್ನು ಜಯಿಸುವುದು ಪ್ರಶಸ್ತಕಾರ್ಯವೆಂದು ತಿಳಿಯದಿರಲಿ. ಶಸ್ತ್ರದ ಮೂಲಕ ಜಯಹೊಂದುವುದಕ್ಕಿಂತ ಧರ್ಮದ ಮೂಲಕ ಜಯಹೊಂದುವುದೇ ಶ್ರೇಷ್ಠವೆಂದು ತಿಳಿಯಲಿ. ಹೀಗೆ ಮಾಡಿದರೆ ಇಹಪರಗಳೆರಡರಲ್ಲಿಯೂ ಸುಖವಿದೆ.'

[illegible]

ಫಲಪುಷ್ಪಗಳ ಗುಣಧರ್ಮ.

ಚಪ್ಪರಬದನೇಕಾಯಿ ಅಥವಾ ತಕ್ಕಾಳಿಹಣ್ಣು.

ಇದರಲ್ಲಿರುವ ಗುಣವಿಶೇಷಗಳು.

ಚಪ್ಪರಬದನೇಕಾಯಿಯ ಬೆಳೆಯು, ಮೊಟ್ಟಮೊದಲು ಅಮೇರಿಕಾದೇಶದಿಂದ ಯುರೋಪ್ ಖಂಡಕ್ಕೂ, ಅಲ್ಲಿಂದ ಇಂಡಿಯಾ ದೇಶಕ್ಕೂ ವ್ಯಾಪಿಸಿತು. ಈಗ ಯುರೋಪ್ ಮತ್ತು ಇಂಡಿಯಾ ದೇಶಗಳಲ್ಲಿ ಆ ಗಿಡವನ್ನು ವಿಶೇಷವಾಗಿ ಬೆಳೆಸುತ್ತಿರುವರು. ಈ ಕಾಯಿಯ ತಿರುಳೂ, ರಸವೂ ಜೀರ್ಣಕಾರಿಗಳು, ಮತ್ತು ಸ್ವಲ್ಪ ಬೇಧಿಕಾರಿಗಳು. ಈ ಗುಣಗಳಲ್ಲದೆ, ಇವುಗಳಲ್ಲಿ ಜಠರರಸವನ್ನು ವೃದ್ಧಿಮಾಡುವ ಗುಣವೂ ರಕ್ತಶುದ್ಧಿ ಗುಣವೂ ಇರುವುದು. ಇದರಲ್ಲಿ ಜೀರ್ಣಕೋಶದ ಎಲ್ಲಾ ಭಾಗಗಳನ್ನೂ ಶುದ್ಧಿಮಾಡುವ ಗುಣವಿರುವುದರಿಂದ, ಇದನ್ನು ಕರುಳುಗಳ ವಿಷನಾಶಕ ವಸ್ತುವೆಂದು ಹೇಳುವುದುಂಟು. ಚಪ್ಪರಬದನೇಕಾಯಿಯಲ್ಲಿ ಮೂರು ಬಗೆಯ ಜೀವಸತ್ವಗಳೂ ಇರುವುವು. ಆ ಕಾಯಿಯನ್ನು ಹಾಗೆಯೇ ಆಗಲಿ, ಇತರ ಆಹಾರ ಪದಾರ್ಥಗಳೊಡನೆ ಸೇರಿಸಿಯಾಗಲಿ ತಿನ್ನಬಹುದು. ಇದನ್ನು ಹಲವು ವಿಧಗಳಲ್ಲಿ ಅಡಿಗೆ ಮಾಡಬಹುದು.

ಈ ಕಾಯಿಯು ಮಂದಸ್ಥಿತಿಯಲ್ಲಿರುವ ಯಕೃತ್ತಿನಿಂದ ವೇಗವಾಗಿ ಕೆಲಸ ಮಾಡುವುದು. ಇದು ಪಿತ್ತರಸವು ಧಾರಾಳವಾಗಿ ಹರಿಯುವಂತೆ ಮಾಡುವುದರಿಂದ, ಪಿತ್ತರೋಗಿಗಳಿಗೆ ಇದರ ಸೇವನೆಯಿಂದ ಬಹಳ ಗುಣವುಂಟು. ಚಪ್ಪರಬದನೇಕಾಯಿಯಲ್ಲಿ ಮುಖ್ಯವಾಗಿ ಈ ಕೆಳಗಿನ ಸೂಚಿಸುವ ಗುಣಗಳಿರುವವು. (ಎ) ಇದರಲ್ಲಿರುವಷ್ಟು ಜೀವಸತ್ವಗಳು ಮತ್ತಾವ ಆಹಾರ ಪದಾರ್ಥಗಳಲ್ಲಿಯೂ ಇಲ್ಲ. (ಬಿ) ಮಿಕ್ಕ ಎಲ್ಲಾ ಆಹಾರ ಪದಾರ್ಥಗಳಿಗಿಂತಲೂ ಇದು ರಕ್ತವನ್ನು ಬಹಳ ಚೆನ್ನಾಗಿ ಶುದ್ಧಿಮಾಡುವುದು (ಸಿ) ಈ ಕಾಯಿಯಲ್ಲಿ ಹೊಟ್ಟೆಯನ್ನೂ, ಕರುಳುಗಳನ್ನೂ ಆರೋಗ್ಯ ಸ್ಥಿತಿಯಲ್ಲಿಡಲು ಅನುಕೂಲವಾದ ರಸಗಳು ಮಿಕ್ಕ ಎಲ್ಲಾ ತರಕಾರಿಗಳಿಗಿಂತಲೂ ಅಧಿಕವಾಗಿರುವುದು. (ಡಿ) ಮೂತ್ರಕೋಶವನ್ನು ಕ್ರಮಸ್ಥಿತಿಗೆ ತರುವುದರಲ್ಲಿ ಇದಕ್ಕೆ ಸಮಾನವಾದುದು ಬೇರೊಂದಿಲ್ಲ. ಇದು ದೇಹದಲ್ಲಿ ತಂಗಿ, ರೋಗಾದಿಗಳಿಗೆ ಕಾರಣಗಳಾದ. ವಿಷಗಳನ್ನು ಹೊರಕ್ಕೆ ತಳ್ಳಲು ಬಹಳ ಸಹಕಾರಿಯಾದ ವಸ್ತು.

ಪುಷ್ಪಗಳಲ್ಲಿ ಔಷಧಗುಣಗಳು.

ಹೂಗಳಲ್ಲಿರುವ ಆರೋಗ್ಯಗುಣವೇನೆಂಬುದನ್ನು ವಿಮರ್ಶಿಸೋಣ. ನಮ್ಮ ಪೂರ್ವಿಕರು ಸುಗಂಧ ಪುಷ್ಪಗಳನ್ನು ಹೆಚ್ಚಾಗಿ ಉಪಯೋಗಿಸುವ ಪದ್ಧತಿಯನ್ನು ಆಚರಣೆಗೆ ತಂದುದು ಅವುಗಳ ವಾಸನೆಯಲ್ಲಿ ವಿಷಹಾರಕ ಶಕ್ತಿಯಿರುವುದರಿಂದಲೇ !

ಸುವಾಸನೆಯೆಂಬುದರಲ್ಲಿ ಒಂದು ವಿಚಿತ್ರ ಶಕ್ತಿಯುಂಟು. ಅದು ಕಣ್ಣಿಗೆ ಕಾಣುತಕ್ಕದಲ್ಲ. ಅನುಭವದಲ್ಲಿ ಅತ್ಯಂತಪ್ರಿಯವಾದ ಒಂದು ಅಪೂರ್ವಾನಂದವನ್ನು ಕೊಡುತ್ತಿದೆ. ವಾಸನೆಯುಳ್ಳ ದ್ರವ್ಯಗಳು ಪ್ರಾಯಕವಾಗಿ ಬಹಳ ಸುಕುಮಾರವೂ, ಸೂಕ್ಷ್ಮವೂ ಆಗಿವೆ. ಆದರೆ ಅವುಗಳ ಶಕ್ತಿಯು ನೆಟ್ಟಗೆ ಮಿದುಳಿನಲ್ಲಿ ಸೇರಿ ಕೆಲಸ ಮಾಡುವುದು. ಅಂತಹ ಸುಗಂಧಗಳಿಗೆ ಕೆಲವು ವ್ಯಾಧಿಗಳನ್ನು ನಿರ್ಮೂಲ ಮಾಡುವ ಅಥವಾ, ವ್ಯಾಧಿಯು ಬಾರದಹಾಗೆ ನಿವಾರಿಸುವ ಶಕ್ತಿಯುಂಟೆಂದೂ ಅಂಗೀಕರಿಸಲ್ಪಟ್ಟಿದೆ. ದುರ್ಗಂಧವಿಶಿಷ್ಟವಾದ ಗಾಳಿಯು ನಮ್ಮ ಉಛ್ವಾಸರೂಪವಾಗಿ ಮೂಗಿನೊಳಗೆ ಹೋದೊಡನೆ, ಕೆಟ್ಟ ರೋಗಗಳಿಗೆ ಅಂಕುರಾರ್ಪಣಮಾಡಿ, ಹಾನಿಕರವಾಗಿ ಪರಿಣಮಿಸುವುದೆಂದು ಹೇಗೆ ನಿರ್ಧರಿಸಲ್ಪಟ್ಟಿದೆಯೋ, ಹಾಗೆಯೇ ಸುಗಂಧವೆಂಬುದು ಆಘ್ರಾಣಿಸಿದೊಡನೆ ದೇಹದೊಳಗೆ ವ್ಯಾಪಿಸಿ, ದುರ್ಗಂಧಕ್ಕೆ ಕೇವಲ ವಿರುದ್ಧವಾದ ಗುಣವನ್ನು ತೋರಿಸದಿರಲಾರದೆಂದು ಸಾಮಾನ್ಯ ಜ್ಞಾನದಿಂದಲೇ ತಿಳಿಯಬಹುದು. ಹೀಗೆ ವಾಸನೆಯೆಂಬುದು ಎಷ್ಟೇ ಸೂಕ್ಷ್ಮವಸ್ತುವಿನಿಂದ ಹೊರಟುದಾಗಿದ್ದರೂ, ದೇಹಯಂತ್ರದಲ್ಲಿ ತಟ್ಟನೆ ಬದಲಾವಣೆಯನ್ನುಂಟುಮಾಡುವುದರಿಂದ, ರೋಗನಿವಾರಣೆಗೆ ಅದು ಸಹಕರಿಸಲಾರದೆಂದು ಹೇಳಲು ಅವಕಾಶವಿಲ್ಲ.

ಸುಗಂಧದ್ರವ್ಯಗಳಲ್ಲಿ ಉತ್ತೇಜನಶಕ್ತಿಯುಂಟೆಂಬುದಕ್ಕಾಗಿಯೇ ಔಷಧಿಗಳಲ್ಲಿ ಆಗಾಗ ಕಸ್ತೂರಿಯನ್ನು ಮಿಶ್ರಮಾಡುವರು. ಮತ್ತು ಸುಗಂಧದ್ರವ್ಯಗಳಲ್ಲಿ ವಾಯುನಿಗ್ರಹಣಶಕ್ತಿಯೂ ಇರುವುದು. ಲವಂಗ, ಲವಂಗಪಟ್ಟೆ, ಶುಂಠಿ, ಏಲಕ್ಕಿ ಮುಂತಾದವುಗಳಿಂದ ತೆಗೆದ ದ್ರಾವಕಗಳು ಒಳ್ಳೇ ಉದ್ದೀಪನಗುಣವುಳ್ಳುವೆಂದು ಪ್ರಾಚೀನ ಹಿಂದೂ ವೈದ್ಯರು ಹೇಳುವರು. ಪ್ರಾಚ್ಯದೇಶಗಳಲ್ಲಿ ಕಸ್ತೂರಿ ಮುಂತಾದ ಸುಗಂಧದ್ರವ್ಯಗಳಿಗೆ ಹೆಚ್ಚು ಬೆಲೆಯಿರುವುದು ನಿರಾಧಾರವಾದುದಲ್ಲ. ಅಂದಕ್ಕೆ ಮಾತ್ರ ಪುಷ್ಪವಲ್ಲ.

ಚಿತ್ರಕಾರರು ಕೃತ್ರಿಮ ಪುಷ್ಪಗಳನ್ನು ಎಷ್ಟೇ ನೈಪುಣ್ಯದಿಂದ ಸಹಜ ರೀತಿಯಾಗಿ ತಯಾರಿಸಿಟ್ಟರೂ, ಅವು ನೋಡುವುದಕ್ಕೆ ಎಷ್ಟೋ ರಮ್ಯವಾಗಿದ್ದರೂ, ಅವುಗಳಿಂದ ಮಾಡುವ ಅಲಂಕಾರದಲ್ಲಿ ನಿಜವಾದ ಹೂಗಳಿಂದಾಗುವ ಮುಖ್ಯಫಲವು ಲಭಿಸಲಾರದು. ಕೃತ್ರಿಮವಾದ ಹೂಗಳಿಗೆ, ಸೌಂದರ್ಯ, ಸೌಕುಮಾರ್ಯಾದಿಗಳಲ್ಲಿ ಸ್ವಲ್ಪವೂ ವ್ಯತ್ಯಾಸವೂ ತೋರದಂತೆ ಬಣ್ಣಕಟ್ಟಬಹುದಾದರೂ ನಿಜವಾದ ಪುಷ್ಪಗಳಲ್ಲಿರುವ ದೈವಸೃಷ್ಟವಾದ ಒಂದು ಅತ್ಯಧಿಕ ಗುಣವಿಶೇಷವು ಅದಕ್ಕೆ ಬರಲಾರದು. ಈ ಕಾರಣದಿಂದಲೇ ನಮ್ಮವರು ಪವಿತ್ರ ಕಾರ್ಯಗಳಲ್ಲಿಯೂ, ಶುಭಕಾರ್ಯಗಳಲ್ಲಿಯೂ ಪುಷ್ಪೋಪಚಾರಗಳನ್ನು ಶಾಸ್ತ್ರೀಯವಾಗಿ ನಿರ್ಬಂಧಿಸಿರುವರು.

ಅನಾದಿಕಾಲದಿಂದಲೂ, ಎಲ್ಲಾ ದೇಶದವರೂ ಅಧಿಕವಾಗಿ ತಾವರೆ, ನೈದಿಲೆ, ಗುಲಾಬೀ ಹೂಗಳನ್ನು ಮಾತ್ರ ಉಪಮಾನವಾಗಿ ವರ್ಣಿಸುವುದರಲ್ಲಿ ಅಂತರ್ಯವಾದ ಒಂದು ಅಭಿಪ್ರಾಯ ವಿಶೇಷವಿಲ್ಲದೆ ಇಲ್ಲ. ಮನುಷ್ಯರ ಜೀವಯಾತ್ರೆಯಲ್ಲಿ ಕಮಲದ ಹೋಲಿಕೆಗಳು ಬಹಳವಾಗಿವೆ. ಮನುಷ್ಯರ ಹೃದಯವು ಕಮಲದ ಮೊಗ್ಗಿನ ಆಕೃತಿಯನ್ನು ಹೋಲುವುದು. ಗರ್ಭಪಿಂಡವು ಕಮಲದ ಆಕಾರಕ್ಕೆ ಸಮಾನವಾಗುವುದು. ಕೆಂಪು ಕಮಲವು ಲಕ್ಷ್ಮೀದೇವಿಗೂ, ಬಿಳಿ ತಾವರೆಯು ಸರಸ್ವತಿದೇವಿಗೂ ನಿತ್ಯನಿವಾಸಸ್ಥಾನಗಳೆಂದು ಹಿಂದುಗಳ ನಂಬಿಕೆಯುಂಟು. ವಿದ್ಯಾಸಂಪತ್ತುಗಳೆರಡಕ್ಕೂ ಈ ಹೂಗಳು ಅಧಿಷ್ಠಾನಗಳೆಂದು ಹೇಳುವುದರಿಂದ ಆ ಪುಷ್ಪಗಳಲ್ಲಿ ಬುದ್ಧಿಗೂ, ಕಾರ್ಯೋತ್ಸಾಹಕ್ಕೂ ಉತ್ತೇಜನಕೊಡುವ ಔಷಧಶಕ್ತಿಯುಂಟೆಂದು ಸಿದ್ಧವಾಗುವುದು.

—'ಆಶ್ಯಬಂಧು' ಆರೋಗ್ಯ ಸಂಚಿಕೆ.

—ಕೆಂಪು ಬಣ್ಣವನ್ನು ಪ್ರೀತಿಸುವವರು ಕ್ರೂರ ಸ್ವಭಾವದವರೆಂತಲೂ ನೀಲಿ ಬಣ್ಣವನ್ನು ಪ್ರೀತಿಸುವವರು ಶಾಂತರೆಂತಲೂ ಒಬ್ಬ ಅಮೇರಿಕೆಯ ವಿದ್ಯಾವತಿಯು ಹೇಳಿದ್ದಾಳೆ.

—ದಿ. ಬ. ಗೋಪಾಲಸ್ವಾಮಿ ಅಯ್ಯಂಗಾರ್ಯರು ಕಾಶ್ಮೀರ ದೇಶದ ಮುಖ್ಯ ಮಂತ್ರಿಗಳಾಗಿ ನಿಯಾಮಕರಾಗಿದ್ದಾರೆ.

—ಸಿಂಧ ಪ್ರಾಂತದ ಮಂತ್ರಿಗಳಿಗೆ ತಿಂಗಳಿಗೆ ೩ ಸಾವಿರ ರೂ. ಗಳ ವೇತನವಾಗುವದಂತೆ, ಕಾಂಗ್ರೆಸ್ಸಿನ ಮಂತ್ರಿಗಳು ೫೦೦ ಮಾತ್ರ ವೇತನ ತೆಗೆದುಕೊಳ್ಳುವರಂತೆ.

ಗಾಂಧಿ-ಸೇವಾ ಸಂಘ ಹುದಲಿ.

ಪ್ರದರ್ಶನ ಮಂಡಲ.

ಪ್ರಕಟನೆ ನಂ ೨

ಮೊದಲನೆಯ ಪ್ರಕಟನೆಯಲ್ಲಿ ನಾವು ಪ್ರಸಿದ್ಧಿಸಿದಂತೆ ಈ ಎರಡನೆಯ ಪ್ರಕಟನೆಯಲ್ಲಿ ಯಾವ ವಿಧದ ಪ್ರದರ್ಶನ ಕೂಡುವದೆಂದು ತಿಳಿಸುತ್ತೇವೆ. ಪ್ರದರ್ಶನದಲ್ಲಿ ಮುಖ್ಯವಾಗಿ ಗ್ರಾಮೋದ್ಯೋಗದ ವಿಷಯಕ್ಕೆ ಲಕ್ಷಕೊಡಲಾಗುವದು. ಹಳ್ಳಿಗಳಿಂದ ಪ್ರತಿವರ್ಷ ಪರದೇಶಕ್ಕೆ ಅದರಂತೆ ಪಟ್ಟಣಗಳಿಗೆ ಎಣಿಕೆ ಇಲ್ಲದಷ್ಟು ಹಣವು ಹೋಗಿ ಹಳ್ಳಿಗರು ಬಡತನದಲ್ಲಿ ಬಳಲುತ್ತಿರುವರು. ಇದನ್ನರಿತೇ ಮ|| ಗಾಂಧಿಯವರು ಗ್ರಾಮೋದ್ಯೋಗದ ದೃಷ್ಟಿಯಿಂದ ವಿಚಾರ ಮಾಡಿ ತಮ್ಮ ಆಯುಷ್ಯಕ್ರಮವನ್ನು ಬೇರೆ ವಿಧಮಾಡಿರುವರು. ಗಿರಣಿಯಲ್ಲಿ ಬೀಸಿದ ಹಿಟ್ಟು ಗಾಂಧೀಜಿಯವರಿಗೆ ಅದರಂತೆ ಅವರ ಅನುಯಾಯಿಗಳಿಗೆ ನಡೆಯುವದಿಲ್ಲ. ಗಿರಣಿಯಲ್ಲಿ ತಯಾರಾದ ಅಕ್ಕಿಯು ಅವರ ಉಪಯೋಗಕ್ಕೆ ಬರುವದಿಲ್ಲ. ಎಮ್ಮಿಯ ಹಾಲು ತುಪ್ಪವನ್ನು ಅವರು ಸೇವಿಸುವದಿಲ್ಲ. ಗಿರಣಿಯಿಂದ ತಯಾರಿಸಲ್ಪಟ್ಟ ಎಣ್ಣೆ ಯಂತ್ರ ಸಾಧನಗಳಿಂದ ನೂತು ನೇಯಿಸಲ್ಪಟ್ಟ ಬಟ್ಟೆಗಳು ಅದರಂತೆ ಯಾವದೇ ತರದ ಸಕ್ಕರಿಯು ಅವರಿಗೆ ಸರಿಬರದು. ಗ್ರಾಮೋದ್ಯೋಗದಿಂದ ತಯಾರಾದ ವಸ್ತ್ರ ಒಡವೆಗಳು ಹಿಂದುಸ್ಥಾನದಲ್ಲಿ ಉಪಯೋಗಿಸಲ್ಪಟ್ಟರೆ ಬಡತನದಿಂದ ಬಳಲುವ ಬಡ ಒಕ್ಕಲಿಗರಿಗೆ ಹೊಟ್ಟೆಗೆ ಸ್ವಲ್ಪ ಪ್ರಮಾಣದಿಂದಾದರೂ ಅನ್ನ ಕೊಡುವ ಪುಣ್ಯ ಕಾರ್ಯವನ್ನು ನಾವು ಮಾಡುತ್ತೇವೆಂದು ಮಹಾತ್ಮಾಜಿಯವರು ತಿಳಿದು ತಾವು ಅದರಂತೆ ನಡೆದು ತಮ್ಮ ಅನುಯಾಯಿಗಳಿಗೆ ಮತ್ತು ಜನಸಾಮಾನ್ಯರಿಗೆ ತಮ್ಮಂತೆ ನಡೆಯಲು ಆಗ್ರಹಪಡುತ್ತಿರುವರು.

ಈ ಉದ್ದೇಶವನ್ನರಿತೇ ನಾವು ಈ ಸಾರೆ ಗಾಂಧಿ—ಸೇವಾ ಸಂಘದ ಅಧಿವೇಶನದ ಕಾಲಕ್ಕೆ ಗ್ರಾಮೋದ್ಯೋಗದ ಪ್ರದರ್ಶನವನ್ನು ಕೂಡಿಸುವವರಿದ್ದೇವೆ. ಆದರೆ ಪ್ರದರ್ಶನಕ್ಕೆ ಕಳಿಸಿಕೊಡುವ ವಸ್ತ್ರ ಒಡವೆಗಳು ಯಾವ ವಿಧದವುಗಳಿರಬೇಕು, ಮತ್ತು 'ಮಾಡಿ ತೋರಿಸುವ ಕಾರಖಾನೆಗಳು' ಯಾವ ಪ್ರಕಾರದವುಗಳಿರಬೇಕೆಂದು ನಾವು ಕೆಳಗೆ ಕಾಣಿಸುತ್ತೇವೆ.

(೧) ಕೈರಾಟೆಯಿಂದ ನೂತು ಜನುಗಾದ, ಒಂದೇ ಸವನೆ ಮತ್ತು ಹುರಿಕಟ್ಟಿದ್ದ ನೂಲು (ಯಾವ ಅರಳಿಯಿಂದ ನೂಲು ನೂತಿದೆ ಎಂದು ತಿಳಿಸಬೇಕು.)

(೨) ಕೈಮಗ್ಗದಲ್ಲಿ ನೇದು ತಯಾರು ಮಾಡಿದ ಬಟ್ಟೆಗಳು. ಕೋಟು-ಪೈರಾಣದ ಬಟ್ಟೆಗಳು, ಜನುಗಾದ ಧೋತರಗಳು, ನಯವಾದ ಸೀರೆಗಳು ಮತ್ತು ಮಾಯಿಕಾ ಮತ್ತು ಕ್ಯಾಲಿಕೊ ಪ್ರಿಂಟಿಂಗದಿಂದ ತಯಾರಿಸಿದ ಬಟ್ಟೆಗಳು, ಕೈ ಜಂತ್ರ ಮಗ್ಗದ ಮೇಲೆ ಹೊರಟ ರೇಶಿಮೆ ಬಟ್ಟೆಗಳು.

(೩) ಜಮಖಾನ ಉತ್ತಮ ಹಾಸುವ ಮತ್ತು ಹೊದೆಯುವ ನಾನಾತರದ ಕಂಬಳಿಗಳು.

(೪) ಹಲವು ವಿಧದ ಹುಲ್ಲಿನಿಂದ ತಯಾರಿಸಿದ ಚಾಪಿ, ಆಸನ, ಬುಟ್ಟಿ ಮುಂತಾದವು.

(೫) ಕಟ್ಟಿಗೆಯ ಸಾಮಾನುಗಳು, ಸಣ್ಣಮಗುಗಳ ಸಲುವಾಗಿ ಆಟದ ಒಡವೆ, ಹಾಲು ಮುಂತಾದ ಪೇಯ ಪದಾರ್ಥಕ್ಕೆ ಉಪಯೋಗಿಸಲ್ಪಡುವ ಕಪ್ಪು ಬಸಿ, ಶೋಭೆಯ ಸಲುವಾಗಿ ಉಪಯೋಗಿಸುವ ಬಣ್ಣ ಕೊಟ್ಟ ಇತರ ಪ್ರೇಕ್ಷಣೀಯ ಒಡವೆಗಳು. (ಹಣ್ಣು ಹಂಪಲ ಮುಂತಾದ್ದು.)

(೬) ಬೆತ್ತದಿಂದ ತಯಾರಿಸಿದ (Cane works) ಟೇಬಲ, ಕರ್ಚಿ, ಬುಟ್ಟಿ, ಬಡಿಗೆ ಮುಂತಾದವು.

(೭) ಕಲ್ಲುಗಳಿಂದ ತಯಾರು ಮಾಡಿದ ಕಲಪರಟಿ, ಭರಣಿ, ಪಾಟಿ, ಪೇನಸೀಲ, ದೇವರ ಮೂರ್ತಿ ಮುಂತಾದವು.

(೮) ಮಣ್ಣಿನ ಪಾತ್ರೆ, ಕಪ್ಪು ಬಸಿ, ಮನೋವೇಧಕ ಬಣ್ಣ ಕೊಟ್ಟ ಕೊಡ, ತಂಬಿಗೆ, ಬಟ್ಟಲು, ತಾಟು, ಮುಂತಾದವು.

(೯) ಕಬ್ಬಿಣದಿಂದ ತಯಾರಿಸಿದ ವಸ್ತುಗಳು— ಚಾಕು, ಕತ್ತರಿ, ಅಡಕತ್ತು, ಕಪರು, ತಕಲಿ, ಕುಡಗೋಲು, ಕುರಪಿ, ಕೊಡ್ಲಿ ಮುಂತಾದ ಒಕ್ಕಲತನಕ್ಕೆ ಉಪಯುಕ್ತವಾದ ವಸ್ತುಗಳು.

(೧೦) ಕಸರು ಮಣ್ಣು ಮುಂತಾದವುಗಳಿಂದ ಕೂಡದೇ ಇದ್ದ ಎಲ್ಲ ನಮೂನೆಯ ಉತ್ತಮ ಹತ್ತಿ, ಬಿತ್ತಲು ತೆಗೆದಿಟ್ಟ ಎಲ್ಲ ವಿಧದ ಜೋಳ, ಗೋದಿ, ಕಡಲಿ ಮುಂತಾದ ನಮೂನೆಯ ಕಾಳು.

ಪ್ರದರ್ಶನದ ಆವಾರದಲ್ಲಿ ಮಾಡಿ ತೋರಿಸುವ ಕಾರಖಾನೆ—

(೧) ಹತ್ತಿ ಅರಿಯುವದು, ಹಲವು ವಿಧದ ಸಾಧನಗಳಿಂದ ಹತ್ತಿ ಅರಿದು ತೋರಿಸುವದು.

ನಾನಾ ತರದ ಬೆಸೆಯಿಂದ ಅರಳಿ ಹೊಡೆದು ಹಂಜಿ ಮಾಡಿ ತೋರಿಸುವದು.

ಎಲ್ಲ ಬಗೆಯ ಜಂತ್ರಗಳ ಮೇಲೆ ನೂತು ತೋರಿಸುವದು.

(೨) ಇಲ್ಲಿಯೇ ಕಾಜು ತಯಾರಿಸಿ ಬಳೆಗಳನ್ನು ಮಾಡಿ ತೋರಿಸುವದು.

(೩) ಹೊಸ ರೀತಿಯಿಂದ ಜೇನ ಹುಳಗಳನ್ನು ಸಾಕಿ ಜೇನ ತುಪ್ಪ ತಯಾರಿಸುವದು.

ಕಾಗದ, ಕಲ್ಲುಪರಟಿ, ಚಾಪಿ ಮುಂತಾದ ಹುಲ್ಲಿನ ವಸ್ತು, ಪಾಟಿ, ಗಂಧದ ಕಟ್ಟಿಗೆಯಿಂದ ಅದರಂತೆ ಆನೆಯ ಕೋರೆಯಿಂದ ಮೂರ್ತಿಗಳನ್ನು ಮಾಡಿ ತೋರಿಸುವದು. ಕೈಗಾಣದ ಸಹಾಯದಿಂದ ಕುಸಬೀ ಎಣ್ಣೆಯನ್ನು ತೆಗೆಯುವದು ಇದಲ್ಲದೆ ಹಳ್ಳಿಯ ಬಡ ಒಕ್ಕಲಿಗರಿಗೆ ಉಪಯುಕ್ತವಾದ ಹಲವು ತರದ ಕೈಗಾರಿಕೆಯ ಕಾರಖಾನೆಯ ಪ್ರದರ್ಶನ ಮಾಡಿ ತೋರಿಸುವದು.

ಮೇಲೆ ಕಾಣಿಸಿದ ಎರಡು ಭಾಗಗಳನ್ನು ನಿರೀಕ್ಷಿಸಿದರೆ ಕಲಾವಂತರು ತಾವು ಹಳ್ಳಿಯಲ್ಲಿಯ ಜನರಿಗೆ ಉಪಯೋಗ ಬೀಳುವ ಗ್ರಾಮೋದ್ಯೋಗದ ದೃಷ್ಟಿಯಿಂದ ತಯಾರಿಸಿದ ಎಲ್ಲ ವಿಧದ ವಸ್ತ್ರ ಒಡವೆಗಳನ್ನು ಪ್ರದರ್ಶನದಲ್ಲಿ ಇಡಲು ಕಳಿಸಬೇಕು. ಮತ್ತು 'ಮಾಡಿ ತೋರಿಸುವ' ಕಾರಖಾನೆಯ ಮಾಲಕರು ಅಥವಾ ಯೋಜಕರು ತಮಗೆ ಗೊತ್ತಿದ್ದ ವಸ್ತ್ರ ಒಡವೆಗಳನ್ನು ತಯಾರಿಸುವ ಕಾರಖಾನೆ ತಂದು ಪ್ರದರ್ಶನದಲ್ಲಿ ಇಟ್ಟು ಜನರಿಗೆ ಅದರ ಜ್ಞಾನ ಮಾಡಿ ಕೊಡಬೇಕು.

ಇನ್ನು ಮುಂದೆ ಮೂರನೆಯ ಪ್ರಕಟನೆಯಲ್ಲಿ ಹೆಚ್ಚಿನ ಮಾಹಿತಿಯನ್ನು ಕೊಡುವೆವು.

ತಮ್ಮೆಲ್ಲರ ಸೇವಕ,

ವಾಮನ ಬಾಳಾಜಿ ದೇಸಾಯಿ ಬಿದರಿ

ಸೆಕ್ರೆಟರಿ,

ಪ್ರದರ್ಶನ ಮಂಡಲ. ಹುದಲಿ.

—ಪುಣೆಯಲ್ಲಿ ಒಕ್ಕಲತನ ಮತ್ತು ಕೈಗಾರಿಕೆಗಳ ಭವ್ಯವಾದ ಪ್ರದರ್ಶನ ಏರ್ಪಟ್ಟಿದೆ. ತ್ರಾವಣಕೋರ, ಮೈಸೂರು, ನಿಜಾಮ ಸಂಸ್ಥಾನಗಳಲ್ಲಿಯ ಅನೇಕ ಉಪಯುಕ್ತ ವಸ್ತುಗಳು ಈ ಪ್ರದರ್ಶನದಲ್ಲಿವೆ.

ಮನನೀಯವಾದ ಉಪದೇಶ.

[ಭಾರತೀಯ ತತ್ವಜ್ಞಾನಿಗಳಲ್ಲಿ ಸುಪ್ರಸಿದ್ಧರಾದ ಶ್ರೀ. ಸಾಧು ಟಿ. ಎಲ್. ವಾಸ್ವಾನಿಯವರು ಮಾಡಿದ ಅತ್ಯಂತ ಮಹತ್ವವಾದ ಉಪದೇಶವನ್ನು ಪುತ್ತೂರು ಹಿಂದಿ ಪ್ರಚಾರಕರಾದ ಶ್ರೀ. ವರ್ಧಮಾನ ಹೆಗಡೆ ಎಂಬುವವರು ಕನ್ನಡಿಸಿ ತಾ. ೧೯-೩-೩೭ ನೆಯ "ಸ್ವದೇಶಾಭಿಮಾನಿ" ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಆ ಲೇಖನದಲ್ಲಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಉಪದೇಶಗಳನ್ನು ಇದರಡಿಯಲ್ಲಿ ಕೊಡಲಾಗಿದೆ. —ಸಂ.]

ವಿದ್ಯಾರ್ಥಿಗಳ ರೀತಿ ನೀತಿ.

(೧) ವಿದ್ಯಾರ್ಥಿಗಳು ಎಲ್ಲಕ್ಕಿಂತ ಮೊದಲು ಶಾರೀರಕ ಬಲವನ್ನು ಚೆನ್ನಾಗಿ ಪ್ರಾಪ್ತಮಾಡಿಕೊಳ್ಳತಕ್ಕದ್ದು. ಇದರ ಹೊರತು ಅವರು ಲೋಕದ ಸೇವೆಯನ್ನು ಅಧಿಕ ಮಾಡಲು ಸಮರ್ಥರಾಗಲಾರರು. ಭಾರತಮಾತೆಯು ಹೇಳುತ್ತಾಳೆ ಒಂದು ವೇಳೆ ನೀವು ನನ್ನ ಸೇವೆ ಮಾಡುವುದಕ್ಕೆ ಬಯಸುವುದಾದರೆ ಎಲ್ಲಕ್ಕಿಂತ ಮೊದಲು ಆರೋಗ್ಯವಂತರಾಗಿ, ಆಯುಷ್ಯವಂತರಾಗಿ, ಶರೀರವನ್ನು ಸುದೃಢ ಸಹನಶೀಲವನ್ನಾಗಿ ಮಾಡುವುದು ರಾಷ್ಟ್ರನಿರ್ಮಾಣ ಮಾಡಿದಂತೆಯೇ ಸರಿ. ಆದ್ದರಿಂದ ಆತ್ಮನ ಈ ಮಂದಿರವನ್ನು ಸುಂದರ ದೃಢ ಮತ್ತು ದೀರ್ಘ ಜೀವಿಯನ್ನಾಗಿ ಮಾಡು.

(೨) ತಮ್ಮ ಮುಖಂಡರನ್ನು ಕಣ್ಣು ಮುಚ್ಚಿಕೊಂಡು ಅನುಸರಿಸಬೇಡ. ಸ್ವತಂತ್ರ ವಿಚಾರವುಳ್ಳವನಾಗು.

(೩) ಅಧಿಕ ಮಾತಾಡುವವನಾಗಬೇಡ. ಮೌನವಾಗಿದ್ದು ನಿಸ್ವಾರ್ಥ ದೃಷ್ಟಿಯಿಂದ ಸೇವಾ ಕಾರ್ಯವನ್ನು ಮಾಡುತ್ತಿರು. ಅನೇಕ ಪ್ರಸ್ತಾಪಗಳಲ್ಲಿಯೇ ವಿಶ್ವಾಸವಿಡಬೇಡ. ರಚನಾತ್ಮಕ ಕಾರ್ಯವನ್ನು ಮಾಡು.

(೪) ಖಾದಿಯನ್ನು ಧರಿಸಿರಿ. ಅದು ದೇಶಸೇವೆಯ ಮುಖ್ಯ ಸ್ತಂಭವಾಗಿದೆ.

(೫) ಪ್ರತ್ಯೇಕ ರವಿವಾರಗಳಲ್ಲಿ ಬೇಸಿಗೆಯ ರಜೆಯಲ್ಲಿ ಯಾವುದಾದರೂ ದೇಶಹಿತ ಕಾರ್ಯಗಳನ್ನು ಮಾಡಿರಿ. ಕೂಲಿಯಾಳು ಮತ್ತು ಕೃಷಿಕ (ರೈತ) ರಿಗೆ ಶಿಕ್ಷಣಾರ್ಥ ರಾತ್ರಿ ಪಾಠಶಾಲೆಗಳ ಸಂಚಾಲನೆ ಮಾಡಿ, ಕೆಲವು ಯುವಕರು ಸೇರಿ ಅವರಿಗೆ ಓದಿಸುವುದು ಬರೆಯಿಸುವುದು ಶುದ್ಧತೆ ನಿಯಮಗಳೇ ಮೊದಲಾದ ಉತ್ತಮ ಮಾತುಗಳನ್ನು ಪ್ರೇಮದಿಂದ ಕಲಿಸಿರಿ.

(೬) ಸ್ತ್ರೀಯರಲ್ಲಿಯೂ ಜಾಗೃತಿಯನ್ನುಂಟು ಮಾಡಿ. ಇದರಿಂದ ಸ್ವರಾಜ್ಯವು ಅಧಿಕ ಹತ್ತಿರವಾಗುವುದು. ಸ್ತ್ರೀಯರಲ್ಲಿ ವಿಲಕ್ಷಣವಾದ ಪ್ರಚಾರದ ಪ್ರವೃತ್ತಿ ಇರುತ್ತದೆ. ಪ್ರತಿಯೊಂದು ಬೀದಿ ಗ್ರಾಮಗಳಲ್ಲಿ ಅವರಿಗೆ ಸಹಾಯ ಮಾಡಿ ಸಂಘಟನೆ ಮಾಡಿ ಮುನಿಸಿಪಾಲಿಟಿಯಿಂದ 'ಮೆಜಿಕ್ ಲೆಂಟರ್ನ' ತೆಗೆದುಕೊಂಡು ಹೋಗಿ ಅವರಿಗೆ ಅಭಯ ಮತ್ತು ಕರ್ಮಣ್ಯರಾಗುವಂತೆ ಉಪದೇಶಿಸಿರಿ. ರಾಮಾಯಣ ಮತ್ತು ಮಹಾ ಭಾರತದ ಸ್ಫೂರ್ತಿದಾಯಕವಾದ ಕಥೆಗಳ ಮೂಲಕ ಅವರಲ್ಲಿ ಜೀವನ ಮತ್ತು ಜಾಗೃತಿಯ ಸುಂದರ ಭಾವನೆಯನ್ನು ತುಂಬಿಸಿರಿ. ಸ್ತ್ರೀಯರ ಹೀನತೆ ಸಂಬಂಧವಾದ ಕೆಟ್ಟ ವಿಚಾರಗಳನ್ನು ನಷ್ಟಪಡಿಸಿರಿ.

(೭) ಅಸ್ಪೃಶ್ಯರನ್ನು ತನ್ನಕಡೆಗೆ ಮಾಡಿಕೊಳ್ಳಿ. ಅವರಿಗೆ ಎಲ್ಲಾ ತರಹದ ಸೇವೆಯನ್ನು ಮಾಡಿ ಅವರನ್ನು ಉದ್ಧರಿಸಿರಿ.

(೮) ಲೋಕಕ್ಕೆ ಹಿತಕರವಾದ ಕಾರ್ಯಗಳನ್ನು ಯಾವಾಗಲೂ ಮಾಡುತ್ತಿರು. ಇದರಿಂದ ಯಾರಿಗಾದರೂ ಕಷ್ಟ ಉಂಟಾಗಬಹುದೆಂಬುದನ್ನು ಚಿಂತಿಸಬೇಡ.

ಶ್ರೀಮಹಾ ಶಿವರಾತ್ರಿ ಸಮಾರಂಭೋತ್ಸವ.

ಗುಲಬರ್ಗಾ ಜಿಲ್ಲೆಗೆ ಸೇರಿದ ಚಿಂಚನಸೂರ ಗ್ರಾಮದ ಕಲ್ಲುಮಠದ ಶ್ರೀ ಶಿದ್ಧಮಲ್ಲ ಶಿವಯೋಗಿಗಳ ಸನ್ನಿಧಿಯಲ್ಲಿ ಶಿವರಾತ್ರಿಯ ದಿವಸ ಶಿವಾರ್ಚನಾ ಸಮಾರಂಭವು ಬಹು ಸೊಗಸಾಗಿ ನೆರವೇರಿತು. ನೂರಾರು ಜನ ಭಕ್ತಸಮೂಹವು ನೆರೆದಿತ್ತು. ರಾತ್ರಿ ಎಂಟು ಗಂಟೆಗೆ ಲಿಂಗಾರ್ಚನೆ ಪ್ರಾರಂಭವಾಗಿ ಹನ್ನೆರಡು ಗಂಟೆಯ ವರೆಗೆ ನಡೆಯಿತು. ಆ ಮೇಲೆ ಶಿವಕೀರ್ತನೆ ವಚನ ಪ್ರವಚನಗಳು ಸತ್ಪುರುಷರ ಕಥೆಗಳು ಆರು ಗಂಟೆಯ ವರೆಗೂ ನಡೆದು ಮಹಾ ಶಿವರಾತ್ರಿಯ ಜಾಗರಣೆಯು ನೆರವೇರಿಸಲ್ಪಟ್ಟಿತು. ಮಾರನೆ ದಿವಸ ಶ್ರೀ ರುದ್ರಾರಾಧ್ಯ ಶಾಸ್ತ್ರಿಗಳು ಕುರಿಕೋಟೆ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸತ್ಯ, ಅಹಿಂಸಾ, ಖಾದಿಪ್ರಸಾರ, ಮೊದಲಾದ ವಿಷಯಗಳು ಚರ್ಚಿಸಲ್ಪಟ್ಟವು. ಆ ಮೇಲೆ ಶ್ರೀ ಶಿದ್ಧಮಲ್ಲ ಶಿವಯೋಗಿಗಳು "ವೀರಶೈವರ ಏಕೀಕರಣ" ಎಂಬ ವಿಷಯವನ್ನು ಕುರಿತು ತಮ್ಮ ಅಮೌಲ್ಯವಾದ ಅಮೃತವಾಣಿಯಿಂದ ಜನರ ಮನಾನಂದ ಗೊಳಿಸುವಂತೆ ಚೆನ್ನಾಗಿ ಉಪದೇಶಿಸಿದರು. ಅನಂತರ ಸಭಾಧ್ಯಕ್ಷರು ಅಸ್ಪೃಶ್ಯತಾ ನಿವಾರಣೆಯ ಪರವಾಗಿ ಭಾಷಣವನ್ನು ಮಾಡಿದರು. ಆ ಮೇಲೆ ಶ್ರೀ ಗದ್ದಿಗೇಂದ್ರ ಮಹಾ ಸ್ವಾಮಿಯವರ ಮಂಗಳಾರುತಿಯನ್ನು ಮಾಡಿ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು. ಇಂಥ ಧರ್ಮೋಪದೇಶಕರಾದ ಶ್ರೀಶಿದ್ಧಮಲ್ಲ ಶಿವಯೋಗಿಗಳಿಗೆ ಶ್ರೀ ಶಂಕರನು ಸದಾ ಆಯುರಾರೋಗ್ಯವನ್ನೀಯಲಿ.

ವೀರಶೈವ ತರುಣಸಂಘ.

ಕಾಂಗ್ರೆಸ್ಸಿನ ಪ್ರಭುತ್ವದಲ್ಲಿ ಆಗಬೇಕಾದುದೇನು?

ಕಾಂಗ್ರೆಸ್ಸು ಆರು ಪ್ರಾಂತಗಳಲ್ಲಿ ಮಂತ್ರಿ ಮಂಡಲವನ್ನು ಏರ್ಪಡಿಸಿಕೊಂಡು ಬರುವ ಎಪ್ರೆಲ್ ೧ ನೆಯ ತಾರೀಖಿನಿಂದ ಪ್ರಾಂತಿಕ ಪ್ರಭುತ್ವವನ್ನು ಪ್ರಾರಂಭಿಸುತ್ತದಷ್ಟೆ. ಈ ಸರಕಾರವು ಏನು ಮಾಡಬೇಕು ? ಗಾಂಧೀಜಿಯವರು ಮೊದಲು ವಿಧಾಯಕ ಕಾರ್ಯಗಳನ್ನು ಕೈಕೊಳ್ಳಲು ಸೂಚಿಸಿದ್ದಾರೆ. ಅನೇಕರು ಸೂಚಿಸುತ್ತಿರುವ ಕಾರ್ಯಗಳ ವಿವರ ಹೀಗಿವೆ—

(೧) ಈಗ ಕಂದಾಯವನ್ನು ಎತ್ತುವ ಅವಧಿಯು ಒಂದು ತಿಂಗಳು ಮುಂದೆ ಹೋಗಬೇಕು. ಎಂದರೆ ಒಕ್ಕಲಿಗರಿಗೆ ಧಾನ್ಯವನ್ನು ಸರಿಯಾದ ಬೆಲೆಗೆ ಮಾರಿ ಕಂದಾಯ ಕೊಡಲು ಅನುಕೂಲವಾಗುತ್ತದೆ.

(೨) ಸರಕಾರದಿಂದ ಉಪಯೋಗಿಸಲ್ಪಡುವ ಕಾಗದ ಮೊದಲಾದ ಎಲ್ಲ ವಸ್ತುಗಳೂ ಸ್ವದೇಶದಲ್ಲಿ ಹುಟ್ಟಿದವುಗಳಾಗಿರಬೇಕು.

(೩) ಸರಕಾರಿ ನೌಕರರ ಉಡುಪು ಖಾದಿಯಾಗಬೇಕು.

(೪) ಗೋ ಸಂಹಾರವು ಸಂಪೂರ್ಣವಾಗಿ ನಿಂತು ಗೋಮಾಳಗಳು ಉಚಿತವಾಗಿ ಕೊಡಲ್ಪಡಬೇಕು.

(೫) ಪ್ರಾಥಮಿಕ ಶಿಕ್ಷಣವು ಸರ್ವತ್ರ ಉಚಿತವೂ ಒತ್ತಾಯವುಳ್ಳದ್ದೂ ಆಗಬೇಕು.

(೬) ಆಯುರ್ವೇದಕ್ಕೆ ಮಹತ್ವವನ್ನು ಕೊಟ್ಟು ಹಳ್ಳಿಗಳಲ್ಲಿಯೂ ವೈದ್ಯಾಲಯವು ಏರ್ಪಡಬೇಕು.

(೭) ಹಿಂದಿ ಭಾಷೆಗೆ ಮಹತ್ವವನ್ನು ಕೊಟ್ಟು ಅದು ರಾಷ್ಟ್ರೀಯ ಭಾಷೆಯಾಗುವಂತೆ ಪ್ರಯತ್ನಿಸಬೇಕು.

ಬ್ರಾಹ್ಮಣಾದಿ ಜಾತಿಗಳಲ್ಲಿಯ ಒಳ ಪಂಗಡಗಳನ್ನು ತೆಗೆದು ಹಾಕಿರಿ.

ಮಹಾರಾಷ್ಟ್ರದಲ್ಲಿಯ ಪ್ರಸಿದ್ಧ ವಿದ್ವಾಂಸರೂ ಸಮಾಜಸೇವಾ ಧುರೀಣರೂ ಆದ ಶ್ರೀ. ದಿವೇಕರ್ ಮಹದೇವ ಶಾಸ್ತ್ರಿಗಳು ಬ್ರಾಹ್ಮಣಾದಿ ಸವರ್ಣೀಯ ಹಿಂದುಗಳಲ್ಲಿರುವ ಒಳಪಂಗಡಗಳನ್ನು ತೆಗೆದುಹಾಕುವ ಕುರಿತು ತಾರೀಖು ೧೯-೩-೩೭ ನೆಯ ಕೇಸರೀ ಪತ್ರಿಕೆಯಲ್ಲಿ ಒಂದು ಮಹತ್ವಯುತವಾದ ಲೇಖನವನ್ನು ಬರೆದಿದ್ದಾರೆ. ಅದರ ಮುಖ್ಯಾಂಶ ಹೀಗಿದೆ —

"ಹಿಂದು ಸಮಾಜವು ಜಾತಿವಿಶಿಷ್ಟವಾದುದು. ಈ ಜಾತಿ ಕಲ್ಪನೆಯು ವಿಘಾತಕವಾದ ಜನ್ಮವಿಶಿಷ್ಟ ಮೇಲು ಕೀಳುಗಳಿಂದ ಕೂಡಿದ್ದಾಗಿದೆ. ಹಿಂದು ಸಮಾಜದಲ್ಲಿಯ ನಾನಾ ಜಾತಿಗಳಲ್ಲಿರತಕ್ಕ ಒಳ ಪಂಗಡಗಳು ಜಾಗ್ರತೆ ನಿವಾರಣೆಯಾಗಬೇಕು. ಪರಸ್ಪರ ಊಟೋಪಚಾರ ಮತ್ತು ಶರೀರ ಸಂಬಂಧ ಜರುಗಬೇಕು.

ಅನೇಕರು ಈ ಜಾತಿಗಳೆಲ್ಲಾ ದೇವರಿಂದ ಉಂಟಾದವುಗಳೆಂದು ತಿಳಿದುಕೊಂಡಿದ್ದಾರೆ. ಇದು ತಪ್ಪು ತಿಳುವಳಿಕೆ. ದೇಶಭೇದ, ಆಚಾರಭೇದ, ಆಹಾರಭೇದ, ಉದ್ಯೋಗದ ಭೇದ, ಮೊದಲಾದ ಅನೇಕ ಕಾರಣಗಳಿಂದ ಈ ಜಾತಿಗಳ ಕಲ್ಪನೆಯುಂಟಾಗಿದೆ. ಪಂಚದ್ರಾವಿಡ ಬ್ರಾಹ್ಮಣರಲ್ಲಿಯ ೨೮-೩೦ ಒಳಜಾತಿಗಳು, ಮರಾಠಿಯವರಲ್ಲಿಯ ೪೩ ಪಂಗಡಗಳು, ಹೊಲೆಯರಲ್ಲಿಯ ೩೫ ಜಾತಿಗಳು, ಚಮ್ಮಾರರಲ್ಲಿಯ ೧೨ ಜಾತಿಗಳು ಈ ಪ್ರಕಾರ ಅನೇಕ ಜಾತಿಗಳಲ್ಲಿರತಕ್ಕ ಒಳಪಂಗಡಗಳು ದೇವರಿಂದ ನಿರ್ಮಿಸಲ್ಪಟ್ಟಿಲ್ಲ. ಇವೆಲ್ಲಾ ಕಾಲಮಾನಕ್ಕೆ ತಕ್ಕಂತೆ ಉದ್ಯೋಗಾದಿ ಅನೇಕ ಭೇದಗಳಿಂದ ಉಂಟಾಗಿವೆ.

ಈಗ ಈ ಎಲ್ಲ ಒಳ ಪಂಗಡಗಳನ್ನು ಆಯಾಯ ಜಾತಿಯವರು ತೆಗೆದು ಹಾಕುವುದು ಅತ್ಯವಶ್ಯಕವಾಗಿದೆ. ಹಿಂದು ಸಮಾಜ ಸಂಘಟನೆಯ ದೃಷ್ಟಿಯಿಂದಂತೂ ಅತ್ಯಗತ್ಯ. ಎಲ್ಲಾ ಜಾತಿಗಳೂ ಹೋಗುವ ಕಾಲ ಬಂದಿರುವಾಗ ಈ ಒಳಜಾತಿಗಳ ಏಕೀಕರಣವೇಕೆ? ಎಂದು ಕೆಲವರು ಕೇಳಬಹುದು. ಜಾತಿ ಕಲ್ಪನೆಯು ಬಾಯಿಮಾತಿನಿಂದ ಹೋಗುವುದಲ್ಲ.

ಈ ದಿನ ಒಬ್ಬ ಬ್ರಾಹ್ಮಣ ತರುಣನಿಗೂ ಒಬ್ಬ ಶೂದ್ರ ತರುಣೆಗೂ ಲಗ್ನವಾದಮಾತ್ರದಲ್ಲಿ ಜಾತಿಗಳು ನಾಶವಾಗುತ್ತವೆಂದು ತಿಳಿಯಬಾರದು. ಸಮಾನ ಆಚಾರ, ವಿಚಾರ, ಶೀಲ, ಸಂಸ್ಕೃತಿಗಳುಳ್ಳವರಲ್ಲಿ ಶರೀರ ಸಂಬಂಧವಾಗುವುದೇ ಜನಾಂಗಕ್ಕೆ ಕ್ಷೇಮಕರವು. ಒಂದು ಜಾತಿಯ ಒಳ ಪಂಗಡಗಳಲ್ಲಿ ಸಾಮಾನ್ಯವಾಗಿ ಇವೆಲ್ಲಾ ಸಮಾನವಾಗಿಯೇ ಇರುವುದರಿಂದ ಊಟೋಪಚಾರ, ಶರೀರ ಸಂಬಂಧಗಳನ್ನು ಜರುಗಿಸಿದರೆ ಯಾವ ಅಪಾಯವೂ ಸಂಭವಿಸುವುದಿಲ್ಲ.

ಪಂಚ ದ್ರಾವಿಡ ಬ್ರಾಹ್ಮಣರಲ್ಲಿಯ ಅವಿವಾಹಿತ ತರುಣ ತರುಣಿಯರು ಮತ್ತು ಪಾಲಕರು ಒಳ ಭೇದಗಳನ್ನು ತೆಗೆದು ಹಾಕಲು ಸಿದ್ಧರಾಗಬೇಕು. ಹಳೆ ರೂಢಿಗೇನೇ ದಾಸರಾಗಬಾರದು. ಪಂಚ ದ್ರಾವಿಡಬ್ರಾಹ್ಮಣರಲ್ಲಿ ೩೦ ಪಂಗಡಗಳಿವೆ. ಅವುಗಳಲ್ಲಿ ಋಗ್ವೇದಿ ದೇಶಸ್ಥ, ಯಜುರ್ವೇದಿ ದೇಶಸ್ಥ, ಚಿತ್ಪಾವನ, ಕರ್ಹಾಡೆ, ಮೊದಲಾದ ಕೆಲವು ಒಳ ಪಂಗಡಗಳಲ್ಲಿ ಸರಿಯಾದ ವರನಿಗೆ ಸರಿಯಾದ ವಧೂ ದೊರೆಯುವುದುಂಟು. ಇನ್ನಿತರ ಅನೇಕ ಒಳ ಪಂಗಡಗಳಲ್ಲಿಯ ವರನಿಗೆ ಸರಿಯಾದ ವಧೂ ದೊರೆಯದಿದ್ದುದಕ್ಕಾಗಿ ಹೀಗೆ ಪತ್ರಗಳು ಬಂದಿವೆ—

"ನಾವು ಯಾವ ಸಮಾಜದಲ್ಲಿದ್ದು ಶಿಕ್ಷಣ, ಸಂಪತ್ತು ಮತ್ತು ಆರೋಗ್ಯಗಳಿಂದ ಒಳ್ಳೆಯ ಸ್ಥಿತಿಯನ್ನು ಹೊಂದಿದ್ದರೂ ಆ ಸಮಾಜದಲ್ಲಿ ನಮಗೆ ಸರಿಯಾದ ವಧೂ ದೊರೆಯದಿದ್ದ ಮೇಲೆ ನಾವು ಆ ಸಮಾಜದಲ್ಲಾದರೂ ಏಕೆ ಇರಬೇಕು?"

ಈಗ ದೇಶದಲ್ಲಿ ವಿಚಾರಕ್ರಾಂತಿಯುಂಟಾಗಿದೆ ಅಲ್ಪಸಂಖ್ಯಾಕರ ಹಿತವನ್ನು ನೋಡಲೇ ಬೇಕಾಗಿದೆ. ಬ್ರಾಹ್ಮಣರಲ್ಲಿ ಅಲ್ಪ ಸಂಖ್ಯಾಕರರಾದ ಪಂಗಡದವರ ಹಿತವನ್ನು ಬಹು ಸಂಖ್ಯಾಕರಾದ ಬ್ರಾಹ್ಮಣರು ನೋಡಲೇ ಬೇಕು. ಅಕೋಲಾ ಪಟ್ಟಣದಲ್ಲಿ ಹತ್ತು ವರುಷಗಳ ಹಿಂದೆ ಬ್ರಾಹ್ಮಣ ಪರಿಷತ್ತು ಕೂಡಿ ಪಂಚ ದ್ರಾವಿಡ ಬ್ರಾಹ್ಮಣರಲ್ಲಿಯ ಒಳಭೇದಗಳನ್ನೆಲ್ಲಾ ತೆಗೆದು ಹಾಕಬೇಕೆಂದು ನಿರ್ಣಯಿಸಿತ್ತು. ಆ ಪ್ರಕಾರ ಈಗ ಅಲ್ಲಲ್ಲಿ ಒಳ ಪಂಗಡಗಳ ಏಕೀಕರಣವು ಶರೀರ ಸಂಬಂಧದಿಂದಲೂ ನಡೆಯುತ್ತಲಿದೆ. ಈ ಕಾರ್ಯವು ಇನ್ನೂ ತೀವ್ರತರವಾಗಿ ಜರುಗಬೇಕು."

ಬ್ರಾಹ್ಮಣರೇ ಈ ಪ್ರಕಾರ ತಮ್ಮಲ್ಲಿಯ ಒಳ ಭೇದಗಳನ್ನು ತೆಗೆಯಲು ಪ್ರಯತ್ನಿಸುತ್ತಿರುವಾಗ, ಅವರನ್ನು ತಮ್ಮ ಗುರುಗಳನ್ನಾಗಿ ಇಟ್ಟುಕೊಂಡಿರುವ ಇತರ ಹಿಂದುಗಳು ಅವರ ಮಾರ್ಗವನ್ನೇ ಅನುಸರಿಸುವುದು ಯುಕ್ತವಲ್ಲವೆ?

ಕಿತ್ತೂರು.

ಶ್ರೀ. ನಿ. ಜ. ಪ್ರ. ಶ್ರೀಗುರು ಸಿದ್ಧೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ಶ್ರೀ ಚೌಕೀಮಠದಲ್ಲಿ ಪ್ರತಿವರ್ಷದಂತೆ ಈ ವರ್ಷ ಶಿವರಾತ್ರಿ ಉತ್ಸವವು ವಾದ್ಯ ಗಾನಗಳ ಇಂಪಿನಿಂದಲೂ ಅನ್ನ ಪಾನಗಳ ವಿಶೇಷ ವಿತರಣೆಯಿಂದಲೂ ಪುರಾಣ ಕೀರ್ತನಗಳ ನವರಸಭರಿತವಾದ ವಾಗ್ಝರಿಯಿಂದಲೂ ಜರಗಿದುದಲ್ಲದೆ ಪಾರಣೆಯ ದಿವಸ ಭಕ್ತ ಜನರ ಅಗ್ರಹದ ಮೇರೆಗೆ ಶ್ರೀಗಳವರ ಪಲ್ಲಕ್ಕಿ ಮಹೋತ್ಸವವು ಸಾವಿರಾರು ಜನ ಸಮುದಾಯದೊಡನೆ ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಈ ಉತ್ಸವದಲ್ಲಿ ಹೊಲಿಕೇರಿಯ ಇನಾಮದಾರರಾದ ಶ್ರೀಮಂತ ದುಂಡಪ್ಪಣ್ಣನವರು ಪಾರಣೆಯ ದಿವಸ ಎಲ್ಲ ಭಕ್ತ ಮಾಹೇಶ್ವರರಿಗೆ ವಿ-ಷ್ಟಾನ್ನ ಭೋಜನ ಮಾಡಿಸಿದರು. ಗಂದಿಗವಾಡ ಹಿರೇಮಠದವರು ಶಿವರಾತ್ರಿಯ ಪೂರ್ವದ ದಿವಸದಲ್ಲಿ ಅನ್ನ ಸಂತೃಪ್ತಿಗೈದರು. ಈ ಉತ್ಸವದ ವೈಭವಕ್ಕೆ ಯಕ್ಕುಂಡಿ ಶ್ರೀ. ನಿ. ಸ್ವಾಮಿಗಳು ತಮ್ಮ ವಚನ ವಾಙ್ಮಯದಿಂದಲೂ, ಶ್ರೀ ಸಂಪಗಾಂವಿ ಚರಮೂರ್ತಿಗಳು ಅಂತರಂಗ ಶುದ್ಧಿಯಿಲ್ಲದ ದಂಭದ ಧರ್ಮನಿಂದೆಯನ್ನೂ ನೀತಿಯೇ ಎಲ್ಲಕ್ಕೂ ಕಿರೀಟದಂತಿದೆಯೆಂಬುದನ್ನೂ ದೃಢಪಡಿಸುವ ವ್ಯಾಖ್ಯಾನದಿಂದಲೂ ಯಕ್ಕುಂಡಿಯ ಶ್ರೀ. ಗುರುಪಾದಪ್ಪನವರು "ಕಾಯಕವೇ ಕೈಲಾಸ" "ಕೈಲಾಗದವನ ವಾಸ ನರಕನಿವಾಸ" ಎಂಬುದನ್ನು ವ್ಯಕ್ತಗೊಳಿಸುವ ಕೀರ್ತನದಿಂದಲೂ ಶ್ರೀ. ನಾರಾಯಣಸ್ವಾಮಿಯವರು "ಶರಣರ ಸಂಗ ಮರಣದ ಭಂಗ" ಎಂಬುದನ್ನು ಪ್ರಕಟಿಸುವ ಕೀರ್ತನದಿಂದಲೂ ಸಿಂಗಸಳ್ಳಿಯ ಶ್ರೀ. ಅಪ್ಪಯ್ಯ ಸ್ವಾಮಿಗಳು ಹಾಗು ದೊಂಬರಕೊಪ್ಪದ ವಿರೂಪಾಕ್ಷಯ್ಯನವರು ತಮ್ಮ ಇಂಪಾದ ಗಾನದಿಂದಲೂ ಪುಡಕಲಕಟ್ಟಿಯ ಮಲ್ಲೇಶಪ್ಪನವರು ತಮ್ಮ ಮೇಲ್ತರದ ಮೃದಂಗವಾದನದಿಂದಲೂ ಭಜನಾ ಮೇಳಗಳು ಅನೇಕ ಭಕ್ತಿನೀತಿಪೂರಿತ ಪದಪದ್ಯಗಳಿಂದಲೂ ಅತ್ಯಂತ ರಮಣೀಯತೆಯನ್ನುಂಟುಮಾಡಿದರು. ಇದಲ್ಲದೆ ಈ ಉತ್ಸವವು ಕರಡೆ, ಹಲಗೆ, ಕಾಳೆ ಮೊದಲಾದ ವಾದ್ಯಗಳ ಕಲಾ ಪ್ರದರ್ಶನದಂತೆ ಶೋಭಿಸಿತು. ಬೆಲ್ಲದ ಸಿಹಿಯನ್ನು ಮೆಲ್ಲುವವನೇ ಬಲ್ಲನೆಂಬಂತೆ ಅಲ್ಲಿಯ ಆನಂದವನ್ನು ಅನುಭವಿಸಿದವರೇ ಬಲ್ಲರು.

ಪ್ರತಿನಿಧಿ.

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು- ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,
ಶ್ರೀ ರಂಗನಾಥ ಟೈಪ್ ಫೌಂಡರಿ
೬೭ ಕುಬೇರ ಸಾಹುಜಿ ಲೈನ್
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶರಣ ಸಂದೇಶ

ಪತ್ರಿಕೆಯನ್ನು ಪ್ರತಿವಾರ ಓದಿದರೆ

ವೀರಶೈವ ಮತತತ್ವ, ಹಿಂದು ಸಮಾಜ ಸುಧಾರಣೆ, ಹಿಂದುಸ್ಥಾನದ ರಾಜಕಾರಣ ಚೆನ್ನಾಗಿ ಗೊತ್ತಾಗುತ್ತವೆ.

ವೀರಶೈವರಲ್ಲಿ ವಿನಂತಿ.

ವೀರಶೈವ ಧರ್ಮದ ನಿಜತತ್ವವನ್ನು ತಿಳಿದುಕೊಳ್ಳಬೇಕೆಂಬುವ ಇಚ್ಛೆ ಇದ್ದರೆ, "ವೀರವಾಣಿ" ಎಂಬ ಮಾಸ ಪತ್ರಿಕೆಯನ್ನು ಇಂದೇ ತರಿಸಿಕೊಳ್ಳಿರಿ. ವಾರ್ಷಿಕ ಚಂದಾ ೧-೮-೦

ಸಂಪಾದಕರು— ಗಂಗಾಧರಪ್ಪ ತಿ. ಹೊದ್ಲೂರ.
"ವೀರವಾಣಿ" ಆಫೀಸ.
ಒಮ್ಮಪೂರಗಲ್ಲಿ ಹುಬ್ಬಳ್ಳಿ.

ಎಲ್ಲರೂ ಓದಲೇಬೇಕಾದ ಪುಸ್ತಕಗಳು.

ಇಕೋ, ಇಲ್ಲಿವೆ.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಕಾಯಕವೆ ಕೈಲಾಸ	೦-೩-೦	ಸುಕಲಾದೇವಿಯ ಕಥೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದಾಂಪತ್ಯ ಧರ್ಮ	೦-೩-೦
ಏಕಲವ್ಯನ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಲಜಪತರಾಯರ ಚರಿತ್ರೆ	೦-೧-೬	ವಿಜಯವಾಣಿ	೦-೨-೦
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬
ಬಸವ ಬೋಧಾಮೃತ	೦-೬-೦	ಜೀವನ ರಹಸ್ಯ (ಅಕ್ಕಮಾಣೀಕ್ಕಕ ಕೃತ.)	೦-೧-೦
ಭಜನಾವಳಿ	೦-೧-೬	ಶುದ್ಧಿ ಮತ್ತು ಸಂಘಟನೆ	೦-೪-೦
ವೀ. ಮ. ಕಾಲನಿರ್ಣಯ (ಶ್ರೀಕಂಠಯ್ಯ ಕೃತ)	೦-೬-೦	ಸ್ಮಾರಕ ಚಂದ್ರಿಕೆ	೧-೦-೦
ವಚನಕಾರರ ಸಮಾಜರಚನೆ	೦-೨-೦	ಪ್ರಮಥಾಚಾರ ದೀಪಿಕೆ	೦-೩-೦
ವೀರಶೈವ ಏಕೀಕರಣ	೦-೦-೩	೬೩ ಪುರಾತನರ ಚರಿತ್ರೆ (ಬುಜಕ ಕೃತ)	೨-೦-೦

ವಿಳಾಸ:- ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.

ಶರಣ ಸಂದೇಶ

ಓದಿ ಒಗೆದುಬಿಡುವ ಪತ್ರಿಕೆಯಲ್ಲ.

ಕಾದಿಟ್ಟುಕೊಂಡು ಧಾರ್ಮಿಕ, ಸಾಮಾಜಿಕ, ರಾಜಕೀಯ ವಿಷಯಗಳನ್ನು

ಕಲಿತುಕೊಳ್ಳುವ ಪತ್ರಿಕೆ.

ಹೊಸ ಪುಸ್ತಕ.

ವಚನಶಾಸ್ತ್ರ ರಹಸ್ಯ.

ಶ್ರೀಮಾನ್ ದಿವಾಕರ ರಂಗನಾಥರಾಯರು ರಚಿಸಿದ ಅದ್ವಿತೀಯ ಗ್ರಂಥ ಶ್ರೀ ಬಸವಾದಿ ವಚನಕಾರರು ಬೋಧಿಸಿದ ಧಾರ್ಮಿಕ, ಸಾಮಾಜಿಕ, ನೈತಿಕ ಸಂಗತಿಗಳೆಲ್ಲಾ ತುಲನಾತ್ಮಕವಾಗಿ ವಿವೇಚಿಸಲ್ಪಟ್ಟ ಮಹತ್ವದ ಗ್ರಂಥ ಪುಟ ೬೦೦ ಬೆಲೆ ೩ ರೂ.

ಬಸವೇಶ್ವರ ಕೆ ವಚನ.

ಭಗವಾನ್ ಬಸವಣ್ಣನವರ ಕೆಲವು ಮಹತ್ವದ ವಚನಗಳ ಹಿಂದೀ ಅನುವಾದ. ಸುಪ್ರಸಿದ್ಧ ಹಿಂದೀ ಪಂಡಿತರಾದ ಶ್ರೀಮಾನ್ ಸುಂದರಲಾಲಜಿಯವರ ಪ್ರಸ್ತಾವನೆ. ಅಚ್ಚುಕಟ್ಟಾದ ಮುದ್ರಣ. ರಾಷ್ಟ್ರೀಯ ಭಾಷೆಯಾದ ಹಿಂದೀ ಕಲಿಯಬೇಕೆನ್ನುವವರಿಗೆ ತುಂಬಾ ಸಹಾಯ. ಬೆಲೆ ೮ ಆಣೆ.

ವಿವಾಹ ಪದ್ಯಾವಳಿ.

ವಿವಾಹ ಮೊದಲಾದ ಮಂಗಳ ಕಾರ್ಯಗಳಲ್ಲಿ ಹಾಡುವ ಶುದ್ಧ ಕನ್ನಡ ಪದ್ಯಗಳ ಸಂಗ್ರಹ ಪ್ರತಿಯೊಬ್ಬ ಹೆಣ್ಣುಮಗಳು ಕಲಿಸಲೇಬೇಕಾದ ಪುಸ್ತಕ.

೧ ಕ್ಕೆ ೨ ಆ. ೧೦ ಪ್ರತಿಗಳಿಗೆ ೧ ರೂ.

ವೀರಶೈವ ಭಜನಾಮೃತ.

ಉದ್ಗಿರಿ ವೀರಶೈವ ಸಮಾಜದವರು ಪ್ರಕಾಶಗೊಳಿಸಿದ ಹಿಂದೀ ಪದಗಳ ಸಂಗ್ರಹ. ಹೊಸ ಶೈಲಿ. ಕಿವಿಗೆ ಇಂಪಾದ ದಾಟಿ. ಬೆಲೆ. ೧ ಕ್ಕೆ ೧ ಆಣೆ.

೨೦ ಪ್ರತಿಗಳಿಗೆ ೧ ರೂ.

ಇವಲ್ಲದೆ

ನಮ್ಮಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಬರೆಯಲ್ಪಟ್ಟ ಎಲ್ಲ ಚಿಕ್ಕ ದೊಡ್ಡ ಪುಸ್ತಕಗಳೂ ಶ್ರೀ ಹಳಕಟ್ಟಿಯವರು ಪ್ರಕಟಿಸಿದ ಎಲ್ಲ ವಚನ ಗ್ರಂಥಗಳೂ ಯಾವಾಗಲೂ ದೊರೆಯುವವು.

ವಿಳಾಸ:—

ಎಸ್. ಸಿ. ಶಿವಲಿಂಗಪ್ಪ
ಕಲ್ಯಾಣ ಕರ್ನಾಟಕ ಬುಕ್ ಡಿಪೋ
ಗುಲಬರ್ಗಾ.

ಹೊಸದು! **ತೀರ ಹೊಸದು!!**

ಅರವಿಂದ ಗ್ರಂಥಮಾಲೆ.

ಸಂಪಾದಕರು:— ಮಧುರಚೆನ್ನರು.

ವಿಚಾರ ಪ್ರಚುರ ವಾಙ್ಮಯವನ್ನು ಒದಗಿಸುವ, ಸುರಸ ಸಾಹಿತ್ಯವನ್ನು ಸೂರೆಗೊಳಿಸುವ ಒಂದೇ ಒಂದು ಗ್ರಂಥಮಾಲೆಯೆಂದರೆ ಇದೇ. ೧೦೦ ರಿಂದ ೧೨೫ ಪುಟಗಳ ಆರು ಪುಸ್ತಕಗಳು. ಅಲ್ಲದೆ ಕಾಣಿಕೆಯ ಪುಸ್ತಕವೊಂದು ಕೊಡಲ್ಪಡುವದು. 'ನಂದನವನ', 'ಬಾಳಿನಲ್ಲಿ ಬೆಳಕು', 'ಮಿಲನ' ಈಗಾಗಲೇ ಅರಳಿವೆ. ಬೆಲೆ ರೂ ೩-೮-೦. ವಿಳಾಸ:—

'ಅರವಿಂದ ಗ್ರಂಥಮಾಲಾ' ಕಾರ್ಯಾಲಯ
ಪೋ. ಹಲಸಂಗಿ ಜಿ ವಿಜಾಪುರ.

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ. ಪ್ರಶ್ನೆ ಕೇಳುವವರು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಅದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು. ಪುಸ್ತಕದ ಬೆಲೆಗೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು
ಪೋಸ್ಟ. ಮಹಾಗಾಂವ್, ಜಿ. ಗುಲಬರ್ಗಾ.

ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ
ಸುವರ್ಣ ಪದಕಗಳನ್ನು ಮತ್ತು ಸರ್ಟಿಫಿಕೇಟುಗಳನ್ನು ಪಡೆದು ಹೆಸರಾದ
ಇಂಡಿಯಾ ಸರಕಾರದಲ್ಲಿ ರಜಿಸ್ಟರ್ ಆದ

ಸಿದ್ಧೇಶ್ವರ ಟ್ರೇಝರಿ ಕಂಪನಿ, ಹುಬ್ಬಳ್ಳಿ.

ನಮ್ಮ "ಸಿದ್ಧೇಶ್ವರ ಟ್ರೇಝರಿ" ಗಳನ್ನು ಈ ವರೆಗೆ ಕೈಗಾರಿಕೆಯ ಕೆಲಸಗಳಲ್ಲಿ ಹೆಸರಾದ ಯುರೋಪ, ಅಮೇರಿಕಾ ವಗೈರೆ ಪರರಾಷ್ಟ್ರಗಳಲ್ಲಿ ತಯಾರಾಗುವ ಟ್ರೇಝರಿಗಳ ಪದ್ಧತಿಯ ಮೇರೆಗೆ ಹೊಸ ಉಕ್ಕಿನ ಅಖಂಡ ಒಂದೇ ತಗಡಿನಲ್ಲಿ ೧೨ ಮೂಲೆಗಳನ್ನು ೨೫೦ ಟನ್ ಪ್ರೆಷರ ಕೊಡುವ ಮಶಿನ್ನಿನಿಂದ ಬಗ್ಗಿಸಿ, ರಿವ್ಹಿಟ್ಸ ಮೊದಲಾದವುಗಳಿಂದ ಜಾಯಿಂಟ ಮಾಡದೆ ಇಲೆಕ್ಟ್ರಿಸಿಟಿಯಿಂದ ಬೆಸೆದು ತಯಾರಿಸುತ್ತೇವೆ

ಈ ಹೊಸ ಸುಧಾರಣೆಯಿಂದ ಮಾಡಿದ ತಿಜೋರಿಗಳಿಗೂ ಮತ್ತು ಯಾವದೇ ನಮ್ಮ ಸಾಮಾನಕ್ಕೂ ಯಾವ ತರದ ಭಯವಿಲ್ಲ. ಮತ್ತು ಅವು ಒಳ್ಳೇ ಮಜಬೂತವಾಗಿಯೂ ಸುಂದರವಾಗಿಯೂ ಆಗುತ್ತವೆ. ನಾವು ನಮ್ಮ ತಿಜೋರಿಗಳಿಗೂ ಮತ್ತು ನಮ್ಮಲ್ಲಿ ತಯಾರಾಗುವ ಉಕ್ಕಿನ ಕಪಾಟು, ಕ್ಯಾಶಬಾಕ್ಸ, ಸ್ಟ್ರಾಂಗರೂಮ ಡೋರ್ಸು ಗಳಿಗೂ ನಮ್ಮ ಕಾರಖಾನೆಯಲ್ಲಿಯೇ ತಯಾರಾಗುವ ಉತ್ತಮವಾದ ಮತ್ತು ಮಜಬೂತವಾದ ಕೀಲಿಗಳನ್ನು ಹಚ್ಚುತ್ತೇವೆ. ಮತ್ತು ಇದಲ್ಲದೆ ನಮ್ಮಲ್ಲಿ ಹೊಸ ಪದ್ಧತಿಯ ಮೇರೆಗೆ ತಯಾರಾಗುವ ಕಾಂಬಿನೇಶನ್ ಕೀ ಲೆಸ್ಸ ಲಾಕ್ಸು (ನಂಬರ ಕೀಲಿ) ಗಳನ್ನು ತಿಜೋರಿಗಳಿಗೆ ಹಚ್ಚಿಸಿದರೆ ಆ ತಿಜೋರಿಗಳನ್ನು ಯಾರೂ ತೆಗೆಯಲು ಸಾಧ್ಯವಿಲ್ಲ. ಯಾರಾದರೂ ತೆಗೆದರೆ ಅವರಿಗೆ

೧೦೦೦ ರೂ. ಬಹುಮಾನ ಕೊಡುವೆವು.

ನಮ್ಮ ಫಾಯರ ಪ್ರೂಫ್ ತಿಜೋರಿಗಳು ತುಂಬಾ ಖಾತ್ರಿಯಾದವುಗಳಿರುತ್ತವೆ.

ಈ ಬಗ್ಗೆ ಅನೇಕ ವಸ್ತು ಪ್ರದರ್ಶನಗಳಲ್ಲಿ ಒಳಗೆ ನೋಟು ವಗೈರೆ ಸಾಮಾನು ಗಳನ್ನು ಇಟ್ಟು ಕೆಂಪಗೆ ಕಾಸಿದನಂತರ ಒಳಗಿಟ್ಟ ಸಾಮಾನುಗಳು ಸುಡದೆ ಇದ್ದದ್ದನ್ನು ಖಾತ್ರಿ ಮಾಡಿಕೊಟ್ಟಿದ್ದೇವೆ.

ಧಾರಣೆಗಳ ಬಗ್ಗೆ ನಮ್ಮ ಸಚಿತ್ರ ಕ್ಯಾಟಲಾಗುಗಳಿಗೆ ಬರೆಯಿರಿ.
ಅ ಥ ವಾ
ಸಮಕ್ಷಮ ಬಂದಲ್ಲಿ ತಿಳಿಯುವದು.

ತಮ್ಮ ಶಿಲಾಭಿಮಾನಿ,
ಸಿದ್ಧೇಶ್ವರ ಮತ್ತು ಕಂಪನಿ
ಟ್ರೇಝರಿ ಮೇಕರ್ಸ
ಹುಬ್ಬಳ್ಳಿ.

ಫ್ಯಾಕ್ಟರಿ ಮತ್ತು ಹೆಡ್ ಆಫೀಸ್-
ಹುಬ್ಬಳ್ಳಿ.

ಬ್ರ್ಯಾಂಚ ಆಫೀಸುಗಳು-
ಹೈದರಾಬಾದ (ಡೆಕ್ಕನ) ಮತ್ತು ಕೊಲ್ಹಾಪುರ (ಲಕ್ಷ್ಮೀಪುರಿ)

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The
Sharana Sandesh.

ನ್ಯಾಯನಿಷ್ಠುರಿ ದಾಕ್ಷಿಣ್ಯಪರನಲ್ಲ। ಲೋಕವಿರೋಧಿ। ಶರಣನಾರಿಗೂ ಅಂಜುವವನಲ್ಲ।
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ ೨೨೪ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು.

ಬಿಡಿ ಸಂಚಿಕೆಗೆ ೧ ಆಣೆ
ವಾರ್ಷಿಕ ಚಂದಾ: ಅಂಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೬ | ಆಲಮಟ್ಟಿ- ಸೋಮವಾರ ತಾರೀಖು ೧೪ ನೆಯ ಜೂನ ೧೯೩೭. | ಸಂಚಿಕೆ ೪೦

ಜನಸೇವೆಯೇ ದೇವರ ಸೇವೆ.

ಭಾರತ ಮಂತ್ರಿಗಳ ನಿರಾಕರಣೆ.

ಭಿನ್ನಾಭಿಪ್ರಾಯ ಬಂದರೆ ಮಂತ್ರಿಗಳಿಗೆ
ರಾಜಿನಾಮೆ ಕೊಡಲು ಹೇಳುವುದಾಗಿಯಾದರೂ ಆಶ್ವಾಸನಕೊಡಲಿಕ್ಕೆ
ಬರುವುದಿಲ್ಲವೆಂದೇ
ಭಾರತ ಮಂತ್ರಿಗಳು ಹೇಳಿದರು.

ಕಾಂಗ್ರೆಸ್ ಪಕ್ಷದ ಮುಂದಿನ ಮಾರ್ಗ.

ಅಧಿಕಾರ ಸ್ವೀಕಾರವೆ ? ಶಾಸನ ಭಂಗವೆ ?

ರಸಿಯಾದಲ್ಲಿ ಮರಣ ದಂಡನೆಯ ಶಿಕ್ಷೆ!

ರಾಷ್ಟ್ರದ್ರೋಹದ ಅಪರಾಧಕ್ಕಾಗಿ
ಎಂಟು ಜನ ಸೇನಾಧಿಕಾರಿಗಳಿಗೆ ಸರಕಾರವು
ಗುಂಡುಹಾಕಿ ಕೊಂದಿತು!

SANGAM CLOTH STORES
Prop: M. S. Hundekar & Sons,
P.O: TERDAL - 587 315

ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ

ಸುವರ್ಣ ಪದಕಗಳನ್ನು ಮತ್ತು ಸರ್ಟಿಫಿಕೇಟುಗಳನ್ನು ಪಡೆದು ಹೆಸರಾದ

ಇಂಡಿಯಾ ಸರಕಾರದಲ್ಲಿ ರಜಿಸ್ಟರ್ ಆದ

ಸಿದ್ಧೇಶ್ವರ ಟ್ರೇಝುರಿ ಕಂಪನಿ, ಹುಬ್ಬಳ್ಳಿ.

ನಮ್ಮ "ಸಿದ್ಧೇಶ್ವರ ಟ್ರೇಝುರಿ" ಗಳನ್ನು ಈ ವರೆಗೆ ಕೈಗಾರಿಕೆಯ ಕೆಲಸಗಳಲ್ಲಿ ಹೆಸರಾದ ಯುರೋಪ, ಅಮೇರಿಕಾ ವಗೈರೆ ಪರರಾಷ್ಟ್ರಗಳಲ್ಲಿ ತಯಾರಾಗುವ ಟ್ರೇಝುರಿಗಳ ಪದ್ಧತಿಯ ಮೇರೆಗೆ ಹೊಸ ಉಕ್ಕಿನ ಅಖಂಡ ಒಂದೇ ತಗಡಿನಲ್ಲಿ ೧೨ ಮೂಲೆಗಳನ್ನು ೨೫೦ ಟನ್ ಪ್ರೇಷರ ಕೊಡುವ ಮಶಿನ್ನಿನಿಂದ ಬಗ್ಗಿಸಿ, ರಿವ್ಹಿಟ್ಸ ಮೊದಲಾದವುಗಳಿಂದ ಜಾಯಿಂಟ ಮಾಡದೆ ಇಲೆಕ್ಟ್ರಿಸಿಟಿಯಿಂದ ಬೆಸೆದು ತಯಾರಿಸುತ್ತೇವೆ

ಈ ಹೊಸ ಸುಧಾರಣೆಯಿಂದ ಮಾಡಿದ ತಿಜೋರಿಗಳಿಗೂ ಮತ್ತು ಯಾವದೇ ನಮ್ಮ ಸಾಮಾನಕ್ಕೂ ಯಾವ ತರದ ಭಯವಿಲ್ಲ. ಮತ್ತು ಅವು ಒಳ್ಳೇ ಮಜಬೂತವಾಗಿಯೂ ಸುಂದರವಾಗಿಯೂ ಆಗುತ್ತವೆ. ನಾವು ನಮ್ಮ ತಿಜೋರಿಗಳಿಗೂ ಮತ್ತು ನಮ್ಮಲ್ಲಿ ತಯಾರಾಗುವ ಉಕ್ಕಿನ ಕಪಾಟು, ಕ್ಯಾಶಬಾಕ್ಸ, ಸ್ಪ್ರಿಂಗರೂಮ ಡೋರ್‍ಸು ಗಳಿಗೂ ನಮ್ಮ ಕಾರಖಾನೆಯಲ್ಲಿಯೇ ತಯಾರಾಗುವ ಉತ್ತಮವಾದ ಮತ್ತು ಮಜಬೂತವಾದ ಕೀಲಿಗಳನ್ನು ಹಚ್ಚುತ್ತೇವೆ. ಮತ್ತು ಇದಲ್ಲದೆ ನಮ್ಮಲ್ಲಿ ಹೊಸ ಪದ್ಧತಿಯ ಮೇರೆಗೆ ತಯಾರಾಗುವ ಕಾಂಬಿನೇಶನ್ ಕೀ ಲೆಸ್ಸಾ ಲಾಕ್ಸು (ನಂಬರ ಕೀಲಿ) ಗಳನ್ನು ತಿಜೋರಿಗಳಿಗೆ ಹಚ್ಚಿಸಿದರೆ ಆ ತಿಜೋರಿಗಳನ್ನು ಯಾರೂ ತೆಗೆಯಲು ಸಾಧ್ಯವಿಲ್ಲ. ಯಾರಾದರೂ ತೆಗೆದರೆ ಅವರಿಗೆ

೧೦೦೦ ರೂ. ಬಹುಮಾನ ಕೊಡುವೆವು.

ನಮ್ಮ ಫಾಯರ ಪ್ರೂಫ್ ತಿಜೋರಿಗಳು ತುಂಬಾ ಖಾತ್ರಿಯಾದವುಗಳಿರುತ್ತವೆ.

ಈ ಬಗ್ಗೆ ಅನೇಕ ವಸ್ತು ಪ್ರದರ್ಶನಗಳಲ್ಲಿ ಒಳಗೆ ನೋಟು ವಗೈರೆ ಸಾಮಾನು ಗಳನ್ನು ಇಟ್ಟು ಕೆಂಪಗೆ ಕಾಸಿದನಂತರ ಒಳಗಿಟ್ಟ ಸಾಮಾನುಗಳು ಸುಡದೆ ಇದ್ದದ್ದನ್ನು ಖಾತ್ರಿ ಮಾಡಿಕೊಟ್ಟಿದ್ದೇವೆ.

ಧಾರಣೆಗಳ ಬಗ್ಗೆ ನಮ್ಮ ಸಚಿತ್ರ ಕ್ಯಾಟಲಾಗುಗಳಿಗೆ ಬರೆಯಿರಿ.

ಅ ಥ ವಾ

ಸಮಕ್ಷಮ ಬಂದಲ್ಲಿ ತಿಳಿಯುವದು.

ತಮ್ಮ ಕಲಾಭಿಮಾನಿ,
ಸಿದ್ಧೇಶ್ವರ ಮತ್ತು ಕಂಪನಿ
ಟ್ರೇಝುರಿ ಮೇಕರ್ಸ
ಹುಬ್ಬಳ್ಳಿ.

ಫ್ಯಾಕ್ಟರಿ ಮತ್ತು ಹೆಡ್ ಆಫೀಸ್-
ಹುಬ್ಬಳ್ಳಿ.

ಬ್ರ್ಯಾಂಚ ಆಫೀಸುಗಳು-
ಹೈದರಾಬಾದ (ಡೆಕ್ಕನ) ಮತ್ತು ಕೊಲ್ಹಾಪುರ (ಲಕ್ಷ್ಮೀಪುರಿ)

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891

ಶರಣ ಸಂದೇಶ

The Sharana Sandesh.

ನ್ಯಾಯನಿಷ್ಠುರಿ, ದಾಕ್ಷಿಣ್ಯಪರನಾನಲ್ಲ. ಲೋಕವಿರೋಧಿ, ಶರಣನಾರಿಗಂಜುವವನಲ್ಲ.
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ ॥ ವ. ೨೨೪ ॥ ಮಹಾನುಭಾವಿ ಬಸವಣ್ಣನವರು.

ಸಂಪಾದಕರು:-
ಡಾ. ಹರ್ಡೇಕರ ಮಂಜಪ್ಪನವರು.

ಬಿಡಿಸಂಚಿಕೆಗೆ ೧ ಆಣೆ.
ವಾರ್ಷಿಕ ವರ್ಗಣಿ:- ಅಂಚೆಯ ವೆಚ್ಚ ಸಹಿತ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೬ | ಆಲಮಟ್ಟಿ- ಸೋಮವಾರ ತಾರೀಖು ೧೪ ನೆಯ ಜೂನ ೧೯೩೭. | ಸಂಚಿಕೆ ೪೦

ಅಹಿಂಸೆಯೇ ... ದೇವರ ಸೇವೆ.

ಭಾರತ ಮಂತ್ರಿಗಳ ನಿರಾಕರಣೆ.

ಭಿನ್ನಾಭಿಪ್ರಾಯ ಬಂದರೆ ಮಂತ್ರಿಗಳಿಗೆ
ರಾಜಿನಾಮೆ ಕೊಡಲು ಹೇಳುವುದಾಗಿಯಾದರೂ ಆಶ್ವಾಸನಕೊಡಲಿಕ್ಕೆ
ಬರುವುದಿಲ್ಲವೆಂದೇ
ಭಾರತ ಮಂತ್ರಿಗಳು ಹೇಳಿದರು.

ಕಾಂಗ್ರೆಸ್ ಪಕ್ಷದ ಮುಂದಿನ ಮಾರ್ಗ.
ಅಧಿಕಾರ ಸ್ವೀಕಾರವೆ? ಶಾಸನ ಭಂಗವೆ?

ರಸಿಯಾದಲ್ಲಿ ಮರಣ ದಂಡನೆಯ ಶಿಕ್ಷೆ!

ರಾಷ್ಟ್ರದ್ರೋಹದ ಅಪರಾಧಕ್ಕಾಗಿ
ಎಂಟು ಜನ ಸೇನಾಧಿಕಾರಿಗಳಿಗೆ ಸರಕಾರವು
ಗುಂಡುಹಾಕಿ ಕೊಂದಿತು!

SANGAM CLOTH STORES.
Prop: M. S. Hundekar & Sons,
P.O: TERDAL - 587 315

ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ
ಸುವರ್ಣ ಪದಕಗಳನ್ನು ಮತ್ತು ಸರ್ಟೀಫಿಕೇಟುಗಳನ್ನು ಪಡೆದು ಹೆಸರಾದ
ಇಂಡಿಯಾ ಸರಕಾರದಲ್ಲಿ ರಜಿಸ್ಟರ್ ಆದ

ಸಿದ್ಧೇಶ್ವರ ಟ್ರೇಝುರಿ ಕಂಪನಿ, ಹುಬ್ಬಳ್ಳಿ.

ನಮ್ಮ "ಸಿದ್ಧೇಶ್ವರ ಟ್ರೇಝುರಿ" ಗಳನ್ನು ಈ ವರೆಗೆ ಕೈಗಾರಿಕೆಯ ಕೆಲಸಗಳಲ್ಲಿ ಹೆಸರಾದ ಯುರೋಪ, ಅಮೇರಿಕಾ ವಗ್ಯೆರೆ ಪರರಾಷ್ಟ್ರಗಳಲ್ಲಿ ತಯಾರಾಗುವ ಟ್ರೇಝುರಿಗಳ ಪದ್ಧತಿಯ ಮೇರೆಗೆ ಹೊಸ ಉಕ್ಕಿನ ಅಖಂಡ ಒಂದೇ ತಗಡಿನಲ್ಲಿ ೧೨ ಮೂಲೆಗಳನ್ನು ೩೫೦ ಟನ್ ಪ್ರೆಷರ ಕೊಡುವ ಮಶಿನ್ನಿನಿಂದ ಬಗ್ಗಿಸಿ, ರಿವ್ಹಿಟ್ಸ ಮೊದಲಾದವುಗಳಿಂದ ಜಾಯಿಂಟ ಮಾಡದೆ ಇಲೆಕ್ಟ್ರಿಸಿಟಿಯಿಂದ ಬೆಸೆದು ತಯಾರಿಸುತ್ತೇವೆ.

ಈ ಹೊಸ ಸುಧಾರಣೆಯಿಂದ ಮಾಡಿದ ತಿಜೋರಿಗಳಿಗೂ ಮತ್ತು ಯಾವದೇ ನಮ್ಮ ಸಾಮಾನಕ್ಕೂ ಯಾವ ತರದ ಭಯವಿಲ್ಲ. ಮತ್ತು ಅವು ಒಳ್ಳೇ ಮಜಬೂತವಾಗಿಯೂ ಸುಂದರವಾಗಿಯೂ ಆಗುತ್ತವೆ. ನಾವು ನಮ್ಮ ತಿಜೋರಿಗಳಿಗೂ ಮತ್ತು ನಮ್ಮಲ್ಲಿ ತಯಾರಾಗುವ ಉಕ್ಕಿನ ಕಪಾಟು, ಕ್ಯಾಶಬಾಕ್ಸ, ಸ್ಟ್ರಾಂಗರೂಮ ಡೋರ್ಸುಗಳಿಗೂ ನಮ್ಮ ಕಾರಖಾನೆಯಲ್ಲಿಯೇ ತಯಾರಾಗುವ ಉತ್ತಮವಾದ ಮತ್ತು ಮಜಬೂತವಾದ ಕೀಲಿಗಳನ್ನು ಹಚ್ಚುತ್ತೇವೆ. ಮತ್ತು ಇದಲ್ಲದೆ ನಮ್ಮಲ್ಲಿ ಹೊಸ ಪದ್ಧತಿಯ ಮೇರೆಗೆ ತಯಾರಾಗುವ ಕಾಂಬಿನೇಶನ್ ಕೀ ಲೆಸ್ಸ್ ಲಾಕ್ಸ (ನಂಬರ ಕೀಲಿ) ಗಳನ್ನು ತಿಜೋರಿಗಳಿಗೆ ಹಚ್ಚಿಸಿದರೆ ಆ ತಿಜೋರಿಗಳನ್ನು ಯಾರೂ ತೆಗೆಯಲು ಸಾಧ್ಯವಿಲ್ಲ. ಯಾರಾದರೂ ತೆಗೆದರೆ ಅವರಿಗೆ

೧೦೦೦ ರೂ. ಬಹುಮಾನ ಕೊಡುವೆವು.

ನಮ್ಮ ಫಾಯರ ಪ್ರೂಫ್ ತಿಜೋರಿಗಳು ತುಂಬಾ ಖಾತ್ರಿಯಾದವುಗಳಿರುತ್ತವೆ.

ಈ ಬಗ್ಗೆ ಅನೇಕ ವಸ್ತು ಪ್ರದರ್ಶನಗಳಲ್ಲಿ ಒಳಗೆ ನೋಟು ವಗ್ಯೆರೆ ಸಾಮಾನುಗಳನ್ನು ಇಟ್ಟು ಕೆಂಪಗೆ ಕಾಸಿದನಂತರ ಒಳಗಿಟ್ಟ ಸಾಮಾನುಗಳು ಸುಡದೆ ಇದ್ದದ್ದನ್ನು ಖಾತ್ರಿ ಮಾಡಿಕೊಟ್ಟಿದ್ದೇವೆ.

ಧಾರಣೆಗಳ ಬಗ್ಗೆ ನಮ್ಮ ಸಚಿತ್ರ ಕ್ಯಾಟಲಾಗುಗಳಿಗೆ ಬರೆಯಿರಿ.
ಅಥವಾ
ಸಮಕ್ಷಮ ಬಂದಲ್ಲಿ ತಿಳಿಯುವದು.

ತಮ್ಮ ಕೆಲಾಭಿಮಾನಿ,
ಸಿದ್ಧೇಶ್ವರ ಮತ್ತು ಕಂಪನಿ
ಟ್ರೇಝುರಿ ಮೇಕರ್ಸ
ಹುಬ್ಬಳ್ಳಿ.

ಫ್ಯಾಕ್ಟರಿ ಮತ್ತು ಹೆಡ್ ಆಫೀಸ್-
ಹುಬ್ಬಳ್ಳಿ.

ಬ್ರ್ಯಾಂಚ ಆಫೀಸುಗಳು-
ಹೈದರಾಬಾದ (ಡೆಕ್ಕನ) ಮತ್ತು ಕೊಲ್ಲಾಪುರ (ಲಕ್ಷ್ಮೀಪುರಿ)

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಸಲ್ಪಟ್ಟಿತು.

REGISTERED No. B. 289

ಶರಣ ಸಂದೇಶ

The Sharana Sandesh.

ನ್ಯಾಯನಿಷ್ಠುರಿ| ದಾಕ್ಷಿಣ್ಯಪರನಾನಲ್ಲ| ಲೋಕವಿರೋಧಿ| ಶರಣನಾರಿಗೂ ಅಂಜುವವನಲ್ಲ|
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ || ವ ೨೨೮ || ಮಹಾನುಭಾವಿ ಬಸವೇಶ್ವರರು.

ಸಂಪಾದಕರು:-
ಶ್ರೀ. ಹರ್ಡೇಕರ ಮಂಜಪ್ಪನವರು,

ಬಿಡಿ ಪ್ರತಿಕೆಗೆ ೧ ಆಣೆ.
ವಾರ್ಷಿಕ ವರ್ಗಣಿ: [illegible]ಚೆಯ ವೆಚ್ಚ ಸೇರಿ ೩ ರೂ.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೬	ಆಲಮಟ್ಟಿ- ಸೋಮವಾರ ತಾರೀಖು ೧೪ ನೆಯ ಜೂನ ೧೯೩೭.	ಸಂಚಿಕೆ ೪೦

ಜನಸೇವೆಯೇ ದೇವರ ಸೇವೆ.

ಭಾರತ ಮಂತ್ರಿಗಳ ನಿರಾಕರಣೆ.

ಭಿನ್ನಾಭಿಪ್ರಾಯ ಬಂದರೆ ಮಂತ್ರಿಗಳಿಗೆ
ರಾಜೀನಾಮೆ ಕೊಡಲು ಹೇಳುವುದಾಗಿಯಾದರೂ ಆಶ್ವಾಸನಕೊಡಲಿಕ್ಕೆ
ಬರುವುದಿಲ್ಲವೆಂದೇ
ಭಾರತ ಮಂತ್ರಿಗಳು ಹೇಳಿದರು.

ಕಾಂಗ್ರೆಸ್ ಪಕ್ಷದ ಮುಂದಿನ ಮಾರ್ಗ.

ಅಧಿಕಾರ ಸ್ವೀಕಾರವೆ? ಶಾಸನ ಭಂಗವೆ?

ರಸಿಯಾದಲ್ಲಿ ಮರಣ ದಂಡನೆಯ ಶಿಕ್ಷೆ!

ರಾಷ್ಟ್ರದ್ರೋಹದ ಅಪರಾಧಕ್ಕಾಗಿ
ಎಂಟು ಜನ ಸೇನಾಧಿಕಾರಿಗಳಿಗೆ ಸರಕಾರವು
ಗುಂಡುಹಾಕಿ ಕೊಂದಿತು!

ಸೇವಕ ಸೇವಾಲಯ

SANGAM CLOTH STORES
Prop: M. S. Hundekar & Sons,
P.O: TERDAL - 587 315

ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ
ಸುವರ್ಣ ಪದಕಗಳನ್ನು ಮತ್ತು ಸರ್ಟೀಫಿಕೇಟುಗಳನ್ನು ಪಡೆದು ಹೆಸರಾದ
ಇಂಡಿಯಾ ಸರಕಾರದಲ್ಲಿ ರಜಿಸ್ಟರ್ ಆದ

ಸಿದ್ಧೇಶ್ವರ ಟ್ರೇಝುರಿ ಕಂಪನಿ, ಹುಬ್ಬಳ್ಳಿ.

ನಮ್ಮ "ಸಿದ್ಧೇಶ್ವರ ಟ್ರೇಝುರಿ" ಗಳನ್ನು ಈ ವರೆಗೆ ಕೈಗಾರಿಕೆಯ ಕೆಲಸಗಳಲ್ಲಿ ಹೆಸರಾದ ಯುರೋಪ, ಅಮೇರಿಕಾ ವಗೈರೆ ಪರರಾಷ್ಟ್ರಗಳಲ್ಲಿ ತಯಾರಾಗುವ ಟ್ರೇಝುರಿಗಳ ಪದ್ಧತಿಯ ಮೇರೆಗೆ ಹೊಸ ಉಕ್ಕಿನ ಅಖಂಡ ಒಂದೇ ತಗಡಿನಲ್ಲಿ ೧೨ ಮೂಲೆಗಳನ್ನು ೨೫೦ ಟನ್ ಪ್ರೆಷರ ಕೊಡುವ ಮಶಿನ್ನಿನಿಂದ ಬಗ್ಗಿಸಿ, ರಿವ್ಹಿಟ್ಸ ಮೊದಲಾದವುಗಳಿಂದ ಜಾಯಿಂಟ ಮಾಡದೆ ಇಲೆಕ್ಟ್ರಿಸಿಟಿಯಿಂದ ಬೆಸೆದು ತಯಾರಿಸುತ್ತೇವೆ.

ಈ ಹೊಸ ಸುಧಾರಣೆಯಿಂದ ಮಾಡಿದ ತಿಜೋರಿಗಳಿಗೂ ಮತ್ತು ಯಾವದೇ ನಮ್ಮ ಸಾಮಾನಕ್ಕೂ ಯಾವ ತರದ ಭಯವಿಲ್ಲ. ಮತ್ತು ಅವು ಒಳ್ಳೇ ಮಜಬೂತವಾಗಿಯೂ ಸುಂದರವಾಗಿಯೂ ಆಗುತ್ತವೆ. ನಾವು ನಮ್ಮ ತಿಜೋರಿಗಳಿಗೂ ಮತ್ತು ನಮ್ಮಲ್ಲಿ ತಯಾರಾಗುವ ಉಕ್ಕಿನ ಕಪಾಟು, ಕ್ಯಾಶಬಾಕ್ಸ, ಸ್ಟ್ರಾಂಗರೂಮ ಡೋರ್‍ಸುಗಳಿಗೂ ನಮ್ಮ ಕಾರಖಾನೆಯಲ್ಲಿಯೇ ತಯಾರಾಗುವ ಉತ್ತಮವಾದ ಮತ್ತು ಮಜಬೂತವಾದ ಕೀಲಿಗಳನ್ನು ಹಚ್ಚುತ್ತೇವೆ. ಮತ್ತು ಇದಲ್ಲದೆ ನಮ್ಮಲ್ಲಿ ಹೊಸ ಪದ್ಧತಿಯ ಮೇರೆಗೆ ತಯಾರಾಗುವ ಕಾಂಬಿನೇಶನ್ ಕೀ ಲೆಸ್ಸ್ ಲಾಕ್ಸ (ನಂಬರ ಕೀಲಿ) ಗಳನ್ನು ತಿಜೋರಿಗಳಿಗೆ ಹಚ್ಚಿಸಿದರೆ ಆ ತಿಜೋರಿಗಳನ್ನು ಯಾರೂ ತೆಗೆಯಲು ಸಾಧ್ಯವಿಲ್ಲ. ಯಾರಾದರೂ ತೆಗೆದರೆ ಅವರಿಗೆ

೧೦೦೦ ರೂ. ಬಹುಮಾನ ಕೊಡುವೆವು.

ನಮ್ಮ ಫಾಯರ ಪ್ರೂಫ್ ತಿಜೋರಿಗಳು ತುಂಬಾ ಖಾತ್ರಿಯಾದವುಗಳಿರುತ್ತವೆ.

ಈ ಬಗ್ಗೆ ಅನೇಕ ವಸ್ತು ಪ್ರದರ್ಶನಗಳಲ್ಲಿ ಒಳಗೆ ನೋಟು ವಗೈರೆ ಸಾಮಾನುಗಳನ್ನು ಇಟ್ಟು ಕೆಂಪಗೆ ಕಾಸಿದನಂತರ ಒಳಗಿಟ್ಟ ಸಾಮಾನುಗಳು ಸುಡದೆ ಇದ್ದದ್ದನ್ನು ಖಾತ್ರಿ ಮಾಡಿಕೊಟ್ಟಿದ್ದೇವೆ.

ಧಾರಣೆಗಳ ಬಗ್ಗೆ ನಮ್ಮ ಸಚಿತ್ರ ಕ್ಯಾಟಲಾಗುಗಳಿಗೆ ಬರೆಯಿರಿ.
ಅಥವಾ
ಸಮಕ್ಷಮ ಬಂದಲ್ಲಿ ತಿಳಿಯುವದು.

ತಮ್ಮ ಕಲಾಭಿಮಾನಿ,
ಸಿದ್ಧೇಶ್ವರ ಮತ್ತು ಕಂಪನಿ
ಟ್ರೇಝುರಿ ಮೇಕರ್ಸ
ಹುಬ್ಬಳ್ಳಿ.

ಫ್ಯಾಕ್ಟರಿ ಮತ್ತು ಹೆಡ್ ಆಫೀಸ್-
ಹುಬ್ಬಳ್ಳಿ.

ಬ್ರ್ಯಾಂಚ ಆಫೀಸುಗಳು-
ಹೈದರಾಬಾದ (ಡೆಕ್ಕನ) ಮತ್ತು ಕೊಲ್ಹಾಪುರ (ಲಕ್ಷ್ಮೀಪುರಿ)

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

REGISTERED No. B. 2891.

ಶರಣ ಸಂದೇಶ

The Sharana Sandesh.

ಪ್ರತಿ ಸೋಮವಾರವೂ ಪ್ರಕಟವಾಗುವುದು.

ಸಂಪುಟ ೬ | ಆಲಮಟ್ಟಿ- ಸೋಮವಾರ ತಾರೀಖು ೧೪ ನೆಯ ಜೂನ ೧೯೩೭. | ಸಂಚಿಕೆ ೪೦

ಭಾರತ ಮಂತ್ರಿಗಳ ನಿರಾಕರಣೆ.

ಭಿನ್ನಾಭಿಪ್ರಾಯ ಬಂದರೆ ಮಂತ್ರಿಗಳಿಗೆ
ರಾಜಿನಾಮೆ ಕೊಡಲು ಹೇಳುವುದಾಗಿಯಾದರೂ ಆಶ್ವಾಸನಕೊಡಲಿಕ್ಕೆ
ಬರುವುದಿಲ್ಲವೆಂದೇ
ಭಾರತ ಮಂತ್ರಿಗಳು ಹೇಳಿದರು.

ಕಾಂಗ್ರೆಸ್ ಪಕ್ಷದ ಮುಂದಿನ ಮಾರ್ಗ.

ಅಧಿಕಾರ ಸ್ವೀಕಾರವೆ ? ಶಾಸನ ಭಂಗವೆ ?

ರಸಿಯಾದಲ್ಲಿ ಮರಣ ದಂಡನೆಯ ಶಿಕ್ಷೆ!

ರಾಷ್ಟ್ರದ್ರೋಹದ ಅಪರಾಧಕ್ಕಾಗಿ
ಎಂಟು ಜನ ಸೇನಾಧಿಕಾರಿಗಳಿಗೆ ಸರಕಾರವು
ಗುಂಡುಹಾಕಿ ಕೊಂದಿತು!

SANGAM CLOTH STORES
Prop: M. S. Hundekar & Sons,
P.O: TERDAL - 587 315

ಅಖಿಲ ಕರ್ನಾಟಕದಲ್ಲಿ ಪ್ರಸಿದ್ಧವಾದ
ರಾಷ್ಟ್ರೀಯ ಕಂಪನಿಯೆಂದರೆ
ಇದೊಂದೇ.
ದಿ ಸ್ವರಾಜ್ಯ ಬ್ಯಾಂಕಿಂಗ ಮತ್ತು ಇನ್ಸುರನ್ಸ ಕಂ. ಲಿ.
ಧಾರವಾಡ.

ಚೇರಮನ್	ವ್ಹಾಯಿಸ್ ಚೇರಮನ್
ದೇಶಭಕ್ತ ಶ್ರೀಯುತ ಎಸ್. ಕೆ ಹೊಸಮನಿ	ಶ್ರೀಯುತ ವ್ಹಿ. ಬಿ. ಹಾಲಭಾವಿ
B. A. LL B M L A	B. A LL. B. ರಿಟಾಯರ್ಡ
ಪ್ರೆಸಿಡೆಂಟ ಕೆ. ಪಿ ಸಿ ಸಿ.	ಫರ್ಸ್ಟ ಕ್ಲಾಸ್ ಸಬ್ ಜಜ್ಜ ಧಾರವಾಡ

ಭವಿಷತ್ಕಾಲದ ಜೀವಿತದ ನಿರ್ವಾಹಕ್ಕೆ | ಈ ಕಂಪನಿಯನ್ನು ಕೇವಲ ರಾಷ್ಟ್ರೋನ್ನತಿಗಾಗಿ ಸ್ಥಾಪಿಸಿರುವರು. | ತೊಂದರೆಯಿಲ್ಲದ ಒತ್ತಾಯದ ಉಳಿತಾಯ

ರೂ. ೫೦೦ ರಿಂದ ರೂ. ೫೦೦೦ ಗಳ ವರೆಗೆ ಜೀವ ವಿಮಾ ಪಾಲಿಸಿಗಳು.

ಉದಾರ ಶರ್ತಿನ ಪಾಲಿಸಿಗಳು ! ಮಿತವ್ಯಯದ ಆಡಳಿತ ! ! ಸುಲಭವಾದ ಕಂತಗಳು ! ! !

ಈ ಕಂಪನಿಯವರು ಕಾರ್ಯ ಕುಶಲತೆಯಿಂದ ನನಾ ಎಂಬುವ ಕಂಪನಿಗಳಿಗೂ ಮುಂದೆ ಇದ್ದಾರೆ. ಸ್ಥಾಪಿಸಿದ ಎರಡೇ ವರ್ಷಗಳಲ್ಲಿ ಇಷ್ಟು ಪ್ರಗತಿಯನ್ನು ಮಾಡಿ ತೋರಿಸಲಿಕ್ಕೆ ಉಜ್ವಲ ದೇಶಭಕ್ತರೂ, ಸುಪ್ರಸಿದ್ಧರೂ, ಲೋಕಪ್ರಿಯರೂ, ವಿಮೆಯ ವ್ಯವಹಾರದಲ್ಲಿ ನುರಿತ ಪರಿಪಕ್ವ ಬುದ್ಧಿಯುಳ್ಳವರೂ ಇರುವ ಬೋರ್ಡಿನ ಡಾಯರೆಕ್ಟರರ ಆಡಳಿತೆಯೇ ಕಾರಣ. ಗೌರವದ ಕನ್ನಡಿಗ ವಿಮೇಚ್ಛುಗಳು ತಮ್ಮ ಹಿತವನ್ನೊಳಗೊಂಡ ಕರ್ನಾಟಕ ಮಾತೆಯ ಈ ತರಹದ ಸೇವೆಗಾಗಿ ತಮ್ಮ ಬೆಂಬಲವನ್ನೀಯುವರೆಂದು ತುಂಬಾ ನಂಬಿರುವೆವು

ಎಲ್ಲ ಕಡೆಯಲ್ಲಿಯೂ ಕುಶಲ ಏಜಂಟರು ಬೇಕು.

The Manager.

ಬಸವ ಭೂಮಿ.

ದ್ವಿತೀಯ ಮುದ್ರಣ

—(ಕವನಗಾರರು.- ಕವಿ ಶರಣ.)—

ಶ್ರೀ ಬಸವನು ಹೂಡಿರುವ ಧರ್ಮ ಕ್ರಾಂತಿಯನ್ನು ದಶ ದಿಕ್ಕುಗಳಲ್ಲಿ ಪಸರಿಸುವದು ನಿಮ್ಮ ಕರ್ತವ್ಯವಲ್ಲವೆ? ಹಾಗಾದರೆ ಗುಲಬರ್ಗಾ ತರುಣ ಸಂಘದಿಂದ ಅರಳಿದ ಶ್ರೀ ಪಡೇಕರ ಪಂಜಪ್ಪಣ್ಣನವರಿಂದ ತಿದ್ದಿ ಬೆಳೆಸಿದ **"ಬಸವ ಭೂಮಿ"** ಎಂಬ ಪುಸ್ತಕವನ್ನು ಜಾಗ್ರತೆಯಾಗಿ ತರಿಸಿಕೊಳ್ಳಿರಿ. ಈ ಸಾರೆ ಮೊದಲಿನಕಿಂತಲೂ ಹೆಚ್ಚು ರಸವತ್ತಾದ ಕವಿತೆಗಳನ್ನು ಸೇರಿಸಲಾಗಿದೆ. ಶುದ್ಧತೆಯ ಬಗ್ಗೆ ಹೆಚ್ಚು ಲಕ್ಷಕೊಡಲಾಗಿದೆ

ಬೆಲೆ ೨ ಆಣೆ ಮಾತ್ರ.

೧ ರೂಪಾಯಿಗೆ ೧೦ ಪುಸ್ತಕಗಳನ್ನು ಕೊಡಲಾಗುತ್ತದೆ.

೧ ರೂಪಾಯಿಗಿಂತ ಕಡಿಮೆ ಪುಸ್ತಕಗಳನ್ನು ವ್ಹಿ. ಪಿ. ಯಿಂದ ಕಳಿಸಲಾಗುವದಿಲ್ಲ. ಟ ಖ ಬೇರೆ.

ವಿಳಾಸ:— **ಕಲ್ಯಾಣ ಕರ್ನಾಟಕ ಪ್ರೆಸ್ ಗುಲಬರ್ಗಾ.**

ಸ್ಥಳೀಯ ಸಂಸ್ಥೆಗಳ ಪತ್ರಿಕೆ.

ಪ್ರತಿ ತಿಂಗಳ ತಾ|| ೧ ಮತ್ತು ೧೫ರಲ್ಲಿ ಪ್ರಕಟವಾಗುವ ಪಕ್ಷಪತ್ರಿಕೆ.

ಜಿಲ್ಲಾ ಬೋರ್ಡ್, ಪೌರಸಭೆ, ಗ್ರಾಮಪಂಚಾಯತಿ ಮೊದಲಾದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಇತಿಹಾಸ, ಮೂಲತತ್ವ, ಆಡಳಿತ ಮುಂತಾದ ವಿಚಾರಗಳಲ್ಲಿ ನುರಿತ ಲೇಖಕರಿಂದ ಬರೆಯಲ್ಪಟ್ಟ ಬೋಧಪ್ರದ ಲೇಖಗಳನ್ನೂ, ಆ ಸಂಸ್ಥೆಗಳ ಕಾರ್ಯಕ್ರಮ ಮತ್ತು ಘಟನೆಗೆ ಸಂಬಂಧಪಟ್ಟ ವಿಶೇಷ ಸಮಾಚಾರಗಳನ್ನೂ, ಸ್ಥಾನಿಕ ಸ್ವರಾಜ್ಯ ಸಂಬಂಧವಾದ ದೇಶವಿದೇಶ ವರ್ತಮಾನಗಳನ್ನೂ ಪ್ರಕಟಿಸುವ ಪತ್ರಿಕೆ.

ಇತರ ಸಂಗತಿಗಳೂ ವಿಶೇಷ ವರ್ತಮಾನಗಳೂ ಸಹ ಪ್ರಕಟವಾಗುವವು.

ಇಡೀ ಕನ್ನಡ ನಾಡಿನಲ್ಲಿ ಇಂತಹ ಪತ್ರಿಕೆಯು ಇದೊಂದೇ !

ವಾರ್ಷಿಕಚಂದಾ:— ೨ ರೂಪಾಯಿ; ಸಂಸ್ಥೆಗಳಿಗೆ ೫ ರೂಪಾಯಿ.

ವಿಳಾಸ:— ಟಿ ಯಲ್. ಚನ್ನಪ್ಪ, ವ್ಯವಸ್ಥಾಪಕ ಸ್ಥಳೀಯ ಸಂಸ್ಥೆಗಳ ಪತ್ರಿಕೆ ಗಾಂಧಿ ನಗರ, ಬೆಂಗಳೂರು ಸಿಟಿ.

ಓಂ

ಶರಣಸಂದೇಶ.

ಪ್ರಮುಖ ಸಾಮಾಜಿಕ ವಾರ ಪತ್ರಿಕೆ.

ಸಂಪುಟ ೭. | ಆಲಮಟ್ಟಿ- ಸೋಮವಾರ ತಾರೀಖು ೧೪ ನೆಯ ಜೂನ ೧೯೩೭. | ಸಂಚಿಕೆ ೪೦.

ಮಹತ್ವದ ಸುದ್ದಿಗಳು.

—ಕೀರ್ತಿಶೇಷ ಗೋಪಾಳ ಕೃಷ್ಣ ಗೋಖಲೆ ಇವರು ಸ್ಥಾಪಿಸಿದ ಭಾರತ ಸೇವಕ ಸಮಾಜದ ೩೨ ನೆಯ ವಾರ್ಷಿಕ ಸಭೆಯು ಕಳೆದ ೧೨ ನೆಯ ತಾರೀಖಿನ ದಿವಸ ಪುಣೆಯಲ್ಲಿ ಸುಭ್ರಮದಿಂದ ಜರುಗಿತು. ಈ ಸಮಾಜದಲ್ಲಿ ಈಗ ಸುಪ್ರಸಿದ್ಧ ನಾ. ಶ್ರೀನಿವಾಸ ಶಾಸ್ತ್ರಿಗಳು, ಶ್ರೀ. ಹೃದಯನಾಥ ಕುಂಜರು ಮೊದಲಾದ ೩೨ ದೇಶಸೇವಕರಿದ್ದಾರೆ.

— ಬಂಗಾಲದ ಕುಮಾರ ಶೈಲೇಶಚಂದ್ರ ಬಾನರ್ಜಿ ಎಂಬ ೧೭ ವರ್ಷಗಳ ವಿದ್ಯಾರ್ಥಿಯು ಕೈಕಾಲುಗಳನ್ನು ಕಟ್ಟಿಸಿಕೊಂಡು ನೀರಿನಲ್ಲಿ ಸತತ ೩೬ ತಾಸು ೧೪ ನಿಮಿಷ ಈಸಿ ದಿಗ್ವಿಜಯ ಹೊಂದಿದ್ದಾನೆ.

— ಹುಬ್ಬಳ್ಳಿಯ ಕುಮಾರಿ ಮಾಲತಿದೇವಿ ಟೇಂಬೆ ಎಂಬ ೧೭ ವರುಷಗಳ ವಿದ್ಯಾರ್ಥಿನಿಯು ಮುಂಬೈ ವಿಶ್ವ ವಿದ್ಯಾಲಯದ ಮ್ಯಾಟ್ರಿಕ್ಯೂಲೇಶನ್ ಪರೀಕ್ಷೆಯಲ್ಲಿ ೧೦೦ಕ್ಕೆ ೭೦ ಗುಣಗಳನ್ನು ಹೊಂದಿ ವಿಶ್ವವಿದ್ಯಾಲಯದ ಎಲ್ಲ ವಿದ್ಯಾರ್ಥಿನಿಯರಲ್ಲಿ ಮೊದಲನೆಯವಳಾಗಿ ತೇರ್ಗಡೆಹೊಂದಿದ್ದಾಳೆ.

— ಕಾರವಾರದ ಡಿಸ್ಟ್ರಿಕ್ಟ ಮತ್ತು ಸೆಶನ್ ಜಡ್ಜರಾದ ಮಿ. ಡೆನಿಸ್ ಕಿಂಕೆಡ್ ಇವರು ತಾರೀಖು ೧೦ ನೆಯ ದಿವಸ ಸಮುದ್ರದಲ್ಲಿ ತಾವೊಬ್ಬರೇ ಈಸಲಿಕ್ಕೆ ಹೋಗಿದ್ದಾಗ ಅರ್ಧತಾಸು ಈಸಿದನಂತರ ಕೈಸೋತು ಮುಳುಗಲಾರಂಭಿಸಿದರು. ಆಗ ಕೂಗಿದರು. ಅವರ ಮೋಟಾರಿನ ಡ್ರಾಯವ್ಹರ್ ಮತ್ತು ಒಬ್ಬ ಶಿಪಾಯಿ ಹೋಗಿ ಅವರನ್ನು ಹಿಡಿಯುವುದರೊಳಗಾಗಿಯೇ ಮುಳುಗಿ ಮೃತಪಟ್ಟರು. ಅರ್ಧತಾಸಿನ ಮೇಲೆ ಅವರ ಶವವು ಮೇಲಕ್ಕೆ ಬಂದಿತು.

—ಬಿಹಾರ ಪ್ರಾಂತದ ಗವ್ಹರ್ನರರು ರಾಂಚಿಯ ತಮ್ಮ ಭಾಷಣದಲ್ಲಿ ಗವ್ಹರ್ನರರು ತಮ್ಮ ವಿಶೇಷಾಧಿಕಾರವನ್ನು ಬಿಟ್ಟು ಕೊಡುವುದು ಶಕ್ಯವಿಲ್ಲವೆಂದು ಹೇಳಿದರು, ಮತ್ತು ಮಂತ್ರಿ ಮಂಡಲದ ಸಂಗಡ ಸಹಕರಿಸಿ ಉಭಯರೂ ಪಾಲುಗಾರಿಕೆಯ ಹೊಣೆಗಾರಿಕೆಯಿಂದ ಕೆಲಸ ಮಾಡುವೆವೆಂತಲೂ ತಿಳಿಸಿದರು.

— ಕಳೆದ ತಿಂಗಳು ೧೯ ನೆಯ ತಾರೀಖಿನಲ್ಲಿ ಪ್ಯಾರಿಸ್ ಪಟ್ಟಣದಲ್ಲಿ ಮೃತಪಟ್ಟ ಅಲವಾರ ಮಹಾರಾಜರ ಶವವು ಕಳೆದ ೧೦ ನೆಯ ತಾರೀಖಿನ ದಿವಸ ಮುಂಬೈ ಪಟ್ಟಣಕ್ಕೆ ತರಲ್ಪಟ್ಟಿತು. ಆಗ ೧೭ ತೋಪುಗಳನ್ನು ಹಾರಿಸಿ ಬಹುಮಾನ ಮಾಡಿದರು. ಕೂಡಲೇ ಅಲವಾರಕ್ಕೆ ತೆಗೆದುಕೊಂಡುಹೋಗಿ ಅಂತ್ಯ ವಿಧಿಯನ್ನು ನಡೆಯಿಸಿದ್ದಾಯಿತು.

— ನಿಜಾಮ ಸರಕಾರದವರು ತಮ್ಮ ಸಂಸ್ಥಾನದಲ್ಲಿ ಬರುವ ಬೇರೆ ಭಾಗಗಳ ಧಾನ್ಯಗಳ ಮೇಲೆಯೂ ಬರುವ ಸೆಪ್ಟಂಬರ್ ತಿಂಗಳಿಂದ ಸುಂಕವನ್ನು ಹೇರಬೇಕೆಂದು ಯೋಚಿಸಿದ್ದಾರೆ.

— ನಿಜಾಮ ರಾಜ್ಯದಲ್ಲಿ ಗ್ರಾಮ ಸುಧಾರಣೆಗಾಗಿ ಸರಕಾರದವರು ಒಂದು ಹೊಸ ಯೋಜನೆಯನ್ನು ಮಾಡಿದ್ದಾರೆ. ಇದು ಐದು ವರ್ಷಗಳಲ್ಲಿ ಪೂರ್ತಿಯಾಗುವುದು. ಈ ಯೋಜನೆಗಾಗಿ ೨೦ ಜನಗಳ ಒಂದು ಕಮಿಟಿಯು ಏರ್ಪಟ್ಟಿದೆ.

—ಜಾಗ್ರತೆ ಪ್ರಾಂತಿಕ ಅಸೆಂಬ್ಲಿಯನ್ನು ಕೂಡಿಸಬೇಕೆಂದೂ ಕಾಂಗ್ರೆಸ್ಸಿನ ಇಷ್ಟದಂತೆ ಗವ್ಹರ್ನರರು ಆಶ್ವಾಸನ ಕೊಡಬೇಕೆಂದೂ ಕಾಂಗ್ರೆಸ್ ಹೊಸ ಸುಧಾರಣೆಯನ್ನು ದೇಶ ಹಿತಕ್ಕಾಗಿ ಉಪಯೋಗಿಸಬೇಕೆಂದೂ ಲಂಡನ್ನಿನ ಮ್ಯಾಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ತಿಳಿಸಿದೆ.

—ಹಿಂದುಸ್ಥಾನದಿಂದ ಮೊನ್ನೆ ಜಾರ್ಜ ಪ್ರಭುಗಳ ರಾಜ್ಯಾರೋಹಣದಕಾಲಕ್ಕೆ ಲಂಡನ್ನಿಗೆ ತೆಗೆದುಕೊಂಡುಹೋದ ಮಾವಿನ ಹಣ್ಣುಗಳು ಒಂದಕ್ಕೆ ೧ ರೂ. ೫ ಆಣೆ ಪ್ರಕಾರ ಮಾರಲ್ಪಟ್ಟವು.

— ಸಾವಂತವಾಡ ಸಂಸ್ಥಾನದಲ್ಲಿ ರೂಪಾಯಿಗೆ ಒಂದಾಣೆಯಂತೆ ಭೂಕಂದಾಯವನ್ನು ಬಿಟ್ಟಿದ್ದಾರೆ.

—ಡೆಹರಾಡೂನದಲ್ಲಿ ತಾ. ೯ ನೆಯ ದಿವಸ ಪ್ರಚಂಡವಾದ ಬಿರುಗಾಳಿ ಬೀಸಿತು. ಅದರ ವೇಗ ತಾಸಿಗೆ ೯೦ ಮೈಲಿನಂತೆ ಇತ್ತು. ಇದರಿಂದ ಅನೇಕ ಗಿಡಗಳು ಬಿದ್ದು ಬಹು ನಷ್ಟವಾಗಿದೆ.

—ಭಾರತ ಮಂತ್ರಿಗಳು ಕಾಂಗ್ರೆಸ್ಸು ಕೇಳಿದ ಆಶ್ವಾಸನವನ್ನು ಕೊಡಲಾಗುವುದಿಲ್ಲವೆಂಬುದಾಗಿ ಹೇಳಿದುದು ಸರಿಯಲ್ಲವೆಂದೂ ಇದರಿಂದ ಸಿಮಲಾ ಮತ್ತು ಲಂಡನ್ನಿನ "ವ್ಹಾಯಿಟ ಹಾಲ" ಈ ಸ್ಥಳಗಳಲ್ಲಿ ರಾಜಕಾರಣ ಪ್ರವೀಣರು ಇಲ್ಲವೇ ಇಲ್ಲವೆಂದು ಗೊತ್ತಾಗುತ್ತದೆಂದೂ ಮಿ. ಕಾವ್ಹರ್ ಇವರು ಲಂಡನ್ನಿನ "ಡೇಲಿ ಹೆರಾಲ್ಡ" ಪತ್ರಿಕೆಯಲ್ಲಿ ಬರೆದಿದ್ದಾರೆ.

ಪಂಡಿತರಿಗೆ ಶ್ರೀ ಶಾಸ್ತ್ರಿಗಳ ಬುದ್ಧಿವಾದ.

ಮೈಸೂರು ಸಂಸ್ಥಾನದ ಪಂಡಿತ ಮಂಡಲದ ತೃತೀಯ ಸಮ್ಮೇಳನವು ಬೆಂಗಳೂರು ನಗರದಲ್ಲಿರುವ ಶ್ರೀಕೃಷ್ಣರಾಜೇಂದ್ರ ಪರಿಷನ್ಮಂದಿರದಲ್ಲಿ ಜೂನ್ ೩ ನೆಯ ತಾರೀಖಿನ ದಿನ ನಡೆಯಿತು. ಶ್ರೀ ಎಚ್. ಎಸ್. ಸುಬ್ಬರಾಯರು ಅಧ್ಯಕ್ಷತೆ ವಹಿಸಿದ್ದರು. ಅಣ್ಣಾಮಲೆ ವಿಶ್ವವಿದ್ಯಾನಿಲಯದ ಸ್ಥಾನಪತಿಗಳಾದ ಶ್ರೀ. ವ್ಹಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು ಪ್ರಾರಂಭ ಭಾಷಣಮಾಡಿದರು. ಅದರ ಮುಖ್ಯಾಂಶ ಹೀಗಿದ್ದಿತು—

ಶಾ. ಶಾಸ್ತ್ರಿಗಳು.

“ಪಂಡಿತರಲ್ಲಿ ‘ ನಮ್ಮನ್ನು ಮುಟ್ಟಬೇಡಿ. ನಮ್ಮಿಂದ ದೂರವಾಗಿರಿ ’ ಎಂಬ ಭಾವನೆಯು ಸಾಮಾನ್ಯವಾಗಿ ನೆಲೆಸಿದೆ. ಪ್ರಜಾಪ್ರಭುತ್ವದ ಧ್ಯೇಯಗಳು ಹೆಚ್ಚು ಹೆಚ್ಚು ರೀತಿಯಲ್ಲಿ ಆಚರಣೆಗೆ ಬರುತ್ತಿರುವ ಕಾಲದಲ್ಲಿ ಈ ಬಗೆಯ ಮನೋಧರ್ಮವಿರುವುದು ಸರಿಯಲ್ಲ. ಅದನ್ನು ಸಹಿಸುವುದಕ್ಕೂ ಆಗುವುದಿಲ್ಲ. ಸ್ನೇಹಬಾಂಧವ್ಯವೂ ಒಳ್ಳೆಯ ಭಾವನೆಯೂ ಇರಬೇಕು

ಪಂಡಿತರೆಲ್ಲರೂ ಐಹಿಕ ವಿಷಯಗಳನ್ನು ಕೈಬಿಟ್ಟು ಪಾರಮಾರ್ಥಿಕ ವಿಚಾರಗಳಲ್ಲಿಯೇ ಸರ್ವದಾ ಮಗ್ನರಾಗಿರುವರೇ ? ಎಂದು ನಾನು ಪ್ರಶ್ನಿಸುತ್ತೇನೆ. ಐಹಿಕ ವಿಷಯಗಳು ಅವರನ್ನು ಬಾಧಿಸುವುದಿಲ್ಲವೆ ? ಪಂಡಿತರು ಭೂಮಿಯ ಮೇಲೆ ಜನಿಸಿ ಪ್ರಪಂಚದ ಕಷ್ಟಸುಖಗಳನ್ನು ಅನುಭವಿಸುವುದಿಲ್ಲವೆ ? ಔದಾರ್ಯ, ಭಕ್ತಿ ಮುಂತಾದ ಗುಣಗಳು, ಒಂದೇ ಪಂಗಡದಲ್ಲಿರುವುವೆಂದೂ ಇತರರಲ್ಲಿಲ್ಲವೆಂದೂ ಯಾರಾದರೂ ಹೇಳಬಲ್ಲರೆ ? ಕನ್ನಡ ಮತ್ತು ಸಂಸ್ಕೃತಗಳಲ್ಲಿಯೇ ಪಾರಮಾರ್ಥಿಕ ವಿಚಾರಗಳಲ್ಲಿ ಅತ್ಯಮೂಲ್ಯವಾದ ವಿಷಯಗಳಿರುವುವೆಂದೂ ಅವುಗಳಿಂದಲೇ ಮಾನವನಿಗೆ ಮೋಕ್ಷವೆಂದೂ, ಇಂಗ್ಲಿಷ್ ಜ್ಞಾನವು ಐಹಿಕ ವಿಚಾರಗಳಿಗೆ ಮಾತ್ರ ಸಂಬಂಧಪಟ್ಟಿರುವುದೆಂದೂ ಹೇಳುವುದರಿಂದ ಬರುವ ಲಾಭವೇನು ? ಆ ರೀತಿ ಹೇಳುವುದರಿಂದ ನಮ್ಮ ಖಂಡನೆಯನ್ನು ನಾವೇ ಮಾಡಿಕೊಂಡಂತಾಗುವುದು. ಎಂಬುದಾಗಿ ಸೂಚಿಸಿದರು.

ಪಂಡಿತರು ದೀರ್ಘಕಾಲದಿಂದಲೂ ಕಾಪಾಡಿಕೊಂಡು ಬರುತ್ತಿದ್ದ ತತ್ವಶಾಸ್ತ್ರವು ಇಂದು ವಿಜ್ಞಾನದಿಂದ ಕುಂದಿಹೋಗಿದೆ. ಅದರ ಬೆಳವಣಿಗೆಯಾಗಿಲ್ಲ. ಇಂದಿನ ಪ್ರಚಲಿತ ವಿಷಯಗಳಲ್ಲಿ ಪಂಡಿತರು ಭಾಗವಹಿಸದೆ ದೂರವಾಗಿರುವ ಪ್ರಯುಕ್ತ ಅವರ ಕೆಲಸ ಕಾರ್ಯಗಳೂ ಕೂಡ ನಿಂತುಹೋಗಿವೆ. ಆದುದರಿಂದ ಪಂಡಿತರು ಎಚ್ಚರಗೊಳ್ಳಬೇಕು. ವಿದೇಶ ಸಂಸ್ಕೃತಿ ಜ್ಞಾನ ಭಂಡಾರವನ್ನು ಸಂಶಯಾತ್ಮಕ ದೃಷ್ಟಿಯಿಂದ ನೋಡಬಾರದು. ಇಂದಿನ ಜಗತ್ತಿನಲ್ಲಿ ಪಂಡಿತರು ಜೀವಿಸುತ್ತಿದ್ದಾರೆ. ೩೦೦-೪೦೦ ವರ್ಷಗಳ ಕೆಳಗೆ ಇದ್ದ ಪರಿಸ್ಥಿತಿಗನುಗುಣವಾಗಿ ಜೀವಿಸಬೇಕೆಂದು ಹೇಳುವುದಕ್ಕೆ ಪಂಡಿತರಿಗೆ ಯಾವ ಧೈರ್ಯವಿದೆ? ಆ ರೀತಿ ಜೀವಿಸುವದಕ್ಕೆ ಆಗುವದೂ ಇಲ್ಲ. ” ಎಂಬುದಾಗಿ ಎಚ್ಚರಿಕೆ ಕೊಟ್ಟರು.

ಮಠಾಧಿಪತಿಗಳ ಖಂಡನೆ.

“ ಇಂದು ಇಂಗ್ಲೆಂಡಿನ ಬಿಷಪ್ ” ಗಳನ್ನು ತೆಗೆದುಕೊಳ್ಳಿ. ನಮ್ಮ ಧರ್ಮಕ್ಕೂ ಪಾಶ್ಚಾತ್ಯರ ಧರ್ಮಕ್ಕೂ ಬಹಳ ವ್ಯತ್ಯಾಸವಿರಬಹುದು. ಅವರ ಕೆಲಸ ಕಾರ್ಯಗಳೇ ಬೇರೆಯಾಗಿರಬಹುದು. ‘ ಬಿಷಪ್ ’ ಗಳೂ ಕೂಡ ಹಿಂದಿನ ಸಂಸ್ಕೃತಿಯ ಹಿಂದಿನ ಧರ್ಮದ ಪ್ರತಿನಿಧಿಗಳೆನಿಸಿಕೊಂಡಿದ್ದಾರೆ. ಆದರೆ ಇಂದಿನ ಜೀವನ ಕ್ರಮದಲ್ಲಿ ಅವರೆಷ್ಟು ಪ್ರಮುಖಪಾತ್ರವನ್ನು ವಹಿಸಿದ್ದಾರೆ? ಹೆಸರುವಾಸಿಯಾಗಿರುವ ಅತ್ಯುತ್ತಮ ಗ್ರಂಥಗಳನ್ನು ಅವರ ಪೈಕಿ ಅನೇಕ ಮಂದಿ ಬರೆದಿದ್ದಾರೆ. ಶಾಂತಿ ಮತ್ತು ಸಂಗ್ರಾಮ ಘರ್ಷಣವುಂಟಾದ ಸಂದರ್ಭದಲ್ಲಿ ಬಿಷಪ್”ಗಳು ಬಹಳ ಮುಖ್ಯವಾದ, ಗಮನಾರ್ಹವಾದ ಪಾತ್ರವನ್ನು ವಹಿಸಿದ್ದರು. ನಮ್ಮ ಮಠಾಧಿಪತಿಗಳು, ನಮ್ಮ ಏಳಿಗೆಗೆ, ಸಹಕಾರಿಯಾದ ಎಷ್ಟು ವಿಷಯಗಳಲ್ಲಿ ಭಾಗವಹಿಸುವರು? ಚರ್ಚೆಮಾಡಬೇಕಾಗಿ ಬಂದರೂ, ಒಂದುವೇಳೆ ಚರ್ಚೆಗಳನ್ನು ನಡೆಸಿದರೂ ೮೦೦ ವರ್ಷಗಳ ಕೆಳಗೆ, ಶಾಸ್ತ್ರದಲ್ಲಿ ಯಾರೋ ಹೇಳಿದ್ದ ವಿಷಯಗಳನ್ನು ಉದಾಹರಿಸುವರು. ಸಂಗ್ರಾಮದಿಂದ ಜಗತ್ತು ತಲ್ಲಣಿಸಿಹೋಗಿರುವಾಗ ೮೦೦ ವರ್ಷಗಳ ಹಿಂದಿನ ಶಾಸ್ತ್ರದ ಆಧಾರವನ್ನು ಸೂಚಿಸಿದರೆ ಉಂಟಾದ ಪ್ರಯೋಜನವೇನು? ಶಾಂತಿಸ್ಥಾಪನೆಗೆ ಇದು ಸಹಕಾರಿಯಾಗುವುದೆ? ಮಠಾಧಿಪತಿಗಳು, ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು, ಸ್ವಲ್ಪವೂ ತೊಂದರೆಯಾಗದಂತೆ, ಅವರಿಗೆ ಸಮಸ್ತ ಅನುಕೂಲಗಳನ್ನೂ ಕಲ್ಪಿಸಿಕೊಟ್ಟಿಲ್ಲ. ವೇ? ಆದರೆ ಅವರು ಮಾಡಿರುವುದಾದರೂ ಏನು?

ಹಿಂದೂಧರ್ಮದ ಸಾರವನ್ನೆಲ್ಲ ಸಂಗ್ರಹಮಾಡಿರುವ ಪುಸ್ತಕಗಳಿವೆಯೇ? ಹಿಂದೂಧರ್ಮದ ವಿಷಯಗಳನ್ನು ಚರ್ಚಿಸುವಾಗ ಮಾತ್ರ ಪಂಡಿತರು, ಮಹಾ ಮಹಾ ತತ್ವಗಳನ್ನು ಬಯಲಿಗಿಡುವರು. ಅವುಗಳನ್ನು ಕೇಳಿದರೆ ಆನಂದವಾಗುವದು. ಅವುಗಳನ್ನು ಅನುಷ್ಠಾನಕ್ಕೆ ತರಬೇಕೆಂಬ ಬಯಕೆ ಹುಟ್ಟುವದು. ಆದರೆ ಶಾಲೆಗಳಲ್ಲಿ ನೀವು ಬೋಧಿಸುವದೇನು? ಆ ದಿವ್ಯ ತತ್ವಗಳನ್ನು ಬೋಧಿಸಲಾಗುವದೆ? ಗಣೇಶನ ಸ್ತೋತ್ರ ಗಂಗಾನದಿಯ ಸ್ತೋತ್ರಗಳನ್ನು ಕಲಿಸುವದರಿಂದ ಏನು ಪ್ರಯೋಜನವಾದ ಹಾಗಾಯಿತು? ಅರ್ಥವಿಲ್ಲದ ಮಂತ್ರತಂತ್ರಗಳನ್ನು ಕಲಿಯುವುದರಿಂದ ಲಾಭವೇನು ಬರುವುದು? ಎಂಬುದಾಗಿ ನುಡಿದರು.

ಅನಂತರ ಶ್ರೀ ಶಾಸ್ತ್ರಿಗಳು ಒಂದು ಉದಾಹರಣೆಯನ್ನು ಕೊಟ್ಟರು ಹಿಂದೂಧರ್ಮವನ್ನು ಸಂಪೂರ್ಣವಾಗಿ ಗ್ರಹಿಸಿರುವವರೂ ಪೂರ್ಣ ಜ್ಞಾನಿಗಳೂ ಆದವರೊಬ್ಬರ ಬಳಿಗೆ ಕೆಲವು ದಿನಗಳ ಕೆಳಗೆ ಶ್ರೀ ಶಾಸ್ತ್ರಿಗಳು ಹೋದರಂತೆ. ಹಿಂದೂಧರ್ಮವು ಯಾವರೀತಿ ನಶಿಸಿ ಹೋಗುತ್ತಿರುವುದೆಂಬುದಕ್ಕೆ ೩-೪ ಮುಖ್ಯಾಂಶಗಳನ್ನು ತಿಳಿಸಿ, ಎಂದು ಕೇಳಿದರಂತೆ. ಅದಕ್ಕೆ ಆ ಜ್ಞಾನಿಗಳು ‘ತಲೆಯಮೇಲೆ ’ಕ್ರಾಪನ್ನು ಬಿಟ್ಟುಕೊಂಡು ಬಂದವರನ್ನು ಕಂಡರೆ ನನಗೆ ಮೈಯಲ್ಲಿ ಉರಿಯುವದು. ಹಿಂದೂಧರ್ಮವು ಇದರಿಂದ ಅರ್ಥ ಹಾಳಾಗಿದೆ, ಎಂಬುದಾಗಿ ನುಡಿದರಂತೆ.

ಅಂತಹ ಜ್ಞಾನಿಗಳ ಬಾಯಿಂದ ಇದನ್ನು ಕೇಳಿ ತಾವು ಬಹಳ ವ್ಯಸನಪಟ್ಟೆನೆಂದೂ ತಲೆಯಮೇಲೆ ಕ್ರಾಪನ್ನು ಬಿಟ್ಟಮಾತ್ರಕ್ಕೇ ಹಿಂದೂಧರ್ಮ ಹಾಳಾಗಿಹೋಯಿತೆಂದು ಅಂತಹ ಜ್ಞಾನಿಗಳು ಹೇಳುವುದಾದರೆ ಹಿಂದೂಧರ್ಮದಲ್ಲಿ ಏನೋ ಒಂದು ನ್ಯೂನತೆಯು ತಲೆದೋರುವುದೆಂದೂ, ಅದು ನಮ್ಮ ತಪ್ಪಲ್ಲವೆಂದೂ ತಾವು ಮನಸ್ಸಿನಲ್ಲಿ ಅಂದುಕೊಂಡುದಾಗಿ ಶ್ರೀ ಶ್ರೀನಿವಾಸ ಶಾಸ್ತ್ರಿಗಳು ನುಡಿದರು.

ಸಂಪ್ರದಾಯಗಳಿಗಿಂತ ಹೆಚ್ಚಾಗಿ ನಡತೆಗೂ ಉಚ್ಚ ಧ್ಯೇಯಗಳಿಗೂ ಪಂಡಿತರು ಗಮನ ಕೊಡಬೇಕೆಂದು ಸೂಚಿಸಿ ಕ್ರಾಪಿಗಿಂತ ತಲೆಯಮೇಲೆ ಜುಟ್ಟಿರಬೇಕೆಂದು ವಾದಿಸುವದೇಕೆ? ಬಂಗಾಳದಲ್ಲಿರುವ ಶಾಸ್ತ್ರಿವರ್ಗದವರಲ್ಲಿ ಕ್ರಾಪ್ ಬಿಟ್ಟುಕೊಂಡಿರುವವರೇ ಹೆಚ್ಚು. ಆದರಿಂದ ಹಿಂದೂಧರ್ಮ ನಶಿಸಿಹೋಗುವುದೆ? ಹಿಂದೂಧರ್ಮ ಶ್ರೇಷ್ಠವಾದ ಧರ್ಮ. ಹಿಂದೂಧರ್ಮದಲ್ಲಿ ವಿವಿಧತತ್ವಗಳಡಗಿವೆ. ಅಂತಹ ಧರ್ಮಕ್ಕಾಗಿ ನಾವು ಹೆಮ್ಮೆಪಡಬೇಕು. ಹಿಂ

ದೂ ಧರ್ಮದ ಸಾರ ಸುಖವನ್ನು ಅನುಭವಿಸಿ ಹೆಮ್ಮೆಪಡಬೇಕು. ಬಾಹ್ಯ ವಿಚಾರಗಳಿಗೆ ಗಮನ ಕೊಡಕೂಡದು.

ಪಂಡಿತರು ದೂರವಾಗಿರುವ ಮನೋಧರ್ಮವನ್ನು ಬಿಡಬೇಕು. ನಿರ್ಮಲ ಮನಸ್ಸಿನಿಂದ ಕೂಡಿದವರಾಗಿರಬೇಕು. ಸ್ವಾರ್ಥವನ್ನು ಬಿಡಬೇಕು. ಈ ಗುಣಗಳೆಲ್ಲವನ್ನು ಪಡೆದವರೇ ನಿಜವಾದ ಬ್ರಾಹ್ಮಣರೆಂದು ಭಗವದ್ಗೀತೆಯಲ್ಲಿ ಹೇಳಿದೆ. ಐಹಿಕ ವಿಷಯಗಳಿಗೆ ಗಮನಕೊಡದೆ ಅವುಗಳನ್ನು ಉಪೇಕ್ಷೆಮಾಡುವವನೇ ನಿಜವಾದ ಬ್ರಾಹ್ಮಣನು. ಅದು ಬಿಟ್ಟು ಅಡ್ಡವಾಗಿ ವಿಭೂತಿ ಧರಿಸಬೇಕೇ ಅಲ್ಲವೇ ಉದ್ದವಾದ ನಾಮಗಳನ್ನು ಹಾಕಿಕೊಳ್ಳಬೇಕೇ ಎಂಬುದಾಗಿ ವ್ಯರ್ಥವಾಗಿ ವಾದಿಸುವದು ಸರಿಯಲ್ಲ. ಮೂರುಸಾರೆ ಸ್ನಾನಮಾಡಬಹುದು ಆದರೆ ಮನಸ್ಸು ಕಲ್ಮಶವಾಗಿರಬಹುದು. ಭಕ್ತಿಯಿಲ್ಲದೆ ಕಾಡಿಗೆ ಹೋಗಿ ಬೇಕಾದಷ್ಟು ಪೂಜೆ ನಡೆಸಬಹುದು. ಆದರೆ ಅತನು ಗುಡಿಗೆ ಹೋಗದೆ ಮನಸ್ಸಿನಲ್ಲಿಯೇ ಭಕ್ತಿಯಿಂದ ಪೂಜೆ ನಡಿಸುವವನ ಸರಿಸಮಾನನೆನಿಸಲಾರನು " ಎಂಬುದಾಗಿ ನುಡಿದು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

'ವಿಶ್ವಕರ್ಣಾಟಕ'

ಆರ್ಯಸಮಾಜ ಮತ್ತು ಜಾತಪಾತ ತೋಡಕಮಂಡಲ.

ಆರ್ಯಸಮಾಜದವರು ಬ್ರಾಹ್ಮಣಾದಿ ನಾಲ್ಕು ವರ್ಣಗಳು ಇರಬೇಕೆಂತಲೂ ಜಾತಪಾತ ತೋಡಕಮಂಡಲದವರು ಅವುಗಳನ್ನು ತೆಗೆದು ಹಾಕಬೇಕೆಂತಲೂ ಹೇಳುತ್ತಿದ್ದಾರೆ.

ಆರ್ಯಸಮಾಜದವರಿಗೂ ಸನಾತನಿಗಳಿಗೂ ಇರತಕ್ಕ ಭೇದವೇನೆಂದರೆ, ಸನಾತನಿಗಳು ಜನ್ಮದಿಂದಲೇ ಜಾತಿಯನ್ನು ಎಣಿಸುತ್ತಾರೆ. ಆದರೆ ಆರ್ಯಸಮಾಜದವರು ಜನ್ಮದಿಂದ ಜಾತಿಯನ್ನು ಎಣಿಸದೆ ಗುಣಕರ್ಮಗಳ ಮೇಲಿಂದ ಅವರವರ ವರ್ಣಗಳನ್ನು ಕಂಡು ಹಿಡಿಯಬೇಕೆಂದು ಹೇಳುತ್ತಿದ್ದಾರೆ. ಎಲ್ಲಿಯವರೆಗೆ ಬೇರೆ ವರ್ಣದ ಕನ್ಯೆಯನ್ನು ಲಗ್ನವಾಗುವದಿಲ್ಲವೋ ಅಲ್ಲಿಯವರೆಗೆ ಬ್ರಾಹ್ಮಣಾದಿ ಚತುರ್ವರ್ಣಗಳು ಲೋಪವಾಗಲಾರವು ಈ ವಿಚಾರದಲ್ಲಿ ಆರ್ಯಸಮಾಜದವರು ಮತ್ತು ಜಾತಪಾತ ತೋಡಕಮಂಡಲದವರು ಒಂದೇ ಅಭಿಪ್ರಾಯವುಳ್ಳವರಾಗಿದ್ದಾರೆ ಗುಣಕರ್ಮಗಳ ಮೇಲಿಂದ ಲಗ್ನವಾಗಬೇಕಾದರೆ ಒಂದೇ ವರ್ಣದಲ್ಲಿಯೇ ಯೋಗ್ಯವರನು ದೊರೆತರೆ ಲಗ್ನವಾಗಲು ಅಡ್ಡಿಯಿಲ್ಲ. ಆದರೆ ಹೀಗೆ ಮಾಡುವುದರಿಂದ ಬ್ರಾಹ್ಮಣಾದಿ ವರ್ಣಗಳನ್ನೇನೋ ಲೋಪಗೊಳಿಸಿದಂತಾಗಲಿಲ್ಲ. ಎಲ್ಲರೂ ತಮ್ಮತಮ್ಮ ವರ್ಣದಲ್ಲಿಯೇ ಲಗ್ನವಾಗಲು ಇಚ್ಛಿಸುತ್ತಾರೆ. ಈ ಪದ್ಧತಿಯು ಎಲ್ಲಿಯವರೆಗ ಹೋಗುವದಿಲ್ಲವೋ ಅಲ್ಲಿಯವರೆಗೆ ವರ್ಣಗಳು ಲೋಪವಾಗುವುದಿಲ್ಲ

ಆರ್ಯಸಮಾಜದವರು ಉದ್ಯೋಗಗಳ ಮೇಲಿಂದಲೇ ಬ್ರಾಹ್ಮಣಾದಿ ವರ್ಣಗಳನ್ನು ಕಂಡು ಹಿಡಿಯುವದಾದರೆ ಉದ್ಯೋಗಗಳೆಂತೂ, ಅನಂತವಾಗಿವೆ. ಉದಾ— ಮಾಸ್ತರ್, ಡಾಕ್ಟರ್, ವ್ಯಾಪಾರಿ, ಚಿನಿವಾಲ, ಜಮೀನದಾರ, ಅಗಸ, ಓಲೇಕಾರ ಇತ್ಯಾದಿ ಇವುಗಳಿಂದ ನಾಲ್ಕೇ ವರ್ಣಗಳಂತು ಆಗುವದಿಲ್ಲ. ಆದುದರಿಂದ ಆರ್ಯಸಮಾಜದವರ ವಿಚಾರಸರಣಿಯಂತೆ ಉದ್ಯೋಗಗಳ ಮೇಲಿಂದಲೇ ವರ್ಣಗಳನ್ನು ಕಂಡು ಹಿಡಿಯುವುದು ಅಶಕ್ಯವೇ ಸರಿ. ಒಂದೇ ಉದ್ಯೋಗದಲ್ಲಿಯ ಹುಡುಗ ಹುಡುಗಿಯರಲ್ಲಿ ಲಗ್ನವಾದರೆ ಅವರ ಉದ್ಯೋಗಕ್ಕೇನೋ ಪರಸ್ಪರ ಸಹಾಯವಾಗುತ್ತದೆ ಜಾತಿಗಳೆಲ್ಲಾ ಹೀಗೆ ಉದ್ಯೋಗದ ಮೇಲಿಂದಲೇ ಏರ್ಪಟ್ಟವು. ಆದರೆ ಅವು ಸ್ಥಿರವಾಗಿ ಇರದೆ ಕಡೆಗೆ ಜನ್ಮದಿಂದಲೇ ಜಾತಿಯಾಗಿ ಪರಿಣಮಿಸಿದವು ಉದಾಹರಣೆಗಾಗಿ, ಶ್ರೀಯುತ ಲಾಲಾ ಕುಶಾಲ ಚಂದಜಿಯವರು ಪತ್ರಿಕಾ ಸಂಪಾದಕರು. ಮತ್ತು ಧನಿರಾಮಜಿ ಇವರು ಪಾದರಕ್ಷೆಗಳ ವ್ಯಾಪಾರಿಗಳು. ಇವರಿಬ್ಬರೂ ಜನ್ಮದಿಂದ ಕ್ಷತ್ರಿಯರು. ಇವರಿಬ್ಬರಲ್ಲಿ ನೆಂಟಸ್ತನವಾಯಿತು. ಇದು ಜನ್ಮವಿಶಿಷ್ಟಜಾತಿಯಮೇಲಿಂದ ಆಯಿತೆ? ಉದ್ಯೋಗದಮೇಲಿಂದ ಆಯಿತೆ? ಇದೇ ಪ್ರಕಾರವಾಗಿ ಈಗ ಎಲ್ಲಾ ಕಡೆಗೆ ನಡೆದಿದೆ

ಯಾರು ಬರವಣಿಗೆ ಕೆಲಸ ಮಾಡುತ್ತಾರೆಯೋ ಅವರೆಲ್ಲರೂ ಒಂದು ವರ್ಣದವರು. ಉದಾಹರಣೆಗಾಗಿ ಮಾಸ್ಟರ್, ಗ್ರಂಥಕಾರ ಕಾರಕೂನ, ಪತ್ರಿಕೆಸಂಪಾದಕ, ಮೊದಲಾದವರು. ಮತ್ತು ಪೋಲಿಸರು, ಸೈನಿಕರು, ಎರಡನೆವರ್ಣದವರು, ವ್ಯಾಪಾರಸ್ಥರು ಮೂರನೆ ವರ್ಣದವರು, ಕೂಲಿಕಾರರು ನಾಲ್ಕನೆವರ್ಣದವರು ಆದರೆ, ಡಾಕ್ಟರರು ಯಾವ ವರ್ಣಕ್ಕೆ ಸೇರುವರು? ಹೀಗೆ ವರ್ಣಗಳನ್ನು ಮಾಡುತ್ತಾ ಹೋದರೆ, ಎಷ್ಟು ಪುರುಷರು ಒಂದೊಂದು ಉದ್ಯೋಗದಲ್ಲಿ ಇದ್ದಾರೆಯೋ ಅವರೆಲ್ಲರಿಗೂ ಆಯಾಯ ಉದ್ಯೋಗದ ಕನ್ಯೆಯರೇ ದೊರೆಯಬೇಕಾದೀತು. ಒಬ್ಬ ನ್ಯಾಯಾಧೀಶನ ಮಗನು ಯಾವನೊಬ್ಬ ಕಾರಕೂನ, ಮಾಸ್ತರ, ಅಥವಾ ನ್ಯಾಯಾಧೀಶನ ಮಗಳನ್ನು ಲಗ್ನವಾದದ್ದಾದರೆ ಜಾತಪಾತ ತೋಡಕಮಂಡಲದವರ ಯಾವ ಅಡ್ಡಿಯೂ ಇಲ್ಲ ಆದರೆ ಇವರೀರ್ವರ ಲಗ್ನವು ಜನ್ಮದಿಂದಲೇ ಆದಂತಾಯಿತೇ ಹೊರತು ಉದ್ಯೋಗದ ಮೇಲಿಂದಾಗಲಿಲ್ಲ. ಒಂದು ವೇಳೆ ಕಾರಕೂನನು ಕಾರಕೂನಿ ಉದ್ಯೋಗದ ಕನ್ಯೆಯನ್ನೇ ಲಗ್ನವಾದರೆ ಅದರಂತೆ ಎಷ್ಟು ಹುಡುಗರು ಕಾರಕೂನ, ಮಾಸ್ತರ, ಜಜ್ಜ ಮುಂತಾದವರು ಇರುತ್ತಾರೆಯೋ ಅಷ್ಟೇ ಸಂಖ್ಯೆಯ ಆಯಾಯ ಉದ್ಯೋಗಗಳ ಹುಡುಗಿಯರೂ ಇರಬೇಕಾಗುವದು. ಆದಕಾರಣ ಮೇಲೆ ತಿಳಿಸಿದ ವಿವಾಹವು ಗುಣಕರ್ಮಗಳಮೇಲಿಂದ ಆಗಲಿಲ್ಲ. ಎಂದ ಮೇಲೆ ನಾಲ್ಕು ವರ್ಣಗಳನ್ನು ಮಾಡುವದರಿಂದ ಪ್ರಯೋಜನವೇನು? ಎಷ್ಟು ಜನ ಪುರುಷರು ದಂಡಿನಲ್ಲಿ ಸೇರ್ಪಡೆಯಾಗುತ್ತಾರೋ ಅಷ್ಟೇ ಸ್ತ್ರೀಯರೂ ದಂಡಿನಲ್ಲಿ ಸೇರಬೇಕಾದೀತಲ್ಲವೆ? ಹೀಗಾಗುವದು ಎಂದಾದರು ಶಕ್ಯವೊ?

ಹುಡುಗನು ಮಾತ್ರ ೨೫ ನೇ ವರುಷಕ್ಕೆ ವಿವಾಹವಾಗಲು ಯೋಗ್ಯನಾಗಿ ಯಾವದಾದರೊಂದು ಉದ್ಯೋಗವನ್ನುಮಾಡಬಲ್ಲನು ಆದರೆ ೧೬ ನೇ ವರುಷದಲ್ಲಿಯೇ ಹುಡುಗಿಯು ವಿವಾಹವಾಗಲು ಮಾತ್ರ ಯೋಗ್ಯಳಾಗುತ್ತಾಳೇ ಹೊರತು ಯಾವದಾದರೊಂದು ಉದ್ಯೋಗಕ್ಕೆ ಯೋಗ್ಯಳಿರುವದಿಲ್ಲ. ಆದುದರಿಂದ ಅವಳ ಗುಣಕರ್ಮಗಳನ್ನು ಹೇಗೆ ಗುರ್ತಿಸುವಿರಿ?

ಜನಾಂಗದಲ್ಲಿ ರಾಜ ಮತ್ತು ಪ್ರಜೆ ಎಂದೂ. ರಾಜ್ಯ ವಿಭಾಗದಲ್ಲಿ ಶಿವ್ಹಿಲ್ ಮತ್ತು ಮಿಲ್ಟ್ರಿ ಎಂದೂ, ಪ್ರಜೆಗಳಲ್ಲಿ ಧನಿಕರು ಮತ್ತು ಕೂಲಿಕಾರರು ಎಂದೂ, ಎರಡೆರಡು ಭಾಗಗಳು ಉಂಟು. ಈ ಪ್ರಕಾರ ಜನಾಂಗದಲ್ಲಿ ಒಟ್ಟು ಶಿವ್ಹಿಲ್, ಮಿಲ್ಟ್ರಿ, ಧನಿಕರು, ಮತ್ತು ಕೂಲಿಕಾರರು ಎಂಬ ನಾಲ್ಕು ವಿಭಾಗಗಳಿವೆ. ಈಗಿನ ಸ್ಥಿತಿಯಲ್ಲಿ ರಾಜ್ಯವಿಭಾಗದವರಿಗೆ ಹೆಚ್ಚು ಸಂಬಳವು ದೊರೆಯುವುದಲ್ಲದೆ ಅವರು ಲಂಚವನ್ನೂ ಕೂಡಾ ತಿನ್ನಲು ಅವಕಾಶವಿರುವದರಿಂದ ಆಶಾಯುಕ್ತರಾದ ಜನರು ರಾಜ್ಯವಿಭಾಗದಲ್ಲಿ ಸೇರ್ಪಡೆಯಾಗುತ್ತಿದ್ದಾರೆ ಇದಕ್ಕೋಸ್ಕರವಾಗಿಯೇ 'ಸೋಶಿಯಾಲಿಜಂ' (ಸಮತಾವಾದ) ಏರ್ಪಟ್ಟಿತು.

ಆದರೆ ಜಗತ್ತಿನಲ್ಲಿ ಸಮಾನತ್ವವು ಎಲ್ಲಿ ನೆಲೆಗೊಂಡಿದೆ? ಬುದ್ಧಿಯಲ್ಲಿ ಸಮಾನತೆ ಇಲ್ಲ, ವಿಚಾರಸರಣಿಯಲ್ಲಿ ಸಮಾನತೆ ಇಲ್ಲ;

ಜನರು ದುಡಿಯುವ ಶಕ್ತಿ ಸಮಾನವಿಲ್ಲ; ದೇಹಬಲದಲ್ಲಿ ಸಮಾನತೆ ಇಲ್ಲ; ಹೀಗಿರುವಕಾರಣ ಸಮತಾವಾದದಿಂದ ಮನುಷ್ಯನು ಪ್ರಭುತ್ವದ ಗುಲಾಮನಾಗುತ್ತಾನೆ ಮತ್ತು ವ್ಯಕ್ತಿಸ್ವಾತಂತ್ರ್ಯವು ಹಾರಿ ಹೋಗುತ್ತದೆ.

ಯಾರು ಪಂಡಿತರೂ ಶೂರರೂ ಇದ್ದಾರೆಯೋ ಅವರು ಸ್ವಾರ್ಥ ತ್ಯಾಗಿಗಳಾಗಿ ದೇಶದ ಏಳ್ಗಿಗೆ ಪ್ರಯತ್ನಮಾಡಲು ರಾಜ್ಯವಿಭಾಗದಲ್ಲಿ ಸೇರ್ಪಡೆಯಾಗಬೇಕು. ಮತ್ತು ಅವರ ಆಹಾರ ವಿಹಾರ ಮಕ್ಕಳ ಪೋಷಣೆ ಮತ್ತು ಮಕ್ಕಳ ವಿದ್ಯಾಭ್ಯಾಸ ಮುಂತಾದವುಗಳ ವೆಚ್ಚವು ಸರಕಾರದಿಂದ ನಡೆಯ ಬೇಕು. ಹೀಗಾದರೆ ವ್ಯಕ್ತಿಸ್ವಾತಂತ್ರ್ಯವು ಸ್ಥಿರಗೊಳ್ಳುತ್ತದೆ. ಮತ್ತು ರಾಜ್ಯಾಧಿಪತಿಯು ಸ್ವಾರ್ಥತ್ಯಾಗಿಯಾಗಿರುವದರಿಂದ ಜಗತ್ತಿನಲ್ಲಿ ಶಾಂತತೆಯನ್ನು ನೆಲೆಗೊಳಿಸಲು ಬಹು ಸಹಾಯವಾಗುವದು ಎಂದ ಮೇಲೆ ವರ್ಣಗಳ ಅವಶ್ಯಕತೆ ಎಲ್ಲಿದೆ? ಭಗವದ್ಗೀತೆಯಲ್ಲಿ ಹೇಳಿರುವದೇನೆಂದರೆ- "ನನ್ನ ಭಕ್ತರಾದ ಸ್ತ್ರೀ, ವೈಶ್ಯ, ಮತ್ತು ಶೂದ್ರರು ಮೋಕ್ಷವನ್ನು ಹೊಂದುತ್ತಾರೆ" ಎಂದ ಮೇಲೆ ಬ್ರಾಹ್ಮಣ ಮತ್ತು ಕ್ಷತ್ರಿಯರಿಗೆ ಮೋಕ್ಷಕ್ಕೆ ಅಡ್ಡಿ ಎಲ್ಲಿದೆ? ಯಾಕಂದರೆ ಬ್ರಾಹ್ಮಣರೂ ಕ್ಷತ್ರಿಯರೂ ಸದಾ ಜನಾಂಗದ ಸೇವೆಯಲ್ಲಿಯೇ ಆಸಕ್ತರಾಗಿರುತ್ತಾರೆ. ಸ್ತ್ರೀಯರು ರಾಜ್ಯ ವಿಭಾಗದಲ್ಲಿ ಸೇರುವದು ವಿರಳ. ಆದಕಾರಣ ವೈಶ್ಯರು ಶೂದ್ರರು ಮತ್ತು ಸ್ತ್ರೀಯರು ಪ್ರಾಮಾಣಿಕತನದಿಂದ ಜನಾಂಗದ ಸೇವೆಯನ್ನು ಮಾಡಿದ್ದೇ ಆದರೆ ಇವರೂ ಮೋಕ್ಷವನ್ನು ಹೊಂದುವರು. ಎಂದ ಮೇಲೆ ವರ್ಣಗಳ ಅವಶ್ಯಕತೆಯೇಕೆ?

ತಮ್ಮ ಬುದ್ಧಿ ಬಲದಿಂದ ಜನಾಂಗದಲ್ಲಿ ಎಷ್ಟು ವಿಭಾಗಗಳನ್ನೇ ಮಾಡಲಿ, ಅವುಗಳ ಅವಶ್ಯಕತೆ ಏನು ? ಈಗ ರಾಜ್ಯ ವಿಭಾಗದಲ್ಲಿ ಸರಕಾರದವರು ದಂಡಿನ ಖಾತೆ, ಪೋಲಿಸ್ ಖಾತೆ. ವಿದ್ಯಾಖಾತೆ, ಶಾಸನ ಖಾತೆ, ವೈದ್ಯ ಖಾತೆ, ಕೈಗಾರಿಕೆ ಖಾತೆ, ವ್ಯವಸ್ಥಾ ಖಾತೆ, ಮೊದಲಾದ ಅನೇಕ ವಿಭಾಗಗಳನ್ನು ಮಾಡಿಲ್ಲವೆ?

ಈಗ ಎಲ್ಲಾ ಕಡೆಯಲ್ಲಿ ವೇದ ಶಾಸ್ತ್ರಗಳ ಪಕ್ಷವನ್ನು ಹಿಡಿದುಕೊಂಡು ಕೆಲವರು ಮತ ಹಾಳಾಗುತ್ತದೆ ರಕ್ಷಿಸಿರಿ ಎಂತಲೂ ಕೆಲವರು ಹಾಳಾಗಿ ಹೋಗಲಿ ರಕ್ಷಿಸಬೇಡಿರಿ ಎಂತಲೂ ಲೇಖನ ಮೂಲಕ ವಾದಗಳನ್ನು ನಡೆಸಿದ್ದಾರೆ. ನಮ್ಮ ವಿಚಾರದಲ್ಲಂತೂ ಜಾತ ಪಾತ ತೋಡಕ ಮಂಡಲದವರ ಮತ್ತು ಆರ್ಯ ಸಮಾಜದವರ ತತ್ವಗಳು ಬಹುಮಟ್ಟಿಗೆ ಒಂದೇ ಇವೆ ಎಂದು ತೋರುತ್ತದೆ. ತೋಡಕ ಮಂಡಲದವರು ಮಾತ್ರ ನುಡಿದಂತೆ ನಡೆಯಲ್ಲಿಯೂ ತರುತ್ತಾರೆ ಆದರೆ ಆರ್ಯ ಸಮಾಜದವರ ನುಡಿಯಲ್ಲಿ ಮಾತ್ರ ಇದೆಯೇ ಹೊರತು ನಡೆಯಲ್ಲಿ ಇಲ್ಲ. ಒಬ್ಬಾನೊಬ್ಬ ಉಪದೇಶಕನು ಎರಡನೆಯವರಿಗೆ ಸತ್ಯವನ್ನು ನುಡಿಯಲು ಉಪದೇಶಿಸುತ್ತಾ ಇದ್ದಾನೆ ಆದರೆ ಆತನೇ ಮೊದಲು ಸತ್ಯವನ್ನು ನುಡಿಯುವುದಿಲ್ಲ. ಒಬ್ಬನು ಗಡಿಂಬಾರ ಮಾಡುವ ಕ್ರಮವನ್ನು ಹೇಳುತ್ತಿದ್ದಾನೆ. ಆದರೆ ಆತನಿಗೇನೇ ಅದನ್ನು ಮಾಡಲು ಬರುವುದಿಲ್ಲ! ಇಂಥವರ ವಿದ್ಯೆಯ ಮಹತ್ವವೇನು ? ತನಗೆ ತಿಳಿದದ್ದನ್ನು ಆಚರಣೆಯಲ್ಲಿ ತರುವ ಬಲವಿದ್ದರೇನೇ ತಿಳಿದದ್ದು ಸಾರ್ಥಕವಾಯಿತು. ತಮಗೆ ಗೊತ್ತಿದ್ದನ್ನು ನುಡಿಯಲ್ಲಿಯೊಂದೇ ಅಲ್ಲದೆ ನಡೆಯಲ್ಲಿಯೂ ತಂದು ಅನ್ಯರೂ ತರುವಂತೆ ಪ್ರಯತ್ನಿಸಬೇಕು. ಆಗ ಗುಣ ಕರ್ಮಗಳ ಮೇಲಿಂದ ವರ್ಣಗಳನ್ನು ಕಂಡುಹಿಡಿಯುವುದು ಅಶಕ್ಯವೆಂಬುದು ಆರ್ಯ ಸಮಾಜದವರಿಗೆ ಗೊತ್ತಾಗುತ್ತದೆ. ಅನಂತರ ಆರ್ಯ ಸಮಾಜದವರು ಗುಣಕರ್ಮಗಳಿಂದ ವರ್ಣಗಳನ್ನು ಉಂಟುಮಾಡುವ ಹವ್ಯಾಸಬಿಡುವರು. ಅಂತೆಯೇ ಜಾತ ಪಾತ ತೋಡಕ ಮಂಡಲದವರು ವರ್ಣಗಳನ್ನು ತೆಗೆದುಹಾಕಬೇಕೆಂದು ಹೇಳುತ್ತಿದ್ದಾರೆ.

ಇದರ ಮೇಲಿಂದ ತೋಡಕ ಮಂಡಲದವರು ಗುಣ ಕರ್ಮಗಳನ್ನು ಲಕ್ಷಿಸದೆ ಲಗ್ನಮಾಡಲು ಯತ್ನಿಸುತ್ತಿದ್ದಾರೆಂದು ಅನೇಕರು ಆಕ್ಷೇಪಿಸುತ್ತಿದ್ದಾರೆ ಈ ಆಕ್ಷೇಪಣೆಯು ತಪ್ಪು ತಿಳುವಳಿಕೆಯುಳ್ಳದ್ದಾಗಿರುತ್ತದೆ. ಹುಡುಗ ಹುಡುಗಿಯರು ಲಗ್ನವಾಗಿ ಅವರವರ ಗುಣ ಕರ್ಮಗಳು ಸರಿಬಾರದೆ ಹಗಲಿರುಳು ಜಗಳವಾಡಬೇಕೆಂದು ತೋಡಕ ಮಂಡಲದವರು ಎಂದೂ ಇಚ್ಛಿಸುವುದಿಲ್ಲ. ಆದರೆ ಹುಡುಗ ಹುಡಿಗಿಯರ ಲಗ್ನವಾಗಿ ಅವರು ಅತಿ ಪ್ರೇಮದಿಂದ ತಮ್ಮ ಜೀವಿತವನ್ನು ಸುಖದಿಂದ ಸಾಗಿಸಲೆಂದೇ ಇವರ ಉದ್ದೇಶ. ಹಾಗಲ್ಲದೆ ಒಂದೇ ಜಾತಿಯವರೆಂದು ಅವರನ್ನು ಜುಲುಮೆಯಿಂದ ಕಟ್ಟಿ ಲಗ್ನಮಾಡಲು ಎಂದೂ ಇಚ್ಛಿಸುವದಿಲ್ಲ.

ಆರ್ಯಸಮಾಜದವರ ಮತ್ತು ತೋಡಕಮಂಡಲದವರ ಉದ್ದೇಶ ಒಂದೇ ಅದೆ. ಆರ್ಯಸಮಾಜದವರು ತಮ್ಮ ಉದ್ದೇಶವನ್ನು ನೆರವೇರಿಸಬೇಕಾದರೆ ಅವರು ಸಮಾಜವನ್ನು ರಕ್ಷಿಸಿಕೊಳ್ಳಬೇಕು ಹಾಗಾದರೆ ಹಿಂದುಗಳೆಲ್ಲಾ ಒಂದಾಗುವರು. ಆಗ ಹಿಂದುಗಳ ಶಕ್ತಿಯು ಪ್ರಚಂಡವಾಗಿ ಹಿಂದುಮುಸಲ್ಮಾನರಲ್ಲಿ ಐಕ್ಯತೆಯಾಗುವದು ಮತ್ತು ಅಸ್ಪೃಶ್ಯತೆಯು ಮಣ್ಣುಪಾಲಾಗುವದು.

"ಕ್ರಾಂತಿ" ಅನುವಾದಕ

ಎನ್. ಸಿದ್ಧರಾಮಪ್ಪ ಎಲೇರಿ.

ಶ್ರೀ. ರಾಜಾಜಿಯವರ ಮೇಲೆ ಟೀಕೆ.

ಮಿ ರಫಿ ಅಹಮ್ಮದ ಕಿಡವಾಯಿ ಇವರು ಪಂಡಿತ ಜವಾಹರಲಾಲ ಇವರಿಗೆ ಒಂದು ಪತ್ರವನ್ನು ಬರೆದು ಶ್ರೀ. ರಾಜಗೋಪಾಲಾಚಾರ್ಯರ ವಿಷಯವಾಗಿ ಹೀಗೆ ಟೀಕಿಸಿದ್ದಾರೆ—

" ಶ್ರೀ. ರಾಜಗೋಪಾಲಾಚಾರ್ಯರು ತಾವು ಮದ್ರಾಸ ಪ್ರಾಂತದ ಅಸೆಂಬ್ಲಿ ಕಾಂಗ್ರೆಸ್ಸಿನ ಸಭಾಸದರ ಪ್ರಮುಖರೆಂಬುದನ್ನು ಮರೆತಂತೆ ತೋರುತ್ತದೆ. ಪರಕೀಯ ಸರಕಾರದ ಸಲಹೆಗಾರರಾಗಿದ್ದಾರೆ ಕಾಂಗ್ರೆಸ್ ಮಂತ್ರಿಮಂಡಲಕ್ಕೂ ಸರಕಾರಕ್ಕೂ ಹೇಗಾದರೆ ಸಹಕಾರವಾದೀತೆಂಬುದನ್ನು ಸೂಚಿಸುತ್ತಿದ್ದಾರೆ ಇವರ ಈ ವಿಧವಾದ ನಡತೆಯು ಕಾಂಗ್ರೆಸ್ಸಿನ ಧೋರಣಕ್ಕೆ ತುಂಬಾ ವಿರೋಧವಾದುದಾಗಿದೆ.

ದಿಲ್ಲಿಯಲ್ಲ ಆಶ್ವಾಸನಹೊಂದುವ ಪ್ರಶ್ನೆಯು ಬಂದಾಗ ಒಳ್ಳೆ ನಡತೆಯ ವಿಚಾರದಲ್ಲಿ ನಾವು ಆಶ್ವಾಸನ ಕೊಡಬೇಕಾದ ಪ್ರಸಂಗ ಬರಬಹುದೆಂದು ವ್ಯಕ್ತಗೊಳಿಸಿದ್ದ ಭೀತಿಯು ಶ್ರೀ. ರಾಜಗೋಪಾಲಾಚಾರ್ಯರ ಈಗಿನ ಹೇಳಿಕೆಯಿಂದ ನಿಜವಾದುದಾಗಿಯೇ ಪರಿಣಮಿಸಿದೆ.

ಈಗಿನ ಅನಿಶ್ಚಿತ ಸ್ಥಿತಿಯು ಜಾಗ್ರತೆ ನಿವಾರಣೆಯಾಗಬೇಕು. ಗವ್ಹರ್ನರರಿಂದ ಆಶ್ವಾಸನವನ್ನು ಹೊಂದಲು ಈ ವರೆಗೂ ನಿರೀಕ್ಷಿಸಿದ್ದಾಯಿತು. ಇನ್ನುಮೇಲೆ ಜಾಗ್ರತೆ ಅಖಿಲ ಭಾರತ ರಾಷ್ಟ್ರೀಯ ಸಭೆಯ ಸಮಿತಿಯನ್ನು ಕೂಡಿಸಿ ಕಾಂಗ್ರೆಸ್ ಧೋರಣದ ಮುಂದಿನ ನಿರ್ಧರವನ್ನು ಮಾಡುವದು ಅಗತ್ಯವಾಗಿದೆ."

ಲಂಡನ್ನಿನಲ್ಲಿ ಮಸೀದಿ.

ಲಂಡನ್ನಿನಲ್ಲಿ ೧೫ ಲಕ್ಷ ರೂ. ವೆಚ್ಚ ಮಾಡಿ ಒಂದು ಮಸೀದಿಯನ್ನು ಕಟ್ಟುವವರಿದ್ದಾರೆ. ಇದಕ್ಕೆ ನಿಜಾಮ ಸಾಹೇಬರು ೯ ಲಕ್ಷ ರೂ. ಗಳನ್ನು ಕೊಟ್ಟಿದ್ದಾರೆ.

ಗಡಿನಾಡಿನ ಹಿಂದು ಹೆಣ್ಣುಮಕ್ಕಳ ಶೋಚನೀಯಸ್ಥಿತಿ.

ಗಡಿನಾಡಿನಲ್ಲಿ ಇಪಿ ಫಕೀರನ ಅನುಯಾಯಿಗಳಾದ ಪುಂಡ ಮುಸಲ್ಮಾನರು ಹಿಂದು ಹೆಣ್ಣುಮಕ್ಕಳ ಮೇಲೆ ಎಂಥ ಭಯಂಕರ ಅತ್ಯಾಚಾರಗಳನ್ನು ನಡೆಯಿಸಿದ್ದಾರೆಂಬುದು ಸರ್ವಶ್ರುತವಷ್ಟೆ. ಬ್ರಿಟಿಶ್ ಸರಕಾರವು ತೀಕ್ಷ್ಣವಾದ ಉಪಾಯಗಳನ್ನು ಯೋಚಿಸದಿದ್ದರೆ ಆ ಪುಂಡರ ಪುಂಡಾಟಿಕೆಗಳು ನಿಲ್ಲುವುದು ಶಕ್ಯವೇ ಇರಲಿಲ್ಲ. ಏಕೆಂದರೆ ಹಿಂದುಗಳು ತಮ್ಮ ಹೆಣ್ಣುಮಕ್ಕಳನ್ನು ಸಂರಕ್ಷಿಸಿಕೊಳ್ಳುವಷ್ಟು ಸಾಮರ್ಥ್ಯವನ್ನು ಕೂಡಾ ಅನೇಕ ಸ್ಥಳಗಳಲ್ಲಿ ಹೊಂದಿಲ್ಲ. ಅನೇಕ ಹಿಂದು ತರುಣಿಯರು ಪುಂಡ ಮುಸಲ್ಮಾನರ ಅತ್ಯಾಚಾರಕ್ಕೆ ಆಹುತಿಯಾಗುತ್ತಿದ್ದಾರೆ.

ಗಡಿನಾಡಿನ ಈಗಿನ ದೊಂಬೆಗೆ ಹಿಂದು ಸ್ತ್ರೀಯರ ಅಪಹಾರವೂ ಒಂದು ಕಾರಣವಾಗಿದೆಯಷ್ಟೆ. ದೊಂಬೆಗಾರರು ಓಡಿಸಿಕೊಂಡು ಹೋದ ಹಿಂದು ಹುಡುಗಿಯರಲ್ಲಿ ಒಬ್ಬಳು ಈಗ ಬಿಡುಗಡೆ ಹೊಂದಿದ್ದಾಳೆ. ಅವಳು ಅನುಭವಿಸಿದ ಕಷ್ಟನಷ್ಟಗಳು ಪ್ರಕಟವಾಗಿವೆ. ಅವುಗಳನ್ನು ಓದಿದರೆ ಆ ಭಾಗದ ಹಿಂದುಗಳಮೇಲೆ ಎಂಥ ವಿಪತ್ತು ಬಂದಿದೆಯೆಂಬುದು ಗೊತ್ತಾಗುತ್ತದೆ ಇಷ್ಟೇ ಅಲ್ಲ; ಹಿಂದುಗಳು ತಮ್ಮ ಹೆಣ್ಣುಮಕ್ಕಳನ್ನು ಸಂರಕ್ಷಿಸುವಷ್ಟಾದರೂ ಮೊದಲು ಬಲಶಾಲಿಗಳೂ ಸಂಘಟಿತರೂ ಆಗುವುದು ಅವಶ್ಯಕವೆಂದೇ ಸ್ಪಷ್ಟವಾಗುತ್ತದೆ. ಆ ಹುಡುಗಿಯು ಹೀಗೆ ಹೇಳಿದಳು.—

“ನಾವು ಅಕ್ಕತಂಗಿಯರು ನಾಲ್ವರಿದ್ದೇವೆ. ತಾಯಿ ಇದ್ದಾಳೆ. ತಂದೆ ಇಲ್ಲ. ಬಂಧುಗಳಿಲ್ಲ. ನಮ್ಮಲ್ಲಿ ಚಿಕ್ಕವಳು ೧೬ ವರ್ಷದವಳಿದ್ದಾಳೆ. ಮೇ ೧೯ ನೇ ತಾರೀಖಿನ ದಿವಸ ಸೂರ್ಯಾಸ್ತದ ಸಮಯಕ್ಕೆ ಕೆಲವು ಸುಲಿಗೆಗಾರರು ಎರಡು ಗುಂಡು ಹಾರಿಸಿ ನಮ್ಮ ಮನೆಯನ್ನು ಹೊಕ್ಕು ನಮ್ಮ ಮೂವರು ಭಗಿನಿಯರನ್ನು ಒಯ್ದರು. ನಾನು ಮುಸಲ್ಮಾನ ಹುಡುಗಿಯೆಂದು ಹೇಳಲು ಅವರು ನನ್ನನ್ನು ಬಿಟ್ಟರು. ನಾನು ನೆರೆಮನೆಯ ಮುಸಲ್ಮಾನರ ಮನೆಯಲ್ಲಿ ಅಡಗಿಕೊಳ್ಳಲು ಅವರು ನನ್ನನ್ನು ಸುಲಿಗೆಗಾರರ ವಶಕ್ಕೆ ಕೊಟ್ಟರು.

ಸುಲಿಗೆಗಾರರು ನನ್ನನ್ನು ಒಂದು ಹೊಲಕ್ಕೆ ಒಯ್ದರು. ಅಲ್ಲಿ ನನ್ನ ಭಗಿನಿಯರ ಕೈಕಟ್ಟಿ ಮೊದಲೇ ನಿಲ್ಲಿಸಿದ್ದರು. ಸುಲಿಗೆಗಾರರು ನಮ್ಮನ್ನು ಗುಡ್ಡದ ಕಡೆಗೆ ನಡೆಯಿರೆಂದು ಕರೆದುಕೊಂಡು ನಡೆದರು. ನಾವೆಲ್ಲ ಅತ್ತೆವು; ಕರೆದೆವು; ಆದರೆ ಏನೂ ಉಪಯೋಗವಾಗಲಿಲ್ಲ.

ಅರ್ಧ ಗಂಟೆಯ ಮೇಲೆ ಒಂದು ಹಳ್ಳಿಗೆ ಹೋದೆವು. ಹಳ್ಳಿಗರು ನಮ್ಮನ್ನು ಕಣ್ಣುಕಟ್ಟಿ ನೋಡುತ್ತಿದ್ದರೂ ಏನೂ ಸಹಾಯ ಮಾಡಲಿಲ್ಲ ಹಳ್ಳಿಯನ್ನು ದಾಟಿ ಒಂದು ಮೈಲು ಹೋದ ಮೇಲೆ ಭಯಂಕರ ಬಿರುಗಾಳಿ ಬೀಸಿತು. ಹಿಲಾಲಿನ ಬೆಳಕಿನಲ್ಲಿ ನಾನು ಒಬ್ಬ ಸುಲಿಗೆಯವನನ್ನು ಗುರುತಿಸಿದೆನು.

ನಾವು ರಾತ್ರಿಯೆಲ್ಲಾ ನಡೆದು ಮಧ್ಯಾಹ್ನಕ್ಕೆ ಮೂರೇ ಮನೆಗಳುಳ್ಳ ಒಂದು ಹಳ್ಳಿಗೆ ಹೋದೆವು. ನಮ್ಮನ್ನು ಅಲಿಖೇಲ ಭಟ್ಟಾನಿ ಎಂಬವನ ಮನೆಗೆ ಒಯ್ದರು. ಅಲ್ಲಿ ಒಂದು ಆಡನ್ನು ಕೊಂದು ಅವರು ತಿಂದರು. ನಾವು ಏನನ್ನೂ ತಿನ್ನಲು ಸಮ್ಮತಿಸಲಿಲ್ಲ. ಆಗ ೩೦ ಸುಲಿಗೆಗಾರರಿದ್ದುದನ್ನು ನಾನು ಎಣಿಸಿದೆನು. ಅವರೆಲ್ಲರೂ ಭಟ್ಟಾನಿ ಪಠಾಣರು. ಅಲ್ಲಿ ಅವರು ತಮ್ಮ ಸುಲಿಗೆಯ ದ್ರವ್ಯವನ್ನೆಲ್ಲ ಹಂಚಿಕೊಂಡರು. ಒಂಟೆಯನ್ನು ಮಾತ್ರ ‘ಫಕೀರ’ ನ ಹೆಸರಿನಲ್ಲಿ ತೆಗೆದಿಟ್ಟರು. ಫಕೀರನಾರೋ ನನಗೆ ಗೊತ್ತಿಲ್ಲ.”

ಬ್ರಾಹ್ಮಣ ತರುಣಿಯ ಮೇಲೆ ಅತ್ಯಾಚಾರ.

ಜಬಲಪುರದಲ್ಲಿ ಒಬ್ಬ ಬ್ರಾಹ್ಮಣನು ತನ್ನ ೧೬-೧೭ ವರುಷಗಳ ಹೆಂಡತಿಯನ್ನು ಮಧ್ಯ ರಾತ್ರಿಯಲ್ಲಿ ಮನೆಯಿಂದ ಹೊರಗೆ ಹಾಕಿದನು. ಆ ತರುಣಿಯು ನಿರಾಶಳಾಗಿ ಸ್ಟೇಶನ್ನಿನ ಕಡೆಗೆ ಹೋಗುತ್ತಿದ್ದಳು ಅಷ್ಟರಲ್ಲಿ ಕೆಲವು ಪುಂಡರು ಬಂದು ಅವಳಿಗೆ ಸಮಾಧಾನ ಹೇಳಿ ಮೋಸದಿಂದ ಒಂದು ಮನೆಗೆ ಕರೆದುಕೊಂಡು ಹೋದರು.

ಅಲ್ಲಿ ಆ ನರಾಧಮರು ಅವಳಮೇಲೆ ಭಯಂಕರ ಅತ್ಯಾಚಾರವನ್ನು ನಡೆಯಿಸಿ ಅವಳು ಸ್ಮೃತಿ ತಪ್ಪಿದಮೇಲೆ ಅವಳನ್ನು ಅಲ್ಲಿಯೇ ಬಿಟ್ಟು ಹೋದರು. ಮರು ದಿವಸ ಅವಳನ್ನು ವೈದ್ಯಾಲಯಕ್ಕೆ ತೆಗೆದುಕೊಂಡು ಹೋದುದಾಯಿತು. ಅವಳಮೇಲೆ ಅತ್ಯಾಚಾರ ನಡೆಯಿಸಿದ ನರಾಧಮರು ಇನ್ನೂ ದೊರೆತಿಲ್ಲ.

ಈ ಕಾಲದಲ್ಲಿ ಹಿಂದು ಹೆಣ್ಣು ಮಕ್ಕಳಮೇಲೆ ಎಂಥ ವಿಪತ್ತುಗಳು ಬರಲಾರಂಭಿಸಿವೆಯೆಂಬುದಕ್ಕೆ ಇದು ಒಂದೂ ದೃಷ್ಟಾಂತ. ಹಿಂದುಗಳಲ್ಲಿ ಅನೇಕರು ತಮ್ಮ ಸತಿಯರು ತಾವು ಸಾಕಿದ ನಾಯಿಗಿಂತ ಕಡೆಯೆಂದು ತಿಳಿದು ಅವರನ್ನು ಉಪೇಕ್ಷಿಸುತ್ತಿರುವದರಿಂದ ಮತ್ತು ಬಲಾತ್ಕಾರಗಳೂ ಇರುವದರಿಂದ ಅನೇಕ ತುಂಟ ಮುಸಲ್ಮಾನರ ಅತ್ಯಾಚಾರಗಳಿಗೂ ಕುಲಗೆಡಿಸುವ ಕಾರ್ಯಗಳಿಗೂ ಹಿಂದು ಹೆಣ್ಣು ಮಕ್ಕಳು ತುತ್ತಾಗುತ್ತಿದ್ದಾರೆ. ಹಿಂದುಗಳ ಶಕ್ತಿ ಎಷ್ಟಿದೆಯೆಂಬುದನ್ನು ಇತ್ತೀಚಿಗೆ ಹಿಂದು ಸ್ತ್ರೀಯರ ಅಪಹಾರ ಅವರ ಮೇಲಾಗುತ್ತಿರುವ ಅತ್ಯಾಚಾರ ಮೊದಲಾದವುಗಳಿಂದ ಎಷ್ಟೋ ಊಹಿಸಬಹುದಲ್ಲವೇ?

ಹಿಂದುಗಳ ಕೊಲೆ !

ಮದ್ರಾಸಿನಲ್ಲಿ ಕಳೆದ ೨೪ ನೆಯ ತಾರೀಖಿನ ದಿವಸ ಮಹಮ್ಮದ ಪೈಗಂಬರರ ಜಯಂತಿಯ ಕಾಲಕ್ಕೆ ತುಂಟ ಮುಸಲ್ಮಾನರು ಎರಡು ಸ್ಥಳಗಳಲ್ಲಿ ಇಬ್ಬರು ಹಿಂದುಗಳನ್ನು ಕೊಂದರು.

ಸಮುದ್ರದ ದಂಡೆಯಲ್ಲಿ ಮುಸಲ್ಮಾನರ ಪ್ರಚಂಡ ಸಭೆ ಸೇರಿತ್ತು. ಅಲ್ಲಿಗೆ ನಾಲ್ವರು ಮುಸಲ್ಮಾನರು ಒಬ್ಬ ಹಿಂದು ಮನುಷ್ಯನನ್ನು ತಂದರು ಒಬ್ಬನು ಆತನ ಕೈಗಳನ್ನು ಕಟ್ಟಿದನು. ಉಳಿದವರು ಅವನನ್ನು ಚೂರಿಯಿಂದ ಇರಿದು ಕೊಂದರು. ನಾರ ಅಲ್ಲಿ ಎಂಬ ಒಬ್ಬ ಮುಸಲ್ಮಾನನು ಆ ಕೊಲೆಯನ್ನು ತಡೆಯಲು ಬರಲು ಆತನಿಗೆ ಆ ಕೊಲೆಗಡಕರು ಹೊಡೆದರು. ನಾನು ಮುಸಲ್ಮಾನನೆಂದು ಆತನು ಹೇಳಲು ಅವನನ್ನು ಬಿಟ್ಟರು.

ಕನ್ನಪ್ಪ ಚೆಟ್ಟಿ ಎಂಬಾತನು ಮಾರ್ಗದಲ್ಲಿ ಹೋಗುತ್ತಿದ್ದಾಗ ನಾಲ್ಕು ಜನ ಮುಸಲ್ಮಾನರು ಅವನಿಗೆ ಗಾಯಗೊಳಿಸಿದರು. ಆತನನ್ನು ವೈದ್ಯಾಲಯಕ್ಕೆ ತೆಗೆದುಕೊಂಡು ಹೋಗಲು ಅಲ್ಲಿ ಮೃತಪಟ್ಟನು ಈ ಎರಡೂ ಕೊಲೆಗಳನ್ನು ಮಾಡಿದ ಅಪರಾಧಿಗಳ ಮೇಲಣ ವ್ಯಾಜ್ಯವು ಇದೇ ತಿಂಗಳು ೨೫ ನೆಯ ತಾರೀಖಿಗೆ ಪ್ರಾರಂಭವಾಗುವದು.

ಸಿಂಧ ಪ್ರಾಂತದ ಮೆಹರಾಪುರ ಎಂಬ ಗ್ರಾಮದಲ್ಲಿ ಒಬ್ಬ ಮುಸಲ್ಮಾನನು ಕುರಾನ ಗ್ರಂಥವನ್ನು ಹಿಂದು ಮನುಷ್ಯನ ಮನೆಯಲ್ಲಿ ಒಗೆದದ್ದರಿಂದ ಅವನನ್ನು ಸೆರೆಹಿಡಿದಿದ್ದಾರೆ

ಡಾ. ನಂದಿಮಠ ಇವರ ಭಾಷಣ.

ಕಳೆದ ಜನೆಯ ತಾರೀಖಿನದಿವಸ ಬಾರ್ಶಿಯಲ್ಲಿ ಸೊಲ್ಲಾಪುರ ಜಿಲ್ಲಾ ವೀರಶೈವರ ಮೂರನೆಯ ಅಧಿವೇಶನವು ಡಾ. ನಂದಿಮಠ ಎಂ ಎ, ಪಿಎಚ್. ಡಿ. ಪ್ರಿನ್ಸಿಪಾಲ ಲಿಂಗರಾಜಕಾಲೇಜ ಬೆಳಗಾಂವ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಇವರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು —

"ವೀರಶೈವರಲ್ಲಿ ಸಂಘಟನೆಯಾಗಬೇಕಾದುದು ಅತ್ಯಗತ್ಯವಾಗಿದೆ. ಜನರ ಕೈಯಲ್ಲಿ ರಾಜ್ಯಸೂತ್ರ ಬರುತ್ತಿರುವ ಈ ಕಾಲದಲ್ಲಂತೂ ಸಂಘಟನೆಯ ಮಹತ್ವ ಹೆಚ್ಚಾಗಿದೆ. ಹೀಗಿದ್ದರೂ ವೀರಶೈವರಲ್ಲಿ ದುರ್ದೈವದಿಂದ ಅನೇಕ ಪಂಗಡಗಳೂ ಮತಭೇದಗಳೂ ಉಂಟಾಗಿ ಸಂಘಟನೆಯೇ ಇಲ್ಲದಾಗಿದೆ.

ಶೈವಧರ್ಮವು ಜಗತ್ತಿನಲ್ಲ ಅತಿಪ್ರಾಚೀನವಾದ ಧರ್ಮವು. ಲಿಂಗಪೂಜೆಯು ವೇದಕಾಲದ ಅಗ್ನಿಪೂಜೆಗೆ ಸಮಾನವಾದುದು. ಇದು ಎಷ್ಟು ಪ್ರಾಚೀನವಾದುದೆಂಬುದಕ್ಕೆ ಮೊಹಂಜೊದಾರೊದಲ್ಲಿ ದೊರಿತ ಅವಶೇಷಗಳೇ ಪ್ರಬಲ ದೃಷ್ಟಾಂತಗಳಾಗಿವೆ.

ಕ್ರಿಸ್ತ ಹತ್ತನೆಯ ಶತಮಾನದಲ್ಲ ಶೈವಧರ್ಮವು ಅನೇಕ ಭಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿದ್ದಿತು. ಕಾಸ್ಮೀರದಲ್ಲಿ "ತ್ರಿಕಸಿದ್ಧಾಂತ" ಎಂಬುದು ಪ್ರಬಲವಾಗಿತ್ತು. ಈ ಶೈವಸಿದ್ಧಾಂತದ ಉತ್ಪಾದಕನು ಅಭಿನವಗುಪ್ತನು. ಆ ಮುಂಚೆಯೇ ತಮಿಳುದೇಶದಲ್ಲಿ ಇನ್ನೊಂದು ವಿಧವಾದ ಶೈವಪಂಥವಿದ್ದಿತು. ಅದಕ್ಕೆ ೬೩ ಪುರಾತನರು ಹೆಚ್ಚಾದ ಕಳೆಯನ್ನು ಉಂಟುಮಾಡಿದರು.

ಕರ್ನಾಟಕದಲ್ಲಿ ತ್ರಿಕಮತ, ಪಾಶುಪತ, ಕಾಳಾಮುಖ ಎಂಬ ಶೈವಪಂಥಗಳು ಕ್ರಿ. ಶ. ೧೦ನೆಯ ಶತಮಾನದ ಹಿಂದೆಯೇ ಇದ್ದವು. ಶೈವಧರ್ಮವನ್ನು ಯಾವ ಒಬ್ಬ ವ್ಯಕ್ತಿಯೇನೂ ಉಂಟುಮಾಡಿಲ್ಲ. ಅನೇಕ ಮಹಾಪುರುಷರ ಸ್ವಾನುಭವದಮೇಲಿಂದ ಇದು ಸುಧಾರಣೆಯಾಗುತ್ತ ಈ ಸ್ಥಿತಿಗೆ ಬಂದಿದೆ. ಎಲ್ಲಾ ಧರ್ಮಗಳೂ ಹೀಗೆಯೇ ಆಗುತ್ತಾ ಬಂದಿವೆ. ವೀರಶೈವ ಮತವನ್ನು ಬಸವೇಶ್ವರನು ಸ್ಥಾಪಿಸಿದನೋ? ಪಂಚಾಚಾರ್ಯರು ಸ್ಥಾಪಿಸಿದರೊ? ಎಂಬವಾದ ಈಗ ಉಂಟಾದುದು ಆಶ್ಚರ್ಯವೇ ಸರಿ. ಇಬ್ಬರೂ ಶಿವಭಕ್ತರು. ಶಿವಮತವನ್ನೇ ಇಬ್ಬರೂ ಪ್ರಚಾರ ಮಾಡಿದ್ದಾರೆ.

ಲಿಂಗಾಂಗಿಗಳಲ್ಲಿ ಮೇಲುಕೀಳುಗಳಿಲ್ಲ. ಭಿನ್ನಭೇದಗಳಿಲ್ಲ. ಅವರೆಲ್ಲರಲ್ಲಿ ಸಮಾನತೆಯುಂಟೆಂದೇ ಬಸವೇಶ್ವರನು ಸ್ಪಷ್ಟವಾಗಿ ಹೇಳಿದ್ದಾನೆ. ಆಚಾರ್ಯರ ಅಭಿಪ್ರಾಯವೂ ಹೀಗೆಯೇ ಇದೆ. ಆದಕಾರಣ ಲಿಂಗಾಂಗಿಗಳಲ್ಲಿ ಪರಸ್ಪರ ಐಕಮತ್ಯ, ಬಂಧುಭಾವ, ಸಹಿಷ್ಣುತೆ ಇವು ಉಂಟಾಗುವಂತೆ ಆ ಮಹಾನುಭಾವರು ಬೋಧಿಸಿರುವ ರೀತಿನೀತಿಗಳನ್ನೇ ನಾವೂ ಅನುಸರಿಸಿ ಈಗ ಸಮಾಜವು ಸುಸಂಘಟಿತವಾದುದಾಗುವಂತೆ ಮಾಡುವುದು ಆಗತ್ಯವಾಗಿದೆ.

ವೀರಶೈವರಿಗೆ ಆರ್ಥಿಕವಿಷಯವೂ ಬಹು ಮುಖ್ಯವಾದುದು. ಈ ಜನಾಂಗಕ್ಕೆ ಒಕ್ಕಲತನ ಮತ್ತು ವ್ಯಾಪಾರಗಳೂ ಮುಖ್ಯ ಉದ್ಯೋಗಗಳಾಗಿವೆ. ಇವು ನಮ್ಮ ಜನರ ಪ್ರಯತ್ನದಿಂದ ಅಭಿವೃದ್ಧಿ ಹೊಂದಿ ಸಮಾಜವು ಸಂಪತ್ತುಳ್ಳದ್ದಾಗಬೇಕಾಗಿದೆ.

ವಿದ್ಯಾಪ್ರಸಾರವೂ ನಮ್ಮ ಸಮಾಜದಲ್ಲಿ ಹೆಚ್ಚಾಗಿ ಆಗಬೇಕಾಗಿದೆ. ನಮ್ಮಲ್ಲಿಯ ಮಠಗಳೆಲ್ಲಾ ನಿಜವಾದ ವಿದ್ಯಾಪೀಠಗಳು. ಅವು ಆ ಕಾರ್ಯವನ್ನೇ ಮಾಡಬೇಕು. ಕರ್ನಾಟಕದ ವೀರಶೈವರಿಗಿಂತಲೂ ಮಹರಾಷ್ಟ್ರದ ವೀರಶೈವರು ಹಿಂದುಳಿದಿದ್ದಾರೆ. ಇವರು ಈ ಎಲ್ಲ ವಿಷಯಗಳಲ್ಲಿ ಹೆಚ್ಚಾಗಿ ಪ್ರಯತ್ನಿಸಬೇಕಾದುದು ಆಗತ್ಯವಾಗಿದೆ."

ಗಾಂಧೀಜಿಯವರ ಮೇಲೆ ಟೀಕೆ.

ಅಖಿಲ ಭಾರತ ಸಮತಾವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀ. ಎಂ ಆರ್. ಮಸಾನಿಯವರು ಗಾಂಧೀಜಿಯರ ಮೊನ್ನಿನ ಅಭಿಪ್ರಾಯದ ಮೇಲೆ ಈ ಪ್ರಕಾರ ಟೀಕಿಸಿದ್ದಾರೆ—

"ಫೈಜಪುರ ಕಾಂಗ್ರೆಸ್ಸಿನಲ್ಲಾದ ಠರಾವನ್ನು ಗಾಂಧೀಜಿಯವರು ಬಿಟ್ಟು ಬೇರೆ ಹೇಳುತ್ತಿದ್ದಾರೆಂದೇ ನನಗೆ ತೋರುತ್ತದೆ. ದಿಲ್ಲಿಯಲ್ಲಿ ಅಖಿಲಭಾರತ ಕಾಂಗ್ರೆಸ್ ಕಮೀಟಿಯು ನಿರ್ಣಯಿಸಿದುದಕ್ಕೂ ಈಗ ಗಾಂಧೀಜಿಯವರು ಹೇಳುತ್ತಿರುವುದಕ್ಕೂ ಮಹದಂತರವಿದೆ. ಇದರಿಂದ ಇವರ ಅಭಿಪ್ರಾಯವು ಕಾಂಗ್ರೆಸ್ ನಿರ್ಣಯಕ್ಕೆ ಸಮ್ಮತವಾದುದಲ್ಲ.

ಈಗಿನ ಶಾಸನದ ಎಲ್ಲ ಚಟುವಟಿಕೆಗಳಲ್ಲಿಯೂ ಗವ್ಹರ್ನರರು ಮಂತ್ರಿಮಂಡಲದ ಸಲಹೆಯ ಪ್ರಕಾರವೇ ನಡೆಯಬೇಕೆಂದೂ ತಮ್ಮ ವಿಶೇಷಾಧಿಕಾರಗಳನ್ನು ಉಪಯೋಗಿಸಲೇ ಕೂಡದೆಂದೂ ದಿಲ್ಲಿ ಗೊತ್ತುವಳಿಯಲ್ಲ ಸ್ಪಷ್ಟವಾಗಿ ಹೇಳಿದೆ. ಈಗ ಗಾಂಧೀಜಿಯವರು ಮಂತ್ರಿಗಳಿಂದ ರಾಜಿನಾಮೆ ತೆಗೆದುಕೊಳ್ಳಲು ಗವ್ಹರ್ನರರು ಒಪ್ಪಿದರೆ ತಮ್ಮ ಸಮಾಧಾನವಾಗುತ್ತದೆಂದು ಹೇಳುತ್ತಿದ್ದಾರೆ.

ನಾವು ದಿಲ್ಲಿ ಠರಾವನ್ನೇ ಗಟ್ಟಿಯಾಗಿ ಹಿಡಿದುಕೊಳ್ಳಬೇಕು. ಆ ಠರಾವು ಅಧಿಕಾರಿಗಳಿಗೆ ತಿಳಿಯುವಂತಹ ಇಂಗ್ಲಿಷ ಭಾಷೆಯಲ್ಲಿಯೇ ಮಾಡಿದ್ದಾಗಿದೆ.

ಶ್ರೀ ರಾಜಗೋಪಾಲಾಚಾರ್ಯರೇ ಮೊದಲಾದವರು ಅದರಲ್ಲಿಯ ಶಬ್ದಗಳನ್ನು ಎಳೆದಾಡಿ ತಮ್ಮ ಅಭಿಪ್ರಾಯವನ್ನು ಕೂಡಿಸಿ ಪ್ರಕಟಿಸುತ್ತಿರುವುದರಿಂದ ಮೊದಲಿನ ಠರಾವಿನ ಅಭಿಪ್ರಾಯವೇ ತಿಳಿಯದಂತಾಗುವುದು."

ಕಾಂಗ್ರೆಸ್ಸಿನಲ್ಲಿರುವ ಸಮತಾವಾದಿಗಳಿಗೆ ಅಧಿಕಾರ ಸ್ವೀಕಾರವು ಬೇಡವಾಗಿದೆಯಷ್ಟೆ ಅವರು ಕ್ರಾಂತಿಯಿಂದಲೇ ಸ್ವಾತಂತ್ರವನ್ನು ಒಮ್ಮಿಲೇ ಹೊಂದಬೇಕೆಂದು ಹೇಳುವವರಾಗಿದ್ದಾರೆ. ಮಹಾತ್ಮಾ ಗಾಂಧೀಯವರು, ಶ್ರೀ ರಾಜಗೋಪಾಲಾಚಾರ್ಯರು, ಮೊದಲಾದ ಮುಖಂಡರು ಅಧಿಕಾರವನ್ನು ಹಿಡಿದು ಆ ಮೂಲಕ ದೇಶದ ಶಕ್ತಿಯನ್ನು ಹೆಚ್ಚಿಸಿಕೊಂಡು ಈ ಶಾಸನವನ್ನು ಮುರಿದು ಹಾಕಬೇಕೆಂಬುವವರಾಗಿದ್ದಾರೆ. ಇಂಥ ಸ್ಥಿತಿಯು ಪ್ರಾಪ್ತವಾಗಲು ಕಾಂಗ್ರೆಸ್ ಅಧಿಕಾರವನ್ನು ಸ್ವೀಕರಿಸಲೆಂಬುದಕ್ಕೋಸ್ಕರ ಅನುಕೂಲವಾಗುವಂತಹ ಅಭಿಪ್ರಾಯಗಳನ್ನು ಗಾಂಧೀಜಿಯವರೇ ಮೊದಲಾಗ ಪ್ರಮುಖರು ಪ್ರಕಟಿಸುತ್ತಿದ್ದುದು ಈ ಸಮತಾವಾದಿಗಳಿಗೆ ಇಷ್ಟವಿಲ್ಲ. ಅಂತೆಯೇ ಭಾಯಿ ಮಾನವೇಂದ್ರರಾಯರು ಶ್ರೀ ಮಸಾನಿಯವರು ಮೊದಲಾದ ಕ್ರಾಂತಿಪ್ರಿಯರು ಗಾಂಧೀಜಿಯವರ ಅಭಿಪ್ರಾಯಗಳನ್ನು ಟೀಕಿಸಲಾರಂಭಿಸಿದ್ದಾರೆ. ಕಾಂಗ್ರೆಸ್ಸು ಅಧಿಕಾರವನ್ನು ಸ್ವೀಕರಿಸಲು ಮುಂದೆ ಬಂದಂತೆ ಇವರ ಟೀಕೆಗಳು ಹೆಚ್ಚುತ್ತ ಹೋಗುವುದರಲ್ಲಿ ಸಂದೇಹವಿಲ್ಲ.

—ಭಾರತೀಯ ತರುಣಸಂಘ ಮತ್ತು ಹೊಸರಿತ್ತಿ ಗಾಂಧಿ ಆಶ್ರಮಗಳಲ್ಲಿದ್ದುಕೊಂಡು ದೇಶಸೇವೆಯ ಕಾರ್ಯಮಾಡುತ್ತಿದ್ದ ಶ್ರೀ ಮೈಲಾರ ಮಹಾದೇವಪ್ಪನವರು ಮತ್ತು ಇವರ ಧರ್ಮಪತ್ನಿ ಶ್ರೀಮತಿ ಸಿದ್ಧಮ್ಮನವರು ಆಯಾಯ ಸಂಸ್ಥೆಗಳಿಂದ ತಮ್ಮ ಸಂಬಂಧವನ್ನು ತೆಗೆದುಕೊಂಡಿರುವುದಾಗಿ ಪ್ರಕಟಿಸಿದ್ದಾರೆ. ಇದಕ್ಕೆ ಇವರಲ್ಲಿರುವ ಪ್ರಾಮಾಣಿಕವಾದ ಕೆಲ ಭಿನ್ನಾಭಿಪ್ರಾಯಗಳೇ ಕಾರಣವೆಂದೂ ತಿಳಿಸಿದ್ದಾರೆ.

ದಕ್ಷಿಣ ಸಂಸ್ಥಾನಗಳ ಪ್ರಜಾ ಪರಿಷತ್ತು.

ದಕ್ಷಿಣ ಸಂಸ್ಥಾನಗಳ ಪ್ರಜಾ ಪರಿಷತ್ತು ಶ್ರೀ. ನರಿಮನ್ನರ ಅಧ್ಯಕ್ಷತೆಯಲ್ಲಿ ಕಳೆದ ೫ನೆಯ ತಾರೀಖಿನ ದಿವಸ ಕುಡಚಿಯಲ್ಲಿ ಬಹು ಪರಿಣಾಮಕಾರಿಯಾಗಿ ಜರುಗಿತು. ಪರಿಷತ್ತಿಗೆ ಸಾಧಾರಣ ೫ಸಾವಿರ ಜನರು ಬಂದಿದ್ದರು. ಸ್ವಾಗತಾಧ್ಯಕ್ಷರಾದ ಶ್ರೀ ಅ. ಬ. ಲಕ್ಷ್ಮಿಯವರು ಕನ್ನಡದಲ್ಲಿ ಹೀಗೆ ಭಾಷಣ ಮಾಡಿದರು —

"ಸಂಸ್ಥಾನಿ ಪ್ರಜೆಗಳ ವಿಷಯದಲ್ಲಿ ಕಾಂಗ್ರೆಸ್ ಉಪೇಕ್ಷಿಸಿದೆಯೆಂದು ಕೆಲವರು ಆಕ್ಷೇಪಿಸುತ್ತಾರೆ. ಇದು ತಪ್ಪು. ಕಾಂಗ್ರೆಸ್ ಬ್ರಿಟಿಶ್ ಪ್ರಜೆಗಳಿಗಾದರೂ ಮಾಡಿರುವುದೇನು? ಮಹಾತ್ಮಾ ಗಾಂಧಿ ಪಂಡಿತ ಜವಾಹರಲಾಲ ಮೊದಲಾದವರು ಕಾರಾಗೃಹಕ್ಕೆ ಹೋಗಲಿಲ್ಲವೆ? ಬ್ರಿಟಿಶ್ ಪ್ರಜೆಗಳಲ್ಲಿ ಅನೇಕರು ಹೊಲ ಮನೆಗಳನ್ನು ಕಳೆದುಕೊಂಡಿಲ್ಲವೆ? ಕಾಂಗ್ರೆಸ್ಸು ಅವರಿಗಾಗಿ ಏನುಮಾಡಿಕೊಟ್ಟಿದೆ?

ಕಾಂಗ್ರೆಸ್ ಅಂದರೆ ವೀರ ನರಿಮನ್. ಶ್ರೀ ಗಾಡಗೀಳ ಮೊದಲಾದವರೇ ಅಲ್ಲ. ನಾವು ನೀವು ಕಾಂಗ್ರೆಸ್ಸು. ನಮ್ಮ ಸ್ವಾತಂತ್ರ್ಯಕ್ಕೆ ನಾವು ಪ್ರಯತ್ನಿಸಬೇಕು. ಸಂಸ್ಥಾನಿ ಪ್ರಜೆಗಳಾದ ನಾವು ಎಲ್ಲಿಯವರೆಗೆ ಪಾರತಂತ್ರ್ಯದಲ್ಲಿರುತ್ತೇವೆಯೋ ಅಲ್ಲಿಯವರೆಗೆ ಬ್ರಿಟಿಶ್ ಹಿಂದುಸ್ಥಾನದ ಪ್ರಜೆಗಳಿಗೆ ಸ್ವಾತಂತ್ರ್ಯ ದೊರೆಯುವುದು ಸಾಧ್ಯವೇ ಇಲ್ಲ. ಏಕೆಂದರೆ ನಾವಿಬ್ಬರೂ ಒಂದೇ ದೋಣಿಯಲ್ಲಿ ಕುಳಿತಿದ್ದೇವೆ."

ವೀರ ನರಿಮನ್ನರ ಭಾಷಣ.

ಅನಂತರ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ನರಿಮನ್ನರು ಮರಾಠಿಯಲ್ಲಿ ಭಾಷಣ ಮಾಡಿದರು. ಇವರ ಭಾಷಣದ ಮುಖ್ಯಾಂಶ ಹೀಗಿದ್ದಿತು —

"ಕಾಂಗ್ರೆಸ್ಸು ಸಂಸ್ಥಾನಿ ಪ್ರಜೆಗಳ ವಿಷಯದಲ್ಲಿ ಉಪೇಕ್ಷೆ ಹೊಂದಿದೆಯೆಂಬ ಆಕ್ಷೇಪಣೆಯನ್ನು ಅಲ್ಲಗಳೆವುದಕ್ಕಾಗಿಯೇ ನಾನು ಈ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ವಹಿಸಿದ್ದೇನೆ ನಮ್ಮ ವೈರಿಯಾದ ಬ್ರಿಟಿಶ್‌ಸರಕಾರವು ನಮ್ಮ ಬಾಗಿಲಲ್ಲಿಯೇ ಇರುವುದರಿಂದ ಮೊದಲು ಅದನ್ನು ತಳ್ಳಿಹಾಕಲು ನಾವು ಪ್ರಯತ್ನಿಸುತ್ತಿದ್ದೇವೇ ವಿನಾ ನಾವು ಸಂಸ್ಥಾನಿ ಪ್ರಜೆಗಳನ್ನು ಉಪೇಕ್ಷಿಸಿಲ್ಲ. ಬ್ರಿಟಿಶ್ ಹಿಂದುಸ್ಥಾನದ ಪ್ರಜೆಗಳ ಸಂಗಡಲೇ ಸಂಸ್ಥಾನಿ ಪ್ರಜೆಗಳಿಗೂ ಸ್ವಾತಂತ್ರ್ಯ ದೊರೆಯುತ್ತದೆಂಬುದನ್ನು ನೀವು ಖಂಡಿತವಾಗಿ ತಿಳಿಯಿರಿ.

ಈ ಪರಿಷತ್ತು ಕಳೆದ ಹತ್ತು ವರ್ಷಗಳಿಂದ ಕೂಡುತ್ತಾ ಇದ್ದರೂ ಇನ್ನೂ ಸಂಸ್ಥಾನಗಳಲ್ಲಿಯೇ ಕೂಡುವ ಬಲವು ಅದಕ್ಕೆ ಬಂದಿಲ್ಲ. ಈಗ ನಿರ್ಣಯಗಳೇ ಮುಖ್ಯವಲ್ಲ. ಪರಿಣಾಮಕಾರಿಯಾದ ಚಟುವಟಿಕೆ ಮತ್ತು ಕಾರ್ಯಗಳು ಬೇಕಾಗಿವೆ ಬಾರ್ಡೋಲಿ ಕಾರ್ಯಕ್ಕೆ ನಿರ್ಣಯವೇನಾದರೂ ಬೇಕಾಗಿತ್ತೆ? ಸ್ವಾರ್ಥತ್ಯಾಗ ಮಾತ್ರ ಬೇಕು.

ಸಂಸ್ಥಾನಿಕರ ಧೋರಣ.

ಇಂಗ್ಲೀಷ್ ಸರಕಾರಕ್ಕೆ ಸಂಸ್ಥಾನಗಳು ಬಹು ನಂಬಿಗೆಯ ಸ್ಥಾನಗಳಾಗಿವೆ. ಆದಕಾರಣ ಬ್ರಿಟಿಶ್ ಸರಕಾರದಿಂದಲೇ ಈಗ ಫೆಡರಲ್ ಪ್ರಭುತ್ವವು ಏರ್ಪಡುವುದಿದೆ. ಇದನ್ನು ಭಂಗಗೊಳಿಸಲಿಕ್ಕಾಗಿಯೇ ನಾವು ಹೆಚ್ಚಾಗಿ ಪ್ರಯತ್ನಿಸಬೇಕು.

ರಾಷ್ಟ್ರದ್ರೋಹದ ಪ್ರಾಯಶ್ಚಿತ್ತವು ದೊರೆಯದೆ ಇರುವುದಿಲ್ಲವೆಂಬುದನ್ನು ಈ ಸಂಸ್ಥಾನಾಧಿಪತಿಗಳಿಗೆ ಹೇಳದೆ ಇರಲಾರೆನು. ರಾಜ ಮತ್ತು ಪ್ರಜೆಗಳಲ್ಲಿ ಉಂಟಾಗುವ ಸ್ವಾತಂತ್ರ್ಯದ ಹೋರಾಟದಲ್ಲಿ ಕೊನೆಗೆ ಪ್ರಜೆಗಳಿಗೇನೇ ಜಯ ದೊರೆಯುತ್ತದೆಂಬುದು ಸಿದ್ಧಾಂತವಾದುದು. ಈ ವರೆಗಿನ ಜಗತ್ತಿನ ಚರಿತ್ರೆಯೂ ಹೀಗೆಯೇ ಹೇಳುತ್ತದೆ.

ಸಂಸ್ಥಾನಿಕರು ಸಂಸ್ಥಾನವು ತಮ್ಮ ಸೊತ್ತೆಂದೇ ತಿಳಿದಿದ್ದಾರೆ. ತಮ್ಮ ಮನಸ್ಸಿಗೆ ಬಂದಂತೆ ಸಂಸ್ಥಾನದ ಹಣವನ್ನು ವ್ಯಯ ಮಾಡುತ್ತಾರೆ. ದಕ್ಷಿಣಭಾಗದ ಕೆಲವು ಸಂಸ್ಥಾನಗಳು ಇದಕ್ಕೆ ಅಪವಾದವಾಗಿವೆ. ಆದರೆ ಒಟ್ಟಿನಲ್ಲಿ ಸಂಸ್ಥಾನಿಕರ ಧೋರಣವೇ ಹೀಗಿದೆ.

ಒಬ್ಬರು ಆಟಗಾರರು, ಇನ್ನೊಬ್ಬರು, ಸ್ಪರ್ಧೆಗಾರರು, ಮತ್ತೊಬ್ಬರು ಪೋಲೊ ಆಟಗಾರರು ಹೀಗೆ ನಾನಾ ವಿನೋದಗಳಲ್ಲಿ ಕಾಲಕಳೆದು ಪ್ರಜೆಗಳ ಹಣವನ್ನು ಹಾಳು ಮಾಡುವ ಸಂಸ್ಥಾನಿಕರೇ ಹೆಚ್ಚು. ಜಾಮನಗರದ ಸಂಸ್ಥಾನಾಧಿಪತಿಗಳು ವ್ಹಾಯಿಸ್‌ರಾಯರ ಆತಿಥ್ಯಕ್ಕೆ ೨೭ ಲಕ್ಷ ರೂ. ಗಳನ್ನು ಸೂರೆ ಮಾಡಿದರು! ಇಂತಹ ಆರು ಜನರ ಆದರ ಸತ್ಕಾರಗಳಿಗಾಗಿ ಸಂಸ್ಥಾನದ ಆಯವ್ಯಯ ಪತ್ರಿಕೆಯಲ್ಲಿ ೯೨ ಲಕ್ಷ ರೂ. ನಿರ್ದೇಶಗೊಳಿಸಿದ್ದಾಗಿದೆ. ಹೀಗೆ ಪ್ರಜೆಗಳ ಹಣವನ್ನು ಸೂರೆ ಮಾಡುವುದು ಘೋರ ಪಾಪವಾಗಿದೆ.

ಅನೇಕ ಮೊದಲನೆಯ ತರಗತಿಯ ಸಂಸ್ಥಾನಗಳಲ್ಲಿ ಕೂಡಾ ಭಾಷಣ ಸ್ವಾತಂತ್ರ್ಯವಿಲ್ಲ. ಸಂಸ್ಥಾನಿ ಪ್ರಜೆಗಳಿಗಿರುವ ಇವೇ ಮೊದಲಾದ ಶೋಚನೀಯ ಸ್ಥಿತಿಗಳು ನಿವಾರಣೆಯಾಗಬೇಕಾದರೆ ಅವರು ಸ್ವಾರ್ಥತ್ಯಾಗಿಗಳಾಗಬೇಕು. ಇನ್ನು ಮೇಲೆ ಈ ಪರಿಷತ್ತನ್ನು ಸಂಸ್ಥಾನದಲ್ಲಿಯೇ ಸೇರಿಸಬೇಕು. ಅದಕ್ಕಾಗಿ ಆತ್ಮಯಜ್ಞ ಮಾಡಲು ಸಿದ್ಧರಾಗಬೇಕು. ಕಾರಾಗೃಹವಾಸಕ್ಕೆ ಅಂಜಕೂಡದು."

ಶ್ರೀ. ಭೋಪಟಕರರ ಭಾಷಣ.

ದಕ್ಷಿಣ ಸಂಸ್ಥಾನಗಳ ಶಾಸನ ಮಂಡಲಗಳಲ್ಲಿರುವ ಸಭಾಸದರ ಸಮ್ಮೇಲನವು ಶ್ರೀ. ಲ. ಬ. ಭೋಪಟಕರ ಇವರ ಅಧ್ಯಕ್ಷತೆಯಲ್ಲಿ ತಾ ೫-೬-೩೭ ನೆಯ ದಿವಸ ಕುಡಚಿಯಲ್ಲಿ ಕೂಡಿದ್ದಿತು. ಈ ಸಮ್ಮೇಲನಕ್ಕೆ ಬೇರೆ ಬೇರೆ ಸಂಸ್ಥಾನಗಳ ಒಟ್ಟು ೭೫ ಸಭಾಸದರು ಬಂದಿದ್ದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು—

"ಹಿಂದುಸ್ಥಾನದ ಜನಸಂಖ್ಯೆಯ ನಾಲ್ಕನೆಯ ಒಂದು ಭಾಗ ಸಂಸ್ಥಾನಗಳಲ್ಲಿದೆ. ಈ ಎಲ್ಲ ಸಂಸ್ಥಾನಗಳ ರಾಜ್ಯ ವಿಸ್ತಾರವು ಸಾಧಾರಣ ಹಿಂದುಸ್ಥಾನದ ಅರ್ಧ ಭಾಗದಷ್ಟಿದೆ. ಇಟಲಿ, ಜರ್ಮನಿ, ಮೊದಲಾದ ಚಿಕ್ಕ ರಾಷ್ಟ್ರಗಳು ನಡೆಸಿರುವ ರಾಜಕಾರಣವನ್ನು ನೋಡಿದರೆ, ಹಿಂದುಸ್ಥಾನದ ಇಷ್ಟು ವಿಸ್ತಾರವಾಗಿರತಕ್ಕ ಸಂಸ್ಥಾನಗಳ ಅಧಿಪತಿಗಳು ಜಗತ್ತಿನ ರಾಜಕಾರಣವನ್ನೇ ಬೇರೆ ಮಾಡಬಹುದು. ಆದರೆ ಇವರಿಗೆ ಆದರ ಅರುವೆಲ್ಲಿದೆ? ಇವರು ಇಂಗ್ಲಿಷ್ ರಾಜ್ಯವನ್ನು ಸಂರಕ್ಷಿಸುವವರಾಗಿದ್ದಾರೆ.

ಇವರಿಗೆ ತಮ್ಮ ದೇಶಬಾಂಧವರಿಗಿಂತ ಬ್ರಿಟಿಶ್ ಪ್ರಭುತ್ವವೇ ಪ್ರಿಯವಾಗಿದೆ. ತಮ್ಮ ಅಧಿಕಾರಮದದಿಂದ ತಮ್ಮ ನಾಶಕ್ಕಾಗಿ ತಾವೇ ಗುದ್ದನ್ನು ತೋಡಿಕೊಳ್ಳುತ್ತಿದ್ದಾರೆ. ಇಂಗ್ಲಿಷ್ ಸರಕಾರವು ಇಂದಿಲ್ಲ ನಾಳೆ ಖಂಡಿತವಾಗಿ ಹೋಗುವುದೇ ಆಗಿದೆ. ಕಡೆಗೂ ತಮ್ಮ ಬಾಂಧವರೇ ತಮಗೆ ಗತಿಯೆಂಬುದನ್ನು ತಿಳಿದು ಅವರ ಸಂಗಡ ಪ್ರೇಮದಿಂದ ನಡೆಯುವುದು ಅಗತ್ಯವಾಗಿಲ್ಲವೆ?

ಸಂಸ್ಥಾನಿಕರು ಈ ಎಲ್ಲ ಅನ್ಯಾಯಗಳನ್ನು ಮಾಡಲು ಇವರಿಗೆ ಬ್ರಿಟಿಶ್ ಸರಕಾರದ ಬಲವಿದ್ದುದೇ ಮುಖ್ಯ ಕಾರಣವಾಗಿದೆ. ಆ ಬಲವನ್ನು ತೆಗೆದು ಹಾಕಲು ಮೊದಲು ಪ್ರಯತ್ನಿಸಬೇಕು"



ಶಾ. ಶ. ೧೮೫೯ ನೆಯ ಜ್ಯೇಷ್ಠ ಶು|| ೬ ಸೋಮವಾರ.

ಕಾಂಗ್ರೆಸ್ ಪಕ್ಷದ ಮುಂದಣ ಮಾರ್ಗ.

ಕಾಂಗ್ರೆಸ್ ಪಕ್ಷವು ತಾನು ಬಹುಮತಹೊಂದಿದ ಆರು ಪ್ರಾಂತಗಳಲ್ಲಿ ಮಂತ್ರಿಮಂಡಲವನ್ನು ಏರ್ಪಡಿಸಿಕೊಳ್ಳದೆ ಆಶ್ವಾಸನ ಕೇಳುವ ಕಟ್ಟನ್ನು ಹಾಕಿಕೊಂಡು ಅಲ್ಪ ಸಂಖ್ಯಾಕರು ರಾಜ್ಯ ಸೂತ್ರವನ್ನು ಹಿಡಿಯುವಂತೆ ಮಾಡಿರುವುದಷ್ಟೆ. ಆದರಿಂದ ಈ ಆರು ಪ್ರಾಂತಗಳ ರಾಜ್ಯಭಾರವು ತೃಪ್ತಿಕರವಾಗಿ ಸಾಗದಂತಾಗಿದೆ. ಬೇರೆ ಐದು ಪ್ರಾಂತಗಳು ತಮ್ಮ ಉನ್ನತಿಗಾಗಿ ಪ್ರಯತ್ನಿಸಲು ಪ್ರಾರಂಭಿಸಿವೆ. ಕಾಂಗ್ರೆಸ್ ಪಕ್ಷವು ತಾನು ಬಹುಮತ ಹೊಂದಿದಲ್ಲಿ ಕೂಡಾ ಕೈಯಲ್ಲಿ ರಾಜ್ಯ ಸೂತ್ರವನ್ನು ಹಿಡಿದುಕೊಳ್ಳದೆ ರಾಜ್ಯ ಶಾಸನದ ಪುಸ್ತಕವನ್ನು ಹಿಡಿದುಕೊಂಡು ವಾದಿಸುತ್ತ ಸರಕಾರದ ಮತ್ತು ಅಲ್ಪ ಸಂಖ್ಯಾಕರ ನಡವಳಿಕೆಗಳನ್ನು ನಿಷೇಧಿಸುವುದರಲ್ಲಿ ತೊಡಗಿದೆ. ಈ ಪಕ್ಷವು ಇನ್ನು ಮೇಲೆಯೂ ಇದೇ ಮಾರ್ಗದಲ್ಲಿರುವುದೇ ವಿಹಿತವೆ? ಹಾಗೆ ಮಾಡುವುದು ದೇಶಕ್ಕೆ ಕ್ಷೇಮಕರವೆ?

ಆಶ್ವಾಸನದ ವಾದ ವಿವಾದ ಎಲ್ಲಿಗೆ ಬಂತು?

ಗವ್ಹರ್ನರರು ವಿಶೇಷಾಧಿಕಾರವನ್ನು ಉಪಯೋಗಿಸಬಾರದೆಂತಲೂ ಹಾಗಾದರೇನೇ ತಾನು ಮಂತ್ರಿಮಂಡಲವನ್ನು ಏರ್ಪಡಿಸುವೆನೆಂತಲೂ ಕಾಂಗ್ರೆಸ್ ಪಕ್ಷವು ದಿಲ್ಲಿಯಲ್ಲ ಕೂಡಿ ಮೊದಲು ನಿರ್ಧರಿಸಿತು.

೧೯೩೫ ನೆಯ ಇಸ್ವಿ ಶಾಸನದಂತೆಯೇ ಈ ಪಕ್ಷವು ಚುನಾವಣೆಯಲ್ಲಿ ಭಾಗವಹಿಸಿದೆ. ಎಂದಮೇಲೆ ತಾನು ಮತದಾರರಿಂದ ಆರಿಸಲ್ಪಟ್ಟನಂತರ ಅದೇ ಶಾಸನದಂತೆಯೇ ನಡೆದು ತನ್ನ ಉದ್ದೇಶವನ್ನು ನೆರವೇರಿಸಿಕೊಳ್ಳಬೇಕಾದುದು ಯುಕ್ತವಾಗಿದ್ದಿತು. ಗವ್ಹರ್ನರರಿಗೆ ವಿಶೇಷಾಧಿಕಾರವಿದೆಯೆಂದೂ ಅದೇ ಈ ಹೊಸ ಶಾಸನದಲ್ಲಿ ಮುಖ್ಯವಾದ ದೋಷವೆಂದೂ ಮುಂಚೆಯೇ ಯಾರಿಗೆ ಗೊತ್ತಿರಲಿಲ್ಲ? ಅದನ್ನು ತಿಳಿದೇ ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ಸೇರಿರಲಿಲ್ಲವೆ? ಬಹುಮತವನ್ನು ಹೊಂದಿದ ಪಕ್ಷವು ಇಷ್ಟಪಡುವಂತೆ ಗವ್ಹರ್ನರರು ನಡೆಯಬೇಕೆಂಬುದಾಗಿ ಆ ಶಾಸನದಲ್ಲೇನಾದರೂ ಹೇಳಿದೆಯೆ? ಹಾಗೆ ಹೇಳಿದ್ದರೆ ಕಾಂಗ್ರೆಸ್ ಪಕ್ಷವು ತಾನು ಬಹುಮತವನ್ನು ಹೊಂದಿದ್ದರಿಂದ ಈ ಆಶ್ವಾಸನದ ಪ್ರಶ್ನೆಯನ್ನು ಉಂಟು ಮಾಡಬಹುದಾಗಿತ್ತು.

ಬಹುಮತವನ್ನು ಹೊಂದಿದ ಪಕ್ಷವೇ ಅಧಿಕಾರವನ್ನು ವಹಿಸಬೇಕೆಂದೇ ಶಾಸನವಿದೆ. ಎಂದಮೇಲೆ ಇದು ಅಧಿಕಾರವನ್ನು ಸ್ವೀಕರಿಸಬೇಕಾದುದೇ ನ್ಯಾಯವಾದ ಮಾರ್ಗವಾಗಿದ್ದಿತು. ಅದನ್ನು ಬಿಟ್ಟು ಈ ಆಶ್ವಾಸನದ ಪ್ರಶ್ನೆಯನ್ನು ಎತ್ತಿಕೊಂಡುದೇ ಶಾಸನ ವಿರೋಧವಾದ ರೀತಿಯು. ಅಲ್ಲದೆ ತಾನು ಚುನಾವಣೆಯ ಕಾಲಕ್ಕೆ ಮತದಾರರಿಗೆ ತಿಳಿಸಿದ ಸಂಗತಿಗೂ ಭಿನ್ನವಾದುದು. ಸರಕಾರದ ಕಡೆಗಿರುವವರೇ ಶಾಸನ ಮಂಡಲಗಳಲ್ಲಿ ಸೇರಿಕೊಂಡು ರಾಷ್ಟ್ರದ್ರೋಹದ ಕೆಲಸವನ್ನು ಮಾಡುತ್ತಿದ್ದಾರೆಂತಲೂ ಇಂಥವರು ಶಾಸನಮಂಡಲದಲ್ಲಿ ಬರದಂತೆ ಮಾಡುವುದಕ್ಕಾಗಿಯೇ ಕಾಂಗ್ರೆಸ್ಸು ಈಗ ಶಾಸನ ಮಂಡಲಗಳಲ್ಲಿ ಸೇರುತ್ತಿದೆಯೆಂತಲೂ ಕಾಂಗ್ರೆಸ್ ಹುರಿಯಾಳುಗಳು ಮತದಾರರಿಗೆ ಆಗ ಹೇಳಲಿಲ್ಲವೆ? ಇವರ ಈ ಮಾತನ್ನು ನಂಬಿಯೇ ಇವರಿಗೆ ಮತಗಳನ್ನು ಕೊಡಲಿಲ್ಲವೆ? ಎಂದಮೇಲೆ ಅನ್ಯ ಪಕ್ಷದವರ ಕೈಗೆ ರಾಜ್ಯಸೂತ್ರ ಹೋಗಬಾರದೆಂಬ ಉದ್ದೇಶದಿಂದಲಾದರೂ ಈ ಪಕ್ಷವು ಮಂತ್ರಿಮಂಡಲವನ್ನು ಏರ್ಪಡಿಸಿಕೊಳ್ಳಬೇಕಾಗಿರಲಿಲ್ಲವೆ? ಕೈಯಲ್ಲಿ ರಾಜ್ಯಸೂತ್ರವನ್ನು ಹಿಡಿದುಕೊಂಡು ಶಾಸನವನ್ನು ಭಂಗಗೊಳಿಸುವ ತನ್ನ ಜಾಣ್ಮೆಯನ್ನೂ ಶೂರತ್ವವನ್ನೂ ತೋರಿಸಬೇಕಾಗಿದ್ದಿತು

ಹೀಗೆ ಮಾಡದೆ ಅನ್ಯರನ್ನು ಆಕ್ಷೇಪಿಸುವುದರಲ್ಲಿಯೇ ಇದು ಈಗ ತನ್ನ ಬುದ್ಧಿವಂತಿಕೆ ಮತ್ತು ಬಲಗಳನ್ನು ಉಪಯೋಗಿಸುತ್ತಿದೆಯಲ್ಲಾ!

ವಾದಕ್ಕೆ ಬಂದ ಬಹುರೂಪ!

ಗವ್ಹರ್ನರರು ತಮ್ಮ ವಿಶೇಷಾಧಿಕಾರವನ್ನು ಉಪಯೋಗಿಸಬಾರದೆಂದೇ ದಿಲ್ಲಿಯಲ್ಲಿ ಈ ಪಕ್ಷವು ಮೊದಲು ನಿರ್ಧರಿಸಿತು. ಆ ಮೇಲೆ ಗಾಂಧೀಜಿಯವರು ಅದರ ವಿವರಣೆ ಮಾಡಿ ಗವ್ಹರ್ನರರು ಮಂತ್ರಿಮಂಡಲದ ಕಾರ್ಯಕಲಾಪಗಳಲ್ಲಿ ಆಗಾಗ್ಗೆ ಕೈಹಾಕಬಾರದೆಂಬುದೇ ಆಶ್ವಾಸನದ ಉದ್ದೇಶವೆಂದು ತಿಳಿಸಿದರು. ಅನಂತರ ಮಂತ್ರಿಮಂಡಲಕ್ಕೂ ಗವ್ಹರ್ನರರಿಗೂ ಭಿನ್ನಾಭಿಪ್ರಾಯ ಬಂದರೆ ಮಂತ್ರಿಮಂಡಲವು ರಾಜಿನಾಮೆ ಕೊಡಬೇಕೊ? ಗವ್ಹರ್ನರರು ಅದನ್ನು ತೆಗೆದುಹಾಕಬೇಕೆ? ಎಂಬ ವಾದ ಪ್ರಾರಂಭವಾಯಿತು. ಕೊನೆಗೆ ಗಾಂಧೀಜಿಯವರು ಇಷ್ಟಕ್ಕೂ ಸಿದ್ಧರಾದರು—

"ಮಂತ್ರಿಮಂಡಲವನ್ನು ನೀವೇ ತೆಗೆದುಹಾಕದಿದ್ದರೂ ರಾಜಿನಾಮೆ ಕೊಡಿರೆಂದಾದರೂ ಕೇಳುತ್ತೇವೆಂದು ಆಶ್ವಾಸನ ಕೊಟ್ಟರೆ ಸಾಕು."

ಮೊನ್ನೆ ಭಾರತ ಮಂತ್ರಿಗಳು ಹೀಗೆ ಆಶ್ವಾಸನವನ್ನು ಕೂಡಾ ಕೊಡಲು ಬರುವುದಿಲ್ಲವೆಂದೇ ಬಹು ವಿವರವಾಗಿ ತಿಳಿಸಿದ್ದಾರೆ. ಈಗಿನ ಶಾಸನದಂತೆ ಅವರ ವಿವೇಚನೆಯು ಸಮಂಜಸವಾಗಿಯೂ ಇದೆ. ಎಂದ ಮೇಲೆ ಕಾಂಗ್ರೆಸ್ ಪಕ್ಷವು ಇನ್ನು ಮುಂದೆ ಯಾವ ಮಾರ್ಗವನ್ನು ಹಿಡಿಯಬೇಕು? ಈ ವರೆಗಿನ ವಾದದಿಂದ ರಾಜ್ಯಶಾಸನ ಪ್ರವೀಣರ ಬುದ್ಧಿಗೆ ಒಂದು ಹೊಳಪು ಬಂದಿತು. ಸರಕಾರದ ಇಂಗಿತವೂ ತಿಳಿಯಿತು. ಈ ವಾದವು ಬಹುರೂಪವನ್ನು ಹೊಂದಿತೆಂದು ಕಾಂಗ್ರೆಸ್ಸಿನ ಹೊರಗಿರುವವರೇ ಹೇಳುತ್ತಿದ್ದಾರೆಂದಲ್ಲ; ಕಾಂಗ್ರೆಸ್ಸಿನಲ್ಲಿರುವ ಅನೇಕರು ಹೇಳುತ್ತಿದ್ದಾರೆಂಬುದನ್ನು ನಾವು ಬೇರೆಕಡೆ ಕೊಟ್ಟ ಸಂಗತಿಗಳಿಂದ ತಿಳಿದುಕೊಳ್ಳಬಹುದು.

ಹೊಸ ಚುನಾವಣೆಯು ಶಕ್ಯವೆ?

ಅಸೆಂಬ್ಲಿಯನ್ನು ಕೂಡಿಸಬೇಕಾಗಿ ಕಾಂಗ್ರೆಸ್ ಪಕ್ಷವು ಒತ್ತಾಯಪಡಿಸುತ್ತಿದೆಯಷ್ಟೆ. ಕೂಡಿಸಲ್ಪಟ್ಟರೆ ಇದಕ್ಕೆ ಅಸೆಂಬ್ಲಿಯಲ್ಲಿ

ಬಹುಮತವಿರುವುದರಿಂದ ಈಗಿನ ಮಂತ್ರಿಮಂಡಲದ ವಿಷಯದಲ್ಲಿ ಅವಿಶ್ವಾಸದ ಗೊತ್ತುವಳಿಯನ್ನು ತರುತ್ತದೆ. ಆಗ ಅದು ಬಹುಮತದಿಂದ ತೀರ್ಮಾನವೂ ಆಗುತ್ತದೆ. ಆಮೇಲೆ ಅಸೆಂಬ್ಲಿಯನ್ನು ಗವ್ಹರ್ನರರು ತೆಗೆದುಹಾಕಿ ಹೊಸ ಚುನಾವಣೆ ನಡೆಯುವಂತೆ ಮಾಡುವರೆಂದೇ ಅನೇಕರು ಯೋಚಿಸಿದ್ದರು

ಆದುದರಿಂದ ಹೊಸ ಚುನಾವಣೆಯಲ್ಲಿಯೂ ಕಾಂಗ್ರೆಸ್ಸಿಗೇನೇ ಮತವನ್ನು ಕೊಡಬೇಕಾಗಿ ಈಗಲೇ ಚಟುವಟಿಕೆಯನ್ನು ನಡೆಯಿಸಿದ್ದಾಗಿತ್ತು. ಆದರೆ ಸರಕಾರವು ಈ ಮಾರ್ಗವನ್ನು ಅನುಸರಿಸುವಂತೆ ತೋರುವುದಿಲ್ಲ ಹೊಸ ಚುನಾವಣೆಯಲ್ಲಿಯೂ ಕಾಂಗ್ರೆಸ್ಸಿಗೇನೇ ಬಹುಮತ ಬರುತ್ತದೆಂತಲೂ ಆಗಲೂ ಕಾಂಗ್ರೆಸ್ ಪಕ್ಷವು ಆಶ್ವಾಸನದ ಇದೇ ಪ್ರಶ್ನೆಯನ್ನು ಎತ್ತುತ್ತದೆಂತಲೂ ಸರಕಾರವು ಯೋಚಿಸಿದಂತೆ ಕಾಣುತ್ತದೆ. ಆದಕಾರಣ ಸರಕಾರವು ಪುನಃ ಚುನಾವಣೆಗೆ ಅವಕಾಶ ಕೊಡದೆ ಬೇರೆ ಮಾರ್ಗವನ್ನು ಹಿಡಿಯುವಂತೆ ತೋರುತ್ತದೆ.

ಸರಕಾರದ ಧೋರಣ.

ಬರುವ ಸೆಪ್ಟಂಬರ ತಿಂಗಳೊಳಗಾಗಿ ಅಸೆಂಬ್ಲಿಯು ಕೂಡೇ ಕೂಡುವುದು. ಆಗ ಕಾಂಗ್ರೆಸ್‌ಪಕ್ಷವು ಈಗಿನ ಮಂತ್ರಿಮಂಡಲದ ಮೇಲೆ ವಿಶ್ವಾಸವಿಲ್ಲವೆಂಬ ಗೊತ್ತುವಳಿಯನ್ನು ತರುವುದಷ್ಟೆ. ಆ ಗೊತ್ತುವಳಿಯು ಬಹುಮತದಿಂದ ತೀರ್ಮಾನವಾದ ಮೇಲೆ ಈಗಿನ ಮಂತ್ರಿ ಮಂಡಲದಿಂದ ಗವ್ಹರ್ನರರು ರಾಜಿನಾಮೆಯನ್ನು ತೆಗೆದುಕೊಳ್ಳದೆ ಬಹುಮತವುಳ್ಳ ಕಾಂಗ್ರೆಸ್‌ಪಕ್ಷಕ್ಕೇನೇ ಮಂತ್ರಿಮಂಡಲವನ್ನು ಏರ್ಪಡಿಸಿಕೊಳ್ಳಲು ಪುನಃ ತಿಳಿಸುವರು

ಆಗಲಾದರೂ ಕಾಂಗ್ರೆಸ್ ಪಕ್ಷವು ಮಂತ್ರಿಮಂಡಲವನ್ನು ಏರ್ಪಡಿಸಿಕೊಂಡರೆ ಒಳ್ಳೆಯದಾಯಿತು. ಆಗಲೂ ಮತ್ತೆ ಈ ಆಶ್ವಾಸನದ ಪ್ರಶ್ನೆಯನ್ನು ಎತ್ತಿದರೆ ಹೊಸ ಶಾಸನದ ೯೩ ನೆಯ ನಿಯಮದಂತೆ ಅಸೆಂಬ್ಲಿಯನ್ನು ತೆಗೆದುಹಾಕಿ ಎಲ್ಲಾ ಅಧಿಕಾರಗಳನ್ನು ತಮ್ಮ ಕಡೆಗೇನೇ ತೆಗೆದುಕೊಂಡು ಈಗಿರತಕ್ಕ ಮಂತ್ರಿಗಳನ್ನೇ ಸಲಹೆಗಾರರೆಂದು ನಿಯಮಿಸಿ ರಾಜ್ಯಭಾರವನ್ನು ಸಾಗಿಸುವರು. ಆಗ ಕಾಂಗ್ರೆಸ್ ಪಕ್ಷವು ಮಾಡಬೇಕಾದುದೇನು ? ಈಗಿನಂತೆ ನಿಷೇಧ ಪ್ರದರ್ಶನ ಸಭೆಗಳನ್ನು ಮಾಡುತ್ತಲೇ ಇರುವುದೊ ? ಅಥವಾ ಮೊದಲಿನಂತೆ ಶಾಸನ ಭಂಗ ಮಾರ್ಗವನ್ನು ಹಿಡಿಯುವುದೋ ? ಇವುಗಳಲ್ಲಿ ಯಾವುದಾದರೊಂದನ್ನು ಅನುಸರಿಸಬೇಕಾಗುವುದಷ್ಟೆ. ಆದುದರಿಂದಲೇ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯನ್ನು ಜಾಗ್ರತೆ ಕೂಡಿಸಿ ಮುಂದಣ ಮಾರ್ಗವನ್ನು ನಿರ್ಧರಿಸಬೇಕೆಂದು ಕೆಲವರು ಸೂಚಿಸುತ್ತಿದ್ದಾರೆ.

ಹಿತಕರವಾದ ಮಾರ್ಗ.

ಆಶ್ವಾಸನದ ಪ್ರಶ್ನೆಯುಂಟಾದುದರಿಂದ ಅಧಿಕಾರ ಸ್ವೀಕಾರವು ನಿಂತಿತಷ್ಟೆ. ಕಾಂಗ್ರೆಸ್ಸಿನಲ್ಲಿಯೇ ಕೆಲವರು ಅಧಿಕಾರವನ್ನು ಸ್ವೀಕರಿಸಬಾರದಾಗಿ ಹೇಳುವವರಿದ್ದಾರಷ್ಟೆ. ಅಧಿಕಾರವನ್ನು ಸ್ವೀಕರಿಸದಿದ್ದರೆ ಅವರು ಮಾಡುವ ಸಾಹಸವೇನೆಂಬುದೂ ಈವರೆಗಿನ ಚಟುವಟಿಕೆಯಿಂದ ಗೊತ್ತಾಯಿತು. ಸರಕಾರವು ಶಾಸನದಂತೆಯೇ ನಡೆಯುವುದೇ ವಿನಾ ಕಾಂಗ್ರೆಸ್ಸಿನ ಒತ್ತಾಯಕ್ಕೇನೂ ಅಳುಕುವುದಿಲ್ಲವೆಂತಲೂ ತಿಳಿಯಿತು. ಈ ಎರಡೂ ಬಲಗಳು ಈಗ ಸ್ಪಷ್ಟ ಗೊತ್ತಾದುದರಿಂದ ಕಾಂಗ್ರೆಸ್ ಪಕ್ಷವು ಮುಂದೆ ಯಾವ ಮಾರ್ಗವನ್ನು ಹಿಡಿಯುವುದು ಹಿತಕರ? ಶಾಸನಭಂಗದ ಉಗ್ರಮಾರ್ಗವನ್ನು ಹಿಡಿಯಬೇಕೆ? ಅಧಿಕಾರವನ್ನು ಸ್ವೀಕರಿಸಿ ತನ್ನ ಬಲವನ್ನು ಹೆಚ್ಚಿಸಿಕೊಂಡು ಈಗಿನ ಶಾಸನವನ್ನು ನಿವಾರಣೆಮಾಡಬೇಕೆ?

ಇವುಗಳ ನಿರ್ಣಯಕ್ಕೋಸ್ಕರ ಅಖಿಲಭಾರತ ಕಾಂಗ್ರೆಸ್ ಕಮಿಟಿಯು ಇಷ್ಟರಲ್ಲೇ ಕೂಡಬೇಕಾದುದು ಅಗತ್ಯವಾಗಿದೆ. ಏಕೆಂದರೆ, ಗಿಲ್ಲಿಯಲ್ಲಾದ ಆಶ್ವಾಸನಕೇಳುವ ಗೊತ್ತುವಳಿಯು ಮುಂದಿನ ಮಾರ್ಗವನ್ನೇನೂ ತೋರಿಸುವಂತಿಲ್ಲ.

ಮುಂದೆ ಅಸೆಂಬ್ಲಿ ಕೂಡಿದಾಗ ಈಗಿನ ಮಂತ್ರಿಮಂಡಲದ ಮೇಲೆ ತಮ್ಮ ವಿಶ್ವಾಸವಿಲ್ಲವೆಂದು ಗೊತ್ತುವಳಿಯನ್ನು ಈ ಪಕ್ಷದವರು ತರುವುದು ಎಷ್ಟು ಅಗತ್ಯವಾಗಿದೆಯೋ ಅಷ್ಟೇ ಬಹುಮತವುಳ್ಳ ತಾವು ಆಮೇಲೆ ಅಧಿಕಾರವನ್ನು ಸ್ವೀಕರಿಸುವುದೂ ಅಗತ್ಯವಾಗಿದೆ. ಆಗ ಪುನಃ ಆಶ್ವಾಸನದ ಪ್ರಶ್ನೆಯನ್ನುಂಟುಮಾಡಿ ಗವ್ಹರ್ನರರ ಕಡೆಗೇನೇ ಸಂಪೂರ್ಣ ಅಧಿಕಾರ ಹೋಗುವಂತೆ ಮಾಡುವುದು ಹಿತಕರವಲ್ಲ. ಹಾಗೆ ಮಾಡಿದರೆ ಶಾಸನವು ತಾನಾಗಿಯೇ ಭಂಗವಾಯಿತೆಂದೂ ಪ್ರಾಂತಿಕ ಪ್ರಜಾ ಪ್ರಭುತ್ವವೇ ಅಳಿದುಹೋಯಿತೆಂದೂ, ಇದೇ ನಮ್ಮ ಗುರಿಯೆಂದೂ ಹೇಳಿಕೊಳ್ಳುವುದರಲ್ಲಿ ಯಾವ ಭೂಷಣವಾಗಲಿ, ಪ್ರಯೋಜನವಾಗಲಿ ಇಲ್ಲ. ಆದಕಾರಣ ಅಧಿಕಾರ ಸ್ವೀಕಾರ ಮತ್ತು ಶಾಸನಭಂಗಗಳೆಂಬ ಎರಡೇ ಮಾರ್ಗಗಳು ಕಾಂಗ್ರೆಸ್ಸಿನ ಮುಂದಿವೆ. ಇವುಗಳಲ್ಲಿ ಅಧಿಕಾರ ಸ್ವೀಕಾರದ ಮಾರ್ಗವನ್ನು ಹಿಡಿಯುವುದೇ ದೇಶಕ್ಕೆ ಹಿತಕರವಾದುದಾಗಿದೆ.

ಭಾರತ ಮಂತ್ರಿಗಳ ಇನ್ನೊಂದು ಹೇಳಿಕೆ.

ಆಕ್ಸಫರ್ಡ ಯುನಿವ್ಹರ್ಸಿಟಿ ಕಾನ್‌ಸರ್ವೆಟಿವ್ಹ ಅಸೋಸಿಏಶನ್ನಿನಲ್ಲಿ ಭಾರತ ಮಂತ್ರಿಗಳಾದ ಲಾರ್ಡ ಝೆಟಲಂಡ್‌ರವರು ಮತ್ತೆ ಹೀಗೆ ಹೇಳಿದರು —

"ಹೊಸ ರಾಜ್ಯಘಟನೆಯನ್ನು ಭಂಗಗೊಳಿಸಲಿಕ್ಕಾಗಿಯೇ ಕಾಂಗ್ರೆಸ್ ಪಕ್ಷವು ಶಾಸನ ಮಂಡಲದಲ್ಲಿ ಹೋಗುತ್ತದೆಂದು ಫೈಜಪುರದಲ್ಲಿ ಕಾಂಗ್ರೆಸ್ ನಿರ್ಣಯಿಸಿರುವುದನ್ನು ನಾನು ಬಲ್ಲೆನು. ಆ ತನ್ನ ಹೇಳಿಕೆಯನ್ನು ಅದು ತಿರುಗಿ ತೆಗೆದುಕೊಂಡಿಲ್ಲ.

ಹೊಸ ಶಾಸನದಿಂದ ಶಕ್ಯವಿರುವಷ್ಟು ಪ್ರಯೋಜನಗಳನ್ನೆಲ್ಲಾ ಹೊಂದಲು ಸಿದ್ಧರಾಗಿ ಅಧಿಕಾರವನ್ನು ಸ್ವೀಕರಿಸುವವರ ಸಂಗಡ ಮನಃಪೂರ್ವಕ ಸಹಕರಿಸಿ ನಡೆಯಲು ಮುಂಚಿನಂತೆ ಈಗಲೂ ನಾವು ಸಿದ್ಧರಾಗಿದ್ದೇವೆ."

ಮಹಾತ್ಮಾ ಗಾಂಧಿಯವರು.

ಗಾಂಧೀಜಿಯವರು ತಿಥಲದಿಂದ ತಮ್ಮ ಪರಿವಾರಸಮೇತ ತಾರೀಖು ೧೧ ನೆಯ ದಿವಸ ವರ್ಧಾಕ್ಕೆ ಆಗಮಿಸಿದರು. ಸಮುದ್ರದಂಡೆಯ ಹವೆಯಿಂದ ಇವರ ದೇಹಾರೋಗ್ಯವು ಚೆನ್ನಾಗಿ ಬಲಗೊಂಡಿದೆ ವರ್ಧಾದಿಂದ ಇವರು ನಡೆಯುತ್ತಲೇ ಶೇಗಾಂವ ಎಂಬ ತಮ್ಮ ಹಳ್ಳಿಗೆ ಹೋದರು.

ಭಾರತಮಂತ್ರಿಗಳ ಮೊನ್ನಿನ ಭಾಷಣದ ಸಂಬಂಧವಾಗಿ ತಾವೇನೂ ಹೇಳತಕ್ಕದ್ದಿಲ್ಲವೆಂದು ಗಾಂಧೀಜಿಯವರು ತಿಳಿಸಿದರು.

ಬೈಗಳ ಶೋಧಕರಿಗೆ ಬಹುಮಾನ!

ಎಪ್ರಿಲ್ ೧ ನೆಯ ತಾರೀಖಿನಿಂದ ಜೂನ ೧೦ ನೆಯ ತಾರೀಖಿನ ವರೆಗೆ ಮುಂಬೈ ಸರಕಾರದ ಅರ್ಥಸಚಿವರಾದ ನಾ ಜಮನಾದಾಸ ಮೆಹತಾರವರಿಗೆ ಕಾಂಗ್ರೆಸ್ ಪಕ್ಷದ ಯಾವ ಮರಾಠಿ ಪತ್ರಿಕಾ ಕರ್ತರು ಹೆಚ್ಚು ಬೈದಿದ್ದಾರೆಯೋ ಅವರ ಬೈಗಳಗಳನ್ನು ಆಧಾರ ಸಹಿತವಾಗಿ ಹೆಚ್ಚು ಕೂಡಿಸಿ ಕೊಟ್ಟವರಿಗೆ ೫೧ ರೂಪಾಯಿಗಳ ಬಹುಮಾನವನ್ನು ಪುಣೆಯಲ್ಲಿ ಒಬ್ಬರು ಕೊಡುವುದಾಗಿ ಪ್ರಕಟವಾಗಿದೆ.

ಲಖನೌದಲ್ಲಿ ಬಿರುಗಾಳಿ.

ತಾ ೧೦ ನೆಯದಿನ ರಾತ್ರಿ ಲಖನೌದಲ್ಲಿ ಬಿರುಗಾಳಿಬೀಸಿ ಬಹು ನಷ್ಟವಾಯಿತು.

ಅಯ್ಯಾಚಾರ ಜನ್ಮಸಿದ್ಧ ಹಕ್ಕು

ಎಂಬ ಲೇಖನವನ್ನು ಇಂಗಳಗಿ ಶ್ರೀ. ಕರವೀರ ಶಾಸ್ತ್ರಿಗಳವರು ತಾ ೩೧-೫-೩೬ ರ ಶ. ಸ. ದ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ. ಇವರ ಲೇಖನದ ವಿಮರ್ಶೆಯನ್ನು ಕೆಳಗೆ ಮಾಡುವೆ.

(೧) ನಾನು ಮಾಡಿದ ಅಯ್ಯ ಶಬ್ದದ ಅರ್ಥವು ಇವರಿಗೆ ಸಮ್ಮತವಿಲ್ಲ. ಶ್ರೇಷ್ಠವಲ್ಲದಿದ್ದರೆ ಸಾಮಾನ್ಯವೂ ಕನಿಷ್ಠವೂ ಇರುವುದೇನೋ ! ಆಗಲಿ, ಅವರ ಅಯ್ಯ ಶಬ್ದವನ್ನೇ ನಾನು ಒಪ್ಪುತ್ತೇನೆ. ಆದರೆ ಅದರ ಉತ್ಪತ್ತಿ ಅರ್ಥಗಳನ್ನಷ್ಟು ಹೇಳಿದ್ದರೆ ಒಳಿತಾಗುತ್ತಿತ್ತು. ಇದು ವರೆಗೆ ಗ್ರಂಥ ಪ್ರಯೋಗಗಳಲ್ಲಾಗಲಿ ವ್ಯಾವಹಾರಿಕ ಬರವಣಿಗೆಯಲ್ಲಾಗಲಿ, ಅದನ್ನು ನಾನು ಕಾಣಗಿರುವುದು ದುರ್ದೈವವೇ ಸರಿ

(೨) ವೀರಶೈವ ಮತವು ಆರ್ಯ ಮತಕ್ಕೆ ಅತಿರಿಕ್ತವೋ ಅಲ್ಲವೋ ? ಎಂಬ ವಾದದಲ್ಲಿ ಈಗ ನಾನು ಸೇರಲಿಚ್ಛಿಸುವುದಿಲ್ಲ ಅದು ವಿಷಯಾಂತರವು ಆದರೂ ಬರೇ ಮನ ಬಂದಂತೆ ಏನಾದರೊಂದು ವಿಧಾನಮಾಡಿದರೆ ಅದು ಸತ್ಯವಾಗುವುದೆಂದು ಯಾರೂ ತಿಳಿಯಕೂಡದೆಂದು ಮಾತ್ರ ಶಾಸ್ತ್ರಿ ಮಹಾಶಯರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

(೩) "ಶೈವರಿಗೆ ಉಪನಯನ ಹ್ಯಾಗೆ ಮಾಡುತ್ತಾರೋ ಹಾಗೆ ವೀರಶೈವರಿಗೆ ಭಕ್ತರಿಗೆ ದೀಕ್ಷೆ, ಅಯ್ಯಗಳಿಗೆ ಅಯ್ಯಾಚಾರವೆಂಬ ಶಾಸ್ತ್ರವುಂಟಾಗಿ....ಬರೆದಿರುತ್ತಾರೆ" ಇಲ್ಲಿ ಶೈವರಿಗೆಲ್ಲ ಭೋಗ ಮೋಕ್ಷ ಪ್ರಾಪ್ತಿಗೆ ಒಂದೇ ಒಂದು ಉಪನಯನವು ಸಾಕಾದರೆ, ವೀರಶೈವರಿಗೆ ಅದೇಕೆ ಇಬ್ಬಾಗವಾಗಿ ದೀಕ್ಷೆ ಅಯ್ಯಾಚಾರಗಳೆಂದೆರಡುರೂಪಧರಿಸಿತೋ! ಇದರ ವಿವರವಿದ್ದರೆ ಚೆನ್ನಾಗಿತ್ತು.

(೪) "ಭಕ್ತರಿಗೆ ದೀಕ್ಷೆ, ಅಯ್ಯನವರಿಗೆ ಅಯ್ಯಾಚಾರವಾಗದಿದ್ದರೆ, ಗುರು ಲಿಂಗ ಜಂಗಮ ಪೂಜೆಮಾಡಲಿಕ್ಕೆ ಅಯೋಗ್ಯರೆಂದು ಶಾಸ್ತ್ರವು ಹೇಳುತ್ತದೆ." ಶಾಸ್ತ್ರವು ಹೇಳಲಿ, ಹೇಳದಿರಲಿ ! ಅಯೋಗ್ಯರನ್ನು ಯಾವ ಕರ್ಮದಲ್ಲಿಯೂ ಸೇರಿಸಕೂಡದು. ಅದರಂತೆ ಗುರು ಲಿಂಗ ಜಂಗಮರ ಪೂಜೆಮಾಡಲಿಕ್ಕೂ ಯೋಗ್ಯತಾ ಸಂಪನ್ನರಾದವರೇ ಬೇಕೆಂಬುದು ಸಿದ್ಧವು. ನಾನು ಹೇಳುವುದಾದರೂ ಇದೇ ! ಅಯ್ಯಾಚಾರಕ್ಕೆ ಯೋಗ್ಯರಾದವರನ್ನೇ ಆರಿಸಿರಿ. ಅಯೋಗ್ಯರನ್ನು ಆರಿಸಬೇಡಿರಿ.

(೫) "ಗುರುವಿನ ಕಡೆಯಿಂದ ದೀಕ್ಷೆಯಿಲ್ಲದೆ ಲಿಂಗವನ್ನ ರ್ಚಿಸಿದರೆ. ಇಲ್ಲವೆ ವಿಭೂತಿ ರುದ್ರಾಕ್ಷಿ ಧರಿಸಿ ಜಪಧ್ಯಾನಾದಿ ಮಾಡಿದರೆ ಅದೆಲ್ಲ ನಿಷ್ಫಲವು, ಈ ಮಾತಾದರೂ ಸಂಪೂರ್ಣ ಒಪ್ಪಿಗೆಯುಳ್ಳದ್ದೇ. ಆದರೆ ಗುರುವಾದವನು ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿದಂತೆ "ಲಿಂಗಾಂಗಯೋಗ ತತ್ವಜ್ಞಂ | ನಿ ರೂಢಾದ್ವೈತವಾಸನಂ|| ಲಿಂಗಾಂಗ ಸ್ಥಳ ಭೇದಜ್ಞಂ| ಲಿಂಗ ಪೂಜಾ ಪರಾಯಣಂ"|| ಆಗಿರಬೇಕೆಂಬುದೇ ವಾದದ ವಿಷಯವು.

(೬) "ಅಯ್ಯನವರಿಗೆ ಅಯ್ಯಾಚಾರವು ಜನ್ಮ ಸಿದ್ಧ ಹಕ್ಕು ಇರುವುದು' ಇದೇ ಪರಮಾವಧಿ ಮೂಢತನದ, ಅತ್ಯಂತ ಸ್ವಾರ್ಥ ಪರಾಯಣತೆಯ, ಸಾಂಪ್ರತಾಧೋಗತಿಯ ಮುಖ್ಯ ಕಾರಣವಾದ ರಾಕ್ಷಸೀಯವಾದ ಭೂಮಿಕೆಯಾಗಿದೆ. ಇಲ್ಲಿ ಎಲ್ಲರೂ ದುರಾಗ್ರಹ ಸಾರ್ಥಗಳನ್ನು ಬಿಟ್ಟು ಮತ ಸಮಾಜಗಳ ಹಿತವನ್ನು ನೆನೆದು, ಕೇವಲ ನ್ಯಾಯ ದೃಷ್ಟಿಯನ್ನೇ ತಳೆಯುವುದು ತಕ್ಕದ್ದಾಗಿದೆ. ಈ ಬಗ್ಗೆ ಉದಾಹರಣಾರ್ಥವಾಗಿ ಮಾಮಲತಿಯ ಉದ್ಯೋಗವನ್ನು ತಕ್ಕೊಳ್ಳುವಾ. ಇದನ್ನು ನಿಸ್ತರಿಸಲಿಕ್ಕೆ ಆ ಪರೀಕ್ಷೆ ಪಾಸಾದ ಯಾವ ಮನುಷ್ಯನಿದ್ದರೂ ಸಾಗುತ್ತದೆಂಬುದನ್ನು ನಾವು ವ್ಯವಹಾರದಲ್ಲಿ ಪ್ರತ್ಯಕ್ಷ ನೋಡುವುದಿಲ್ಲವೆ ? ಪರಂಪರೆಯಿಂದ ಮಾಮಲತಿ ಮಾಡಿದವರ ವಂಶಜರೇ ಇರಬೇಕಾದ ಕಾರಣವಿಲ್ಲ ಇಲ್ಲಿ ವಂಶಕ್ಕೆ (ಜನ್ಮಕ್ಕೆ) ಮಹತ್ವವಿಲ್ಲ. ಪರೀಕ್ಷೆಗೆ (ಗುಣ ಕರ್ಮಕ್ಕೆ) ಮಹತ್ವವದೆ. ವಂಶದಲ್ಲಿ ಹುಟ್ಟಿದವರು ಯಾವಾಗಲೂ ಎಲ್ಲರೂ ಕಾರ್ಯದಕ್ಷರೇ ಆಗುವರೆಂಬ ನಿಯಮವಿಲ್ಲ. ಬಹು ಜನರು ಆಯೋಗ್ಯರು ಹುಟ್ಟುವರೆಂಬುದು ಎಲ್ಲರ ಅನುಭವದ ಮಾತು ಹೀಗೆ ನಿರುಪಯುಕ್ತ ಜನರು ವಂಶದಲ್ಲಿ ಹುಟ್ಟಿದರೆ ದಡ್ಡರಾಗಿ ಹಿಂದೆ ಬೀಳುವರು ಬೇರೆ ಜನರು ಪಾಸಾಗಿ ತಕ್ಕವರಾದರೆ, ಹೊಸದಾಗಿ ಮುಂದೆ ಬರುವರು. ಈ ಹೊಸಬರೇ ಪರಂಪರಾಗತರಿಗಿಂತ ಚತುರರೂ ಕಾರ್ಯಕ್ಷಮರೂ ಇದ್ದ ಅನುಭವವು ಅನೇಕ ಸಾರೆ ಬಂದದೆ, ಬರುತ್ತದೆ, ಬರುವದು. ಇದೇ ಪ್ರಗತಿಯ ಮಾರ್ಗವು ಜಗತ್ತಿನಲ್ಲೆಲ್ಲ ಸರ್ವ ಮಾನ್ಯವಾಗಿದೆ. ಆದುದರಿಂದ 'ಗುಣಾಃ ಪೂಜಾಸ್ಥಾನಂ ಗುಣಿಷು' ಎಂಬ ತತ್ವವನ್ನು ಸರ್ವದಾ ಮುಂದಿಟ್ಟುಕೊಂಡು ನಡೆಯುವುದೇ ಸಮಂಜಸವು. ಇದನ್ನು ಬಿಟ್ಟು ನಿರ್ಗುಣಿಗಳನ್ನು ಪೂಜಿಸಹತ್ತಿದರೆ ಅದೇ ಹಾಳಾಗುವ ಮಾರ್ಗವು. ಈಗ ಪ್ರಾಪ್ತವಾದ ವಿಪನ್ನಾವಸ್ಥೆಗೆ ಇದೇ ಕಾರಣವು. ಮತ್ತು ಆದನ್ನೇ ಹೇಳುವ ಬುದ್ಧಿವಂತರ ಬುದ್ಧಿ ವೈಭವಕ್ಕೆ ನಮಸ್ಕಾರವು ! ಶತಶಃ ನಮಸ್ಕಾರವು ! !

ಜನ್ಮದಿಂದವರಿಷ್ಕೃತ ಯಾರಿಗೂ ಇಲ್ಲ ಎಲ್ಲರೂ ಅವಿದ್ಯೆ ಮಲತ್ರಯಾದಿಗಳಿಂದ ಅವಿಷ್ಟಿತರು. ಅಂತೇ ಭವಿಗಳು. ಮುಂದೆ ಯೋಗ್ಯ ಸಂಸ್ಕಾರವನ್ನು ಹೊಂದಿ ಪ್ರಯತ್ನಪೂರ್ವಕವಾಗಿ ಉನ್ನತಿಯನ್ನು ಪಡೆಯಬೇಕಾಗುತ್ತದೆ. ಇದೇ ಸರಳವಾದ ಮಾರ್ಗವು ಬೀಜದಿಂದ ಅಂಕುರೋತ್ಪತ್ತಿಯಾಗಿ ಕ್ರಮ ಕ್ರಮವಾಗಿ ಬೆಳೆದು, ವೃಕ್ಷವಾಗಿ ಫಲ ಭಾರದಿಂದ ಶೋಭಿಸಬಹುದೇ ವಿನಾ ಒಮ್ಮೆಲೇ ಬೀಜದಿಂದ ಫಲಭರಿತ ವೃಕ್ಷವಾಗುವುದುಂಟೆ? ಏನಾದರೂ ಸೃಷ್ಟಿಯ ವಿರುದ್ಧ ಹೇಳಿದರೆ ಬರೇ ಮೂರ್ಖತನ ಮಾತ್ರ ಪಾಲಿಗೆ ಬರುವುದು.

(೭) "ತಮ್ಮಂಥವರು ದುಷ್ಟ ನಕ್ಷತ್ರದಲ್ಲಿ ತೀರಿಕೊಂಡರೆ (ಬ) ನಿಮ್ಮಂಥವರ ಮಣ್ಣು ಮುಚ್ಚಲಿಕ್ಕೆ. (ಕ) ಮನೆಯಲ್ಲಿ ಹುಟ್ಟಿದ ಮಕ್ಕಳನ್ನು ನಾವೇ ಲಗ್ನವಾಗುತ್ತೇವೆ ಅಂದರೆ —ಇತ್ಯಾದಿ ಮಾತುಗಳು, ವಿದ್ವಾನರೆನ್ನಿಸಿಕೊಳ್ಳುವ ಶಾಸ್ತ್ರಿಗಳಿಗೆ ಶೋಭಿಸುವವೇ ? ಶಿಷ್ಟಾಚಾರವನ್ನೆಲ್ಲ ಹೀಗೆ ತೀರ ಮರೆತುಬಿಡುವುದು ಸಭ್ಯತನವೇ ? ದುಷ್ಟ ನಕ್ಷತ್ರದಲ್ಲಿ ಭಕ್ತರು ಮಾತ್ರವೇ ತೀರಿಕೊಳ್ಳುತ್ತಾರಂತಲ್ಲ, ಅವರನ್ನಷ್ಟೇ ಮಣ್ಣು ಮುಚ್ಚುತ್ತಾರಂತಲ್ಲ, ತಮ್ಮಂಥ ಅಯ್ಯಗಳೂ ದುಷ್ಟ ನಕ್ಷತ್ರದಲ್ಲಿ ಸಾಯುವುದಿಲ್ಲವೆ ? ತಮ್ಮನ್ನು ಕೂಡ ಮಣ್ಣಲ್ಲಿ ಮುಚ್ಚುವುದಿಲ್ಲವೆ ? ಆಗಲೂ ಸಹ ಯೋಗ್ಯವಾದ ಅಯ್ಯಗಳೇ ಬೇಕಲ್ಲವೆ ? ಬೇರೆ ಯಾರಿದ್ದರೂ ಸಾಗುವದೇನು ? ವಸ್ತು ಸ್ಥಿತಿಯು ಹೀಗಿದ್ದರೆ, ಕ್ರೋಧ ಪರವಶವಾಗಿ ಅಯ್ಯಗಳೂ, ಶಾಸ್ತ್ರಿಗಳೂ, ಗುರು ಜಂಗಮರೂ ಎಂದೆನಿಸಿಕೊಳ್ಳುವ ಮೇಲ್ತರಗತಿಯವರಿಗೆ ಸಲ್ಲುವದೇನು ? ಅದಕ್ಕಂತಲೇ "ಯೋಗ್ಯರಾದವರನ್ನೇ ಅಯ್ಯಾಚಾರಕ್ಕೆ ಆರಿಸಬೇಕೆಂದು" ಸಮಾಜದ ಮುಂದೆ ಪ್ರಶ್ನೆ ಇಡುವ ಪ್ರಸಂಗ ಒದಗಿರುವುದು ಕಂಡಿರಾ ಸ್ವಾಮಿ !

ತಮ್ಮ ಸೇವಕ,

ಬಸವಪ್ಪ ಚೆನ್ನಪ್ಪ ಪಟ್ಟೇದ ಮಂಟಿಮುರಿ

— ದಕ್ಷಿಣ ಸಂಸ್ಥಾನಗಳ ಪರಿಷತ್ತಿನಲ್ಲಿ ನೈಜಾಮರಾಜ್ಯದ ಸಭಾಪ್ರತಿಬಂಧಕ ಪದ್ಧತಿಯನ್ನು ನಿಷೇಧಗೊಳಿಸಲಾಯಿತು.

SUSHEELA & CO., KOLLEGAL. (S. INDIA.)

1000 ರೂಪಾಯಿಗಳ ಬಹುಮಾನ.

ಪ್ರತಿ ಎರಡು ಕೂಪರ್ಗಳಿಗೂ ಒಂದು ಕೂಪರ್ ಉಚಿತ.

ಉತ್ತರಗಳನ್ನು ಸ್ವೀಕರಿಸುವ ಕಡೇ ದಿನ 16-8-1937 ಫಲಿತಾಂಶವನ್ನು ಪ್ರಕಟಿಸುವ ದಿನ 20-8-1937

ಮೂರು ಕೂಪರ್ಗಳೂ ಸರಿಯಾಗಿ ಕಳುಹಿಸಿದವರಿಗೆ 500 ರೂಪಾಯಿಗಳು.

ಒಂದು ಕೂಪನ್ ತಪ್ಪುಳ್ಳವರಿಗೆ 200 ರೂಪಾಯಿಗಳು.

ಎರಡು ಕೂಪರ್ ತಪ್ಪುಳ್ಳವರಿಗೆ 100 ರೂಪಾಯಿಗಳು

ಇತರ ಬಹುಮಾನಗಳು

ಮೂರು ಕೂಪರ್ಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀಗೆ 125 ರೂಪಾಯಿಗಳು.

ಹೆಚ್ಚಾಗಿ ಕೂಪರ್ಗಳು ಕಳುಹಿಸಿದವರಿಗೆ 75 ರೂಪಾಯಿಗಳು.

		17		

ಸುಶೀಲ ಅಂಡ್ ಕೋ., ಕೊಳ್ಳೇಗಾಲ

ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ

ಹೆಸರು...

ವಿಳಾಸ...

....

ಪೋಸ್ಟಲ್ ಮಣಿಯಾರ್ಡರ್ ನಂಬರು.......................................

ಸ್ಟಾಂಪುಗಳು.............................. ತಾರೀಖು..............................1937

ಉತ್ತರಗಳನ್ನು ಕಂಡುಹಿಡಿಯುವ ಕ್ರಮ:— ಎಲ್ಲಾ ಕಡೆಗಳಿಂದಲೂ ಮೇಲಿಂದ, ಅಡ್ಡಲಾಗಿ ಮೂಲೆಗಳಿಂದ 85 ಬರುವಂತೆ ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ತಿರುಗಿ ಅದೇ ಚದುರದಲ್ಲಿ ಉಪಯೋಗಿಸದೆ ಶಾಯಿನಲ್ಲಿ ಬರೆದು ಕಳುಹಿಸಬೇಕು.

ನಿ ಬಂ ಧ ನೆ ಗ ಳು .

ಪ್ರವೇಶ ಧನ ಕೂಪರ್‌ಗೆ 0—8—0 ಆಣೆ ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪುಗಳ ರೂಪದಲ್ಲಾಗಲಿ ಮಣಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕವಾಗಲಿ ಕಳುಹಿಸಬೇಕು. ಉತ್ತರಗಳು 16-8-1937 ರೊಳಗೆ ನಮ್ಮ ಕೈಸೇರಬೇಕು. ಈ ಸ್ಪರ್ಧೆ ಸಂಬಂಧವಾಗಿ ಕಳುಹಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಸು ಮಾಡಲಾಗುವುದಿಲ್ಲ. ಮತ್ತು ಯಾವ ಪತ್ರವ್ಯವಹಾರಕ್ಕೂ ಅವಕಾಶವಿಲ್ಲ. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆ ಮಾಡಲಾಗುವುದು. ಒಂದಕ್ಕಿಂತ ಜಾಸ್ತಿಯಾಗಿ ಉತ್ತರಗಳು (ಎಲ್ಲಾ) ಬಂದಲ್ಲಿ ಬಹುಮಾನಗಳನ್ನು ಸಮವಾಗಿ ಹಂಚಲ್ಪಡುವುದು. ಮೇನೇಜರ್ ತೀರ್ಮಾನವೇ ಕಡೇ ತೀರ್ಮಾನ. ತಮ್ಮ ವಿಳಾಸದೊಡನೆ 0—1—0 ಆಣೆ ಸ್ಟಾಂಪು ಕಳುಹಿಸಿದವರಿಗೆ ಫಲಿತಾಂಶವನ್ನು ಕಳುಹಿಸಲಾಗುವುದು. ಮೇಲ್ಕಂಡ ಷರತ್ತುಗಳನ್ನು ಒಪ್ಪುವವರು ಮಾತ್ರ ಸ್ಪರ್ಧೆಗಳಿಗೆ ಉತ್ತರಗಳನ್ನು ಕಳುಹಿಸಬೇಕು.

ಮ್ಯಾನೇಜರ್

ಸುಶೀಲ ಅಂಡ್ ಕೋ., ಕೊಳ್ಳೇಗಾಲ.

ವಿದ್ಯಾರ್ಥಿಗಳಿಗೆ ಅಪೂರ್ವ ಸಂಧಿ.

ವ್ಹರ್ನಾಕ್ಯುಲರ ಫಾಯನಲ್" ಪರೀಕ್ಷೆ ಪಾಸ ಆದಂಥ ವಿದ್ಯಾರ್ಥಿಗಳಿಗೆ ಮತ್ತು ಮ್ಯಾಟ್ರಿಕ್ ಫೇಲ ಆದಂಥ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗುವುದು ದುರ್ಲಭವಾಗಿದೆ. ಈ ಎರಡೂ ತೊಂದರೆಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಬೆಳಗಾವಿಯಲ್ಲಿ ಲಿಂಗರಾಜ ಕಾಲೇಜದಲ್ಲಿ ಸುರು ಇದ್ದಂಥ ಆಯುರ್ವೇದ ವಿದ್ಯಾಪೀಠದ ಒಂದು ಶಾಖೆಯು ವಿಜಾಪುರದಲ್ಲಿ ತಾರೀಖು ೧೫-೬-೩೭ ಇಸ್ವಿಯಿಂದ ಪ್ರಾರಂಭವಾಗುವುದು ಅದೆ

ಅಭ್ಯಾಸ ಕ್ರಮವು ೨ ವರ್ಷದ್ದು ಇದ್ದು "ನಿಖಿಲ ಭಾರತ ಆಯುರ್ವೇದ ಮಹಾ ಮಂಡಲದ" "ಆಯುರ್ವೇದ ಭೀಷಕ್ ಪದವಿಗೋಸ್ಕರ ವಿದ್ಯಾರ್ಥಿಗಳನ್ನು ತಯಾರ ಮಾಡಲಾದೀತು. ಸದರಿ ಪರೀಕ್ಷೆಯಲ್ಲಿ ಪಾಸ ಆದ ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ಸ್ವತಂತ್ರ ರೀತಿಯಿಂದ ದಂಧೆಯನ್ನು ನಡಿಸಿ ತಮ್ಮ ಆಯುಷ್ಯಕ್ರಮವನ್ನು ಸುಖದಿಂದ ಸಾಗಿಸಬಲ್ಲರು ಇಷ್ಟೇ ಅಲ್ಲ ಗ್ರಾಮೋದ್ಧಾರದಂಥ ದೇಶೋಪಯೋಗಿ ಕಾರ್ಯಕ್ಕಾದರೂ ಅವರಿಂದ ಸಾಕಷ್ಟು ಸಹಾಯ ಸಿಗಬಹುದು.

ವಿದ್ಯಾರ್ಥಿಗಳ ವಯಸ್ಸು ೧೬ ವರ್ಷಕ್ಕಿಂತ ಕಡಿಮೆ ಇರಕೂಡದು. ಶಿಕ್ಷಣವು ಕನ್ನಡ ಭಾಷೆಯಲ್ಲಿ ಕೊಡಲಾದೀತು. ಪ್ರವೇಶ ಫೀ ೨ ರೂ. ಮತ್ತು ಮಾಸಿಕ ಫೀ ೧ ರೂಪಾಯಿ ಅದೆ. ಜುಲೈ ತಿಂಗಳ ಮೊದಲನೇ ತಾರೀಖಿನ ವರೆಗೆ ಇಲ್ಲಿ ಪ್ರವೇಶ ದೊರೆಯುತ್ತದೆ.

ಅರ್ಜಿ ಕಳಿಸುವ ಪತ್ತೆ— ಪಂ. ಮರುಳಾರಾಧ್ಯ ಶಾಸ್ತ್ರಿ
ವ್ಯವಸ್ಥಾಪಕ
ಆಯುರ್ವೇದ ಔಷಧಾಲಯ ವಿಜಾಪುರ

ಅಯ್ಯಾಚಾರ ಜನ್ಮಸಿದ್ಧ ಹಕ್ಕು

ಎಂಬ ಲೇಖನವನ್ನು ಇಂಗಳಗಿ ಶ್ರೀ. ಶರವೀರ ಶಾಸ್ತ್ರಿಗಳವರು ತಾ. ೩೧-೫-೩೭ ರ ಶ. ಸ. ದ ಸಂಚಿಕೆಯ.ಲ್ಲಿ ಪ್ರಕಟಿಸಿದ್ದಾರೆ. ಇವರ ಲೇಖನದ ವಿಮರ್ಶೆಯನ್ನು ಕೆಳಗೆ ಮಾಡುವೆ.

(೧) ನಾನು ಮಾಡಿದ ಅಯ್ಯ ಶಬ್ದದ ಅರ್ಥವು ಇವರಿಗೆ ಸಮ್ಮತವಿಲ್ಲ. ಶ್ರೇಷ್ಠವಲ್ಲದಿದ್ದರೆ ಸಾಮಾನ್ಯವೂ ಕನಿಷ್ಠವೂ ಇರುವುದೇನೋ ! ಆಗಲಿ, ಅವರ ಅಯ್ಯ ಶಬ್ದವನ್ನೇ ನಾನು ಒಪ್ಪುತ್ತೇನೆ. ಆದರೆ ಅದರ ಉತ್ಪತ್ತಿ ಅರ್ಥಗಳನ್ನಷ್ಟು ಹೇಳಿದ್ದರೆ ಒಳಿತಾಗುತ್ತಿತ್ತು. ಇದು ವರೆಗೆ ಗ್ರಂಥ ಪ್ರಯೋಗಗಳಲ್ಲಾಗಲಿ ವ್ಯಾವಹಾರಿಕ ಬರವಣಿಗೆಯಲ್ಲಾಗಲಿ, ಅದನ್ನು ನಾನು ಕಾಣದಿರುವುದು ದುರ್ದೈವವೇ ಸರಿ

(೨) ವೀರಶೈವ ಮತವು ಆರ್ಯ ಮತಕ್ಕೆ ಅತಿರಿಕ್ತವೋ ಅಲ್ಲವೋ ? ಎಂಬ ವಾದದಲ್ಲಿ ಈಗ ನಾನು ಸೇರಲಿಚ್ಛಿಸುವುದಿಲ್ಲ ಅದು ವಿಷಯಾಂತರವು. ಆದರೂ ಬರೇ ಮನ ಬಂದಂತೆ ಏನಾದರೊಂದು ವಿಧಾನಮಾಡಿದರೆ ಅದು ಸತ್ಯವಾಗುವುದೆಂದು ಯಾರೂ ತಿಳಿಯಕೂಡದೆಂದು ಮಾತ್ರ ಶಾಸ್ತ್ರಿ ಮಹಾಶಯರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

(೩) "ಶೈವರಿಗೆ ಉಪನಯನ ಹ್ಯಾಗೆ ಮಾಡುತ್ತಾರೋ ಹಾಗೆ ವೀರಶೈವರಿಗೆ ಭಕ್ತರಿಗೆ ದೀಕ್ಷೆ, ಅಯ್ಯಗಳಿಗೆ ಅಯ್ಯಾಚಾರವೆಂಬ ಶಾಸ್ತ್ರವುಂಟಾಗಿ....ಬರದಿರುತ್ತಾರೆ" ಇಲ್ಲಿ ಶೈವರಿಗೆಲ್ಲ ಭೋಗ ಮೋಕ್ಷ ಪ್ರಾಪ್ತಿಗೆ ಒಂದೇ ಒಂದು ಉಪನಯನವು ಸಾಕಾದರೆ, ವೀರಶೈವರಿಗೆ ಅದೇಕೆ ಇಬ್ಬಾಗವಾಗಿ ದೀಕ್ಷೆ ಅಯ್ಯಾಚಾರಗಳೆಂಬೆರಡುರೂಪಧರಿಸಿತೋ ! ಇದರ ವಿವರವಿದ್ದರೆ ಚನ್ನಾಗಿತ್ತು.

(೪) "ಭಕ್ತರಿಗೆ ದೀಕ್ಷೆ, ಅಯ್ಯನವರಿಗೆ ಅಯ್ಯಾಚಾರವಾಗದಿದ್ದರೆ, ಗುರು ಲಿಂಗ ಜಂಗಮ ಪೂಜೆಮಾಡಲಿಕ್ಕೆ ಅಯೋಗ್ಯರೆಂದು ಶಾಸ್ತ್ರವು ಹೇಳುತ್ತದೆ." ಶಾಸ್ತ್ರವು ಹೇಳಲಿ, ಹೇಳದಿರಲಿ ! ಅಯೋಗ್ಯರನ್ನು ಯಾವ ಕರ್ಮದಲ್ಲಿಯೂ ಸೇರಿಸಕೂಡದು. ಅದರಂತೆ ಗುರು ಲಿಂಗ ಜಂಗಮರ ಪೂಜೆಮಾಡಲಿಕ್ಕೂ ಯೋಗ್ಯತಾ ಸಂಪನ್ನರಾದವರೇ ಬೇಕೆಂಬುದು ಸಿದ್ಧವು. ನಾನು ಹೇಳುವುದಾದರೂ ಇದೇ ! ಅಯ್ಯಾಚಾರಕ್ಕೆ ಯೋಗ್ಯರಾದವರನ್ನೇ ಆರಿಸಿರಿ. ಅಯೋಗ್ಯರನ್ನು ಆರಿಸಬೇಡಿರಿ.

(೫) "ಗುರುವಿನ ಕಡೆಯಿಂದ ದೀಕ್ಷೆಯಿಲ್ಲದೆ ಲಿಂಗವನ್ನು ಧರಿಸಿದರೆ, ಇಲ್ಲವೆ ವಿಭೂತಿ ರುದ್ರಾಕ್ಷಿ ಧರಿಸಿ ಜಪಧ್ಯಾನಾದಿ ಮಾಡಿದರೆ ಅದೆಲ್ಲ ನಿಷ್ಫಲವು., ಈ ಮಾತಾದರೂ ಸಂಪೂರ್ಣ ಒಪ್ಪಿಗೆಯುಳ್ಳದ್ದೇ. ಆದರೆ ಗುರ ವಾದವನು ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿದಂತೆ "ಲಿಂಗಾಂಗಯೋಗ ತತ್ವಜ್ಞಂ | ನಿರೂಢಾದ್ವೈತವಾಸನಂ|| ಲಿಂಗಾಂಗ ಸ್ಥಳ ಭೇದಜ್ಞಂ| ಲಿಂಗ ಪೂಜಾಪರಾಯಣಂ"|| ಆಗಿರಬೇಕೆಂಬುದೇ ವಾದದ ವಿಷಯವು.

(೬) "ಅಯ್ಯನವರಿಗೆ ಅಯ್ಯಾಚಾರವು ಜನ್ಮ ಸಿದ್ಧ ಹಕ್ಕು ಇರುವುದು.' ಇದೇ ಪರಮಾವಧಿ ಮೂಢತನದ, ಅತ್ಯಂತ ಸ್ವಾರ್ಥ ಪರಾಯಣತೆಯ, ಸಾಂಪ್ರತಾಧೋಗತಿಯ ಮುಖ್ಯ ಕಾರಣವಾದ ರಾಕ್ಷಸೀಯವಾದ ಭೂಮಿಕೆಯಾಗಿದೆ. ಇಲ್ಲಿ ಎಲ್ಲರೂ ದುರಾಗ್ರಹ ಸ್ವಾರ್ಥಗಳನ್ನು ಬಿಟ್ಟು ಮತ ಸಮಾಜಗಳ ಹಿತವನ್ನು ನೆನೆದು, ಕೇವಲ ನ್ಯಾಯ ದೃಷ್ಟಿಯನ್ನೇ ತಳೆಯುವುದು ತಕ್ಕದ್ದಾಗಿದೆ. ಈ ಬಗ್ಗೆ ಉದಾಹರಣಾರ್ಥವಾಗಿ ಮಾಮಲತಿಯ ಉದ್ಯೋಗವನ್ನು ತಕ್ಕೊಳ್ಳುವಾ. ಇದನ್ನು ನಿಸ್ತರಿಸಲಿಕ್ಕೆ ಆ ಪರೀಕ್ಷೆ ಪಾಸಾದ ಯಾವ ಮನುಷ್ಯನಿದ್ದರೂ ಸಾಗುತ್ತದೆಂಬುದನ್ನು ನಾವು ವ್ಯವಹಾರದಲ್ಲಿ ಪ್ರತ್ಯಕ್ಷ ನೋಡುವುದಿಲ್ಲವೆ ? ಪರಂಪರೆಯಿಂದ ಮಾಮಲತಿ ಮಾಡಿದವರ ವಂಶಜರೇ ಇರಬೇಕಾದ ಕಾರಣವಿಲ್ಲ. ಇಲ್ಲಿ ವಂಶಕ್ಕೆ (ಜನ್ಮಕ್ಕೆ) ಮಹತ್ವವಿಲ್ಲ. ಪರೀಕ್ಷೆಗೆ (ಗುಣ ಕರ್ಮಕ್ಕೆ) ಮಹತ್ವವದೆ. ವಂಶದಲ್ಲಿ ಹುಟ್ಟಿದವರು ಯಾವಾಗಲೂ ಎಲ್ಲರೂ ಕಾರ್ಯದಕ್ಷರೇ ಆಗುವರೆಂಬ ನಿಯಮವಿಲ್ಲ. ಬಹು ಜನರು ಅಯೋಗ್ಯರು ಹುಟ್ಟುವರೆಂಬುದು ಎಲ್ಲರ ಅನುಭವದ ಮಾತು. ಹೀಗೆ ನಿರುಪಯುಕ್ತ ಜನರು ವಂಶದಲ್ಲಿ ಹುಟ್ಟಿದರೆ ದಡ್ಡರಾಗಿ ಹಿಂದೆ ಬೀಳುವರು ಬೇರೆ ಜನರು ಪಾಸಾಗಿ ತಕ್ಕವರಾದರೆ, ಹೊಸದಾಗಿ ಮುಂದೆ ಬರುವರು. ಈ ಹೊಸಬರೇ ಪರಂಪರಾಗತರಿಗಿಂತ ಚತುರರೂ ಕಾರ್ಯಕ್ಷಮರೂ ಇದ್ದ ಅನುಭವವು ಅನೇಕ ಸಾರೆ ಬಂದದೆ, ಬರುತ್ತದೆ, ಬರುವದು. ಇದೇ ಪ್ರಗತಿಯ ಮಾರ್ಗವು ಜಗತ್ತಿನಲ್ಲೆಲ್ಲ ಸರ್ವ ಮಾನ್ಯವಾಗಿದೆ. ಆದುದರಿಂದ 'ಗುಣಾಃ ಪೂಜಾಸ್ಥಾನಂ ಗುಣಿಷು' ಎಂಬ ತತ್ವವನ್ನು ಸರ್ವದಾ ಮುಂದಿಟ್ಟುಕೊಂಡು ನಡೆಯುವುದೇ ಸಮಂಜಸವು. ಇದನ್ನು ಬಿಟ್ಟು ನಿರ್ಗುಣಿಗಳನ್ನು ಪೂಜಿಸಹತ್ತಿದರೆ ಅದೇ ಹಾಳಾಗುವ ಮಾರ್ಗವು. ಈಗ ಪ್ರಾಪ್ತವಾದ ವಿಪನ್ನಾವಸ್ಥೆಗೆ ಇದೇ ಕಾರಣವು. ಮತ್ತು ಅದನ್ನೇ ಹೇಳುವ ಬುದ್ಧಿವಂತರ ಬುದ್ಧಿ ವೈಭವಕ್ಕೆ ನಮಸ್ಕಾರವು ! ಶತಶಃ ನಮಸ್ಕಾರವು ! !

ಜನ್ಮದಿಂದವರಿಷ್ಕೃತ ಯಾರಿಗೂ ಇಲ್ಲ. ಎಲ್ಲರೂ ಅವಿದ್ಯೆ ಮಲತ್ರಯಾದಿಗಳಿಂದ ಆವಿಷ್ಟಿತರು. ಅಂತೇ ಭವಿಗಳು. ಮುಂದೆ ಯೋಗ್ಯ ಸಂಸ್ಕಾರವನ್ನು ಹೊಂದಿ ಪ್ರಯತ್ನಪೂರ್ವಕವಾಗಿ ಉನ್ನತಿಯನ್ನು ಪಡೆಯಬೇಕಾಗುತ್ತದೆ. ಇದೇ ಸರಳವಾದ ಮಾರ್ಗವು. ಬೀಜದಿಂದ ಅಂಕುರೋತ್ಪತ್ತಿಯಾಗಿ ಕ್ರಮಃ ಕ್ರಮವಾಗ ಬೆಳೆದು, ವೃಕ್ಷವಾಗಿ ಫಲ ಭಾರದಿಂದ ಶೋಭಿಸಬಹುದೇ ವಿನಾ ಒಮ್ಮೆಲೇ ಬೀಜದಿಂದ ಫಲಭರಿತ ವೃಕ್ಷವಾಗುವುದುಂಟೆ ? ಏನಾದರೂ ಸೃಷ್ಟಿಯ ವಿರುದ್ಧ ಹೇಳಿದರೆ ಬರೇ ಮೂರ್ಖತನ ಮಾತ್ರ ಪಾಲಿಗೆ ಬರುವುದು.

(೭) "ತಮ್ಮಂಥವರು ದುಷ್ಟ ನಕ್ಷತ್ರದಲ್ಲಿ ತೀರಿಕೊಂಡರೆ (ಬ) ನಿಮ್ಮಂಥವರ ಮಣ್ಣು ಮುಚ್ಚಲಿಕ್ಕೆ. (ಕ) ಮನೆಯಲ್ಲಿ ಹುಟ್ಟಿದ ಮಕ್ಕಳನ್ನು ನಾವೇ ಲಗ್ನವಾಗುತ್ತೇವೆ ಅಂದರೆ — ಇತ್ಯಾದಿ ಮಾತುಗಳು, ವಿದ್ವಾನರೆನ್ನಿಸಿಕೊಳ್ಳುವ ಶಾಸ್ತ್ರಿಗಳಿಗೆ ಶೋಭಿಸುವನೇ ? ಶಿಷ್ಟಾಚಾರವನ್ನೆಲ್ಲ ಹೀಗೆ ತೀರ ಮರೆತುಬಿಡುವುದು ಸಭ್ಯತನವೇ ? ದುಷ್ಟ ನಕ್ಷತ್ರದಲ್ಲಿ ಭಕ್ತರು ಮಾತ್ರವೇ ತೀರಿಕೊಳ್ಳುತ್ತಾರಂತಲ್ಲ, ಅವರನ್ನಷ್ಟೇ ಮಣ್ಣು ಮುಚ್ಚುತ್ತಾರಂತಲ್ಲ, ತಮ್ಮಂಥ ಅಯ್ಯಗಳೂ ದುಷ್ಟ ನಕ್ಷತ್ರದಲ್ಲಿ ಸಾಯುವುದಿಲ್ಲವೆ ? ತಮ್ಮನ್ನು ಕೂಡ ಮಣ್ಣಲ್ಲಿ ಮುಚ್ಚುವುದಿಲ್ಲವೆ ? ಆಗಲೂ ಸಹ ಯೋಗ್ಯವಾದ ಅಯ್ಯಗಳೇ ಬೇಕಲ್ಲವೆ ? ಬೇರೆ ಯಾರಿದ್ದರೂ ಸಾಗುವದೇನು ? ವಸ್ತು ಸ್ಥಿತಿಯು ಹೀಗಿದ್ದರೆ, ಕ್ರೋಧ ಪರವಶವಾಗಿ ಅಯ್ಯಗಳೂ, ಶಾಸ್ತ್ರಿಗಳೂ, ಗುರು ಜಂಗಮರೂ ಎಂದೆನಿಸಿಕೊಳ್ಳುವ ಮೇಲ್ತರಗತಿಯವರಿಗೆ ಸಲ್ಲುವದೇನು ? ಅದಕ್ಕಂತಲೇ "ಯೋಗ್ಯರಾದವರನ್ನೇ ಅಯ್ಯಾಚಾರಕ್ಕೆ ಆರಿಸಬೇಕೆಂದು" ಸಮಾಜದ ಮುಂದೆ ಪ್ರಶ್ನೆ ಇಡುವ ಪ್ರಸಂಗ ಒದಗಿರುವುದು ಕಂಡಿರಾ ಸ್ವಾಮಿ !

ತಮ್ಮ ಸೇವಕ,

ಬಸವಪ್ಪ ಚೆನ್ನಪ್ಪ ಪಟ್ಟೇದ ಮಂಟೆಮುರಿ

— ದಕ್ಷಿಣ ಸಂಸ್ಥಾನಗಳ ಪರಿಷತ್ತಿನಲ್ಲಿ ನೈಜಾಮರಾಜ್ಯದ ಸಭಾಪ್ರತಿಬಂಧಕ ಪದ್ಧತಿಯನ್ನು ನಿಷೇಧಗೊಳಿಸಲಾಯಿತು.

SUSHEELA & CO., KOLLEGAL. (S. INDIA.)

1000 ರೂಪಾಯಿಗಳ ಬಹುಮಾನ.

ಪ್ರತಿ ಎರಡು ಕೂಪನಗಳಿಗೂ ಒಂದು ಕೂಪನ ಉಚಿತ.

ಉತ್ತರಗಳನ್ನು ಸ್ವೀಕರಿಸುವ ಕಡೇ ದಿನ 16-8-1937 ಫಲಿತಾಂಶವನ್ನು ಪ್ರಕಟಿಸುವ ದಿನ 20-8-1937

ಮೂರು ಕೂಪನಗಳೂ ಸರಿಯಾಗಿ ಕಳುಹಿಸಿದವರಿಗೆ 500 ರೂಪಾಯಿಗಳು.

ಒಂದು ಕೂಪನ್ ತಪ್ಪುಳ್ಳವರಿಗೆ 200 ರೂಪಾಯಿಗಳು.

ಎರಡು ಕೂಪನ ತಪ್ಪುಳ್ಳವರಿಗೆ 100 ರೂಪಾಯಿಗಳು

ಇತರ ಬಹುಮಾನಗಳು

ಮೂರು ಕೂಪನಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀಗೆ 125 ರೂಪಾಯಿಗಳು.

ಹೆಚ್ಚಾಗಿ ಕೂಪನಗಳು ಕಳುಹಿಸಿದವರಿಗೆ 75 ರೂಪಾಯಿಗಳು.

		17		

ಸುಶೀಲ ಅಂಡ್ ಕೋ., ಕೊಳ್ಳೇಗಾಲ

ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ

ಹೆಸರು...

ವಿಳಾಸ...

....

ಪೋಸ್ಟಲ್ ಮಣಿಯಾರ್ಡರ್ ನಂಬರು.................................

ಸ್ಟಾಂಪುಗಳು.................... ತಾರೀಖು..........................1937

ಉತ್ತರಗಳನ್ನು ಕಂಡುಹಿಡಿಯುವ ಕ್ರಮ:— ಎಲ್ಲಾ ಕಡೆಗಳಿಂದಲೂ ಮೇಲಿಂದ, ಅಡ್ಡಲಾಗಿ ಮೂಲೆಗಳಿಂದ 85 ಬರುವಂತೆ ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ತಿರುಗಿ ಅದೇ ಚದುರದಲ್ಲಿ ಉಪಯೋಗಿಸದೆ ಶಾಯಿನಲ್ಲಿ ಬರೆದು ಕಳುಹಿಸಬೇಕು.

ನಿ ಬಂ ಧ ನೆ ಗ ಳು .

ಪ್ರವೇಶ ಧನ ಕೂಪನಗೆ 0—8—0 ಆಣೆ ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪುಗಳ ರೂಪದಲ್ಲಾಗಲಿ ಮಣಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕವಾಗಲಿ ಕಳುಹಿಸಬೇಕು. ಉತ್ತರಗಳು 16-8-1937 ರೊಳಗೆ ನಮ್ಮ ಕೈಸೇರಬೇಕು. ಈ ಸ್ಪರ್ಧೆ ಸಂಬಂಧವಾಗಿ ಕಳುಹಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಸು ಮಾಡಲಾಗುವುದಿಲ್ಲ. ಮತ್ತು ಯಾವ ಪತ್ರವ್ಯವಹಾರಕ್ಕೂ ಅವಕಾಶವಿಲ್ಲ. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆ ಮಾಡಲಾಗುವುದು. ಒಂದಕ್ಕಿಂತ ಜಾಸ್ತಿಯಾಗಿ ಉತ್ತರಗಳು (ಎಲ್ಲಾ) ಬಂದಲ್ಲಿ ಬಹುಮಾನಗಳನ್ನು ಸಮವಾಗಿ ಹಂಚಲ್ಪಡುವುದು. ಮೇನೇಜರ್ ತೀರ್ಮಾನವೇ ಕಡೇ ತೀರ್ಮಾನ. ತಮ್ಮ ವಿಳಾಸದೊಡನೆ 0—1—0 ಆಣೆ ಸ್ಟಾಂಪು ಕಳುಹಿಸಿದವರಿಗೆ ಫಲಿತಾಂಶವನ್ನು ಕಳುಹಿಸಲಾಗುವುದು. ಮೇಲ್ಕಂಡ ಷರತ್ತುಗಳನ್ನು ಒಪ್ಪುವವರು ಮಾತ್ರ ಸ್ಪರ್ಧೆಗಳಿಗೆ ಉತ್ತರಗಳನ್ನು ಕಳುಹಿಸಬೇಕು.

ಮ್ಯಾನೇಜರ್

ಸುಶೀಲ ಅಂಡ್ ಕೋ., ಕೊಳ್ಳೇಗಾಲ.

ವಿದ್ಯಾರ್ಥಿಗಳಿಗೆ ಅಪೂರ್ವ ಸಂಧಿ.

ವರ್ನಾಕ್ಯುಲರ ಫಾಯನಲ್” ಪರೀಕ್ಷೆ ಪಾಸ ಆದಂಥ ವಿದ್ಯಾರ್ಥಿಗಳಿಗೆ ಮತ್ತು ಮ್ಯಾಟ್ರಿಕ್ ಫೇಲ ಆದಂಥ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗುವುದು ದುರ್ಲಭವಾಗಿದೆ. ಈ ಎರಡೂ ತೊಂದರೆಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಬೆಳಗಾವಿಯಲ್ಲಿ ಲಿಂಗರಾಜ ಕಾಲೇಜದಲ್ಲಿ ಸುರು ಇದ್ದಂಥ ಆಯುರ್ವೇದ ವಿದ್ಯಾಪೀಠದ ಒಂದು ಶಾಖೆಯು ವಿಜಾಪುರದಲ್ಲಿ ತಾರೀಖು ೧೫-೬-೩೭ ಇಸ್ವಿಯಿಂದ ಪ್ರಾರಂಭವಾಗುವುದು ಅದೆ

ಅಭ್ಯಾಸ ಕ್ರಮವು ೨ ವರ್ಷದ್ದು ಇದ್ದು “ನಿಖಿಲ ಭಾರತ ಆಯುರ್ವೇದ ಮಹಾ ಮಂಡಲದ” ‘ಆಯುರ್ವೇದ ಭೀಷಕ್ ಪದವಿಗೋಸ್ಕರ ವಿದ್ಯಾರ್ಥಿಗಳನ್ನು ತಯಾರ ಮಾಡಲಾದೀತು. ಸದರಿ ಪರೀಕ್ಷೆಯಲ್ಲಿ ಪಾಸ ಆದ ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ಸ್ವತಂತ್ರ ರೀತಿಯಿಂದ ದಂಧೆಯನ್ನು ನಡಿಸಿ ತಮ್ಮ ಆಯುಷ್ಯಕ್ರಮವನ್ನು ಸುಖದಿಂದ ಸಾಗಿಸಬಲ್ಲರು ಇಷ್ಟೇ ಅಲ್ಲ ಗ್ರಾಮೋದ್ಧಾರದಂಥ ದೇಶೋಪಯೋಗಿ ಕಾರ್ಯಕ್ಕಾದರೂ ಅವರಿಂದ ಸಾಕಷ್ಟು ಸಹಾಯ ಸಿಗಬಹುದು.

ವಿದ್ಯಾರ್ಥಿಗಳ ವಯಸ್ಸು ೧೬ ವರ್ಷಕ್ಕಿಂತ ಕಡಿಮೆ ಇರಕೂಡದು. ಶಿಕ್ಷಣವು ಕನ್ನಡ ಭಾಷೆಯಲ್ಲಿ ಕೊಡಲಾದೀತು. ಪ್ರವೇಶ ಫೀ ೨ ರೂ. ಮತ್ತು ಮಾಸಿಕ ಫೀ ೧ ರೂಪಾಯಿ ಅದೆ. ಜುಲೈ ತಿಂಗಳ ಮೊದಲನೇ ತಾರೀಖಿನ ವರೆಗೆ ಇಲ್ಲಿ ಪ್ರವೇಶ ದೊರೆಯುತ್ತದೆ.

ಅರ್ಜಿ ಕಳಿಸುವ ಪತ್ತೆ— ಪಂ. ಮರುಳಾರಾಧ್ಯ ಶಾಸ್ತ್ರಿ
ವ್ಯವಸ್ಥಾಪಕ
ಆಯುರ್ವೇದ ಔಷಧಾಲಯ ವಿಜಾಪುರ

ಅಯ್ಯಾಚಾರ ಜನ್ಮಸಿದ್ಧ ಹಕ್ಕು

ಎಂಬ ಲೇಖನವನ್ನು ಇಂಗಳಿಗಿ ಶ್ರೀ. ಕರವೀರ ಶಾಸ್ತ್ರಿಗಳವರು ತಾ. ೩೧-೫-೩೭ ರ ಶ. ಸ. ದ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ. ಇವರ ಲೇಖನದ ವಿಮರ್ಶೆಯನ್ನು ಕೆಳಗೆ ಮಾಡುವೆ.

(೧) ನಾನು ಮಾಡಿದ ಅಯ್ಯ ಶಬ್ದದ ಅರ್ಥವು ಇವರಿಗೆ ಸಮ್ಮತವಿಲ್ಲ. ಶ್ರೇಷ್ಠವಲ್ಲದಿದ್ದರೆ ಸಾಮಾನ್ಯವೂ ಕನಿಷ್ಠವೂ ಇರುವುದೇನೋ! ಆಗಲಿ, ಅವರ ಅಯ್ಯ ಶಬ್ದವನ್ನೇ ನಾನು ಒಪ್ಪುತ್ತೇನೆ. ಆದರೆ ಅದರ ಉತ್ಪತ್ತಿ ಅರ್ಥಗಳನ್ನಷ್ಟು ಹೇಳಿದ್ದರೆ ಒಳಿತಾಗುತ್ತಿತ್ತು. ಇದು ವರೆಗೆ ಗ್ರಂಥ ಪ್ರಯೋಗಗಳಲ್ಲಾಗಲಿ ವ್ಯಾವಹಾರಿಕ ಬರವಣಿಗೆಯಲ್ಲಾಗಲಿ, ಅದನ್ನು ನಾನು ಕಾಣದಿರುವುದು ದುರ್ದೈವವೇ ಸರಿ

(೨) ವೀರಶೈವ ಮತವು ಆರ್ಯ ಮತಕ್ಕೆ ಅತಿರಿಕ್ತವೋ ಅಲ್ಲವೋ? ಎಂಬ ವಾದದಲ್ಲಿ ಈಗ ನಾನು ಸೇರಲಿಚ್ಛಿಸುವುದಿಲ್ಲ. ಅದು ವಿಷಯಾಂತರವು. ಆದರೂ ಬರೇ ಮನ ಬಂದಂತೆ ಏನಾದರೊಂದು ವಿಧಾನಮಾಡಿದರೆ ಅದು ಸತ್ಯವಾಗುವುದೆಂದು ಯಾರೂ ತಿಳಿಯಕೂಡದೆಂದು ಮಾತ್ರ ಶಾಸ್ತ್ರಿ ಮಹಾಶಯರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

(೩) "ಶೈವರಿಗೆ ಉಪನಯನ ಹ್ಯಾಗೆ ಮಾಡುತ್ತಾರೋ ಹಾಗೆ ವೀರಶೈವರಿಗೆ ಭಕ್ತರಿಗೆ ದೀಕ್ಷೆ, ಅಯ್ಯಗಳಿಗೆ ಅಯ್ಯಾಚಾರವೆಂಬ ಶಾಸ್ತ್ರವುಂಟಾಗಿ....ಬರದಿರುತ್ತಾರೆ" ಇಲ್ಲಿ ಶೈವರಿಗೆಲ್ಲ ಭೋಗ ಮೋಕ್ಷ ಪ್ರಾಪ್ತಿಗೆ ಒಂದೇ ಒಂದು ಉಪನಯನವು ಸಾಕಾದರೆ, ವೀರಶೈವರಿಗೆ ಅದೇಕೆ ಇಬ್ಭಾಗವಾಗಿ ದೀಕ್ಷೆ ಅಯ್ಯಾಚಾರಗಳೆಂಬೆರಡುರೂಪಧರಿಸಿತೋ! ಇದರ ವಿವರವಿದ್ದರೆ ಚನ್ನಾಗಿತ್ತು.

(೪) "ಭಕ್ತರಿಗೆ ದೀಕ್ಷೆ, ಅಯ್ಯನವರಿಗೆ ಅಯ್ಯಾಚಾರವಾಗದಿದ್ದರೆ, ಗುರು ಲಿಂಗ ಜಂಗಮ ಪೂಜೆಮಾಡಲಿಕ್ಕೆ ಅಯೋಗ್ಯರೆಂದು ಶಾಸ್ತ್ರವು ಹೇಳುತ್ತದೆ." ಶಾಸ್ತ್ರವು ಹೇಳಲಿ, ಹೇಳದಿರಲಿ! ಅಯೋಗ್ಯರನ್ನು ಯಾವ ಕರ್ಮದಲ್ಲಿಯೂ ಸೇರಿಸಕೂಡದು. ಅದರಂತೆ ಗುರು ಲಿಂಗ ಜಂಗಮರ ಪೂಜೆಮಾಡಲಿಕ್ಕೂ ಯೋಗ್ಯತಾ ಸಂಪನ್ನರಾದವರೇ ಬೇಕೆಂಬುದು ಸಿದ್ಧವು. ನಾನು ಹೇಳುವುದಾದರೂ ಇದೇ! ಅಯ್ಯಾಚಾರಕ್ಕೆ ಯೋಗ್ಯರಾದವರನ್ನೇ ಆರಿಸಿರಿ. ಅಯೋಗ್ಯರನ್ನು ಆರಿಸಬೇಡಿರಿ.

(೫) "ಗುರುವಿನ ಕಡೆಯಿಂದ ದೀಕ್ಷೆಯಿಲ್ಲದೆ ಲಿಂಗವನ್ನ ರ್ಚಿಸಿದರೆ, ಇಲ್ಲವೆ ವಿಭೂತಿ ರುದ್ರಾಕ್ಷಿ ಧರಿಸಿ ಜಪಧ್ಯಾನಾದಿ ಮಾಡಿದರೆ ಅದೆಲ್ಲ ನಿಷ್ಫಲವು, ಈ ಮಾತಾದರೂ ಸಂಪೂರ್ಣ ಒಪ್ಪಿಗೆಯುಳ್ಳದ್ದೇ. ಆದರೆ ಗುರುವಾದವನು ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿದಂತೆ "ಲಿಂಗಾಂಗಯೋಗ ತತ್ವಜ್ಞಂ| ನಿರೂಢಾದ್ವೈತವಾಸನಂ|| ಲಿಂಗಾಂಗ ಸ್ಥಳ ಭೇದಜ್ಞಂ| ಲಿಂಗ ಪೂಜಾಪರಾಯಣಂ"|| ಆಗಿರಬೇಕೆಂಬುದೇ ವಾದದ ವಿಷಯವು.

(೬) "ಅಯ್ಯನವರಿಗೆ ಅಯ್ಯಾಚಾರವು ಜನ್ಮ ಸಿದ್ಧ ಹಕ್ಕು ಇರುವುದು.' ಇದೇ ಪರಮಾವಧಿ ಮೂಢತನದ, ಅತ್ಯಂತ ಸ್ವಾರ್ಥ ಪರಾಯಣತೆಯ, ಸಾಂಪ್ರತಾಧೋಗತಿಯ ಮುಖ್ಯ ಕಾರಣವಾದ ರಾಕ್ಷಸೀಯವಾದ ಭೂಮಿಕೆಯಾಗಿದೆ. ಇಲ್ಲಿ ಎಲ್ಲರೂ ದುರಾಗ್ರಹ ಸ್ವಾರ್ಥಗಳನ್ನು ಬಿಟ್ಟು ಮತ ಸಮಾಜಗಳ ಹಿತವನ್ನು ನೆನೆದು, ಕೇವಲ ನ್ಯಾಯ ದೃಷ್ಟಿಯನ್ನೇ ತಳೆಯುವುದು ತಕ್ಕದ್ದಾಗಿದೆ. ಈ ಬಗ್ಗೆ ಉದಾಹರಣಾರ್ಥವಾಗಿ ಮಾಮಲತಿಯ ಉದ್ಯೋಗವನ್ನು ತಕ್ಕೊಳ್ಳುವಾ. ಇದನ್ನು ನಿಸ್ತರಿಸಲಿಕ್ಕೆ ಆ ಪರೀಕ್ಷೆ ಪಾಸಾದ ಯಾವ ಮನುಷ್ಯನಿದ್ದರೂ ಸಾಗುತ್ತದೆಂಬುದನ್ನು ನಾವು ವ್ಯವಹಾರದಲ್ಲಿ ಪ್ರತ್ಯಕ್ಷ ನೋಡುವುದಿಲ್ಲವೆ? ಪರಂಪರೆಯಿಂದ ಮಾಮಲತಿ ಮಾಡಿದವರ ವಂಶಜರೇ ಇರಬೇಕಾದ ಕಾರಣವಿಲ್ಲ. ಇಲ್ಲಿ ವಂಶಕ್ಕೆ (ಜನ್ಮಕ್ಕೆ) ಮಹತ್ವವಿಲ್ಲ. ಪರೀಕ್ಷೆಗೆ (ಗುಣ ಕರ್ಮಕ್ಕೆ) ಮಹತ್ವವದೆ. ವಂಶದಲ್ಲಿ ಹುಟ್ಟಿದವರು ಯಾವಾಗಲೂ ಎಲ್ಲರೂ ಕಾರ್ಯದಕ್ಷರೇ ಆಗುವರೆಂಬ ನಿಯಮವಿಲ್ಲ. ಬಹು ಜನರು ಅಯೋಗ್ಯರು ಹುಟ್ಟುವರೆಂಬುದು ಎಲ್ಲರ ಅನುಭವದ ಮಾತು. ಹೀಗೆ ನಿರುಪಯುಕ್ತ ಜನರು ವಂಶದಲ್ಲಿ ಹುಟ್ಟಿದರೆ ದಡ್ಡರಾಗಿ ಹಿಂದೆ ಬೀಳುವರು. ಬೇರೆ ಜನರು ಪಾಸಾಗಿ ತಕ್ಕವರಾದರೆ, ಹೊಸದಾಗಿ ಮುಂದೆ ಬರುವರು. ಈ ಹೊಸಬರೇ ಪರಂಪರಾಗತರಿಗಿಂತ ಚತುರರೂ ಕಾರ್ಯಕ್ಷಮರೂ ಇದ್ದ ಅನುಭವವು ಅನೇಕ ಸಾರೆ ಬಂದದೆ, ಬರುತ್ತದೆ, ಬರುವದು. ಇದೇ ಪ್ರಗತಿಯ ಮಾರ್ಗವು ಜಗತ್ತಿನಲ್ಲೆಲ್ಲ ಸರ್ವ ಮಾನ್ಯವಾಗಿದೆ. ಆದುದರಿಂದ 'ಗುಣಾಃ ಪೂಜಾಸ್ಥಾನಂ ಗುಣಿಷು' ಎಂಬ ತತ್ವವನ್ನು ಸರ್ವದಾ ಮುಂದಿಟ್ಟುಕೊಂಡು ನಡೆಯುವುದೇ ಸಮಂಜಸವು. ಇದನ್ನು ಬಿಟ್ಟು ನಿರ್ಗುಣಿಗಳನ್ನು ಪೂಜಿಸಹತ್ತಿದರೆ ಅದೇ ಹಾಳಾಗುವ ಮಾರ್ಗವು. ಈಗ ಪ್ರಾಪ್ತವಾದ ವಿಪನ್ನಾವಸ್ಥೆಗೆ ಇದೇ ಕಾರಣವು. ಮತ್ತು ಅದನ್ನೇ ಹೇಳುವ ಬುದ್ಧಿವಂತರ ಬುದ್ಧಿ ವೈಭವಕ್ಕೆ ನಮಸ್ಕಾರವು! ಶತಶಃ ನಮಸ್ಕಾರವು!!

ಜನ್ಮದಿಂದವರಿಷ್ಟತ ಯಾರಿಗೂ ಇಲ್ಲ. ಎಲ್ಲರೂ ಅವಿದ್ಯೆ ಮಲತ್ರಯಾದಿಗಳಿಂದ ಆವಿಷ್ಟಿತರು. ಅಂತೇ ಭವಿಗಳು. ಮುಂದೆ ಯೋಗ್ಯ ಸಂಸ್ಕಾರವನ್ನು ಹೊಂದಿ ಪ್ರಯತ್ನಪೂರ್ವಕವಾಗಿ ಉನ್ನತಿಯನ್ನು ಪಡೆಯಬೇಕಾಗುತ್ತದೆ. ಇದೇ ಸರಳವಾದ ಮಾರ್ಗವು. ಬೀಜದಿಂದ ಅಂಕುರೋತ್ಪತ್ತಿಯಾಗಿ ಕ್ರಮ ಕ್ರಮವಾಗಿ ಬೆಳೆದು, ವೃಕ್ಷವಾಗಿ ಫಲ ಭಾರದಿಂದ ಶೋಭಿಸಬಹುದೇ ವಿನಾ ಒಮ್ಮೆಲೇ ಬೀಜದಿಂದ ಫಲಭರಿತ ವೃಕ್ಷವಾಗುವುದುಂಟೆ? ಏನಾದರೂ ಸೃಷ್ಟಿಯ ವಿರುದ್ಧ ಹೇಳಿದರೆ ಬರೇ ಮೂರ್ಖತನ ಮಾತ್ರ ಪಾಲಿಗೆ ಬರುವುದು.

(೭) "ತಮ್ಮಂಥವರು ದುಷ್ಟ ನಕ್ಷತ್ರದಲ್ಲಿ ತೀರಿಕೊಂಡರೆ (ಬ) ನಿಮ್ಮಂಥವರ ಮಣ್ಣು ಮುಚ್ಚಲಿಕ್ಕೆ. (ಕ) ಮನೆಯಲ್ಲಿ ಹುಟ್ಟಿದ ಮಕ್ಕಳನ್ನು ನಾವೇ ಲಗ್ನವಾಗುತ್ತೇವೆ ಅಂದರೆ — ಇತ್ಯಾದಿ ಮಾತುಗಳು, ವಿದ್ವಾನರೆನ್ನಿಸಿಕೊಳ್ಳುವ ಶಾಸ್ತ್ರಿಗಳಿಗೆ ಶೋಭಿಸುವವೇ? ಶಿಷ್ಟಾಚಾರವನ್ನೆಲ್ಲ ಹೀಗೆ ತೀರ ಮರೆತುಬಿಡುವುದು ಸಭ್ಯತನವೇ? ದುಷ್ಟ ನಕ್ಷತ್ರದಲ್ಲಿ ಭಕ್ತರು ಮಾತ್ರವೇ ತೀರಿಕೊಳ್ಳುತ್ತಾರಂತಲ್ಲ, ಅವರನ್ನಷ್ಟೇ ಮಣ್ಣು ಮುಚ್ಚುತ್ತಾರಂತಲ್ಲ, ತಮ್ಮಂಥ ಅಯ್ಯಗಳೂ ದುಷ್ಟ ನಕ್ಷತ್ರದಲ್ಲಿ ಸಾಯುವುದಿಲ್ಲವೆ? ತಮ್ಮನ್ನು ಕೂಡ ಮಣ್ಣಲ್ಲಿ ಮುಚ್ಚುವುದಿಲ್ಲವೆ? ಆಗಲೂ ಸಹ ಯೋಗ್ಯವಾದ ಅಯ್ಯಗಳೇ ಬೇಕಲ್ಲವೆ? ಬೇರೆ ಯಾರಿದ್ದರೂ ಸಾಗುವದೇನು? ವಸ್ತು ಸ್ಥಿತಿಯು ಹೀಗಿದ್ದರೆ, ಕ್ರೋಧ ಪರವಶವಾಗಿ ಅಯ್ಯಗಳೂ, ಶಾಸ್ತ್ರಿಗಳೂ, ಗುರು ಜಂಗಮರೂ ಎಂದೆನಿಸಿಕೊಳ್ಳುವ ಮೇಲ್ತರಗತಿಯವರಿಗೆ ಸಲ್ಲುವದೇನು? ಅದಕ್ಕಂತಲೇ "ಯೋಗ್ಯರಾದವರನ್ನೇ ಅಯ್ಯಾಚಾರಕ್ಕೆ ಆರಿಸಬೇಕೆಂದು" ಸಮಾಜದ ಮುಂದೆ ಪ್ರಶ್ನೆ ಇಡುವ ಪ್ರಸಂಗ ಒದಗಿರುವುದು ಕಂಡಿರಾ ಸ್ವಾಮಿ!

ತಮ್ಮ ಸೇವಕ,

ಬಸವಪ್ಪ ಚೆನ್ನಪ್ಪ ಪಟ್ಟೇದ ವಂಟಮುರಿ

— ದಕ್ಷಿಣ ಸಂಸ್ಥಾನಗಳ ಪರಿಷತ್ತಿನಲ್ಲಿ ನೈಜಾಮರಾಜ್ಯದ ಸಭಾಪ್ರತಿಬಂಧಕ ಪದ್ಧತಿಯನ್ನು ನಿಷೇಧಗೊಳಿಸಲಾಯಿತು.

SUSHEELA & CO., KOLLEGAL. (S. INDIA.)

1000 ರೂಪಾಯಿಗಳ ಬಹುಮಾನ.

ಪ್ರತಿ ಎರಡು ಕೂಪರ್‌ಗಳಿಗೂ ಒಂದು ಕೂಪರ್ ಉಚಿತ.

ಉತ್ತರಗಳನ್ನು ಸ್ವೀಕರಿಸುವ ಕಡೇ ದಿನ 16-8-1937 ಫಲಿತಾಂಶವನ್ನು ಪ್ರಕಟಿಸುವ ದಿನ 20-8-1937

ಮೂರು ಕೂಪರ್‌ಗಳೂ ಸರಿಯಾಗಿ ಕಳುಹಿಸಿದವರಿಗೆ 500 ರೂಪಾಯಿಗಳು.

ಒಂದು ಕೂಪನ್ ತಪ್ಪುಳ್ಳವರಿಗೆ 200 ರೂಪಾಯಿಗಳು.

ಎರಡು ಕೂಪರ್ ತಪ್ಪುಳ್ಳವರಿಗೆ 100 ರೂಪಾಯಿಗಳು

ಇತರ ಬಹುಮಾನಗಳು

ಮೂರು ಕೂಪರ್‌ಗಳೂ ಸರಿಯಾಗಿ ಕಳುಹಿಸಿದ ಪ್ರಥಮ ಸ್ತ್ರೀಗೆ 125 ರೂಪಾಯಿಗಳು.

ಹೆಚ್ಚಾಗಿ ಕೂಪರ್‌ಗಳು ಕಳುಹಿಸಿದವರಿಗೆ 75 ರೂಪಾಯಿಗಳು.

		17		

ಸುಶೀಲ ಅಂಡ್ ಕೋ., ಕೊಳ್ಳೇಗಾಲ

ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ

ಹೆಸರು..

ವಿಳಾಸ..

....

ಪೋಸ್ಟಲ್ ಮಣಿಯಾರ್ಡರ್ ನಂಬರು..

ಸ್ಟಾಂಪುಗಳು.................... ತಾರೀಖು.....................1937

ಉತ್ತರಗಳನ್ನು ಕಂಡುಹಿಡಿಯುವ ಕ್ರಮ:— ಎಲ್ಲಾ ಕಡೆಗಳಿಂದಲೂ ಮೇಲಿಂದ, ಅಡ್ಡಲಾಗಿ ಮೂಲೆಗಳಿಂದ 85 ಬರುವಂತೆ ಒಂದು ಸಲ ಉಪಯೋಗಿಸಿದ ಸಂಖ್ಯೆಯನ್ನು ತಿರುಗಿ ಅದೇ ಚದುರದಲ್ಲಿ ಉಪಯೋಗಿಸದೆ ಶಾಯಿನಲ್ಲಿ ಬರೆದು ಕಳುಹಿಸಬೇಕು.

ನಿ ಬಂ ಧ ನೆ ಗ ಳು .

ಪ್ರವೇಶ ಧನ ಕೂಪರ್‌ಗೆ 0—8—0 ಆಣೆ ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪುಗಳ ರೂಪದಲ್ಲಾಗಲಿ ಮಣಿಯಾರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕವಾಗಲಿ ಕಳುಹಿಸಬೇಕು. ಉತ್ತರಗಳು 16-8-1937 ರೊಳಗೆ ನಮ್ಮ ಕೈಸೇರಬೇಕು. ಈ ಸ್ಪರ್ಧೆ ಸಂಬಂಧವಾಗಿ ಕಳುಹಿಸಿದ ಹಣವನ್ನು ಯಾವ ಕಾರಣದಿಂದಲೂ ವಾಪಸು ಮಾಡಲಾಗುವುದಿಲ್ಲ. ಮತ್ತು ಯಾವ ಪತ್ರವ್ಯವಹಾರಕ್ಕೂ ಅವಕಾಶವಿಲ್ಲ. ಉತ್ತರಗಳ ಸಂಖ್ಯಾನುಸಾರ ಬಹುಮಾನದ ಮೊತ್ತವನ್ನು ಹೆಚ್ಚು ಕಡಿಮೆ ಮಾಡಲಾಗುವುದು. ಒಂದಕ್ಕಿಂತ ಜಾಸ್ತಿಯಾಗಿ ಉತ್ತರಗಳು (ಎಲ್ಲ) ಬಂದಲ್ಲಿ ಬಹುಮಾನಗಳನ್ನು ಸಮವಾಗಿ ಹಂಚಲ್ಪಡುವುದು. ಮೇನೇಜರ್ ತೀರ್ಮಾನವೇ ಕಡೇ ತೀರ್ಮಾನ. ತಮ್ಮ ವಿಳಾಸದೊಡನೆ 0—1—0 ಆಣೆ ಸ್ಟಾಂಪು ಕಳುಹಿಸಿದವರಿಗೆ ಫಲಿತಾಂಶವನ್ನು ಕಳುಹಿಸಲಾಗುವುದು. ಮೇಲ್ಕಂಡ ಷರತ್ತುಗಳನ್ನು ಒಪ್ಪುವವರು ಮಾತ್ರ ಸ್ಪರ್ಧೆಗಳಿಗೆ ಉತ್ತರಗಳನ್ನು ಕಳುಹಿಸಬೇಕು.

ಮ್ಯಾನೇಜರ್

ಸುಶೀಲ ಅಂಡ್ ಕೋ., ಕೊಳ್ಳೇಗಾಲ.

ವಿದ್ಯಾರ್ಥಿಗಳಿಗೆ ಅಪೂರ್ವ ಸಂಧಿ.

ವ್ಹರ್ನಾಕ್ಯುಲರ ಫಾಯನಲ್" ಪರೀಕ್ಷೆ ಪಾಸ ಆದಂಥ ವಿದ್ಯಾರ್ಥಿಗಳಿಗೆ ಮತ್ತು ಮ್ಯಾಟ್ರಿಕ್ ಫೇಲ ಆದಂಥ ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗುವುದು ದುರ್ಲಭವಾಗಿದೆ. ಈ ಎರಡೂ ತೊಂದರೆಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಬೆಳಗಾವಿಯಲ್ಲಿ ಲಿಂಗರಾಜ ಕಾಲೇಜದಲ್ಲಿ ಸುರು ಇದ್ದಂಥ ಆಯುರ್ವೇದ ವಿದ್ಯಾಪೀಠದ ಒಂದು ಶಾಖೆಯು ವಿಜಾಪುರದಲ್ಲಿ ತಾರೀಖು ೧೫-೬-೩೭ ಇಸ್ವಿಯಿಂದ ಪ್ರಾರಂಭವಾಗುವುದು ಅದೆ

ಅಭ್ಯಾಸ ಕ್ರಮವು ೨ ವರ್ಷದ್ದು ಇದ್ದು "ನಿಖಿಲ ಭಾರತ ಆಯುರ್ವೇದ ಮಹಾ ಮಂಡಲದ" "ಆಯುರ್ವೇದ ಭೀಷಕ್ ಪದವಿಗೋಸ್ಕರ ವಿದ್ಯಾರ್ಥಿಗಳನ್ನು ತಯಾರ ಮಾಡಲಾದೀತು. ಸದರಿ ಪರೀಕ್ಷೆಯಲ್ಲಿ ಪಾಸ ಆದ ವಿದ್ಯಾರ್ಥಿಗಳು ಹಳ್ಳಿಗಳಲ್ಲಿ ಸ್ವತಂತ್ರ ರೀತಿಯಿಂದ ದಂಧೆಯನ್ನು ನಡಿಸಿ ತಮ್ಮ ಆಯುಷ್ಯಕ್ರಮವನ್ನು ಸುಖದಿಂದ ಸಾಗಿಸಬಲ್ಲರು ಇಷ್ಟೇ ಅಲ್ಲ ಗ್ರಾಮೋದ್ಧಾರದಂಥ ದೇಶೋಪಯೋಗಿ ಕಾರ್ಯಕ್ಕಾದರೂ ಅವರಿಂದ ಸಾಕಷ್ಟು ಸಹಾಯ ಸಿಗಬಹುದು.

ವಿದ್ಯಾರ್ಥಿಗಳ ವಯಸ್ಸು ೧೬ ವರ್ಷಕ್ಕಿಂತ ಕಡಿಮೆ ಇರಕೂಡದು. ಶಿಕ್ಷಣವು ಕನ್ನಡ ಭಾಷೆಯಲ್ಲಿ ಕೊಡಲಾದೀತು. ಪ್ರವೇಶ ಫೀ ೨ ರೂ. ಮತ್ತು ಮಾಸಿಕ ಫೀ ೧ ರೂಪಾಯಿ ಅದೆ. ಜುಲೈ ತಿಂಗಳ ಮೊದಲನೇ ತಾರೀಖಿನ ವರೆಗೆ ಇಲ್ಲಿ ಪ್ರವೇಶ ದೊರೆಯುತ್ತದೆ.

ಅರ್ಜಿ ಕಳಿಸುವ ಪತ್ತೆ— ಪಂ. ಮರುಳಾರಾಧ್ಯ ಶಾಸ್ತ್ರಿ
ವ್ಯವಸ್ಥಾಪಕ
ಆಯುರ್ವೇದ ಔಷಧಾಲಯ ವಿಜಾಪುರ

ಬಸವೇಶ್ವರ ಹಾಯಸ್ಕೂಲ

ಬಾಗಲಕೋಟ

ಈ ಶಾಲೆಯು ತಾ|| ೭-೬-೧೯೩೭ ನೆ ಇಸ್ವಿ ಸೋಮವಾರ ದಿವಸ ಪ್ರಾರಂಭ ಆಗಿದೆ. ೧ ನೇ ಇಯತ್ತೆಯಿಂದ ೭ ನೇ ಇಯತ್ತೆ (ಮ್ಯಾಟ್ರಿಕ್ಯುಲೇಶನ್) ವರೆಗೆ ಕಲಿಸಲಾಗುವದು. ಮತ್ತು ಮುಲ್ಕೀ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳಿಗೆ ಒಂದೇ ವರ್ಷದಲ್ಲಿ ಇಂಗ್ಲೀಷ ಮೂರು ಇಯತ್ತೆಗಳನ್ನು ಕಲಿಸುವ ಸ್ಪೇಶಲ್ ಕ್ಲಾಸಿನಿಂದ ಪರೀಕ್ಷೆಗೆ ಕುಳಿತ ೧೭ ವಿದ್ಯಾರ್ಥಿಗಳಲ್ಲಿ ೧೧ ವಿದ್ಯಾರ್ಥಿಗಳು ಪಾಸಾಗಿದ್ದಾರೆ ಹೋದ ಮಾರ್ಚ ತಿಂಗಳಲ್ಲಾದ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತ ೪೫ ವಿದ್ಯಾರ್ಥಿಗಳಲ್ಲಿ ೧೨ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ ಮುಂಬೈ ವಿಶ್ವವಿದ್ಯಾಲಯದ ಒಟ್ಟು ಮ್ಯಾಟ್ರಿಕ್ ರಿಜಲ್ಟ ೧೦೦ ಕ್ಕೆ ೧೯ ರಂತೆ ಇದ್ದು ನಮ್ಮ ಹಾಯಸ್ಕೂಲಿನ ರಿಜಲ್ಟ ಅದಕ್ಕಿಂತಲೂ ಹೆಚ್ಚಾಗಿರುತ್ತದೆ ಈ ಶಾಲೆಯ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯ ಪರಿಣಾಮ ಕಳೆದ ೬—೭ ವರ್ಷಗಳಿಂದ ವಿಜಾಪುರ ಜಿಲ್ಲೆಯಲ್ಲಿ ಮೇಲಾದದ್ದಿದೆ.

ಕೆಳಗಿನ ಕ್ಲಾಸುಗಳಲ್ಲಿ ಇಂಗ್ಲಿಷ ಭಾಷೆಯನ್ನು ಬಿ. ಟಿ. ಪರೀಕ್ಷೆ ಪಾಸಾದ ಶಿಕ್ಷಕರೇ ಕಲಿಸುವರು. ಕನ್ನಡ, ಮರಾಠಿ, ಉರ್ದು, ಸಂಸ್ಕೃತ ಮತ್ತು ಪರ್ಶಿಯನ್ ಈ ಭಾಷೆಗಳನ್ನು ಕಲಿಸುವ ಯೋಜನೆಯು ಎಂದಿನಂತೆ ಇರುವದು.

ಯಾವತ್ತು ಜಾತಿಯ ವಿದ್ಯಾರ್ಥಿಗಳಿಗೆ ಈ ಸಾಲೆಯಲ್ಲಿ ಪ್ರವೇಶವು ನಿರಾತಂಕನಾಗಿ ದೊರೆಯುವದು. ಶಿಕ್ಷಣದಲ್ಲಿ ಹಿಂದುಳಿದ ಅಸ್ಪೃಶ್ಯ ಮೊದಲಾದವರಿಗೂ ಬಡವರಿಗೂ ಮಾಫಿ ವಗೈರೆ ಸೌಕರ್ಯಗಳಿಂದ ವಿಶೇಷ ಪ್ರೋತ್ಸಾಹನ ಕೊಡಲಾಗುವದು. ಹೆಣ್ಣುಮಕ್ಕಳ ಬಗ್ಗೆ ಪೂರ್ಣ ಲಕ್ಷಪೂರೈಸಲ್ಪಡುವದು.

ಭವ್ಯವಾದ ಕಟ್ಟಡದಿಂದಲೂ ಪರಿಪೂರ್ಣವಾದ ಸಾಯನ್ಸ ಲ್ಯಾಬೊರೇಟರಿ, ಲಾಯಬ್ರರಿ, ರೀಡಿಂಗ ರೂಮು ಮೊದಲಾದವುಗಳಿಂದಲೂ ವಿಸ್ತೀರ್ಣವಾದ ಆಟದ ಮೈದಾನದಿಂದಲೂ, ಸರ್ವೋತ್ಕೃಷ್ಟವಾದ ಶಿಸ್ತಿನಿಂದಲೂ ಶಿಕ್ಷಣ ಶಾಸ್ತ್ರದಲ್ಲಿ ತಜ್ಞರು ಅನುಭವಿಕರು ಉತ್ಸಾಹದಿಂದ ಕಲಿಸುವವರೂ ಆದ ಅಧ್ಯಾಪಕರಿಂದಲೂ ಈ ಶಾಲೆಯು ಕರ್ನಾಟಕದಲ್ಲೆಲ್ಲ ಖ್ಯಾತಿಯನ್ನು ಹೊಂದಿರುತ್ತದೆ ಈ ಸಾಲೆಗೆ ಸರಕಾರದಿಂದ ವರ್ಷ ವರ್ಷಕ್ಕೆ ಹೆಚ್ಚು ಗ್ರ್ಯಾಂಟು ದೊರೆಯುತ್ತಾ ಬಂದಿರುತ್ತದೆ.

ಮ್ಯಾಟ್ರಿಕ್ ಪರೀಕ್ಷೆಗೆ ಕೂಡ್ರುವ ವಿದ್ಯಾರ್ಥಿಗಳು ಕನಿಷ್ಟ ೧೩೦ ದಿವಸ ರಜಿಸ್ಟರ್ಡ ಹಾಯಸ್ಕೂಲಿನಲ್ಲಿ ಹಾಜರ ಇರಲಿಕ್ಕೇ ಬೇಕೆಂಬ ಮುಂಬೈ ವಿಶ್ವವಿದ್ಯಾಲಯದ ಹೊಸ ನಿಯಮಕ್ಕನುಸರಿಸಿ ವಿದ್ಯಾರ್ಥಿಗಳು ಯಾವ ಆತಂಕವಿಲ್ಲದೆ ಈ ಹಾಯಸ್ಕೂಲಿನಲ್ಲಿ ಹೆಸರು ಹಚ್ಚಿಸಬಹುದು. ಇದು ಬಹಳ ಮಹತ್ವದ ಸಂಗತಿಯು.

ಶಾಲೆಯಲ್ಲಿ ಪ್ರವೇಶವು ಇದೇ ಜೂನ ೭ ನೇ ತಾರೀಖಿನಿಂದ ಜೂನ ೩೧ ನೇ ತಾರೀಖಿನ ವರೆಗೆ ಇರುವದು. ಈ ಕಾಲಾವಧಿಯಲ್ಲಿಯೇ ಪಾಲಕರು ತಮ್ಮ ತಮ್ಮ ಬಾಲ ಬಾಲಕಿಯರ ಹೆಸರನ್ನು ಹಚ್ಚಿಸಿ ಸರ್ವ ಸಮಾಜದವರು ಈ ಶಾಲೆಯ ಲಾಭವನ್ನು ಪಡೆಯುವರೆಂದು ಆಶಿಸುತ್ತೇವೆ.

ಬಸವೇಶ್ವರ ಹಾಯಸ್ಕೂಲ
ಕಮಿಟಿ.

ಕರ್ನಾಟಕ ವಣಿಕ ಸಂಘ

ಬಾಗಲಕೋಟ

ನಮ್ಮ ಸಂಘದ ಯತ್ನದಿಂದ ಎಂ.ಎಸ್ ಎಂ. ರೇಲ್ವೆ ಕಂಪನಿಯವರು ಕನ್ನಡ ವೇಳಾಪತ್ರಿಕೆಯನ್ನು ಹೆಚ್ಚಾಗಿ ತಿದ್ದುಪಡೆಮಾಡಿ ಹೆಚ್ಚಿನ ಮಾಹಿತಿಯನ್ನು ಸೇರಿಸಿ, ಮುದ್ದಾಗಿ ಮುದ್ರಿಸಿ ಸುಂದರವಾಗಿ ಬಾಯಿಂಡ ಮಾಡಿಸಿ, ಇದೀಗ ಪುಸ್ತಕ ರೂಪದಿಂದ ಪ್ರಕಟಿಸಿದ್ದಾರೆ. ಇದರ ಉಪಯೋಗವನ್ನು ಕನ್ನಡಿಗರು ಹೆಚ್ಚಿಚ್ಚು ಮಾಡಿಕೊಳ್ಳುವರಾಗಿ ನಂಬಿದ್ದೇವೆ. ಕರ್ನಾಟಕ ವರ್ತಕರೂ, ಕಾರಖಾನೆದಾರರೂ, ಈ ಪುಸ್ತಕಗಳಲ್ಲಿ ತಮ್ಮ ಸರಕುಗಳ ಬಗ್ಗೆ ಜಾಹೀರಾತುಗಳನ್ನು ಪ್ರಕಟಿಸಿ ತಮ್ಮ ವ್ಯಾಪಾರ ಉದ್ಯೋಗಗಳ ಬೆಳವಣಿಗೆಯನ್ನು ಮಾಡಿಕೊಳ್ಳಬೇಕು

ಈ ಪುಸ್ತಕಗಳು ಕರ್ನಾಟಕದ ಎಲ್ಲ ಸ್ಟೇಶನಗಳಲ್ಲಿ ಒಂದಾಣೆ ಬೆಲೆಗೆ ದೊರೆಯುವವು ಯಾವದೇ ಸ್ಟೇಶನ್ನಿನಲ್ಲಿ ದೊರೆಯದಿದ್ದರೆ ಆ ಬಗ್ಗೆ ನಮಗೆ ತಿಳಿಸಿದರೆ ಅಲ್ಲಿ ದೊರೆಯುವಂತೆ ವ್ಯವಸ್ಥೆ ಮಾಡುವೆವು.

ತಮ್ಮ
ಮು ಸೊ ಜಂಗಿನ
ವಿ. ಬಿ. ಬಳ್ಳಾರಿ.
ಗೌ. ಕಾರ್ಯದರ್ಶಿಗಳು.

ಮುಸಲ್ಮಾನ್ ಬ್ಯಾರಿಸ್ಟರರ ಕೊಲೆ !

—ಮದ್ರಾಸಿನಲ್ಲಿ ಬ್ಯಾರಿಸ್ಟರ್ ಮಿರ ಅನ್ವರುದ್ದೀನ್ ಎಂಬ ಒಬ್ಬ ಮುಸಲ್ಮಾನ್ ಗೃಹಸ್ಥರು ಇನ್ಸ್‌ಪುರಂ ಎಂಬ ಹಳ್ಳಿಗೆ ಅಲ್ಲಿಯ ಕಳವನ್ನು ಕಂಡು ಹಿಡಿಯಲು ಹೋದಾಗ ಒಬ್ಬ ತರುಣ ಮುಸಲ್ಮಾನನು ಅವರನ್ನು ಇರಿದು ಕೊಂದನು

— ಸಿಂಧ ಪ್ರಾಂತ್ರದಲ್ಲಿ ಶಿಕಾರಪುರ ಎಂಬಲ್ಲಿ ಮೊನ್ನೆ ಯಾವ ಮಸೀದಿಯ ಹತ್ತಿರ ದೊಂಬಿಯಾಗಿತ್ತೋ ಅಲ್ಲಿಯೇ ಕುರಾನಿನ ಕೆಲವು ಸುಟ್ಟುಹೋದ ಪುಟಗಳು ದೊರೆತವು ಅದರಿಂದ ಮುಸಲ್ಮಾನ ಸಮಾಜದಲ್ಲಿ ತುಂಬಾ ಅಸಂತೋಷವುಂಟಾಗಿದೆ.

— ಔಷಧಿಯಿಂದ ಸಂತತಿಯನ್ನು ತಡೆಯುವದಕ್ಕೆ ಅಮೇರಿಕೆಯ ವೈದ್ಯ ವಿದ್ಯಾ ವಿಶಾರದರ ಸಭೆಯು ಒಪ್ಪಿಗೆಯನ್ನು ಕೊಟ್ಟಿದೆ

— ಅಖಿಲಭಾರತೀಯ ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿಗಳಾದ ಶ್ರೀ ಕುಮಾರಪ್ಪ ಇವರು ಸರ್. ಡೇವ್ಹಿಡ್ ದೇವದಾಸ ಇವರ ಕನ್ಯೆ ಕ. ಸೀತಾ ಇವರನ್ನು ವಿವಾಹವಾದರು ಕು. ಸೀತಾ ಇವರು ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರಲ್ಲದೆ ಕೆಂಬ್ರಿಜ್ ಎಂ. ಎ ಪರೀಕ್ಷೆಯಲ್ಲಿಯೂ ತೇರ್ಗಡೆಯಾಗಿದ್ದಾರೆ.

— ರಾಣೆ ಜಿಲ್ಲಾ ಲೋಕಲ್ ಬೋರ್ಡಿನವರು ನಾ. ಜಮನಾದಾಸ ಮೆಹತಾ ಇವರಿಗೆ ಮಾನಪತ್ರವನ್ನು ಕೊಡಬೇಕೆಂದು ನಿರ್ಧರಿಸಿ ಅದಕ್ಕಾಗಿ ೧೦೦ ರೂ. ಗಳನ್ನು ವೆಚ್ಚಮಾಡಲು ಗೊತ್ತು ಮಾಡಿದ್ದಾರೆ.

—ದಾರ್ಜಿಲಿಂಗ ಎಂಬಲ್ಲಿ ಬಂಗಾಲದ ಗವ್ಹರ್ನರರಾಗಿದ್ದ ಸರ್. ಜಾನ್ ಆಂಡರಸನ್ ಎಂಬುವವರನ್ನು ಕೊಲೆ ಮಾಡಲು ಪ್ರಯತ್ನಿಸಿದ್ದ ರವೀಂದ್ರ ಬನರ್ಜಿ ಎಂಬ ವಿದ್ಯಾರ್ಥಿಗೆ ಅಂದಮಾನದಲ್ಲಿರುವ ಶಿಕ್ಷೆಯಾಗಿತ್ತು. ಈಗ ಆತನನ್ನು ಅಲ್ಲಿಂದ ಬಿಡುಗಡೆ ಮಾಡಿ ಇಂಗ್ಲೆಂಡಿಗೆ ವಿದ್ಯಾಭ್ಯಾಸಕ್ಕೆ ಕಳುಹಿಸುವವರಾಗಿದ್ದಾರೆ.

ಭಾರತಮಂತ್ರಿಗಳ ಮತ್ತೊಂದು ಹೇಳಿಕೆ.

ಗಾಂಧೀಜಿಯವರ ಕೇಳಿಕೆ ಅಶಕ್ಯವಾದುದು.

ಗವ್ಹರ್ನರರಿಗೂ ಮಂತ್ರಿ ಮಂಡಲಿಗೂ ಭಿನ್ನಾಭಿಪ್ರಾಯ ಬಂದರೆ ಮಂತ್ರಿಗಳನ್ನು ತೆಗೆದು ಹಾಕುವುದಾಗಿ ವಚನ ಕೊಡದಿದ್ದರೆ ಅವರಿಂದ ರಾಜಿನಾಮೆ ತೆಗೆದುಕೊಳ್ಳುತ್ತೇವೆಂದಾದರೂ ವಚನ ಕೊಡಲೆಂದು ಮೊನ್ನೆ ಗಾಂಧೀಜಿಯವರು ತಿಳಿಸಿದ್ದಾರಷ್ಟೆ. ಅದೂ ಕೂಡಾ ಶಕ್ಯವಿಲ್ಲವೆಂದೇ ಭಾರತಮಂತ್ರಿಗಳಾದ ಲಾರ್ಡ ಝೆಟಲಂಡರವರು ಕಾಮನ್ಸ ಸಭೆಯಲ್ಲಿ ಹೇಳಿದರು.

ಕಳೆದ ೮ ನೆಯ ತಾರೀಖಿನ ದಿವಸ ಕಾಮನ್ಸ ಸಭೆಯು ಸೇರಿದಾಗ ಲಾರ್ಡ ಲಾಯಿಡ್ ಮತ್ತು ಲಾರ್ಡ ಲೊಧಿಯನ್ ಇವರು ಪ್ರಸ್ತಾಪಿಸಿದ ಸಂಗತಿಗಳನ್ನು ಕುರಿತು ಭಾರತಮಂತ್ರಿಗಳು ಈ ಪ್ರಕಾರ ವಿವೇಚಿಸಿದರು.—

ಪ್ರಾಂತಿಕ ಮಂಡಲದ ಹೊಣೆಗಾರಿಕೆ.

"೧೯೩೫ನೆಯ ಇಸವಿ ಶಾಸನದ ಮುಖ್ಯಭಾಗವೆಂದರೆ ಲೋಕನಿಯುಕ್ತ ಪ್ರಾಂತಿಕ ಮಂಡಲದಕಡೆಗೆ ಪಾರ್ಲಮೆಂಟ ತನ್ನ ಹೊಣೆಗಾರಿಕೆಯನ್ನು ವಹಿಸಿದ್ದು. ಕೆಲವು ಸಂಗತಿಗಳ ವಿನಾ ಉಳಿದೆಲ್ಲ ವಿಷಯಗಳಲ್ಲಿಯೂ ಗವ್ಹರ್ನರರು ಮಂತ್ರಿಮಂಡಲದ ಸಲಹೆಯ ಪ್ರಕಾರವೇ ನಡೆಯಬೇಕಾಗಿ ಗವ್ಹರ್ನರರಿಗೆ ತಿಳಿಸಿದ ಆಜ್ಞಾಪತ್ರದಲ್ಲಿ ಸ್ಪಷ್ಟವಾಗಿಹೇಳಿದೆ. ಆದಕಾರಣ ಮಂತ್ರಿಮಂಡಲವು ಪಾರ್ಲಮೆಂಟಗೆ ಹೊಣೆಯಾಗಿರದೆ ಪ್ರಾಂತಿಕ ಶಾಸನಮಂಡಲಕ್ಕೇನೇ ಹೊಣೆಯಾಗಿದೆ.

ಪಾರ್ಲಮೆಂಟ್ ಯಾವಪ್ರಕಾರ ಪ್ರಾಂತಿಕ ಸರಕಾರದಮೇಲಿನ ತನ್ನ ಅಧಿಕಾರವನ್ನು ಕಳೆದುಕೊಂಡಿದೆಯೋ ಅದೇಪ್ರಕಾರ ಪ್ರಾಂತಿಕ ಸರಕಾರದ ನಡವಳಿಕೆಯ ಸಂಬಂಧವಾಗಿ ಪ್ರಶ್ನೋತ್ತರಗಳನ್ನು ಮಾಡುವ ತನ್ನ ಅಧಿಕಾರವನ್ನೂ ಕಳೆದುಕೊಂಡಿದೆ. ಆದಕಾರಣ ಪಾರ್ಲಮೆಂಟನಲ್ಲಿ ಆ ಸಂಬಂಧವಾಗಿ ಮಾಡಲ್ಪಡತಕ್ಕ ಪ್ರಶ್ನೆಗಳಿಗೆ ಪ್ರಾಂತಿಕಸರಕಾರದಿಂದ ಉತ್ತರಗಳನ್ನು ತರಿಸಲು ನಾನು ಅಧಿಕಾರವುಳ್ಳವನಾಗಿಲ್ಲ. ಹಿಂದುಸ್ಥಾನದ ಪ್ರಾಂತಿಕ ಮಂತ್ರಿಗಳು ತಾವು ಆ ವಿಷಯವನ್ನು ತಿಳಿಸುವದಿಲ್ಲವಾಗಿ ಹೇಳಲು ಕೂಡಾ ಅಧಿಕಾರವುಳ್ಳವರಾಗಿದ್ದಾರೆ. ಪಾರ್ಲಮೆಂಟ್ ಗವ್ಹರ್ನರರ ಕಡೆಗೆ ವಹಿಸಿರತಕ್ಕ ವಿಶೇಷಾಧಿಕಾರದ ಮಟ್ಟಿಗೇನೇ ಅದು ಪ್ರಶ್ನೋತ್ತರಗಳನ್ನು ನಡೆಯಿಸಲು ಅಧಿಕಾರವುಳ್ಳದ್ದಾಗಿದೆ.

ಗವ್ಹರ್ನರರು ವಿಶೇಷಾಧಿಕಾರವನ್ನು ಉಪಯೋಗಿಸಿದರೆ ಅಥವಾ ಉಪಯೋಗಿಸದಿದ್ದರೆ ಅವರ ಆ ಕೃತಿಯು ಪಾರ್ಲಮೆಂಟನ ಹೊಣೆಗಾರಿಕೆಗೆ ಸಂಬಂಧಪಟ್ಟದ್ದಾಗಿರುವುದರಿಂದ ಅಂಥ ಪ್ರಶ್ನೋತ್ತರಗಳೇನಾದರೂ ಇದ್ದರೆ ಅವುಗಳ ಸಂಬಂಧವಾಗಿ ಪ್ರಸ್ತಾಪಿಸಲು ನಾನು ಸಿದ್ಧನಿದ್ದೇನೆ.

ಆಶ್ವಾಸನವು ಏಕೆ ಶಕ್ಯವಿಲ್ಲ ?

ಯಾವುದೊಂದುಜಗಳಕ್ಕೆ ಇಬ್ಬರು ಬೇಕಾಗುತ್ತದೆ. ಗವ್ಹರ್ನರರ ಮತ್ತು ಮಂತ್ರಿಗಳ ಭಿನ್ನಾಭಿಪ್ರಾಯದ ಹೊಣೆಗಾರಿಕೆಯು ಇಬ್ಬರಿಗೂ ಸಂಬಂಧಪಟ್ಟದ್ದಾಗಬಹುದು. ಗವ್ಹರ್ನರರು ತಮ್ಮ ವಿಶೇಷಾಧಿಕಾರವನ್ನು ಹೇಗೆ ಉಪಯೋಗಿಸಬೇಕೆಂಬ ವಿಷಯದಲ್ಲಿ ಮಂತ್ರಿಗಳು ಹೇಳುವ ಅಭಿಪ್ರಾಯಕ್ಕನುಗವ್ಹರ್ನರರಿಗೆ ಅವರ ಹೇಳಿಕೆಯಂತೆ ನಡೆಯಲು ಶಕ್ಯವಿಲ್ಲದಂಥ ಸ್ಥಿತಿ ಸಂಭವಿಸಿದ್ದಕ್ಕೂ ಹೊಣೆಗಾರರು ಯಾರೆಂದು ನಿರ್ಣಯಿಸಬೇಕು? ಇಂಥ ಸಂದರ್ಭದಲ್ಲಿ ಇಬ್ಬರೂ ಹೊಣೆಗಾರರಾಗುತ್ತಾರೆ. ಇಂಥಪ್ರಸಂಗದಲ್ಲಿ ಮಂತ್ರಿಗಳು ರಾಜಿನಾಮೆಯನ್ನು ಕೊಡಲೇಬೇಕೆಂದು ಗೊತ್ತುಮಾಡುವುದು ಜಾಣತನದ ಲಕ್ಷಣವಲ್ಲ.

ಗವ್ಹರ್ನರರಿಗೆ ಆಜ್ಞಾಪಿಸಿರುವ ನಿಯಮಗಳಲ್ಲಿಯೇ ಈಗ ಗಾಂಧೀಜಿಯವರು ಹೇಳುವಂತೆ ಮುಂಚೆಯೇ ಸೂಚಿಸಬಹುದಾಗಿತ್ತು. ಆದರೆ ಅಲ್ಲಿ ಹಾಗೆ ಹೇಳಿಲ್ಲ. "ಗವ್ಹರ್ನರರ ಮುಂದೆ ವಿಶೇಷಾಧಿಕಾರದ ಪ್ರಶ್ನೆಬಂದಾಗ ಅವರು ಹೇಗೆ ವರ್ತಿಸಬೇಕೆಂಬುದು ಅವರ ಇಷ್ಟಕ್ಕೇನೇ ಸಂಬಂಧಪಟ್ಟದ್ದಾಗಿದೆ." ಎಂದೇ ಸ್ಪಷ್ಟವಾಗಿ ತಿಳಿಸಿದೆ.

ಗವ್ಹರ್ನರರಿಗೂ ಮಂತ್ರಿಗಳಿಗೂ ಭಿನ್ನಾಭಿಪ್ರಾಯ ಬಂದಮಾತ್ರದಲ್ಲಿ ಮಂತ್ರಿಗಳನ್ನು ತೆಗೆದು ಹಾಕಲೇಬೇಕೆಂದು ನಿರ್ಬಂಧಗೊಳಿಸುವುದು ಯುಕ್ತವಲ್ಲ. ಅಂಥ ಭಿನ್ನಾಭಿಪ್ರಾಯದ ಮಂತ್ರಿಗಳನ್ನು ಇಟ್ಟುಕೊಂಡು ಕೂಡಾ ಏಕಾಭಿಪ್ರಾಯದ ವಿಷಯಗಳನ್ನು ಅವರಸಂಗಡ ಕೂಡಿ ನಡೆಯಿಸಲು ಗವ್ಹರ್ನರರು ಇಷ್ಟವುಳ್ಳವರಾಗಿದ್ದರೆ ಹಾಗೆ ಕೂಡಾ ಅವರು ನಡೆಯಲೆಂದೇ ಆ ವಿಷಯವನ್ನು ಖಂಡಿತುಂಡಾಗಿ ಹೇಳದೆ ಗವ್ಹರ್ನರರ ಇಷ್ಟಕ್ಕೇನೇ ಬಿಟ್ಟದ್ದಾಗಿದೆ. ಹೀಗಿರುವಾಗ ಭಿನ್ನಾಭಿಪ್ರಾಯವುಂಟಾದರೆ ಹೀಗೆಯೇ ಮಾಡಬೇಕೆಂದು ಆಶ್ವಾಸನದಿಂದ ಕಟ್ಟಲ್ಪಡಲು ಹೇಗೆ ತಾನೆ ಶಕ್ಯ?

ಬ್ಯಾ. ಸಾವರಕರರ ಸನ್ಮಾನ.

ಈ ತಿಂಗಳ ಕೊನೆಯ ವಾರದಲ್ಲಿ ಬ್ಯಾರಿಸ್ಟರ್ ಸಾವರಕರರು ಪುಣೆಗೆ ಹೋಗುವವರಿದ್ದಾರೆ. ಅಲ್ಲಿ ಇವರ ಸ್ವಾಗತದ ಸಿದ್ಧತೆಗಾಗಿ ಈಗಲೇ ಒಂದು ಸ್ವಾಗತಮಂಡಲವು ಏರ್ಪಟ್ಟಿದೆ.

ಹಿಂದುಸೇವಾಸಂಘದವರಿಂದ ತಾ. ೨೭ ನೆಯ ದಿವಸ ಸ್ಪೃಶ್ಯಾಸ್ಪೃಶ್ಯ ಎಲ್ಲ ಹಿಂದುಗಳ ಒಂದು ಪ್ರಚಂಡ ಸಹಭೋಜನದ ಸಮಾರಂಭವು ಬ್ಯಾ. ಸಾವರಕರರ ಪ್ರಾಮುಖ್ಯತೆಯಲ್ಲಿ ಜರುಗುವುದು. ಸಹಭೋಜನಕ್ಕೆ ಬರುವವರು, ನಾಲ್ಕು ಆಣೆಗಳನ್ನು ಕೊಡಬೇಕಾಗುವುದು. ಆದಿನ ಪ್ರಾತಃಕಾಲ ೯ ಗಂಟೆಗೆ ಬ್ಯಾ. ಸಾವರಕರರು "ಹಿಂದುಸಂಘಟನೆ ಮತ್ತು ಜಾತಿಭೇದನಿವಾರಣೆ" ಎಂಬ ವಿಷಯವಾಗಿ ವ್ಯಾಖ್ಯಾನ ಮಾಡುವರು. ಅನಂತರ ಸಹಭೋಜನ ಪ್ರಾರಂಭವಾಗುವುದು.

—ಬಾರ್ಶಿ ತಾಲೂಕು ರಾಜಕೀಯ ಪರಿಷತ್ತು ನಾಶಿಕದ ಕಾಂಗ್ರೆಸ್ ಕಾರ್ಯನಿರ್ವಾಹಕರಾದ ಶ್ರೀ ಗೋವಿಂದರಾವ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಜರುಗಿತು. ಹುಲ್ಲಿನ ಒಂದು ಆನೆಯನ್ನು ಮಾಡಿ ಅದನ್ನು ಒಂದು ಬಂಡಿಯ ಮೇಲೆ ಕಟ್ಟಿ ಅದರ ಮೇಲೆ ಅಂಬಾರಿಯನ್ನಿಟ್ಟು ಅದರಲ್ಲಿ ಅಧ್ಯಕ್ಷರನ್ನು ಕೂಡ್ರಿಸಿ ಮೆರವಣಿಗೆ ಮಾಡಿದರು.

— ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಗಳಾದ ಡಾ. ಅಶ್ರಫ ಇವರು ಪಂಜಾಬ ಪ್ರಾಂತದಲ್ಲಿ ಸಂಚರಿಸಿ ಮುಸಲ್ಮಾನರು ಕಾಂಗ್ರೆಸ್ಸಿನಲ್ಲಿ ಸೇರುವಂತೆ ಪ್ರಯತ್ನಿಸುವರು.

— ಸ್ಪೇನ ದೇಶದ ದೊಂಬಿಯು ಕಳೆದವಾರ ಹೆಚ್ಚಾಗಿದೆ. ದೊಂಬೆಗಾರರಿಗೆ ಜಯವಾಗುತ್ತಲಿದೆ. ದೊಂಬೆಗಾರರು ರಾಜಧಾನಿಯಮೇಲೆ ೧|| ತಾಸಿನಲ್ಲಿ ೪೦೦ ಬಾಂಬುಗಳನ್ನು ಎಸೆದು ಬಹು ನಷ್ಟವನ್ನು ಉಂಟುಮಾಡಿದರು.

ವಿದ್ಯಾರ್ಥಿಗಳಿಗೆ ಸುಸಂಧಿ! ವಿದ್ಯಾರ್ಥಿಗಳಿಗೆ ಸುಸಂಧಿ!

ಕರ್ನಾಟಕ ಆಯುರ್ವೇದ

ವಿದ್ಯಾಪೀಠ ಬೆಳಗಾಂವ

(ಉತ್ತೀರ್ಣವಾಗಿ ಹಳ್ಳಿಗಳಲ್ಲಿ ಧಂದೆ ನಡಿಸುವವರಿಗೆ ಸರಕಾರದಿಂದ ಸಹಾಯದ ಆಶ್ವಾಸನ !!!)

ಹಳ್ಳಿಪಳ್ಳಿಗಳಲ್ಲಿಯ ಬಡ ಜನರಿಗೆ ಯೋಗ್ಯ ಔಷಧಿಸಹಾಯ ಮತ್ತು ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಉಪಜೀವನದ ಸಾಧನ ಸಿಗುವದು ಸಧ್ಯಃ ಬಹಳ ಕಠಿಣವಾಗಿವೆ. ಇವೆರಡೂ ಕೊರತೆಗಳನ್ನು ದೂರಮಾಡಲಿಕ್ಕೆಂದು ಬೆಳಗಾಂವಿಯಲ್ಲಿಯ ಲಿಂಗರಾಜ ಕಾಲೇಜಿನಲ್ಲಿ ಕಳೆದ ಜೂನ ೧೯೩೩ರಿಂದ ಆಯುರ್ವೇದ ವಿದ್ಯಾಪೀಠವನ್ನು ಸ್ಥಾಪಿಸಿ ಭಿಷಗ್ವರ ವರ್ಗದಲ್ಲಿ ಅಭ್ಯಾಸ ಮಾಡುವವರಿಗೆ ಆಯುರ್ವೇದ ಹಾಗೂ ಅದರ ಜೊತೆಯಲ್ಲಿ ಅವಶ್ಯಬಿದ್ದಷ್ಟು ಆಂಗ್ಲ ವೈದ್ಯಕಿಯ ಜ್ಞಾನ ಕೊಡಲಾಗುತ್ತಿದೆ ಅಲ್ಲದೆ ಜೂನ ೧೯೩೩ರಿಂದ ನಿಖಿಲ ಭಾರತ ಆಯುರ್ವೇದಮಹಾಮಂಡಲದ ನಿಯಮುಗಳಿಗೆ ಅನುಸರಿಸಿ ಭಿಷಕವರ್ಗವೂ ಸುರುವು ಮಾಡಲಾಗಿದೆ ಇಷ್ಟೇ ಅಲ್ಲದೆ ಭಿಷಕ ವರ್ಗದ ವಿದ್ಯಾರ್ಥಿಗಳಿಗೂ ಸಹಾ ಪಾಶ್ಚಿಮಾತ್ಯ ಶಾಸ್ತ್ರದ ವಿಷಯ ಅವಶ್ಯಬಿದ್ದಷ್ಟು ಉಪಯುಕ್ತ ಪರಿಚೆಯುವನ್ನು ಸ್ವಭಾಷೆಯಲ್ಲಿ ಕೊಡಲಾಗುತ್ತಿದ್ದು ಅವರಿಗೂ ವಿದ್ಯಾಪೀಠದಕಡೆಯಿಂದ ಒಂದು ಪದವೀ ಕೊಡುವ ವ್ಯವಸ್ಥೆ ಮಾಡಲಾಗಿದೆ.

ವಿದ್ಯಾರ್ಥಿಗಳಿಗೆ ಬರೇ ಪುಸ್ತಕೀ ಶಿಕ್ಷಣವನ್ನಷ್ಟೇ ಕೊಡದೆ ಪ್ರತ್ಯಕ್ಷ ಶಿಕ್ಷಣಕ್ಕಾಗಿ ವೈದ್ಯನಾಥ ಮತ್ತು ಕಣಬರಗಿ ಗುಡ್ಡಗಳು ಬೆಳಗಾಂವಿ ಮುನಸಿಪಾಲಿಟಿಯು ಆರ್ಯವೈದ್ಯಕೀ ದವಾಖಾನೆ, ವಿದ್ಯಾಪೀಠದ ಪ್ರಯೋಗಶಾಲೆ, ದವಾಖಾನೆ, ಮತ್ತು ವನಸ್ಪತಿ ಉದ್ಯಾನ ಇವುಗಳ ಉಪಯೋಗ ಮಾಡಲಾಗುತ್ತದೆ.

ಭಿಷಗ್ವರ ಮತ್ತು ಭಿಷಕ ವರ್ಗಗಳ ಕೋರ್ಸ ಮತ್ತು ಫೀ ಅನುಕ್ರಮವಾಗಿ ೩|೨ವರ್ಷ ಪ್ರವೇಶ ಫೀ ೫|೨ ಮತ್ತು ಪ್ರತಿತಿಂಗಳ ಫೀ ೨|೧ ರೂಪಾಯಿ ಹೀಗೆ ಇರುತ್ತದೆ.

ಸಂಸ್ಕೃತಸಹಿತ ಮ್ಯಾಟ್ರಿಕ್ಯುಲೆಟೆಡ್ ಮತ್ತು ಅಂಡರ ಗ್ರ್ಯಾಜುಏಟ ಇವರನ್ನು ಅಥವಾ ವಿದ್ಯಾಪೀಠದ ಇಂಗ್ಲಿಷ ಮತ್ತು ಸಂಸ್ಕೃತ ವಿಷಯುಗಳ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣವಾದವರನ್ನು ಭಿಷಗ್ವರ ವರ್ಗದಲ್ಲಿ ಇದರಂತೆ ಮುಲಕೀಪರೀಕ್ಷೆ ಪಾಸಾದವರನ್ನು ಅಥವಾ ವಿದ್ಯಾಪೀಠದ ಭಾಷಾವಿಷಯದ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನು ಭಿಷಕ ವರ್ಗದಲ್ಲಿ ಪ್ರವೇಶ ಮಾಡುತ್ತದೆ.

ತಾ|| ೧೫-೬-೩೭ ರಿಂದ ಹೊಸವರ್ಗಗಳು ಪ್ರತಿವರ್ಷದಂತೆ ಪ್ರಾರಂಭವಾಗುತ್ತವೆ. ಅರ್ಜಿಗಳನ್ನು ಸ್ವೀಕರಿಸುವ ಕಡೇ ಅವಧಿಯು ತಾ|| ೨೮ ಜೂನ ೧೯೩೭ ಇರುತ್ತದೆ. ಲಿಂಗಾಯತ ಎಜ್ಯುಕೇಶನ ಅಸೋಸಿಏಶನ ಧಾರವಾಡ ಮುಂತಾದ ಸಂಸ್ಥೆಗಳು ಈ ವಿದ್ಯಾಪೀಠದಲ್ಲಿ ಕಲಿಯುವ ಹುಶಾರ ಮತ್ತು ಯೋಗ್ಯ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ಪ ಕೊಡುತ್ತಿದ್ದು ಶಹಾಪೂರದಲ್ಲಿಯ ಶ್ರೀ ನಾಗನೂರ ಸ್ವಾಮಿಗಳ ಫ್ರೀ ಬೋರ್ಡಿಂಗದಲ್ಲಿಯೂ ಕೆಲವು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವ ವ್ಯವಸ್ಥೆ ಅದೆ. ಇದಲ್ಲದೆ ಪಾಸ ಆದ ಮೇಲೆ ಹಳ್ಳಿಗಳಲ್ಲಿದ್ದು ಲೋಕಸೇವಾ ಮಾಡುವವರಿಗೆ ಸಹಾಯಕೊಡುವ ವಿಷಯ ವಿಚಾರಮಾಡುವ ಆಶ್ವಾಸನವೂ ಸರಕಾರದ ಕಡೆಯಿಂದ ಸಿಕ್ಕಿದೆ ಅದರ ಯೋಗ್ಯಲಾಭವನ್ನು ವಿದ್ಯಾರ್ಥಿಜನರು ಹೊಂದುವರೆಂದು ಆಶೆ ಇದೆ. ಆದ್ದರಿಂದ ಬೇಕಾದವರು ಕಡೇ ಅವಧಿಯೊಳಗಾಗಿ ಮುಟ್ಟುವಂತೆ ಕೆಳಗಿನ ವಿಳಾಸಕ್ಕೆ ಅರ್ಜಿ ಮಾಡಬೇಕು. ಹೆಚ್ಚಿನ ವಿಷಯಕ್ಕೆ ಪತ್ರವ್ಯವಹಾರ ಮಾಡುವದು.

ಪ್ರಿನ್ಸಪಾಲ
ಕರ್ನಾಟಕ ಆಯುರ್ವೇದ ವಿದ್ಯಾಪೀಠ ಬೆಳಗಾಂವ

---

೫೦ ರೂಪಾಯಿ ಬಹುಮಾನ.

:(:o:):

ಅಲಕ್ಷ್ಯಮಾಡಬೇಡಿರಿ ತ್ವರೆಮಾಡಿರಿ.

ನಿಮ್ಮ ಮಕ್ಕಳ ಬೇನೆಗಳಿಗೆ ಸರಿಯಾದ ಔಷಧ ದೊರೆಯದೆ ಇದ್ದದ್ದರಿಂದ ಕುಪ್ಪೆತೊಪ್ಪಲ, ತುಂಬಿ ತೊಪ್ಪಲ, ಆಡು ಮುಟ್ಟದ ಬಳ್ಳಿಯ ಬೇರು. ಎಲೆಗಳ ರಸ, ಮೆಣಸು, ಬೆಳ್ಳುಳ್ಳಿ, ಲವಂಗ,ಬೋಳ ಇವೇ ಮೊದಲಾದ ಉಗ್ರ ರಸಗಳನ್ನ ಕುಡಿಸಿ ಮಕ್ಕಳನ್ನು ವೃಥಾ ಮೃತ್ಯುವಿನ ಬಾಯಿಗೆ ತುತ್ತುಮಾಡುತ್ತಿದ್ದೀರಿ. ಅಂಥಾ ಉಗ್ರ ರಸಗಳನ್ನು ಉಪಯೋಗಿಸದೆ ಸುಪ್ರಸಿದ್ಧವಾದ

ಕಲಕತ್ತಾ ಡಾಕ್ಟರ್ ಎ ಎಸ್. ಆರ್ ಗೋಪಾಲ್ ಆ್ಯಂಡ್ ಸನ್ಸ್ ದಾವಣಗೆರೆ ಇವರ

ಕ್ಯೂರ್ ನಂ ೧ ಬ್ರೌನ್ ಆಯಿಲ್

ಈ ಕೆಳಗೆ ಕಂಡ ಬೇನೆಗಳಿಗೆ ಉಪಯೋಗಿಸಿರಿ. ಪಕ್ಕೇನೋವು, ಗಂಟಲಲ್ಲಿ ಕಫ ಕಟ್ಟಿಕೊಂಡು ಗೊರ್ ಗೊರ್ ಎನ್ನುವದು,ಶರೆರೋಗ (ಬಿಲ್ಕುತ್ತ), ಹೂಟ್ಟೆ ದೊಡ್ಡದಾಗಿ ಕೈಕಾಲು ಸಣಬದಾಗಿರುವ (ಲಿವರ್ ಮತ್ತು ಸ್ಪ್ಲೀನ್) ರೋಗಗಳಿಗೆ ಹೊಟ್ಟೆಯಲ್ಲಿರುವ ಕ್ರಿಮಿಗಳಿಗೂ ಸೀತ ಸಂಬಂದವಾದ ಜ್ವರಗಳಿಗೂ ಒಟ್ಟಿಗೆ ಬಾಲಗ್ರಹ ದೋಷಗಳೆಲ್ಲದರಲ್ಲೂ ಇನ್ನೂ ಅನೇಕ ತರಹ ರೋಗಗಳಿಗೆ ಉಪಯೋಗಿಸಬಹುದು.

ಬಡವರಾದಿಯಾಗಿ ಎಲ್ಲರೂ ಈ ಔಷಧವನ್ನು ಉಪಯೋಗಿಸಿ ಮಕ್ಕಳನ್ನು ಸಂರಕ್ಷಿಸಿಕೊಳ್ಳಲೆಂಬ ಉದ್ದೇಶದಿಂದ ಫಕ್ತ ಔಷಧದ ಕಿಮ್ಮತ್ತು ಮಾತ್ರ ಬಾಟ್ಲಿಗೆ ೦-೮-೦ ಆಣೆ ಪ್ಯಾಕಿಂಗ್ ಪೋಷ್ಟೇಜ್ ಖರ್ಚು ಬೇರೆ.

ಕ್ಯೂರ್ ನಂ.೨೩ ಬ್ಲ್ಯೂಲಾಟ್ ಶೀತ ಹೆಚ್ಚಾಗಿ ಕಫವಿರುವಾಗ ಎದೆಗೆ ಹಚ್ಚುವ ಔಷಧ ಕ್ರಯ ಬಾಟ್ಲಿಗೆ ೦-೬-೦ ಆಣೆ

ಈ ಔಷಧ ಗುಣಕಾರಿಯಲ್ಲವೆಂದು ಸಿದ್ಧಮಾಡಿಕೊಟ್ಟವರಿಗೆ ಮೇಲ್ಕಂಡ ರುಪಾಯಿಗಳನ್ನು ಬಹುಮಾನ ಕೊಡಲ್ಪಡುತ್ತದೆ. ಪರಸ್ಥಳದ ಆರ್ಡರುಗಳಿಗೆ ಅಡ್ವಾನ್ಸು ಇಲ್ಲದೆಯೂ ಮತ್ತು ಒಂದು ರೂಪಾಯಿಗಿಂತ ಕಡಿಮೆ ವ್ಹಿ ಪಿ ಕಳಿಸಲಾಗುವದಿಲ್ಲ ಇನ್ನೂ ಅನೇಕ ರೋಗಗಳಿಗೆ ಫ್ರೀಯಾಗಿ ಕೊಡುವ ನಮ್ಮ ಕ್ಯಾಟಲಾಗ್ ತರಿಸಿ ನೋಡಿರಿ.

ಎಲ್ಲಾ ಕಡೆಯಲ್ಲಿಯೂ ನಮ್ಮ ಔಷಧ ಮಾರಲಿಕ್ಕೆ ಏಜಂಟರು ಬೇಕು.

ನಮ್ಮ ಏಜಂಟರು:- ಬಿಜಾಪೂರ ಡಿಸ್ಟ್ರಿಕ್ಟಿಗೆ ವಿರುಪಾಕ್ಷಪ್ಪಾ ಮೆಂತೇದ ಗುಳೇದಗುಡ್ಡ.

ದಿ ಬ್ರೌನ್ ಆಯಿಲ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ ದಾವಣಗೆರೆ (ಮೈಸೂರ ಸ್ಟೇಟ್).

ಲೋಕಮತ ದಿನಪತ್ರಿಕೆ.

ಉಜ್ವಲ ರಾಷ್ಟ್ರೀಯ ದಿನಪತ್ರಿಕೆಯು.

೧ ದೇಶ ವಿದೇಶಗಳ ಬಿಸಿ ಬಿಸಿ ಸುದ್ದಿಗಳು.

೨ ನುರಿತ ಲೇಖಕರ ಮನನೀಯ ಲೇಖನಗಳು

೩ ವಿಚಾರ ಕ್ರಾಂತಿಯ ಲೇಖನಗಳು.

೪ ಒಕ್ಕಲತನ, ಸಹಕಾರ ಗ್ರಾಮೋದ್ಯೋಗ, ಖಾದಿ, ಕೈಗಾರಿಕೆಗಳು, ಆರೋಗ್ಯ ಶಿಕ್ಷಣ, ಹರಿಜನೋದ್ಧಾರ— ಇವೇ ಮೊದಲಾದ ಎಲ್ಲ ವಿಷಯಗಳು.

೫ ವ್ಯಾಪಾರ, ವ್ಯಾಪಾರ ವಿಷಯಕ ಮಾಹಿತಿ ಪೇಟಿ ಧಾರಣೆಗಳು.

೬ ಧಾರ್ಮಿಕ, ಸಾಮಾಜಿಕ ಪ್ರಶ್ನೆಗಳ ಮೇಲೆ ವಿಮರ್ಶಾತ್ಮಕ ಲೇಖನಗಳು.

೭ ಕರ್ನಾಟಕ ಏಕೀಕರಣ, ಕನ್ನಡ ಸಂಸ್ಕೃತಿ. ಸಾಹಿತ್ಯ, ಇತಿಹಾಸ, ಪರಂಪರೆ ಇವುಗಳು.

೮ ನಿತ್ಯ ಭವಿಷ್ಯ. ವಾರದ ಭವಿಷ್ಯ ಮೊದಲಾದವುಗಳು.

೯ ಪ್ರಮುಖ ಮುಂದಾಳುಗಳ ಭಾವಚಿತ್ರಗಳು, ವಿಶಿಷ್ಟ ಪ್ರಸಂಗದ ಚಿತ್ರಗಳು ಮನೋರಂಜಕವಾದ ವಿನೋದ ಚಿತ್ರಗಳನ್ನೊಳಗೊಂಡ ವಿಚಾರ ಪರಿಪೂರ್ಣತವಾದ ಲೇಖನಗಳು, ಭಾರತದ ಕಾಂಗ್ರೆಸ್ ಚಟುವಟಿಕೆಗಳು, ಕರ್ನಾಟಕದೊಳಗಿನ ಸಕಲ ಸಾರ್ವಜನಿಕ ಸಂಸ್ಥೆಗಳ ಕಾರ್ಯಕಲಾಪಗಳು, ಅವುಗಳ ವಿಮರ್ಶಾತ್ಮಕ ಲೇಖನಗಳು.

೧೦ ಅಲ್ಲದೆ, ಇನ್ನೂ ಅನೇಕ ಮನೋರಂಜಕವಾದ ಮತ್ತು ಬೋಧಪ್ರದವಾದ ಲೇಖನಗಳು, ಸುದ್ದಿ ಸಮಾಚಾರಗಳು.

ಇವನ್ನೆಲ್ಲ ಓದಲೇ ಬೇಕಾಗಿದ್ದರೆ, ಇಂದೇ "**ಲೋಕಮತ**" ದಿನಪತ್ರಿಕೆಯನ್ನು ತರಿಸಿರಿ.

ವ್ಯಾಪಾರಸ್ಥರಿಗೊಂದು ಸುಸಂಧಿ.

೧ ಕನ್ನಡ ನಾಡಿನ ಮೂಲೆಮೂಲೆಗೂ ನಿಮ್ಮ ಸರಕುಗಳು ಹೋಗಬೇಕೆ ?

೨ ಮುಂಬಯಿಯಿಂದ ಬೆಂಗಳೂರಿನ ವರೆಗೂ, ಮಂಗಳೂರಿನಿಂದ ಹೈದರಾಬಾದಿನ ವರೆಗೂ ನಿಮ್ಮ ಸರಕುಗಳು ಪ್ರಸಾರವಾಗಬೇಕೆ ?

೩ ಪಟ್ಟಣಗಳಿಗೂ, ಹಳ್ಳಿಗಳಿಗೂ ನಿಮ್ಮ ಸರಕುಗಳು ಹೋಗಿ ಮುಟ್ಟಬೇಕೆ ?

ಹಾಗಾದರೆ,

ಹುಬ್ಬಳ್ಳಿ "**ಲೋಕಮತ**" ಪತ್ರಿಕೆಯಲ್ಲಿ ಜಾಹಿರಾತು ಕೊಟ್ಟು ಲಾಭ ಪಡೆಯಿರಿ.

ಭರದಿಂದ ಬೆಳೆಯಹತ್ತಿದೆ.

ಯುನೈಟೆಡ್ ಕರ್ನಾಟಕ ಇನ್ಸುರನ್ಸ ಕಂಪನಿ ಲಿಮಿಟೆಡ್, ಧಾರವಾಡ.

ಇದು ಇತ್ತಿತ್ತಲಾಗಿ ಭರದಿಂದ ಬೆಳೆಯಹತ್ತಿದೆ.

ಕರ್ನಾಟಕದೊಳಗಿನ ಯಾವತ್ತು ಸಮಾಜದವರು ಒಕ್ಕಟ್ಟಿನಿಂದ ಕೆಲಸ ಮಾಡಿದರೆ
ನಾ ನೀ ಅನ್ನುವಷ್ಟರಲ್ಲಿ ಮಹತ್ಕಾರ್ಯಗಳಾಗುವವು.

ಜನರು ಸಂಘಟಿತವಾಗಿ ಕೆಲಸ ಮಾಡಿದರೆ **ಮಹಾ ಶಕ್ತಿಯು** ಉತ್ಪನ್ನವಾಗುವದು. ಆದ್ದರಿಂದ ಈ ತತ್ವದ ಉಪಯೋಗವನ್ನು ಯುನೈಟೆಡ್ ಕರ್ನಾಟಕ ಇನ್ಸುರನ್ಸ ಕಂಪನಿಯನ್ನು ಬೆಳೆಯಿಸುವ ಕೆಲಸದಲ್ಲಿ ಉಪಯೋಗ ಮಾಡಿ ತೋರಿಸಬೇಕೆಂದ ಮಿ. ಎಮ್. ಎಸ್. **ಕೇಸರೀ**, ಬಿ. ಎ. ಎಲ್. ಎಲ್. ಬಿ ವಕೀಲ, ಧಾರವಾಡ ಇವರು ಟೊಂಕ ಕಟ್ಟಿ ಕೆಲಸಕ್ಕೆ ಸುರುವು ಮಾಡಿದ್ದಾರೆ. ಇದರ ಫಲವಾಗಿ ಯುನೈಟೆಡ್ ಕರ್ನಾಟಕವು ಈಗಾಗಲೇ ಭರದಿಂದ ಬೆಳೆಯಲಿಕ್ಕೆ ಹತ್ತಿದೆ.

ಮಿ. ಕೇಸರೀ ವಕೀಲರು ಒಡೆಯರಾಗಿರುವ **ಕೇಸರೀ ಆ್ಯಂಡ ಕಂಪನಿ** ಧಾರವಾಡ ಇವರ ಕಡೆಗೆ ಕಂಪನಿಯ ಬೆಳವಣಿಗೆಯನ್ನು ಮಾಡುವ ಕೆಲಸವು ಒಪ್ಪಿಸಲ್ಪಟ್ಟಿದೆ.

ಕರ್ನಾಟಕದ ಮುಖ್ಯ ಕಂಪನಿಯಾದ **ಯುನೈಟೆಡ್ ಕರ್ನಾಟಕ** ಕಂಪನಿಯನ್ನು ಬೆಳೆಯಿಸುವದಕ್ಕಾಗಿ ಕರ್ನಾಟಕದ ತರುಣರು ಮುಂದೆ ಬರುವರೆಂದು ಆಶಿಸುತ್ತೇವೆ.

ಹುರುಪಿನಿಂದ ಕೆಲಸ ಮಾಡುವವರಿಗೆ ಯೋಗ್ಯ ಸಂಬಳವು ಕೊಡಲ್ಪಡುವದು. **ತಿಂಗಳೊಂದಕ್ಕೆ ೧೫ ರಿಂದ ೩೦ ರೂಪಾಯಿಗಳ ವರೆಗೆ ಸಂಬಳದ ಸ್ಥಳಗಳು ತುಂಬತಕ್ಕವವೆ.**

ಕಂಪನಿಯ ಅರ್ಜಿಯ ಫಾರ್ಮುಗಳನ್ನು ತರಿಸಿಕೊಂಡು ಅರ್ಜಿಯನ್ನು ಕಳಿಸಿರಿ. ಅರ್ಜಿಯ ಫಾರ್ಮು ಬೇಕಾದವರು ನಾಲ್ಕಾಣೆಯ ಕಿಮ್ಮತ್ತಿನ ಪೋಸ್ಟಿನ ಸ್ಟಾಂಪುಗಳನ್ನು ಕಳಿಸಿ ತರಿಸಿಕೊಂಡು ತುಂಬಿ ಕಳಿಸಬೇಕು.

ಕರ್ನಾಟಕದ ಸೇವಕರಾದ, **ಕೇಸರೀ ಆ್ಯಂಡ ಕಂಪನಿ, ಧಾರವಾಡ.**

ಮುದ್ದಾದ ಅಕ್ಷರ! ಸುಲಭ ದರ!

ಶ್ರೀ ರಂಗನಾಥ ಟೈಪ್ ಫೌಂಡರಿ

ಬೆಂಗಳೂರು.

ಕನ್ನಡ ಮತ್ತು ಇಂಗ್ಲಿಷ, ಎಲ್ಲಾ ತರದ ಟೈಪುಗಳೂ ಒಳ್ಳೊಳ್ಳೇ ಬಾರ್ಡರಗಳೂ ನಮ್ಮ ಫೌಂಡರಿಯಲ್ಲಿ ತಯಾರಾಗುತ್ತವೆ.

ಒಳ್ಳೇ ಮೆಟಲ್. ಬಹು ಅಂದವಾದ ಅಕ್ಷರಗಳು. ಬಲು ಸುಲಭ ದರ ಕ್ಯಾಟಲಾಗ ತರಿಸಿಕೊಳ್ಳಿರಿ. ಒಮ್ಮೆ ಟೈಪುಗಳನ್ನು ತರಿಸಿಕೊಂಡು ಅನುಭವ ಹೊಂದಿರಿ. ಹಳೆ ಟೈಪುಗಳಿದ್ದರೆ ಸುಲಭ ಚಾರ್ಜಿಗೆ ಹೊಸದಾಗಿ ಹೊಯಿದು ಕೊಡುತ್ತೇವೆ.

ಪ್ರೊಪ್ರೈಟರ,
ಶ್ರೀ ರಂಗನಾಥ ಟೈಪ್ ಫೌಂಡರಿ
೬೭ ಕುಬೇರ ಸಾಹುಜಿ ಲೈನ್
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಶರಣ ಸಂದೇಶ

ಪತ್ರಿಕೆಯನ್ನು ಪ್ರತಿವಾರ ಓದಿದರೆ ವೀರಶೈವ ಮತತತ್ವ, ಹಿಂದು ಸಮಾಜ ಸುಧಾರಣೆ, ಹಿಂದುಸ್ಥಾನದ ರಾಜಕಾರಣ ಚೆನ್ನಾಗಿ ಗೊತ್ತಾಗುತ್ತವೆ.

ವೀರಶೈವರಲ್ಲಿ ವಿನಂತಿ.

ವೀರಶೈವ ಧರ್ಮದ ನಿಜತತ್ವವನ್ನು ತಿಳಿದುಕೊಳ್ಳಬೇಕೆಂಬುವ ಇಚ್ಛೆ ಇದ್ದರೆ, "ವೀರವಾಣಿ" ಎಂಬ ಮಾಸ ಪತ್ರಿಕೆಯನ್ನು ಇಂದೇ ತರಿಸಿಕೊಳ್ಳಿರಿ. ವಾರ್ಷಿಕ ಚಂದಾ ೧-೮-೦

ಸಂಪಾದಕರು— ಗಂಗಾಧರಪ್ಪ ತಿ. ಹೊದ್ಲೂರ.
"ವೀರವಾಣಿ" ಆಫೀಸ.
ಬಮ್ಮಪೂರಗಲ್ಲಿ **ಹುಬ್ಬಳ್ಳಿ.**

ಎಲ್ಲರೂ ಓದಲೇಬೇಕಾದ ಪುಸ್ತಕಗಳು.

ಇಕೋ, ಇಲ್ಲಿವೆ.

ಹರ್ಡೇಕರ ಮಂಜಪ್ಪನವರು ಬರೆದ ಪುಸ್ತಕಗಳು.

ಬುದ್ಧಿಯ ಮಾತು	೦-೩-೦	ಪುಲಿಕೇಶಿಯ ಚರಿತ್ರೆ	೦-೧-೬
ವೀರಶೈವ ಮತಬೋಧೆ	೦-೨-೦	ಕಚದೇವನ ಕಥೆ	೦-೧-೬
ವೀರಶೈವ ಮತತತ್ವ	೦-೪-೦	ಸ್ವಾಮಿ ವಿವೇಕಾನಂದರ ಚರಿತ್ರೆ	೦-೧-೬
ಕಾಯಕವೆ ಕೈಲಾಸ	೦-೩-೦	ಸುಕಲಾದೇವಿಯ ಕಥೆ	೦-೧-೬
ಶ್ರೀ. ಲಿಂಗರಾಜರ ಚರಿತ್ರೆ	೦-೬-೦	ಬಸವಣ್ಣನವರ ಚರಿತ್ರೆ	೦-೧-೬
ಪ್ರಭುದೇವರ ಕಥೆ	೦-೧-೬	ದಾಂಪತ್ಯ ಧರ್ಮ	೦-೩-೦
ಏಕಲವ್ಯನ ಕಥೆ	೦-೧-೬	ದೇವಯಾನಿಯ ಕಥೆ	೦-೧-೬
ಲಜಪತರಾಯರ ಚರಿತ್ರೆ	೦-೧-೬	ವಿಜಯವಾಣಿ	೦-೨-೦
ಆದಿಜನ ಸುಧಾರಣೆ	೦-೨-೦	ರಾಷ್ಟ್ರಗೀತೆ	೦-೦-೬
ಬಸವ ಬೋಧಾಮೃತ	೦-೬-೦	ಜೀವನ ರಹಸ್ಯ (ಅನ್ನದಾನೀಶ್ವರ ಕೃತ.)	೦-೧-೦
ಭಜನಾವಳಿ	೦-೧-೬	ಶುದ್ಧಿ ಮತ್ತು ಸಂಘಟನೆ	೦-೪-೦
ವೀ. ಮ. ಕಾಲನಿರ್ಣಯ (ಶ್ರೀಕಂಠಯ್ಯ ಕೃತ)	೦-೬-೦	ಸ್ಮಾರಕ ಚಂದ್ರಿಕೆ	೧-೦-೦
ವಚನಕಾರರ ಸಮಾಜರಚನೆ	೦-೨-೦	ಪ್ರಮಥಾಚಾರ ದೀಪಿಕೆ	೦-೩-೦
ವೀರಶೈವ ಏಕೀಕರಣ	೦-೦-೩	೬೩ ಪುರಾತನರ ಚರಿತ್ರೆ (ಮಿರ್ಜಿ ಕೃತ)	೨-೦-೦

ವಿಳಾಸ:- **ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ. ಪೋ. ಆಲಮಟ್ಟಿ ಜಿ. ವಿಜಾಪುರ.**

ಶರಣ ಸಂದೇಶ

ಓದಿ ಒಗೆದುಬಿಡುವ ಪತ್ರಿಕೆಯಲ್ಲ.

ಕಾದಿಟ್ಟುಕೊಂಡು ಧಾರ್ಮಿಕ, ಸಾಮಾಜಿಕ, ರಾಜಕೀಯ ವಿಷಯಗಳನ್ನು

ಕಲಿತುಕೊಳ್ಳುವ ಪತ್ರಿಕೆ.

ಹೊಸ ಪುಸ್ತಕ.

ವಚನಶಾಸ್ತ್ರ ರಹಸ್ಯ.

ಶ್ರೀಮಾನ್ ದಿವಾಕರ ರಂಗನಾಥರಾಯರು ರಚಿಸಿದ ಅದ್ವಿತೀಯ ಗ್ರಂಥ ಶ್ರೀ ಬಸವಾದಿ ವಚನಕಾರರು ಬೋಧಿಸಿದ ಧಾರ್ಮಿಕ, ಸಾಮಾಜಿಕ, ನೈತಿಕ ಸಂಗತಿಗಳೆಲ್ಲಾ ತುಲನಾತ್ಮಕವಾಗಿ ವಿವೇಚಿಸಲ್ಪಟ್ಟ ಮಹತ್ವದ ಗ್ರಂಥ ಪುಟ ೬೦೦ ಬೆಲೆ ೩ ರೂ.

ಬಸವೇಶ್ವರ ಕೆ ವಚನ.

ಭಗವಾನ್ ಬಸವಣ್ಣನವರ ಕೆಲವು ಮಹತ್ವದ ವಚನಗಳ ಹಿಂದೀ ಅನುವಾದ. ಸುಪ್ರಸಿದ್ಧ ಹಿಂದೀ ಪಂಡಿತರಾದ ಶ್ರೀಮಾನ್ ಸುಂದರಲಾಲಜಿಯವರ ಪ್ರಸ್ತಾವನೆ. ಅಚ್ಚುಕಟ್ಟಾದ ಮುದ್ರಣ. ರಾಷ್ಟ್ರೀಯ ಭಾಷೆಯಾದ ಹಿಂದೀ ಕಲಿಯಬೇಕೆನ್ನುವವರಿಗೆ ತುಂಬಾ ಸಹಾಯ. ಬೆಲೆ ೮ ಆಣೆ.

ವಿವಾಹ ಪದ್ಯಾವಳಿ.

ವಿವಾಹ ಮೊದಲಾದ ಮಂಗಳ ಕಾರ್ಯಗಳಲ್ಲಿ ಹಾಡುವ ಶುದ್ಧ ಕನ್ನಡ ಪದ್ಯಗಳ ಸಂಗ್ರಹ. ಪ್ರತಿಯೊಬ್ಬ ಹೆಣ್ಣುಮಗಳು ಪಠಿಸಲೇಬೇಕಾದ ಪುಸ್ತಕ.

೧ ಕ್ಕೆ ೨ ಆ. ೧೦ ಪ್ರತಿಗಳಿಗೆ ೧ ರೂ.

ವೀರಶೈವ ಭಜನಾಮೃತ.

ಉದ್ಗಿರಿ ವೀರಶೈವ ಸಮಾಜದವರು ಪ್ರಕಾಶಗೊಳಿಸಿದ ಹಿಂದೀ ಪದಗಳ ಸಂಗ್ರಹ. ಹೊಸ ಶೈಲಿ. ಕಿವಿಗೆ ಇಂಪಾದ ದಾಟಿ. ಬೆಲೆ. ೧ ಕ್ಕೆ ೧ ಆಣೆ.

೨೦ ಪ್ರತಿಗಳಿಗೆ ೧ ರೂ,

ಇವಲ್ಲದೆ

ನಮ್ಮಲ್ಲಿ ಶ್ರೀ ಹರ್ಡೆಕರ ಮಂಜಪ್ಪನವರಿಂದ ಬರೆಯಲ್ಪಟ್ಟ ಎಲ್ಲ ಚಿಕ್ಕ ದೊಡ್ಡ ಪುಸ್ತಕಗಳೂ ಶ್ರೀ ಹಳಕಟ್ಟಿಯವರು ಪ್ರಕಟಿಸಿದ ಎಲ್ಲ ವಚನ ಗ್ರಂಥಗಳೂ ಯಾವಾಗಲೂ ದೊರೆಯುವವು.

ವಿಳಾಸ:—

ಎಸ್. ಸಿ. ಶಿವಲಿಂಗಣ್ಣ

ಕಲ್ಯಾಣ ಕರ್ನಾಟಕ ಬುಕ್ ಡಿಪೋ

ಗುಲಬರ್ಗಾ.

೨ ನೇ ವರ್ಷದ ಯೋಜನೆ ! ಹೊಸ ವರ್ಷದ ಪ್ರಾರಂಭ !!

ಒಂದೇ ಒಂದು ವರ್ಷದಲ್ಲಿ

ಅಖಿಲ ಕರ್ನಾಟಕದ ಮನವನ್ನೆಳೆದುಕೊಂಡ

ಅರವಿಂದ ಗ್ರಂಥಮಾಲೆ.

ಸಂಪಾದಕರು:— **ಮಧುರಚೆನ್ನರು.**

ವಿಚಾರ ಪ್ರಚುರ ವಾಙ್ಮಯವನ್ನು ಒದಗಿಸುವ ಸರಸ ಸಾಹಿತ್ಯವನ್ನು ಸೂರೆಮಾಡುವ ಆರು ಪುಸ್ತಕಗಳಲ್ಲದೆ ಮೇಲೊಂದು ಕಾಣಿಕೆಯ ಪುಸ್ತಕ ಕೊಡಲಾಗುವದು ಅಚ್ಚುಮೆಚ್ಚಿನ ಅಚ್ಚುಕಟ್ಟುಗಳಿಂದ ಮನೋಹರವಾದ ಪುಸ್ತಕಗಳಿಗಾಗಿ ಇಂದೇ ಚಂದಾದಾರರಾಗಿರಿ. ಹಿಂದಿನ ಪುಸ್ತಕಗಳಿಗಾಗಿ ಬರೆಯಿರಿ. ಈ ವರ್ಷದ ' **ಪವಿತ್ರ ಜೀವನ** ' ವು ಈಗಾಗಲೇ ಅರಳಿದೆ.

ವಾರ್ಷಿಕ ಚಂದಾ ೩-೮-೦ (ಅಂಚೆ ವೆಚ್ಚ ಸೇರಿ)

ವಿಳಾಸ:— ' ಅರವಿಂದ ಗ್ರಂಥಮಾಲಾ' ಕಾರ್ಯಾಲಯ

ಪೋ. ಹಲಸಂಗಿ ಜಿ ವಿಜಾಪುರ.

ರಮಲ ವಿದ್ಯಾ ರಹಸ್ಯ.

ಈ ಪುಸ್ತಕದಲ್ಲಿ ನಾಲ್ಕು ಪ್ರಕರಣಗಳೂ, ೩೭ ಅಧ್ಯಾಯಗಳೂ ಇದ್ದು, ನಾನಾ ವಿಧವಾದ ಅನೇಕ ಪ್ರಶ್ನೆಗಳು ಉದಾಹರಣೆ ಸಹಿತವಾಗಿ ಬಿಡಿಸಲ್ಪಟ್ಟಿರುತ್ತವೆ ಪ್ರಶ್ನೆ ಕೇಳುವವನು ತನ್ನ ಪ್ರಶ್ನೆಯು ಇಂಥಾದ್ದೆಂದು ಹೇಳದಿದ್ದರೂ ಈ ಗ್ರಂಥ ಸಹಾಯದಿಂದ ಇಂತಹ ಪ್ರಶ್ನೆಯನ್ನು ಕೇಳುವಿ ಎಂದು ಹೇಳಿ ಆಶ್ಚರ್ಯ ಪಡಿಸಬಹುದಾಗಿರುತ್ತದೆ. ಇದುವರೆಗೆ ರಮಲಸಂಬಂಧವಾಗಿ ಪ್ರಕಟವಾದ ಪುಸ್ತಕಗಳು ಅನೇಕವಿದ್ದಾಗ್ಯೂ ಈ ಪುಸ್ತಕದಲ್ಲಿರುವಷ್ಟು ವಿಷಯಗಳೂ, ರಹಸ್ಯದ ಸ್ಪಷ್ಟಾರ್ಥವೂ ಯಾವ ರಮಲ ಪುಸ್ತಕಗಳಲ್ಲಿಯೂ ಇರುವದಿಲ್ಲ. ಆದರಿಂದಲೇ ಇದಕ್ಕೆ 'ರಮಲವಿದ್ಯಾ ರಹಸ್ಯ'ವೆಂಬ ಅನ್ವರ್ಥಕ ನಾಮವನ್ನಿಟ್ಟಿರುತ್ತದೆ. ರಮಲಜ್ಞರು ಈ ಪುಸ್ತಕವನ್ನೇ ಅಗತ್ಯವಾಗಿ ತರಿಸಿಕೊಂಡು ನೋಡಿ ಲಾಭವಂಪಡೆಯಬೇಕು.

ಪುಸ್ತಕದ ಬೆಲೆ ೧ ಕ್ಕೆ ರೂ. ೪. ಅಂಚೆಯವೆಚ್ಚ ಬೇರೆ

ವಿಳಾಸ—

ಬ್ರ. ಶ್ರೀ. ಸಿದ್ಧಾಂತಿ ರುದ್ರಪ್ಪ ಶಾಸ್ತ್ರಿಗಳು

ಪೋಸ್ಟ್. ಮಹಾಗಾಂವ್, ಜಿ. ಗುಲಬರ್ಗಾ.

ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ
ಸುವರ್ಣ ಪದಕಗಳನ್ನು ಮತ್ತು ಸರ್ಟೀಫಿಕೇಟುಗಳನ್ನು ಪಡೆದು ಹೆಸರಾದ
ಇಂಡಿಯಾ ಸರಕಾರದಲ್ಲಿ ರಜಿಸ್ಟರ್ ಆದ

ಸಿದ್ಧೇಶ್ವರ ಟ್ರೇಝುರಿ ಕಂಪನಿ, ಹುಬ್ಬಳ್ಳಿ.

ನಮ್ಮ "ಸಿದ್ಧೇಶ್ವರ ಟ್ರೇಝುರಿ" ಗಳನ್ನು ಈ ವರೆಗೆ ಕೈಗಾರಿಕೆಯ ಕೆಲಸಗಳಲ್ಲಿ ಹೆಸರಾದ ಯುರೋಪ, ಅಮೇರಿಕಾ ವಗೈರೆ ಪರರಾಷ್ಟ್ರಗಳಲ್ಲಿ ತಯಾರಾಗುವ ಟ್ರೇಝುರಿಗಳ ಪದ್ಧತಿಯ ಮೇರೆಗೆ ಹೊಸ ಉಕ್ಕಿನ ಅಖಂಡ ಒಂದೇ ತಗಡಿನಲ್ಲಿ ೧೨ ಮೂಲೆಗಳನ್ನು ೨೫೦ ಟನ್ ಪ್ರೇಷರ ಕೊಡುವ ಮಶಿನ್ನಿನಿಂದ ಬಗ್ಗಿಸಿ, ರಿವ್ಹಿಟ್ಸ ಮೊದಲಾದವುಗಳಿಂದ ಜಾಯಿಂಟ ಮಾಡದೆ ಇಲೆಕ್ಟ್ರಿಸಿಟಿಯಿಂದ ಬೆಸೆದು ತಯಾರಿಸುತ್ತೇವೆ.

ಈ ಹೊಸ ಸುಧಾರಣೆಯಿಂದ ಮಾಡಿದ ತಿಜೋರಿಗಳಿಗೂ ಮತ್ತು ಯಾವದೇ ನಮ್ಮ ಸಾಮಾನಕ್ಕೂ ಯಾವ ತರದ ಭಯವಿಲ್ಲ. ಮತ್ತು ಅವು ಒಳ್ಳೇ ಮಜಬೂತವಾಗಿಯೂ ಸುಂದರವಾಗಿಯೂ ಆಗುತ್ತವೆ. ನಾವು ನಮ್ಮ ತಿಜೋರಿಗಳಿಗೂ ಮತ್ತು ನಮ್ಮಲ್ಲಿ ತಯಾರಾಗುವ ಉಕ್ಕಿನ ಕವಾಟು, ಕ್ಯಾಶಬಾಕ್ಸ, ಸ್ಪ್ರಿಂಗರೂಮ ಡೋರ್ಸುಗಳಿಗೂ ನಮ್ಮ ಕಾರಖಾನೆಯಲ್ಲಿಯೇ ತಯಾರಾಗುವ ಉತ್ತಮವಾದ ಮತ್ತು ಮಜಬೂತವಾದ ಕೀಲಿಗಳನ್ನು ಹಚ್ಚುತ್ತೇವೆ. ಮತ್ತು ಇದಲ್ಲದೆ ನಮ್ಮಲ್ಲಿ ಹೊಸ ಪದ್ಧತಿಯ ಮೇರೆಗೆ ತಯಾರಾಗುವ ಕಾಂಬಿನೇಶನ್ ಕೀ ಲೆಸ್ಸ ಲಾಕ್ಸು (ನಂಬರ ಕೀಲಿ) ಗಳನ್ನು ತಿಜೋರಿಗಳಿಗೆ ಹಚ್ಚಿಸಿದರೆ ಆ ತಿಜೋರಿಗಳನ್ನು ಯಾರೂ ತೆಗೆಯಲು ಸಾಧ್ಯವಿಲ್ಲ. ಯಾರಾದರೂ ತೆಗೆದರೆ ಅವರಿಗೆ

೧೦೦೦ ರೂ. ಬಹುಮಾನ ಕೊಡುವೆವು.

ನಮ್ಮ ಫಾಯರ ಪ್ರೂಫ್ ತಿಜೋರಿಗಳು ತುಂಬಾ ಖಾತ್ರಿಯಾದವುಗಳಿರುತ್ತವೆ.

ಈ ಬಗ್ಗೆ ಅನೇಕ ವಸ್ತು ಪ್ರದರ್ಶನಗಳಲ್ಲಿ ಒಳಗೆ ನೋಟು ವಗೈರೆ ಸಾಮಾನುಗಳನ್ನು ಇಟ್ಟು ಕೆಂಪಗೆ ಕಾಸಿದನಂತರ ಒಳಗಿಟ್ಟ ಸಾಮಾನುಗಳು ಸುಡದೆ ಇದ್ದದ್ದನ್ನು ಖಾತ್ರಿ ಮಾಡಿಕೊಟ್ಟಿದ್ದೇವೆ.

ಧಾರಣೆಗಳ ಬಗ್ಗೆ ನಮ್ಮ ಸಚಿತ್ರ ಕ್ಯಾಟಲಾಗುಗಳಿಗೆ ಬರೆಯಿರಿ.

ಅಥವಾ

ಸಮಕ್ಷಮ ಬಂದಲ್ಲಿ ತಿಳಿಯುವದು.

ತಮ್ಮ ಕಲಾಭಿಮಾನಿ,
ಸಿದ್ಧೇಶ್ವರ ಮತ್ತು ಕಂಪನಿ
ಟ್ರೇಝುರಿ ಮೇಕರ್ಸ
ಹುಬ್ಬಳ್ಳಿ.

ಫ್ಯಾಕ್ಟರಿ ಮತ್ತು ಹೆಡ್ ಆಫೀಸ್-
ಹುಬ್ಬಳ್ಳಿ.

ಬ್ರ್ಯಾಂಚ ಆಫೀಸುಗಳು-
ಹೈದರಾಬಾದ (ಡೆಕ್ಕನ) ಮತ್ತು ಕೊಲ್ಲಾಪುರ (ಲಕ್ಷ್ಮೀಪುರಿ)

ಈ ಪತ್ರಿಕೆಯು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ್ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

END

END